
ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ ೧೩

ವಚನ ಸಾಹಿತ್ಯ : ಭಾಗ-೫



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೧೩ : ವಚನ ಸಾಹಿತ್ಯ : ಭಾಗ-೩

•

• [illegible]

•

ಪ್ರಧಾನ ಸಂಪಾದಕರು ಮತ್ತು ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

[illegible] ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ
ವಿಜಾಪುರ
೨೦೦೮

[illegible]

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೧೩ : ವಚನ ಸಾಹಿತ್ಯ : ಭಾಗ-೫

❖

- ಗೂಳೂರು ಸಿದ್ಧವೀರಣ್ಣೊಡೆಯರು ರಚಿಸಿದ ಪ್ರಭುದೇವರ ಶೂನ್ಯಸಂಪಾದನೆ

❖

ಪ್ರಧಾನ ಸಂಪಾದಕರು ಮತ್ತು ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೧೯

COMPLETE WORK OF DR. M.M.KALBURGI
VOLUME - 13 : VACHANA SAHITY : BHAGA-5
Edited by : Dr. Veeranna Rajur, Dharwad

Published by : Dr. P.G. Halakatti Research Centre
B.L.D.E. Association, Vijayapur, Karnatak

©

First Edition : 2019
Pages : xxxii + 674=706

Copies: 1000
Price Rs: 350/-

❖❖

Cover page design : K.K. Makali, Hampi.
Tyapset : Dr. Hanumanth Melinamani, Dr. Sarswatidevi Bhagawati, Dharwad.
Printer : **The Print Point,** No. 9/8 6th Cross, 4th Main, Rajajinagar, Industrial Town,
Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೧೩-ವಚನ ಸಾಹಿತ್ಯ : ಭಾಗ-೫

ಸಂಪಾದಕರು : ಡಾ. ವೀರಣ್ಣ ರಾಜೂರ, ಧಾರವಾಡ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ
ಪ್ರಥಮ ಮುದ್ರಣ: ೨೦೧೯
ಪುಟಗಳು: xxxii + ೬೭೪=೭೦೬

ಪ್ರತಿಗಳು: ೧೦೦೦
ಬೆಲೆ ರೂ: ೩೫೦/-

❖❖

ಮುಖಪುಟ ವಿನ್ಯಾಸ: ಕೆ. ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಮುದ್ರಣ: **ಪ್ರಿಂಟ್ ಪಾಯಿಂಟ್,** ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ,
ಇಂಡಸ್ಟ್ರಿಯಲ್ ಟೌನ್, ಬೆಂಗಳೂರು-೫೬೦೦೪೪. ಫೋನ್ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸಲಹಾ ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಂಪಾದಕ ಸದಸ್ಯರು

❖

ಡಾ. ಗುರುಲಿಂಗ ಕಾಪಸೆ, ಧಾರವಾಡ

ಡಾ. ವೀರಣ್ಣ ರಾಜೂರ, ಧಾರವಾಡ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

ಡಾ. ಬಿ.ವ್ಹಿ. ಶಿರೂರ, ಹುಬ್ಬಳ್ಳಿ

ಡಾ. ಎಂ.ಎಸ್. ಮದಭಾವಿ, ವಿಜಯಪುರ

ಡಾ. ಎಸ್.ಕೆ. ಕೊಪ್ಪಾ, ಇಂಡಿ

ಡಾ. ಗುರುಪಾದ ಮರಿಗುದ್ದಿ, ಸಂಕೇಶ್ವರ

ಡಾ. ಕೆ. ರವೀಂದ್ರನಾಥ, ಹಂಪಿ

ಡಾ. ಎಫ್. ಟಿ. ಹಳ್ಳಿಕೇರಿ, ಹಂಪಿ

ಡಾ. ವಿ. ಎಸ್. ಮಾಳಿ, ಹಾರೂಗೇರಿ

ಡಾ. ಪಿ. ಕೆ. ರಾಠೋಡ, ಧಾರವಾಡ

ಡಾ. ಮಲ್ಲಿಕಾರ್ಜುನ ಮೇತ್ರಿ, ವಿಜಯಪುರ

ಶ್ರೀ ಶಶಿಧರ ತೋಡ್ಕರ, ಧಾರವಾಡ

ಡಾ. ವಿ. ಡಿ. ಐಹೊಳ್ಳಿ, ವಿಜಯಪುರ

ಡಾ. ಸರಸ್ವತಿದೇವಿ ಭಗವತಿ, ಧಾರವಾಡ

ಡಾ. ಹನುಮಂತ ಮೇಲಿನಮನಿ, ಧಾರವಾಡ

❖❖

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು–ನುಡಿ–ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ–ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ–ಅದ್ವಿತೀಯ–ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ–ಪಾಂಡಿತ್ಯ–ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ–ಸಾಧನೆ :

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ–ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ

ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟ ಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ

ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟೀಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ-ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ-ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ–ನಡುಗನ್ನಡ–ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ, ಸಂಶೋಧನೆ, ವಿಮರ್ಶೆ, ನಾಡು–ನುಡಿ–ಸಂಸ್ಕೃತಿ–ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ–ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ–ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ–ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ'

ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ-೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ-ಧಾರ್ಮಿಕ-ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ-೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ-ವ್ಯಾಪ್ತಿ-ವಿಧಾನ-ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು, ವ್ಯಾಖ್ಯಾನಮುಖಿ ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು-ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ-ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ,

೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ–ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :

ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ.

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ–೧, ೧೮. ಶಾಸನ ವ್ಯಾಸಂಗ–೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ–ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ-೧, ೩೧. ಮಾರ್ಗ-೨, ೩೨. ಮಾರ್ಗ-೩, ೩೩. ಮಾರ್ಗ-೪, ೩೪. ಮಾರ್ಗ-೫, ೩೫. ಮಾರ್ಗ-೬, ೩೬. ಮಾರ್ಗ-೭, ೩೭. ಮಾರ್ಗ-೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):

ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ-೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ-೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ-೨, ೫೦. ವಚನ ಸಂಕಲನ ಸಂಪುಟ-೪, ೫೧. ವಚನ ಸಂಕಲನ ಸಂಪುಟ-೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ-೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ-೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ-೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ-೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ-೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ-೨, ೯೧. ಬಸವ ಮಾರ್ಗ-೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧-೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ-೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು-ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೊಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ-ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದ ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ-ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಜೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ-ಕರ್ನಾಟಕ ಸರ್ಕಾರದ ಧನ ಸಹಾಯದಿಂದ-ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪-೭-೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ-ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩-೯-೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ-ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ-ವರದಿಗಳು, ಆಡಿಯೋ-ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ **–ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

ಸಂಪುಟ : ೪ ಜನಪದ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ
೨. ಜನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ನೀರು ನೀರಡಿಸಿತ್ತು (ಕವನ ಸಂಕಲನ)
೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)
೩. ಕೆಟ್ಟಿತ್ತು ಕಲ್ಯಾಣ (ನಾಟಕ)
೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)
೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ **–ಸಂ. ಡಾ. ಎಸ್. ಕೆ. ಕೊಪ್ಪಾ**

೧. ಶಾಸನ ಸಂಪದ
೨. ಧಾರವಾಡ ಜಿಲ್ಲೆಯ ಶಾಸನ ಸೂಚಿ

೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ
೪. ಧಾರವಾಡ ತಾಲೂಕಿನ ಶಾಸನಗಳು
೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧ –ಸಂ. ಡಾ. ಪಂಡಿತ ರಾಠೋಡ
೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨ –ಸಂ. ಡಾ. ಪಂಡಿತ ರಾಠೋಡ
೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ
೨. ವಚನ ಸಾಹಿತ್ಯ ಆಕರ ಕೋಶ
೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

ಸಂಪುಟ : ೯ ವಚನ ಸಾಹಿತ್ಯ : ಭಾಗ–೧ –ಸಂ. ಡಾ. ವೀರಣ್ಣ ರಾಜೂರ
೧. ಬಸವಸ್ತೋತ್ರದ ವಚನಗಳು
೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ–೨ –ಸಂ. ಡಾ. ಗುರುಲಿಂಗ ಕಾಪಸೆ
೧. ಚೆನ್ನಬಸವಣ್ಣನವರ ವಚನ ಮಹಾಸಂಪುಟ
೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ–೩ –ಸಂ. ಡಾ. ವೀರಣ್ಣ ರಾಜೂರ
೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ–೪ –ಸಂ. ಡಾ. ವೀರಣ್ಣ ರಾಜೂರ
೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ–೫ –ಸಂ. ಡಾ. ವೀರಣ್ಣ ರಾಜೂರ
೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ–೬ –ಸಂ. ಡಾ. ವೀರಣ್ಣ ರಾಜೂರ
೧. ಪರಮಾನಂದ ಸುಧೆ
೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ-೭ –ಸಂ. ಡಾ. ಪಂಡಿತ ರಾಠೋಡ

೧. ಬಸವಣ್ಣನವರ ಟೀಕಿನ ವಚನಗಳು, ಭಾಗ-೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ-೮ –ಸಂ. ಡಾ. ಪಂಡಿತ ರಾಠೋಡ

೧. ಬಸವಣ್ಣನವರ ಟೀಕಿನ ವಚನಗಳು, ಭಾಗ-೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ-೯ –ಸಂ. ಶಶಿಧರ ತೋಡ್ಕರ

೧. ವಚನ ಸಂಕಲನ-೪
೨. ವಚನ ಸಂಕಲನ-೬
೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ-೧೦ –ಸಂ. ಡಾ. ವೀರಣ್ಣ ರಾಜೂರ

೧. ವಚನಶಾಸ್ತ್ರಸಾರ(ಸಂಪುಟ-೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ-೧ –ಸಂ. ಡಾ. ಗುರುಪಾದ ಮರಿಗುದ್ದಿ

೧. ಹರಿಹರನ ರಗಳೆಗಳು, ಭಾಗ-೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ-೨ –ಸಂ. ಡಾ. ಗುರುಪಾದ ಮರಿಗುದ್ದಿ

೧. ಹರಿಹರನ ರಗಳೆಗಳು, ಭಾಗ-೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ-೩ –ಸಂ. ಡಾ. ಬಿ.ವ್ಹಿ. ಶಿರೂರ

೧. ಮಲ್ಲಿನಾಥ ಪುರಾಣ ಸಂಗ್ರಹ
೨. ಶಬ್ದಮಣಿದರ್ಪಣ ಸಂಗ್ರಹ
೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ
೪. ಆದಯ್ಯನ ಲಘುಕೃತಿಗಳು
೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ-೪ –ಸಂ. ಡಾ. ಎಫ್. ಟಿ. ಹಳ್ಳಿಕೇರಿ

೧. ಷಟ್‌ಸ್ಥಲ ಶಿವಾಯಣ
೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ-೫ –ಸಂ. ಡಾ. ಎಫ್. ಟಿ. ಹಳ್ಳಿಕೇರಿ

೧. ತಗರ ಪವಾಡ
೨. ಸಿದ್ಧಮಂಕ ಚರಿತೆ
೩. ಗುಂಡಬಸವೇಶ್ವರ ಪುರಾಣ
೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ–೬ –ಸಂ. ಡಾ. ಹನುಮಂತ ಮೇಲಿನಮನಿ

೧. ಹೊಸಕುಮಾರರಾಮನ ಸಾಂಗತ್ಯ

೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ–೭ –ಸಂ. ಡಾ. ಹನುಮಂತ ಮೇಲಿನಮನಿ

೧. ಕೊಮಾರ ರಾಮಯ್ಯನ ಚರಿತ್ರೆ

೨. ಬಾಲರಾಮಯ್ಯನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ–೮ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಸಿರುಮಣ ನಾಯಕನ ಸಾಂಗತ್ಯ

೨. ಸಿರುಮನ ಚರಿತೆ

೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ–೯ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ

೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ–೧೦ –ಸಂ. ಡಾ. ಎಂ ಎಸ್. ಮದಭಾವಿ

೧. ಕಿತ್ತೂರ ಸಂಸ್ಥಾನ ಸಾಹಿತ್ಯ–೧

೨. ಕಿತ್ತೂರ ಸಂಸ್ಥಾನ ಸಾಹಿತ್ಯ–೨

೩. ಕಿತ್ತೂರ ಸಂಸ್ಥಾನ ಸಾಹಿತ್ಯ–೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ–೧ –ಸಂ. ಡಾ. ಎಂ ಎಸ್. ಮದಭಾವಿ

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ

೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ

೩. ಮಡಿವಾಳಪ್ಪ ಸಾಸನೂರ ಬದುಕು–ಬರಹ

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ–೨ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ–೩ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ–೪ **–ಸಂ. ಡಾ. ವಿ.ಎಸ್. ಮಾಳಿ**

೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ–೧ **–ಸಂ. ಡಾ. ಕೆ. ರವೀಂದ್ರನಾಥ**

ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ–೨ **–ಸಂ. ಡಾ. ಕೆ. ರವೀಂದ್ರನಾಥ**

ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ–೩ **–ಸಂ. ಡಾ. ಕೆ. ರವೀಂದ್ರನಾಥ**

ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ–೪ **–ಸಂ. ಡಾ. ಕೆ. ರವೀಂದ್ರನಾಥ**

ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ–೫ **–ಸಂ. ಡಾ. ಕೆ. ರವೀಂದ್ರನಾಥ**

ವ್ಯಕ್ತಿಚಿತ್ರಣ–ಮುನ್ನುಡಿ–ಬೆನ್ನುಡಿ
ಅರಿಕೆ–ಭಾಷಣ–ಸಂದರ್ಶನ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೧ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**

ಚಿತ್ರ **–ಡಾ. ವಿ.ಡಿ. ಐಹೊಳ್ಳಿ**

ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೨ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**

ಪತ್ರ–ವರದಿಗಳು **–ಡಾ. ವಿ.ಡಿ. ಐಹೊಳ್ಳಿ**

ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೩ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**

ಆಡಿಯೋ–ವಿಡಿಯೋ **–ಡಾ. ವಿ.ಡಿ. ಐಹೊಳ್ಳಿ**

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು,

ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ-೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿಸಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೨೫ ಗ್ರಂಥಗಳನ್ನು-ಪುನರುಕ್ತಿಕಾರಣವಾಗಿ- ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು-ಅವು ಅಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ-ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು-ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು-ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ-ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ-ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ–ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ–ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು–ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ–ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ–ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ' ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು

ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ 'ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ'ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ ಮಾನ್ಯ ಶ್ರೀ ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ–ವಿಶ್ವಾಸ–ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಶ್ರೀ ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಹಾಗೂ ಈ ಯೋಜನೆಯ ಕಾರ್ಯದರ್ಶಿಗಳಾದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ–ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ–ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲಿಕರಾದ ಬಸವರಾಜ ಪಾಟೀಲ(ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬುರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ-ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

❖ ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.

❖ ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.

❖ ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ತಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

❖ ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.

- ❖ ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ–ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.
- ❖ ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.
- ❖ ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.
- ❖ ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ,

ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ವೀರಣ್ಣ ರಾಜೂರ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

ಸಂಪಾದಕರ ನುಡಿ

ಡಾ. ವೀರಣ್ಣ ರಾಜೂರ

'ಶೂನ್ಯಸಂಪಾದನೆ' ವಚನ ಸಂಯೋಜನೆ ಸಾಹಿತ್ಯ ಪರಂಪರೆಯ–ವಿಶಿಷ್ಟ ಮಾದರಿಯ ಅಪೂರ್ವ ಕೃತಿ. ಹನ್ನೆರಡನೆಯ ಶತಮಾನದ ಬಸವಾದಿ ಶರಣರು ರೂಪಿಸಿದ ಆಧ್ಯಾತ್ಮಿಕ ಸಂಸತ್ತೆನಿಸಿದ ಅನುಭವಮಂಟಪದಲ್ಲಿ ನಡೆದಿರಬಹುದಾದ ಚರ್ಚೆಯನ್ನು ಅವರ ವಚಗಳನ ಮೂಲಕ ನಾಟಕೀಯ ರೂಪದಲ್ಲಿ ಸಂಯೋಜಿಸಿದ ಅನನ್ಯ ರಚನೆ. ಶಿವಶರಣರ ಪ್ರಸಾದಿ ಮಹಾದೇವಯ್ಯ ಈ ಕೃತಿಯನ್ನು ವಿನ್ಯಾಸಗೊಳಿಸಿದ ಮೊದಲ ಸೃಜನಶೀಲ ಅನುಭಾವಿ. ಇದು ಕಾಲಕಾಲಕ್ಕೆ ಬೇರೆ ಬೇರೆ ಅನುಭಾವಿಗಳಿಂದ ಮರುಪರಿಷ್ಕರಣೆಗೆ ಒಳಗಾಗುತ್ತ ನಡೆದು ಒಂದು ಕೃತಿ–ನಾಲ್ಕು ಆವೃತ್ತಿಗಳಾಗಿ ಬೆಳೆದು ನಿಂತಿದೆ. ಹಲಗೆದೇವ, ಗುಮ್ಮಳಾಪುರದ ಸಿದ್ಧಲಿಂಗ, ಗೂಳೂರು ಸಿದ್ಧವೀರಣ್ಣೊಡೆಯ–ಇದನ್ನು ಪರಿಷ್ಕರಿಸಿದ ಇತರ ಮೂವರು ಅನುಭಾವಿಗಳು. ನಾಲ್ಕರಲ್ಲಿ ಹೆಚ್ಚು ವ್ಯವಸ್ಥಿತವಾಗಿದ್ದು ಹೆಚ್ಚು ಜನಪ್ರಿಯತೆಯನ್ನು ಗಳಿಸಿದ ಕೃತಿ ಗೂಳೂರು ಸಿದ್ಧವೀರಣ್ಣೊಡೆಯರ ಪ್ರಭುದೇವರ ಶೂನ್ಯಸಂಪಾದನೆ.

ಹದಿನಾರನೆಯ ಶತಮಾನದ ಕೊನೆಯ ಭಾಗದಲ್ಲಿ ರಚನೆಯಾದ ಈ ಕೃತಿಯನ್ನು ಆಧುನಿಕ ಕಾಲದಲ್ಲಿ ಶೋಧಿಸಿ–ಸಂಪಾದಿಸಿ–ತಮ್ಮ ಶಿವಾನುಭವಗ್ರಂಥಮಾಲೆಯ ಮೂಲ ೧೯೩೦ರಲ್ಲಿ ಪ್ರಕಟಿಸಿದವರು ಡಾ. ಫ.ಗು. ಹಳಕಟ್ಟಿಯವರು. ಅವರು ಆಗ ತಮಗೆ ದೊರೆತ ಎರಡು ಹಸ್ತಪ್ರತಿಗಳನ್ನು ಆಧರಿಸಿ ಇದನ್ನು ಪ್ರಕಟಿಸಿದ್ದಾರೆ. ಆಗಿನ್ನೂ ಗ್ರಂಥಸಂಪಾದನಶಾಸ್ತ್ರದ ವಿಧಿ ವಿಧಾನಗಳು ಕನ್ನಡದಲ್ಲಿ ಬಳಕೆಯಾಗುತ್ತಿರಲಿಲ್ಲವಾದ ಕಾರಣ ಯಾವುದೇ ಪಾಠಾಂತರ ಗುರುತಿಸುವ ಕಾರ್ಯಕ್ಕೆ ತೊಡಗದೆ ಅವರು ತಮ್ಮದೇ ಆದ ವಿಧಾನವನ್ನು ಅನುಸರಿಸಿ ಶುದ್ಧರೂಪದಲ್ಲಿ ಪ್ರಕಟಿಸಲು ಪ್ರಯತ್ನಿಸಿದ್ದಾರೆ.

ಇದನ್ನು ಪ್ರೊ. ಸಂ. ಶಿ. ಭೂಸನೂರಮಠ ಅವರು ಹೆಚ್ಚು ಶಾಸ್ತ್ರೀಯವಾಗಿ ಸಂಪಾದಿಸಿ ೧೯೫೮ರಲ್ಲಿ ಎರಡನೆಯ ಬಾರಿಗೆ ಪ್ರಕಟಿಸಿದ್ದಾರೆ. ಇದರ ಪರಿಷ್ಕರಣಕ್ಕೆ ಅವರು ೭ ಹಸ್ತಪ್ರತಿಗಳನ್ನು ಬಳಸಿಕೊಂಡು ಪಾಠಾಂತರಗಳನ್ನು ಗುರುತಿಸಿದ್ದಾರೆ. ಅನುಬಂಧದಲ್ಲಿ ವಚನಗಳ ಅಕಾರಾದಿ, ವಚನಕಾರರ ಅಂಕಿತಗಳ ವರ್ಣಾನುಕ್ರಮಣಿಕೆ, ಸಂಕ್ಷಿಪ್ತ ಪಾರಿಭಾಷಿಕ ಕೋಶ ಮತ್ತು ಶಬ್ದಕೋಶಗಳನ್ನು ಜೋಡಿಸಿದ್ದಾರೆ. ಆದರೆ ಈ ಕೃತಿಯ ಸ್ವರೂಪ, ವಸ್ತುವಿನ್ಯಾಸ, ತಂತ್ರ, ಮಹತ್ವ, ಗ್ರಂಥ ಪರಿಷ್ಕರಣ ವಿಧಾನ ಇತ್ಯಾದಿಗಳನ್ನು ತಿಳಿಸುವ ವಿಸ್ತೃತ ಪ್ರಸ್ತಾವನೆ ಇದರಲ್ಲಿ ಇಲ್ಲದಿರುವುದು ಒಂದು ದೊಡ್ಡ ಕೊರತೆಯಾಗಿ ಕಾಣಿಸುತ್ತದೆ.

ಈ ಕೃತಿ ಪ್ರಕಟವಾದ ನಂತರ ಶೂನ್ಯಸಂಪಾದನೆಯ ವಿಶೇಷತೆ ಎಲ್ಲರ ಗಮನವನ್ನು ಸೆಳೆಯಿತು. ಇದರ ಅಧ್ಯಯನದ ವ್ಯಾಪ್ತಿ ವಿಸ್ತರಿಸಿತು. ಈ ಕುರಿತು ಪ್ರವಚನ, ಉಪನ್ಯಾಸ, ವಿಚಾರ ಸಂಕಿರಣ, ಹಲವು ನೆಲೆಯ ಅಧ್ಯಯನಗಳು ನಡೆಯಲು ಕಾರಣವಾಯಿತು. ಹೀಗಾಗಿ ೧೯೫೮ರಿಂದ ೧೯೯೯ರ ಅವಧಿಯಲ್ಲಿ ನಾಲ್ಕು ಮುದ್ರಣಗಳನ್ನು ಕಂಡಿತು; ಹೆಚ್ಚು ಜನಪ್ರಿಯತೆಯನ್ನೂ ಗಳಿಸಿತು.

ಈ ಕೃತಿ ಇನ್ನೂ ಹೆಚ್ಚು ಶಾಸ್ತ್ರೀಯವಾಗಿ ಪರಿಷ್ಕರಣಗೊಂಡು, ಪೂರ್ಣ ಶುದ್ಧರೂಪದಲ್ಲಿ ಎಲ್ಲ ಆವಶ್ಯಕ ಪರಿಕರಗಳನ್ನು ಒಳಗೊಂಡು ನೂತನ ವಿನ್ಯಾಸದೊಂದಿಗೆ ಪ್ರಕಟವಾಬೇಕೆಂದು ಡಾ. ಎಂ.ಎಂ. ಕಲಬುರ್ಗಿ ಅವರು ಕನಸು ಕಂಡಿದ್ದರು. ಆ ಕನಸಿನ ಸಾಕಾರರೂಪವೇ ಪ್ರಸ್ತುತ ಮೂರನೆಯ ಆವೃತ್ತಿ. ಇದು ೨೦೧೬ರಲ್ಲಿ ಗದುಗಿನ ಜಗದ್ಗುರು ತೋಂಟದಾರ್ಯ ಮಠದ ಲಿಂಗಾಯತ ಅಧ್ಯಯನ ಸಂಸ್ಥೆಯಿಂದ 'ಲಿಂಗಾಯತ ಅಪ್ರಕಟಿತ ಕೃತಿ ಪ್ರಕಟನಾ ಸಾಹಿತ್ಯ ರತ್ನಮಾಲೆ'ಯ ೭೨ನೆಯ ಕೃತಿಯಾಗಿ ಪ್ರಕಟವಾಗಿದೆ.

ಇದು ಡಾ. ಎಂ. ಎಂ. ಕಲಬುರ್ಗಿ ಅವರು ಸಂಪಾದಿಸಿದ–ವಚನಸಾಹಿತ್ಯಕ್ಕೆ ಸಂಬಂಧಿಸಿದ ೧೩ನೆಯ ಕೃತಿ. ನಾನು ಅವರು ಜೊತೆಗೂಡಿ ಸಂಪಾದಿಸಿದ ೪ನೆಯ ಕೃತಿ.

ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆ ಹೆಚ್ಚು ಜನಪ್ರಿಯ ವಾದುದಾಗಿರುವುದರಿಂದ ಇದರ ಹಸ್ತಪ್ರತಿಗಳು ಅಧಿಕ ಸಂಖ್ಯೆಯಲ್ಲಿ ದೊರೆಯುತ್ತವೆ. ಆದರೆ ಈ ಕೃತಿಪರಿಷ್ಕರಣಕ್ಕೆ ಅವೆಲ್ಲವನ್ನೂ ಬಳಸಿಕೊಳ್ಳದೆ, ಇತ್ತೀಚೆಗೆ ದೊರೆತ, ಹೆಚ್ಚು ಪ್ರಾಚೀನವೂ, ಶುದ್ಧವೂ, ಅಧಿಕೃತವೂ ಆದ ಒಂದು ತಾಳೆಗರಿ ಪ್ರತಿಯನ್ನು ಮಾತ್ರ ಆಧಾರವಾಗಿ ಇಟ್ಟುಕೊಳ್ಳಲಾಗಿದೆ. ಈ ಹಿಂದೆ ಪ್ರಕಟವಾದ ಡಾ. ಫ.ಗು. ಹಳಕಟ್ಟಿ ಮತ್ತು ಪ್ರೊ. ಸಂ.ಶಿ. ಭೂಸನೂರಮಠ ಅವರ ಆವೃತ್ತಿಗಳನ್ನು ಅಗತ್ಯವೆನಿಸಿದಲ್ಲಿ ಮಾತ್ರ ಗಮನಿಸಲಾಗಿದೆ. ಹೀಗಾಗಿ ಇದು ಏಕಪ್ರತಿನಿಷ್ಠ ಪರಿಷ್ಕರಣವೆನಿಸಿದೆ. ಇದರಿಂದ ಒಂದು ಹಸ್ತಪ್ರತಿಯ ಮೂಲಪಠ್ಯವನ್ನು ಮೂಲ ಸ್ವರೂಪದಲ್ಲಿ ಹಾಗೇ ಉಳಿಸಿಕೊಂಡಂತಾಗಿದೆ. ಇದೇ ಇಂದು ನಾವು ವಚನ ಸಂಪಾದನೆಯಲ್ಲಿ ಅನುಸರಿಸಬೇಕಾದ ವಿಧಾನವೆಂದು ಡಾ. ಕಲಬುರ್ಗಿ ಅವರು ಭಾವಿಸಿದ್ದರು. ಇದೇ ಮಾದರಿಯಲ್ಲಿ ಅವರ ಉಳಿದ ವಚನ ಕೃತಿಗಳು ಸಂಪಾದನೆಗೊಂಡಿರುವುದನ್ನು ಗಮನಿಸಬಹುದು.

ಮೂಲಕೃತಿಕಾರನ ಜೀವಿತ ಕಾಲದಲ್ಲಿಯೇ ಪ್ರತಿಮಾಡಿದ ಹಸ್ತಪ್ರತಿಯಿಂದ ಈ ಕೃತಿಯ ಪರಿಷ್ಕರಣ ನಡೆದಿರುವುದು ಇದರ ಅಧಿಕೃತತೆಯನ್ನು ಹೆಚ್ಚಿಸಿದೆ.

ಈ ಸಂಪಾದನೆಯ ವಿಶೇಷತೆ ಎಂದರೆ–ಶಾಸ್ತ್ರೀಯವಾದ ಪರಿಷ್ಕರಣಕ್ಕೆ ಒಳಪಡಿಸಿ ಶುದ್ಧರೂಪದಲ್ಲಿ ಪ್ರಕಟಿಸಿರುವುದು. ಈ ಹಿಂದೆ ಗದ್ಯರೂಪದಲ್ಲಿ ಪ್ರಕಟವಾದ ವಚನಗಳನ್ನು ಲಯಾನುಗುಣವಾಗಿ ಒಡೆದು ಪದ್ಯರೂಪ ನೀಡಿರುವುದು. ಅಕ್ಷರ ಜೋಡಣೆ, ವಚನ–ಗದ್ಯ ವಿಂಗಡಣೆ, ವಚನ ಸಂಖ್ಯಾ ಸೂಚನೆ–ಒಟ್ಟು ಎಲ್ಲ ರೀತಿಯಲ್ಲಿ ಕೃತಿಗೆ ಹೊಸ ವಿನ್ಯಾಸವನ್ನು ಕೊಟ್ಟಿರುವುದು

ಒಂದು ಸಂಪಾದಿತ ಕೃತಿಯ ಮೌಲ್ಯವನ್ನು ಹೆಚ್ಚಿಸುವ ಬಹುಮುಖ್ಯ ಭಾಗಗಳೆಂದರೆ ಅದರ ಪ್ರಸ್ತಾವನೆ ಮತ್ತು ಅನುಬಂಧಗಳು. ಈ ಅರಿವನ್ನು ಮನದಲ್ಲಿಟ್ಟುಕೊಂಡು ಈ ಹಿಂದಿನವರ ಆವೃತ್ತಿಗಳಲ್ಲಿ ಕೊರತೆಯಾಗಿ ತೋರಿದ ಎಲ್ಲ ಪರಿಕರಗಳನ್ನು ಇದರಲ್ಲಿ ಅಳವಡಿಸಿ–ಇದನ್ನು ಒಂದು ಪೂರ್ಣಸ್ವರೂಪದ ಪರಿಷ್ಕರಣವಾಗುವಂತೆ ನೋಡಿಕೊಳ್ಳಲಾಗಿದೆ. ಅಂದರೆ ೫೨

ಪುಟವ್ಯಾಪ್ತಿಯ ಪ್ರಸ್ತಾವನೆ, ೧೧೩ ಪುಟವ್ಯಾಪ್ತಿಯ ಎಲ್ಲ ಅಗತ್ಯ ಅನುಬಂಧಗಳಿಂದ ಈ ಕೃತಿ ಅನುರೂಪಗೊಂಡಿದೆ. ಪ್ರಸ್ತಾವನೆಯಲ್ಲಿ ಒಟ್ಟು ಶೂನ್ಯಸಂಪಾದನೆಗಳ ಸ್ವರೂಪ, ಸಂಖ್ಯಾನಿರ್ಣಯ, ತೌಲನಿಕ ನೋಟ; ಪ್ರಸ್ತುತ ಸಂಪಾದನೆಯ ಕರ್ತೃ, ಕಾಲ, ಸ್ವರೂಪ, ರಾಚನಿಕ ವಿವೇಚನೆ, ಪರಿಷ್ಕರಣದ ಪರಂಪರೆ–ಈ ಪರಿಷ್ಕರಣ ವಿಧಿ–ವಿಧಾನ--ವಿಶೇಷತೆ, ಹಸ್ತಪ್ರತಿಯ ಸ್ವರೂಪ–ಹೀಗೆ ಎಲ್ಲ ಅಂಶಗಳನ್ನು ಒಂದನ್ನೂ ಬಿಡದೆ ಸಾದ್ಯಂತವಾಗಿ ವಿವೇಚನೆಗೆ ಒಳಪಡಿಸಲಾಗಿದೆ.

ಅನುಬಂಧದಲ್ಲಿ ವಚನಗಳ ಅಕಾರಾದಿ, ವಚನಕಾರರು–ಅಂಕಿತ–ವಚನಸಂಖ್ಯೆ, ಸ್ವರವಚನಗಳ ಅಕಾರಾದಿ, ಸ್ವರವಚನಕಾರರು–ಅಂಕಿತ–ವಚನಸಂಖ್ಯೆ, ಕಠಿಣಪದಕೋಶ, ಪಾರಿಭಾಷಿಕ ಪದಕೋಶಗಳನ್ನು ಜೋಡಿಸಲಾಗಿದೆ.

ಹೀಗೆ ಶೂನ್ಯಸಂಪಾದನೆಯ ಅಧ್ಯಯನಕ್ಕೆ ಬೇಕಾದ ಎಲ್ಲ ಪರಿಕರಗಳನ್ನು ಈ ಸಂಪಾದನೆಯಲ್ಲಿ ಅಳವಡಿಸಿರುವುದರಿಂದ ಇದೊಂದು ಮಾದರಿಯ ಪರಿಷ್ಕರಣವಾಗಿ ತೋರುತ್ತದೆ. ಅಚ್ಚುಕಟ್ಟಾದ ಮುದ್ರಣ, ಆಕರ್ಷಕ ಮುಖಪುಟ, ಬಂಧುರ ರಕ್ಷಾಕವಚಗಳಿಂದ ಇದೊಂದು ಸಂಗ್ರಹಾರ್ಹ ಮಹತ್ವದ ಕೃತಿಯೆನಿಸಿದೆ.

❖❖

ಲಿಂಗಾಯತ ಅಪ್ರಕಟಿತ ಪ್ರಕಟನಾ ಸಾಹಿತ್ಯ ರತ್ನಮಾಲೆ : ೭

ಗೂಳೂರು ಸಿದ್ಧವೀರಣ್ಣೊಡೆಯರು ರಚಿಸಿದ

ಪ್ರಭುದೇವರ

ಶೂನ್ಯಸಂಪಾದನೆ

ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಡಾ. ವೀರಣ್ಣ ರಾಜೂರ

ಲಿಂಗಾಯತ ಅಧ್ಯಯನ ಸಂಸ್ಥೆ

ಯಡೆಯೂರು ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ

ಡಂಬಳ-ಗದಗ

೨೦೧೬

*

ಪ್ರಸ್ತಾವನೆ

ಪೀಠಿಕೆ :

'ವಚನ' ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಮಾತ್ರವಲ್ಲ, ಇಡೀ ಜಗತ್ತಿನ ಭಾಷಾ–ಸಾಹಿತ್ಯ ಸಂದರ್ಭದಲ್ಲಿಯೇ ಅಪೂರ್ವವೆನಿಸಿದ ಒಂದು ಅನನ್ಯ ಅಭಿವ್ಯಕ್ತಿರೂಪ. ಅದರ ಈ ಅಪೂರ್ವತೆ ಹಾಗೂ ಅನನ್ಯತೆಗಳಿಗೆ ಅದು ಹುಟ್ಟಿದ ಸಂದರ್ಭ, ಅದಕ್ಕೆ ಒದಗಿಬಂದ ಪ್ರೇರಣೆ, ಅದು ಇಟ್ಟುಕೊಂಡ ಧ್ಯೇಯೋದ್ದೇಶ, ಅದನ್ನು ನಿರ್ವಹಿಸಿದ ರೀತಿ–ನೀತಿಗಳು ಕಾರಣವಾಗಿವೆ.

'ವಚನ', ಸಾಹಿತ್ಯೇತರ ದೃಷ್ಟಿಯಿಂದ ಸೃಷ್ಟಿಯಾದ ರಚನೆ. ಹನ್ನೆರಡನೆಯ ಶತಮಾನದಲ್ಲಿ 'ಸ್ಥಾವರ'ಗೊಂಡಿದ್ದ–ಅಂದರೆ ಸ್ಥಗಿತಗೊಂಡಿದ್ದ ವ್ಯವಸ್ಥೆಯನ್ನು 'ಜಂಗಮ'ಗೊಳಿಸಲು ಅಂದರೆ ಚಲನಶೀಲಗೊಳಿಸಲು ಕಾಯಕಜೀವಿಗಳೆನಿಸಿದ ಬಸವಾದಿ ಶಿವಶರಣರು ನಡೆಸಿದ ಸಮಾಜೋ–ಧಾರ್ಮಿಕ ಸಮಗ್ರಕ್ರಾಂತಿಯ ಸಮರ್ಥ ಮಾಧ್ಯಮವಾಗಿ ಇದು ಜನ್ಮತಾಳಿತು. ವರ್ಗ–ವರ್ಣ–ಲಿಂಗಭೇದ ರಹಿತ, ಸಮಾನತೆ–ಸ್ವಾತಂತ್ರ್ಯ–ಸಹೋದರತ್ವ ಸಮನ್ವಿತ, ಸರ್ವಮಾನ್ಯ–ಸಹಜ ಸುಂದರ ಸಮಾಜ ನಿರ್ಮಿಸುವುದು; ನೈತಿಕ ನೆಲಗಟ್ಟಿನ ಮೇಲೆ ಸದಾಚಾರ–ಸದ್ವಿಚಾರ–ಸನ್ನಡತೆಗಳಿಂದ ಕೂಡಿದ ಸಾತ್ವಿಕ ವ್ಯಕ್ತಿತ್ವ ರೂಪಿಸುವುದು; ಲೌಕಿಕ–ಪಾರಮಾರ್ಥಿಕಗಳೆರಡರ ಬಂಧುರ ಬೆಸುಗೆಯ ಸುಸಂಸ್ಕೃತ ಜೀವ–ಶಿವಾದ್ವೈತ ಬದುಕು ಸ್ಥಾಪಿಸುವುದು ಈ ಶರಣ ಚಳವಳಿಯ ಪರಮ ಗುರಿ; ಸಕಲ ಜೀವಾತ್ಮರ ಲೇಸು ಇದರ ಉತ್ಕಟ–ಉನ್ನತ ಆಶಯ. ಹೀಗಾಗಿ ಇದು ಇಡೀ ವಿಶ್ವ ಪ್ರಪಂಚ, ಪ್ರಕೃತಿ ಪರಿಸರ, ಮಾನವ ಬದುಕು–ಏನೆಲ್ಲವನ್ನೂ ತನ್ನ ತೆಕ್ಕೆಯಲ್ಲಿ ಹಿಡಿದುಕೊಂಡಿದೆ.

ಈ ಶರಣ ಚಳವಳಿಯ ಉಪಸೃಷ್ಟಿ ಎನಿಸಿದ ವಚನಸಾಹಿತ್ಯ ಅದರ ಎಲ್ಲ ಒಲವು–ನಿಲವುಗಳನ್ನು ಅಕ್ಷರ ರೂಪದಲ್ಲಿ ಅನಾವರಣಗೊಳಿಸಿದೆ. ಆದರೆ ಇದು ಈ ಹಿಂದಿನ ಕನ್ನಡ ಸಾಹಿತ್ಯ ಪರಂಪರೆಯಿಂದ ತೀರ ಭಿನ್ನವೆನಿಸಿದೆ. ಇದರ ರೂಪ ಯಾವುದೇ ನಿಶ್ಚಿತ ಛಂದೋಬಂಧಕ್ಕೆ ಒಳಗಾಗದ ಮುಕ್ತ–ಮುಕ್ತಕ; ವಸ್ತು–ಮಾನವ ಬದುಕಿನ ಎಲ್ಲ ಸಂಗತಿ–ಸಮಸ್ಯೆಗಳು ಮತ್ತು ಶರಣಧರ್ಮ ತತ್ವಗಳು. ಭಾಷೆ–ಜನಪದ ಮೂಲದಿಂದ ಎತ್ತಿಕೊಂಡ ಆಡುನುಡಿ; ಜನವಾಣಿ. ಧೋರಣೆ–ಜನಪರ, ಜೀವಪರ, ಶಿವಪರ, ಲೋಕೋತ್ತರ.

ಶಿವಶರಣರು ನಡೆನುಡಿ ಸಾಮರಸ್ಯ ಸಾಧಿಸಿದ ಅನುಭಾವಿಗಳು. ಅವರದು ಪರುಷ ನಡೆ, ಪರುಷ ನುಡಿ. ಹೀಗಾಗಿ ಅವರು ಬರೆದ ವಚನ ಕೇವಲ ರಚನೆಯಲ್ಲ; ಅದು ಮನದೆರೆದು

ಮಾತನಾಡಿದ ಆತ್ಮಸಾಕ್ಷಿಯ ಅರಿವಿನ ನುಡಿ; ಲಿಂಗ ಮೆಚ್ಚಿ ಅಹುದಹುದೆನ್ನುವಂಥ ಅಮೃತ ನುಡಿ. ಕಾರಣ ವಚನ ಸಾಹಿತ್ಯ ಕೇವಲ ಲೌಕಿಕ ರಂಜನೆ ಕೊಡುವ ಕಾಯ ಸಾಹಿತ್ಯವಲ್ಲ; ಆತ್ಮ-ಪರಮಾತ್ಮರ ಸಮರಸಾನಂದವನ್ನು ನೀಡುವ ಆತ್ಮಸಾಹಿತ್ಯ; ಶಿವಯೋಗ-ಶಿವಾನುಭವದ ಪರಮಾಮೃತವನ್ನು ಉಣಿಸುವ ಅನುಭಾವಸಾಹಿತ್ಯ.

ವಚನ ರಚನೆಯ ಉದ್ದೇಶ ಶುದ್ಧ ಸಾಹಿತ್ಯಿಕ ಅಪೇಕ್ಷೆಯದಲ್ಲದಿದ್ದರೂ ಅದರಲ್ಲಿ ಯಾವುದೇ ಶ್ರೇಷ್ಠ ಸಾಹಿತ್ಯ ರಚನೆಗಿಂತಲೂ ಕಡಿಮೆಯಲ್ಲದ ಸಾಹಿತ್ಯಾಂಶಗಳು ಸಹಜವಾಗಿ ಸಾಂಗತ್ಯಗೊಂಡಿವೆ. ಅದಕ್ಕೆ ಕಾರಣ ಅನೇಕ ವಚನಕಾರರು ಉಜ್ವಲ ಕಾವ್ಯ ಪ್ರತಿಭೆಯುಳ್ಳ ತೀವ್ರ ಸಂವೇದನಾಶೀಲ ಕವಿಗಳಾಗಿರುವುದು. ಆದರೆ ವಚನಗಳಲ್ಲಿರುವ ಕಾವ್ಯ ಸೌಂದರ್ಯ, ಅದರಲ್ಲಿ ಬಳಕೆಯಾಗಿರುವ ಪ್ರತಿಮೆ, ಸಂಕೇತ, ಕವಿಸಮಯ, ರಸಾಲಂಕಾರಗಳು ಪಾರಂಪರಿಕವಾದುವಲ್ಲ; ಶಿವಶರಣರ ನೂತನ ದರ್ಶನದಿಂದ ರೂಪಿತವಾದುವು. ಹೀಗಾಗಿ ಈ ಮೂಲಕ ವಚನಕಾರರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಮೂಲ್ಯವೆನಿಸಿದೆ.

ವಚನ ಸಾಹಿತ್ಯ ಪರಂಪರೆ ೧೨ನೆಯ ಶತಮಾನದಲ್ಲಿ ಆರಂಭವಾಗಿ, ಕಲ್ಯಾಣದಲ್ಲಿ ನಡೆದ ಕ್ರಾಂತಿಕಾರಣವಾಗಿ ಮುಂದೆ ಒಂದೆರಡು ಶತಮಾನಕಾಲ ಸ್ಥಗಿತಗೊಂಡು, ೧೫ನೆಯ ಶತಮಾನದ ಹೊತ್ತಿಗೆ ಮತ್ತೆ ಮರುಹುಟ್ಟುಪಡೆದು ಮುಂದುವರಿದು, ಅಂದಂದಿನ ಯುಗಧರ್ಮಕ್ಕನುಗುಣವಾಗಿ ತನ್ನ ರೂಪ-ವಸ್ತು-ಭಾಷೆ-ಧೋರಣೆಗಳಲ್ಲಿ ಬದಲಾವಣೆಗಳನ್ನು ಅಳವಡಿಸಿಕೊಳ್ಳುತ್ತ, ಇಂದಿನವರೆಗೂ ಸಾಗಿ ಬಂದಿದೆ. ಹಾಗೆ ನಡೆದು ಬರುವಲ್ಲಿ ಅದು 'ಸೃಜನ' ಮತ್ತು 'ಸಂಯೋಜನ' ಎಂಬ ಎರಡು ರೂಪಗಳನ್ನು ಧಾರಣೆ ಮಾಡಿಕೊಂಡಿದೆ. ೧೨ನೆಯ ಶತಮಾನದ ಬಸವಾದಿ ಶರಣರು ಮತ್ತು ೧೫ನೆಯ ಶತಮಾನಾನಂತರದ ತೋಂಟದ ಸಿದ್ಧಲಿಂಗೇಶ್ವರಾದಿ ಶಿವಯೋಗಿಗಳು ಬರೆದ ಮುಕ್ತಕ ರೂಪದ ವಚನಗಳು 'ಸೃಜನ' ರಚನೆಗಳೆನಿಸಿದರೆ, ೧೫ನೆಯ ಶತಮಾನದ ಮಹಲಿಂಗದೇವ, ಕಲ್ಲುಮಠದ ಪ್ರಭುದೇವ, ಗುಬ್ಬಿಯ ಮಲ್ಲಣ್ಣ ಮೊದಲಾದವರು ಬಸವಾದಿ ಶರಣರ ಮುಕ್ತಕ ರೂಪದ ವಚನಗಳನ್ನು ಸೇರಿಸಿ ಸಿದ್ಧಪಡಿಸಿದ ಸ್ಥಲಕಟ್ಟಿನ ಕೃತಿಗಳು 'ಸಂಯೋಜನ ಸಾಹಿತ್ಯ' ರಚನೆಗಳೆನಿಸುತ್ತವೆ.

'ವಚನ ಸಂಯೋಜನ ಸಾಹಿತ್ಯ' ಪರಂಪರೆ ೧೨ನೆಯ ಶತಮಾನದಿಂದಲೇ ಆರಂಭವಾಗಿದೆ ಎಂದು ಹೇಳಬಹುದಾದರೂ ಅದು ಹೆಚ್ಚು ಸ್ಪಷ್ಟವಾಗಿ ಮತ್ತು ದಟ್ಟವಾಗಿ ಕಾಣಿಸುವುದು ೧೫ನೆಯ ಶತಮಾನದಿಂದ. ಇದರಲ್ಲಿ ಮುಖ್ಯವಾಗಿ ಮೂರು ಪ್ರಕಾರಗಳನ್ನು ಗುರುತಿಸಲಾಗಿದೆ: ೧. ಸಂಗ್ರಹ, ೨. ಸಂಕಲನ, ೩. ಸಂಪಾದನೆ.[೧]

ಯಾವುದೇ ತಾತ್ವಿಕ ಉದ್ದೇಶ ಇಟ್ಟುಕೊಳ್ಳದೆ ಒಬ್ಬೊಬ್ಬ ವಚನಕಾರನ ಹೆಸರಿನ ಅಡಿಯಲ್ಲಿ ಅವನ ವಚನಗಳನ್ನು ಕಲೆಹಾಕಿದುದು 'ಸಂಗ್ರಹ' ಎನಿಸಿದರೆ, ಒಂದು ನಿಶ್ಚಿತ ತಾತ್ವಿಕ ಹಿನ್ನೆಲೆಯಿಟ್ಟುಕೊಂಡು

---

೧. ಹೆಚ್ಚಿನ ವಿವರಗಳಿಗೆ ನೋಡಿ: ವಚನಗಳ ಸಂಗ್ರಹ-ಸಂಕಲನ-ಸಂಪಾದನೆ-ಡಾ. ಎಂ. ಎಂ. ಕಲಬುರ್ಗಿ (ಮಾರ್ಗ ಸಂಪುಟ-೧ ಪು. ೩೪೩; ೨೦೧೦); ವಚನ ಸಂಪಾದನಾ ಸಾಹಿತ್ಯ-ಡಾ. ವೀರಣ್ಣ ರಾಜೂರ (ನೂರೊಂದು ಬರಹ-ಪು. ೨೧೧; ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೮).

(ಒಬ್ಬ ಅಥವಾ ಅನೇಕರ) ವಚನಗಳನ್ನು ಜೋಡಿಸಿದ ಸ್ಥಲಕಟ್ಟಿನ ಕೃತಿಗಳು ಸಂಕಲನ ಎನಿಸಿಕೊಳ್ಳುತ್ತವೆ. ವಚನಗಳನ್ನು ಸಂವಾದರೂಪದಲ್ಲಿ ಜೋಡಿಸಿದ ಕೃತಿಗಳು, 'ಸಂಪಾದನೆ'[೨] ಎಂದು ಕರೆಯಿಸಿಕೊಳ್ಳುತ್ತವೆ. ಇವುಗಳಲ್ಲಿ ಸಂಪಾದನ ಸಾಹಿತ್ಯ ಮೂರು ಲಕ್ಷಣಗಳನ್ನು ಒಳಗೊಂಡಿರುತ್ತದೆ. ೧. ಇದು ಅನ್ಯರ ವಚನಗಳಿಂದ ರೂಪಗೊಂಡಿರುತ್ತದೆ. ೨. ಇದು ಸಂವಾದ ಶೈಲಿಯಲ್ಲಿರುತ್ತದೆ. ೩. ಪ್ರಭುದೇವ ಈ ಸಾಹಿತ್ಯದ ಕೇಂದ್ರ ಪಾತ್ರವಾಗಿರುತ್ತಾನೆ. 'ಶೂನ್ಯಸಂಪಾದನೆ' ಈ ಲಕ್ಷಣಗಳನ್ನೊಳಗೊಂಡ 'ಸಂಪಾದನೆ' ಪ್ರಕಾರಕ್ಕೆ ಸೇರುವ ಮಹತ್ವದ ಕೃತಿಯಾಗಿದೆ.[೩]

ಶೂನ್ಯಸಂಪಾದನೆ :

'ಶೂನ್ಯಸಂಪಾದನೆ' ಎಂಬುದು 'ಶೂನ್ಯ' ಮತ್ತು 'ಸಂಪಾದನೆ' ಎಂಬ ಎರಡು ವಿಶಿಷ್ಟ ರೂಪಗಳು ಸೇರಿ ಆದ ಸಂಯುಕ್ತಪದ. ಮೇಲ್ನೋಟಕ್ಕೆ ಇದು ಪರಸ್ಪರ ವಿರುದ್ಧಾರ್ಥಗಳನ್ನೊಳಗೊಂಡ ಪದಗಳ ಸಂಯೋಜನೆ ಎನಿಸಿದರೂ ಇದರ ವಿಶೇಷ ಅರ್ಥದ ಅರಿವು ಮೂಡಿದಾಗ ಅಚ್ಚರಿ–ಆನಂದ ಏಕಕಾಲಕ್ಕೆ ಉಂಟಾಗುತ್ತವೆ. 'ಶೂನ್ಯ' ಎಂದರೆ ಸೊನ್ನೆ, ಏನೂ ಇಲ್ಲದ್ದು ಎಂದು ಸಾಮಾನ್ಯ ಅರ್ಥ. ಎಲ್ಲವನ್ನೂ ಒಳಗೊಂಡದ್ದು ಎಂದು ಇದರ ಆಧ್ಯಾತ್ಮಿಕ ವಿಶೇಷ ಅರ್ಥ. ಎಲ್ಲದಕ್ಕೂ ಕಾರಣವಾದ, ಎಲ್ಲದರಲ್ಲಿಯೂ ಇರುವ, ಎಲ್ಲವನ್ನೂ ಒಳಗೊಂಡ 'ಪರಬ್ರಹ್ಮವಸ್ತು' ಎಂದು ಇದರ ಅನುಭಾವಿಕ ಅನನ್ಯ ಅರ್ಥ. ಹೀಗೆ ತನ್ನ ಅರ್ಥಮೌಲ್ಯವನ್ನು ವಿಸ್ತರಿಸಿಕೊಂಡ ಇದು ಶರಣ ಸಾಹಿತ್ಯದಲ್ಲಿ ಬಳಕೆಯಾಗುವ ಒಂದು ಅಪೂರ್ವ ಪಾರಿಭಾಷಿಕ ಪದ. ಶರಣರು ಆಧ್ಯಾತ್ಮ ಪ್ರಪಂಚಕ್ಕೆ ನೀಡಿದ ವಿನೂತನ ಕೊಡುಗೆ.

'ಸಂಪಾದನೆ' ಎಂದರೆ ಗಳಿಕೆ ಅಥವಾ ಗಳಿಸುವುದು. ಗಳಿಕೆಯಲ್ಲಿ ಧನ, ಜ್ಞಾನ, ಕೀರ್ತಿ, ಆಸ್ತಿ– ಹೀಗೆ ಅನೇಕ ಬಗೆಗಳಿವೆ. ಇಲ್ಲಿನ ಗಳಿಕೆ ಅವಾವೂ ಅಲ್ಲ. ಇದು 'ಪರಬ್ರಹ್ಮವಸ್ತು'ವಿನ ಗಳಿಕೆ, ಮೋಕ್ಷದ ಗಳಿಕೆ. ಶರಣರ ಪರಿಭಾಷೆಯಲ್ಲಿ ಹೇಳುವುದಾದರೆ ಇದು ಪರಾತ್ಪರವಸ್ತುವಿನ ಅಂಶವಾದ ಅಂಗ, ಷಟ್‌ಸ್ಥಲ ಮಾರ್ಗದಲ್ಲಿ ನಡೆದು ಮತ್ತೆ ಆ ಪರಾತ್ಪರ ವಸ್ತು ಸ್ವರೂಪವಾದ ಲಿಂಗದೊಡನೆ ಬೆರೆತು ಸಾಮರಸ್ಯ ಸುಖವನ್ನು ಅನುಭವಿಸಿ ಆನಂದಿಸುವುದು. ಇದನ್ನೇ 'ಲಿಂಗಾಂಗ ಸಾಮರಸ್ಯ' ಎಂದು ಕರೆಯಲಾಗುತ್ತದೆ. ಇದೇ 'ಶೂನ್ಯಸಂಪಾದನೆ'.

ವಚನ ಸಾಹಿತ್ಯದಲ್ಲಿ 'ಶೂನ್ಯ' ಪದ 'ಬಯಲು', 'ನಿರವಯ' ಎಂಬ ಪರ್ಯಾಯ ರೂಪಗಳಲ್ಲಿ ಬಳಕೆಯಾಗಿದೆ. ಈ ಮೂರೂ ಪದಗಳು ಅಲ್ಲಿ 'ಜಗತ್ತು ಪ್ರಕಟವಾಗದ ಮುನ್ನಿನ ಸ್ಥಿತಿ'ಯನ್ನು

---

೨. ಶೀಲಸಂಪಾದನೆ, ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತ ಚಾರಿತ್ರ ಸಂಪಾದನೆಯ ವಚನಗಳು, ಅನುಭವ ಜ್ಞಾನ ಸಾರಾಮೃತ ಸಂಪಾದನಾ ಸ್ತೋತ್ರದ ವಚನಗಳು ಎಂಬ ಕೃತಿಗಳಲ್ಲಿ 'ಸಂಪಾದನೆ' ಎಂಬ ಪದವಿದ್ದರೂ ಇವುಗಳಲ್ಲಿ ಸಂವಾದ ಶೈಲಿ ಇಲ್ಲದ ಕಾರಣ, ಪ್ರಭುದೇವ ಕೇಂದ್ರ ಪಾತ್ರವಾಗಿಲ್ಲದ ಕಾರಣ ಸಂಪಾದನೆಗಳೆನಿಸದೆ ಸಂಕಲನಗಳೆಂದು ಗಣಿಸಲ್ಪಡುತ್ತವೆ.

೩. ಮೇಲೆ ಹೇಳಿದ ಮೂರು ಲಕ್ಷಣಗಳನ್ನೊಳಗೊಂಡ ನಾಲ್ಕು ಶೂನ್ಯ ಸಂಪಾದನೆಗಳು, ಅವುಗಳಿಂದ ಹುಟ್ಟಿದ ಸುಖಸಂಪಾದನೆಯ ವಚನಗಳು, ಸಂಪಾದನೆಯ ಸಾರಾಮೃತ, ಸಕಲಪುರಾತನರ ವಚನಗಳು ಕಟ್ಟಿನಲ್ಲಿರುವ 'ಸಂಪಾದನೆಯ ವಚನಗಳು'– ಸಂಪಾದನ ಸಾಹಿತ್ಯದ ಗುಂಪಿಗೆ ಸೇರುತ್ತವೆ.

ಸೂಚಿಸುತ್ತವೆ. ಇಂದ್ರಿಯಗಳಿಗೆ ಗೋಚರವಾಗುವ ಗುಣ, ಕ್ರಿಯೆ, ಶಕ್ತಿ ಮೊದಲಾದವು ಈ ಸಮಯದಲ್ಲಿ ಗೂಢವಾಗಿರುತ್ತವೆ. ಈ ಸ್ಥಿತಿಯನ್ನು ವಚನಕಾರರು 'ಅಲೆಗಳಿಲ್ಲದ ಸಮುದ್ರದೋಪಾದಿ' ಎಂದು ಬಣ್ಣಿಸುತ್ತಾರೆ. ಅಂದರೆ ಇದು ಅತ್ಯಂತ ಶಾಂತ–ಸ್ತಬ್ಧ ಸ್ಥಿತಿ. ಏನೇನೂ ತೋರದ ಸ್ಥಿತಿ. ಇದನ್ನು ವಚನಕಾರರು 'ಇಲ್ಲವೆ' ಎಂಬ ಇನ್ನೊಂದು ಪದದಿಂದಲೂ ಕರೆದಿದ್ದಾರೆ. ನಾಸ್ತಿಕರು ಪರಮಾತ್ಮನು 'ಶೂನ್ಯ' ಅಂದರೆ 'ಇಲ್ಲವೇ ಇಲ್ಲ' ಎಂದು ಅಭಿಪ್ರಾಯಪಟ್ಟರೆ, ವಚನಕಾರರು ಈ ಜಗತ್ತು ಮತ್ತು ಇದನ್ನು ನಿರ್ಮಿಸಿದ ಪರಮಾತ್ಮ ಅಥವಾ ಪರಬ್ರಹ್ಮ ವಸ್ತುಗಳಿಗೆ ಅಸ್ತಿತ್ವ ಇದೆ. ಅವೆಲ್ಲ ಸತ್ಯ ಎಂದು ಪ್ರತಿಪಾದಿಸುತ್ತಾರೆ. ಮೊದಲು ಬಯಲು, ತರುವಾಯ ಆ ಬಯಲೊಳಗಿಂದಲೇ ಪರಮಾತ್ಮ ಸೃಷ್ಟಿ ಎನಿಸಿದ ಜಗತ್ತು ಪ್ರಕಟವಾಗುತ್ತದೆ. ಕಡೆಗೆ ಆ ಬಯಲಲ್ಲಿಯೇ ಅದು ಬಯಲಾಗುತ್ತದೆ. ಇದು ಶರಣರ 'ಶೂನ್ಯಸಂಪಾದನೆ'ಯ ಸ್ಥೂಲ ಪರಿಕಲ್ಪನೆ.

ಚೆನ್ನಬಸವಣ್ಣನವರ ಈ ಕೆಳಗಿನ ವಚನ ಈ ಪರಿಕಲ್ಪನೆಗೆ ಬರೆದ ವ್ಯಾಖ್ಯಾನದಂತಿದೆ:

"ತಾನೆನ್ನದೆ ಇದಿರೆನ್ನದೆ ಏನೂ ಏನೂ ಎನಲಿಲ್ಲದ
ಅನಿರ್ವಾಚ್ಯವಾಗಿದ್ದ ವಸ್ತು
ತನ್ನ ಲೀಲೆಯಿಂ ತಾನೆ ಸ್ವಯಂಭುಲಿಂಗವಾಯಿತ್ತು.
ಆ ಲಿಂಗದಿಂದಾಯಿತ್ತು ಶಿವಶಕ್ತ್ಯಾತ್ಮಕ.
ಆ ಶಿವಶಕ್ತ್ಯಾತ್ಮಕದಿಂದಾಯಿತ್ತು ವಿಶ್ವ.
ಆ ವಿಶ್ವಪ್ರಪಂಚದಿಂದಾದುದು ಸಂಸಾರ.
ಆ ಸಂಸಾರವ ತನ್ನ ವಿವೇಕದಿಂ ವಿಚಾರಿಸಿ,
ತಾನಾರಿದೆಲ್ಲಿಯದೆಂದು ವಿಡಂಬಿಸಿ,
ಗುರುಸನ್ನಿಧಿಯಲ್ಲಿ ಗುರುಹಸ್ತಮಸ್ತಕ ಸಂಯೋಗದಿಂ
ಮಹಾಲಿಂಗವ ಕರತಳಾಮಳಕವಾಗಿ
ಕರ ಮನ ಭಾವದಲ್ಲಿ ಪ್ರತಿಷ್ಠಿಸಿ ತೋರಲು ಪರಮಾನಂದವನೆಯ್ದಿ,
ಆ ಲಿಂಗದಲ್ಲಿ ಆಚಾರವಿಡಿದು ಭಕ್ತ;
ಪೂಜೆ ವಿಡಿದು ಮಾಹೇಶ್ವರ;
ಅರ್ಪಿತವಿಡಿದು ಪ್ರಸಾದಿ; ಅನುಭಾವವಿಡಿದು ಪ್ರಾಣಲಿಂಗಿ;
ಆನಂದವಿಡಿದು ಶರಣ; ಸಮರಸವಿಡಿದು ಐಕ್ಯ
ಇಂತು ತಾನೆಲ್ಲವಾಗಿ, ಎಲ್ಲವೂ ತಾನಾಗಿ
ಒಳಹೊರಗೆನ್ನದೆ, ಇಹಪರವೆನ್ನದೆ
ಸರ್ವವೂ ತಾನಾದ ಮಹಾಜ್ಞಾನಿ ಶರಣನ ಸುಳುಹೆ
ಜಗತ್ಪಾವನವಯ್ಯ ಕೂಡಲಚೆನ್ನಸಂಗಮದೇವಾ."[೪]

---

೪. ಚೆನ್ನಬಸವಣ್ಣನವರ ವಚನ ಸಂಪುಟ. ವ.ಸಂ. ೧೨೬೭ (೨೦೦೧)

ಶೂನ್ಯ ಸಂಪಾದನೆಗಳ ಸಂಖ್ಯಾನಿರ್ಣಯ ಮತ್ತು ಸ್ವರೂಪ :

'ಶೂನ್ಯಸಂಪಾದನೆ' ಶರಣರು ರೂಪಿಸಿದ ಶೂನ್ಯತತ್ವ ಪರಿಕಲ್ಪನೆಯನ್ನು ಅವರ ವಚನಗಳ ಮೂಲಕ ಕಟ್ಟಿಕೊಡುವ ಒಂದು ಅಪೂರ್ವ ಪಠ್ಯಗ್ರಂಥ. ಇದನ್ನು ತನ್ನ ಅಗಾಧವಾದ ಪ್ರತಿಭಾ ಶಕ್ತಿಯಿಂದ ಮೊದಲು ರಚಿಸಿದವನು ಶಿವಗಣಪ್ರಸಾದಿ ಮಹಾದೇವಯ್ಯ. ಇದು ಕಾಲಾಂತರದಲ್ಲಿ ಬೇರೆ ಬೇರೆ ಅನುಭಾವಿಗಳಿಂದ ಹಲವು ರೀತಿಯಲ್ಲಿ ಪರಿಷ್ಕರಣಗೊಳ್ಳುತ್ತ ಬಂದಿದ್ದು, ಅವುಗಳ ಸಂಖ್ಯೆ ಎಷ್ಟು? ಪರಿಷ್ಕರಣಕಾರರು ಯಾರು? ಪರಿಷ್ಕರಣಗಳಿಗೆ ಕಾರಣವೇನು? ಎಂಬುದರ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳು ತಲೆದೋರಿವೆ.

೧೯೩೦ರಲ್ಲಿ 'ಗೂಳೂರ ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆ'ಯನ್ನು ಪ್ರಥಮ ಬಾರಿಗೆ ಶೋಧಿಸಿ ಪ್ರಕಟಿಸಿದ ಡಾ. ಫ.ಗು.ಹಳಕಟ್ಟಿ ಅವರು, ಈ ಕೃತಿಯ ಮಹತ್ವ ಕುರಿತು ಪ್ರಸ್ತಾವನೆಯಲ್ಲಿ ಬರೆಯುತ್ತ "ಈ ಶೂನ್ಯಸಂಪಾದನೆಯನ್ನು ರಚಿಸಿದ ಪದ್ಧತಿಯು ಹೊಸ ಮಾದರಿಯದಾಗಿರುತ್ತದೆ. ಈ ಪದ್ಧತಿಯನ್ನು ಅವನ ಹಿಂದೆ ಯಾರೂ ಅನುಸರಿಸಿದಂತೆ ತೋರಿಬರುವುದಿಲ್ಲ"[೫] ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಹೇಳಿಕೆಯನ್ನು ಗಮನಿಸಿದರೆ ಆಗ ಹಳಕಟ್ಟಿಯವರಿಗೆ ದೊರೆತ ಶೂನ್ಯಸಂಪಾದನೆ ಇದೊಂದೇ ಆಗಿತ್ತು ಎಂದು ಸ್ಪಷ್ಟವಾಗುತ್ತದೆ.

೧೯೩೪ ರಲ್ಲಿ ಪ್ರೊ. ಎಂ. ಆರ್. ಶ್ರೀನಿವಾಸಮೂರ್ತಿ ಅವರು 'ಶೂನ್ಯಸಂಪಾದನೆಗಳು'[೬] ಎಂಬ ಲೇಖನವನ್ನು ಬರೆಯುವ ಮೂಲಕ ಶೂನ್ಯಸಂಪಾದನೆಗಳ ಸಂಖ್ಯಾನಿರ್ಣಯಕ್ಕೆ ನಾಂದಿ ಹಾಡಿದರು. ಇವರ ಪ್ರಕಾರ ಶೂನ್ಯ ಸಂಪಾದನೆಗಳು ಐದು. ಅವುಗಳನ್ನು ರಚಿಸಿದವರು ಕ್ರಮವಾಗಿ ೧. ಶಿವಗಣ ಪ್ರಸಾದಿ ಮಹಾದೇವಯ್ಯ, ೨. ಕೆಂಚವೀರಣ್ಣೊಡೆಯ, ೩. ಹಲಗೆದೇವ, ೪. ಗುಮ್ಮಳಾಪುರದ ಸಿದ್ಧಲಿಂಗ, ೫. ಗೂಳೂರ ಸಿದ್ಧವೀರಣ್ಣೊಡೆಯ.

೧೯೫೮ ರಲ್ಲಿ ಗೂಳೂರ ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆಯನ್ನು ಹಳಕಟ್ಟಿಯವರ ನಂತರ ಮತ್ತೊಮ್ಮೆ ಹಲವು ಹಸ್ತಪ್ರತಿಗಳ ಆಧಾರದಿಂದ ಶಾಸ್ತ್ರೀಯವಾಗಿ ಪರಿಷ್ಕರಿಸಿ ಪ್ರಕಟಿಸಿದ ಪ್ರೊ. ಸಂ.ಶಿ. ಭೂಸನೂರಮಠ ಅವರು ಈ ಕೃತಿಗೆ ಪ್ರಸ್ತಾವನೆ ಬರೆದಿಲ್ಲವಾದ ಕಾರಣ ಶೂನ್ಯಸಂಪಾದನೆಗಳ ಸಂಖ್ಯಾ ವಿಚಾರವಾಗಿ ಯಾವುದೇ ಪ್ರಸ್ತಾಪ ಮಾಡಿಲ್ಲ. ಆದರೆ ಈ ಕೃತಿಗೆ ಬರೆದ ಪ್ರಕಾಶಕರ ಮಾತಿನಲ್ಲಿ "....ಶ್ರೀ ಸಂ.ಶಿ.ಭೂಸನೂರಮಠ ಅವರು ಇದೇ ಗ್ರಂಥದ ಎರಡನೆಯ ಸಂಪುಟದಲ್ಲಿ ವಿಸ್ತಾರವಾದ, ವಿಮರ್ಶಾತ್ಮಕವಾದ ಪ್ರಸ್ತಾವನೆಯನ್ನು ಬರೆಯಲಿದ್ದಾರೆ. ಇದಲ್ಲದೆ ಆ ಸಂಪುಟದಲ್ಲಿ ಉಪಲಬ್ಧವಿದ್ದ ಬೇರೆಯವರ ಶೂನ್ಯಸಂಪಾದನೆಗಳ ಹೆಚ್ಚು ಕಡಿಮೆ ಭಾಗಗಳನ್ನು ತೋರಿಸುವ ಮೂರು ಇಲ್ಲವೆ ನಾಲ್ಕು ಪರಿಶಿಷ್ಟಗಳನ್ನು ಸೇರಿಸುವ ಸಂಯೋಜನೆ ಈಗಾಗಲೆ ನಡೆದಿದೆ"[೭] ಎಂದು ಹೇಳಲಾಗಿದೆ. ಇದರಿಂದ ಪ್ರೊ. ಭೂಸನೂರಮಠ ಅವರಿಗೆ ಶೂನ್ಯಸಂಪಾದನೆಯ

---

೫. ಪ್ರಭುದೇವರ ಶೂನ್ಯಸಂಪಾದನೆ. ಪ್ರಸ್ತಾವನೆ. ಪು. ೨. (೧೯೬೦)
೬. ಶೂನ್ಯಸಂಪಾದನೆಗಳು: ಎಂ. ಆರ್. ಶ್ರೀ. ಪ್ರ.ಕ. ೧೫–೪, ಪು. ೬೦–೧೬(೧೯೩೪)
೭. ಪ್ರಭುದೇವರ ಶೂನ್ಯಸಂಪಾದನೆ(ಸಂಪುಟ–೧) ಪ್ರಕಾಶಕರ ಮಾತು ಪು. ii-iii (೧೯೫೮)

ಹಲವು ಪರಿಷ್ಕರಣಗಳು ಇವೆ ಎಂಬುದರ ಅರಿವಿತ್ತು ಎಂಬುದು ಸ್ಪಷ್ಟವಾಗುತ್ತದೆ. ಅದನ್ನು ಅವರು ತಮ್ಮ ಈ ಕೃತಿಯ ಮೂರನೆಯ ಮುದ್ರಣದ ಆವೃತ್ತಿಗೆ ಬರೆದ 'ಈ ಶೂನ್ಯ ಸಂಪಾದನೆ-ಒಂದು ವಿಶೇಷ ದರ್ಶನ' ಎಂಬ ಪ್ರಾಸ್ತಾಪಿಕ ಬರಹದಲ್ಲಿ ಪ್ರಕಟಪಡಿಸಿದ್ದಾರೆ. ಇಲ್ಲಿ ಎಂ. ಆರ್. ಶ್ರೀ. ಅವರ ಅಭಿಪ್ರಾಯದ ಕಡೆಗೆ ತಮ್ಮ ಒಲವು ಇರುವುದನ್ನು ಅವರು ಪರೋಕ್ಷವಾಗಿ ಸೂಚಿಸಿದ್ದಾರೆ.[೮]

೧೯೬೨ ರಲ್ಲಿ ಡಾ. ಎಂ. ಚಿದಾನಂದಮೂರ್ತಿ ಅವರು 'ಶೂನ್ಯಸಂಪಾದನೆಯನ್ನು ಕುರಿತು' ಎಂಬ ಗ್ರಂಥವನ್ನು ಪ್ರಕಟಿಸಿದ್ದು, ಅದರಲ್ಲಿ ಸಂಖ್ಯಾ ವಿಚಾರವಾಗಿ ಚರ್ಚಿಸುತ್ತ, 'ಶೂನ್ಯಸಂಪಾದನೆಗಳು ಐದು ಅಲ್ಲ; ನಾಲ್ಕು ಮಾತ್ರ. ಅವುಗಳನ್ನು ರಚಿಸಿದವರು ಕ್ರಮವಾಗಿ ಶಿವಗಣಪ್ರಸಾದಿ ಮಹಾದೇವಯ್ಯ, ಹಲಗೆದೇವ, ಗುಮ್ಮಳಾಪುರದ ಸಿದ್ಧಲಿಂಗ, ಗೂಳೂರ ಸಿದ್ಧವೀರಣ್ಣೊಡೆಯರು. ಹಲಗೆದೇವನ ಶೂನ್ಯಸಂಪಾದನೆಯನ್ನೇ ಕೆಂಚವೀರಣ್ಣನದೆಂದು ಕಲ್ಪಿಸಿದಂತಿದೆ' ಎಂದು ತಿಳಿಸುತ್ತಾರೆ.[೯]

೧೯೬೯ ರಲ್ಲಿ 'ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆ'ಯನ್ನು ಮೊದಲ ಬಾರಿಗೆ ಪರಿಷ್ಕರಿಸಿ ಪ್ರಕಟಿಸಿದ ಡಾ. ಎಲ್. ಬಸವರಾಜು ಅವರು ಶೂನ್ಯ ಸಂಪಾದನೆಗಳು ನಾಲ್ಕೇ ಎಂದು ಹೇಳಿದ್ದಾರೆ.[೧೦]

೧೯೭೧ ರಲ್ಲಿ ಡಾ. ಆರ್. ಸಿ ಹಿರೇಮಠ ಅವರು 'ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆ' ಮತ್ತು ೧೯೭೨ ರಲ್ಲಿ 'ಗುಮ್ಮಳಾಪುರದ ಸಿದ್ಧಲಿಂಗನ ಶೂನ್ಯಸಂಪಾದನೆ'ಗಳನ್ನು ಪರಿಷ್ಕರಿಸಿ ಪ್ರಕಟಿಸುತ್ತ, ಅವುಗಳಲ್ಲಿ ಎಂ. ಆರ್. ಶ್ರೀ. ಅವರ ಅಭಿಪ್ರಾಯವನ್ನು ಮನ್ನಿಸಿದ್ದಾರೆ.[೧೧] ಆದರೆ ಕ್ರಮಸಂಖ್ಯೆಯಲ್ಲಿ ಹಲಗೆದೇವನ ಕೃತಿಯನ್ನು ಕೊನೆಯದಾಗಿ ಗಣಿಸುತ್ತಾರೆ.

೧೯೭೮ ರಲ್ಲಿ 'ಹಲಗೆಯಾರ್ಯನ ಶೂನ್ಯಸಂಪಾದನೆ'ಯನ್ನು ಮೊದಲಬಾರಿಗೆ ಪರಿಷ್ಕರಿಸಿ ಪ್ರಕಟಿಸಿದ ಡಾ. ಎಸ್. ವಿದ್ಯಾಶಂಕರ ಮತ್ತು ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ ಅವರು ಚಿದಾನಂದಮೂರ್ತಿಯವರ ನಿಲವನ್ನು ಸ್ವೀಕರಿಸಿದ್ದಾರೆ.[೧೨]

೧೯೭೮ ರಲ್ಲಿ ಡಾ. ಎಂ. ಎಂ. ಕಲಬುರ್ಗಿ ಅವರು 'ಶೂನ್ಯಸಂಪಾದನೆಗಳು ಎಷ್ಟು? ಕಾಲಕ್ರಮ ಯಾವುದು?' ಎಂಬ ಲೇಖನ ಬರೆದು ಅದರಲ್ಲಿ ಎಂ. ಆರ್. ಶ್ರೀ. ಅವರ ಹೇಳಿಕೆಯನ್ನು ಸಾಧಾರವಾಗಿ ಸಮರ್ಥಿಸಿದ್ದಾರೆ. ಅಲ್ಲದೆ ಜೊತೆಗೆ ಇನ್ನಿತರ ಸಣ್ಣ ಸಂಪಾದನೆಗಳನ್ನು ಕುರಿತು ವಿಚಾರಿಸುತ್ತ ಶೂನ್ಯ ಸಂಪಾದನೆಗಳ ಸಂಖ್ಯೆಯನ್ನು ಏಳಕ್ಕೆ ಏರಿಸಿದ್ದಾರೆ.[೧೩]

---

೮. ಪ್ರಭುದೇವರ ಶೂನ್ಯಸಂಪಾದನೆ(ತೃತೀಯ ಆವೃತ್ತಿ-೧೯೮೬)

೯. ಶೂನ್ಯಸಂಪಾದನೆಯನ್ನು ಕುರಿತು : ಪು-೪೩(ದ್ವಿತೀಯ ಮುದ್ರಣ-೧೯೮೮)

೧೦. ಶಿವಗಣಪ್ರಸಾದಿ ಮಹಾದೇವಯ್ಯನ ಪ್ರಭುದೇವರ ಶೂನ್ಯಸಂಪಾದನೆ: ಪ್ರಸ್ತಾವನೆ. ಪು. (೧೯೬೯)

೧೧. ಗುಮ್ಮಳಾಪುರದ ಸಿದ್ಧಲಿಂಗನ ಶೂನ್ಯಸಂಪಾದನೆ : ಪ್ರಸ್ತಾವನೆ. (೧೯೭೨). ಉತ್ತಂಗಿ ಚೆನ್ನಪ್ಪನವರದೂ ಇದೇ ಅಭಿಪ್ರಾಯವಾಗಿದೆ.(ನೋಡಿ. ಸಿದ್ಧರಾಮ ಸಾಹಿತ್ಯ ಸಂಗ್ರಹ, ಪ್ರಸ್ತಾವನೆ. ಪು.೬೪. ೧೯೫೫)

೧೨. ಹಲಗೆಯಾರ್ಯನ ಶೂನ್ಯಸಂಪಾದನೆ : ಪ್ರಸ್ತಾವನೆ. ಪು. ii (೧೯೭೮)

೧೩. ಶೂನ್ಯಸಂಪಾದನೆಗಳು ಎಷ್ಟು? ಕಾಲಕ್ರಮ ಯಾವುದು?, ಮಾರ್ಗ ಸಂಪುಟ-೩ (೧೯೭೮)

೨೦೦೩ ರಲ್ಲಿ ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯನವರು 'ಶೂನ್ಯ ಸಂಪಾದನೆಗಳು ಮರುಚಿಂತನೆ' ಎಂಬ ಕೃತಿಯನ್ನು ರಚಿಸಿ, ಅದರಲ್ಲಿ ಮೇಲೆ ಉಲ್ಲೇಖಿಸಿದ ಎಲ್ಲ ವಿದ್ವಾಂಸರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಮರುಚಿಂತನೆಗೆ ಒಳಪಡಿಸಿ, ಶೂನ್ಯ ಸಂಪಾದನೆಗಳು ಐದು ಅಲ್ಲ, ನಾಲ್ಕೇ ಎಂಬ ನಿರ್ಧಾರಕ್ಕೆ ಬರುತ್ತಾರೆ.[೧೪]

ಈ ಎಲ್ಲ ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಶೂನ್ಯಸಂಪಾದನೆಗಳ ಅಂತಿಮ ಲೆಕ್ಕಾಚಾರವನ್ನು ಹೀಗೆ ಮಾಡಬಹುದು:

ಸದ್ಯ ದೊರೆತು ಪ್ರಕಟವಾದ ನಾಲ್ಕು ಶೂನ್ಯಸಂಪಾದನೆಗಳಲ್ಲಿ 'ಶಿವಗಣಪ್ರಸಾದಿ ಮಹಾದೇವಯ್ಯ'ನದು ಮೊದಲನೆಯದು. ಇದನ್ನು ಅನಂತರದ ಹಲಗೆದೇವ, ಗುಮ್ಮಳಾಪುರದ ಸಿದ್ಧಲಿಂಗ, ಗೂಳೂರ ಸಿದ್ಧವೀರಣ್ಣೊಡೆಯ ಈ ಮೂವರೂ ತಮ್ಮ ಕೃತಿಗಳಲ್ಲಿ ಉಲ್ಲೇಖಿಸಿದ್ದಾರೆ. ಶಿವಗಣಪ್ರಸಾದಿ ಮಹಾದೇವಯ್ಯ ತನ್ನ ಕೃತಿಯ ಆದಿಗದ್ಯದಲ್ಲಿ "......... ಶ್ರೀ ಮತ್ಸಕಲ ಜಗದಾಚಾರ್ಯರುಮಪ್ಪ ಅಲ್ಲಮಪ್ರಭುದೇವರು, ಬಸವರಾಜದೇವರು, ಚೆನ್ನಬಸವರಾಜದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳೊಡನೆ ಮಹಾನುಭಾವ ಪ್ರಸಂಗಮಂ ಮಾಡಿ ಶೂನ್ಯಸಂಪಾದನೆಯ ಸದ್ಗೋಷ್ಠಿ ಕಥಾಪ್ರಸಂಗಮಂ ಮುಕ್ತಕಮಾಗಿರ್ದ ಶಿವಾದ್ವೈತ ವಚನಂಗಳನು ಉತ್ತರ-ಪ್ರತ್ಯುತ್ತರ ಸಂಬಂಧವಾಗಿ ಸೇರಿಸಿ ಶಿವಗಣ ಪ್ರಸಾದಿ ಮಹಾದೇವಂಗಳು ಮರ್ತ್ಯಲೋಕದ ಮಹಾಗಣಂಗಳಿಗೆ ಮಹಾಪ್ರಸಂಗಮಂ ಸಮರ್ಪಿಸಿದ ಭೇದವೆಂತಿರ್ದುದೆಂದಡೆ" ಎಂದು, ಅಂತ್ಯ ಗದ್ಯದಲ್ಲಿ-"ಈ ಮಹಾಪ್ರಸಂಗಮಂ ಬಸವರಾಜದೇವರು, ಚೆನ್ನಬಸವರಾಜದೇವರು, ಪ್ರಭುದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳ ವಚನಂಗಳಿಂ ಕಥಾಸಾಂಗತ್ಯವ ಮಾಡಿ ಶಿವಗಣಪ್ರಸಾದಿ ಮಹಾದೇವಗಳು ತತ್ ಶಿವಗಣಂಗಳ ಶಿವಾನುಭಾವ ಶ್ರೋತ್ರ ದ್ವಾರಮುಖಕ್ಕೆ ನಿರ್ಮಳ ದರ್ಪಣವೆನೆ ಸಮರ್ಪಿಸಿದನು" "... ಇಲ್ಲಿ ವಚನಕ್ರಮ ಸೇರುವೆ ತಪ್ಪುಳ್ಳೊಡೆ ನಿಮ್ಮ ಪರಮಜ್ಞಾನದಿಂ ತಿದ್ದಿ ಈ ವಚನಾನುಭಾವ ಪ್ರಸಂಗಮಂ ಮಾಡಿ ಸುಖಿಸುವುದು" ಎಂದು ಹೇಳಿದ್ದಾನೆ. ಈ ಹೇಳಿಕೆಯನ್ನು ಮುಂದಿನ ಸಂಪಾದನಕಾರರು ಪುನರುಚ್ಚರಿಸುತ್ತ, ತಮ್ಮ ಹೆಚ್ಚಿನ ಮಾತುಗಳನ್ನು ಅದರಲ್ಲಿ ಸೇರಿಸುತ್ತ ಬಂದಿದಾರೆ.

ಹಲಗೆದೇವನ ಶೂನ್ಯ ಸಂಪಾದನೆಯ ಆದಿಯಲ್ಲಿ ಇದು "ಶಿವಗಣಪ್ರಸಾದಿ ಮಹಾದೇವಯ್ಯಗಳು ಮರ್ತ್ಯ ಲೋಕದ ಮಹಾಗಣಂಗಳಿಗೆ ಆ ಮಹಾಪ್ರಸಂಗಮಂ ಸಮರ್ಪಿಸಿದ ಭೇದವೆಂತಿದ್ದುದೆಂದಡೆ" ಎಂದು; ಅಂತ್ಯದಲ್ಲಿ "ಇದನು ಶಿವಶರಣರು ಕೇಳುವುದು ಲಾಲಿಸುವುದು ಪಾಲಿಸುವುದು, ಬರೆದೋದುವುದು, ಇಲ್ಲಿ ವಚನಕ್ರಮ ಸೇರುವೆ ತಪ್ಪುಳ್ಳಡೆ ನಿಮ್ಮಲ್ಲಿಪ್ಪ ಪರಿಪೂರ್ಣವಪ್ಪ ಪರಶಿವಜ್ಞಾನದಿಂ ತಿಳಿದು ತಿದ್ದಿ ನುಡಿದು ನಡೆದು ಪ್ರತಿಷ್ಠೆಯ ಮಾಡಬೇಕೆಂದು ಸಜ್ಜನ ಸತ್‌ಶರಣರೊಳು ಈ ವಚನಾನುಭಾವ ಪ್ರಸಂಗವಮಂ ಮಾಡಿ ಸುಖಿಸುವ ಪರಮ ಪ್ರಸಾದಿಗಳ ಶ್ರೀಪಾದ ಕಮಲಗಳಿಗೆ ಶರಣು ಶರಣಾರ್ಥಿ" ಎಂದು ಬಂದಿದೆ.

---

೧೪. ಶೂನ್ಯಸಂಪಾದನೆಗಳು ಮರು ಚಿಂತನೆ: ಪು. ೧೨-೧೬.

ಗುಮ್ಮಳಾಪುರದ ಸಿದ್ಧಲಿಂಗನ ಶೂನ್ಯಸಂಪಾದನೆಯ ಆದಿಯಲ್ಲಿ ಇದು "... ಸಕಲ ನಿಷ್ಕಲಮಯ ಸುಪ್ರಸಾದಿ ಮಹಾದೇವಂ ತಾಂ ಮನದೊಳು ಸಂತಸದಿಂ ವಿರಚಿತ ಶುಭಸೂಚನೆಯೊಳು ಸಿದ್ಧರಾಮಯ್ಯದೇವಂಗುರೆ ದೀಕ್ಷಾ ಕ್ರಮವಿಲ್ಲದಡೆ ಬಳಿಕಾ ವಚನಾಗಮದೊಳ್... ಪೌರಾತನೋಕ್ತ ಸನ್ಮತದಿಂದ ಯತಿಗುರೆ ದೀಕ್ಷೆಯನೆಸಗಿದುದಂ ಸೆರೆ ಶಿವಶರಣರ್ಗೆ ಸಿದ್ಧಲಿಂಗಂ ಪೇಳ್ದಂ" ಎಂದು; " ಆ ನಿಃಕಲ ಪರಶಿವಲಿಂಗದ ಸತ್ತುವೆನಿಸಿದ ಬಸವೇಶ್ವರನೆ ಜಗಹಿತಾರ್ಥವಾಗಿ ಗುರುಸ್ವರೂಪವಾಗಿ ಮರ್ತ್ಯಕ್ಕೆ ಅವತರಿಸಿದ; ಆ ನಿಃಕಲ ಪರಶಿವಲಿಂಗದ ಚಿತ್ತುವೆನಿಸಿದ ಚೆನ್ನಬಸವೇಶ್ವರನೆ ಜಗತ್ಪಾವನವಾಗಿ ಲಿಂಗಸ್ವರೂಪವಾಗಿ ಮರ್ತ್ಯಕ್ಕೆ ಅವತರಿಸಿದ; ಆ ನಿಃಕಲ ಪರಶಿವಲಿಂಗದ ಆನಂದ ಸ್ವರೂಪವೆನಿಸಿದ ಜಂಗಮವೆ ಪ್ರಭುದೇವರಾಗಿ ಸಕಲ ಭಕ್ತ ಗಣಹಿತಾರ್ಥವಾಗಿ ಮರ್ತ್ಯಕ್ಕೆ ಅವತರಿಸಿದರು. ಆ ಭಕ್ತಿಯ ಬೆಳವಿಗೆಗೆ ಬಸವಣ್ಣ ಕಾರಣಿಕನಾದ. ಅರಿವಿನ ಬೆಳವಿಗೆಗೆ ಚೆನ್ನಬಸವಣ್ಣ ಕಾರಣಿಕನಾದ; ಈ ಎರಡನೊಳಕೊಂಬ ಮಹಾಘನಕ್ಕೆ ಪ್ರಭುದೇವರು ಕಾರಣಿಕನಾದ. ಇಂತೀ ಗುರುಲಿಂಗಜಂಗಮ ಮೂರೂ ಆ ನಿಃಕಲಪರಶಿವಲಿಂಗ ತಾನೆ ಜಗಹಿತಾರ್ಥವಾಗಿ ಮೂರಾಗಿ ಮರ್ತ್ಯಕ್ಕೆ ಅವತರಿಸಿದಡೆ, ಇದೇನು ಕಾರಣ ಮರ್ತ್ಯಕ್ಕೆ ಬಂದರೆಂದು ಸಂಕಲ್ಪಿಸೆ ಶಾಪದಿಂದ ಬಂದರೆಂದು ಆವನಾನೊಬ್ಬನು ನುಡಿವುತ್ತಿದ್ದಾನು. ಅವನು ಇಪ್ಪತ್ತೆಂಟು ಕೋಟಿ ನರಕದಲ್ಲಿ ರವಿಶಶಿಯುಳ್ಳನ್ನಬರ ನರಕವನನುಭವಿಸುತ್ತಿಪ್ಪನು" ಎಂದು; "....ಪ್ರಭುದೇವರ ಶೂನ್ಯಸಂಪಾದನೆಯ ಮಹಾಪ್ರಸಂಗಮಂ ಬಸವರಾಜದೇವರು ಚೆನ್ನಬಸವರಾಜದೇವರು ಪ್ರಭುದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳ ವಚನಂಗಳಿಂದ ಕಥಾ ಸಾಂಗತ್ಯವಾಗಿ ಶಿವಗಣಪ್ರಸಾದಿ ಮಹಾದೇವಯ್ಯಗಳು ತಚ್ಛಿವಗಣಂಗಳ ಶಿವಾನುಭಾವವ ಶ್ರೋತ್ರದ್ವಾರಮುಖಕ್ಕೆ ನಿರ್ಮಲದರ್ಪಣವೆನೆ ಸಮರ್ಪಿಸಿದನು." ಅಂತ್ಯದಲ್ಲಿ "......ಇಲ್ಲಿ ವಚನಕ್ರಮ ತಪ್ಪಿದಡೆ ನಿಮ್ಮ ಪರಿಜ್ಞಾನದಿಂದ ತಿದ್ದಿಕೊಂಬುದು ಎಂದು ಎನಲಾಗಿ, ಆ ವಾಕ್ಯವಿಡಿದು ಇತ್ತ ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವರು ಮಡಿವಾಳ ಮಾಚಿತಂದೆಗಳು ಹಡಪದಪ್ಪಣ್ಣ ಮೋಳಿಗೆ ಮಾರಿತಂದೆಗಳು ಇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳ ವಚನಂಗಳಿಂದ ಶಿವಗಣಪ್ರಸಾದಿ ಮಹಾದೇವಯ್ಯಗಳು ಶೂನ್ಯಸಂಪಾದನೆಯ ರಚಿಸಲು, ಅಲ್ಲಿ ಸಿದ್ಧರಾಮಯ್ಯದೇವರಿಗೆ ದೀಕ್ಷಾ ಕ್ರಮವಿಲ್ಲದಿರಲು, ಇದಕ್ಕೆ ಕೆಂಚವೀರಣ್ಣೊಡೆಯರು ದೇವರು ಪುರಾತನರ ವಚನವಿಡಿದು ಸಾವಿರದ ಏಳುನೂರು ವಚನಂಗಳಿಂದ ಸಿದ್ಧರಾಮೇಶ್ವರದೇವರಿಗೆ ದೀಕ್ಷಾಕ್ರಮದ ಭೇದವನು ಪ್ರತಿಷ್ಠಿಸಲು,......ತೋಂಟದ ಸಿದ್ಧೇಶ್ವರನ ವರಪುತ್ರ (ನಾದ ನಾನು) ಜಗಹಿತಾರ್ಥವಾಗಿ ಗುಮ್ಮಳಾಪುರದ ಸಿದ್ಧಲಿಂಗದೇವರೆಂಬ ನಾಮವಿಡಿದು, ಬಸವಾದಿಪ್ರಮಥರ ವಚನಂಗಳಿಂದ ಕರ್ಮಕಾಂಡ ಯೋಗಕಾಂಡ ಜ್ಞಾನಕಾಂಡಮಂ ಖಂಡಿಸಿ, ಈ ಮೂರಕ್ಕೆ ಅತೀತವಾದ ಭಕ್ತಿಕಾಂಡವನೆ ತೆಗೆದು ಸಿದ್ಧರಾಮೇಶ್ವರದೇವರಿಗೆ ದೀಕ್ಷಾಕ್ರಮವನ್ನು ಬಸವಾದಿ ಪ್ರಮಥರ ವಚನ ಪ್ರಸಿದ್ಧವಾಗಿ ಅತಿ ಸೂಕ್ಷ್ಮವಾಗಿ ಸೇರಿಸಿ....ತೋಂಟದ ಸಿದ್ಧೇಶ್ವರದೇವರ ದಿವ್ಯ ಶ್ರೀಪಾದಕ್ಕೆ ಸಮರ್ಪಿಸಿದ ಶೂನ್ಯಸಂಪಾದನೆ ಸಮಾಪ್ತ" ಎಂದು ನಿರೂಪಿತವಾಗಿದೆ.

ಗೂಳೂರ ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆಯ ಆದಿಯಲ್ಲಿ ಇದು "ಅಲ್ಲಮ ಪ್ರಭುದೇವರು ಚೆನ್ನಬಸವರಾಜದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳೊಡನೆ ಮಹಾನುಭಾವ ಪ್ರಸಂಗಮಂ ಮಾಡಿದ ಶೂನ್ಯಸಂವಾದದ ಸದ್‌ಗೋಷ್ಠಿ ಕಥಾಪ್ರಸಂಗವನು, ಮುಕ್ತಕಮಾಗಿರ್ದ ಶಿವಾದ್ವೈತ ವಚನಂಗಳನು ಉತ್ತರ-ಪ್ರತ್ಯುತ್ತರ ಸಂಬಂಧವಾಗಿ ಸೇರಿಸಿ,

ಶಿವಗಣಪ್ರಸಾದಿ ಮಹಾದೇವಯ್ಯಗಳು ಮರ್ತ್ಯಲೋಕದ ಮಹಾಗಣಂಗಳಿಗೆ ಆ ಮಹಾಪ್ರಸಂಗಮಂ ಸಮರ್ಪಿಸಿದಲ್ಲಿ, ಸಿದ್ಧರಾಮೇಶ್ವರದೇವರಿಗೆ ಉಪದೇಶಕ್ರಮವಿಲ್ಲದಿರ್ದೊಡೆ ಗುಮ್ಮಳಾಪುರದ ಸಿದ್ಧಲಿಂಗದೇವರು ಸಮಸ್ತ ಪುರಾತನರ ವಚನ ಸಮ್ಮತದಿಂದ ಸಂಗ್ರಹಿಸಲು, ಆ ಕ್ರಮವಿಡಿದು ಈ ಶೂನ್ಯಸಂಪಾದನೆಯ ಸೇರಿಸಿ ಶಿವಗಣಂಗಳಿಗೆ ಸಮರ್ಪಿಸಿದೆವು" ಎಂದು,

ಅಂತ್ಯದಲ್ಲಿ "[ಈ] ಪ್ರಭುದೇವರ ಶೂನ್ಯಸಂಪಾದನೆಯ ಮಹಾಪ್ರಸಂಗಮಂ ಬಸವರಾಜದೇವರು ಚೆನ್ನಬಸವರಾಜದೇವರು ಪ್ರಭುದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳ ವಚನಗಳಿಂದ ಕಥಾಸಾಂಗತ್ಯವಾಗಿ ಶಿವಗಣಪ್ರಸಾದಿ ಮಹಾದೇವಯ್ಯಗಳು ತತ್‌ಶಿವಗಣಂಗಳ ಶಿವಾನುಭಾವವನುಭಾವ ಶ್ರೋತ್ರದ್ವಾರ ಮುಖಕ್ಕೆ ನಿರ್ಮಲದರ್ಪಣವೆನೆ ಸಮರ್ಪಿಸಿದನು.... ಇಲ್ಲಿ ವಚನಕ್ರಮ ತಪ್ಪಿದಡೆ ನಿಮ್ಮ ಪರಿಜ್ಞಾನದಿಂದ ತಿದ್ದಿಕೊಂಬುದೆಂದು ಎನಲಾಗಿ, ಆ ವಾಕ್ಯವಿಡಿದು ಗುಮ್ಮಳಾಪುರದ ಸಿದ್ಧಲಿಂಗದೇವರು, ಅಲ್ಲಿ ಸಿದ್ಧರಾಮಯ್ಯದೇವರಿಗೆ ದೀಕ್ಷಾಕ್ರಮವಿಲ್ಲದಿರಲು, ಬಸವಾದಿ ಪ್ರಮಥರ ವಚನ ಪ್ರಸಿದ್ಧವಾಗಿ ಸೇರಿಸಿದರು. ಆ ಪರಿಯುಲೆ ... [ನಾನು] ಗೂಳೂರ ಸಿದ್ಧವೀರಣ್ಣೊಡೆಯರುದೇವರೆಂಬ ದಿವ್ಯ ಜ್ಞಾನಾನುಭಾವಿಯು ಈ ಶೂನ್ಯಸಂಪಾದನೆಯಂ ರಚಿಸಿ ವಸುಧೆಯ ಷಟ್‌ಸ್ಥಲ ಲಿಂಗಾಂಗ ಸಂಬಂಧಿಗಳಾದ ವೀರಮಾಹೇಶ್ವರರುಗಳ ಶ್ರೀಪಾದಕ್ಕೆ ಸಮರ್ಪಿಸಿದೆನು" ಎಂದು ಹೇಳಲ್ಪಟ್ಟಿದೆ.

ಈ ಎಲ್ಲ ಉದ್ಧರಣೆಗಳನ್ನು ಗಮನಿಸಿದಾಗ ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆಯನ್ನು ಮೂಲವಾಗಿಟ್ಟುಕೊಂಡು ಮುಂದಿನ ಮೂವರು ಅದರಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳುತ್ತ ಮತ್ತೆ ಕೆಲವು ಹೆಚ್ಚಿನ ಭಾಗಗಳನ್ನು ಸೇರಿಸುತ್ತ ಬಂದಿದ್ದಾರೆ ಎಂಬುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಈಗ ದೊರೆತ ಶೂನ್ಯಸಂಪಾದನೆಗಳಲ್ಲಿ ಶಿವಗಣಪ್ರಸಾದಿ ಮಹಾದೇವಯ್ಯ–ಹಲಗೆದೇವ–ಗುಮ್ಮಳಾಪುರದ ಸಿದ್ಧಲಿಂಗ–ಗೂಳೂರ ಸಿದ್ಧವೀರಣ್ಣೊಡೆಯ ಎಂಬ ಅನುಕ್ರಮವೇ ಸರಿಯಾದುದೆಂದು ಹೇಳಬಹುದು. ಇದಕ್ಕೆ ಕಾರಣ ಇವರ ಕೃತಿಗಳಲ್ಲಿರುವ ಹೇಳಿಕೆಗಳು ಸಾಕ್ಷಿ ಎನಿಸಿವೆ. ಮಹಾದೇವಯ್ಯನನ್ನು ಹಲಗೆದೇವ ಸ್ಮರಿಸುತ್ತಾನೆ. ಅಲ್ಲದೆ ಅವನಲ್ಲಿ ಇಲ್ಲದ ಸಿದ್ಧರಾಮನ ಗುರುಕರುಣ ದೀಕ್ಷಾ ಪ್ರಸಂಗ ಮತ್ತು ನುಲಿಯಚಂದಯ್ಯ ಪ್ರಸಂಗಗಳನ್ನು ಹೆಚ್ಚಿಗೆ ಸೇರಿಸುತ್ತಾನೆ. ಪ್ರಭುದೇವರ ಪೂರ್ವ ಸಾಂಗತ್ಯವನ್ನು ಮಹದೇವಯ್ಯನಲ್ಲಿದ್ದಂತೆ ಉಳಿಸಿಕೊಳ್ಳುತ್ತಾನೆ. ಇನ್ನು ಕೆಲವರ ಪೂರ್ವಕಥೆಗಳನ್ನು ಬೆಳೆಸುತ್ತಾನೆ. ಹಾಗೆಯೇ ತಾತ್ವಿಕ ಸಂಗತಿಗಳನ್ನು ವಿಶೇಷವಾಗಿ ಅಳವಡಿಸಿಕೊಳ್ಳುತ್ತಾನೆ.

ಗುಮ್ಮಳಾಪುರದ ಸಿದ್ಧಲಿಂಗ ಹಲಗೆದೇವನ ಹೆಸರು ಹೇಳದೆ ಕೆಂಚವೀರಣ್ಣೊಡೆಯನ ಹೆಸರು ಹೇಳಿದ್ದರೂ ಹಲಗೆದೇವನ ಕೃತಿಯಿಂದ ಸಿದ್ಧರಾಮನ ಗುರುಕರುಣ ಪ್ರಸಂಗವನ್ನು ಎತ್ತಿಕೊಂಡು ಯೋಗಿನಾಥ ಅಂಕಿತದ ೧೨೦ ವಚನಗಳನ್ನು ಹೆಚ್ಚಿಗೆ ಸೇರಿಸುತ್ತಾನೆ. ನುಲಿಯಚಂದಯ್ಯನ ಪ್ರಸಂಗವನ್ನು ಯಥಾವತ್ತಾಗಿ ತೆಗೆದುಕೊಳ್ಳುತ್ತಾನೆ. ಜೊತೆಗೆ ಆಯ್ದಕ್ಕಿ ಮಾರಯ್ಯನ ಪ್ರಸಂಗವನ್ನು ಹೆಚ್ಚಿಗೆ ಕಲ್ಪಿಸಿಕೊಳ್ಳುತ್ತಾನೆ. ಇದರಿಂದ ಗುಮ್ಮಳಾಪುರದ ಸಿದ್ಧಲಿಂಗ ಕೆಂಚವೀರಣ್ಣನದೆಂದು ಹೇಳುವ ಶೂನ್ಯ ಸಂಪಾದನೆ ಹಲಗೆದೇವನದೇ ಎಂಬುದು ಗೊತ್ತಾಗುತ್ತದೆ. ಹಲಗೆದೇವನ ಶೂನ್ಯಸಂಪಾದನೆಯನ್ನು–ಹಲಗೆದೇವರು–ಕಲ್ಲೇಶ್ವರದೇವರು–ಕೆಂಚವೀರಣ್ಣೊಡೆಯದೇವರು

ಮೊದಲಾದ ಶರಣರು ವಿಚಾರಿಸಿ ಸಿದ್ಧಪಡಿಸಿದರೆಂದು ಈ ಕೃತಿಯ ಆದಿ ಗದ್ಯದಲ್ಲಿ ಹೇಳಿರುವುದು ಇದಕ್ಕೆ ಸಮರ್ಥನೆ ನೀಡುತ್ತದೆ. ಸಾಮೂಹಿಕ ಸೃಷ್ಟಿಯಾದ ಇದರಲ್ಲಿಯ ಕೆಂಚವೀರಣ್ಣನ ಹೆಸರನ್ನು ಮಾತ್ರ ಗುಮ್ಮಳಾಪುರದ ಸಿದ್ಧಲಿಂಗ ಎತ್ತಿ ಹೇಳುವಂತೆ ತೋರುತ್ತದೆ. ಆದರೆ "೧೨೦೦ ವಚನಗಳಿಂದ ಸಿದ್ಧರಾಮೇಶ್ವರದೇವಂಗೆ ದೀಕ್ಷಾತ್ರಯದ ಭೇದವನು ಪ್ರತಿಷ್ಠಿಸಲು" ಎಂಬ ಹೇಳಿಕೆಗೆ ಹಲಗೆದೇವನ ಶೂನ್ಯಸಂಪಾದನೆಯಲ್ಲಿ ಸಾಕ್ಷಿ ಇಲ್ಲ. ಅಲ್ಲಿರುವುದು ೧೬೧೯ ವಚನ (೧೪೨೩ ವಚನ ೧೯೬ ಸ್ವರವಚನ ನುಡಿಗಳು ಸೇರಿ) ಗಳು ಮಾತ್ರ. ಹಸ್ತಪ್ರತಿಗಳಲ್ಲಿ ವಚನ ಗಣನೆ ತಪ್ಪಾಗಿರಲೂಬಹುದು. ಆದರೆ ಮುಖ್ಯವಾದ ಮೂರು ಅಂಶಗಳು ಹಲಗೆದೇವನ ಕೃತಿಯನ್ನೇ ಕೆಂಚವೀರಣ್ಣನದೆಂದು ಗುಮ್ಮಳಾಪುರದ ಸಿದ್ಧಲಿಂಗ ಕರೆದಿದ್ದಾರೆ ಎಂಬುದಕ್ಕೆ ಬೆಂಬಲ ನೀಡುವುದರಿಂದ ಸದ್ಯಕ್ಕೆ ಅಂದರೆ ಕಾಲನ ಗರ್ಭದಲ್ಲಿ ಅಡಗಿ ಕುಳಿತಿರಬಹುದೆಂದು ಭಾವಿಸಿದ ಕೆಂಚವೀರಣ್ಣನ ಕೃತಿ ಸಿಗುವವರೆಗೆ ಎರಡೂ ಅಭಿನ್ನವೆಂದೇ ತಿಳಿಯುವುದು ಸೂಕ್ತವೆನಿಸುತ್ತದೆ.

ಗುಮ್ಮಳಾಪುರದ ಸಿದ್ಧಲಿಂಗನ ಕೃತಿಯನ್ನು ಉಲ್ಲೇಖಿಸುವ ಗೂಳೂರ ಸಿದ್ಧವೀರಣ್ಣ ಅವನ ತರುವಾಯದವನೆಂಬುದರಲ್ಲಿ ಸಂಶಯವಿಲ್ಲ. ಜೊತೆಗೆ ಅವನ ಶಿಷ್ಯನೇ ಇವನಾಗಿರುವುದರಿಂದ ಸಹಜವಾಗಿ ಗುರುವಿನ ಕೃತಿಯನ್ನೆ ಆಧಾರವಾಗಿಟ್ಟುಕೊಂಡು ಮೂಲವೆನಿಸಿದ ಶಿವಗಣಪ್ರಸಾದಿಯ ಕೃತಿಯನ್ನು ಅವಲೋಕಿಸಿ ತನ್ನ ಕೃತಿಯನ್ನು ನೂತನ ವಿನ್ಯಾಸದಲ್ಲಿ ಸಿದ್ಧಪಡಿಸಲು ಮುಂದಾಗುತ್ತಾನೆ. ಹಲಗೆದೇವನಲ್ಲಿರುವ ಸಿದ್ಧರಾಮನ ದೀಕ್ಷಾಪ್ರಸಂಗ, ನುಲಿಯಚಂದಯ್ಯನ ಪ್ರಸಂಗ, ಹಾಗೆಯೇ ಗುಮ್ಮಳಾಪುರದ ಸಿದ್ಧಲಿಂಗನಲ್ಲಿರುವ ಗುರುಕರುಣಪ್ರಸಂಗ, ಆಯ್ದಕ್ಕಿ ಮಾರಯ್ಯನ ಪ್ರಸಂಗವನ್ನು ಸ್ವೀಕರಿಸುತ್ತಾನೆ. ಹೊಸದಾಗಿ ತಾನು ಮೋಳಿಗೆಮಾರಯ್ಯನ ಸಂಪಾದನೆ, ಘಟ್ಟಿವಾಳಯ್ಯನ ಪ್ರಸಂಗಗಳನ್ನು ಕಲ್ಪಿಸುತ್ತಾನೆ. ಹೀಗಾಗಿ ಸದ್ಯದ ಮಟ್ಟಿಗೆ ಶೂನ್ಯಸಂಪಾದನೆಗಳ ಸಂಖ್ಯೆ ನಾಲ್ಕು ಮಾತ್ರ; ಅವುಗಳ ಕ್ರಮ–ಶಿವಗಣ ಪ್ರಸಾದಿ ಮಹಾದೇವಯ್ಯ–ಹಲಗೆದೇವ–ಗುಮ್ಮಳಾಪುರದ ಸಿದ್ಧಲಿಂಗ–ಗೂಳೂರ ಸಿದ್ಧವೀರಣ್ಣೊಡೆಯರ ರಚನೆಗಳು ಎಂದು ನಿರ್ಧರಿಸಬಹುದು.

ಇನ್ನು ಪರಿಷ್ಕರಣಗಳಿಗೆ ಕಾರಣವೇನು? ಎಂಬ ಪ್ರಶ್ನೆಗೆ ಈ ಕೃತಿಗಳಲ್ಲಿಯೇ ಬರುವ ಹೇಳಿಕೆಗಳು ಮತ್ತು ಕೃತಿಗಳ ವಸ್ತು ಸಂಗತಿಗಳಲ್ಲಿ ಮಾಡಿಕೊಂಡ ಮಾರ್ಪಾಡುಗಳ ಮೂಲಕ ಉತ್ತರ ಕಂಡುಕೊಳ್ಳಬಹುದು. ಸಂಪಾದನಕಾರರೇ ಹೇಳುವ ಅಂಶಗಳಲ್ಲಿ – ೧. ಮೊದಲ ಸಂಪಾದನೆಯಲ್ಲಿ ಸಿದ್ಧರಾಮನಿಗೆ ಲಿಂಗದೀಕ್ಷೆ ಪ್ರಸಂಗ ಇಲ್ಲದಿರುವುದು ೨. ಬಸವಾದಿ ಶರಣರು ಕೈಲಾಸದಲ್ಲಿ ಮಾಡಿದ ಯಾವುದೋ ತಪ್ಪಿಗೆ ಪ್ರತಿಯಾಗಿ ಶಿವನು ವಿಧಿಸಿದ ಶಾಪಕಾರಣವಾಗಿ ಮರ್ತ್ಯಕ್ಕೆ ಬಂದರೆಂಬುದು. ಇವುಗಳ ಜೊತೆಗೆ ಶಿವಗಣ ಪ್ರಸಾದಿಯ ಕೃತಿಯಲ್ಲಿ ಇಲ್ಲದಿರುವ ಶರಣರ ಬಹುಮುಖ್ಯ ಸಿದ್ಧಾಂತವೆನಿಸಿದ ಕಾಯಕ–ದಾಸೋಹಗಳ ವಿಚಾರವನ್ನು ಅಳವಡಿಸಬೇಕೆಂಬುದು. ಅದನ್ನು ಹಲಗೆದೇವ ನುಲಿಯಚಂದಯ್ಯನ ಪ್ರಸಂಗದ ಮೂಲಕ, ಗುಮ್ಮಳಾಪುರದ ಸಿದ್ಧಲಿಂಗ ಆಯ್ದಕ್ಕಿ ಮಾರಯ್ಯನ ಪ್ರಸಂಗದ ಮೂಲಕ, ಗೂಳೂರ ಸಿದ್ಧವೀರಣ್ಣೊಡೆಯ ಮೋಳಿಗೆ ಮಾರಯ್ಯನ ಸಂಪಾದನೆ ಸೇರಿಸುವ ಮೂಲಕ ಸಾಕಾರಗೊಳಿಸಿದ್ದಾರೆ. ಇದರಿಂದ ಅಲ್ಲಮ ಪ್ರಭುವಿನ ಅನುಭಾವ ಕೇಂದ್ರಿತವಾಗಿದ್ದ ಶೂನ್ಯಸಂಪಾದನೆಗೆ ಬಸವಣ್ಣನ ಸಾಮಾಜಿಕದೃಷ್ಟಿ ಕೇಂದ್ರಿತ ಹೊಸ ಆಯಾಮವನ್ನು ಜೋಡಿಸುವ ಉದ್ದೇಶವೂ ಇದ್ದಿತೆಂಬುದು ವೇದ್ಯವಾಗುತ್ತದೆ.

ಒಟ್ಟು ಈ ನಾಲ್ಕೂ ಶೂನ್ಯಸಂಪಾದನೆಗಳ ಸ್ವರೂಪವನ್ನು ಸೂತ್ರ ರೂಪದಲ್ಲಿ ಹೀಗೆ ಗುರುತಿಸಬಹುದು:

* ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆ:

ಕಾಲ–೧೪೧೬–೧೪೪೬; ವಚನ ಸಂಖ್ಯೆ–೧೦೧೯; ಹಾಡುಗಳು (ಸ್ವರವಚನ)–೧೧; ವಚನಕಾರರು–೧೬; ಅಧ್ಯಾಯ ವಿಭಜನೆ ಇಲ್ಲ. ಆರಂಭದಲ್ಲಿ ಕೆಲವು ಸ್ಥಲಗಳಿವೆ.

* ಹಲಗೆದೇವನ ಶೂನ್ಯಸಂಪಾದನೆ:

ಕಾಲ–೧೫೩೦–೧೫೮೫, ವಚನ ಸಂಖ್ಯೆ–೧೪೨೫ : ಹಾಡುಗಳು (ಸ್ವರವಚನ)–೩೫; ವಚನಕಾರರು–೩೭; ಅಧ್ಯಾಯಗಳ ವಿಭಜನೆ ಇಲ್ಲ. ಅಲ್ಲಲ್ಲಿ ಸ್ಥಲಗಳಿವೆ.

* ಗುಮ್ಮಳಾಪುರದ ಸಿದ್ಧಲಿಂಗನ ಶೂನ್ಯಸಂಪಾದನೆ:

ಕಾಲ–೧೫೮೦: ವಚನ ಸಂಖ್ಯೆ–೧೩೩೭: ಹಾಡುಗಳು (ಸ್ವರವಚನ)–೧೮: ವಚನಕಾರರು–೩೯; ಅಧ್ಯಾಯಗಳ ವಿಭಜನೆ ಇಲ್ಲ.

* ಗೂಳೂರ ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆ:

ಕಾಲ–೧೬೧೬; ವಚನ ಸಂಖ್ಯೆ–೧೪೩೦; ಹಾಡುಗಳು (ಸ್ವರವಚನ)–೨೧: ವಚನಕಾರರು–೩೩: ಕೃತಿ ೨೧ ವಿಭಾಗಗಳಲ್ಲಿ ವಿಭಜನೆಗೊಂಡಿದೆ. ಅವುಗಳಿಗೆ ಉಪದೇಶವೆಂದು ಕರೆಯಲಾಗಿದೆ.ಸಂಪಾದನೆಗಳೆಂದೂ ಹೆಸರಿಸಲಾಗಿದೆ.

* ನಾಲ್ಕೂ ಸಂಪಾದನೆಗಳು ಸೇರಿ ಸಂಗ್ರಹವಾದ ಒಟ್ಟು ವಚನಗಳು–೨೦೩೧: ಹಾಡುಗಳು–೪೨, ವಚನಕಾರರು–೪೯ ಜನ.

ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆ :

ಕಾಲಕಾಲಕ್ಕೆ ಪರಿಷ್ಕೃತಗೊಳ್ಳುತ್ತ ಬಂದ "ಶೂನ್ಯಸಂಪಾದನೆ"ಗಳ ಸರಣಿಯಲ್ಲಿ ಗೂಳೂರು ಸಿದ್ಧವೀರಣ್ಣೊಡೆಯನದು ನಾಲ್ಕನೆಯದು ಹಾಗೂ ಕೊನೆಯದು. ಆದರೆ ಪ್ರಸಿದ್ಧಿ ಹಾಗೂ ಜನಪ್ರಿಯತೆಯ ದೃಷ್ಟಿಯಿಂದ ಮೊದಲನೆಯದು. ಇದಕ್ಕೆ, ಎಲ್ಲಕ್ಕಿಂತ ಮೊದಲು ಪ್ರಕಟವಾದದ್ದು ಒಂದು ಕಾರಣವಾದರೆ ಹೆಚ್ಚು ವ್ಯವಸ್ಥಿತವಾಗಿರುವುದು ಮತ್ತೊಂದು ಕಾರಣ. ೧೯೩೦ ರಲ್ಲಿ ಇದನ್ನು ಪ್ರಥಮ ಬಾರಿಗೆ ಬೆಳಕಿಗೆ ತಂದ ಫ.ಗು. ಹಳಕಟ್ಟಿಯವರು ಇದರ ಮಹತ್ವವನ್ನು ಕುರಿತು ಹೀಗೆ ಬರೆದಿದ್ದಾರೆ :

* ಗೂಳೂರು ಸಿದ್ಧವೀರಣಾಚಾರ್ಯನು ಈ ಶೂನ್ಯಸಂಪಾದನೆಯನ್ನು ರಚಿಸಿದ್ದು ಸುಂದರವಾದ ವೀರಶೈವ ಧರ್ಮ ಮಂದಿರಕ್ಕೆ ಒಂದು ಪ್ರಕಾಶಮಾನವಾದ ಕಲಶವನ್ನು ಇಟ್ಟಂತೆ ಆಗಿರುತ್ತದೆ. ಈ ಗ್ರಂಥವು ವೀರಶೈವ ವಚನ ವಾಙ್ಮಯದಲ್ಲಿ ಬಹಳ ಉನ್ನತ ಸ್ಥಾನವನ್ನು ಹೊಂದಿರುತ್ತದೆ.

* ಶೂನ್ಯ ಸಂಪಾದನೆ ಎಂದರೆ ವೀರಶೈವ ಧರ್ಮತತ್ತ್ವಗಳನ್ನು ಬೋಧಿಸುವ ಒಂದು ಸುಂದರವಾದ ಗ್ರಂಥವು

* ಶೂನ್ಯಸಂಪಾದನೆಯನ್ನು ರಚಿಸಿದ ಪದ್ಧತಿಯು ಹೊಸ ಮಾದರಿಯದಾಗಿದೆ. ಈ ಪದ್ಧತಿಯನ್ನು ಅವನ ಹಿಂದೆ ಯಾರೂ ಅನುಸರಿಸಿದಂತೆ ತೋರುವುದಿಲ್ಲ.

* ಈ ಗ್ರಂಥದ ರೀತಿಯನ್ನು ನಾವು ಗ್ರೀಸ್ ದೇಶದಲ್ಲಿ ಆಗಿಹೋದ ಸಾಕ್ರೆಟಿಸ್, ಪ್ಲೇಟೋ ಇವರ ವಿವೇಚನಾ ಪದ್ಧತಿಗೆ ಹೋಲಿಸಬಹುದು. ಸಿದ್ಧವೀರಣಾಚಾರ್ಯನನ್ನು ನಾವು ಕರ್ನಾಟಕದ ಪ್ಲೇಟೋ ಎಂದು ಕರೆಯಬಹುದು. (ಪ್ರಸ್ತಾವನೆ, ಪು. ೩-೪)

೧೯೫೮ರಲ್ಲಿ ಪ್ರೊ. ಸಂ. ಶಿ. ಭೂಸನೂರಮಠರು ಇದನ್ನೇ ಮತ್ತೊಮ್ಮೆ ಶಾಸ್ತ್ರೀಯವಾಗಿ ಪರಿಷ್ಕರಿಸಿ ಪ್ರಕಟಿಸಿದರು. ೧೯೬೫, ೧೯೮೬, ೧೯೯೯ರಲ್ಲಿ ಇದರ ಮರುಮುದ್ರಣಗಳು ಹೊರಬಂದವು. ಈ ಕೃತಿಯನ್ನೇ ಆಧರಿಸಿ ಭೂಸನೂರಮಠರು ೧೯೬೯ ರಲ್ಲಿ "ಶೂನ್ಯಸಂಪಾದನೆಯ ಪರಾಮರ್ಶೆ" ಎಂಬ ಬೃಹತ್ ವ್ಯಾಖ್ಯಾನ ಗ್ರಂಥವನ್ನು ರಚಿಸಿದರು. ಜ.ಚ.ನಿ. ಅವರಿಂದ "ಸಂಪಾದನೆಯ ಸೊಂಪು" ಗ್ರಂಥದ ನಾಲ್ಕು ಸಂಪುಟಗಳು ಹೊರಬಂದವು (೧೯೭೭-೭೯). ಜೋಳದ ರಾಶಿ ದೊಡ್ಡನಗೌಡರ "ಬಯಲ ಗಳಿಕೆಯ ಬೆಳಕು" ಎಂಬ ವ್ಯಾಖ್ಯಾನ ಗ್ರಂಥವು ಇದೇ ಕೃತಿಯನ್ನು ಆಧರಿಸಿದೆ (೧೯೮೫).[೧೫] ಮಠ-ಮಾನ್ಯಗಳಲ್ಲಿ ಪ್ರವಚನ ಗ್ರಂಥವಾಗಿ, ವಿಶ್ವವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿ ಇದು ಬಳಕೆಗೊಂಡಿತು. ಇದರ ಇಂಗ್ಲಿಷ್ ಅನುವಾದವನ್ನು ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿತು (೧೯೬೫-೭೨). ವಿದ್ವಾಂಸರಿಂದ ಕೆಲವು ಗ್ರಂಥಗಳು ಅನೇಕ ಬಿಡಿ ಲೇಖನಗಳು ಹುಟ್ಟಿಕೊಂಡವು.

ಹೀಗೆ ದೊರೆತ ಹಲವು ರೀತಿಯ ಪ್ರಚಾರದಿಂದಾಗಿ, "ಶೂನ್ಯಸಂಪಾದನೆ" ಎಂದರೆ ಗೂಳೂರು ಸಿದ್ಧವೀರಣ್ಣನ "ಶೂನ್ಯಸಂಪಾದನೆ"ಯೇ ಎನ್ನುವಷ್ಟರ ಮಟ್ಟಿಗೆ ಇದು ಜನಮನದಲ್ಲಿ ಬೇರೂರಿತು. ಮೊದಲ ಸಂಪಾದನೆ ಎನಿಸಿದ ಶಿವಗಣಪ್ರಸಾದಿ ಮಹಾದೇವಯ್ಯನ "ಶೂನ್ಯಸಂಪಾದನೆ" ಡಾ. ಎಲ್. ಬಸವರಾಜು ಅವರಿಂದ ಸಂಪಾದನೆಗೊಂಡು ಮೊದಲು ಪ್ರಕಟವಾದದ್ದು ೧೯೬೧ ರಲ್ಲಿ. ಇದೇ ಗ್ರಂಥ ಆರ್. ಸಿ. ಹಿರೇಮಠರಿಂದ ಮತ್ತೊಮ್ಮೆ ಪರಿಷ್ಕರಣಗೊಂಡಿತು. ಮೂರನೆಯದಾದ ಗುಮ್ಮಳಾಪುರದ ಸಿದ್ಧಲಿಂಗನ "ಶೂನ್ಯಸಂಪಾದನೆ" ಆರ್.ಸಿ. ಹಿರೇಮಠರ ಸಂಪಾದಕತ್ವದಲ್ಲಿ ೧೯೭೨ ರಲ್ಲಿ ಪ್ರಕಟವಾಯಿತು. ಎರಡನೆಯದೆನಿಸಿದ ಹಲಗೆದೇವನ ಸಂಪಾದನೆ ಎಲ್ಲಕ್ಕೂ ಕೊನೆಗೆ, ೧೯೯೮ ರಲ್ಲಿ ಪ್ರಥಮವಾಗಿ ಡಾ. ಎಸ್. ವಿದ್ಯಾಶಂಕರ ಮತ್ತು ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ ಅವರಿಂದ ಬೆಳಕಿಗೆ ಬಂತು. ಹೀಗಿದ್ದೂ, ಇಂದಿಗೂ ಹೆಚ್ಚು ಪ್ರಚಾರದಲ್ಲಿದ್ದು, ತನ್ನ ಅಚ್ಚಳಿಯದ ಜನಪ್ರಿಯತೆಯನ್ನು ಹಚ್ಚಹಸಿರಾಗಿ ಉಳಿಸಿಕೊಂಡಿರುವುದು ಗೂಳೂರು ಸಿದ್ಧವೀರಣ್ಣೊಡೆಯನ "ಶೂನ್ಯಸಂಪಾದನೆ"ಯೇ ಎಂಬುದು ಅಚ್ಚರಿಯ ಸಂಗತಿ.

ಕರ್ತೃ :

ಗೂಳೂರು ಸಿದ್ಧವೀರ ತನ್ನನ್ನು 'ಗೂಳೂರು ಸಿದ್ಧವೀರಾಚಾರ್ಯ' (ಕಂದ-೩), 'ಗೂಳೂರ ಸಿದ್ಧವೀರೇಶ್ವರ' (ಆದಿಗದ್ಯ), 'ಗೂಳೂರ ಸಿದ್ಧವೀರಣ್ಣೊಡೆಯ'(ಅಂತ್ಯ ಗದ್ಯ), 'ಗೂಳೂರ

೧೫. ಇದನ್ನೇ ಆಧರಿಸಿ ಕಟ್ಟಿಗೆಹಳ್ಳಿ ಸ್ವಿದ್ಧಿಲಿಂಗ "ಸಂಪಾದನೆಯ ವಚನದ ಸಾರಾಮೃತ" ಎಂಬ ಕೃತಿಯನ್ನು ರಚಿಸಿದ್ದಾನೆ. ಇದು ಗದುಗಿನ ತೋಂಟದಾರ್ಯಮಠದಿಂದ ೧೯೮೮ರಲ್ಲಿ ಪ್ರಕಟವಾಗಿದೆ.

ಸಿದ್ಧವೀರಯತೀಶ' (ಅಂತ್ಯವೃತ್ತ-೧), 'ಸಿದ್ಧವೀರಯತಿ' (ಅಂತ್ಯವೃತ್ತ-೨), 'ಸಿದ್ಧವೀರಯೋಗೀಶ್ವರ' (ಅಂತ್ಯ ಕಂದ)-ಎಂದು ಮುಂತಾಗಿ ಕರೆದುಕೊಂಡಿದ್ದಾನೆ. ಈ ನಾಮವಿಶೇಷಗಳಿಂದ ಆತ ಆಚಾರ್ಯನಾಗಿದ್ದ, ಯತಿ-ಶಿವಯೋಗಿ-ಒಡೆಯ ಎನಿಸಿದ್ದ ಎಂದು ತಿಳಿದುಬರುತ್ತದೆ. ಆತ 'ಮಹಾನುಭಾವಿ' (ಆದಿಗದ್ಯ), 'ದಿವ್ಯ ಜ್ಞಾನಾನುಭಾವಿ' (ಅಂತ್ಯಗದ್ಯ) ಎಂದೂ ತನ್ನನ್ನು ಬಾಯಿಬಿಟ್ಟು ವರ್ಣಿಸಿಕೊಂಡಿದ್ದೂ ಉಂಟು. ಇದಕ್ಕೆ ಅವನ ಕೃತಿಯಲ್ಲಿ ಹೆಜ್ಜೆಹೆಜ್ಜೆಗೂ ನಿದರ್ಶನಗಳು ಎದುರಾಗುತ್ತವೆ.

ಈತನ ಹೆಸರಿನ ಹಿಂದೆ ಸೇರಿದ 'ಗೂಳೂರು' ಸಿದ್ಧವೀರಣ್ಣನ ಸ್ಥಳನಾಮ. ಇದು ತುಮಕೂರಿನ ಹತ್ತಿರದಲ್ಲಿದೆ. ಇಂದು ಒಂದು ಚಿಕ್ಕ ಗ್ರಾಮವಾಗಿರುವ ಇದು, ಹಿಂದೆ ವೀರಶೈವ ಧಾರ್ಮಿಕ-ಸಾಹಿತ್ಯಿಕ-ಸಾಂಸ್ಕೃತಿಕ ಕೇಂದ್ರವಾಗಿ ಪ್ರಸಿದ್ಧಿ ಪಡೆದಿತ್ತು.

ಗೂಳೂರು ಸಿದ್ಧವೀರಣ್ಣೊಡೆಯ ತೋಂಟದ ಸಿದ್ಧಲಿಂಗರ ಪ್ರಶಿಷ್ಯ.[೧೬] ಬೋಳಬಸವ ಈತನ ದೀಕ್ಷಾಗುರು.[೧೭] ನಮಃಶಿವಾಯದೇವರು ಶಿಕ್ಷಾಗುರು (ಬೋಧಾಗುರು).[೧೮] ಗೂಳೂರಿನ ಉಪ್ಪಲಿಗೆ ಮಠದ ಶಾಂತದೇವರ ಶಿಷ್ಯನಾಗಿಯೂ[೧೯] ಈತ ಗುರುತಿಸಿಕೊಂಡಿದ್ದಾನೆ. ಮೂರನೆಯ ಸಂಪಾದನೆಕಾರ ಗುಮ್ಮಳಾಪುರದ ಸಿದ್ಧಲಿಂಗನೂ ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆಗೆ ಸೇರಿದವನು. ಇವನ ತರುವಾಯ ಶೂನ್ಯಪೀಠವನ್ನು ಗೂಳೂರು ಸಿದ್ಧವೀರಣ್ಣೊಡೆಯ ಅಲಂಕರಿಸಿದಂತೆ ಸೋಮಶೇಖರ ಶಿವಯೋಗಿ ಹೇಳುವ ಗುರು-ಶಿಷ್ಯ ಪರಂಪರೆಯಿಂದ ತಿಳಿದುಬರುತ್ತದೆ.[೨೦] (ತೋಂಟದ ಸಿದ್ಧಲಿಂಗ-ಬೋಳಬಸವ-ಗುಮ್ಮಳಾಪುರದ ಸಿದ್ಧಲಿಂಗ-ಗೂಳೂರು ಸಿದ್ಧವೀರಯ್ಯ-ಗಗನದಯ್ಯ-ಕಟ್ಟಿಗೆಹಳ್ಳಿ ಸಿದ್ಧಲಿಂಗ-ಮುರಿಗೆ ಗುರುಸಿದ್ಧೇಶ್ವರ-ಸೋಮಶೇಖರ ಶಿವಯೋಗಿ ಇದು ಆತ ಕೊಡುವ ಗುರುಶಿಷ್ಯ ಪರಂಪರೆ).

ಗೂಳೂರು ಸಿದ್ಧವೀರಣ್ಣೊಡೆಯ ಉನ್ನತ ಗುರುಪರಂಪರೆ ಹೊಂದಿದಂತೆ, ಉತ್ತಮ ಶಿಷ್ಯರನ್ನೂ ಪಡೆದಿದ್ದಾನೆ. ಕವಿಗಳಾದ ವಿರಕ್ತ ತೋಂಟದಾರ್ಯ, ಎಳಂದೂರು ಹರೀಶ್ವರ ಈತನ ಶಿಷ್ಯರಲ್ಲಿ ಗಮನಾರ್ಹರು. ಈತನ ಪ್ರೇರಣೆಯಿಂದ ತಾವು ಕಾವ್ಯ ರಚಿಸುವುದಾಗಿ ಹೇಳಿಕೊಂಡಿದ್ದಾರೆ.

ಸಿದ್ಧನಂಜೇಶ ತನ್ನ 'ರಾಘವಾಂಕ ಚಾರಿತ್ರ' ದಲ್ಲಿ ಈತನನ್ನು

'ಸುರ ಮನು ಮುನಿ ಪ್ರಮಥ ಸಂಕುಳಕೆ ವರ ಕುಜದ
ವರ ಮೂಲದಲ್ಲಿ ಕುಳಿತು ಸಕಲ ವೇದಾಗಮೋ
ತ್ಕರ ರಹಸ್ಯಂಗಳಂ ಬೋಧಿಸುವ ದಕ್ಷಿಣಾಮೂರ್ತಿಯಂದದಿ ಧರೆಯೊಳ್
ಪರತರ ವೀರಮಾಹೇಶ್ವರಾವಳಿಗೆ

೧೬-೧೭. ಶೂನ್ಯಸಂಪಾದನೆ ಆದಿ-ಅಂತ್ಯದ ಗದ್ಯ, ವೃತ್ತ, ಕಂದಗಳಲ್ಲಿ ಇವರನ್ನು ಸ್ತುತಿಸಿದ್ದಾರೆ.

೧೮. ಶೂನ್ಯಸಂಪಾದನೆಯ ಅಂತ್ಯ ಗದ್ಯದಲ್ಲಿ ಈ ಹೆಸರು ಉಲ್ಲೇಖವಾಗಿದೆ(ನೋಡಿ. ಅ.ಟಿ)

೧೯. ಬೀಳಗಿಯ ೨ನೆಯ ಘಟೇಂದ್ರನ ಮಗ ತಮ್ಮರಸ ಒಡೆಯನ ಕಾಲದ ತಾಮ್ರಶಾಸನದಲ್ಲಿ (೧೬೬೮)ಇದು ಉಲ್ಲೇಖವಾಗಿದೆ.

೨೦. ತೋಂಟದ ಸಿದ್ಧಲಿಂಗ ಶಿವಯೋಗಿಯ ಷಟ್‌ಸ್ಥಲಜ್ಞಾನಸಾರಾಮೃತ ಟೀಕೆ

ಗುರುಬಸವ ಪುರಾತನರೊರೆದ ವಚನಗಳ
ಹರುಷದಿಂದ ಬೋಧಿಸುವ ಗೂಳೂರ ಸಿದ್ಧವೀರೇಶ್ವರಾಚಾರ್ಯ ಸಲಹು"
(ಮಾಳವಾಡ, ೧೯೫೪: ೧೮-೯೨) ಎಂದು ಸ್ತುತಿಸಿದ್ದಾನೆ.

ಗೂಳೂರು ಸಿದ್ಧವೀರಣ್ಣನ ಕಾಲದ ಬಗೆಗೆ ಭಿನ್ನಾಭಿಪ್ರಾಯಗಳಿವೆ. ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆಗೆ ಸೇರಿದವನಾದುದರಿಂದ ಈತನ ಕಾಲವನ್ನು ಸಿದ್ಧಲಿಂಗರ ಕಾಲದ (೧೪೭೦) ಹಿನ್ನೆಲೆಯಲ್ಲಿ ಈ ಮೊದಲು ೧೫೧೬ ಎಂದು ನಿರ್ಧರಿಸಲಾಗಿತ್ತು. ಆದರೆ ಈಚಿನ ಸಂಶೋದನೆಯಿಂದ ತೋಂಟದ ಸಿದ್ಧಲಿಂಗರ ಕಾಲ ನೂರು ವರ್ಷ ಮುಂದೆ ಹೋಗಿರುವುದರಿಂದ, ಗೂಳೂರು ಸಿದ್ಧವೀರಣ್ಣನ ಕಾಲವನ್ನೂ ಸಹಜವಾಗಿ ಮುಂದೆ ಸರಿಸಬೇಕಾಗುತ್ತದೆ. ಸದ್ಯ ಈತನ ಕಾಲ ೧೬೧೬ ಎಂದು ನಿರ್ಧರಿಸಲಾಗಿದೆ. ಗುಮ್ಮಳಾಪುರದ ಸಿದ್ಧಲಿಂಗ ಮತ್ತು ಗೂಳೂರ ಸಿದ್ಧವೀರಣ್ಣ ಹೆಚ್ಚು-ಕಡಿಮೆ ಸಮಕಾಲೀನರಾಗಿರಬೇಕು. ಗುಮ್ಮಳಾಪುರದ ಸಿದ್ಧಲಿಂಗನ ನಂತರ ಈತ ಶೂನ್ಯಪೀಠವೇರಿದನೆಂದು ತಿಳಿದುಬರುವುದರಿಂದ ೧೦-೧೫ ವರ್ಷಗಳ ಅಂತರದಲ್ಲಿ ಇಬ್ಬರೂ ಬಾಳಿರಬೇಕು.

ಕೃತಿ :

ಗೂಳೂರು ಸಿದ್ಧವೀರಣ್ಣನ 'ಶೂನ್ಯಸಂಪಾದನೆ'ಯು 'ಪ್ರಭುದೇವರ ಶೂನ್ಯಸಂಪಾದನೆ'[೨೧] ಎಂದು ಪ್ರಸಿದ್ಧವಾಗಿದೆ. ಇದನ್ನು ಬೋಳಬಸವೇಶ್ವರನ ಕೃಪೆಯಿಂದ ಹೇಳಿರುವುದಾಗಿ ತಿಳಿಸಿದ್ದಾನೆ (ಆದಿ ಕಂದ-೩). ಇದಕ್ಕೆ 'ಪರಮಾನುಭವ ಬೋಧೆ' (ಅದೇ ಕಂದ), 'ದಿವ್ಯಜ್ಞಾನಪ್ರಸಂಗ' (ಆದಿಗದ್ಯ), 'ದಿವ್ಯ ಜ್ಞಾನ ವಚನಾಮೃತ' (ಅಂತ್ಯಗದ್ಯ), 'ಶೂನ್ಯಸಂಬೋಧೆ' (ಅಂತ್ಯವೃತ್ತ-೨), 'ಶಿವಜ್ಞಾನಾರ್ಥಮಂ ಕೇಳಿ ಪೇಳ್ದ ಮಹಾತ್ಮೆ' (ಅಂತ್ಯ ವೃತ್ತ-೩) ಎಂದು ಮುಂತಾಗಿ ಕರೆದಿದ್ದಾನೆ. ಈ ಎಲ್ಲ ವಿಶೇಷಣಗಳು ಇಲ್ಲಿ ಅರ್ಥವಂತಿಕೆಯನ್ನು ಪಡೆದುಕೊಂಡಿವೆ. ಇದು, ಪ್ರಭುದೇವನ ಹಾಗೆಯೇ, ಎಲ್ಲ ಶರಣರ ಬದುಕನ್ನು ಬಣ್ಣಿಸುವ ಒಂದು ಮಹಾತ್ಮೆ, ಅವರ ಅನುಭವದ ಅಭಿವ್ಯಕ್ತಿಗಳಾದ ವಚನಗಳಿಂದ ಹೆಣೆದ ಸಂಭಾಷಣಾ ರೂಪದ ದಿವ್ಯಜ್ಞಾನ ಪ್ರಸಂಗ.[೨೨] ಲಿಂಗಾಂಗ ಸಾಮರಸ್ಯ ಅಥವಾ ಶೂನ್ಯ ತತ್ವವನ್ನು ಬೋಧಿಸುವ 'ಪರಮಾನುಭಾವ ಬೋಧೆ' ಎನಿಸಿದೆ.

ಗೂಳೂರ ಸಿದ್ಧವೀರಣ್ಣನ 'ಶೂನ್ಯಸಂಪಾದನೆ' ೨೧ ಅಧ್ಯಾಯಗಳಲ್ಲಿ ವಿಭಜನೆಗೊಂಡಿದೆ. ಅಧ್ಯಾಯಗಳನ್ನು 'ಉಪದೇಶ' ಎಂದು ಕರೆಯಲಾಗಿದೆ. ಇವುಗಳಲ್ಲಿ ೧೬ ಉಪಸಂಪಾದನೆಗಳಿದ್ದರೆ, ೫ ಭಿನ್ನ ಪ್ರಸಂಗಗಳು ಇವೆ. ಅವುಗಳ ವಿವರ ಅನುಕ್ರಮವಾಗಿ ಹೀಗಿದೆ: ಪ್ರಥಮೋಪದೇಶ, ಮುಕ್ತಾಯಕ್ಕಗಳ ಸಂಪಾದನೆ, ಸಿದ್ಧರಾಮಯ್ಯಗಳ ಸಂಪಾದನೆ, ಬಸವೇಶ ಚೆನ್ನಬಸವೇಶಂಗನುಗ್ರಹ

---

೨೧. ಪ್ರಭುದೇವರ ಕೃತಿಯ ಕೇಂದ್ರ ವ್ಯಕ್ತಿಯಾಗಿರುವುದರಿಂದ ಹೀಗೆ ಕರೆಯಲು ಕಾಣವಾಗಿದ.

೨೨. 'ಪ್ರಸಂಗ' ಎಂದರೆ ಸಂಭಾಷಣೆಯಿಂದ ಕೂಡಿದ ರೂಪಕ ಎಂಬ ಅರ್ಥವಿರುವುದನ್ನು 'ಯಕ್ಷಗಾನಪ್ರಸಂಗ' ಎಂಬುದರಲ್ಲಿ ಕಾಣುತ್ತೇವೆ. 'ಪ್ರಸಂಗ' ಎನ್ನುವುದಕ್ಕೆ ಕಥೆ-ಘಟನೆ ಎನ್ನುವ ಅರ್ಥವೂ ಇದೆ. ಪ್ರಸಂಗಿಸು=ಚರ್ಚಿಸು. ಇಲ್ಲಿ ಅನುಭಾವದ ಚರ್ಚೆ ಎಂಬ ಅರ್ಥದಲ್ಲಿ ಗೂಳೂರ ಸಿದ್ಧ ವೀರಣ್ಣ ಈ ಪದ ಬಳಸಿದ್ದಾನೆ.

ಮಾಡಿದ ಸಂಪಾದನೆ, ಪ್ರಭು ಕಲ್ಯಾಣಕ್ಕೆ ಬಂದ ಸಂಪಾದನೆ, ಮರುಳಶಂಕರದೇವರ ಸಂಪಾದನೆ, ಬಸವೇಶ್ವರನ ಸಂಪಾದನೆ, ಚೆನ್ನಬಸವೇಶ್ವರನ ಸಂಪಾದನೆ, ಮಡಿವಾಳಯ್ಯಗಳ ಸಂಪಾದನೆ, ಸಿದ್ಧರಾಮೇಶ್ವರನ ಗುರುಕರುಣ, ಪ್ರಭುದೇವರ ಪೂಜಾಸ್ತುತಿ, ಆಯ್ದಕ್ಕಿ ಮಾರಯ್ಯಗಳ ಸಂಪಾದನೆ, ಮೋಳಿಗೆ ಮಾರಯ್ಯಗಳ ಸಂಪಾದನೆ, ನುಲಿಯ ಚಂದಯ್ಯಗಳ ಸಂಪಾದನೆ, ಘಟ್ಟಿವಾಳಯ್ಯಗಳ ಸಂಪಾದನೆ, ಮಹಾದೇವಿಯಕ್ಕಗಳ ಸಂಪಾದನೆ, ಪ್ರಭು ಪರ್ಯಟಣ ಸಂಪಾದನೆ, ಪ್ರಭುದೇವರು ಶೂನ್ಯಸಿಂಹಾಸನವೇರಿದ ಸಂಪಾದನೆ, ಪ್ರಭುದೇವರ ಆರೋಗಣೆ, ಶರಣರ ಅವಸಾನ ಪರಾಮರಿಕೆ, ಗೋರಕ್ಷನ ಸಂಪಾದನೆ ಮತ್ತು ಎಲ್ಲಾ ಗಣಂಗಳ ಐಕ್ಯ.

'ಪ್ರಥಮೋಪದೇಶ' ಪೀಠಿಕಾ ರೂಪದಂತಿದೆ. ಆರಂಭದ ಮೂರು ಕಂದಗಳಲ್ಲಿ ತೋಂಟದ ಸಿದ್ಧಲಿಂಗ, ಬೋಳಬಸವೇಶ್ವರರ ಸ್ತುತಿ ಹಾಗೂ ತಾನು ಈ ಕೃತಿಯನ್ನು ಗುರು ಬೋಳಬಸವೇಶ್ವರನ ಕೃಪೆಯಿಂದ ಬರೆದೆನೆಂಬ ಹೇಳಿಕೆಗಳಿವೆ. ಮುಂದಿನ ಗದ್ಯದಲ್ಲಿ "ನಿತ್ಯ ನಿರ್ಮಲ ನಿರಂಜನನೆನಿಪ ಅಲ್ಲಮಪ್ರಭುದೇವರು ಸಮಸ್ತ ಮಹಾಗಣಂಗಳಿಗೆ ದಿವ್ಯಜ್ಞಾನ ಪ್ರಸಂಗ"ವನ್ನು ಬೋಧಿಸಿದ ಕ್ರಮವನ್ನು ಅಖಿಳ ಪುರಾತನರ ವಚನಗಳಿಂದ ಸಂಗ್ರಹಿಸಿದುದಾಗಿ ತಿಳಿಸುತ್ತಾನೆ. ಮುಂದೆ ನಿಃಕಲಲಿಂಗದಿಂದ ಅನಂತಕೋಟಿ ಬ್ರಹ್ಮಾಂಡ, ಅಣುಕೋಟಿ ಆತ್ಮರುಗಳ ಉತ್ಪತ್ತಿಯಾಗಿ, ಅವು ಬಂಧಮೋಕ್ಷಕ್ಕೆ ಸಿಲುಕಲು, ಪರಶಿವ ಲಿಂಗವೇ ಗುರು-ಲಿಂಗ-ಜಂಗಮವಾಗಿ ಬಂದು ಜೀವಾತ್ಮರನ್ನು ಉದ್ಧರಿಸಿದ ರೀತಿಯನ್ನು ತಿಳಿಸಲಾಗಿದೆ. ಇಲ್ಲಿ ಬಸವ-ಚೆನ್ನಬಸವ-ಅಲ್ಲಮರೇ ಗುರು-ಲಿಂಗ-ಜಂಗಮವಾಗಿ ಮರ್ತ್ಯದಲ್ಲಿ ಅವತರಿಸಿ ಜಗತ್ತನ್ನು ಉದ್ಧರಿಸಿದರು ಎಂದು ಹೇಳಿ, ಬೇರೆ ಬೇರೆ ಯುಗದಲ್ಲಿ ಅವರು ತಾಳಿದ ರೂಪವನ್ನು ತಿಳಿಸುತ್ತಾನೆ. ಈ ಹಿಂದಿನ ಮೊದಲೆರಡು 'ಶೂನ್ಯಸಂಪಾದನೆ'ಗಳಲ್ಲಿ (ಶಿವಗಣಪ್ರಸಾದಿ ಮತ್ತು ಹಲಗೆಯಾರ್ಯ) ಹೇಳಿದ 'ಶರಣರು ಶಾಪದಿಂದ ಮರ್ತ್ಯಕ್ಕೆ ಬಂದರು' ಎಂಬ ಅಭಿಪ್ರಾಯವನ್ನು ಈತ ತೀವ್ರವಾಗಿ ಅಲ್ಲಗಳೆದು, ಹಾಗೆ ನುಡಿಯುವವರಿಗೆ 'ನಾಯಕ ನರಕ ತಪ್ಪದು' ಎನ್ನುತ್ತ, ಅವರು ಮರ್ತ್ಯಕ್ಕೆ ಬಂದದ್ದು ಜಗಹಿತಾರ್ಥವಾಗಿ ಎಂದು ಪ್ರತಿಪಾದಿಸುತ್ತಾನೆ. (ಗುಮ್ಮಳಾಪುರದ ಸಿದ್ಧಲಿಂಗನದೂ ಇದೆ ಅಭಿಪ್ರಾಯವಾಗಿದೆ).

ಅನಂತರ 'ಪ್ರಭುದೇವರ ಗದ್ಯ' ಎಂಬ ಭಾಗದಲ್ಲಿ ಪ್ರಭುದೇವರು ಬಸವಾದಿ "ಅಸಂಖ್ಯಾತ ಮಹಾಗಣಂಗಳೊಡನೆ ಮಹಾನುಭವ ಪ್ರಸಂಗಮಂ ಮಾಡಿದ ಶೂನ್ಯ ಸಂಪಾದನೆಯೊಳ್ ಸದ್ಗೋಷ್ಠಿ ಕಥಾಪ್ರಸಂಗವನ್ನು ಮುಕ್ತಕವಾಗಿದ್ದ ಶಿವಾದ್ವೈತ ವಚನಗಳನ್ನು ಉತ್ತರ-ಪ್ರತ್ಯುತ್ತರ ಸಂಬಂಧವಾಗಿ ಸೇರಿಸಿ, ಶಿವಗಣಪ್ರಸಾದಿ ಮಹಾದೇವಯ್ಯಗಳು ಮರ್ತ್ಯಲೋಕದ ಮಹಾಗಣಂಗಳಿಗೆ ಆ ಮಹಾನುಭಾವ ಪ್ರಸಂಗಮಂ ಸಮರ್ಪಿಸಿದಲ್ಲಿ ಸಿದ್ಧರಾಮೇಶ್ವರದೇವರಿಗೆ ಉಪದೇಶಕ್ರಮವಿಲ್ಲ ದಿರ್ದೊಡೆ, ಗುಮ್ಮಳಾಪುರದ ಸಿದ್ಧಲಿಂಗದೇವರು ಸಮಸ್ತ ಪುರಾತನರ ವಚನಸನ್ಮತದಿಂದ ಸಂಗ್ರಹಿಸಲು ಆ ಕ್ರಮವಿಡಿದು ಈ ಶೂನ್ಯಸಂಪಾದನೆಯ ಸೇರಿಸಿ ಶಿವಗಣಂಗಳಿಗೆ ಸಮರ್ಪಿಸಿದೆನು" ಎಂದು ತಿಳಿಸಲಾಗಿದೆ.

ಮುಂದೆ ವಚನಗಳ ಮೂಲಕ ಪ್ರಭುದೇವರು ನಿರೂಪಿಸಿದ ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ, ಜೀವಭಾವಭ್ರಾಂತಿ ನಿರಸನಸ್ಥಲ, ಮಾಯಾವಿಲಾಸ ವಿಡಂಬನಸ್ಥಲ, ಗುರುಕರುಣಸ್ಥಲ, ಗುರುದರ್ಶನ, ಜ್ಞಾನ ಲಿಂಗೋಪದೇಶ, ಇಷ್ಟ-ಪ್ರಾಣ-ಭಾವಲಿಂಗಗಳ ಸ್ವರೂಪ,

ಭಕ್ತಾದಿ ಐಕ್ಯಾಂತ ಷಟ್‌ಸ್ಥಲಗಳು ಮತ್ತು ಜಂಗಮಸ್ಥಲದ ನಿಲುಗಡೆಯನ್ನು ತಿಳಿಸಲಾಗಿದೆ. ಈ ಜಂಗಮಸ್ಥಲವನಿಂಬುಗೊಂಡ ಪ್ರಭುದೇವರು ಸಕಲ ಪುರಾತನ ಗಣಂಗಳ ಕೃತಾರ್ಥರ ಮಾಡಲೋಸುಗ ಮರ್ತ್ಯದಲ್ಲಿ ಸುಳಿದಾಡಿದ ರೀತಿಯನ್ನು ಮುಂದಿನ ಸಂಪಾದನೆಗಳಲ್ಲಿ ನಿರೂಪಿಸಲಾಗಿದೆ. ಪ್ರಥಮೋಪದೇಶದಲ್ಲಿ ಕಾಣಿಸಿಕೊಂಡ ಗೊಗ್ಗಯ್ಯನ ಪ್ರಸಂಗದಿಂದಲೇ ಪ್ರಭುವಿನ ಉಪದೇಶ ಆರಂಭವಾಗುತ್ತದೆ. ಮುಂದೆ ಮುಕ್ತಾಯಕ್ಕ, ಸಿದ್ಧರಾಮ, ಬಸವಣ್ಣ, ಚನ್ನಬಸವಣ್ಣ, ಮಡಿವಾಳ ಮಾಚಯ್ಯ, ಮಹಾದೇವಿಯಕ್ಕ, ಗೋರಕ್ಷ ಮೊದಲಾದ ಶರಣ-ಶರಣೆಯರಿಗೆ ಅರಿವಿನ ಕಣ್ಣು ತೆರೆಸುತ್ತ ಸಾಗುತ್ತಾನೆ. ಕೃತಿ ನಿಃಕಲಲಿಂಗದ ಮೂಲಕ ಪಿಂಡಬ್ರಹ್ಮಾಂಡ ಸೃಷ್ಟಿಯಾಗುವುದರಿಂದ ಆರಂಭವಾಗಿ, ಆ ಪಿಂಡಾಂಡ ತನ್ನ ಸಾಧನೆಯ ಮೂಲಕ ಮತ್ತೆ ನಿಃಕಲಲಿಂಗದಲ್ಲಿ ಒಂದಾಗುವಲ್ಲಿಗೆ- ಅಂದರೆ ಶೂನ್ಯವನ್ನು ಸಂಪಾದಿಸುವಲ್ಲಿಗೆ -ಮುಕ್ತಾಯಗೊಳ್ಳುತ್ತದೆ. ಹೀಗಾಗಿ ಇದು ಜೀವಾತ್ಮದ ಆದಿ-ಅಂತ್ಯಗಳ ನಡುವಿನ ಜೀವನಯಾತ್ರೆಯನ್ನು ತಿಳಿಸುವ ಒಂದು ವಿಶಿಷ್ಟ ಕೃತಿಯಾಗಿ ತೋರುತ್ತದೆ.

'ಸಮಾಪ್ತಿ ವಾಕ್ಯ' ಎಂಬ ಅಂತಿಮ ಗದ್ಯ ಹಾಗೂ ೩ ವೃತ್ತ ೧ ಕಂದಗಳಲ್ಲಿ ಈ ಕೃತಿಯ ವೈಶಿಷ್ಟ್ಯ, ರಚನೆಗೆ ಕಾರಣ-ಪ್ರೇರಣೆ, ಕೃತಿಕರ್ತನ ವಿನಯ ಹಾಗೂ ಗುರುಸ್ತುತಿಗಳಿವೆ. ಕೃತಿಯ ವೈಶಿಷ್ಟ್ಯವನ್ನು ಕೆಳಗಿನಂತೆ ವರ್ಣಿಸಲಾಗಿದೆ:

"ಇದು ಪರಮಗುರು ಪರಮ ವೀರಶೈವ ಸಿದ್ಧಾಂತ ತತ್ತ್ವಜ್ಞಾನ; ಇದು ವೀರಶೈವಾಚಾರ ಪ್ರತಿಷ್ಠಾಪನಾಚಾರ್ಯ; ಇದು ದಿವ್ಯ ವೇದಾಂತ ಶಿರೋಮಣಿ; ಇದು ಸಮಸ್ತ ಶಾಸ್ತ್ರ ಮುಖ್ಯ ಮುಖದರ್ಪಣ; ಇದು ಮಹಾಜ್ಞಾನ ಪ್ರವರ್ಧನ ಪರಮಾನುಭಾವ ಸಂಬೋಧೆ; ಇದು ಸರ್ವಾಚಾರ ಸಂಪನ್ನ ಸಮಾರೂಢ ಸಂಗ್ರಹ; ಇದು ಪರಮ ರಾಜಯೋಗ ಸಾಧ್ಯ ಸಂಪಾದನ."

ಕೃತಿಯ ಪ್ರತಿ ಅಧ್ಯಾಯದ ಆರಂಭದಲ್ಲಿ ಒಂದೊಂದು ಕಂದಪದ್ಯವಿದ್ದು, ಅದರಲ್ಲಿ ಆ ಭಾಗದ ಪ್ರಸಂಗದ ಸಾರಸಂಗ್ರಹ ಕೊಡಲಾಗಿದೆ. ಈ ಕೃತಿಯಲ್ಲಿ ಒಟ್ಟು ೩೩ ಜನ ವಚನಕಾರರ ೧೪೩೦ ವಚನಗಳು ಹಾಗೂ ೨೧ ಹಾಡು (ಸ್ವರವಚನ)ಗಳು ಅಳವಟ್ಟಿವೆ.[೨೩] ಇದು ಈ ಕೃತಿಯ ಬಾಹ್ಯ ಸ್ವರೂಪ.

ತೌಲನಿಕ ನೋಟ :

ಇನ್ನು ಈ ಕೃತಿಯ ಪರಿಷ್ಕರಣಕ್ಕೆ ಕಾರಣ-ಪ್ರೇರಣೆ ಏನು, ಈ ಹಿಂದಿನ ಪರಿಷ್ಕರಣಗಳಿಂದ ಇದು ಏನನ್ನು ಉಳಿಸಿಕೊಂಡಿದೆ. ಏನನ್ನು ಬಿಟ್ಟಿದೆ, ಹೆಚ್ಚಿನದೇನನ್ನು ಸೇರಿಸಿಕೊಂಡಿದೆ. ಆ ಮೂಲಕ ಒಟ್ಟು ವೈಶಿಷ್ಟ್ಯಗಳೇನನ್ನು ತೋರುತ್ತದೆ ಎಂಬುದನ್ನು ಮುಂದೆ ನೋಡಬಹುದು.

---

೨೩. ವಿವರಗಳಿಗೆ ನೋಡಿ ಅನುಬಂಧ-೧

"ಶೂನ್ಯಸಂಪಾದನೆ"ಯ ಮೂಲಶಿಲ್ಪಿ ಶಿವಗಣಪ್ರಸಾದಿ ಮಹಾದೇವಯ್ಯ. ಈತನ ಕೃತಿಯನ್ನು ೮೬ ವರ್ಷಗಳ ಕಾಲಾವಧಿಯಲ್ಲಿ ಮೂರು ಜನ ಅನುಭಾವಿಗಳು ಮರುಪರಿಷ್ಕರಣಕ್ಕೆ ಒಳಪಡಿಸಿದ್ದಾರೆ. ಮಹಾದೇವಯ್ಯ ತನ್ನ ಕೃತಿಯ ಅಂತ್ಯದಲ್ಲಿ ಹೇಳಿದ "ಇಲ್ಲಿ ವಚನಕ್ರಮ ಸೇರುವೆ ತಪ್ಪುಳ್ಳಡೆ ನಿಮ್ಮ ಪರಮಜ್ಞಾನದಿಂ ತಿದ್ದಿ ಈ ವಚನಾನುಭಾವ ಪ್ರಸಂಗಮಂ ಮಾಡಿ ಸುಖಿಸುವುದು" ಎಂಬ ಮಾತು ಈ ಪರಿಷ್ಕರಣಗಳಿಗೆ ಮುಖ್ಯ ಪ್ರೇರಣೆಯಾಗಿ ನಿಂತಂತೆ ತೋರುತ್ತದೆ. ಇದರ ಜೊತೆಗೆ ಪರಿಷ್ಕರಣಕಾರರೇ ಹೇಳಿಕೊಂಡಂತೆ-ಅದರಲ್ಲಿ ಸಿದ್ಧರಾಮಯ್ಯನ ದೀಕ್ಷಾಪ್ರಸಂಗ[೨೪]ಇಲ್ಲದೇ ಹೋದದ್ದು ಮತ್ತೊಂದು ಮುಖ್ಯ ಕಾರಣ. ಇವುಗಳ ಜೊತೆಗೆ ಇನ್ನೂ ಕೆಲವು ಪೂರಕ ಕಾರಣಗಳೂ ಇರುವುದು ಒಂದೊಂದು ಪ್ರಕರಣವನ್ನೂ ಕೂಲಂಕಷವಾಗಿ ಪರಿಶೀಲಿಸಿದಾಗ ಅರಿತಕ್ಕೆ ಬರುತ್ತದೆ.

ಹಲಗೆದೇವನ ಪರಿಷ್ಕರಣದ ಮೂಲ ಉದ್ದೇಶ–ವೀರಶೈವ ತತ್ತ್ವಗಳನ್ನು ತನ್ನ ಕೃತಿಯಲ್ಲಿ ಗಾಢವಾಗಿ ತುಂಬಬೇಕೆಂಬುದಾಗಿದೆ. ಅದಕ್ಕಾಗಿ ಸಿದ್ಧರಾಮ ಮತ್ತು ಪ್ರಭುದೇವರಿಗೆ ದೀಕ್ಷೆ ಮಾಡಿಸುತ್ತಾನೆ. ಈ ಸಂದರ್ಭದಲ್ಲಿ ಷಟ್‌ಸ್ಥಲ ತತ್ವಬೋಧೆ, ಮಂತ್ರಗೋಪ್ಯಗಳನ್ನು ವಿವರಿಸುತ್ತಾನೆ. ಮುಂದೆ ಬೇರೆ ಬೇರೆ ಪ್ರಸಂಗಗಳಲ್ಲಿ ೨೧ ಪ್ರಕಾರಗಳ ದೀಕ್ಷೆಗಳ ವಿವರ, ಷಟ್‌ಸ್ಥಲ, ೩೬ ಸ್ಥಲ, ೧೦೧ ಸ್ಥಲ, ಮಿಶ್ರಾರ್ಪಣ, ಪಂಚಾಚಾರಕ್ರಮ, ಸಹಜದೀಕ್ಷೆ, ಪ್ರಸಾದ ಮಹಿಮೆ, ಕರ್ಮ ಸಂಪಾದನೆ, ಜ್ಞಾನ ಸಂಪಾದನೆ–ಮೊದಲಾದ ತಾತ್ವಿಕ ವಿಷಯಗಳನ್ನು ವಿವರವಾಗಿ ಕೊಡುತ್ತಾನೆ. ಶರಣರ ಬಹು ಮುಖ್ಯ ಕೊಡುಗೆ ಎನಿಸಿದ 'ಕಾಯಕ' ತತ್ವವನ್ನು ಪ್ರತಿಪಾದಿಸುವ ನುಲಿಯ ಚಂದಯ್ಯನ ಪ್ರಸಂಗವನ್ನು ಮೊದಲ ಬಾರಿಗೆ ಸೇರಿಸುತ್ತಾನೆ.[೨೫] ಮಹಾದೇವಯ್ಯನಲ್ಲಿ ಆಶಯ ಮಾತ್ರವಾಗಿದ್ದ ಕಿನ್ನರಿ ಬ್ರಹ್ಮಯ್ಯನ ಪ್ರಸಂಗವನ್ನು ವ್ಯಕ್ತವಾಗಿ ರೂಪಿಸುತ್ತಾನೆ. ಅಲ್ಲಮ, ಬಸವ, ಚೆನ್ನಬಸವ, ಸಿದ್ಧರಾಮ ಮೊದಲಾದ ಶರಣರ ಪೂರ್ವವೃತ್ತಾಂತವನ್ನು ವಿಸ್ತಾರವಾಗಿ ಕಲ್ಪಿಸಿ ಕಟ್ಟಿಕೊಡುತ್ತಾನೆ. ಅನೇಕ ನೂತನ ವಚನಗಳನ್ನು ಸೇರಿಸುತ್ತಾನೆ. ಹೀಗಾಗಿ ಕೃತಿಯ ಗಾತ್ರ ಹಿಗ್ಗುತ್ತದೆ. ಆದರೆ ಅದರ ಅಚ್ಚುಕಟ್ಟುತನಕ್ಕೆ ಭಂಗ ಬರುತ್ತದೆ. ಈತ ಕಟ್ಟಿದ ಅನೇಕ ಶರಣರ ಪೂರ್ವವೃತ್ತಾಂತ ಕಥೆಗಳು ಅವರ ವ್ಯಕ್ತಿತ್ವಕ್ಕೆ ಚ್ಯುತಿಯುಂಟು ಮಾಡುವಂತಿವೆ. ಹೀಗಾಗಿ ಈ ಪರಿಷ್ಕರಣ ಹೆಚ್ಚು ಪ್ರಚಾರ ಪಡೆಯಲಿಲ್ಲ. ಇಂದು ಇದರ ಕೇವಲ ಒಂದೇ ಒಂದು ಹಸ್ತಪ್ರತಿ ದೊರಕುತ್ತಿರುವುದು ಇದರ ಉಪೇಕ್ಷೆಗೆ ನಿದರ್ಶನವೆನಿಸಿದೆ.

ಎರಡನೆಯ ಪರಿಷ್ಕರಣಕಾರ ಗುಮ್ಮಳಾಪುರದ ಸಿದ್ಧಲಿಂಗನು ಹಲಗೆದೇವನ (ಕೆಂಚವೀರಣ್ಣೊಡೆಯನದೆಂದು ಸಿದ್ಧಲಿಂಗ ಕರೆದಿದ್ದಾನೆ. ಹಲಗೆದೇವ ಈತನ ಗುರು) ಪರಿಷ್ಕರಣವನ್ನು ನೋಡಿದ್ದಾನೆ. ಅಲ್ಲದೆ, ಅದರಲ್ಲಿನ ನುಲಿಯ ಚಂದಯ್ಯನ ಸಂಪಾದನೆಯನ್ನು ಯಥಾವತ್ತಾಗಿ ತೆಗೆದುಕೊಂಡಿದ್ದಾನೆ. ಆದರೆ ಉಳಿದ ವಿಷಯದಲ್ಲಿ ಶಿವಗಣಪ್ರಸಾದಿಯನ್ನೇ ಅನುಸರಿಸಿ ಹೆಚ್ಚಿನ ಸಂಗತಿಗಳನ್ನು ಸೇರಿಸಲು, ಕೆಲವನ್ನು ತನ್ನ ಆಶಯಕ್ಕೆ ಅನುಗುಣವಾಗಿ ತಿದ್ದಿಕೊಳ್ಳಲು ಪ್ರಯತ್ನಿಸಿದ್ದಾನೆ. ಈತನಲ್ಲಿ ಕಾಣುವ ನೂತನ ಅಂಶಗಳೆಂದರೆ ಒಂದು: ಹಿಂದಿನ ಇಬ್ಬರು ಸಂಪಾದಕರು ಅಲ್ಲಮಾದಿ

---

೨೪. ಇದಕ್ಕೆ ಕಲ್ಲುಮಠದ ಪ್ರಭುದೇವನ 'ಲಿಂಗಲೀಲಾವಿಲಾಸಚಾರಿತ್ರ'ದಲ್ಲಿ ಬರುವ ಗುರುಕರುಣಸ್ಥಲ ಬಹುಶಃ ಪ್ರೇರಣೆ ನೀಡಿದಂತಿದೆ.

೨೫. ಇಲ್ಲಿ ವಿಶೇಷವಾಗಿ ನಡೆಯುವುದು ಲಿಂಗತತ್ವದ ಚರ್ಚೆಯೇ ಎಂಬುದನ್ನು ಗಮನಿಸಬಹುದು.

ಪರಿಣರು ಶಾಪಕಾರಣವಾಗಿ ಮರ್ತ್ಯಕ್ಕೆ ಬಂದರು ಎಂದು ಹೇಳಿದುದನ್ನು ತೀವ್ರವಾಗಿ ಅಲ್ಲಗಳೆದು, ಅವರು ಜಗಹಿತಾರ್ಥವಾಗಿ ಬಂದರು ಎಂದು ಸ್ಥಾಪಿಸಿದ್ದು (ಇದಕ್ಕೆ ಪ್ರೇರಣೆ ಚಾಮರಸನ 'ಪ್ರಭುಲಿಂಗಲೀಲೆ'ಯಿಂದ ಬಂದಿರಬೇಕು); ಎರಡು: ಆಯ್ದಕ್ಕಿ ಮಾರಯ್ಯನ ಪ್ರಸಂಗವನ್ನು ಹೊಸದಾಗಿ ಸೇರಿಸಿದ್ದು; ಮೂರು: ಅಕ್ಕಮಹಾದೇವಿಯನ್ನು ಪರೀಕ್ಷಿಸುವ ಕಿನ್ನರಯ್ಯನ ಪ್ರಸಂಗವನ್ನು ತೆಗೆದು ಹಾಕಿದ್ದು; ನಾಲ್ಕು:ಗೋರಕ್ಷನ ಪ್ರಸಂಗವನ್ನು ಹೊಸದಾಗಿ ಅಳವಡಿಸಿಕೊಂಡದ್ದು; ಐದು: ಶಿವಗಣಪ್ರಸಾದಿ–ಹಲಗೆದೇವರಲ್ಲಿ ಇಲ್ಲದ ಬಿಜ್ಜಳನ ಕೊಲೆಗೆ ಬಸವಣ್ಣ ಸೂಚನೆ ಕೊಟ್ಟನೆಂಬ ಸಂಗತಿಯನ್ನು ಕಲ್ಪಿಸಿದ್ದು.

ಮೂರನೆಯ ಪರಿಷ್ಕರಣಕಾರನಾದ ಗೂಳೂರ ಸಿದ್ಧವೀರಣ್ಣನ ಕಣ್ಣ ಮುಂದೆ ಶಿವಗಣಪ್ರಸಾದಿ, ಹಲಗೆದೇವ, ಗುಮ್ಮಳಾಪುರದ ಸಿದ್ಧಲಿಂಗ–ಈ ಮೂವರ ಸಂಪಾದನೆಗಳಿವೆ. (ಆದರೆ ಹಲಗೆದೇವನ ಪ್ರಸ್ತಾಪ ಈತನ ಕೃತಿಯಲ್ಲಿ ಕಾಣಿಸುವುದಿಲ್ಲ) ಒಂದೊಂದು ಸಂಪಾದನೆಯಲ್ಲಿ ತೋರುವ ಗುಣ–ದೋಷಗಳನ್ನೆಲ್ಲ ಆತ ಲೆಕ್ಕಹಾಕಿದ್ದಾನೆ. ಆತನೆದುರು ನೂತನವಾಗಿ ದೊರೆತ ಅಪಾರ ವಚನರಾಶಿ ಇದೆ. ಅದನ್ನು ಬಳಸಿಕೊಂಡು, ಹಿಂದಿನ ಮೂವರಿಗಿಂತಲೂ ವಿಶಿಷ್ಟವಾದ ಮತ್ತು ವ್ಯವಸ್ಥಿತವಾದ ಮತ್ತೊಂದು ಸಂಪಾದನೆಯನ್ನು ರಚಿಸಬೇಕೆಂದು ಮುಂದಾಗುತ್ತಾನೆ. ಹಿಂದಿನ ಸಂಪಾದನೆಗಳಲ್ಲಿದ್ದ ಅಭಾಸ–ಅತಿರೇಕಗಳನ್ನು ಕತ್ತರಿಸಿ, ಹೊಸದಾದ ವಸ್ತು–ಸಂಗತಿಗಳನ್ನು ಸೇರಿಸಿ, ನೂತನ ರೂಪ–ವಿನ್ಯಾಸದಿಂದ ಕೂಡಿದ, ಬಹುಜನಮಾನ್ಯವಾದ ಕೃತಿಯನ್ನು ರೂಪಿಸಿ ಕೊಡುತ್ತಾನೆ. ಹಾಗೆಯೇ "ಶೂನ್ಯಸಂಪಾದನೆ"ಯ ಪರಿಷ್ಕರಣ ಪರಂಪರೆಗೆ ಪೂರ್ಣ ವಿರಾಮ ಹಾಕುತ್ತಾನೆ.

ಗೂಳೂರು ಸಿದ್ಧವೀರಣ್ಣನ ಕಣ್ಣಮುಂದೆ ಮೂರು ಸಂಪಾದನೆಗಳಿದ್ದರೂ, ಆತ ನೇರವಾಗಿ ಪರಿಷ್ಕರಿಸಲು ಎತ್ತಿಕೊಂಡದ್ದು ತನ್ನ ಗುರುವಾದ ಗುಮ್ಮಳಾಪುರದ ಸಿದ್ಧಲಿಂಗನ ಕೃತಿಯನ್ನು. ಪ್ರಭು–ಸಿದ್ಧರಾಮರ ಭೆಟ್ಟಿಯ ಸಂದರ್ಭವನ್ನು ೧೧೯ ವಚನಗಳಿಂದ ೧೪೦ ವಚನಗಳಿಗೆ ವಿಸ್ತರಿಸಿದ್ದಾನೆ. ಆತನಲ್ಲಿ ೬ ಪುಟದಷ್ಟು ವಿಸ್ತಾರವಾಗಿ ಬಂದ ಬಸವೇಶ್ವರನ ಅವತಾರದ ಕಥೆಯನ್ನು ಈತ ೬ ಸಾಲುಗಳಿಗೆ ಇಳಿಸಿದ್ದಾನೆ. ಬಸವಣ್ಣನ ವ್ಯಕ್ತಿತ್ವಕ್ಕೆ ಕುಂದು ಉಂಟುಮಾಡುವಂತಿದ್ದ ಪ್ರಭುವನ್ನು ಕರೆತರಲು ಪರಿಚಾರಕರನ್ನು ಕಳಿಸುವ ಪ್ರಸಂಗವನ್ನು ತೆಗೆದುಹಾಕಿ, ಹಡಪದ ಅಪ್ಪಣ್ಣನನ್ನು ಕಳಿಸುವಂತೆ ಮಾಡಿದ್ದಾನೆ. ಸಿದ್ಧರಾಮೇಶ್ವರನ ಗುರುಕರುಣ ಪ್ರಸಂಗ ಗುಮ್ಮಳಾಪುರದ ಸಿದ್ಧಲಿಂಗನ ಸಂಪಾದನೆಯಲ್ಲಿ ತುಂಬ ವಿಸ್ತಾರವಾಗಿ ಬೆಳೆದಿದೆ. ೨೫೫ ವಚನ ಹಾಗೂ ಉದ್ದುದ್ದ ಗದ್ಯ ಖಂಡಗಳಿಂದ ಕೂಡಿದ ಇದನ್ನು ಗೂಳೂರ ಸಿದ್ಧವೀರಣ್ಣ ಮುರಿದು ೧೦೫ ವಚನಗಳಿಗೆ ಇಳಿಸಿದ್ದಾನೆ. ಅಲ್ಲಿದ್ದ 'ಯೋಗಿನಾಥ' ಅಂಕಿತದ ೧೨೦ ವಚನಗಳಲ್ಲಿ ಒಂದನ್ನು ಮಾತ್ರ ಉಳಿಸಿಕೊಂಡು, ಉಳಿದುವನ್ನು ಕೈಬಿಟ್ಟಿದ್ದಾನೆ. 'ಕಪಿಲ ಸಿದ್ಧಮಲ್ಲಿಕಾರ್ಜುನ' ಅಂಕಿತದ ೬೭ ವಚನಗಳಲ್ಲಿ ೫೦ ನ್ನು ಇಟ್ಟುಕೊಂಡಿದ್ದಾನೆ. ಮಡಿವಾಳಯ್ಯ, ಮರುಳಶಂಕರದೇವರ ಸಂಪಾದನೆಗಳನ್ನು ಹಿಂದೆ–ಮುಂದೆ ಮಾಡಿ ಜೋಡಿಸಿದ್ದಾನೆ. ಅಲ್ಲಲ್ಲಿ ಚಲ್ಲವರಿದಿದ್ದ ಪ್ರಭುದೇವರ ಪೂಜಾಸ್ತುತಿಗೆ ಸಂಬಂಧಿಸಿದ ವಚನಗಳನ್ನು ಒಂದೆಡೆ ಸಂಗ್ರಹಿಸಿ ಕೊಟ್ಟಿದ್ದಾನೆ. ಬಸವಣ್ಣ ಎಲ್ಲ ಗಣಂಗಳ ಕೈಯಿಂದ ಬೀಳ್ಕೊಂಡು, ಕೂಡಲಸಂಗಮದತ್ತ ಹೊರಡುವ ಪ್ರಸಂಗದಲ್ಲಿ ವಿಸ್ತಾರವಾಗಿ ಗದ್ಯದಲ್ಲಿ ಮಾಡಿದ ವರ್ಣನೆಯನ್ನು ಸಂಕ್ಷೇಪಗೊಳಿಸಿದ್ದಾನೆ.

ಇನ್ನು, ಗುಮ್ಮಳಾಪುರದ ಸಿದ್ಧಲಿಂಗನಲ್ಲಿ ಇಲ್ಲದ, ಹಾಗೆಯೇ ಉಳಿದಿಬ್ಬರು ಸಂಪಾದನೆಕಾರರಲ್ಲೂ ಕಾಣಸಿಗದ, ಗೂಳೂರು ಸಿದ್ಧವೀರಣ್ಣನ ಸಂಪಾದನೆಯಲ್ಲಿರುವ ನೂತನ ಸಂಗತಿಗಳನ್ನು ಹೀಗೆ ಗುರುತಿಸಬಹುದು:

೧. ಉಳಿದ ಸಂಪಾದಕರು ಅಖಂಡವಾಗಿ ನಿರೂಪಿಸಿದ ಕೃತಿಯನ್ನು ಈತ ಪ್ರಥಮ ಬಾರಿಗೆ ಅಧ್ಯಾಯಗಳಾಗಿ ('ಉಪದೇಶ' ಎಂದು ಕರೆದಿದ್ದಾನೆ) ಒಡೆದು ಈ ಮಹಾಗ್ರಂಥದ ಅಭ್ಯಾಸ ಮತ್ತು ಅನುಸಂಧಾನಗಳಿಗೆ ಅಲ್ಲಲ್ಲಿ ವಿರಾಮ–ವಿಶ್ರಾಂತಿಗಳಿಗೆ ಅನುಕೂಲತೆ ಒದಗಿಸಿಕೊಟ್ಟಿದ್ದು (ಅವು ನಾಟಕದ ಒಂದೊಂದು ದೃಶ್ಯದಂತೆ ತೋರುತ್ತವೆ).[೨೬]

೨. ಮಾಯಾವಿಲಾಸವನ್ನು ನಿವೃತ್ತಿ ಮಾಡಿ, ಗುರುದರ್ಶನಕ್ಕೆ ಸಾಗಿದ ಪ್ರಭುದೇವ ಮಾರ್ಗಮಧ್ಯದಲ್ಲಿ ಲೌಕಿಕ ಕೃಷಿಯಲ್ಲಿ ತೊಡಗಿದ್ದ ಗೊಗ್ಗಯ್ಯನಿಗೆ ಪಾರಮಾರ್ಥಿಕ ಕೃಷಿಯಲ್ಲಿ ತೊಡಗುವಂತೆ ಮಾಡಿದ ಸನ್ನಿವೇಶವನ್ನು ಸೃಷ್ಟಿಸಿದ್ದು (ಇದಕ್ಕೆ ಪ್ರೇರಣೆ ಚಾಮರಸನ ಪ್ರಭುಲಿಂಗಲೀಲೆಯಿಂದ ದೊರೆತಿರಬೇಕು).

೩. ಕಾಯಕದ ಮಹತ್ವವನ್ನು ಸಾರುವ ಮೋಳಿಗೆ ಮಾರಯ್ಯನ ಸಂಪಾದನೆ, ಇಷ್ಟಲಿಂಗದ ಮಹತಿಯನ್ನು ಹೇಳುವ ಘಟ್ಟಿವಾಳಯ್ಯನ ಸಂಪಾದನೆಗಳನ್ನು ಹೊಸದಾಗಿ ಅಳವಡಿಸಿದ್ದು.

೪. ಬಸವಣ್ಣ ಕೂಡಲಸಂಗಮಕ್ಕೆ ಹೋಗಿ, ಕಲ್ಯಾಣದಲ್ಲಿಂಗೇ ಉಳಿದಿದ್ದ ಸತಿ ನೀಲಲೋಚನೆಯನ್ನು ಕರೆತರಲು ಹಡಪದಪ್ಪಣ್ಣನನ್ನು ಕಳಿಸಲು, ಆಕೆ "ಪರಿಣಾಮಮೂರ್ತಿ ಬಸವನ ರೂಪು ಎನ್ನ ಕರಸ್ಥಲದಲ್ಲಿ ಬೆಳಗಿದ ಬಳಿಕ ಸಂಗಯ್ಯನ ಹಂಗು ನಮಗೇತಕಯ್ಯಾ ಅಪ್ಪಣ್ಣ" ಎಂದು ಅಂಗೈಯ ಲಿಂಗದಲ್ಲಿ ಐಕ್ಯವಾದ ಪ್ರಸಂಗವನ್ನು ಆಕೆಯ "ನೋಡು ನೋಡು ನೋಡು ನೋಡು ನೋಡು ಲಿಂಗವೆ" ಎಂಬ ಹಾಡಿನೊಂದಿಗೆ ಪ್ರಥಮಬಾರಿಗೆ ಸೇರಿಸಿದ್ದು;

೫. ಶಿವಗಣಪ್ರಸಾದಿ ಹಾಗೂ ಹಲಗೆದೇವರಲ್ಲಿ ಕೇವಲ ಉಲ್ಲೇಖವಾಗಿ ಬಂದಿದ್ದ, ಗುಮ್ಮಳಾಪುರದ ಸಿದ್ಧಲಿಂಗನಲ್ಲಿ ೫ ವಚನಗಳಲ್ಲಿ ಸಂವಾದ ರೂಪವಾಗಿ ಕಾಣಿಸಿಕೊಂಡ ಗೋರಕ್ಷನ ಪ್ರಸಂಗವನ್ನು ಇನ್ನೂ ಕೆಲ ಮಟ್ಟಿಗೆ ವಿಸ್ತರಿಸಿ, ಅವನ ವಜ್ರಕಾಯದ ಭ್ರಮೆಯನ್ನು ಬಿಡಿಸಿ, ಲಿಂಗಾಂಗ ಸಂಬಂಧವನ್ನು ಉಪದೇಶ ಮಾಡಿ ಉದ್ಧರಿಸಿದ್ದು;

೬. ತತ್ಪೂರ್ವದಲ್ಲಿ ಸಂಪಾದಕರು ತಮ್ಮ ತಮ್ಮ ಗ್ರಂಥಗಳಲ್ಲಿ ಮಾಡಿಕೊಂಡಿದ್ದ ಪ್ರಸಂಗ ಜೋಡಣೆ, ವಚನ ಜೋಡಣೆಯ ಕ್ರಮವನ್ನು ತನ್ನ ಕಲಾತ್ಮಕ ಜಾಣ್ಮೆಯಿಂದ, ಅನುಭಾವದ ಕಾಣ್ಕೆಯ ಹಿನ್ನೆಲೆಯಲ್ಲಿ ವಿಮರ್ಶಿಸಿ, ಪುನರ್ ಸಂಯೋಜನೆ ಮಾಡಿ ಪರಿಪೂರ್ಣ ರೂಪ ಕೊಡಲು ಪ್ರಯತ್ನಿಸಿ, ಅಧಿಕ ಯಶಸ್ಸು ಸಾಧಿಸಿದ್ದು ಗೂಳೂರು ಸಿದ್ಧವೀರಣ್ಣೊಡೆಯನ ಹೆಗ್ಗಳಿಕೆಯಾಗಿದೆ.

ಹೀಗೆಂದ ಮಾತ್ರಕ್ಕೆ ಈತನ ಕೃತಿಯಲ್ಲಿ ದೋಷಗಳೇ ಇಲ್ಲವೆಂದಲ್ಲ. ಒಂದು ಎದ್ದು ಕಾಣುವ ಸಂಗತಿಯೆಂದರೆ, ಮೊದಲ ಎರಡು ಸಂಪಾದನೆಗಳಲ್ಲಿ ಇಲ್ಲದ, ಗುಮ್ಮಳಾಪುರದ ಸಿದ್ಧಲಿಂಗನಲ್ಲಿ ಮಾತ್ರ ಕಾಣುವ, ಬಿಜ್ಜಳನ ಕೊಲೆಗೆ ಬಸವಣ್ಣ ಪ್ರೇರಣೆ ನೀಡಿದನು. ("ಆ ಬಸವರಾಜದೇವರು

೨೬. ಉಳಿಸ ಸಂಪಾದನೆಗಳು ನಾಟಕದಂತೆ ತೋರಿದರೆ, ಗೂಳೂರವರ ಸಂಪಾದನೆ ೨೧ ದೃಶ್ಯಗಳ ಪೂರ್ಣಾವಧಿ ನಾಟಕದಂತೆ ಕಂಡುಬರುತ್ತದೆ.

ಶಿವಭಕ್ತಿದ್ರೋಹಿ ಬಿಜ್ಜಳನ ಸಂಹರಿಸಿ ನನ್ನಿಯಂ ಮೆರೆ ಎಂದು ಜಗದೇವಗೆ ಬೆಸನಿತ್ತು...." ಪು. ೩೯೦) ಎಂದು ಸೇರಿಸಿದ್ದು. ಇದು ಬಸವಣ್ಣನ ವ್ಯಕ್ತಿತ್ವಕ್ಕೆ ಶೋಭೆ ತರುವಂಥ ಹೇಳಿಕೆಯಲ್ಲ. ಇದೊಂದು ಪ್ರಸಂಗ ಗೂಳೂರ ಸಿದ್ಧವೀರಣ್ಣನ ಸಂಪಾದನೆಗೆ ದೃಷ್ಟಿಬೊಟ್ಟಿನಂತೆ ತೋರುವ ಕಪ್ಪು ಚುಕ್ಕೆ ಎನಿಸಿದೆ.

ಸಿದ್ಧವೀರಣ್ಣ "ಶೂನ್ಯ ಸಂಪಾದನೆ"ಯ ಕಥನವನ್ನು ೨೧ ಭಾಗಗಳಾಗಿ ವಿಂಗಡಿಸಿದ್ದರೂ ಅವುಗಳಲ್ಲಿ ಇನ್ನೂ ಕ್ರಮಬದ್ಧತೆಯ ಕೊರತೆ ಕಾಣುತ್ತದೆ. ಒಂದೊಂದು ಭಾಗದ ಗಾತ್ರವೂ ಸಮತೂಕವಾಗಿಲ್ಲ. ಪ್ರಥಮೋಪದೇಶ, ಸಿದ್ಧರಾಮನ ಗುರುಕರುಣ, ಪ್ರಭುದೇವ ಪೂಜಾಸ್ತುತಿ, ಪ್ರಭುದೇವರ ಆರೋಗಣೆ, ಶರಣರ ಅವಸಾನ ಪರಾಮರಿಕೆ, ಎಲ್ಲ ಗಣಂಗಳ ಐಕ್ಯ-ಇವು ಸಂಪಾದನೆಗಳಲ್ಲ, ಸಂಪಾದನೆಯ ಭಾಗಗಳೇ ಬೇರೆ, ಈ ಭಾಗಗಳೇ ಬೇರೆ ಎಂದು ಅರ್ಥವಾಗುವದುಂಟು. ಗ್ರಂಥದ ಶಿಲ್ಪದ ದೃಷ್ಟಿಯಿಂದ-ಗೋರಕ್ಷನ ಸಂಪಾದನೆ ಮತ್ತು ಶರಣರ ಐಕ್ಯ ಒಂದರೊಳಗೊಂದು ಸೇರಿಕೊಳ್ಳುತ್ತವೆ. ಸಿದ್ಧರಾಮನ ಸಂಪಾದನೆ ಎರಡು ಖಂಡಗಳಾಗಿ ವಿಂಗಡಣೆಗೊಳ್ಳುತ್ತದೆ. ಹೀಗಾಗಿ, ಸಿದ್ಧವೀರಣ್ಣನ ಕೃತಿಯಲ್ಲೂ ತಿದ್ದಬಹುದಾದ ಹಲವಾರು ಅಂಶಗಳು ಉಳಿದುಕೊಂಡಿವೆ. ಇದರಿಂದ ನಾಲ್ಕನೆಯ ಪರಿಷ್ಕರಣೆವೊಂದರ ಅಗತ್ಯ ಅಪೇಕ್ಷಣೀಯವೆನಿಸಿದೆ.

'ಶೂನ್ಯಸಂಪಾದನೆ' ಹೀಗೆ ಹಲವು-ಹತ್ತು ವಿಶೇಷತೆಯನ್ನು ತನ್ನಲ್ಲಿ ಹುದುಗಿಸಿಕೊಂಡಿದೆ. ಧರ್ಮ--ತತ್ವನಿಷ್ಠ ಆಸ್ತಿಕರಿಗೆ ಅದು ಒಂದು ಧಾರ್ಮಿಕ-ದಾರ್ಶನಿಕ-ಪಠ್ಯವಾಗಿ ತೋರಿದರೆ, ಸಾಹಿತಿ-ವಿದ್ವಾಂಸ ಸಹೃದಯರಿಗೆ ಅದೊಂದು ಸಾಹಿತ್ಯಿಕ-ಸಾಂಸ್ಕೃತಿಕ ಪಠ್ಯವಾಗಿ ಕಂಡಿದೆ. ಹೀಗಾಗಿ ಈ ಹಿನ್ನೆಲೆಯಲ್ಲಿ ಹಲವು ಅಧ್ಯಯನಗಳು ಇದುವರೆಗೆ ನಡೆದಿವೆ. ಇಷ್ಟಕ್ಕೆ ನಿಲ್ಲದೆ ಇನ್ನೂ ವಿಭಿನ್ನ ನೆಲೆಯ ಅನೇಕ ಮುಖ ಅಧ್ಯಯನಗಳಿಗೆ ಇದು ನಿರಂತರ ಆಹ್ವಾನಿಸುತ್ತಲೆ ಇದೆ. ಅದಕ್ಕೆ ಈ ನೂತನ ಪರಿಷ್ಕೃತ ಆವೃತ್ತಿ ಅಂಥ ಅಧ್ಯಯನಾಪೇಕ್ಷಿಗಳಿಗೆ ಉತ್ತಮ ಆಕರಗ್ರಂಥವೆನಿಸಲಿ ಎಂಬ ಆಶಯ ನಮ್ಮದಾಗಿದೆ.

* * *

ಶೂನ್ಯಸಂಪಾದನೆ : ರಾಚನಿಕ ವಿವೇಚನೆ

ಧಾರ್ಮಿಕ ಮಹಾಪುರುಷರಲ್ಲಿ ಎರಡು ಬಗೆಯ ವ್ಯಕ್ತಿಗಳುಂಟು. ಒಬ್ಬರು ಆಚಾರ್ಯರು, ಇನ್ನೊಬ್ಬರು ಪ್ರವಾದಿಗಳು.[೨೭] ಶಂಕರ-ಮಧ್ವರು ಆಚಾರ್ಯರಾದರೆ, ಏಸು-ಬುದ್ಧ-ಬಸವೇಶ್ವರ ಪ್ರವಾದಿಗಳು. ಆಚಾರ್ಯರು ಬುದ್ಧಿಪ್ರಧಾನ ವ್ಯಕ್ತಿಗಳು, ಪ್ರವಾದಿಗಳು ಹೃದಯಪ್ರಧಾನ ವ್ಯಕ್ತಿಗಳು. ಆಚಾರ್ಯರು ಶಿವ-ಜೀವಗಳ ಸಂಬಂಧದ ಕಡೆಗೆ ಒತ್ತು ಕೊಟ್ಟರೆ, ಪ್ರವಾದಿಗಳು ಜೀವ-ಜಗತ್ತು (ವ್ಯಕ್ತಿ-ಸಮಾಜ)ಗಳ ಕಡೆಗೆ ಹೆಚ್ಚು ಒತ್ತು ಕೊಡುತ್ತಾರೆ. ಹೀಗೆ ಸಮಾಜವ್ಯವಸ್ಥೆಯಲ್ಲಿ

---

೨೭. ಮೂರನೆಯವರು ಸಂತರು, ಇವರು ವ್ಯಕ್ತಿಗತ ಉದ್ಧಾರದಲ್ಲಿ ನಿರತರು, ಬಹಳೆಂದರೆ ಕೆಲವು ಅನುಯಾಯಿಗಳಿಂದಾಗಿ ಇವರ ಒಂದು ಪಂಥ ಬೆಳೆಯಬಹುದು.

ಕೈಹಾಕುವುದರಿಂದಲೇ ಕಂದಾಚಾರದ ಸಮಾಜ ಪ್ರವಾದಿಗಳನ್ನು ಚಿತ್ರಹಿಂಸೆಗೆ ಗುರಿಮಾಡುತ್ತದೆ. ಆಚಾರ್ಯರು ಆ ಗೋಜಿಗೇ ಹೋಗುವದಿಲ್ಲವಾದುದರಿಂದ ಜೀವಿತದ ಕಾಲಾವಧಿಯಲ್ಲಿ ಸಮಾಜದಿಂದ ಅವರು ದೊಡ್ಡ ಗೌರವ ಗಳಿಸುತ್ತಾರೆ, ಸತ್ತ ಮೇಲೆಯೂ ಅದನ್ನು ಉಳಿಸಿಕೊಳ್ಳುತ್ತಾರೆ. ಪ್ರವಾದಿಗಳು ಮಾತ್ರ ಬದುಕಿರುವಾಗ ನಿಂದೆಗೆ ಗುರಿಯಾಗಿ, ಸತ್ತ ಬಳಿಕ ಪೂಜ್ಯರಾಗುತ್ತಾರೆ.

ಆಚಾರ್ಯರು ತಾವು ಧರ್ಮಪ್ರವರ್ತಕರೆಂಬಂತೆ ತತ್ವಗಳಿಗೆ ಸಂವಿಧಾನಾತ್ಮಕ ಮುದ್ರೆ ಒತ್ತಿದರೆ, ಪ್ರವಾದಿಗಳು ತಾವು ಧರ್ಮಪ್ರಸಾರಕರೆಂಬಂತೆ ಹೃದಯದಿಂದ ಹೃದಯಕ್ಕೆ ಮುಟ್ಟುವ ಬಿಡಿಸೂಕ್ತಿಗಳನ್ನು ಹೇಳುತ್ತಾರೆ. ಏಸು, ಬುದ್ಧ, ಬಸವೇಶ್ವರ ಮೊದಲಾದವರ ಸೂಕ್ತಿಗಳು ಈ ಬಗೆಯವು. ಮುಂದೆ ಒಂದು ಕಾಲಕ್ಕೆ ಅಥವಾ ಕಾಲಕಾಲಕ್ಕೆ ವಿದ್ವಾಂಸರು ಬಂದು, ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ದುಡಿದು, ಈ ಬಿಡಿಸೂಕ್ತಿಗಳಿಗೆ ಗ್ರಂಥರೂಪ ಕೊಡುತ್ತಾರೆ. ಬೈಬಲ್, ಕುರಾನ್‌ಗಳು ಹೀಗೆ ಮುಂದೆಬಂದ ವಿದ್ವಾಂಸರಿಂದ ಕೃತಿರೂಪ ಪಡೆದ ಸರ್ವಮಾನ್ಯ ಧರ್ಮಗ್ರಂಥಗಳು. ಈ ರೀತಿ ಲಿಂಗಾಯತದಲ್ಲಿ ವಚನಗಳೆಂಬ ಬಿಡಿಸೂಕ್ತಿಗಳನ್ನು ಬಳಸಿಕೊಂಡು ಸರ್ವಮಾನ್ಯ ಧರ್ಮಗ್ರಂಥವನ್ನು ರಚಿಸುವ ದೊಡ್ಡ ಸಾಹಸ ನಡೆಯದೆ, ಕಲ್ಲುಮಠದ ಪ್ರಭುದೇವ. ಗುಬ್ಬಿಯ ಮಲ್ಲಣ್ಣ ಮೊದಲಾದವರಿಂದ ವೈಯಕ್ತಿಕ ಸಣ್ಣಪುಟ್ಟ ಪ್ರಯತ್ನಗಳು ಮಾತ್ರ ನಡೆದವು. ಇವುಗಳಲ್ಲಿ ತಕ್ಕಮಟ್ಟಿನ ದೊಡ್ಡಪ್ರಯತ್ನ ಅಥವಾ ಪ್ರಯತ್ನ ಪರಂಪರೆಯಾಗಿದೆ, ಶೂನ್ಯಸಂಪಾದನೆ.

ರಚನೆಯ ದೃಷ್ಟಿಯಿಂದ ಬೈಬಲ್ ಕಾಲಕಾಲಕ್ಕೆ ಹೊಸ ಬುಕ್‌ಗಳನ್ನು ಜೋಡಿಸಿಕೊಳುತ್ತ ಬಂದಂತೆ ಶೂನ್ಯಸಂಪಾದನೆಯೂ ಹೊಸ ಹೊಸ ಸಂಪಾದನೆಗಳನ್ನು ಜೋಡಿಸಿಕೊಳ್ಳುತ್ತ ಬಂದುದು, ಅವೆರಡರಲ್ಲಿಯ ಗಮನಾರ್ಹ ಹೋಲಿಕೆಯಾಗಿದೆ. ಆದರೆ ಅಪೂರ್ಣವೆನಿಸಿದರೂ ಬೈಬಲ್‌ನ್ನು ಪ್ರಮಾಣಗ್ರಂಥವೆಂದು ಕ್ರಿಶ್ಚಿಯನ್‌ರು ಸಾಮೂಹಿಕವಾಗಿ ಒಪ್ಪಿಕೊಂಡಂತೆ ಶೂನ್ಯಸಂಪಾದನೆಯನ್ನು ಲಿಂಗಾಯತರು ಒಪ್ಪಿಕೊಳ್ಳಲಿಲ್ಲ. ಪೂರ್ಣಗೊಳಿಸಿ ಇದನ್ನಾಗಲೀ, ಇನ್ನೊಂದನ್ನಾಗಲೀ ಒಪ್ಪಿಕೊಳ್ಳಬೇಕೆಂಬ ವಿಚಾರ ಅವರಿಗೆ ಹೊಳೆಯಲಿಲ್ಲವೇಕೊ ತಿಳಿಯದು.

ಲಿಂಗಾಯತ ಸೃಜನಸಾಹಿತ್ಯದಷ್ಟೇ ಮೌಲಿಕವಾಗಿದೆ, ಸಂಯೋಜನ ಸಾಹಿತ್ಯ. ಇದು ಸೃಷ್ಟಿಯಲ್ಲ, ವಚನಗಳೆಂಬ ಸೃಷ್ಟಿಯಿಂದ ರೂಪಗೊಂಡ ರಚನೆ. ಈ ರಚನೆಗಳಲ್ಲಿ ಸಂಗ್ರಹ, ಸಂಕಲನ, ಸಂಪಾದನ ಎಂದು ಮೂರು ಬಗೆಗಳನ್ನು ನಾವು ಗುರುತಿಸಬಹುದು.[೨೮] ಇವುಗಳಲ್ಲಿ ಶೂನ್ಯಸಂಪಾದನೆ 'ಸಂಪಾದನಸಾಹಿತ್ಯ' ವರ್ಗಕ್ಕೆ ಸೇರುತ್ತದೆ.

ರಚನೆಯ ದೃಷ್ಟಿಯಿಂದ 'ಸಂಪಾದನ ಸಾಹಿತ್ಯ'ದ ಲಕ್ಷಣಗಳು ಮೂರು: ೧. ಇದು ಅನ್ಯರ ವಚನಗಳ ಆಧಾರದಿಂದ ರೂಪಗೊಂಡಿರುತ್ತದೆ. ಇದು ಸಂವಾದ ಶೈಲಿಯಲ್ಲಿರುತ್ತದೆ. ೩. ಪ್ರಭುದೇವನು ಈ ಸಾಹಿತ್ಯದ ಕೇಂದ್ರ ಪಾತ್ರವಾಗಿರುತ್ತಾನೆ. ಈ ಮೂರೂ ಲಕ್ಷಣಗಳಿಗೆ ಪರಮಾವಧಿ ನಿದರ್ಶನ, ಶೂನ್ಯಸಂಪಾದನೆ.

---

೨೮. ವಚನಗಳ ಸಂಗ್ರಹ, ಸಂಕಲನ, ಸಂಪಾದನೆ, ವೀರಶೈವ ಸಮನ್ವಯ ೧-೧, ಪು.೨೪.

ಶೂನ್ಯಸಂಪಾದನೆಯ ರಚನಾಕಾರ್ಯಕ್ಕೆ ಮೊದಲು ಕೈಹಾಕಿದವ ಪ್ರಸಾದಿ ಮಹಾದೇವಯ್ಯ. ಬಹುಶಃ ಲಭ್ಯವಿಲ್ಲದಿರುವ ಕೆಂಚವೀರಣ್ಣನ ಸಂಪಾದನೆಯನ್ನು ಬಿಟ್ಟರೂ[೨೯] ಈಗ ನಮ್ಮ ಕೈಗೆ ಉಳಿದುಬಂದುವು ಮಹಾದೇವಯ್ಯ, ಹಲಗೆದೇವ, ಗುಮ್ಮಳಾಪುರ ಸಿದ್ಧಲಿಂಗ, ಗೂಳೂರು ಸಿದ್ಧವೀರಣ್ಣರ ಸಂಪಾದನೆಗಳು. ಈ ಆವೃತ್ತಿಗಳ ರಚನೆಯ ಚಟುವಟಿಕೆಗಳು ಯಾವುಯಾವುದೋ ಕಾಲದಲ್ಲಿ, ಯಾವುಯಾವುದೋ ಪ್ರದೇಶದಲ್ಲಿ ಒಂದಕ್ಕೊಂದು ಪರಿಚಯವಿಲ್ಲದಂತೆ ನಡೆದಿಲ್ಲ. ಹಲಗೆದೇವನ ಶಿಷ್ಯ ಕೆಂಚವೀರಣ್ಣ. ಇವರಿಬ್ಬರ ಸಂಪರ್ಕದಲ್ಲಿದ್ದವ ಗುಬ್ಬಿಯ ಮಲ್ಲಣ್ಣ, ಇವನ ಗುರು ತೋಂಟದ ಸಿದ್ಧಲಿಂಗ (೧೫೭೫), ಈತನ ಶಿಷ್ಯ ಗುಮ್ಮಳಾಪುರ ಸಿದ್ಧಲಿಂಗ, ಇವರ ಸಂಪರ್ಕದಲ್ಲಿದ್ದವ ಗೂಳೂರು ಸಿದ್ಧವೀರಣ್ಣ. ಬಹುಶಃ ಪ್ರಸಾದಿ ಮಹಾದೇವಯ್ಯನೂ ಗುಮ್ಮಳಾಪುರದವನಾಗಿರಬಹುದು ಅಥವಾ 'ಶಿವಗಣ' (ಶಿವಗೊಳ>ಶಿವಗೋಣ? ಶಿವಗಣ?) ಹೆಸರಿನ ಗ್ರಾಮದವನಾಗಿರಬಹುದು. ಈತನ ಕಾಲ ಸುಮಾರು ೧೪೧೬. ಈ ಎಲ್ಲ ಸಂಗತಿಗಳನ್ನು[೩೦] ನೆನೆದರೆ ಮೊದಲಿನ ಸಂಪಾದನೆ ಹುಟ್ಟಿ ೧೦೦ ವರ್ಷ ಗತಿಸಿದ ಬಳಿಕ, ೨೫ ವರ್ಷಗಳ ಅವಧಿಯಲ್ಲಿ ಮಿಕ್ಕ ಮೂರು ಸಂಪಾದನೆಗಳ ರಚನೆಯ ಕಾರ್ಯ ಮುಗಿದಿರಬಹುದೆನಿಸುತ್ತದೆ. ಗುಬ್ಬಿ, ಗೂಳೂರು, ಗುಮ್ಮಳಾಪುರ–ಹೀಗೆ ತೀರ ಸಮೀಪದ ಗ್ರಾಮಗಳಲ್ಲಿ ಈ ಕಾರ್ಯ ಕೈಗೂಡಿದೆ.[೩೧] ಬಹುಶಃ ಒಂದು ಸಂಸ್ಥೆಯ ಹಿರಿಯ ತಲೆಮಾರಿನ ವಿದ್ವಾಂಸರು ಪ್ರಕಟಿಸಿದ ಗ್ರಂಥಗಳನ್ನು ಅವರ ಸಂಪರ್ಕದಲ್ಲಿದ್ದ ಅದೇ ಸಂಸ್ಥೆಯ ಕಿರಿಯ ತಲೆಮಾರಿನ ವಿದ್ವಾಂಸರು ಪರಿಷ್ಕೃತ ಆವೃತ್ತಿಗಳನ್ನಾಗಿ ಬೆಳಕಿಗೆ ತರುವಂತೆ, ಒಂದು ಯೋಜನೆಯ ಮುಂದುವರಿಕೆಯ ಪ್ರಯತ್ನವೆಂಬಂತೆ ಈ ಕೆಲಸ ನಡೆದಿದೆಯೆಂದು ಸ್ಥೂಲವಾಗಿ ಹೇಳಬಹುದು.

ಈಗ ಲಭ್ಯವಿರುವ ನಾಲ್ಕು ಶೂನ್ಯಸಂಪಾದನೆಗಳಲ್ಲಿ ಮೊದಲಿನದು ಸಂಪಾದನೆ, ಆಮೇಲಿನವು ಆವೃತ್ತಿಗಳು, ಪರಿಷ್ಕೃತ ಆವೃತ್ತಿಗಳು. ಇಲ್ಲಿ ಮಹಾದೇವಯ್ಯ ಸಂಪಾದಕನಾಗಿ ವಚನಗಳನ್ನು (ಎಡಿಟ್ ಪರಿಷ್ಕರಣವಲ್ಲ) ಸಂಯೋಜನೆ ಮಾಡಿದರೆ, ಮಿಕ್ಕವರು ತರುವಾಯದ ದಿನಗಳಲ್ಲಿ ಮಹಾದೇವಯ್ಯನ ಕೃತಿಯನ್ನು ರೀ–ಎಡಿಟ್ ಮಾಡಿದರು. ಇದರಿಂದಾಗಿ ಮೂಲಕೃತಿಯ ಒಟ್ಟು ರೂಪಕ್ಕೆ ಭಂಗಬರದಂತೆ ಶೂನ್ಯಸಂಪಾದನೆಯ ರಚನೆಯಲ್ಲಿ ವ್ಯತ್ಯಾಸ ತಲೆದೋರಿದ್ದು, ವೀರಶೈವ ತತ್ವ, ಶರಣರ ಚರಿತ್ರೆ ಮತ್ತು ಸಂಪಾದನಕಾರರ ಅಭಿರುಚಿಗಳು ಈ ರಚನಾಕ್ರಿಯೆಯನ್ನು ನಿಯಂತ್ರಿಸಿವೆ.

ಪ್ರಸಂಗ ಸಾಹಿತ್ಯ:

ರಚನೆಯ ದೃಷ್ಟಿಯಿಂದ ಶೂನ್ಯಸಂಪಾದನೆ ಸ್ಥೂಲವಾಗಿ ಕಥಾಸಾಹಿತ್ಯಕ್ಕೆ ಸೇರುತ್ತದೆ. ಕಥಾಸಾಹಿತ್ಯದಲ್ಲಿ ಎರಡು ಮುಖ್ಯರೀತಿಗಳು ಹೀಗೆ ಕಂಡುಬರುತ್ತವೆ: ಪಾತ್ರಗಳೇ ಮಾತಿನ ಮೂಲಕ

---

೨೯. ಗುಮ್ಮಳಾಪುರ ಸಿದ್ಧಲಿಂಗನು ಕೆಂಚವೀರಣ್ಣನ ಶೂನ್ಯಸಂಪಾದನೆಯನ್ನು ಉಲ್ಲೇಖಿಸುತ್ತಾನೆ. ಹಲಗೆದೇವರ ಶೂನ್ಯಸಂಪಾದನೆಯ ಮಾತನ್ನೇ ಎತ್ತುವುದಿಲ್ಲ.

೩೦ ಶಾಸನಗಳಲ್ಲಿ ಶಿವಶರಣರು (ದ್ವಿ.ಆ.) ಪು.೧೪೩.

೩೧. ಗುಬ್ಬಿ, ಗೂಳೂರುಗಳು ತುಮಕೂರು ಜಿಲ್ಲೆಯ ತಾಲೂಕು ಸ್ಥಳಗಳು. ಗುಮ್ಮಳಾಪುರ ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಹೊಸೂರು ತಾಲೂಕಿನಲ್ಲಿದೆ. ಗುಮ್ಮಳಾಪುರ, ಗೂಳೂರು ಮಧ್ಯದ ಅಂತರ ಸುಮಾರು ೫೦ ಮೈಲಿ.

ಕಥೆಯನ್ನು ಮುನ್ನಡೆಸುವ First person narrative ತಂತ್ರದ ದೃಶ್ಯಕಾವ್ಯ. ಪಾತ್ರಗಳ ಪರವಾಗಿ ಕವಿಯೇ ಮಾತನಾಡುತ್ತ ಕಥೆಯನ್ನು ಮುನ್ನಡೆಸುವ Third person narrative ತಂತ್ರದ ಶ್ರವ್ಯಕಾವ್ಯ. ಇವುಗಳಲ್ಲಿ ಸೂತ್ರಧಾರನು (=ಭಾಗವತ, ನಿರ್ದೇಶಕ) ಜೀವನಾಡಿಯಾಗಿರುವ ದೃಶ್ಯಪ್ರಕಾರವು ಪ್ರದರ್ಶನ, ಪ್ರಬಂಧ, ಪ್ರಸಂಗವೆಂದು ಮೂರು ತೆರನಾಗಿದ್ದು, [ಇದಕ್ಕೆ ಹರಿಕಥೆ (ಏಕಪಾತ್ರಾಭಿನಯ)ಯನ್ನೂ ಸೇರಿಸಿ ನಾಲ್ಕು ಪ್ರಭೇದಗಳೆಂದು ಹೇಳಬಹುದು]. ಅವುಗಳ ಸ್ವರೂಪ ಹೀಗಿದೆ:

ದೃಶ್ಯಪ್ರಕಾರವು ಅಭಿನಯ ಚತುಷ್ಟಯದಿಂದ (ಸಾತ್ವಿಕ=ಹಾವಭಾವ ಪ್ರದರ್ಶನ, ಆಂಗಿಕ=ಅಂಗೋಪಾಂಗ ಚಲನವಲನ, ಆಹಾರ್ಯ=ವೇಷಭೂಷಣ, ರಂಗಸಜ್ಜಿಕೆ, ವಾಚಿಕ=ಮಾತು, ಗೀತ) ಪ್ರದರ್ಶನವೆನಿಸಿಕೊಳ್ಳುತ್ತದೆ. ಉದಾ: ರಂಗದ ಮೇಲೆ ಮಾಡುವ ಯಕ್ಷಗಾನ ಪ್ರದರ್ಶನ. ಆ ಪ್ರದರ್ಶನವನ್ನು ಶ್ರವ್ಯಪ್ರಕಾರಗೊಳಿಸಿದರೆ (ಚಂಪೂ)ಪ್ರಬಂಧವೆನಿಸಿಕೊಳ್ಳುತ್ತದೆ. ಇಲ್ಲಿ ಗದ್ಯಭಾಗ ಭಾಗವತನ ಮಾತಿನಂತೆ, ಪದ್ಯಭಾಗ ಪಾತ್ರಗಳ ಮಾತಿನಂತೆ ಸಂಯೋಜನಗೊಂಡಿರುತ್ತವೆ. ಪ್ರದರ್ಶನದ ಅಭಿನಯ ಚತುಷ್ಟಯದಲ್ಲಿ ಸಾತ್ವಿಕ, ಆಹಾರ್ಯ, ಆಂಗಿಕಗಳನ್ನು ಬಿಟ್ಟುಕೊಟ್ಟು ವಾಚಿಕವೊಂದನ್ನೇ ಮಾಧ್ಯಮವನ್ನಾಗಿಟ್ಟುಕೊಂಡರೆ 'ಪ್ರಸಂಗ'ವೆನಿಸಿಕೊಳ್ಳುತ್ತದೆ. ದಕ್ಷಿಣ ಕನ್ನಡಜಿಲ್ಲೆ, ಉತ್ತರಕನ್ನಡ ಜಿಲ್ಲೆಗಳಲ್ಲಿ ಪ್ರಸಂಗವನ್ನು ತಾಳಮದ್ದಳೆ, ಬೈಠಕ್ ಎಂದೂ ಕರೆಯುತ್ತಾರೆ. ಶೂನ್ಯಸಂಪಾದನೆಯು ಪಾತ್ರಗಳೇ ಮಾತನಾಡುವ ಲಕ್ಷಣವುಳ್ಳ ಕೃತಿಯಾಗಿರುವುದರಿಂದ ರಚನೆಯ ದೃಷ್ಟಿಯಿಂದ ಇದನ್ನು ಕೆಲವರು ದೃಶ್ಯಕೃತಿ (ನಾಟಕಕೃತಿ)ಯೆಂದು, ಕೆಲವರು ಚಂಪೂಕೃತಿಯೆಂದು[೩೨] ಸರಿಯಾಗಿಯೇ ಗುರುತಿಸಿದ್ದಾರೆ. ಇತ್ತೀಚೆ ಡಾ. ಎಲ್. ಬಸವರಾಜು ಸೂಚ್ಯವಾಗಿ, ಡಾ. ಚಿದಾನಂದಮೂರ್ತಿ ವ್ಯಕ್ತವಾಗಿ[೩೩] ಇದನ್ನು ದೃಶ್ಯವರ್ಗದ ಯಕ್ಷಗಾನ ಶೈಲಿಯ ಕೃತಿಯೆಂದು ಹೇಳುತ್ತ, ಸತ್ಯಕ್ಕೆ ಇನ್ನೂ ಸಮೀಪ ಬಂದಿದ್ದಾರೆ. ಈಗ ಮತ್ತೂ ಖಚಿತವಾಗಿ ಹೇಳುವುದಾದರೆ ಇದು ದೃಶ್ಯದ ಶ್ರವ್ಯರೂಪವಾದ ಚಂಪೂಪ್ರಬಂಧವೂ ಅಲ್ಲ, ದೃಶ್ಯದ ಪ್ರದರ್ಶನರೂಪವಾದ ಯಕ್ಷಗಾನವೂ ಅಲ್ಲ, ಅಭಿನಯ ಚತುಷ್ಟದಲ್ಲಿ ವಾಚಿಕಾಂಶವನ್ನು ಮಾತ್ರ ಇಟ್ಟುಕೊಂಡ 'ಪ್ರಸಂಗ'ವೆಂಬ ಸಾಹಿತ್ಯ ಪ್ರಕಾರವಾಗಿದೆ. "ಹತ್ತು ಜನ ಸೇರಿ ಶೂನ್ಯ ಸಂಪಾದನೆಯ ಬಗ್ಗೆ ವಿಚಾರ ವ್ಯಾಖ್ಯಾನಗಳನ್ನು ಮಾಡುತ್ತಿದ್ದ ಸಮಯದಲ್ಲಿ, ಅವರಲ್ಲೇ ಜಾಣರಾದವರು ಕುಳಿತಲ್ಲೇ ಬಸವ, ಅಲ್ಲಮ ಮುಂತಾದ ಶರಣರ ಪಾತ್ರಗಳನ್ನು ಆರೋಪಿಸಿಕೊಂಡು ಇಡೀ ಚರ್ಚೆಗೆ ನಾಟಕೀಯ ಗುಣವನ್ನು ತಂದುಕೊಟ್ಟಿದ್ದರೂ ಆಶ್ಚರ್ಯವಿಲ್ಲ"[೩೪] ಎಂದು ಹೇಳುತ್ತ, ಡಾ. ಚಿದಾನಂದಮೂರ್ತಿಯವರು ಶೂನ್ಯಸಂಪಾದನೆಯನ್ನು ಯಕ್ಷಗಾನಕ್ಕಿಂತ 'ಪ್ರಸಂಗ'ದ ಹತ್ತಿರ ತಂದಿದ್ದರೂ ಅದು 'ಪ್ರಸಂಗ'ವೆಂಬ ಸಾಹಿತ್ಯ ಪ್ರಕಾರವೇ ಆಗಿದೆಯೆಂಬುದನ್ನು ಅವರು ಗುರುತಿಸದೇ ಹೋಗಿದ್ದಾರೆ. ಈ ಅಂಶವನ್ನು ಪ್ರಸಾದಿ ಮಹಾದೇವಯ್ಯನೇ ಸ್ಪಷ್ಟಪಡಿಸಿರುವುದು ಯಾರ ಕಣ್ಣಿಗೂ

---

೩೨. ವಚನ-ಗದ್ಯಗಳ ಮಿಶ್ರಣವಾಗಿದೆಯೆಂಬ ಸರಳ ಅರ್ಥದಲ್ಲಿ ಶೂನ್ಯಸಂಪಾದನೆಯನ್ನು ಚಂಪೂ ಎಂದು ಕರೆದಿರುವರೇ ಹೊರತು ಅದರ ನಾಟಕೀಯ ತಂತ್ರವನ್ನು ಗಮನಿಸಿ ಕರೆದಿಲ್ಲ.

೩೩. ಡಾ. ಎಲ್. ಬಸವರಾಜು ಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆ-ಪ್ರಸ್ತಾವನೆ, ಪು.೪೧. ಡಾ. ಎಂ. ಚಿದಾನಂದಮೂರ್ತಿ-ಲಿಂಗಾಯತ ಅಧ್ಯಯನಗಳು ಪು. ೨೪೩.

೩೪. ಡಾ. ಎಂ. ಚಿದಾನಂದಮೂರ್ತಿ-ಲಿಂಗಾಯತ ಅಧ್ಯಯನಗಳು, ಪು.೨೨೭.

ಈ ವರೆಗೆ ಬಿದ್ದಂತಿಲ್ಲ. ಅದು "ಶಿವಗಣ ಪ್ರಸಾದಿ ಮಹಾದೇವಂಗಳು ಮರ್ತ್ಯಲೋಕದ ಮಹಾಗಣಂಗಳಿಗೆ ಮಹಾ 'ಪ್ರಸಂಗ'ಮಂ ಸಮರ್ಪಿಸಿದ ಭೇದವೆಂತಿರ್ದುದೆಂದಡೆ"[೩೫] ಎನ್ನುತ್ತ ತಾನು ಬರೆದು, ವಾಚಕರಿಗೆ ಅರ್ಪಿಸುತ್ತಿರುವುದು 'ಪ್ರಸಂಗ'ವೆಂಬ ಸಾಹಿತ್ಯಪ್ರಕಾರವೆಂದು ಮಹಾದೇವಯ್ಯ ವ್ಯಕ್ತವಾಗಿಯೇ ಹೇಳಿದ್ದಾನೆ. "ಇದನು ಶಿವಶರಣರು ಕೇಳುವುದು, ಲಾಲಿಸುವುದು, ಪಾಲಿಸುವುದು, ಬರೆದೋದುವುದು" ಎಂದು ಸಾಮಾನ್ಯವಾಗಿ ಎಲ್ಲ ಕವಿಗಳಂತೆ ಬಿನ್ನವಿಸಿಕೊಂಡುದಲ್ಲದೆ ಹೆಚ್ಚಿನದಾಗಿ "ಈ ವಚನಾನುಭವ ಪ್ರಸಂಗಮಂ ಮಾಡಿ ಸುಖಿಸುವುದು"[೩೬] ಎನ್ನುವಲ್ಲಿ ಪಾತ್ರಗಳನ್ನು ಆರೋಪಿಸಿಕೊಂಡು ಕುಳಿತು, ಪ್ರಸಂಗ ಅಥವಾ ತಾಳಮದ್ದಳೆ ಅಥವಾ ಬೈಠಕ್ ಮಾಡಬೇಕೆಂದೂ ಬಿನ್ನವಿಸಿಕೊಂಡಂತಿದೆ. ಹೀಗೆ ಮಾಡುವುದೇ ಶೂನ್ಯಸಂಪಾದನೆಯನ್ನು ಆಸ್ವಾದಿಸುವ ಸರಿಯಾದ ಕ್ರಮವೆಂದು ಹೇಳಬಹುದಾಗಿದೆ. ಬಹುಶಃ ಹಾಗೆ ನಮ್ಮ ಪ್ರಾಚೀನರು ಮಾಡುತ್ತಿರಲೂ ಸಾಧ್ಯವಿದೆ. ಇದನ್ನು ನೋಡಿದರೆ ಮಹಾದೇವಯ್ಯನು ಪ್ರಸಂಗವು (ತಾಳಮದ್ದಳೆ) ಪ್ರಚಾರದಲ್ಲಿರುವ ಪ್ರದೇಶಕ್ಕೆ ಸಂಬಂಧಪಟ್ಟವನೆಂದು ಊಹಿಸಬೇಕಾಗುತ್ತದೆ. ಬಹುಶಃ ದಕ್ಷಿಣ ಕನ್ನಡ-ಉತ್ತರ ಕನ್ನಡ ಜಿಲ್ಲೆಯವನು ಇಲ್ಲವೆ ಮಲೆನಾಡಿನ ಪರಿಸರದವನಿರಬಹುದು.

ಇಂದು ಯಕ್ಷಗಾನಕೃತಿಯನ್ನು 'ಪ್ರದರ್ಶನ' ಮಾಡಲೂ 'ಪ್ರಸಂಗ' ಮಾಡಲೂ ಬರುವಂತೆ ಶೂನ್ಯಸಂಪಾದನೆ ಕೃತಿಯನ್ನು ಪ್ರದರ್ಶನ, ಪ್ರಸಂಗ ಎರಡೂ ಮಾಡಬಹುದೇ? ಎಂಬ ಪ್ರಶ್ನೆ ಏಳುವುದು ಸಹಜ. ಅದಕ್ಕೆ ಉತ್ತರ: ವೀರರಸಪ್ರಧಾನವಾದ ಕೃತಿಗಳು ಮಾತ್ರ ಪ್ರದರ್ಶನಯೋಗ್ಯವಾದುವು. ಪಾತ್ರಗಳು ಅಟ್ಟಹಾಸದಿಂದ ಕುಣಿಯುವುದು, ಅಬ್ಬರದ ಧ್ವನಿಮಾಡುವುದು, ಝುಗಝುಗಿಸುವ ಬೃಹತ್‌ವೇಷ ಕಟ್ಟಿಕೊಳ್ಳುವುದು ಯಕ್ಷಗಾನ 'ಪ್ರದರ್ಶನ'ದಲ್ಲಿ ಅಪೇಕ್ಷಣೀಯ. ಈ ರೀತಿ ವರ್ತಿಸುವುದು ಶೂನ್ಯಸಂಪಾದನೆಯ ಪಾತ್ರಗಳಿಗೆ ಭೂಷಣವಲ್ಲವಾದುದರಿಂದ ಇಂಥ ಕೃತಿಗಳನ್ನು 'ಪ್ರಸಂಗ' ಮಾಡುವುದು ಸೂಕ್ತ. ಅಂದು ಹಾಗೆ ಮಾಡುತ್ತಿರಲೂಬಹುದು.[೩೭] ಆದುದರಿಂದಲೇ ಮಹಾದೇವಯ್ಯನು ಇದನ್ನು 'ಪ್ರದರ್ಶನ ಮಾಡಿ ಸುಖಿಸುವುದು' ಎನ್ನದೆ 'ಪ್ರಸಂಗಮಂ ಮಾಡಿ ಸುಖಿಸುವುದು' ಎಂದು ಹೇಳಿದಂತಿದೆ. 'ಪ್ರಸಂಗ' ಒಂದು ಜಾನಪದ ಸಾಮಾನ್ಯ ಪ್ರಕಾರವಾಗಿರುವುದರಿಂದ ಶೂನ್ಯಸಂಪಾದನೆಯೂ ಆ ಮಟ್ಟದ ಕೃತಿಯೆಂದು ನನ್ನ ಅಭಿಪ್ರಾಯವಲ್ಲ. ಮಹಾದೇವಯ್ಯ ಹೇಳುವಂತೆ ಇದು 'ಅನುಭಾವ ಪ್ರಸಂಗ.' ಹೀಗಾಗಿ ಇದರ ವಸ್ತು ಅನುಭಾವ. ಈ ಮಹಾವಸ್ತುವಿನಿಂದಾಗಿ ಜಾನಪದ ಸಾಮಾನ್ಯಪ್ರಕಾರವಾದ 'ಪ್ರಸಂಗ'ವು 'ಮಹಾಪ್ರಸಂಗ' ಪ್ರಕಾರವಾಗಿ ಉದಾತ್ತೀಕರಣಗೊಂಡಿದೆಯೆಂದೇ ಹೇಳಬೇಕು. ಸಾಮಾನ್ಯ ಪ್ರಕಾರವಾದ ಸಾಂಗತ್ಯವು ರತ್ನಾಕರವರ್ಣಿಯಿಂದ ಉದಾತ್ತಗೊಂಡಂತೆ.

---

೩೫. ಶೂನ್ಯಸಂಪಾದನೆಯ ಆರಂಭದ ಗದ್ಯ.

೩೬. ಶೂನ್ಯಸಂಪಾದನೆಯ ಕೊನೆಯ ಗದ್ಯ.

೩೭. ವೀರರಸ ಪ್ರಧಾನವಲ್ಲದ ಕಥೆಗಳನ್ನು ದಕ್ಷಿಣೋತ್ತರ ಕನ್ನಡ ಜಿಲ್ಲೆಯವರು ಕೇವಲ 'ಪ್ರಸಂಗ' ರೂಪದಲ್ಲಿ ಪ್ರದರ್ಶಿಸುತ್ತಿದ್ದರೆ, ಉತ್ತರಕರ್ನಾಟಕದವರು ಸಣ್ಣಾಟ ರೂಪದಲ್ಲಿ ಪ್ರದರ್ಶಿಸುತ್ತಿರುವುದನ್ನು ಇಲ್ಲಿ ನೆನೆಯಬೇಕು. ಶರಣರಾಟಗಳೆಲ್ಲ ಸಣ್ಣಾಟಗಳೇ ಆಗಿರುವುದನ್ನು ಇಲ್ಲಿ ಗಮನಿಸಬೇಕು.

ಒಟ್ಟಿನಲ್ಲಿ ರಚನೆಯ ದೃಷ್ಟಿಯಿಂದ ಇದು ಭಾಗವತ ಅಪ್ರಧಾನವಾಗಿ ಮಾತನಾಡುವ, ಪಾತ್ರಗಳು ಪ್ರಧಾನವಾಗಿ ಮಾತನಾಡುವ 'ಪ್ರಸಂಗ'ವೆಂಬ ಸಾಹಿತ್ಯ ಪ್ರಕಾರಕ್ಕೆ ಸಂಬಂಧಿಸಿದ ಕೃತಿಯಾಗಿದೆ. ಇಲ್ಲಿ ಮಹಾದೇವಯ್ಯನೇ (ಹಲಗೆದೇವನೇ, ಸಿದ್ಧಲಿಂಗನೇ, ಸಿದ್ಧವೀರಣ್ಣನೇ) ಭಾಗವತ, ಶರಣರೇ ಪಾತ್ರಗಳು, First person narrative ಇದರ ತಂತ್ರ. ಈ First person narrative ತಂತ್ರ ಕಾರಣವಾಗಿ ಅಭಿವ್ಯಕ್ತಿಗೆ ಆಳ ಪ್ರಾಪ್ತವಾಗುತ್ತದೆ. ಕೃತಿ ಪರಿಣಾಮಕಾರಿ ಸಮೂಹಮಾಧ್ಯಮದ ಶಕ್ತಿ ಪಡೆಯುತ್ತದೆ. ಈ ಕಾರಣಕ್ಕಾಗಿಯೇ ಮಹಾದೇವಯ್ಯ ಪ್ರಸಂಗಪ್ರಕಾರವನ್ನು ಆಯ್ದುಕೊಂಡಿರಬಹುದು.

ದೃಶ್ಯಗಳು :

ಈ 'ಶೂನ್ಯಸಂಪಾದನಾ ಪ್ರಸಂಗ' ಅಥವಾ 'ಶೂನ್ಯಸಂಪಾದನಾ ಮಹಾಪ್ರಸಂಗ' ಪ್ರದೇಶದ ದೃಷ್ಟಿಯಿಂದ ಬನವಾಸಿಯಲ್ಲಿ ಪ್ರಭುದೇವನ ಸ್ವಗತದಿಂದ ಪ್ರಾರಂಭವಾಗಿ (ಪ್ರಥಮೋಪದೇಶ ಇಡಿಯಾಗಿ ಸ್ವಗತದಲ್ಲಿದೆ), ಮುಕ್ತಾಯಕ್ಕ, ಸಿದ್ಧರಾಮರ ಗ್ರಾಮಗಳಲ್ಲಿ ಉಭಯಪಾತ್ರ, ಪ್ರಶ್ನೋತ್ತರರೂಪ ಪಡೆದು, ಕಲ್ಯಾಣದಲ್ಲಿ ಅನೇಕ ಪಾತ್ರಗಳ ಸಂವಾದರೂಪ ತಾಳಿ, ಕೊನೆಗೆ ಶ್ರೀಶೈಲಮಾರ್ಗದಲ್ಲಿ ಗೋರಕ್ಷನೊಡನೆ ಮತ್ತೆ ಉಭಯಪಾತ್ರ ಪ್ರಶ್ನೋತ್ತರರೂಪಕ್ಕೆ ಹೊರಳಿ, ಇನ್ನೂ ಕೊನೆಗೆ ಪ್ರಭುದೇವರು ಶ್ರೀಶೈಲದಲ್ಲಿ, ಬಸವಾದಿಗಳು ಕಪ್ಪಡಿಯಲ್ಲಿ, ಚೆನ್ನಬಸವಾದಿಗಳು ಉಳಿವೆಯಲ್ಲಿ ಮತ್ತೆ 'ಸ್ವಗತ' ಹೇಳುವುದರೊಂದಿಗೆ ಮುಕ್ತಾಯಗೊಳ್ಳುತ್ತದೆ. ಸ್ಥಳದೃಷ್ಟಿಯಿಂದ ಗೊಗ್ಗಯ್ಯನ ತೋಟದಲ್ಲಿ, ಅನಿಮಿಷಯ್ಯನ ಸಮಾಧಿಯ ಬಳಿಯಲ್ಲಿ, ಸೊಲ್ಲಾಪುರದ ಕೆರೆಯ ತೀರದಲ್ಲಿ, ಕಿನ್ನರಿಬೊಮ್ಮಯ್ಯ ಭೆಟ್ಟಿಯಾದ ಕಲ್ಯಾಣದ ಹೊರವಲಯದಲ್ಲಿ, ಬಸವಣ್ಣನ ಅರಮನೆಯಲ್ಲಿ, ಮೋಳಿಗಯ್ಯಗಳ ಮನೆಯಲ್ಲಿ, ನುಲಿಯ ಚಂದಯ್ಯಗಳ ಹುಲ್ಲಿನ ಹೊಲದಲ್ಲಿ, ಮಡಿವಾಳಯ್ಯಗಳು ಬಟ್ಟೆ ತೊಳೆಯುತ್ತಿದ್ದ ತೊರೆಯ ತೀರದಲ್ಲಿ, ಘಟ್ಟಿವಾಳಯ್ಯಗಳ ಮರಣ ಸಂಭವಿಸಿದ ಕಲ್ಯಾಣದ ರಾಜಬೀದಿಯಲ್ಲಿ ಈ ಪಾತ್ರಗಳು ನಿಂತು, ಕುಳಿತು, ಚಲಿಸಿ, ಮಾತನಾಡುವುದರಿಂದ ಇಲ್ಲಿಯ ಘಟನೆಗಳಿಗೆ ಹಿನ್ನೆಲೆಯಾಗಿ ಬೇರೆ ಬೇರೆ ಸ್ಥಳದೃಶ್ಯಗಳನ್ನು ಸಂಯೋಜಿಸಿದಂತಾಗಿದೆ. ಈ ವಿವಿಧ ಗ್ರಾಮದೃಶ್ಯಾವಳಿ, ಗ್ರಾಮದ ಸ್ಥಳದೃಶ್ಯಾವಳಿಗಳು 'ಶೂನ್ಯಸಂಪಾದನ ಪ್ರಸಂಗ'ಕ್ಕೆ ವೈವಿಧ್ಯತೆಯೊಂದಿಗೆ ಚಲನಶೀಲತೆಯನ್ನೂ ಒದಗಿಸಿವೆ.

ಇದೇನೇ ಇದ್ದರೂ ಈ ಪ್ರಸಂಗದ ಮುಖ್ಯವೇದಿಕೆ ಕಲ್ಯಾಣ. ಸಿದ್ಧರಾಮ, ಮಹಾದೇವಿ, ಏಕಾಂತರಾಮಯ್ಯ, ಏಕೆ? ಪ್ರಭುದೇವರು ಐತಿಹಾಸಿಕವಾಗಿ ಕಲ್ಯಾಣಕ್ಕೆ ಬಂದಿದ್ದರೋ ಇಲ್ಲವೋ, ಎಲ್ಲ ದಾರಿಗಳು ರೋಮನಗರವನ್ನು ಸೇರುತ್ತವೆ ಎಂಬಂತೆ ಕೆಲವು ಶರಣರನ್ನಾದರೂ ಕಲ್ಯಾಣಕ್ಕೆ ಮೊದಲಬಾರಿ ಕರೆತಂದಿದ್ದಾನೆ, ಮಹಾದೇವಯ್ಯ. ಇದು ಇತಿಹಾಸಕ್ಕೆ ಅವನು ಕೊಟ್ಟ ತಿರುವೂ ಆಗಿರುವಂತೆ, ಲಿಂಗಾಯತದ ಕ್ರೋಡೀಕರಣಕ್ಕೆ ಕೊಟ್ಟ ತಿರುವೂ ಆಗಿರುವುದು ವಿಶೇಷ.

ಘಟನೆ :

ಈ ದೃಶ್ಯಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಒಂದೊಂದು ಘಟನೆಗಳು ಇಲ್ಲಿ ಜರುಗುತ್ತ ಹೋಗುತ್ತವೆ. ಮುಂದೆ ಬಂದ ಆವೃತ್ತಿಕಾರರು ಈ ಘಟನೆಗಳ ಸಂಖ್ಯೆಯನ್ನು ಬೆಳೆಸುತ್ತ ಹೋದ

ರೀತಿ, ಅದರಿಂದ ರಚನೆಯ ಮೇಲಾದ ಪರಿಣಾಮ, ಒಂದೊಂದು ಘಟನೆಗಳು ರೂಪಗೊಳ್ಳುತ್ತಿರುವ ಬಗೆ ಇಲ್ಲಿ ಅಭ್ಯಾಸಯೋಗ್ಯವೆನಿಸಿದೆ.

ಆವೃತ್ತಿಕಾರರ ಅನೇಕ ಉದ್ದೇಶಗಳಲ್ಲಿ ಹೊಸ ಘಟನೆಗಳನ್ನು ಅಂದರೆ ಹೊಸ ಸಂಪಾದನೆಗಳನ್ನು ಜೋಡಿಸುವುದು ಮುಖ್ಯವಾಗಿದೆ. ಇವರೆಲ್ಲ ಸೇರಿ ೬ ಸಂಪಾದನೆಗಳನ್ನು ಹೊಸದಾಗಿ ಸೇರಿಸಿದ್ದರೂ ಮೂರು ಜನರು ಮೂಲಕೃತಿಯಲ್ಲಿ 'ಸಿದ್ಧರಾಮನಿಗೆ ಲಿಂಗದೀಕ್ಷೆಯಿರಲಿಲ್ಲ' ಎಂಬ ಮಾತನ್ನು ತಪ್ಪದೇ ಆಡಿರುವುದನ್ನು ನೋಡಿದರೆ ಶೂನ್ಯಸಂಪಾದನೆಯನ್ನು ಪರಿಷ್ಕರಿಸಬೇಕೆಂಬುದಕ್ಕೆ ಈ ಅಂಶವೇ ಪ್ರಥಮ ಮತ್ತು ಪ್ರಮುಖ ಪ್ರೇರಣೆ ನೀಡಿರಬೇಕೆನಿಸುತ್ತದೆ. ಈ ಐತಿಹಾಸಿಕ ಸತ್ಯವನ್ನು ಮಹಾದೇವಯ್ಯ ಆಗಲೇ ಚಿತ್ರಿಸಿ ಬಿಟ್ಟಿದ್ದರೆ, ತರುವಾಯದ ಆವೃತ್ತಿಗಳು ಬಹುಶಃ ರೂಪ ತಾಳುತ್ತಿರಲಿಲ್ಲವೇನೋ. ದೀಕ್ಷಾಕ್ರಮವಿಲ್ಲವೆಂಬ ಅತಿಯಾದ ಅಸಮಾಧಾನದ ಫಲವೆನ್ನುವಂತೆ ಹಲಗೆದೇವ ಅದನ್ನು ಇನ್ನಷ್ಟು, ಮತ್ತಷ್ಟು ಪರಿಣಾಮಕಾರಿಯಾಗಿ ಚಿತ್ರಿಸಲು ತೊಡಗಿ, ಆ ಭಾಗವನ್ನೇ ಭಾರಗೊಳಿಸಿದ. ವೀರಶೈವ ತತ್ವಗಳು ಶೂನ್ಯಸಂಪಾದನೆಯ ರಚನೆಯನ್ನು ಹೇಗೆ ನಿಗ್ರಹಿಸುತ್ತವೆ ಎಂಬುದಕ್ಕೆ ಈ ದೀಕ್ಷಾಕ್ರಮ ನಿದರ್ಶನವೆನಿಸಿದೆ. ಹೆಚ್ಚಿನದಾಗಿ ನುಲಿಯ ಚಂದಯ್ಯನ ಸಂಪಾದನೆಯನ್ನು ಸೇರಿಸಿದ್ದರೂ ಕರ್ತೃ ಹಲಗೆದೇವನ ದೃಷ್ಟಿಯಲ್ಲಿ ಬಹುಶಃ ಅದು ಅಪ್ರಮುಖ. ಆದರೆ ನಮ್ಮ ದೃಷ್ಟಿಯಲ್ಲಿ ಇವನ ಬೆಲೆಯುಳ್ಳ ಕಾಣಿಕೆ ಈ ದೀಕ್ಷಾಭಾಗವಲ್ಲ, ನುಲಿಯ ಚಂದಯ್ಯನ ಪ್ರಸಂಗ.

ಹೀಗೆ ತಮಗೆ ಇಷ್ಟವಾದುದನ್ನು ಸೇರಿಸಬೇಕು, ಅನಿಷ್ಟವಾದುದನ್ನು ತೆಗೆಯಬೇಕು, ಅಸ್ತವ್ಯಸ್ತವೆನಿಸಿದುದನ್ನು ವ್ಯಸ್ತಗೊಳಿಸಬೇಕು ಎಂಬ ತಮ್ಮ ತಮ್ಮ ರುಚಿ-ಶುಚಿಗಳಿಗನುಗುಣವಾಗಿ ಮೂರು ಜನ ಒಬ್ಬರ ಆವೃತ್ತಿಯನ್ನು ಇನ್ನೊಬ್ಬರು ಪರಿಷ್ಕರಿಸುತ್ತ ನಡೆದರು. ಆದರೆ ಶೂನ್ಯಸಂಪಾದನೆಗಳಲ್ಲಿ ಬಹಳಷ್ಟು ಪುನರ್‌ರಚನಾ ಕಾರ್ಯ ನಡೆದು, ಆ ಕೃತಿಯ ಶರೀರದಲ್ಲಿ ಹೆಚ್ಚು ವ್ಯತ್ಯಾಸ ತಲೆದೋರಿದುದು ಪೂರ್ವಾರ್ಧದಲ್ಲಲ್ಲ, ಉತ್ತರಾರ್ಧದಲ್ಲಿ. ಪ್ರಥಮೋಪದೇಶ, ಮುಕ್ತಾಯಕ್ಕಗಳ ಸಂಪಾದನೆ. ಸಿದ್ಧರಾಮಯ್ಯಗಳ ಸಂಪಾದನೆ, ಬಸವೇಶ ಚೆನ್ನಬಸವೇಶಂಗನುಗ್ರಹ ಮಾಡಿದ ಸಂಪಾದನೆ, ಪ್ರಭು ಕಲ್ಯಾಣಕ್ಕೆ ಬಂದ ಸಂಪಾದನೆ, ಮಡಿವಾಳಯ್ಯಗಳ ಸಂಪಾದನೆ-ಹೀಗೆ ಮೊದಲಿನ ೯ ಸಂಪಾದನೆಗಳ ವರೆಗೆ ಎಲ್ಲ ಆವೃತ್ತಿಗಳು ಹೆಚ್ಚು ಕಡಿಮೆ ಒಂದೇ ರೀತಿ ಸಾಗುತ್ತವೆ. ೧೦ನೆಯ ಸಿದ್ಧರಾಮೇಶ್ವರನ ಗುರುಕರುಣೆಯಿಂದ ಶೂನ್ಯಸಂಪಾದನೆಗಳಲ್ಲಿ ವ್ಯತ್ಯಾಸಗಳು ತಲೆದೋರುತ್ತ ಹೋಗುತ್ತವೆ. ೧೦ನೆಯ ಸಿದ್ಧರಾಮೇಶ್ವರನ ಗುರುಕರುಣೆ, ೧೪ನೆಯ ನುಲಿಯ ಚಂದಯ್ಯಗಳ ಸಂಪಾದನೆಗಳನ್ನು ಹಲಗೆದೇವ ಸೇರಿಸುತ್ತಾನೆ. ಇವೆರಡನ್ನೂ ಇಟ್ಟುಕೊಂಡು ೧೨ನೆಯ ಆಯ್ದಕ್ಕಿ ಮಾರಯ್ಯಗಳ ಸಂಪಾದನೆ, ೨೧ನೆಯ ಗೋರಕ್ಷನ ಸಂಪಾದನೆಗಳನ್ನು ಗುಮ್ಮಳಾಪುರ ಸಿದ್ಧಲಿಂಗ ಸೇರಿಸುತ್ತಾನೆ. ಈ ನಾಲ್ಕನ್ನೂ ಇಟ್ಟುಕೊಂಡು ೧೩ನೆಯ ಮೋಳಿಗಯ್ಯಗಳ ಸಂಪಾದನೆ, ೧೫ನೆಯ ಘಟ್ಟಿವಾಳಯ್ಯಗಳ ಸಂಪಾದನೆಗಳನ್ನು ಗೂಳೂರು ಸಿದ್ಧವೀರಣ್ಣ ಸೃಷ್ಟಿಸಿಕೊಂಡಿದ್ದಾನೆ. ಹೀಗೆ "ಪರಂಪರಾಗತವಾಗಿ ತೇಲಿಬಂದ ಕಥಾನಕಗಳನ್ನು ಒಗ್ಗೂಡಿಸಿ ಒಂದು ರೂಪಕ್ಕೆ" ತರುವ ವಿಕಾಸಶೀಲ ಮಹಾಕಾವ್ಯ (Epic of growth)ದಂತೆ ಈ ಶೂನ್ಯಸಂಪಾದನಾವಾಹಿನಿ ತನ್ನ ಒಡಲಲ್ಲಿ ಅನೇಕ ಉಪವಾಹಿನಿಯಗಳನ್ನು ಸೇರಿಸಿಕೊಳ್ಳುತ್ತ ಮುನ್ನಡೆದುದೂ ಒಂದು ಗಮನಾರ್ಹ ಸಂಗತಿಯಾಗಿದೆ.

ಹೀಗಾಗಿ ಮಹಾಕಾವ್ಯ, ಮಹಾನಾಟಕಗಳಂತೆ ಇದನ್ನು ಇಡಿಯಾಗಿ ಓದಿದರೂ ಅರ್ಥವಿದೆ, ಬಿಡಿ ಆಶ್ವಾಸ, ಬಿಡಿ ಅಂಕಗಳಾಗಿ ಓದಿದರೂ ಅರ್ಥವಿದೆ.

ಇಲ್ಲಿಯ ಒಂದೊಂದು ಘಟನೆ ಸಂಘಟನೆಗೊಳ್ಳುವ ಕ್ರಮವೂ ಕೆಲವೆಡೆ ತುಂಬ ಕುತೂಹಲಕರವಾಗಿದೆ. ಸಿದ್ಧರಾಮನ ಸಂಪಾದನೆಯಲ್ಲಿ ಪ್ರಭುದೇವ ಕೆರೆಯ ತೀರಕ್ಕೆ ಬರುವುದು, ಗುಡ್ಡಗಳು ನೆಲ ಅಗಿಯುತ್ತಿರುವುದು, ಪ್ರಭುದೇವ ಸಿದ್ಧರಾಮನನ್ನು ನಿಂದಿಸುವುದು, ಗುಡ್ಡಗಳು ಕಲ್ಲು ತೂರುವುದು, ಅವು ಅವರಿಗೇ ತಿರುಗಿ ಬಡಿಯುವುದು, ಸಿಟ್ಟಿಗೆದ್ದ ಸಿದ್ಧರಾಮ ನೊಸಲಕಣ್ಣ ತೆರೆಯುವುದು, ಇದಕ್ಕೆ ಪ್ರತಿಯಾಗಿ ಪ್ರಭುದೇವ ಅಂಗಾಲಕಣ್ಣು ತೋರುವುದು, ಉರಿ ಸಿದ್ಧರಾಮನ ಕಡೆಗೆ ಮರಳುವುದು, ಸಿದ್ಧರಾಮ ತೇಜೋವಧೆಗೊಂಡು ಕ್ಷಮೆ ಯಾಚಿಸುವುದು–ಹೀಗೆ ಒಂದೊಂದೂ ಉಪಘಟನೆಗಳು ಮನೋಜ್ಞವಾಗಿ ಬಿಚ್ಚಿಕೊಳ್ಳುತ್ತವೆ. ಈ ಉಪಘಟನೆಗಳ ಸಮ್ಮಿಲನ, ಶರಣರ ವಚನಸಂವಾದ, ಸಂಪಾದನಕಾರರ ನಿರ್ದೇಶನಗದ್ಯ–ಇವೆಲ್ಲ ಸೇರಿ ಒಂದು ಘಟನೆಯನ್ನು ರೂಪಿಸುತ್ತವೆ. ನುಲಿಯ ಚಂದಯ್ಯ, ಘಟ್ಟಿವಾಳಯ್ಯ, ಗೋರಕ್ಷ ಮೊದಲಾದವರ ಸಂಪಾದನೆಗಳು ಇಂಥ ಕೌತುಕ ಹುಟ್ಟಿಸುವ ಘಟನೆಗಳಾಗಿವೆ. ಆದರೆ ಈ ಬಗೆಯ ಉತ್ಕಟ ಕೌತುಕ ಎಲ್ಲ ಸಂಪಾದನೆಗಳಲ್ಲಿಯೂ ಇದೆಯೆಂದು ಹೇಳುವಂತಿಲ್ಲ.

ಹೀಗೆ ಹರಡಿಕೊಂಡ ಘಟನೆ (ಸಂಪಾದನೆ)ಗಳಲ್ಲಿ, ಅವುಗಳ ಸಂಘಟನೆಯಲ್ಲಿ ಕೆಲವೊಮ್ಮೆ ಅಸಂಗತಗಳು ತೋರಿಬರುತ್ತವೆ. ೧. ಗೂಳೂರು ರಚನೆಯ ಎಲ್ಲ ೨೧ ಸಂಪಾದನೆಗಳಲ್ಲಿ ವಚನಗಳು ಕ್ರಮವಾಗಿ ೩೦, ೩೬, ೪೧, ೪೩, ೪೬, ೪೯, ೫೩, ೫೪, ೫೪, ೫೬, ೫೯, ೭೪, ೭೮, ೮೮, ೯೨, ೧೦೫, ೧೪೦, ೧೫೪ ಇವೆ. ಇಂಥ ಸಂಖ್ಯಾಪ್ರಮಾಣದ ವ್ಯತ್ಯಾಸನ್ನು ತಪ್ಪಿಸಿ, ಎಲ್ಲ ಪರಿಚ್ಛೇದಗಳಲ್ಲಿ ಸ್ವಲ್ಪ ಹೆಚ್ಚು ಕಡಿಮೆ ವಚನಸಂಖ್ಯೆ ಸಮಪ್ರಮಾಣದಲ್ಲಿರುವಂತೆ ನೋಡಿಕೊಳ್ಳಬೇಕಿತ್ತು. ೨. ಒಂದು ಸಂಪಾದನೆ ಒಂದು ತತ್ವಕ್ಕೆ ಮಾತ್ರ ನಿರ್ದಿಷ್ಟಗೊಳ್ಳಬೇಕು. ಎಷ್ಟೇ ಸೂಕ್ಷ್ಮವ್ಯತ್ಯಾಸವಿದ್ದರೂ ಅನಿಮಿಷಯ್ಯನಿಂದ ಪ್ರಭುದೇವರಿಗೆ, ಬಸವಣ್ಣನಿಂದ ಚೆನ್ನಬಸವಣ್ಣನಿಗೆ, ಚೆನ್ನಬಸವಣ್ಣನಿಂದ ಸಿದ್ಧರಾಮನಿಗೆ –ಹೀಗೆ ಮೂರು ಸಂದರ್ಭಗಳಲ್ಲಿ ಲಿಂಗದೀಕ್ಷೆ ಜರುಗಿದುದು ಪುನರುಕ್ತಿ ಎನಿಸುತ್ತದೆ. ಇದೇ ರೀತಿ ಆಯ್ದಕ್ಕಿ ಮಾರಯ್ಯ, ನುಲಿಯ ಚಂದಯ್ಯ, ಮೋಳಿಗೆಯ ಮಾರಯ್ಯ ಈ ಮೂರು ಸಂಪಾದನೆಗಳಲ್ಲಿ ಕಾಯಕತತ್ವವೇ ಪ್ರಧಾನವಾಗಿ ಬಂದಿದೆ. ಪ್ರಭುಕಲ್ಯಾಣಕ್ಕೆ ಬಂದ ಸಂಪಾದನೆ, ಪ್ರಭುದೇವರ ಆರೋಗಣೆಯ ಸಂಪಾದನೆಗಳೆರಡೂ ಜಂಗಮ ಮಹತ್ವವನ್ನೇ ಕುರಿತವಾಗಿವೆ. ೩. ಬಸವೇಶ್ವರ ಚೆನ್ನಬಸವೇಶ್ವರಂಗನುಗ್ರಹ ಮಾಡಿದ ಸಂಪಾದನೆ, ಪ್ರಭು ಕಲ್ಯಾಣಕ್ಕೆ ಬಂದ ಸಂಪಾದನೆ, ಬಸವೇಶ್ವರ ಸಂಪಾದನೆ, ಚೆನ್ನಬಸವೇಶ್ವರ ಸಂಪಾದನೆಗಳು ಸ್ವಲ್ಪ ಹೆಚ್ಚು ಕಡಿಮೆ ಒಂದೇ ಧಾಟಿಯವಾಗಿವೆ. ೪. ಮಡಿವಾಳಯ್ಯ ಮೊದಲಾದವರ ಸಂಪಾದನೆಗಳು ಅಷ್ಟು ಪರಿಣಾಮಕಾರಿ ಪರಿಚ್ಛೇದಗಳಾಗಿಲ್ಲ. ೫. ಪ್ರಭುದೇವರ ಪೂಜಾಸ್ತುತಿ, ಪ್ರಭು ದೇಶಾಂತರ ಹೋಗಿ ಬಂದ ಸಂಪಾದನೆ, ಪ್ರಭುದೇವರು ಶೂನ್ಯಸಿಂಹಾಸನವೇರಿದ ಸಂಪಾದನೆಗಳು ಲಿಂಗಾಯತ ತತ್ವಗಳನ್ನು ಪ್ರತಿಪಾದಿಸದೆ, ಪ್ರಭುದೇವರ ಪ್ರಶಸ್ತಿಗಾಗಿ ರಚಿಸಿದಂತೆ ತೋರುತ್ತವೆ. ೬. ಇಲ್ಲಿಯ ಇನ್ನೊಂದು ದೋಷವೆಂದರೆ ಒಂದೊಂದು ಸಂಪಾದನೆಗಳು ಸರಿಯಾದ ಸ್ಥಾನದಲ್ಲಿ ಬಂದು

ಅಭ್ಯಾಸಿಗೆ ಲಿಂಗಾಯತ ತತ್ತ್ವದ ಸಕ್ರಮ ತಿಳುವಳಿಕೆಯನ್ನು ಒದಗಿಸದಿರುವುದು. ೭. 'ಗೋರಕ್ಷನ ಸಂಪಾದನೆ ಮತ್ತು ಎಲ್ಲಾ ಗಣಂಗಳ ಐಕ್ಯ' ಪ್ರಕರಣಗಳನ್ನು ಒಡೆದು ಪ್ರತ್ಯೇಕಿಸುವುದೂ, ಅದೇ ರೀತಿ ಅನಿಮಿಷಯ್ಯನ ಪ್ರಸಂಗದಿಂದ ಗೊಗ್ಗಯ್ಯನ ಪ್ರಸಂಗವನ್ನು ಪ್ರತ್ಯೇಕಿಸುವುದೂ ಅಪೇಕ್ಷಣೀಯವೆನಿಸುತ್ತದೆ. ೮. ಪ್ರತಿಯೊಂದು ಸಂಪಾದನೆಯನ್ನು ಸಿದ್ಧರಾಮಯ್ಯಗಳ ಸಂಪಾದನೆ, ಮರುಳಶಂಕರದೇವರ ಸಂಪಾದನೆ, ಆಯ್ದಕ್ಕಿ ಮಾರಯ್ಯಗಳ ಸಂಪಾದನೆಯೆಂದು ವ್ಯಕ್ತಿನಾಮದಿಂದ ಕರೆಯದೆ ತತ್ತ್ವನಾಮದಿಂದ ಲಿಂಗದೀಕ್ಷಾ ಸಂಪಾದನೆ, ಜಂಗಮದಾಸೋಹ ಸಂಪಾದನೆ, ಪ್ರಸಾದಮಹತ್ತ್ವ ಸಂಪಾದನೆ, ಕಾಯಕಯೋಗ ಸಂಪಾದನೆ ಎಂದು ಮುಂತಾಗಿ ಕರೆದಿದ್ದರೆ ಗ್ರಂಥಕ್ಕೆ ಇನ್ನೂ ತೂಕ ಬರುತ್ತಿತ್ತು. ೯. ಕೆಲವು ಸಂಪಾದನೆಗಳಿಗೆ ಮಾತ್ರ ಪರಿಚಯರೂಪದ 'ಪೂರ್ವಸಾಂಗತ್ಯ' ಎಂಬ ಭಿತ್ತಿಯನ್ನು ಕಲ್ಪಿಸಲಾಗಿದೆ. ಈ ಕ್ರಮವನ್ನು ಎಲ್ಲ ಸಂಪಾದನೆಗೂ ಅಳವಡಿಸುವುದು ಅವಶ್ಯವೆನಿಸುತ್ತದೆ. ೧೦. ಗೂಳೂರು ಸಂಪಾದನೆಯ ೨೧ ಪ್ರಕರಣಗಳಲ್ಲಿ ೧೫ಕ್ಕೆ ಸಂಪಾದನೆಗಳೆಂದೂ ಮಿಕ್ಕವುಗಳಿಗೆ ಪ್ರಥಮೋಪದೇಶ, ಸಿದ್ಧರಾಮೇಶ್ವರನ ಗುರುಕರುಣೆ, ಪ್ರಭುದೇವರ ಪೂಜಾಸ್ತುತಿ, ಪ್ರಭುದೇವರ ಆರೋಗಣೆ, ಶರಣರ ಅವಸಾನ ಪರಾಮರಿಕೆ ಎಂದೂ ಕೊನೆಯದಕ್ಕೆ 'ಗೋರಕ್ಷನ ಸಂಪಾದನೆ ಮತ್ತು ಎಲ್ಲಾ ಗಣಂಗಳ ಐಕ್ಯ' ಎಂದೂ ಕರೆದುದರಿಂದ ಪ್ರಕರಣ ನಾಮಕರಣದಲ್ಲಿ ಏಕರೂಪತೆಯ ಕೊರತೆ ಕಾಣುತ್ತದೆ. ೧೧. ಇಲ್ಲಿಯ ಇನ್ನೊಂದು ದೊಡ್ಡ ದೋಷವೆಂದರೆ ಪ್ರತಿಯೊಂದು ಸಂಪಾದನೆಯಲ್ಲಿ ಶರಣರು ಪರಸ್ಪರ ಪದೇಪದೇ ಸ್ತುತಿಸುವುದು. ಭೆಟ್ಟಿಯಾದ ಕೂಡಲೇ ಸ್ತುತಿ, ವಾದ, ಮುಗಿದ ಕೂಡಲೇ ಸ್ತುತಿ, ಕೆಲವೊಮ್ಮೆ ವಾದ ಮಧ್ಯದಲ್ಲಿಯೂ ಸ್ತುತಿ–ಹೀಗೆ ತೆರೆತೆರೆಯಾಗಿ ಬರುವ ಸ್ತುತಿಮಾಲೆ ಬೇಸರಹುಟ್ಟಿಸುತ್ತದೆ. ಸಂವಾದ ಗತಿಗೂ ಭಂಗ ತರುತ್ತದೆ. ಸೂಕ್ತವಾದವುಗಳನ್ನು ಇಟ್ಟುಕೊಂಡು ಮಿಕ್ಕ ಸ್ತುತಿಗಳನ್ನು ತೆಗೆದುಹಾಕಿದರೆ ಈ ಕೃತಿಯ ನಾಲ್ಕರಲ್ಲಿ ಒಂದು ಭಾಗದಷ್ಟು ಭಾರ ಕಡಿಮೆಯಾಗುತ್ತದೆ. ಹೀಗೆ ಘಟನೆ ಮತ್ತು ಅವುಗಳ ಸಂಘಟನೆಗಳ ರಚನೆಯಲ್ಲಿ ಅಸಂಗತಗಳು ಕಂಡುಬಂದರೂ ಒಟ್ಟು ಪರಿಣಾಮದಲ್ಲಿ ಇವು ಅಷ್ಟಾಗಿ ಗಮನಕ್ಕೆ ಬರುವುದಿಲ್ಲ. ಈ ಘಟನೆಗಳ ಗರ್ಭದಲ್ಲಿ ಅಳವಟ್ಟ ಪಾತ್ರಗಳ ರಚನೆಯ ಪರಿಶೀಲನೆಯೂ ಮಹತ್ತ್ವದ್ದಾಗಿದೆ.

ಪಾತ್ರ :

'ಶ್ರೀಕೃಷ್ಣಸಂಧಾನ ಪ್ರಸಂಗ'ದಲ್ಲಿ ಶ್ರೀಕೃಷ್ಣ, 'ಅಭಿಮನ್ಯು ಕಾಳಗಪ್ರಸಂಗ'ದಲ್ಲಿ ಅಭಿಮನ್ಯು ಪ್ರಧಾನಪಾತ್ರವಾಗಿರುವಂತೆ ಈ 'ಪ್ರಭುದೇವರ ಶೂನ್ಯಸಂಪಾದನ ಪ್ರಸಂಗ'ದಲ್ಲಿ ಪ್ರಭುದೇವನನ್ನೇ ಎಚ್ಚರಿಕೆಯಿಂದ ಕೇಂದ್ರಪಾತ್ರವಾಗಿ ನಡೆಸಿಕೊಂಡು ಹೋಗಿದ್ದಾರೆ, ಶೂನ್ಯಸಂಪಾದನಕಾರರು. ಇದಲ್ಲದೆ ಒಟ್ಟು ರಚನೆಯ ದೃಷ್ಟಿಯಿಂದ ಒಂದು 'ಪ್ರಸಂಗ'ದಲ್ಲಿ ಮಿಕ್ಕ ಪೂರಕಪಾತ್ರಗಳ, ಉಪಪಾತ್ರಗಳ ಪ್ರಮಾಣ ಮತ್ತು ಸ್ಥಾನವೇನಿರಬೇಕೆಂಬ ಪ್ರಜ್ಞೆ ಸಾಮಾನ್ಯವಾಗಿ ಎಲ್ಲ ಶೂನ್ಯಸಂಪಾದನಕಾರರಲ್ಲಿ ಸದಾ ಜಾಗೃತವಾಗಿದೆ. ಹೀಗಾಗಿ ಪ್ರಭುದೇವರ ಪಾತ್ರಕ್ಕೆ ಪ್ರಧಾನ ಸ್ಥಾನಕೊಟ್ಟಿದ್ದರೂ ಶರಣ ಚಳುವಳಿಯನ್ನು ನಿಲ್ಲದಂತೆ ಕೊಂಡೊಯ್ದ ಬಸವಣ್ಣ, ಚೆನ್ನಬಸವಣ್ಣ, ಮಾಚಿದೇವರೆಂಬ ಮುಖ್ಯರು ಪೂರಕಪಾತ್ರಗಳಂತೆ ಸಾಮಾನ್ಯವಾಗಿ ಎಲ್ಲ ಸಂಪಾದನೆಗಳಲ್ಲಿ, ಸೊಡ್ಡಳ ಬಾಚರಸ ಹಡಪದ ಅಪ್ಪಣ್ಣ ಮೊದಲಾದವರು ಉಪಪಾತ್ರಗಳಂತೆ ಕೆಲವು ಸಂಪಾದನೆಗಳಲ್ಲಿ ಭಾಗವಹಿಸುವಂತೆ ನೋಡಿಕೊಂಡುದು ಇವರ ಪಾತ್ರಗಳ ಪ್ರಮಾಣಪ್ರಜ್ಞೆಯ ದ್ಯೋತಕವಾಗಿದೆ.

ಈ ಸಂದರ್ಭದಲ್ಲಿ ಒಂದು ವಿಷಯವನ್ನು ಗಮನಿಸಬೇಕೆನಿಸುತ್ತದೆ. ಅದು: ಮೂಲದಲ್ಲಿ ಅಖಂಡವಾಗಿದ್ದ ಶೂನ್ಯಸಂಪಾದನೆಯನ್ನು ವಿಷಯವು ಮುಷ್ಟಿಗ್ರಾಹ್ಯವಾಗಲೆಂಬ ದೃಷ್ಟಿಯಿಂದ ೨೧ ಖಂಡಗಳನ್ನಾಗಿ ವಿಭಾಗಿಸಿ, ಒಂದೊಂದಕ್ಕೆ ನುಲಿಯ ಚಂದಯ್ಯಗಳ ಸಂಪಾದನೆ, ಆಯ್ದಕ್ಕಿ ಮಾರಯ್ಯಗಳ ಸಂಪಾದನೆ ಎಂದು ಮುಂತಾಗಿ ಶೀರ್ಷಿಕೆ ಕೊಟ್ಟವನು ಸಿದ್ಧವೀರಣ್ಣ (ಇಂಥ ಪ್ರಯತ್ನ ಹಲಗೆದೇವರಲ್ಲಿ ಆಗಾಗ ಕಂಡು ಬರುತ್ತದೆ). ಇದರಿಂದ ಶೂನ್ಯಸಂಪಾದನೆಯ ರಚನೆಯಲ್ಲಿ ಒಂದು ಶಿಸ್ತು ಪ್ರಾಪ್ತವಾಯಿತೆಂದು ಹೇಳಬಹುದಾದರೂ, ಒಂದೊಂದು ಸಂಪಾದನೆಯ ನಾಯಕರು ಎದ್ದು ಕಂಡು, ಅಲ್ಲಲ್ಲಿ ಅಡ್ಡ ನಿಂತಂತಾಗಿ ಪ್ರಭುದೇವರ ಪಾತ್ರದ ಅಖಂಡ ಪ್ರವಾಹದ ರಭಸ ತಗ್ಗಿದ ಅನುಭವವಾಗುತ್ತದೆ. ಎರಡನೆಯದಾಗಿ ಮೂಲತಃ ಅಲ್ಲಿ ಇಲ್ಲಿ ಎಲ್ಲಿಯೂ ಎದ್ದು ಕಾಣುತ್ತಲಿದ್ದ ಪ್ರಭುದೇವ ಹೊಸದಾಗಿ ಸೇರುತ್ತ ಹೋದ ನುಲಿಯ ಚಂದಯ್ಯ, ಆಯ್ದಕ್ಕಿ ಮಾರಯ್ಯ, ಘಟಿವಾಳಯ್ಯ, ಮೋಳಿಗಯ್ಯ ಮೊದಲಾದ ಪಾತ್ರಬಾಹುಳ್ಯದಿಂದಾಗಿ ಆತನು ವೇದಿಕೆಯ ಮೇಲೆ ಕಾಣಿಸಿಕೊಳ್ಳುವುದಕ್ಕೆ ಸ್ವಲ್ಪ ವ್ಯತ್ಯಯ ಉಂಟಾಯಿತೇನೋ. ಸಿದ್ಧವೀರಣ್ಣ ಸೇರಿಸಿದ ಮೋಳಿಗಯ್ಯಗಳ ಸಂಪಾದನೆಯಲ್ಲಿ ಪ್ರಭುದೇವರೇ ಇಲ್ಲವೆಂಬುದನ್ನು ನೋಡಿದರೆ ಶೂನ್ಯಸಂಪಾದನೆಗಳು ಬೆಳೆದಂತೆ ಪ್ರಭುದೇವಪಾತ್ರದ ಸಾಂದ್ರತೆ ಒಂದರ್ಥದಲ್ಲಿ ಕಡಿಮೆಯಾಗುತ್ತ ನಡೆದಿದೆ, ಒಂದರ್ಥದಲ್ಲಿ ಸಂದರ್ಶನ ಸಂಖ್ಯೆಗಳನ್ನು ಬೆಳೆಸಿಕೊಳ್ಳುತ್ತ ನಡೆದಿದೆ.

ಶೂನ್ಯಸಂಪಾದನೆಯಲ್ಲಿ ಆಮೇಲೆ ಸೇರಿಕೊಂಡ ಆಯ್ದಕ್ಕಿ ಮಾರಯ್ಯ, ನುಲಿಯ ಚಂದಯ್ಯ, ಮೋಳಿಗೆಯ ಮಾರಯ್ಯಗಳ ಪಾತ್ರಗಳಿಂದಾಗಿ ಕಾಯಕ, ದಾಸೋಹ, ಅಸಂಗ್ರಹ ತತ್ವಗಳು ಪ್ರವೇಶ ಪಡೆದು, ಶೂನ್ಯಸಂಪಾದನೆಯ ಆವೃತ್ತಿಗಳು ಕ್ರಮೇಣ ಧಾರ್ಮಿಕ ಮೌಲ್ಯಗಳಿಂದ ಸಾಮಾಜಿಕ ಮೌಲ್ಯಗಳತ್ತ ವಾಲುತ್ತ ಬಂದಿವೆ. ಇದಲ್ಲದೆ ಪ್ರಭುದೇವ, ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮರಂಥ ಅತಿರಥ–ಮಹಾರಥರ ಅನುಭಾವಗೋಷ್ಠಿಯಲ್ಲಿ ಬಡಕಾರ್ಮಿಕರು, ಸಾಮಾನ್ಯ ಹೆಣ್ಣುಮಕ್ಕಳು ಸೇರಿಕೊಂಡರೆಂಬಂತೆ ನುಲಿಯ ಚಂದಯ್ಯ, ಆಯ್ದಕ್ಕಿ ಮಾರಯ್ಯ, ಆಯ್ದಕ್ಕಿ ಲಕ್ಕಮ್ಮ, ಮೋಳಿಗೆಯ ಮಾರಯ್ಯರಂಥ ಬಡಕುಟುಂಬವರ್ಗದವರು ಸೇರಿರುವುದರಿಂದ ಶೂನ್ಯಸಂಪಾದನೆಯ ಪಾತ್ರವರ್ಗಕ್ಕೆ ಇನ್ನೂ ಸಂಕೀರ್ಣತೆ ಪ್ರಾಪ್ತವಾಗಿದೆ. ಇದಲ್ಲದೆ ಒಂದೊಂದು ಪಾತ್ರಗಳು ಕೇವಲ ಮಾತಿನಿಂದಲ್ಲ, ಕೃತಿಯಿಂದಲೂ ತಾವು ಯಾರೆಂಬುದನ್ನು ತೋರಿಸಿಕೊಡುತ್ತಿರುವಂತೆ ಗೊಗ್ಗಯ್ಯನ ಪಾತ್ರ ಕೃಷಿ ಮಾಡುತ್ತದೆ, ಮಡಿವಾಳಯ್ಯನ ಪಾತ್ರ ಬಟ್ಟೆತೊಳೆಯುತ್ತದೆ, ಚಂದಯ್ಯನ ಪಾತ್ರ ಹುಲ್ಲುಕೊಯ್ಯುತ್ತದೆ, ಸಿದ್ಧರಾಮನ ಪಾತ್ರ ಕೆರೆ ಕಟ್ಟಿಸುತ್ತದೆ. ಪ್ರಭುದೇವರ ಜಂಗಮಪಾತ್ರ ಸಂಚರಿಸುತ್ತದೆ, ಗೋರಕ್ಷನ ಪಾತ್ರ ವಜ್ರಕಾಯ ಪಡೆಯಲು ನಿರತವಾಗಿದೆ. ಈ ರೀತಿಯ ಕ್ರಿಯಾವೈವಿಧ್ಯತೆಯಿಂದಲೂ ಶೂನ್ಯಸಂಪಾದನೆಯ ಪಾತ್ರವರ್ಗ ಸಂಕೀರ್ಣಗೊಂಡಿದೆ.

ಶರಣರ ವಚನ ಸಾಮಗ್ರಿ :

ಶೂನ್ಯಸಂಪಾದನೆಯ ರಚನೆಗಾಗಿ ಬಳಸಿಕೊಂಡ ಇಟ್ಟಿಗೆ, ಗಾರೆ, ಗಚ್ಚುಗಳನ್ನು ಪ್ರಾಚೀನರಿಂದ ಎರವಲು ತಂದ 'ವಚನಸಾಮಗ್ರಿ', ಅದನ್ನು ಪ್ರಸಂಗಪ್ರಕಾರಕ್ಕೆ ಅಳವಡಿಸಲು ಸಂಪಾದನಕಾರ ಸೃಷ್ಟಿಸಿರುವ 'ಗದ್ಯಸಾಮಗ್ರಿ' ಎಂದು ವರ್ಗೀಕರಿಸಬಹುದು. ಶೂನ್ಯಸಂಪಾದನೆಯ ಕಟ್ಟಡ ದೃಷ್ಟಿಯಿಂದ

ಇವುಗಳಲ್ಲಿ ಯಾವುದು ಮುಖ್ಯ, ಯಾವುದು ಅಮುಖ್ಯವೆಂದು ಕೇಳುವುದು ಸಮಂಜಸವೆನಿಸುವುದಿಲ್ಲ. ಏಕೆಂದರೆ ಈ ಎರಡರಲ್ಲಿ ಒಂದು ಇಲ್ಲದಿದ್ದರೆ ಕೃತಿ ಕಟ್ಟಡವೇ ಮೇಲೇಳುತ್ತಿರಲಿಲ್ಲ.

ಇವುಗಳಲ್ಲಿ ವಚನಗಳನ್ನು ಕುರಿತು ಹೇಳುವುದಾದರೆ ಗಾತ್ರದಲ್ಲಿ ಕಿರಿಯವೂ ಅರ್ಥದಲ್ಲಿ ಸ್ವತಂತ್ರವೂ ಆಗಿರುವುದರಿಂದ ಇವು ಮೂಲತಃ ಮುಕ್ತಕಜಾತಿಗೆ ಸೇರುತ್ತವೆ. ಇವುಗಳನ್ನು ಬಿಡಿಯಾಗಿ ಓದಿದರೂ ಅರ್ಥವಿದೆ, ಒಂದು ಕ್ರಮದಲ್ಲಿ ಜೋಡಿಸಿ ಓದಿದರೂ ಆ ಅರ್ಥ ವಚನದಿಂದ ವಚನಕ್ಕೆ ಮುಂದುವರಿಯುತ್ತದೆ. ಸಂಕಲನಕಾರರು ಅದರ ಈ ಮುಕ್ತಕಗುಣವನ್ನು ಈ ಮೊದಲೆ ಕಂಡುಹಿಡಿದು, ಅವುಗಳನ್ನು ಬಳಸಿಕೊಂಡು ಶಾಸ್ತ್ರಕೃತಿಗಳನ್ನು ರೂಪಿಸಿದ್ದರು. ಆದರೆ ವಚನಗಳ ಇನ್ನೊಂದು ಗುಣವಾದ 'ಸಂಬೋಧನಶೈಲಿ'ಯನ್ನು ಕಂಡುಹಿಡಿದುದು ಸಂಪಾದನಕಾರರ ನವೀನ ಶೋಧವಾಗಿದೆ.

ಮುದ್ರಿಕೆ ಕಾರಣವಾಗಿ ಬಹುಶಃ ಎಲ್ಲ ವಚನಗಳು ಸಂಬೋಧನಶೈಲಿಯಲ್ಲಿವೆ. ಈ ಸಂಬೋಧನಶೈಲಿಯಲ್ಲಿ ತನಗೆ ತಾನು ಹೇಳಿಕೊಂಡ ಅಂದರೆ ಆತ್ಮಗತ, ತಾನು ಇನ್ನೊಬ್ಬರಿಗೆ ಹೇಳಿದ ಅಂದರೆ ಲೋಕಗತ ಎಂಬ ಎರಡು ರೀತಿಗಳು ಕಂಡುಬರುತ್ತವೆ. ಇಲ್ಲಿಯ ಆತ್ಮಗತ ಸಂಬೋಧನೆ ನಾಟಕದಲ್ಲಿಯ 'ಸ್ವಗತ'ದಂತೆ ತೋರಿಬರುತ್ತದೆ. ಲೋಕಗತ ಸಂಬೋಧನೆ ಒಬ್ಬ ವ್ಯಕ್ತಿಗೆ ಇಲ್ಲವೆ ಅನೇಕ ವ್ಯಕ್ತಿಗಳಿಗೆ ಅನ್ವಯಿಸುವುದಾಗಿದೆ. ಬೇಕೆಂದರೆ ಅಲ್ಪವ್ಯತ್ಯಾಸದಿಂದ ಲೋಕಗತ ಸಂಬೋಧನೆಯನ್ನು ಆತ್ಮಗತವಾಗಿ, ಆತ್ಮಗತ ಸಂಬೋಧನೆಯನ್ನು ಲೋಕಗತವಾಗಿ ತಿರುಗಿಸಿಕೊಳ್ಳುವ ಅವಕಾಶ ವಚನಗಳಲ್ಲಿದೆ. ಈ ಅಂಶವನ್ನು ಸಂಪಾದನಕಾರರು ಕಂಡುಹಿಡಿದುದು ಬಹುಮುಖ್ಯಸಂಗತಿಯಾಗಿದೆ. ಇಂಥ ವಚನಗಳನ್ನು ಸಂಕಲನಕಾರರಂತೆ ಒಂದರ ಹಿಂದೆ ಒಂದನ್ನು ನಿಲ್ಲಿಸಿ 'ನಿರೂಪಣ ವಿನ್ಯಾಸ'ವನ್ನು ಸಾಧಿಸದೆ, ಒಂದರ ಎದುರು ಇನ್ನೊಂದನ್ನು ನಿಲ್ಲಿಸಿ 'ಸಂವಾದ ವಿನ್ಯಾಸ'ವನ್ನು ಸಾಧಿಸಿದರು. ಈ ಸಂವಾದಮಂಥನದ ಮೂಲಕ ವೀರಶೈವತತ್ವಗಳನ್ನು ಒಂದೊಂದಾಗಿ ಸ್ಫೋಟಗೊಳಿಸುತ್ತ ನಡೆದರು.

ಸಂಪಾದನಕಾರರು ಬಳಸಿಕೊಂಡ ವಚನಗಳಲ್ಲಿ ಬಹುಶಃ ಮೆರಮಿಂಡದೇವ ಮೊದಲಾದವರು ಬಸವಾದಿಗಳ ಸಮಕಾಲೀನರಾಗಿರದಿದ್ದರೂ ಸಂವಾದಕ್ಕೆ ಹೊಂದುವವೆಂಬ ಕಾರಣದಿಂದಾಗಿ ಅವರ ವಚನಗಳನ್ನು ಬಳಸಿಕೊಂಡಿರಬಹುದು. ಆದುದರಿಂದ ಕಾಲದೃಷ್ಟಿಯಿಂದ ಸಂಗತವಲ್ಲದ, ಕಾಲದೃಷ್ಟಿಯಿಂದ ಸಂಗತವಾಗಿರುವ ಮತ್ತು ಸಂವಾದಕ್ಕೆ ಕೊರತೆಯೆನಿಸಿದಲ್ಲಿ ಸಂಪಾದಕರಿಂದ ಜನ್ಮಪಡೆದ ಹೀಗೆ ೩ ಬಗೆಯ ವಚನಗಳು ಇಲ್ಲಿವೆ.

ಈ ನಾಲ್ಕೂ ಸಂಪಾದನೆಗಳಲ್ಲಿ ಕ್ರಮವಾಗಿ ೯೫೯ ವಚನ ೧೧ ಹಾಡು, ೧೪೨೩ ವಚನ ೩೫ ಹಾಡು, ೧೩೩೭ ವಚನ ೧೮ ಹಾಡು, ೧೪೩೦ ವಚನ ೨೧ ಹಾಡುಗಳಿವೆ. ಇದರಿಂದ ಮೂಲ ಸಂಪಾದನೆ, ಸುಮಾರು ಮೂರರಲ್ಲಿ ಒಂದು ಪಾಲು ಮುಂದಿನ ಆವೃತ್ತಿಗಳಲ್ಲಿ ವರ್ಧಿಸಿವೆಯೆಂದು ಸ್ಪಷ್ಟವಾಗುತ್ತದೆ. ಇವುಗಳಲ್ಲಿ ಬರುವ ಪುನರುಕ್ತಿಗಳನ್ನು ಕಳೆದರೆ ಉಳಿಯುವ ನಾಲ್ಕೂ ಜನ ಸಂಪಾದನಕಾರರ ಒಟ್ಟು ವಚನ ಸಂಖ್ಯೆ ೨೦೩೧, ಒಟ್ಟು ಹಾಡುಗಳ ಸಂಖ್ಯೆ ೪೨. ಪ್ರಸಾದಿದೇವ ೧೬ ಜನ (೧ ಹಾಡು ಇರುವ ನೀಲಮ್ಮನನ್ನೂ ಪರಿಗಣಿಸಿದರೆ ೧೭ ಜನ) ವಚನಕಾರರ, ಹಲಗೆದೇವ ೩೫ ಜನ (೧ ಹಾಡು ಇರುವ ನೀಲಮ್ಮನ್ನೂ ಪರಿಗಣಿಸಿದರೆ ೩೬

ಜನ) ವಚನಕಾರರ, ಸಿದ್ಧಲಿಂಗ ೩೯ ಜನ ವಚನಕಾರರ, ಸಿದ್ಧವೀರಣ್ಣ ೩೫ ಜನ ವಚನಕಾರರ ವಚನಗಳನ್ನು ಸಂಗ್ರಹಿಸಿದ್ದಾರೆ.[೩೮]

ಎಡಿಟ್ ಮಾಡುವವನು ಎರವಲು ಪಡೆದ ಮೂಲಸಾಮಗ್ರಿಯನ್ನು ನೇರವಾಗಿ ಬಳಸಬಹುದು. ಅದರಲ್ಲಿ ವ್ಯತ್ಯಾಸ ಮಾಡಬಹುದು, ಇಲ್ಲವೆ ತಾನೇ ರಚಿಸಿದ ಸಾಮಗ್ರಿಯನ್ನು ಹೊಸದಾಗಿ ಸೇರಿಸಬಹುದು. ಶೂನ್ಯಸಂಪಾದನಕಾರರು ಈ ಮೂರು ಬಗೆಯ ಕೆಲಸಗಳನ್ನು ಮಾಡಿದ್ದಾರೆ. ಇಲ್ಲಿ ಕೆಲವು ಪ್ರಾಮಾಣಿಕ ವಚನಗಳಿವೆ. ಅಲ್ಲಲ್ಲಿ ಪಾಠವ್ಯತ್ಯಾಸಕ್ಕೆ ಗುರಿಯಾದ ವಚನಗಳೂ ಇವೆ. ಇಲ್ಲಿ ಉದ್ದೇಶಪೂರ್ವಕ (ಸದುದ್ದೇಶ ಪೂರ್ವಕ) ಮಾಡಿದ ಪಾಠವ್ಯತ್ಯಾಸವನ್ನು, ಹೊಸವಚನಗಳ ಪ್ರಮಾಣಗಳನ್ನು ಈಗ ನೋಡಬಹುದು. ರಚನೆಯ ದೃಷ್ಟಿಯಿಂದ ಮೂಲವಚನಗಳು ಆದಿ, ಮಧ್ಯ ಮತ್ತು ಅಂತ್ಯಗಳಲ್ಲಿ ಕೆಲವೊಮ್ಮೆ ಬದಲಾವಣೆ ಹೊಂದಿವೆ. ಆದಿಯಲ್ಲಿ ಬಹಳವೆಂದರೆ ಸಂಬೋಧನೆಗಾಗಿ ಅಯ್ಯಾ, ಎಲೆ ಅಯ್ಯ, ದೇವದೇವಾ, ಮಹಾಪ್ರಸಾದ, ದೇವ ದೇವಾ ಶರಣಾರ್ಥಿ, ಹೋ ಹೋ ಗುರುವೆ– ಇತ್ಯಾದಿ ಭಾಗಗಳು ಹೊಸದಾಗಿ ಸೇರಿವೆ. ಇದಕ್ಕಿಂತ ಹೆಚ್ಚು ವ್ಯತ್ಯಾಸಕ್ಕೆ ಗುರಿಯಾದುದೆಂದರೆ ವಚನಗಳ ಕೊನೆಯ ಭಾಗ. ಇನ್ನೊಬ್ಬರಿಗೆ ಕೇಳಬೇಕಾದ ಪ್ರಶ್ನೆಯಾಗಿ, ಕೊಡಬೇಕಾದ ಉತ್ತರವಾಗಿ ಮುಗಿಯಬೇಕಾಗಿರುವುದರಿಂದ ಇಲ್ಲಿ ವ್ಯತ್ಯಾಸಕ್ರಿಯೆ ಸಹಜವಾಗಿಯೇ ಅಧಿಕ. ಈಗ ಮುದ್ರಿಕೆಯ ಮಗ್ಗುಲಲ್ಲಿ ಸಂಬೋಧಿತ ವ್ಯಕ್ತಿಯ ಹೆಸರೂ, ಹೆಸರಿನ ಹಿಂದೆ ಇಲ್ಲವೆ ಮುಂದೆ ಕೆಲವು ಪೂರಕ ಮಾತುಗಳೂ ಸೇರಿಕೊಳ್ಳುತ್ತವೆ. ಉದಾ:"....... ತಾಯ ಮೊಲೆಹಾಲು ನಂಜಾಗಿ ಕೊಲುವೊಡೆ ಇನ್ನಾರಿಗೆ ದೂರುವೆನಯ್ಯಾ ಕೂಡಲಸಂಗಮದೇವಾ+ನೀನು ಮುನಿದರೆ ನಾನು ಸೈರಿಸಬಲ್ಲೆನೆ ಹೇಳು ಪ್ರಭುವೆ." ಇಂಥ ನೂರಾರು ಉದಾಹರಣೆಗಳು ಶೂನ್ಯಸಂಪಾದನೆಯಲ್ಲಿ ಸಿಗುತ್ತವೆ. ವಚನಗಳ ಮಧ್ಯದಲ್ಲಿಯೂ ಸೂಕ್ತವ್ಯತ್ಯಾಸ ಮಾಡಿಕೊಂಡುದಕ್ಕೆ ಉದಾಹರಣೆ:

> ಅರಸು ವಿಚಾರ, ಸಿರಿಯ ಸಿಂಗಾರ, ಸ್ಥಿರವಲ್ಲ ಮಾನವಾ.
> ಕೆಟ್ಟಿತ್ತು ಕಲ್ಯಾಣ ಹಾಳಾಯಿತ್ತು ನೋಡಾ.
> ಒಬ್ಬ ಜಂಗಮದ ಅಭಿಮಾನದಿಂದ ಚಾಳುಕ್ಯರಾಯನ ಆಳಿಕೆ
> ತೆಗೆಯಿತ್ತು, ಸಂದಿತ್ತು ಕೂಡಲಸಂಗಮದೇವಾ, ನಿಮ್ಮ ಕವಳಿಗೆಗೆ.

ಇಲ್ಲಿಯ "ಚಾಳುಕ್ಯರಾಯನ ಆಳಿಕೆ ತೆಗೆಯಿತ್ತು, ಸಂದಿತ್ತು" ಎಂಬ ವಾಕ್ಯಕ್ಕೆ ಬದಲು ಶೂನ್ಯಸಂಪಾದನೆಯಲ್ಲಿ "ಜಗದೇವ ಮೊಲ್ಲೆಬೊಮ್ಮಣ್ಣಗಳ ಕೈಯಲ್ಲಿ ಮಡಿದಿಹನು ಬಿಜ್ಜಳನು" ಎಂಬ ವಾಕ್ಯ ಸೇರಿಸಿಕೊಂಡಿದೆ. ಹೀಗೆ ರಚನೆಯ ಅನುಕೂಲಕ್ಕಾಗಿ ಇವರು ಮೂಲವಚನಗಳನ್ನು ಇಲ್ಲವೆ ವಚನದ ಭಾಗವನ್ನು ಲೋಪ, ಆಗಮ, ಆದೇಶ, ಸ್ಥಾನಪಲ್ಲಟಕ್ಕೆ ಗುರಿಮಾಡಿದ್ದಾರೆ. ಒಂದು ಮೂಲ ವಚನ ನಾಲ್ಕೂ ಶೂನ್ಯಸಂಪಾದನೆಗಳಲ್ಲಿ ಬಂದಿದ್ದರೆ ಮಹಾದೇವಯ್ಯಗಳದೇ ಒಂದು ರೀತಿ, ಮಿಕ್ಕವರದೇ ಒಂದು ರೀತಿ. ಮಹಾದೇವಯ್ಯಗಳ ಪಾಠ ಇದ್ದುದರಲ್ಲಿಯೇ ಹೆಚ್ಚು ವಿಶ್ವಸನೀಯ, ಮಿಕ್ಕವರ ಪಾಠ ಹೆಚ್ಚು ವ್ಯತ್ಯಾಸಮಯ.

---

೩೮. ಶಿವಗಣಪ್ರಸಾದಿ ಮಹಾದೇವಯ್ಯಗಳ ಶೂನ್ಯಸಂಪಾದನೆ (ಸಂ. ಡಾ. ಆರ್. ಸಿ. ಹಿರೇಮಠ) ಪ್ರಸ್ತಾವನೆಯಿಂದ.

ಶೂನ್ಯಸಂಪಾದನೆಗಳಲ್ಲಿ ನಡೆದ ಇದಕ್ಕಿಂತ ದೊಡ್ಡ ಸಾಹಸವೆಂದರೆ ಹೊಸ ವಚನಗಳನ್ನು ಕಟ್ಟಿ ಸೇರಿಸಿದುದು ಆಗಿರಬಹುದು. ಪುನರುಕ್ತಿಗಳನ್ನು ಬಿಟ್ಟರೆ ನಾಲ್ಕೂ ಶೂನ್ಯಸಂಪಾದನೆಗಳು ಸೇರಿ, ಬಸವಣ್ಣನವರ ೩೦೦ ವಚನಗಳನ್ನು ಬಳಸಿಕೊಂಡಿವೆ. ಇವುಗಳಲ್ಲಿ ೨೦೦ ವಚನಗಳು ಬೇರೆ ಯಾವ ಪ್ರಾಚೀನ ಸಂಗ್ರಹದಲ್ಲಿಯೂ ಸಿಗದೆ ಕೇವಲ ಶೂನ್ಯಸಂಪಾದನೆಗಳಲ್ಲಿಯೇ ಕಾಣುತ್ತವೆ. ಇವು ಇವರಿಗೆ ಎಲ್ಲಿಂದ ಸಿಕ್ಕವು? ಬೇರೆಯವರಿಗೆ ಏಕೆ ಸಿಗಲಿಲ್ಲ ಈ ಪ್ರಶ್ನೆಗೆ ಉತ್ತರ: ಬಹುಶಃ ಸಂಪಾದನಕಾರರೇ ಕಟ್ಟಿದ ವಚನಗಳಿವು. ಹೀಗೆ ಬಸವಣ್ಣನವರ ೩೦೦ ವಚನಗಳಲ್ಲಿ ೨೦೦ ವಚನಗಳು ಸಂಪಾದನಕಾರರ ಸೃಷ್ಟಿಯಾಗಿರುವುದು ನಿಜವಿದ್ದರೆ ಶೂನ್ಯಸಂಪಾದನೆಯು ಮೂರರಲ್ಲಿ ಎರಡು ಪಾಲು ಕೂಟವಚನಗಳನ್ನೊಳಗೊಂಡಿದೆ-ಎಂಬ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ಶೂನ್ಯಸಂಪಾದನಕಾರರು 'ಧರ್ಮಸೇವೆ' ಎಂದು ಭಯಭಕ್ತಿಯಿಂದ ಈ ಕೆಲಸವನ್ನು ಮಾಡಿದ್ದರೂ ಆಧುನಿಕ ಗ್ರಂಥಸಂಪಾದನಕಾರರಿಗೆ ಇದು ಭಯ ಹುಟ್ಟಿಸುವ ವಿಷಯವಾಗಿದೆ. ಇದೇ ರೀತಿ ಕೇವಲ ಪ್ರಶ್ನೋತ್ತರ ಸಂದರ್ಭವನ್ನು ಪ್ರತಿನಿಧಿಸುವವೂ ಕೂಟ ವಚನಗಳೇ ಆಗಿರಬಹುದು. ಉದಾ:

> ಕೆರೆಯ ಕಟ್ಟಿಸುವ ಒಡ್ಡನ ಪ್ರತಾಪವನೇನೆಂಬೆನಯ್ಯಾ ?
> ನೆಲನನಗೆದು ಜಲವ ಮೊಗೆದೆನೆಂಬ ಬಳಲಿಕೆಯ ನೋಡಾ.
> ಒಂದು ಕಲ್ಲನೆ ಕಡೆದು ಮತ್ತೊಂದು ಕಲ್ಲಿಗೆ ಭೋಗವ
> ಕೊಟ್ಟಿಹೆನೆಂಬ ಅಜ್ಞಾನವಿದೇನೋ ಗುಹೇಶ್ವರಾ,
> ಈ ಇರವಿನ ಪರಿಗೆ ಬೆರಗಾದೆನು.

ಕಟ್ಟುತ್ತಲಿರುವ ಕೆರೆಯ ದಂಡೆಯ ಮೇಲೆ ನಿಂತು ಆಡಿದ ಮಾತೆನಿಸುವ ಇಂಥ ವಚನಗಳು, ಸಂಪಾದನಕಾರರ ಸಮಯೋಚಿತ ಸೃಷ್ಟಿಗಳೇನೋ ಎನಿಸುತ್ತವೆ. ಇದೇ ರೀತಿ ಕಲ್ಯಾಣಪುರದ ಮಹಾತ್ಮೆಯನ್ನು ಸಾರುವ ೪ ಪುಟದ ಚೆನ್ನಬಸವಣ್ಣನವರ ವಚನವೂ ಸಂಪಾದನಕಾರರ ಸೃಷ್ಟಿಯೇ ಆಗಿರಬಹುದು. ಹೀಗೆ ಹೊಸದಾಗಿ ಕಟ್ಟಿ ಸೇರಿಸಿದ ವಚನಗಳಾದರೂ ಇವು ಲಿಂಗಾಯತತತ್ವಕ್ಕೆ ವಿರುದ್ಧವಾಗಿಲ್ಲವೆಂಬುದು ಗಮನಿಸಬೇಕಾದ ಅಂಶವಾಗಿದೆ. ಇವುಗಳಲ್ಲಿ ಉತ್ತಮೋತ್ತಮ ವಚನಗಳೂ ಇರುವುದನ್ನು ನೆನೆದರೆ ಇವರ ಸೃಜನಶೀಲ ಪ್ರತಿಭೆ ಉತ್ತಮ ದರ್ಜೆಯದೆಂದು, ತಮ್ಮ ಪ್ರತಿಭೆಯನ್ನು ಶರಣರ ಹೆಸರಿನಲ್ಲಿ ಪ್ರಕಟಿಸಿದ ಇವರ ತ್ಯಾಗಗುಣ ಶ್ಲಾಘನೀಯವೆಂದು ಹೇಳಬಹುದಾದರೂ ಶೂನ್ಯಸಂಪಾದನೆಯ ರಚನೆಗಾಗಿ ಇವರು ಮಾಡಿಕೊಂಡ ವಚನಗಳ ಪಾಠ ವ್ಯತ್ಯಾಸ, ಕೂಟವಚನಗಳ ಸೃಷ್ಟಿ ಒಂದು ದೃಷ್ಟಿಯಿಂದ ದೊಡ್ಡ ಅನ್ಯಾಯವೆಂದೇ ಹೇಳಬೇಕು.

ಸಂಪಾದನಕಾರರ ಗದ್ಯ :

ಶೂನ್ಯಸಂಪಾದನೆಯ ರಚನೆಗಾಗಿ ಬಳಸಿದ ಸಾಮಗ್ರಿಯಲ್ಲಿ ಶರಣರ ವಚನಗಳನ್ನು ಬಿಟ್ಟರೆ ಉಳಿಯುವ ಭಾಗ ಸಂಪಾದನಕಾರರ ಗದ್ಯ. ಶೂನ್ಯಸಂಪಾದನೆಯ ಬಳ್ಳಿ ಹಬ್ಬಿದುದೇ ಇವರ ಗದ್ಯ ಹಂದರದ ಮೇಲೆ. ಈ ಗದ್ಯ ಸಂಪಾದನಕಾರರ ಸ್ವಂತಪಾಲು. ಇದು ಚರಿತ್ರೆಯನ್ನು

ನಿರೂಪಿಸುವ, ಘಟನೆಗಳನ್ನು ರೂಪಿಸುವ, ಪಾಠಾಂತರ ರೂಪದಲ್ಲಿ ಸೇರಿ ವಚನಗಳನ್ನು ತಕ್ಕ ಸಂದರ್ಭಕ್ಕೆ ತಿರುಗಿಸಿಕೊಳ್ಳುವ, ಸಂಭಾಷಣೆಗೆ ಕೊಂಡಿಯಾಗುವ ರೀತಿಗಳಲ್ಲಿ ಕೆಲಸಮಾಡಿದೆ.

ಶೂನ್ಯಸಂಪಾದನೆಗಳ ಎಡಿಟಿಂಗ್ ಕ್ರಿಯೆಗೆ ಸಂಬಂಧಿಸಿದಂತೆ ಹೊಸ 'ಸಂಪಾದನೆ'ಗಳ ಜೋಡಣೆಯನ್ನು ಬಿಟ್ಟರೆ ಎದ್ದು ಕಾಣುವ ಕೆಲಸ, ಇಲ್ಲಿಯ ಚರಿತ್ರೆಗೆ ಸಂಬಂಧಿಸಿದುದು. ಸಂಪಾದನಕಾರರು ಇದ್ದ ಚರಿತ್ರೆಯನ್ನು ಬಳಸಿಕೊಳ್ಳುವುದರ ಜೊತೆ ಅದನ್ನು ತಮ್ಮ ಮೂಗಿನ ನೇರಕ್ಕೆ ರೂಪಿಸಿಕೊಳ್ಳುವ ಕೆಲಸವನ್ನೂ ಮಾಡಿರುವುದರಿಂದ ಶೂನ್ಯಸಂಪಾದನೆಗಳ ರಚನೆಯ ಮೇಲೆಯೂ ಇದು ಮುಖ್ಯ ಪರಿಣಾಮ ಬೀರಿದೆ. ದೇವಲೋಕದಲ್ಲಿ ರುದ್ರಕನ್ನಿಕೆಗೆ ಮನಸೋತ ಕಾರಣ ನಿರ್ಮಾಯಗಣೇಶ್ವರನು ಮರ್ತ್ಯಲೋಕದಲ್ಲಿ ಅಲ್ಲಮನಾಗಿ ಹುಟ್ಟಿ ಕಾಮಲತೆಯ ಕೈಹಿಡಿದನೆಂಬ ಮಹಾದೇವಯ್ಯ, ಹಲಗೆದೇವರ ಕಥೆಯನ್ನು ಮುಂದಿನವರು ಕೈಬಿಟ್ಟ ಕಾರಣ, "ಅವಳ ನೋಟವೆನ್ನ ಮರ್ತ್ಯಕ್ಕೆ ತಂದಿತ್ತು" ಎಂಬ ವಚನವನ್ನೂ ಕೈಬಿಟ್ಟಿದ್ದಾರೆ. ಶರಣರ ಚರಿತ್ರೆ ಶೂನ್ಯಸಂಪಾದನೆಯ ರಚನೆಯನ್ನು ನಿಯಂತ್ರಿಸುತ್ತಿರುವುದಕ್ಕೆ ಇದು ನಿದರ್ಶನವೆನಿಸಿದೆ.

ಶರಣರ ಚರಿತ್ರೆಯ ವಿಷಯವಾಗಿ ಈ ಶೂನ್ಯಸಂಪಾದನಕಾರರಲ್ಲಿಯೇ ತೀವ್ರ ಭಿನ್ನಾಭಿಪ್ರಾಯವಿದೆ. ಏಕೆಂದರೆ ಇವರ ಕಾಲಕ್ಕಾಗಲೇ ಶರಣರ ಜೀವನ ಚರಿತ್ರೆಗಳು ಅನೇಕ ವೈರುಧ್ಯಗಳ ರೆಂಬೆಕೊಂಬೆಗಳನ್ನು ಮೂಡಿಸಿಕೊಂಡಿದ್ದವು. ಮೊದಲಿನ ಶೂನ್ಯಸಂಪಾದನಕಾರನಿಗೆ ಚರಿತ್ರೆ ಅಷ್ಟು ಮುಖ್ಯವಲ್ಲದಿದ್ದರೂ ಅದನ್ನು ಬಹು ಮಟ್ಟಿಗೆ ವಾಸ್ತವವಾಗಿ ರೇಖಿಸಿದ್ದಾನೆ. ಆದರೆ ಮುಂದೆ ಬಂದ ಹಲಗೆದೇವ ಒಬ್ಬ ಪುರಾಣಿಕನಂತೆ ಅದನ್ನು ಅಲ್ಲಲ್ಲಿ ಅವಾಸ್ತವಗೊಳಿಸಿದ್ದಾನೆ. ಇದರಲ್ಲಿ ಒಬ್ಬನದು ಕಟುಸತ್ಯ, ಇನ್ನೊಬ್ಬನದು ಕಟು ಅಸತ್ಯ. ಎರಡೂ ಬಗೆಯ ಈ 'ಕಟು'ಗಳನ್ನು 'ಮಧುರ' ಮಾಡಿದವ ಗುಮ್ಮಳಾಪುರ ಸಿದ್ಧಲಿಂಗ. ಇವನ ಆದರ್ಶದಲ್ಲಿಯೇ ಇನ್ನೂ ಒಂದೆರಡು ಚರಿತ್ರೆಯ ಹೊಸ ಗೆರೆಗಳನ್ನು ಸೇರಿಸಿದ್ದಾನೆ, ಗೂಳೂರು ಸಿದ್ಧವೀರಣ್ಣ. ಒಟ್ಟಿನಲ್ಲಿ ಶೂನ್ಯಸಂಪಾದನೆಗಳಲ್ಲಿಯ ಚರಿತ್ರೆಯೆಂಬುದು ತಮಗೆ ಅಸಂಗತವೆನಿಸಿದುದನ್ನು ಸಂಗತಗೊಳಿಸುವ ಮತೀಯ ಚರಿತ್ರೆಕಾರರ ಧೋರಣೆಯಲ್ಲಿ ಬೆಳೆದುಬಂದಿದೆ. ಇದರ ಫಲವೆಂಬಂತೆ ಪ್ರಭುದೇವನ ಜನನ-ಜೀವನಗಳ ವಿಷಯವಾಗಿ ಮಹದೇವಯ್ಯ, ಹಲಗೆದೇವರು ಸ್ವೀಕರಿಸಿದ ಹರಿಹರನ ಕಥೆಯನ್ನು ಧಿಕ್ಕರಿಸಿ, ಸಿದ್ಧಲಿಂಗ ಮತ್ತು ಸಿದ್ಧವೀರಣ್ಣ ಚಾಮರಸನ ಕಥೆಯನ್ನು ಸ್ವೀಕರಿಸಿದರು. ಅದೇ ರೀತಿ ಬಸವಣ್ಣನವರ ಜನನಕ್ಕೆ ಸಂಬಂಧಿಸಿದಂತೆ ಮೊದಲಿನ ಇಬ್ಬರು ಹೇಳಿದ ಸಿಂಗಿರಾಜನ ಕಥೆಯನ್ನು ಕೈಬಿಟ್ಟು, ಭೀಮಕವಿಯ ಕಥೆಯನ್ನು ಎತ್ತಿಕೊಂಡರು. ಹಲಗೆದೇವ ಹೇಳಿದ ಸಿದ್ಧರಾಮನು ವಿಷ್ಣುವಿನ ಅವತಾರವೆಂಬ ಅಸಂಬದ್ಧ ಕಥೆಯನ್ನು ಇಡಿಯಾಗಿ ಮುಂದಿನ ಇಬ್ಬರೂ ಕೈಬಿಟ್ಟಿದ್ದಾರೆ. ಅದೇ ಹಲಗೆದೇವ ಹೇಳಿದ ನಾಗಾಯಕ್ಕ-ಚೆನ್ನಬಸವಣ್ಣನವರ ಪೂರ್ವಸಾಂಗತ್ಯ, ಮಹಾದೇವಿಯಕ್ಕ-ಕಿನ್ನರಿ ಬ್ರಹ್ಮಯ್ಯನವರ ಪ್ರಸಂಗಗಳಲ್ಲಿಯ ಅಸಂಗತಗಳನ್ನು ಇವರಿಬ್ಬರೂ ತೆಗೆದುಹಾಕಿದ್ದಾರೆ. ಅಜಗಣ್ಣನ ಪೂರ್ವಸಾಂಗತ್ಯವನ್ನು ಇಡಿಯಾಗಿ ಕೈಬಿಟ್ಟಿದ್ದಾರೆ. ಹರಳಯ್ಯ ಮಧುವಯ್ಯಗಳ, ಜಗದೇವ ಮೊಲ್ಲಿಬೊಮ್ಮಣ್ಣಗಳ ಪ್ರಸ್ತಾಪ ಸಿದ್ಧಲಿಂಗ, ಸಿದ್ಧವೀರಣ್ಣರಲ್ಲಿ ಹೊಸದಾಗಿ ಬಂದಿದೆ. ಗೊಗ್ಗಯ್ಯಗಳ ಬೋಧೆ, ನೀಲಾಂಬಿಕೆಯ ಲಿಂಗೈಕ್ಯಗಳನ್ನು ಸಿದ್ಧವೀರಣ್ಣ ಹೊಸದಾಗಿ ಸೇರಿಸಿದ್ದಾನೆ. ಇವಲ್ಲದೆ ಅಲ್ಲಲ್ಲಿ ಕಂಡುಬರುವ ಪ್ರಭುವಿನ ತಂದೆ ನಾಗವಾಸಾಧಿಪತಿ, ಮಹಾದೇವಿಯ ಗುರು ಪಂಡಿತಾರಾಧ್ಯ

(ಹಲಗೆದೇವ) 'ಬಸವಣ್ಣನಿಂ ಕಿರಿಯಳಪ್ಪ ನಾಗಲಾಂಬಿಕೆ' ಇತ್ಯಾದಿ ತುಣುಕುಗಳು ಅಭ್ಯಾಸ ಯೋಗ್ಯವಾಗಿವೆ. ಶೂನ್ಯಸಂಪಾದನೆಯಲ್ಲಿ ಅಡಕಗೊಂಡ ಚರಿತ್ರೆಯ ವಿಷಯವಾಗಿ ಸಂಪಾದನಕಾರರು ನಡೆದುಕೊಂಡ ರೀತಿಯಿದು.

ಕೆಲವೊಮ್ಮೆ ಇವರ ಗದ್ಯದಿಂದಾಗಿ ಶೂನ್ಯಸಂಪಾದನೆಗಳಲ್ಲಿ ಘಟನೆಗಳು ಸೃಷ್ಟಿಯಾಗುತ್ತವೆ ಮತ್ತು ಮುನ್ನಡೆಯುತ್ತವೆ. ಉದಾ: ಈ ಬಿನ್ನಪಕ್ಕೆ ಪ್ರಭುದೇವರು ಮೆಚ್ಚಿ, ಸಿದ್ಧರಾಮಯ್ಯದೇವರ ಕೈವಿಡಿದುಕೊಂಡು ಏಕಾಂತ ಸಮಾಧಿ ಸ್ಥಳಕ್ಕೆ ಬಿಜಯಂಗೈದ ಪ್ರಸ್ತಾವದ ವಚನ. ಇಲ್ಲಿ ಪ್ರಭುದೇವರು ಸಿದ್ಧರಾಮಯ್ಯನ ಕೈಹಿಡಿದ, ಕರೆದುಕೊಂಡು ಹೋದ, ಏಕಾಂತ ಸಮಾಧಿಸ್ಥಳಕ್ಕೆ ಬಂದ ಕ್ರಿಯೆ-ಚಲನೆಗಳಿಂದಾಗಿ ಶೂನ್ಯಸಂಪಾದನೆಯಲ್ಲಿ ಒಂದು ಘಟನೆ ಉದ್ಭವಿಸುತ್ತದೆ ಮತ್ತು ಅದು ಮುನ್ನಡೆಯುತ್ತದೆ. ಇಂಥ ಸೂಚನಾತ್ಮಕ ಗದ್ಯಗಳು ಕೃತಿರಚನೆಯಲ್ಲಿ ಎಷ್ಟು ಮುಖ್ಯವೆಂಬುದನ್ನು ಬೇರೆ ಹೇಳಬೇಕಿಲ್ಲ. ಇದೇ ರೀತಿ "ಎನ್ನ ತಪ್ಪು ಅನಂತಕೋಟಿ, ನಿಮ್ಮ ಸೈರಣೆಗೆ ಲೆಕ್ಕವಿಲ್ಲವಯ್ಯ. ಇನ್ನು ತಪ್ಪಿದೆನಾದರೆ ನಿಮ್ಮ ಪಾದವೆ ದಿವ್ಯ, ಕೂಡಲಸಂಗಮದೇವಯ್ಯ, ನಿಮ್ಮ ಪ್ರಥಮರ ಮುಂದೆ ಕಿನ್ನರ ಬೊಮ್ಮಣ್ಣಂಗಳ ಪಾದವೆ ಸಾಕ್ಷಿ" ಎಂಬಂತೆ ವಚನದ ಒಡಲಲ್ಲಿಯೇ ತನ್ನ ಗದ್ಯವನ್ನು ಸೇರಿಸುವ ಮೂಲಕ ಕಿನ್ನರಿ ಬೊಮ್ಮಣ್ಣನಿಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟು, ಕಥೆಯ ದಿಕ್ಕನ್ನು ಬದಲಿಸುತ್ತಾನೆ, ಸಂಪಾದನಕಾರ. ಇದಕ್ಕೆ ಹೆಚ್ಚಿನದಾಗಿ 'ಮತ್ತಂ' ಎಂಬ ಅಧಿಕ ಶಬ್ದದಿಂದ ಒಬ್ಬನ ಅನೇಕ ವಚನಗಳನ್ನು ಬೆಸೆಯುತ್ತಾನೆ. "ಇದಕ್ಕೆ ಅಕ್ಕಗಳ ಬಿನ್ನಪ, ಇದಕ್ಕೆ ಬಸವರಾಜದೇವರು ನಿರೂಪಿಸಿದ ವಚನ, ಇದಕ್ಕೆ ಮಹಾದೇವಿಯಕ್ಕಗಳು ಬಿನ್ನೈಸಿದ ಪ್ರತ್ಯುತ್ತರ" ಎಂಬಂಥ ಪ್ರತ್ಯೇಕ ವಾಕ್ಯಗಳಿಂದ ಪ್ರಶ್ನೋತ್ತರವನ್ನು ಮುನ್ನಡೆಸುತ್ತಾನೆ. ಗಟ್ಟಿವಾಳಯ್ಯನ ಮೇಲೆ ಸಿಟ್ಟಿಗೆದ್ದ ಎಲ್ಲ ಜಂಗಮರು ಸೇರಿ "ಅಂಬುತಾಗಿಪೆನೆಂದಡೆ ಧನುವಿನ ಸಂಗದಿಂದಲ್ಲದೆ ತಾಗದು. ಹಣ್ಣು ಸವಿಯೆಂದಡೆ ವೃಕ್ಷದ ಶಾಖೆಯ ಸಂಗದಿಂದಲ್ಲದೆ ಬೆಳೆಯದು. ಲಿಂಗವನರಿತೆನೆಂದು ಶರಣರ ಸಂಗವ ಬಿಟ್ಟಡೆ ಅದು ಎದೆಯಲ್ಲಿ ನಿಂದ ನಂಜು ಕಾಣಾ ಭಂಗಿತನಾದವನೆ" ಎಂದು ಸಾಮೂಹಿಕವಾಗಿ ಕೂಗಿ ಅವನನ್ನು ಧಿಕ್ಕರಿಸುತ್ತಾರೆ. ತಾನು ಸೃಷ್ಟಿಸಿದ ಇಂಥ ವಾಕ್ಯಗಳನ್ನು ಸಂಪಾದನಕಾರ "ಸಮಯದ ವಾಕ್ಯ" ಎಂದು ಕರೆದಿದ್ದಾನೆ. ಇಂಥಲ್ಲಿ ಶೂನ್ಯಸಂಪಾದನೆ ವ್ಯಕ್ತಿಯೊಬ್ಬನು ಸಮೂಹದೊಂದಿಗೆ ನಡೆಸುವ ಸಂವಾದವಾಗಿ ತಿರುವು ಪಡೆಯುತ್ತದೆ. ಹೀಗೆ ಶೂನ್ಯಸಂಪಾದನೆಗಳ ಒಡಲಲ್ಲಿ ನಿರ್ದೇಶನ ರೂಪದಿಂದ ಕೆಲಸಮಾಡುತ್ತಲಿರುವ ಸಂಪಾದನಕಾರರ ಗದ್ಯದ ರಚನೆ ಒಂದು ಪ್ರತ್ಯೇಕ ಅಭ್ಯಾಸದ ವಸ್ತುವೇ ಆಗಿದೆ. ಇದಲ್ಲದೆ (ಮಹಾದೇವಿಯಕ್ಕ) "ಕೌಶಿಕನೆಂಬ ರಾಯಗೆ ವಧುವಾಗಿ, ನೀರು-ತಾವರೆಯಂತೆ, ಕಣ್ಣು-ಕಾಡಿಗೆಯಂತೆ, ನೆಯಿ-ನಾಲಗೆಯಂತೆ, ಗಾಳಿ-ಧೂಳಿನಂತೆ ಆ ಸಂಸಾರದೊಳಗಿದ್ದೂ ಇಲ್ಲದೆ" ಜೀವನ ನಡೆಸಿದಳೆಂಬಂಥ ಮಾತುಗಳ ಸಾಹಿತ್ಯಿಕ ಸೌಂದರ್ಯವನ್ನೂ ಗಮನಿಸಬಹುದಾಗಿದೆ.

ಹೀಗೆ ಶೂನ್ಯಸಂಪಾದನೆಗಳಲ್ಲಿ ಬಂದ ಸ್ಥಳದೃಶ್ಯಗಳು, ಈ ದೃಶ್ಯಗಳಲ್ಲಿ ಜರುಗಿದ ಘಟನೆಗಳು, ಘಟನೆಗಳಲ್ಲಿ ಸಮಾವೇಶವಾದ ಪಾತ್ರಗಳು, ಪಾತ್ರಗಳು ವ್ಯಕ್ತಪಡಿಸುವ ವಚನಗಳು, ಇವೆಲ್ಲವನ್ನು ಸಂಘಟಿಸಿದ ಸಂಪಾದನಕಾರರ ಗದ್ಯ-ಇವೆಲ್ಲವುಗಳ ರಾಚನಿಕ ಅಧ್ಯಯನ ಮಹತ್ವಪೂರ್ಣವೆಂದು ಬೇರೆ ಹೇಳಬೇಕಿಲ್ಲ.

ಸೂಚನೆ :

ಈ ವರೆಗೆ ಎತ್ತಿತೋರಿಸಿದ ಉತ್ತಮ, ಅನುತ್ತಮಾಂಶಗಳ ಹಿನ್ನೆಲೆಯಲ್ಲಿ ಶೂನ್ಯಸಂಪಾದನೆಯನ್ನು ಈಗ ೫ನೆಯ ಸಲ ಮತ್ತೊಮ್ಮೆ ಪುನರ್‌ರಚಿಸುವುದು ಅಗತ್ಯವಾಗಿದೆ. ಇದ್ದವುಗಳಲ್ಲಿಯೇ ಉತ್ತಮವಾಗಿರುವ ಸಿದ್ಧವೀರಣ್ಣನ ಸಂಪಾದನೆಯನ್ನೇ ಆಧಾರಪ್ರತಿಯನ್ನಾಗಿ ಇಟ್ಟುಕೊಂಡು, ವೀರಶೈವ ಬೈಬಲ್ ಆಗುವಂತೆ ಈ ಕಾರ್ಯವನ್ನು ಪೂರೈಸಬೇಕಾಗಿದೆ. ಹೀಗೆ ಮಾಡುವಾಗ ಅದು ತತ್ವಕ್ಕೆ ತತ್ವ, ಚರಿತ್ರೆಗೆ ಚರಿತ್ರೆ, ಸಾಹಿತ್ಯಕ್ಕೆ ಸಾಹಿತ್ಯವಾಗುವಂತೆ ನೋಡಿಕೊಳ್ಳಬೇಕು. ಈ ಉಪಕ್ರಮದಿಂದಾಗಿ ಇದು ಆಚಾರ್ಯರ ಪ್ರಮಾಣ ಗ್ರಂಥವೆನಿಸದೆ, ಪ್ರವಾದಿಗಳ ಪ್ರಮಾಣಗ್ರಂಥವೆನಿಸಬೇಕೆಂಬುದನ್ನು ಇಲ್ಲಿ ಮರೆಯಬಾರದು.

ಲಿಂಗಾಯತಕ್ಕೆ ಒಂದು ಸರ್ವಸಮಗ್ರ ಪ್ರಮಾಣಗ್ರಂಥವಿಲ್ಲವೆಂಬ ಮಾತು ಬಹಳ ದಿನಗಳಿಂದ ಕೇಳಿಬರುತ್ತದೆ. ಅದನ್ನು ವಚನಗಳ ಸಹಾಯದಿಂದಲೇ ಕಟ್ಟುವುದು ಸೂಕ್ತ, ಕಟ್ಟಲು ಸಾಧ್ಯವೆಂಬುದು ಎಲ್ಲರಿಗೂ ಗೊತ್ತು. ಆದುದರಿಂದ ಸಹಸ್ರಾರು ವಚನಗಳನ್ನು ಕಣ್ಣುಮುಂದೆ ಹರಡಿಕೊಂಡು ಅವುಗಳ ಒಡಲಲ್ಲಿ ಧ್ವನಿಸುವ ಜೀವನದ ಸಕಲಮೌಲ್ಯಗಳನ್ನು ಸೂಕ್ಷ್ಮವಾಗಿ ಶೋಧಿಸಿ, ಒಂದೊಂದು ಮೌಲ್ಯದ ಸುತ್ತ ಒಂದೊಂದು ಸಂಪಾದನೆಯನ್ನು ಸಂವಾದಶೈಲಿಯಲ್ಲಿ ಬೆಳೆಸಬೇಕು. ಹೀಗೆ ಮಾಡುವಾಗ ವೀರಶೈವ ಮೂಲಭೂತತತ್ವಗಳನ್ನು ಭಕ್ತಿಸಂಪಾದನೆ, ಜ್ಞಾನಸಂಪಾದನೆ, ಕ್ರಿಯಾಸಂಪಾದನೆ, ಗುರುಸೇವಾಸಂಪಾದನೆ, ಲಿಂಗಪೂಜಾ ಸಂಪಾದನೆ, ಜಂಗಮದಾಸೋಹ ಸಂಪಾದನೆ ಹೀಗೆ ತತ್ವದ ಹೆಸರಿಟ್ಟು ಕರೆದು, ಅವುಗಳನ್ನು ಆಧುನಿಕ ದೃಷ್ಟಿಕೋನದಿಂದ ಸಂವಾದಕ್ಕೆ ಒಡ್ಡಬೇಕು. ಇದಲ್ಲದೆ ಇಂದು ಚಲಾವಣೆಯಲ್ಲಿರುವ ಮೌಲ್ಯಗಳಿಗೂ ಮಹತ್ವಕೊಟ್ಟು ವರ್ಣಭೇದನಿರಸನ ಸಂಪಾದನೆ, ವರ್ಗಭೇದನಿರಸನ ಸಂಪಾದನೆ, ಲಿಂಗಭೇದನಿರಸನ ಸಂಪಾದನೆ, ವ್ಯಕ್ತಿಸ್ವಾತಂತ್ರ್ಯ ಸಂಪಾದನೆಗಳಂಥವನ್ನೂ ಜೋಡಿಸಬೇಕು. ಇದರಿಂದ ಸಮಗ್ರ ಸಿದ್ಧಾಂತವನ್ನೊಳಗೊಂಡ ಪ್ರಮಾಣಗ್ರಂಥ ಲಿಂಗಾಯತಕ್ಕೆ ಪ್ರಾಪ್ತವಾಗುತ್ತದೆ. ಈ ದೊಡ್ಡ ಸವಾಲವನ್ನು ದೊಡ್ಡ ವಿದ್ವಾಂಸರು ಸ್ವೀಕರಿಸಬೇಕಾಗಿದೆ.*

ಪರಿಷ್ಕರಣ :

ಗೂಳೂರ ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆ ಈಗ ದೊರೆತು ಪ್ರಕಟವಾದ ನಾಲ್ಕು ಸಂಪಾದನೆಗಳಲ್ಲಿಯೇ ಅತಿ ಹೆಚ್ಚು ಪ್ರಸಿದ್ಧಿ ಹಾಗೂ ಜನಪ್ರಿಯತೆಯನ್ನು ಗಳಿಸಿಕೊಂಡ ಕೃತಿ. ಇದಕ್ಕೆ ಕಾರಣ ಇದು ಹೆಚ್ಚು ಅಚ್ಚುಕಟ್ಟಾಗಿರುವುದು ಮತ್ತು ಎಲ್ಲಕ್ಕೂ ಮೊದಲು ಪ್ರಕಟವಾಗಿ ಪ್ರಚಾರ ಪಡೆದುದು.

ಡಾ. ಫ.ಗು.ಹಳಕಟ್ಟಿ ಅವರು ಇದನ್ನು ಪ್ರಥಮ ಬಾರಿಗೆ ಶೋಧಿಸಿ ೧೯೩೦ ರಲ್ಲಿ ತಮ್ಮ ಶಿವಾನುಭವ ಗ್ರಂಥಮಾಲೆಯ ೨೨ನೆ ಕೃತಿಯಾಗಿ ಪ್ರಕಟಿಸುತ್ತಾರೆ. ಇದರ ಪರಿಷ್ಕರಣಕ್ಕೆ ಅವರು ಎರಡು ಹಸ್ತಪ್ರತಿಗಳನ್ನು ಬಳಸಿಕೊಂಡಿದ್ದಾರೆ. ಒಂದು ರಬಕವಿಯಲ್ಲಿ ದೊರೆತ ಕೋರಿಕಾಗದದ ಪ್ರತಿ. ಮತ್ತೊಂದು ಕೋಲಾರ ಜಿಲ್ಲೆ ಮೃಗಮಲೆಯಲ್ಲಿ ದೊರೆತ ತಾಡವೋಲೆ ಪ್ರತಿ. ಎರಡೂ

---

* 'ಶೂನ್ಯಸಂಪಾದನೆ–ರಾಚನಿಕ ವಿವೇಚನೆ' ಎಂಬ ಡಾ. ಎಂ.ಎಂ. ಕಲಬುರ್ಗಿ ಅವರ ಈ ಲೇಖನವನ್ನು ಇಲ್ಲಿ ಯಥಾವತ್ತಾಗಿ ಸ್ವೀಕರಿಸಲಾಗಿದೆ.

ಪ್ರತಿಗಳು ಹೆಚ್ಚು ಮಟ್ಟಿಗೆ ಶುದ್ಧವಾಗಿರುವುದಾಗಿ ತಿಳಿಸಿದ್ದಾರೆ. ಆದರೆ ಇವುಗಳಲ್ಲಿ ಮೂಲಪ್ರತಿ ಯಾವುದು? ಪಾಠಾಂತರ ಪ್ರತಿ ಯಾವುದು ಎಂದು ಹೇಳಿಲ್ಲ; ಪಾಠಾಂತರಗಳನ್ನೂ ಗುರುತಿಸಿಲ್ಲ. ಎರಡರಲ್ಲಿ ತೋರಿದ ಶುದ್ಧ ಪಾಠವನ್ನು ಮಾತ್ರ ಸ್ವೀಕರಿಸಿ ಈ ಕೃತಿ ಪರಿಷ್ಕರಣ ಕಾರ್ಯವನ್ನು ನಿರ್ವಹಿಸಿದ್ದಾರೆ. ಆಗಿನ್ನೂ ಗ್ರಂಥಸಂಪಾದನಶಾಸ್ತ್ರ ಕನ್ನಡದಲ್ಲಿ ಪ್ರಚಾರ ಪಡೆದಿರಲಿಲ್ಲವಾದ ಕಾರಣ ಅವರು ತಮ್ಮದೇ ಆದ ವಿಧಾನವನ್ನು ಅನುಸರಿಸಿ ಈ ಗ್ರಂಥವನ್ನು ಪ್ರಕಾಶಪಡಿಸಿರುವುದು ಸಹಜವೆನಿಸಿದೆ.

ಈ ಕೃತಿಯನ್ನು ಎರಡನೆಯ ಬಾರಿಗೆ (೧೯೫೮ರಲ್ಲಿ)ಹೆಚ್ಚು ಶಾಸ್ತ್ರೀಯವಾಗಿ ಪರಿಷ್ಕರಿಸಿ ರಾವೂರ ಶ್ರೀ ಸಿದ್ಧಲಿಂಗೇಶ್ವರಮಠ ಮತ್ತು ಆದವಾನಿಯ ಕಲ್ಲುಮಠದ ಅಧಿಪತಿಗಳ ಮೂಲಕ ಪ್ರಕಾಶಪಡಿಸಿದವರು ಪ್ರೊ. ಸಂ.ಶಿ.ಭೂಸನೂರಮಠ ಅವರು. ಇದರ ಪರಿಷ್ಕರಣಕ್ಕಾಗಿ ಅವರು ಧಾರವಾಡ, ಕೆರೂರ, ರಾವೂರ, ಹಾರಕೂಡ, ಗದಗ, ಶಿವಯೋಗಮಂದಿರ ಮತ್ತು ಮೈಸೂರುಗಳಿಂದ ಸಂಗ್ರಹಿಸಿದ ೭ ತಾಡವೋಲೆ ಹಸ್ತಪ್ರತಿಗಳನ್ನು ಬಳಸಿಕೊಂಡಿದ್ದಾರೆ. ಏಳೂ ಹಸ್ತಪ್ರತಿಗಳಲ್ಲಿನ ಪಾಠಗಳನ್ನು ಗಮನಿಸಿ ಶುದ್ಧಪಾಠವನ್ನು ಮೇಲಿರಿಸಿಕೊಂಡು ಉಳಿದ ಭಿನ್ನಪಾಠಗಳನ್ನು ಅಡಿಯಲ್ಲಿ ಸಂಗ್ರಹಿಸಿದ್ದಾರೆ. ಇದರಿಂದ ಅವರು ಗ್ರಂಥ ಪರಿಷ್ಕರಣಕ್ಕೆ ಆಯ್ಕೆ ಮಾಡಿಕೊಂಡ ಹಸ್ತಪ್ರತಿಗಳಲ್ಲಿ ಮೂಲಪ್ರತಿ ಯಾವುದು? ಪಾಠಾಂತರ ಪ್ರತಿಗಳು ಯಾವುವು? ಎಂಬುದು ಸ್ಪಷ್ಟವಾಗುವುದಿಲ್ಲ. ಅನುಬಂಧದಲ್ಲಿ ವಚನಗಳ ಅಕಾರಾದಿ, ವಚನಕಾರರ ಅಂಕಿತಗಳ ವರ್ಣಾನುಕ್ರಮ, ಸಂಕ್ಷಿಪ್ತ ಪಾರಿಭಾಷಿಕ ಪದಕೋಶ ಮತ್ತು ಶಬ್ದಕೋಶಗಳನ್ನು ಕೊಡಲಾಗಿದೆ. ಗ್ರಂಥಾರಂಭದಲ್ಲಿ ಈ ಕೃತಿಯ ಸ್ವರೂಪ, ವಸ್ತುವಿನ್ಯಾಸ, ತಂತ್ರ, ಗ್ರಂಥ ಪರಿಷ್ಕರಣದ ವಿಧಾನ ಇತ್ಯಾದಿಗಳನ್ನು ತಿಳಿಸುವ ವಿಸ್ತೃತ ಪ್ರಸ್ತಾವನೆ ಇಲ್ಲದಿರುವುದು ಒಂದು ದೊಡ್ಡ ಕೊರತೆಯಾಗಿ ಕಾಣಿಸುತ್ತದೆ. 'ಪ್ರಕಾಶಕರಮಾತಿ'ನಲ್ಲಿ ಈ ಕುರಿತು ಕೆಲವು ವಿಚಾರಗಳನ್ನು ಹೀಗೆ ತಿಳಿಸಿದ್ದಾರೆ:

"ಆಕಾಶದಲ್ಲಿ ಅದ್ಭುತಗಳಿರುವಂತೆ ನೆಲದ ಮೇಲೆಯೂ ಅದ್ಭುತಗಳಿವೆ; ಸಾಹಿತ್ಯ ಕ್ಷೇತ್ರದಲ್ಲಿಯೂ ಇವೆ. ಶೂನ್ಯಸಂಪಾದನೆ ಅಂತಹ ಅದ್ಭುತಗಳಲ್ಲಿ ಒಂದು. ವಿಶ್ವಮಾನವನ ಹೃದಯಕ್ಕೆ ಅನುಭೂತಿಯ ಬೆಳಗನ್ನು, ಆನಂದವನ್ನು ನೀಡಬಲ್ಲ ದಿವ್ಯ ಕೃತಿ ರತ್ನಗಳಲ್ಲಿ ಅದು ಒಂದು.

೧೫ನೆಯ ಶತಮಾನದ ಕೊನೆಯ ಭಾಗದಲ್ಲಿದ್ದ ಗೂಳೂರ ಸಿದ್ಧವೀರಣ್ಣೊಡೆಯರು ಸಂಗ್ರಹಿಸಿದ ಈ ಶೂನ್ಯಸಂಪಾದನೆ ಮೊದಲು ಪ್ರಕಟವಾದುದು ಕ್ರಿ.ಶ. ೧೯೩೦ ರಲ್ಲಿ. ಪ್ರಕಟಮಾಡಿದವರು ಡಾ. ಫ.ಗು.ಹಳಕಟ್ಟಿಯವರು. ವಚನ ಸಾಹಿತ್ಯ ಕ್ಷೇತ್ರದಲ್ಲಿ ಏಕೈಕಧೀರರಾಗಿ ಶ್ರಮಿಸುತ್ತ ಬಂದಿರುವ ಶ್ರೀ ಹಳಕಟ್ಟಿಯವರು ಶೂನ್ಯಸಂಪಾದನೆಯನ್ನು ಪ್ರಕಾಶಕ್ಕೆ ತಂದು ಕನ್ನಡಿಗರ ವಿಶೇಷ ಗೌರವ ಆದರಕ್ಕೆ ಪಾತ್ರರಾಗಿದ್ದಾರೆ.

ಶೂನ್ಯಸಂಪಾದನೆ ಪ್ರಕಟವಾದೊಡನೆ ಅದರಲ್ಲಿರುವ ಸ್ವಾನುಭಾವದ ಗಾಂಭೀರ್ಯ, ಆಧ್ಯಾತ್ಮಿಕ ವಿಚಾರದ ಔನ್ನತ್ಯ, ಧರ್ಮ-ನೀತಿ-ಆಚಾರ-ತತ್ವಗಳ ಕೂಲಂಕಷವಾದ ಚರ್ಚೆಯ ಸೊಗಸು, ಸಂವಾದದ ಬಿನ್ನಾಣ, ವಿಷಯ ವಿವೇಚನೆಯಲ್ಲಿ ತಂತಮ್ಮ ವ್ಯಕ್ತಿತ್ವದ ಸಾರಾಯವನ್ನೇ ಸೂಸುತ್ತಿರುವ ಶರಣರ ಮಹಾಂತ ನಿಲವುಗಳು ಕನ್ನಡಿಗರ ಸದುಹೃದಯವನ್ನು ಸೂರೆಗೊಳ್ಳುತ್ತ ಬಂದಿವೆ. ಶೂನ್ಯಸಂಪಾದನೆಯ ಘನತೆ ದಿನದಿನಕ್ಕೆ ಮಿಗಿಲಾದ ಕಾಂತಿಯನ್ನು ತಳೆಯುತ್ತ ನಡೆದಿದೆ. ಶ್ರೀ ಹಳಕಟ್ಟಿಯವರ ಪರಿಶ್ರಮಕ್ಕೆ ಅಮರ ಫಲ ಮೂಡಿದೆ.

ಶೂನ್ಯಸಂಪಾದನೆಯ ಪ್ರತಿಗಳೆಲ್ಲ ತೀರಿವೆ. ಆದರೆ ಶೂನ್ಯ ಸಂಪಾದನೆಯನ್ನು ಓದಬೇಕು, ಅಭ್ಯಾಸ ಮಾಡಬೇಕು, ಜೀವನದ ರಹಸ್ಯ ತತ್ವಗಳನ್ನು ತಿಳಿಯಬೇಕೆಂಬ ಬಯಕೆ ಓದುಗರಲ್ಲಿ ಬಲವಾಗುತ್ತ ಬಂದಿದೆ. ಅಂತೆಯೇ ಇಂತಹ ಉದ್ಗ್ರಂಥವನ್ನು ಮತ್ತೆ ಪ್ರಕಟಪಡಿಸಬೇಕೆಂಬ ತವಕ ನಮ್ಮಲ್ಲಿ ಮೂಡಿತು. ಮತ್ತು ಮುದ್ರಿಸುವುದಾದರೆ ಗ್ರಂಥವನ್ನು ಎಲ್ಲಂದರಿಂದ ಪರಿಷ್ಕರಿಸಿ, ಸಂಸ್ಕರಿಸಿ ಮುದ್ರಿಸಬೇಕೆಂಬ ಮಾತು ಮನದಲ್ಲಿ ಜಾಗ್ರತವಾಯಿತು. ಗೂಳೂರ ಸಿದ್ಧವೀರಣ್ಣೊಡೆಯರು ಸಂಪಾದಿಸಿದ ಶೂನ್ಯಸಂಪಾದನೆಯ ತಾಡವೋಲೆಯ ನಾಲ್ಕು ಪ್ರತಿಗಳು ಮೊದಲು ನಮಗೆ ದೊರೆತವು. ಮುದ್ರಣ ಪ್ರತಿಯನ್ನು ಬರೆದೂ ಆಯಿತು. ಅಷ್ಟರಲ್ಲಿ ಗುಮ್ಮಳಾಪುರದ ಸಿದ್ಧಲಿಂಗದೇವರ ಶೂನ್ಯಸಂಪಾದನೆಯ ತಾಡವೋಲೆಯ ಎರಡು ಪ್ರತಿಗಳೂ ನಮಗೆ ಸಿಕ್ಕವು. ಈ ಎಲ್ಲ ಪ್ರತಿಗಳ ಸಹಾಯದಿಂದ ಮುದ್ರಣ ಕಾರ್ಯ ನಡೆಯಿತು. ಈ ಅವಧಿಯಲ್ಲಿ ಮೈಸೂರು ಓರಿಯಂಟಲ್ ಲಾಯಬ್ರರಿಯಿಂದ ಕೆಂಚವೀರಣ್ಣೊಡೆಯರು ಮುಂತಾದವರು ಸಂಪಾದಿಸಿದ ಶೂನ್ಯಸಂಪಾದನೆಯನ್ನು ಪ್ರತಿ ಮಾಡಿಸಿ ತರಿಸಲಾಯಿತು. ಮತ್ತು ಶೂನ್ಯಸಂಪಾದನೆಯ ಆದ್ಯ ಕರ್ತರಾದ ಶಿವಗಣಪ್ರಸಾದಿ ಮಹಾದೇವಯ್ಯಗಳ ಶೂನ್ಯಸಂಪಾದನೆಯ ತಾಡೋಲೆ ಪ್ರತಿಗಳನ್ನು ದೊರಕಿಸಲಾಯಿತು. ಈಗ ನಾವು ಪ್ರಸಿದ್ಧ ಮಾಡಿರುವ 'ಪ್ರಭುದೇವರ ಶೂನ್ಯಸಂಪಾದನೆ'ಯ ಸಂಸ್ಕರಣ ಸಂದರ್ಭದಲ್ಲಿ ಅವಶ್ಯವೆನಿಸಿದಾಗ ಈ ಎಲ್ಲ ಪ್ರತಿಗಳ ಸಹಾಯವನ್ನೂ ಪಡೆಯಲಾಗಿದೆ. ಮತ್ತು ಈ ಎಲ್ಲಾ ಮೂಲ ಪ್ರತಿಗಳಲ್ಲಿ ಪ್ರಭುದೇವರ ಶೂನ್ಯಸಂಪಾದನೆ ಎಂದೇ ಉಲ್ಲೇಖಿಸಿರುವುದರಿಂದ ಈ ಗ್ರಂಥಕ್ಕೆ 'ಪ್ರಭುದೇವರ ಶೂನ್ಯಸಂಪಾದನೆ' ಎಂದು ಹೆಸರು ಕೊಟ್ಟಿದೆ.

ಪ್ರಭುದೇವರ ಶೂನ್ಯಸಂಪಾದನೆಯ ಸಂಸ್ಕರಣದ ಕಾರ್ಯವನ್ನು ಶ್ರೀ ಸಂ.ಶಿ.ಭೂಸನೂರಮಠ ಅವರು ನಾಲ್ಕೈದು ವರ್ಷದ ಪರಿಶ್ರಮದಿಂದ ಪೂರೈಸಿಕೊಟ್ಟಿದ್ದಾರೆ. ಅವರು ಇದೇ ಗ್ರಂಥದ ಎರಡನೆಯ ಸಂಪುಟದಲ್ಲಿ ವಿಸ್ತಾರವಾದ, ವಿಮರ್ಶಾತ್ಮಕವಾದ ಪ್ರಸ್ತಾವನೆಯನ್ನು ಬರೆಯಲಿದ್ದಾರೆ. ಇದಲ್ಲದೆ ಆ ಸಂಪುಟದಲ್ಲಿ ಉಪಲಬ್ಧವಿದ್ದ ಬೇರೆಯವರ ಶೂನ್ಯಸಂಪಾದನೆಗಳ ಹೆಚ್ಚು ಕಡಿಮೆ ಭಾಗಗಳನ್ನೂ ತೋರಿಸುವ ಮೂರು ಇಲ್ಲವೆ ನಾಲ್ಕು ಪರಿಶಿಷ್ಟಗಳನ್ನು ಸೇರಿಸುವ ಸಂಯೋಜನೆ ಈಗಾಗಲೇ ನಡೆದಿದೆ. ಇವಲ್ಲದೆ ಈ ಗ್ರಂಥದಲ್ಲಿ ಬರುವ ಬೆಡಗಿನ ವಚನಗಳಿಗೆ ಉಪಲಬ್ಧವಿದ್ದ 'ಟೀಕು'ಗಳನ್ನು ಕೊಡುವ ವಿಚಾರವೂ ಇದೆ."

ಹೀಗೆ ಹೇಳಿದ್ದರೂ ಇದುವರೆಗೆ ಬಂದ ಮುಂದಿನ ನಾಲ್ಕು ಆವೃತ್ತಿಗಳಲ್ಲಿಯೂ ಅದನ್ನು ನೆರವೇರಿಸಲು ಸಾಧ್ಯವಾಗಿಲ್ಲ. ಮೂರನೆಯ ಆವೃತ್ತಿಯಲ್ಲಿ 'ಈ ಶೂನ್ಯಸಂಪಾದನೆ ಒಂದು ವಿಶೇಷ ದರ್ಶನ' ಎಂಬ ಶೀರ್ಷಿಕೆಯಡಿಯಲ್ಲಿ ಉಳಿದ ಶೂನ್ಯಸಂಪಾದನೆಗಳ ಜೊತೆ ತೌಲನಿಕವಾದ ಒಂದು ಕಿರು ನೋಟ ಬೀರಲಾಗಿದೆ.

ಎರಡನೆಯ ಮುದ್ರಣದ (೧೯೬೫) ಪ್ರಕಾಶಕರ ಮಾತಿನಲ್ಲಿ–"ನಮಗೆ ಉಪಲಬ್ಧವಿದ್ದ ತಾಡವೋಲೆ ಮತ್ತು ಕೆಲವು ಕೈಬರಹದ ಪ್ರತಿಗಳ ಆಧಾರದ ಮೇಲೆ ಈ ಸಲದ ಮುದ್ರಣವನ್ನು ಹೆಚ್ಚು ಶುದ್ಧ ಮತ್ತು ಪರಿಷ್ಕೃತವಾಗುವಂತೆ ಮಾಡಲು ಯತ್ನಿಸಿದೆ" ಎಂದೂ, ಮೂರನೆಯ ಮುದ್ರಣದಲ್ಲಿ (೧೯೮೬) "ಶಿವಗಣಪ್ರಸಾದಿ ಮಹಾದೇವಯ್ಯಗಳ ಮತ್ತು ಗುಮ್ಮಳಾಪುರದ ಸಿದ್ಧಲಿಂಗದೇವರ ಶೂನ್ಯಸಂಪಾದನೆಗಳು ಡಾ. ಎಲ್. ಬಸವರಾಜು ಮತ್ತು ಡಾ. ಆರ್. ಸಿ. ಹಿರೇಮಠ ಅವರ ಸಂಪಾದಕತ್ವದಲ್ಲಿ ಸುದೀರ್ಘ ಪ್ರಸ್ತಾವನೆ, ವಿಮರ್ಶೆ, ಟೀಕೆ–ಟಿಪ್ಪಣೆಗಳೊಡನೆ ಈ ಮಧ್ಯ ಪ್ರಕಟವಾಗಿರುವ

ಕಾರಣದಿಂದ ಈ ಗ್ರಂಥಕ್ಕೆ ೨ನೆಯ ಸಂಪುಟದ ಅವಶ್ಯಕತೆ ಉಳಿದಿಲ್ಲ. ಅಂತೆಯೇ ಮುಖಪುಟದ ಮೇಲಿರುವ 'ಸಂಪುಟ-೧' ಎಂಬ ಮಾತನ್ನು ತೆಗೆದುಹಾಕಿದೆ"[೭] ಎಂದೂ ತಿಳಿಸಿದ್ದಾರೆ. ಇದರ ನಾಲ್ಕನೆಯ ಮುದ್ರಣ ೧೯೯೯ ರಲ್ಲಿ ಪ್ರಕಟವಾಗಿದ್ದು, ಅದು ಮೂರನೆಯ ಆವೃತ್ತಿಯ ಯಥಾವತ್ ಪುನರ್‌ಮುದ್ರಣವಾಗಿದೆ.

ಪ್ರೊ. ಭೂಸನೂರಮಠರ ಈ ಆವೃತ್ತಿ ಪ್ರಕಟವಾದ ನಂತರ ಶೂನ್ಯಸಂಪಾದನೆಯ ಅಧ್ಯಯನದ ವ್ಯಾಪ್ತಿ ಹೆಚ್ಚು ವಿಸ್ತೃತಗೊಂಡಿತು. ಈ ಕುರಿತು ಮಠಮಾನ್ಯಗಳಲ್ಲಿ ಪ್ರವಚನ-ಉಪನ್ಯಾಸಗಳು ನಡೆಯತೊಡಗಿದವು. ವಿದ್ವಾಂಸರಿಂದ ಚಿಂತನ-ಚರ್ಚೆ-ಕೃತಿರಚನೆ-ವಿಮರ್ಶಾತ್ಮಕ ಲೇಖನಗಳ ಪ್ರಕಟಣೆ ನಡೆದವು. ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗದ ಪಠ್ಯವಾಗಿ ಅಧ್ಯಯನಗೊಳ್ಳತೊಡಗಿತು. ಭೂಸನೂರಮಠರಿಂದ ೧೯೭೬ರಲ್ಲಿ 'ಶೂನ್ಯಸಂಪಾದನೆಯ ಪರಾಮರ್ಶೆ' ಎಂಬ ಬೃಹತ್ ದಾರ್ಶನಿಕ ಗ್ರಂಥ ರಚನೆಯಾಗಿ ವಿದ್ವತ್ ವಲಯದಲ್ಲಿ ಅಚ್ಚರಿ ಮೂಡಿಸಿತು. ಜಚನಿ ಅವರಿಂದ 'ಸಂಪಾದನೆಯ ಸೊಂಪು' (ನಾಲ್ಕು ಸಂಪುಟಗಳಲ್ಲಿ ೧೯೭೭-೭೯), ಜೋಳದ ರಾಶಿ ದೊಡ್ಡನಗೌಡರಿಂದ 'ಬಯಲಗಳಿಕೆಯ ಬೆಳಕು' (೧೯೮೫), ಜಯಾ ರಾಜಶೇಖರ ಅವರಿಂದ 'ಶೂನ್ಯಸಂಪಾದನೆ-ಅನುಸಂಧಾನ' (೨೦೦೮) ಎಂಬ ವ್ಯಾಖ್ಯಾನಗ್ರಂಥಗಳು ಹುಟ್ಟಿಕೊಂಡವು. ಡಾ. ಎಚ್. ತಿಪ್ಪೇರುದ್ರಸ್ವಾಮಿ, (೧೯೬೫), ಡಾ. ಎಂ. ಚಿದಾನಂದಮೂರ್ತಿ (೧೯೬೨), ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ (೨೦೦೫) ಅವರಿಂದ ಸ್ವತಂತ್ರ ವಿಮರ್ಶಾ ಗ್ರಂಥಗಳು, ಹಂಪಿ, ಕನ್ನಡ ವಿಶ್ವವಿದ್ಯಾಲಯದಿಂದ 'ಶೂನ್ಯಸಂಪಾದನೆಗಳು-ಸಾಂಸ್ಕೃತಿಕ ಮುಖಾಮುಖಿ' (ಸಂ. ಅಮರೇಶ ನುಗಡೋಣಿ, ೨೦೦೨) ಎಂಬ ವಿಚಾರ ಸಂಕಿರಣ ಲೇಖನ ಸಂಪುಟ ಹಾಗೂ ಇನ್ನೂ ಅನೇಕ ಲೇಖಕರಿಂದ ಹತ್ತಾರು ಕೃತಿಗಳು, ನೂರಾರು ಲೇಖನಗಳು ಪ್ರಕಟವಾದವು. ಕರ್ನಾಟಕ ವಿಶ್ವವಿದ್ಯಾಲಯದಿಂದ ಈ ಕೃತಿ ಇಂಗ್ಲೀಷ್ ಭಾಷೆಗೂ ಅನುವಾದವಾಗಿ ಅಂತಾರಾಷ್ಟ್ರೀಯ ವಿದ್ವಾಂಸರ ಗಮನವನ್ನೂ ಸೆಳೆಯಿತು.

ಹೀಗೆ ಹಲವು ನೆಲೆಯ ಅಧ್ಯಯನಗಳಿಗೆ ಆಕರವಾಗಿ ಇಂದಿಗೂ ತನ್ನ ಆಕರ್ಷಣೆಯನ್ನು ಅಚ್ಚಳಿಯದೆ ಉಳಿಸಿಕೊಂಡು ನಡೆದ ಗೂಳೂರ ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆ ಇನ್ನಷ್ಟು ಶಾಸ್ತ್ರೀಯವಾಗಿ ಪರಿಷ್ಕರಣಗೊಂಡು ಪೂರ್ಣ ಶುದ್ಧರೂಪದಲ್ಲಿ ನೂತನ ವಿನ್ಯಾಸದೊಂದಿಗೆ ಪ್ರಕಟವಾಗಬೇಕು ಎಂಬುದು ಲಿಂ. ಡಾ. ಎಂ. ಎಂ. ಕಲಬುರ್ಗಿ ಅವರ ಅಪೇಕ್ಷೆಯಾಗಿತ್ತು. ಅದನ್ನು ಆದಷ್ಟು ಬೇಗ ಸಾಕಾರಗೊಳಿಸಬೇಕೆಂದು ಅವರು ನಿರಂತರ ಹಸ್ತಪ್ರತಿ ಶೋಧದಲ್ಲಿ ತೊಡಗಿದ್ದರು. ಅವರ ಕನಸನ್ನು ನನಸುಗೊಳಿಸುವ ರೀತಿಯಲ್ಲಿ ಅತ್ಯಂತ ಪ್ರಾಚೀನವಾದ-ಸಂಪಾದನಕಾರನ ಜೀವಿತಕಾಲದಲ್ಲಿಯೇ ಪ್ರತಿ ಮಾಡಿದ-ಹಸ್ತಪ್ರತಿಯೊಂದು ಬೆಂಗಳೂರ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ಭಾಂಡಾರದಲ್ಲಿ ಅವರ ಕಣ್ಣಿಗೆ ಬಿದ್ದಿತು. ತಕ್ಷಣ ಅದನ್ನು ಪಡೆದುಕೊಂಡು ಪರಿಷ್ಕರಣ ಕಾರ್ಯಕ್ಕೆ ಚಾಲನೆ ಕೊಟ್ಟರು. ಆರು ತಿಂಗಳಲ್ಲಿ ಮುದ್ರಣಪ್ರತಿ ಸಿದ್ಧವಾಯಿತು. ಗದುಗಿನ ತೋಂಟದಾರ್ಯಮಠದ ೨೦೧೫ ರ ಯಾತ್ರಾ ಸಂದರ್ಭದಲ್ಲಿ ಕೃತಿ ಬಿಡುಗಡೆ ಮಾಡಬೇಕೆಂದು ಸಿದ್ಧತೆ ನಡೆಸಿದೆವು. ಆದರೆ ಸಕಾಲಕ್ಕೆ ಸಂಪೂರ್ಣ ಕಾರ್ಯ ಮುಗಿಯಲಿಲ್ಲ. ಹೀಗಾಗಿ ಮುಂದಿನ ವರ್ಷಕ್ಕೆ ಮುಂದೂಡಲಾಯಿತು. ಈಗ ಆ ಕಾರ್ಯ ಕೈಗೂಡಿದುದಕ್ಕೆ

ಸಂತಸವೆನಿಸಿದೆ. ಆದರೆ ಈ ಸಂದರ್ಭದಲ್ಲಿ ಡಾ. ಎಂ. ಎಂ. ಕಲಬುರ್ಗಿ ಸರ್ ಅವರು ಇಲ್ಲದೆ ಹೋದದ್ದು ತುಂಬ ನೋವನ್ನು ಉಂಟುಮಾಡಿದೆ.

ಪ್ರೊ. ಸಂ.ಶಿ. ಭೂಸನೂರಮಠ ಅವರ ಕೃತಿ ಪ್ರಕಟವಾಗಿ ೫೮ ವರ್ಷಗಳ ತರುವಾಯ ಈಗ ಗೂಳೂರ ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆ ಮತ್ತೊಮ್ಮೆ ಹೊಸದಾಗಿ ಪರಿಷ್ಕರಣಗೊಂಡು, ಸಮಗ್ರ ಪೂರಕ ಅನುಬಂಧಗಳು, ವಿಸ್ತೃತವಾದ ಪ್ರಸ್ತಾವನೆ ಹಾಗೂ ನೂತನ ವಿನ್ಯಾಸದೊಂದಿಗೆ ಹೊರಬರುತ್ತಲಿದೆ.

ಈ ಸಂಸ್ಕರಣದಲ್ಲಿ ಅನುಸರಿಸಿದ ವಿಧಿ-ವಿಧಾನಗಳು ಕೆಳಗಿನಂತಿವೆ:

೧. ಗೂಳೂರ ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆ ಅದು ರಚನೆಗೊಂಡ ಕಾಲಕ್ಕೆ ಮತ್ತು ಅನಂತರದಲ್ಲಿ ಹೆಚ್ಚು ಜನಪ್ರಿಯವಾಗಿದ್ದ ಕಾರಣ ಇದರ ಹಸ್ತಪ್ರತಿಗಳು ಅಧಿಕ ಸಂಖ್ಯೆಯಲ್ಲಿ ದೊರೆಯುತ್ತವೆ. ಆದರೆ ಆ ಎಲ್ಲವನ್ನೂ ಇಲ್ಲಿ ಪರಿಷ್ಕರಣಕ್ಕೆ ಬಳಸಿಕೊಂಡಿಲ್ಲ. ಈಚೆಗೆ ದೊರೆತ, ಹೆಚ್ಚು ಪ್ರಾಚೀನವೂ, ಶುದ್ಧವೂ, ಅಧಿಕೃತವೂ ಎನಿಸಿದ ತಾಳೆಗರಿ ಹಸ್ತಪ್ರತಿಯೊಂದನ್ನು ಮಾತ್ರ ಮೂಲವಾಗಿಟ್ಟುಕೊಂಡು, ಇಂದು ಪ್ರಚಲಿತವಿರುವ ವಚನಗ್ರಂಥ ಸಂಪಾದನೆಯ ಎಲ್ಲ ತತ್ವಗಳ ಹಿನ್ನೆಲೆಯಲ್ಲಿ ಶಾಸ್ತ್ರೀಯವಾಗಿ ಪರಿಷ್ಕರಿಸಲು ಪ್ರಯತ್ನಿಸಲಾಗಿದೆ.

೨. ಈ ಹಿಂದೆ ಪ್ರಕಟವಾದ ಡಾ. ಫ.ಗು.ಹಳಕಟ್ಟಿ ಮತ್ತು ಪ್ರೊ. ಸಂ.ಶಿ. ಭೂಸನೂರಮಠ ಅವರ ಮುದ್ರಿತ ಕೃತಿಗಳನ್ನು ಈ ಪರಿಷ್ಕರಣಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

೩. ಈ ಪರಿಷ್ಕರಣ ಮೂಲಪ್ರತಿ ನಿಷ್ಠವಾಗಿದೆ. ಅಂದರೆ ಮೂಲ ಪ್ರತಿಯಲ್ಲಿ ಪಾಠ ಶುದ್ಧವಾಗಿದ್ದರೆ ಅದನ್ನು ಹಾಗೆಯೇ ಉಳಿಸಿಕೊಳ್ಳುವುದು; ಅಶುದ್ಧ ಅಥವಾ ಅರ್ಥ ಸಂದಿಗ್ಧವೆನಿಸಿದ್ದಲ್ಲಿ ಮಾತ್ರ ಕ್ವಚಿತ್ತಾಗಿ ಮುದ್ರಿತ ಪ್ರತಿಯಲ್ಲಿನ ಶುದ್ಧಪಾಠವನ್ನು ಎತ್ತಿಕೊಂಡು ಮೇಲಿರಿಸಿ ಸೂಕ್ತ ಚಿಹ್ನೆಗಳೊಂದಿಗೆ ಮೂಲ ಪಾಠವನ್ನು ಅಡಿಯಲ್ಲಿಕೊಡುವುದು; ಮೂಲದಲ್ಲಿದ್ದ ಶುದ್ಧ ಪಾಠಗಳಿಗೆ ಮುದ್ರಿತಪ್ರತಿಯಲ್ಲಿ ಹಲವು ಭಿನ್ನ ಪಾಠಗಳಿದ್ದರೂ ಅವುಗಳನ್ನು ಅಡಿಯಲ್ಲಿ ಸೇರಿಸದೆ ಕೈಬಿಡುವುದು; ಮೂಲದಲ್ಲಿನ ಪಾಠ ಕಳೆದುಹೋಗಿದ್ದಲ್ಲಿ ಮುದ್ರಿತ ಪ್ರತಿಯಲ್ಲಿನ ಪಾಠವನ್ನು [] ಚೌಕ ಕಂಸಿನಲ್ಲಿ ಹಾಕಿ ಸ್ವೀಕರಿಸುವುದು-ಇದು ಇಲ್ಲಿ ಅನುಸರಿಸಿದ ಪರಿಷ್ಕರಣ ವಿಧಾನವಾಗಿದೆ.

೪. ಈ ಪರಿಷ್ಕರಣದಲ್ಲಿ ಮಾಡಿಕೊಂಡ ಬದಲಾವಣೆಗಳು ಹೀಗಿವೆ:

- ಮುದ್ರಿತ ಕೃತಿಯಲ್ಲಿ ಗದ್ಯದಂತೆ ಪ್ರಕಟಿಸಿದ ವಚನಗಳನ್ನು ಇಲ್ಲಿ ಲಯಾನುಸಾರ ಒಡೆದು ಪದ್ಯದಂತೆ ಜೋಡಿಸಲಾಗಿದೆ.
- ಸಂಖ್ಯೆಯನ್ನು ವಚನದ ತಲೆಯ ಮೇಲೆ ನಿರಂತರವಾಗಿ, ವಚನದ ಅಂತ್ಯದಲ್ಲಿ ಆಯಾ ಸಂಪಾದನೆಗೆ ಪ್ರತ್ಯೇಕವಾಗಿ ಕೊಡಲಾಗಿದೆ. ಇದರಿಂದ ಒಟ್ಟು ವಚನ ಸಂಖ್ಯೆ ಮತ್ತು ಒಂದೊಂದು ಸಂಪಾದನೆಯಲ್ಲಿರುವ ವಚನ ಸಂಖ್ಯೆಗಳನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತದೆ.
- ಇಲ್ಲಿ ಬಳಕೆಯಾದ ವಚನಾಂಕಿತಗಳಲ್ಲಿ ಕೆಲವು ಸಮಸ್ಯೆಗಳು ತಲೆದೋರಿವೆ. ಅವುಗಳಿಗೆ ಪರಿಹಾರವನ್ನು ಹೀಗೆ ಕಂಡುಕೊಳ್ಳಲಾಗಿದೆ:

* ಪ್ರಭುದೇವರ ಅಂಕಿತ ಗೊಗ್ಗೇಶ್ವರ, ಗೊಹೇಶ್ವರ ಎಂದು ಎರಡು ಬಗೆಯಾಗಿ ಬಳಕೆಯಾಗಿದೆ. ಇವುಗಳಲ್ಲಿ ಹೆಚ್ಚಿನ ವಚನಗಳಲ್ಲಿ ಬಳಕೆಯಾದ 'ಗೊಹೇಶ್ವರ' ಎಂಬುದನ್ನು ಮಾತ್ರ ಇಟ್ಟುಕೊಂಡು ಉಳಿದುದನ್ನು ಅಡಿಟಿಪ್ಪಣಿಯಲ್ಲಿ ಗುರುತಿಸುತ್ತ ನಡೆಯಲಾಗಿದೆ.

* ಆಯ್ದಕ್ಕಿ ಲಕ್ಕಮ್ಮ ಮತ್ತು ಆಯ್ದಕ್ಕಿ ಮಾರಯ್ಯಗಳ ವಚನಾಂಕಿತದಲ್ಲಿ 'ಅಮರೇಶ್ವರ' ಮತ್ತು 'ಅಮಲೇಶ್ವರ' ಎಂಬ ಎರಡು ಭಿನ್ನರೂಪಗಳು ಬಳಕೆಯಾಗಿವೆ. ಇವುಗಳಲ್ಲಿ 'ಅಮರೇಶ್ವರ' ಎಂಬುದನ್ನು ಮಾತ್ರ ಉಳಿಸಿಕೊಂಡು ಏಕರೂಪತೆಯನ್ನು ಕಾಯ್ದುಕೊಳ್ಳಲಾಗಿದೆ.

* 'ಏಕಾಂತವೀರ ಸೊಡ್ಡಳ' ಎಂಬ ಅಂಕಿತವಿರುವ ಎರಡು ವಚನಗಳನ್ನು 'ಏಕಾಂತರಾಮಿತಂದೆ'ಯ ಹೆಸರಿನಡಿಯಲ್ಲಿ ಜೋಡಿಸಲಾಗಿದೆ. ಆದರೆ ಇದು ಮೂಲತಃ ಸೊಡ್ಡಳಬಾಚರಸನ ಅಂಕಿತವಾಗಿದೆ. 'ಏಕಾಂತವೀರ' ಎಂಬ ವಿಶೇಷಣ ಗಮನಿಸಿ ಸಂಪಾದನಕಾರ ಏಕಾಂತರಾಮಯ್ಯನದೆಂದು ಕಲ್ಪಿಸಿದಂತಿದೆ. ಏಕಾಂತ ರಾಮಯ್ಯನ ಅಂಕಿತ 'ಎನ್ನಯ್ಯ ಚೆನ್ನರಾಮ' ಎಂದಿದೆ. ಹೀಗಾಗಿ ಈ ಎರಡು ವಚನಗಳನ್ನು ಸೊಡ್ಡಳ ಬಾಚರಸನಿಗೆ ವರ್ಗಾಯಿಸುವುದು ಸೂಕ್ತವೆನಿಸುತ್ತದೆ. ಇಲ್ಲಿ ಸದ್ಯ ಇದ್ದಂತೆ ಇಟ್ಟುಕೊಂಡು ಅಡಿಯಲ್ಲಿ ಭಿನ್ನಾಭಿಪ್ರಾಯವನ್ನು ಕೊಡಲಾಗಿದೆ.

* ನುಲಿಯ ಚಂದಯ್ಯನ ಅಂಕಿತ 'ಚಂದೇಶ್ವರ' 'ಚಂದೇಶ್ವರಲಿಂಗ' ಎಂದಿದ್ದು, ಅದು ನಾಲ್ಕು ವಚನಗಳಲ್ಲಿ 'ಸಂಗನಬಸವಣ್ಣಪ್ರಿಯ ಚಂದೇಶ್ವರಲಿಂಗ' ಎಂದು, ಎರಡು ವಚನಗಳಲ್ಲಿ 'ಚೆನ್ನಬಸವಣ್ಣ ಪ್ರಿಯ ಚಂದೇಶ್ವರಲಿಂಗ' ಎಂದು ಬಂದಿದೆ. ಹೀಗಿರುವುದರಿಂದ ಇವು ಭಿನ್ನ ವಚನಕಾರನ ಅಂಕಿತಗಳಿರಬಹುದು ಎಂದು ಕೆಲವರು ಶಂಕೆ ವ್ಯಕ್ತಪಡಿಸಿದ್ದುಂಟು. ಆದರೆ ವಸ್ತುಸ್ಥಿತಿ ಹಾಗಿಲ್ಲ. ಇವು ನುಲಿಯ ಚಂದಯ್ಯನ ಅಂಕಿತಗಳೇ ಆಗಿದ್ದು, ಬಸವಣ್ಣ ಮತ್ತು ಚೆನ್ನಬಸವಣ್ಣನನ್ನು ಉದ್ದೇಶಿಸಿ ಹೇಳುವಾಗ ಈ ವಿಶೇಷಣಗಳನ್ನು ತನ್ನ ಅಂಕಿತದೊಂದಿಗೆ ಸೇರಿಸಿ ಹೇಳಿದ್ದಾನೆ ಅಷ್ಟೆ. ಇದು ಶೂನ್ಯಸಂಪಾದನೆಯಲ್ಲಿ ಈ ವಚನಗಳು ಬಳಕೆಯಾದ ಸಂದರ್ಭವನ್ನು ಗಮನಿಸಿದಾಗ ತಾನೇ ಸ್ಪಷ್ಟವಾಗುತ್ತದೆ.

* ಹಡಪದ ಅಪ್ಪಣ್ಣನ ಹೆಸರಿನಡಿಯಲ್ಲಿ ಸೇರಿಸಿದ ಎಲ್ಲ ವಚನಗಳಿಗೆ 'ಬಸವಪ್ರಿಯ ಕೂಡಲಚೆನ್ನಸಂಗಯ್ಯ' 'ಬಸವಪ್ರಿಯ ಕೂಡಲ ಚೆನ್ನಸಂಗಮದೇವ' ಎಂಬ ಅಂಕಿತ ಬಳಕೆಯಾಗಿವೆ. ಆದರೆ ಈತನ ನಿಜ ಅಂಕಿತ 'ಬಸವಪ್ರಿಯ ಕೂಡಲಚೆನ್ನಬಸವಣ್ಣ' ಎಂದಿದೆ. 'ಬಸವಪ್ರಿಯ ಕೂಡಲಚೆನ್ನಸಂಗಮದೇವ' ಎಂಬುದು ಸಂಗಮೇಶ್ವರ ಅಪ್ಪಣ್ಣನ ಅಂಕಿತವಾಗಿದೆ. ಇಲ್ಲಿನ ಎಲ್ಲ ವಚನಗಳಿಗೂ ಹಡಪದಪ್ಪಣ್ಣನದೆಂದೇ ಬಳಸಿರುವುದರಿಂದ ಹಾಗೇ ಇಟ್ಟುಕೊಳ್ಳಲಾಗಿದೆ.

* ಸಿದ್ಧರಾಮನ ವಚನಗಳಲ್ಲಿ ಮೂರು ಅಂಕಿತಗಳು ಬಳಕೆಯಾಗಿವೆ. 'ಕಪಿಲ ಸಿದ್ಧ ಮಲ್ಲಿಕಾರ್ಜುನ', 'ಶ್ರೀ ಮಲ್ಲಿಕಾರ್ಜುನ', 'ಯೋಗಿನಾಥ'. ಇವುಗಳನ್ನು ಹಾಗೇ ಉಳಿಸಿಕೊಳ್ಳಲಾಗಿದೆ.

೫. ಅನುಬಂಧದಲ್ಲಿ ವಚನಗಳ ಅಕಾರಾದಿ, ವಚನಕಾರರು-ಅಂಕಿತ-ವಚನಸಂಖ್ಯೆ; ಸ್ವರವಚನಗಳ ಅಕಾರಾದಿ, ಸ್ವರವಚನಕಾರರು-ಅಂಕಿತ-ವಚನ ಸಂಖ್ಯೆ; ಕಠಿಣ ಪದಕೋಶ ಮತ್ತು ಪಾರಿಭಾಷಿಕ ಪದಕೋಶಗಳನ್ನು ಅಳವಡಿಸಲಾಗಿದೆ.

– ಒಟ್ಟಿನಲ್ಲಿ ಹೆಚ್ಚು ಶುದ್ಧ ರೂಪದಲ್ಲಿ ಈ ಪರಿಷ್ಕರಣವನ್ನು ಪ್ರಕಟಿಸಲು ಪ್ರಯತ್ನಿಸಲಾಗಿದೆ.

ಹಸ್ತಪ್ರತಿಯ ಸ್ವರೂಪ :

ಈ ಕೃತಿ ಪರಿಷ್ಕರಣಕ್ಕೆ ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ಭಾಂಡಾರಕ್ಕೆ ಸೇರಿದ ತಾಡವೋಲೆ ಪ್ರತಿ ಸಂಖ್ಯೆ-ಕೆ. ೨೨೯ನ್ನು ಮೂಲ ಪ್ರತಿಯಾಗಿ ಬಳಸಿಕೊಳ್ಳಲಾಗಿದೆ. ಇದರ ಸಂಕೇತ 'ಮೂ'. ಪ್ರೊ. ಭೂಸನೂರಮಠ ಅವರ ಮುದ್ರಿತ ಕೃತಿಯನ್ನು ಪೂರಕ ಪ್ರತಿಯನ್ನಾಗಿ ಸ್ವೀಕರಿಸಲಾಗಿದೆ. ಇದರ ಸಂಕೇತ 'ಮು'.

ಬೆಂಗಳೂರ ವಿ.ವಿ. ಕೆ. ೨೨೯ ನೆಯ ಹಸ್ತಪ್ರತಿ ಕಟ್ಟಿನಲ್ಲಿ ಎರಡು ಕೃತಿಗಳಿವೆ. ೧. ಎಲ್ಲ ಪುರಾತನರ ಬೆಡಗಿನ ವಚನಗಳು. ೨. ಶೂನ್ಯಸಂಪಾದನೆ. ಇದರಲ್ಲಿ ಒಟ್ಟು ೨೬೬ ಗರಿಗಳಿವೆ. ಶೂನ್ಯಸಂಪಾದನೆ ೧೪೫ನೆಯ ಗರಿಯಿಂದ ಆರಂಭವಾಗಿ ೨೬೬ ಕ್ಕೆ ಮುಕ್ತಾಯವಾಗುತ್ತದೆ. ಗರಿಗಳಿಗೆ ಪುಟ ಸಂಖ್ಯೆ ಒಂದೆ ಕಡೆಗೆ ಹಾಕಲಾಗಿದೆ. ಅದನ್ನು ಎರಡುಪಟ್ಟು ಮಾಡಿದರೆ ಒಟ್ಟು ೨೪೨ ಪುಟಗಳಲ್ಲಿ ಈ ಕೃತಿ ವ್ಯಾಪಿಸಿಕೊಂಡಿದೆ ಎಂದು ವಿದಿತವಾಗುತ್ತದೆ.

ಹಸ್ತಪ್ರತಿಯ ಉದ್ದ ೧೩ ೧/೨ ಇಂಚು, ಅಗಲ-೩ ಇಂಚು. ಅಕ್ಷರ-ಸಣ್ಣ, ದುಂಡಗೆ. ಪ್ರತಿ ಶುದ್ಧವಾಗಿದೆ, ಸಮಗ್ರವೆನಿಸಿದೆ. ಪ್ರತಿಯೊಂದು ಗರಿಯಲ್ಲಿ ೧೨ ರಿಂದ ೧೫ ರವರೆಗೆ ಸಾಲುಗಳಿವೆ.

ಹಸ್ತಪ್ರತಿಯ ಆದಿಯಲ್ಲಿ "ಶ್ರೀ ಗುರು ಬಸವಲಿಂಗಾಯನಮಃ ಮಂಗಳಮಸ್ತು ಪ್ರಭುದೇವರ ಶೂನ್ಯಸಂಪಾದನೆ ಶ್ರೀ" ಎಂದು, ಅಂತ್ಯದಲ್ಲಿ-

"ಸ್ವಸ್ತಿ ಶ್ರೀ ಜಯಾಭ್ಯುದಯ ಸಾಲಿವಾಹನ ಶಕ ವರುಷ ೧೫೩೮ ನೆಯ ನಳನಾಮ ಸಂವತ್ಸರ ಮಾಘ ಬಹುಳ ೧೪ ಸೋಮವಾರದಲ್ಲಿ ಗೂಳೂರ ಸಿದ್ಧವೀರಣ್ಣೊಡೆಯ ದೇವರಿಗೆ ನಂದಿಯ ಪುರದ ಪರ್ವತದೇವರ ಶಿಷ್ಯರು ತೋಟದ ದೇವರು ಲೇಖನ ಮಾಡಿದ ಪ್ರಭುದೇವರ ಶೂನ್ಯಸಂಪಾದನೆ ಸಮಾಪ್ತ ಮಂಗಳ ಮಹಾಶ್ರೀ" ಎಂದು ಬರೆಯಲಾಗಿದೆ. ಇದರಿಂದ ಈ ಹಸ್ತಪ್ರತಿ ಕ್ರಿ.ಶ. ೧೬೧೬ (೧೫೩೮+೭೮=೧೬೧೬)ರಲ್ಲಿ ರಚಿತವಾದುದೆಂದೂ ಇದನ್ನು ಗೂಳೂರ ಸಿದ್ಧವೀರಣ್ಣೊಡೆಯನಿಗೆ (ಅಂದರೆ ಸ್ವತಃ ಕರ್ತೃವಿಗೆ) ನಂದಿಯಪುರದ ಪರ್ವತದೇವರ ಶಿಷ್ಯ ತೋಟದಯ್ಯ ಪ್ರತಿ ಮಾಡಿ ಕೊಟ್ಟನೆಂದೂ ತಿಳಿದುಬರುವುದರಿಂದ ಇದು ಕರ್ತೃವಿನ ಜೀವಿತಕಾಲದಲ್ಲಿಯೇ ಸಿದ್ಧಪಡಿಸಿದ ಪ್ರತಿಯಾಗಿದೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ (ಇದರ ಇನ್ನೊಂದು ಕಾಗದದ ಹಸ್ತಪ್ರತಿ ಮೈ ವಿ.ವಿ. ಹಸ್ತಪ್ರತಿ ಭಾಂಡಾರದಲ್ಲಿರುವುದಾಗಿ ತಿಳಿದು ಬಂದಿದೆ. ಅದಕ್ಕೆ ಈ ತಾಳೆ ಪ್ರತಿ ಮೂಲವಾಗಿರಬೇಕು).

ಕೃಜ್ಞತೆಗಳು :

ಶೂನ್ಯಸಂಪಾದನೆಯ ನೂತನ ಆವೃತ್ತಿ ಪ್ರಕಟನೆ ಡಾ. ಎಂ. ಎಂ. ಕಲಬುರ್ಗಿ ಅವರ ಬಹುದಿನಗಳ ಬಯಕೆಯಾಗಿತ್ತು. ಅದನ್ನು ಇಂದು ತೋಂಟದಾರ್ಯಮಠದ ಲಿಂಗಾಯತ ಅಧ್ಯಯನ ಸಂಸ್ಥೆಯ ಮೂಲಕ ಈಡೇರಿಸುತ್ತಿರುವುದು ಅವರ ಪವಿತ್ರಾತ್ಮಕ್ಕೆ ಸಲ್ಲಿಸುತ್ತಿರುವ ನಿಜವಾದ ಶ್ರದ್ಧಾಂಜಲಿಯೆಂದು ಭಾವಿಸಿದ್ದೇನೆ. ಈ ಪುಣ್ಯಕಾರ್ಯಕ್ಕೆ ತಮ್ಮ ಕೃಪಾಶೀರ್ವಾದದ ಅಮೃತ ಧಾರೆಯೆರೆದವರು ಪರಮ ಪೂಜ್ಯ ಜಗದ್ಗುರು ಡಾ. ಸಿದ್ಧಲಿಂಗ ಮಹಾಸ್ವಾಮಿಗಳು. ಅವರ ದಿವ್ಯ ಸನ್ನಿಧಿಗೆ ಅನಂತ ಭಕ್ತಿಪೂರ್ವಕ ಪ್ರಣಾಮಗಳನ್ನು ಸಲ್ಲಿಸುತ್ತೇನೆ.

ಇದುವರೆಗೆ ಕಲಬುರ್ಗಿ ಸರ್ ಮತ್ತು ನಾನು ಜೊತೆಯಾಗಿ ಸಂಪಾದಿಸಿದ ಕೃತಿಗಳ ಕಾರ್ಯವನ್ನು ಸಮನಾಗಿ ಹಂಚಿಕೊಂಡು ಮಾಡುತ್ತ ಬಂದಿದ್ದೆವು. ನಾನು ಗ್ರಂಥ ಪರಿಷ್ಕರಣ, ಅನುಬಂಧಗಳ ಜೋಡಣೆ, ಕರಡು ತಿದ್ದುವುದನ್ನು ಮಾಡಿದರೆ, ಅವರು ಅಂತಿಮವಾಗಿ ಪರಿಶೀಲಿಸಿ ಪ್ರಸ್ತಾವನೆ ಬರೆದು ಪೂರ್ಣಗೊಳಿಸುತ್ತಿದ್ದರು. ಆದರೆ ಈ ಕೃತಿ ಸಂದರ್ಭದಲ್ಲಿ ಅದು ಪೂರ್ಣ ಸಾಧ್ಯವಾಗದೆ ಹೋದುದು ತುಂಬ ನೋವಿನ ಸಂಗತಿ ಎನಿಸಿದೆ.

ಡಾ. ಕಲಬುರ್ಗಿ ಅವರು ಶೂನ್ಯಸಂಪಾದನೆಗಳನ್ನು ಕುರಿತು ಮೂರು ಮೌಲಿಕ ಲೇಖನಗಳನ್ನು ಬರೆದಿದ್ದಾರೆ. (ಶೂನ್ಯಸಂಪಾದನೆ–ರಾಚನಿಕ ವಿವೇಚನೆ; ಶೂನ್ಯ ಸಂಪಾದನೆ ಇನ್ನಷ್ಟು ವಿಚಾರಗಳು; ಶೂನ್ಯಸಂಪಾದನೆಗಳು ಎಷ್ಟು? ಕಾಲಾನುಕ್ರಮ ಯಾವುದು?–ಇವುಗಳನ್ನು ಸಂದರ್ಭಾನುಸಾರ ಪ್ರಸ್ತಾವನೆಯಲ್ಲಿ ಅಳವಡಿಸಿಕೊಳ್ಳಲಾಗಿದೆ). ಅಲ್ಲದೆ ಇನ್ನೂ ಕೆಲವು ಹೊಸ ವಿಚಾರಗಳು ಹೊಳೆದಿವೆ. ಅವುಗಳನ್ನು ಈ ಕೃತಿಯಲ್ಲಿ ಸೇರಿಸೋಣ ಎಂದು ಹೇಳುತ್ತಿದ್ದರು. ಆದರೆ ಅವರ ಹತ್ಯೆಯಿಂದ ಅದು ಕಾರ್ಯರೂಪಕ್ಕೆ ಬರದೇ ಇದ್ದುದು ಎಂದಿಗೂ ತುಂಬಲಾರದ ನಷ್ಟವೆನಿಸಿದೆ. ಅವರ ಮೂರು ಲೇಖನಗಳನ್ನು ಒಳಗೊಂಡಂತೆ ನನ್ನದೇ ಆದ ರೀತಿಯಲ್ಲಿ ಈ ಮಣಿಹವನ್ನು ಮಾಡಿ ಮುಗಿಸಿದ್ದೇನೆ.

ಈ ಕೃತಿ ಪರಿಷ್ಕರಣೆಗೆ ಅಪೂರ್ವವಾದ ಹಸ್ತಪ್ರತಿಯನ್ನು ಒದಗಿಸಿದ ಬೆಂಗಳೂರ ವಿ.ವಿ. ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರು ಹಾಗೂ ಹಸ್ತಪ್ರತಿ ಭಂಡಾರದ ನಿರ್ದೇಶಕರಿಗೆ ಅನಂತ ಧನ್ಯವಾದಗಳು. ಪರಿಷ್ಕರಣಕಾರ್ಯದಲ್ಲಿ ವಿಶೇಷವಾಗಿ ನೆರವಾದ ಅಧ್ಯಾಪಕ ಮಿತ್ರ ಡಾ.ಪಿ.ಕೆ. ರಾಠೋಡ ಅವರಿಗೆ, ಡಿ.ಟಿ.ಪಿ. ಕಾರ್ಯವನ್ನು ನಿಷ್ಠೆಯಿಂದ ನಿರ್ವಹಿಸಿದ ಡಾ. ಸರಸ್ವತಿದೇವಿ ಶಂ. ಭಗವತಿ, ಡಾ. ಹನುಮಂತ ಮೇಲಿನಮನಿ ಮತ್ತು ಯಲಗೂರೇಶ ಮೇಲಿನಮನಿ ಅವರಿಗೆ, ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಗದುಗಿನ ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಕೆ. ಅಶೋಕ ಅವರಿಗೆ, ಲಿಂಗಾಯತ ಅಧ್ಯಯನ ಸಂಸ್ಥೆಯ ಪ್ರಕಟಣೆಗಳೆಲ್ಲ ಉನ್ನತ ಗುಣಮಟ್ಟವನ್ನು ಕಾಯ್ದುಕೊಳ್ಳುವಂತೆ ನೋಡಿಕೊಳ್ಳುತ್ತಿರುವ ಕಾರ್ಯದರ್ಶಿಗಳಾದ ಶ್ರೀ ಶಿವನಗೌಡ ಅವರಿಗೆ ಅನಂತ ಕೃತಜ್ಞತೆಗಳು.

೨೦–೦೪–೨೦೧೬. **–ಡಾ. ವೀರಣ್ಣ ರಾಜೂರ**

❖❖

*

ಪರಿವಿಡಿ

ಅನುಬಂಧಗಳು

❖❖

ಪ್ರಭುದೇವರ
ಶೂನ್ಯಸಂಪಾದನೆ

೧
*ಪ್ರಥಮೋಪದೇಶ

ಕಂದ:

ಶ್ರೀ ವಿಮಲ ಮುಕ್ತಿದಾಯಕ
ಪಾವನಮಯ ಪರಮಚರಿತ ಷಟ್‌ಸ್ಥಲನಾಯಕ
ಭೂವಿನುತ ಸಚ್ಚಿದಾತ್ಮಕ
ಭಾವಜಹರ ಸಲಹು ಸಿದ್ಧಲಿಂಗ ಸುದೇಶಿಕ ॥೧॥

ಆಮಿಷಕುಂತಳ ಛೇದ್ಯನ
ಪ್ರೇಮದಿ ಪದ ನಾಲ್ಕ ಶರಣಜನಕೀವುತ್ತ ನಿ
ರಾಮಯನೆನಿಪನನೊಲ್ದು ಮ
ನೋಮುದದಿಂ ನುತಿಪೆ ಬೋಳಬಸವೇಶಾರ್ಯನ ॥೨॥

ವರ ಬೋಳಬಸವದೇಶಿಕ
ನುರುತರ ಕೃಪೆಯಾಂತು [೧]ಅಲ್ಲಮ[೧]ಪ್ರಭುರಾಯನ
ಪರಮಾನುಭಾವಬೋಧೆಯ
ನೊರೆದನು ಗೂಳೂರ ಸಿದ್ಧವೀರಾಚಾರ್ಯಂ ॥೩॥

ಶ್ರೀಮತ್ ಪರಾತ್ಪರ ಪರಶಿವ ನಿತ್ಯನಿರ್ಮಲ ನಿರಘ ನಿರಸೂಯ ಅನಿರ್ವಾಚ್ಯ ಪರಂಜ್ಯೋತಿಸ್ವರೂಪ ಷಟ್‌ಸ್ಥಲಜ್ಞಾನ ಪ್ರಭಾಪುಂಜರಂಜಿತ ಸಕಲಭಕ್ತ ಹೃತ್‌ಕಮಲ ಕರ್ಣಿಕಾವಾಸ ಶರಣಜನಮುಕ್ತಿಪ್ರದಾಯಕ ಅಖಿಳ ಜಗದಾರಾಧ್ಯರಪ್ಪ [೧]ತೋಂಟದ[೧] ಸಿದ್ಧಲಿಂಗೇಶ್ವರನ

---

* ಶ್ರೀ ಗುರು ಬಸವಲಿಂಗಾಯ ನಮಃ ಮಂಗಳ ಮಸ್ತು (ಮೂ) ೧-೧ ಅಲ್ಲಮಾ (ಮೂ)
೧-೧ ತೋಟದ (ಮೂ)

ಕೃಪಾಪ್ರಸನ್ನಪಾತ್ರರಾದ ಬೋಳಬಸವೇಶ್ವರನು ಮುಖ್ಯವಾದ ವಸುಧೆಯ ಷಟ್‌ಸ್ಥಲಜ್ಞಾನಿಗಳಾದ ದಿವ್ಯಾನುಭಾವಿಗಳ ಬೋಧೆವಿಡಿದು, ಗೂಳೂರ ಸಿದ್ಧವೀರೇಶ್ವರನೆಂಬ ಮಹಾನುಭಾವಿಯು ನಿತ್ಯ ನಿರಂಜನ ನಿವರ್ಾಯನೆನಿಪ [೧]ಅಲ್ಲಮ[೧]ಪ್ರಭುದೇವರು ಸಮಸ್ತ ಮಹಾಗಣಂಗಳಿಗೆ ದಿವ್ಯಜ್ಞಾನಪ್ರಸಂಗಮಂ ಬೋಧಿಸಿದ ಕ್ರಮಮಂ ಅಖಿಲ[೨] ಪುರಾತನರ ವಚನಂಗಳಿಂದ ಸಂಗ್ರಹಿಸಿದೆವು. ಶಿವಗಣಂಗಳಿಗೆ ಶರಣಾರ್ಥಿ.

ಪ್ರಥಮದಲ್ಲಿ ಅಖಂಡಾದ್ವಯ ಅನುಪಮ ನಿರವಯ ನಿರಂಜನ ಸರ್ವಶೂನ್ಯವನೊಳಕೊಂಡ ಸಚ್ಚಿದಾನಂದ ನಿತ್ಯಪರಿಪೂರ್ಣವಪ್ಪ ನಿಃಕಲಲಿಂಗವು [೩]ಧ್ಯಾನಪೂಜೆಗಳಿಲ್ಲದೆ ನಿರವಯದಲ್ಲಿ ಬಯಲಿಗನಾಗಿ ಇರಬಾರದೆಂದು, ತನ್ನ[೪] ಸ್ವೇಚ್ಛಾಲೀಲಾವಿಲಾಸದ ನೆನಹಿನಿಂದ ತನ್ನ ಚಿತ್‌ಪ್ರಭಾಸಾಮರ್ಥ್ಯಶಕ್ತಿಯ ಮುಂದುಗೊಂಡು, ಅನಂತಕೋಟಿ ಬ್ರಹ್ಮಾಂಡಂಗಳನು ಅಣುಕೋಟಿ ಆತ್ಮರುಗಳನು ತನ್ನಲ್ಲಿಯೆ ಪುಟ್ಟಿಸಿ, ಆ ಆತ್ಮರುಗಳಿಗೆ ಪಂಚವಿಂಶತಿ ತತ್ತ್ವಂಗಳ ಸಂಬಂಧಿಸಿದಲ್ಲಿ, ಆ ಆತ್ಮರುಗಳು ದೇಹೋಹಂ ಎಂದು ಜಾತಿ ವರ್ಣಾಶ್ರಮ ಕುಲ ಗೋತ್ರ, ನಾಮ ಸೀಮೆ, ಸುಖದುಃಖ ಬಂಧಮೋಕ್ಷಕ್ಕೊಳಗಾಗಿ, ತಮ್ಮ ನಿಜಸ್ವರೂಪಮಂ ಮಱೆದ ಆತ್ಮರುಗಳ ಕಾಲ ಕಾಮರಿಗೆ ವಶ[೫]ಮಾಡಿ, ಅವರ ಸುಖ ದುಃಖ ಬಂಧ-ಮೋಕ್ಷಂಗಳ ಹೊದ್ದದೆ ಯಂತ್ರವಾಹಕನಾಗಿ ಆಡಿಸುತ್ತಿಪ್ಪ[೬]ನಾ ಪರಶಿವಲಿಂಗವು. ಅಂತಪ್ಪ ಆತ್ಮರುಗಳೊಳಗೆ ಜನ್ಮದ ಕಡೆಗಂಡು, ಶಿವಸಂಸ್ಕಾರವೊದಗಿ,[೭] ಸಂಸಾರ ವಿಮೋಚನಮಂ ಮಾಡಿ, ಗುರೂಪಾವಸ್ತೆಯಂ ಮಾಡುತ್ತಿರಲು, ಆ ಪರಶಿವಲಿಂಗವು ಗುರುವಾಗಿ ಬಂದು, ತ್ರಿವಿಧದೀಕ್ಷೆಯಿಂದ ಮಲತ್ರಯಂಗಳ ಕಳೆದು, ದೀಕ್ಷಿಸಿ ರಕ್ಷಿಸಿದ; ಲಿಂಗಸ್ವರೂಪವಾಗಿ ಬಂದು ಕರಸ್ಥಲದಲ್ಲಿ ಪೂಜೆಗೊಂಡು ರಕ್ಷಿಸಿದ; ಜಂಗಮ ಸ್ವರೂಪವಾಗಿ ಬಂದು, ಅಂತರಂಗ ಬಹಿರಂಗದಲ್ಲಿ ಭರಿತವಾಗಿ ಬೋಧಿಸಿ, ಶಿಕ್ಷಿಸಿ ರಕ್ಷಿಸಿ[೮] ದೇಹಭಾವಕ್ಕೆ ಬೋಧ ಪ್ರಸಾದವ ಕರುಣಿಸಿ, ತನ್ನೊಳಗೆ ಕೂಡಿಕೊಳುತಿಪ್ಪ[೯]ನು ಆ ನಿಃಕಲಪರಶಿವಲಿಂಗವು. ಆ ನಿಃಕಲ ಪರಶಿವನ ಸಚ್ಚಿದಾನಂದ ಸ್ವರೂಪವೆನಿಸಿದ ಬಸವಣ್ಣ ಚೆನ್ನಬಸವಣ್ಣ ಪ್ರಭುದೇವರೇ ಗುರು ಲಿಂಗ ಜಂಗಮ ಸ್ವರೂಪವಾಗಿ ಸಕಲ ಜಗತ್ ಪಾವನವಾಗಿ ಮರ್ತ್ಯಕ್ಕೆ ಅವತರಿಸಿದರು. ಇಂತೀ ಗುರು ಲಿಂಗ ಜಂಗಮ ಮೂಱು ಆ ನಿಃಕಲಪರಶಿವಲಿಂಗ ತಾನೆ. ಆ ಪರಶಿವಲಿಂಗವು ಜಗಹಿತಾರ್ಥವಾಗಿ ಮೂಱಾಗಿ ಮರ್ತ್ಯಕ್ಕೆ ಅವತರಿಸಿದರೆ, ಇದೇನು ಕಾರಣ ಮರ್ತ್ಯಕ್ಕೆ ಬಂದರೆಂದು ಸಂಕಲ್ಪಿಸಿ, ಶಾಪದಿಂದ ಬಂದರೆಂದು ಆವನಾನೊಬ್ಬ ನುಡಿವುತಿದ್ದಾನು. ಅವನು ಇಪ್ಪತ್ತೆಂಟು ಕೋಟಿ ನರಕದಲ್ಲಿ ರವಿಶಶಿವುಳ್ಳನ್ನಬರ ನರಕವನನುಭವಿಸುತ್ತಿರ್ಪನು. ಅಂತಲ್ಲದೆ ಜಗಹಿತಾರ್ಥವಾಗಿ ನಾಲ್ಕು ಯುಗಂಗಳಲ್ಲಿ ಅವತರಿಸಿದರೆಂಬುದಕ್ಕೆ ಪ್ರಭುದೇವರ ಚೆನ್ನಬಸವೇಶ್ವರದೇವರ ಸ್ವಯವಚನವೆ ಸಾಕ್ಷಿ. ಅಂದೆಂತೆಂದೊಡೆ:

ಕೃತಯುಗದಲ್ಲಿ ಜಗಹಿತಾರ್ಥವಾಗಿ ಬಂದು ದೇವಾಂಗನೆಂಬ ಗಣೇಶ್ವರನಾಗಿ ಆರಾಧಿಸುವಲ್ಲಿ, ಭಕ್ತಿಕಾರಣ ಸ್ಥೂಲಕಾಯನೆಂಬ ಜಂಗಮವಾಗಿ ಬಂದು ಲಿಂಗಾರ್ಚನೆಯ ಮಾಡಿ ಹೋದನು. ತ್ರೇತಾಯುಗದಲ್ಲಿ ಜಗಹಿತಾರ್ಥವಾಗಿ ಘಂಟಾಕರ್ಣನೆಂಬ ಗಣೇಶ್ವರನಾಗಿ ಬಂದು ಆರಾಧಿಸುವಲ್ಲಿ, ಭಕ್ತಿಕಾರಣ ಶೂನ್ಯಕಾಯನೆಂಬ ಜಂಗಮವಾಗಿ ಬಂದು ಲಿಂಗಾರ್ಚನೆಯ ಮಾಡಿ ಹೋದರು.

೧-೧ ಅಲ್ಲಮಾ (ಮೂ) ೨ ಳ (ಮು) ೩+ಶಿವ (ಮೂ) ೪-೪ ಸ್ವಯಿಚ್ಛಾ (ಮು) ೫+ವ (ಮು) ೬ ರ್ಪ(ಮು) ೭+ ದೇಹಭಾವಕ್ಕೆ ಹೇಸಿ (ಮು) ೮+ ದ (ಮು) ೯ರ್ಪ (ಮು)

ದ್ವಾಪರದಲ್ಲಿ ಜಗಹಿತಾರ್ಥವಾಗಿ ವೃಷಭನೆಂಬ ಗಣೇಶ್ವರನಾಗಿ ಬಂದು ಆರಾಧಿಸುವಲ್ಲಿ, ಭಕ್ತಿಕಾರಣ ಅನಿಮಿಷನೆಂಬ ಜಂಗಮವಾಗಿ ಬಂದು ಲಿಂಗಾರ್ಚನೆಯ ಮಾಡಿ ಹೋದನು. ಕಲಿಯುಗದಲ್ಲಿ ಜಗಹಿತಾರ್ಥವಾಗಿ ಬಸವನೆಂಬ ಗಣೇಶ್ವರನಾಗಿ ಬಂದು ಗುರು ಲಿಂಗ ಜಂಗಮ ಪಾದೋದಕ ಪ್ರಸಾದದ ಹಾದಿಯನೆಲ್ಲರಿಗೆ ತೋರಿಸಿ ಆರಾಧಿಸುವಲ್ಲಿ, ಭಕ್ತಿಕಾರಣ ಪ್ರಭುವೆಂಬ ಜಂಗಮವಾಗಿ ಲಿಂಗಾರ್ಚನೆಯ ಮಾಡಬಂದ. ಇಂತೀ ಪರಶಿವಲಿಂಗವು ತನ್ನ ಲೀಲಾವಿನೋದಕ್ಕೆ ದೇವಭಕ್ತನೆಂಬ ಉಭಯನಾಮವ ಧರಿಸಿದ ಕ್ರಿಯಾಂಗವನಱಿಯದೆ, ಶಾಪದಿಂದ ಬಂದರೆಂದು ಸಂಕಲ್ಪಿಸಿ ನುಡಿವವರಿಗೆ ನಾಯಕ ನರಕ ತಪ್ಪದು.[೧]

ಇನ್ನು ಪ್ರಭುದೇವರ ಗದ್ಯ:

ಶ್ರೀಮತ್‌ಪರಮ ಪರಮಾನಂದ ಪರಂಜ್ಯೋತಿ ಪರಮೇಶ್ವರ ಅಗಮ್ಯ ಅಗೋಚರ ಅಪ್ರಮೇಯ ಅನಾಮಯ ಅನೌಪಮ್ಯ ಅಪ್ರತರ್ಕ್ಯ ಮಹಾಜ್ಞಾನಪ್ರಭಾಮಯ, ಯಮ ನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧ್ಯಾದ್ಯಷ್ಟಾಂಗಯೋಗೀಶ್ವರ, ದೇಹೇಂದ್ರಿಯ ಮನಃ ಪ್ರಾಣಾಹಂಕಾರಾದಿ ಗುಣ ಧರ್ಮಕರ್ಮ ನಿರ್ಲೇಪನ, ಸಕಲಭುವನಾಂತರಂಗ, ನಿತ್ಯನಿರ್ಮಲಸ್ವರೂಪ, ಶಿವಶರಣ ಹೃತ್ಕಮಲಕರ್ಣಿಕಾವಾಸಮತ್ತಮಧುಕರಾಯಮಾನ, ಇಷ್ಟಲಿಂಗ ಪ್ರಾಣಲಿಂಗ ತೃಪ್ತಿಲಿಂಗಾಲಿಂಗಿತಾಂಗಲೇಪ, ಗುರು ಲಿಂಗ ಜಂಗಮ ಪ್ರಸಾದ ಪಾದೋದಕಾದಿ ಪಂಚಾಚಾರ ಪ್ರತಿಷ್ಠಾ[೨]ಪನಾಚಾರ್ಯ, ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣೈಕ್ಯಾದಿ ಷಟ್‌ಸ್ಥಲ ಚಕ್ರವರ್ತಿ, ಬಸವ ಚನ್ನಬಸವರಾಜ ಪ್ರಾಣನಾಯಕ, ಶ್ರೀ ವೀರಶೈವಾಚಾರಶಿರೋರತ್ನ, ಶ್ರೀ ವೀರಶೈವಾಚಾರ ಪ್ರಮಥನಾಯಕ, ಶ್ರೀ ವೀರಶೈವಾಚಾರ ದೀಕ್ಷಾಚಾರ್ಯ, ಮರ್ತ್ಯಲೋಕ ಪಾವನಕಾರಣಾವತಾರ, ಅನಿಮಿಷಶ್ರೀಚರಣಾಂಭೋಜಕರ್ಣಿಕಾವಾಸ, ಗೊಹೇಶ್ವರ ನಾಮಾಮೃತಸ್ವೀಕಾರಸಂತುಷ್ಟ, ಶ್ರೀಮತ್ಸಕಲಜಗದಾಚಾರ್ಯರುಮಪ್ಪ ಅಲ್ಲಮ[೩]ಪ್ರಭುದೇವರು, ಚೆನ್ನಬಸವರಾಜದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳೊಡನೆ ಮಹಾನುಭಾವಪ್ರಸಂಗಮಂ ಮಾಡಿದ [೪]ಶೂನ್ಯಸಂವಾದದ[೪] ಸದ್‌ಗೋಷ್ಠಿ ಕಥಾಪ್ರಸಂಗವನು, ಮುಕ್ತಕಮಾಗಿರ್ದ ಶಿವಾದ್ವೈತ ವಚನಂಗಳನು ಉತ್ತರ ಪ್ರತ್ಯುತ್ತರ ಸಂಬಂಧವಾಗಿ ಸೇರಿಸಿ, ಶಿವಗಣಪ್ರಸಾದಿ ಮಹಾದೇವಯ್ಯಗಳು ಮರ್ತ್ಯಲೋಕದ ಮಹಾಗಣಂಗಳಿಗೆ ಆ ಮಹಾಪ್ರಸಂಗಮಂ ಸಮರ್ಪಿಸಿದಲ್ಲಿ, ಸಿದ್ಧರಾಮೇಶ್ವರದೇವರಿಗೆ ಉಪದೇಶಕ್ರಮವಿಲ್ಲದಿರ್ದೊಡೆ, ಗುಮ್ಮಳಾಪುರದ ಸಿದ್ಧಲಿಂಗದೇವರು ಸಮಸ್ತ ಪುರಾತನರ ವಚನಸನ್ಮತದಿಂ ಸಂಗ್ರಹಿಸಲು, ಆ ಕ್ರಮವಿಡಿದು ಈ ಶೂನ್ಯಸಂಪಾದನೆಯ ಸೇರಿಸಿ ಶಿವಗಣಂಗಳಿಗೆ ಸಮರ್ಪಿಸಿದೆವು.

---

೧. ಇದಕ್ಕೆ ಕೆಲವು ಹಸ್ತಪ್ರತಿಗಳಲ್ಲಿ 'ಕೂಡಲಸಂಗಮದೇವಾ' ಎಂಬ ಅಂಕಿತವಿದೆ. ಫ.ಗು. ಹಳಕಟ್ಟಿಯವರ ಆವೃತ್ತಿಯಲ್ಲಿ ಅದು–'ಕೂಡಲಚೆನ್ನಸಂಗಮದೇವಾ' ಎಂದಿದೆ. ಈ ವಚನ ಕೆಲವು ಭಿನ್ನಪಾಠಗಳೊಂದಿಗೆ ಚೆನ್ನಬಸವಣ್ಣನವರ ವಚನ ಸಂಪುಟದಲ್ಲಿ ಸೇರಿದೆ. ವ. ಸಂ. ೧೧೨೯.

೨+ ಸ್ಥಾ (ಮೂ) ೩ + ಮಾ (ಮೂ) ೪–೪ ಶೂನ್ಯಸಂಪಾದನೆಯ (ಮು)

ಪ್ರಥಮದಲ್ಲಿ ಪ್ರಭುದೇವರು ನಿರೂಪಿಸಿದ ಪಿಂಡಸ್ಥಲದ ವಚನ:

೧

ಕಲ್ಲೊಳಗಣ[೧] ಪಾವಕನಂತೆ,
ಉದಕದೊಳಗಣ ಪ್ರತಿಬಿಂಬದಂತೆ,
ಬೀಜದೊಳಗಣ ವೃಕ್ಷದಂತೆ,
ಶಬ್ದದೊಳಗಣ ನಿಶ್ಶಬ್ದದಂತೆ
ಗೊಹೇಶ್ವರಾ, ನಿಮ್ಮ ಶರಣ ಸಂಬಂಧ.[೨] ॥೧॥

೨

ಕಲ್ಲೊಳಗಣ ಕಿಚ್ಚು ಉರಿಯಬಲ್ಲುದೆ?
ಬೀಜದೊಳಗಣ ವೃಕ್ಷ ಉಲಿಯಬಲ್ಲುದೆ?
ತೋಱಲಿಲ್ಲಾಗಿ ಬೀಱಲಿಲ್ಲಾರಿಗೆಯು.
[೩]ಗೊಹೇಶ್ವರ[೩] ನಿಂದ ನಿಲವನನುಭವಸುಖಿ ಬಲ್ಲಾ! ॥೨॥

ಇಂತು ಪಿಂಡದಲ್ಲಿ ಶಿವತತ್ತ್ವವನಡಗಿಸಿಕೊಂಡಿರ್ದ ಆತ್ಮನ ಅಂತರಂಗದೊಳಗಣ ಶಿವತತ್ತ್ವವೆ ಜ್ಞಾನಾಂಕುರಸ್ವರೂಪಮಾಗಿ, ಆ ಸುಜ್ಞಾನದೃಷ್ಟಿಯಿಂ ತಿಳಿದು ನೋಡಿ, ನಾನೀ ಮಾಂಸಪಿಂಡದುತ್ಪತ್ತಿ ಸ್ಥಿತಿ ಲಯದವನಲ್ಲ; ಈ ಬ್ರಹ್ಮಾಂಡಾದಿ ಸಮಸ್ತ ಪ್ರಪಂಚುಗಳು ತೋಱದ ಮುನ್ನ ಆದಿಚಿತ್‌ಶಕ್ತಿಯಿಂದುದಯಿಸಿದೆನೆಂದು ಆತ್ಮನು ತನ್ನ ತಾನು ವಿವೇಕಿಸುತ್ತಿರ್ದನೆಂದು ಪ್ರಭುದೇವರು ನಿರೂಪಿಸುತ್ತಿರ್ದರದೆಂತೆಂದೊಡೆ:

ಪಿಂಡಜ್ಞಾನಸ್ಥಲದ ವಚನ:

೩

ಆದಿಯಾಧಾರವಿಲ್ಲದಂದು,
ಹಮ್ಮು ಬಿಮ್ಮುಗಳಿಲ್ಲದಂದು
ಸುರಾಳ ನಿರಾಳವಿಲ್ಲದಂದು,
ಶೂನ್ಯ ನಿಃಶೂನ್ಯವಿಲ್ಲದಂದು,
ಸಚರಾಚರವೆಲ್ಲಾ ರಚನೆಗೆ ಬಾರದಂದು,
[೪]ಗೊಹೇಶ್ವರ[೪]ನ ಶರಣನುದಯಿಸಿದನಂದು. ॥೩॥

೧+ಕಿಚ್ಚು (ಮೂ) ೨+ವು (ಮೂ) ೩-೩ ಗೊಗ್ಗೇಶ್ವರ (ಮೂ)೪-೪ ಗೊಗ್ಗೇಶ್ವರ (ಮೂ)

೪

ನಾದ ಬಿಂದುಗಳಿಲ್ಲದಂದು ನಿರ್ಭಯನೆಂಬ ಗಣೇಶ್ವರನು.
ಉತ್ಪತ್ತಿ ಸ್ಥಿತಿಲಯಂಗಳಿಲ್ಲದಂದು ಅಕ್ಷಯನೆಂಬ ಗಣೇಶ್ವರನು
ಓದು ವೇದಂಗಳಿಲ್ಲದಂದು ಓಂಕಾರನೆಂಬ ಗಣೇಶ್ವರನು.
ಯುಗಜುಗಂಗಳಿಲ್ಲದಂದು ಊರ್ಧ್ವಮುಖನೆಂಬ ಗಣೇಶ್ವರನು.
[೧]ಗೊಹೇಶ್ವರ[೧]ಲಿಂಗವಿಲ್ಲದಂದು ನಿರ್ಮಾಯನೆಂಬ ಗಣೇಶ್ವರನು. ॥೪॥

ಇಂತು ನಿಃಕಲಪರಶಿವಲಿಂಗವೆ ತನ್ನ ಲೀಲಾವಿನೋದದಿಂದ ಅನಂತಕೋಟಿ ಬ್ರಹ್ಮಾಂಡಂಗಳನು ತನ್ನಲ್ಲಿಯೆ ಪುಟ್ಟಿಸಿ ವಿಲಾಸಿಸುತ್ತಿರ್ಪ ಪರಶಿವಲಿಂಗದ ನಿಃಕಲಕ್ಕೆ ಕಾರಣವೆ ಪ್ರಭುದೇವರು. ಆ ಪ್ರಭುದೇವರೆ ಭಕ್ತಿಕಾರಣ ನಾಲ್ಕು ಯುಗಂಗಳಲ್ಲಿ ಅವತರಿಸಿದಲ್ಲಿ, ನಿರ್ಮಾಯ ನಿರಂಜನ ಮಾಯಾಕೋಳಾಹಳನೆಂಬುದೆ ಸತ್ಯ. ಹೀಗಲ್ಲದೆ ಮಾಯಾಸಕ್ತನು, ಮಾಯಾವಶಗತನೆಂದು ನುಡಿವವರುಗಳಿಗೆ ಗುರುಲಿಂಗಜಂಗಮದ್ರೋಹ ತಪ್ಪದು. ಮಾಯಾಕೋಳಾಹಳನೆಂಬುದಕ್ಕೆ ಹಡಪದಪ್ಪಣ್ಣಗಳ ವಚನವೆ ಸಾಕ್ಷಿ. ಅದಲ್ಲದೆ ಪ್ರಭುದೇವರ ಸ್ವಯವಚನವೆ ಸಾಕ್ಷಿ. ಅದೆಂತೆಂದೊಡೆ:

೫

ಬ್ರಹ್ಮವಿಷ್ಣುಗಳ ಮಾಯೆ ತೊತ್ತಳದುಳಿವಂದು
ದೇವ ದಾನವರ ಮಾಯೆ ಅಗಿದಗಿದು ತಿಂಬಂದು,
ರುದ್ರಗಣ ಪ್ರಮಥಗಣಂಗಳೆಂಬವರ
ಮಾಯೆ ಮರುಳ್ಮಾಡಿ ಕಾಡುವಂದು,
ನೊಸಲಕಣ್ಣು ಪಂಚಮುಖ ದಶಭುಜದವರಿಗೆ
ಮಾಯೆ ಅರ್ಧಾಂಗಿಯಾದಂದು,
ಅಷ್ಟಾಶೀತಿಸಹಸ್ರ ಋಷಿಗಳ ಮಾಯೆ ತಪೋ ಮದದಲ್ಲಿ ಕೆಡಹುವಂದು,
ನಾನು ಮಾಯಾಕೋಳಾಹಳನಾಗಿರ್ದೆ ಕಾಣಾ [೧]ಗೊಹೇಶ್ವರಾ.[೧] ॥೫॥

ಇಂತು ಪ್ರಭುದೇವರು ಮರ್ತ್ಯಲೋಕದಲ್ಲಿ ನಾಲ್ಕು ಯುಗಂಗಳಲ್ಲಿಯೂ ಅನಾದಿ ಗಣೇಶ್ವರತ್ವಮಂ ತಾಳಿ ಮಾಯಾಕೋಳಾಹಳನಾಗಿ ಬಂದೆವೆಂದು ನಿರೂಪಿಸಿದ ವಚನ:

೬

ಕೃತಯುಗದಲ್ಲಿ ನಾನು ಭಕ್ತಿಕಾರಣ
ಸ್ಥೂಲಕಾಯನೆಂಬ ಗಣೇಶ್ವರನಾಗಿರ್ದೆನಯ್ಯ.
ತ್ರೇತಾಯುಗದಲ್ಲಿ ನಾನು ಭಕ್ತಿಕಾರಣ
ಶೂನ್ಯಕಾಯನೆಂಬ ಗಣೇಶ್ವರನಾಗಿರ್ದೆನಯ್ಯ.
ಕಲಿಯುಗದಲ್ಲಿ ನಾನು ಭಕ್ತಿಕಾರಣ
ಅಲ್ಲಮಪ್ರಭುವೆಂಬ ಗಣೇಶ್ವರನಾಗಿರ್ದೆ ಕಾಣಾ [೧]ಗೊಹೇಶ್ವರಾ.[೧] ॥೬॥

೧–೧ ಗೊಗ್ಗೇಶ್ವರ (ಮೂ)

ಇಂತು ಅನಾದಿ ಗಣೇಶ್ವರತ್ವವ[1] ನಿರೂಪಿಸಿದ ಪ್ರಭುದೇವರು, ಆದಿಚಿತ್‌ಶಕ್ತಿಯಿಂದುದಯಿಸಿದೆನೆಂದಱಿದಾತ್ಮನು ತನ್ನಿಂದನ್ಯವಾದ ಸಂಸಾರ ಭ್ರಾಂತಿಯಂ ನಿವೃತ್ತಿಮಾಡುತ್ತಿರ್ದನೆಂದು ನಿರೂಪಿಸಲು ಸಂಸಾರಹೇಯಸ್ಥಲವಾದುದು.

ಸಂಸಾರಹೇಯಸ್ಥಲದ ವಚನ:

೭

ಕಾಯದ ಮೊದಲಿಂಗೆ ಬೀಜವಾವುದೆಂದಱಿಯದೀ ಲೋಕವೆಲ್ಲ.
ಇಂದ್ರಿಯಂಗಳು ಬೀಜವಲ್ಲ; ಆ ಕಳಾಭೇದವಲ್ಲ.
ಸ್ವಪ್ನ ಬಂದೆಱಗಿತ್ತಲ್ಲಾ!
ಇದಾವಂಗೆ ತಿಳಿಯಬಾರದಾಗಿ
ಶುದ್ಧ ಸುಯಿದಾನವಲ್ಲ ಕಾಣಾ ಗೊಹೇಶ್ವರಾ. ॥೭॥

೮

ಹಳ್ಳದೊಳಗೆ ಹುಳ್ಳಿ ಬರುತ್ತಿರಲು
ನೊರೆತೆರೆಗಳು ತಾಗದಿಪ್ಪವೇ?
ಸಂಸಾರಸಾಗರದೊಳಗೆ ಮುಳುಗಾಡುತಿರ್ಪ ಪ್ರಾಣಿಗಳಿಗೆ
ಸುಖದುಃಖಂಗಳು ತಾಗದಿಪ್ಪವೇ?
ಇದು ಕಾರಣ, ಮೂರ್ತಿಯಾದುದಕ್ಕೆ
ಪ್ರಳಯ ತಪ್ಪದು ಕಾಣಾ ಗೊಹೇಶ್ವರಾ? ॥೮॥

೯

ಆಯಿತ್ತೆ ಉದಯಮಾನ, ಹೋಯಿತ್ತೆ ಅಸ್ತಮಾನ,
ಅಳಿದವಲ್ಲಾ ನೀರಲಾದ ನಿರ್ಮಿತಂಗಳೆಲ್ಲಾ!
ಕತ್ತಲೆ ಕವಿಯಿತ್ತು ಮೂಱು ಲೋಕದೊಳಗೆ!
ಇದಱಚ್ಚುಗವೇನು ಹೇಳಾ ಗೊಹೇಶ್ವರಾ? ॥೯॥

೧೦

ಸಂಸಾರವೆಂಬ ಹೆಣ [2]ಬಿದ್ದಿರೆ[2]
ತಿನಬಂದ ನಾಯ ಜಗಳವ ನೋಡಿರೆ!
ನಾಯ ಜಗಳವ ನೋಡಿ ಹೆಣ ನಗುತ್ತಿದೆ !
ಗೊಹೇಶ್ವರನೆಂಬ ಲಿಂಗವಲ್ಲಿಲ್ಲ ಕಾಣಿರಯ್ಯಾ. ॥೧೦॥

೧೧

ನೀರ ಬೊಂಬೆಯ ಚೋಹವ ತೊಟ್ಟು,
ಅಗ್ನಿಬಣ್ಣದ ಹೊದಕೆಯ ಹೊದ್ದು,

---

೧. ಮಂ (ಮು) ೨-೨ ಬಿದ್ದರೆ (ಮೂ)

ಗಾಳಿಯ ಗತಿಯಲ್ಲಿ ಸುಳಿದಾಡುವ ಪ್ರಾಣಿಗಳು
ದೇವರನೆತ್ತ ಬಲ್ಲರು ಗೊಹೇಶ್ವರಾ? ॥೧೧॥

೧೨

ನೆಲದ ಬೊಂಬೆಯ ಮಾಡಿ, ಜಲದ ಬಣ್ಣವನುಡಿಸಿ,
ಹಲವು ಪರಿಯಾಶ್ರಮದಲ್ಲಿ ಉಲಿವ ಗೆಜ್ಜೆಯ ಕಟ್ಟಿ,
ವಾಯುವನಲನ ಸಂಚಕ್ಕೆ ಅರಳೆಲೆಯ ಶೃಂಗಾರವ ಮಾಡಿ
ಆಡಿಸುವ ಯಂತ್ರವಾಹಕನಾರೋ?
ಬಯಲ ಕಂಭಕ್ಕೆ ತಂದು ಸ್ವಯವಾಗಿ ಪರವ ನೆಲೆಗೊಳಿಸಿದರೆ,
ಸ್ವಯವದ್ವಯವಾಯಿತ್ತು ಕಾಣಾ ಗೊಹೇಶ್ವರಾ. ॥೧೨॥

೧೩

ಮಾನದ ತೋರಿಹ ಆಕಳಿಗೆ ಕೊಳಗದ ತೋರಿಹ ಕೆಚ್ಚಲು,
ತಾಳಮರದುದ್ದಿಹವೆರಡು [೧]ಕೋಡು[೧]
ಅದನಱಸ ಹೋಗಿ ಆಱುದಿನ, ಅದು ಕೆಟ್ಟು ಮೂಱುದಿನ.
ಅಘಟಿತಘಟಿತ ಗೊಹೇಶ್ವರಾ ಅಱಸುವ ಬಾರ್ಯೆ. ॥೧೩॥

೧೪

ಅಡವಿಯೊಳಗೆ ಕಳ್ಳರು ಕಡವಸದ ಸ್ವಾಮಿಯನು
ಹುಡುಕಿ ಹುಡುಕಿ ಅಱಸುತ್ತೈದಾರೆ.
ಸೊಡರು ನಂದಿ ಕಾಣದೆ, ಅನ್ನಪಾನದ ಹಿರಿಯರೆಲ್ಲರು
ಅಧರಪಾನವನುಂಡು, ಸುರಾಪಾನವ ಬೇಡುತ್ತೈದಾರೆ,
ಅಜಿದ ಹಾರುವನೊಬ್ಬ ಅರಿದ[೨] ತಲೆಯ ಹಿಡಿದುಕೊಂಡು,
ಅಧ್ಯಾತ್ಮ ವಿಕಾರದ ನೆತ್ತರ ಕುಡಿದನು ಗೊಹೇಶ್ವರಾ. ॥೧೪॥

೧೫

ಜಂಬೂದ್ವೀಪದ ವ್ಯವಹಾರಿ ಖಂಡ ಭಂಡವ ತುಂಬಿ,
ಕುಂಭಿನಿಯುದರದ ಮೇಲೆ ಪಸರವನಿಕ್ಕಿದ.
ಉಷ್ಣತೃಷ್ಣೆ ಘನವಾಗಿ ಕಡಲೇಳು ಸಮುದ್ರವ ಕುಡಿದು
ನೀರಡಿಸಿ ಅಱಲುಗೊಂಡು ಬೆಱಗಾದ!
ಶಿಶು ತಾಯ ಹೆಣನ ಹೊತ್ತುಕೊಂಡು ಹೆಸರ ಹೇಳುತ್ತೈದಾನೆ.
ಗೊಹೇಶ್ವರನ ನಿಲವ ವಸುಧೆಯಾಕೃತಿ ನುಂಗಿತ್ತು. ॥೧೫॥

೧–೧ X (ಮೂ) ೨ X (ಮೂ)

೧೬

ಗಗನದ ಮೇಲೊಂದು ಅಭಿನವ ಗಿಣಿ ಹುಟ್ಟಿ,
ಸಯಸಂಭ್ರಮದಲ್ಲಿ ಮನೆಯ ಮಾಡಿತ್ತು.
ಒಂದು ಗಿಣಿ ಇಪ್ಪತ್ತೈದು ಗಿಣಿಯಾಯಿತ್ತು.
ಬ್ರಹ್ಮನಾ ಗಿಣಿಗೆ ೧ಪಂಜರ೧ವಾದ.
ವಿಷ್ಣುವಾ ಗಿಣಿಗೆ ಕೊಱಕೂಳಾದ.
ರುದ್ರನಾ ಗಿಣಿಗೆ ತಾ ಕೋಲಾದ.
ಇಂತೀ ಮೂವರ ಮುಂದಣ ಕಂದನ ನುಂಗಿ,
ದೃಷ್ಟನಾಮ ನಷ್ಟವಾಯಿತ್ತು ಕಾಣಾ ಗೊಹೇಶ್ವರಾ. ॥೧೬॥

ಇಂತು ಆತ್ಮನು ತನಗೆ ಇದಿರಿಟ್ಟು ತೋಱುವ ಮಾಯೆಗೆ ತಾನನ್ಯವಾಗಿ, ಆ ಮಾಯಾವಿಲಾಸಮಂ ನಿವೃತ್ತಿಮಾಡುತ್ತಿರ್ದನೆಂದು ಪ್ರಭುದೇವರು ನಿರೂಪಿಸಲು ಮಾಯಾವಿಲಾಸ ವಿಡಂಬನಸ್ಥಲವಾದುದು:

ಮಾಯಾವಿಲಾಸ ವಿಡಂಬನಸ್ಥಲದ ವಚನ:

೧೭

ರಕ್ಕಸಿಗಿಬ್ಬರು ಮಕ್ಕಳು, ತೊಟ್ಟಿಲು ಮೇಲೈವರು.
ರಕ್ಕಸಿ ಬಾಣತಿಯಾದರೆ ಮಕ್ಕಳಿಗಿನ್ನೆಂತೊ?
ತೊಟ್ಟಿಲ ತೂಗುವೆ; ಜೋಗುಳ ಪಾ೧ಡುವೆ.
ರಕ್ಕಸಿ ಬಾಣತಿಯ ತೊಟ್ಟಿಲು ನುಂಗಿತ್ತು.
ಇದೇನು ಹೇಳಾ ಗೊಹೇಶ್ವರಾ? ॥೧೭॥

೧೮

ಆಡಂಬರದೊಳಗಾಡಂಬರವಿದೇನೊ?
ಹಾಜೆತ್ತು ಬ್ರಹ್ಮನೋಲಗ, ೨ಕೆದಜೆತ್ತು; ಇದೇನಯ್ಯ?೨
ಸಾರು ಸಾರೆನುತ್ತ ವಿಷ್ಣು ಅಜನ ನುಂಗಿ,
ರುದ್ರಯೋನಿಯೊಳಡಗಿತ್ತಿದೇನೋ?
ಬೇರಿಲ್ಲದ ಮರ ನೀರಿಲ್ಲದ ನೆಳಲಲ್ಲಿ
ತೋಱಿದ ಪ್ರತಿಬಿಂಬವನೇನೆಂಬೆ ಗೊಹೇಶ್ವರಾ? ॥೧೮॥

೧೯

ಕೋಣನ ಕೊಂಬಿನ ತುದಿಯಲ್ಲಿ
೩ಏಳುನೂಱಿಪ್ಪತ್ತು೩ ಸೇದೆಯ ಬಾವಿ.

೧-೧ ಹಂಜರ (ಮು) ೧. ವಾ (ಮು) ೨-೨ ಕೆದಜೆತ್ತಿದೇನಯ್ಯ? (ಮೂ) ೩-೩ ಏಳುನೂರುಯೆಪ್ಪತ್ತ (ಮೂ)

ಬಾವಿಯೊಳಗೊಂದು [೧]ಬಗರಿಗೆ.[೧]
[೧]ಬಗರಿಗೆ[೧]ಯೊಳಗೊಬ್ಬ ಸೂಳೆ ನೋಡಯ್ಯಾ!
ಸೂಳೆಯ ಕೊರಳಲ್ಲಿ ಏಳುನೂಱೆಪ್ಪತ್ತು
ಆನೆ ನೇಱಿತ್ತ ಕಂಡೆ ಗೊಹೇಶ್ವರಾ. ॥೧೯॥

೨೦

ಪಂಚಾಶತ್[೨] ಕೋಟಿ ವಿಸ್ತೀರ್ಣ ಭೂಮಂಡಲವನೊಂದು
ತಲೆಯಿಲ್ಲದ ಮುಂಡ ಬಂದು ನುಂಗಿತ್ತ ಕಂಡೆ.
ತಲೆಯಿಲ್ಲದೆ ನಾನು ಕಂಡು ಬೆಱಗಾದೆನು.
ನವಖಂಡಮಂಡಲ ಭಿನ್ನವಾದಂದು
ಆ ತಲೆಯ ಕಂಡವರುಂಟೆ ಗೊಹೇಶ್ವರಾ? ॥೨೦॥

೨೧

ಊರ ಮಧ್ಯದ ಕಣ್ಣ ಕಾಡಿನೊಳಗೆ ಐದು ಹೆಣ ಬಿದ್ದೈದಾವೆ.
ಬಂದು ಬಂದಳುವರು, ಬಳಗ ಘನವಾದ ಕಾರಣ.
ಹೆಣನೂ ಬೇಯದು, ಕಾಡೂ ನಂದದು,
ಮಾಡ ಉರಿಯಿತ್ತು ಗೊಹೇಶ್ವರಾ! ॥೨೧॥

೨೨

ಕೆಂಡದ ಗಿರಿಯ ಮೇಲೊಂದು
ಅರಗಿನ ಕಂಭವಿದ್ದುದ ಕಂಡೆ.
ಅರಗಿನ ಕಂಭದ ಮೇಲೊಂದು ಹಂಸೆ ಇದ್ದುದ ಕಂಡೆ.
ಕಂಭ ಬೆಂದು ಹಂಸೆ ಹಾಱಿತ್ತು ಗೊಹೇಶ್ವರಾ! ॥೨೨॥

೨೩

ಭೂತ ಭೂತನ ಕೂಡಿ ಅದ್ಭುತವಾಯಿತ್ತು.
ಕಿಚ್ಚು ಕಿಚ್ಚ ಕೂಡಿತ್ತು; ನೀರು ನೀರಡಿಸಿತ್ತು.
ಉರಿ ಪವನದೊಳಗಿದ್ದು ವಾಯುವಿಮ್ಮಡಿಸಿತ್ತು ಗೊಹೇಶ್ವರಾ! ॥೨೩॥

೨೪

ಅಂಗದ ಕೊನೆಯ ಮೇಲಣ ಕೋಡಗ ಕೊಂಬೆಗೆ ಹಾಱಿತ್ತಯ್ಯ.
ಒಂದು ಚೋದ್ಯವ ನೋಡಾ!
ಕೈಯ ನೀಡಲು ಮೈಯನೆಲ್ಲವ ನುಂಗಿತ್ತು.
ಒಯ್ಯನೆ ಕರೆದರೆ ಮುಂದೆ ಬಂದು ನಿಂದಿತ್ತು.
ಮುಯ್ಯಾಂತರೆ ಬಯಲಾಯಿತ್ತು ಗೊಹೇಶ್ವರಾ! ॥೨೪॥

೧-೧ ಬಗರಗೆ (ಮೂ) ೨ ತ (ಮೂ)

೨೫

ಹಿರಿದಪ್ಪ ಜಲಧಿಯ ಮಡುವಿನೊಳಗೆ
ಕರಿಯ ಕಬ್ಬಿಲ ಜಾಲವ ಬೀಸಿದ ನೋಡಯ್ಯ.
ಅರಿದ ತಲೆಯೈದು, ಅರಿಯದ ತಲೆಯೈದು,
ಕರಿಯ ತಲೆಯೈದು ಮುಂದೈದಾವೆ ನೋಡಯ್ಯಾ.
ಕರಿಯ ಕಬ್ಬಿಲ ಜಾಲವ ಹೊತ್ತುಕೊಂಡು ಹೋದರೆ
ನೇತ್ರದಲೋಕುಳಿಯನಾಡಿತ್ತ ಕಂಡೆ ಗೊಹೇಶ್ವರಾ! ॥೨೫॥

೨೬

ಭೂಮಿಯ ಕಠಿಣವನು, ಆಕಾಶದ ಮೃದುವನು
ತಿಳಿವ ಗಮನವಲ್ಲಿಯೆ ನಿಂದಿತ್ತು.
ಉದಕದೊಳಗೆ ಹುಟ್ಟಿದ ತೃಷ್ಣೆ ಉದಕವನಱಸಿತ್ತಲ್ಲಾ!
ಒಳಗೆ ಸತ್ತು ಹೊಱಗೆ ಆಡುತ್ತದೆ.
ಗೊಹೇಶ್ವರನಲ್ಲಿಯೆ ನಿಂದನು. ॥೨೬॥

೨೭

ಹುಲಿಯ ತಲೆಯ[1] ಹುಲ್ಲೆ, ಹುಲ್ಲೆಯ ತಲೆಯ[1] ಹುಲಿ,
ಎರಡಱ ನಡು ಒಂದಾಯಿತ್ತು.
ಹುಲಿಯಲ್ಲ, ಹುಲ್ಲೆಯಲ್ಲ.
ಕೆಲದಲೊಂದು ಬಂದು ಮೆಲುಕಾಡುತ್ತಿದ್ದಿತ್ತು.
ತಲೆಯಿಲ್ಲದ ಮುಂಡ ತಱಗೆಲೆಯ ಮೇದರೆ
ಎಲೆ ಮಱೆಯಾಯಿತ್ತು ಗೊಹೇಶ್ವರಾ! ॥೨೭॥

೨೮

ಅರಗಿನ ಪುತ್ಥಳಿಯನುರಿಕೊಂಡರೆ
ಉದಕ ಬಾಯಾಜೆತ್ತದೇನೋ?
ಅಗೆಯಿಂ ಭೋ, ಬಾವಿಯನಗೆ[2]ಯಿಂ ಭೋ.
ಬಾವಿಯನಗೆದಾತ ಸತ್ತ. ಬಾವಿ ಬತ್ತಿತ್ತು.
ಇದು ಕಾರಣ ಮೂಱು ಲೋಕವೆಲ್ಲವೂ
ಬಱುಸೂಱೆಹೋಯಿತ್ತು ಗೊಹೇಶ್ವರಾ. ॥೨೮॥

ಇಂತು ಮಾಯಾವಿಲಾಸಮಂ ನಿವೃತ್ತಿಯ[3] ಮಾಡಿ, ಸಕಲ ಪ್ರಪಂಚು ವ್ಯಾಪ್ತಿಗಳೆಲ್ಲವನೂ [4]ಮಱೆದ[4] ಆತ್ಮಂಗೆ ಗುರುಕರುಣದಿಂದಲ್ಲದೆ ಮುಕ್ತಿಯಾಗದೆಂಬುದಂ ತೋಱುವಂತೆ, ಪ್ರಭುದೇವರು ತಮ್ಮ ಮೂಲಜ್ಞಾನ ದೃಷ್ಟಿಯಿಂ ಅನಿ[5]ಮಿಷದೇವರು ತಮಗೆ ಗುರುವೆಂದಱಿದು ಬಪ್ಪಲ್ಲಿ, ಗೊಗ್ಗಯ್ಯನೆಂಬ

---

೧ X(ಮೂ) ೨ ಗ(ಮೂ) ೩ X(ಮೂ) ೪-೪ ಮರದ (ಮೂ) ೫ ನು (ಮೂ)

ಮಹಾಶರಣನು ಒಂದು ತೋಟದಲ್ಲಿ ಕೃಷಿಯಂ ಮಾಡುತ್ತಿರಲಲ್ಲಿ ಸಾರ್ದು, ಅದಂ ವಿಡಂಬಿಸಿ, ನಾನೊಂದು ತೋಟವ ಮಾಡಿದೆನೆಂದು ಪರಮಾರ್ಥ ಸೂಚಕವಾಗಿ ನಿರೂಪಿಸಿದ ಪ್ರಸ್ತಾವದ ವಚನ:

ಗೊಗ್ಗಯ್ಯನ ಪ್ರಸಂಗ:

೨೯

ತನುವ ತೋಟವ ಮಾಡಿ, ಮನವ ಗುದ್ದಲಿಯ ಮಾಡಿ,
ಅಗೆ[೧]ದು ಕಳೆದೆನಯ್ಯ ಭ್ರಾಂತಿನ ಬೇರ.
ಒಡೆದು ಸಂಸಾರದ ಹೆಂಟೆಯ, [೨]ಬಗಿದು[೨] ಬಿತ್ತಿದೆನಯ್ಯ ಬ್ರಹ್ಮಬೀಜವ.
ಅಖಂಡಮಂಡಲವೆಂಬ ಬಾವಿ, ಪವನವೇ ಊಟಾಳ,
ಸುಷುಮ್ನನಾಳದಿಂದ ಉದಕವ ತಿದ್ದಿ
ಬಸವಗಳೈವರು ಹಸಗೆಡಿಸಿಹವೆಂದು
ಸಮತೆ ಸೈರಣೆಯೆಂಬ ಬೇಲಿಯನಿಕ್ಕಿ,
ಆವಾಗಳು ಈ ತೋಟದಲ್ಲಿ ಜಾಗರವಿದ್ದು
ಸಸಿಯ ಸಲಹಿದೆನು ಕಾಣಾ ಗೊಹೇಶ್ವರಾ. ॥೨೯॥

ಇಂತು ಪ್ರಭುದೇವರು ಗೊಗ್ಗಯ್ಯನಂ ಬೋಧಿಸಿ ತಿಳಿಸಿ, ತಾವು ನವಮಾಸಂ ತೀವಿದ ಗರ್ಭಿಣಿಯಂತೆ ಶಿವತತ್ತ್ವ ವಿದ್ಯೆಯೊಳಗೆ ಸಂಪೂರ್ಣಮಾಗಿ ಎಡೆಗೊಂಡು, ಗುರುಹಸ್ತ ಬಂದು ಸೋಂಕದ ಮುನ್ನವೆ ಶಿಖಿಕರ್ಪೂರದಂತಾದಪುದೆಂಬ ಭಾವವಿದಿರಿಂಗೆ ಸೂಚಿಸುತ್ತಮಿರೆ, ಗುರುವಿಂದೆ ಮುನ್ನವೆ ಶಿಷ್ಯನು ಗುರುವೆಂಬ ಶಿವಾದ್ವೈತವಾಕ್ಯ ಸತ್ಯಮಾದಂತೆ, ಅಂತರಂಗದೊಳು ಗುರುಭಾವ ತಲೆದೋಱುತ್ತಿರ್ಪ ಅಲ್ಲಮಪ್ರಭುದೇವರು ತಮ್ಮ ಮೂಲಜ್ಞಾನದಿಂದ ಅನಿಮಿಷದೇವರ ಸಮಾಧಿ[೩]ಯಂ[೩] ಕಂಡು ಒಳಪೊಕ್ಕು ನೋಳ್ಪಾಗಳು, ಒಂದು ದೀಪ್ತಿ ಬೆಳಗುತ್ತಮಿರೆ ಕಂಡು, ಸ್ವಸ್ಥ ಪದ್ಮಾಸನದಲ್ಲಿ ಕುಳ್ಳಿರ್ದು, ಕರಸ್ಥಲದೊಳ್ ಅಮೃತಲಿಂಗಮಂ ಪಿಡಿದು ಆ ಲಿಂಗದೊಳು ಆಲಿಂಗನಮಾಗಿ ಕರಣಂಗಳೆಲ್ಲ ನಿಃಕರಣವನ್ನೈದಿ, ಭಾವ ನಿರ್ಭಾವದೊಳ್ ನಿಂದು, ನೋಟ ನಟ್ಟು ದೃಷ್ಟಿ ನಟ್ಟೈಸಿ ಎವೆ ಹಳಚದೆ, ಅಱಿವು ಕರಿಗೊಂಡು, ತಾನೆಂಬುದು ತರಹರಮಾಗಿ, ನೀನೆಂಬುದು ನಿಃಪತಿಯಾಗಿ, ಉಭಯ [೪]ಸಂದು ಅಡಗಿ[೪] ಸಯಮಾಗಿ ಮನೋಲಯಸ್ಥಾನದೊಳು ಸರ್ವ ಚೈತನ್ಯಮನ್ನೈದಿ, ತನು ಪರಮಕಾಷ್ಠಿಯೊಳು ಪರವಶಮಾಗಿ,

ಊರ್ಧ್ವಶೂನ್ಯ ಮಧ್ಯಶ್ಶೂನ್ಯಂ ಮಧ್ಯಶೂನ್ಯಂ ನಿರಾಮಯಂ।
ಸರ್ವಶೂನ್ಯಮನಾಭಾಸಂ ಸಮಾಧೇಸ್ತಸ್ಯ ಲಕ್ಷಣಂ॥

ಎಂಬ ಸಿದ್ಧಾಂತವಾಕ್ಯಾರ್ಥಮಂ ತನ್ನೊಳು [೫]ಪರಿ[೫]ಪೂರಿತಮಾಗಿ, ನಿಜಸಮಾಧಿಯೊಳು ಮೂರುತಿಗೊಂಡಿಪ್ಪ ಆ ಸದ್‌ಗುರುವಂ ಕಂಡ ಪ್ರಸ್ತಾವದ ವಚನ:

---

೧ ಗಿ(ಮೂ) ೨–೨ ಬಗದು ಬಿಗದು (ಮೂ) ೩–೩ ಯ (ಮೂ) ೪–೪ ಸಂದಡಗಿ (ಮೂ) ೫–೫ x (ಮೂ)

೩೦

ಪುಣ್ಯವುಳ್ಳ ಕಾಲಕ್ಕೆ ಪಾಷಾಣ ಪರುಷವಪ್ಪುದು ನೋಡಯ್ಯಾ.
ಮಣ್ಣು ಹೊನ್ನಪ್ಪುದು.
ಮುನ್ನ ಮುನ್ನವೆ ಅಚ್ಚೊತ್ತಿದ ಭಾಗ್ಯವೆನ್ನ
ಕಣ್ಣಮುಂದೆ ಕಾಣಬಂದಿತ್ತು ನೋಡಾ!
ಮಱಿಯ ದೇಗುಲದೊಳಗೊಂದು ಮಾಣಿಕ್ಯವ ಕಂಡ ಬಳಿಕ,
ಇನ್ನು ಮುನ್ನಿನಂತಪ್ಪುದೆ ಗೊಹೇಶ್ವರಾ? ॥೩೦॥

೩೧

ಅಱಸುವ ಬಳ್ಳಿ ಕಾಲ ಸುತ್ತಿತ್ತೆಂಬಂತೆ,
ಬಯಸುವ ಬಯಕೆ ಕೈಸಾರುವಂತೆ,
ಬಡವ ನಿಧಾನವನೆಡಹಿ ಕಂಡಂತೆ,
ನಾನಱಸುತ್ತಲಱಸುತ್ತ ಬಂದು ಭಾವಕ್ಕಗಮ್ಯನ ಕಂಡೆನಯ್ಯಾ!
ಎನ್ನ ಅಱುವಿನ ಹರಿವ ಕಂಡೆನಯ್ಯಾ!
ಎನ್ನ ಒಳಹೊಱಗೆ ಸರ್ವಾಂಗ ಪರಮಪ್ರಕಾಶದೊಳು
ಬೆಳಗುವ ಜ್ಯೋತಿಯ ಕಂಡೆ ನೋಡಾ!
ಕುಱುಹಳಿದ ಕರಸ್ಥಲದ ನಿಬ್ಬೆಱಗಿನ ನೋಟದ
ಎನ್ನ ಪರಮಗುರು[1]ವಂ[1] ಕಂಡು ಬದುಕಿದೆ ಕಾಣಾ ಗೊಹೇಶ್ವರಾ. ॥೩೧॥

ಇಂತು ಅನಿ[2]ಮಿಷದೇವರಂ ಕಂಡು, ಈತನೆ ಗುರು ನಾನೆ ಶಿಷ್ಯನೆಂದು, ಈ ಶ್ರೀಗುರುವಿನ ಚರಣವಿಡಿದು ಅತೀತವಾದ ಪರವಸ್ತುವನಱಿದಪೆನೆಂದು ನಿಶ್ಚೈಸಿದ ಪ್ರಸ್ತಾವದ ವಚನ:

೩೨

ಕಂಡುದ ಹಿಡಿಯಲೊಲ್ಲದೆ, ಕಾಣದುದ ಹಿಡಿದೆನೆಂದು
ಸಿಕ್ಕದೆಂಬ ಬಳಲಿಕೆಯ ನೋಡಾ!
ಕಂಡುದನೆ ಕಂಡು ಗುರುಪಾದವ ಹಿಡಿದಲ್ಲಿ,
ಕಾಣದುದ ಕಾಣಬಹುದು ಕಾಣಾ ಗೊಹೇಶ್ವರಾ. ॥೩೨॥

ಆ ಶ್ರೀಗುರುಮೂರ್ತಿಯಂ ನೋಡಿ ಕೊಂಡಾಡಿದ ಪ್ರಸ್ತಾವದ ವಚನ:

೩೩

ಕಾಯದಲಾದ ಮೂರ್ತಿಯಲ್ಲ; ಜೀವದಲಾದ ಮೂರ್ತಿಯಲ್ಲ.
ಪ್ರಾಣದಲಾದ ಮೂರ್ತಿಯಲ್ಲ; ಪುಣ್ಯದಲಾದ ಮೂರ್ತಿಯಲ್ಲ.
ಮುಕ್ತಿಯಲಾದ ಮೂರ್ತಿಯಲ್ಲ.
ಯುಗದಲಾದ ಮೂರ್ತಿಯಲ್ಲ; ಜುಗದಲಾದ ಮೂರ್ತಿಯಲ್ಲ.

೧-೧ ವ (ಮು) ೨ ನು (ಮು)

ಶಿವನಲಾದ ಮೂರ್ತಿಯಲ್ಲ; ಶಕ್ತಿಯಲಾದ ಮೂರ್ತಿಯಲ್ಲ.
ಇದೆಂತಹ ಮೂರ್ತಿಯೆಂದು ಉಪಮಿಸುವೆ!
ಕಾಣಬಾರದ ಕಾಯ, ನೋಡಬಾರದ ತೇಜ,
ಉಪಮಿಸಬಾರದ ನಿಲವು,
ಕಾರಣವಿಡಿದು ಕಣ್ಗೆ ಗೋಚರವಾದ
ಸುಖವನೇನೆಂದು ಹೇಳುವೆ ಗೊಹೇಶ್ವರಾ! ॥೩೩॥

೩೪

ಸ್ಫಟಿಕದ ಘಟದಂತೆ ಒಳಹೊಱಗಿಲ್ಲ ನೋಡಾ!
ವಿಗಡಚರಿತ್ರಕ್ಕೆ ಬೆಱಗಾದೆನು.
ನೋಡುವರೆ ಕಾಣಬರುತ್ತಿದೆ, ಮುಟ್ಟುವರೆ ಕೈಗೆ ಸಿಲುಕದು,
ಹೊದ್ದುವರೆ ಸಮೀಪ, ಹತ್ತೆ ಸಾರುವರತ್ತತ್ತ ತೋಱುತ್ತದೆ.
ಆಕಾರವ ನಿರಾಕಾರ ನುಂಗಿ,
ಬಯಲ ಸಮಾಧಿಯಲ್ಲಿ [1]ಸಿಲುಕಿತ್ತು[1] ನೋಡಾ!
ದರುಶನದಿಂದಮೃತಾಹಾರವಾಯಿತ್ತು,
ಬೆರಸಿದಡಿನ್ನೆಂತೊ ಗೊಹೇಶ್ವರಾ!! ॥೩೪॥

ಇಂತು ಪ್ರಭುದೇವರು ಅನಿಮಿಷದೇವರ ಮೂರ್ತಿಯಂ ಕೊಂಡಾಡಿ, ಈ ಶ್ರೀಗುರುವಿನ ಕೈಯಲ್ಲಿ ಉಪದೇಶವ [2]ಪಡೆದ[2]ಹೆನೆಂದರೆ, ಈ ಮಹಾತ್ಮನು ತಾನಿದಿರೆಂಬು[3]ದೇನೂ ಅಱಿಯನು.[3] ನಿಶ್ಶಬ್ದ ವೇಧಿಸಿ ಮುಗ್ಧನಾಗಿರ್ದಹನಾಗಿ ಇದಿರಿಟ್ಟು ಉಪದೇಶವ ಮಾಡುವನಲ್ಲ. ಎನಗೆ ನಾನೆ ಗುರು ಉಪದೇಶವ ಪಡೆಯಬೇಕೆಂದು ನಿಶ್ಚೈಸಿದ ಪ್ರಸ್ತಾವದ ವಚನ:

೩೫

ನಡೆ ನುಡಿ ಇಲ್ಲದ ಗುರುವ ಕಂಡು,
ಉಪದೇಶ ಪಡೆಯಲೆಂದು ಹೋದರೆ,
ಒಡನೆ ನುಡಿಯ; ನುಡಿಸಿದರೆ ಕೇಳ.
ಕಡೆ ಮೊದಲ ಕಾರ್ಯವೆಂತಪ್ಪುದೊ ಅಯ್ಯಾ?
ಮೂಗರ ಮೂಗರ ಪ್ರಸಂಗದಂತೆ ಇದೆ.
ಎನ್ನೊಳಗೆ ಅಱಿವಿನ ಪರಿಮಳ,
ಹೊಱಗೆ ನೋಡಿದರೆ ಮುಗ್ಧವಾಯಿತ್ತು.
ಇದೆಂತುಪಮಿಸುವೆ ಅನಿಯಮದ ಬೆಡಗ!
ಇದು ತನ್ನಿಂದ ತಾನಪ್ಪುದಲ್ಲದೆ ಭಿನ್ನದಲುಂಟೇ ಗೊಹೇಶ್ವರಾ? ॥೩೫॥

೧–೧ ಸಿಲ್ಕಿತ್ತು(ಮು) ೨–೨ ಪಡದೆಹೆ (ಮೂ) ೩–೩ ದಱಿಯನು (ಮು)

ಗುರುವನೂ ತನ್ನನೂ ವಿಭಾಗಿಸಿ ನೋಡಿ ನಿಶ್ಚೈಸುವ ಪ್ರಸ್ತಾವದ ವಚನ:

೩೬

ಒಂದೆಂಬೆನೆ? [೧]ಎರಡಾಗಿದೆ.[೧] ಎರಡೆಂಬೆನೆ? [೨]ಒಂದಾಗಿದೆ.[೨]
ಒಂದೆರಡೆಂಬ ಸಂದೇಹವಿದೇನೊ?
ಅಗಲಲಿಲ್ಲದ ಕೂಟಕ್ಕೆ [೩]ಬಿಚ್ಚಿ[೩] ಬೇಱಾಗದ ಉಪದೇಶ.
ಗುರುಶಿಷ್ಯರೆಂಬ ಭಾವಕ್ಕೆ ಭೇದ ಉಂಟೇ ಗೊಹೇಶ್ವರಾ? ॥೩೬॥

ಮತ್ತಾ ಗುರುವಿನ ಸನ್ನಿಧಿಯಲ್ಲಿ ಜ್ಞಾನಲಿಂಗೋಪದೇಶಕ್ರಮವ ಬಿನ್ನಪಂಗೈವ ಪ್ರಸ್ತಾವದ ವಚನ:

೩೭

ಕಾಣಬಾರದ ಗುರು[೪] ಕಣ್ಗೆ ಗೋಚರವಾದರೆ
ಹೇಳಲಿಲ್ಲದ ಬಿನ್ನಪ, ಮುಟ್ಟಲಿಲ್ಲದ ಹಸ್ತಮಸ್ತಕಸಂಯೋಗ,
ಹೂಸಲಿಲ್ಲದ ವಿಭೂತಿಯ ಪಟ್ಟ, ಕೇಳಲಿಲ್ಲದ ಕರ್ಣಮಂತ್ರ,
ತುಂಬಿ ತುಳುಕದ ಕಳಶಾಭಿಷೇಕ, ಆಗಮವಿಲ್ಲದ ದೀಕ್ಷೆ,
ಪೂಜೆಗೆ ಬಾರದ ಲಿಂಗ, ಸಂಗವಿಲ್ಲದ ಸಂಬಂಧ
ಸಯವಪ್ಪ ಅನುಗ್ರಹವ ಅನುಗೊಂಬಂತೆ ಮಾಡಾ ಗೊಹೇಶ್ವರಾ. ॥೩೭॥

೩೮

ನೀನೆನಗೆ ಗುರುವಪ್ಪೊಡೆ, ನಾ ನಿನಗೆ ಶಿಷ್ಯನಪ್ಪೊಡೆ,
ಎನ್ನ ಕಾಯದ ಕರ್ಮವ [೫]ತೊಡೆದು,[೫]
ಎನ್ನ ಕರಣಾದಿ ಗುಣಂಗಳ [೬]ಕಳೆದು,[೬]
ನೀನೆನ್ನ ಕಾಯದಲ್ಲಿ ಅಡಗಿ,
ನೀನೆನ್ನ ಪ್ರಾಣದಲ್ಲಿ ಅಡಗಿ,
ನೀನೆನ್ನ ಭಾವದಲ್ಲಿ ಅಡಗಿ,
ನೀನೆನ್ನ ಕರಸ್ಥಲಕ್ಕೆ ಬಂದು ಕಾರುಣ್ಯವ ಮಾಡಾ ಗೊಹೇಶ್ವರಾ. ॥೩೮॥

೩೯

ಆದಿಯಿಂದತ್ತತ್ತಲೆನಗೆ [೭]ನೀನೆ[೭] ಗುರುವಯ್ಯಾ.
ಅನಾದಿಯಿಂದತ್ತತ್ತಲೆನಗೆ ನೀನೆ ಗುರುವಯ್ಯಾ.
ಎರಡು ನಾಮ ಹುಟ್ಟದ ಮುನ್ನ ನಿಮಗೆ [೮]ನಾನು[೮] ಶಿಷ್ಯನಯ್ಯಾ.
ಎನ್ನ ಭಾವಕಾಯದೊಳಗೆ ಭ್ರಮೆಯ ಕಳೆದು,
ಎನ್ನ ಜ್ಞಾನಕಾಯದೊಳಗೆ ಮಱಹ [೯]ಕಳೆದು,[೯]

೧-೧ ಎರಡಾಗಿ ಇದೆ (ಮೂ) ೨-೨ ಒಂದಾಗಿ ಇದೆ (ಮೂ) ೩-೩ ಬೆಚ್ಚಿ (ಮೂ) ೪+ವು(ಮು) ೫-೫ ತೊಡದು (ಮೂ) ೬-೬-ಕಳದು (ಮೂ) ೭-೭ ನೀನು (ಮೂ) ೮-೮ ನಾ (ಮೂ) ೯-೯ ಕಳದು (ಮೂ)

ಎನ್ನೊಳಗೆ [೧]ತಿಳಿವಿನ[೧] ಬಗೆಯ ತೋಱುತ್ತ,
ಹೊಱಗೆ ನುಡಿಯದಂತಿರ್ದಡೆ
ಬಿಡೆನು ನೋಡಾ ನಿಮ್ಮ ಶ್ರೀಚರಣವ.
ಮಾಡಿದಡೆ ಅಂತು ಮಹಾಪ್ರಸಾದವೆಂದು ಕೈಕೊಂಬೆ.
ಮಾಡದಿರ್ದಡೆ [೨]ನೀವೆ[೨] ನಾನಾಗಿ ಮಹಾಪ್ರಸಾದವೆಂದು ಕೈಕೊಂಬೆನು.
ಇಂತು ಆವ ತೆಱದಿಂದಲಾದರು
ಎನ್ನೊಡಲ ನಿಮ್ಮಲ್ಲಿ [೩]ಸವೆದು ಪಡೆವೆ[೩] ನಿಮ್ಮ ಕರುಣವ.
ಗೋಹೇಶ್ವರಾ, ನಿಮ್ಮ ಇರವಿನ ಪರಿಯಿಂತುಟು ನೋಡಾ. ॥೩೯॥

ಮತ್ತಾ ಗುರುವಿನಲ್ಲಿ ಪ್ರಭುದೇವರು ಅಭಿನ್ನಕ್ರೀಯ ನಿಶ್ಚೈಸಿದ ಪ್ರಸ್ತಾವದ ವಚನ:

೪೦

ಜ್ಯೋತಿಯೊಳ[೪]ಗಿರ್ಪ[೪] ಕರ್ಪುರಕ್ಕೆ,
ಅಪ್ಪುವಿನೊಳಗಿಪ್ಪ ಉಪ್ಪಿಂಗೆ
ಶ್ರೀಗುರುವಿನೊಳಗಿಪ್ಪ ಶಿಷ್ಯಂಗೆ
ಬೇಱೆ ಬೇಱೆ ಕ್ರಿಯಾವರ್ತನೆಯುಂಟೆ ಗೊಹೇಶ್ವರಾ? ॥೪೦॥

ಗುರುಶಿಷ್ಯ ಭಾವದಲ್ಲಿ ಅಭೇದವೆಂದಱಿದಾ[೫] ಪ್ರಭುದೇವರು ತಮ್ಮ ಅಂತರಂಗದ ಬೋಧಾಮೂರ್ತಿಯನು ಆ ಶ್ರೀಗುರುವೆಂದಱಿದು ನಿಶ್ಚೈಸಿ, ಅನಿಮಿಷದೇವರ ಶ್ರೀಪಾದಕ್ಕೆ ಶರಣೆಂದು, ಆ ಕರಸ್ಥಲದ ಲಿಂಗವ ತಾನೆ ಅವಗ್ರಹಿಸಿಕೊಳಲು, ಆ ಗುರುಮೂರ್ತಿ ನಿರವಯಲ[೬]ನ್ನೈದಲು[೬], ಅಸ್ಥಿ ಚರ್ಮಂಗಳು ಸಂಚ ತಪ್ಪಿ [೭]ನೆಲಕ್ಕುದುರಲು,[೭] ಮನಸ್ಸಂಚಲತ್ವವನ್ನೈದಿ ಅನುತಾಪಂಬಟ್ಟ ಪ್ರಸ್ತಾವದ ವಚನ:

೪೧

ಆಣವಮಲ ಮಾಯಾಮಲ ಕಾರ್ಮಿಕಮಲವೆಂಬ
ಮಲತ್ರಯಂಗಳ ಕಳೆದುಳಿದು ನಿರ್ಮಲನಾದ ಶಿಷ್ಯನು,
ಕಾಯಜೀವದ ಭ್ರಾಂತುಸೂತಕ ಹಿಂಗಿ ನಿಶ್ಶಂಕನಾದ ಗುರು.
ಈ ಉಭಯ ಭಾವದೊಳಗೆ
ಆವುದು ಮುಂದು, ಆವುದು ಹಿಂದೆಂದಱಿಯಬಹುದು?
ಕರಸ್ಥಲಕ್ಕೆ ಕಾರುಣ್ಯವ ಮಾಡಿದರೆ ಮನಸ್ಥಲಕ್ಕೆ ಹಂಗಿಲ್ಲ.
ಮನಸ್ಥಲದಲ್ಲಿ ಸೆಱಗೊಡ್ಡಿ ಬೇಡಿದಡೆ ಕರಸ್ಥಲದ ಲಿಂಗ ಕೈಸಾರಿತ್ತು.
ಗುರುಸ್ಥಲದ ನಿಲವು ಪರಸ್ಥಲದಲಡಗಿದರೆ
ಭಾವ ಬಳಲಿತ್ತಿದೇನೋ ಗೊಹೇಶ್ವರಾ? ॥೪೧॥

೧-೧ ತಿಳುವಿನ (ಮೂ) ೨-೨ ನೀನೆ (ಮೂ) ೩-೩ ಸವದು ಪಡವೆ (ಮೂ) ೪-೪ ಗಿರ್ದ (ಮೂ) ೫ ದ(ಮು)
೬-೬ ನೆಯ್ದಲು (ಮು) ೭-೭ ನೆಲಕ್ಕೆ ಉದರಲು(ಮು)

೪೨

ನಿರ್ಣಯವನಱಿಯದ ಮನವೇ
ದುಗುಡವನಾಹಾರಂಗೊಂಡೆಯ[೧]ಲ್ಲಾ!
ಮಾಯಾಸೂತ್ರವಿದೇನೊ?
ಕಂಗಳೊಳಗಣ ಕತ್ತಲೆ ತಿಳಿಯದಲ್ಲಾ!
ಬೆಳಗಿನೊಳಗಣ ಶೃಂಗಾರ ಬಳಲುತ್ತಿದೆ ಗೊಹೇಶ್ವರಾ. ॥೪೨॥

ಇಂತು ಅನಿಮಿಷದೇವರು ನಿಜವನ್ನೈದಲು ಅನುತಾಪಿಸುತ್ತಿರ್ದ ಪ್ರಭುದೇವರು ತನ್ನ ತಾ ಸಂತೈಸಿಕೊಂಡು, ತಿಳಿದು ನೋಡಿ, ಆ ಗುರುವಿನ ಚೈತನ್ಯ ಲಿಂಗದಲ್ಲಿ ಅಡಗಿತ್ತು; ಆ ಲಿಂಗವೆನ್ನ ಕರಸ್ಥಲಕ್ಕೆ ಬಂದಿತ್ತು. ಅದು ಕಾರಣ ಈ ಶ್ರೀಗುರುವೆನ್ನ ಕರಸ್ಥಲದಲ್ಲಿ ಮನಸ್ಥಲದಲ್ಲಿ ಸಂಪೂರ್ಣವಾಗಿ ನೆಲೆಗೊಂಡನಲ್ಲದೆ ಅನ್ಯಭಾವವಿಷಯದಿಂದ ಅಳಿದುದಿಲ್ಲವೆಂದು ಮನವ ನಿಶ್ಚೈಸಿಕೊಂಡ ಪ್ರಸ್ತಾವದ ವಚನ:

೪೩

ಆಹಾ ಮನವೇ, [೨]ಮಱೆ[೨]ದೆಯಲ್ಲಾ ನಿನ್ನ ಪೂರ್ವಾಪರವ!
ಘನ ಮನದೊಳಡಗಿ, ಆ ಮನ ಲಿಂಗದೊಳಡಗಿ,
ಆ ಲಿಂಗವೆನ್ನ ಕರಸ್ಥಲಕ್ಕೆ ಬಂದ ಬಳಿಕ,
ಅಳಿಯಿತ್ತು ಅಗಲಿತ್ತು ಎಂಬ ಭಾವಭ್ರಾಂತಿ[೩] ಇದೇನೊ?
ಜನನವಿಲ್ಲದ ಘನಕ್ಕೆ ಮರಣವುಂಟೇ?
ತೆಱಹಿಲ್ಲದ ನಿಜವು ತನ್ನಲ್ಲಿ ತಾನು ವೇದ್ಯವಾಗಿಪ್ಪುದಲ್ಲದೆ
ಇದಿರಿಟ್ಟು ತೋಱಿದೆಂಬ ಅಜ್ಞಾನವಿದೇನೋ?
ಜನನವಿಲ್ಲದ ನೀ ನಾನೆಂಬುದು ಮಾದು
ತಾನೆಯಾಗಿ ಸಾಧ್ಯವಾಯಿತ್ತು; ಇದನೇನೆಂಬೆ ಗೊಹೇಶ್ವರಾ! ॥೪೩॥

೪೪

ಕಾಣದುದನಱಿಸುವರಲ್ಲದೆ ಕಂಡುದನಱಿಸುವರೆ?
ಘನಕ್ಕೆ[೪] ಘನವಾದ ವಸ್ತು
ತಾನೆ ಗುರುವಾದ, ತಾನೆ ಲಿಂಗವಾದ,
ತಾನೆ ಜಂಗಮವಾದ, ತಾನೆ ಪ್ರಸಾದವಾದ,
ತಾನೆ ಮಂತ್ರವಾದ, ತಾನೆ ಯಂತ್ರವಾದ,
ತಾನೆ ಸಕಲವಿದ್ಯಾಸ್ವರೂಪನಾದ.
ಇಂತಿವನೊಳಕೊಂಡು ಎನ್ನ ಕರಸ್ಥಲಕ್ಕೆ ಬಂದು,
ಇನ್ನು ನಿರ್ವಿಕಾರ ಕಾಣಾ ಗೊಹೇಶ್ವರಾ. ॥೪೪॥

---

೧ X (ಮೂ) ೨-೨ ಮಱೆ (ಮೂ)ನಿತು (ಮೂ) ೩ ತು (ಮೂ) ೪+ಘನಕ್ಕೆ (ಮೂ)

ಇಂತು ಅನುತಾಪ ಸಂತಾ[೧]ಪಂಗಳೆರಡನೂ[೧] [೨]ಮಱೆದು[೨], ಶ್ರೀಗುರುವನು ನಿತ್ಯ[೩]ನೆಂದ[೩]ಱಿದ ಪ್ರಭುದೇವರು ಆ ಶ್ರೀಗುರುವೇ ಪ್ರಾಣಲಿಂಗಸಂಬಂಧಿಗಳೆಂದು ಸ್ತುತಿಸುವ ಪ್ರಸ್ತಾವದ ವಚನ:

೪೫

ಪ್ರಾಣಲಿಂಗವೆಂಬ ಶಬುದಕ್ಕೆ ನಾಚಿತ್ತು ನಾಚಿತ್ತು ಮನ.
ಪ್ರಾಣಹೋದರೆ, ಕಾಯ ಬಿದ್ದಡೆ,[೪]
ಲಿಂಗ ಒಂದೆಸೆಯಾದಡೆ ನಾಚಿತ್ತು ನಾಚಿತ್ತು ಮನ,
ಪ್ರಾಣಲಿಂಗ ಸಂಬಂಧಿ ಗೊಹೇಶ್ವರಾ,
ನಿಮ್ಮ ಶರಣ ಅನಿಮಿಷನೆಂಬುದ ನಾನು ಇಂದಱಿದೆನು. ॥೪೫॥

ಇಂತು ಪ್ರಭುದೇವರು ಅಂತಪ್ಪ ಶ್ರೀಗುರು ಮೂರ್ತಿಯೆ ತಮ್ಮ ಹೃದಯ ಕಮಲ ಮಧ್ಯದಲ್ಲಿ ಪ್ರಾಣಲಿಂಗವೆಂದಱಿದು ಕಂಡು ಮನಪುಷ್ಪದಿಂ ಪೂಜಿಸಿ ಪರಮಹರುಷಿತನಾದ ಪ್ರಸ್ತಾವದ ವಚನ:

೪೬

ಕಸ್ತೂರಿಯ ಮೃಗ ಬಂದು ಸುಳಿಯಿತ್ತಯ್ಯಾ.
ಸಕಲವಿಸ್ತಾರದ ರೂಪು ಬಂದು ಮುಂದೆ ನಿಂದಿತ್ತಯ್ಯಾ.
ಆವ ಗ್ರಹ ಬಂದು ಸೋಂಕಿತ್ತೆಂದಱಿಯೆನು.
ಹೃದಯ ಕಮಲಮಧ್ಯದಲ್ಲಿ ಶ್ರೀಗುರುವನಱಿದು ಕಂಡು ಪೂಜಿಸಿ,
ಗುರು ವಿಖ್ಯಾತನೆಂಬುದನಱಿದೆ ನೋಡಾ!
ಗೊಹೇಶ್ವರಲಿಂಗದಲ್ಲಿ ಹಿಂದಣ ಹುಟ್ಟಱಿತು ಹೋದುದ ಕಂಡೆನು. ॥೪೬॥

ಇಂತು ಶ್ರೀಗುರುಪೂಜೆಯ ಮಾಡಿ, ಆ ಗುರುವಿನಲ್ಲಿ ಪರವಶನಾದ ಪ್ರಸ್ತಾವದ ವಚನ:

೪೭

ಎನ್ನ ಮನದ ಕೊನೆಯ ಮೇಲೆ
ಅಂಗವಿಲ್ಲದ ರೂಪನ[೫] ಕಂಡು ನಾನು ಬೆಱಗಾದೆ!
ಅಂತರಂಗದ ಆತ್ಮನೊಳಗೆ ಅನಿಮಿಷ ನಿಜೈಕ್ಯ
ಗೊಹೇಶ್ವರಲ್ಲಯ್ಯನ ಕಂಡು ಬೆಱಗಾದೆನು! ॥೪೭॥

ಆ ಶ್ರೀಗುರುವಿನಲ್ಲಿ ತನ್ನಲ್ಲಿ ಏಕೋಭಾವವನ್ನೈದಿದ ಪ್ರಸ್ತಾವದ ವಚನ:

೪೮

ಗುರುವಿನ ಪರಿ ವಿಪರೀತವಾಯಿತ್ತಯ್ಯಾ!
ಭ್ರಮರ ಕೀಟಕ ನ್ಯಾಯದಂತಾಯಿತ್ತು.

೧–೧ ಪ(ಮೂ) ೨–೨ ಮರದು (ಮೂ) ೩. ವೆಂದ (ಮೂ) ೪ ರೆ (ಮೂ) ೫ ನಂ (ಮೂ)

ಗುರು ತನ್ನ ನೆನೆ[೧]ವನ್ನಬರ ಎನ್ನನಾ ಗುರುವ ಮಾಡಿದನು.
ಇನ್ನು ಶಿಷ್ಯನಾಗಿ ಶ್ರೀಗುರುವ ಪೂಜಿಸುವರಾರು ಹೇಳಾ ಗೊಹೇಶ್ವರಾ? ॥೪೮॥

೪೯

ಗುರು ಶಿಷ್ಯ ಸಂಬಂಧವನಱಸಲೆಂದು ಹೋದರೆ,
ತಾನೆ ಗುರುವಾದ; ತಾನೆ ಶಿಷ್ಯನಾದ; ತಾನೆ ಲಿಂಗವಾದ.
ಗೊಹೇಶ್ವರಾ, ನಿಮ್ಮ ಶರಣನ ಕೈಯಲ್ಲಿ ಲಿಂಗವ ಕೊಟ್ಟರೆ,
ಭಾವ ಬತ್ತಲೆಯಾಯಿತ್ತು. ॥೪೯॥

ಇಂತು ಗುರುವಿನಲ್ಲಿ ತನ್ನಲ್ಲಿ ಸಮರಸಭಾವವನ್ನೈದಿದ ಪ್ರಭುದೇವರು ತಮ್ಮ ಕರಸ್ಥಲದ ಲಿಂಗವ ನೋಡಿ ಆ ಲಿಂಗಭಾವ ಆಲಿಂಗನಮಾಗಿ, ದೃಷ್ಟಿ ನಟ್ಟು, ಮನ ಮುಟ್ಟಿ, ಹಾರೈಸಿ ತನಗೆ ತಾನಾಶ್ಚರ್ಯಂಬಡುತಿರ್ದ ಪ್ರಸ್ತಾವದ ವಚನ:

೫೦

ಬಟ್ಟೆಯ ಬಡಿವ ಕಳ್ಳಂಗೆ ಬೇಹು ಸಂದು ಕಳವು ದೊರಕಿದಂತಾಯಿತ್ತು.
ಕುರುಡನೆಡಹುತ್ತ ತಡಹಿ[೨] ಹಿಡಿದು ಕಂಡಂತಾಯಿತ್ತು.
ನಿರ್ಧನಿಕ ಧನದ ಬಯಕೆಯಲ್ಲಿ ನಡೆವುತ್ತ
ಎಡಹಿದ ಕಲ್ಲು ಪರುಷವಾದಂತಾಯಿತ್ತು.
ಅಱಸುವಂಗೆ ಅಱಕೆ ತಾನಾ[೩]ದಂತಾ[೩]ಯಿತ್ತು.
ಎಲೆ ಗೊಹೇಶ್ವರಾ, ನೀನೆನಗೆ ದೊರೆ[೪]ಕುವುದೆ[೪]ಂಬುದು
ನಾ ಮುನ್ನ ಮಾಡಿದ ಸುಕೃತದ ಫಲವನೇನ ಬಣ್ಣಿಪೆ ಹೇಳಾ! ॥೫೦॥

೫೧

ಮುನ್ನಿನ ಪರಿಯಂತುಟಲ್ಲ.
ಆದಡಿಂತಹುದೆ? ಆಗದಡಿಂತಾಯಿತ್ತು.
ಹಲವು ದೆಸೆಯ ಬಯಕೆ ತಾರ್ಕಣೆಗಂಡಂತೆ,
ಗೊಹೇಶ್ವರಲಿಂಗವು ತನುವ ತನ್ನತ್ತಲೊಯಿದಾ! ॥೫೧॥

೫೨

ಎತ್ತಣ ಮಾಮರನೆತ್ತಣ ಕೋಗಿಲೆ?
ಎತ್ತಣಿಂದೆತ್ತ ಸಂಬಂಧವಯ್ಯಾ?
ಬೆಟ್ಟದ ನೆಲ್ಲಿ[೫] ಕಾಯಿ, ಸಮುದ್ರದೊಳಗಣ ಉಪ್ಪು,
ಎತ್ತಣಿಂದೆತ್ತ ಸಂಬಂಧವಯ್ಯಾ?
ಗೊಹೇಶ್ವರಲಿಂಗಕ್ಕೂ ಎನಗೂ[೬]
ಎತ್ತಣಿಂದೆತ್ತ ಸಂಬಂಧವಯ್ಯಾ? ॥೫೨॥

---

೧ ನ (ಮೂ) ೨ X (ಮೂ) ೩ ದಂತೆ ಆ (ಮೂ) ೪–೪ ಕೊ (ಮು) ೫+ಯ (ಮು) ೬ ಗೆಯೂ (ಮು)

ಆ ಲಿಂಗದ ಮಹಾತ್ಮೆಯ ನೋಡಿ ಶಬ್ದಮುಗ್ಧವಾದ ಪ್ರಸ್ತಾವದ ವಚನ:

೫೩

ಕಾಣಬಾರದ ಲಿಂಗವೆನ್ನ ಕರಸ್ಥಲಕ್ಕೆ ಬಂದರೆ,
ಹೇಳಲಮ್ಮೆ ಕೇಳಲಮ್ಮೆ.
ಎನಗಿದು ಸೋಜಿಗ, ಎನಗಿದು ಸೋಜಿಗ!
ಗೊಹೇಶ್ವರನೆಂಬ ಲಿಂಗ ನಿರಾಕಾರ, ಬಯಲು,
ಸಾಕಾರವಾಗಿ ಎನ್ನ ಕರಸ್ಥಲಕ್ಕೆ ಬಂದರೆ, ಹೇಳಲಮ್ಮೆ ಕೇಳಲಮ್ಮೆ. ॥೫೩॥

ಆ ಲಿಂಗದಲ್ಲಿ ಪರವಶನಾಗಿರ್ದ ಪ್ರಸ್ತಾವದ ವಚನ:

೫೪

ತನು ತರತರಂಬೋಗಿ, ಮನವು ನಿಮ್ಮಲ್ಲಿ ಸಿಲುಕಿತ್ತಯ್ಯಾ!
ನೋಟವೆ ಪ್ರಾಣವಾಗಿ, ಆಪ್ಯಾಯನ ನಿಮ್ಮಲ್ಲಿ ಅಙಿತುದಯ್ಯಾ.
ಸಿಲುಕಿತ್ತು ಶೂನ್ಯದೊಳಗೆ ಗೊಹೇಶ್ವರ ನಿರಾಳ! ॥೫೪॥

೫೫

ನಿಮ್ಮ ನೋಡುವ ಸುಖವುಳ್ಳನ್ನಕ್ಕರ ಬೆರಸಲೆಲ್ಲಿಯದಯ್ಯಾ?
ನಿಮ್ಮ ಬೆರಸುವ ತವಕವುಳ್ಳನ್ನಕ್ಕರ ನೋಟ ಹಿಂಗದು.
ನೋಡಿ ಕೂಡಿ ಸೈವೆಙಗಾದ ಸುಖವ–
ನೇನೆಂದುಪಮಿಸುವೆನಯ್ಯಾ ಗೊಹೇಶ್ವರಾ? ॥೫೫॥

ಇಂತು ಗುರುಕರುಣದಿಂದೊದಗಿದ ಇಷ್ಟಲಿಂಗದಲ್ಲಿ ವಿಶ್ವಾಸ ಬಲಿದಲ್ಲಿ ಆಯತಲಿಂಗ. ಆ ಇಷ್ಟಲಿಂಗದ ಭಾವ ಮನೋವೇದ್ಯವಾದಲ್ಲಿ ಸ್ವಾಯತಲಿಂಗ. ಆ[೧] ಇಷ್ಟಲಿಂಗದ ಭಾವ, ಮನೋವೇದ್ಯ ಸುಖವು ಭಿನ್ನವಾಗಿ ತೋಱದೆ, ಅನುಪಮ ಪರಿಣಾಮ ಪರಿಪೂರಿತವಾದಲ್ಲಿ ಸನ್ನಿಹಿತಲಿಂಗ. ಇಂತು ಇಷ್ಟ ಪ್ರಾಣ ಭಾವಲಿಂಗಂಗಳು ತನುತ್ರಯಂಗಳಲ್ಲಿ ಆಯತ ಸ್ವಾಯತ ಸನ್ನಿಹಿತಂಗಳಾಗಲು, ಆ ಶರಣನ ಷಡಂಗದಲ್ಲಿ ಷಡ್ವಿಧಲಿಂಗ ಸಂಬಂಧವಾದುದೆ ಷಟ್‌ಸ್ಥಲಂಗಳೆಂದು ಪ್ರಭುದೇವರು ನಿರೂಪಿಸಿದರದೆಂತೆಂದೊಡೆ:

ಭಕ್ತಸ್ಥಲ:

೫೬

ಪ್ರಣತೆಯೂ ಇದೆ, ಬತ್ತಿಯೂ ಇದೇ;
ಜ್ಯೋತಿಯ ಬೆಳಗುವರೆ ತೈಲವಿಲ್ಲದೆ ಎಂತಪ್ಪುದಯ್ಯಾ?
ಗುರುವೂ ಐದಾನೆ, ಲಿಂಗವೂ ಐದಾನೆ;
ಶಿಷ್ಯಂಗೆ ಜ್ಞಾನೋದಯವಾದನ್ನಕ್ಕರ ಭಕ್ತಿ ಎಂತಳವಡುವುದಯ್ಯಾ?

---

೧ X (ಮು)

ಸೋಹಂ ಎಂಬುದ ಕೇಳಿ ದಾಸೋಹವ ಮಾಡದಿದ್ದರೆ
ಅತಿಗಳೆ[1]ದೆ ನಾನು ಗೊಹೇಶ್ವರಾ. ॥೫೬॥

೫೭

ಅನ್ಯ ರಜವ ಬೆರಸದೆ, ತನ್ನ ರಜವ ಬಾಧಿಸದೆ,
ರವಿಯ ಬೆಳಸ ಬಳಸದೆ, ಲಿಂಗದ ಬೆಳಸ ತಂದು
ಜಂಗಮದಲ್ಲಿ [2]ಸವೆಸುತ್ತಿರ್ಪನು.[2]
ಆ ಭಕ್ತನಲ್ಲಿ ಗೊಹೇಶ್ವರನಿಪ್ಪನು. ॥೫೭॥

೫೮

ಮುಂದುಜಾವದಲೆದ್ದು ಲಿಂಗದಂಘ್ರಿಯ ಮುಟ್ಟಿ
ಸುಪ್ರಭಾತದಲೆದ್ದು ಶಿವಭಕ್ತರ ಮುಖವ [3]ನೋಡುವುದು[3]
ಹುಟ್ಟಿದುದಕ್ಕೆ ಸಫಲ ನೋಡಾ!
ಸತ್ಯವಚನವಿಂತೆಂದುದು-ಇವಿಲ್ಲದವರನೊಲ್ಲೆ ಗೊಹೇಶ್ವರಾ. ॥೫೮॥

ಇಂತು ವಿಶ್ವಾಸವೆ ಪ್ರಾಣವಾಗಿಪ್ಪ ಭಕ್ತನ, ಆ ವಿಶ್ವಾಸದೊಳಗಣ ಏಕೋ ನಿಷ್ಠೆ ಎಂತಿರ್ದಿತ್ತೆಂದೊಡೆ ಮುಂದೆ ಮಾಹೇಶ್ವರಸ್ಥಲವಾದುದು:

ಮಾಹೇಶ್ವರಸ್ಥಲ:

೫೯

ಕೊಟ್ಟ ಕುದುರೆಯನೇಱಲಱಿಯದೆ,
ಮತ್ತೊಂದು ಕುದುರೆಯ ಬಸಯಸುವವರು
ವೀರರೂ ಅಲ್ಲ, ಧೀರರೂ ಅಲ್ಲ.
ಇದು ಕಾರಣ ಮೂಱು ಲೋಕವೆಲ್ಲಾ
ಹಲ್ಲಣವ ಹೊತ್ತುಕೊಂಡು ಬಳಲುತ್ತೈದಾರೆ ಗೊಹೇಶ್ವರಾ! ॥೫೯॥

೬೦

ಭಕ್ತ ಭಕ್ತನೆಂಬರು! ಪೃಥ್ವಿಯ ಪೂರ್ವಾಶ್ರಯವ ಕಳೆಯದನ್ನಕ್ಕರ,
ಅಪ್ಪುವಿನ ಪೂರ್ವಾಶ್ರಯವ ಕಳೆಯದನ್ನಕ್ಕರ,
ತೇಜದ ಪೂರ್ವಾಶ್ರಯವ ಕಳೆಯದನ್ನಕ್ಕರ,
ವಾಯುವಿನ ಪೂರ್ವಾಶ್ರಯವ ಕಳೆಯದನ್ನಕ್ಕರ,
ಆಕಾಶದ ಪೂರ್ವಾಶ್ರಯವ ಕಳೆಯದನ್ನಕ್ಕರ,
ಸೋಮಸೂರ್ಯರ ಪೂರ್ವಾಶ್ರಯವ ಕಳೆಯದನ್ನಕ್ಕರ.
ಆತ್ಮನ ಪೂರ್ವಾಶ್ರಯವ ಕಳೆಯದನ್ನಕ್ಕರ

---

೧ ಳ (ಮೂ) ೨-೨ ಸವಸುತ್ತಿಪ್ಪನು (ಮೂ) ೩-೩ ನೋಡೂದು (ಮೂ)

ಭಕ್ತರೆಂದು ಲಿಂಗವ ಪೂಜಿಸುವ[೧]ರ ಕಂಡು ಬೆಱಗಾದೆನು
ಗೊಹೇಶ್ವರಾ! ॥೬೦॥

೬೧

ಹರಿದು ಹತ್ತಿ, ಮುಟ್ಟಿ [೨]ಹಿಡಿದೆಹೆವೆಂದು[೨]
ಜಾಜಿ ಉರುಳಿ ಬಿದ್ದರು ಅನಂತರು.
ಹಿಡಿದೆ[೩]ಹೆನೆಂಬವರೆಲ್ಲರೂ ಹೆಣನುಂಡು ಹೋದರು.
ನಾ ಹಿಡಿದ ಬಂದಿ ಒಡಬಂದಿಯಾಯಿತ್ತು ಗೊಹೇಶ್ವರಾ! ॥೬೧॥

೬೨

ಅಷ್ಟವಿಧಾರ್ಚನೆ ಷೋಡಶೋಪಚಾರಂಗಳ
ಹಂಗುಹಜಿ ಇಲ್ಲದೆ ಮಾಡುವೆನು.
ನಾನು ಮಾಡುವ [೪]ಕ್ರಿಯೆ[೪]ಗಳೆಲ್ಲವು ನೀನೆಯಾದ ಕಾರಣ
ಗೊಹೇಶ್ವರಾ, ನಿಮ್ಮಲ್ಲಿ ತದ್ಗತವಾದೆನು. ॥೬೨॥

ಇಂತು ವಿಶ್ವಾಸದಿಂದ ಭಕ್ತನಾಗಿ, ಆ ವಿಶ್ವಾಸದೊಳಗಣ ನಿಷ್ಠೆಯಿಂ ಮಾಹೇಶ್ವರನಾಗಿ, ಆ ನಿಷ್ಠೆಯೊಳಗೆ ಅತ್ತಿತ್ತಲೋಸರಿಸದೆ ಸಾವಧಾನಿಯಾಗಿರ್ದ ಭೇದವೆಂತಿ[೫]ರ್ದಿತೆಂದೊಡೆ[೫] ಮುಂದೆ ಪ್ರಸಾದಿಯಸ್ಥಲವಾದುದು:

ಪ್ರಸಾದಿಸ್ಥಲ:

೬೩

ತ್ರಿವಿಧದ ನಿತ್ಯ, ತ್ರಿವಿಧದ ಅನಿತ್ಯವನಾರು ಬಲ್ಲರಯ್ಯಾ?
ತ್ರಿವಿಧಕ್ಕೆ ತ್ರಿವಿಧವನಿತ್ತು, ತ್ರಿವಿಧಪ್ರಸಾದವ ಕೊಳಬಲ್ಲರೆ,
ಆತನ ತ್ರಿವಿಧನಾಥನೆಂಬೆನು;
ಆತನ ವೀರನೆಂಬೆನು, ಧೀರನೆಂಬೆನು;
ಗೊಹೇಶ್ವರಲಿಂಗದಲ್ಲಿ ಪ್ರಸಾದಿಯೆಂಬೆನು. ॥೬೩॥

೬೪

ಅರ್ಪಿತ ಅನರ್ಪಿತವನಾರು ಬಲ್ಲರಯ್ಯಾ?
ಅರ್ಪಿಸಿಕೊಂಬುದು ಅನ[೬]ರ್ಪಿತ;
ಅರ್ಪಿಸದೆ ಕೊಂಬುದು ಅರ್ಪಿತ.
ಅರ್ಪಿಸಿ ಅರ್ಪಿಸದೆ ಕೊಳಬಲ್ಲರೆ
ಗೊಹೇಶ್ವರಾ, ನಿಮ್ಮ ಪ್ರಸಾದಿ. ॥೬೪॥

೧+ವ(ಮೂ) ೨–೨ ಹಿಡಿದಿಹೆನೆಂದು (ಮು) ೩ ದಿ (ಮು) ೪–೪ ಕ್ರೀ(ಮು) ೫–೫ ದೂರ್ದೆಂದಡೆ (ಮೂ) ೬ ನಾ (ಮೂ)

೬೫

ತನುವ ತಾಗದ ಮುನ್ನ, ಮನವ ತಾಗದ ಮುನ್ನ,
ಆಪ್ಯಾಯನ ಬಂದು ಎಡೆಗೊಳ್ಳದ ಮುನ್ನ
ಅರ್ಪಿತವ ಮಾಡಬೇಕು.
ಗುರುವಿನ ಕಯ್ಯಲೆಳತಟವಾಗದ ಮುನ್ನ
ಅರ್ಪಿತವ ಮಾಡಬೇಕು.
ಎಡದ ಕೈಯಲ್ಲಿ ಕಿಚ್ಚು, ಬಲದ ಕೈಯಲ್ಲಿ ಹುಲ್ಲು,
ಉರಿ ಹತ್ತಿತ್ತು ಗೊಹೇಶ್ವರಾ, ನಿಮ್ಮ ಪ್ರಸಾದಿಯ! ॥೬೫॥

ಇಂತು ವಿಶ್ವಾಸದಿಂ ಭಕ್ತನಾಗಿ, ಆ ವಿಶ್ವಾಸದೊಳಗಣ ನಿಷ್ಠೆಯಿಂ ಮಾಹೇಶ್ವರನಾಗಿ, ಆ ನಿಷ್ಠೆಯೊಳಗಣ ಸಾವಧಾನದಿಂ ಪ್ರಸಾದಿಯಾಗಿ, ಆ ಸಾವಧಾನದೊಳಗಣ ಸ್ವಾನುಭಾವವಿವೇಕದಿಂ ಪ್ರಾಣಲಿಂಗಿಯಾಗಿ, ಲಿಂಗಪ್ರಾಣಿಯಾಗಿರ್ದ ವರ್ತನವೆಂತಿರ್ದಿತೆಂದೊಡೆ, ಮುಂದೆ ಪ್ರಾಣಲಿಂಗಿಯ[1] ಸ್ಥಲವಾದುದು:

ಪ್ರಾಣಲಿಂಗಿಸ್ಥಲ:

೬೬

ಉದಕ ಮೂರುತಿಯಾಗಿ ಉದಯವಾಯಿತ್ತು ಪಿಂಡಿಗೆಯಲ್ಲಿ.
ಮೂಲಸ್ಥಾನ ಸ್ಥಾಪ್ಯವಾಯಿತ್ತು ಸ್ವದೇಹ ಶಿವಪುರದಲ್ಲಿ,
ವಾಯು ಪೂಜಾರಿಯಾಗಿ, ಪರಿಮಳದಿಂಡೆಯ ಕಟ್ಟಿ,
ಪೂಜಿಸುತ್ತಿದ್ದಿ[2]ತ್ತು ನವದ್ವಾರ ಶಿವಾಲಯದ ಆದಿಮಧ್ಯಸ್ಥಾನದಲ್ಲಿ.
ಗೊಹೇಶ್ವರನೆಂಬ ಲಿಂಗವಲ್ಲಿಯೆ ನಿಂದಿತ್ತು. ॥೬೬॥

೬೭

ಕಂಗಳ ಬೆಳಗ ಕಲ್ಪಿಸಬಾರದು!
ಕರ್ಣದ ನಾದವ ವರ್ಣಿಸಬಾರದು!
ಜಿಹ್ವೆಯ ರುಚಿಗೆ ಪ್ರತಿಯಿಲ್ಲವೆಂದಿತ್ತು.
ಮತಿಗೆ ಮಹಾ ಘನವಪ್ಪ ಸುಷುಮ್ನನಾಳದ
ಸುಯಿದಾನವ ಪ್ರಮಾಣಿಸಬಾರದು.
ಅಣುರೇಣು ತೃಣಕಾಷ್ಠದೊಳಗೆ
ಸೂಕ್ಷ್ಮನಕ್ಷಯ ನಿಂದ ನಿರಾಳ ಗೊಹೇಶ್ವರ! ॥೬೭॥

೬೮

ಕಂಗಳಾಲಿಯ ಕರಿಯ ನಾಳದಲ್ಲಿ
ಈರೇಳು ಭುವನವಡಗಿಹವು!

---

೧ X (ಮು) ೨ ರ್ದಿ(ಮೂ)

ನಾಟಕ ನಾಟಕ ನಟಿಸಿತ್ತು!
ಆಡುವ ಸೂತ್ರದ ಪರಿಯ ನೋಡಾ!
ಗೊಹೇಶ್ವರ ನಿರಾಳ ಚೈತನ್ಯ[1]ನು. ॥೬೮॥

ಇಂತು ವಿಶ್ವಾಸದಿಂ ಭಕ್ತನಾಗಿ, ಆ ವಿಶ್ವಾಸದೊಳಗಣ ನಿಷ್ಠೆಯಿಂ ಮಾಹೇಶ್ವರನಾಗಿ, ಆ ನಿಷ್ಠೆಯೊಳಗಣ ನಿರಂತರ ಸಾವಧಾನಾರ್ಪಿತದಿಂ ಪ್ರಸಾದಿಯಾಗಿ, ಆ ಸಾವಧಾನಾರ್ಪಿತದೊಳಗಣ ಸ್ವಾನುಭಾವ ವಿವೇಕದಿಂ ಪ್ರಾಣಲಿಂಗಿಯಾಗಿ, ಆ ಸ್ವಾನುಭಾವ ವಿವೇಕದೊಳಗಣ ಅಱಿವಿನಿಂ ಶರಣನಾದ ಭೇದವೆಂತಿರ್ದುದೆಂದೊಡೆ ಮುಂದೆ ಶರಣಸ್ಥಲವಾದುದು:

ಶರಣಸ್ಥಲ:

೬೯

ನೆನಹು ಸತ್ತಿತ್ತು, ಭ್ರಾಂತು ಬೆಂದಿತ್ತು
ಅಱಿವು ಮಱೆಯಿತ್ತು, ಕುಱುಹುಗೆಟ್ಟಿತ್ತು.
ಅಲ್ಲಿ ಗತಿಯನಱಿಸಲುಂಟೆ? ಅಲ್ಲಿ ಮತಿಯನಱಿಸಲುಂಟೆ?
ಅಂಗವೆಲ್ಲಾ ನಷ್ಟವಾಗಿ, ಲಿಂಗಲೀಯವಾಗಿ,
ಕಂಗಳಂಗದ ಕಳೆಯ ಬೆಳಗಿನ ಭಂಗ ಹಿಂಗಿತ್ತು ಗೊಹೇಶ್ವರಾ. ॥೬೯॥

೭೦

ಉಪಾಧಿಕ ಮನವು, ಉಪಾಧಿಕರಹಿತ ಮನವು,
ನಿಂದಲ್ಲಿ ನಿವಾಸವಾಯಿತ್ತು, ಆನಂದದ ಭಾವವು,
ಬಿಂದು ತಾನಳಿದು ನಿಂದಲ್ಲಿ ನಿವಾಸವಾಯಿತ್ತು.
ಲಿಂಗದ ಬೆಳಗು ಪ್ರಜ್ವಲಿಸುವುದ ಕಂಡೆನು ಗೊಹೇಶ್ವರಾ! ॥೭೦॥

೭೧

ತಲೆಯ ಮೇಲೆ ತಲೆ ಇದ್ದಿತ್ತು.
ತಲೆಯ ತಲೆ ಆ ತಲೆಯ ನುಂಗಿತ್ತು.
ಸತ್ತು ಹಾಲ ಸವಿಯಬಲ್ಲಡೆ,
ಎರಡಱ ಕೀಲ ಬಲ್ಲರೆ ಹೇಳಿರೆ.
ಶಿಶು ಕಂಡ ಕನಸಿನ ತೃಪ್ತಿಯ
ನಿಮ್ಮಲ್ಲಿ ಕಂಡೆನು ಗೊಹೇಶ್ವರಾ! ॥೭೧॥

ಇಂತು ವಿಶ್ವಾಸದಿಂ ಭಕ್ತನಾಗಿ, ಆ ವಿಶ್ವಾಸದೊಳಗಣ ನಿಷ್ಠೆಯಿಂ ಮಾಹೇಶ್ವರನಾಗಿ, ಆ ನಿಷ್ಠೆಯೊಳಗಣ ಸಾವಧಾನದಿಂ ಪ್ರಸಾದಿಯಾಗಿ, ಆ ಸಾವಧಾನದೊಳಗಣ ಸ್ವಾನುಭಾವದಿಂ ಪ್ರಾಣಲಿಂಗಿಯಾಗಿ, ಆ ಸ್ವಾನುಭಾವದೊಳಗಣ ಅಱಿವಿನಿಂ ಶರಣನಾಗಿ, ಆ ಅಱಿವು ನಿಜದಲ್ಲಿ

೧+ವ (ಮೂ)

ಸಮರಸಭಾವವನೈದಿದ ನಿರ್ಭಾವಪದದೊಳು ನಿಂದ ಭೇದವೆಂತಿರ್ದಿತೆಂದೊಡೆ ಮುಂದೆ ಐಕ್ಯಸ್ಥಲವಾದುದು:

ಐಕ್ಯಸ್ಥಲ:

೭೨

ಭಾವಕ್ಕೆ ಇಂಬಿಲ್ಲ; ಶಬ್ದ ಮೀಸಲು ನೋಡಾ!
ನುಡಿಗೆಡೆಯಿಲ್ಲ, ಎಡೆಗೆ ಕಡೆಯಿಲ್ಲ
ಗೊಹೇಶ್ವರನೆಂಬ ಶಬ್ದ ವೇದಿಸಲೊಡನೆ. ॥೭೨॥

೭೩

ನಿರ್ವಿಕಲ್ಪಿತವೆಂಬ ನಿಜದೊಳಗಯ್ಯಾ!
ನಿರಹಂಭಾವದಲ್ಲಿ ನಾನಿದ್ದೆನು.
ನೋಡಿಹೆನೆಂದರೆ ನೋಡಲಿಲ್ಲ,
ಕೇಳಿಹೆನೆಂದರೆ ಕೇಳಲಿಲ್ಲ.
ಘನನಿರಂಜನದ ಬೆಳಗು
ಇಂಬಾದುದನೇನೆಂಬೆ ಗೊಹೇಶ್ವರಾ? ॥೭೩॥

೭೪

ನಿಜವನಜೆದ ನಿಶ್ಚಿಂತನೆ,
ಮರಣವ ಗೆಲಿದ ಮಹಂತನೆ,
ಘನವನೊಳಕೊಂಡ ಮಹಿಮನೆ,
ಪರವನೊಳಕೊಂಡ ಪರಿಣಾಮಿಯೆ.
ಬಯಲಲೊದಗಿದ ಭರಿತನೆ,
ಗೊಹೇಶ್ವರಲಿಂಗ ನಿರಾಳವನೊಳಕೊಂಡ ಸಹಜನೆ! ॥೭೪॥

ಇಂತು ಷಡುಸ್ಥಲವು ಷಡಂಗದಲ್ಲಿ ಸಮರಸವ[೧]ನೆಯ್ದಿ[೧], ಸರ್ವಾಚಾರ ಸಂಪತ್ತು ನಿಃಪತಿಯಾಗಿ, ಮಹಾಜ್ಞಾನವೆ ತಾನಾಗಿ ನಿಂದ ನಿಜಪದಸ್ಥಲವೆ ಸ್ಥಲವಾಗಿ, ಅಲ್ಲಿ ಅಗಮ್ಯವೆ ಗಮನವಾಗಿ, ಪರವೆಂಬುದೆ ನಾಮವಾಗಿ, ನಿರಾಶಾಭರಿತವೆಂಬ ಜಂಗಮಸ್ಥಲವನಳವಡಿಸಿ, ನಿಶ್ಶಬ್ದವೆಂಬ ವಚನಾನುಭಾವಮಂ ತನ್ನನಾಶ್ರಯಿಸಿದ ಮಹಾನುಭಾವಿಗಳಿಗೆ ನಿರೂಪಿಸಲೆಳಸಿ, ಕಾಯವೆಂಬ ಕಂಥೆಯ ಧರಿಸಿ, ನಿಂದಲ್ಲಿ ನೆಳಲಿಲ್ಲದೆ, ಸುಳಿದರೆ ಹಜ್ಜೆ ಇಲ್ಲದೆ ಸುಳಿವ ಅಲ್ಲಮಪ್ರಭುರಾಯನ ಜಂಗಮಸ್ಥಲದ ನಿಲುಕಡೆ ಎಂತಿರ್ದುದೆಂದೊಡೆ ಆ ಪ್ರಸ್ತಾವದ ವಚನ:

೧–೧ ನೈದಿ(ಮೂ)

ಜಂಗಮಸ್ಥಲದ ನಿಲುಕಡೆ:

೭೫

ಪರಮ ಪರತತ್ವ ಪರಮಾರ್ಥ ಪರಾಪರ ವಾಙ್ಮನಕ್ಕಗೋಚರ
ಶಬ್ದಗಂಭೀರ ಉಪಮಾತೀತ ಉನ್ನತ ಪರಶಿವ[೧]
ಜ್ಞಾನಜ್ಯೋತಿ ಸುಜ್ಞಾನಪ್ರಭೆಯ ಬೆಳಗಿನೊಳಗೆ
ಸುಳಿದಾಡುವ ಮಹಾ ಮಹಿಮಂಗೆ
ಶಿವಜ್ಞಾನವೆ ಶೃಂಗಾರ, ಮಹಾಬೆಳಗೆ ವಿಭೂತಿ, ಪಂಚಬ್ರಹ್ಮವೆ ದರುಶನ,
ಗಗನಸ್ಥಾನವೆ ಕಂಥೆ, ಆಕಾಶವೆ ಕೊಪ್ಪರ,
ಅಜಾಂಡ ಬ್ರಹ್ಮಾಂಡವೆ ಕರ್ಣಕುಂಡಲ,
ಆದಿಯಾಧಾರವೆ ಕಕ್ಷಪಾಳ,
ಅನಾಹತವೆ ಒಡ್ಯಾಣ, ಅದ್ವೈತವೆ ಯೋಗವಟ್ಟಿಗೆ,
ಅಗಮ್ಯವೆ ಯೋಗವಾವುಗೆ, ಅಚಲಿತವೆ [೨]ಖರ್ಪರ[೨]
ಅಪ್ರಮಾಣವೆ ಲಾಕುಳ, ಅ[೩]ವಿಚಾರವೆ ಸುಳುಹು,
ಅಕಲ್ಪಿತವೆ ಭಿಕ್ಷ, ಕೊಂಡುದೆ ಗಮನ, ನಿಂದುದೆ ನಿವಾಸ,
ನಿಶ್ಚಿಂತವೆಂಬ ಆಶ್ರಮದೊಳಗೆ ನಿರಾಕುಳವೆಂಬ ಸಿಂಹಾಸನವನಿಕ್ಕಿ,
ಗಗನಗಂಭೀರದ ಬಾವಿಯೊಳಗೆ ಅಗೋಚರದಗ್ಘವಣಿಯ ತಂದು,
ಮಹಾಘನ ಪ್ರಾಣಲಿಂಗಕ್ಕೆ ಮಂಗಳ ಬೆಳಗ ಮಜ್ಜನಕ್ಕೆಱೆದು,
ಬಿಂದ್ವಾಕಾಶವೆ ಗಂಧ, ಮಹದಾಕಾಶವೆ ಅಕ್ಷತೆ,
ಪರಾಪರವೆ ಪತ್ರೆಪುಷ್ಪ, ನಿರ್ಮಲವೆ ಲಿಂಗಾರ್ಚನೆ,
ಮಹಾಪ್ರಕಾಶವೆ ಪೂಜೆ, ನಿತ್ಯನಿರಂಜನವೆ ಧೂಪಾರತಿ,
ಸಕಲ ಭುವನಾದಿ ಭುವನಂಗಳೆ ಸಯದಾನ,
ಆಚಾರವೆ ಅರ್ಪಿತ, ಮಹಾತತ್ತ್ವವೆ ಸಿತಾಳ,
ಅಖಂಡಿತವೆ ಅಡಕೆ, ಏಕೋಭಾವವೆ ಎಲೆ, ಶುದ್ಧ ಶಿವಾಚಾರವೆ ಸುಣ್ಣ,
ವಿವೇಕವಿಚಾರದಿಂ ತಾಂಬೂಲಮಂ ಸ್ವೀಕರಿಸಿ;
ಮಹಾಲಿಂಗದ ಪರಿಣಾಮವೆ ಪ್ರಸಾದ.
ಸಮ್ಯಕ್‌ಜ್ಞಾನವೆ ಸಂತೋಷ, ಸಹಜ ನಿರಾಭಾರಿಗಳ ಮೇಳದಿಂ
ನಿಸ್ಸೀಮದ ನಿಭ್ರಾಂತಿನ ಸುಸಂಗದಲ್ಲಿ ನಿರಾಶಾ ಪಥವೆ ಅನುಕೂಲ,
ನಿಶ್ಶಬ್ದವೆ ಅನುಭಾವ, ಅನುಪಮದ ನಿಶ್ಶೂನ್ಯವೆ ವಿಶ್ರಾಮ,
ನಿರಾಕಾರವೆ ಗಮನ, ನಿರಂತರ ಪಾತಾಳ ಊರ್ಧ್ವ ಪವನ,
ತ್ರಿಭುವನಗಿರಿಯೆಂಬ ಪರ್ವತವನೇಜಿ,
ಕಾಯವೆಂಬ ಕದಳಿಯ ಹೊಕ್ಕು ಸುಳಿದಾಡುವ

೧+ಜ್ಞಾನ (ಮೂ) ೨-೨ಖಪ್ಪರ (ಮೂ) ೩X(ಮು)

ಮಹಾಮಹಿಮಂಗೆ ಇಹಲೋಕವೇನು? ಪರಲೋಕವೇನು?
ಅಲ್ಲಿಂದತ್ತ ಅಗಮ್ಯ, ನಿರಾಳ,
ಪರಮಜ್ಞಾನಸಿದ್ಧಿ, ಮಹಾಲಿಂಗದ ಬೆಳಗು!
ಗೊಹೇಶ್ವರಾ, ನಿಮ್ಮ ನಿಜವನಱಿದ ಮಹಾಮಹಿಮಂಗೆ
ನಮೋ ನಮೋ ಎಂಬೆನು. ॥೭೫॥

ಇಂತಪ್ಪ ಜಂಗಮಸ್ಥಲವನಿಂಬುಗೊಂಡು ಸಕಲ ಪುರಾತನ ಗಣಂಗಳಂ ಕೃತಾರ್ಥರಂ ಮಾಡಲೋ[1]ಸ್ಕರ[1] ಸುಳಿದಾಡುತ್ತಿರ್ದ ಪ್ರಸ್ತಾವದ ವಚನ:

೭೬

ಕಾಲಿಲ್ಲದ ಗಮನ, ಕೈಯಿಲ್ಲದ ಸೋಂಕು,
ಬಾಯಿಲ್ಲದ ರುಚಿ, ಭಾವವೇ [2]ಖರ್ಪರ[2]ವಾಗಿ,
ಪರಮ ದೇಹಿ ಎಂದು ಬೇಡುವ ಪರಮನ ತೋಱಾ
ಗೊಹೇಶ್ವರಾ! ॥೭೬॥

೭೭

ಕಣ್ಣೆ ಕಟ್ಟಿಗೆಯಾಗಿ, ಕಯ್ಯೆ ಖರ್ಪರವಾಗಿ,
ಕಿವಿಯೆ ಸಕಲ ಪುರಾತನರ ಕಾರುಣ್ಯವೆನುತ,
ಮನದ ಭಿಕ್ಷವನುಂಡು, ತನು ಪರಿಣಾಮವನೆಯ್ದಿಹ
ಘನಮಹಿಮರ ತೋಱಾ ಗೊಹೇಶ್ವರಾ! ॥೭೭॥

೭೮

ಕಂಡುದೆಲ್ಲವು ಪಾವನ, ಕೇಳಿತ್ತೆಲ್ಲ ಪರಮಬೋಧೆ.
ಮುಟ್ಟಿತ್ತೆಲ್ಲ ಪರುಷದ ಸೋಂಕು.
ಒಡನೆ ನುಡಿದವರೆಲ್ಲರು ಸದ್ಯೋನ್ಮುಕ್ತರು.
ಸುಳಿದ ಸುಳುಹೆಲ್ಲ ಜಗತ್ಪಾವನ.
ಮೆಟ್ಟಿದ ಧರೆಯೆಲ್ಲವು ಅವಿ[3]ಮುಕ್ತ[3]ಕ್ಷೇತ್ರ.
ಸೋಂಕಿದ ಜಲವೆಲ್ಲವು ಪುಣ್ಯತೀರ್ಥಂಗಳು
ಶರಣೆಂದು ಭಕ್ತಿಯ ಮಾಡಿದವರೆಲ್ಲರು ಸಾಯುಜ್ಯರು.
ಗೊಹೇಶ್ವರಾ, ನಿಮ್ಮ ಸುಳುಹಿನ ಸೊಗಸನುಪಮಿಸಬಾರದು! ॥೭೮॥

ಇಂತೀ ಶ್ರೀಮತ್ ಸಕಲಗಣ ಪುರಾತನರೊಳ್ ಪ್ರಭುದೇವರು
ಮಹಾನುಭಾವಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್
ಪ್ರಥಮೋಪದೇಶಂ ಸಮಾಪ್ತಂ "ಮಂಗಳಮಹಾಶ್ರೀ"

❖

೧-೧ ಸುಗರ (ಮು), ೨-೨ ಕಪ್ಪರ (ಮೂ) ೩-೩ಮುಕ್ತಿ(ಮೂ) ೪-೪ X (ಮು)

೨
ಮುಕ್ತಾಯಕ್ಕಗಳ ಸಂಪಾದನೆ

ಕಂದ:

ಕಾಯಗುಣದೂರನಲ್ಲಮ
ರಾಯನು ಮುಕ್ತಾಯಿಗೊಲವಿನಿಂ ನಿಜಪದವನು
ಪಾಯದೊಳಿತ್ತುದ ಪೇಳ್ವೆ ನಿ
ರಾಯಸದಿಂ ಶರಣಜನರ ಕಿವಿಗಿನಿದೆನಿಸಲ್ ॥೧॥

ಅದೆಂತೆಂದೊಡಾ ಪ್ರಭುದೇವರು ಮರ್ತ್ಯಲೋಕವನೆಯ್ದೆ ಪಾವನವ ಮಾಡುತ್ತ, ಸತ್ಯಸದಾಚಾರವಂತರಪ್ಪ ಶಿವಲಿಂಗೈಕ್ಯರಂ ತನ್ನಂತೆ ಮಾಡುತ್ತ, ಶ್ರೀ ವೀರಶೈವಾಚಾರದ ಘನವಂ ಕರತಳಾಮಳಕಮಾಗಿ ಸಮಸ್ತರೊಳು ತೊಳಗಿ ಬೆಳಗಿ ತೋಱುತ್ತ, ಶಿವಾದ್ವೈತ ತತ್ತ್ವಭೇದಂಗಳನು ಶಿವಸುಖಿಗಳೊಳು ಕೃಪೆಯಿಂ ನಿರೂಪಿಸುತ್ತ, ಸ್ವಾನುಭಾವಗಮ್ಯರೊಳು ಸಮ್ಮೇಳಂ[೧]ಗೈವುತ್ತ[೧], ಸಮ್ಯಕ್‌ಶರಣರೊಳು ಸಮರಸಮಂ ಕೈಗುಡುತ್ತ; ಪರಸ್ಥಲದ ಲಿಂಗಮಂ ಕರಸ್ಥಲದೊಳು ಸೈತಿಟ್ಟು, ಪಿರಿದು ನೋಟವೆ ಪ್ರಾಣವಾಗಿ, ಭಾವವೆ ನಿಬ್ಬೆರಗಿನ ನಿಲವಾಗಿ, ಜ್ಞಾನವೆ ಸರ್ವಾಂಗಲಿಂಗವಾಗಿ, ಮನವೆ ಕರಸ್ಥಲದೊಳು ಲಯವಾಗಿ, ಅಕಾಯವೆ ಕಾಯವಾಗಿ ಬಲದ ಹಸ್ತದೊಳು ವೀಣಾದಂಡಮಂ ಪಿಡಿದು, ಪರಮಾನಂದ ರಸ ಒಸರಲು, ಪಾಡುವ ಸ್ವರವೆ ನಾದಬ್ರಹ್ಮದೊಳು ತರಹರಮಾಗಿ, ದಿವ್ಯ ವಚನಾಮೃತಂಗಳ ಪಾಡುತ್ತ, ಲೋಕದ ಲಜ್ಜಾಭಿಮಾನಂಗಳನಱೆಯದೆ ದಿಗಂಬರವೇಷದಿಂ ಇತರೇತರಂಗಳಂ [೨]ಮಱೆದು,[೨] ತನ್ನೊಳು ತನ್ನ ನಿಜದ ನಿಲವ ನೋಡುತ್ತ, ಇಂತನಂತದೇಶಂಗಳೊಳು ಸುಳಿದು, ದೇಶಾಂತರಮಂ ನಟಿಸಿ ತೋಱುತ್ತ ಬರುತ್ತಿರಲತ್ತ, ಕೈಲಾಸದಲ್ಲಿ ಸಮಸ್ತ ಪ್ರಮಥಗಣಂಗಳೊಳಗೊರ್ವ ಗಣಾಧೀಶ್ವರನು ಜಗಹಿತಾರ್ಥವಾಗಿ ಮರ್ತ್ಯಕ್ಕವತರಿಸಿ, ಅಜಗಣ್ಣನೆಂಬಭಿಧಾನದಿಂ ಗುಪ್ತಭಕ್ತಿಯಿಂದಿರ್ದು, ತಮ್ಮ ನಿರವಯಪದದೊಳು ನಿಜವನೈದಲು, ಅಲ್ಲಿ ಮುಕ್ತಾಯಕ್ಕಗಳು ಅಜಗಣ್ಣನನಗಲ್ದ ವಿಯೋಗಾವಸ್ಥೆಯಿಂ ಪ್ರಲಾ[೩]ಪಿಸುತ್ತಿರಲು, ಆ ಪ್ರಲಾಪಮಂ ಪ್ರಭುದೇವರು ಕಂಡು, ಈಕೆ ಮಹಾಜ್ಞಾನಿಯೆಂದಱೆದು ನಿಂದು ನೋಡುತ್ತಿರ್ಪ ಪ್ರಸ್ತಾವದೊಳು ಮುಕ್ತಾಯಕ್ಕಗಳು ಪ್ರಲಾ[೩]ಪಿಸುತ್ತಿರ್ದ ಪ್ರಸ್ತಾವದ ವಚನ:

೧–೧ ಗೆಯುತ್ತ (ಮು) ೨–೨ ಮಱದು(ಮೂ) ೩ ಳಾ (ಮೂ)

೭೯

ಅಱಿವನಣಲೊಳಗಿಕ್ಕಿ ಅಗಿವುತ್ತಿದೆ ಮರ್ತ್ಯಲೋಕವೆಲ್ಲವು.
ಅಱಿವು ಉಳಿಯಲಱಿಯದೆ ಕೆಟ್ಟಿತ್ತು ಲೋಕವೆಲ್ಲವು.
ನಾನೆಂತು ಬದುಕುವೆನಣ್ಣಾ!
ಕತ್ತಲೆ ಬೆಳಗ ಕಾಬ ಸಂದೇಹಿ ನಾನೊಬ್ಬಳು,
ಎನ್ನ ಕಣ್ಣ ಕಟ್ಟಿ, ಕನ್ನಡಿಯ ತೋಱಿತ್ತೋ ಅಜಗಣ್ಣಾ, ನಿನ್ನ ಯೋಗ! ॥೧॥

೮೦

ಅಂಧಕನ [1]ಕೈಯ[1] ಅಂಧಕ ಹಿಡಿದಂತಿರಬೇಕು.
ಮೂಗನ [2]ಕೈಯ್ಯಲ್ಲಿ[2] ಕಾವ್ಯವ ಕೇಳಿದಂತಿರಬೇಕು.
ದರ್ಪಣದೊಳಗಣ ಪ್ರತಿಬಿಂಬದಂತೆ
ಹಿಡಿವರಿಗಳವಲ್ಲದಿರಬೇಕು ಅಣ್ಣಾ.
ಕೂರ್ಮನ ಶಿಶುವಿನ ಸ್ನೇಹದಂತಿ[3]ರಲೊಲ್ಲದೆ
ಆಱೂಢಗೆಟ್ಟೆಯೊ ಅಜಗಣ್ಣಾ. ॥೨॥

೮೧

ರವಿಯೊಳಗಡಗಿದ ಪ್ರತಿಬಿಂಬದಂತೆ,
ಹಿಡಿವರಿಗಳವಲ್ಲದಿರಬೇಕು ಅಣ್ಣಾ.
ನಿಮ್ಮೊಳಗಡಗಿದ ಭೇದವ ಭಿನ್ನವ ಮಾಡುವರೆ ಅಣ್ಣಾ?
ನಿಮ್ಮ ನುಡಿಗಳೆಲ್ಲವು ಪ್ರತಿಬಿಂಬಗಳಾದವೆ ಅಣ್ಣಾ?
ಕೊಡನೊಳಗಣ ಜ್ಯೋತಿಯ ಅಡಗಿಸಲಱಿಯದೆ
ಮಿಗೆವಱಿದಂತಾದೆಯೊ ಅಜಗಣ್ಣಾ! ॥೩॥

೮೨

ಸ್ಫಟಿಕ ಪ್ರಜ್ವಲಜ್ಯೋತಿ ಘಟದೊಳಗೆ ತೋಱುತ್ತಿರೆ,
ದಿಟಪುಟವನತಿಗಳೆದು ಸಟೆಯ ಬಳಸುವರೆ?
ಅಂತರಂಗದ [4]ಸುದ್ದಿಯ[4] ಬಹಿರಂಗಕ್ಕೆ ತಂದು
ಸಂತೈಸಲಱಿಯದೆ ಮಱುಳಾದಿರಣ್ಣಾ.
ಜಂತ್ರದ ಕೀಲು ಕೂಟದ ಸಂಚದ ಭೇದವು ತಪ್ಪಿ,
ಮಂತ್ರ ಭಿನ್ನವಾಗಿ ನುಡಿವರೆ ಅಜಗಣ್ಣಾ? ॥೪॥

ಇಂತು ತನ್ನ ಅಱಿವಿನ ಮುಂದೆ ಇದಿರಿಟ್ಟು ತೋಱುವ ಪರವಸ್ತುವಿನಲ್ಲಿ ವಿಕಳಾವಸ್ಥೆಯ[5]ನೈದಿ,[5] ನೆಱೆ[6]ವ ಭರದಿಂದಿರ್ಪ ಮುಕ್ತಾಯಕ್ಕಗಳನು ಪ್ರಭುದೇವರು ನುಡಿಸುವ ಪ್ರಸ್ತಾವದ ವಚನ:

೧–೧ ಕಯ್ಯ(ಮೂ) ೨–೨ ಕಯ್ಯಲ್ಲಿ (ಮೂ) ೩ ತೆ ಇ (ಮೂ) ೪–೪ ಸುದ್ಧಿಯ (ಮು) ೫–೫ ನೆಯ್ದಿ (ಮೂ) ೬ ರ(ಮೂ)

೮೩

ಅಂಗೈಯೊಳಗೊಂದು ಅರಳ್ದ ತಲೆಯ ಹಿಡಿದುಕೊಂಡು,
ಕಂಗಳ ಮುತ್ತ ಪವಣಿಸುವಾಕೆ ನೀನಾರು ಹೇಳಾ?
ಸಂದ ಸಂಪಗೆಯರಳ ತುಂಬಿ [೧]ಬಂಡುಂಬ[೧] ಭೇದವನಱಿಯದೆ
ಹಂಬಲಿಸುವ ಪರಿತಾಪವೇನು ಹೇಳಾ?
ಒಂದೆಂಬೆನೆ? ಎರಡಾಗಿಯಿದೆ; ಎರಡೆಂಬೆನೆ? ಒಂದಾಗಿಯಿದೆ.
ಅಱಿವಿನೊಳಗಣ ಮಱಹಿದೇನು ಹೇಳಾ?
ದುಃಖವಿಲ್ಲದ ಅಕ್ಕೆ, ಅಕ್ಕೆ ಇಲ್ಲದ ಅನುತಾಪ,
ನಮ್ಮ [೨]ಗೊಹೇಶ್ವರ[೨]ಲಿಂಗದಲ್ಲಿ ತೋಱುತ್ತಿದೆ.
ನೀನಾರೆಂದು ಹೇಳಾ ಎಲೆ ಅವ್ವಾ? ॥೫॥

ಈ ಹೀಂಗೆಂದು ಪ್ರಭುದೇವರು ಬೆಸಗೊಳಲು, ತನ್ನ ಕುಱುಹ ಹೇಳಿದ ಪ್ರಸ್ತಾವದ ವಚನ:

೮೪

ಆರೆಂದು ಕುಱುಹ ಬೆಸಗೊಳಲು
ಏನೆಂದು ಹೇಳುವೆನಯ್ಯಾ?
ಕಾಯದೊಳಗೆ[೩] ಮಾಯವಿಲ್ಲ; ಭಾವದೊಳಗೆ ಭ್ರಮೆಯಿಲ್ಲ.
[೪]ಕರೆದು[೪] ಬೆಸಗೊಂಬರೆ ಕುಱುಹಿಲ್ಲ.
ಒಬ್ಬರಿಗೂ ಹುಟ್ಟದೆ, ಅಯೋನಿಯಲ್ಲಿ ಬಂದು,
ದುರ್ಬುದ್ಧಿಯಾದವಳನೇನೆಂಬೆನಣ್ಣಾ!
ತಲೆಯಳಿದು ನೆಲೆಗೆಟ್ಟು ಬೆಳಗುವ ಜ್ಯೋತಿ
ಎನ್ನ ಅಜಗಣ್ಣತಂದೆಯ ಬೆನ್ನ ಬಳಿಯವಳಾನಯ್ಯಾ. ॥೬॥

ಈ ಹೀಂಗೆಂದು ಮುಕ್ತಾಯಕ್ಕಗಳು ತಮ್ಮ ಕುಱುಹ ಹೇಳಲು, ಆ ಪ್ರಭುದೇವರು ಕೇಳಿ ಹರುಷಿತರಾದ ಪ್ರಸ್ತಾವದ ವಚನ:

೮೫

ಕಾಣದುದ ಕಂಡೆ; ಕೇಳದುದ ಕೇಳಿದೆ.
ಮುಟ್ಟಬಾರದುದ ಮುಟ್ಟಿದೆ; ಅಸಾಧ್ಯವ ಸಾಧಿಸಿದೆ.
ತಲೆಗೆಟ್ಟುದ ತಲೆವಿಡಿದೆ; ನೆಲೆಗೆಟ್ಟುದ ನಿರ್ಧರಿಸಿದೆ.
[೫]ಗೊಹೇಶ್ವರಾ,[೫] ನಿಮ್ಮ ಶರಣ ಅಜಗಣ್ಣಂಗೆ ಶರಣೆಂದು ಬದುಕಿದೆನು. ॥೭॥

ಈ ಹೀಂಗೆಂದು ಪ್ರಭುದೇವರು ಅಜಗಣ್ಣದೇವರ ನಿಜವನಱಿದು ಶರಣು ಮಾಡಿದರೆ, ಅವರ ಕುಱುಹನಱಿಯಬೇಕೆಂದು ಮುಕ್ತಾಯಕ್ಕಗಳು ಬೆಸಗೊಂಡ ಪ್ರಸ್ತಾವದ ವಚನ:

೧-೧ ಬಂದುಂಬ (ಮು) ೨-೨ ಗೊಗ್ಗೇಶ್ವರ (ಮೂ)೩+ಮಾಯದೊಳಗೆ (ಮೂ) ೪-೪ ಕರದು (ಮೂ) ೫-೫ ಗೊಗ್ಗೇಶ್ವರಾ (ಮೂ)

೮೬

ಸಚ್ಚಿದಾನಂದ ಸ್ವರೂಪವಾದ, ವಾಙ್ಮನಕ್ಕಗೋಚರವಾದ,
ಜ್ಞಾನಕ್ರೀಯನೊಳಕೊಂಡು ನಿಂದ ಜಂಗಮವೆ
ಅಂಗ ಪ್ರಾಣವಾದ ಶರಣರನೊಳಕೊಂಡು,
ಚಿದ್‌ಘನದೊಳಗೆ ಅವಿರಳೈಕ್ಯವಾದ
ಎನ್ನ ಅಜಗಣ್ಣ ತಂದೆಯನಜಿದು
ಶರಣೆಂಬಾತ ನೀನಾರು ಹೇಳಯ್ಯಾ? ||೮||

ಈ ಹೀಂಗೆಂದು ಕೇಳಿದ ಮುಕ್ತಾಯಕ್ಕಗಳಿಗೆ ಪ್ರಭುದೇವರು ತಮ್ಮ ಕುಱುಹ ಹೇಳುವ ಪ್ರಸ್ತಾವದ ವಚನ:

೮೭

ಶರಣು ಶರಣಾರ್ಥಿ ಎಲೆ ತಾಯೆ.
ಧರೆಯಾಕಾಶ ಮನೆಗಟ್ಟದಂದು,
ಹರಿವನಿಲ ಅಗ್ನಿ ಜಲ ಮೊಳೆದೋಱದಂದು ಹುಟ್ಟಿದಳೆಮ್ಮವ್ವೆ.
ಅದಕ್ಕೆ ಮುನ್ನವೆ ಹುಟ್ಟದೆ ಬೆಳೆ[1]ದನೆಮ್ಮಯ್ಯ.
ಈ[2] ಇಬ್ಬರ ಬಸುಱಲ್ಲಿ ಬಂದೆ ನಾನು.
ಎಮ್ಮ ತಂಗಿಯರೈವರು ಮೊಱೆಗೆಟ್ಟು ಹೆಂಡಿರಾದರೆನಗೆ,
ಕಾಮಬಾಣ ತಾಗದೆ ಅವರ ಸಂಗವ ಮಾಡಿದೆನು.
ನಾ ನಿಮ್ಮ ಭಾವನಲ್ಲಯ್ಯನು; ನೀನೆ[3]ನಗೆ[3] ನಗೆವೆಣ್ಣು.
ನಮ್ಮ [4]ಗೊಹೇಶ್ವರ[4]ನ ಕೈವಿಡಿದು ಪರಮಸುಖಿಯಾಗಿ
ಕಳವಳದ ಕಂದೆಱವಿಯೇನು ಹೇಳಾ! ||೯||

ಈ ಹೀಂಗೆಂದು ಪ್ರಭುದೇವರು ತಮ್ಮ ಪೂರ್ವಾಪರಸಂಬಂಧಮಂ ನಿರೂಪಿಸಲು, ಆ ಮುಕ್ತಾಯಕ್ಕಗಳು ಕೇಳಿ ಹರುಷಿತೆಯಾದ ಪ್ರಸ್ತಾವದ ವಚನ:

೮೮

ದೇವದೇವಾ, [5]ಶರಣು[5] ಶರಣಾರ್ಥಿ; ಅವಧರಿಸಯ್ಯಾ.
ಕೇಳಿದ ಸುಖ ಕಿವಿಗೆ ಬೇಟವಾಯಿತ್ತು.
ಕಿವಿಗಳ ಬೇಟ ಕಂಗಳ ಮುಂದೆ ಮೂರ್ತಿಗೊಂಡಿತ್ತು.
ಕಂಗಳ ಮುಂದೆ ಕಂಡ ಸುಖವು ಮನಕ್ಕೆ ವೇದ್ಯವಾಯಿತ್ತು.
ಶಿವಶರಣರ ದರುಶನದ ಸುಖವನೇನೆಂದೆನಬಹುದು!
ಮದವಳಿದು ಮಹವನೊಡಗೂಡಿದ ಎನ್ನ ಅಜಗಣ್ಣನನಗಲಿದ ದುಃಖ
ನಿಮ್ಮ ಸಂಗದಲ್ಲಿ ಸಯವಾಯಿತ್ತು ಕಾಣಾ ಪ್ರಭುವೆ. ||೧೦||

---

೧ ೪(ಮೂ) ೨ X (ಮೂ) ೩-೩ X (ಮೂ)೪-೪ಗೊಗ್ಗೇಶ್ವರ(ಮು) ೫ X(ಮು)

ಇಂತು ಮುಕ್ತಾಯಕ್ಕಗಳು ನಿಮ್ಮ ದರುಶನದಿಂದ ಕೃತಾರ್ಥಳಾದೆನೆಂದು ಬಿನ್ನಪಂಗೈಯಲು, ಆ ಪ್ರಭುದೇವರು ಆಕೆಯ ಅನುತಾಪ[೧]ಮಂ[೧] ಸಂತೈಸಿ ನಿಲಿಸುವ ಪ್ರಸ್ತಾವದ ವಚನ:

೮೯

ಅಱಿವಱಿತು ಮಱಹುಗೆಟ್ಟು ತನ್ನಲ್ಲಿ ತಾನು ಸನ್ನಿಹಿತನಾದಂಗೆ
ದುಃಖಿಸುವರೆ ಹೇಳಾ? ಶೋಕಿಸುವರೆ ಹೇಳಾ?
ಒಡಲಿಲ್ಲದಾತಂಗೆ ಎಡೆಯಲೊಂದು ಅಳಿವುಂಟೆಂದು ನುಡಿದು
ಹೇಳುವ ಮಾತು ಭ್ರಾಂತು ನೋಡಾ!
ಎರಡಿಲ್ಲದ ಐಕ್ಯಂಗೆ ಒಳಹೊಱಗಿಲ್ಲ ನೋಡಾ,
[೨]ಗೊಹೇಶ್ವರ[೨]ನ ಶರಣ ಅಜಗಣ್ಣಂಗೆ. ॥೧೧॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಅಜಗಣ್ಣನು ಪರಮ ಯೋಗೀಶ್ವರನು; ಸುಜ್ಞಾನ ಪರಿಪೂರ್ಣನು; ಅಂತರಂಗದಲ್ಲಿ ಅವಿರಳಲಿಂಗೈಕ್ಯನು, ಬಹಿರಂಗವ್ಯವಹಾರ ದೂರಸ್ಥನು; ಸರ್ವಕರಣ ನಿರ್ಮುಕ್ತನು, ಸರ್ವಾಂಗ ರಹಿತನು; ನಿತ್ಯ ನಿಜತತ್ತ್ವದಲ್ಲಿ ಮನೋವೇದ್ಯನು, ಸಚ್ಚಿದಾನಂದರಸಾರ್ಣವನು; ಸದ್ಯೋನ್ಮುಕ್ತನು, ಸರ್ವಕ್ರಿಯಾತೀತನು; ನಿಶ್ಶಬ್ದಗಂಭೀರನು, ನಿರುಪಮ ಚರಿತ್ರನು; ನಿಸ್ಸಂಸಾರನು, ಸಕಲತತ್ತ್ವ ಶಿರೋರತ್ನನು; ಶರಿರವಿಡಿದು ಸಂಗರಹಿತನು, ಇಂದ್ರಿಯಂಗಳುವಿಡಿದು ನಿಷ್ಕಾಮನು; ಗಮನವಿಡಿದು ಅಗಮ್ಯನು, ವಿವೇಕವಿಡಿದು ನಿರ್ವಿಚಾರನು; ಅಱಿವುವಿಡಿದು ತ್ರಿಪುಟಿ ರಹಿತನು; ಘನದಲ್ಲಿ ಗಂಭೀರನು, ನೆನಹಿನಲ್ಲಿ [೩]ನಿಶ್ಚಂಚಲನು[೩]; ನುಡಿಯಲ್ಲಿ ಪರವಶನು, ಗತಿಯಲ್ಲಿ ಇಹಪರವೆಂಬೆರಡು ಹೊದ್ದದ ನಿರಾಶಾಭರಿತನು; ಸ್ಥಿತಿಯಲ್ಲಿ ನಿಸ್ಥಿತನು, ಇರವಿನಲ್ಲಿ ಪರಶಿವನು. ಇಂತಪ್ಪ ಮಹಾ ಮಹಿಮನನಗಲಿ ನಾನೆಂತು ಜೀವಿಸುವೆನೆಂದು ಮುಕ್ತಾಯಕ್ಕಗಳು ಬಿನ್ನೈಸುತ್ತಿರ್ದ ಪ್ರಸ್ತಾವದ ವಚನ:

೯೦

ಅಂಬರದಲಾಡುವ ತುಂಬಿಯ ಬಿಂಬದ,
ಕಂಬನಿಯೊಳಗಣ ರತ್ನದ ಬಯಕೆಯಾದ್ಯಂತವನೇನೆಂಬೆನಯ್ಯಾ?
ವೇದ ಶಾಸ್ತ್ರ ಶ್ರುತಿ ಸ್ಮೃತಿಗಳು ಸ್ತುತಿಯಿಸಲಱಿಯವು.
ನಾದವಲ್ಲ, ಸುನಾದದ ನಿಲವಲ್ಲ,
ಭೇದಿಸುವರೆ ಅಗಮ್ಯ ನೋಡಾ!
ಸೊಲ್ಲಿಲ್ಲದ ಸೊಮ್ಮಿಲ್ಲದ ಘನವನೇನೆಂಬೆನು?
ಎಂತು ಮಱೆವೆನಯ್ಯಾ ಎನ್ನ ಅಜಗಣ್ಣತಂದೆಯನು? ॥೧೨॥

ಈ ಹೀಂಗೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೧–೧ ವ(ಮೂ) ೨–೨ ಗೊಗ್ಗೇಶ್ವರ(ಮೂ) ೩–೩ ನಿಸ್ಸಂಚಲನು (ಮು)

೯೧

ಕಂಡೆನೆಂಬುದು ಕಂಗೆ ಮಱವೆ;
ಕಾಣೆನೆಂಬುದು ಮನದ ಮಱವೆ.
ಕೂಡಿದೆನೆಂಬುದು ಅಱವಿನ ಮಱವೆ
ಅಗಲಿದೆನೆಂಬುದು ಮಱಹಿನ ಮಱವೆ
ಇಂತು ಕಂಡೆ ಕಾಣೆ ಕೂಡಿದೆನಗಲಿದೆನೆಂಬ
ಭ್ರಾಂತಿಸೂತಕವ ತಿಳಿದು ನೋಡಲು,
ಗೊಹೇಶ್ವರನೆಂಬ ಲಿಂಗವನಗಲಲೆಡೆಯಿಲ್ಲ ಕೇಳಾ ಎಲೆ ತಾಯೆ. ॥೧೩॥

ಇದಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ:

೯೨

ಕಣ್ಣ ಮೊದಲಲ್ಲಿ ಕುಳ್ಳಿರ್ದು
ಬಣ್ಣದೋಱುವ ಪರಿಯ ನೋಡಾ!
ಬಣ್ಣವಿಲ್ಲದ ಬಣ್ಣವನುಟ್ಟು ಸುಳಿದನು.
ಈ ಅಜಗಣ್ಣನ ಯೋಗಕ್ಕೆ ಬೆಱಗಾದೆನು!
ಈ ಅಱವಂತುಟೆಲ್ಲವನೊಳಗಿಟ್ಟುಕೊಂಡನು,
ಶಿವಗಣಸಂಚ ಶಿವಯೋಗಿ ಅಜಗಣ್ಣದೇವನು. ॥೧೪॥

ಮತ್ತಂ,

೯೩

ನೀರಬೊಂಬೆಗೆ ನಿರಾಳದ ಗೆಜ್ಜೆಯ ಕಟ್ಟಿ,
ಬಯಲ ಬೊಂಬೆಯ ಕೈಯಲ್ಲಿ ಕೊಟ್ಟು ಮುದ್ದಾಡಿಸುತ್ತಿರ್ದನಯ್ಯಾ.
ಕರ್ಪುರದ ಪುತ್ಥಳಿಗೆ ಅಗ್ನಿಯ ಸಿಂಹಾಸನವನಿಕ್ಕೆ,[1]
ಅಗ್ನಿ ಕರಗಿ ಕರ್ಪುರ ಉಳಿದುದಕ್ಕೆ ಬೆಱಗಾದೆನಯ್ಯಾ,
ಎನ್ನ ಅಜಗಣ್ಣನ ಯೋಗಕ್ಕೆ! ॥೧೫॥

ಇಂತು ದೇಹವಿದ್ದೂ ದೇಹವಿಲ್ಲದೆ, ತನ್ನಱವುದೋಱದೆ, ತಾನೆಂಬ ಸ್ವರೂಪವನು ಶಿವತತ್ತ್ವದ[2]ಸ್ವರೂಪದಲ್ಲಿ ನಿರ್ವಹಿಸಿ, ತನ್ನ ತಪ್ಪಿಸಿಕೊಂಡು ಹೋದನೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಪ್ರಭುದೇವರು ನಿರೂಪಿಸಿದ ಪ್ರತ್ಯುತ್ತರ:

೯೪

ಅಳಿವನಲ್ಲ, ಉಳಿವನಲ್ಲ.
ಘನಕ್ಕೆ ಗಮನನಲ್ಲ, ಮನಕ್ಕೆ ಸಾಧ್ಯನಲ್ಲ.
ತನ್ನ ತಪ್ಪಿಸಿ ಇದಿರನೊಪ್ಪಿಸಿದೆನೆಂಬ ಭಿನ್ನಭಾವಿಯಲ್ಲ.

---

೧. ಕ್ಕಿ (ಮೂ) ೨ X (ಮೂ)

ಗೊಹೇಶ್ವರನ ಶರಣ ಅಜಗಣ್ಣನ
ಅಂತಿಂತೆನ[೧]ಬಾರದು ಕೇಳಾ ತಾಯೆ. ॥೧೬॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ:

೯೫

ತನುವಿಡಿದೆನಾಗಿ ಅನುವನಱಿಯದೆ ಕೆಟ್ಟೆನು.
ಮನವಿಡಿದೆನಾಗಿ ಅಱಿವು ಉಳಿಯದೆ ಕೆಟ್ಟೆನು.
ಭಾವದ ಬಯಕೆ ಹಿಂಗದಾಗಿ ವಿಯೋಗಿಯಾಗಿ ಕೆಟ್ಟೆನು.
ಅಱಿವ ನುಡಿದು ಮಱಹಿಗೊಳಗಾದೆನು.
ಎನ್ನ ಕಾಣದೆ ಭಿನ್ನಜ್ಞಾನಿಯಾದೆನು.
ಅಜಗಣ್ಣನೆಂಬ ಮಹಿಮನು ಘನವೇದ್ಯನಾಗಿ,
ಎನ್ನ ಮತಿಗೆ ಮಱವೆಯ ಮಾಡಿ ಹೋದನು. ॥೧೭॥

ಈ ಹೀಂಗೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೯೬

ತನು ಉಂಟೆಂದರೆ ಪಾಶಬದ್ಧ;
ಮನ ಉಂಟೆಂದರೆ ಭವಕ್ಕೆ ಬೀಜ,
ಅಱಿವ ನುಡಿದು ಕೆಟ್ಟೆನೆಂದರೆ ಅಜ್ಞಾನ;
ಭಾವದಲ್ಲಿ ಸಿಲುಕಿದೆನೆಂಬ ಮಾತು ಬಯಲ ಭ್ರಮೆ ನೋಡಾ!
ಒಮ್ಮೆ ಕಂಡೆನೊಮ್ಮೆ ಕಾಣೆ,
ಒಮ್ಮೆ ಕೂಡಿದೆನೊಮ್ಮೆ ಅ[೨]ಗಲಿದೆನೆಂದರೆ
ಕರ್ಮ ಬೆಂಬತ್ತಿ ಬಿಡದು,
ನಿನ್ನೊಳಗೆ ನಿನ್ನ ತಿಳಿದು ನೋಡಲು ಭಿನ್ನ ಉಂಟೆ?
ಗೊಹೇಶ್ವರಲಿಂಗವನಱಿವರೆ, ನೀನೆಂದೆ ತಿಳಿದು ನೋಡಾ ಮರುಳೆ. ॥೧೮॥

ಪರತತ್ತ್ವವೆಂಬುದು ಬೇಱಿಲ್ಲ, ನೀನೆಂದೆ ತಿಳಿದು ನೋಡೆನಲು, ಅದಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ:

೯೭

ಹಿಡಿದಾಚಾರವ ಬಿಡದನ್ನಕ್ಕರ,
ಎನ್ನ ಅಱಿವು ಮಱೆಯದನ್ನಕ್ಕರ,
ಎನ್ನ ಮನವ ಸುಡದನ್ನಕ್ಕರ,
ಎನ್ನ ಬೆಡಗಿನ ಗುರುವ ತೊಱೆಯದನ್ನಕ್ಕರ,
[೩]ಸುಸರ[೩]ವೆಂತಪ್ಪುದು[೪] ಹೇಳಾ?

---

೧ ನ್ನ (ಮೂ) ೨ ಯ(ಮು) ೩–೩ ಸಂಸರ(ಮೂ) ೪ ದೊ (ಮೂ)

ಹೋಹ ಬಟ್ಟೆಯನಱಿಯದನ್ನಕ್ಕರ,
ತಾನಾಗಬಾರದು ಕಾಣಾ ಎನ್ನ ಅಜಗಣ್ಣತಂದೆಯಂತೆ. ॥೧೯॥

ದೇಹೇಂದ್ರಿಯ ಮನಃಪ್ರಾಣಾದಿ ಸೂತಕಂಗಳು ಹಿಂಗದನ್ನಕ್ಕರ, ಉತ್ಪತ್ತಿಸ್ಥಿತಿಲಯಂಗಳ ಭೇದವ ತಿಳಿಯದನ್ನಕ್ಕರ, ಲಿಂಗದಲ್ಲಿ ಇದಿರಿಟ್ಟು ಮಾಡುವ ಸರ್ವಕ್ರಿಯಾ ಸೂತಕ ಹಿಂಗದನ್ನಕ್ಕರ, ತಾನು ಶಿವನಾಗಬಾರದೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೯೮

ಇಲ್ಲದ ಶಂಕೆಯನುಂಟೆಂದು ಭಾವಿಸಿದರೆ,
ಅದು ಕಣ್ಣ ಮುಂದೆ ರೂಪಾಗಿ ಕಾಡುತ್ತಿ[೧]ರ್ಪು[೧]ದು.
ಇಲ್ಲದ ತನುವನುಂಟೆಂಬನ್ನಕ್ಕರ,
ಅದೇ ಮಾಯೆಯಾಗಿ ಕಾಡುತ್ತಿರ್ಪುದು.
ನಿಃಕ್ರಿಯಲಿಂಗಕ್ಕೆ ಕ್ರೀಯಾಂತಲ್ಲದೆ ಆಗದೆಂಬರ
ಸಂದು ಸಂಶಯ ಮುಂದುಗೆಡಿಸುತ್ತಿ[೨]ರ್ಪು[೨]ದು ಕೇಳಾ,
ಮನವ ಮನೆಯ ಮಾಡಿಕೊಂಡಿಪ್ಪ
ಲಿಂಗದ ಅನುವನಱಿಯಬಲ್ಲಡೆ,
ಗೊಹೇಶ್ವರನೆಂಬ ಲಿಂಗ ದೂರವಿಲ್ಲ ಕೇಳಾ ಮರುಳೆ. ॥೨೦॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ:

೯೯

ತನುವಿನೊಳಗೆ ತನುವಾಗಿ,
ಮನದೊಳಗೆ ಮನವಾಗಿ,
ಪ್ರಾಣದೊಳಗೆ ಪ್ರಾಣವಾಗಿಪ್ಪುದೆಂದಡೆ,
ಕೆಲಬರಿಗೆ ಅಱಿಯಬಪ್ಪುದೆ?
ಅಂತರಂಗದೊಳಗೆ ಅದೆ ಎಂದರೇನು ಹೇಳಾ?
ಮನ ಮುಟ್ಟಿ ಕಾಣಬಾರದು.
ಬಹಿರಂಗದಲ್ಲಿ ಅದೆ ಎಂದರೆ,
ಪೂಜಿಸುವನ್ನಕ್ಕರ ಕಾಣಬಾರದು.
ಸಾಕಾರವಲ್ಲದ ನಿರಾಕಾರ ಲಿಂಗವು,
ವ್ಯಾಕುಲವುಳ್ಳನ್ನಕ್ಕರ ಸಾಧ್ಯವಾಗದು.
[೩]ಎನ್ನ ಮನದೊಳಗೆ ಘನವನನುಗೊಳಿಸಿ
ತೋಱುವರಿಲ್ಲದ ಕಾರಣ[೩]

೧-೧ ಪ್ಪು (ಮೂ) ೨-೨ಪ್ಪು (ಮೂ) ೩-೩ X(ಮು)

ಎನ್ನ ಅಜಗಣ್ಣನಿಕ್ಕಿದ ದಸರಿದೊಡಕಿಂಗೆ
ಬೆಱಗಾದೆನು ಕಾಣಾ ಪ್ರಭುವೆ! ॥೨೧॥

ಈ ಹೀಂಗೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೧೦೦

ತೆಱಹಿಲ್ಲದ ಘನವು ಕುಱುಹಿಂಗೆ ಬಾರದ ಮುನ್ನ,
ತೋಱಿದವರಾರು ಹೇಳಾ ಮಹಾಲಿಂಗೈಕ್ಯವನು?
ಆಱೂಢಿಯ ಕೂಟದಲ್ಲಿ ನಾನಾರನೂ ಸಾಕ್ಷಿಯ ಕಾಣೆ.
[೧]ಬೇಱ[೧]ಮಾಡಿ ನುಡಿಯಬಹುದೆ ಪ್ರಾಣಲಿಂಗವನು?
ಅಱಿವು ಸ್ವ[೨]ಯವಾಗಿ ಮಱಹು ನಷ್ಟವಾದರೆ
[೩]ಗೊಹೇಶ್ವರ[೩]ನೆಂಬ ಲಿಂಗವು ತಾನೆ ನೋಡಾ. ॥೨೨॥

ಇಂತು ಉಪದೇಶದಿಂದ ಮುನ್ನವೆ ಸಂಸಾರಾವಸ್ಥೆಯ ತೊಲಗಿಸಿ ತನಗೆ ತಾನೆ ಲಿಂಗದಲ್ಲಿ ಲೀಯವಾಗಬೇಕೆಂಬ ಬುದ್ಧಿ ಹುಟ್ಟಿದ ಬಳಿಕ ಬಂದು ಗುರೂಪಾವಸ್ತೆಯಂ ಮಾಡಿದ ಶಿಷ್ಯನು ತನ್ನಿಂದ ತಾನೆ ತಿಳಿದು, ತನ್ನ ತಾನೆ ಶಿವನೆಂದಱಿಯಬೇಕಲ್ಲದೆ, ಭಿನ್ನವಾಗಿ ಅಱಿಸಲಾಗದೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ:

೧೦೧

ಗುರುವಚನದಿಂದಲ್ಲದೆ ಲಿಂಗವನಱಿಯಬಾರದು.
ಗುರುವಚನದಿಂದಲ್ಲದೆ ಜಂಗಮವನಱಿಯಬಾರದು,
ಗುರುವಚನದಿಂದಲ್ಲದೆ ಪ್ರಸಾದವನಱಿಯಬಾರದು.
ಗುರುವಚನದಿಂದಲ್ಲದೆ ತನ್ನ ತಾನಱಿಯಬಾರದು.
ಹಿಂದಣ ಜನ್ಮದಲ್ಲಿ ಲಿಂಗವ ಪೂಜಿಸಿ
ಇಂದು ಜ್ಞಾನೋದಯವಾದರೆ,
ಗುರುವಿಲ್ಲದೆ [೪]ಮುನ್ನಾ[೪]ಯಿತ್ತೆನ್ನಬಹುದೆ?
ತನ್ನಲ್ಲಿ ತಾನು ಸನ್ನಿಹಿತನಾದಹೆನೆಂದರೆ,
ಗುರುವಿಲ್ಲದೆ ಆಗದು ಕೇಳಾ.
ಎನ್ನ ಅಜಗಣ್ಣನೆಂಬ ಗುರುವಿಲ್ಲದೆ
ಆಱೂಢಿಯ ಕೂಟ ಸಮನಿಸದು ಕೇಳಾ. ॥೨೩॥

ಇಂತು ಗುರುಕರುಣವಿಲ್ಲದೆ ತನ್ನಿಂದ ತಾನಾಗದೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೧-೧ ಬೇಯಿ (ಮೂ) ೨ ಸ(ಮೂ) ೩-೩ ಗೊಗ್ಗೇಶ್ವರ(ಮೂ) ೪-೪ಮುನ್ನ ಆ(ಮೂ)

೧೦೨

ಗುರುವಿಂಗೂ ಶಿಷ್ಯಂಗೂ ಆವುದು ದೂರ,
ಆವುದು ಸಾರೆಯೆಂಬುದನಾರು ಬಲ್ಲರು?
ಗುರುವೆ ಶಿಷ್ಯನಾದ ತನ್ನ ವಿನೋದಕ್ಕೆ.
ಶಿಷ್ಯನೆ ಗುರುವಾದ ತನ್ನ ವಿನೋದಕ್ಕೆ.
ಕರ್ಮವೆಂಬ ಕೌಟಿಲ್ಯ ಎಡೆವೊಕ್ಕ ಕಾರಣ,
ಭಿನ್ನವಾಗಿ ಇದ್ದಿತೆಂದರೆ ಅದು ನಿಶ್ಚಯವಹುದೇ?
ಆದಿ ಅ[1]ನಾದಿಯಿಂದತ್ತತ್ತ
ಮುನ್ನಲಾದ ಪರತತ್ತ್ವಮಂ ತಿಳಿದು ನೋಡಲು,[2]
ನೀನೆ ಸ್ವಯಂಜ್ಯೋತಿ ಪ್ರಕಾಶನೆಂದಱಿಯಲು,
ನಿನಗೆ ನೀನೆ ಗುರುವಲ್ಲದೆ ನಿನ್ನಿಂದಧಿಕಮಪ್ಪ ಗುರು ಉಂಟೇ?
ಇದು ಕಾರಣ [3]ಗೊಹೇಶ್ವರ[3] ಲಿಂಗವು ತಾನೆ ಎಂಬುದನೂ
ನಿನ್ನಿಂದ ನೀನೆ ಅಱಿಯಬೇಕು ನೋಡಾ. ॥೨೪॥

ಇಂತು ಅನಾದಿಯಲ್ಲಿ ನೀನೆ ಪರಶಿವನಾಗಿಪ್ಪಲ್ಲಿ, ನಿನಗಾರೂ ಗುರುವಿಲ್ಲ. ಮಧ್ಯದಲ್ಲಿ ಕರ್ಮವೆಂಬ ಕನ್ನಡವ ಕಟ್ಟಿದಲ್ಲಿಯೂ ನಿನ್ನ ಜ್ಞಾನೋದಯದಿಂದವೆ ನಿನ್ನ ನೀ ತಿಳಿದೆಯಲ್ಲದೆ, ಅನ್ಯರ ಕೈಯಲ್ಲಿ ಆಗದು. ಅದು ಕಾರಣ ನೀನೇ ಪರತತ್ವ, ತಿಳಿದು ನೋಡೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ:

೧೦೩

ತನ್ನ ತಾನಱಿದವಂಗೆ ಅಱಿವೆ ಗುರು.
ಅಱಿವಱಿತು ಮಱಹು ನಷ್ಟವಾದಲ್ಲಿ, ದೃಷ್ಟ ನಷ್ಟವೆ ಗುರು.
ದೃಷ್ಟನಷ್ಟ ಗುರು ತಾನಾದಲ್ಲಿ ಮುಟ್ಟಿ ತೋಱಿದವರಿಲ್ಲದಡೇನು?
ಸಹಜವ ನೆಲೆಗೊಳಿಸುವ ನಿರ್ಣಯ ನಿಃಪತಿಯೆ ಗುರು ನೋಡಾ.
ಗುರು ತಾನಾದರೂ ಗುರುವಿಡಿದಿರಬೇಕು ಎನ್ನ ಅಜಗಣ್ಣನಂತೆ. ॥೨೫॥

ಇಂತು ಆವ ತೆಱದಲ್ಲಿಯೂ ಗುರುವಿಡಿದಲ್ಲದೆ ಆಗದೆಂದರೆ, ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೧೦೪

ಅಱಿವನಱಿದಿಹೆನೆಂಬುದು ಮಱವೆ.
ಮಱಹ ಮಱೆ[4]ದಿಹೆನೆಂಬುದು ಮಱವೆ.
ಸಾಕಾರ ನಷ್ಟ, ನಿರಾಕಾರ ದೃಷ್ಟವೆಂಬುದು ಭಾವದ ಬಳಲಿಕೆ.
ಗುರುವೆಂಬುದು ಶಿಷ್ಯನೆಂದಲ್ಲಿಯೆ ಹೋಯಿತ್ತು.
ಶಿಷ್ಯನೆಂಬುದು ಗುರುವೆಂದಲ್ಲಿಯೇ ಹೋಯಿತ್ತು.

---

೧ ಯ (ಮು) ೨+ನೀ ನೋಡಲು (ಮೂ) ೩-೩ ಗೊಗ್ಗೇಶ್ವರ(ಮೂ) ೪ ದಿ(ಮು)

ನಿರ್ಣಯದಲ್ಲಿ ನಿಜೈಕ್ಯನಾದೆ[೧]ಹೆನೆಂದರೆ, ಎಚ್ಚರಿಕೆಯಲ್ಲಿ ತಪ್ಪಿತ್ತು.
ಸಹಜ ಸಂಬಂಧಕ್ಕೆ ಗುರುವಲ್ಲದೆ ಅಸಹಜಕ್ಕೆ ಗುರುವುಂಟೇ?
[೨]ಗೊಹೇಶ್ವರ[೨]ಲಿಂಗದಲ್ಲಿ, ಪರವೆಂದಲ್ಲಿ ಗುರು ಉಂಟಲ್ಲದೆ,
[೩]ಸ್ವಯ[೩]ವೆಂದಲ್ಲಿ ನುಡಿಯಲಿಲ್ಲ. ||೨೬||

ಇಂತು ತಾನು ಲಿಂಗವಾದೆ[೪]ಹೆನೆಂಬನ್ನಕ್ಕರ ಗುರುವುಂಟಲ್ಲದೆ, ತಾನು ತಾನೆಯಾದ ಬಳಿಕ ಗುರು ತಾನೇಕೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ:

೧೦೫

ಅದ್ವೈತವ ನೆಲೆಗೊಳಿಸಿ ಎರಡಳಿದೆನೆಂಬವರು,
ಶಿಶು ಕಂಡ ಕನಸಿನಂತಿರಬೇಕಲ್ಲದೆ,
ನುಡಿದು ಹೇಳುವನ್ನಕ್ಕರ ಭಿನ್ನವಲ್ಲದೇನು ಹೇಳಾ?
ಅಱಿವಱಿತು ಮಱಹು ನಷ್ಟವಾಗಿ
ಗುರುವ ತೋಱಿದೆನೆಂಬವರು, ಇದಿರಿಂಗೆ
ಕರುಳ ಕಲೆಯನಱುಹುವ ಪರಿಯೆಂತು ಹೇಳಾ?
ಮನದ ಕೊನೆಯ ಮೊನೆಯ ಮೇಲಣ ಅಱಿವಿನ ಕಣ್ಣ ಮುಂದೆ
ಸ್ವಯಂಪ್ರಕಾಶ ತೋಱುತ್ತಿರ್ದಡೆ ತಾನಾಗಬಲ್ಲನೇ?
ನೆಱೆಯಱಿತು ಮಱೆಯಬಲ್ಲರೆ
ಎನ್ನ ಅಜಗಣ್ಣನಂತೆ ಶಬ್ದಮುಗ್ಧವಾಗಿರಬೇಕಲ್ಲದೆ,
ಶಬ್ದಸಂದಣಿಯ ಮಾತು ಸಯವಲ್ಲ ನೋಡಾ ಪ್ರಭುವೆ. ||೨೭||

ನಿನ್ನ ನೀನಱಿತು ಪರಬ್ರಹ್ಮವಾದೆನೆಂದರೆ, ನಿಶ್ಶಬ್ದ ವೇದ್ಯವಾಗಿರಬೇಕಲ್ಲದೆ ಶಬ್ದಸಂದಣಿ ಹಿಂಗದೆಂದರೆ, ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೧೦೬

ಮಾತೆಂಬುದು ಜ್ಯೋತಿರ್ಲಿಂಗ,
ಸ್ವರವೆಂಬುದು ಪರತತ್ವ,
ತಾಳೋಷ್ಠ್ಯ ಸಂಪುಟವೆಂಬುದೆ ನಾದಬಿಂದಕಳಾತೀತ.
[೨]ಗೊಹೇಶ್ವರ[೨]ನ ಶರಣರು
ನುಡಿದು ಸೂತಕಿಗಳಲ್ಲ ಕೇಳಾ ಮರುಳೆ. ||೨೮||

ಶಿವಶರಣರು ಶಬ್ದಸೂತಕಿಗಳಲ್ಲವೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ:

---

೧ ದಿ(ಮು) ೨–೨ ಗೊಗ್ಗೇಶ್ವರ(ಮೂ) ೩–೩ ಸಯ (ಮು) ೪ದ (ಮೂ)

೧೦೭

[೧]ನಡೆದು ನಡೆದು[೧] ನಡೆಯ ಕಂಡವರು,
ನುಡಿದು ನುಡಿದು ಹೇಳುತ್ತಿಹರೆ?
ನುಡಿದು [೧]ನುಡಿದು[೧] ಹೇಳುವನ್ನಕ್ಕರ,
ನಡೆದುದೆಲ್ಲಾ ಹುಸಿಯೆಂಬೆನು.
ಮಾತಿನ ಮಥನದಿಂದಱಿವು ಕರಣಮಥನದಿಂದಾದವಲ್ಲದೆ
ಅನುಪಮ ಸ್ವರಭೇದವಾದ ಪರಿ ಎಂತು ಹೇಳಾ?
ಇದಿರ ಗೆಲಬೇಕೆಂದು ನುಡಿದುಕೊಂಡರೇನು?
ಮನಕ್ಕೆ ಮನವೆ ಸಾಕ್ಷಿಯಾಗಿ ನಿಃಪತಿಯಲ್ಲ ನೋಡಾ!
ಎನ್ನ ಅಜಗಣ್ಣತಂದೆ ಶಬುದಕ್ಕೆ ಹೇಸಿ ಮುಗುದನಾದನು. ॥೨೯॥

ಇಂತು ಇದಿರ ಗೆಲಬೇಕೆಂದು ನುಡಿವ ನುಡಿಗಳಿವಲ್ಲದೆ, ಅಱಿವನಱಿದು ಮಱೆದ ನುಡಿಗಳಿವಲ್ಲ. ಸಹಜಜ್ಞಾನ ನಿನಗಿಲ್ಲವೆಂದು ಬಿನ್ನೈಸಲು, ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೧೦೮

ತನ್ನ ತಾನಱಿದಡೆ,[೨] ನುಡಿಯೆಲ್ಲಾ ತತ್ವ ನೋಡಾ!
ತನ್ನ ತಾ ಮಱೆದಡೆ, ನುಡಿಯೆಲ್ಲಾ ಮಾಯೆ ನೋಡಾ!
ಅಱಿದು [೩]ಮಱೆದ[೩] ಶಿವಯೋಗಿಯ
ಶಬುದವೆಲ್ಲಾ ಉಪದೇಶವಲ್ಲದೆ ಭಿನ್ನ ಉಂಟೇ?
ನಿನ್ನ ಮನದ ಕಳವಳವ ತಿಳುಹಲೆಂದು ಮಾತನಾಡಿಸಿ ನೋಡಿದಡೆ,
ಎನ್ನ ಮನದೊಳಗೆ ಕಂದುಕಲೆಯೆಂಬುದಿಲ್ಲ ನೋಡಾ.
ನಮ್ಮ [೪]ಗೊಹೇಶ್ವರ[೪]ಲಿಂಗಕ್ಕೆ ನೀನು ಕರುಣದ ಶಿಶುವಾದ ಕಾರಣ
ಬಾಯ್ದೆಗೆದೆನಲ್ಲದೆ ಭಿನ್ನ ಉಂಟೇ ಹೇಳಾ ಮರುಳೆ? ॥೩೦॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ:

೧೦೯

ನುಡಿಯ ಹಂಗಿನ್ನೂ ನಿಮಗೆ ಹಿಂಗದು,
ನಡೆಯನೆಂತು ಪರರಿಗೆ ಹೇಳುವಿರಿ?
ಒಡಲ ಹಂಗಿನ ಸುಳುಹು ಬಿಡದು;
ಎನ್ನೊಡನೆ ಮತ್ತೇತಱನುಭವವಣ್ಣಾ?
ತಾನಾದಲ್ಲದೆ ಇದಿರಿಂಗೆ ಹೇಳಬಹುದೆ?
ಅಱಿವ ತೋಱಬಲ್ಲಡೆ,[೫]
ತನ್ನನಱುಹದೆ ಅಱಿವನು ಕಾಣಾ ಎನ್ನ ಅಜಗಣ್ಣತಂದೆ. ॥೩೧॥

೧-೧ ನಡದು (ಮೂ) ೨-೨ ದೇ (ಮೂ) ೩-೩ ಮಱದ(ಮೂ) ೪-೪ ಗೊಗ್ಗೇಶ್ವರ(ಮೂ) ೫.ರೆ(ಮು)

ನಿನಗಿನ್ನೂ ಒಡಲ ಹಂಗು ಬಿಡದು. ಮಾತಿನ ಮಥನ ಹಿಂಗದು, ಎನಗೇತಱ[1]ಱಿವ ಹೇಳಿಹೆ ಹೋಗೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೧೧೦

ಅಂಗದ ಕಳೆ ಲಿಂಗದಲ್ಲಿ ಅಱಿತ ಬಳಿಕ,
ಅಂಗವೆಂಬ ಶಂಕೆಯಿಲ್ಲ ನೋಡಾ ಶರಣಂಗೆ.
ಪ್ರಾಣದ ಕಳೆ ಅಱಿವಿನಲ್ಲಿ ಅಱಿತ ಬಳಿಕ,
ಶಬ್ದಸಂದಣಿಗೆ ಹಂಗಿಲ್ಲ ನೋಡಾ.
ಶರಣ ನಡೆದರೆ ನಿರ್ಗಮನಿ, ನುಡಿದರೆ ನಿಶ್ಶಬ್ದ.
ಗೊಹೇಶ್ವರನ ಶರಣಂಗೆ ಕುಱುಹಿಲ್ಲ ಕೇಳಾ ಎಲೆ ಅವ್ವಾ. ॥೩೨॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ:

೧೧೧

ಕೈಯ್ಯದು ಕುಱುಹು, ಬಾಯದು ಬೊಬ್ಬೆ!
ಉಲಿಯದಿರೊ ಭಾವಾ, ಉಲಿಯದಿರೊ ಭಾವ!
ವಾರಿಕಲ್ಲ ಕೊಡನಲ್ಲಿ ಮುತ್ತು ಮಾಣಿಕ್ಯವ ತುಂಬಿ,
ಎತ್ತುವರಿಲ್ಲದೆ ಸಖಿಯನಱಸು[2]ತ್ತಿರ್ಪೆ.[2]
ಮನದ ತನುವಿನಲ್ಲಿ, ಆ ತನುವಿನ ಮನದಲ್ಲಿ
ತನಗೆ ತಾನೆತ್ತಿಕೊಂಡರೆ, ಮನ ಮೇರೆದಪ್ಪಿ
ಕರಗಿ ಉಕ್ಕಿತ್ತು ನಮ್ಮ ಅಜಗಣ್ಣನ ಯೋಗಾ! ॥೩೩॥

ಇಂತು ಜಲಬಿಂದುಸ್ವರೂಪಮಪ್ಪ ನಿನ್ನ ತನುವೆಂಬ ಘನದಲ್ಲಿ ಜ್ಞಾನವೆಂಬ ರತ್ನವ ತುಂಬಿ, ನಿನಗೆ ನೀನೆ ಚರಿಸಲಱಿಯದೆ ಇನ್ನು ಸಖಿಯರನಱಸುತ್ತಿರ್ಪ ನಿನ್ನ ಅಱಿವೇತಱಿದೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೧೧೨

ಅಱಿವುಗೆಟ್ಟು, ಮಱಹಳಿದು,
ಭಾವಭ್ರಾಂತು ನಿಭ್ರಾಂತವಾದವರ ಕೈಯ್ಯಲ್ಲಿ
ಕುಱುಹನರಸುವರೆ ಹೇಳಾ?
ತಾನಳಿದು, ತಾನುಳಿದು, [3]ತಾನು[3] ತಾನಾದ ನಿಜಶರಣಂಗೆ
ಅಂತರಂಗದಲ್ಲಿ ಒಂದು ಅಱಿವುಂಟೆ?
ಗೊಹೇಶ್ವರನ ಶರಣನ ನಿಲವು
ಕಾಯಗೊಂಡವರ ಕಣ್ಣಿಗೆ ಸಂದೇಹವಾಗಿಪ್ಪುದು;
ನಿಸ್ಸಂದೇಹಿಗಳಿಗೆ ನಿಜವಾಗಿಪ್ಪುದು ನೋಡಾ ಮರುಳೆ. ॥೩೪॥

೧+ಅ(ಮೂ) ೨–೨ ತಿಪ್ಪೆ(ಮೂ) ೩–೩ ಆತನು(ಮು)

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಈ ಉತ್ತರಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ:

೧೧೩

ನುಡಿಯೆನೆಂಬಲ್ಲಿಯೇ ನುಡಿಯದೆ.
ನಡೆಯೆನೆಂಬಲ್ಲಿಯೆ ನಡೆಯದೆ.
ಭಾವಿಸೆನೆಂಬಲ್ಲಿಯೆ ಭಾವವದೆ.
ಅಱಿದು ಮಱೆದೆ[1]ನೆಂಬ[1]ಲ್ಲಿಯೆ ಅಱಿವು ಮಱವೆಯದೆ.
ಅಂಗದಲ್ಲಿ ಲಿಂಗ ಲೀಯವಾಯಿತ್ತೆಂದರೆ, ಅಲ್ಲಿಯೆ ಅಂಗವದೆ.
ಅನಂಗಸಂಗಿಯಾದೆನೆಂಬಲ್ಲಿಯೆ ವಿಷಯಸೂತಕವದೆ.
ನಾನೆ ನಾನಾದೆನೆಂಬಲ್ಲಿ ನೀನೆಂಬುದದೆ.
ಅಱಿದು ಮಱೆದ ಪರಿ ಎಂತು ಹೇಳಾ?
ಅಱಿವು ನಷ್ಟವಾಗಿ ಮಱಹು ಲಯವಾಗಿಪ್ಪರೆ,
ಎನ್ನ ಅಜಗಣ್ಣತಂದೆಯಲ್ಲದೆ ಮತ್ತಾರನು ಕಾಣೆ. ॥೩೫॥

ಈ ಹೀಂಗೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೧೧೪

ಅಂಗ ಅನಂಗವೆಂಬೆರಡೂ ಅಳಿದು,
ನಿಜದಲ್ಲಿ ನಿಂದ ಲಿಂಗೈಕ್ಯನ ಅಂಗದಲುಳ್ಳ
ಕ್ರೀಗಳೆಲ್ಲವೂ ಲಿಂಗಕ್ರೀಗಳು ನೋಡಾ.
ಮನೋಲಯವಾಗಿಪ್ಪ ನಿಜಲಿಂಗೈಕ್ಯನ
ಅನುಭಾವವೆಲ್ಲವೂ ಜ್ಞಾನನಷ್ಟ ಶಬ್ದ ನೋಡಾ.
ತನ್ನಲ್ಲಿ ತಾನು ತದ್‌ಗತವಾಗಿಪ್ಪ ಶಿವಯೋಗಿಗೆ
ಭಿನ್ನವಿಲ್ಲ ನೋಡಾ, ಗೊಹೇಶ್ವರ ಸಾಕ್ಷಿಯಾಗಿ. ॥೩೬॥

ಈ ಹೀಂಗೆಂದು ಪ್ರಭುದೇವರು ತಮ್ಮ ನಿಜಪದದ ನಿಲವ ನಿರೂಪಿಸಲು, ಅದಕ್ಕೆ ಮುಕ್ತಾಯಕ್ಕಗಳು ಕೊಟ್ಟ ಪ್ರತ್ಯುತ್ತರ:

೧೧೫

ಸಿಡಿಲುಹೊಯಿದ ಬಾವಿಗೆ ಸೋಪಾನವೇಕೋ?
ನೆಱೆಯಱಿದ ಬಳಿಕ ಮತ್ತೆ ಮತಿ ಹುಟ್ಟಲುಂಟೇ?
ಸೊಡರುಳ್ಳ ಮನೆಗೆ ಮತ್ತೆ ತಮಂಧವೆಂಬುದೇನೊ?
ತನ್ನಲ್ಲಿ ತಾನು ತದ್‌ಗತವಾದ ಬಳಿಕ,

೧-೧ ನೆಂದ(ಮು)

ಬೊಮ್ಮ ಪರಬೊಮ್ಮವಾದೆನೆಂಬುದಿಲ್ಲ ನೋಡಾ,
ಎನ್ನ ಅಜಗಣ್ಣತಂದೆಗೆ. ॥೩೭॥

ಈ ಹೀಂಗೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೧೧೬

ನುಡಿಯಿಂದ ನಡೆಗೆಟ್ಟಿತ್ತು; ನಡೆಯಿಂದ ನುಡಿಗೆಟ್ಟಿತ್ತು.
[1]ಭಾವದಹಂಗು ಸುಟ್ಟು[1], ಅದು ತಾನೆ ನಾಚಿ ಮಾದುದು ನೋಡಾ!
ಗೊಹೇಶ್ವರನೆಂಬ ಅಱಿವು ಸಿನೆಬಂಜೆಯಾದುದಲ್ಲಾ! ॥೩೮॥

ಈ ಹೀಂಗೆಂದು ಪ್ರಭುದೇವರು ತಮ್ಮ ನಿಜಪದದ ನಿಲವ ನಿರೂಪಿಸಲು, ಅದಕ್ಕೆ ಮುಕ್ತಾಯಕ್ಕಗಳು ಪರಾಮರಿಸಿದ ಪ್ರತ್ಯುತ್ತರ:

೧೧೭

ಅಹುದಹುದು, ಶಿವಶರಣರ ಮಹಿಮೆ ಆರಿಗೆಯೂ ಕಾಣಬಾರದು.
ಕಬ್ಬುನ ಉಂಡ ನೀರಿನಂತೆ, ಕಬ್ಬಿಸಿಲುಂಡ ಅರಿಸಿನದಂತೆ,
ಉರಿಯೊಳಡಗಿದ ಕರ್ಪುರದಂತೆ,
ಬಯಲನಪ್ಪಿದ ವಾಯುವಿನಂತೆ ಇಪ್ಪ ನಿಲವ
ನುಡಿದು ಹೇಳಿಹೆನೆಂಬ ಮಾತಿಂಗೆ ಅಳವಡುವುದೆ?
ಅಱಿವಡೆ ಮತಿಯಿಲ್ಲ, ನೆನೆವಡೆ ಮನವಿಲ್ಲ.
ಎನ್ನ ಅಜಗಣ್ಣತಂದೆಯನೊಳಕೊಂಡಿಪ್ಪ ನಿಮ್ಮ ಮಹಿಮೆಗೆ
ನಮೋ ನಮೋ ಎನುತಿರ್ದೆನು. ॥೩೯॥

ಈ ಹೀಂಗೆಂದು ಮುಕ್ತಾಯಕ್ಕಗಳು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರವಯಲ ಸಮಾಧಿಯ ಭೇದಮಂ ನಿರೂಪಿಸುತ್ತಿರ್ದ ಪ್ರಸ್ತಾವದ ವಚನ:

೧೧೮

ಮುಕ್ತಿಗೆ ಮುಖವಾಗಿ, ಯುಕ್ತಿಗೆ ಹೊಱಗಾಗಿ,
ಅಱಿವಿಂಗೆ ಅಱಿವಾಗಿಪ್ಪ ಭೇದ[2] ಕಾಣಬಂದಿತ್ತು ನೋಡಾ!
ಅಱಿವಱಿತು, ಮಱಹು ನಷ್ಟವಾಗಿಪ್ಪುದು;
ನಿನ್ನಲ್ಲಿ ಸನ್ನಿಹಿತವಾಗಿಪ್ಪುದು.
ಗೊಹೇಶ್ವರನ ಶರಣ ಅಜಗಣ್ಣನ ನಿಲವು,
ಬಯಲಬೆರಸಿದ ಮರೀಚಿಯಂತಾಯಿತ್ತು;
ಬೆರಸಿ ನೋಡಾ ಬೇಱಿಲ್ಲದೆ. ॥೪೦॥

೧–೧ ಭಾವದಗುಸುಟು(ಮು) ೨+ವ (ಮೂ)

ಇಂತು ಪ್ರಭುದೇವರು ಮಹಾಲಿಂಗೈಕ್ಯದ ಭೇದಮಂ ನಿರೂಪಿಸಲು, ಮುಕ್ತಾಯಕ್ಕಗಳು ಆ ಉಪದೇಶಮಂ ಮನೋಲಯಸ್ಥಾನದೊಳು ಧರಿಸಿ, ನಿತ್ಯನಿರವಯಲ ಸಮಾಧಿಯೊಳು ನಿಜವನೆಯ್ದಿದ ಪ್ರಸ್ತಾವದ ವಚನ:

೧೧೯

ಘನಮಹಿಮ ಶರಣರ ಸಂಗದಿಂದ
ಘನಕ್ಕೆ ಘನ ವೇದ್ಯವಾದ ಬಳಿಕ
ಅಱಿಯಲಿಲ್ಲ, ಮಱೆಯಲಿಲ್ಲ; ಕೂಡಲಿಲ್ಲ, ಅಗಲಲಿಲ್ಲ.[1]
ಮನ ಮೇರೆದಪ್ಪಿ ನಿರವಯಲಾದ ಸುಖವ
ಶೂನ್ಯ ನಿಶ್ಶೂನ್ಯವೆಂದು ನುಡಿಯಲುಂಟೆ?
ಶಬ್ದಮುಗ್ಧವಾಗಿ ಎನ್ನ ಅಗಣ್ಣತಂದೆಯ ಬೆರಸಿದ ಬಳಿಕ
ಉರಿಯುಂಡ ಕರ್ಪುರದಂತಾದೆನಯ್ಯಾ! ॥೪೧॥

[2]ಇಂತೀ[2] ಶ್ರೀಮತ್ ಸಕಲಗಣ ಪುರಾತನರೊಳ್ ಪ್ರಭುದೇವರು
ಮಹಾನುಭಾವಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್
ಮುಕ್ತಾಯಕ್ಕಗಳ ಸಂಪಾದನೆಗಂ
ದ್ವಿತೀಯೋಪದೇಶಂ ಸಮಾಪ್ತಂ
ಅಂತು ವಚನ ೧೧೯ ಕ್ಕಂ ಮಂಗಳ ಮಹಾಶ್ರೀ

❖

೧+ಅಗಲಲಿಲ್ಲ (ಮೂ) ೨–೨ ಇತಿ(ಹ)

೩
ಸಿದ್ಧರಾಮಯ್ಯಗಳ ಸಂಪಾದನೆ

ಕಂದ:

ಗುಡಿಗೋಪುರ ಕೆಱೆಯಾರವೆ
ಗಡಣಗಳಂ ಬಿಡಿಸಿಯಲ್ಲಮಪ್ರಭುರಾಯನು
ಮೃಡ ಸಿದ್ಧರಾಮಗೊಲವಿಂ
ಸಡಗರದಿಂ ನಿಜವನಿತ್ತುದೆಂತೆನೆ ಪೇಳ್ವೆಂ. ॥೧॥

ಅದೆಂತೆಂದೊಡಾ ಪ್ರಭುದೇವರು ಮುಕ್ತಾಯಕ್ಕಗಳ ಪ್ರಲಾಪಮಂ ನಿಲ್ಲಿಸಿ, ಮಹಾನುಭಾವಮಂ ಬೋಧಿಸಿ, ಅಜಗಣ್ಣದೇವರ ನಿಲವನು ಆಕೆಯ ಸರ್ವಾಂಗದೊಳು ಪ್ರತಿಷ್ಠಿಸಿ ತೋಱಿ, ನಿರವಯಲ[೧] ಸಮಾಧಿಯೊಳು ನಿಲಿಸಿ, ಅಲ್ಲಿಂ ಸೊನ್ನಲಿಗೆಯ ಪುರಕ್ಕಭಿಮುಖವಾಗಿ ಬರುತ್ತಿರಲತ್ತ ಕೈಲಾಸದಿಂದ ಶ್ರೀಪರಮೇಶ್ವರನ ಶುದ್ಧ ಸಾತ್ತ್ವಿಕವೆ ಜಗಹಿತಾರ್ಥವಾಗಿ ಮರ್ತ್ಯಕ್ಕವತರಿಸಿ, ಸಿದ್ಧರಾಮೇಶ್ವರ ನೆಂಭಿಧಾನದಿಂದ ಕೆಱೆಯಱವಟ್ಟಿಗೆ ಗುಡಿಗೋಪುರಂಗಳಂ ರಚಿಸುತ್ತಿರಲು, ಅಲ್ಲಿಗೆ ಪ್ರಭುದೇವರು ಬಂದು, ಆ ಪುರದ ಜನಪದದ ನೆರವಿಯ ಕಂಡು ವಿಡಂಬಿಸುವ ಪ್ರಸ್ತಾವದ ವಚನ:

೧೨೦

ಧರೆಯ ಮೇಲೊಂದು ಪಿರಿದಪ್ಪ
ಸಂತೆಯ ನೆರವಿಗೆ ಬಂದವರನೇನೆಂಬೆನು!
ಪರಿಪರಿಯ ಭಂಡದ ವ್ಯವಹಾರದೊಳಗೆ
ಕೊಡಲಿಲ್ಲ, ಕೊಳಲಿಲ್ಲ; ವೃಥಾ ವಿಳಾಸವಿದೇನೋ?
ಅರೆಮರುಳೆಂಬ ಶಿವನು ನೆಱೆಮರುಳೆಂಬ ಜಗವ
ಹುಟ್ಟಿಸಿದ ಪರಿಯ ಕಂಡು ಬೆರಗಾದೆ [೨]ಗೊಹೇಶ್ವರಾ[೨]! ॥೧॥

೧೨೧

ಸಾಗರದೊಳಗಿಪ್ಪ ಪ್ರಾಣಿಗಳು ಮತ್ತೊಂದೆಡೆಯಲ್ಲಿ ಇರಬಲ್ಲವೇ?
ಭವಸಾಗರದೊಳಗಿಪ್ಪ ಜೀವಿಗಳಿಗೆ ಅದೇ ಗತಿಯಲ್ಲದೆ,

೧.X(ಮೂ) ೨-೨ ಗೊಗ್ಗೇಶ್ವರಾ(ಮು)

ಬೇರೆ ಮತ್ತೊಂದೆಡೆಯುಂಟೇ?
¹ಗೊಹೇಶ್ವರ¹ನ ಲೀಲೆ ಜಗನ್ಮಯವಾದಡೆ ನಾನು ಬೆಱಗಾದೆನು! ॥೨॥

ಇಂತು ಪುರಜನಂಗಳಂ ನೋಡಿ ವಿಡಂಬಿಸುತ್ತ ಬರಲು, ಮುಂದೆ ಲಕ್ಷದ ಮೇಲೆ ತೊಂಬತ್ತಾಱುಸಾವಿರ ಶಿವಾಲಯಂಗಳ ಮಾಡುತ್ತಿರ್ಪವರಂ ಕಂಡು ವಿಡಂಬಿಸುವ ಪ್ರಸ್ತಾವದ ವಚನ:

೧೨೨

ಕಲ್ಲ ಮನೆಯ ಮಾಡಿ, ಕಲ್ಲ ದೇವರ ಮಾಡಿ,
ಆ ಕಲ್ಲು ಕಲ್ಲ ಮೇಲೆ ಕೆಡೆದರೆ
ದೇವರೆತ್ತ ಹೋದರೊ?
ಲಿಂಗಪ್ರತಿಷ್ಠೆಯ ಮಾಡಿದವರಿಗೆ ನಾಯಕನರಕ ¹ಗೊಹೇಶ್ವರಾ.¹ ॥೩॥

ಮತ್ತಂ,

೧೨೩

ದೇಹವೆ ದೇಗುಲವಾಗಿರಲು,
ಬೇಱೆ ಮತ್ತೆ ದೇವಾಲಯವೇಕಯ್ಯಾ?
ಪ್ರಾಣವೆ ಲಿಂಗವಾಗಿರಲು ಬೇಱೆ ಮತ್ತೆ ಲಿಂಗವೇಕಯ್ಯಾ?
ಹೇಳಲಿಲ್ಲ, ಕೇಳಲಿಲ್ಲ.
¹ಗೊಹೇಶ್ವರಾ¹, ನೀನು ಕಲ್ಲಾದರೆ ನಾನೇನಪ್ಪೆನಯ್ಯಾ? ॥೪॥

ಇಂತು ಶಿವಾಲಯಪ್ರತಿಷ್ಠೆಯಂ ನೋಡಿ ಹಾಸ್ಯವ ಮಾಡುತ್ತ ಬರಲು ಮುಂದೆ ಕೆಱೆಯ ಕಟ್ಟಿಸುವವರ ಕಂಡು ವಿಡಂಬಿಸುವ ಪ್ರಸ್ತಾವದ ವಚನ:

೧೨೪

ಅನ್ನವನಿಕ್ಕಿ ನನ್ನಿಯ ನುಡಿದು,
ಅಱವಟ್ಟಿಗೆಯನಿಕ್ಕಿ ಕೆಱೆಯ ಕಟ್ಟಿಸಿದರೆ,
ಮರಣದಿಂದ ಮೇಲೆ ಸ್ವರ್ಗ ಉಂಟಲ್ಲದೆ,
ಶಿವನ ನಿಜವು ಸಾಧ್ಯವಾಗದು.
¹ಗೊಹೇಶ್ವರ¹ನನಱಿದ ಶರಣಂಗೆ ಆವ ಫಲವು ಇಲ್ಲಾ. ॥೫॥

ಸಿದ್ಧರಾಮಯ್ಯದೇವರು ಕೆಱೆಯ ಕಟ್ಟಿಸುವದನು ವಿಡಂಬಿಸಿ, ನಾನೊಂದು ಕೆಱೆಯ²ಕಟ್ಟಿದೆನೆಂದು² ಪರಮಾರ್ಥಸೂಚಕವಾಗಿ ನಿರೂಪಿಸಿದ ಪ್ರಸ್ತಾವದ ವಚನ:

೧೨೫

ತನುವೆಂಬ ಏಱಿಗೆ ಮನವೆಂಬ ಕಟ್ಟೆ;
ಆಚಾರವೆಂಬ ಸೋಪಾನ;

೧-೧ ಗೊಗ್ಗೇಶ್ವರಾ(ಮೂ) ೨-೨ ಕಟ್ಟಿಸಿದನೆಂದು(ಮೂ)

ಪರಮಾನಂದವೆಂಬ ಜಲವ ತುಂಬಿ,
ಕೆಱೆಯ ಕಟ್ಟಬಲ್ಲವರನಾರನೂ ಕಾಣೆ.
ನಾನು ಕಟ್ಟಿದ ಕೆಱೆ ಸ್ಥಿರವಾಯಿತ್ತು ⁱಗೊಹೇಶ್ವರಾⁱ ನಿಮ್ಮಾಣೆ. ॥೬॥

ಮತ್ತಂ, ವಿಡಂಬನ:

೧೨೬

ಕೆಱೆಯ ಕಟ್ಟಿಸುವ ಒಡ್ಡನ ಪ್ರತಾಪವನೇನೆಂಬೆನಯ್ಯಾ!
ನೆಲನನಗೆದು ಜಲವ ತೆಗೆದಹೆನೆಂಬ ಬಳಲಿಕೆಯ ನೋಡಾ!
ಒಂದು ಕಲ್ಲನು ಕಡಿದು ಮತ್ತೊಂದು ಕಲ್ಲಿಗೆ
ಭೋಗವ ಕೊಟ್ಟಿಹೆನೆಂಬ ಅಜ್ಞಾನವಿದೇನೋ?
ⁱಗೊಹೇಶ್ವರಾ,ⁱ ಈ ಇರವಿನ ಪರಿಗೆ ಬೆಱಗಾದೆನು? ॥೭॥

ಇಂತು ಕೆಱೆಯ ಕಟ್ಟಿಸುವುದಂ ವಿಡಂಬಿಸುತ್ತ, ಆ ಕೆಱೆಯ ಕಟ್ಟುವ ಗುಡ್ಡುಗಳೊಡನೆ ಒಡ್ಡರಾಮಯ್ಯನಿದ್ದಹನೇ ಎಂದು ಬೆಸಗೊಂಬ ಪ್ರಸ್ತಾವದ ವಚನ:

೧೨೭

ಒಳಗ ತೊಳೆದು ಜಲವ ತುಂಬಲಱಿಯದ
ಅರೆಮರುಳನೇನಾದ ಹೇಳಿರೆ?
ಜಲದ ಸಂಗವ ತೊಳೆಯಲಱಿಯದೆ,
ಜಲವ ಬಯಸುವನೆಂತಿರ್ದಹ ಹೇಳಿರೆ?
ನೆಲನ ಶೋಧಿಸಿ, ನೆಲೆಯನಱಿಯದೆ,
ಕೆಱೆಯ ಕಟ್ಟಿಸುವ ಒಡ್ಡರಾಮಯ್ಯನ ಇರವೆಂತು ಹೇಳಿರೆ?
ನಮ್ಮ ⁱಗೊಹೇಶ್ವರⁱನ ನಿಲವನಱಿಯದ
ಮರುಳು ಸಿದ್ಧರಾಮನೆಂತಿರ್ದಹ ಹೇಳಿರೆ? ॥೮॥

ಇಂತು ಒಡ್ಡರಾಮಯ್ಯನೇನಾಗಿರ್ದಹನೆಂದು ಪ್ರಭುದೇವರು ಕೆಱೆಯ ಕಟ್ಟಿಸುವಂತಹ ಗುಡ್ಡುಗಳ ಬೆಸಗೊಳಲು, ಅವರೆಲ್ಲರು ಗುರುನಿಂದೆಯ ಕೇಳಿ ಸುಮ್ಮನಿರಬಾರದೆಂದು ಕಲ್ಲು ಗುಂಡು ಬಡಿಗೆಗಳಿಂದಿಟ್ಟು ನೋಯಿಸಲು, ಆ ಪ್ರಭುದೇವರ ತಾಗಿದಂತಹ ಘಾಯಗಳೆಲ್ಲವೂ ಮರಳಿ ಗುಡ್ಡುಗಳನೆ ತಾಗಲು, ಆ ಪ್ರಸ್ತಾವಕ್ಕೆ ಪ್ರಭುದೇವರು ಹೇಳಿದ ವಚನ:

೧೨೮

ಗುರುವೆಂದಱಿಯರು, ಹಿರಿಯರೆಂದಱಿಯರು;
ದೇವರೆದಱಿಯರು, ಭಕ್ತರೆಂದಱಿಯರು;
ಲಿಂಗವೆಂದಱಿಯರು, ಜಂಗಮವೆಂದಱಿಯರು;
ಬಂದವರನಱಿಯರು, ನಿಂದವರ ನಿಲವನಱಿಯರು.

೧–೧ ಗೊಗ್ಗೇಶ್ವರ (ಮೂ)

ಶಿವಶರಣರ ನೋಯಿಸುವ ಪಾತಕರನೇನೆಂಬೆ?
ಗೊಹೇಶ್ವರಾ, ನಿಮ್ಮ ಮನ ನೊಂದ ನೋವು ಬಱಿದೆ ಹೋಗದು. ॥೯॥

ಮತ್ತಂ,

೧೨೯

ಸಹಜವ ನುಡಿದರೆ ಸೇರುವರಿಲ್ಲ ಕಾಣಿರಣ್ಣಾ!
ಅಸಹಜಕ್ಕಲ್ಲದೆ ಲೋಕ ಭಜಿಸದು.
ಕೆಱೆಯ ಕಟ್ಟಿಸುವವನ ಕಂಡು ಒಡ್ಡರಾಮಯ್ಯನೆಂದರೆ,
ಮುಳಿಸಿಂದ ಲಿಂಗತನುವ ನೋಯಿಸುವರೆ?
ನಮ್ಮ ಗೊಹೇಶ್ವರಲಿಂಗವು ಜಗದೊಳಗೆ ಪರಿಪೂರ್ಣವಾದ ಕಾರಣ,
ಶರಣರ ನೋವು ಮರಳಿ ಪಾತಕರ ತಾಗಿದರೆ,
ಅಲ್ಲಯ್ಯ ನೋಡಿ ನಗುತಿರ್ದನು! ॥೧೦॥

೧೩೦

ತಾಯಿಗಾದ ಸುಖದುಃಖಂಗಳು
ಬಸುಱ ಶಿಶುವಿಂಗೆ ನೋಡಯ್ಯಾ.
ಶಿವಶರಣರಿಗೆ ಮಾಡಿದ ಸುಖದುಃಖಂಗಳು
ಶಿವನ ತಾಗುವವು.
ಕರಣವುಳ್ಳವರು ಮರಣವಿಲ್ಲದವಂಗೆ ಮುನಿದರೆ,
ತನುವುಳ್ಳವರ ಮುಟ್ಟುವುದಲ್ಲದೆ
ಒಡಲಿಲ್ಲದಾತನ ಮುಟ್ಟಬಲ್ಲುದೇ?
ಗೊಹೇಶ್ವರಾ, ಕೆಂಡವ [1]ಗೋಱಲೆ[1] ಮುಟ್ಟಬಲ್ಲುದೇ? ॥೧೧॥

ಇಂತಪ್ಪ ಅಜ್ಞಾನಿಗಳಿಗೆ ಉಪದೇಶವ ಮಾಡಿದ ಸಿದ್ಧರಾಮಯ್ಯನನೂ ಆ ಶಿಷ್ಯರು ಮಾಡಿದ ಪಾಪ ತಾಗುವುದೆಂದು ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೧೩೧

ಜಗದ ಜನವ ಹಿಡಿದುಕೊಂಡು ಬಂದು
ಉಪದೇಶವ ಮಾಡಿದ ಗುರುವಿಗೆ
ಆ ಉಪದೇಶ ಕೊಟ್ಟು ಕೊಂಡ ಮಾಱಿಂಗೆ ಹೋಹುದಲ್ಲದೆ,
ಅಲ್ಲಿ ನಿಜವಳವಡುವುದೇ?
ತೆಱನನಱಿಯದ ಸಂಸಾರಿಜೀವಿಗಳು ಮಾಡಿದ ದೋಷ ತಮ್ಮ ನುಂಗಿ,
ಆ ಗುರುವಿಂಗೆ ಉಪಹತಿಯ ಮಾಡುವುದು ನೋಡಾ!
ಗೊಹೇಶ್ವರಾ, ತಾಸಿಟ್ಟ ಬೇತಾಳ ತನ್ನನೆ ತಿಂದರೆ, ಬೇಕು ಬೇಡೆನಲುಂಟೆ? ॥೧೨॥

೧-೧ ನೊರಲೆ (ಮೂ)

ಇಂತು ಪ್ರಭುದೇವರ ನೋಯಿಸಿದ ನೋವು ಆ ಗುಡ್ಡುಗಳನೆ ಮರಳಿ ತಾಗಲು, ಆ ಘಾಯಂಗಳ ವಿಘಾತಿಯಿಂ ಘೋಳಿಡುತ್ತಲೋಡಿ ಬಂದು ಸಿದ್ಧರಾಮಯ್ಯದೇವರಿಗೆ ಮೊಱೆಯಿಟ್ಟು ದೂಱಿ 'ದೇವಾ ಆವನೋರ್ವ ಇಂದ್ರಜಾಲಕನು ನಿಮ್ಮನು ಬಾಯಿಗೆ ಬಂದಂತೆ ನಿಂದಿಸುತ್ತಿರಲು, ನಾವೆಲ್ಲರು ಗುರುನಿಂದೆಯ ಕೇಳಿ ಸುಮ್ಮನೆ ಇರಬಾರದೆಂದು ಕಲ್ಲು ಗುಂಡುಗಳನಿಟ್ಟು ನೋಯಿಸಲು, ಆತನ ತಾಗಿದಂಥ ಘಾಯಗಳೆಲ್ಲವೂ ನಮ್ಮನೆ ತಾಗಿ, ದೆಸೆದೆಸೆಯಿಂದೆಲ್ಲರೂ ನೊಂದು ಘಾಸಿಯಾದೆವೆ'ಂದು ಬಿನ್ನೈಸಲು, ಸಿದ್ಧರಾಮತಂದೆಗಳು ಬಂದು, ಈತನು ಪ್ರಭುದೇವರೆಂದು ವಿಚಾರಿಸಿ ನೋಡದೆ ಕ್ರೋಧಕ್ಕೆ ಮನವನೆಡೆಗೊಟ್ಟು, ಆ ಗುಡ್ಡುಗಳ ನೋವೆ ತನ್ನ ನೋವಾಗಿ ಕೈಕೊಂಡು ನುಡಿವ ಪ್ರಸ್ತಾವದ ವಚನ:

೧೩೨

ಎಲೆ ಅಯ್ಯಾ ನಿಮ್ಮವರ ನೋವೆ ಎನ್ನ ನೋವು ನೋಡಾ!
ಕಂಡು ಕಂಡು ಸೈರಿಸಲಾಱೆ ನೋಡಯ್ಯಾ!
ನಿಮ್ಮವರೊಡನೆ ಒರಸೊರಸಾಗಿಪ್ಪವರ ಕಂಡರೆ
ನಾನವರಿಗೆ ಮುನಿವೆ ನೋಡಾ,
ಕಪಿಲಸಿದ್ಧಮಲ್ಲಿನಾಥಾ, ನೀನವರಲ್ಲಿಪ್ಪೆಯಾಗಿ. ॥೧೩॥

ಇಂತು ಕ್ರೋಧಿಸಿ ಸಿದ್ಧರಾಮಯ್ಯದೇವರು ನೊಸಲ ಕಣ್ಣ ತೆಗೆವ ಪ್ರಸ್ತಾವದ ವಚನ:

೧೩೩

ಎಕ್ಕವಿಂಡುಗಳೆಂಬುವರು ಮುಕ್ಕಣ್ಣಾ, ನಿಮ್ಮ ಗಣಂಗಳು.
ಬತ್ತಿದ ಕೆಱೆಗೆ ಬಾಯ ಬಿಟ್ಟಂತೆ ಮೊಱೆಯಿಟ್ಟು ಬರಲು,
ಹೊತ್ತಿದ ಅಂಗಾಲ ಕಿಚ್ಚು ನೆತ್ತಿಯ ಮುಟ್ಟಿದರೆ,
ಚಕ್ಕನೆ ಕಪಿಲಸಿದ್ಧಮಲ್ಲಿನಾಥ ನೊಸಲ ಕಣ್ಣ ತೆಗೆದನು. ॥೧೪॥

ಇಂತು ನೊಸಲ ಕಣ್ಣ ತೆಗೆದ ಸಿದ್ಧರಾಮಯ್ಯದೇವರು ಆ ನೊಸಲ ಕಣ್ಣಿಗೆ ಬೆಸನನಿತ್ತ ಪ್ರಸ್ತಾವದ ವಚನ:

೧೩೪

ಬ್ರಹ್ಮನಾದಡಾಗಲಿ ವಿಷ್ಣುವಾದಡಾಗಲಿ,
ಇಂದ್ರನಾದಡಾಗಲಿ ಚಂದ್ರನಾದಡಾಗಲಿ,
ಎಮ್ಮ ಶಿವಶರಣರ ನೋವು ಎನ್ನ ನೋವು ನೋಡಾ!
ಅವರನೊರಸುವೆನುರುಹುವೆನೆಂದು
ಕಪಿಲಸಿದ್ಧಮಲ್ಲಿಕಾರ್ಜುನ ತನ್ನ ನೊಸಲ ಕಣ್ಣಿಂಗೆ ಬೆಸನನಿತ್ತರೆ,
ನಿಲಬಲ್ಲ ಗರುವರನಾರನೂ ಕಾಣೆ. ॥೧೫॥

ಇಂತು ನೊಸಲ ಕಣ್ಣಿನ ಕಿಚ್ಚಿಂಗೆ ಬೆಸನನಿತ್ತ ಸಿದ್ಧರಾಮಯ್ಯದೇವರು ಆ ನೊಸಲ ಕಣ್ಣಿನ ಮಹಾಜ್ವಾಲೆಯ ನೋಡಿ ನೋಡಿ ಆಶ್ಚರ್ಯಂಬಡುತ್ತಿರ್ದ ಪ್ರಸ್ತಾವದ ವಚನ:

೧೩೫

ಅಯ್ಯಾ, ನಿಮ್ಮ ಮೂರ್ತಿಯ ನೋಡಿಹೆನೆಂದರೆ ದೃಷ್ಟಿಯಾನವು.
ನಿಮ್ಮ ತೇಜವನಾರೂ ನೋಡಲಮ್ಮರಯ್ಯಾ!
ನಿಮ್ಮ ತೇಜವನೊಬ್ಬರಿಗೆಯೂ ಉಪಮಿಸಬಾರದು.
ನೀವು ಮುನಿದು ನೊಸಲ ಕಣ್ಣ ತೆಗೆದರೆ,
ಅದಕ್ಕೆ ಇದಿರಪ್ಪರಿನ್ನಾರು ಹೇಳಯ್ಯಾ?
ಕಪಿಲಸಿದ್ಧಮಲ್ಲಿಕಾರ್ಜುನಾ,
ನಿಮ್ಮ ತೇಜ ಮೂಱು ಲೋಕವ ನುಂಗಿದರೆ
ನಾನು ನೋಡಿ ಕಣ್ಣ ಮುಚ್ಚುತ್ತಿರ್ದೆನು! ॥೧೬॥

ಇಂತು ಸಿದ್ಧರಾಮಯ್ಯದೇವರ ನೊಸಲ ಕಣ್ಣಿನ ಮಹಾಜ್ವಾಲೆಯ ಧಾಳಿ ಬ್ರಹ್ಮಾಂಡಮಂ ಮುಸುಂಕುತ ಬಪ್ಪುದಂ ಕಂಡು, ಅಲ್ಲಮಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೧೩೬

ಕಾಡುಗಿಚ್ಚೆದ್ದರೆ ಅಡವಿಯೆ ಗುಜೆ,
ನೀರುಗಿಚ್ಚೆದ್ದರೆ ಸಮುದ್ರವೇ ಗುಜೆ.
ಒಡಲುಗಿಚ್ಚೆದ್ದರೆ ಆ ತನುವೆ ಗುಜೆ,
ಕಾಲಾಗ್ನಿ ಎದ್ದರೆ ಲೋಕಂಗಳೆ ಗುಜೆ.
ಶಿವಶರಣರ ಮನದಲ್ಲಿ ಕೋಪಾಗ್ನಿ ಎದ್ದರೆ ನಿಂದಕರೆ ಗುಜೆ
ಗೊಹೇಶ್ವರಾ, ನಿಮ್ಮ ಮಾಯದ ಹೊಡೆಗಿಚ್ಚಿಂಗೆ
ನಾನು ಗುಜೆಯಲ್ಲ ಕೇಳಾ. ॥೧೭॥

ಇಂತು ಭೂಮಿಯಾಕಾಶಮಂ ತುಡುಕುತ ಬಪ್ಪ ಮಹಾಜ್ವಾಲೆಯನು ಇದೆಲ್ಲಿಯದೆಂದು ತಿಳಿದು ನೋಡಿ ಸಿದ್ಧರಾಮಯ್ಯದೇವರ ನೊಸಲ ಕಣ್ಣ ಕಿಚ್ಚೆಂದಜೆದ ಪ್ರಸ್ತಾವದ ವಚನ:

೧೩೭

ಕಾಯಗುಣವಳಿದು ಮಾಯದ ಮದಮುಜೆದು,
ಕಾಮ ಕ್ರೋಧಂಗಳೆಲ್ಲವು ಹೆಜೆಹಿಂಗಿ ಹೋದವು.
ಅಂಗವೆಲ್ಲವೂ ಲಿಂಗಲೀಯವಾಗಿ, ಕಂಗಳ ಕಳೆಯ ಬೆಳಗಳಿದು,
ಗೊಹೇಶ್ವರನ ವಿರಹದುರಿಯೊಳಗೆ ಬೆಂದವರ
ಮರಳಿ ಸುಟ್ಟಿಹೆನೆಂಬ ಸಿದ್ಧರಾಮಯ್ಯ ಮರುಳು ನೋಡಾ!. ॥೧೮॥

೧೩೮

ತಾಪತ್ರಯದಲ್ಲಿ ಬೆಂದ ಒಡಲ ಹಿಡಿದು ತಂದು
ಜ್ಞಾನವೆಂಬ ಉರಿಗೆ ಆಹುತಿಯ ಕೊಟ್ಟವನ
ಜ್ಞಾನವೆಂಬ ಕಾಯವ ಹಿಡಿದು ನಿಶ್ಶೂನ್ಯವೆಂಬ ತೇಜದಲ್ಲಿ ಸುಟ್ಟವನ,
ನಿಶ್ಶೂನ್ಯವೆಂಬ ಶಬ್ದವ ಸುಟ್ಟು ಭಸ್ಮವ ಧರಿಸಿದ ಲಿಂಗೈಕ್ಯನ,

ಲೋಕದ ಸ್ಥಿತಿಗತಿಯ ಮಱೆದು ನಿರ್ವಾಣದಲ್ಲಿ ನಿಂದವನ,
ಗೊಹೇಶ್ವರಲಿಂಗದಲ್ಲಿ ತನ್ನ ಮಱೆದ ಅಲ್ಲಯ್ಯನ
ಕೋಪದ ಕಿಚ್ಚಿನಲ್ಲಿ ಸುಟ್ಟಹೆನೆಂಬ ಸಿದ್ಧರಾಮಯ್ಯನನೇನೆಂಬೆನು? ॥೧೯॥

ಇಂತು ತಮ್ಮ ಮಹಾತ್ಮೆಯ ನಿರೂಪಿಸುತ್ತಿರ್ದ ಪ್ರಭುದೇವರು ಸಿದ್ಧರಾಮಯ್ಯದೇವರ ಗರ್ವ ಮುಱಿದು, ನೊಸಲ ಕಣ್ಣಿನ ಮಹಾಜ್ವಾಲೆಯನು ತಮ್ಮ ಶ್ರೀಪಾದದೊಳಗಡಗಿಸಿಕೊಂಡ ಪ್ರಸ್ತಾವದ ವಚನ:

೧೩೯

ನಿಮ್ಮ ಶಕ್ತಿ ಜಗದೊಳಗಿಪ್ಪುದು;
ಜಗದ ಶಕ್ತಿ ನಿಮ್ಮೊಳಗಿಪ್ಪುದು.
ಜಗಕ್ಕೆ ನಿನಗೆ ಭೇದವಾದುದಕ್ಕೆ ಬೆಱಗಾದೆನು!
ಅಂದೊಮ್ಮೆ ತ್ರಿಪುರವ ಸುಟ್ಟಲ್ಲಿ ನಾಚಿತ್ತೆನ್ನ ಮನವು.
ಕಾಮನನುರುಹಿ ಕಾಮಹರನೆನಿಸಿಕೊಂಡರೆ,
ನಿನ್ನ ಅಹಂಕಾರವ ನೋಡಿ ಹೇಸಿತ್ತೆನ್ನ ಮನವು.
ಕಾಲನ ಸುಟ್ಟು ಬೊಟ್ಟನಿಟ್ಟರೆ,
ಎನಗೆ ನಗೆಗೆಡೆಯಾಯಿತ್ತು ನಿಮ್ಮ ಘನವೆನಗೆ,
ಗೊಹೇಶ್ವರಾ, ನೀ ಮುನಿದು ನೊಸಲ ಕಣ್ಣ ತೆಗೆದರೆ,
ಎನ್ನಂಗಾಲೊಳಡಗಿತ್ತಯ್ಯಾ ನಿಮ್ಮ ಕೋಪ. ॥೨೦॥

ಇಂತು ನೊಸಲ ಕಣ್ಣಿನ ಮಹಾಜ್ವಾಲೆಯನ್ನು ಪ್ರಭುದೇವರು ತಮ್ಮ ಅಂಗಾಲೊಳಗೆ ಅಡಗಿಸಿಕೊಂಡು, ಸಿದ್ಧರಾಮಯ್ಯದೇವರ ಶಕ್ತಿಯ ನೋಡಬೇಕೆಂದು ತಾವು ತಮ್ಮ ಅಂಗಾಲೊಳಗೆ ಉರಿಗಣ್ಣ ತೆಗೆದಹೆವೆಂದು ಉದ್ಯೋಗಿಸಿದ ಪ್ರಸ್ತಾವದ ವಚನ:

೧೪೦

ಹರನ ಕರುಣವ ಪಡೆದ ಸಾಮರ್ಥ್ಯದ ಬಲುಹಿಂದ
ಶಿವಶರಣರೊಡನೆ ಸೆಣಸಿದರೆ ಲೇಸುಂಟೇ?
ಅಘಟಿತಘಟಿತರಿಗೆ ಅಘಟಿತರುಂಟು ನೋಡಾ!
ನೊಸಲಲೊಬ್ಬ ಕಣ್ಣ ತೆಗೆದರೆ
ಅಂಗಾಲಲೊಬ್ಬರು ಕಣ್ಣ ತೆಗೆವರು.
ಗೊಹೇಶ್ವರನ ಶರಣರು ಉಪಮಾತೀತರು. ॥೨೧॥

ಈ ಹೀಂಗೆಂದು ಪ್ರಭುದೇವರು ಅಂಗಾಲ ಕಣ್ಣ ತೆಗೆದ ಪ್ರಸ್ತಾವದ ವಚನ:

೧೪೧

ಎರಡು ಕಣ್ಣುಳ್ಳರೆ ಚತುರ್ಭುಜನೆಂಬೆನು,
ಮೂಱು ಕಣ್ಣುಳ್ಳರೆ ಮಹೇಶ್ವರನೆಂಬೆನು.

ಮೈಯೆಲ್ಲಾ ಕಣ್ಣಾದರೆ ಸದಾಶಿವನೆಂಬೆನು.
ಗೊಹೇಶ್ವರಾ, ನಿಮ್ಮ ಶರಣಂಗೆ ಅಂಗಾಲ ಕಣ್ಣು ಮೂಡಿದರೆ,
ನಿರುಪಮ ಮಹಿಮ ಅಲ್ಲಯ್ಯನೆಂಬೆನು. ॥೨೨॥

ಇಂತು ಅಂಗಾಲೊಳಗೆ ಮೂಡಿದ ಕಂಗಳ ತೇಜವ ನೋಡಿ, ಪ್ರಭುದೇವರು ಕೊಂಡಾಡುತ್ತಿರ್ದ ಪ್ರಸ್ತಾವದ ವಚನ:

೧೪೨

ನಿಮ್ಮ ತೇಜವ ನೋಡಲೆಂದು ಹೆಜಸಾರಿ ನೋಡುತ್ತಿರಲು,
ಶತಕೋಟಿ ಸೂರ್ಯರು ಮೂಡಿದಂತಿರ್ದುದಯ್ಯಾ!
ಮಿಂಚಿನ ಬಳ್ಳಿಯ ಸಂಚವ ಕಂಡೆ.
ಎನಗಿದು ಸೋಜಿಗವಾಯಿತ್ತು!
ಗೊಹೇಶ್ವರಾ, ನೀನು ಜ್ಯೋತಿರ್ಲಿಂಗವಾದರೆ,
ಉಪಮಿಸಿ ನೋಡಬಲ್ಲವರಿಲ್ಲಯ್ಯಾ. ॥೨೩॥

ಇಂತಪ್ಪ ಅಂಗಾಲ ಕಣ್ಣಿನ ಮಹಾಜ್ವಾಲೆಯನ್ನು ಪ್ರಭುದೇವರು ಸಿದ್ಧರಾಮಯ್ಯದೇವರ ಬಳಿಗೆ ಹೋಗೆಂದು ಬೆಸಸಿ ಕಳುಹುವ ಪ್ರಸ್ತಾವದ ವಚನ:

೧೪೩

ಕಾಲಾಗ್ನಿಯೆಂಬ ಕಾಡುಗಿಚ್ಚೆದ್ದು
ಲೋಕವ ಸುಟ್ಟಿತೆಂದರೆ ಶಿವಶರಣರಂಜರು,
ಶಶಿಧರ ಮುನಿದು ಬಿಸಿಗಣ್ಣ ತೆಗೆದರೆ,
ಶಿವಶರಣರು ಮನಸಿಗೆ ತಾರರು.
ಅಸಮಾಕ್ಷಲಿಂಗವ ತಮ್ಮ ವಶಕ್ಕೆ ತಂದು
ಶರಣರು ಮುನಿದು ಉರಿಗಣ್ಣ ತೆಗೆದರೆ,
ಚತುರ್ದಶ ಭುವನದೊಳಗೆ ಆರು ಗುರಿಯಲ್ಲ?
ಗುಹೇಶ್ವರಾ ನಿಮ್ಮ ಅಜಿವಿನ ಬೆಳಕು ಬಿಸಿಯಾದರೆ
ಸಿದ್ಧರಾಮಯ್ಯದೇವರೆಂಬ ಶಿವಯೋಗಿಯ
ಹೃದಯವೆ ಗುಜಿ ಎಂದು ಬೆಸಸಿದನಲ್ಲಯ್ಯನು. ॥೨೪॥

ಇಂತು ತೇಜೋಮಯವಾಗಿ ಅಷ್ಟದಿಕ್ಕುಗಳನಾಲಿಂಗಿಸುತ್ತ, ಧರೆಯಾಕಾಶವನಾಗುಳಿಸಿ ನುಂಗುತ್ತ, ಸಚರಾಚರಂಗಳನುಃಪೆಂದು ಊದುತ್ತ, ಸಪ್ತಸಮುದ್ರಂಗಳನಾಪೋಷಣಂಗೊಳ್ಳುತ್ತ, ಭುಗಿರ್ಭುಗಿಲೆಂಬ ಮಹಾರಭಸಕ್ಕೆ ಬ್ರಹ್ಮಾಂಡ ಕಟಾಹಂ ಬಿರಿವುತ್ತ, ಚತುರ್ದಶಭುವನವೆಲ್ಲಂ ಪ್ರಳಯಕಾಲ ತುಂಬಿದ ಮುನ್ನವೆ ಮಹಾಪ್ರಳಯ ಬಂದಿತ್ತೆಂದು ಜಗ್ಗನೆ ಜರಿವುತ್ತ, ಹರಿ ವಿರಿಂಚಿ ಮೊದಲಾದ ಸಮಸ್ತ ದೇವರ್ಕಳೆಲ್ಲರೂ ಶಿವಧೋ ಎಂದು ಕೈಲಾಸದತ್ತಲೋಡುತ್ತಮಿರಲು. ಅನಂತ ಮುಖ ಒಂದೇ ಮುಖವಾಗಿ, ಒಂದು ಮುಖ ಅನಂತಮುಖವಾಗಿ ಬಪ್ಪ ಮಹಾತೇಜೋರಾಶಿಯಂ ಕಂಡು, ಸಿದ್ಧರಾಮತಂದೆಗಳು ಇದೆಲ್ಲಿಯ ಮಹಾಜ್ವಾಲೆಯೆಂದು ವಿವೇಕದಿಂ ತಿಳಿದು ನೋಡಿ, ಈತನು

ಶಿವನಲಾ ಎಂದಱಿದು ಅನುತಾಪಿಸುತ್ತಿರ್ದ ಪ್ರಸ್ತಾವದ ವಚನ:

೧೪೪
ಯುಗಜುಗ ಮಡಿವಂದು
ಧಿಗಿಲುಭುಗಿಲೆಂದು ಮುಸುಕಿದ ಮಹಾಜ್ವಾಲೆ ಇದೇನೋ?
ಇಂದೆನ್ನ ಕಣ್ಗೆ ಗೋಚರವಾಯಿತ್ತೆಲೆ ಅಯ್ಯಾ!
ನೀವೆಂದಱಿಯೆನಯ್ಯಾ!
ನಾನೆನ್ನ ಕಾಯದ ಕಳವಳದಲ್ಲಿದ್ದೆನಲ್ಲದೆ,
ನೀವೆಂಬ ಬಗೆದೋಱದೆ ಕೆಟ್ಟೆನೆಲೆ ಅಯ್ಯಾ!
ಆಳ್ದನೊಡನೆ ಆಳು ಮುನಿದರೆ, ಆರು ಕೆಡುವರು
ಹೇಳಾ ಕಪಿಲಸಿದ್ಧ ಮಲ್ಲಿಕಾರ್ಜುನಾ? ॥೨೫॥

ಮತ್ತಂ,

೧೪೫
ಅಱಿಯಬಾರದ ಘನವನಱಿದು,
ಸಾಧಿಸಿ ಗೆದ್ದ ಘನಮಹಿಮ ಶರಣರ ಮುಂದೆ
ಎನ್ನ ಪ್ರತಾಪ [1]ನಿಲುಕುವುದೆ?[1]
ಅವರಿರ್ಪರು ಲಿಂಗಪ್ರಭೆಯೊಳಗೆ;
ನಾನಿಪ್ಪೆನು ಅಹಂಕಾರದ ಪಂಜರದೊಳಗೆ,
ಎನ್ನ ನೊಸಲ ಕಣ್ಣಿನ ಕಿಚ್ಚುಡುಗಿ, ಲಜ್ಜಿತನಾಗಿ
ಮರಳಿ ಬಂದೆನ್ನ ಸುತ್ತಿ ಮುತ್ತಿತ್ತು,
ನಾನು ಶರಣೆಂಬ ಗುರುವಚನವಿದಿರೆದ್ದು ಕೊಲುವರೆ,
ಕಪಿಲಸಿದ್ಧಮಲ್ಲಿನಾಥನೊಳಗೆ ಅಳಿವೆನಲ್ಲದೆ ಉಳಿವನಲ್ಲ. ॥೨೬॥

ಮತ್ತಂ, ಅನುತಾಪಂಗೆಯ್ದು ಪ್ರಸ್ತಾವದ ವಚನ:

೧೪೬
ಕಾಲವೇಕೆ ಬಾರದಯ್ಯಾ ಇಂದಿನ ಅವಸ್ಥೆಗೆ?
ಲಿಖಿತವೇಕೆ ತೊಡೆಯದಯ್ಯಾ ಇಂದಿನ ಅವಸ್ಥೆಗೆ?
ಇಂದಿನಿತೀಸು ಏಕೆ ಬಾರದಯ್ಯಾ?
ಎನ್ನ ದೇವ ಕಪಿಲಸಿದ್ಧಮಲ್ಲಿಕಾರ್ಜುನಾ,
ನಿಮಗೆ ಕೂರ್ತ ಅವಸ್ಥೆಯೊಳಗೆ ಲಿಖಿತ ತೊಡೆಯದು,
ಪ್ರಾಣ ಬಿಡದು ಇಂತಿರಿಸದಿರಾ ಎನ್ನ ದೇವರದೇವಾ. ॥೨೭॥

ಮತ್ತಂ,

೧-೧ ನಿಲುಕುದೆ (ಮೂ)

೧೪೭

ಕಳವಳದ ಕಂದೆಱವೆಗೊಳಗುಮಾಡಿದೆ.

ಆಹಾ! ಎಲೆ ಅಯ್ಯಾ.

ಎನ್ನ ವಿಕಾರದಲ್ಲಿ ಗುಜಿಮಾಡಿದಿರಯ್ಯಾ!

ಕೋಪದ ಕಾಡುಗಿಚ್ಚಿಗೆ ಅಡವಿಯ ಗುಜಿಮಾಡಿದಿರಿ

ಎನ್ನ ಕಪಿಲಸಿದ್ಧಮಲ್ಲಿಕಾರ್ಜುನಾ! ॥೨೮॥

ಇಂತು ಅನುತಾಪಮಂ ಸಂತೈಸಿಕೊಂಡು ಪ್ರಭುದೇವರ ಶ್ರೀಪಾದದಲ್ಲಿಗೆ ಅಱಸಿಕೊಂಡು ಬರುತ್ತಿರ್ಪ ಪ್ರಸ್ತಾವದ ವಚನ:

೧೪೮

ನಟ್ಟಡವಿಯೊಳಗೆ ಇರುಳು ಹಗಲೆನ್ನದೆ ನಾನು

'ಅಪ್ಪಾ ಅಯ್ಯಾ' ಎಂದು ಅಱಸುತ್ತ ಹೋದರೆ

'ನಾನಿದ್ದೇನೆ ಬಾ ಮಗನೆ' ಎಂದು ಕರೆದೆನ್ನ ಕಂಬನಿಯ ತೊಡೆದು,

ತನ್ನ ನಿಜವ ತೋಱದ ದೇವನ ಪಾದವಿಂದೆನ್ನಲ್ಲಿಗೆ ನಡೆದು ಬಂದರೆ,

ನಾನಱಯದೆ ಮರುಳುಗೊಂಡೆನೆಂದು

ಎನ್ನ ಮನದೊಳಗೆಚ್ಚಱಮಾಡಿದ.

ಆತನನಱಸಿಕೊಂಡು ಬಂದೆನ್ನ ಹೃದಯದಲ್ಲಿ

ಇಂಬಿಟ್ಟುಕೊಂಬೆನೆನ್ನ ಕಪಿಲಸಿದ್ಧಮಲ್ಲಿಕಾರ್ಜುನನಾ! ॥೨೯॥

ಮತ್ತಂ,

೧೪೯

ತನ್ನನಱಸಿ ಬಪ್ಪವರ ತಾನಱಸಿ ಬಪ್ಪ ನೋಡಾ!

ಎನ್ನ ದೇವನೆಲ್ಲಿದ್ದನಲ್ಲಿಗೆ ಹೋಗಿ ಬಾರಾ ಎಂದು

ಮನದೊಳಗೆ ಅಚ್ಚೊತ್ತಿಕೊಂಬೆನೆನ್ನ ಕಪಿಲಸಿದ್ಧಮಲ್ಲಿನಾಥಯ್ಯನಾ. ॥೩೦॥

ಇಂತು ಪ್ರಭುದೇವರನಱಸಿಕೊಂಡು ಬರುತ್ತಿರ್ಪ ಸಿದ್ಧರಾಮಯ್ಯದೇವರೊಡನೆ ಗುಡ್ಡುಗಳು– 'ದೇವಾ ಆತನು ನಿಂದರೆ ನೆಳಲಿಲ್ಲ, ಸುಳಿದರೆ ಹಜ್ಜೆಯಿಲ್ಲ, ಕಾಯವಿದ್ದೂ ಕಾಯವಿಲ್ಲ, ನೀವಿನ್ನು ಆವ ಪರಿಯಲ್ಲಿ ಮುನಿಸ ತಿಳುಹಿ ತಪ್ಪಿರಿ' ಎಂದೆನೆ ಆ ಗುಡ್ಡುಗಳೊಡನೆ ನುಡಿವ ಪ್ರಸ್ತಾವದ ವಚನ:

೧೫೦

ಅವನಾದ ಗತಿಯ ನಾನಪ್ಪೆ;

ಅವ ನಿಂದ ನಿಲವ ನಿಲುವೆನು.

ಆತ ಬಿಟ್ಟುದ ಬಿಡುವೆನು;

ಅವನ ಬೆಂಬಳಿಯ ಸಲುವೆ.

ಎನ್ನ ಪ್ರಾಣವನವನ ಮೇಲಿಕ್ಕಿ ನೆರೆವೆ
ಕಪಿಲಸಿದ್ಧಮಲ್ಲಿಕಾರ್ಜುನನಾ. ॥೩೧॥

ಮತ್ತಂ,

೧೫೧

ಮದಹಸ್ತಿ ಮದಹಸ್ತಿಯ ಹಿಡಿವುದಲ್ಲದೆ ಮತ್ತೊಂದ ಹಿಡಿಯದು.
ಆ ರೂಪಿಗಾ ರೂಪಾಗಿ ಹಿಡಿವುದಲ್ಲದೆ
ಮತ್ತೊಂದು ರೂಪ ಹಿಡಿಯದು.
ರೂಪಿಲ್ಲದಾತನ ರೂಪಿಸಿ ಹಿಡಿವೆನು ಕಪಿಲಸಿದ್ಧಮಲ್ಲಿಕಾರ್ಜುನನಾ.॥೩೨॥

ಮತ್ತಂ,

೧೫೨

ಹರಿದು ಹತ್ತುವೆನವನ;
ಹತ್ತಿ ಮನವ ಮುಟ್ಟಿ ಹಿಡಿವೆನವನ.
ಮಹಾಪ್ರಚಂಡ ಮನದಿಂದ
ಕಪಿಲಸಿದ್ಧಮಲ್ಲಿಕಾರ್ಜುನನ ಹಿಡಿವೆನು. ॥೩೩॥

ಈ ಹೀಂಗೆಂದು ನುಡಿವ ಸಿದ್ಧರಾಮತಂದೆಗಳೊಡನೆ ಆ ಗುಡ್ಡುಗಳು: 'ದೇವಾ, ಆತನ ಕೋಪಾರೂಢಿಯಿಂದೊಗೆದ ಅಂಗಾಲ ಕಣ್ಣಿನ ಮಹಾಜ್ವಾಲೆಯ ನಿಲಿಸುವ ಪರಿ ಎಂತೆನೆ' ಅವರಿಗೆ ಕೊಟ್ಟ ಪ್ರತ್ಯುತ್ತರ:

೧೫೩

ಅಂಗಾಲ ಕೋಪವ ಮನಕ್ಕೆ ತಂದಿಪ್ಪವನ,
ಮನದ ಕೋಪವ ಹೃದಯದಲ್ಲಿ ಇಟ್ಟುಕೊಂಡಿಪ್ಪವನ,
ಅವನ ಪಾದಕ್ಕೆ ಎನ್ನ ನೊಸಲ ತಂಪ ತಂದು ತಳಿವೆ.
ಎನ್ನ ನೊಸಲ ಅಮೃತದಿಂದ ಅವನ ಮನವ ತಿಳುಹುವೆನು
ಕಪಿಲಸಿದ್ಧ ಮಲ್ಲಿಕಾರ್ಜುನನಾ. ॥೩೪॥

ಇಂತು ಗುಡ್ಡುಗಳೊಡನೆ ಪ್ರಸಂಗಿಸುತ್ತಂ ಬಂದು, ಸಿದ್ಧರಾಮಯ್ಯದೇವರು ಪ್ರಭುದೇವರ ದರುಶನವಾಗಿ, ಅವರ ಶ್ರೀಮೂರ್ತಿಯ ನೋಡಿ ನೋಡಿ ಹರುಷಾಶ್ರುಗಳೊಳಗೆ ಓಲಾಡುತ್ತಿರ್ಪ ಪ್ರಸ್ತಾವದ ವಚನ:

೧೫೪

ಅಱಲುಗೊಂಡ ಕೆಱೆಗೆ ತೊಱೆ ಬಂದು ಹಾಯಿದಂತೆ,
ಎಲೆ ಅಯ್ಯಾ, ನಿಮ್ಮ ಕಂಡು ಕಂಗಳು ಕಡೆಗೋಡಿವರಿದವಯ್ಯಾ!
ಎನ್ನ ಮನಕ್ಕೆ ಮನ ವೇದ್ಯವಾದರೆ ಕೈಮಱೆದೆನೆಲೆ ಹಾ!
ಅಯ್ಯಾ, ಕಪಿಲಸಿದ್ಧಮಲ್ಲಿನಾಥನ ಕಂಡ ಸುಖವು ಆರಿಗೆಯೂ ಇಲ್ಲ. ॥೩೫॥

ಮತ್ತಂ,

೧೫೫

ಅಯ್ಯಾ, ನಿಮ್ಮ ಕಂಡು ಕಂಗಳು ನೋಡಲಮ್ಮದೆ
ಬೆಚ್ಚಿ ಬೆದಱಿದವಯ್ಯಾ!
ನೀನು ಶತಕೋಟಿ ಸೂರ್ಯಪ್ರಕಾಶಕ್ಕತೀತನು.
ನಿನ್ನ ಕಂಡ ಬಳಿಕ ಕರ್ಮ ಉಂಟೇ ಕಪಿಲಸಿದ್ಧಮಲ್ಲಿಕಾರ್ಜುನಾ? ॥೩೬॥

ಇಂತು ಪ್ರಭುದೇವರ ಮೂರ್ತಿಯಂ ಕಂಡು, ಸಿದ್ಧರಾಮಯ್ಯದೇವರು ಆ ಪ್ರಭುವಿನ ಶ್ರೀಪಾದಕ್ಕೆ ನಮಸ್ಕಾರಮಂ ಮಾಡುವ ಪ್ರಸ್ತಾವದ ವಚನ:

೧೫೬

ಎಲೆ ಅಯ್ಯಾ, ಎನ್ನ ಶಿರ ನಿಮ್ಮ ಚರಣವ ಮುಟ್ಟಿದ ಬಳಿಕ
ಎನ್ನಲ್ಲಿ ಗುಣ ದೋಷವನಱಸುವರೆ?
'ಭೃತ್ಯಾಪರಾಧಃ ಸ್ವಾಮಿನೋ ದಂಡ'
ಕಪಿಲಸಿದ್ಧಮಲ್ಲಿಕಾರ್ಜುನದೇವಾ, ತ್ರಾಹಿ, ತ್ರಾಹಿ ಕಾಯಯ್ಯಾ. ॥೩೭॥

ಇಂತು ನಮಸ್ಕಾರದೊಳು ತನ್ನುವ ಮಱೆದು ಸ್ತೋತ್ರಮಂ ಮಾಡುತ್ತಿರ್ಪ ಪ್ರಸ್ತಾವದ ವಚನ:

೧೫೭

ನಿಮ್ಮ ನಿಜದಂತುವನಾರು ಬಲ್ಲರಯ್ಯಾ?
ಚತುರ್ದಶ ಭುವನಂಗಳೆಲ್ಲವೂ
ನಿಮ್ಮ ಕರಸ್ಥಲದೊಳಡಗಿಪ್ಪವಯ್ಯಾ!
ನಿಮಗೆಣೆಯಪ್ಪ ದೇವರುಂಟೆ ಕಪಿಲಸಿದ್ಧಮಲ್ಲಿಕಾರ್ಜುನಾ? ॥೩೮॥

ಮತ್ತಂ,

೧೫೮

ಅನಂತ ದೇವರೆಲ್ಲರೂ ತಂಡತಂಡದಲ್ಲಿ ಪ್ರಣಾಮಂಗೆಯ್ಯಲು,
ಅವರ ಮಕುಟ ಸಂಘಟ್ಟರಜವುದುರಲಿಕೆ
ಅಲ್ಲಿ ರಜತಗಿರಿಗಳಾದವು,-
ಕಪಿಲಸಿದ್ಧಮಲ್ಲಿಕಾರ್ಜುನದೇವರದೇವಾ, ನಿಮ್ಮ ಮುಂದೆ. ॥೩೯॥

ಮತ್ತಂ,

೧೫೯

ಹರಿ ಎಂಬಾತ ನಿಮ್ಮ ಚವರಣವನಱಿಯ.
ಬ್ರಹ್ಮನೆಂಬಾತ ನಿಮ್ಮ ಮಕುಟವನಱಿಯ.
ಯತಿ ವ್ರತಿ ಋಷಿಗಳೆಂಬರು ನಿಮ್ಮ ಒಳಗನಱಿಯರು.
ಸಮಸ್ತ ದೇವರ್ಕಗಳು ನಿಮ್ಮ ರೋಮದ ಪ್ರಮಾಣವನಱಿಯರು.
ಶತಕೋಟಿ ಸೂರ್ಯರು ನಿಮ್ಮ ಬೆಳಗ ಕಾಣಲಱಿಯರು.
ಕಪಿಲಸಿದ್ಧಮಲ್ಲಿಕಾರ್ಜುನಾ, ನಾ ನಿಮ್ಮ ಅಱಿಯ ಬಲ್ಲವನೆ ಅಯ್ಯಾ? ॥೪೦॥

ಮತ್ತಂ,

೧೬೦

ನೆನೆಸುವೆ ಮಱಿಸುವೆ. ಎನ್ನ ಗುಣ ದೋಷ ನಿಮ್ಮದು
ಕೇಳಯ್ಯಾ ಎನ್ನ ಬಿನ್ನಪವ.
ನಿಮ್ಮ ನೆನೆವ ನಾನಲ್ಲ ಕಂಡಯ್ಯಾ.
ನಿಮ್ಮಿಂದ ನಿಮ್ಮ ನೆನೆವೆನು
ಕೃಪೆಮಾಡಾ ಕಪಿಲಸಿದ್ಧಮಲಿಕಾರ್ಜುನಾ. ॥೪೧॥

ಮತ್ತಂ,

೧೬೧

ಕೈಗಳ ಬಿಚ್ಚಿ ಬಿಸಾಟರೆ ಬಿಡೆನು;
ಮೈಗಳ ಕಡಿದು ಹರಹಿದಡೆ ಬಿಡೆ ಬಿಡೆನು ನಿಮ್ಮ ಚರಣವನಿನ್ನು.
ಎನ್ನ ತನುವಳಿದರೆ, ನಿಮ್ಮ ಜ್ಞಾನತನುವಿಂದ ಹೊದ್ದುವೆನು
ಕಾಣಾ ಕಪಿಲಸಿದ್ಧಮಲ್ಲಿಕಾರ್ಜುನಾ. ॥೪೨॥

ಇಂತು ಸಿದ್ಧರಾಮಯ್ಯದೇವರು ಸ್ತೋತ್ರಮಂ ಮಾಡುತ್ತಿರಲು, ಪ್ರಭುದೇವರು ಆ ಸ್ತೋತ್ರಮಂ ಜಱಿದು ತಮ್ಮ ನಿಲವ ಹೇಳುವ ಪ್ರಸ್ತಾವದ ವಚನ:

೧೬೨

ಕಾಯಗೊಂಡ ಮಾನವರಂತೆ ಕೈಗೆ ನಿಲುಕ.
ಪ್ರಾಣವಿಡಿದ ಜೀವಿಗಳಂತೆ ಎಡೆಯಾಡದಿಪ್ಪ.
[1]ಕಾಂಬಡೆ[1] ಕಂಗಳತೆಯಲ್ಲ; ಕೇಳುವಡೆ ಕಿವಿಗಳತೆಯಲ್ಲ.
ಗೊಹೇಶ್ವರನ ನಿಲವು
ಬಱಿಯ ಸ್ತೋತ್ರಕ್ಕೆ ಸಿಕ್ಕದು ಕಾಣಾ ಸಿದ್ಧರಾಮಯ್ಯಾ! ॥೪೩॥

ಮತ್ತಂ,

೧೬೩

ಕಂಗೆ ಕಾಬಡೆ ರೂಪಲ್ಲ; ಕೈಗೆ ಸಿಲುಕುವಡೆ ದೇಹಿಯಲ್ಲ.
ನಡೆದಡೆ ಗಮನಿಯಲ್ಲ; ನುಡಿದಡೆ ವಾಚಾಳನಲ್ಲ.
ನಿಂದಿಸಿದವರಿಗೆ ಹಗೆಯಲ್ಲ; ಹೊಗಳಿದವರಿಗೆ ಕೆಳೆಯಲ್ಲ.
ಗೊಹೇಶ್ವರನ ನಿಲವು ಮಾತಿನ ಮಾತಿಗೆ ಸಿಲುಕುವುದೆ?
ಸಿದ್ಧರಾಮಯ್ಯಾ, ನೀನು ಮರುಳಾದೆಯಲ್ಲಾ! ॥೪೪॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲಾ ಸಿದ್ಧರಾಮಯ್ಯದೇವರು ಕೊಟ್ಟ ಪ್ರತ್ಯುತ್ತರ:

---

೧ ಕಾಬಡೆ (ಮೂ)

೧೬೪

ಸ್ತೋತ್ರವೆಂಬವು ನೀ ಮಾಡಲಾದವು ಕಂಡಯ್ಯಾ!
ಮೂರ್ತಿ ಎಂಬುದು ನೀನು ನೆನೆದಡಾದುದು ಕಂಡಯ್ಯಾ!
ಆ ಮೂರ್ತಿ ಎಂಬುದು ನಿನ್ನ ಸ್ವಭಾವ ಕಂಡಯ್ಯಾ!
ಎನ್ನ ಹೃದಯಕಮಲದೊಳಗೆ ಹುಟ್ಟುವ ಸ್ಮರಣೆ
ನಿನ್ನ ಗತಿ ನೋಡಯ್ಯಾ!
ಕಪಿಲಸಿದ್ಧಮಲ್ಲಿನಾಥಯ್ಯಾ, ನೀನು ಸ್ತೋತ್ರಪ್ರಿಯನಲ್ಲದಿದ್ದರೆ
ಬಾಣ ಮಯೂರ ಹಲಾಯುಧಂಗೆ ಒಲಿದೆ ಎಂತು ಹೇಳಯ್ಯಾ? ॥೪೫॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೧೬೫

ವಚನದ ರಚನೆಯೆಂಬ ಮಾತಿನ ಬಣ್ಣದ ಪರಿಯಲ್ಲ ನೋಡಾ!
ಹೊಗಳಿ ಕಂಡವರೆಲ್ಲರೂ ಮೂರ್ತಿಗೊಳಗಾದರು.
ವೇದಶಾಸ್ತ್ರಮಾರ್ಗವೆಲ್ಲವು ಹೊಗಳಿ ಕಾಣವೆಂಬುದ
ಗೊಹೇಶ್ವರ ಸಾಕ್ಷಿಯಾಗಿ ಮೂಱು ಲೋಕ ಬಲ್ಲದು
ಕಾಣಾ ಸಿದ್ಧರಾಮಯ್ಯ! ॥೪೬॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರ ಬಿನ್ನಹ:

೧೬೬

ವೇದಪ್ರಿಯನಲ್ಲಯ್ಯಾ ನೀನು, ಶಾಸ್ತ್ರಪ್ರಿಯನಲ್ಲಯ್ಯಾ ನೀನು,
ನಾದಪ್ರಿಯನಲ್ಲಯ್ಯಾ ನೀನು, ಸ್ತೋತ್ರಪ್ರಿಯನಲ್ಲಯ್ಯಾ ನೀನು,
ಯುಕ್ತಿಪ್ರಿಯನಲ್ಲಯ್ಯಾ ನೀನು, ಮುಕ್ತಿಪ್ರಿಯನಲ್ಲಯ್ಯಾ ನೀನು,
ಇವೆಲ್ಲವಕ್ಕೆ ನೀನು ಅಸಾಧ್ಯ ಕಂಡಯ್ಯಾ!
ನೀನು ಭಕ್ತಿಪ್ರಿಯನೆಂದು ಮಱೆವೊಕ್ಕೆ
ಕಾಯಯ್ಯಾ ನೀನು ಕಪಿಲಸಿದ್ಧಮಲ್ಲಿಕಾರ್ಜುನಾ. ॥೪೭॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ನೀನು ಭಕ್ತಿಪ್ರಿಯನೆಂದು ನಂಬಿದೆನೆಂದು ಬಿನ್ನೈಸಲು, ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೧೬೭

ಭಕ್ತಿ ಯುಕ್ತಿಯನಾರು ಬಲ್ಲರು? ಬಲ್ಲವರನಾರನು ಕಾಣೆ.
ತನ್ನ ಮಱೆದು ಇದಿರ ಹಱಿದು ಇರಬಲ್ಲರೆ, ಆತ ಭಕ್ತ;
ಆ ಭಕ್ತಂಗೆ ಶಿವನೊಲಿವ,
ನುಡಿವ ನುಡಿಯಲ್ಲಿ ಭಕ್ತಿಯನಾಡಿ ನಡೆಯಿಲ್ಲದಿದ್ದರೆ
ಕಡೆ ಮುಟ್ಟಿ ಶಿವನೊಲಿವುದು ಹುಸಿ.

ಮಱೆದು ಕೋಪದುರಿಯನುಗುಳಿ, ಅಱೆದು ಬಂದೆಱಗಿದೆನೆಂಬ ನುಡಿಗೆ
ಒಲಿವನೆ ನಮ್ಮ ಗೊಹೇಶ್ವರಲಿಂಗವು? ॥೪೮॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು ಅದಕ್ಕೆ ಸಿದ್ಧರಾಮಯ್ಯದೇವರ ಬಿನ್ನಹ:

೧೬೮

ಎನ್ನ ಕೋಪವೆಂಬುದು ನಿಮ್ಮ ಕಣ್ಣು ನೋಡಯ್ಯಾ,
ನಾನೇತಱೊಳಗೇನು ಹೇಳಯ್ಯಾ?
ನಿನ್ನ ಜ್ಞಾನದ ತೇಜದ ಮುಂದೆ ಎನ್ನಱೆವೇತಱೆದು ಹೇಳಾ?
ಎನ್ನ ದಿಟದ ಭಕ್ತಿ ನಿಮ್ಮ ರೂಪು ಕಂಡಯ್ಯಾ.
ಎನ್ನ ಸಟೆಯ ಭಕ್ತಿಯೂ ನಿಮ್ಮ ರೂಪು ಕಂಡಯ್ಯಾ.
ಎನಗೆ ಬೇಱೆ ಸ್ವತಂತ್ರ ಉಂಟೆ ಕಪಿಲಸಿದ್ಧಮಲ್ಲಿನಾಥಾ? ॥೪೯॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೧೬೯

ಕೋಪತಾಪವೆಂಬುದು ಅಱೆವಿನೊಳಗೆ;
ಭಕ್ತಿಯುಕ್ತಿಯೆಂಬುದು ನಿತ್ಯದೊಳಗೆ.
ಭಾವದ ಬಗೆಗೆ ಬಣ್ಣವಿಟ್ಟುಕೊಂಡರೆ,
ನಿರ್ಭಾವಿಕಂಗೆ ಅದು ಸಹಜವಹುದೆ?
ಬಂದ ಶರಣರ ನಿಲವನಱೆದು,
ಸಂದು ಸಂಶಯವಳಿದು ನಂಬದಿದ್ದರೆ,
ಹಿಂದುಮುಂದಾಗಿ ಹೋಹನು ಕಾಣಾ ನಮ್ಮ ಗೊಹೇಶ್ವರಲಿಂಗವು. ॥೫೦॥

ಈ ಹೀಂಗೆಂದು ಪ್ರಭುದೇವರು ಮುನಿದು ಹಿಂದುಮುಂದಾಗಲು, ಸಿದ್ಧರಾಮತಂದೆಗಳು ಅಡ್ಡಬಿದ್ದು ಬಿನ್ನೈಸುವ ಪ್ರಸ್ತಾವದ ವಚನ:

೧೭೦

ಹಿರಿದು ಆಗ್ರಹದಿಂದ ನೀನೆನ್ನ ಮೇಲಿಕ್ಕಿ
ಒಲ್ಲೆ ಸಾರೆಂದು ಹೋಹೆ ಕಾಣಾ,
ಅಯ್ಯಾ, ಕೈಯ ಹಿಡಿದರೆ ಅಂತು ಮುರುಚುವೆ,
ಎನ್ನ ಉರದಲಪ್ಪಿ ಹಿಡಿದಡೆಂತು ಮುರುಚವೆ?
ನೀನಿಂತು ಹೋಹ ಪರಿಗಳ ನಿಲಿಸುವೆನು ಕೇಳು ಗಡಾ.
ಸೂಕ್ಷ್ಮ ತನುವಿನಲ್ಲಿ ಹಿಡಿದರೆ,
ಎಂತು ಮುರುಚುವೆ ಹೇಳಾ ಕಪಿಲಸಿದ್ಧಮಲ್ಲಿಕಾರ್ಜುನಾ? ॥೫೧॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೧೭೧

ಅಂಗದಲಪ್ಪಿದೆನೆಂದರೆ ಸಿಲುಕದು,
ಪ್ರಾಣದಲ್ಲಪ್ಪಿದೆನೆಂದರೆ ಸಿಲುಕದು.
ಭಾವದಲಪ್ಪಿದೆನೆಂದರೆ ಸಿಲುಕದು
ಸೂಕ್ಷ್ಮತನುವಿನ ಮನದ ಕೊನೆಯ ಮೇಲೆ ಅಪ್ಪಿದೆನೆಂದರೆ ಸಿಲುಕದು.
ಭಾವಾತೀತವಾದ ನಿರಾಕಾರದ ಘನವು
ಸುಜ್ಞಾನದ ಮುಖಕ್ಕೆ ಅಸಾಧ್ಯ ನೋಡಾ!
ಗೊಹೇಶ್ವರನ ಶರಣರನಿನ್ನಾವ ಪರಿಯಲ್ಲಿ
ತಡೆದು ನಿಲಿಸುವೆ ಹೇಳಾ ಸಿದ್ಧರಾಮಯ್ಯಾ? ॥೫೨॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ:

೧೭೨

ಎನ್ನನಾಗಳೆ ಬಂದಿವಿಡಿದೆ ಗಡಾ ನೀನು.
ನಿಮ್ಮ ಹಿಡಿವರೇ ಹಿಡಿವರು? ತನುವಿರೆ ತನು ಬೇಱಾದವರು?
ನಿಮ್ಮ ಹಿಡಿವರೇ ಹಿಡಿವರು? ಮನವಿರೆ ಮನ ಬೇಱಾದವರು?
ನಿಮ್ಮ ಹಿಡಿವರೇ ಹಿಡಿವರು? ಕೈಯಿರೆ ಕೈಬೇಱಾದವರು?
ನಿಮ್ಮ ಹಿಡಿವರೇ ಹಿಡಿವರು? ಕಣ್ಣಿರೆ ಕಣ್ಣು ಬೇಱಾದವರು?
ಇನಿಸುಳ್ಳವರು ಮೊದಲಾಗಿ ನಿಮ್ಮ ಹಿಡಿಯಲಾಱರು.
ಕಪಿಲಸಿದ್ಧಮಲ್ಲಿನಾಥಾ, ನಿಮ್ಮ ಹಿಡಿದು ತಡೆಯಲಾನೇತಱವನಲ್ಲ.
ಕರುಣದಿಂ ಬಾರಾ ಎನ್ನ ದೇವರದೇವಾ. ॥೫೩॥

ಈ ಹೀಂಗೆಂದು ಸಿದ್ಧರಾಮಯ್ಯದೇವರು [1]ಬಿನ್ನಪಂಗೆಯಿದು[1], ತಮ್ಮ ಮಠಕ್ಕೆ ಬಿಜಯಂಗೈವುದು ಎಂದೆನಲು, ಪ್ರಭುದೇವರು ನಿಮ್ಮ ಮಠವೆಂದೇನು? ಇದ್ದ ಠಾವಿನಲ್ಲಿದ್ದು ಭಕ್ತಿಯ ಮಾಡಿ ಪರಿಣಾಮಿ[2]ಸುವು[2]ದಲ್ಲದೆ ನಾವತ್ತ ಬರಲಾಱೆವೆಂದು ನಿರೂಪಿಸಿದ ಪ್ರಸ್ತಾವದ ವಚನ:

೧೭೩

ಗತಿಗೆಟ್ಟು, ಧೃತಿಗೆಟ್ಟು, ಮತಿಗೆಟ್ಟವ ನಾನಯ್ಯಾ.
ನಡೆವರೆ ಶಕ್ತಿಯಿಲ್ಲ; ನುಡಿವರೆ ಜಿಹ್ವೆಯಿಲ್ಲ.
ಇದಿರಲೊಬ್ಬರ ಉಪಚಾರ ಸೇರದು ನೋಡಾ ಎಮಗೆ.
ಬಂದ ಬರವನಱಿದು, ನಿಂದ ನಿಲವನಱಿದು ಕೂಡಬಲ್ಲಡೆ,
ಶರಣಂಗೆ ಬೇಱೊಂದೇಕಾಂತವೆಂಬ ಸಂದೇಹ ಉಂಟೇ?
ತೆಱಹಿಲ್ಲದ ಘನವನೊಳಕೊಂಡ ಬಳಿಕ,
ಬರಲೆಡೆಯುಂಟೆ ನಮ್ಮ ಗೊಹೇಶ್ವರಲಿಂಗಕ್ಕೆ? ॥೫೪॥

೧-೧ ಬಿನ್ನಪಂಗೈದು (ಮು) ೨-೨ ಸೂ(ಮೂ)

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಭಕ್ತವತ್ಸಲನೆನಿಸಿ ಇಲ್ಲಿಯ[೧] ಪರಿಯಂತರ ಬಿಜಯಂಗೈದು, ಇನ್ನು ಬಾರೆನೆಂಬುದಕ್ಕೆ ಕಾರಣವೇನೆಂದು ಸಿದ್ಧರಾಮಯ್ಯದೇವರು ಬೆಸಗೊಂಬ ಪ್ರಸ್ತಾವದ ವಚನ:

೧೭೪

ತೆಱಹಿಲ್ಲದ ಘನವು ಕುಱುಹಿಂಗೆ ಬಂದ ಕಾರಣವೇನು
ಹೇಳಾ ಎಲೆ ಅಯ್ಯಾ?
ಭಕ್ತಿ ಕಾರಣ ಇಚ್ಛೆಗೆ ಬಂದ ಬಳಿಕ ಉಪಚಾರಕ್ಕೆ ತೆಱಹುಂಟೆ?
ಕಪಿಲಸಿದ್ಧಮಲ್ಲಿನಾಥಾ ಬಿಜಯಮಾಡಾ ಕರುಣಿಗಳರಸಾ. ॥೫೫॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೧೭೫

ಭಕ್ತನಿದ್ದ ಠಾವಿಂಗೆ ಕರ್ತ ಬಂದರೆ,
ಅತ್ತಿತ್ತ ಹರಿಯದೆ ನಂಬಬೇಕು ನೋಡಾ!
ಕರ್ತನ ಕಂಡು ಭೃತ್ಯನುರಿಯನುಗುಳಿದರೆ,
ಬಳಿಕ[೨]ಲೀ[೨] ಕರ್ತೃತನ ಭೃತ್ಯಭಾವಕ್ಕೆ ಸಂಬಂಧವೇನು?
ತಪ್ಪಿ ತಪ್ಪಿ ತಿದ್ದಿಕೊಂಡಿಹೆನೆಂದರೆ ಹಸನಾಗಬಲ್ಲುದೇ?
ಗೊಹೇಶ್ವರಲಿಂಗನ ಶರಣನಾರೆಂಬುದ
ನೀನೆತ್ತ ಬಲ್ಲೆ ಹೋಗಾ ಮರುಳು ಸಿದ್ಧರಾಮಾ! ॥೫೬॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಸಿದ್ಧರಾಮಯ್ಯದೇವರು ನೊಂದು ಅತ್ಯಂತ ಭೀತಿಯ[೩]ನೈದಿ[೩] ಬಿನ್ನೈಸಿದ ಪ್ರಸ್ತಾವದ ವಚನ:

೧೭೬

ಎನ್ನ ಒಳಗನೊತ್ತಿ ನೋಡುವಿರಿ. ಎನ್ನಲೇನುಂಟಯ್ಯಾ?
ನುಡಿಯಿಲ್ಲದಭವ ನೀನು ನುಡಿಗಲಿತೆನೆಂದರೆ,
ನಿಮ್ಮನೊಡಂಬಡಿಸಲಾನು ಸಮರ್ಥನೇ?
ಅನಂತ ವೇದಂಗಳೆಲ್ಲವು
ನಿಮ್ಮ ಮುಂದೆ ಉಸುರಿಕ್ಕಲಮ್ಮದೆ ಮೂಗರಾಗಿರ್ದವು.
ನಿಮಗಾನಿದಿರುತ್ತರವ ಕೊಟ್ಟು, ಕೆಟ್ಟ ಕೇಡಿಂಗೆ ಏನೆಂಬೆನೆಲೆಯಯ್ಯಾ!
ಕಪಿಲಸಿದ್ಧ ಮಲ್ಲಿಕಾರ್ಜುನಾ,
ನಾನುಭಯಭ್ರಷ್ಟನೆಂಬುದ ನೀವೆ ಬಲ್ಲಿರಿ. ॥೫೭॥

ಮತ್ತಂ,

೧X(ಮೂ) ೨-೨ X(ಮೂ) ೩-೩ ನೆಯ್ದಿ(ಮು)

೧೭೭

ಅಯ್ಯಾ, ನಿಮ್ಮ ಕಂಡ ಕಾಣಿಕೆಯಲ್ಲಿ
ನಂಬಿ ನಚ್ಚಿ ಶರಣುವೊಗಲಱಿಯದೆ
ಕೆಮ್ಮನೆ ಅಹಂಕಾರವ ಹೊತ್ತುಕೊಂಡು ಕೆಟ್ಟೆ ನೋಡಯ್ಯಾ!
ಕೆಡಿಸಿ ಮಱುಗಿ ಅಱಿಸಿಹೆನೆಂಬ ಮರುಳ ನಾನಯ್ಯಾ!
ಕಪಿಲಸಿದ್ಧಮಲ್ಲಿನಾಥಯ್ಯಾ, ಹಾಲಲದ್ದು ನೀರಲದ್ದು,
ನೀನೆ ಗತಿ, ನೀನೆ ಮತಿ. ॥೫೮॥

ಮತ್ತಂ,

೧೭೮

ಎನ್ನ ಭರಭಾರ ನಿಮ್ಮದಯ್ಯಾ!
ಎನ್ನ ಹಾನಿವೃದ್ಧಿ ನಿಮ್ಮದಯ್ಯಾ!
ಎನ್ನ ಕರಕರ ಕಾಡದಿರು ತಂದೆ!
ನಿನ್ನ ಕಾಟವೆನ್ನ ಪ್ರಾಣದೋಟ.
ಕಪಿಲಸಿದ್ಧಮಲ್ಲಿನಾಥಾ,
ಕೊಲ್ಲು ಕಾಯಿ, ನಿಮ್ಮ ಧರ್ಮದವ ನಾನು, ॥೫೯॥

ಇಂತು ಕಿಂಕುರ್ವಾಣದಿಂದಿರ್ಪ ಸಿದ್ಧರಾಮಯ್ಯದೇವರು ಪ್ರಭುದೇವರ ಚರಣದ ಮೇಲೆ ಬಿದ್ದು ಅಳುತ್ತಿರಲು, ಆ ಪ್ರಭುದೇವರು ಕರುಣದಿಂದ ಶಿರವ ಹಿಡಿದೆತ್ತಿದ ಪ್ರಸ್ತಾವದ ವಚನ:

೧೭೯

ಹೊಱಗಾಡಿ ಬಂದನೆಂದು ನುಡಿಸಲೊಲ್ಲದೆ ಸುಮ್ಮನಿದ್ದೆನು.
ಎನ್ನ ಮನ ನೊಂದು ತಾಗಿದರೆ, ನಿಮ್ಮತ್ತ ಮುಂದಾದೆನು.
ಬಿಕ್ಕುತ್ತ ಬೆದಱುತ್ತ ಕಾಲ ಮೇಲೆ ಬಿದ್ದರೆ,
ಕಂಗಳ ಉದಕ ಮಜ್ಜ[1]ನಕ್ಕೆಱೆ[1]ದಂತಾಯಿತ್ತು.
ಅಂತಿರ್ದರೆ ಕಂಡು ನೆಗಹಿದನು ನಮ್ಮ ಗೊಹೇಶ್ವರಲಿಂಗವು. ॥೬೦॥

ಇಂತು ಅಳುತ್ತಿಪ್ಪ ಸಿದ್ಧರಾಮಯ್ಯದೇವರು ಬಿನ್ನೈಸಿದ [2]ಪ್ರಸ್ತಾವದ[2] ವಚನ:

೧೮೦

ಎನ್ನ ತನು ಕರಗಿ, ಮನ ಕೊರಗಿದ ದುಃಖವಿದಾರದಯ್ಯಾ?
ಅಯ್ಯಾ ಅಯ್ಯಾ ಎಂದು ಅಳುವ ಅಕ್ಕೆ ಇದಾರದಯ್ಯಾ?
ಮಱಹೆಂಬ ಕೂರಸಿಗೆ ಗುಜಿಮಾಡಿದವರಾರಯ್ಯಾ?
[3]ಹಾ! ಹಾ!![3] ಎಂಬ ಧ್ವನಿಯ ಕೇಳಲಾಱದೆ,

೧-೧ ನೆಱ(ಮೂ) ೨-೨x(ಮೂ) ೩-೩ ಆಹಾ(ಮೂ)

ಕಂಡು ಕರುಣದಿಂದ ಶಿರವ ಹಿಡಿದೆತ್ತಿ,
ಎನ್ನ ಕಣ್ಣ ನೀರ ತೊಡೆದನು ಕಪಿಲಸಿದ್ಧ ಮಲ್ಲಿನಾಥಯ್ಯನು. ॥೬೧॥

ಇಂತು ಸಿದ್ಧರಾಮಯ್ಯದೇವರ ಕಿಂಕುರ್ವಾಣಮಂ ಕಂಡು, ಕೃಪೆಯಿಂದ ಶಿರವ ಹಿಡಿದೆತ್ತಿ, ಕಣ್ಣ ನೀರ ತೊಡೆದು, ಆ ಪ್ರಭುದೇವರು ಪ್ರಸನ್ನರಾಗಿ, ಪರಮಯೋಗಿ, ಶುದ್ಧಸಾತ್ತ್ವಿಕಯೋಗಿ, ಸಚ್ಚಿದಾನಂದಯೋಗಿ, ನಿತ್ಯ ಪರಿಪೂರ್ಣಯೋಗಿ, ಶಿವಯೋಗಾಮೃತ ಸೇವ್ಯ ಸಂತುಷ್ಟಯೋಗಿ, ಪರಮಾನಂದಯೋಗಿ, ಸಕಲಕರಣ ಮರಣ ರಹಿತಯೋಗಿ, ಸರ್ವೇಂದ್ರಿಯಸುಖ ನಿರ್ಮೂಲಯೋಗಿ, ಸಂಸಾರವನದಾವಾನಲಯೋಗಿ, ಮಾಯಾಹರಯೋಗಿ, ಮಾಯಾಮದದೂರಯೋಗಿ, ಮಾಯಾಮದ ಮಥನಯೋಗಿ, ಸಗುಣಯೋಗಿ, ಸನ್ನಿಧಾನಯೋಗಿ, ನಿರ್ಗುಣಯೋಗಿ, ನಿರಂಜನಯೋಗಿ, ಸಕಲನಿಷ್ಕಲ ತತ್ತ್ವಶಿರೋರತ್ನಯೋಗಿ, ಅಖಂಡ ಪರಿಪೂರ್ಣಯೋಗಿ, ಅಪ್ರಮಾಣಗುಣ ಭರಿತಯೋಗಿ, ಅಪ್ರತರ್ಕ್ಯಚಾರಿತ್ರಯೋಗಿ, ಅಸಾಧ್ಯಸಾಧಕಯೋಗಿ, ಅಭೇದ್ಯಭೇದಕಯೋಗಿ, ಸುಜ್ಞಾನಪ್ರಭಾಮಯಯೋಗಿ, ಮಹಾಜ್ಞಾನೈಕ್ಯಚೈತನ್ಯಯೋಗಿ, ಕಾಯಗುಣಧರ್ಮಕರ್ಮ ಸಂಹಾರಯೋಗಿ, ಬ್ರಹ್ಮಾಂಡಸಂದೋಹಸಂಭೂತ ಕಾರಣಯೋಗಿ, ನಿರವಯನಿರ್ಲೇಪ ನಿಃಪಾಪಯೋಗಿ, ಇಹಲೋಕ ಪರಲೋಕಗತಿರಹಿತಯೋಗಿ ಎಂದು ಕೊಂಡಾಡಿ, ಆ ಸಿದ್ಧರಾಮಯ್ಯದೇವರ ಬಿಗಿಯಪ್ಪಿಕೊಂಡ ಪ್ರಸ್ತಾವದ ವಚನ:

೧೮೧

ನಿಮ್ಮಲ್ಲಿ ಸನ್ನಿಹಿತನಾಗಿ ನಿಜವನಜಿತು
ಬೆರಸಿದ ಶಿವಯೋಗಿಯ ಕಂಡರೆ,
ಎನ್ನ ಮನವಗಲಲಾಜಿದಯ್ಯಾ!
ಎನ್ನ ತನುವಪ್ಪದಿರಲಾಜಿದಯ್ಯಾ!
ಎನ್ನ ಶಬುದ ಹೊಗಳಿದಲ್ಲದೆ ಸೈರಿಸದಯ್ಯಾ!
ಗೊಹೇಶ್ವರಾ, ನಿಮ್ಮ ಶರಣ ಶಿವಯೋಗಿ ಸಿದ್ಧರಾಮಯ್ಯನನಪ್ಪಿ
ಸೊಪ್ಪಳಿದು ನಮೋ ನಮೋ ಎನುತಿರ್ದೆನು! ॥೬೨॥

[1]ಮತ್ತಂ,[1]

೧೮೨

ಕಾಯದೊಳಗೆ ಕರಣವಿಲ್ಲ; ಪ್ರಾಣದೊಳಗೆ ಭಾವವಿಲ್ಲ.
ಭಾವದೊಳಗೆ ಭ್ರಮೆಯಿಲ್ಲ;
ನವನಾಳದೊಳಗೆ ಸುಳುಹು ಮುನ್ನಿಲ್ಲ.
ಬ್ರಹ್ಮರಂಧ್ರದಲ್ಲಿ ಅಜಿವಜಿತ ಶಿವಯೋಗಿ
ಗೊಹೇಶ್ವರನ ಶರಣ ಸಿದ್ಧರಾಮಯ್ಯಾ,
ನಿನ್ನ ಕಂಡೆನ್ನ ಭವಂ ನಾಸ್ತಿಯಾಯಿತ್ತು ಕೇಳಾ! ॥೬೩॥

೧-೧ X(ಮೂ)

ಮತ್ತಂ,

೧೮೩

ಯೋಗ ಶಿವಯೋಗವೆಂದೆಂಬರು,
ಯೋಗದ ಹೊಲಬನಾರು ಬಲ್ಲರಯ್ಯಾ?
ಹೃದಯಕಮಲದ ಪತ್ರದಲ್ಲಿ
ಭ್ರಮಿಸುವನ ಕಳೆದಲ್ಲದೆ ಯೋಗವೆಂತಪ್ಪುದೋ?
ಐವತ್ತೆರಡಕ್ಷರದ ಲಿಪಿಯ ನೋಡಿ ನೋಡಿ
ಆಱು ನೆಲೆಯ ಮೇಲಿಪ್ಪ ಮಣಿಮಾಡದೊಳಗೆ ಇರಬಲ್ಲಡೆ,
ಅದು ಯೋಗ. ಸೋಹಂ ಎಂಬಲ್ಲಿ ಸುಳುಹಡಗಿ,
ಮನ ನಷ್ಟವಾಗಿರಬಲ್ಲ ಕಾರಣ,
ಗೊಹೇಶ್ವರಲಿಂಗದಲ್ಲಿ ನೀನು ಸ್ವತಂತ್ರಧೀರನೆಂಬುದು
ಕಾಣಬಂದಿತ್ತು ಕಾಣಾ ಸಿದ್ಧರಾಮಯ್ಯಾ. ॥೬೪॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಸಿದ್ಧರಾಮಯ್ಯದೇವರ ಬಿನ್ನಹ:

೧೮೪

ಯೋಗದ ಹೊಲಬ ನಾನೆತ್ತ ಬಲ್ಲೆನಯ್ಯಾ?
ಯೋಗ ಶಿವಶಕ್ತಿ ಸಂಪುಟವಾಗಿಪ್ಪುದಲ್ಲದೆ,
ಶಿವಶಕ್ತಿ ಪಿಯೋಗವಪ್ಪ ಯೋಗವಿಲ್ಲ[1]ಯ್ಯಾ.
ಹೃದಯ ಕಮಲದೊಳಗೆ ಭ್ರಮಿಸದೆ ಇಪ್ಪಾತ ನೀನೆಯಲ್ಲದೆ,
ಎನಗೆ ಬೇಱೆ ಸ್ವತಂತ್ರವಿಲ್ಲ ಕೇಳಾ ಕಪಿಲಸಿದ್ಧಮಲ್ಲಿಕಾರ್ಜುನಾ. ॥೬೫॥

ಮತ್ತಂ,

೧೮೫

ಉತ್ಪತ್ಯ ಸ್ಥಿತಿ ಲಯವಿಲ್ಲದಭವನು ನೀನು ಕಂಡಯ್ಯಾ!
ಎನಗೆ ಬೇಱೆ ಸ್ವತಂತ್ರವಿಲ್ಲ ಕೇಳಾ.
ನಿನ್ನ ಇಚ್ಛಾ ಮಾತ್ರದಲ್ಲಿ ನಾನಿಪ್ಪೆನು.
ಹಿರಿಯ ನೀನೆ, ದೇವ ನೀನೆ ಕಪಿಲಸಿದ್ಧಮಲ್ಲಿಕಾರ್ಜುನಾ,
ನಾನೇತಱೊಳಗಪ್ಪೆನು ಹೇಳಾ ಪ್ರಭುವೆ? ॥೬೬॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೧೮೬

ಮನ ಮನ ಬೆರಸಿದವರೆಂತಿರ್ಪರಂತಿರ್ಪರವರ ಪರಿಯನಱಿಯಬಾರದು ಕೇಳಾ!
ಇದಿರಿಂಗೆ ಇಚ್ಛೆಯಱಿಯದಿಪ್ಪರು.

೧+ ವ (ಮು)

ಒಳಗೆ ನೋಡಿದರೆ ಬಟ್ಟಬಯಲಲಿಪ್ಪರು.
ಗೊಹೇಶ್ವರನ ಶರಣರು ತಾವಿಲ್ಲದ ಮಹಿಮರೆಂಬುದ
ನಿನ್ನಿಂದಱಿದೆ ನೋಡಾ ಸಿದ್ಧರಾಮಯ್ಯಾ! ||೬೭||

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರ ಬಿನ್ನಹ:

೧೮೭

ಅಪ್ಪುದನಲ್ಲದುದನೊಪ್ಪವ ಮಾಡುವಿರಿ.
ಅಯ್ಯಾ, ನಿಮ್ಮೊಲವು ಚೆಲುವು ಕಂಡಯ್ಯಾ!
ನೀನಿಂತು ನೋಡಿದರಂತಿರ್ಪುದಲ್ಲದೆ,
ಅಪ್ಪುದಲ್ಲವೆಂಬವರಿಲ್ಲ ಕಾಣಾ ಕಪಿಲಸಿದ್ಧಮಲ್ಲಿಕಾರ್ಜುನಾ. ||೬೮||

ಈ ಹೀಂಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಆ ಬಿನ್ನಹಕ್ಕೆ ಪ್ರಭುದೇವರು ಸಂತೋಷಿಸಿದ ಪ್ರಸ್ತಾವದ ವಚನ:

೧೮೮

ಸ್ವತಂತ್ರ ಪರತಂತ್ರಕ್ಕೆ ಆವುದು ಚಿಹ್ನ ನೋಡಾ,
ತಾನೆಂಬುದಳಿದು, ಇದಿರೆಂಬುದ ಮಱೆದು
ಭಾವ ದಗ್ಧವಾಗಿರಬಲ್ಲಡೆ, ಅದು ಸ್ವತಂತ್ರ.
ನೀನೆಂಬುದ ಧಿಃಕರಿಸಿ, ತಾನೆಂಬುದ ನಿಃಕರಿಸಿ
ಉಭಯಭಾವದಲ್ಲಿ ಸನ್ನಿಹಿತವಾಗಿರಬಲ್ಲಡೆ ಪರತಂತ್ರ.
ಸ್ವತಂತ್ರ ಪರತಂತ್ರವೆಂಬೆರಡನೂ ವಿವರಿಸಿ,
ತನ್ನ ಮಱೆದಿಪ್ಪನೆ ಉಪಮಾತೀತನು.
ಗೊಹೇಶ್ವರನ ಶರಣರು ದೇಹವಿಲ್ಲದ ನಿರ್ದೇಹಿಗಳೆಂಬುದು
ಇಂದೆನಗೆ ಕಾಣಬಂದಿತ್ತು ನೋಡಾ ಸಿದ್ಧರಾಮಯ್ಯಾ. ||೬೯||

ನೀನು ನಿರ್ದೇಹಿ ಎಂದು ಎನಗೆ ಅಱಿಯಬಂದಿತ್ತೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ:

೧೮೯

ಮಾತುಳ್ಳನ್ನಕ್ಕರ ದೇಹ ಹಿಂಗದು.
ನೆನಹುಳ್ಳನ್ನಕ್ಕರ ಪ್ರಾಣಸೂತಕ ಬಿಡದು.
ಕಾಯ ಜೀವದ ಹೊಲಿಗೆಯ ಸಂದ ಬಿಚ್ಚಲಱಿಯೆನು.
ಆನು ನಿರ್ದೇಹಿ ಎಂದರೆ ನಗರೇ ನಿಮ್ಮ ಪ್ರಮಥರು?
ಎನ್ನ ಅಂತರಂಗದಲುಳ್ಳ ಅವಗುಣವ ಹಿಂಗಿಸಿ
ನಿನ್ನಂತೆ ಮಾಡಿದಡಾನುಳಿವೆನಲ್ಲದೆ,
ಬೇಱೆ ಗತಿಯ ಕಾಣೆ ನೋಡಾ
ಅಯ್ಯಾ ಕಪಿಲಸಿದ್ಧಮಲ್ಲಿನಾಥಾ,
ಹಿಂದೆ ಇಲ್ಲದಡೇನು ಮುಂದೆಂತಪ್ಪುದು? ||೭೦||

ಈ ಬಿನ್ನಪಕ್ಕೆ ಪ್ರಭುದೇವರು ಮೆಚ್ಚಿ ಆ ಸಿದ್ಧರಾಮಯ್ಯದೇವರ ಕೈವಿಡಿದುಕೊಂಡು ಏಕಾಂತಸಮಾಧಿಸ್ಥಾನಕ್ಕೆ ಬಿಜಯಂಗೆಯ್ವ ಪ್ರಸ್ತಾವದ ವಚನ:

೧೯೦

ಅಹುದಹುದು, ಭಕ್ತಿ ಭಾವದ ಭಜನೆ ಎಂತಂತಿಹುದು.
ಅಂತರಂಗದ ಅರಿವಿಂಗೆ ಆಚಾರವೇ ಕಾಯ.
ಆಚಾರ ಕಾಯವಿಲ್ಲದಡೆ ಅಱಿವಿಂಗೆ ಆಶ್ರಯವಿಲ್ಲ.
ಅಱಿವು ಆಚಾರದಲ್ಲಿ ಸಮವೇಧಿಸಿದ ಲಿಂಗೈಕ್ಯನ
ಕ್ರಿಯಾಬದ್ಧನೆಂದು ನುಡಿದರೆ ಪಂಚಮಹಾಪಾತಕ.
ನಿನ್ನ ಅಱಿವಿಂಗೆ ಅಚ್ಚಾಗಿ ಆಚಾರಕ್ಕೆ ಆಳಾಗಿ,
ನಮ್ಮ [1]ಗೊಹೇಶ್ವರ[1]ನು ನಿನ್ನ ಕೈವಶಕ್ಕೆ ಒಳಗಾದನು.
ನಿನ್ನ ಸುಖಸಮಾಧಿಯ ತೋಱು ಬಾರಾ ಸಿದ್ಧರಾಮಯ್ಯಾ. ॥೭೧॥

ಇಂತು ಸಿದ್ಧರಾಮಯ್ಯದೇವರನ್ನು ಕೈವಿಡಿದುಕೊಂಡು ಪ್ರಭುದೇವರು ಏಕಾಂತ ಸಮಾಧಿಗೆ ಬಿಜಯಂಗೈವ ಪ್ರಸ್ತಾವದೊಳು ಸಿದ್ಧರಾಮಯ್ಯತಂದೆಗಳು ಬಿನ್ನೈಸಿದ ಪ್ರಸ್ತಾವದ ವಚನ:

೧೯೧

ಎಮ್ಮ ನಲ್ಲನೊಲಿದು ಒಲಿಸಿ ಕಾಡುತ್ತಿದ್ದರೆ,
ಬಾರಾ ಬಾರಾ ಎಂದೆನ್ನ ಕರುಣ ಹರಣವ ತೋಱಿದರೆ,
ತಾನೆ ಒಲಿದು ಬಂದೆನ್ನ ತಲೆಯ ಹಿಡಿದು ನೆಗಹಿ,
ಎನ್ನ ಮನೆಗೆ ಬಂದ ಕಪಿಲಸಿದ್ಧಮಲ್ಲಿನಾಥನ
ಒಲುಮೆಯ ಘನವನೇನೆಂದುಪಮಿಸುವೆನು! ॥೭೨॥

ಇಂತು ಪ್ರಭುದೇವರು ಮಠಕ್ಕೆ ಬಿಜಯಂಗೈಯ್ದಲ್ಲಿ, ಆ ಸಿದ್ಧರಾಮಯ್ಯದೇವರು ತಮ್ಮ ಮೇಲಣ ಕೃಪೆಯಿಂದ ಬಂದರೆಂದು ಬಿನ್ನೈಸುವ ಪ್ರಸ್ತಾವದ ವಚನ:

೧೯೨

ಅಂಗವಳಿದು ನಿಂದವನೆಂದು ನಾನಱಿಯೆ.
ಘನಲಿಂಗದಲ್ಲಿ ಸಲೆ ಸಂದವನೆಂದು ನಾನಱಿಯೆ.
ಆವ ವೇಷದಲ್ಲಿ ಬಂದು ನಿಂದ ಠಾವನಱಿಯೆ.
ಕ್ರೋಧವೆಂಬ ಸಂಸಾರದ ಸಾಗರದಲ್ಲಿ ಸಾಧನೆಯ ಮಾಡಲಾಗಿ,
ಪ್ರಭುದೇವರ ಸುಳುಹು ಅಘಟಿತವಾಯಿತ್ತು.
ಕಪಿಲಸಿದ್ಧಮಲ್ಲಿಕಾರ್ಜನಾ! ॥೭೩॥

೧-೧ ಗೊಗ್ಗೇಶ್ವರ(ಮೂ)

ಇಂತು ಸಿದ್ಧರಾಮದೇವರು ಪ್ರಭುದೇವರಿಗೆ ತಮ್ಮ ಹೃದಯ ಕಮಲವೆಂಬ ಸಿಂಹಾಸನವನಿಕ್ಕಿ, ಪಾದಾರ್ಚನೆಯ ಮಾಡಿ, ಷೋಡಶೋಪಚಾರದಿಂದರ್ಚಿಸಿ, ಪೂಜಿಸಿ, ಪಾದೋದಕಮಂ ಕೊಂಡು ಪರಮಹರುಷವನ್ನೈದಿದ ಪ್ರಸ್ತಾವದ ವಚನ:

೧೯೩

ಅಯ್ಯಾ ಅಯ್ಯಾ, ನೀವು ಬಾರದಿರ್ದಡೆ ಅಂತು ಹಂಬಲಿಸುತ್ತಿದ್ದೆ!
ನೀನೆನ್ನ ಹಂಬಲ ಕೇಳಿ ಕರುಣದಿಂದ ಭೋರನೆ ಬಂದರೆ,
ಆನು ತಳವೆಳಗಾಗಿ ಅವಗುಣವೆಂಬ ರಜವ ಕಳೆದು,
ಕಂಬಳಿಯ ಪೀಠವನೊಲ್ಲದೆ ಹೃದಯಪೀಠವನಿಕ್ಕಿ
ಮೇಲುಪ್ಪರಿಗೆಯ ಒಱತೆಯ ತಂದು ಪಾದಾರ್ಚನೆಯ ಮಾಡಿ,
ಎರಡೆಸಳ ಕಮಳವನೆರಡು ಪಾದಕ್ಕೆ ಪೂಜಿಸಿ,
ಕಂಗಳ ತಿರುಳ ತೆಗೆದು ಆರತಿಯನೆತ್ತಿ,
ಉಸುರ ನುಂಗಿದ ಪರಿಮಳದ ಧೂಪವ ಬೀಸಿ,
ನೆತ್ತಿಯ ಪರಿಯಾಣದೊಳಿಟ್ಟು, ಬೋನವ ಗಡಣಿಸಿದರೆ,
ಸಯದಾನ ಸವೆಯದೆ ಆರೋಗಣೆಯ ಮಾಡಿ,
ಉಂಡ ಬಾಯ ತೊಳೆದರೆ ಸಂದೇಹವಾದುದೆಂದು
ಮೇಲುಸೆಱಗಿನೊಳು ತೊಡೆದುಕೊಂಡು,
ಬಾಯ ಮುಚ್ಚಳ ತೆಗೆಯದೆ ತ್ರಿಕರಣವೆಂಬ ತಾಂಬೂಲವನವಧರಿಸಿದ;
ಭಾವದ ಕನ್ನಡವ ಹಱಿದು ಹಾಯ್ಕಿದ,
ಆತನ ಪಾದಕ್ಕೆ ನಾನು ಶರಣೆಂದು ಪಾದೋದಕವ ಕೊಂಡೆ.
ಆತನ ಪ್ರಸಾದಕ್ಕೆನ್ನ ಸೆಱಗ ಹಾಸಿ ಆರೋಗಿಸಿ ಸುಖಿಯಾದೆನು.
ಕಪಿಲಸಿದ್ಧಮಕಾರ್ಜುನಯ್ಯಾ,
ನಿಮ್ಮ ಶರಣ ಪ್ರಭುದೇವರ ಕರುಣವೆನಗೆ
ಸಾಧ್ಯವಾದ ಪರಿಯನೇನೆಂದುಪಮಿಸುವೆನು! ॥೭೪॥

ಇಂತು ಪ್ರಭುದೇವರ ಶ್ರೀಪಾದವನು ಅಷ್ಟವಿಧಾರ್ಚನೆ ಷೋಡಶೋಪಚಾರದಿಂ ಪೂಜಿಸಿ ಸಿದ್ಧರಾಮಯ್ಯದೇವರು ಕೃಪೆಯಿಂದಲೆನ್ನ ಬೋಧಿಸಿ ಎಂದು ಬಿನ್ನೈಸುವ [1]ಪ್ರಸ್ತಾವದ[1] ವಚನ:

೧೯೪

ಆದಿಯಿಂದ ನಿಮ್ಮಿಂದಲಾದೆನಯ್ಯಾ!
ಅನಾದಿಯಲ್ಲಿ ನಿಮ್ಮಲ್ಲಿ ತದುಗತನಾಗಿದ್ದೆನಯ್ಯಾ!
ನಿಮ್ಮ ಹಸ್ತ ಮುಟ್ಟಿದಲ್ಲಿ,
ನಿಮ್ಮನೆನ್ನ ಮನದೊಳಗಿಟ್ಟುಕೊಂಡಿದ್ದೆನಯ್ಯಾ!

೧–೧ X (ಮೂ)

ಕಾಯವೆಂಬ ಕಪಟವನೊಡ್ಡಿ ನಿನ್ನ ಮಱೆಸಿಕೊಂಡಿದ್ದರೆ,
ನಿನ್ನ ಬೆಂಬಳಿಯ ಸಂದು ನಿಮ್ಮ ಕಂಡೆನಯ್ಯಾ!
ಕಪಿಲಸಿದ್ಧಮಲ್ಲಿನಾಥಯ್ಯಾ,
ಎನ್ನ ಅಂತರಂಗವ ಶುದ್ಧವ ಮಾಡಿ ತಿಳುಹಾ ನಿಮ್ಮ ಧರ್ಮ. ॥೭೫॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರ ಬಿನ್ನಹ:

೧೯೫

ಆದಿಯಲ್ಲಿ, ಗುರುಬೀಜವಾದ ಪಿಂಡಕ್ಕೆ
ಅನಾದಿ ಎಂಬುದನೊಬ್ಬರು ತಿಳುಹಲುಂಟೇ?
ಆದಿ ಕಾಯ, ಅನಾದಿ ಪ್ರಾಣವಾಗಿಪ್ಪ ಯೋಗವ ಭೇದಿಸಿ
ತನ್ನೊಳಗೆ ತಾನೆ ತಿಳಿದು ನೋಡಲು,
ಕೋಹಂ ಎಂಬುದು ತಾನೆ ಸತ್ಯ ನೋಡಾ!
[೧]ಗೊಹೇಶ್ವರ[೧]ಲಿಂಗದ ನಿಲವು ಹೇಳಿ ಕಂಡೆಹೆನೆಂದರೆ
ಅಸಾಧ್ಯ ಕಾಣಾ ಸಿದ್ಧರಾಮಯ್ಯಾ. ॥೭೬॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರ ಬಿನ್ನಹ:

೧೯೬

ಎಲೆ ಅಯ್ಯಾ, ನಿನ್ನ ಬೆಳಗಿನ ಪರಿಯ ಕೇಳು ಕಂಡಾ!
ನಾನಾರೆಂಬುದ ತಿಳಿದು ನೋಡಿ
ಕಂಡು ಕಂಡು ಬೆಳಗ ಕಾಬ ಪರಿ ಎಂತು ಹೇಳಾ?
ಕಂಡುದ ಕಂಡು, ಕಾಯದೊಳಗೆ ಸಂತವಿಡುವ ಪರಿ ಎಂತಯ್ಯಾ?
ಕಪಿಲಸಿದ್ಧಮಲ್ಲಿನಾಥಯ್ಯಾ,
ನೀನೆನ್ನ ಮನವ ತಿಳಿವಡೆ ಅಸಾಧ್ಯ ಉಂಟೇ ದೇವರದೇವಾ? ॥೭೭॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ವಚನ:

೧೯೭

ತನ್ನನಱಿಯೆನೆಂಬುದು ಅಜ್ಞಾನ ನೋಡಾ.
ಅಱಿಯದ ಅಜ್ಞಾನವನತಿಗಳೆದು,
ಜ್ಞಾನವ ಕಾಣೆನೆಂಬುದು ವಿಪರೀತ ಭಾವ ನೋಡಾ.
ಎಲ್ಲವನು ತೋಱುವ ಘನವನೆಲ್ಲಿಯೂ ಕಾಣಬಾರದು.
ಕಾಣಬಾರದ ನಿಜವ ತೋಱಬಾರದು.

೧–೧ ಗೊಗ್ಗೇಶ್ವರ(ಮೂ)

ತೋಱಬಾರದ ಮಹವ ತಿಳಿಯಬಹುದೆ?
[೧]ಗೊಹೇಶ್ವರ[೧]ಲಿಂಗದಲ್ಲಿ ಬಯಕೆಯುಳ್ಳನ್ನಕ್ಕರ
ತವಕವೆಡೆಗೊಂಡಿಪ್ಪ ಕಾರಣ,
ತಿಳುಹಲಿಲ್ಲವೆಂಬುದ ನಿನ್ನ ನೀ ತಿಳಿದು ನೋಡಾ
ಸಿದ್ಧರಾಮಯ್ಯಾ. ॥೭೮॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ:

೧೯೮

ಕಂಡ ಕನಸು ದಿಟವಾಗಿ ಕಂಡೆನೆಂಬೆ.
ಕಂಡೆನೆಂಬುದು ಬೆನ್ನ ಬಿಡದು ನೋಡಾ.
ಕಂಡುದ ಕಾಣೆನೆಂಬುದ ಎರಡನೂ ಅಱಿಯದೆ,
ತವಕ ತಲ್ಲಣಕ್ಕೆ ಎಡೆಯಾದೆನು.
ತವಕದ ಕೂಟ ನಿಮ್ಮಲ್ಲಿ ತದುಗತವಾದೆನು.
ಕಪಿಲಸಿದ್ಧ ಮಲ್ಲಿನಾಥಯ್ಯಾ,
[೨]ನಿಮ್ಮ[೨] ಕರುಣವೆನಗೆ ಸಾಧ್ಯವಾಯಿತ್ತು. ॥೭೯॥

ಕೂಡುವ ತವಕವೆ ನಿಮ್ಮಲ್ಲಿ ಸಮರಸವಾದೆನೆಂದು[೩] ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೧೯೯

ಬಯಕೆ ಎಂಬುದು ದೂರದ ಕೂಟ.
ಬಯಸೆನೆಂಬುದು ಕೂಟದ ಸಂದು.
ಈ ಉಭಯವು ಕಪಟದ ಕನ್ನಡವಲ್ಲದೆ ಸಹಜವಲ್ಲ.
ಕೂಡಿ ಕಂಡ ಪರಿಯೆಂತು ಹೇಳಾ ಇನ್ನು ಲಿಂಗೈಕ್ಯವನು?
ಕೂಪ ಠಾವಿನಲ್ಲಿ ಪರವಶವಾದೆನೆಂಬ ಮಾತ
ಮೆಚ್ಚುವನೆ ನಮ್ಮ [೪]ಗೊಹೇಶ್ವರ[೪]ಲಿಂಗವು? ॥೮೦॥

ಇಂತು ಲಿಂಗದಲ್ಲಿ ಕೂಪರಾಗಿದ್ದಲ್ಲಿ ಭೇದಬುದ್ಧಿ ಎಡೆಗೊಂಡಿಪ್ಪುದಲ್ಲದೆ ಸಮರಸ ಭಾವವಿಲ್ಲೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ:

೨೦೦

ನೀ ಕೂಪನಾಗಿದ್ದಲ್ಲಿ ಕೂಪೆ ನೋಡಯ್ಯಾ.
ನೀ ಒಲ್ಲದಿದ್ದರೆ ಒಲ್ಲೆ ನೋಡಯ್ಯಾ.
ಎನ್ನಱಿವು ಮಱವೆ ಇಬ್ಬರಿಗೂ ಸಮ ನೋಡಾ.

೧–೧ ಗೊಗ್ಗೇಶ್ವರ(ಮೂ) ೨–೨ ನಿಂದು (ಮೂ) ೩+ಸಿದ್ಧಕಾರಸನಾದೆನೆಂದು(ಮೂ) ೪–೪ ಗೊಗ್ಗೇಶ್ವರ (ಮೂ)

ಎನ್ನ ಬಯಕೆಯೊಳಗಣ ಬಯಕೆಯ ನಿಧಾನವ
ನೀನೆಂದು ಕಂಡ ಬಳಿಕ,
ಬಯಸುವಾತನೂ ನೀನೆ ಕಾಣಾ ಕಪಿಲಸಿದ್ಧಮಲ್ಲಿನಾಥಯ್ಯಾ. ॥೮೧॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೨೦೧

ಬಯಸುವ ಬಯಕೆ ನೀನಾದ ಪರಿ ಎಂತು ಹೇಳಾ?
[1]ಅಜಸುವ[1] ಅಜಕೆ ನೀನಾದ ಪರಿ ಎಂತು ಹೇಳಾ?
ಕಾಯವೆ ಲಿಂಗ, ಪ್ರಾಣವೆ ಶರಣನಾದ ಶರಣಂಗೆ,
ಬೇಜೌ ದೇವಾಲಯವ ಮಾಡಿಸಲೇಕೆ ಹೇಳಾ?
[2]ಗೊಹೇಶ್ವರ[2]ಲಿಂಗವು ಸಾಧ್ಯವಾಯಿತ್ತೆಂಬುದ
ಮಾತಿನಲ್ಲಿ ಕಂಡೆವಲ್ಲದೆ ಕಾರ್ಯದಲ್ಲಿ ಕಾಣೆ
ನೋಡಾ ಸಿದ್ಧರಾಮಯ್ಯ. ॥೮೨॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ:

೨೦೨

ಅಣುವಿನೊಳಗೆ ಅಣುವಾಗಿಪ್ಪಿರೆಲೆ ದೇವಾ ನೀವು.
ಮನದೊಳಗೆ ಘನವಾಗಿಪ್ಪಿರೆಲೆ ದೇವಾ.
ಜಗದೊಳಗೆಲ್ಲಿಯೂ ನೀವಿಲ್ಲದೆಡೆಯುಂಟೆ?
ಎಂಬತ್ತುನಾಲ್ಕು ಲಕ್ಷ ಶಿವಾಲಯಂಗಳ ನೀವು ಮಾಡಿ
ಒಳಗಿಪ್ಪುದ ಕಂಡು ನಾನು ಮಾಡಿದೆನಲ್ಲದೆ
ಕಪಿಲಸಿದ್ಧಮಲ್ಲಿನಾಥಯ್ಯಾ, ಎನಗೆ ಬೇಜೌ ಸ್ವತಂತ್ರವನಜೆಯೆನು. ॥೮೩॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರ ಪ್ರತ್ಯುತ್ತರ:

೨೦೩

ಕಡೆನಾಡ ಲಿಂಗವ ನಡುನಾಡಿಗೆ ತಂದೆನೆಂಬ
ಅಹಂಕಾರವ ಮುಂದುಗೊಂಡಿದ್ದೆಯಲ್ಲಾ!
ಎಂಬತ್ತುನಾಲ್ಕು ಲಕ್ಷ ಶಿವಾಲಯಂಗಳೆಂಬ
ಬಯಲ ಭ್ರಮೆ ಇದೆಲ್ಲಿಯದು ಹೇಳಾ!
ಮಹಾಘನಲಿಂಗಕ್ಕೆ ಜಗದ ಜೀವರಾಶಿಗಳು ಶಿವಾಲಯವಾಗಬಲ್ಲರೆ?
ನಿನ್ನ ಲಕ್ಷದ ಮೇಲೆ ತೊಂಬತ್ತಾಜುಸಾವಿರ ಲಿಂಗವ

೧-೧ ಅಜೆಸುವ (ಮೂ) ೨-೨ ಗೊಗ್ಗೇಶ್ವರ (ಮೂ)

ನಿನ್ನ ಎದೆಯಲ್ಲಿ ಇಱಿದುಕೊಳ್ಳಾ!
ಗೊಹೇಶ್ವರಲಿಂಗವು ನಿನ್ನ ತಪ್ಪಿಸಿ ಹೋದುದ ಮಱೆಯೆಲ್ಲಾ
ಸಿದ್ಧರಾಮಯ್ಯಾ! ॥೮೪॥

[೧]ಈ ಹೀಂಗೆಂದು[೧] ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರ ಬಿನ್ನಹ:

೨೦೪

ಸಕಲಲಿಂಗವ ಹಿಡಿದು ಅಗಲದೆ ನಡೆಯೆಂದಿರಾಗಿ ನಡೆವುತಿರ್ದೆನು.
ಲಿಂಗಪ್ರತಿಷ್ಠೆಯ ಮಾಡೆಂದು ಎನಗೆ ನಿರೂಪಿಸುತಿರ್ದ ಕಾರಣ
ಮಾಡುತ್ತಿರ್ದೆನಲ್ಲದೆ ಎನಗೆ ಬೇರೆ ಸ್ವತಂತ್ರವುಂಟೆ?
ಹಿಂದೆ ನೀವು ಕೊಟ್ಟ ನಿರೂಪ ನಿಮಗೆ ಹುಸಿಯಾದರೆ,
ಇನ್ನು ಮುಂದೆ ಸ್ವಯವಪ್ಪಂತೆ ನಡೆಸಾ ಕಪಿಲಸಿದ್ಧಮಲ್ಲಿನಾಥಯ್ಯಾ. ॥೮೫॥

ಇಂತು ನಾನು ಮಾಡುವುದೆಲ್ಲವು ನಿಮ್ಮಾಧೀನವಲ್ಲದೆ ಎನಗೆ ಬೇಱೆ ಸ್ವತಂತ್ರವಿಲ್ಲ, ಮುಂದೆ ನಿಮ್ಮಲ್ಲಿ ನಿಜವಳವಡುವಂತೆ ಮಾಡಾ ಎಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೨೦೫

ಕೆಱೆ ದೇಗುಲಂಗಳೆಲ್ಲವು ಹಿಂದಣ ಅಡಿವಜ್ಜೆಗೆ ರೂಪು.
ಕರ್ಮಕಾಂಡ ಯೋಗಂಗಳೆಲ್ಲವು ಭವದ ತೆಕ್ಕೆಗೆ ಒಳಗು.
ಹಿಂದಣ ಮುಂದಣ ಸಂದನಳಿದು
[೨]ಗೊಹೇಶ್ವರ[೨]ಲಿಂಗದಲ್ಲಿ ಸಲೆ ಸಂದಿರಬೇಕು ಸಿದ್ಧರಾಮಯ್ಯಾ. ॥೮೬॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರ ಬಿನ್ನಹ:

೨೦೬

ಕೃಷಿಯ ಮಾಡಿ ಉಣ್ಣದೆ, ಹಸಿವು ಹರಿವ ಪರಿ ಇನ್ನೆಂತು?
ಕರ್ಮಯೋಗವ ಮಾಡದೆ, ನಿರ್ಮಲ ಸುಚಿತ್ತವನಱಿವ ಪರಿ ಇನ್ನೆಂತು?
ಬೇಯದ ಅಶನವನುಂಬ ಠಾವಾವುದು
ಕಪಿಲಸಿದ್ಧಮಲ್ಲಿಕಾರ್ಜುನಲಿಂಗಕ್ಕೆ? ॥೮೭॥

ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೨೦೭

ಕರ್ಮವೆ ಪ್ರಾಣವೆಂದು ಮಾಡುವಾಗ,
ಜ್ಞಾನವನಱಿವ ನೆಲೆ ಶುದ್ಧವಿನ್ನಾವುದು?
ಸಾವನ್ನಕ್ಕ ಸಾಧನೆಯ ಮಾಡಿ, ಕಾದುವ ಠಾವಿನ್ನಾವುದು?

೧–೧ ಹಿಂಗೆಂದು (ಮೂ) ೨–೨ ಗೊಗ್ಗೇಶ್ವರ (ಮೂ)

ಅಱಿದುದ ನೇತಿಗಳೆದು, ಮೇಲಱಿದುದ ಕಱಿಗೊಳುತ್ತ
ತುಷವ ನೀಗಿದ ತಂಡುಲದಂತೆ,
ಕಾಯದ ದೆಸೆ ಶುದ್ಧವಾಗಿರಬೇಕು
[೧]ಗೊಹೇಶ್ವರ[೧]ಲಿಂಗವನಱಿವುದಕ್ಕೆ ಸಿದ್ಧರಾಮಯ್ಯಾ. ॥೮೮॥

ಇದಕ್ಕೆ ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ:

೨೦೮

ಕೈಯಲ್ಲಿ ಹಿಡಿದು ಕಾಬುದು ಕರ್ಮಪೂಜೆಯಲ್ಲವೆ?
ಮನದಲ್ಲಿ ನೆನೆದು ಮಾಡುವುದೆಲ್ಲವು ಕಾಯದ ಕರ್ಮವಲ್ಲವೆ?
ಭಾವಶುದ್ಧವನಱಿವ ಪರಿ ಇನ್ನಾವುದು ಕಪಿಲಸಿದ್ಧಮಲ್ಲಿಕಾರ್ಜುನಾ? ॥೮೯॥

ಇದಕ್ಕೆ ಪ್ರಭುದೇವರು ನಿರೂಪಿಸಿ ಪ್ರಸ್ತಾವದ ವಚನ:

೨೦೯

ಚಿನ್ನವನೊರೆಯಬಹುದಲ್ಲದೆ, ಬಣ್ಣವನೊರೆಯಬಹುದೆ?
ಹೂವ ಮುಡಿಯಬಹುದಲ್ಲದೆ, ಗಂಧವ ಮುಡಿಯಬಹುದೆ?
ಕರ್ಮವ ಮಾಡಬಹುದಲ್ಲದೆ, ವಸ್ತುವನಱಿಯಬಹುದೆ?
[೧]ಗೊಹೇಶ್ವರ[೧]ನೆನಬಹುದಲ್ಲದೆ, ಲಿಂಗವು ತಾನಾಗಬಾರದು
ಸಿದ್ಧರಾಮಯ್ಯಾ. ॥೯೦॥

ಅದಕ್ಕೆ ಸಿದ್ಧರಾಮಯ್ಯದೇವರ ಪ್ರತ್ಯುತ್ತರ:

೨೧೦

ಬಣ್ಣವಿಲ್ಲದೆ ಚಿನ್ನ ನಾಮಕ್ಕರ್ಹನಾದ ಪರಿ ಇನ್ನೆಂತಯ್ಯಾ?
ಹೂವೊಣಗಿ ವಾಸನೆ ಮುಡಿದ ಠಾವಿನಲ್ಲಿ ವಾಸನೆ ನಿಂದುದಿಲ್ಲವೆ?
ಅಯ್ಯಾ, ಕ್ರೀ ಶುದ್ಧವಾದಲ್ಲಿ
ಕಪಿಲಸಿದ್ಧಮಲ್ಲಿಕಾರ್ಜುನಲಿಂಗವು ಭಾವಶುದ್ಧವಾಗಿರ್ಪನು. ॥೯೧॥

ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೨೧೧

ರಾಗವಡಗಿ, ತಾಮಸ ನಿಂದು ಅಹಂಕಾರದ ಗಿರಿಯುಡುಗಿ,
ಮಾತಿನ ಬಣಬೆಯ ಮೆದೆಯ ಸುಟ್ಟು,
ಕಾಯ ಕರ್ಮದಲ್ಲಿ ಸವೆಯುತ್ತ,
ಜೀವ ಸಕಲಸಂಸಾರದಲ್ಲಿ ನೋಯುತ್ತ
ಮತ್ತೆ ಭಾವಶುದ್ಧ ಉಂಟೇ [೧]ಗೊಹೇಶ್ವರ[೧]ಲಿಂಗಕ್ಕೆ? ॥೯೨॥

೧–೧ ಗೊಗ್ಗೇಶ್ವರ (ಮೂ)

ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೨೧೨

ನುಡಿದಿಹೆನೆಂಬ ಉಲುಹಿನ ಗಲಭೆಯ ತೋಟಿ ಬಿಡದು.
ಉತ್ತಮ ಮಧ್ಯಮ ಕನಿಷ್ಠವೆಂಬ,
ತಿರುಗಿ ಕಂಡೆಹೆನೆಂಬ ¹ಠಾವಿನ¹ ಎಡೆಯಾಟ ಬಿಡದು.
ಎನಗೆ ಗರ್ವ ಮೊದಲಾದಲ್ಲಿ, ನಿಮಗೆ ಗರ್ವ ವೆಗ್ಗಳವಾಯಿತ್ತು.
ಉಭಯದ ತೋಟಿಯ ನಾನಿನ್ನಾರಿಗೆ ಹೇಳುವೆ
ಕಪಿಲಸಿದ್ಧಮಲ್ಲಿಕಾರ್ಜುನಾ? ॥೯೩॥

ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೨೧೩

ಕ್ಷೀರಕ್ಕೆ ತವರಾಜವ ಹೊಯಿದಲ್ಲಿ,
ಬೇಱೆ ಲೇಸು ಕಷ್ಟವನಱಿಸುವರೆ?
ಅಂಗಕ್ಕೆ ತಿಮಿರವಾದಲ್ಲಿ ಅಂಗುಲ ಮುಟ್ಟಿ
ತಿಮಿರದ ಅಂಗವ ಕೆಡಿಸಿದಡೆ, ಅಂಗಕ್ಕೆ ಮಿಥ್ಯ ಉಂಟೆ?
ಎನ್ನ ಅಂಗವು ತಾನಾದ ಕಾರಣ,
ನೀನೆಂಬ ನಾಮ ಬೇಱಿಲ್ಲ ಗೊಹೇಶ್ವರಲಿಂಗವು ನೀನಾದ ಕಾರಣ. ॥೯೪॥

ಮತ್ತಂ,

೨೧೪

ಕರಚರಣಾದಿಗಳು ಬೇಱಾದವಲ್ಲದೆ
ಅಱಿದು ಮುಟ್ಟುವುದು ಒಂದೇ ಆತ್ಮ.
ಬಿಂದುವಿನೊಂದು ಸಾರದಲ್ಲಿ
ಸಸಿ ಹಲವು ನಾಮ ಬೆಳೆವಂತೆ,
ಗೊಹೇಶ್ವರಲಿಂಗದಲ್ಲಿ ನಾ ನೀನೆಂಬ ಭಾವವಿಲ್ಲ
ಸಿದ್ಧರಾಮಯ್ಯಾ. ॥೯೫॥

ಅದಕ್ಕೆ ಸಿದ್ಧರಾಮಯ್ಯದೇವರು ಕೊಟ್ಟ ಪ್ರತ್ಯುತ್ತರ:

೨೧೫

ಭೂಮಿ ಒಂದೆಂದಡೆ, ಬೆಳೆವ ವೃಕ್ಷ ಹಲವು ತೆಱನುಂಟು.
ಉದಕ ಒಂದಾದಡೆ ಸವಿಸಾರದ ಸಂಪದ ಬೇಱುಂಟು.
ನಿನ್ನ ಒಳಗು ನಾನಾದಡೆ,
ತಾಮಸದ ರಾಗ ವಿರಾಗವಾಗದು.
ಕಪಿಲಸಿದ್ಧಮಲ್ಲಿಕಾರ್ಜುನಲಿಂಗವೆಂಬ ಪುರುಷರತಿ ಕೂಟಸ್ಥವಿಲ್ಲ. ॥೯೬॥

೧-೧ ಕಾಲಿನ (ಮೂ)

ಇಂತು ನಿನ್ನೊಳಗು ನಾನಾದಡೆ, ಲಿಂಗದಲ್ಲಿ ಏಕತ್ವ ಘಟಿಸದೆಂದು ಸಿದ್ಧರಾಮಯ್ಯದೇವರು ಭಿನ್ನದೃಕ್ಕಿಂದಜೀವ ಲಿಂಗತ್ರಯದ ಸಂದಳಿದಲ್ಲದೆ, ಘನಲಿಂಗದಲ್ಲಿ ಏಕತ್ವ ಘಟಿಸದೆಂದು ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೨೧೬

ಕಂಗಳಲ್ಲಿ ಜ್ಯೋತಿರ್ಲಿಂಗ, ಕೈಯಲ್ಲಿ ಉಭಯಪ್ರತಿಷ್ಠೆಲಿಂಗ,
ಬ್ರಹ್ಮರಂಧ್ರದಲ್ಲಿ ಅಮೃತಲಿಂಗ ಉಂಟೆಂಬ
ತ್ರಿವಿಧದ ಸಂದನಳಿಯಬೇಕು;
ಸಿದ್ಧರಾಮಯ್ಯಾ, ಗೊಹೇಶ್ವರಲಿಂಗವನಜೆಯಬೇಕು. ॥೯೭॥

ಅದಕ್ಕೆ ಸಿದ್ಧರಾಮಯ್ಯದೇವರ ಪ್ರತ್ಯುತ್ತರ:

೨೧೭

ಕಾಯಸೊನೆ ಅಜಿತಲ್ಲದೆ ಹಣ್ಣಿನ ರಸ ಚಿಹ್ನದೋರದು.
ಕಾಯ ಕರ್ಮವ ಮಾಡಿ, ಜೀವ ಜ್ಞಾನವನಜಿತು,
ತ್ರಿವಿಧಭಾವ ಶುದ್ಧವಾಗಿಯಲ್ಲದೆ,
ಮೇಲೆ ಕಾಣಲಿಲ್ಲ ಕಪಿಲಸಿದ್ಧಮಲ್ಲಿಕಾರ್ಜುನಲಿಂಗವ. ॥೯೮॥

ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೨೧೮

ಇಕ್ಷುದಂಡಕ್ಕೆ ಕೀಲು ಮೇಲಲ್ಲದೆ,
ಸಕ್ಕರೆಯ ದಂಡಕ್ಕೆ ಕೀಲು ಮೇಲುಂಟೆ?
ಪರುಷ ಪಾಷಾಣಕ್ಕೆ ಕೀಲು ಮೇಲಲ್ಲದೆ,
ಕಡೆಯಾಣಿಗುಂಟೆ ಒರೆಗಲ್ಲು?
ಉಂಟು ಇಲ್ಲಾ ಎಂಬ ಸಂದೇಹ ನಿಂದಲ್ಲಿ,
ಗೊಹೇಶ್ವರಲಿಂಗವು ತಾನೆ ಸಿದ್ಧರಾಮಯ್ಯಾ. ॥೯೯॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ತ್ರಿವಿಧಲಿಂಗ ಸಂಬಂಧವಳವಡುವಂತೆ ಮಾಡಾ ಎಂದು ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ:

೨೧೯

ನಾನೇನ ಮಾಡುವುದೆಲ್ಲವನೂ ನೀವೆಂದೆ ಇದ್ದೆನಯ್ಯಾ.
ನಾನೇನ ಮಾಡುವುದೆಲ್ಲವನೂ ನೀನೆಯಲ್ಲವೆಂದರೆ
ಅದು ಮಾಣಲಿ, ನಿಮ್ಮಾಣತಿ.
ಕಾಣಬಾರದ ಘನವ ಕಾಯದಲ್ಲಿ ಧರಿಸಿ,
ಹೇಳಬಾರದ ನಿಜವ ಮನದಲ್ಲಿ ನೆಲೆಗೊಳಿಸಿ,
ತೋಱಬಾರದ ಕುಱುಹ ಎನ್ನಜೀವಿನಲ್ಲಿರಿಸಿ,
ಇನ್ನು ನಿಮ್ಮ ಕಾಂಬಂತೆ ಮಾಡಾ ಕಪಿಲಸಿದ್ಧಮಲ್ಲಿನಾಥಯ್ಯಾ. ॥೧೦೦॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು ಅದಕ್ಕೆ ಪ್ರಭುದೇವರ ಪ್ರತ್ಯುತ್ತರ:

೨೨೦

ತೋಱಬಾರದ ಘನವ ಹೇಳಲೆಂದೇನಯ್ಯಾ?
ಹೇಳಬಾರದ ಘನವ ತೋಱಲೆಂದೇನಯ್ಯಾ?
ಶರಸಂಧಾನದ ಪರಿಯಲ್ಲ ನೋಡಾ.
ಗೊಹೇಶ್ವರಲಿಂಗವು ಕಲ್ಪಿತವಲ್ಲ ನೋಡಯ್ಯಾ! ॥೧೦೧॥

ಪರಬ್ರಹ್ಮವೆಂಬುದ ಕಲ್ಪಿಸಿ ಹೇಳಬಾರದು, ಕಲ್ಪಿಸಿ ತೋಱಬಾರದೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರ ಬಿನ್ನಹ:

೨೨೧

ಬೆರಸಿ ಬೆಚ್ಚಾತನ ಕಂಡೆನಯ್ಯಾ!
ಆತನ ಬಟ್ಟೆಯ ಕಾಣೆ ನೋಡಯ್ಯಾ!
ಶರೀರವಿಡಿದಿರ್ಪ ಶತಕೋಟಿ ಜೀವಂಗಳ ಭೇದವನಱಿಯೆನು.
ನಿಮ್ಮ ನಾನೆತ್ತ ಬಲ್ಲೆನಯ್ಯಾ?
ನೀವು ಮಾಡಿದ ಬೆಂಬಳಿಯಲ್ಲಿ ಹೊರೆಗಾಣದಿಪ್ಪೆನಲ್ಲದೆ,
ನಾ ಬೇಱೆ ಕಾಬುದು ಹುಸಿ.
ನೀ ತೋಱಯ್ಯಾ ಎನಗೆ ಕಪಿಲಸಿದ್ಧಮಲ್ಲಿನಾಥಯ್ಯಾ. ॥೧೦೨॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೨೨೨

ಅಭ್ಯಾಸದ ಮಾತಲ್ಲ, ಶ್ರೋತ್ರದ ಸುಖವಲ್ಲ,
ಶಾಸ್ತ್ರದ ಅನುಭವದ ಮಾತಲ್ಲ.
ಒಳಗಣ ಮಾತಲ್ಲ; ಹೊಱಗಣ ಮಾತಲ್ಲ.
ಇದರಱಂಗವನಱಿಯದೆ ಅನುಭವವ ಮಾಡಿ ಫಲವೇನಯ್ಯಾ?
ಗೊಹೇಶ್ವರಲಿಂಗವು ಉಪಮಾತೀತ ನೋಡಾ ಸಿದ್ಧರಾಮಯ್ಯಾ! ॥೧೦೩॥

ಇಂತು ಪರಬ್ರಹ್ಮವೆಂಬುದನು ಆರಿಗೂ ತೋಱಬಾರದ ಉಪಮಾತೀತವೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ:

೨೨೩

ಉಪಮೆ ಅನುಪಮೆ ಎಂಬುದು ನಿಮ್ಮಾಧೀನ ಕಂಡಯ್ಯಾ!
ಹೇಳಿಹೆ ಕೇಳಿಹೆನೆಂಬುದು ನೀವೆ ಕಂಡಯ್ಯಾ!
ಎನ್ನಂತರಂಗಕ್ಕೆ ಬಹಿರಂಗಕ್ಕೆ ನೀವೆ ಕರ್ತರಾದ ಕಾರಣ,
ನಿಮ್ಮ ನಿಜವ ಹೇಳದಿರ್ದಡೆ ಎಂತುಳಿವೆನಯ್ಯಾ
ಕಪಿಲಸಿದ್ಧಮಲ್ಲಿನಾಥಯ್ಯಾ? ॥೧೦೪॥

ಮತ್ತಂ,

೨೨೪

ಕಾಯವಿಡಿದಿಹನ್ನಕ್ಕ ಕಾಮವೆ ಮೂಲ.
ಜೀವವಿಡಿದಿಹನ್ನಕ್ಕ ಕ್ರೋಧವೆ ಮೂಲ.
ವ್ಯಾಪ್ತಿಯುಳ್ಳನ್ನಕ್ಕ ಸಕಲವಿಷಯಕ್ಕೆ ಆಸೆಯೆ ಮೂಲ.
ಎನ್ನಯ ಆಶೆಯ ಪಾಶ ಘಾಸಿಮಾಡುತ್ತಿದೆ!
ಶಿವಯೋಗದ ಲೇಸಿನ ಠಾವ ತೋಱು
ಕಪಿಲಸಿದ್ಧಮಲ್ಲಿಕಾರ್ಜುನಾ. ॥೧೦೫॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ಕಾಯದ ಜೀವದ ಸಂದು ಭೇದವ ವಿವರಿಸಿ ಬೋಧಿಸುವ ಪ್ರಸ್ತಾವದ ವಚನ:

೨೨೫

ದೇಹಭಾವವಳಿದಲ್ಲದೆ ಜೀವಭಾವವಳಿಯದು.
ಜೀವಭಾವವಳಿದಲ್ಲದೆ ಭಕ್ತಿಭಾವವಳವಡದು.
ಭಕ್ತಿಭಾವವಳವಟ್ಟಲ್ಲದೆ ಅಜೀವು ತಲೆದೋಱದು.
ಅಜೀವು ತಲೆದೋಱಿದಲ್ಲದೆ ಕುಱುಹು ನಷ್ಟವಾಗದು.
ಕುಱುಹು ನಷ್ಟವಾದಲ್ಲದೆ ಮಾಯೆ ಹಿಂಗದು.
ಇದು ಕಾರಣ ಕಾಯದ ಜೀವದ ಹೊಲಿಗೆಯಳಿದ ಭೇದವ ತಿಳಿಯಬಲ್ಲರೆ,
ಗೊಹೇಶ್ವರಲಿಂಗದಜೀವು ಸಾಧ್ಯವಪ್ಪುದು ಕಾಣಾ ಸಿದ್ಧರಾಮಯ್ಯಾ. ॥೧೦೬॥

ಕಾಯದ ಜೀವದ ಸಂದು ಭೇದವಳಿದು ನೋಡಬಲ್ಲರೆ ನಿಜವು ಸಾಧ್ಯವಹುದೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಸಿದ್ಧರಾಮಯ್ಯದೇವರ ಬಿನ್ನಹ:

೨೨೬

ನೀರು ಕ್ಷೀರದ ಸಂದುಗಳ ಹಂಸೆ ಬಿಚ್ಚಬಲ್ಲುದು ನೋಡಯ್ಯಾ!
ದೇಹದ ಜೀವದ ಸಂದ ನೀವು ಬಿಚ್ಚಬಲ್ಲಿರಲ್ಲದೆ ನಾನೆತ್ತ ಬಲ್ಲೆನಯ್ಯಾ?
ನೀನಿಕ್ಕಿದ ತೊಡಕ ಬಿಡಿಸಬಾರದು;
ನೀವು ಬಿಡಿಸಿದ ತೊಡಕನಿಕ್ಕಬಾರದು.
ಕಪಿಲಸಿದ್ಧಮಲ್ಲಿನಾಥಯ್ಯಾ,
ನೀನೆನ್ನ ಕಾಯದ ಜೀವದ ಹೊಲಿಗೆಯ ಬಿಡಿಸಾ, ನಿಮ್ಮ ಧರ್ಮ.॥೧೦೭॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೨೨೭

ಕಾಯದ ಕಳವಳ ಕಾಣೆನೆಂದಲ್ಲಿ ಹೋಯಿತ್ತು.
ಜೀವದ ದುಷ್ಕೃತ ದೂರವೆಂದಲ್ಲಿ ತಪ್ಪಿತ್ತು

ಕಾಯ ಜೀವವೆಂಬ ಸೂತಕ
ಮನ ನಿರ್ಮಲವಾದಲ್ಲಿಯೆ ಅಳಿಯಿತ್ತು.
ಗೊಹೇಶ್ವರನೆಂಬ ಲಿಂಗವನಱಿಯಬೇಕಾದರೆ,
ನಿನ್ನೊಳಗೆ ತಿಳಿದು ನೋಡಾ ಸಿದ್ಧರಾಮಯ್ಯಾ. ॥೧೦೮॥

ನಿನ್ನೊಳಗ ತೊಳೆದು ನಿರ್ಮಲವ ಮಾಡಲು ಸರ್ವಸಂದೇಹವಳಿದು, ಶಿವತತ್ತ್ವ ಸಾಧ್ಯವಪ್ಪುದೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರ ಬಿನ್ನಹ:

೨೨೮

ಅಯ್ಯಾ, ಮನದ ರಜದ ಮಣ್ಣ ಕಳೆದು,
ದಯಾ ಶಾಂತಿಯ ಉದಕದಲ್ಲಿ ತೆಗೆವೆನಯ್ಯಾ.
ಜಳಕವನೆ ಮಾಡಿ, ಯೋಗಕಂಪನಿಕ್ಕಿ ಹೊದೆವೆನಯ್ಯಾ.
ಅದನೊಂದು ಎಡೆಗೆ ತಂದು ಬಟ್ಟಗಾಣದಲ್ಲಿಕ್ಕಿ ಹಿಳಿವೆನಯ್ಯಾ.
ಹಿಳಿದ ರಸದ ಕಂಪ ಕೊಡುವ ಒಡೆಯ ನೀನೆ
ಕಪಿಲಸಿದ್ಧಮಲ್ಲಿನಾಥಾ. ॥೧೦೯॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೨೨೯

ಮನವ ತೊಳೆದು ನಿರ್ಮಲವ ಮಾಡಿಹೆನೆಂಬ ಯೋಗವೆಂತುಟೊ?
ಮನವ ಹಿಡಿದು ತಡೆದಿಹೆನೆಂಬವರ
ಮರುಳಾಗಿ ಕಾಡಿತ್ತು ನೋಡಾ ಮನವು.
ಮನ ವಿಕಲ್ಪ ಜ್ಞಾನದಿಂದಱಿದು
ಅದ ಶುದ್ಧವ ಮಾಡಿಹೆನೆಂಬುದು ತಾನೆ ಮನ ನೋಡಾ!
ನಮ್ಮ [1]ಗೊಹೇಶ್ವರ[1]ಲಿಂಗದ ಅನುವನಱಿದಿಹೆನೆಂಬವರು
ಮನವಿಲ್ಲದಿರಬೇಕು ನೋಡಾ ಸಿದ್ಧರಾಮಯ್ಯಾ. ॥೧೧೦॥

[2]ಈ ಹೀಂಗೆಂದು[2] ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರ ಪ್ರತ್ಯುತ್ತರ:

೨೩೦

ಮನವೆಂಬ ಸಂಕಲ್ಪವನಱಿಯೆನು, ಸಂಕಲ್ಪಸಿದ್ಧಿಯಾಯಿತ್ತಾಗಿ.
ಸಂಕಲ್ಪವೆಂಬ ಸಂಬಂಧವನಱಿಯೆನು,
ನಿಮ್ಮ ವಿಚಾರವೆಡೆಗೊಂಡಿತ್ತಾಗಿ.
ನಿಮ್ಮ ವಿಚಾರವೆ ಅಂತರಂಗದೊಳಗೆ ತುಂಬಿತ್ತಾಗಿ,
ಎನ್ನ ಮನದ ಮುಂದೆಲ್ಲಾ ನೀನೆಯಾಗಿರ್ದೆಯಯ್ಯಾ
ಕಪಿಲಸಿದ್ಧಮಲ್ಲಿನಾಥಾ! ॥೧೧೧॥

೧-೧ ಗೊಗ್ಗೇಶ್ವರ(ಮೂ) ೨-೨ ಹೀಂಗೆಂದು (ಮೂ)

ಈ ಹೀಂಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರ ಪ್ರತ್ಯುತ್ತರ:

೨೩೧

ವಿಚಾರವೆಂಬುದು ಸಂದೇಹಕ್ಕೊಳಗು ನೋಡಾ!
ವಿಚಾರಿಸುವನ್ನಕ್ಕರ ನೀನಾನೆಂಬುದನೆತ್ತ ಬಲ್ಲೆ?
ಮರುಳೆ, ವಾಙ್ಮನೋತೀತವಾದ ಘನವು ವಿಚಾರಕ್ಕೆ ಸಿಲುಕುವುದೇ?
[1]ಗೊಹೇಶ್ವರ[1]ಲಿಂಗವು ತನ್ನ ತಿಳಿದು ನೋಡಿಹೆನೆಂಬವರ
ವಿಚಾರವೆಂಬ ಬಲೆಯಲ್ಲಿ ಕೆಡಹಿದನು. ॥೧೧೨॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ:

೨೩೨

ವಿವೇಕವೆಂಬುದು ಬೇಜೆಲ್ಲ ಕಂಡಯ್ಯಾ!
ವಿವೇಕ ನವನಾಳದ ಸುಳುಹ ತೊಡೆದು, ಸುನಾಳವ ಶುದ್ಧವ ಮಾಡುವೆ.
ಅಷ್ಟದಳ ಕಮಲವನು ಊರ್ಧ್ವ ಮುಖವ ಮಾಡಿ,
ನಿಜಪದದಲ್ಲಿ ನಿಲಿಸಿದೆ.
ಐವತ್ತೆರಡಕ್ಷರವ ತಿಳಿದು ನೋಡಿ, ಏಕಾಕ್ಷರದಲ್ಲಿ ನಿಲಿಸುವೆ.
ಕಪಿಲಸಿದ್ಧಮಲ್ಲಿನಾಥಾ, ಎನ್ನ ವಿಚಾರದ ಹವಣ ನೀನೆ ಬಲ್ಲೆ. ॥೧೧೩॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರ ಪ್ರತ್ಯುತ್ತರ:

೨೩೩

ಯೋಗ ವಿಯೋಗವೆಂಬ ಹೊಲಬ ಬಲ್ಲವರನಾರನು ಕಾಣೆನು.
ನವನಾಳದ ಸುಳುಹ ತಿಳಿದೆಹೆನೆಂಬುದು ಯೋಗವಲ್ಲ.
ಐವತ್ತೆರಡಕ್ಷರದ ಶಾಸನವ ತಿಳಿದು ನೋಡಿ,
ಹೃದಯಕಮಲಕರ್ಣಿಕೆಯಲ್ಲಿ ಸಿಕ್ಕಿದೆನೆಂಬುದು ಯೋಗವಲ್ಲ.
ಬಹಿರಂಗವೆಂಬರೆ ಕ್ರಿಯಾರಹಿತ,
ಅಂತರಂಗವೆಂಬರೆ ವಾಙ್ಮನೋತೀತ.
ಗೊಹೇಶ್ವರನೆಂಬ ಲಿಂಗವು ಷಡುಚಕ್ರದ ಮೇಲಿಲ್ಲ
ಕಾಣಾ ಸಿದ್ಧರಾಮಯ್ಯಾ. ॥೧೧೪॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು ಅದಕ್ಕೆ ಸಿದ್ಧರಾಮಯ್ಯದೇವರ ಬಿನ್ನಹ:

೨೩೪

ಅಂತರಂಗದಲ್ಲಿ ನಿಮ್ಮ ನೋಡುವನಲ್ಲ
ಕೇಳು ಕಂಡಾ ಎಲೆ ಅಯ್ಯಾ.

೧-೧ ಗೊಗ್ಗೇಶ್ವರ(ಮೂ)

ಬಹಿರಂಗದಲ್ಲಿ ಬಳಸುವನಲ್ಲ ಕೇಳು ಕಂಡಾ ಎಲೆ ಅಯ್ಯಾ.
ಸುಷುಮ್ನದ ಬಟ್ಟೆಯ ತುದಿಯನಡರಿ,
ಸಾವಿರದಳದ ಮಂಟಪದಲ್ಲಿ ನಿಮ್ಮ ನೆಲೆಗೊಂಡಿಪ್ಪೆ ನೋಡಾ
ಕಪಿಲಸಿದ್ಧಮಲ್ಲಿನಾಥಯ್ಯಾ. ॥೧೧೫॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರ ಪ್ರತ್ಯುತ್ತರ:

೨೩೫

ಸ್ವಸ್ಥ ಪದ್ಮಾಸನದಲ್ಲಿ ಕುಳ್ಳಿರ್ದು, ನೆಟ್ಟೆಲುವ ಮುಱಿದು,
ನಿಷ್ಠೆಯಿಂದ ಹಿಂದಣ ಬಟ್ಟೆಯ ತೆಗೆದು,
ಅಮೃತವನುಂಡಿಹೆನೆಂಬವರ ಕೇಡಿಂಗೆ ಕಡೆಯಿಲ್ಲ.
ಅತ್ಯತಿಷ್ಠದ್ದಶಾಂಗುಲವೆಂಬ ಶ್ರುತಿಯ ನೋಡಲು,
ಮುಟ್ಟಿ ನೆಲೆಗೊಳಿಸುವ ಠಾವುಂಟೆ?
ಸ್ಥಾನ ಮಾನವೆಂಬ ಮಾತಿಂಗೆ ದೂರವಾದ ಘನವ
ಬ್ರಹ್ಮರಂಧ್ರದಲ್ಲಿ ಕಂಡೆನೆಂದರೆ ಕಾಣಬಹುದೆ?
ನಮ್ಮ [1]ಗುಹೇಶ್ವರ[1]ಲಿಂಗವು ಕಲ್ಪಿತಕ್ಕೆ ದೂರ ಕೇಳಾ
ಸಿದ್ಧರಾಮಯ್ಯಾ. ॥೧೧೬॥

ಪರಬ್ರಹ್ಮವೆಂಬುದನು ಬ್ರಹ್ಮರಂಧ್ರದಲ್ಲಿ ನೆಲೆಗೊಳಿಸಿದೆನೆಂಬುದು ಕಲ್ಪಿತವಲ್ಲದೆ ನಿರ್ವಿಕಲ್ಪಿತವಲ್ಲವೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯ ದೇವರ ಬಿನ್ನಹ:

೨೩೬

ನಾ ನಿನ್ನ ರೂಪ ವಿಚಾರಿಸುವವನಲ್ಲ ಕೇಳಾ!
ನಿನ್ನ ಧ್ಯಾನದಲ್ಲಿ ಇಪ್ಪಾತನಲ್ಲ ಕೇಳಾ!
ಅತ್ಯತಿಷ್ಠದ್ದಶಾಂಗುಲದಲ್ಲಿ ನಿಮ್ಮ ನಿಲಿಸಿ,
ನಾನೊಂದೆಡೆಯಲ್ಲಿ ಇಪ್ಪಾತನಲ್ಲ ನೋಡಾ!
ಓಂಕಾರವೆಂಬ ಪೀಠಕ್ಕೆ ನಾನಾಗಿ,
ನಿಶ್ಶಬ್ದವೆಂಬ ಲಿಂಗವ ನೆಲೆಗೊಳಿಸಿ
ಬೆರಸಿ ಬೇಱಿಲ್ಲದೆ ಇಪ್ಪೆಡೆಯ ನೋಡಯ್ಯಾ
ಕಪಿಲಸಿದ್ಧಮಲ್ಲಿನಾಥಯ್ಯಾ–ನೀನು ಪ್ರಣವ ರೂಪಾಗಿ. ॥೧೧೭॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರ ಪ್ರತ್ಯುತ್ತರ:

೨೩೭

ಬಿಂದುವೆ ಪೀಠವಾಗಿ, ನಾದವೆ ಲಿಂಗವಾದರೆ,
ಅದು ಭಿನ್ನಲಿಂಗ ನೋಡಾ.

೧–೧ ಗೊಗ್ಗೇಶ್ವರ(ಮೂ)

ಕಳೆ ಎಂಬ ಪೂಜೆ ನಿರ್ಮಾಲ್ಯವಾಗಿ,
ನಾದ ಬಿಂದು ಕಳಾತೀತ ನೋಡಾ.
ಮಹಾಘನಲಿಂಗೈಕ್ಯವು ಅಲ್ಲಿ ಇಲ್ಲಿ ಸಿಲುಕದು.
ಅಚಳವಪ್ಪ ನಿರಾಳವ ಪ್ರಣವರೂಪೆಂದು ಹೆಸರಿಸಬಹುದೇ?
ನಮ್ಮ [೧]ಗೊಹೇಶ್ವರ[೧]ನ ನಿಲವು
'[೨]ನಿಶ್ಶಬ್ದಂ[೨] ಬ್ರಹ್ಮಮುಚ್ಯತೇ' ಎಂಬುದನಱಿಯಾ
ಸಿದ್ಧರಾಮಯ್ಯಾ. ॥೧೧೮॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರ ಬಿನ್ನಹ:

೨೩೮

ನಾದ ಬಿಂದುವೆಂಬಲ್ಲಿ ಅಂಗ ಲಿಂಗ ಸಂಬಂಧವೆಂಬೆನಯ್ಯಾ.
ನಾದ ಪ್ರಾಣ ಬಿಂದು ಕಾಯವಾದ ಕಾರಣ,
ನಾದ ಸ್ವರವಲ್ಲ, ಬಿಂದು ಕಾಯವಲ್ಲ.
ಉಭಯ ಸೂತಕರಹಿತ ಕಂಡಯ್ಯಾ,
ನಾದ ಬಿಂದುವಿನ ಒಡ್ಡ ತೋಱೆ,
ಮನ ಮಗ್ನವಾದ ನಿಲವ ಕಪಿಲಸಿದ್ಧಮಲ್ಲಿಕಾರ್ಜುನಾ,
ನೀನೆ ಬಲ್ಲೆ. ॥೧೧೯॥

ನಾದ ಬಿಂದು ಕಳಾತೀತವಾದ ಮಹಾಘನದೊಳಗೆ ಮನ[೩] ಮಗ್ನವಾಗಿ ನಾನಿದ್ದೆನೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೨೩೯

ಅಱಿವನಱಿದು, ಮಱಹ ಮಱೆದು,
ಸಂಕಲ್ಪ ಸಂಶಯವಳಿವ ನಿಲವನಱಿದ ಪರಿ ಎಂತು ಹೇಳಾ?
ಅಱಿದೆನೆಂದರೆ ಜ್ಞಾನಕ್ಕೆ ದೂರ.
ಮಱೆದೆನೆಂದರೆ ಮನಕ್ಕೆ ದೂರ.
ಅಱಿದು ಮಱೆದೆನೆಂದರೆ ಉಪಮೆಗೆ ದೂರ.
ನಿರ್ಭಾವದ ಹೊಲಿಗೆಯಲ್ಲಿ ಭಾವಸಂಕಲ್ಪ ಬಿಡದು.
ನಮ್ಮ ಗೊಹೇಶ್ವರಲಿಂಗದಲ್ಲಿ ಮನ ಮಗ್ನಯೋಗ
ನಿನಗೆಂತು ಸಾಧ್ಯವಾಯಿತ್ತು ಹೇಳಾ ಸಿದ್ಧರಾಮಯ್ಯಾ? ॥೧೨೦॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ:

೧-೧ ಗೊಗ್ಗೇಶ್ವರ(ಮೂ) ೨-೨ ನಿಶಬ್ದ(ಮೂ) ೩ +ಮನ(ಮೂ)

೨೪೦

ಎನ್ನ ಮನ[ದಲ್ಲಿ] ಮತ್ತೊಂದಕ್ಕೆ ಇಂಬಿಲ್ಲ ಕಂಡಯ್ಯಾ.
ನಿಮ್ಮ ನೆನೆವೆ ನಾನು, ನೀನು ಎನ್ನ ನೆನೆವೆ ಕಂಡಯ್ಯಾ.
ನಿನಗೆಯೂ ಎನಗೆಯೂ ಒಂದೆ ಮನ ನೋಡಯ್ಯಾ!
ನೀ ಮನಮುಕ್ತನಾದ ಕಾರಣ,
ನಿನ್ನೊಡನೆ ಎನ್ನ ಮನ ಮುಕ್ತ ನೋಡಯ್ಯಾ
ಕಪಿಲಸಿದ್ಧಮಲ್ಲಿನಾಥಯ್ಯಾ. ॥೧೨೧॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಮನಮಗ್ನವಪ್ಪ ಮಹಾನುಭಾವಮಂ ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೨೪೧

ಮನ ಉಂಟೆ ಮರುಳೆ ಶಿವಯೋಗಿಗೆ?
ಮತ್ತೊಮ್ಮೆ ಮನಮಗ್ನ ಉಂಟೆ ಶಿವಯೋಗಿಗೆ?
ಇಲ್ಲದ ಮನವನುಂಟೆಂದು ನುಡಿದು, ಅಡಗಿಸಿದೆನೆಂಬ ಮಾತು
ಮನವ ನೆಲೆಮಾಡಿ ತೋಱುತ್ತದೆ.
ಗೊಹೇಶ್ವರನನಱಿದ ಶರಣಂಗೆ ತೋಱಲಿಲ್ಲ ಅಡಗಲಿಲ್ಲ ಕೇಳಾ. ॥೧೨೨॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಿದ ಮಹಾನುಭಾವದ ನಿಃಪತಿಗೆ ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ:

೨೪೨

ಮನಮಗ್ನಯೋಗವೆಂದಡೇನು ಕೊಱತೆ ಹೇಳಾ, ಎಲೆ ಅಯ್ಯಾ?
ಮನವಿಲ್ಲದ ಬಚ್ಚಬಱಿಯ ಬೊಮ್ಮವೆಂದಡೇನು ಹೆಚ್ಚು ಹೇಳಾ,
ಎಲೆ ಅಯ್ಯಾ? ನುಡಿದ ಮಾತಿನಲ್ಲಿ ವಿವರ ತೋಱುತ್ತದೆ ಎಂದಡೆ,
ತಾತ್ಪರ್ಯವಂತಪ್ಪುದೆ ಕಪಿಲಸಿದ್ಧಮಲ್ಲಿನಾಥಾ? ॥೧೨೩॥

ಈ ಹೀಂಗೆಂದು ಬಿನ್ನೈಸಿದ ಸಿದ್ಧರಾಮಯ್ಯದೇವರ ನಿಜಾನುಭಾವಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೨೪೩

ಮನಮಗ್ನವೆಂತಿರ್ಪುದು ಅಂತೆ ಇರಬೇಕಲ್ಲದೆ,
ಮತ್ತೊಂದು ಮನವೆಂಬುದುಂಟೆ ಹೇಳಾ?
ಅಱಿದು ಮಱೆದುದ ಅಱಿದು ನುಡಿದು,
ಮಱೆದೆನೆಂಬ ಜ್ಞಾನ ಉಂಟೆ?
ಗೊಹೇಶ್ವರಲಿಂಗವು ನೆಱೆಯಱಿದೆನೆಂಬಲ್ಲಿ
ಮನವ ಮಱೆಮಾಡಿ ಕಾಡುವನು. ॥೧೨೪॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಿದ ಮಹಾವಾಕ್ಯಕ್ಕೆ ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ:

೨೪೪

ಅಂಗದಂತೆ ಲಿಂಗ, ಲಿಂಗದಂತೆ ಅಂಗವಾದ ಬಳಿಕ,
ಅಂಗದಂತೆ ಲಿಂಗೈಕ್ಯ ಲಿಂಗದಂತೆ ಅಂಗೈಕ್ಯ.
ಮನವೆ ಲಿಂಗ, ಲಿಂಗವೆ ಮನವಾದ ಬಳಿಕ,
ಮಾತು ಮಾತುಗಳೆಲ್ಲಾ ಹೊಳ್ಳಾದ ಕಾರಣ
ಮಾತೆ ಲಿಂಗೈಕ್ಯ, ಲಿಂಗೈಕ್ಯವೆ ಸ್ವರ.
ಶಬ್ದ ಸಂದಣಿಗಿನ್ನು ತೆಱಹುಂಟೆ?
ಕಪಿಲಸಿದ್ಧಮಲ್ಲಿನಾಥಾ,
ಇನ್ನು ನಿಮ್ಮ ದೇವರೆಂದು ಅಱಿಸಲುಂಟೋ ಇಲ್ಲವೋ ಎಂಬುದನು
ತಿಳುಹಿ ಕೊಡಾ ಎಲೆ ಅಯ್ಯಾ. ॥೧೨೫॥

ಈ ಹೀಂಗೆಂದು ಪರತತ್ತ್ವದ ಅಱಿವಿಂಗೆ ಹರಿವ ನುಡಿದು, ನಿಮ್ಮ ನಿಲವನಱಿಸಲುಂಟೋ ಇಲ್ಲವೋ ಎಂಬುದ ನೀವೆ ನಿರೂಪಿಸಿ ಎನಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೨೪೫

ಕರ್ಪುರದ ಗಿರಿಯನುರಿ ಹಿಡಿದ ಬಳಿಕ ಇದ್ದಿಲುಂಟೆ?
ಮಂಜಿನ ಶಿವಾಲಯಕ್ಕೆ ಬಿಸಿಲ ಕಳಸವುಂಟೆ?
ಕೆಂಡದ ಗಿರಿಯ ಅರಗಿನ ಬಾಣದಲೆಚ್ಚರೆ,
ಬಳಿಕ ಮರಳಿ ಬಾಣವನಱಿಸಲುಂಟೆ?
ಗೊಹೇಶ್ವರಲಿಂಗನವಱಿದ ಬಳಿಕ,
ದೇವರೆಂದು ಅಱಿಸಲುಂಟೆ ಸಿದ್ಧರಾಮಯ್ಯಾ? ॥೧೨೬॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಿದ ಮಹಾನುಭಾವಕ್ಕೆ ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ:

೨೪೬

ಅಯ್ಯಾ ನಿಮ್ಮ ದೇವರೆಂದು ಭಾವಿಸಲಱಿಯೆನು ಕೇಳು ಕಂಡಾ.
ಎನ್ನ ಮನವ ನುಂಗಿದೆ ಎಂದು
ಹಿಂದೆ ನಿಮಗಾನು ಬಿನ್ನಹವ ಮಾಡಿದ ಕಾರಣ,
ಎನ್ನ ಒಳಹೊಱಗೆಲ್ಲಾ ನೀನೆ ಕಂಡಯ್ಯಾ.
ನಿಮ್ಮೊಳಗೆ ಅಡಗಿದ ನುಡಿಯನೊಳಕೊಂಡ ಅಱಿವು
ಅಱಿದಱಿದು ಮಱೆದ ಪರಿ ಎಂತಯ್ಯಾ
ಕಪಿಲಸಿದ್ಧಮಲ್ಲಿನಾಥಯ್ಯಾ? ॥೧೨೭॥

ಈ ಹೀಂಗೆಂದ ಸಿದ್ಧರಾಮಯ್ಯದೇವರ ಶಿವಾದ್ವೈತ ಪ್ರಸಂಗಕ್ಕೆ ಪ್ರಭುದೇವರು ಸರ್ವಶೂನ್ಯಸಮಾಧಿಯ ನಿಲವ ನಿರೂಪಿಸಿದ ಪ್ರಸ್ತಾವದ ವಚನ:

೨೪೭

ಅಱಿದೆನೆಂಬುದು ತಾ ಬಯಲು.
ಅಱಿಯೆನೆಂಬುದು ತಾ ಬಯಲು.
ಮಱೆದೆನೆಂಬುದು ತಾ ಬಯಲು.
ಅಱುಹಿನ ಕುಱುಹಿನ ಮಱಹಿನೊಳಗೆ
ಗೊಹೇಶ್ವರನೆಂಬುದು ತಾ ಬಯಲು. ॥೧೨೮॥

ಇಂತು ಪ್ರಭುದೇವರು ನಿರೂಪಿಸಿದ ಮಹಾವಾಕ್ಯದ ಸ್ವಾನುಭಾವೋಪದೇಶದಿಂ ಸಿದ್ಧರಾಮಯ್ಯದೇವರು ಪ್ರಸನ್ನತ್ವಮಂ ಪಡೆದು, ಪರಬ್ರಹ್ಮದೊಳು ನಿರ್ವಾಣವೆಂದಪ್ಪುದೆಂದು ಆ ಪ್ರಭುದೇವರ ಬೆಸಗೊಂಬ ಪ್ರಸ್ತಾವದ ವಚನ:

೨೪೮

ಅಯ್ಯಾ, ಕಬ್ಬುನ ನೀರನೊಳಕೊಂಬಂತೆ,
ಶಬುದ ನಿರಾಳವನೊಳಕೊಂಬಂತೆ,
ಮರೀಚಿಯ ಬಯಲೊಳಕೊಂಬಂತೆ
ಎನ್ನನೆಂದೊಳಕೊಂಬೆ ಹೇಳಾ ಕಪಿಲಸಿದ್ಧಮಲ್ಲಿಕಾರ್ಜುನಾ? ॥೧೨೯॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಮಹಾನುಭಾವದ ವಾಕ್ಯವೆಂತಿದ್ದುದೆಂದಡೆ, ಆ ಪ್ರಸ್ತಾವದ ವಚನ:

೨೪೯

ತೆಱಹಿಲ್ಲದ ಘನವ ಮನ ಒಳಕೊಂಡು,
ತಲೆಯಿಲ್ಲದ ಮನವ ಘನ ಒಳಕೊಂಡು,
ತನಗೆ ತಾ ತರಹರವಾದ,
ಮರಳಿ ಇನ್ನು ಇಂಬುಗೊಡಲುಂಟೆ?
ಗೊಹೇಶ್ವರನ ಲೀಲೆ ಮಾಬನ್ನಕ್ಕರ,
ಉರಿಯೊಳಗಣ ಕರ್ಪುರದಂತಿರಬೇಕು ಕಾಣಾ ಸಿದ್ಧರಾಮಯ್ಯಾ. ॥೧೩೦॥

ಇಂತು ಪ್ರಭುದೇವರು ನಿರ್ವಾಣದ ನಿಲುಕಡೆಯಂ ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರು ಇಂತೀ ಕರ್ಮಕ್ರೀಗಳಿಂದ ನಿಮ್ಮ ಕಂಡೆನು; ನಿಮ್ಮ ಕಂಡ ಸುಕೃತದ ದೆಸೆಯಿಂದ ಎನಗೆ ನಿಜವು ಸಾಧ್ಯವಾಯಿತ್ತೆಂದು ಬಿನ್ನೈಸಿದ ಪ್ರಸ್ತಾವದ ವಚನ:

೨೫೦

ಕೆಱೆ ತೊಱೆ ದೇಗುಲಂಗಳ ಕಡೆಯಿಂದ ನಿಮ್ಮ ಕಂಡೆ,
ಎಡಹುವ ಕಲ್ಲ ತೆಗೆವ ಮಱೆಯಲ್ಲಿ ನಿಧಾನವ ಕಂಡಂತೆ.
ಎನ್ನ ಮನದ ಮಱವೆಯ ತಮದ ಅದ್ರಿಗೆ

ದಿನಮಣಿ ಜನಿಸಿದಂತೆ, ಕಪಿಲಸಿದ್ಧಮಲ್ಲಿಕಾರ್ಜುನಲಿಂಗವೆಂಬ ಭ್ರಾಂತು
ಸ್ವಯವಾಯಿತ್ತು ಪ್ರಭುದೇವರ ಕಾರುಣ್ಯದಿಂದ. ॥೧೩೧॥

ಇಂತು ಸಿದ್ಧರಾಮಯ್ಯದೇವರು ನಿಮ್ಮಿಂದ ಪರಬ್ರಹ್ಮಸ್ವರೂಪಾದೆನೆಂದು ಬಿನ್ನೈಸಲು, ಅದಕ್ಕೆ ಪ್ರಭುದೇವರು ಆ ಸಿದ್ಧರಾಮಯ್ಯದೇವರ ಸಮರಸವ ಕಂಡು ಕೊಂಡಾಡಿದ ಪ್ರಸ್ತಾವದ ವಚನ:

೨೫೧

ನಿರ್ವಿಕಲ್ಪಿತದ ಅದ್ವೈತವ ನೋಡಿರೆ!
ಬೆಳಗಿನೊಳಗಣ ಬೆಳಗು ಅಡಗಿತ್ತು ನೋಡಿರೆ!
ಚಂದ್ರಸೂರ್ಯರು ಭೂಲೋಕದೊಳಂದಾರುವ ಕಾಣೆ.
ಜ್ಯೋತಿ ಇಲ್ಲದ ಬೆಳಗಿನ ಪ್ರಭೆಯೊ!
ಗೊಹೇಶ್ವರಲಿಂಗದಲ್ಲಿ ಸಿದ್ಧರಾಮಯ್ಯದೇವರ
ಮಹಾಘನವನೇನೆಂಬೆನು! ॥೧೩೨॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಸಿದ್ಧರಾಮಯ್ಯದೇವರು ಆ ಪ್ರಭುದೇವರ ಕರಸ್ಥಲದ ಲಿಂಗದ ಆದ್ಯಂತಮಂ ಕೇಳಿದ ಪ್ರಸ್ತಾವದ ವಚನ:

೨೫೨

ಅಯ್ಯಾ, ನಿಮ್ಮ ಸರ ಉಂಡ ಸಬುದವೆನ್ನ ಮನಕ್ಕೆ ವೇದ್ಯವಾಯಿತ್ತು.
ನಿಮ್ಮ ನಿಜ ಉಂಡ ನಿಲವು ಎನ್ನ ಮತಿಗೆ ವೇದ್ಯವಾಯಿತ್ತು.
ನಿಮ್ಮ ಕರುಣ ಪ್ರಸಾದವೆನ್ನ ಸರ್ವಾಂಗ ವೇದ್ಯವಾಯಿತ್ತು.
ನಿಮ್ಮ ಕಾಯವಿಡಿದಿಪ್ಪ ಕರಸ್ಥಲದ ಕಾರಣವ ಹೇಳಾ
ಕಪಿಲಸಿದ್ಧಮಲ್ಲಿನಾಥಾ. ॥೧೩೩॥

ಇಂತು ಸಿದ್ಧರಾಮಯ್ಯದೇವರು ಬಿನ್ನಪಂಗೈಯಲು, ಪ್ರಭುದೇವರು ತಮ್ಮ ಕರಸ್ಥಲದ ಅನಾದಿಸಂಸಿದ್ಧಮಂ ನಿರೂಪಿಸುತ್ತಿರ್ದ ಪ್ರಸ್ತಾವದ ವಚನ:

೨೫೩

ಅನಾದಿಗಣನಾಥನ ಶಿಷ್ಯನು ಆದಿಗಣನಾಥನು.
ಆದಿಗಣನಾಥನ ಶಿಷ್ಯನು ಅಧ್ಯಾತ್ಮಗಣನಾಥನು.
ಅಧ್ಯಾತ್ಮಗಣನಾಥನ ಶಿಷ್ಯನು ಆತ್ಮಗಣನಾಥನು.
ಆತ್ಮಗಣನಾಥನ ಶಿಷ್ಯನು ವ್ಯೋಮಸಿದ್ಧಗಣನಾಥನು.
ವ್ಯೋಮಸಿದ್ಧಗಣನಾಥನ ಶಿಷ್ಯನು ಬಸವನೆಂಬ ಗಣನಾಥನು.
ಬಸವನೆಂಬ ಗಣನಾಥನ ಶಿಷ್ಯನು ಅನಿಮಿಷನೆಂಬ ಗಣನಾಥನು
ಅನಿಮಿಷನೆಂಬ ಗಣನಾಥನ ಶಿಷ್ಯನು ಅಲ್ಲಮಪ್ರಭುವೆಂಬ ಗಣನಾಥನು.
ಇಂತು ಅನಾದಿವಿಡಿದು ಬಂದ ಅನುಪಮಲಿಂಗವು

ಗೊಹೇಶ್ವರನೆಂಬ ಹೆಸರನೊಳಕೊಂಡು,
ಎನ್ನ ಕರಸ್ಥಲಕ್ಕೆ ಸಾಧ್ಯವಾಯಿತ್ತು ಕಾಣಾ ಸಿದ್ಧರಾಮಯ್ಯಾ. ॥೧೩೪॥

ಈ ಹೀಂಗೆಂದು ಪ್ರಭುದೇವರು ತಮ್ಮ ಕರಸ್ಥಲದ ಲಿಂಗದ ಪೂರ್ವಾಪರಮಂ ತಿಳಿಯ ಪೇಳಲು, ಸಿದ್ಧರಾಮಯ್ಯದೇವರು ಇಷ್ಟಲಿಂಗವಿಡಿದು ನಿಜಲಿಂಗೈಕ್ಯವ ಕಾಬ ಪರಿ ಹೇಗೆಂದು ಬೆಸಗೊಂಬ ಪ್ರಸ್ತಾವದ ವಚನ:

೨೫೪

ಕಾಯವೆ [1]ಪೀಠಿಕೆ[1], ಪ್ರಾಣವೆ ಲಿಂಗವಾಗಿರಲು,
ಬೇಱೆ ಮತ್ತೆ ಕುಱುಹೇಕಯ್ಯಾ?
ಕುಱುಹುವಿಡಿದು ಕೂಡುವ ನಿರವಯಲುಂಟೆ?
ಜಗದೊಳಗೆ ನಷ್ಟವ ಕೈಯಲ್ಲಿ ಹಿಡಿದು ದೃಷ್ಟವ ಕಂಡೆಹೆನೆಂದರೆ,
ಕಪಿಲಸಿದ್ಧಮಲ್ಲಿನಾಥಯ್ಯನು ಸಾಧ್ಯವಹ ಪರಿಯ ಹೇಳಾ ಪ್ರಭುವೆ. ॥೧೩೫॥

ಇಂತು ಕುಱುಹುವಿಡಿದು ನಿರವಯಲಿಂಗವನಱಿವ ಪರಿ ಹೇಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೨೫೫

ಇಷ್ಟಲಿಂಗದ ಪ್ರಾಣಲಿಂಗದ ಭೇದವನಾರು ಬಲ್ಲರು ಹೇಳಾ?
ಅಂತರಂಗವೆಂಬ ಶಬ್ದಕ್ಕೆ ಬಹಿರಂಗ ಮುಂದುಗೊಂಡಿಪ್ಪುದು.
ಮನವನೆಡೆಗೊಂಡ ಲಿಂಗದಱಿವು
ವಿಚಾರವ್ಯಾಕುಳಕ್ಕೊಳಗಾಗಬಾರದೆಂದು,
ಮನ ಭಾವ ಜ್ಞಾನ ನೋಟವ ತಂದು ಕರಸ್ಥಲದಲ್ಲಿ ನಿಕ್ಷೇಪಿಸಿ,
ಅಂತರಂಗ ಬಹಿರಂಗವೆಂಬುದನಱಿಯದೆ
ಅನಿಮಿಷನಾಗಿಪ್ಪನಾ ಶರಣನು.
ಪ್ರಾಣಲಿಂಗದ ಪ್ರಸನ್ನಮುಖವ ನೋಡಿ ಪರಿಣಾಮಿಸಲೋಸುಗರ,
ತೇಜವೆಂಬ ದರ್ಪಣವ ಹಿಡಿದು ಇರ್ಪನು ನೋಡಯ್ಯಾ.
ಗೊಹೇಶ್ವರಲಿಂಗದಲ್ಲಿ ನಿಜವನೆಯ್ದಿಹೆನೆಂದರೆ,
ಕುಱುಹುವಿಡಿದು ಕುಱುಹುಗೆಡಬೇಕು ಸಿದ್ಧರಾಮಯ್ಯಾ. ॥೧೩೬॥

ಈ ಹೀಂಗೆಂದು ಪ್ರಭುದೇವರು ತಮ್ಮ ಕರಸ್ಥಲದ ಇಷ್ಟಲಿಂಗದ ಸಂಬಂಧದ ಘನವ ವಿವೇಕಮುಖದಿಂ ತಿಳುಹಿ ತೋಱಲು, ಸಿದ್ಧರಾಮಯ್ಯದೇವರು ಪರಮಹರುಷಿತರಾಗಿ, ಆ ಕರಸ್ಥಲದ ಲಿಂಗದಲ್ಲಿ ಅಡಗಿರ್ಪ ನಿರ್ದೇಶವೆಷ್ಟು ಭೇದವೆಂದು ಬೆಸಗೊಂಬ ಪ್ರಸ್ತಾವದ ವಚನ:

---

೧ ಪೀಠಿಗೆ (ಮೂ)

೨೫೬

ಅಯ್ಯಾ, ನಿಮ್ಮ ಕರಸ್ಥಲದ ಘನವನುಪಮಿಸಬಲ್ಲವರಿಲ್ಲಯ್ಯಾ!
ನಿಮ್ಮ ಮಹಿಮೆಯನಱಿವಡೆ ನಾನೇತಱೊಳಗೇನಯ್ಯಾ!
ಆ ಇಷ್ಟಲಿಂಗ[೧][ವ][೧] ಮುಟ್ಟಿದ ಶರಣನೊಳಗೆ ಹುಟ್ಟಿದ
ಕರಸ್ಥಲವೆಷ್ಟೆಂಬುದ ತಿಳುಹಿ,
ಎನ್ನನುಳುಹಿಕೊಳ್ಳಾ ಕಪಿಲಸಿದ್ಧಮಲ್ಲಿಕಾರ್ಜುನಾ. ॥೧೩೭॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಇಷ್ಟಲಿಂಗದೊಳಗಣ ಸೂಕ್ಷ್ಮ ಭೇದಮಂ ಕೇಳಲು, ಪ್ರಭುದೇವರು ಸೂಕ್ಷ್ಮದ ಸ್ಥಿತಿಯನು ಸಂಗನಬಸವಣ್ಣ ಬಲ್ಲ. ಆತನಲ್ಲಿ ನಿನಗೆ ತಿಳಿಹಿಕೊಡಿಸಿಹೆನು ನಡೆ ಎಂದು ನಿರೂಪಿಸಿದ ಪ್ರಸ್ತಾವದ ವಚನ:

೨೫೭

ಆಯತಲಿಂಗವಿಡಿದು ಸ್ವಾಯತಲಿಂಗವ ಕಾಣಬೇಕು ಸಿದ್ಧರಾಮಯ್ಯಾ.
ಸ್ವಾಯತಲಿಂಗವಿಡಿದು ಜಂಗಮಲಿಂಗವ ಕಾಣಬೇಕು ಸಿದ್ಧರಾಮಯ್ಯಾ.
ಜಂಗಮಲಿಂಗವಿಡಿದು ಗುರುಲಿಂಗವ ಕಾಣಬೇಕು ಸಿದ್ಧರಾಮಯ್ಯಾ.
ಗುರುಲಿಂಗವಿಡಿದು ಶಿವಲಿಂಗವ ಕಾಣಬೇಕು ಸಿದ್ಧರಾಮಯ್ಯಾ.
ಶಿವಲಿಂಗವಿಡಿದು ಪ್ರಸಾದಲಿಂಗವನಱಿಯಬೇಕು ಸಿದ್ಧರಾಮಯ್ಯಾ.
ಇಂತು ಷಡುಸ್ಥಲದಂತುವ ಸಂಧಿಸಿ,
ಒಂದುಮಾಡಿಕೊಂಡಿಪ್ಪ ಕರಸ್ಥಲದನುವನು
ಗೊಹೇಶ್ವರನ ಶರಣ ಸಂಗನಬಸವಣ್ಣ ಬಲ್ಲ
ಬೆಸಗೊಂಬ ಬಾರಾ ಸಿದ್ಧರಾಮಯ್ಯಾ. ॥೧೩೮॥

ಇಂತು ಬಸವರಾಜದೇವರ ದರುಶನವಾಗಬೇಕು ನಡೆ ಎಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರು ಪರಮ ಹರುಷಿತರಾಗಿ ಬಿನ್ನೈಸಿದ ಪ್ರಸ್ತಾವದ ವಚನ:

೨೫೮

ಅಯ್ಯಾ, ಕರಸ್ಥಲದ ಘನ ನಿಮ್ಮಲ್ಲಿ ಇರಲಿ.
ಅಯ್ಯಾ, ನಿಮ್ಮ ನಿಮ್ಮ ಪರಸ್ಥಲದ ಘನ ನಿಮ್ಮಲ್ಲಿ ಇರಲಿ.
ಕರಸ್ಥಲವನೊಲ್ಲೆ, ಪರಸ್ಥಲವನೊಲ್ಲೆ ಆವುದನು ಒಲ್ಲೆ ನೋಡಯ್ಯಾ. ಕಪಿಲಸಿದ್ಧಮಲ್ಲಿನಾಥಯ್ಯಾ,
ನೀ ಒಲಿದ ಸಂಗನಬಸವಣ್ಣನ ಶ್ರೀಪಾದವ ತೋಱಿಹೆನೆಂಬ ಮಾತಿಂಗೆ ಮಾಱುವೋದೆನು.
ಇನ್ನು ತೋಱಿ ಎನ್ನನುಳುಹಿಕೊಳ್ಳಾ ಎನ್ನ ದೇವರದೇವಾ. ॥೧೩೯॥

ಇಂತು ಸಿದ್ಧರಾಮಯ್ಯದೇವರು ಬಿನ್ನೈಸಲು, ಪ್ರಭುದೇವರು ಸಿದ್ಧರಾಮಯ್ಯದೇವರ ನೊಡಗೊಂಡು ಕಲ್ಯಾಣದತ್ತಲಭಿಮುಖವಾಗಿ ಬರುತ್ತಿರ್ಪ ಪ್ರಸ್ತಾವದ ವಚನ:

೧-೧ ದೊಳಗೆ(ಮೂ)

೨೫೯

ಅಂಗದಲ್ಲಿ ಆಚಾರವ ಸ್ವಾಯತವ ಮಾಡಿಕೊಂಡನು.
ಆಚಾರದಲ್ಲಿ ಪ್ರಾಣವ ಸ್ವಾಯತವ ಮಾಡಿಕೊಂಡನು.
ಪ್ರಾಣದಲ್ಲಿ ಲಿಂಗವ ಸ್ವಾಯತವ ಮಾಡಿಕೊಂಡನು.
ಲಿಂಗದಲ್ಲಿ ಜಂಗಮವ ಸ್ವಾಯತವ ಮಾಡಿಕೊಂಡನು.
ಜಂಗಮದಲ್ಲಿ ಪ್ರಸಾದವ ಸ್ವಾಯತವ ಮಾಡಿಕೊಂಡನು.
ಪ್ರಸಾದದಲ್ಲಿ ನಿತ್ಯವ ಸ್ವಾಯತವ ಮಾಡಿಕೊಂಡನು.
ನಿತ್ಯದಲ್ಲಿ ದಾಸೋಹವ ಸ್ವಾಯತವ ಮಾಡಿಕೊಂಡನು.
ದಾಸೋಹದಲ್ಲಿ ತನ್ನ ಮಱೆದು ನಿಶ್ಚಿಂತನಿವಾಸಿಯಾಗಿ ಐದಾನೆ.
ನಮ್ಮ ಗೊಹೇಶ್ವರಲಿಂಗದಲ್ಲಿ ಸಂಗನಬಸವಣ್ಣನ ಶ್ರೀಪಾದಕ್ಕೆ ಶರಣೆಂದು
ಧನ್ಯರಾಗಬೇಕು ನಡೆಯಾ ಸಿದ್ಧರಾಮಯ್ಯಾ! ॥೧೪೦॥

ಇಂತೀ ಶ್ರೀಮತ್ ಸಕಲಗಣ ಪುರಾತನರೊಳ್ ಪ್ರಭುದೇವರು ಮಹಾನುಭಾವಸದ್ಗೋಷ್ಠಿಯಂ ಮಾಡಿದ
ಶೂನ್ಯಸಂಪಾದನೆಯೊಳ್
ಸಿದ್ಧರಾಮಯ್ಯದೇವರ ಸಂಪಾದನೆಗಂ
ತೃತೀಯೋಪದೇಶಂ ಸಮಾಪ್ತಂ
ಅಂತು ವಚನ ೨೫೯ ಕ್ಕಂ ಮಂಗಳ ಮಹಾ ಶ್ರೀ

❖

೪

ಬಸವೇಶ ಚನ್ನಬಸವೇಶಂಗನುಗ್ರಹ ಮಾಡಿದ ಸಂಪಾದನೆ

ಕಂದ:

ಚೆನ್ನಬಸವೇಶಗೊಲವಿಂ
ನನ್ನಿಯೊಳುಪದೇಶದೆಸಕಮಂ ಬಸವೇಶಂ
ಸನ್ನುತಮಾಗಿತ್ತುದನೊಲ
ವಿಂ ನಿಜಶರಣರ್ಗೆ ಬಿನ್ನವಿಪೆನಹುದೆ[೧]ನ್ನಲ್[೧] ॥೧॥

ಅದೆಂತೆಂದೊಡಾ ಪ್ರಭುದೇವರು ಸಿದ್ಧರಾಮಯ್ಯದೇವರು ಬಸವರಾಜದೇವರ ಮಹಾತ್ಮೆಯನು ಕೊಂಡಾಡುತ್ತ, ಪರಮಾನಂದದೊಳೋಲಾಡುತ್ತ ಬರುತ್ತಿರಲತ್ತ, ಅಖಂಡಾದ್ವಯ ನಿತ್ಯ ನಿರವಯ ನಿಶ್ಶೂನ್ಯವಪ್ಪ ನಿಷ್ಕಲಪರಶಿವನ ಸ್ಥೂಲತತ್ತ್ವವೆ ಮರ್ತ್ಯಲೋಕದಲ್ಲಿ ಜಗಹಿತಾರ್ಥವಾಗಿ ಬಸವೇಶ್ವರನೆಂಬ ನಾಮದಿಂದವತರಿಸಿ, ಷಡುದರುಶನ ಷಟ್‌ಸಮಯಂಗಳಿಂದ ವೀರಶೈವ ಸದ್‌ಭಕ್ತಿ ಮಸುಳಿಸಿರಲಾ ಶಿವಭಕ್ತಿಯನುದ್ಧರಿಸಿ, ಸರ್ವಾಚಾರವನಿಂಬುಗೊಂಡು, ಕಲ್ಯಾಣಪಟ್ಟಣದಲ್ಲಿ ಗುರು ಲಿಂಗ ಜಂಗಮ ಭಕ್ತಿಯ ಮಾಡುತ್ತ, ನಿತ್ಯ ಎಂಬತ್ತೆಂಟು ಪವಾಡಂಗ[೨]ಳಂ[೨] ಜಯಿಸುತ್ತಿರ್ಪ ಬಸವೇಶ್ವರನೆಂತಾತನೆಂದೊಡೆ:

ಶೈವಂಗೆದೆಗೊಂತ, ವೈಷ್ಣವಜೀಮೂತಝುಂಝಾಮಾರುತ, ಚಾರ್ವಾಕಚೌದಂತ ಸೃಣಿ, ಬೌದ್ಧದುರ್ದುರಘಣಿ, ಕ್ಷಪಣವನದಾವಾನಲ, ನೈಯಾಯಿಕ ಹರಿಣ ಶಾರ್ದೂಲ, ಭಾಟ್ಟಮತಶರಧಿಕುಂಭಜ, ಪ್ರಭಾಕರಕದಳೀಮತ್ತಗಜ, ಮೀಮಾಂಸಹಿಮಚೈತ್ರ, ವೈಶೇಷಲತಾಲವಿತ್ರ, ಕಾಪಾಲಕುಮುದಮಾರ್ತಂಡ, ಸಾಂಖ್ಯಮತ ಶರಭಭೇರುಂಡ, ಕರ್ಮವಾದಕುಧರಕುಲಿಶ, ಕಾಲವಾದ ಕಮಲತಾರೇಶ, ಮಂತ್ರವಾದಮಸ್ತಕಶೂಲ, ಮಾಯಾವಾದಮೂಲಕುದ್ದಾಲ, ಕೌಳಮತತರುಪರಶು, ಕಾಳಾಮುಖಕಂಠಪಾಶ, ಶಾಕ್ತೇಯತಿಮಿರದೀಪ, ಸೌರಮತಪನ್ನಗಖಗಾಧಿಪನೆನಿಸಿ, ವೀರಶೈವ ಸದ್ಭಕ್ತಿಯಂ ವರ್ಧನಂಗೈವುತ್ತ, ಶಿವಶರಣಸಾಗರಕ್ಕೆ ಪೂರ್ಣೇಂದುವಾಗಿ ಸುಖಮಿ[೩]ರುತ್ತಿರಲೊಂದು ದಿನ ಶಿವಲಿಂಗಾರ್ಚನೆಯಂ ಮಾಡುತ್ತ, ಲಿಂಗದೊಳ್ ತಿಳಿದು, ಆ ಲಿಂಗದ ಕಳೆ ಏಕವಾಗಿ ವಾರಿ

೧–೧ ನಲ್ (ಮೂ) ೨–೨ ಳ (ಮೂ) ೩–ವಿ (ಮು)

ವಾರಿ ಕೂಡಿದಂತೆ , ಕ್ಷೀರ ಕ್ಷೀರ ಬೆರದಂತೆ, ರತ್ನದೊಳ್ ಕಳೆ ಬೆರೆಸಿಪ್ಪಂತೆ ಅಂತರಂಗದ ಜ್ಞಾನ ಬಹಿರಂಗದ ಕ್ರೀ ಒಂದಾಗಿ, ಇಷ್ಟಲಿಂಗದ ಕಳೆ ಪ್ರಾಣಕ್ಕೆ ವೇಧಿಸಿ, ಪ್ರಾಣಲಿಂಗ ಸಂಬಂಧವಪ್ಪ ಭೇದವು ಶರಣಸಂಗದಿಂದಲ್ಲದೆ ದೊರಕೊಳ್ಳದೆಂದು ಜ್ಞಾನಮುಖದೊಳ್ ನಿರೀಕ್ಷಿಸುತ್ತಿರಲು, ನಿಷ್ಕಲ ಪರಶಿವನ ಸೂಕ್ಷ್ಮತತ್ತ್ವವೆ ಚೆನ್ನಬಸವೇಶ್ವರನೆಂಬ ನಾಮದಿಂದ ಮರ್ತ್ಯಕ್ಕವತರಿಸಿ, ಸಕಲಪ್ರಮಥರ್ಗೆ ಷಟ್‌ಸ್ಥಲಮಂ ಬೋಧಿಸುವದಕ್ಕೆ ತಾನೆ ಕಾರಣವಾಗಿ ಅಲ್ಲಮಪ್ರಭುದೇವರ [೧]ಬರವಿಂಗೆ[೧] ತಾನೆ ಮೂಲಿಗನಾಗಿ ಬಂದು, ಆ ಬಸವೇಶ್ವರನ ಸ್ತೋತ್ರಮಂ ಮಾಡಿ ಅನುಗ್ರಹ[೨]ವಂ[೨] ಪಡೆದರದೆಂತೆಂದೊಡೆ, ಆ ಪ್ರಸ್ತಾವದ ವಚನ:

೨೬೦

ಮೀನಜ ರೋಮಜ ಋಷಿಯರು ಮೊದಲಾದ
ಅನಂತಕೋಟಿ ಹರಿಬ್ರಹ್ಮರಿಲ್ಲದಂದು.
ಅಲ್ಲಿಂದತ್ತತ್ತ ನೀನೇಕೋ ಲಿಂಗ ಒಬ್ಬನೆ ಶರಣ.
ಗುರುವೆ, ಪರಮ ಗುರುವೆ, ನೀನೆ ಗತಿಯಯ್ಯಾ!
ಆದಿ ಕುಳಕ್ಕೆ ಮೂಲಿಗನಾಗಿ ಸುಳುಹುದೋಱಿ
ಪಾವನವ ಮಾಡಬಂದಿರಿ.
ಬಹುಮುಖ ಜೀವರಿಗೆ ಬಹುಮುಖ ಪ್ರಸಾದವ ತೋಱಿದಿರಯ್ಯಾ!
ಭುವನವ ಸಲಹಲೆಂದವತರಿಸಿದಿರಿ.
ಆದಿ ಲಿಂಗ ಅನಾದಿ ಶರಣನೆಂಬುದು ತಪ್ಪದು.
ನೀವು ಪುಟ್ಟಿಸಿದ ಘಟಕ್ಕೆ ಕಾರುಣ್ಯವ ಮಾಡಿ ಸಲಹಯ್ಯಾ
ಕೂಡಲಚೆನ್ನಸಂಗಮದೇವಾ. ॥೧॥

ಇಂತು ಚಿಕ್ಕದಣ್ಣಾಯಕರು ಉಪಾವಸ್ತೆಯಂ ಮಾಡಲು, ಬಸವರಾಜದೇವರು ಭಕ್ತಿಭಾವ ಸಂಪನ್ನರಾಗಿ ಸರ್ವವೂ ಸಂಗಮನಾಥನೆಂಬ ಭಾವದಿಂದ, ನಾನು ಉಪದೇಶವ ಮಾಡಲಮ್ಮೆನೆಂದು ನಿರೂಪಿಸಿದ ಪ್ರಸ್ತಾವದ ವಚನ:

೨೬೧

ಹೋ, ಹೋ, ನಾನೊಬ್ಬರಿಗೆಯು ಉಪದೇಶವ ಮಾಡಲಮ್ಮೆನು,
ಮುನ್ನಲಾದವರು ತಮ್ಮಿಂದ ತಾವಾದರು.
ಅವರೆಲ್ಲರೂ ನಿಜಲಿಂಗೈಕ್ಯರು.
ನಾನೇನುವ ಮಾಡಿತಿಲ್ಲ.
ತತ್ತ್ವವ ಹಿಡಿದವರಿಗೆ ತೊತ್ತಾಗಿ ನಡೆವೆನು.
ಅಮರಗಣಂಗಳು ಸಾಕ್ಷಿಯಾಗಿ,
ಕೂಡಲಸಂಗಮದೇವರ ಮುಂದೆ
ಭಾಷೆ-ಪ್ರಸಾದವನಿಕ್ಕಲಮ್ಮೆನಯ್ಯಾ ಚೆನ್ನಬಸವಣ್ಣಾ. ॥೨॥

೧-೧ ಬರವಿಗೆ (ಮು) ೨-೨ ವ(ಮೂ)

ಈ ಹೀಂಗೆಂದು ಬಸವರಾಜದೇವರು ನಿರೂಪಿಸಲು, ಅದಕ್ಕೆ ಚೆನ್ನಬಸವಣ್ಣನು ನಿಮ್ಮ ಕರುಣದಿಂದ ಅನುಗ್ರಹವ ಪಡೆವೆನಲ್ಲದೆ ಬಿಡುವವನಲ್ಲ; ಅನಾದಿವಿಡಿದು ನಾನು ನಿಮ್ಮ ಶಿಷ್ಯನೆಂಬ ಭೇದವ ತೋಜೆಸಿ ಒಡಂಬಡಿಸಿ ಉಪಾವಸ್ಥೆಯಂ ಮಾಡುವ ಪ್ರಸ್ತಾವದ ವಚನ:

೨೬೨

ಅಂಜದಿರಿ ಅಂಜದಿರಿ.
ನಿಮ್ಮ ಪ್ರಮಥರ ಮುಂದೆ ನಿಮಗೆ ಅಹುದಹುದೆನಲು
ನಿಮಗನಾದಿಯ ಶಿಶು ನಾನಯ್ಯ!
ಅದೆಂತೆಂದಡೆ:
ಅಂಜನೆಗೆ ಜಲಗರ ಬೆಳೆಯಿತ್ತೆಂದು
ಅಂಜಿ ಹೇಮರಸವ ಕುಡಿದಲ್ಲಿ
ಒಳಗಿದ್ದ ಕಪಿ ಶೃಂಗಾರವ ಮಾಡನೆ?
ಕೆಡುವುದೆ ಗುರುವಿನುಪದೇಶ?
ಪಿಂಡವ ಮಱೆವುದೆ ಶಿವಜ್ಞಾನವು?
ಹಿಂದೆ ಏಳುನೂಱು ವರುಷ
ಮಂಡೋದರಿಯ ಬಸುಱಲ್ಲಿ ಉದಯಂಗೈಯ್ಯನೆ ಇಂದ್ರಜಿತು?
ನೀವು, ನಾನು ಹೊಟ್ಟೆಯಲ್ಲಿರ್ದಂದು
ವಿಭೂತಿಯ ಪಟ್ಟವ ಕಟ್ಟಿದಂದೆ ಅನುಗ್ರಹವಾಯಿತ್ತು.
ಕೂಡಲಚನ್ನಸಂಗಮದೇವಯ್ಯಾ,
ನಿಮ್ಮ ತೊತ್ತಿನ ತೊತ್ತು ನಾನು ಚೆನ್ನಬಸವಣ್ಣನು. ॥೩॥

ಈ ಹೀಂಗೆಂದು ಚಿಕ್ಕದಣ್ಣಾಯಕರು ಬಿನ್ನೈಸಲು ಬಸವರಾಜದೇವರು ಎಲ್ಲಾ ಶಿವಭಕ್ತರಿಗೆಯು ಶಿಶುವಲ್ಲದೆ, ಒಬ್ಬರಿಗೆಯು ನಾನು ಗುರುವಲ್ಲವೆಂದು ನಿರೂಪಿಸಿದ ಪ್ರಸ್ತಾವದ ವಚನ:

೨೬೩

ಆದಿ ಅನಾದಿಯಿಂದತ್ತತ್ತ ಮುನ್ನ
ಲಿಂಗಜಂಗಮವೆಂಬುದನಾರು ಬಲ್ಲವರಿಲ್ಲವೆಂದು
ಇದಱ ಸಕೀಲ ಸಂಬಂಧವ ತಿಳುಹಲೆಂದು
ಮರ್ತ್ಯಕ್ಕೆ ಕಳುಹಿದನು ಶಶಿಧರನು.
ಅಂಗದ ಮೇಲೆ ಲಿಂಗವುಳ್ಳುದೆಲ್ಲವು
ಸಂಗಮನಾಥನಲ್ಲದೆ ಮತ್ತಾರನು ಕಾಣೆ.
ಶಿಷ್ಯಂಗೆ ಗುರು ಉಪದೇಶವ ಮಾಡಬೇಕಲ್ಲದೆ,
ಗುರುವಿಂಗೆ ಶಿಷ್ಯನನುಗ್ರಹವ ಮಾಡಿದ ಠಾವುಂಟೆ?
ಎನ್ನ ಅಱಿವಿನ ಆದಿಗೆ ನೀನೆ ಕರ್ತನೆಂದು ನಾನಿರುತ್ತಿರಲು,
ನಿನಗೆ ನಾನಿನ್ನು ಅನುಗ್ರಹವ ಮಾಡುವ ಪರಿ ಎಂತಯ್ಯಾ?

ಕೂಡಲಸಂಗಮದೇವರ ಸ್ವರೂಪೆಂದು
ನಿನ್ನ ಕಂಡಿಪ್ಪೆ ಕಾಣಾ ಚೆನ್ನಬಸವಣ್ಣಾ! ॥೪॥

ಈ ಹೀಂಗೆಂದು ಬಸವರಾಜದೇವರು ನಿರೂಪಿಸಲು, ಚಿಕ್ಕದಣ್ಣಾಯಕರು ಬಿನ್ನೈಸಿದ ಪ್ರಸ್ತಾವದ ವಚನ:

೨೬೪

ಆದಿ ಲಿಂಗ, ಅನಾದಿ ಶರಣನೆಂಬುದು ತಪ್ಪದು.
ಆದಿ ಗುರು, ಅನಾದಿ ಶಿಷ್ಯನೆಂಬುದು ತಪ್ಪದು.
ಗುರುವಿಂಗೆ ಶಿಷ್ಯಂಗೆ ಏನು ದೂರ ದೇವಾ?
ಮುಳ್ಳು ಗುತ್ತುವರೆ, ತೆಱಹಿಲ್ಲದ ಪರಿಪೂರ್ಣ ಘನವು
ಒಬ್ಬರಲ್ಲಿ ಒಂದು ಭಾವ ಉಂಟೆ?
ಎನ್ನೊಳಗೆ ಬೆಳಗುವ ಜ್ಞಾನ,
ನಿನ್ನ ಹೃದಯಕಮಲದೊಳಗಣ ಅವ್ಯಕ್ತಲಿಂಗ.
ನಿನ್ನೊಳು ತೊಳಗಿ ಬೆಳುಗುವ ಜ್ಯೋತಿರ್ಲಿಂಗ
ಎನ್ನ ಸುಜ್ಞಾನಲಿಂಗ.
ಒಂದಱಲ್ಲಿ ಒಂದು ಬಿಚ್ಚಿ ಬೇಱುಮಾಡಬಾರದಾಗಿ,
ಪ್ರಾಣಲಿಂಗ ಒಂದೆ, ಉಪದೇಶ ಒಂದೆ, ಕ್ರಿಯಾಕರ್ಮ ಒಂದೆ,
ನೀವಿನ್ನಾವುದ [1]ಬೇಱು[1]ಮಾಡಿ ನುಡಿವಿರಯ್ಯಾ?
ಕಾರ್ಯದಲ್ಲಿ ಗುರುವಾಗಿ
ಅಂತರಂಗಕ್ಕೆ ಸುಜ್ಞಾನೋಪದೇಶವ ಮುನ್ನವೆ ಮಾಡಿದ ಬಳಿಕ,
ಕ್ರೀಯಿಂದ ಮಾಡಲಮ್ಮೆನೆಂದರೆ ಹೋಹುದೆ?
ಕೂಡಲಚೆನ್ನಸಂಗಮದೇವರು ಸಾಕ್ಷಿಯಾಗಿ,
ಎನಗೆ ನೀವು ಉಪದೇಶವ ಮಾಡಿದರೆ,
ಮರ್ತ್ಯಲೋಕದ ಮಹಾಗಣಂಗಳ ಕೈಯಲ್ಲಿ
ಅಹುದಹುದೆನಿಸುವೆ ಕಾಣಾ ಸಂಗನಬಸವಣ್ಣಾ. ॥೫॥

ಈ ಹೀಂಗೆಂದು ಚಿಕ್ಕದಣ್ಣಾಯಕರು ಬಿನ್ನೈಸಲು, ಅದಕ್ಕೆ ಬಸವರಾಜದೇವರು ನಿರೂಪಿಸಿದ ಪ್ರಸ್ತಾವದ ವಚನ:

೨೬೫

ಗುರುವಿಂಗೆ ನೀನೆ ಕರ್ತ, ಲಿಂಗಕ್ಕೆ ನೀನೆ ಕರ್ತ,
ಜಂಗಮಕ್ಕೆ ನೀನೆ ಕರ್ತ, ಪ್ರಸಾದಕ್ಕೆ ನೀನೆ ಕರ್ತ,
ಉಪದೇಶಕ್ಕೆ ನೀನೆ ಕರ್ತ, ಕೂಡಲಸಂಗಮದೇವರು ಸಾಕ್ಷಿಯಾಗಿ,

೧–೧ ಬೇಱೆ(ಮೂ)

ಎನಗೆಯೂ ನೀನೆ ಕರ್ತನಾದ ಕಾರಣ
ನಾನು ಬೇಕೆನಲಮ್ಮೆ, ಬೇಡಾ ಎನಲಮ್ಮೆನು ಕಾಣಾ
ಚೆನ್ನಬಸವಣ್ಣಾ. ॥೬॥

ಎನಗೆ ನೀನೆ ಕರ್ತನಾದ ಕಾರಣ ನೀನೆ[1]ಹಗೆ[1] ಮಾಡಿದರೆ [2]ಅಹಗೆ[2] ಮಹಾಪ್ರಸಾದವೆಂಬೆನಲ್ಲದೆ, ಬೇಱೆ ಸ್ವತಂತ್ರವನಱಿಯೆನೆಂದು ಬಸವರಾಜದೇವರು ನಿರೂಪಿಸಲು, ಚಿಕ್ಕದಣ್ಣಾಯಕರು ಆ ಉತ್ತರಕ್ಕೆ ಮಹಾಪ್ರಸಾದವೆಂದು ಅನುಗ್ರಹವ ಮಾಡಿಸಿಕೊಂಬ ಪ್ರಸ್ತಾವದ ವಚನ:

೨೬೬

ದೇವ ದೇವ, ಮಹಾಪ್ರಸಾದ.
ತನ್ನ ರೂಪ ತಿಳಿದು ನೋಡಬೇಕೆಂದು
ಕನ್ನಡಿಯನುಪಾವಸ್ತೆಯ ಮಾಡಲು,
ಆ ಕನ್ನಡಿ ಬೇಕು ಬೇಡೆಂಬುದೇ ಅಯ್ಯಾ?
ಪತಿಯಾಜ್ಞೆಯಿಂದ ಸತಿಪತಿಭಾವವ ಧರಿಸೆಂದರೆ,
ಸಂಯೋಗ ಕಾಲದಲ್ಲಿ ಅಲ್ಲವೆಂದೆನಬಹುದೆ?
ನೀವೆ ಮಾಡಿದರೆ ನೀವೆ ಮಾಡಿದುದು,
ನಾನೆ ಮಹಾಪ್ರಸಾದವ ಸ್ವೀಕರಿಸಿದರೂ ನೀವೆ ಮಾಡಿದುದು.
ಅಂಗಯ್ಯ ಲಿಂಗವ ಲಕ್ಷಣವ ನೋಡೆಂದು ಕೈಯಲ್ಲಿ ಕೊಟ್ಟರೆ,
ಲಿಂಗದಲ್ಲಿ ಲಕ್ಷಣವ ನೋಡಲಾಗದೆಂದು
ಚೆನ್ನಸಂಗಮನಾಥನ ಕೋ ಎಂದು ಕೊಟ್ಟರೆ,
ಮಹಾಪ್ರಸಾದವೆಂದು ಕೈಕೊಂಡೆನು.
ಗುರು ಬೆದಱಿ ಅಂಜಿದರೆ, ಮನವ ಸಂತೈಸಿ
ಏಕಾರ್ಥದ ಭೇದವ ತೋಱಿ ಬಿನ್ನಹವ ಮಾಡಿದೆನು.
ಕೂಡಲಚೆನ್ನಸಂಗಮದೇವರ ಮಹಾಮನೆಯ ಗಣಂಗಳು ಮೆಚ್ಚಲು,
ಸಂಗನಬಸವಣ್ಣನ ಕರುಣದ ಶಿಶುವೆಂಬುದ
ಮೂಱುಲೋಕವೆಲ್ಲವೂ ಅಱಿದು ಜಯ ಜಯ [3]ಎನುತ್ತಿದ್ದಿತ್ತು.[3] ॥೭॥

ಮತ್ತಂ,

೨೬೭

ಕೃತಯುಗ ತ್ರೇತಾಯುಗ ದ್ವಾಪಾರ ಕಲಿಯುಗವಿಲ್ಲದಲ್ಲಿಂದತ್ತತ್ತ ನೋಡಾ!
ಧರೆಯೂ ಬ್ರಹ್ಮಾಂಡವೂ ಮೂರುತಿಗೊಳ್ಳದಲ್ಲಿಂದತ್ತತ್ತಲಾದ
ಮಹಾಪ್ರಸಾದವ ಸಾಧಿಸಿ ತಂದು
ಎನ್ನ ಕೈಯಲ್ಲಿ ಕೊಟ್ಟನಯ್ಯಾ ನಿಕ್ಷೇಪವಾಗಿ
ಕೂಡಲಚೆನ್ನಸಂಗನಲ್ಲಿ ಬಸವಣ್ಣನೆಂಬ ಗುರುಲಿಂಗವು. ॥೮॥

೧-೧ ಹೇಂಗೆ(ಮೂ) ೨-೨ ಅಹಂಗೆ(ಮೂ) ೩-೩ ಎನುತಿರ್ದಿತ್ತು(ಮೂ)

ಇಂತು ಬಸವರಾಜದೇವರ ಕೈಯಲ್ಲಿ ಉಪದೇಶವ ಪಡೆದು, ಲಿಂಗಾನುಗ್ರಹವ ತಾಳ್ದ ಚಿಕ್ಕದಣ್ಣಾಯಕರು ತಮಗೆ ಲಿಂಗಸ್ವಾಯತ ಸಂಬಂಧ ಸಯವಾದ ಭೇದಮಂ ವಿವೇಕಮುಖದಿಂ ಪ್ರತಿಷ್ಠಿಸಿಕೊಂಡ ಪ್ರಸ್ತಾವದ ವಚನ:

೨೬೮

ಭಾವದಲ್ಲಿ ಗಮನ, ಪ್ರಾಣದಲ್ಲಿ ಲೋಭ,
ಜಿಹ್ವೆಯಲ್ಲಿ ರುಚಿ, ಶ್ರೋತ್ರದಲ್ಲಿ ಕುಶಬ್ದ,
ನಾಸಿಕದಲ್ಲಿ ದುರ್ಗಂಧ, ನೋಟದಲ್ಲಿ ಕಾಮ, ಶಬ್ದದಲ್ಲಿ ವಿರೋಧ–
ಇಂತಹ ಭವಿಯ ಕಳೆದು ಭಕ್ತನ ಮಾಡಿದ ಪರಿ ಎಂತೆಂದಡೆ:
ಆಕಾರವಿಲ್ಲದಂದಿನ, ನಿರಾಕಾರವಿಲ್ಲದಂದಿನ,
ಕಾಮನ ಸುಟ್ಟ ಭಸ್ಮವಿಲ್ಲದಂದಿನ,
ತ್ರಿಪುರವ ಸುಟ್ಟ ಭಸ್ಮವಿಲ್ಲದಂದಿನ.
ಕಾಲನ ಸುಟ್ಟ ಭಸ್ಮವಿಲ್ಲದಂದಿನ,
ಆದಿಯಾಧಾರವಿಲ್ಲದಂದಿನ ಚಿದ್ವಿಭೂತಿಯನೆ ತಂದು ಪಟ್ಟವ ಕಟ್ಟಿದರೆ,
ಭಾವಕ್ಕೆ ಗುರುವಾಯಿತ್ತು; ಪ್ರಾಣಕ್ಕೆ ಲಿಂಗವಾಯಿತ್ತು;
ಜಿಹ್ವೆಗೆ ಪ್ರಸಾದವಾಯಿತ್ತು;
ಶ್ರೋತ್ರಕ್ಕೆ ಶಿವಮಂತ್ರವಾಯಿತ್ತು;
ನಾಸಿಕಕ್ಕೆ ಸುಗಂಧವಾಯಿತ್ತು;
ನೋಟಕ್ಕೆ ಜಂಗಮವಾಯಿತ್ತು;
ಶಬ್ದಕ್ಕೆ ಸಂಭಾಷಣೆಯಾಯಿತ್ತು.
ಇಂತು ಪೂರ್ವಗುಣಂಗಳೆಲ್ಲವ ಕಳೆದು
ಪುನರ್ಜಾತನಾದ ಕಾರಣ,
ಕೂಡಲಚೆನ್ನಸಂಗನಲ್ಲಿ ಬಸವಣ್ಣನಿಂದ ಸರ್ವಾಂಗಲಿಂಗಿಯಾದೆನು. ॥೯॥

ಮತ್ತಂ,

೨೬೯

ಪೃಥ್ವಿ ಅಪ್ಪು ತೇಜ ವಾಯು ಆಕಾಶವೆಂಬ ಪಂಚಭೂತಂಗಳಲ್ಲಿ
ಪಂಚಲಿಂಗ ಪ್ರತಿಷ್ಠೆಯ ಮಾಡಿದನಯ್ಯಾ!
ಮನ ಬುದ್ಧಿ ಚಿತ್ತ ಅಹಂಕಾರವೆಂಬ ಅಂತಃಕರಣಚತುಷ್ಟಯಂಗಳಲ್ಲಿ ಚತುರ್ಮುಖಲಿಂಗವನು
ಪ್ರತಿಷ್ಠೆಯ ಮಾಡಿದನಯ್ಯಾ!
ಶ್ರೋತ್ರ ನೇತ್ರ ಘ್ರಾಣ ತ್ವಕ್ಕು ಜಿಹ್ವೆ ವಾಕ್ಕು ಪಾಣಿ ಪಾದ ಪಾಯು ಗುಹ್ಯಂಗಳೆಂಬ
ದಶೇಂದ್ರಿಯಂಗಳಲ್ಲಿ ದಶಮುಖಲಿಂಗವ[೧]
ಪ್ರತಿಷ್ಠೆಯ ಮಾಡಿದನಯ್ಯಾ!

---

೧ X (ಮೂ)

ಅಂತರಂಗ ಬಹಿರಂಗವ [1]ಹತವ[1] ಮಾಡಿದನಯ್ಯಾ
ಕೂಡಲಚನ್ನಸಂಗಮದೇವಾ, ಎನ್ನ ಶ್ರೀಗುರು ಬಸವಣ್ಣನು. ॥೧೦॥

ಮತ್ತಂ,

೨೭೦

ಹಸ್ತಮಸ್ತಕ[2]ಸಂಯೋಗವಾಗದ[2] ಮುನ್ನ ಯೌವನ ಮಥನವಾಯಿತ್ತು.
ಆವುದ ಅಂತರಂಗವೆಂಬೆ? ಆವುದ ಬಹಿರಂಗವೆಂಬೆ?
ಆವುದನಾತ್ಮಸಂಗವೆಂಬೆ?
ಹಸ್ತ ಮಸ್ತಕಸಂಯೋಗವೆಂಬುದೆ ಬಹಿರಂಗ.
ಮನ ಸಂಯೋಗವೆಂಬುದೆ ಅಂತರಂಗ.
ಕೂಡಲಚೆನ್ನಸಂಗಯ್ಯನಲ್ಲಿ ಆತ್ಮಸಂಗವಾಯಿತ್ತು. ॥೧೧॥

ಆ ಚೆನ್ನಬಸವರಾಜದೇವರು ತಮಗೆ ಉಪದೇಶವ ಮಾಡಿದ ಮಹಾತ್ಮೆಯನು ವಿವೇಕಮುಖದಿಂದಱಿದು ಪರಿಣಾಮಿಸಿ ಕೃತನಿಶ್ಚಯವನ್ನೈದಿದ ಪ್ರಸ್ತಾವದ ವಚನ:

೨೭೧

ಪ್ರಥಮಗುರು [3]ಕಾಣಲಿಕೆ[3]ಯಾಗಿ ಕರ್ಮಂಗಳು ಬೆಚ್ಚಿ ಬೆದಱಿದವು.
ಆಶೆಯಾಮಿಷ ತಾಮಸ ಕುಟಿಲಂಗಳು
ತಮಗೆ ನಿಂದಿರೆ ಠಾವಿಲ್ಲೆನುತ್ತಿರ್ದವು.
ಸದ್‌ಗುರು ಕಾರುಣ್ಯ ಹಸ್ತಮಸ್ತಕಸಂಯೋಗದಲ್ಲಿ
ಪೂರ್ವಗುಣವಳಿದು ಪುನರ್ಜಾತನಾಗಿ,
ಕರಣಾದಿ ಗುಣಂಗಳ ಕಳೆದು ಶಿವಲಿಂಗದಲ್ಲಿ ಉಳಿದು,
ಅನುಪಮ ಸುಖಸಾರಾಯ ಶರಣನೆನಿಸಿದರೆ,
ಇದನಱಿದು ಲಿಂಗದಲ್ಲಿ ತದುಗತನಾಗಿದ್ದೆನು.
ಜಂಗಮದಲ್ಲಿ ಕರುಣವ ಪಡೆದು,
ಭವಿಯನೊಲ್ಲೆನೆಂದು ಬೇಱೆ ನಿಂದ ಕಾರಣ,
ಕೂಡಲಚೆನ್ನಸಂಗಮದೇವಾ,
ನಿಮ್ಮ ಶರಣ ಬಸವಣ್ಣ ಭವಕಲ್ಪಿತವ ಕಳೆದನು. ॥೧೨॥

ಮತ್ತಂ,

೨೭೨

ಚರಣವಿಡಿದಂಗೆ ಕರುಣಿ ಕಂದೆಱವೆಯ ಮಾಡಬೇಕೆಂದು
ಮಱಹಿಂದ ಬಂದ ಕಾಯದ ಕರ್ಮವ ಕಳೆದು,
ಕರುಣಿ ಕಂದೆಱವೆಯ ಮಾಡಿದ
ಪ್ರಾಣಲಿಂಗ ಸಂಬಂಧವೆಂತಿದ್ದುದೆಂದಡೆ:

೧-೧ ಹಿತವ(ಮೂ) ೨-೨ ಸಂಲೋಗದ (ಮೂ) ೩-೩ ಕಾಣಿಕೆ (ಮೂ)

ಆಲಿ ನುಂಗಿದ ನೋಟದಂತೆ,
ಬಯಲ ನುಂಗಿದ ಬ್ರಹ್ಮಾಂಡದಂತೆ,
ಮುತ್ತು ನುಂಗಿದ ಉದಕದಂತೆ,
ಪುಷ್ಪ ನುಂಗಿದ ಪರಿಮಳದಂತೆ ಇಪ್ಪ
ಮಹಾನುಭಾವಿಗಳಿಗೆನ್ನ ಒಡಲ ಗುಜಿಮಾಡಿದೆಯಾಗಿ,
ಎನ್ನ ಒಡಲ ಪರಿಯಾಯ ಕೆಟ್ಟಿತ್ತಯ್ಯಾ
ಕೂಡಲಚೆನ್ನಸಂಗಮದೇವಾ! ॥೧೩॥

ಮತ್ತಂ,

೨೭೩

ಹರ ತನ್ನ ರೂಪ ತೋಱಬೇಕೆಂದು
ಗುರುರೂಪಾಗಿ ಮರ್ತ್ಯಕ್ಕೆ ಬಂದು,
ಮನಸ್ಥಲಕ್ಕೆ ಮಂತ್ರವಾದನು;
ತನುಸ್ಥಲಕ್ಕೆ ಪ್ರಸಾದವಾದನು;
ಕರಸ್ಥಲಕ್ಕೆ ಲಿಂಗವಾದನು;
ಪ್ರಾಣಸ್ಥಲಕ್ಕೆ ಜಂಗಮವಾದನು.
ಇಂತೀ ಚತುರ್ವಿಧ ಸ್ವಾಯತವಾದನು
ಕೂಡಲಚೆನ್ನಸಂಗನಲ್ಲಿ ಸಂಗನಬಸವಣ್ಣನು. ॥೧೪॥

ಮತ್ತಂ,

೨೭೪

ಮಾಂಸಪಿಂಡವೆಂದೆನಿಸದೆ
ಮಂತ್ರಪಿಂಡವೆಂದೆನಿಸಿದನು ಬಸವಣ್ಣನು.
ವಾಯುಪ್ರಾಣಿಯೆಂದೆನಿಸದೆ
ಲಿಂಗಪ್ರಾಣಿಯೆಂದೆನಿಸಿದಾತ ಬಸವಣ್ಣನು.
ಜಗಭರಿತನೆಂಬ ಶಬ್ದಕ್ಕೆ ಅಂಗವಿಸದೆ
ಶರಣಭರಿತ ಲಿಂಗವೆಂದೆನಿಸಿದ
ಕೂಡಲಚೆನ್ನಸಂಗನಲ್ಲಿ ಎನ್ನ ಪರಮಗುರು ಬಸವಣ್ಣನು. ॥೧೫॥

ಮತ್ತಂ,

೨೭೫

ಆದಿ ಬಸವಣ್ಣ, ಅನಾದಿ ಲಿಂಗವೆಂದೆಂಬರು;
ಹುಸಿ ಹುಸಿ ಈ ನುಡಿಯ ಕೇಳಲಾಗದು.
ಆದಿ ಲಿಂಗ, ಅನಾದಿ ಬಸವಣ್ಣನು.
ಲಿಂಗವು ಬಸವಣ್ಣನ ಉದರದಲ್ಲಿ ಹುಟ್ಟಿತ್ತು;
ಜಂಗಮವು ಬಸವಣ್ಣನ ಉದರದಲ್ಲಿ ಹುಟ್ಟಿತ್ತು.

ಪ್ರಸಾದವು ಬಸವಣ್ಣನನುಕರಿಸಲಾಯಿತ್ತು.
ಇಂತೀ ತ್ರಿವಿಧಕ್ಕೆ ಬಸವಣ್ಣನೆ ಕಾರಣನೆಂದಱಿದೆನಯ್ಯಾ
ಕೂಡಲಚೆನ್ನಸಂಗಮದೇವಾ. ॥೧೬॥

ಮತ್ತಂ,

೨೭೬

ಲಿಂಗದ ಪೂರ್ವಾಶ್ರಯವಂ ಕಳೆದು
ಇದು ಪ್ರಾಣಲಿಂಗವೆಂದು ತೋಱಬಂದನಯ್ಯಾ ಬಸವಣ್ಣನು.
ಲಾಂಛನದ ಪೂರ್ವಾಶ್ರಯವ ಕಳೆದು
ಲಿಂಗ ಜಂಗಮವೆಂದು ತೋಱಬಂದನಯ್ಯಾ ಬಸವಣ್ಣನು.
ಪ್ರಸಾದದ ಪೂರ್ವಾಶ್ರಯವ ಕಳೆದು,
ಇದು ಮಹಾಪ್ರಸಾದ ಸ್ವಯವೆಂದು ತೋಱಬಂದನಯ್ಯಾ ಬಸವಣ್ಣನು.
ಲಿಂಗ ಜಂಗಮ ಪ್ರಸಾದದ ಪೂರ್ವಾಶ್ರಯವ ಕಳೆಯಲೆಂದು
ಮರ್ತ್ಯಕ್ಕೆ ಜನಿಸಿದನಯ್ಯಾ, ಕೂಡಲಚೆನ್ನಸಂಗನಲ್ಲಿ ಬಸವಣ್ಣನು. ॥೧೭॥

ಮತ್ತಂ, ಸ್ತೋತ್ರ:

೨೭೭

ಒಮ್ಮೆಯು ಶ್ರೀಗುರುವಿನ ಶ್ರೀಚರಣವ ನೆನೆಯಲೊಡನೆ
ಭವಬಂಧನ ಬಿಡುವುದು.
ಗುರುವೆ ಶರಣು, ಗುರುಲಿಂಗವೆ ಶರಣು.
ಹರಿ ಬ್ರಹ್ಮಾದಿಗಳಿಗೆ ಅಗೋಚರವಾದ ಕೂಡಲಚೆನ್ನಸಂಗನೆಂಬ
ಲಿಂಗವ ತೋಱದ ಬಸವಣ್ಣ ಗುರುವೆ ಶರಣು. ॥೧೮॥

ಮತ್ತಂ,

೨೭೮

ನಮಃಶಿವಾಯ ಲಿಂಗವು, ಓಂ ನಮಃಶಿವಾಯ ಬಸವಣ್ಣನು;
ನಮಃಶಿವಾಯ ಲಿಂಗವು, ಓಂ ನಮಃಶಿವಾಯ ಬಸವಣ್ಣನು;
ಎನ್ನ ಮನಸ್ಥಲದಲ್ಲಿ ಬೆಳಗಿ ತೋಱದೆಯಾಗಿ.
ಇದು ಕಾರಣ ಕೂಡಲಚೆನ್ನಸಂಗಯ್ಯಾ,
ಆದಿಯಾಧಾರವಿಲ್ಲದಂದು ಮೊದಲಾಗಿ
ಓಂ ನಮಃಶಿವಾಯ ಎನುತಿರ್ದೆನು. ॥೧೯॥

ಮತ್ತಂ,

೨೭೯

ಬಸವಣ್ಣ, ಓಂಕಾರದಿಂದತ್ತತ್ತ, ನಾದ ಕಳೆಗಳಿಂದತ್ತತ್ತ,
ಪ್ರಥಮಾಚಾರಿ ನೀನೆ; ಲಿಂಗಾಚಾರಿ ನೀನೆ; ಜಂಗಮಾಚಾರಿ ನೀನೆ.
ಪ್ರಸಾದಾಚಾರಿ ನೀನೆ, ಎನಗೆ ಸರ್ವಾಚಾರಿಯೂ ನೀನೆ,

ಗತಿ ಮತಿಯಾಗಿ ಎನ್ನನುಳುಹಿದ ಕಾರಣ
ಕೂಡಲಚೆನ್ನಸಂಗಮದೇವಾ,
ಆವ ನಿರ್ಣಯವಿಲ್ಲದಂದು ಓಂ ನಮಃಶಿವಾಯ ಎನುತಿರ್ದೆನು. ॥೨೦॥

ಇಂತು ಚಿಕ್ಕದಣ್ಣಾಯಕರು ಬಸವರಾಜದೇವರ ಕೈಯಲ್ಲಿ ಅನುಗ್ರಹಮಂ ಪಡೆದು, ಪ್ರಾಣಲಿಂಗಸಂಬಂಧವಳವಟ್ಟು, ಅಂತರಂಗದ ಜ್ಞಾನ ಬಹಿರಂಗದ ಕ್ರೀಯಲ್ಲಿ ಸಮರಸವನೆಯ್ದಿ, ಸರ್ವಾಚಾರಸಂಪನ್ನನಾಗಿ ಕೃತಾರ್ಥನಾದ ಪರಮ ಹರುಷದಿಂದ ಬಸವರಾಜದೇವರ ಮಹಾತ್ಮೆಗೆ ನಮಸ್ಕಾರಮಂ ಮಾಡಿ ಸ್ತೋತ್ರಮಂ ಮಾಡುತ್ತಿರಲು, ಆ ಬಸವರಾಜದೇವರು ಚೆನ್ನಬಸವಣ್ಣನ ಮಹಾತ್ಮೆಯಂ ನೋಡಿ ನೋಡಿ ಪರಮ ಹರುಷಿತರಾಗಿರ್ದ ಪ್ರಸ್ತಾವದ ವಚನ:

೨೮೦

ಬಿತ್ತದೆ ಬೆಳೆಯದೆ ಬೆಳೆದ ಹೆಬ್ಬೆಳಸಿನ ರಾಶಿಯ ನೋಡಾ!
ಸುಗಂಧ ಬಂಧುರದಂತೆ ಹುಟ್ಟುತ್ತಲೆ ಪರಿಮಳ.
ಆದಿಯನಾದಿ ಇಲ್ಲದ ಮುನ್ನ ತನ್ನಿಂದವೆ ತಾನಾಗಿರ್ದ ಕಾರಣ,
ಮುಟ್ಟದೆ ತಟ್ಟದೆ ಗುರುಕಾರುಣ್ಯವ ಪಡೆದು ಲಿಂಗ ಸಯವಾಗಿ,
ಎನಗೆ ಗತಿ ಪಥವ ತೋಜಿಸಬೇಕೆಂದು
ಆಗಾದನು ಕೂಡಲಸಂಗಮದೇವರಲ್ಲಿ ಚೆನ್ನಬಸವಣ್ಣನು. ॥೨೧॥

ಮತ್ತಂ,

೨೮೧

ನಾನಾ ಸ್ಥಾನದಲ್ಲಿ ಬಂದು
ತೊಳಲಿ ಬಳಲಿ ಅಳಿದುಳಿದು ನಿಂದ ನಿಲದವನಲ್ಲ.
ಮರ್ತ್ಯಲೋಕದಲ್ಲಿ ಶಿವಾಚಾರದ ಘನವು ಹೂಳಿಹೋಯಿತ್ತೆಂದು
ಕರ್ತನು ತಾನೆ ಮಹಾಪ್ರಸಾದಿಯಾಗಿ ಉದಯವಾದನು.
ಹಸ್ತಮಸ್ತಕ ಸಂಯೋಗವಿಲ್ಲದ ಮುನ್ನವೆ
ಆದಿ ಗುರು, ಅನಾದಿ ಶಿಷ್ಯನೆಂಬುದ ನೆಲೆಮಾಡಿ,
ಸಂಗಮನಾಥನೆಂಬ ಲಿಂಗವನೆನ್ನ ಕೈಯಲ್ಲಿ ಕೊಟ್ಟು
ಸಾಮದಿಂದ ಅನುಗ್ರಹಿಸಿಕೊಂಡನು.
ಎನ್ನ ಹಿಂದಣ ಪೂರ್ವಾಪರವನೆತ್ತಿ ತೋಜಿ,
ತನ್ನತ್ತ ತೆಗೆದುಕೊಂಡನು-ಕೂಡಲಸಂಗಮದೇವರಲ್ಲಿ
ಚೆನ್ನಬಸವಣ್ಣನು. ॥೨೨॥

ಮತ್ತಂ,

೨೮೨

ಅಯ್ಯಾ ನಿಮ್ಮ ಶರಣನ ಮರ್ತ್ಯಕ್ಕೆ ತಂದೆಯಾಗಿ
ನೆನೆನೆನೆದು ಸುಖಿಯಾಗಿ ಆನು ಬದುಕಿದೆನಯ್ಯಾ.
ಅದೇನು ಕಾರಣ ತಂದೆ ಎಂದಜಿದೆನಯ್ಯಾ;

ಎನ್ನ ಕಾರಣ ತಂದೆ ಎಂದಱಿದೆನಯ್ಯಾ.
ಅಱಿದಱಿದು ನಿಮ್ಮ ಶರಣನು ಆಚರಿಸುವ ಆಚರಣೆಯ ಕಂಡು
ಕಣ್ದೆಱೆದೆನಯ್ಯಾ ಕೂಡಲಸಂಗಮದೇವಾ. ॥೨೩॥

ಮತ್ತಂ,

೨೮೩

ಇಂದು ಹುಟ್ಟಿದ ಕೂಸಿಂಗೆ ಇಂದೆ ಜವ್ವನವಾಯಿತ್ತಯ್ಯಾ!
ಆ ಕೂಸು ಬೀದಿಯಲ್ಲಿ ಒತ್ತೆಗೊಳಲು ನಿಂದಿತ್ತಯ್ಯಾ!
ಇದಱ ಸಂಗಸುಖದನುಭವವನು
ಕೂಡಲಸಂಗಮದೇವ ತಾನೆ ಬಲ್ಲ! ॥೨೪॥

ಇಂತು ಬಸವರಾಜದೇವರು ಚಿಕ್ಕದಣ್ಣಾಯಕರ ಸ್ತೋತ್ರಮಂ ಮಾಡಲು, ಆ ಚೆನ್ನಬಸವರಾಜದೇವರು ಬಸವರಾಜದೇವರ ಪೂರ್ವಾಪರಸಂಗತ್ಯಮಂ ತಿಳಿಯ ಪೇಳಿ ಕೊಂಡಾಡುತ್ತಿರ್ದ ಪ್ರಸ್ತಾವದ ವಚನ:

೨೮೪

ಪ್ರಥಮಕಾಲದಲ್ಲಿ ನಿರಾಲಂಬಿಯಾಗಿದ್ದಿರಯ್ಯಾ.
ದ್ವಿತೀಯಕಾಲದಲ್ಲಿ ತೇಜೋಮೂರ್ತಿಯಾಗಿದ್ದಿರಯ್ಯಾ.
ತೃತೀಯಕಾಲದಲ್ಲಿ ನಾದಮೂರ್ತಿಯಾಗಿದ್ದಿರಯ್ಯಾ.
ಚತುರ್ಥಕಾಲದಲ್ಲಿ ಚೈತನ್ಯರೂಪ ತಾಳಿದ್ದಿರಯ್ಯಾ.
ಪಂಚಮಕಾಲದಲ್ಲಿ ಧರ್ಮಮೂರ್ತಿಯಾಗಿದ್ದಿರಯ್ಯಾ.
ಷಷ್ಠಮಕಾಲದಲ್ಲಿ ನೀವು ಪರಪುರುಷಾರ್ಥ ಸಾಧನವಾಗಿ
ತ್ರಿವಿಧಭಕ್ತಿಗೆ ನೀವೆ ಕಾರಣವಾಗಿ ಬಂದಿರಿ.
ನೀವು ಪ್ರಮಥರುಸಹಿತ ಮುಟ್ಟಿ
ಪ್ರಾಣಲಿಂಗದ ಹರಿವ ತೋಱಿಸಬೇಕೆಂಬ ನಿಮಿತ್ತ
ಬೆಸನವಿಡಿದು ನಿಮ್ಮ ಕರುಣದ ಶಿಶುವಾಗಿ
ಹುಟ್ಟಿದೆನು ನಿಮ್ಮ ಕರಕಮಲದಲ್ಲಿ.
ಕೂಡಲಚೆನ್ನಸಂಗಮದೇವಾ,
ನಿಮ್ಮ ಮಹಿಮೆಗೆ ನಮೋ ನಮೋ ಎನುತಿರ್ದೆನು. ॥೨೫॥

ಇಂತು ಚಿಕ್ಕದಣ್ಣಾಯಕರು ಪ್ರಾಣಲಿಂಗಸಂಬಂಧದ ಹರಿವ ತೋಱಿಸಲೆಂದು ಬಂದೆನೆಂದು ಬಿನ್ನೈಸಲು, ಅದಕ್ಕೆ ಬಸವರಾಜದೇವರು ನಿರೂಪಿಸಿದ ಪ್ರಸ್ತಾವದ ವಚನ:

೨೮೫

ಲಿಂಗದ ಪ್ರಾಣದ ಸಕೀಲ[೧] ಸಂಬಂಧವೆಂತಿರ್ಪುದೆಂದಱಿಯೆನು.
ಪ್ರಾಣಲಿಂಗದ ಸಕೀಲ ಸಂಬಂಧವೆಂತಿರ್ಪುದೆಂದರಿಯೆನು.

೧+ದ(ಮೂ)

ಹುಸಿ ಹುಂಡನ ಮಾಡಿ ಹೊಱಗನೆ ಪೂಜಿಸಿ,
ವೃಥಾ ದಿನಂಗಳು ಸವೆದು ಹೋದವು.
ಕೂಡಲಸಂಗಮದೇವರಲ್ಲಿ
ಎನ್ನ ಪ್ರಾಣ ನಿಕ್ಷೇಪವಹ ಭೇದವ ತೋಱಾ ಚೆನ್ನಬಸವಣ್ಣಾ. ॥೨೬॥

ಈ ಹೀಂಗೆಂದು ಬಸವರಾಜದೇವರು ನಿರೂಪಿಸಲು, ಅದಕ್ಕೆ ಚಿಕ್ಕದಣ್ಣಾಯಕರು ಪ್ರಾಣಲಿಂಗ ಸಂಬಂಧದ ಭೇದಮಂ ತಿಳುಹುತ್ತಿರ್ದ ಪ್ರಸ್ತಾವದ ವಚನ:

೨೭

ಹೋ! ಹೋ!! ಗುರುವೇ
ನಿಮ್ಮ ಕರಕಮಲದಲ್ಲಿ ಉದಯಿಸಿ,
ಅಂಗದ ಮೇಲೆ ಲಿಂಗವ ಧರಿಸಿ,
ಆ ಲಿಂಗದಲ್ಲಿ ಆಗಾಗಿ,
ಪ್ರಾಣ ಲಿಂಗ, ಲಿಂಗ ಪ್ರಾಣವೆಂಬುದ ನಾನು ಕಂಡೆನು.
ನಿಮಗಾನು ತೋಱಲು ಸಮರ್ಥನೆ?
ಆಚಾರವಂಗದಮೇಲೆ ನೆಲೆಗೊಂಡು,
ಇಷ್ಟಲಿಂಗದಲ್ಲಿ ದೃಷ್ಟಿ ನಟ್ಟು,
ಭಾವಸಂಪನ್ನನಾಗಿಪ್ಪ ನಿಮ್ಮ ಘನವ ನಾನೆತ್ತ ಬಲ್ಲೆನಯ್ಯಾ?
ಅನುಭಾವ ಅಂತರಂಗದಲ್ಲಿ ಎಡೆಗೊಂಡು,
ಪ್ರಾಣಲಿಂಗದಲ್ಲಿ ನಿಕ್ಷೇಪಿತವಾಗಿ,
ನಿಜಲಿಂಗೈಕ್ಯನಾಗಿಪ್ಪ ನಿಮ್ಮ ಘನವ ನಾನೆತ್ತ ಬಲ್ಲೆನು?
ಜ್ಞಾನಸಮಾಧಿಯೊಳಗೆ ಬಯಕೆಯಡಗಿ,
ಪರಿಣಾಮಲಿಂಗದಲ್ಲಿ ಮನಸ್ಸು ಲಯವಾಗಿ,
ನಿಜಲಿಂಗಸ್ಥಲದಲ್ಲಿ ತೃಪ್ತರಾಗಿಪ್ಪಿರಿ ನೀವು.
ನಿಮ್ಮ ಘನವ ನಾನೆತ್ತ ಬಲ್ಲೆನು?
ಅಂಗದ ಮೇಲೆ ಲಿಂಗವುಳ್ಳುದೆಲ್ಲವು ಸಂಗಮನಾಥನೆಂದಲ್ಲಿ,
ಜಂಗಮಲಿಂಗಪ್ರಾಣಿಯಾಗಿಪ್ಪಿರಿ ನೀವು.
ನಿಮ್ಮ ಘನವ ನಾನೆತ್ತ ಬಲ್ಲೆನಯ್ಯಾ?
ಲಿಂಗಕ್ಕೆ ಬಂದ ಪದಾರ್ಥವಲ್ಲದೆ ಕೊಳ್ಳೆನೆಂದು
ಮನ ಮೀಸಲ, ತನು ಮೀಸಲ ಮಾಡಿ,
ಸರ್ವಾಂಗ ಸುಖವೆಲ್ಲವನು ಪ್ರಾಣಲಿಂಗದಲ್ಲಿ ಅರ್ಪಿಸಿ,
ನೀವು ತೊಲಗಿ ನಿರಾಭಾರಿಯಾಗಿ
ಪ್ರಸಾದಲಿಂಗಪ್ರಾಣಿಯಾಗಿಪ್ಪಿರಿ ನೀವು.
ನಿಮ್ಮ ಘನವ ನಾನೆತ್ತ ಬಲ್ಲೆನಯ್ಯಾ?

ಅನಾದಿ ಶಿವಂಗೆ ಆಧಾರವಿಲ್ಲೆಂದು,
ಅಖಂಡಿತನ ನಿನ್ನ ರೋಮದ ಕೊನೆಯಲ್ಲಿ ಧರಿಸಿ
ಮಹಾಲಿಂಗಪ್ರಾಣಿಯಾಗಿಪ್ಪಿರಿ ನೀವು.
ನಿಮ್ಮ ಘನವ ನಾನೆತ್ತ ಬಲ್ಲೆನಯ್ಯಾ?
ಕೂಡಲಚೆನ್ನಸಂಗಯ್ಯ ಸಾಕ್ಷಿಯಾಗಿ,
ನಿಮ್ಮ ಪ್ರಾಣಲಿಂಗಸಂಬಂಧದ ಸೆಜ್ಜೆಗು ಸೋಂಕಿನ
ಒಕ್ಕ ಮಿಕ್ಕ ಪ್ರಸಾದಿ ನಾನು ಕಾಣಾ ಸಂಗನಬಸವಣ್ಣಾ. ॥೨೭॥

ಇಂತು ಪ್ರಾಣ ಲಿಂಗ ಸಂಬಂಧದ ನಿರ್ಣಯಮಂ [೧]ಉಪಾದಿ[೧] ಸ್ತೋತ್ರಮುಖದಿಂದವೆ ಚಿಕ್ಕದಣ್ಣಾಯಕರು ಹೇಳಿದ ಹಾಂಗೆ ಹೇಳಿ ತೋಱಲು, ಅದಕ್ಕೆ ಬಸವರಾಜದೇವರು ಪ್ರಾಣಲಿಂಗದಲ್ಲಿ ಸಂಬಂಧದ ಭೇದಮಂ ತನ್ನೊಳು ತಾನೆ ಕಂಡು, ಹಾರೈಸಿ ಹರುಷಂಬಟ್ಟು, ಆ ಚಿಕ್ಕದಣ್ಣಾಯಕರ ಕೊಂಡಾಡಿದ ಪ್ರಸ್ತಾವದ ವಚನ:

೨೮೭

ಅಯ್ಯಾ, ಮರದೊಳಗೆ ಅಗ್ನಿ ಇದ್ದರೇನಯ್ಯಾ,
ಮಥನಿಸಿ ತೋಱುವರಿಲ್ಲದನ್ನಕ್ಕರ ಕಾಣಬಹುದೇ?
ಜಗದೊಳಗೆ ಕೂಡೆ ಪರಿಪೂರ್ಣ ಶಿವನೆಂದರೆ,
ಅಂತರಂಗದಲ್ಲಿ ಕಾಣಬಹುದೇ?
ಆದಿ ಲಿಂಗ ಅನಾದಿ ಶರಣನ ಭೇದವ ತಿಳುಹಿ,
ನಿಜಪ್ರಾಣದೊಳಗಿಪ್ಪ ಸುಜ್ಞಾನಲಿಂಗವ ಕರಸ್ಥಲಕ್ಕೆ ತಂದು,
ಆ ಕರಸ್ಥಲದ ಲಿಂಗವೆನ್ನ ಸರ್ವಾಂಗದೊಳಗೆ ಪ್ರತಿಷ್ಠಿಸಿ ತೋಱಿ,
ನಿನ್ನ ನಿಜಲಿಂಗೈಕ್ಯವಹ ಹೊಲಬಿನ ಹರಿವ ತೋಱಿಸಿ,
ಮರ್ತ್ಯಲೋಕದೊಳಗೆಲ್ಲ ಇಂದು ಮೊದಲಾಗಿ
ಪ್ರಾಣಲಿಂಗದ ಘನವ ಹರಹಿ ಶಿವಭಕ್ತಿಯನುದ್ಧರಿಸಿದನು.
ಕೂಡಲಸಂಗಮದೇವರಲ್ಲಿ
ಚೆನ್ನಬಸವಣ್ಣನೆನ್ನನಾಗುಮಾಡಿ ಉಳುಹಿದನಾಗಿ,
ಇನ್ನು ಮರ್ತ್ಯಲೋಕಕ್ಕೆ ಬಂದರೆ
ಚೆನ್ನಬಸವಣ್ಣನ ಶ್ರೀಪಾದದ ಆಣೆ. ॥೨೮॥

ಇಂತು ಪ್ರಾಣಲಿಂಗಸಂಬಂಧಮಂ ತಿಳುಹಿ ಎನ್ನನುಳುಹಿದನಾಗಿ, ನಾನು ಕೃತಾರ್ಥನಾದೆನೆಂದು ಬಸವರಾಜದೇವರು ನಿರೂಪಿಸಲು, ಅದಕ್ಕೆ ಚಿಕ್ಕದಣ್ಣಾಯಕರು ಬಿನ್ನೈಸಿದ ಪ್ರಸ್ತಾವದ ವಚನ:

೧-೧ ಉಪಾಯದಿ(ಮೂ)

೨೮೮

ಮರ್ತ್ಯಲೋಕ ಶಿವಲೋಕವೆಂಬುದೊಂದು
ನಿಚ್ಚಣಿಗೆಯಾದವು ನೋಡಾ ದೇವಾ, ನೀವೀ ಕಲ್ಯಾಣಕ್ಕೆ ಬಂದವತರಿಸಿದಲ್ಲಿ.
ಸತ್ಯಶರಣರೆಲ್ಲರನು ಪಾವನವ ಮಾಡಲೆಂದು ಬಂದರೆ,
ಜನ್ಮದಲ್ಲಿ ಬಂದನೆಂದು ನುಡಿಯಬಹುದೆ?
ಕರ್ತನ ರೂಪು ಭೃತ್ಯಂಗೆ ಬಂದಲ್ಲಿ,
ಆ ಭೃತ್ಯ ಕರ್ತನನಱಿಸಿ ಬಂದನಲ್ಲಾ!
ಸತ್ಯಸದಾಚಾರವ ಹರಹಿ, ಮರ್ತ್ಯರ ಪಾವನವ ಮಾಡಿ,
ನಿಜಲಿಂಗಸಮಾಧಿಯೊಳು ನಿಲ್ಲುವರಿನ್ನಾರು ಹೇಳಾ ನೀನಲ್ಲದೆ?
ಕೂಡಲಚನ್ನಸಂಗಮದೇವರು ಸಾಕ್ಷಿಯಾಗಿ
ನಿಮಗೆ ಭಾವವುಂಟೆಂದು ಮನದಲ್ಲಿ ಹಿಡಿದರೆ,
ಸಂಗನಬಸವಣ್ಣಾ ನಿಮ್ಮ ಶ್ರೀಪಾದದಾಣೆ. ॥೨೯॥

ನೀವು ಮರ್ತ್ಯಕ್ಕೆ ಬಂದರೇನು? ಶಿವಲೋಕದಲ್ಲಿ ಇದ್ದರೇನು? ನಿಮಗೆ ಭವಂಗಳಿಲ್ಲವೆಂದು ಚಿಕ್ಕದಣ್ಣಾಯಕರು ಬಿನ್ನೈಸಲು, ಇದಕ್ಕೆ ಬಸವರಾಜದೇವರು ಪರಮಹರುಷಿತರಾಗಿ ಆ ನಿಜಸಮಾಧಿಯೊಳು ಬೆರಸುವ ಭೇದ ಎನಗೆಂದು ಸಯವಪ್ಪುದೆಂದು ಉಪಾವಸ್ತೆಯಂ ಮಾಡುವ ಪ್ರಾಸ್ತಾವದ ವಚನ:

೨೮೯

ಲಿಂಗವ ಪೂಜಿಸಿ ಫಲವೇನಯ್ಯಾ
ಸಮರತಿ ಸಮಕಳೆ [ಸಮಸುಖ] ಇಲ್ಲದನ್ನಕ್ಕರ?
ಲಿಂಗವ ಪೂಜಿಸಿ ಫಲವೇನಯ್ಯಾ
ಕೂಡಲಸಂಗಮದೇವರಲ್ಲಿ
ನದಿಯೊಳಗೆ ನದಿ ಬೆರೆ[೧][ಸಿದಂತಾಗ][೧]ದನ್ನಕ್ಕರ? ॥೩೦॥

ಇಂತು ಬಸವರಾಜದೇವರು ಲಿಂಗದೊಳು ಒಡವೆರಸಿ ಬೆರಸಿ ಸಮರಸೈಕ್ಯ ಮನಮಗ್ನಯೋಗವೆಂದಾಗುವದೆಂದು ಚೆನ್ನಬಸವರಾಜದೇವರ ಬೆಸಗೊಳಲು, ಆ ಚೆನ್ನಬಸವರಾಜದೇವರು ಸುಜ್ಞಾನದೃಷ್ಟಿಯಿಂ ನೋಡಿ, ಆ ಲಿಂಗದ ಪರಮಕಳಾ ಚೈತನ್ಯವೆ ಜಂಗಮ, ಆ ಜಂಗಮವೆ ಅನಾದಿಗಣನಾಥ ಅಲ್ಲಮಪ್ರಭುದೇವರು, ನೀವು ಜಂಗಮಪ್ರಾಣಿ ಎಂಬುದ ನೋಡಿ ಅಱಿಸಿಕೊಂಡು ಬರುತಹರೆ, ಅವರ ಬರವನೀಗವೆ ತೋಱುವೆನೆಂದು ಬಿನ್ನೈಸುವ ಪ್ರಸ್ತಾವದ ವಚನ:

೧–೧ ಯ(ಮೂ)

೨೯೦

ಲಿಂಗ ಜಂಗಮು, ಜಂಗಮು ಲಿಂಗದ ಮುಖವ
ನೀವಲ್ಲದೆ ಇನ್ನು ಬಲ್ಲವರಾರಯ್ಯಾ?
ಅಂಗದ ಮೇಲೆ ಲಿಂಗವುಳ್ಳುದೆಲ್ಲವು ಸಂಗಮನಾಥನೆಂದಲ್ಲಿ,
ಪರವಾದಿ ಬಿಜ್ಜಳನು ಒರೆದು ನೋಡಲೆಂದಟ್ಟಿದರೆ,
ಹಗರಣಿಗರ ಜಂಗಮಮುಖದಲ್ಲಿ
ಲಿಂಗವ ಮಾಡಿದವರಾರು ಹೇಳಾ ನೀವಲ್ಲದೆ?
ಮರದ ಮಾನಿಸನ ಕರೆದು, ಓ ಎನಿಸಿ ನುಡಿಸಿ ಉಡಿಸಿ ಉಣಿಸಿ,
ಜಂಗಮಲಿಂಗಪ್ರಾಣಿ ಸಂಗನಬಸವಣ್ಣನೆಂಬ ಧ್ವಜವನೆತ್ತಿ
ಮೆಱೆದವರಾರು ಹೇಳಾ, ಈ ಕಲ್ಯಾಣದಲ್ಲಿ ನೀವಲ್ಲದೆ?
ಜಂಗಮ ಮುಖದಿಂದಲ್ಲದೆ ಲಿಂಗವನಱಿಯೆನೆಂದು
ಎನ್ನ ಮನಕ್ಕೆ ಸಂದೇಹವನೊಡ್ಡಿ ಜಾರಿದರೆ ನಾನು ಸೈರಿಸಬಲ್ಲೆನೆ?
ನೀನು ಜಂಗಮಮುಖಲಿಂಗಸಂಬಂಧಿ ಎಂಬುದಕ್ಕೆ
ಆದಿಗಣನಾಥನು ಅಲ್ಲಮಪ್ರಭುವೆಂಬ ನಾಮವ ಧರಿಸಿ,
ನಿನ್ನನಱಸಿಕೊಂಡು ಬರುತ್ತಲೈದಾನೆ.
ಕೂಡಲಚೆನ್ನಸಂಗಮದೇವರು ಸಾಕ್ಷಿಯಾಗಿ,
ಸಂಗನಬಸವಣ್ಣಾ,
ನೀನೆ ಜಂಗಮಪ್ರಾಣಿ ಎಂದು ನಾನು ನಂಬಿದೆನು. ॥೩೧॥

ಅಲ್ಲಮಪ್ರಭುದೇವರು ನಿಮ್ಮನಱಸಿಕೊಂಡು ಬಪ್ಪುದನೀಗಳೆ ತೋಱಿದಪೆನೆಂದು ಚಿಕ್ಕದಣ್ಣಾಯಕರು ಬಿನ್ನೈಸಲು, ಅದಕ್ಕೆ ಬಸವರಾಜದೇವರು ಪರಮ ಹರುಷಿತರಾದ ಪ್ರಸ್ತಾವದ ವಚನ:

೨೯೧

ಜಂಗಮವೆ ಲಿಂಗವೆಂಬ ಭಾವ ಫಲಿಸಿದರೆ,
ಇಂದಿನ ಪುಣ್ಯಕ್ಕೆ ಸರಿಯುಂಟೆ?
ಲಿಂಗದ ಒಡಲ ಮನೆಯ ಮಾಡಿಪ್ಪ
ಜಂಗಮವೆನ್ನ ಕಣ್ಣ ಮುಂದೆ ತೋಱಿದರೆ,
ಇಂದೆನ್ನ ಭಾಗ್ಯಕ್ಕೆ ಕಡೆ ಇಲ್ಲ.
ಆ ಜಂಗಮವೆ ದಿಟಕ್ಕೆನ್ನ ಮನೆಗೆ ಬಂದರೆ,
ಕೂಡಲಸಂಗಮದೇವರಲ್ಲಿ ಸಲುಗೆಯ ವರವ ಹಡೆವೆನು ಕಾಣಾ–
ಚೆನ್ನಬಸವಣ್ಣಾ, ನೀನಹುದೆನಲು. ॥೩೨॥

ಈ ಹೀಂಗೆಂದು ಚಿಕ್ಕದಣ್ಣಾಯಕರು ಹಿರಿಯದಣ್ಣಾಯಕರು ತಮ್ಮೊಳಗೆ ತಾವು ಜ್ಞಾನಾನುಭಾವವ ಸಂಬಂಧಿಸಿ ನೋಡಿ ಕಂಡು; ಈಗಳೆ ಪ್ರಭುದೇವರ ಬರವು ತಪ್ಪಲಱಿಯದೆಂದು

ಮಹಾನುಭಾವಗೋಷ್ಠಿಯೊಳಗೋಲಾಡುತ್ತಿರಲು, ಇತ್ತ ನಿಷ್ಕಲಪರಶಿವತತ್ತ್ವದ ಕಾರಣಾವತಾರವಾದ ಪ್ರಭುದೇವರು ಸಿದ್ಧರಾಮಯ್ಯದೇವರು ಸೊನ್ನಲಿಗೆಯ ಪುರವಮಂ ಪೊಱಮಟ್ಟು, ಅನಂತದೇಶಂಗಳೊಳು ದೇಶಾಂತರಮಂ ಮಾಡುತ್ತ, ಹಲಕೆಲವು ದಿವಸಂಗಳಂ ಕಳೆವುತ್ತ ಬಂದು, ಮರ್ತ್ಯಲೋಕದ ಸಕಲೈಶ್ವರ್ಯದ ಭಂಡಾರದ ನಿಜನಿಳಯವೆನಿಸಿಪ್ಪ, ಮತ್ತಂ ಭೂಮಿಗೆ ಹೃತ್ಕಮಲ ಕರ್ಣಿಕಾವಾಸಮೆನಲೊಪ್ಪುವ, ವಾಣಿಯ ಮುಖದರ್ಪಣವೆನಿಸಿರ್ಪ, ಸಕಲಧರ್ಮಂಗಳಂ ತೀವುವ ಕರಂಡಗೆಯೆನಿಸಿಪ್ಪ, ಸತ್ಯದ ಸಾಗರ, ಭಕ್ತಿಯ ತವರ್ಮನೆ, ಮುಕ್ತಿಗೆ ಮುಖ, ಪುಣ್ಯದ ಪುಂಜ, ಅಭಿನವಕೈಲಾಸವೆನಿಸಿಪ್ಪ ಶ್ರೀ ಕಲ್ಯಾಣಪುರಮಂ ಕಂಡು ಪೊಕ್ಕು, ಇಲ್ಲಿ ಬಸವರಾಜದೇವರು ಮೂರ್ತಿಗೊಂಡು ಇರುತಿರ್ಪರೆಂದು ಅಱಿದು, ಆ ಪುರಕ್ಕೆ ವಂದನೆಯಂ ಮಾಡಿ ಸ್ತುತಿಸುತ್ತ , ಆ ಪ್ರಭುದೇವರು ಸಿದ್ಧರಾಮಯ್ಯದೇವರಿಗೆ ಆ ಕಲ್ಯಾಣಪುರಮಂ ತೋಱಿಸಿ ಕೊಂಡಾಡುತ್ತಿದ್ದ ಪ್ರಸ್ತಾವದ ವಚನ:

೨೯೨

ಕಲ್ಯಾಣವೆಂಬ ಪ್ರಣತೆಯಲ್ಲಿ ಭಕ್ತಿರಸವೆಂಬ ತೈಲವನೆಱೆದು,
ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು,
ತೊಳಗಿ ಬೆಳಗುತಿರ್ದುದಯ್ಯಾ ಶಿವನ ಪ್ರತಾಪ!
ಆ ಬೆಳಗಿನೊಳಗೆ ಒಪ್ಪುತ್ತಿರ್ದರಯ್ಯಾ ಅಸಂಖ್ಯಾತ ಭಕ್ತಗಣಂಗಳು.
ಶಿವಭಕ್ತನಿರ್ದ ಕ್ಷೇತ್ರ [1]ಅವಿಮುಕ್ತ[1]ಕ್ಷೇತ್ರವೆಂಬುದು ಹುಸಿಯೆ?
ಶಿವಭಕ್ತನಿರ್ದ ದೇಶ ಪಾವನವೆಂಬುದು ಹುಸಿಯೆ?
ಗೊಹೇಶ್ವರಲಿಂಗದಲ್ಲಿ ಎನ್ನ ಪರಮಾರಾಧ್ಯರು
ಸಂಗನಬಸವಣ್ಣನ ಮಹಿಮೆಯ ನೋಡಾ ಸಿದ್ಧರಾಮಯ್ಯಾ! ॥೩೩॥

ಇಂತು ಪ್ರಭುದೇವರು ಸಿದ್ಧರಾಮಯ್ಯದೇವರಿಗೆ ಕಲ್ಯಾಣಪುರದ ಮಹಾತ್ಮೆಯಂ ಹೇಳಿ ಕೊಂಡಾಡುತ್ತಿರ್ಪ ತತ್ಕಾಲೋಚಿತದೊಳು, ಆ ಪುರದ ದ್ವಾರವಟ್ಟದ ಮುಂದೆ ಶಾಸನದೊಳು ಕಲ್ಯಾಣದ ಮಹಾತ್ಮೆಯನು ಚೆನ್ನಬಸವರಾಜದೇವರು ವಿವರವಾಗಿ ವಚನ ರೂಪಕವಾಗಿ ಬರೆದಿರಲು, ಅದಂ ಪ್ರಭುದೇವರು ಕಂಡು ಓದಿ ನೋಡಿದ ಪ್ರಸ್ತಾವದ ವಚನ:

೨೯೩

ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತ
ಶ್ರೀಮತ್ ಕಲ್ಯಾಣಪುರದ ಮಹಾತ್ಮೆ ಎಂತೆಂದಡೆ,
ವಿಸ್ತರಿಸಿ ಪೇಳುವೆನು, ಎಲ್ಲಾ ಶಿವಗಣಂಗಳು ಕೇಳಿ ಕೃತಾರ್ಥರಾಗಿರಯ್ಯಾ.
ಹದಿನಾಲ್ಕು ಭುವನಕ್ಕೆ ಕಳಶವೆಂದೆನಿಸುವ
ರುದ್ರಲೋಕವೆ ಮರ್ತ್ಯಲೋಕಕ್ಕಿಳಿತಂದು,
ಕಲ್ಯಾಣವೆಂಬ ಪುರವಾಗಿ ಹುಟ್ಟಿತ್ತು ನೋಡಿರಯ್ಯಾ,

೧–೧ ಅವಿಮುಕ್ತಿ (ಮು)

ಅಲ್ಲಿ ಸತ್ಯರು, ಸಾತ್ವಿಕರು, ನಿತ್ಯರು, ನಿಜೈಕ್ಯರು,
ಮಹಾಜ್ಞಾನಿಗಳು, ಪರಮಶಿವಯೋಗಿಗಳು,
ಶಿವಾನುಭಾವಸಂಪನ್ನರು, ಶಿವಲಿಂಗಪ್ರಾಣಿಗಳು,
ಶಿವಪ್ರಸಾದ ಪಾದೋದಕ ಸಂಬಂಧಿಗಳು,
ಶಿವಾಚಾರ ವೇದ್ಯರು, ಶಿವಾಗಮ ಸಾಧ್ಯರು,
ಶಿವಸಮಯಪಕ್ಷರುಗಳಲ್ಲದೆ, ಮತ್ತಾರೂ ಅಲ್ಲಿಲ್ಲ ನೋಡಿರಯ್ಯಾ.
ಪಾಪಿಗಳು ಕೋಪಿಗಳು ಅಸತ್ಯರು ಅನಾಚಾರಿಗಳು
ಹೊಗಬಾರದು ಕಲ್ಯಾಣವ.
ಮೀಱಿ ಹೊಕ್ಕಹೆನೆಂಬವರಿಗೆ ಬಾಳಬಾಯ[1]ಧಾರೆ ನೋಡಿರಯ್ಯಾ!
ಆ ಮಹಾ ಕಲ್ಯಾಣದ ವಿಸ್ತೀರ್ಣ ತಾನೆಂತೆಂದಡೆ:
ಹನ್ನೆರಡು ಯೋಜನ ಪರಿಪ್ರಮಾಣದಗಲ ವಿಸ್ತೀರ್ಣಪಟ್ಟಣಕ್ಕೆ
ಮುನ್ನೂಱಱುವತ್ತು ಬಾಗಿಲವಾಡ.
ಆ ಬಾಗಿಲಿಂಗೆ ನೂಱ ಐವತ್ತೈದು ವಜ್ರಧಾರೆಯ ಕದಂಗಳು,
ಇನ್ನೂಱ ಇಪ್ಪತ್ತೈದು ಕಲುಗೆಲಸದ ದ್ವಾರವಟ್ಟಕ್ಕೆ
ನಾನೂಱೈವತ್ತು ಸುವರ್ಣದ ಕೆಲಸದ ಕದಂಗಳು.
ಅಲ್ಲಿ ನೂಱ ಹದಿನೈದು ಚೋರಗಂಡಿ,
ಅವಕ್ಕೆ ನೂಱಹದಿನೈದು ಮೋಳೆಯ ಕದಂಗಳು.
ಇಪ್ಪತ್ತು ಬಾಗಿಲು ಅವಾರಿಯಾಗಿಪ್ಪವಾಗಿ, ಅವಕ್ಕೆ ಕದಂಗಳಿಲ್ಲ.
ಆ ಪಟ್ಟಣಕ್ಕೆ ಬಳಸಿ ಬಂದ ಕೋಟೆ
ನಾಲ್ವತ್ತೆಂಟುಯೋಜನ ಪರಿಪ್ರಮಾಣು.
ಬಾಹತ್ತರ[ನಿಯೋಗಿಗಳ] ಮನೆ ಲಕ್ಷ.
ಮಂಡಲಿಕರ ಮನೆ ಲಕ್ಷ, ಸಾವಂತರ ಮನೆ ಲಕ್ಷ,
ರಾಯರಾವುತರ ಮನೆಯೊಳಡಗಿದ ಮನೆಗಳಿಗೆ ಲೆಕ್ಕವಿಲ್ಲ.
ದ್ವಾದಶಯೋಜನದ ವಿಸ್ತೀರ್ಣದ ಸೋಮವೀಧಿ ನೂಱಿಪ್ಪತ್ತೈದು.
ದ್ವಾದಶಯೋಜನ ಸೂರ್ಯವೀಧಿ ನೂಱಿಪ್ಪತ್ತು.
ಅದಱಿಂ ಮಿಗಿಲಾದ ಒಳಕೇರಿ ಹೊಱಕೇರಿಗೆ ಗಣನೆಯಿಲ್ಲ.
ಆ ಪಟ್ಟಣದೊಳಗೆ ಲಕ್ಷದ ಮೇಲೆ ತೊಂಬತ್ತಾಱುಸಾವಿರ ಶಿವಾಲಯ.
ಆ ಶಿವಾಲಯಂಗಳಿಗೆ ಮುಖ್ಯವಾದ ತ್ರಿಪುರಾಂತಕದೇವರ ಶಿವಾಲಯ.
ಮುನ್ನೂಱಱುವತ್ತು ಪದ್ಮಪತ್ರ ತೀವಿದ ಸರೋವರಂಗಳು.
ಎರಡು ಲಕ್ಷವು ಎಂಬತ್ತೈದು ಸಾವಿರದ ಏಳುನೂಱಿಪ್ಪತ್ತು
ದಾಸೋಹದ ಮಠಂಗಳು.

---

೧. ಯಿ (ಮೂ)

ಆ ದಾಸೋಹದ ಮಠಂಗಳಿಗೆ ಮುಖ್ಯವಾದ
ಬಸವರಾಜದೇವರ ಮಠದ ವಿಸ್ತೀರ್ಣವೆಂತೆಂದಡೆ:
ಯೋಜನವರೆಯ ಬಿನ್ನಾಣದ ಕಲುಗೆಲಸದ ಪೌಳಿ.
ಅತಿಸೂಕ್ಷ್ಮದ ಕುಸುರಿಗೆಲಸದ ದ್ವಾರವಟ್ಟವೈದು.
ಅವಕ್ಕೆ ಪಂಚಾಕ್ಷರಿಯ ಶಾಸನ,
ಮಿಸುನಿಯ ಕಂಬದ ತೋರಣಂಗಳಲ್ಲಿ ರುದ್ರಾಕ್ಷಿಯ ಸೂಸಕ
ಆ ಬಾಗಿಲುವಾಡದಲ್ಲಿ ಒಪ್ಪುತಿರ್ಪವಯ್ಯಾ!
ನಂದಿಯ ಕಂಭದ ಧ್ವಜ, ಉಪ್ಪರಗುಡಿ ಪತಾಕೆ,
ವ್ಯಾಸಧ್ವಜ ಒಪ್ಪುತಿರ್ಪವಯ್ಯಾ!
ಆ ಮಧ್ಯದಲ್ಲಿ ಬಸವರಾಜದೇವರ ಸಿಂಹಾಸನ ವಿಸ್ತೀರ್ಣದ ಪ್ರಮಾಣು:
ಸಹಸ್ರಕಂಭದ ಸುವರ್ಣದುಪ್ಪರಿಗೆ,
ಆ ಮನೆಗೆತ್ತಿದ ಹೊನ್ನಕಳಶ ಸಾವಿರ.
ಗುರುಲಿಂಗಜಂಗಮಕ್ಕೆ ಪಾದಾರ್ಚನೆಯ ಮಾಡುವ ಹೊಕ್ಕರಣೆ
ನಾಲ್ಕು ಪುರುಷ ಪ್ರಮಾಣದ ಘಾತ.
ಅಲ್ಲಿ ತುಂಬಿದ ಪಾದೋದಕದ ತುಂಬ
ನಿಚ್ಚಲು ಬೆಳೆವ ರಾಜಶಾಲಿಯ ಗದ್ದೆ ಹನ್ನೆರಡು ಕಂಡುಗ.
ಆ ಯೋಜನೆವರೆಯ ಬಿನ್ನಾಣದ ಅರಮನೆಯ ವಿಸ್ತೀರ್ಣದೊಳಗೆ
ಲಿಂಗಾರ್ಚನೆಯಂ ಮಾಡುವ ಮಠದ ಕಟ್ಟಳೆ
ಲಕ್ಷದ ಮೇಲೆ ತೊಂಬತ್ತಾಱುಸಾವಿರ.
ಇನ್ನು ಬಸವರಾಜದೇವರು ಮುಖ್ಯವಾದ
ಅಸಂಖ್ಯಾತರ ಮಠಂಗಳು ಆ ಕಲ್ಯಾಣದೊಳಗೆ ಎಷ್ಟು ಎಂದರೆ,
ಹನ್ನೆರಡುಸಾವಿರ ಕಟ್ಟಳೆಯ ನೇಮದ ಭಕ್ತರ ಮಠಂಗಳು.
ಇಪ್ಪತ್ತೆಂಟು ಸಾವಿರ ಮಾಮನೆಗಳು.
ಹತ್ತು ಸಾವಿರ ನಿತ್ಯನೇಮಿಗಳ ಮಠಂಗಳು.
ಹದಿನೈದು ಸಾವಿರ ಚಿಲುಮೆಯಗ್ಘವಣಿಯ ವ್ರತಸ್ಥರ ಮಠಂಗಳು.
ಐದುಸಾವಿರ ವೀರವ್ರತ ನೇಮಿಗಳ ಕಟ್ಟಳೆಯ ಮಠಂಗಳು.
ಹನ್ನೆರಡು ಸಾವಿರ ಅಚ್ಚಪ್ರಸಾದಿಗಳ ಮಠಂಗಳು.
ಒಂದು ಸಾವಿರದ ಅಱುವತ್ತುನಾಲ್ಕು ಶೀಲಸಂಪನ್ನರ ಮಠಂಗಳು.
ಒಂದು ಸಾವಿರ ಜಂಗಮಕ್ಕೆ ಆರೋಗಣೆಯ ಮಾಡಿಸುವ
ದಾಸೋಹಿಗಳ ಮಠಂಗಳು ಮೂವತ್ತೆರಡುಸಾವಿರ.
ನಿತ್ಯ ಐನೂಱು ಜಂಗಮಕ್ಕೆ ಒಲಿದು ದಾಸೋಹವ ಮಾಡುವ
ಸತ್ಯ ಸದಾಚಾರಿಗಳ ಮಠಂಗಳು ಐವತ್ತೆಂಟುಸಾವಿರ.
ನಿತ್ಯ ಸಾವಿರದ ನೂಱು ಜಂಗಮಕ್ಕೆ ಒಲಿದು ದಾಸೋಹವ ಮಾಡುವ ದಾಸೋಹಿಗಳ

ಮತಂಗಳು ಹನ್ನೊಂದುಸಾವಿರ.
ನಿತ್ಯ ಅವಾರಿಯಿಂದ ಮಾಡುವ
ಮಾಟಕೂಟದ ಸದ್‌ಭಕ್ತರ ಮತಂಗಳು ಒಂದು ಲಕ್ಷ.
ಜಂಗಮ ಸಹಿತ ಸಮಯಾಚಾರದಿಂದ ಲಿಂಗಾರ್ಚನೆಯ ಮಾಡುವ
ಜಂಗಮಭಕ್ತರ ಮಠ ಎರಡುಸಾವಿರ ಏಳುನೂಱೆಪ್ಪತ್ತು.
ಅಂತು ಎರಡು ಲಕ್ಷವು ಎಂಬತ್ತೈದು ಸಾವಿರದ ಏಳುನೂಱೆಪ್ಪತ್ತು.
ಅಸಂಖ್ಯಾತ[ರು][೧] ಮುಖ್ಯವಾಗಿ ರುದ್ರಲೋಕದಿಂದಿಳಿತಂದ
ಪ್ರಮಥಗಣಂಗಳ ಮತಂಗಳು ಏಳುನೂಱೆಪ್ಪತ್ತು.
ಇಂತೀ ಮಹಾಪ್ರಮಥರಿಗೆ ಪುರಾತರಿಗೆ
ಅಸಂಖ್ಯಾತಮಹಾಗಣಂಗಳಿಗೆ ಪ್ರಮಥನಾಯಕನಾಗಿ,
ಏಕಮುಖ ದಶಮುಖ ಶತಮುಖ ಸಹಸ್ರಮುಖ
ಲಕ್ಷಮುಖ ಕೋಟಿಮುಖ ಅನಂತಕೋಟಿಮುಖವಾಗಿ
ಭಕ್ತರಿಗೆ ಒಡನಾಡಿಯಾಗಿಪ್ಪನು ಸಂಗನಬಸವಣ್ಣನು.
ಜಗದಾರಾಧ್ಯ ಬಸವಣ್ಣ, ಪ್ರಮಥಗುರು ಬಸವಣ್ಣ,
ಶರಣಸನ್ನಿಹಿತ ಬಸವಣ್ಣ, ಸತ್ಯಸಾತ್ತ್ವಿಕ ಬಸವಣ್ಣ.,
ನಿತ್ಯನಿಜೈಕ್ಯ ಬಸವಣ್ಣ, ಷಡುಸ್ಥಲಸಂಪನ್ನ ಬಸವಣ್ಣ.
ಸರ್ವಾಚಾರಸಂಪನ್ನ ಬಸವಣ್ಣ, ಸರ್ವಾಂಗಲಿಂಗಿ ಬಸವಣ್ಣ.
ಸುಜ್ಞಾನಭರಿತ ಬಸವಣ್ಣ, ನಿತ್ಯಪ್ರಸಾದಿ ಬಸವಣ್ಣ.
ಸಚ್ಚಿದಾನಂದಮೂರ್ತಿ ಬಸವಣ್ಣ, ಸದ್ಯೋನ್ಮುಕ್ತಿರೂಪ ಬಸವಣ್ಣ.
ಅಖಂಡ ಪರಿಪೂರ್ಣ ಬಸವಣ್ಣ, ಅಕಾಯಚಾರಿತ್ರ ಬಸವಣ್ಣ.
ಅಸಾಧ್ಯಸಾಧಕ ಬಸವಣ್ಣ, ಅಭೇದ್ಯಭೇದಕ ಬಸವಣ್ಣ,
ಅನಾಮಯಮೂರ್ತಿ ಬಸವಣ್ಣ.
ಮಹಾಮನೆಯ ಮಾಡಿದಾತ ಬಸವಣ್ಣ.
ರುದ್ರಲೋಕವ ಮರ್ತ್ಯಲೋಕಕ್ಕೆ ತಂದಾತ ಬಸವಣ್ಣ.
ಶಿವಾಚಾರದ ಘನವ ಮೆಱೆದಾತ ಬಸವಣ್ಣ.
ಇಂತಹ ಬಸವಣ್ಣನ ಭಕ್ತಿಯನು ಒರೆದೊರೆದು ನೋಡಿ,
ಪ್ರಬಲಿತವ ಮಾಡುವ ಅಶ್ವಪತಿ ಗಜಪತಿ
ನರಪತಿರಾಯ ರಾಜಾಧಿರಾಜ ಬಿಜ್ಜಳರಾಯನೂ ಆ ಬಸವಣ್ಣನೂ
ಕಲ್ಯಾಣಪಟ್ಟಣದೊಳಗೆ ಸುಖಸಂಕಥಾವಿನೋದದಿಂದ ರಾಜ್ಯಂಗೈವುತ್ತಿರಲು,
ಆ ಕಲ್ಯಾಣದ ನಾಮವಿಡಿದು ವಿವಾಹಕ್ಕೆ
ಕಲ್ಯಾಣವೆಂಬ ನಾಮ ಪ್ರಸಿದ್ಧವಾಯಿತ್ತು.

---

೧. ರಿಗೆ (ಮೂ)

ಲೋಕದೊಳಗೆ ಕಲ್ಯಾಣವೆ ಕೈಲಾಸವೆನಿಸಿತ್ತು.
ಇಂತಪ್ಪ ಕಲ್ಯಾಣದ ದರುಶನವ ಮಾಡಿದರೆ ಭವಂ ನಾಸ್ತಿ.
ಇಂತಪ್ಪ ಕಲ್ಯಾಣವ ನೆನೆದರೆ ಪಾಪಕ್ಷಯ.
ಇಂತಪ್ಪ ಕಲ್ಯಾಣದ ಮಹಾತ್ಮೆಯ ಕೇಳಿದರೆ
ಕರ್ಮಕ್ಷಯವಹುದು, ಮೋಕ್ಷ ಸಾಧ್ಯವಹುದು.
ಇದು ಕಾರಣ ಕೂಡಲಚೆನ್ನಸಂಗಮದೇವಾ,
ನಿಮ್ಮ ಭಕ್ತ ಬಸವಣ್ಣನಿದ್ದ ಠಾವೆ ಮಹಾಕಲ್ಯಾಣವೆಂದಱಿದು,
ದಿವ್ಯಶಾಸನವ ಬರೆದು ಪಱಿಸಿದ ಕಾರಣ
ಎನ್ನ ಭವಂ ನಾಸ್ತಿಯಾಯಿತ್ತಯ್ಯಾ! ॥೩೪॥

ಇಂತು ಪ್ರಭುದೇವರು ಕಲ್ಯಾಣಪುರದ ದ್ವಾರವಟ್ಟದ ಮುಂದಣ ಶಾಸನಮಂ ಓದಿ ನೋಡಿ ಪರಮ ಹರುಷಿತರಾಗಿ, ಬಸವರಾಜದೇವರ ಮಹಾತ್ಮೆಯನು ಸ್ತೋತ್ರಮಂ ಮಾಡುತ್ತ ಸಿದ್ಧರಾಮಯ್ಯತಂದೆಗಳೊಡನೆ ನಿರೂಪಿಸುತ್ತಿರ್ದ ಪ್ರಸ್ತಾವದ ವಚನ:

೨೯೪

ಆದಿಯಾಧಾರವಿಲ್ಲದ ಆಗಮ ನಾಸ್ತಿಯಾಗಿಪ್ಪ
ಸಾಗರವಿರಹಿತನನಾರೂ ಅಱಿಯರಲ್ಲಾ!
ದಶಮುಖದ ಮಾಣಿಕದ ಎಸಳ ಕಂಗಳು
ಪರ್ಬಿ ಪಸರಿಸಿದುದನಾರೂ ಅಱಿಯರಲ್ಲಾ!
ಹಿರಿದೊಂದು ವೃಕ್ಷವು ಅತಿಶಯದ ರೂಪಾಗಿ
ಪೃಥ್ವಿಗಿಂಬಾಗಿರ್ದುದನಾರೂ ಅಱಿಯರಲ್ಲಾ!
ಅಂತರಂಗದ ಭುವನವ ಮೆಟ್ಟಿ ನೋಡುತ್ತ,
ಬೆಡಗಿನ ತಾವರೆಯ ಮಧ್ಯದ ತಾರಕಿಯನಾರೂ ಅಱಿಯರಲ್ಲಾ!
ಇನ ಶಶಿಗಳಿಬ್ಬರೂ ನಯನ ನೋಟದ
ಪುಷ್ಪ ಪರಿಮಳವಾಗಿರ್ದುದನಾರೂ ಅಱಿಯರಲ್ಲಾ!
ಇಂಬು ನಯನದಲ್ಲಿ ಸಂಭ್ರಮವಿಲ್ಲದ ರೂಪು,
ಮಹತ್ತಾಗಿದ್ದುದನಾರೂ ಅಱಿಯರಲ್ಲಾ!
ಸಾಗರದೊಳಗಣ ಜ್ಯೋತಿಯಂತೆ,
ಗೊಹೇಶ್ವರಲಿಂಗದೊಳಗೆ ಎನ್ನ ಪರಮಾರಾಧ್ಯರು ಸಂಗನಬಸವಣ್ಣ
ನಿಂದ ನಿಲವನುಪಮಿಸಬಾರದು ಕಾಣಾ ಸಿದ್ಧರಾಮಯ್ಯಾ! ॥೩೫॥

ಇಂತು ಪ್ರಭುದೇವರು ಸಿದ್ಧರಾಮಯ್ಯದೇವರೊಡನೆ ಬಸವರಾಜದೇವರ ಮಹಾತ್ಮೆಯಂ ಕೊಂಡಾಡಿ ಹೇಳುತ್ತಿರಲು, ಆ ಸಿದ್ಧರಾಮಯ್ಯದೇವರು ಪ್ರಭುದೇವರೊಡನೆ ಬಸವರಾಜದೇವರ ಮಹಾತ್ಮೆಯಂ ಕೊಂಡಾಡಿ ಹೇಳುತ್ತಿರ್ದ ಪ್ರಸ್ತಾವದ ವಚನ:

೨೯೫

ಯತ್ರ ಯತ್ರ ಮಾಹೇಶ್ವರರಿರ್ದ ಗ್ರಾಮ
ತತ್ರ ತತ್ರ ಶಿವಲೋಕ ನೋಡಾ ಎಲೆ ಅಯ್ಯಾ!
ಸತ್ಯವಚನ ತಪ್ಪುವುದೆ ಎಲೆ ಅಯ್ಯಾ?
ಕಪಿಲಸಿದ್ಧಮಲ್ಲಿನಾಥಾ,
ನಿಮ್ಮ ಶರಣರು ಮೆಟ್ಟಿ ನಿಂದ ಧರೆ ಪಾವನವೆಂಬುದು
ಇಂದೆನಗೆ ಅಱಿಯಬಂದಿತ್ತಯ್ಯಾ. ॥೩೬॥

ಮತ್ತಂ,

೨೯೬

ಜಲದಲುದಯಿಸಿ ಮತ್ತೆ ಜಲವು ತಾನಲ್ಲ.
ಜಲವೆಂದಿಪ್ಪರು ಲೋಕದವರು.
ಪರಮಗುರು ಬಸವಣ್ಣ ಜಗವ ಪಾಲಿಸ ಬರಲು,
ಎನ್ನ ಪರಿಭವದ ದಂದುಗ ಹಱಿಯಿತ್ತಯ್ಯಾ,
ಆ ಸುದ್ದಿಯನಱಿಯದೆ ಬೇಕಾದ ಪರಿಯಲ್ಲಿ
ಅನೇಕ ಜಡರೆಲ್ಲರೂ ನುಡಿಯುತ್ತಿಹರು.
ಸತ್ತ ಪ್ರಾಣವನೆತ್ತಿ ಒಪ್ಪಿಪ್ಪ ನಿಶ್ಚಯವು
ಮರ್ತ್ಯದವರಿಗುಂಟೇ, ಶಿವಂಗಲ್ಲದೆ?
ಶಿವ ಗುರು ಬಸವ ಗುರು ಶಿವನಾಗಿ
ದೆಸೆಗೆಟ್ಟ ದೇವತಾಪಶುಗಳಿಗೆ ತಾ ಪತಿಯಾದನು.
ಬಸವಣ್ಣನ ನೆನೆಹು ಸುಖಸಮುದ್ರವಯ್ಯಾ!
ಕಪಿಲಸಿದ್ಧರಾಮಲ್ಲಿನಾಥಾ,
ಬಸವಣ್ಣನ ತೋಱಿದಿರಾಗಿ ನಾನು ಬದುಕಿದೆನು. ॥೩೭॥

ಇಂತು ಸಿದ್ಧರಾಮಯ್ಯದೇವರು ಬಸವರಾಜದೇವರ ಮಹಾತ್ಮೆಯಂ ಕೊಂಡಾಡುತ್ತ ಬರುತ್ತಿರಲು, ಆ ಬಸವರಾಜದೇವರ ದ್ವಾರವಟ್ಟದ ಮುಂದೆ ನಿಂದಲ್ಲಿ ಪ್ರಭುದೇವರು ಆ ಬಸವರಾಜದೇವರ ಮಠವ ಕೊಂಡಾಡುವ ಪ್ರಸ್ತಾವದ ವಚನ:

೨೯೭

ಕರ್ಮವಿಲ್ಲದ ಕಾಯ, ಕರುಣವಿಲ್ಲದ ಪ್ರಾಣ.
ಮಥನವಿಲ್ಲದ ಶಬ್ದ, ಗಮನವಿಲ್ಲದ ಗಮನ.
ಗೊಹೇಶ್ವರನ ಬರವು ಸಂಗನಬಸವಣ್ಣನ ಅಂಗಳವ ಕಂಡಲ್ಲಿ
ತರಹರವಾಯಿತ್ತು ಕಾಣಾ ಸಿದ್ಧರಾಮನಯ್ಯಾ. ॥೩೮॥

ಮತ್ತಂ,

೨೯೮

ಉಪಪಾತಕ ಮಹಾಪಾತಕಂಗಳ ಮಾಡಿದ
ಕರ್ಮಂಗಳು ಕೋಟಾನುಕೋಟಿ

ಒಬ್ಬ ಶಿವಭಕ್ತನ ಅಂಗಳವ ಕಂಡಲ್ಲಿ ಅಳಿದು ಹೋಹುದು ನೋಡಾ!
ಅದೇನು ಕಾರಣವೆಂದಡೆ,
ಆ ಶರಣನ ಅಂತರಂಗದಲ್ಲಿ ಶಿವನಿಪ್ಪನು.
ಆ ಶಿವನಿದ್ದಲ್ಲಿ ಕೈಲಾಸವಿಪ್ಪುದು.
ಆ ಕೈಲಾಸವಿದ್ದಲ್ಲಿ ಸಮಸ್ತರುದ್ರಗಣಂಗಳಿಪ್ಪರು.
ಅಲ್ಲಿ ಅಷ್ಟಾಷಷ್ಠಿ ತೀರ್ಥಂಗಳು ನೆಲಸಿಪ್ಪವು.
ಇಂತಪ್ಪ ಶರಣ ಸಂಗನಬಸವಣ್ಣನ ಅಂಗಳವ ಕಂಡೆನಾಗಿ,
ಗೊಹೇಶ್ವರಲಿಂಗಕ್ಕೆ ಕಂಗಳ ತೃಪ್ತಿಯಾಯಿತ್ತು ಕಾಣಾ ಸಿದ್ಧರಾಮಯ್ಯಾ! ॥೩೯॥

ಈ ಹೀಂಗೆಂದು ಪ್ರಭುದೇವರು ಬಸವರಾಜದೇವರ ಮಠಮಂ ಕೊಂಡಾಡಿ ಸಿದ್ಧರಾಮಯ್ಯದೇವರಿಗೆ ಹೇಳಿ ತೋಱುತ್ತಿರಲು, ಆ ಸಿದ್ಧರಾಮಯ್ಯದೇವರು ಬಸವರಾಜದೇವರ ಗೃಹಮಂ ಕೊಂಡಾಡಿ ಪ್ರಭುದೇವರಿಗೆ ಬಿನ್ನೈಸುತ್ತಿರ್ದ ಪ್ರಸ್ತಾವದ ವಚನ:

೨೯೯

ನಿಶ್ಚಲ ಶರಣರ ಮನೆಯ ಅಂಗಳದಲ್ಲಿ
ಅಷ್ಟಾಷಷ್ಠಿ ತೀರ್ಥಂಗಳು ನೆಲಸಿಪ್ಪವಯ್ಯಾ!
ನೀನು ಇನಿಸುವೆರಸಿ ಒಲಿದಲ್ಲಿ
ನೆಲಸಿಪ್ಪವಯ್ಯಾ ಕಪಿಲಸಿದ್ಧಮಲ್ಲಿನಾಥಯ್ಯಾ. ॥೪೦॥

ಇಂತು ಸಿದ್ಧರಾಮಯ್ಯದೇವರು ಬಸವರಾಜದೇವರ ಅಂಗಳವೆ ಅವಿಮುಕ್ತ ಕ್ಷೇತ್ರವೆಂದು ಕೊಂಡಾಡುತ್ತಿರಲು, ಆ ಬಸವರಾಜದೇವರ ಮಠದಲ್ಲಿ ಶಿವಗಣಂಗಳು ತಿಂಥಿಣಿಯಾಗಿಪ್ಪುದಂ ಕಂಡು, ಪ್ರಭುದೇವರು ಸಿದ್ಧರಾಮಯ್ಯದೇವರಿಗೆ ತೋಱಿಸಿ, ಕೊಂಡಾಡಿ ಹೇಳುವ ಪ್ರಸ್ತಾವದ ವಚನ:

೩೦೦

ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು
ಕರ್ತನಟ್ಟಿದನಯ್ಯಾ ಒಬ್ಬ ಶಿವಶರಣನ.
ಆ ಶರಣ ಬಂದು ಕಲ್ಯಾಣವೆಂಬ ಶಿವಪುರವ ಕೈಲಾಸವ ಮಾಡಿ,
ರುದ್ರಗಣ ಪ್ರಮಥಗಣಂಗಳೆಲ್ಲರ ಹಿಡಿತಂದು,
ಅಸಂಖ್ಯಾತರೆಂದು ಹೆಸರಿಟ್ಟು ಕರೆದು,
ಭಕ್ತಿಯ ಕುಳಸ್ಥಳವ ಶ್ರುತ ದೃಷ್ಟ ಪವಾಡದಿಂದ ಮೆಱೆದು ತೋಱಿ,
ಜಗವಱಿಯಲು ಶಿವಾಚಾರದ ಧ್ವಜವನೆತ್ತಿಸಿ,
ಮರ್ತ್ಯಲೋಕ ಶಿವಲೋಕವೆರಡಕ್ಕೆ ನಿಚ್ಚಣಿಗೆಯಾದನು.
ಶಿವಶರಣನ ಮನೆಯೊಳಗಿಪ್ಪ ಶಿವಗಣಂಗಳ ತಿಂಥಿಣಿಯಂ ಕಂಡು,
ಎನ್ನ ಮನವುಬ್ಬಿ ಕೊಬ್ಬಿ ಓಲಾಡುತ್ತಿರ್ದೆನಯ್ಯಾ!
ನಮ್ಮ ಗೊಹೇಶ್ವರನ ಶರಣ ಸಂಗನಬಸವಣ್ಣನ
ದಾಸೋಹದ ಘನವನೇನೆಂದೆನಬಹುದು ನೋಡಾ ಸಿದ್ಧರಾಮಯ್ಯ! ॥೪೧॥

ಇಂತು ಪ್ರಭುದೇವರು ಬಸವರಾಜದೇವರ ಗೃಹದ ಗಣತಿಂಥಿಣಿಯಂ ಕಂಡು, ಹೃದಯಕಮಲವರಳ್ದು, ಪರಮಾನಂದರಸದೊಳ್ಮುಳುಂಗಿ ತೇಂಕಾಡಿ, ಸಿದ್ಧರಾಮಯ್ಯ ದೇವರೊಡನೆ ಪ್ರಭುದೇವರು ಮರಳಿ ಆ ಬಸವರಾಜದೇವರ ಗೃಹಮಂ ಕೊಂಡಾಡಿದ ಪ್ರಸ್ತಾವದ ವಚನ:

೩೦೧

ಆದಿಯ ಲಿಂಗವ ಮೇದಿನಿಗೆ ತಂದು,
ಮರ್ತ್ಯಲೋಕದಲ್ಲಿ ಮಹಾಮನೆಯ ಕಟ್ಟಿದನಯ್ಯಾ ಸಂಗನಬಸವಣ್ಣನು.
ಆ ಮನೆಯ ನೋಡಲೆಂದು ಹೋದರೆ,
ಆ ಗೃಹ ಹೊಗದ ಮುನ್ನವೆ ಎನ್ನ ನುಂಗಿತ್ತಯ್ಯಾ!
ಅದಕ್ಕೆ ಕಂಭವೊಂದು, ತೊಲೆಯಾಱು, ಜಂತೆವಲಗೆ ಮೂವತ್ತಾಱು.
ಧರೆಯಾಕಾಶ ಹೊದ್ದದ ಕೆಸಱುಗಲ್ಲು.
ಒಂಬತ್ತು ಬಾಗಿಲ ಬಿಯ್ಯಗವಿಕ್ಕಿಹವು,
ಬೇಱೊಂದು ಬಾಗಿಲು ಉರಿಯನುಗುಳುತ್ತಿರ್ಪುದು!
ಮುತ್ತಿನ ಕಂಭದ ಮೇಲುಕಟ್ಟಿನ ಮೇಲೆ ಮಾಣಿಕ್ಯದ ಶಿಖರಿ,
ಆ ಶಿಖರಿಯ ತುದಿಯಲ್ಲಿ ಬಿಳಿಯ ಹೊಂಗಳಸವಿಪ್ಪುದು.
ಅದು ಕಾಬವರಿಗೆ ಕಾಣಬಾರದು,
ಕಾಣಬಾರದವರಿಗೆ ಕಾಣಬಪ್ಪದು.
ಅಲ್ಲಿ ಹತ್ತು ಮಂದಿ ಪರಿಚಾರಕರು ಎಡೆಯಾಡುತ್ತಿರ್ಪರು.
ಇಬ್ಬರು ದಡಿಕಾರರು ಬಾಗಿಲ ಕಾಯ್ದಿಪ್ಪರು
ಒಬ್ಬಾಕೆ ಎಡೆಯಾಡುತಿರ್ಪಳು
ಒಬ್ಬಕೆ ಲಿಂಗಾರ್ಚನೆಗೆ ನೀಡುತ್ತಿರ್ಪಳು.
ಒಬ್ಬಾಕೆ ಸಯಿಧಾನಂಗಳೆಲ್ಲವನೂ ಶೋಧಿಸಿ ತಂದು ಕೊಡುತ್ತಿರ್ಪಳು.
ಒಬ್ಬಾಕೆ ಉರಿಯಿಲ್ಲದಗ್ನಿಯಲ್ಲಿ ಪಾಕವ ಮಾಡುತ್ತಿರ್ಪಳು.
ಒಬ್ಬಾಕೆ ಲಿಂಗ ಜಂಗಮಕ್ಕೆ ನೀಡಿ ಮಾಡಿ
ಉಣಿಸಿ ತೃಪ್ತಿಯ ಮಾಡುತ್ತಿರ್ಪಳು.
ಒಂದಡ್ಡಣಿಗೆಯ ಮೇಲೆ ಐದು ಅಗಲೊಳಗೆ ಇಟ್ಟ ಬೋನವನೊಬ್ಬನುಂಡರೆ,
ಪ್ರಮಥಗಣಂಗಳೆಲ್ಲರೂ ಆತನ ಒಕ್ಕುದ ಕೊಳಲೆಂದು ಬಂದು,
ಆ ಮನೆಯ ಹೊಕ್ಕು ನಿಶ್ಚಿಂತನಿವಾಸಿಗಳಾದರು.
[1]ಗೊಹೇಶ್ವರನ[1] ಶರಣ ಸಂಗನಬಸವಣ್ಣನ ಮಹಾಮನೆಯ ಕಂಡು
ಧನ್ಯನಾದೆನು ಕಾಣಾ ಸಿದ್ಧರಾಮಯ್ಯಾ! ॥೪೨॥

ಇಂತು ಪ್ರಭುದೇವರು ಬಸವರಾಜದೇವರ ಗೃಹಮಂ ಕಂಡು ಕೊಂಡಾಡಿ ಸಿದ್ಧರಾಮಯ್ಯದೇವರೊಡನೆ ಹೇಳುತ್ತಿರಲು, ಆ ಸಿದ್ಧರಾಮಯ್ಯದೇವರು ಆ ಗೃಹವ ಕೊಂಡಾಡಿ ಪ್ರಭುದೇವರಿಗೆ ಬಿನ್ನಹಂ ಮಾಡುವ ಪ್ರಸ್ತಾವದ ವಚನ:

೧-೧ ಗೊಗ್ಗೇಶ್ವರನ (ಮೂ)

೩೦೨

ಅಯ್ಯಾ, ನಿಮ್ಮ ಶರಣರಲ್ಲದವರ ಮನೆ ಕೆಮ್ಮನೆ ಕಂಡಯ್ಯಾ!
ನಿಮ್ಮ ಶರಣರ ಮನೆಯೆ ನೆಲೆವನೆ ನೋಡಾ ಎನಗೆ!
ಸಿರಿಯಾಳ ಮನೆಗಟ್ಟಿ ಬೇಜೂರಿಗೆ ಒಕ್ಕಲು ಹೋದ.
ದಾಸಿಮಯ್ಯ ಮನೆಗಟ್ಟಿ ವ್ಯವಹಾರವನಾಡಿ ಹೋದ.
ಸಿಂಧುಬಲ್ಲಾಳ ಮನೆಗಟ್ಟಿ ಕೈಕೂಲಿಗಾಜಿನಾಗಿ ಹೋದ.
ಗಂಗೆವಾಳುಕರು ಮನೆಗಟ್ಟಿ, ಲಿಂಗದ ಹೊಲಬನಜಿಯದೆ ಹೋದರು.
ಇವರೆಲ್ಲರು ಮನೆಯ ಮಾಡಿ ಮಹವನಜಿಯದೆ,
ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯವೆಂಬ ಪದವಿಗೊಳಗಾದರು.
ನಿಮ್ಮ ಸಂಗನಬಸವಣ್ಣ ಬಂದು ಕಲ್ಯಾಣದಲ್ಲಿ ಮನೆಯ ಕಟ್ಟಿದರೆ,
ಮರ್ತ್ಯಲೋಕವೆಲ್ಲವು ಭಕ್ತಿಸಾಮ್ರಾಜ್ಯವಾಯಿತ್ತು.
ಆ ಮನೆಗೆ ತಲೆವಾಗಿ ಹೊಕ್ಕವರೆಲ್ಲರೂ ನಿಜಲಿಂಗಪದಮಂ ಪಡೆದರು.
ಆ ಗೃಹವ ನೋಡಬೇಕೆಂದು ನಾನು ಹಲಕಾಲ ತಪಸಿದ್ದೆನು.
ಕಪಿಲಸಿದ್ಧಮಲ್ಲಿನಾಥಾ, ನಿಮ್ಮ ಶರಣ ಸಂಗನಬಸವಣ್ಣನ ಮಹಾಮನೆಗೆ
ನಮೋ ನಮೋ ಎಂದು ಬದುಕಿದೆನು! ॥೪೩॥

ಇಂತೀ ಶ್ರೀಮತ್ ಸಕಲಗಣ ಪುರಾತನರೊಳ್ ಪ್ರಭುದೇವರು
ಮಹಾನುಭಾವ ಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್
ಬಸವರಾಜದೇವರು ಚೆನ್ನಬಸವರಾಜದೇವರಿಗೆ ಅನುಗ್ರಹವಂ ಮಾಡಿದುದು
ಚತುರ್ಥೋಪದೇಶಂ ಸಮಾಪ್ತಂ
ಅಂತು ವಚನ ೩೦೨ ಕ್ಕಂ ಮಂಗಳಮಹಾ ಶ್ರೀ

❖

೫
ಪ್ರಭು ಕಲ್ಯಾಣಕ್ಕೆ ಬಂದ ಸಂಪಾದನೆ

ಕಂದ :

ಲಿಂಗಾರ್ಚನೆಯಿಂದೇಳದೆ
ಮಂಗಳಮಯ ಬಸವ ಚರರ ಕಳುಹಲ್ಕಾ ಪ್ರಭು
ಲಿಂಗನದ ಜಱೆದು ಭಕ್ತಿ
ಇಂಗಿತಮಂ ಬೋಧಿಸಿದುದನುಸುರುವೆನೊಲವಿಂ. ॥೧॥

ಅದೆಂತೆಂದೊಡಾ ಪ್ರಭುದೇವರು ಸಿದ್ಧರಾಮಯ್ಯದೇವರು ಬಸವರಾಜದೇವರ ಮಹಾತ್ಮೆಯಂ ಕೊಂಡಾಡುತ್ತ ದ್ವಾರವಟ್ಟದ ಮುಂದೆ ನಿಂದಿರಲು, ಆ ಪ್ರಸ್ತಾವದೊಳು ಹಡಪದಪ್ಪಣ್ಣಗಳು ಕಂಡು ಪರಮಹರುಷಿತರಾಗಿ ಹೋಗಿ, ಬಸವರಾಜದೇವರು ಲಿಂಗಾರ್ಚನೆಯಂ ಮಾಡುವ ವೇಳೆಯಲ್ಲಿ ಬಿನ್ನಹಂ ಮಾಡುವ ಪ್ರಸ್ತಾವದ ವಚನ:

೩೦೩

ದೇವ ದೇವ, ಮಹಾಪ್ರಸಾದ.
ಕಂಗಳಲ್ಲಿ ಕರುಳಿಲ್ಲ; ಕಾಯದಲ್ಲಿ ಹೊರೆಯಿಲ್ಲ.
ನುಡಿಯಲ್ಲಿ ಕಡೆಯಿಲ್ಲ; ನಡೆಯಲ್ಲಿ ಗತಿ ಇಲ್ಲ.
ಇದೆಂತಹ ಸುಳುಹೆಂದಱಿಯೆ! ಇದೆಂತಹ ನಿಲವೆಂದು ತಿಳಿಯಬಾರದು.
ಮರುಳಿಲ್ಲದ ಮರುಳು, ಅಱಿವಿಲ್ಲದ ಅಱಿವು,
ಬಸವಪ್ರಿಯ ಕೂಡಲಚೆನ್ನಸಂಗಯ್ಯನ ಬರವು
ಕೌತುಕವಾಯಿತ್ತು ಚಿತ್ತೈಸಯ್ಯಾ ಸಂಗನಬಸವಣ್ಣಾ! ॥೧॥

ಇಂತು ಹಡಪದಪ್ಪಣ್ಣಗಳು ಬಂದು ಬಸವರಾಜದೇವರಿಗೆ ಬಿನ್ನಹಂ ಮಾಡಲು, ಆ ವೇಳೆಯಲ್ಲಿ ಶಿವಲಿಂಗಾರ್ಚನೆಯ ಪರಮಸುಖದೊಳೋಲಾಡುತ್ತ ಪರವಶರಾಗಿರ್ದು, ಸುಜ್ಞಾನಮುಖದಿಂದ ವಿವೇಕಿಸಿ ನೋಡಿ, ಲಿಂಗಾರ್ಚನೆಯಂ ಬಿಟ್ಟು ಏಳಲೊಲ್ಲದೆ, ಎನ್ನ ಕಾಯವೆ ಭಕ್ತ, ಪ್ರಾಣವೆ ಜಂಗಮವಾದ ಬಳಿಕ, ಅಲ್ಲಿ ಇಲ್ಲಿ ಎಂಬ ಭೇದವಿಲ್ಲೆಂದು ಏಕೋಭಾವಮಂ ಕೃತನಿಶ್ಚಯಮಂ ಮಾಡಿ, ಆ ಜಂಗಮವನೊಡಗೊಂಡು ಬನ್ನಿ ಎಂದು ಮರಳಿ ಹಡಪದಪ್ಪಣ್ಣಗಳಿಗೆ ನಿರೂಪಿಸಿ ಕಳುಹುವ ಪ್ರಸ್ತಾವದ ವಚನ:

೩೦೪

ಕಾಯದ ಕೈಯಲ್ಲಿ ಕರಸ್ಥಲ,
ಪ್ರಾಣದ ಕೈಯಲ್ಲಿ ಜಂಗಮಸ್ಥಲ.
ಈ ಉಭಯ ಭಾವದ ಶಿವಲಿಂಗಾರ್ಚನೆ
ಪರಮಾನಂದಸುಖಸ್ಥಲ.
ಕಾಯ ಭಕ್ತ, ಪ್ರಾಣ ಜಂಗಮ.
ಆವುದ ಘನವೆಂಬೆ? ಆವುದ ಕಿಱಿದೆಂಬೆ?
ಕೂಡಲಸಂಗನ ಶರಣರು ಬಂದರೆ ಉಪಚಾರಕ್ಕೆ ಇಂಬಿಲ್ಲ.
ಕರುಣದಿಂ ಬರಹೇಳಾ ಅಪ್ಪಣ್ಣಾ. ॥೨॥

ಈ ಹೀಂಗೆಂದು ಬಸವರಾಜದೇವರು ನಿರೂಪಿಸಿ ಹಡಪದಪ್ಪಣ್ಣಗಳ ಕರೆಯಲಟ್ಟಲು, ಆ ಅಪ್ಪಣ್ಣಗಳು ಬಂದು, ಪ್ರಭುದೇವರ ಬಿಜಯಂಗೈಯೆಂದು ಕರೆವ ಪ್ರಸ್ತಾವದ ವಚನ:

೩೦೫

ಮನ ಮನವೇಕಾರ್ಥವಾಗಿ,
ಕಾಯಕ್ಕೆ ಕಾಯ ಸಂಬಂಧವಾಗಿ,
ಪ್ರಾಣಕ್ಕೆ ಪ್ರಾಣ ಸಮದರುಶನವಾಗಿದ್ದವರಲ್ಲಿ
ತೆಱಮಱ ಎಂಬುದಿಲ್ಲ ನೋಡಯ್ಯಾ!
ಸಂಗ ನಿಸ್ಸಂಗವಾಗಿಪ್ಪವರಲ್ಲಿ
ಉಪಚರ್ಯಕ್ಕೆ ಇಂಬಿಲ್ಲ ನೋಡಯ್ಯಾ!
ಬಸವಪ್ರಿಯ ಕೂಡಲಚೆನ್ನಸಂಗಯ್ಯನ ಶರಣ
ಬಸವಣ್ಣನಟ್ಟಿದನು ಕೃಪೆಮಾಡು ಗುರುವೆ. ॥೩॥

ಈ ಹೀಂಗೆಂದು ಹಡಪದಪ್ಪಣ್ಣಗಳು ಬಿನ್ನಹಂ ಮಾಡಿ ಬಿಜಯಂಗೈಯೆನಲು, ಆ ಪ್ರಭುದೇವರು ಅಟ್ಟಾಟಿಕೆಯಲ್ಲಿ ಕರೆಯಲಟ್ಟಿದರೆಂದು ಮುನಿಸನೊಳಗಿಟ್ಟುಕೊಂಡು ನುಡಿವ ಪ್ರಸ್ತಾವದ ವಚನ:

೩೦೬

ಮನ ಮನ ಒಂದಾಗಿ, ತನು ತನು ಒಂದಾಗಿ
ಬೆರಸಿದ ಬಳಿಕ ಕರೆಯಲಿಲ್ಲ, ಕಾಲುವಿಡಿಯಲಿಲ್ಲ
ಎಂದಱಿದವರು ಉಪಚರಿಸಿ ಬರಹೇಳಿದರೆ
ಅದೆ ಕೊಱತೆ ನೋಡಾ!
ಅಂಗದ ಕೈಯಲ್ಲಿ ಕ್ರೀ ಇರಲು ಮಾತಿನ ಅದ್ವೈತವೆಂತಪ್ಪುದೊ?
ಆನಾಗದ ಮುನ್ನವೆ ತಾನಾದೆನೆಂಬುವವರಲ್ಲಿಗೆ
ನಮ್ಮ ಗೊಹೇಶ್ವರಲಿಂಗವು ಅಡಿ ಇಡುವನಲ್ಲ. ॥೪॥

ಅಂಗದಲ್ಲಿ ಕ್ರೀ ಇರಲು, ಮತ್ತೆ ಮಾತಿನಲ್ಲಿ ಅದ್ವೈತವನಾಡುವ ಭೃತ್ಯಾಚಾರಹೀನರ ಮನೆಗೆ ಬಾರೆವೆಂದು ಪ್ರಭುದೇವರು ನಿರೂಪಿಸಲು, ಆ ಹಡಪದಪ್ಪಣ್ಣಗಳು ಮರಳಿ ಬಂದು ಬಸವರಾಜದೇವರಿಗೆ ಬಿನ್ನಹಂ ಮಾಡುವ ಪ್ರಸ್ತಾವದ ವಚನ:

೩೦೭

ಅಂಗದ ಕಳೆ ಲಿಂಗದಲ್ಲಿ ಲೀಯವಾಗದು;
ಲಿಂಗದ ಕಳೆ ಅಂಗದಲ್ಲಿ ಲೀಯವಾಗದು.
ಮಾತಿನ ಮಾಲೆಯ ಬೊಮ್ಮವೇತಱಿದೊ?
ಕಾಯ ಭಕ್ತನಾದರೆ ಭೃತ್ಯಾಚಾರವಿರಬೇಕು.
ಪ್ರಾಣ ಜಂಗಮವಾದರೆ ಅಜೀವಿರಬೇಕು.
ಇಂತೀ ಭಕ್ತಿ ಜ್ಞಾನವುಳ್ಳವರಲ್ಲದೆ ಭಕ್ತರಲ್ಲ, ಶರಣರಲ್ಲ.
ಹಿರಿಯರು ಬಂದರೆ ಇದಿರೆದ್ದು ಬಾರದವರ ಮನೆಗೆ
ಅಡಿಯಿಡೆವೆಂದು
ಬಸವಪ್ರಿಯ ಕೂಡಲಚೆನ್ನಸಂಗನ ಶರಣರು
ಕಾಡಿಹರು ಕೇಳಾ ಸಂಗನಬಸವಣ್ಣಾ. ॥೫॥

ಈ ಹೀಂಗೆಂದು ಅಪ್ಪಣ್ಣಗಳು ಬಿನ್ನೈಸಲು, ಬಸವರಾಜದೇವರು ಮರಳಿ ಕರೆಯ ಕಳುಹಿದ ಪ್ರಸ್ತಾವದ ವಚನ:

೩೦೮

ಭಕ್ತನ ಕಾಯವ ಜಂಗಮ ಧರಿಸಿಪ್ಪ ನೋಡಾ!
ಜಂಗಮದ ಪ್ರಾಣವ ಭಕ್ತ ಧರಿಸಿಪ್ಪ ನೋಡಾ!
ಭಕ್ತನಲ್ಲಿಯೂ ಭಕ್ತ ಜಂಗಮವೆರಡೂ ಸನ್ನಿಹಿತ;
ಜಂಗಮದಲ್ಲಿಯೂ ಜಂಗಮ ಭಕ್ತನೆಂಬೆರಡೂ ಸನ್ನಿಹಿತ.
ಜಂಗಮಕ್ಕಾದರೂ ಭಕ್ತಿಯೇ ಬೇಕು;
ಭಕ್ತಂಗೆ ಭಕ್ತಿಸ್ಥಲ ಬೇಕು.
ಭಕ್ತನ ಅರ್ಥ ಪ್ರಾಣಾಭಿಮಾನಕ್ಕೆ
ತಾನೆ ಕರ್ತನೆಂದು ಬಂದ ಜಂಗಮ,
ಆ ಭಕ್ತನ ಮನೆಗೆ ತಾನೆ ಕರ್ತನಾಗಿ ಹೊಕ್ಕು
ತನು ಮನ ಧನಂಗಳನೆಲ್ಲವನೊಳಕೊಂಡು,
ಆ ಭಕ್ತನ ಪಾವನವ ಮಾಡಬಲ್ಲರೆ,
ಆತ ಜಂಗಮವೆಂಬೆ; ಆ ಜಂಗಮದ ಗಳಗರ್ಜನೆಗೆ ಸೈರಿಸಿ,
ಮುಡುಹಿಂಗೆ ಮುನ್ನೂಱು ಪಟ್ಟವ ಕಟ್ಟಿದರೆ, ಆತ ಭಕ್ತನೆಂಬೆ.
ತನ್ನ ಮಠಕ್ಕೆ ತಾ ಬಹಡೆ ಮುನಿಸುಂಟೆ?
ಕೂಡಲಸಂಗನ ಶರಣರ ಮನೆಯ ಬಾಗಿಲುಗಾಹಿ ನಾನಾಗಿರ್ದು,
ಕರ್ತರು ಗೃಹಕ್ಕೆ ಬಂದರೆ ಬೇಕು ಬೇಡೆನ್ನೆ. ॥೬॥

ಈ ಹೀಂಗೆಂದು ಬಸವರಾಜದೇವರು ಬಿನ್ನೈಸಲು, ಹಡಪದಪ್ಪಣ್ಣಗಳು ಪ್ರಭುದೇವರ ಕರೆವ ಪ್ರಸ್ತಾವದ ವಚನ:

೩೦೯

ನಿಮ್ಮ ತನು, ನಿಮ್ಮ ಮನ, ನಿಮ್ಮ ಧನ,
ನಿಮ್ಮದಲ್ಲದೆ ಅನ್ಯವೊಂದಣುಮಾತ್ರವಿಲ್ಲ ನೋಡಯ್ಯಾ!
ಭಕ್ತನ ಮಠವೆಂದು ಮುನ್ನವೆ ಅಱಿದಱಿದು ಬಂದು
ಮತ್ತೊಂದ ಮತ್ತೊಂದ ನೆನೆವರೆ?
ಬಸವಪ್ರಿಯ ಕೂಡಲಚನ್ನಸಂಗಯ್ಯನ ಶರಣ ಬಸವಣ್ಣಂಗೆ
ಸ್ವತಂತ್ರ ಭಾವವುಳ್ಳಡೆ ನಿಮ್ಮ ಪಾದದಾಣೆ. ॥೭॥

ಈ ಹೀಂಗೆಂದು ಅಪ್ಪಣ್ಣಗಳು ಬಿನ್ನೈಸಲು, ಪ್ರಭುದೇವರು ನಿರೂಪಿಸಿದ ಪ್ರತ್ಯುತ್ತರ:

೩೧೦

ಭಕ್ತ ಜಂಗಮದ ಸಕೀಲ ಸಂಬಂಧವನಾರು ಬಲ್ಲರು ಹೇಳಾ?
ಅರ್ಥವನೊಪ್ಪಿಸಿದಾತ ಭಕ್ತನಲ್ಲ.
ಪ್ರಾಣವನೊಪ್ಪಿಸಿದಾತ ಭಕ್ತನಲ್ಲ.
ಅಭಿಮಾನವನೊಪ್ಪಿಸಿದಾತ ಭಕ್ತನಲ್ಲ.
ಅದೇನು ಕಾರಣವೆಂದರೆ, ಸತ್ಯಸದಾಚಾರಕ್ಕೆ ಸಲ್ಲನಾಗಿ.
ಆ ಭಕ್ತನ ಮನೆಯ ಹೊಕ್ಕು ಪಾದಾರ್ಚನೆಯ ಮಾಡಿಸಿಕೊಂಡು,
ಒಡಲ ಕಕ್ಕುಲಿತೆಗೆ ಅಶನವನುಂಡು,
ವ್ಯಸನದ ಕಕ್ಕುಲಿತೆಗೆ ಹಣವ ಬೇಡಿ,
ಕೊಟ್ಟಡೆ ಕೊಂಡಾಡಿ, ಕೊಡದಿರ್ದರೆ ದೂಱಿಕೊಂಡು
ಹೋಹಾತ ಜಂಗಮವಲ್ಲ.
ಆದಿಯನಾದಿಯಿಂದತ್ತತ್ತ ಮುನ್ನಲಾದ
ಮಹಾಘನವ ಭೇದಿಸಿ ಕಂಡಱಿದು,
ಕಾಯದ ಜೀವದ ಹೊಲಿಗೆಯ ಬಿಚ್ಚಿ ಬಿಸಾಡಿ,
ತನ್ನನೆ ಅರ್ಪಿಸಿ ಇರಬಲ್ಲಾತ ಭಕ್ತ.
ಸುಳುಹಿನ ಸೂತಕ ಮೈದೋಱದೆ,
ಒಡಲ ಕಳವಳದ ರುಚಿಗೆ ಹಾರೈಸದೆ.
ಅಱುವೆ ಅಂಗವಾಗಿ ಆಪ್ಯಾಯನವೆ ಭಕ್ತಿಯಾಗಿ,
ಕಿಂಕುರ್ವಾಣವೆಂಬ ಶಿವಮಂತ್ರಕ್ಕೆ
ನಮೋ ನಮೋ ಎಂಬನ್ನಕ್ಕರ ಆತ ಜಂಗಮ.
ಆ ಜಂಗಮದ ಆ ಭಕ್ತನ ಸಮ್ಮೇಳವೆ ಸಮ್ಮೇಳ.
ಮಿಕ್ಕಿನ ಅರೆಭಕ್ತರೊಡತಣ ಸಂಗ
ನಮ್ಮ ಗೊಹೇಶ್ವರಲಿಂಗಕ್ಕೆ ಸೊಗಸದು. ॥೮॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಹಡಪದಪ್ಪಣ್ಣಗಳು ಬಿನ್ನೈಸುವ ಪ್ರಸ್ತಾವದ ವಚನ:

೩೧೧

ಲಿಂಗ ಜಂಗಮ, ಜಂಗಮ ಲಿಂಗವೆಂಬುದನಾರು ಬಲ್ಲರಯ್ಯಾ
ಮರ್ತ್ಯಲೋಕ ಶಿವಲೋಕದಲ್ಲಿ ಬಸವಣ್ಣನಲ್ಲದೆ?
ಲಿಂಗಕ್ಕಾಧಾರವೆಂದು ಮರ್ತ್ಯಲೋಕದಲ್ಲಿ
ಬಂದವತರಿಸಿದನಯ್ಯಾ ಬಸವಣ್ಣನು!
ಜಂಗಮ ಮುಖ ಲಿಂಗವೆಂಬುದನಱಿದು ತನ್ನನರ್ಪಿಸಿ,
ಇದಿರ ತಪ್ಪಿಸಿ ಇರಬಲ್ಲನಯ್ಯಾ ಬಸವಣ್ಣನು!
ಅಂಗಮುಖವೆಲ್ಲವೂ ನಷ್ಟವಾಗಿ,
ಭೃತ್ಯಾಚಾರವೆ ತನುವಾಗಿರಬಲ್ಲನಯ್ಯಾ ಬಸವಣ್ಣನು!
ಪ್ರಾಣಕಳೆಯಱಿತು, ಅಂತು ಜಂಗಮವೆ ಪ್ರಾಣವಾಗಿ
ಹಂಗು ಹಱಿಯಿಲ್ಲದಿರಬಲ್ಲನಯ್ಯಾ ಬಸವಣ್ಣನು!
ಉಪಾಧಿಯೆಂಬ ಕೀರ್ತಿವಾರ್ತೆಯ ಜಱಿದು,
ನಿರುಪಾಧಿಕವೆಂಬ ವಿವೇಕಕ್ಕೆ ಅತೀತನಾಗಿ
ಸಹಜ ದಾಸೋಹಿಯಾಗಿರಬಲ್ಲನಯ್ಯಾ ಬಸವಣ್ಣನು!
ಬಸವಪ್ರಿಯ ಕೂಡಲಚನ್ನಸಂಗನ ಶರಣ ಬಸವಣ್ಣನೆ
ನಿಮಗೆ ಭಕ್ತನಲ್ಲದೆ ಮತ್ತಾರನು ಕಾಣೆನಯ್ಯಾ!! ॥೯॥

ನಿಮಗೆ ಸಂಗನಬಸವಣ್ಣನಲ್ಲದೆ ಮತ್ತಾರೂ ಭಕ್ತರಿಲ್ಲವೆಂದು ಅಪ್ಪಣ್ಣಗಳು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೩೧೨

ನಿಮ್ಮಲ್ಲಿ ಭಕ್ತಿಯುಂಟು, ತಮ್ಮಲ್ಲಿ ಭಕ್ತಿಯುಂಟು,
ಎಮ್ಮಲ್ಲಿ ಭಕ್ತಿಯುಂಟೆಂದರೆ ಶಿವಶರಣರು ಮೆಚ್ಚುವರೆ?
ಹೂಸಿ ಹುಂಡನ ಮಾಡಿ,
ಬಾಯ ಸವಿಯ ನುಡಿವರೆಲ್ಲಾ ಭಕ್ತರಪ್ಪರೆ?
ಮಾತಿನ ಅದ್ವೈತವ ಕಲಿತು
ಮಾಱುಗೋಲ ಬಿಡುವರೆಲ್ಲಾ ಭಕ್ತರಪ್ಪರೆ?
ಬೆಳ್ಳಿಗೆಯ ಮಕ್ಕಳೆಂದರೆ ಬಳ್ಳವಾಲ ಕಱೆವವೆ ಮರುಳೆ?
ಸಂಗನಬಸವಣ್ಣನೆಂದರೆ ಮಾತಿನ ಮಾತಿಂಗೆಲ್ಲ ಭಕ್ತಿಯುಂಟೆ?
ಬಂದ ಜಂಗಮದ ಇಂಗಿತಾಕಾರವನಱಿತು,
ಇದಿರೆದ್ದು ವಂದಿಸಿ ಕೈಮುಗಿದು,
ನಡನಡುಗಿ ಕಿಂಕಿಲನಾಗಿ ಭಯ ಭೀತಿ ಭೃತ್ಯಾಚಾರವಾಗಿರಬಲ್ಲರೆ
ಅದು ಭಕ್ತಿ, ಅದು ವರ್ಮ.
ಬಂದವರಾರೆಂದಱಿಯದೆ, ನಿಂದ ನಿಲವನಱಿಯದೆ,
ಕೆಮ್ಮನೆ ಅಹಂಕಾರವ ಹೊತ್ತುಕೊಂಡು ಇಪ್ಪವರಿಗೆ
ನಮ್ಮ ಗೊಹೇಶ್ವರಲಿಂಗನೊಲ್ಲ ನೋಡಾ. ॥೧೦॥

ಈ ಹೀಂಗೆಂದು ಪ್ರಭುದೇವರು ಬಾರೆವೆಂದು ನಿರೂಪಿಸಲು, ಹಡಪದಪ್ಪಣ್ಣಗಳು ಮರಳಿ ಬಂದು ಬಸವರಾಜದೇವರಿಗೆ ಬಿನ್ನೈಸುವ ಪ್ರಸ್ತಾವದ ವಚನ:

೩೧೩

ದೇವ ದೇವ, ಮಹಾಪ್ರಸಾದ.
ನಿಮ್ಮ ಶರಣರ ಮನೆಯ ಸಲಿಗೆಯ ಬಂಟ ನಾನಲ್ಲಯ್ಯಾ!
ತನು ಮನ ಧನವ ಹಿಂದಿಕ್ಕಿಕೊಂಡಿಪ್ಪ ವಂಚಕ ನಾನಯ್ಯಾ!
ನಿಮ್ಮ ಶರಣರು ಎನ್ನಿಚ್ಚೆಗೆ ಬಪ್ಪರೆ?
'ಚಕಿತಮಭಿದತ್ತೇ ಶ್ರುತಿರಪಿ' ಎನಲು,
ಎಮ್ಮ ನುಡಿ ನಿಮ್ಮ ಶರಣರ ತಾಗಬಲ್ಲುದೆ?
ಹಣೆಯ ಹೊಣೆಯ ತೋಱಿ ಉದರವ ಹೊರೆವ
ನಿಮ್ಮ ಮಱೆಯಲಡಗಿಪ್ಪ ಹಡಪಿಗ ನಾನಯ್ಯಾ!
ಬಸವಪ್ರಿಯ ಕೂಡಲಚೆನ್ನಸಂಗನ ಶರಣರು
ಎನ್ನ ಮಾತಿಂಗೆ ಬಾರರು.
ನೀವೆ ಹೋಗಿ ಬಿಜಯಂಗೈಸಿಕೊಂಡು ಬಾರಾ
ಸಂಗನಬಸವಣ್ಣಾ. ॥೧೧॥

ಮತ್ತಂ,

೩೧೪

ನಿನ್ನಳವಲ್ಲ, ಎನ್ನಳವಲ್ಲ; ಇದಾರಳವಲ್ಲದ ಘನವು ನೋಡಯ್ಯಾ!
ಕಾಬರೆ ಕಂಗಳಿಗೆ ಅಸಾಧ್ಯ, ಮುಟ್ಟುವರೆ ಸೋಂಕಿಂಗಸಾಧ್ಯ.
ಮಾತನಾಡಿಸಿ ನೋಡಿದರೆ ವಾಙ್ಮನೋತೀತ.
ನಿಂದರೆ ನೆಳಲಿಲ್ಲ, ಸುಳಿದರೆ ಹಜ್ಜೆಯಿಲ್ಲ.
ಪ್ರಭುದೇವರೆಂಬ ಭಾವ ತೋಱುತ್ತದೆ.
ಬಸವಪ್ರಿಯ ಕೂಡಲಚೆನ್ನಸಂಗಯ್ಯನ ಶರಣರ
ಚರಣವಿಡಿವರೇಳಾ ಸಂಗನಬಸವಣ್ಣಾ. ॥೧೨॥

ನಾನು ಭಕ್ತನಲ್ಲಾಗಿ ಎನ್ನಿಚ್ಚೆಗೆ ಬಾರರು. ನೀವೆ ಹೋಗಿ ಬಿಜಯಂಗೈಸಿ ತನ್ನಿ ಎಂದು ಅಪ್ಪಣ್ಣಗಳು ಬಿನ್ನಹಂ ಮಾಡುವ ಪ್ರಸ್ತಾವದೊಳು ಚಿಕ್ಕದಣ್ಣಾಯಕರು ಬಂದು, 'ಪ್ರಭುದೇವರು ಸಿದ್ಧರಾಮಯ್ಯದೇವರು ಬಂದು ನಿಮ್ಮ ದ್ವಾರವಟ್ಟದ ಮುಂದೆ ನಿಂದೈದಾರೆ. ನೀವೆ ಹೋಗಿ ಬಿಜಯಂಗೈಸಿ ತನ್ನಿ' ಎಂದು ಬಿನ್ನಹಂ ಮಾಡುವ ಪ್ರಸ್ತಾವದ ವಚನ:

೩೧೫

ಲಿಂಗವೆ ಜಂಗಮು, ಜಂಗಮವೆ ಲಿಂಗವೆಂದು ನಂಬಿ ಬಂದಲ್ಲಿ
ಹೊರೆ ಹುಟ್ಟಿದ ಬಳಿಕ
ಹಾಲ ಹರವಿಯೊಳಗೆ ಹುಳಿ ಹೊಕ್ಕಂತೆ ನೋಡಯ್ಯಾ!
ಅಂಗದ ಮೇಲೆ ಲಿಂಗವುಳ್ಳುದೆಲ್ಲವೂ
ಸಂಗಮನಾಥನೆಂದು ನಂಬಿದ ನಂಬುಗೆಯೂ

ಬಂದ ಶರಣರ ನಿಲವನಜಿಯದಿದ್ದರೆ ತಪ್ಪಿತ್ತು ನೋಡಾ ಗುರುವೆ!
ಸಂಗಮನಾಥ ಮನೆಗೆ ಅಂಗವಿಡಿದು ಬಂದರೆ,
ದಿಮ್ಮನೆ ಇದಿರೆದ್ದು ವಂದಿಸಬೇಕು ನೋಡಯ್ಯಾ!
ಕೂಡಲಚೆನ್ನಸಂಗನ ಶರಣರು
ಪ್ರಭುದೇವರು ಸಿದ್ಧರಾಮಯ್ಯದೇವರು ಬಂದು ಬಾಗಿಲಲ್ಲಿರಲು,
ಕಣ್ಣಜಿಯದಿದ್ದರೂ ಕರುಳಱಿಯಬೇಡವೆ ಸಂಗನಬಸವಣ್ಣಾ? ॥೧೩॥

ಅಲ್ಲಮಪ್ರಭುದೇವರು ಸಿದ್ಧರಾಮಯ್ಯದೇವರು ಬಂದು ಬಾಗಿಲಲ್ಲಿರಲು ಅಟ್ಟಾಟಿಕೆಯಲಿಂತು ತೆಱಹುಮಱಹಾಗಿಪ್ಪುದು ನಿಮಗುಚಿತವಲ್ಲೆಂದು ಚಿಕ್ಕದಣ್ಣಾಯಕರು ಬಿನ್ನೈಸಲು, ಈ ವಾಕ್ಯವ ಕೇಳಿದಾಕ್ಷಣವೆ ಬಸವರಾಜದೇವರು ಹಮ್ಮದಂಬೋಗಿ ನಡನಡುಗಿ, ಭಯಾರ್ಣವದೊಳ್ ಮುಳುಂಗಿ, ಕಂಗಳ ಬಾಷ್ಪುವಿನೊಳು ಮುಂದುಗಾಣದೆ, ಚಿಕ್ಕದಣ್ಣಾಯಕರ ಪಾದದ ಮೇಲೆ ಬಿದ್ದು, ಪ್ರಭುದೇವರ ಮುನಿಸ ತಿಳುಹಿಕೊಡಿ ಎಂದು ಬಿನ್ನಹಂ ಮಾಡುವ ಪ್ರಸ್ತಾವದ ವಚನ:

೩೧೬

ಇನ್ನೇವೆನಿನ್ನೇವೆ? ಕೆಮ್ಮನೆ ಕೆಟ್ಟೆನು!
ಇನ್ನೇವೆನಿನ್ನೇವೆ? ಕೆಮ್ಮನೆ ಕೆಟ್ಟೆನು!!
ನಿಮ್ಮ ಶರಣರು ಬಂದು ಬಾಗಿಲೊಳಿರಲು,
ದಿಮ್ಮನೆ ಇದಿರೆದ್ದು ವಂದಿಸಲಱಿಯದೆ
ಕೆಟ್ಟ ಕೇಡನೇನೆಂದುಪಮಿಸುವೆನು?
ಕೂಡಲಸಂಗಮದೇವಾ,
ನಾನುಭಯ ಭ್ರಷ್ಟನೆಂಬುದು ಎನಗಿಂದಱಿಯಬಂದಿತ್ತು. ॥೧೪॥

ಮತ್ತಂ,

೩೧೭

ಮತಿಗೆಟ್ಟು ಧೃತಿಗುಂದಿ ಬೇಳಾದೆನಯ್ಯಾ!
ಗತಿಗೆಟ್ಟು, ವ್ರತಗೆಟ್ಟು, ಧಾತುಗೆಟ್ಟ ಬಾಹಿರ ನಾನಯ್ಯಾ!
ಕಹಿಸೋರೆ ಮುತ್ತಂತಾಯಿತ್ತೆನ್ನ ಭಕ್ತಿ.
ನಡೆದು ಲಿಂಗಜಂಗಮ ಮನೆಗೆ ಬರಲು,
ಇಂಬುಗೊಳಲಱಿಯದೆ ಕೆಟ್ಟ ಕೇಡನೇನೆಂದು ಉಪಮಿಸುವೆನಯ್ಯಾ?
ನವರತ್ನವ ಕಿತ್ತು ಮಡುವಿನೊಳಗೆ ಹಾಯ್ಕಿದ
ಕಪಿಯಂತಾಯಿತ್ತೆನ್ನ ಭಕ್ತಿ.
ಕೂಡಲಸಂಗಮದೇವರ ತಂದು ಕೊಟ್ಟರೆ,
ನಿಮ್ಮ ಚಮ್ಮಾವುಗೆಯ ಹೊತ್ತುಕೊಂಡು
ಕುಣಿದಾಡುವೆನು ಕಾಣಾ ಚೆನ್ನಬಸವಣ್ಣಾ! ॥೧೫॥

ಈ ಹೀಂಗೆಂದು ಅತ್ಯಂತ ಭೀತನಾಗಿ ಬಿನ್ನಹಂ ಮಾಡುತ್ತಿರಲು, ಚಿಕ್ಕದಣ್ಣಾಯಕರು ಹಿರಿಯದಣ್ಣಾಯಕರ ಪಾದಕ್ಕೆ ನಮಸ್ಕಾರಮಂ ಮಾಡಿ ಬಿನ್ನೈಸಿದ ಪ್ರಸ್ತಾವದ ವಚನ:

೩೧೮

ಹೋ! ಹೋ! ಗುರುವೇ
ನಿಮ್ಮ ಚಮ್ಮಾವುಗೆಯ ಬಂಟ ನಾನಾಗಿರಲು
ಅಂಜುವರೆ? ಅಳುಕುವರೆ?
ಸಂಗಮನಾಥ ಬಂದು, ನಿಮ್ಮ ಮನವ ನೋಡಲೆಂದು,
ತಮ್ಮ ಮನವನಡ್ಡಲಿಕ್ಕಿದನೊಂದು ಲೀಲೆಯಿಂದ.
ಅದು ನಿಮಗೆ ಸಹಜವಾಗಬಲ್ಲುದೆ?
ಮಂಜಿನ ಮೋಹರ ರವಿಯ ಕಿರಣವ ಕೆಡಿಸಲಾಪವೆ?
ನಿಮ್ಮ ನೆನೆವರಿಗೆ ಸಂಸಾರವಿಲ್ಲೆಂದು
ಶ್ರುತಿಗಳು ಹೊಗಳುತ್ತಿರಲು, ನಿಮ್ಮಜೀವಿಂಗೆ ಕೇಡುಂಟೆ?
ಕೂಡಲಚೆನ್ನಸಂಗನ ಶರಣರ ಕರೆವರೆ
ಎನ್ನ ಮನವೆಂಬ ಚಮ್ಮಾವುಗೆಯ
ಮೆಟ್ಟಿ ನಡೆಯಾ ಸಂಗನಬಸವಣ್ಣಾ. ॥೧೬॥

ಈ ಹೀಂಗೆಂದು ಬಿನ್ನೈಸಲು, ಇದಕ್ಕೆ ಬಸವರಾಜದೇವರು ಚಿಕ್ಕದಣ್ಣಾಯಕರ ಪಾದದ ಕೃಪೆಯಿಂದ ಕಂಡು ನಾನು ಬದುಕಿದನೆಂದು ಕೃತನಿಶ್ಚಯವನೈದಿದ ಪ್ರಸ್ತಾವದ ವಚನ:

೩೧೯

ನಂಬಿದೆನಯ್ಯಾ ನಾನು, ನಚ್ಚಿದೆನಯ್ಯಾ ನಾನು,
ಬದುಕಿದೆನಯ್ಯಾ ನಾನು ನಿಮ್ಮ ಕೃಪೆಯಿಂದಲಿ!
ಹಾಳುಕುಳಿಯಲ್ಲಿ ಬಿದ್ದ ಪಶುವಿನ ಕಱುವ ತೆಗೆದು
ತಾಯ ಮುಖವ ತೋಱುವಂತೆ,
ಪಾಪಕೂಪದಲ್ಲಿ ಬಿದ್ದವನನೆಬ್ಬಿಸಿ
ಕೂಡಲಸಂಗನ ಶರಣರ ಚರಣವ ತೋಱಿ ಎನ್ನನುಳುಹಿದನು!
ಹೋದ ಜೀವಕ್ಕೆ ತನ್ನ ಕರುಣವೆಂಬ
ಮರುಜವಣಿಯ ಹಿಂಡಿ ಎತ್ತಿದನು.
ಚೆನ್ನಬಸವಣ್ಣನಿಂದಲೆಂತಕ್ಕೆ ಬದುಕಿದೆನು! ॥೧೭॥

ಬಸವರಾಜದೇವರು ತಮ್ಮ ತಾವು ಸಂತೈಸಿಕೊಂಬ ಕಾಲದೊಳು ಸೊಡ್ಡಳ ಬಾಚರಸರು ಬಂದು ಬಿನ್ನಹಂ ಮಾಡುವ ಪ್ರಸ್ತಾವದ ವಚನ:

೩೨೦

ತೆಱಹುಮಱಹೆಂಬುದು ನಿಮ್ಮ ಗುಣವಲ್ಲ.
ಅಮೃತಸಾಗರದೊಳಗೆ ಬೇವಿನ ಬಿಂದುವುಂಟೆ?
ಮನವ ನೋಡಲೆಂದು ನಟ ನಾಟಕವನೊಡ್ಡಿದರೆ,

ಅದಕ್ಕೆ ಸಹಜವಲ್ಲಾಗಿ ಹೆದಱಿಲ್ಲ.
ಮಹಾದಾನಿ ಸೊಡ್ಡಳನ ಮನ ನೊಂದಿತ್ತೆಂದು
ಅಂಜಬೇಡವೇಳಾ ಸಂಗನಬಸವಣ್ಣಾ. ॥೧೮॥

ಈ ಹೀಂಗೆಂದು ಸೊಡ್ಡಳಬಾಚರಸರು ಬಿನ್ನಹಂ ಮಾಡಲು, ಬಸವರಾಜದೇವರು ನಿರೂಪಿಸುವ ಪ್ರಸ್ತಾವದ ವಚನ:

೩೨೧

ಮಾಱಂಕನಿಜೆವಲ್ಲಿ ಘಾಯಖಂಡೆಯ ತೋಱಿದಾತನೆ ತೆತ್ತಿಗ.
ಕೈಯ ಕೈದು ಬಿದ್ದಲ್ಲಿ, ಎತ್ತಿಕೊಟ್ಟಾತನೆ ಹಿತವ.
ಕೂಡಲಸಂಗನ ಶರಣ ಸೊಡ್ಡಳಬಾಚರಸರ ಕರುಣ ಉಳ್ಳನ್ನಕ್ಕರ,
ಇನ್ನು ನಾನು ಅಂಜುವನಲ್ಲ ಕಾಣಾ ಚೆನ್ನಬಸವಣ್ಣಾ. ॥೧೯॥

ಈ ಹೀಂಗೆಂದು ಬಸವರಾಜದೇವರು ನಿರೂಪಿಸಿ, ಲಿಂಗಾರ್ಚನೆಯ ಮಾಡುತ್ತ ಲಿಂಗಮಂ ಕರಸ್ಥಲದಲ್ಲಿ ಧರಿಸಿಕೊಂಡು, ಹನ್ನೆರಡುಸಾವಿರ ರುದ್ರಾಕ್ಷೆಯಂ ಧರಿಸಿಕೊಂಡು, ಭಸ್ಮಾಂಗದ ಕಳೆ ತಳತಳಸಿ ಹೊಳೆಯುತ್ತಿಹ ಆಭರಣದಿಂದೊಪ್ಪುತ್ತ, ಭಕ್ತವತ್ಸಲ, ಮುಕ್ತಿಯ ಮುಖದರ್ಪಣ, ಅಹಂಕಾರಕಾಸಾರಶೃಂಗಾರಭೇದನ, ಕರುಣರಸಸಿಂಧು, ಷಡುಸ್ಥಲಸಂಧಾನನಿವಾಸ, ಶತವಿಕಸ್ಥಲ ಮೂಲಿಗ, ಪಂಚಮುಖ ಪಂಚ ಲಿಂಗಸ್ಥಾಪನಾಚಾರ್ಯ, ಭಕ್ತಜನಹೃತ್‌ಕಮಲಾರ್ಕ, ಶರಣನಿಕುರುಂಬಾಬ್ಧಿಶಶಾಂಕ, ಭವವಿಪಿನದಾವಾನಲ, ಭವಸಿಂಧುವಡಬಾಗ್ನಿ ಬಸವದಂಡಾಧೀಶ್ವರನು ಚೆನ್ನಬಸವರಾಜದೇವರು ಹಡಪದಪ್ಪಣ್ಣಗಳು ಸೊಡ್ಡಳಬಾಚರಸರು ಗಮಿತಮುಖಯುಕ್ತರಾಗಿ ನಿರೂಪಿಸಿದ ಪ್ರಸ್ತಾವದ ವಚನ:

೩೨೨

ಲಿಂಗಾರ್ಚನೆಯ ಮಾಡುವೆನಯ್ಯಾ,
ಜಂಗಮವೆನ್ನ ಮಠಕ್ಕೆ ಬರಬೇಕೆಂದು.
ಆ ಜಂಗಮವೆನ್ನ ಮಠಕ್ಕೆ ಬಂದರೆ,
ಲಿಂಗಾರ್ಚನೆಯ [1]ಮಾದು[1] ಜಂಗಮಾರ್ಚನೆಯ ಮಾಡುವೆನು.
ಅದೇನು ಕಾರಣವೆಂದರೆ,
ಆ ಲಿಂಗದಲ್ಲಿ ಪದ ಉಂಟು,
ಫಲ ಉಂಟು, ಭವ ಉಂಟು.
ಆ ಜಂಗಮದಲ್ಲಿ ಪದಂ ನಾಸ್ತಿ,
ಫಲಂ ನಾಸ್ತಿ, ಭವಂ ನಾಸ್ತಿಯಾದ ಕಾರಣ,
ಲಿಂಗಾರ್ಚನಂ ನ ಕರ್ತವ್ಯಂ ಕರ್ತವ್ಯಂ ಜಂಗಮಾರ್ಚನಂ।
ಲಿಂಗ ಜಂಗಮಯೋರ್ಮಧ್ಯೇ ಜಂಗಮಸ್ತು ವಿಶಿಷ್ಯತೇ॥

೧-೧ ಮಾಡು(ಮೂ)

ಎಂದುದಾಗಿ, ಕೂಡಲಸಂಗಮದೇವಯ್ಯಾ,
ನಾನಿನ್ನು ಭವಭವಾಂತರ ನಿಮ್ಮ ಜಂಗಮಾರ್ಚನೆಯ
ಮಾಡುವೆನು. ॥೨೦॥

ಮತ್ತಂ,

೩೨೩

ಎನ್ನ ತನುವಿಡಿದವರ ತನುವ ಬೆರಸುವೆನು.
ಎನ್ನ ಮನವಿಡಿದವರ ಮನವ ಬೆರಸುವೆನು.
ಎನ್ನ ಶಿರವನವರ ಪಾದಕ್ಕೆ ಪೂಜೆಯ ಮಾಡುವೆನು.
ಕೂಡಲಸಂಗನ ಶರಣರನೊಡಗೊಂಡು ಬಂದೆನ್ನ
ಭವವ ಹಱೆವೆನು. ॥೨೧॥

ಈ ಹೀಂಗೆಂದು ಬಸವರಾಜದೇವರು ಲಿಂಗಾರ್ಚನೆಯಿಂದೆದ್ದು, ಚೆನ್ನಬಸವರಾಜದೇವರು ಮೊದಲಾದ ಅಸಂಖ್ಯಾತ ಮಹಾಗಣಂಗಳ ಕರೆಸಿಕೊಂಡು, ವಿಭೂತಿವೀಳೆಯ ಕಾಣಿಕೆ ಸಹವಾಗಿ, ನವರತ್ನಖಚಿತ ಒಡಗೂಡಿದ ದಿವ್ಯಾಂಬರಂಗಳಂ ಗುಡಿತೋರಣಂಗಳಂ ಕಟ್ಟಿಸಿ, ದೇವಾಂಗ ಮೌಕ್ತಿಕದ ಸೆಱಗಿನ ಸೀರೆಯಂ ನಡೆಮಡಿ[೧]ಯಂ[೧] ಹಾಸಿ, ಚೀನಿ ಚೀನಾಂಬರದಲ್ಲಿ ಪವಳದ ಝುಲ್ಲರಿಯಿಂ ರತ್ನದ ಝುಲ್ಲರಿಯಿಂ ಮೇಲುಕಟ್ಟಂ ಕಟ್ಟಿ ಕಳಸ ಕನ್ನಡಿ ಪಂಚಮಹಾವಾದ್ಯದಿಂ ಧೂಪಾರತಿ ಘಂಟೆಸಹವಾಗಿ ಪ್ರಭುದೇವರ ಕರೆಯ ಬಹ ಸಂಭ್ರಮದಿಂದಿರುತ್ತಿರಲಿತ್ತಲಾ ಪ್ರಭುದೇವರು ಬಸವರಾಜದೇವರ ತೆಱಹುಮಱಹಂ ನೋಡಿ ವಿಸ್ಮಯಮಂ ತಾಳ್ದು ಸಿದ್ಧರಾಮಯ್ಯದೇವರಿಗೆ ಹೇಳುವ ಪ್ರಸ್ತಾವದ ವಚನ:

೩೨೪

ನೋಡಾ ಸಿದ್ಧರಾಮಯ್ಯ,
ಆಗಳೆ ಭಕ್ತರಿಗೆ ಅಹಂಕಾರವಾಯಿತ್ತು!
ಭೃತ್ಯನಿದ್ದೆಡೆಗೆ ಕರ್ತನೈತಂದರೆ,
ಅಟ್ಟಾಟಿಕೆಯಲ್ಲಿ ಇಂತು ಕರೆದವರುಂಟೆ?
ಬಸವಣ್ಣನೊಳಗೆ ಇಂತು ಮಱವೆ ಹುಟ್ಟಿದ ಬಳಿಕ,
ಉಳಿದ ಶಿವಭಕ್ತರ ಪಾಡೇನು ಹೇಳಾ?
ಗುಹೇಶ್ವರಲಿಂಗವನು ಭಕ್ತಿರತಿಯಿಂದ ಮನಮುಟ್ಟಿ ಕರೆದರೆ
ಹೋಹುದಲ್ಲದೆ ವ್ಯರ್ಥಕ್ಕೆ ಹೋಗಲಾರದು ನೋಡಯ್ಯಾ. ॥೨೨॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಸಿದ್ಧರಾಮಯ್ಯದೇವರು ಮರಳಿ ಪ್ರಭುದೇವರೊಡನೆ ಬಿನ್ನಹಂ ಮಾಡುವ ಪ್ರಸ್ತಾವದ ವಚನ:

೧–೧ X (ಮೂ)

೩೨೫

ನಿಮ್ಮ ಶಕ್ತಿ ಆತನಲ್ಲಿಪ್ಪುದು ಕಂಡಯ್ಯಾ!
ಆತನ ಪ್ರಾಣ ನಿಮ್ಮಲ್ಲಿಪ್ಪುದು!
ನಿಮ್ಮ ತಮ್ಮ ಭೇದವನಾರು ಬಲ್ಲರು ಹೇಳಯ್ಯಾ?
ಕಪಿಲಸಿದ್ಧಮಲ್ಲಿನಾಥಯ್ಯಾ,
ನಿಮ್ಮ ಶರಣ ಬಸವಣ್ಣನ ಅನುವ ನೀವೆ ಬಲ್ಲಿರಿ. ॥೨೩॥

ಇಂತು ಪ್ರಭುದೇವರು ಸಿದ್ಧರಾಮಯ್ಯದೇವರು ತಮ್ಮೊಳಗೆ ತಾವು ಬಸವರಾಜದೇವರ ಅಂತಸ್ಥಿತಿಗತಿಯನು ಪ್ರಸಂಗಮುಖದಿಂ ನುಡಿವುತ್ತಿರಲು, ಇತ್ತ ಬಸವರಾಜದೇವರು ಅಸಂಖ್ಯಾತ ಮಹಾಗಣಂಗಳು ಸಹಿತ ಬಂದು, ಪ್ರಭುದೇವರ ಶ್ರೀಪಾದ ದರುಶನವಾದ ಪ್ರಸ್ತಾವದ ವಚನ:

೩೨೬

ಭವರೋಗವೈದ್ಯನೆಂದು ನಂಬಿದೆ ನಾನು;
ಒಮ್ಮಿಂಗೆ ಕರುಣಿಸಯ್ಯಾ!
ಭಕ್ತಿಫಲದಾಯಕ ನೀನು;
ಒಮ್ಮಿಂಗೆ ಕರುಣಿಸಯ್ಯಾ!
ಜಯಜಯ ಶ್ರೀಮಹಾದೇವ ಎನುತಿರ್ದೆನು.
ಕೂಡಲಸಂಗಮದೇವಯ್ಯಾ,
ನಿಮ್ಮ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು. ॥೨೪॥

ಮತ್ತಂ,

೩೨೭

ಕಂಡಡೆ ಕಡುಸುಖವೆನಗೆ, ಕಾಣದಿರ್ದಡೆ ಅವಸ್ಥೆಯಯ್ಯಾ!
ತವಕದ ಸ್ನೇಹ ದರ್ಶನದಲ್ಲಿ ತರಹರವಾಯಿತ್ತು.
ಕೂಡಲಸಂಗಮದೇವಯ್ಯಾ,
ನಿಮ್ಮ ಶ್ರೀಪಾದವ ಕಂಡು ಧನ್ಯನಾದೆನು! ॥೨೫॥

ಮತ್ತಂ,

೩೨೮

ನಿಮ್ಮ ಶರಣರ ಕಂಡ ಕಡುಸುಖವನೇನೆಂಬೆನಯ್ಯಾ!
ಅದು ಸಾಲೋಕ್ಯದಂತುಟಲ್ಲ.
ಅದು ಸಾಮೀಪ್ಯದಂತುಟಲ್ಲ.
ಅದು ಸಾರೂಪ್ಯದಂತುಟಲ್ಲ.
ಅದು ಸಾಯುಜ್ಯದಂತುಟಲ್ಲ.
ಕೂಡಲಸಂಗನ ಶರಣರ ಪಾದದರ್ಶನವ ಕಂಡು
ನಾನು ಧನ್ಯವಾದೆನು! ॥೨೬॥

ಮತ್ತಂ, ನಮಸ್ಕಾರಮಂ ಮಾಡುವ ಪ್ರಸ್ತಾವದ ವಚನ:

೩೨೯
ಮನ ಮನ ಮುಟ್ಟಿದ ಭಕ್ತಿಗೆ ತನುವೆ ಅರ್ಪಿತ;
ತನು ಮುಟ್ಟಿದ ಭಕ್ತಿಗೆ ಮನವೆ ಅರ್ಪಿತವಯ್ಯಾ!
ಎನ್ನ ತನುಮನವೆರಡೂ ನಿಮ್ಮ ಚರಣಕ್ಕೆ ವೇದ್ಯ ನೋಡಯ್ಯಾ!
ದೀರ್ಘದಂಡ ನಮಸ್ಕಾರಂ ನಿರ್ಲಜ್ಜಂ ಗುರುಸನ್ನಿಧೌ।
ಶರೀರಮರ್ಥಂ ಪ್ರಾಣಂ ಚ ಸದ್ಗುರುಭ್ಯೋ ನಿವೇದಯೇತ್॥
ಎಂದುದಾಗಿ, ತ್ರಾಹಿ ತ್ರಾಹಿ, ಶರಣಾರ್ಥಿ,
ನೀವೆ ಬಲ್ಲಿರಿ ಕೂಡಲಸಂಗಮದೇವಾ. ॥೨೭॥

ಮತ್ತಂ,

೩೩೦
ಎನ್ನ ಶಿರ ನಿಮ್ಮ ಚರಣವೊರಸಿ ಬೆರಸಿ ಭೇದವಿಲ್ಲಯ್ಯಾ!
ಎನ್ನ ಕಾಯದ ಕಪಟ, ಎನ್ನ ಮನದ ವಿಕಾರ
ನಿಮ್ಮ ಉಂಗುಷ್ಠದ ಮೊನೆಯ ಸೋಂಕಲೊಡನೆ
ಹಱಿದುದು ನೋಡಯ್ಯಾ!
ಕೂಡಲಸಂಗಮದೇವಯ್ಯಾ ನಿಮ್ಮ ಶ್ರೀಪಾದದ ಬೆಳಗ ಕಂಡು
ಎನ್ನ ಅಂತರಂಗದ ಕತ್ತಲೆ ಓಡಿತ್ತು. ॥೨೮॥

ಇಂತು ಬಸವರಾಜದೇವರು ದೀರ್ಘದಂಡ ನಮಸ್ಕಾರಮಂ ಮಾಡುತ್ತಿರಲು, ಪ್ರಭುದೇವರ ನಿಜಮೂರ್ತಿ ನಿರಾಕಾರಸ್ಥಲದೊಳು ನಿಂದು ನಮಸ್ಕಾರಾದಿ ಕ್ರೀಗಳಿಗೆ ಅಸಾಧ್ಯವಾಗಿರ್ದ ಪ್ರಸ್ತಾವದ ವಚನ:

೩೩೧
ರೂಪು ಅರೂಪಿನಲ್ಲಿ ನಿಂದಿತ್ತು,
ಅರೂಪು ನಿಜರೂಪನವಗ್ರಹಿಸಿತ್ತು.
ನಿಜರೂಪು ನಿರ್ಣಯದಲ್ಲಿ ನಿಷ್ಪತಿಯಾಯಿತ್ತು.
ನಿಷ್ಪತಿಯಾದ ನಿಜಶರಣರ ನಿಲವು
ಕಾಯವಿಡಿದು ಕಂಡೆಹೆನೆಂದರೆ ಕಾಣಬಹುದೆ?
ಕೂಡಲಸಂಗಮದೇವರ ಶರಣ
ಪ್ರಭುದೇವರ ನಿಲವು ಎನಗೆ ಸಾಧ್ಯವಪ್ಪುದೆ? ॥೨೯॥

ಮತ್ತಂ,

೩೩೨
ತೋಱುವನಯ್ಯಾ ಶಿವನು; ಅಡಗುವನಯ್ಯಾ ಶಿವನು.
ಕಂಗಳ ಮುಂದೆ ಕಾಯಗೊಂಡು,
ಮನದ ಮುಂದೆ ಕನಸಾಗಿ ಕಾಡುವನಯ್ಯಾ ಶಿವನು.
ಒಂದೆಡೆಯಲ್ಲಿದ್ದು ಹಲವು ಎಡೆಯಲ್ಲಿ ತೋಱುವನು.

ಹಲವೆಡೆಯಲ್ಲಿದ್ದು ಒಂದೆಡೆಯಲ್ಲಿ ರೂಪಾಗಿಪ್ಪನು.
ಕೂಡಲಸಂಗಮದೇವರು
ಚಿನುಮಯನಾಗಿ ಎನಗೆ ಅಸಾಧ್ಯವಾದನು. ॥೩೦॥

ಮತ್ತಂ,

೩೩೩

ಕಂಡಹರೆಂದು [1]ಕಂಗೆ[1] ಮಱಿಮಾಡಿದ.
ಕೇಳಿಹರೆಂದು ಕಿವಿಗೆ ಮಱಿಮಾಡಿದ.
ಮುಟ್ಟಿಹರೆಂದು ಕೈಗೆ ಮಱಿಮಾಡಿದ.
ಸೋಂಕಿಹರೆಂದು ತನುವಿಂಗೆ ಮಱಿ ಮಾಡಿದ.
ನೆನೆದಹರೆಂದು ಮನಕ್ಕೆ ಮಱಿಮಾಡಿದ.
ಅಱಿದಹರೆಂದು ಅಂತರಂಗದಲ್ಲಿ ಮಱಿಮಾಡಿದ.
ಪೂಜಿಸಿಹರೆಂದು ಕ್ರೀಗೆ ಮಱಿಮಾಡಿದ.
ಕೂಡಲಸಂಗಮದೇವರೊಡನೆ
ಅಹಂಕಾರವ ಮಾಡಿ ಕೆಟ್ಟ ಕೇಡನೇನೆಂದುಪಮಿಸುವೆನು? ॥೩೧॥

ಇಂತು ಬಸವರಾಜದೇವರು ನಾನಾ ಭಕ್ತಿ ಕ್ರೀಗಳಿಂದ ಮುಟ್ಟಿ ನೋಡಲು, ಆ ಪ್ರಭುದೇವರ ನಿಲವು ಅಸಾಧ್ಯವಾಗಿರಲು, ಎನ್ನ ಅಹಂಕಾರದಿಂದ ನಾನು ಕೆಟ್ಟೆನೆಂದು ಅನುತಾಪಾಗ್ನಿಯೊಳು ಕರಗಿ ಕೊರಗಿ ಮನ ನೊಂದು ಬಿನ್ನಹಂ ಮಾಡಿದ ಪ್ರಸ್ತಾವದ ವಚನ:

೩೩೪

ಶರಣೆಂದು ಪಾದವ ಹಿಡಿದಿಹೆನೆಂದರೆ,
ಚರಣದ ನಿಲವು ಕಾಣಬಾರದು,
ಕುಱುಹುವಿಡಿದಿಹೆನೆಂದರೆ, ಕೈಗೆ ಸಿಲುಕದು.
ಬೆರಸಿ ಹೊಕ್ಕಿಹೆನೆಂದರೆ, ಮುನ್ನವೆ ಅಸಾಧ್ಯ.
ಅಕಟಕಟಾ! ಅಹಂಕಾರದಲ್ಲಿ ಕೆಟ್ಟೆನಲ್ಲಾ ಗುರುವೆ!
ಎನ್ನ ಪರಮ ಗುರುವೆ ಬಾರಯ್ಯ,
ಅಱಿಯದ ತರಳನ ಅವಗುಣವ ನೋಡುವರೆ
ಕೂಡಲಸಂಗಮದೇವಾ? ॥೩೨॥

ಮತ್ತಂ,

೩೩೫

ತ್ರಿವಿಧದಲ್ಲಿ ತಪ್ಪಿದ ತಪ್ಪುಕ ನಾನಯ್ಯಾ !
ಒಮ್ಮಿಂಗೆ ಕರುಣಿಸಯ್ಯಾ!
ಇದನಱಿದು ಇನ್ನು ತಪ್ಪಿದೆನಾದರೆ,
ನೀವು ಮಾಡಿತ್ತೆ ಸಲುವುದು ಕೂಡಲಸಂಗಮದೇವಾ. ॥೩೩॥

೧-೧ ಕಣ್ಣಿಗೆ (ಮೂ)

ಮತ್ತಂ,

೩೩೬

ಡಂಬು ಡಳುಹು ಎನ್ನದಯ್ಯಾ,
ಡಂಬಕ ಮನದವ ನಾನಯ್ಯಾ.
ಎನ್ನಲೇನನಱಸುವಿರಿ?
ನಿಮ್ಮ ನಂಬಿಯೂ ನಂಬದ ಡಂಬಕ ನಾನು.
ಹಾವ ತೋಱಿ ಹವಿಯ ಬೇಡುವಂತೆ ಎನ್ನ ಭಕ್ತಿ
ಕೂಡಲಸಂಗಮದೇವಾ. ॥೩೪॥

ಮತ್ತಂ,

೩೩೭

ಮಸಿಯನೇಸು ಕಾಲ ಬೆಳಗಿದರೆ ಬಿಳಿದಾಗಬಲ್ಲುದೆ?
ಕರ್ಮಸ್ಥಿತಿ ಬೆನ್ನ ಬಿಡದು. ಅನಂತಕೋಟಿ ಸನ್ಮಾನವ ಮಾಡಿದಡೇನು?
ಒಂದು ನಿಮಿಷದ ಉದಾಸೀನ ಕೆಡಿಸಿತ್ತು.
ಕೂಡಲಸಂಗಮದೇವಾ,
ನಿಮ್ಮ ನಂಬಿಯೂ ನಂಬದ ಡಂಬಕ ನಾನು. ॥೩೫॥

ಮತ್ತಂ,

೩೩೮

ಸ್ಥಾವರ ಜಂಗಮ ಒಂದೆ ಎಂದು ಇದಿರ ನುಡಿವೆ.
ನುಡಿದು ನಾನೆಡಹುತಿರ್ಪೆ.
ಆನು ಸಹಜನಲ್ಲ, ಆನುಭಯಲಿಂಗ ಸಂಬಂಧಿ ಎಂಬ ನುಡಿ
ಸುಡದಿಹುದೆ ಕೂಡಲಸಂಗಮದೇವಾ? ॥೩೬॥

ಮತ್ತಂ,

೩೩೯

ತಂದೆ ನೀವು, ತಾಯಿ ನೀವು, ಬಂಧು ನೀವು,
ಬಳಗ ನೀವು, ನೀವಲ್ಲದೆ ಮತ್ತಾರೂ ಇಲ್ಲ.
ಕೂಡಲಸಂಗಮದೇವಾ, ಹಾಲಲದ್ದು ನೀರಲದ್ದು. ॥೩೭॥

ಮತ್ತಂ,

೩೪೦

ಎನ್ನವರೆನ್ನ ಕೊಂಡಾಡಿ ಹೊನ್ನ ಶೂಲದಲಿ[೧]ಕ್ಕಿದರು[೧].
ಅಹಂಕಾರ ಘಾಯದಲ್ಲಿ
ನಾನೆಂತು ಬದುಕುವೆನು?
ನಾನೆಂತು ಜೀವಿಸುವೆನು?

೧–೧ ಲಿಕ್ಕುವರು (ಮೂ)

ಜಂಗಮವಾಗಿ ಬಂದು ಜರೆದು ಶೂಲವನಿಳುಹಿ,
ಪ್ರಸಾದದ ಮದ್ದನಿಕ್ಕಿ ಸಲಹು ಕೂಡಲಸಂಗಮದೇವಾ. ॥೩೮॥

ಇಂತು ಬಸವರಾಜದೇವರು ಅನುತಾಪದಿಂ ನೊಂದು ಅತ್ಯಂತ ಕಿಂಕಿಲನಾಗಿ ಬಿನ್ನಹಂ ಮಾಡುತ್ತಿರಲು, ಆ ಪ್ರಭುದೇವರು ಆಕ್ಷೇಪದಿಂದ ನಿರೂಪಿಸಿದ ಪ್ರಸ್ತಾವದ ವಚನ:

೩೪೧

ಲಿಂಗದೊಳಗೆ ಜಂಗಮ, ಜಂಗಮದೊಳಗೆ ಲಿಂಗವೆಂದಱಿದು,
[1]ಮಱೆದು[1] ಬಱುದೊಱೆವೋದವರು
ಜಂಗಮವನಿನ್ನು ಬೆರಸಲೇತಕ್ಕಯ್ಯಾ?
ಆ ಲಿಂಗದೊಳಗೆ ಜಂಗಮವನಱಿಸಿಕೊಂಬುದು.
ಲಿಂಗಾರ್ಚನೆಯವಸರಕ್ಕೆ ಜಂಗಮ ಮನೆಗೆ ಬಂದರೆ,
ಲಿಂಗಾರ್ಚನೆಯ ಮಾದು ಜಂಗಮಕ್ಕೆ ಇದಿರೆದ್ದು
ವಂದಿಸಿ ಭಕ್ತಿಯ ಮಾಡಬಲ್ಲಾತನೆ ಭಕ್ತ.
ಆ ಜಂಗಮ ಹೊಱಗಿರಲು
ಲಿಂಗಾರ್ಚನೆಯ ಮಾಡುತ್ತಿರ್ಪಾತನೇತಱ ಭಕ್ತ?
ಜಂಗಮದ ಮುಂದೆ ಲಿಂಗವ ಕೈಯಲ್ಲಿ ಹಿಡಿದುಕೊಂಡು,
ಸಹಪಂಕ್ತಿಯಲ್ಲಿ ಕುಳ್ಳಿರ್ದು ಪೂಜಿಸುವಾತ ಭೃತ್ಯಾಚಾರ ದ್ರೋಹನು.
ಆ ಭಕ್ತನ ಮನೆಯ ಹೊಗುವ ಜಂಗಮವೆ ಅಜ್ಞಾನಿ.
ನಮ್ಮ ಗೊಹೇಶ್ವರನ ಶರಣರ ಕೂಡೆ
ಅಹಂಕಾರವ ಹೊತ್ತಿರ್ಪವರ ಕಂಡಡೆ
ನಾನೊಲ್ಲೆ ಕಾಣಾ ಸಂಗನಬಸವಣ್ಣಾ. ॥೩೯॥

ಮತ್ತಂ,

೩೪೨

ಜಂಗಮವೆ ಹೊಱಗಿರಲು ಲಿಂಗಾರ್ಚನೆ ಯಾವುದಯ್ಯಾ?
ಪ್ರಾಣನ ಹೊಱಗಿರಿಸಿ ಎಡೆಯಾಡುವ ದೇಹ ಉಂಟೆ?
ಶರಣರು ಬಂದು ಬಾಗಿಲಲ್ಲಿ ನಿಂದಿರಲು,
ತನ್ನ ತಾ ಮಱೆದವರ ಕಂಡಡೆ
ನಮ್ಮ ಗೊಹೇಶ್ವರಲಿಂಗ ಒಡೆಯ ಹಾಯ್ಕದೆ ಮಾಣ್ಬನೆ? ॥೪೦॥

ಇಂತು ಬಸವರಾಜದೇವರು ಲಿಂಗಾರ್ಚನೆಯಂ ಮಾಡುತ್ತ ತೆಱಹು ಮಱಹಾಗಿರ್ದ ವೃತ್ತಾಂತಮಂ ಪ್ರಭುದೇವರು ಎಚ್ಚಱಿಸಿ ಮೂದಲಿಸಿ ನಿರೂಪಮಂ ಕೊಡುತ್ತಿರಲು, ಆ ಬಸವರಾಜದೇವರು ಅತ್ಯಂತ ನೊಂದು ತಮ್ಮ ಲಿಂಗಾರ್ಚನೆಯ ತಾವೆ ಜಱೆದು ನುಡಿದುಕೊಳ್ಳುತ್ತಿರ್ದ ಪ್ರಸ್ತಾವದ ವಚನ:

೧-೧ಮಱದು (ಮೂ)

೩೪೩

ಮುನ್ನೂಱಱುವತ್ತು ದಿನ [1]ಸ್ರವವ[1] ಮಾಡಿ
ಕಳನನೇಱೆ ಕೈಮಱೆದಂತಾಯಿತ್ತೆನ್ನ ಭಕ್ತಿ.
ಎನಿಸು ಕಾಲ ಲಿಂಗಾರ್ಚನೆಯಮಾಡಿ ಏವೆನಯ್ಯಾ,
ಎನ್ನ ಮನದಲ್ಲಿ ದೃಢವಿಡಿಯದನ್ನಕ್ಕರ?
ಕೊಡನ ತುಂಬಿದ ಹಾಲನೊಡೆಯ ಹಾಯ್ಕಿ
ಇನ್ನುಡುಗಿಹೆನೆಂದರೆ ಎನ್ನಳವೆ ಕೂಡಲಸಂಗಮದೇವಾ? ॥೪೧॥

ಮತ್ತಂ,

೩೪೪

ಎನಿಸು ಕಾಲ ಕಲ್ಲು ನೀರೊಳಗಿದ್ದರೇನು,
ನೆನೆದು ಮೃದುವಾಗಬಲ್ಲುದೆ ಅಯ್ಯಾ?
ಎನಿಸು ಕಾಲ ನಿಮ್ಮ ಪೂಜಿಸಿ ಏವೆನಯ್ಯಾ,
ಎನ್ನ ಮನದಲ್ಲಿ ದೃಢವಿಲ್ಲದನ್ನಕ್ಕರ?
ನಿಧಾನವ ಕಾಯ್ದಿರ್ದ ಬೆಂತರನ ವಿಧಿ ಎನಗಾಯಿತ್ತು
ಕಾಣಾ ಕೂಡಲಸಂಗಮದೇವಾ. ॥೪೨॥

ಮತ್ತಂ,

೩೪೫

ಅಷ್ಟವಿಧಾರ್ಚನೆ ಷೋಡಶೋಪಚಾರಂಗಳ
ಅರಸಱೆಯದ ಬಿಟ್ಟಿಯ ಮಾಡುವೆನು.
ಎನ್ನ ತಾಗಿದ ಸುಖವ
ಜಂಗಮಕ್ಕರ್ಪಿಸಲಱೆಯದ ಉಪಚಾರಿಯಾನು.
ಸ್ಥಾವರ ಜಂಗಮದ ಭೇದವನಱೆಯದ ಪೂಜಕ ನಾನು.
ಮತ್ತೆ ನಾಚದೆ ಕೂಡಲಸಂಗಮದೇವರೆನ್ನ
ಪ್ರಾಣಲಿಂಗವೆಂಬ ಡಂಬಕ ನಾನು! ॥೪೩॥

ಮತ್ತಂ,

೩೪೬

ನೋಡುವರುಳ್ಳರೆ ಮಾಡುವೆ ದೇಹಾರವ.
ಎನಗೊಂದು ನಿಜವಿಲ್ಲ, ಎನಗೊಂದು ನಿಷ್ಪತಿಯಿಲ್ಲವಯ್ಯಾ!
ಲಿಂಗವ ತೋಱೆ ಉದರವ ಹೊರೆವ
ಭಂಗಗಾಱ ನಾನಯ್ಯಾ ಕೂಡಲಸಂಗಮದೇವಯ್ಯಾ! ॥೪೪॥

[2]ಮತ್ತಂ[2],

೧-೧ ಸರವ (ಮೂ) ೨-೨ X(ಮು)

೩೪೭

ಲಿಂಗವೆಂತಿರ್ಪುದೆಂದರಿಯೆನು:
ಲಿಂಗದ ನಿಲವೆಂತುಟೆಂಬುದ ಹೋದ ಹೊಲಬನರಿಯೆನು;
ಲಿಂಗಾರ್ಚನೆಯ ಮಾತು ಎನಗೇಕಯ್ಯ?
ಜಂಗಮ ಲಿಂಗವಾಗಿ ಬಂದು ನೀವಿರುತ್ತಿರಲು,
ಸ್ಥಾವರಕ್ಕೆ ಮಚ್ಚಿ ಮರುಳಾದೆನು.
ಕೂಡಲಸಂಗಮದೇವಾ, ಎನ್ನ ತಪ್ಪನೆಣಿಸಿಹೆನೆಂದರೆ ಕಡೆಯಿಲ್ಲ. ॥೪೫॥

ಮತ್ತಂ,

೩೪೮

ಎನ್ನ ತಪ್ಪು ಅನಂತಕೋಟಿ;
ನಿಮ್ಮ ಸೈರಣೆಗೆ ಲೆಕ್ಕವಿಲ್ಲವಯ್ಯಾ!
ಇನ್ನು ತಪ್ಪಿದೆನಾದರೆ ನಿಮ್ಮ ಪಾದವೆ ದಿಬ್ಯ.
ಕೂಡಲಸಂಗಮದೇವಯ್ಯಾ,
ನಿಮ್ಮ ಪ್ರಮಥರ ಮುಂದೆ ಕಿನ್ನರ ಬೊಮ್ಮಣ್ಣಗಳ ಪಾದವೆ ಸಾಕ್ಷಿ. ॥೪೬॥

ಮುನ್ನ ತಪ್ಪಿದ ತಪ್ಪಲ್ಲದೆ ಇನ್ನು ತೆಱಹುಮಱಹಾಗಿದ್ದೆನಾದರೆ, ಕಿನ್ನರ ಬೊಮ್ಮಣ್ಣಗಳು ಸಾಕ್ಷಿಯಾಗಿ ನಿಮ್ಮ ಶ್ರೀಪಾದದಾಣೆಯೆಂದು ಬಸವರಾಜದೇವರು ಬಿನ್ನಹಂ ಮಾಡಲು, ಅಲ್ಲಿ ಕಿನ್ನರ ಬೊಮ್ಮಿತಂದೆಗಳು ಪ್ರಭುದೇವರೊಡನೆ ಬಿನ್ನಹಂ ಮಾಡುವ ಪ್ರಸ್ತಾವದ ವಚನ:

೩೪೯

ತನು ಸೆಜ್ಜೆ ಮನ ಲಿಂಗವಾದ ಬಳಿಕ,
ಅನುವ ಬೇಱೆ ಮತ್ತೆ ಅಱಿಸಲುಂಟೆ?
ತನುವೆ ಬಸವಣ್ಣ, ಮನವೆ ಪ್ರಭುದೇವರೆಂಬ
ಘನವೊಳಕೊಂಡಿರ್ದ ಬಳಿಕ, ಗುಣಾವಗುಣವ ಸಂಪಾದಿಸುವರೆ?
ಮಹಾಲಿಂಗ ತ್ರಿಪುರಾಂತಕದೇವಾ,
ಸಂಗನಬಸವಣ್ಣನಲ್ಲಿ ನಿಮ್ಮಡಿಗಳಲ್ಲಿ
ಸಂದು ಸಂಶಯ ಉಂಟೆ? ಬಿಜಯಂಗೈವುದಯ್ಯಾ ಪ್ರಭುವೆ. ॥೪೭॥

ಈ ಹೀಂಗೆಂದು ಕಿನ್ನರಬೊಮ್ಮಣ್ಣಗಳು ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರತ್ಯುತ್ತರ:

೩೫೦

ಜಂಗಮದಿಂಗಿತಾಕಾರವ ನೋಡಿ ಲಿಂಗವೆಂದಱಿದ ಸದ್‌ಭಕ್ತರು,
ಮನ ಮನ ಬೆರಸಿದ ಕೂರ್ಮನ ಶಿಶುವಿನ ಸ್ನೇಹದಂತೆ
ಕಾಣದ ಮುನ್ನವೆ ತೆಱಹಿಲ್ಲದಿರಬೇಕು ನೋಡಾ!

ಬಂದ [1]ಬರವ[1] ನೋಡದೆ, ನಿಂದ ನಿಲವನಱಿಯದೆ
ಕೆಮ್ಮನೆ ಅಹಂಕಾರವ ಹೊತ್ತಿರ್ಪವರ
ನಮ್ಮ ಗೊಹೇಶ್ವರಲಿಂಗನೊಲ್ಲ ಕಾಣಾ ಕಿನ್ನರ ಬೊಮ್ಮಣ್ಣಾ. ॥೪೮॥

ಈ ಹೀಂಗೆಂದು ಪ್ರಭುದೇವರು ಕಿನ್ನರ ಬೊಮ್ಮಣ್ಣಗಳೊಡನೆ ನಿರೂಪಿಸಲು, ಇದಕ್ಕೆ ಬಸವರಾಜದೇವರು ಕಿಂಕುರ್ವಾಣಭಾವದಿಂದ ಬಿನ್ನೈಸಿದ ಪ್ರಸ್ತಾವದ ವಚನ:

೩೫೧

ಸತ್ಯ ಸದಾಚಾರ ಸಂಬಂಧವಾದ ಭೃತ್ಯಾಚಾರ ಎನಗಿಲ್ಲವಯ್ಯಾ!
ಆನು ನಿಮ್ಮ ನೆನೆಯಲು ಎನಗೆ ಭಕ್ತಿಯಿಲ್ಲವ[1]ಯ್ಯಾ!
ಕರುಣದಿಂ ಕೃಪೆ ಮಾಡಾ ಕೂಡಲಸಂಗಮದೇವಾ. ॥೪೯॥

ಎನ್ನ ಅಹಂಕಾರದ ಅವಗುಣವ ಕಳೆದು, ಕೃತಾರ್ಥನ ಮಾಡೆಂದು ಬಿನ್ನಹಂ ಮಾಡುವ ಪ್ರಸ್ತಾವದ ವಚನ:

೩೫೨

ಕರಗಿಸಿಯೆನ್ನ ಮನದ ಕಾಳಿಕೆಯ ಕಳೆಯಯ್ಯಾ,
ಒರೆಗೆ ಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯಾ.
ಕಡಿಹಕ್ಕೆ ಬಡಿಹಕ್ಕೆ ತಂದೆನ್ನ ಕಡೆಯಾಣಿಯ ಮಾಡಿ,
ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ
ಸಲಹಯ್ಯಾ ಕೂಡಲಸಂಗಮದೇವಾ. ॥೫೦॥

ಈ ಹೀಂಗೆಂದು ಬಸವರಾಜದೇವರು ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೩೫೩

ತನುವಿನಲ್ಲಿ ತನು ಸವೆಯದು;
ಮನದಲ್ಲಿ ಮನ ಸವೆಯದು;
ಧನದಲ್ಲಿ ಧನ ಸವೆಯದು;
ಭಕ್ತಿಯುಕ್ತಿಯ ಮಾತು ನಿನಗೇಕೆ ಹೇಳಾ ಬಸವಾ?
ಮಾಟ ಕೂಟವೆಂಬ ಕೀರ್ತಿಗೆ ಸಿಲುಕಿ,
ಜಂಗಮವೆ ಲಿಂಗವೆಂಬುದ ಮಱೆದೆಯಲ್ಲಾ ಬಸವಾ!
ಗೊಹೇಶ್ವರನ ಶರಣರಿಗೆ ತ್ರಿಕರಣವನೊಪ್ಪಿಸಿದಲ್ಲದೆ
ಭಕ್ತನಾಗಬಾರದು ಕಾಣಾ ಸಂಗನಬಸವಣ್ಣಾ. ॥೫೧॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಬಸವರಾಜದೇವರು ತನು ಮನ ಧನಂಗಳನು ವಂಚನೆಯಿಲ್ಲದೆ ನಿಮಗರ್ಪಿಸಿದೆನೆಂಬ ಪ್ರಸ್ತಾವದ ವಚನ:

೧–೧ ಚರವ (ಮೂ) ೨x(ಮೂ)

೩೫೪

ಹೊನ್ನಿನೊಳಗೊಂದೊರೆಯ,
ಸೀರೆಯೊಳಗೊಂದೆಳೆಯ
ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ,
ನಿಮ್ಮ ಶರಣರಿಗಲ್ಲದೆ ಮತ್ತೊಂದನಜೆಯೆನು.
ಕೂಡಲಸಂಗಮದೇವಾ ನಿಮ್ಮಾಣೆ! ॥೫೨॥

೧ಮತ್ತಂ,೧

೩೫೫

ತನುವ ಬೇಡಿದಡೀವೆ, ಮನವ ಬೆಡಿದಡೀವೆ,
ಧನವ ಬೇಡಿದಡೀವೆ, ನಿಮ್ಮ ಶರಣರಿಗೆ.
ಎನಗೆ ಬೇಕೆಂಬ ಭಾವ ಮನದಲ್ಲಿ ಹೊಳೆದರೆ,
ಘನಮಹಿಮ, ನಿಮ್ಮ ಪಾದದಾಣೆ.
ಮನ ವಚನ ಕಾಯದಲ್ಲಿ ನೀವಲ್ಲದೆ ಮತ್ತೊಂದನಜೆದರೆ,
ಕೂಡಲಸಂಗಮದೇವಾ, ಭವ ಘೋರದಲ್ಲಿಕ್ಕಯ್ಯಾ! ॥೫೩॥

ತನು ಮನ ಧನಂಗಳ ನಿಮಗರ್ಪಿಸಿ ಶುದ್ಧನಾಗಿಪ್ಪೆನೆಂದು ಬಸವರಾಜದೇವರು ಬಿನ್ನಹಂ ಮಾಡಲು, ಈ ಉತ್ತರಮಂ ಖಂಡಿಸಿ ನಿರೂಪಿಸಿದ ಪ್ರಸ್ತಾವದ ವಚನ:

೩೫೬

ಮೇರುಗಿರಿಗಳೆಲ್ಲವೂ ಪ್ರಮಥರೊಡವೆ.
ರಜತಗಿರಿಗಳೆಲ್ಲವೂ ಪುರಾತರೊಡವೆ
ಚತುರ್ದಶಭುವನವೆಲ್ಲವೂ ಲಿಂಗದೊಡವೆ.
ಪೃಥ್ವಿಯೆಂಬುದು ಕರ್ತಾರನ ಕಮ್ಮಟ,
ಅಚ್ಚಿನ ಮೊಳೆ, ಬಾಣಸದ ಮನೆ,
ತನು ಮನ ಧನಂಗಳೆಲ್ಲವೂ ನಮ್ಮ ಗೊಹೇಶ್ವರಲಿಂಗದ ಸೊಮ್ಮು.
ನೀನೇನ ಕೊಟ್ಟು ಭಕ್ತನಾದೆ ಹೇಳಾ ಬಸವಣ್ಣಾ? ॥೫೪॥

೧ಮತ್ತಂ,೧

೩೫೭

ತನುವರ್ಪಿತವೆಂದರೆ ಗುರುದ್ರೋಹ;
ಮನವರ್ಪಿತವೆಂದರೆ ಲಿಂಗದ್ರೋಹ;
ಧನವರ್ಪಿತವೆಂದರೆ ಜಂಗಮದ್ರೋಹ.
ಇಂತೀ ತನು ಮನ ಧನಂಗಳೆಂಬ ಅನಿತ್ಯವನು ನಿತ್ಯಕ್ಕರ್ಪಿಸಿ

೧+ಗುರುವೆ (ಮೂ)

ಭಕ್ತನಾದೆನೆಂದರೆ, ಅದು ಅಜ್ಞಾನ ನೋಡಾ!
ಒಡೆಯರಿಗೆ ಉಂಡೆಯ ಮುಜೆದಿಕ್ಕಿ,
ನಾ ಭಕ್ತನೆಂಬ ಮಾತ ಸಮ್ಯಕ್‌ಶರಣರು ಮೆಚ್ಚುವರೆ?
ನಮ್ಮ ಗೊಹೇಶ್ವರಲಿಂಗಕ್ಕೆ
ನೀನಾವುದಱಿಲ್ಲಿ ಏನನರ್ಪಿಸಿ ಭಕ್ತನಾದೆ
ಹೇಳಾ ಸಂಗನಬಸವಣ್ಣಾ? ॥೫೫॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು ಅನುತಾಪಂಬಟ್ಟ ಪ್ರಸ್ತಾವದ ವಚನ:

೩೫೮

ಎಳ್ಳಿಲ್ಲದ ಗಾಣವನಾಡಿದ ಎತ್ತಿನಂತಾಯಿತ್ತೆನ್ನ ಭಕ್ತಿ !
ಉಪ್ಪ ಅಪ್ಪುವಿನಲ್ಲಿ ಅದ್ದಿ ಮೆಲಿದಂತಾಯಿತ್ತೆನ್ನ ಭಕ್ತಿ!
ಕೂಡಲಸಂಗಮದೇವಾ,
ನಾನು ಮಾಡಿದೆನೆಂಬ ಕಿಚ್ಚು ಎನ್ನನೆ ಸುಟ್ಟಿತ್ತು!
ಇನ್ನು ಸಾಲದೆ ಹೇಳಾ ಪ್ರಭುವೆ? ॥೫೬॥

ಮತ್ತಂ,

೩೫೯

ತನುವ ಕೊಟ್ಟೆನೆಂದು, ನುಡಿದು,
ಗುರುವಚನಕ್ಕೆ ದೂರವಾದೆ.
ಮನವ ಕೊಟ್ಟೆನೆಂದು ನುಡಿದು,
ಲಿಂಗಮುಖಕ್ಕೆ ದೂರವಾದೆ.
ಧನವ ಕೊಟ್ಟೆನೆಂದು ನುಡಿದು,
ಜಂಗಮಮುಖಕ್ಕೆ ದೂರವಾದೆ.
ಕೂಡಲಸಂಗಮದೇವಯ್ಯಾ,
ನಿಮಗೆ ಮಾಡಿದೆನೆಂದು ನುಡಿದು ಕೆಟ್ಟ ಕೇಡಿಂಗೆ ಕಡೆಯಿಲ್ಲ! ॥೫೭॥

ಮತ್ತಂ,

೩೬೦

ನಾನು ಭಕ್ತನಲ್ಲಯ್ಯಾ, ನಾನು ಯುಕ್ತನಲ್ಲಯ್ಯಾ,
ನಾನು ಮುಕ್ತನಲ್ಲಯ್ಯಾ; ಕಪಟವೇಷದ ಡಂಬಕ ನಾನು.
ಕೂಡಲಸಂಗಮದೇವಾ,
ಎನ್ನ ಭಕ್ತಿ ಒಳಲೊಟ್ಟೆ ಎಂಬುದ ನೀವು ತೋಱಿ ಬಂದಿರಾಗಿ,
ಎನಗಿಂದಱಿಯ ಬಂದಿತು. ॥೫೮॥

ಈ ಹೀಂಗೆಂದು ಬಸವರಾದೇವರು ಕಿಂಕುರ್ವಾಣದಿಂ ಬಿನ್ನೈಸಲು, ಇದಕ್ಕೆ ಪ್ರಭುದೇವರು ವಿಡಂಬಿಸುತ್ತಿರ್ದ ಪ್ರಸ್ತಾವದ ವಚನ:

೩೬೧

ಸಜ್ಜನ ಸನ್ನಿಹಿತವಾದ ಭಕ್ತಿ ಹೊತ್ತಿಂಗೊಂದು ಪರಿಯುಂಟೆ ಹೇಳಾ? ಒಮ್ಮೆ ಅಹಂಕಾರ,
ಒಮ್ಮೆ ಕಿಂಕಿಲವೆ?
ಮನಕ್ಕೆ ಮನ ಸಾಕ್ಷಿಯಾಗಿ ಮಾಡುವ ಭಕ್ತನಲ್ಲಿ
ಗೊಹೇಶ್ವರನಿಪ್ಪನಲ್ಲದೆ, ಪ್ರಪಂಚಿನೊಳಗಿಲ್ಲ ಕಾಣಾ ಸಂಗನಬಸವಣ್ಣಾ. ॥೫೯॥

ಮತ್ತಂ,

೩೬೨

ಜಂಗಮವೆ ಲಿಂಗವೆಂದು ನಂಬಿದ ಬಳಿಕ,
ಸಂದೇಹವಿಲ್ಲದೆ ಇರಬೇಕು ನೋಡಾ,
ಸಂದು ಸಂಶಯವಳಿದು ಸಯವಾದ ಭಕ್ತಿ
ಹಿಮ್ಮೆಟ್ಟಿದಡೆ ಹೋಯಿತ್ತಲ್ಲಾ!
ಒಪ್ಪಚ್ಚಿ ಬಳಿಕ ಕಿಂಕಿಲವಾಗಿ, ಒಪ್ಪಚ್ಚಿ ಬಳಿಕ ಅಹಂಕಾರಿಯಾದರೆ,
ಹೋಗ ನೂಕುವ ಕಾಣಾ ನಮ್ಮ ಗೊಹೇಶ್ವರಲಿಂಗವು. ॥೬೦॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ತಾವದ ವಚನ:

೩೬೩

ಬೆದಕದಿರು, ಬೆದಕದಿರು; ಬೆದಕಿದರೆ ಹುರುಳಿಲ್ಲ.
ಚಿತ್ತರಟ್ಟೆಯ ಕಾಯಲ್ಲಿ ಮತ್ತೇನನರಸುವಿರಿ?
ನಿಮ್ಮುತ್ತಮಿಕೆಯ ಮೆಱೆಯಯ್ಯಾ ಕೂಡಲಸಂಗಮದೇವಾ! ॥೬೧॥

ಮತ್ತಂ,

೩೬೪

ಎನ್ನ ಚಿತ್ತ ಅತ್ತಿಯ ಹಣ್ಣು ನೋಡಯ್ಯಾ!
ವಿಚಾರಿಸಿ ನೋಡಿದರೆ ಹುರುಳಿಲ್ಲ ನೋಡಯ್ಯಾ!
ಪ್ರಪಂಚಿನ ಡಂಬಿನಲ್ಲಿ ಎನ್ನನೊಂದು ರೂಪು ಮಾಡಿ
ನೀವಿರಿಸಿದಿರಿ ಕೂಡಲಸಂಗಮದೇವಾ! ॥೬೨॥

ಈ ಹೀಂಗೆಂದು ಬಸವರಾಜದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರ ಪ್ರತ್ಯುತ್ತರ:

೩೬೫

ಕೈಯಲ್ಲಿ ಡಾಣೆ, ಮನದಲ್ಲಿ ಕ್ರೋಧ, ವಚನದಲ್ಲಿ ಕಿಂಕಿಲ,
ಲಿಂಗದ ವಾರ್ತೆ ನಿನಗೇಕೆ ಹೇಳಾ ಬಸವಾ?
ಜಂಗಮವೆ ಲಿಂಗವೆಂಬ ಶಬ್ದಸೂತಕ ಉಂಟಲ್ಲದೆ,

ಸಜ್ಜನ ಭಕ್ತಿಯ ಮಾತು ನಿನಗೇಕೆ ಹೇಳಾ ಬಸವಾ?
ಕಬ್ಬುನದ ರೂಪು ಪರುಷವ ಮುಟ್ಟಿ ಹೊನ್ನಾಯಿತ್ತಲ್ಲದೆ,
ಪರುಷವಾಗಬಲ್ಲುದೆ ಹೇಳಾ ಬಸವಾ?
ಗೊಹೇಶ್ವರನೆಂಬ ಪರುಷದ ಪುತ್ಥಳಿಯನಜೀವರೆ
ತಿಳಿದು ನೋಡಾ ಸಂಗನಬಸವಣ್ಣಾ. ॥೬೩॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ತಾವದ ವಚನ:

೩೬೬

ಆನೆತ್ತ ಬಲ್ಲೆನಯ್ಯಾ ನಿಮ್ಮ ಭಕ್ತಿಯ ಘನವ?
ನಾನೆತ್ತ ಬಲ್ಲೆನಯ್ಯಾ ನಿಮ್ಮ ಶ್ರೀಪಾದದ ನಿಲವ?
ಕಾಯದ ಕಳವಳದ ಮಱೆಯಲ್ಲಿದ್ದವರಲ್ಲಿ
ನಂಬುಗೆಯಳವಡುವುದೆ?
ಕೂಡಲಸಂಗಮದೇವಾ,
ಎನ್ನವಗುಣವ ನೋಡದೆ
ಕರುಣದಿಂದ ಭಕ್ತಿಯ ನಿಲವ ತೋಱಾ ತಂದೆ! ॥೬೪॥

ಈ ಹೀಂಗೆಂದು ಬಸವರಾಜದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರ ಪ್ರತ್ಯುತ್ತರ:

೩೬೭

ಕೂರ್ಮನ ಶಿಶುವಿನ ಸ್ನೇಹದಂತಿರಬೇಡಾ ಸಂಗನಬಸವಣ್ಣಾ!
ಕಾಕ ಪಿಕಸಂಧಾನದಂತಿರಬೇಡಾ ಬಸವಣ್ಣಾ!
ಕೊಂಬ ತಪ್ಪದೆ ಹಾಯುವ ಕಪಿಯಂತಿರಬೇಡಾ ಬಸವಣ್ಣಾ!
ನೀರು ಕ್ಷೀರವ ಭೇದಿಸಿ ತೆಗೆವ ಹಂಸೆಯಂತಿರಬೇಡಾ ಬಸವಣ್ಣಾ!
ಗೊಹೇಶ್ವರಲಿಂಗದಲ್ಲಿ ಅವಧಾನ ತಪ್ಪಿ
ಮರಳಿ ಅಱಿಸಿದರುಂಟೆ ಹೇಳಾ ಸಂಗನಬಸವಣ್ಣಾ? ॥೬೫॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ತಾವದ ವಚನ:

೩೬೮

ಎನ್ನ ತನುವಿಂಗೆ ನೀನೊಡೆಯ,
ಎನ್ನ ಮನಕ್ಕೆಯೂ ನೀನೊಡೆಯ,
ಎನ್ನ ಧನಕ್ಕೆಯೂ ನೀನೊಡೆಯನಾದ ಬಳಿದ
ಎನ್ನಜೀವೂ ನಿನ್ನದು, ಎನ್ನ ಮಱಹೂ ನಿನ್ನದು.
ಕೂಡಲಸಂಗಮದೇವಾ,
'ಭೃತ್ಯಾಪರಾಧಃ ಸ್ವಾಮಿನೋ ದಂಡ'
ಎಂಬುದ ವಿಚಾರಿಸಿ ನೋಡಾ ಪ್ರಭುವೆ. ॥೬೬॥

ಈ ಹೀಂಗೆಂದು ಬಸವರಾಜದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೩೬೯

ತಾ ಬಾಳಲಾಱದೆ ವಿಧಿಯ ಬೈದನೆಂಬ
ನಾಣ್ನುಡಿಯಾಯಿತ್ತಲ್ಲಾ ಬಸವಣ್ಣಾ!
ಅವಧಾನ ತಪ್ಪಿ, ಆಚಾರಗೆಟ್ಟು ನಡೆದು
ಶಿವಾಧೀನವೆಂದರೆ ಹೋಹುದೆ?
ಗೊಹೇಶ್ವರಲಿಂಗದಲ್ಲಿ ಈ ಬಣ್ಣಿಗೆಯ ಮಾತು ಸಲ್ಲದು
ಕೇಳಾ ಸಂಗನಬಸವಣ್ಣಾ.! ॥೬೭॥

ಮತ್ತಂ,

೩೭೦

ಲಿಂಗ ಜಂಗಮವ ಪೂಜಿಸಿ ಭಕ್ತನಾದೆನೆಂದರೆ,
ಭೃತ್ಯಾಚಾರ ಸದಾಚಾರವೆ ಮೊದಲು ನೋಡಾ!
ವಿಶ್ವಾಸವುಳ್ಳ ಭಕ್ತಿಗೆ ಹೊರೆಯಿಲ್ಲ.
ಅಹಂಕಾರವೆಂಬ ಅಲಗ ಹಿಡಿದು
ಮಾಡುವ ಭಕ್ತಿ ತನ್ನನೆ ಇಱಿವುದು.
ಗೊಹೇಶ್ವರನೆಂಬ ಹಗೆಯ ಗೆಲುವರೆ,
ಅಱಿವೆಂಬ ಅಲಗ ಅವಧಾನ ತಪ್ಪದೆ
ಹಿಡಿಯಬೇಕು ನೋಡಾ ಬಸವಣ್ಣಾ! ॥೬೮॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು ಅದಕ್ಕೆ ಬಸವರಾಜದೇವರ ಬಿನ್ನಹ:

೩೭೧

ಧ್ಯಾನ ಮೌನವೆಂಬ ಶಸ್ತ್ರವ ಹಿಡಿಯಲಱಿಯದೆ,
ಅಹಂಕಾರದ ಧಾರೆಯ ಮೊನೆಯಲಗೆಂಬ
ಶಸ್ತ್ರವ ಹಿಡಿದು ಕೆಟ್ಟೆನಯ್ಯಾ! ಅಂಜುವೆನಂಜುವೆನಯ್ಯಾ!
ಜಂಗಮ ಲಿಂಗವೆಂಬ ಭಾಷೆ ಪಲ್ಲಟವಾಯಿತ್ತು.
ಇನ್ನು ಜಂಗಮವೆಂಬ ಶಿಕ್ಷಾ ಶಸ್ತ್ರದಲ್ಲಿ
ಎನ್ನ ಹೊಯ್ದು ಬೈದು ರಕ್ಷಿಸುವುದು ಕೂಡಲಸಂಗಮದೇವಾ. ॥೬೯॥

ಈ ಹೀಂಗೆಂದು ಬಸವರಾಜದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ಮುಳಿಸ ತಿದ್ದಿ ತೋಱಿ ನಿರೂಪಿಸಿದ ಪ್ರಸ್ತಾವದ ವಚನ:

೩೭೨

ಮನಕ್ಕೆ ಮನವೇಕಾರ್ಥವಾಗಿ,
ಕಾಯಕ್ಕೆ ಕಾಯ ಸಮದರ್ಶನವಾಗಿ,

ಪ್ರಾಣಕ್ಕೆ ಪ್ರಾಣ ಸಮದರ್ಶನವಾಗಿದ್ದವರಲ್ಲಿ,
ಮನ ವಚನ ಕಾಯದಲ್ಲಿ
ಶಬ್ದಸೂತಕ ಹುಟ್ಟಿದರೆ ಸೈರಿಸಬಾರದು ಕಾಣಾ.
ನಮ್ಮ ಗೊಹೇಶ್ವರಲಿಂಗದಲ್ಲಿ ನೀನೆ ಭಕ್ತನಾದ ಕಾರಣ
ಮುಳಿಸು ಮೊಳೆದೋಚಿತ್ತು ಕಾಣಾ ಸಂಗನಬಸವಣ್ಣಾ! ॥೭೦॥

ಮತ್ತಂ,

೩೭೩

ಸೂಳೆ ಹಲಬರನುರುಳಿದಳೆಂದು ನಿಂದಿಸುವರಿಲ್ಲ ಕೇಳಾ!
ಪತಿವ್ರತೆ ತನ್ನ ಪುರುಷನಲ್ಲದೆ ಮತ್ತೊಬ್ಬನ ಮುಖವ ನೋಡಿದರೆ,
ಅವಳ ಚಾಂಡಾಲಗಿತ್ತಿ ಎಂಬರು ಲೋಕವೆಲ್ಲವು.
ಕೀರ್ತಿವಾರ್ತೆಗೆ ಮಾಡುವ ಭಕ್ತ ತಪ್ಪಿದರೆ,
ಅದ ಮನಕ್ಕೆ ತರಲಿಲ್ಲ.
ಸಜ್ಜನಸದ್ಭಕ್ತನೆಡಹಿದರೆ, ಅದ ಸೈರಿಸಬಾರದು ಕೇಳಾ.
ನಮ್ಮ ಗೊಹೇಶ್ವರಲಿಂಗಕ್ಕೆ ಆದಿಯಿಂದತ್ತ ನೀನೆ ಭಕ್ತನಾದ ಕಾರಣ
ಮನ ನೊಂದಿತ್ತು ಕಾಣಾ ಸಂಗನಬಸವಣ್ಣಾ! ॥೭೧॥

ಈ ಹೀಂಗೆಂದು ಪ್ರಭುದೇವರು ಮುಳಿಸ ತೋಚಿ ಹೇಳುತ್ತಿರಲು, ಅದಕ್ಕೆ ಬಸವರಾಜದೇವರು ಅನುತಾಪದಿಂದ ಬಿನ್ನಹಂ ಮಾಡಿದ ಪ್ರಸ್ತಾವದ ವಚನ:

೩೭೪

ಎನ್ನ ನುಡಿ ಎನಗೆ ನಂಜಾಯಿತ್ತು.
ಎನ್ನ ಅಲಗೆ ಎನ್ನ ಕೊಂದಿತ್ತು!
ಆನು ಪಾಪಿಯಯ್ಯಾ, ಆನು ಕೋಪಿಯಯ್ಯಾ!
ತರಳತನದಲ್ಲಿ ಕೆಟ್ಟೆನಯ್ಯಾ!
ಭಕ್ತಿ ಯುಕ್ತಿಯ ಹೊಲಬನರಿಯದೆ ಆನು ಮರುಳಾದೆನಯ್ಯಾ!
ಆಳು ಮುನಿದರೆ ಆಳೇ ಕೆಡುವನು.
ಆಳ್ದ ಮುನಿದರೆ, ಆಳೇ ಕೆಡುವನು.
ನೀವು ಮುನಿದರೆ ನಾನೇ ಕೆಡುವೆನಯ್ಯಾ ಕೂಡಲಸಂಗಮದೇವಾ! ॥೭೨॥

[೧]ಮತ್ತಂ[೧]

೩೭೫

ಒಲೆ ಹೊತ್ತಿ ಉರಿದರೆ ನಿಲಬಹುದಲ್ಲದೆ,
ನೆಲ ಹೊತ್ತಿ ಉರಿದರೆ ನಿಲಬಹುದೆ?
ಏರಿ ನೀರುಂಬರೆ, ಬೇಲಿ ಕೆಯ್ಯ ಮೇವರೆ,

೧-೧ x (ಮು)

ನಾರಿ ತನ್ನ ಮನೆಯಲ್ಲಿ ಕಳುವರೆ,
ತಾಯ ಮೊಲೆವಾಲು ನಂಜಾಗಿ ಕೊಲುವರೆ
ಇನ್ನಾರಿಗೆ ದೂಱುವೆನಯ್ಯಾ ಕೂಡಲಸಂಗಮದೇವಾ?
ನೀವು ಮುನಿದರೆ ನಾನು ಸೈರಿಸಬಲ್ಲೆನೆ ಹೇಳಾ ಪ್ರಭುವೆ? ॥೭೩॥

ಮತ್ತಂ,

೩೭೬

ಎನ್ನ ಗುಣಾವಗುಣವ ಸಂಪಾದಿಸುವೆಯಯ್ಯಾ.
ನಿಮಗಾನು ಸರಿಯೆ?
ಅಪ್ರತಿಮ ಕೂಡಲಸಂಗಮದೇವಾ,
ನೀವು ಮಾಡಲಾನಾದೆನು,
ಎನ್ನೊಡನೆ ಮುನಿವರೆ ಹೇಳಾ ಎಲೆ ತಂದೆ? ॥೭೪॥

ಮತ್ತಂ,

೩೭೭

ಕಣ್ಣ ಕೋಪಕ್ಕೆ ಮುಂದಱಿಯದೆ ನುಡಿದೆನು.
ಮನ ನಿಮ್ಮತ್ತ ಮುಂದಾಗಿ ಕಂಡೆನಯ್ಯಾ!
ಸಖಿಯರಿಲ್ಲದೆ ಸುಖವ ಬಯಸಿದರುಂಟೆ?
ಎನ್ನ ಮುನಿಸು ಎನ್ನಲ್ಲಿಯೇ ಅಡಗಿತ್ತು !
ಇನ್ನು ಬಾರಾ ಪ್ರಭುವೆ ಕೂಡಲಸಂಗಮದೇವಾ! ॥೭೫॥

ಈ ಹೀಂಗೆಂದು ಬಸವರಾಜದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ಆ ಬಸವರಾಜದೇವರ ಮಹಾತ್ಮೆಯನೆತ್ತಿ ತೋಱಿಸಿ, ಆಕ್ಷೇಪಂಬಡುತಿರ್ದ ಪ್ರಸ್ತಾವದ ವಚನ:

೩೭೮

ಆರಾಧಿಸಿ ವಿರೋಧಿಸುವರೆ?
ಪೂಜಿಸಿ ಪೂಜೆಯ [1]ಮಱೆವರೆ?[1]
ಜಂಗಮ ಲಿಂಗವೆಂದಱಿದವರು ಸಂಚ ತಪ್ಪುವರೆ?
ಗಾಳಿಯೂ ಗಂಧವೂ ಕೂಡಿದಂತೆ,
ಜಗದೊಳಗೆ ಇದೇ ಕೀರ್ತಿವಾರ್ತೆಯ ಹಡೆದೆಯಲ್ಲಾ ಬಸವಣ್ಣಾ!
ನಿನ್ನ ಶಿಶುವಿನೊಡತಣ ತೆಱಹು ಮಱಹ
ವಸುಧೆಯೊಳಗಣ ಪ್ರಮಥರು ಮೆಚ್ಚುವರೆ?
ತಿಳಿದು ನೋಡುವರೆ, ಗೊಹೇಶ್ವರನ ಶರಣ ಅಲ್ಲಯ್ಯಂಗೆ
ನೀನು ಪರಮಾರಾಧ್ಯರು ಕಾಣಾ ಸಂಗನಬಸವಣ್ಣಾ! ॥೭೬॥

೧-೧ ಮಱಿವರೆ(ಮೂ)

ಎನಗೆ ನೀನು ಪರಮಾರಾಧ್ಯನಾಗಿ ಇಹುದ ಮಱೆದೆಯಲ್ಲಾ ಎಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ತಾವದ ವಚನ:

೩೭೯

ಎನ್ನ ಗತಿ ಮತಿ ನೀನೆ ಕಂಡಯ್ಯಾ!
ಎನ್ನ ಗುರು ಪರಮಗುರು ನೀನೆ ಕಂಡಯ್ಯಾ!
ಎನ್ನ ಅಂತರಂಗದ ಜ್ಯೋತಿ ನೀನೆ ಕಂಡಯ್ಯಾ!
ಕೂಡಲಸಂಗಮದೇವಾ,
ನೀನೆ ಎನಗೆ ಗುರು, ನಾನೆ ನಿಮ್ಮ ಶಿಷ್ಯನೆಂಬುದ
ನಿಮ್ಮ ಶರಣ ಸಿದ್ಧರಾಮಯ್ಯದೇವರು ಬಲ್ಲರು,
ಕೃಪೆ ಮಾಡಾ ಪ್ರಭುವೆ. ॥೭೭॥

ಎನ್ನ ಗುರು ಪರಮಗುರು ನೀನೆ ಎಂಬುದನು, ನಾ ನಿಮಗೆ ಭಕ್ತನೆಂಬುದನು ಸಿದ್ಧರಾಮಯ್ಯದೇವರು ಬಲ್ಲರು ಎಂದು ಬಸವರಾಜದೇವರು ಬಿನ್ನಹಂ ಮಾಡಿ, ಮಠಕ್ಕೆ ಬಿಜಯಂಗೈವುದೆಂದು ಬಿನ್ನೈಸುತ್ತಿರಲು, ಆ ಸಿದ್ಧರಾಮಯ್ಯ[೧]ದೇವರು ಪ್ರಭುದೇವರೊಡನೆ ಬಸವರಾಜದೇವರ ಘನವ ಕೊಂಡಾಡಿ, ಆ ಬಸವರಾಜದೇವರ ಮಠಕ್ಕೆ ಬಿಜಯಂಗೈವುದೆಂದು ಬಿನ್ನೈಸುವ ಪ್ರಸ್ತಾವದ ವಚನ:

೩೮೦

ಕೇಳು ಕೇಳಾ, ಎಲೆ ಅಯ್ಯಾ,
ಆದಿಯನಾದಿ ಇಲ್ಲದಂದು ಬಸವಣ್ಣನೆ ಭಕ್ತ;
ನಾದ ಬಿಂದು ಕಳೆಗಳಿಲ್ಲದಂದು ನೀನೆ ಜಂಗಮ.
ಶಿವಶಕ್ತಿಗಳುದಯವಾಗದ ಮುನ್ನ ಬಸವಣ್ಣನೇ ಭಕ್ತ;
ಸುರಾಳ ನಿರಾಳವೆಂಬ ಶಬ್ದ ಹುಟ್ಟದ ಮುನ್ನ ನೀನೆ ಜಂಗಮ.
ಈ ಉಭಯ ಭಾವದಲ್ಲಿ ಭೇದ ಉಂಟೆ?
ಕಪಿಲಸಿದ್ಧಮಲ್ಲಿನಾಥಯ್ಯಾ,
ಬಸವಣ್ಣನಾರೆಂಬುದ ನಿಮ್ಮಲ್ಲಿ ನೀವೆ ತಿಳಿದು ನೋಡಿ,
ಕೃಪೆ ಮಾಡಾ ಪ್ರಭುವೆ. ॥೭೮॥

ಇಂತು ಸಿದ್ಧರಾಮಯ್ಯದೇವರು ಬಸವರಾಜದೇವರ ಘನವ ತೋಱಿ ಪ್ರಭುದೇವರಿಗೆ ಬಿನ್ನಹಂ ಮಾಡಲು, ಆ ಪ್ರಸ್ತಾವದೊಳು ಚಿಕ್ಕದಣ್ಣಾಯಕರು ಪ್ರಭುದೇವರಿಗೆ ನಮಸ್ಕಾರಮಂ ಮಾಡಿ ಬಿನ್ನೈಸುವ ಪ್ರಸ್ತಾವದ ವಚನ:

೩೮೧

ಶರಣು ಶರಣಾರ್ಥಿ,
ಮಹಾದೇವರ ದೇವಾ ಶರಣು ಶರಣಾರ್ಥಿ,
ಪರಬ್ರಹ್ಮ ಸ್ವರೂಪಾ ಶರಣು ಶರಣಾರ್ಥಿ,

---

೧ x (ಮು)

ನಿರಾಕಾರತತ್ತ್ವವೆ ನೀವೆ ಗತಿ ಮತಿ.
ನಿಮ್ಮ ಚರಣಕ್ಕೆ ಶರಣಯ್ಯಾ!
ಸತಿ ಪತಿಯ ಒಲುಮೆಯ ಮುನಿಸು
ಅತಿ ಬೇಟವೆಂಬುದು ತಪ್ಪದು ನೋಡಾ!
ನಿಮ್ಮ ಶರಣ ಬಸವಣ್ಣನೊಡತಣ ಮುನಿಸು,
ಎನ್ನ ಮನಕ್ಕೆ ಸಂಶಯ ತೋಱದು ನೋಡಾ!
ಸಂತೆಯ ನೆರವಿಯಲ್ಲಿ ಅಭಿಮಾನದ ಮಾತ ಮಾಱಬಹುದೆ?
ಬೀದಿಯಲ್ಲಿ ನಿಂದು ನುಡಿವ
ಅನುಭಾವದ ಱಚ್ಚೆ ನಗೆಗೇಡೆ ನೋಡಯ್ಯ!
ಸಂಗನಬಸವಣ್ಣನೊಳಗೆ ನಿಮ್ಮೊಳಗೆ ಭೇದವಿಲ್ಲೆಂಬುದ
ನೀವೆ ಅಱಿದಱಿದು ಮತ್ತೆ ಬಾರೆವೆಂಬುದುಚಿತವೆ?
ಕೂಡಲಚೆನ್ನಸಂಗನ ಶರಣ ಬಸವಣ್ಣನೆ ನಿಮ್ಮ ಪ್ರಾಣವಾಗಿರುತ್ತಿರಲು
ಇನ್ನಾರೊಡನೆ ಮುನಿವಿರಿ? ಕೃಪೆ ಮಾಡಾ ಪ್ರಭುವೆ. ॥೭೯॥

ಮತ್ತಂ,

೩೮೨

ಭಕ್ತರ ಹೆಚ್ಚು ಕುಂದೆಂಬುದು
ಜಂಗಮದ ಹೆಚ್ಚು ಕುಂದೆಂಬುದನಱಿಯಾ ಪ್ರಭುವೆ.
ನಿನ್ನ ಪ್ರಾಣವೆ ಬಸವಣ್ಣನ ಪ್ರಾಣ;
ಬಸವಣ್ಣನ ಪ್ರಾಣವೆ ನಿನ್ನ ಪ್ರಾಣ.
ನಿನ್ನ ಕಾಯವೆ ಬಸವಣ್ಣನ ಕಾಯ;
ಬಸವಣ್ಣನ ಕಾಯವೆ ನಿನ್ನ ಕಾಯ.
ನೀನಿಲ್ಲದಿರೆ ಬಸವಣ್ಣನಿಲ್ಲ; ಬಸವಣ್ಣನಿಲ್ಲದಿರೆ ನೀವಿಲ್ಲ.
ಇಂತೊಂದನೊಂದ ಬಿಚ್ಚಿ ಬೇಱುಮಾಡಬಾರದೆಂಬುದನಱಿದು,
ಮತ್ತೆ ಬಱಿದೆ ಮುನಿವರೆ ಬಲ್ಲವರು?
ನಡೆವ ವಾರುವ ಮುಗ್ಗಿದರೆ ನಡೆಸಿಕೊಂಬುದಲ್ಲದೆ,
ಮಿಡಿ ಹಱಿಯ ಹೊಯ್ದವರುಂಟೆ ಲೋಕದೊಳಗೆ?
ಮಱಹಿಂದ ಬಂದ ಗುಣವ ಸಂಪಾದಿಸದೆ
ಬಿಜಯಂಗೈವುದಯ್ಯಾ ನಿಮ್ಮ ಗೃಹಕ್ಕೆ
ಕೂಡಲಚೆನ್ನಸಂಗಮದೇವಾ, ನಿಮ್ಮ ಶರಣ ಬಸವಣ್ಣನಾರೆಂಬುದ
ನೀನೊಮ್ಮೆ ತಿಳಿದು ನೋಡಾ ಪ್ರಭುವೆ! ॥೮೦॥

ಇಂತು ಚಿಕ್ಕದಣ್ಣಾಯಕರು ಬಿನ್ನಪಂಗೈದಲ್ಲಿ ಮಡಿವಾಳತಂದೆಗಳು ಪ್ರಭುದೇವರಿಗೆ ಬಿನ್ನೈಸುವ ಪ್ರಸ್ತಾವದ ವಚನ:

೩೮೩

ಶರಣು ಶರಣಾರ್ಥಿ, ಎನ್ನ ಬಿನ್ನಪವನವಧರಿಸಯ್ಯಾ.
ಬಸವಣ್ಣನೆ ಗುರು ರೂಪಾಗಿ ಮರ್ತ್ಯಕ್ಕೆ ಬಂದನು.

ಚೆನ್ನಬಸವಣ್ಣನೆ ಲಿಂಗರೂಪಾಗಿ ಮರ್ತ್ಯಕ್ಕೆ ಬಂದನು.
ಪ್ರಭುವೆ ನೀವು ಜಂಗಮರೂಪಾಗಿ ಮರ್ತ್ಯಕ್ಕೆ ಬಂದಿರಿ.
ಭಕ್ತಿಯ ಬೆಳವಿಗೆಗೆ ಬಸವಣ್ಣ ಕಾರಣಿಕನಾದ.
ಅಱಿವಿನ ಬೆಳವಿಗೆಗೆ ಚೆನ್ನಬಸವಣ್ಣ ಕಾರಣಿಕನಾದ.
ಈ ಇಬ್ಬರನೂ ಒಳಕೊಂಬ ಮಹಾಘನಕ್ಕೆ ನೀವು ಕಾರಣಿಕರಾದಿರಿ.
ಇಂತು ಗುರು ಲಿಂಗ ಜಂಗಮ ಒಂದೆ ಭಾವವಲ್ಲದೆ ಭಿನ್ನಭಾವವುಂಟೆ?
ಬಸವಣ್ಣನ ಚೆನ್ನಬಸವಣ್ಣನ ಬಿನ್ನಪವ ಮೀಱದೆ
ಬಿಜಯಂಗೈವುಯ್ಯಾ ಕಲಿದೇವರದೇವಾ. ॥೮೧॥

ಇಂತು ಚಿಕ್ಕದಣ್ಣಾಯಕರು ಮಡಿವಾಳತಂದೆಗಳು ಬಿನ್ನಹಂ ಮಾಡಲು, ಪ್ರಭುದೇವರು ಪ್ರಸನ್ನರಾಗಿ; ನಿತ್ಯ ಬಸವಣ್ಣ, ನಿರಂಜನ ಬಸವಣ್ಣ, ಸಚ್ಚಿದಾನಂದ ನಿತ್ಯ ಪರಿಪೂರ್ಣ ಬಸವಣ್ಣ, ಅಖಂಡಪಿಂಡ ಬಸವಣ್ಣ, ಅನಂತಕೋಟಿ ಬ್ರಹ್ಮಾಂಡಂಗಳಿಗೆ ಆಧಾರರೂಪ ಬಸವಣ್ಣ, ಸಚರಾಚರಂಗಳೆಲ್ಲವ ರಕ್ಷಿಸುವ ಸಧರ್ಮರೂಪು ಬಸವಣ್ಣ, ಶಿವಾಚಾರಚಕ್ರವರ್ತಿ ಬಸವಣ್ಣ, ಸರ್ವಾಚಾರಸಂಪನ್ನ ಬಸವಣ್ಣ, ಷಡುಸ್ಥಲಬ್ರಹ್ಮರೂಪ ಬಸವಣ್ಣ, ಸರ್ವಾಂಗಲಿಂಗಮೂರ್ತಿ ಬಸವಣ್ಣ, ಸ್ವಾನುಭಾವಸಾರೋದ್ಧಾರ ಬಸವಣ್ಣ, ಜಂಗಮ ಪ್ರಾಣಿ ಲಿಂಗೈಕ್ಯ ಬಸವಣ್ಣ, ಆರೂಢ ದಾಸೋಹಿ ಬಸವಣ್ಣ, ನಿಸ್ಸಂಗ ನಿಜರೂಪ ಬಸವಣ್ಣ, ಶಿವಸಮಯಪ್ರತಿಷ್ಠಾಚಾರ್ಯ ಬಸವಣ್ಣನೆಂದು ಬಸವರಾಜದೇವರ ಮಹಾತ್ಮೆಯನು ನಾನಾ ವಿಧದಿಂ ಸ್ತೋತ್ರಮಂ ಮಾಡಿ, ಆ ಪ್ರಭುದೇವರು ತಾವು ನಮಸ್ಕಾರಮಂ ಮಾಡುವ ಪ್ರಸ್ತಾವದ ವಚನ:

೩೮೪

ಆಯತದಲ್ಲಿ ಪೂರ್ವಾಚಾರಿಯ ಕಂಡೆ.
ಸ್ವಾಯತದಲ್ಲಿ ಪೂರ್ವಾಚಾರಿಯ ಕಂಡೆ.
ಸನ್ನಿಹಿತದಲ್ಲಿ ಪೂರ್ವಾಚಾರಿಯ ಕಂಡೆ.
ಗೊಹೇಶ್ವರಲಿಂಗದಲ್ಲಿ ಪೂರ್ವಾಚಾರಿ ಸಂಗನಬಸವಣ್ಣನ
ಶ್ರೀಪಾದಕ್ಕೆ ನಮೋ ನಮೋ ಎಂಬೆನು. ॥೮೨॥

ಮತ್ತಂ,

೩೮೫

ಗುರುಸ್ಥಲ ಲಿಂಗಸ್ಥಲ ಜಂಗಮಸ್ಥಲ
ಪ್ರಸಾದಿಸ್ಥಲವಡಗಿದ ಕರಸ್ಥಲವಿನ್ನಾರಿಗೆ ಸಾರಿತ್ತು?
ನಿರ್ವಂಚಕತ್ವದ ನಿತ್ಯ ನಿಜಸ್ಥಲವಾದ
ಭಕ್ತಿಸ್ಥಲವಿನ್ನಾರಿಗೆ ಸಾರಿತ್ತು ಬಸವಣ್ಣಂಗಲ್ಲದೆ?
ಗೊಹೇಶ್ವರಾ, ನಿಮ್ಮ ಶರಣ ಸಂಗನಬಸವಣ್ಣನ
ಮಱೆಯ ಹೊಕ್ಕು ನಾನು ಬದುಕಿದೆನು? ॥೮೩॥

ಮತ್ತಂ,

೩೮೬

ಕುಲದೊಳಗೆ ಹುಟ್ಟಿ ಕುಲವ ಬೆರಸದೆ
ತನ್ನ ನಿಲವ ಬಲಿದಿಪ್ಪರಾರು ಹೇಳಾ?
ಹಬ್ಬಿದ ಮೂಜು ಬೆಟ್ಟಕ್ಕೆ ತನ್ನ ಮನವ ಹಬ್ಬಲೀಯದೆ,
ಲಿಂಗ ಜಂಗಮಕ್ಕೆ ಸವೆಸಿ ಸ್ವಯಲಿಂಗವಪ್ಪವರಿನ್ನಾರು ಹೇಳಾ?
ಸ್ವಯೋ ಲಿಂಗ, ಸ್ವಯೋ ಶರಣ, ಸ್ವಯೋ ಭೋಗವೆಂದುದಾಗಿ,
ಗೊಹೇಶ್ವರಾ, ಶರಣ ಸಂಗನಬಸವಣ್ಣಂಗೆ
ನಮೋ ನಮೋ ಎಂಬೆನು. ॥೮೪॥

ಮತ್ತಂ,

೩೮೭

ತನುವ ಗೆಲಲಜಿಯದೆ, ಮನವ ಗೆಲಲಜಿಯದೆ,
ಧನವ ಗೆಲಲಜಿಯದೆ ಭ್ರಮೆಗೊಂಡಿತ್ತು ಲೋಕವೆಲ್ಲವು,
ತನುವ ದಾಸೋಹಕ್ಕೆ ಸವೆಸಿ, ಮನವ ಲಿಂಗಧ್ಯಾನದಲ್ಲಿ ಸವೆಸಿ,
ಧನವ ಜಂಗಮದಲ್ಲಿ ಸವೆಸಿ ಗೆಲಬಲ್ಲರೆ
ಸಂಗನಬಸವಣ್ಣನಲ್ಲದೆ ಮತ್ತಾರನು ಕಾಣೆ.
ಗೊಹೇಶ್ವರಾ ನಿಮ್ಮ ಶರಣ ಸಂಗನಬಸವಣ್ಣಂಗೆ
ನಮೋ ನಮೋ ಎನುತಿರ್ದೆನು. ॥೮೫॥

ಮತ್ತಂ,

೩೮೮

ಬಯಲಮೂರ್ತಿಗೊಳಿಸಿದನೊಬ್ಬ ಶರಣ.
ಆ ಮೂರ್ತಿಯಲ್ಲಿ ಭಕ್ತಿ ಸ್ವಾಯತವ ಮಾಡಿದನೊಬ್ಬ ಶರಣ.
ಆ ಭಕ್ತಿಯನೆ ಸುಜ್ಞಾನಮುಖವ ಮಾಡಿದನೊಬ್ಬ ಶರಣ.
ಆ ಸುಜ್ಞಾನವನು ಲಿಂಗಮುಖವಾಗಿ ಧರಿಸಿದನೊಬ್ಬ ಶರಣ.
ಆ ಲಿಂಗವನೆ ಸರ್ವಾಂಗದಲ್ಲಿ ವೇಧಿಸಿಕೊಂಡನೊಬ್ಬ ಶರಣ.
ಆ ಸರ್ವಾಂಗವನೆ ನಿರ್ವಾಣಸಮಾಧಿಯಲ್ಲಿ ನಿಲಿಸಿದನೊಬ್ಬ ಶರಣ.
ನಾನು ನಿರ್ವಾಣದಲ್ಲಿ ನಿಂದು ಅಗಮ್ಯನಾದೆನೆಂದರೆ,
ಭಕ್ತಿಕಂಪಿತನೆನಿಸಿ ಎನ್ನ ತನ್ನಲ್ಲಿಗೆ ಬರಿಸಿಕೊಂಡನೊಬ್ಬ ಶರಣ.
ಗೊಹೇಶ್ವರಾ, ನಿಮ್ಮ ಶರಣ ಸಂಗನಬಸವಣ್ಣನ ಶ್ರೀಪಾದವ ಕಂಡು
ಶರಣೆಂದು ಬದುಕಿದೆನು! ॥೮೬॥

ಇಂತು ಪ್ರಭುದೇವರು ಪ್ರಸನ್ನರಾಗಿ ಬಸವರಾಜದೇವರ ಸ್ತೋತ್ರಮಂ ಮಾಡುತ್ತಿರಲು, ಆ ಬಸವರಾಜದೇವರು ಪ್ರಭುದೇವರ ಸ್ತೋತ್ರಮಂ ಮಾಡುವ ಪ್ರಸ್ತಾವದ ವಚನ:

೩೮೯

ಕಾಲಿಲ್ಲದೆ ನಡೆವನು, ಕೈಯಿಲ್ಲದೆ ಹಿಡಿವನು,
ಕಣ್ಣಿಲ್ಲದೆ ನೋಡುವನು ಸಹಜವಾಗಿ,

ಮೈಯಿಲ್ಲದ ಬಣ್ಣ, ಮಥನವಿಲ್ಲದ ಕೂಟ!
ಅಲ್ಲಿ ಸೈವೆಱಗಾಗಿ ಶಿಲೆಯ ಮೇಲೆ
ಒಡಲು ತನ್ನನಱಿಯದು, ಒಡಲ ತಾನಱಿಯನು.
ಬಿಡದೆ ಎನ್ನ ಬೆಂಬತ್ತಿ ಬಂದ ಪರಿಯ ನೋಡಾ!
ಜಡವಿಡಿದ ಎನ್ನ ಕಾಯದ ಕಳವಳವ ತಿಳುಹಲೆಂದು
ಅಡಿಗಡಿಗೆ ಅನುಭಾವವ ತೋಱುತ್ತಲಿದ್ದಾನೆ!
ಕುಳ್ಳಿತ್ತೆಡೆಯಲ್ಲಿ ಕುಂಟ, ನಿಂದಿದ್ದೆಡೆಯಲ್ಲಿ ಹೆಳವ.
ಎಲ್ಲಿ ನೋಡಿದಡಲ್ಲಿ ಪರಿಪೂರ್ಣನು.
ಮೆಲ್ಲ ಮೆಲ್ಲನೆ ಒಳನೊರೆದು ತೋಱುತ್ತೈದಾನೆ.
ಬಲ್ಲರೆಲ್ಲಾ ಬದುಕಿ ಎಂದು,
ಝುಲ್ಲರಿಯ ಮೇಲೊಂದು ಬೆಳುಗೊಡೆಯ ಹಿಡಿದು,
ಬಲ್ಲಿದನಾನೆಯ ತಡೆದು ನಿಲಿಸಬಲ್ಲನು.
ಕೂಡಲಸಂಗಮದೇವರ ಮಹಾಮನೆಯಲ್ಲಿ
ಪ್ರಭುದೇವರ ಮಱೆಯ ಹೊಕ್ಕು, ಬದುಕಿದೆನು! ॥೮೭॥

ಮತ್ತಂ,

೩೯೦

ಆದಿಯನಱುಹಿದ; ಅನಾದಿಯ ತೋಱಿದ.
ಇಹವ ಕೆಡಿಸಿದ; ಪರವ ನಿಲಿಸಿದ.
ಘನವ ತೋಱಿದ; ಮನವ ಸರಿಸವಿಟ್ಟ,
ಅನುವ ತೋಱಿ, ಆಯತವ ಮಾಡಿ,
ತನುವ ಮಱಿಸಿ, ಮಹವನಱುಪಿದ.
ಹಿಂದಣ ಪೂರ್ವಾಶ್ರಯವ ಹಿಂದು ಮಾಡಿ ತೋಱಿ,
ಮುಂದಣ ಗತಿಯ ಸಂದೇಹವ ಬಿಡಿಸಿದ.
ಕೂಡಲಸಂಗಮದೇವರಲ್ಲಿ ಪ್ರಭುದೇವರ ಶ್ರೀಪಾದಕ್ಕೆ
ನಮೋ ನಮೋ ಎನುತಿರ್ದೆನು! ॥೮೮॥

ಮತ್ತಂ, ಸ್ತೋತ್ರದ ಪದಂಗಳು :

೩೯೧

ರಾಗ : ಗುಜ್ಜರಿ

ಗುರುಚರಣವೆ ಗತಿ ಗುರುಚರಣವೆ ಮತಿ
ಗುರು ಶಬ್ದ ಪರುಷಪಾವನವೆನಗೆ
ನ ಗುರೋರಧಿಕಂ ನ ಗುರೋರಧಿಕಂ
ನ ಗುರೋರಧಿಕಂ ಎನುತಿರ್ದವು ಶ್ರುತಿ ॥ಪಲ್ಲ॥

ಜಾತನಲ್ಲ ಅಜಾತಜನಿತನಲ್ಲ
ಖೇಚರನಲ್ಲ ಭೂಚರನಲ್ಲಾ
ಆಚರಿಸುವನಲ್ಲ ಅನ್ಯಸುಖಂಗಳ
ಭ್ರಾಂತನಲ್ಲದ ನಿಭ್ರಾಂತಲಿಂಗೈಕ್ಯನು ॥೧॥

ಯತ್ರ ತತ್ರ ಶಿವತತ್ತ್ವ ಸಾಧಕನಲ್ಲ
ಅಷ್ಟತನುಮೂರುತಿಯಲ್ಲ
ಅಷ್ಟಮದಂಗಳ ಮೆಟ್ಟಿ ನಿಲಿಸಿದ
ಅಷ್ಟದಳಕಮಲಪೂಜಿತ ನೀನೆ ॥೨॥

ಆಕಾರ ನಿರಾಕಾರ ಸಾಕಾರ ಸನುಮತನು
ಮಾಕರಿಸುವನಲ್ಲಾ ಮನದಿಚ್ಛೆಗೆ
ಆಕಾರ ನಿರಾಕಾರ ಸಾಕಾರ ಸನುಮತನು
ಏಕಾಂತದೊಳಿಪ್ಪ ನಿಜಸ್ವರೂಪಂಗೆ ॥೩॥

ಜೀವಜೀವ ಜೀವಾದಿಗಳೊಳಗಣ
ಅನ್ಯಭಿನ್ನಭಾವಕನಲ್ಲಾ
ಸಮಸ್ತವಾದ ಸಮಸುಖಭೋಗಿ
ಅಣುರೇಣು ಸ್ಥೂಲ ಸೂಕ್ಷ್ಮ ಭರಿತನು ನೀನೆ ॥೪॥

ಭೃಂಗ ಕುಸುಮಪರಿಮಳಕೆಳಗುವಂತೆ
ಲಿಂಗಸಂಗಸುಖ ನಿರ್ಲೇಪಾ
ಅಂಗಲಿಂಗಸಂಗವಾಗಿಪ್ಪ ಶಿವಯೋಗಿ ಸಂಗ
ಕೂಡಲಸಂಗನಲ್ಲಿ ಪ್ರಭುದೇವಾ ॥೫॥

ಅಂತು ಪದಸಹ ವಚನ: ॥೯೩॥

ಇಂತೀ ಶ್ರೀಮತ್ ಸಕಲಗಣ ಪುರಾತನರೊಳ್ ಪ್ರಭುದೇವರು ಮಹಾನುಭಾವಸದ್ಗೋಷ್ಠಿಯಂ ಮಾಡಿದ
ಶೂನ್ಯಸಂಪಾದನೆಯೊಳ್
[1]ಪ್ರಭು ಕಲ್ಯಾಣಕ್ಕೆ ಬಂದ ಸಂಪಾದನೆಗಂ[1]
ಪಂಚಮೋಪದೇಶಂ ಸಮಾಪ್ತಂ.
ಅಂತು ವಚನ ೬೮೧ಕ್ಕಂ ಮಂಗಳಮಹಾ ಶ್ರೀ

❖

೧-೧ ಬಸವೇಶ್ವರನು ಪ್ರಭುದೇವರ ಮುನಿಸ ತಿಳಿಹಿದ ಸಂಪಾದನೆ(ಮೂ)

೬

ಮರುಳುಶಂಕರದೇವರ ಸಂಪಾದನೆ

*ಕಂದ:

ವರ ಬಸವ ದಂಡನಾಥನ
ನಿರಹಂಭಾವಕ್ಕೆ ಮಚ್ಚಿ ಬರುತಿರ್ಪಾ ಪ್ರಭು
ಮರುಳುಶಂಕರನಿಗೈಕ್ಯವ
ನಿರದಿತ್ತುದ ಪೇಳ್ವೆ ಶರಣಜನಕತಿಶಯದಿಂ ॥೧॥

ಅದೆಂತೆಂದೊಡಾ ಪ್ರಭುದೇವರು ಬಸವರಾಜದೇವರು ಮಾಡುವ ಸ್ತೋತ್ರಕ್ಕಂ ಮಚ್ಚಿ ಮುಂದಕ್ಕಂ ಗಮಿಸುತ್ತಿರಲು, ಅಲ್ಲಿ ಪ್ರಮಥರ ತಿಂಥಿಣಿಯಿಂ ಅನುಭಾವ ಸದ್ಗೋಷ್ಠಿಯಿಂ ಉಘೇ ಚಾಂಗು ಭಲಾ ಎಂಬ ಶಬ್ದಸಡಗರದಿಂ ಬಸವರಾಜದೇವರ ರಾಜಭವನಕ್ಕಂ ಅತ್ಯಂತ ಸಂಭ್ರಮದಿಂ ಪೋಪ ಪ್ರಸ್ತಾವದೊಳು ಮುಂದೆ ಅಂಗಳದಲ್ಲಿ ಪ್ರಸಾದದ ಕುಂಡ ಸಮೀಪಸ್ಥಮಾಗಲು, ಅಲ್ಲಿರ್ದ ಮರುಳುಶಂಕರದೇವರು ಶರಣ ತಿಂಥಿಣಿಯಂ ಪ್ರಭುದೇವರ ಶ್ರೀಮೂರ್ತಿಯಂ ಕಂಡು, ಮೆಲ್ಲನೆ ಆ ಪ್ರಸಾದ ಕುಂಡದಿಂ ಪೊಱಮಡುತಿರ್ದರದೆಂತೆನೆ :

ವಸಂತಮಾರುತಂ ಬರಲು ಚೂತದಿಂದಂಕುರಂ ಪೊಱಮಡುವಂತೆ, ಸ್ವಾತಿಯವರ್ಷದ ದಿನಕ್ಕೆ ಅಂಬುಧಿಯೊಳಗಿರ್ದ ಮೌಕ್ತಿಕಶಂಬುಕ ಅಂಬುಧಿಯೊಳಿರ್ದು ಕಾಣಬಪ್ಪಂತೆ, ನಲಿದು ಸೂಜಿಕಲ್ಲ ಕಾಣುತ್ತ ಸೂಜಿ ಮೆಲ್ಲನೆ ತನ್ನ ಸ್ಥಾನದಿಂದೇಳುವಂತೆ, ಶಿವಯೋಗಾನಂದದಲ್ಲಿ ತನುವ ಮಱೆದಿರ್ದ ಶಿವಯೋಗಿ ತನಗೆ ಶಿವಪ್ರಸನ್ನಮಾಗಲು, ಮುಂದೆ ಶಿವನ ಶ್ರೀಚರಣಕಮಲಮಂ ಕಂಗಳಿಂದೊತ್ತಿಕೊಂಬೆನೆಂಬ ತೆಱನಂತೆ, ಪೌರ್ಣಮಿಯ ಚಂದ್ರನುದಯಕ್ಕೆ ಸಿಂಧು ಮೆಲ್ಲನೆ ಮುಂದಕ್ಕುಬ್ಬಿ ನಡೆದು ಬಪ್ಪಂತೆ ಮರುಳುಶಂಕರದೇವರು ಪ್ರಸಾದಕುಂಡದಿಂ ಪೊಱಮಡುತಿರ್ದ ಪ್ರಸ್ತಾವದೊಳು, ಅಲ್ಲಿ ಅಲ್ಲಮಪ್ರಭುದೇವರಿಗೆ ಅವರ ನಿಲವು ತೋಱೆತ್ತದೆಂತೆನೆ: ಜ್ಞಾನಚಕ್ಷುವಿಂಗೆ ಆತ್ಮನ ನಿಲವು ತೋಱೆದಂತೆ, ಅಂಜನವುಳ್ಳವಂಗೆ ಕಡವರದಿರವು ತೋಱೆದಂತೆ ಅಲ್ಲಮಪ್ರಭುದೇವರಿಗೆ ಮರುಳುಶಂಕರದೇವರ ನಿಲುಕಡೆ [1]ಹೊಂಗಿ[1] ತೋಱುತ್ತಿರಲು, ಅಲ್ಲಿ ಪ್ರಭುದೇವರು ನಿಂತು ಬಸವರಾಜದೇವರು ಮಾಡುವ ಸ್ತೋತ್ರಂಗಳಂ ಇನ್ನು ಸಾಕೆಂದು ನಿರೂಪಿಸಿದ ಪ್ರಸ್ತಾವದ ವಚನ:

---

*+ ಶ್ರೀಗುರು ಬಸವಲಿಂಗಾಯ ನಮಃ(ಮೂ) ೧-೧ ಹಾಂಗೆ(ಮೂ)

೩೯೨

ಮನ ಮನ ಒಂದಾಗಿ, ಅಱಿವು ಸಯವಾದ ಬಳಿಕ
ಕೊಂಡಾಡಲಿಕ್ಕಿಂಬುಂಟೆ ಹೇಳಾ?
ಶಬ್ದಕ್ಕೆ ತೆಱಹಿಲ್ಲ. ಗೊಹೇಶ್ವರಲಿಂಗದಲ್ಲಿ
ಬೆರಸಿ ಬೇಱಿಲ್ಲ ಕಾಣಾ ಸಂಗನಬಸವಣ್ಣಾ! ॥೧॥

ಮತ್ತಂ, ಪ್ರಭುದೇವರು ಸ್ತೋತ್ರಮಂ ನಿಲಿಸಿ, ಒಂದಾಶ್ಚರ್ಯಮಂ ಕಂಡೆನೆಂದು ನುಡಿದ ಪ್ರಸ್ತಾವದ ವಚನ:

೩೯೩

ನೀರು ಕ್ಷೀರದಂತೆ ಕೂಡಿದ ಭೇದವನಾರಿಗೂ ಹೇಳಲಿಲ್ಲ,
ಕೇಳಲಿಲ್ಲ. ಬೆಳುಗಾರ ಬೆರಸಿ ಬೆಚ್ಚ ಬಂಗಾರಕ್ಕೆ ಸಂದುಂಟೆ ಹೇಳಾ?
ಉರಿಯುಂಡ ಕರ್ಪುರದ ಪರಿಯಂತಿರ್ದುದ
ಇದಿರಿಂಗೆ ಕೊಂಡಾಡಿ ಹೇಳಲುಂಟೆ?
ಅದಂತಿರಲಿ, ನಮ್ಮ ಗೊಹೇಶ್ವರಲಿಂಗದ ಕಣ್ಣ ಮುಂದೆ
ನಿಮ್ಮ ಧರ್ಮದಿಂದಲೊಂದಾಶ್ವರ್ಯವ ಕಂಡು
ಬದುಕಿದೆ ಕಾಣಾ ಸಂಗನಬಸವಣ್ಣಾ! ॥೨॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಬಸವರಾಜದೇವರು ನೀವು ಕಂಡಾಶ್ಚರ್ಯವಾವುದೆಂದು ಬೆಸಗೊಂಬ ಪ್ರಸ್ತಾವದ ವಚನ:

೩೯೪

ದೇವ ದೇವ, ಮಹಾಪ್ರಸಾದ.
ನೀವೆಂದಂತೆ ನಿಮ್ಮ ಚರಣದಲ್ಲಿ ಸಂದು
ಭೇದವಿಲ್ಲದೆ ಇಪ್ಪೆನಲ್ಲದೆ ಬೇಱೆ ಭಿನ್ನವಾಗಿರ್ದೆನಾದರೆ ನೀವೆ ಸಾಕ್ಷಿ.
ನಿಮ್ಮ ಶ್ರೀಪಾದವ ಕಂಡೆನ್ನ ಭವಂ ನಾಸ್ತಿಯಾಯಿತ್ತು.
ಕೂಡಲಸಂಗಮದೇವಾ
ನಿಮ್ಮಿಂದೊಂದಾಶ್ಚರ್ಯವಿಲ್ಲವೆಂದು
ಶ್ರುತಿ ಹೊಗಳುತ್ತಿರಲಾಗಿ,
ನೀವು ಕಂಡಾಶ್ಚರ್ಯವಾವುದೆನಗೊಮ್ಮೆ ನಿರೂಪಿಸಾ ಪ್ರಭುವೆ. ॥೩॥

ಇಂತು ಪ್ರಭುದೇವರು, ಮರುಳುಶಂಕರದೇವರು ಗೋಪ್ಯದೊಳಿರ್ದು ಪೊಱಮಡುವುದಂ ಕಂಡು ಆಶ್ವರ್ಯಂಬಟ್ಟು ಅನುಭಾವದ ಬೆಡಗಿನಿಂ ನುಡಿದ ಪ್ರಸ್ತಾವದ ವಚನ:

೩೯೫

ಓಹೋ, ನಮಃಶಿವಾಯ!
ಮಹದಾಕಾಶದ ಮಱೆಯಲ್ಲಿರ್ದ ಶಾಂತ್ಯರ್ಕನ ನಿಲವೊ?
ದಶಮರುತನ ಹೊಯಿಲಿಲ್ಲದೆ

ತಾನೆ ಲಿಂಗದ ಜ್ಞಾನಜ್ಯೋತಿಯ ನಿಲವೊ?
ತನ್ನಿಂದ ತಾನಾಗಿ ಮುಕ್ತಿಯೆ ಕಱೆಗೊಂಡ
ಮುಕ್ತಿಯ ಮುತ್ತಿನ ಧವಳದ ಕಾಂತಿಯ ನಿಲವೊ?
ರುದ್ರಾಕ್ಷಿಯ ಹಂಗು ಬೇಡವೆಂದು ಹೊದ್ದ
ಚರ್ಮದ ಹೊದಕೆಯಂ ತೆಗೆದ ಗಿಟಗಿಟಜಂತ್ರದ ನಿಲವೊ?
ಅಲ್ಲಾ, ತನ್ನ ನಿಲವನಱೆಯದೆ ವಾದಿಸುತ್ತಿರಲು,
ಉರಿಲಿಂಗೋದ್ಭವವಾದ ಉರಿಲಿಂಗದ ನಿಲವೊ?
ಆವ ನಿಲವೆಂದಱೆಯಬಾರದು.
ಗೊಹೇಶ್ವರನ ಕಂಗಳಿಗೆ ಒಂದಾಶ್ಚರ್ಯ ತೋಱೆತ್ತು
ಕಾಣಾ ಸಂಗನಬಸವಣ್ಣಾ! ॥೪॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು ನಿಮ್ಮಿಂದೊಂದಾಶ್ಚರ್ಯವಾವುದೆಂದು ಪ್ರಭುದೇವರ ಕೊಂಡಾಡುವ ಪ್ರಸ್ತಾವದ ವಚನ:

೩೯೬

ದೇವರ ದೇವಾ, ಮಲಯಜದಿಂದಂ ಮೇಲೆ ಮಲಯಜ ಉಂಟೆ?
ಪರುಷದಿಂದಂ ಮೇಲೆ ಪರುಷವಾವುದುಂಟೆ ಅಯ್ಯಾ?
ಅಮೃತಾಹಾರದಿಂದಂ ಮೇಲೆ
ಭೋಜನವಾವುದುಂಟೆ ಅಯ್ಯಾ?
ನಿಮ್ಮಿಂದೊಂದಾಶ್ಚರ್ಯವ ಕಂಡೆನೆಂಬುದ
ಎನಗೆ ನಿರೂಪಿಸಾ ಕೂಡಲಸಂಗಮದೇವ ಪ್ರಭುವೆ. ॥೫॥

ಇಂತು ಬಸವರಾಜದೇವರು ನಿಮ್ಮಿಂದೊಂದಾಶ್ಚರ್ಯವಾವುದೆಂದು ಬಿನ್ನೈಸಲು ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೩೯೭

ಎಲೆ ಬಸವಣ್ಣಾ, ನಾವು ಬಹುದಕ್ಕೆ ಮುನ್ನವೆ
ಬಂದಹರೆಂದು ಶುಭ ಸೂಚನೆ ತೋಱೆತ್ತಲ್ಲದೆ
ಮನೆಯ ಮೀಱೆ ಮಂದದ ದೈವವುಂಟೆ ಎಂಬುದ ತಿಳಿ,
ಗೊಹೇಶ್ವರಲಿಂಗದಲ್ಲಿ ಸಂಗನಬಸವಣ್ಣಾ. ॥೬॥

ಮತ್ತಂ, ಮರುಳಶಂಕರದೇವರು ಗಣಪ್ರಸಾದದ ಕುಳಿಯೊಳಗೆ ಒಕ್ಕುಮಿಕ್ಕ ಶೇಷ ಪ್ರಸಾದಮಂ ಸ್ವೀಕರಿಸಿ, ಹನ್ನೆರಡು ವರುಷ ಪರಿಯಂತರ ತಮ್ಮ ನಿಜ ಸ್ವರೂಪಮಂ ಮಱೆಸಿಕೊಂಡಿರುತ್ತಿರಲು, ಆ ಭೇದವಾರಿಗೂ ಕಾಣಬಾರದೆಂದು ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೩೯೮

ಬೀದಿಯಲ್ಲಿ ಬಿದ್ದ ಮಾಣಿಕ್ಯವ,
ಹೂಳಿರ್ದ ನಿಧಾನವನಾರಿಗೂ ಕಾಣಬಾರದು ನೋಡಾ.

ಮರಣವುಳ್ಳವರಿಗೆ ಮರುಜವಣಿ ಸಿಕ್ಕುವುದೆ?
ಪಾಪಿಯ ಕಣ್ಣಿಂಗೆ ಪರುಷ ಕಲ್ಲಾಗಿಪ್ಪಂತೆ ಇಪ್ಪರಯ್ಯಾ ಶಿವಶರಣರು.
ನಮ್ಮ ಗೊಹೇಶ್ವರನ ಶರಣ ಮರುಳುಶಂಕರದೇವರ
ನಿಲವ ನೋಡಾ ಸಂಗನಬಸವಣ್ಣಾ! ॥೭॥

ಮತ್ತಂ,

೩೯೯

ಅಂಗಳ ಬಾಗಿಲ ನೆಲೆಯಲ್ಲಿ ನಿಂದಿದ್ದ ಲಿಂಗವನಜಿದುದಿಲ್ಲವೆ?
ಸುಸಂಗಿ ನಿರಂಗ ನಿಃಕಲಬ್ರಹ್ಮ ಮರುಳುಶಂಕರಲಿಂಗ!
ಪ್ರಸಾದದ ಕುಳಿಯಲ್ಲಿ ನಿಜನಿವಾಸದಂಗವ ನೋಡು
ಗೊಹೇಶ್ವರಲಿಂಗದಲ್ಲಿ ಸಂಗನಬಸವಣ್ಣಾ! ॥೮॥

ಮತ್ತಂ,

೪೦೦

ಆದಿಯನಂಗಮುಖಕ್ಕರ್ಪಿಸಿ,
ಅನಾದಿಯ ಪ್ರಾಣಮುಖಕ್ಕರ್ಪಿಸಿ,
ಮನವೆಂಬುದ ಅಜಿವಿನ ಮುಖಕ್ಕರ್ಪಿಸಿ,
ತಾನೆಂಬುದ ನಿರಾಕಾರದಲ್ಲಿ ನಿಲಿಸಿ,
ಪರಿಣಾಮಪ್ರಸಾದದಲ್ಲಿ ತದ್ಗತನಾಗಿ,
ಪ್ರಸಾದವೆ ಪ್ರಾಣವಾಗಿ, ಪ್ರಸಾದವೆ ಕಾಯವಾಗಿ,
ಪ್ರಸಾದವೆ ಜ್ಞಾನ, ಪ್ರಸಾದವೆ ಧ್ಯಾನ,
ಪ್ರಸಾದವೆ ಲಿಂಗ ಭೋಗೋಪಭೋಗಿಯಾಗಿಪ್ಪ
ನಮ್ಮ ಗೊಹೇಶ್ವರಲಿಂಗದಲ್ಲಿ
ನಿಜಪ್ರಸಾದಿ ಮರುಳುಶಂಕರದೇವರ ನಿಲವ
ನೋಡಾ ಸಂಗನಬಸವಣ್ಣಾ. ॥೯॥

ಈ ಹೀಂಗೆಂದು ಪ್ರಭುದೇವರು ಬಸವರಾಜದೇವರಿಗೆ ನಿರೂಪಿಸುತ್ತಿರಲು, ಆ ಸಮಯದಲ್ಲಿ ಮರುಳುಶಂಕರದೇವರು ಪ್ರಸಾದಕುಂಡದಿಂದ ನಲಿನಲಿದು ಬಂದು ಪ್ರಭುದೇವರಿಗೆ ನಮಸ್ಕಾರಮಂ ಮಾಡಿದ ಪ್ರಸ್ತಾವದ ವಚನ:

೪೦೧

ಜಯ ಜಯ ತ್ರಾಹಿ,
ಗರ್ಭದೊಳಗಣ ಶಿಶು ನವಮಾಸವ
ಹಾರಿಕೊಂಡಿರ್ದಂತೆ ಇರ್ದೆನಯ್ಯಾ!
ಎನ್ನ ಜನ್ಮ ಸಫಲವಾಯಿತ್ತಯ್ಯಾ!
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ,
ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ.

ಬಸವರಾಜದೇವರ ದಯದಿಂದೆ
ಪ್ರಭುದೇವರ ಶ್ರೀಮೂರ್ತಿಯಂ ಕಂಡು ಬದುಕಿದೆನು!
ನಿಮ್ಮ ಧರ್ಮ, ನಿಮ್ಮ ಧರ್ಮ!
ಶರಣು ಶರಣಾರ್ಥಿ ಸಕಲ ಪುರಾತರಿಗೆ. ॥೧೦॥

ಮತ್ತಂ,

೪೦೨

ಎನಗೆ ಹಱಿಯಿತ್ತು ತಮವೆಂಬ ಸಂಸಾರದ ಬಂಧ.
ಅಡಗಿ ಉಡಗಿ ಕಂಡೆನೆಂಬ ಭ್ರಮೆ ಭಾವಕ್ಕೆ ಬಯಲಾಯಿತ್ತು.
ನಿತ್ಯ ನಿರಂಜನಪರಂಜ್ಯೋತಿ ಪ್ರಕಾಶವಾಯಿತ್ತು.
ಶುದ್ಧಸಿದ್ಧಪ್ರಸಿದ್ಧಪ್ರಸನ್ನಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ಪ್ರಭುದೇವರ ಕಾರುಣ್ಯದಿಂದ ಬದುಕಿದೆನು! ॥೧೧॥

ಇಂತು ಮರುಳುಶಂಕರದೇವರು ಸ್ತುತಿಸುತ್ತಿರಲು, ಅದಕ್ಕೆ ಪ್ರಭುದೇವರು ಆ ಮರುಳುಶಂಕರದೇವರ ನಿಲವ ಬಸವರಾಜದೇವರಿಗೆ ನಿರೂಪಿಸಿದ ಪ್ರಸ್ತಾವದ ವಚನ:

೪೦೩

ಕಂಡೆಯಾ ಬಸವಣ್ಣಾ!
ಕಣ್ಣಿನೊಳಗಣ ಬೊಂಬೆಯ ಸೂತ್ರದ ಇರವಿನಂತೆ,
ಕುಂದಣದೊಳಡಗಿ ತೋಱುವ ಮೃದುಛಾಯದಂತೆ,
ನವನೀತದೊಳಗಡಗಿದ ಸಾರದ ಸವಿಯಂತೆ,
ಅಂಗವಿಲ್ಲದ ಕುಱುಹು! ಭಾವವಿಲ್ಲದ ಬಯಲು!
ಬೆಳಗನಱಿಯದ ಜ್ಯೋತಿಯ ಕಂಡೆಯಾ
ಗೊಹೇಶ್ವರಲಿಂಗದಲ್ಲಿ ಮರುಳುಶಂಕರದೇವರ ಸಂಗನಬಸವಣ್ಣಾ! ॥೧೨॥

ಈ ಹೀಂಗೆಂದು ಪ್ರಭುದೇವರು ಬಸವರಾಜದೇವರಿಗೆ ಕೊಂಡಾಡಿ ಹೇಳುತ್ತಿರಲು, ಆ ಮರುಳುಶಂಕರದೇವರು ನಿರಹಂಭಾವದಿಂದ ಬಿನ್ನೈಸಿದ ಪ್ರಸ್ತಾವದ ವಚನ:

೪೦೪

ಸಿಂಬಿಗೆ ರಂಭೆತನ ಉಂಟೆ?
ಸಂಭ್ರಮವಳಿದುದಕ್ಕೆ ನವರಸದಂಗದ ಕಳೆಯುಂಟೆ?
ಡಿಂಗರಿಗಂಗೆ ಸಮವೆಂಬ ಸಂಭ್ರಮ ಉಂಟೆ?
ಪರುಷದ ದೆಸೆಯಿಂದ ಪಾಷಾಣದ ಕುಲ ಹಱಿವಂತೆ ನೀ ಬಂದೆಯಲ್ಲಾ!
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ಪ್ರಭುದೇವರ ಕಾರುಣ್ಯದಿಂದ ಬದುಕಿದೆನು![೧] ॥೧೩॥

---

೧ X (ಮು)

ಇಂತು ಮರುಳುಶಂಕರದೇವರು ನಿರಹಂಭಾವದಿಂದ ಬಿನ್ನೈಸಲು, ಅದಕ್ಕೆ ಪ್ರಭುದೇವರು ಆ ಮರುಳುಶಂಕರದೇವರ ಸ್ತುತಿಸಿದ ಪ್ರಸ್ತಾವದ ವಚನ:

೪೦೫

ಕಂಡೆನಲ್ಲಾ ಕರುಳಿಲ್ಲದ ಕಲಿಯ!
ಕಂಡೆನಲ್ಲಾ ಯೌವನವಿಲ್ಲದ ನೇಹವ!
ಕಂಡೆನಲ್ಲಾ ಕೈದಿಲ್ಲದ ಕಲಿತನವ!
ಕಂಡೆನಲ್ಲಾ ಕುಸುಮವಿಲ್ಲದ ಗಂಧವ!
ಕಂಡೆನಲ್ಲಾ ಗೊಹೇಶ್ವರಲಿಂಗದಲ್ಲಿ ಮರುಳುಶಂಕರನೆಂಬ ನಾಮವ! ॥೧೪॥

ಈ ಹೀಂಗೆಂದು ಪ್ರಭುದೇವರು ಸ್ತುತಿಸುತ್ತಿರಲು, ಅದಕ್ಕೆ ಮರುಳುಶಂಕರದೇವರ ಬಿನ್ನಹ:

೪೦೬

ಬೆಟ್ಟವ ನೆಮ್ಮಿ ಕಟ್ಟಿಗೆಯ ತಳ್ಳುವುದು ಅದಾವಚ್ಚರಿ?
ಪ್ರಾಣಕ್ಕೆ ಹೊಣೆಯಾದಲ್ಲಿ ಕಾದುವುದು ಅದಾವಚ್ಚರಿ?
ಪರಕಾಯವ ತೊಟ್ಟಿದ್ದಲ್ಲಿ ಅಚ್ಚರಿ ಅತಿಬಿರಿದೆ?
ನಿಮ್ಮುವ ಕಾರುಣ್ಯವಾಗಿದ್ದಲ್ಲಿ ಎನಗೆಲ್ಲಿಯೂ ಸುಖ
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ
ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ, ಪ್ರಭುದೇವರಿಂದ ಬದುಕಿದೆ! ॥೧೫॥

ಇಂತು ಮರುಳುಶಂಕರದೇವರು ಸ್ತುತಿಸುತ್ತಿರಲು, ಆ ಸಮಯದೊಳು ಎಲ್ಲಾ ಪುರಾತರು ಕಂಡು, ಅತ್ಯಂತ ಆಶ್ಚರ್ಯಂಬಡುತ್ತಿರಲು, ಅಲ್ಲಿ ಬಸವರಾಜದೇವರು ಮರುಳುಶಂಕರದೇವರ ನಿಲವ ಕಂಡು ಚಿಂತಾಕ್ರಾಂತರಾಗಿ ನಡನಡುಗಿ ಇನಿತು ದಿನವೆನ್ನ ಅಂಗಳದಲ್ಲಿ ಮಹಾಲಿಂಗೈಕ್ಯನಪ್ಪ ಶರಣನಿರುತ್ತಿರಲು, ಈತನ ನಿಲವನಱಿಯದೆ ಕೆಟ್ಟೆನೆಂದು ಅನುತಾಪಂಬಟ್ಟ ಪ್ರಸ್ತಾವದ ವಚನ:

೪೦೭

ಅಯ್ಯಾ, ನಿಮ್ಮ ಶರಣರು ಬಂದೆನ್ನ
ಅಂಗಳದೊಳಗೆ ರಕ್ಷಿಸಿಹೆನೆಂದಿರಲು,
ನಾನು ತೆಱಹುಮಱಹಾಗಿರ್ದು ಕೆಟ್ಟೆನಯ್ಯಾ!
ನಾನು ಕೆಟ್ಟ ಕೇಡಿಂಗೆ ಕಡೆಯಿಲ್ಲವಯ್ಯಾ!
ಕೂಡಲಸಂಗಮದೇವಾ,
ಎನ್ನ ಭಕ್ತಿ ಸಾವಿರ ನೋಂಪಿಯ ನೋಂತು
ಹಾದರದಲ್ಲಿ ಅಳಿದಂತಾಯಿತ್ತಯ್ಯಾ! ॥೧೬॥

ಮತ್ತಂ,

೪೦೮

ಕಾಯದ ಕಪಟವು ಬಿಡದೆನಗಿನ್ನೆಂತಯ್ಯಾ?
ಮಾಯಾಪ್ರಪಂಚಿನ ಬಲೆಯೊಳಗೆ ಸಿಲುಕಿದೆ.

ವಾಯದ ಸಂಭ್ರಮವ[ಧಿಕ] ಹಿರಿದೆನಗೆ
ಇದಾವ ಭಾವದ ಮುಖವೆಂದಱಿಯದೆ
ಜ್ಞಾನಶೂನ್ಯವಾಗಿರ್ದೆನಯ್ಯಾ!
ಅಷ್ಟಮದಂಗಳನು ಸೃಷ್ಟಿಸಿ ಇದ್ದಿರಾಗಿ,
ಕಟ್ಟುಗ್ರದಿಂದ ನಿಮ್ಮ ಕಾಣಲೀಯವು
ಎನ್ನ ತನುವಿನ ಅವಗುಣ,[೧] ಮನದ ಮರ್ಕಟ[೨][ತನ][೨] ಬಿಡದು.
ನೀನೆ ಗತಿ! ಕೂಡಲಸಂಗಮದೇವಾ,
ನಿಮ್ಮ ಶರಣರ ಇರವನಱಿಯದೆ ಭವದುಃಖಿಯಾದೆನಯ್ಯಾ. ॥೧೭॥

ಮತ್ತಂ, ಬಸವರಾಜದೇವರು ಈ ಮರುಳುಶಂಕರದೇವರ ಕೃಪೆ ಎನಗಿನ್ನೆಂದಪ್ಪುದೆಂದು ಪ್ರಭುದೇವರ ಬೆಸಗೊಂಬ ಪ್ರಸ್ತಾವದ ವಚನ:

೪೦೯

ನಡುದೊಱೆಯೊಳಗೆ ಹಱಿಗೋಲನಿಳಿದಂತಾಯಿತ್ತೆನ್ನ ಭಕ್ತಿ !
ಮರನನೇಱಿ ಕೈಯ ಬಿಟ್ಟಂತಾಯಿತ್ತೆನ್ನ ಭಕ್ತಿ!
ಶಿವಶಿವಾ, ಕೆಟ್ಟೆನಲ್ಲಾ ಗುರುವೆ!
ಕೂಡಲಸಂಗಮದೇವಾ,
ಈ ಮರುಳುಶಂಕರದೇವರ ಕೃಪೆ
ಎನಗಿನ್ನೆಂದಪ್ಪುದು ಹೇಳಾ ಪ್ರಭುವೆ? ॥೧೮॥

ಈ ಹೀಂಗೆಂದು ಬಸವರಾಜದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪವ ಕೊಟ್ಟ ಪ್ರತ್ಯುತ್ತರ:

೪೧೦

ಹೂಮಿಡಿಯ ಹಱಿದು,
ಒತ್ತಿ ಹಣ್ಣ ಮಾಡಿಹೆನೆಂದರೆ ಹಣ್ಣಾಗಬಲ್ಲುದೆ?
ಪರಿಮಳವಿಲ್ಲದ ನನೆಯನರಳಿಸಿ
ಮುಡಿದಿಹೆನೆಂದರೆ ಸೌರಭ ಉಂಟೆ?
ಶಿವಶರಣರ ನಿಲವ ಕಾಂಬ ಕಾಲಕ್ಕೆ ಕಾಣಬಹುದಲ್ಲದೆ,
ಎಲ್ಲಾ ಹೊತ್ತು ಕಾಣಬಹುದೆ?
ಅಹ ಕಾಲಕ್ಕೆ ತಾನೆಯಪ್ಪುದು.
ಗೊಹೇಶ್ವರನ ಶರಣರ ನಿಲವ ಕಂಡ ಬಳಿಕ
ಮಱಹು, ಬೆಳಗ ಕಂಡ ಕತ್ತಲೆಯಂತೆ ಹರಿವುದು
ನೋಡಾ ಸಂಗನಬಸವಣ್ಣಾ! ॥೧೯॥

---

೧. + ವ (ಮೂ) ೨–೨ X (ಮೂ)

ಈ ಹೀಂಗೆಂದು ಪ್ರಭುದೇವರು ನಿರೂಪಿಸುತ್ತಿರಲು, ಇದಕ್ಕೆ ಬಸವರಾಜದೇವರು ಮರುಳುಶಂಕರದೇವರ ಶ್ರೀಪಾದಕ್ಕೆ ಶರಣೆಂಬ ಪ್ರಸ್ತಾವದ ವಚನ:

೪೧೧

ಮುಗಿಲ ಮಱೆಯ ಮಿಂಚಿನಂತೆ,
ಒಡಲ ಮಱೆಯ ಆತ್ಮನಂತೆ,
ನೆಲದ ಮಱೆಯ ನಿಧಾನದಂತೆ ಇಪ್ಪ
ನಿಮ್ಮ ನಿಲವನಾರು ಬಲ್ಲರು?
ದೇವಾ, ನಿಮ್ಮ ನಿಲವ ಹಲಕಾಲದಿಂದ
ಕಂಡು ಕಂಡು ಕಡೆಗಣಿಸಿ,
ಮಱೆದು ಮತಿಗೆಟ್ಟು ಮರುಳಾದೆನು.
ಎನ್ನ ತಪ್ಪಿಂಗೆ ಕಡೆ ಇಲ್ಲ ಕಾಣಾ!
ತ್ರಾಹಿ ತ್ರಾಹಿ, ಕಾಯಯ್ಯಾ ಕೂಡಲಸಂಗಮದೇವಾ! ॥೨೦॥

ನಿಮ್ಮ ಶರಣರ ಇರವನರಿಯೆನೆಂದು ಬಸವರಾಜದೇವರು ನೊಂದು ಪ್ರಭುದೇವರಿಗೆ ಬಿನ್ನೈಸುತ್ತಿರಲು, ಅಲ್ಲಿ ಮರುಳುಶಂಕರದೇವರು ಬಸವರಾಜದೇವರ ಕೊಂಡಾಡಿದ ಪ್ರಸ್ತಾವದ ವಚನ:

೪೧೨

ಏಕಬೀಜಂ ಸಮಂ ವೃಕ್ಷಂ ಲೋಕಲಿಂಗಂತು ಪೂಜನಂ।
ಏಕಧ್ಯಾನ ಸಮಂ ಚಿತ್ತಂ ಊರ್ಧ್ವಲಿಂಗಂ ಪೂಜನಂ।
ಏಕಾಕ್ಷರಂತು ಪೂಜಾನಾಂ ಮಹಾಲಿಂಗಂತು ದರ್ಶನಂ॥
ಇಂತೆಂದುದಾಗಿ, ಇದು ಕಾರಣ ನಿಮ್ಮ ಶರಣ ಬಸವಣ್ಣ
ಲೋಕದ ಮರ್ತ್ಯನೆಂದರೆ ಅಘೋರನರಕ ಕಾಣಾ!
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ನಿಮ್ಮ ಶರಣ ಬಸವಣ್ಣನ ನಿಲವಿನ ಪರಿಯ
ನೀವೆ ಬಲ್ಲಿರಲ್ಲದೆ ನಾನೆತ್ತ ಬಲ್ಲೆನಯ್ಯಾ?
ನಿಮ್ಮ ಧರ್ಮ, ನಿಮ್ಮ ಧರ್ಮ! ॥೨೧॥

ಇಂತು ಮರುಳುಶಂಕರದೇವರು ಬಸವರಾಜದೇವರ ಕೊಂಡಾಡುತ್ತಿರಲು, ಆ ಬಸವರಾಜದೇವರು ಮರುಳುಶಂಕರದೇವರ ಘನವನು ಚೆನ್ನಬಸವರಾಜದೇವರಿಗೆ ನುಡಿದು ತೋಱುವ ಹಾಂಗೆ ಕೊಂಡಾಡಿದ ಪ್ರಸ್ತಾವದ ವಚನ:

೪೧೩

ಕಂಗಳೊಳಗೆ ಕರುಳಿಲ್ಲ; ಕಾಯದೊಳಗೆ ಮಾಯವಿಲ್ಲ.
ಮನದೊಳಗೆ ಅಹಂಕಾರವಿಲ್ಲ.
ದೇಹವೆಂದಱೆಯ; ನಿರ್ದೇಹವೆಂದಱೆಯ.

ಜಂತ್ರದ ಸೂತ್ರದಂತಿಪ್ಪ ನಿಬ್ಬೆಜಿಗಿನ ಮೂರ್ತಿಯ ನೋಡಾ!
ಲಿಂಗಜಂಗಮದ ಒಕ್ಕ ಮಿಕ್ಕ ಪ್ರಸಾದವ ಕೊಂಡು,
ಮಿಕ್ಕು ಮೀಜೆ ನಿಂದ ಮಹಾಪ್ರಸಾದಿಯ ನೋಡಾ!
ತನ್ನನಜಿದಹರೆಂದು ಜಗದ ಕಣ್ಣಿಗೆ ಮಾಯದ ಮಂಜ ಕವಿಸಿ
ನಿಜಪದದಲ್ಲಿ ತದುಗತನಾದ ಕೂಡಲಸಂಗಮದೇವರಲ್ಲಿ
ಮರುಳುಶಂಕರದೇವರ ನಿಲವ ನೋಡಾ ಚೆನ್ನಬಸವಣ್ಣಾ! ॥೨೨॥

ಈ ಹೀಂಗೆಂದು ಬಸವರಾಜದೇವರು ನಿರೂಪಿಸಲು,ಆ ಚೆನ್ನಬಸವರಾಜದೇವರು ಮರುಳುಶಂಕರದೇವರ ನಿಲವ ನಿಮ್ಮಿಂದ ಕಂಡೆನೆಂದು ಬಸವರಾಜದೇವರಿಗೆ ಬಿನ್ನೈಸಿದ ಪ್ರಸ್ತಾವದ ವಚನ:

೪೧೪

ಅಂಗವನಾಚಾರಕ್ಕರ್ಪಿಸಿ, ಆಚಾರವನಂಗಕ್ಕರ್ಪಿಸಿ
ಆಚಾರಲಿಂಗಪ್ರಸಾದಿಯಾದ.
ಪ್ರಾಣವ ಲಿಂಗದಲ್ಲಿ ಅರ್ಪಿಸಿ, ಆ ಲಿಂಗವ ಪ್ರಾಣಕ್ಕರ್ಪಿಸಿ,
ಪ್ರಾಣಲಿಂಗ ಪ್ರಸಾದಿಯಾದ,
ದೇಹಭಾವದ ಅಹಂಕಾರ ದಾಸೋಹಭಾವದೊಳಗಲ್ಲದೆ
ಅಳಿಯದೆಂದು ಲಿಂಗಜಂಗಮಕ್ಕೆ ಕೊಟ್ಟು
ಲಿಂಗಜಂಗಮಪ್ರಸಾದಿಯಾದ.
ಸತ್ಯಶರಣರ ಅಂಗಳದೊಳಗೆ ಬಿದ್ದ ಅಗುಳನೆತ್ತಿಕೊಂಡಿಪ್ಪೆನೆಂದು,
ನಿಮ್ಮ ಪ್ರಸಾದದ ಕುಳಿಯೊಳಗೆ
ಹನ್ನೆರಡು ವರುಷ ಪರಿಯಂತರ ಪ್ರಸಾದಿಯಾಗಿರ್ದ.
ಕೂಡಲಚೆನ್ನಸಂಗಮದೇವರಲ್ಲಿ
ಮರುಳುಶಂಕರದೇವರ ಶ್ರೀಪಾದದ ಘನವನು
ನಿಮ್ಮಿಂದ ಕಂಡು ಬದುಕಿದೆನು ಕಾಣಾ ಸಂಗನಬಸವಣ್ಣಾ! ॥೨೩॥

ಮರುಳುಶಂಕರದೇವರ ಘನವ ನಿಮ್ಮಿಂದ ಕಂಡು ಬದುಕಿದೆನೆಂದು ಚನ್ನಬಸವರಾಜದೇವರು ಬಸವರಾಜದೇವರ ಕೂಡೆ ಬಿನ್ನಹಂ ಮಾಡುತ್ತಿರಲು, ಮತ್ತಂ ಮರಳುಶಂಕರದೇವರು ಚೆನ್ನಬಸವರಾಜದೇವರ ಸ್ತುತಿಯನೊಳಕೊಂಡು ನಿರೂಪಿಸಿದ ಪ್ರಸ್ತಾವದ ವಚನ:

೪೧೫

ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ
ಇಂತೀ ಷಡುಸ್ಥಲ ಚಕ್ರವರ್ತಿಯಯ್ಯಾ ಚೆನ್ನಬಸವಣ್ಣನು!
ಷಡಾಧಾರಂ ಸರ್ವಭೇದಂ ಸರ್ವಾಚಾರಂ ತು ಲಿಂಗಯೋಃ।
ಷಡೂರ್ಮಿಂ ತ್ರಿವಿಧಂ ಚೈಕಂ ತಸ್ಮಾಲ್ಲಿಂಗ ಪ್ರಪೂಜನಂ॥
ಇಂತೆಂದುದಾಗಿ, ಇಂತಪ್ಪ ಲಿಂಗಾಂಗಿಯಯ್ಯಾ ಚೆನ್ನಬಸವಣ್ಣನು.
ಆಚಾರವೆ ಕಾಯ, ಆಚಾರವೆ ಪ್ರಾಣ,

ಆಚಾರವೆ ಲಿಂಗ, ಆಚಾರವೆ ಸಂಗ.
ಇಂತಪ್ಪ ಆಚಾರಸನ್ನಿಹಿತನಯ್ಯಾ ನಮ್ಮ ಚೆನ್ನಬಸವಣ್ಣನು.
ಶುದ್ಧಸಿದ್ಧಪ್ರಸಿದ್ಧಪ್ರಸನ್ನ ಪ್ರಭುವೆ
ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ
ನಿಮ್ಮ ಚೆನ್ನಬಸವಣ್ಣನು ಸರ್ವಾಚಾರಸಂಪನ್ನನು.
ಇಂತಪ್ಪ ಚೆನ್ನಬಸವಣ್ಣನ ನಿಲವ ನೀವೆ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ? ನಿಮ್ಮ ಧರ್ಮ, ನಿಮ್ಮ ಧರ್ಮ! ॥೨೪॥

ಮತ್ತಂ, ಮರುಳುಶಂಕರದೇವರ ನಿಲವ ಚೆನ್ನಬಸವರಾಜದೇವರು ಪ್ರಭುದೇವರಿಗೆ ಬಿನ್ನೈಸಿದ ವಚನ:

೪೧೬

ತುದಿಮೊದಲಿಲ್ಲದ ಘನವ ನೋಡಾ!
ಒಳಹೊಱಗಿಲ್ಲದ ಅನುವ ನೋಡಾ!
ಗುರು ಲಿಂಗ ಜಂಗಮ ತಾನೆಯಾಗಿ,
ಮತ್ತೆ ತಾನೆಂಬುದೇನೂ ಇಲ್ಲದೆ ಇಪ್ಪ ಪರಿಯ ನೋಡಾ!
ತನ್ನ ನಿರ್ದೇಶಮಮಂ ಮಾಡಿಕೊಂಡು,
ನಿಜಪದವನೈದಿಪ್ಪ ಪರಿಯ ನೋಡಾ!
ಕೂಡಲಚೆನ್ನಸಂಗಮದೇವರಲ್ಲಿ ಪರಮಪ್ರಸಾದಿಯಾಗಿಪ್ಪ
ಮರುಳುಶಂಕರದೇವರ ನಿಲವ ನೋಡಾ ಪ್ರಭುವೆ! ॥೨೫॥

ಇದಕ್ಕೆ ಪ್ರಭುದೇವರು ಪರಮಪ್ರಸಾದಿಯಾಗಿಪ್ಪ ಮರುಳುಶಂಕರದೇವರ ನಿಲವ ಬಸವರಾಜದೇವರಿಂದ ಕಂಡೆವೆಂದು ಸಿದ್ಧರಾಮಯ್ಯದೇವರೊಡನೆ ನಿರೂಪಿಸಿದ ಪ್ರಸ್ತಾವದ ವಚನ:

೪೧೭

ಅಂಗವಿಡಿದಂಗಿಯನೇನೆಂಬೆ?
ಆಱನೊಳಕೊಂಡನುಪಮನ ನೋಡಾ!
ಮೂಱಱ ಹೊಲಿಗೆಯ ಬಿಚ್ಚಿ,
ಎಂಟಾತ್ಮ ಹರಿಗಳ ತನ್ನಿಚ್ಛೆಯೊಳ್ ನಿಲಿಸಿದ ನಿಜಸುಖಿಯ ನೋಡಾ!
ತತ್ತ್ವ ಮೂವತ್ತಾಱ ಮೀಱಿ ಅತ್ತತ್ತವೆ ತೋರ್ಪ ಅಗಮ್ಯನ ನೋಡಾ!
ನಮ್ಮ ಗೊಹೇಶ್ವರನ ಶರಣ ಅಲ್ಲಯ್ಯನ ಇರವನೊಳಕೊಂಡ
ಪರಮ ಪ್ರಸಾದಿ ಮರುಳುಶಂಕರದೇವರ ನಿಲವ
ಬಸವಣ್ಣನಿಂದ ಕಂಡೆ ನೊಡಾ ಸಿದ್ಧರಾಮಯ್ಯಾ! ॥೨೬॥

ಈ ಹೀಂಗೆಂದು ಸಿದ್ಧರಾಮಯ್ಯದೇವರೊಡನೆ ಪ್ರಭುದೇವರು ನಿರೂಪಿಸುತ್ತಿರಲು, ಇದಕ್ಕೆ ಬಸವರಾಜದೇವರು ಸಿದ್ಧರಾಮಯ್ಯದೇವರಿಂದ ಪ್ರಭುದೇವರ ಕಂಡೆ, ಪ್ರಭುದೇವರಿಂದ ಮರುಳುಶಂಕರದೇವರ ಕಂಡೆನೆಂದು ಕೊಂಡಾಡುವ ಪ್ರಸ್ತಾವದ ವಚನ:

೪೧೮

ಸತ್ಯಮುಕ್ತಿಯ ಕಳೆಯ ನೋಡಾ!
ನಿತ್ಯತತ್ತ್ವದ ಇರವ ನೋಡಾ!
ಮೂಱೊಂದಾದ ಆಱೂಢನ ನೋಡಾ!
ಕೂಡಲಸಂಗಮದೇವರಲ್ಲಿ ತದ್ಗತವಾಗಿಪ್ಪ
ಮರುಳುಶಂಕರದೇವರ ನಿಲವ ಪ್ರಭುದೇವರು
ಸಿದ್ಧರಾಮಯ್ಯದೇವರಿಂದ ಕಂಡು ಬದುಕಿದೆನು! ಬದುಕಿದೆನು!! ॥೨೭॥

ಇಂತು ಬಸವರಾಜದೇವರು ಮರುಳುಶಂಕದೇವರ ನಿಲವ ಪ್ರಭು ಸಿದ್ಧರಾಮಯ್ಯದೇವರಿಂದ ಕಂಡು ಬದುಕಿದೆನೆಂದು ಸ್ತುತಿಸುತ್ತಿರಲು, ಇದಕ್ಕೆ ಸಿದ್ಧರಾಮಯ್ಯದೇವರು ಮರುಳುಶಂಕರದೇವರ ನಿಲವ ಪ್ರಭು ಬಸವಣ್ಣನಿಂದ ಕಂಡೆನೆಂದು ಸ್ತುತಿಸಿದ ವಚನ:

೪೧೯

ಆದಿಯ ಮೂರ್ತಿಯಲ್ಲ.
ಅನಾದಿಯ ಬಚ್ಚಬಱಿಯ ಶೂನ್ಯನಲ್ಲ.
ಅಂಗವಿದ್ದೂ ಅಂಗವಿಲ್ಲ.
ಸಂಗ ಘನಪದದಲ್ಲಿ ವೇದ್ಯವಾದ
ಮರುಳುಶಂಕರದೇವರ ನಿಲವ
ಪ್ರಭು ಬಸವಣ್ಣನಿಂದ ಕಂಡು ಬದುಕಿದೆನು
ಕಾಣಾ ಕಪಿಲಸಿದ್ಧಮಲ್ಲಿಕಾರ್ಜುನಾ! ॥೨೮॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ನಿರೂಪಿಸಲು, ಮತ್ತಂ ಬಸವರಾಜದೇವರು ಹಡಪದಪ್ಪಣ್ಣಗಳಿಂದ ಪ್ರಭು ಸಿದ್ಧರಾಮಯ್ಯದೇವರ ನಿಲವ ಕಂಡೆ. ಮತ್ತಂ ಪ್ರಭು ಸಿದ್ಧರಾಮಯ್ಯದೇವರಿಂದ ಮರುಳುಶಂಕರದೇವರ ಇರವ ಕಂಡೆನ್ನ ಜನ್ಮ ಸಫಲವಾಯಿತ್ತೆಂದು ಸ್ತುತಿಸಿದ [1]ಪ್ರಸ್ತಾವದ[1] ವಚನ:

೪೨೦

ಏನೆಂದುಪಮಿಸುವೆನಯ್ಯಾ!
ತನ್ನಿಂದ ತಾ ತೋಱದೆ, ಗುರುಮುಖದಿಂದ ತೋಱಿದ
ತನ್ನ ನಿಲವ ನಿರುಪಮನು!
ಶಬ್ದ ಮುಗ್ಧವಾಗಿದ್ದೆಡೆಯನಿದಿರಿಂಗೆ ತೋಱದೆ,
ಇರವೆ ಪರವಾಗಿರ್ದ ಅಜಡನು.
ಇನನುದಯ ಕಾಲಕ್ಕೆ ಕುಕ್ಕುಟ ದನಿದೋಱುವಂತೆ,
ಘನಮಹಿಮರ ದರ್ಶನದಿಂದ

೧-೧ X (ಮು)

ಸತ್‌ಪ್ರಣವ ತಾನಾಗಿ ನುಡಿದ ಮೂಲಿಗನು!
ಕೂಡಲಸಂಗಮದೇವರಲ್ಲಿ
ಬೆರಸಿ ಬೇಱಿಲ್ಲದಿಪ್ಪ ಮರುಳುಶಂಕರದೇವರ ನಿಲವ
ಪ್ರಭುದೇವರು ಸಿದ್ಧರಾಮಯ್ಯದೇವರು ಹಡಪದಪ್ಪಣ್ಣನಿಂದ ಕಂಡು
ಎನ್ನ ಜನ್ಮ ಸಫಲವಾಯಿತ್ತಯ್ಯಾ! ॥೨೯॥

ಈ ಹೀಂಗೆಂದು ಬಸವರಾಜದೇವರು ಮರುಳುಶಂಕರದೇವರ ಕೊಂಡಾಡುತ್ತಿರಲು, ಇದಕ್ಕೆ ಹಡಪದಪ್ಪಣ್ಣಗಳು ಪ್ರಭುದೇವರಿಂದ ಬಸವಣ್ಣನಿಂದ ಮರುಳುಶಂಕರದೇವರ ಇರವ ಕಂಡು ಬದುಕಿದನೆಂದು ಕೊಂಡಾಡಿದ ಪ್ರಸ್ತಾವದ ವಚನ:

೪೨೧

ಯುಗಜುಗಂಗಳ ಅಳಿವುಳಿವನಱಿಯದೆ,
ಹಗಲಿರುಳೆಂಬವ ನೆನಹಿನಲ್ಲೂ ಅಱಿಯದೆ,
ಲಿಂಗದಲ್ಲಿ ಪರವಶನಾಗಿರ್ದ ಪರಮಪರಿಣಾಮಿಯನೇನೆಂದು ಪಮಿಸುವೆನಯ್ಯಾ?
ಆಹಾ! ಎನ್ನ ಮುಕ್ತಿಯ ಮುಕುರದ ಇರವ ನೋಡಾ!
ಆಹಾ! ಎನ್ನ ಸತ್ಯದ ಸ್ವಾನುಭಾವದ ಕಳೆಯ ನೋಡಾ!
ಆಹಾ! ಅಷ್ಟಮದಂಗಳ ಹಂಗನಳಿದು,
ನಿಷ್ಠೆ ನಿಬ್ಬೆಱಗಾಗಿ ನಿಂದ ಚಿತ್‌ಸುಖಿಯ ನೋಡಾ!
ಬಸವಪ್ರಿಯ ಕೂಡಲಚೆನ್ನಸಂಗಮದೇವಯ್ಯಾ,
ಪರಮಪ್ರಸಾದಿ ಮರುಳುಶಂಕರದೇವರ ನಿಲವ
ಪ್ರಭು ಬಸವಣ್ಣನಿಂದ ಕಂಡು ಬದುಕಿದೆನು ಬದುಕಿದೆನು. ॥೩೦॥

ಈ ಹೀಂಗೆಂದು ಹಡಪದಪ್ಪಣ್ಣಗಳು ಮರುಳು ಶಂಕರದೇವರ ಇರವ ಕೊಂಡಾಡುತ್ತಿಲು, ಅದಕ್ಕೆ ಮಡಿವಾಳಯ್ಯಗಳು ಪರಮ ಪರಿತೋಷರಾಗಿ ಮರುಳುಶಂಕರದೇವರ ನಿಲವ ಬಸವಣ್ಣನಿಂದ ಕಂಡು ಬದುಕಿದೆನೆಂದು ಕೊಂಡಾಡುವ ಪ್ರಸ್ತಾವದ ವಚನ:

೪೨೨

ಮೂಱನೊಳಕೊಂಡ, ಆಱ ಮೀಱಿ ನಿಂದ
ಘನವನೇನೆಂಬೆನಯ್ಯಾ! ನುಡಿವರೆ ವಾಚಾತೀತ.
ನೋಡುವರೆ ಕಂಗಳೆರಡೆಯ್ದುವಯ್ಯಾ!
ಮಹದ ಬೆಳಗೆ ತಾನಾಗಿ ನಿಂದ
ಮರುಳುಶಂಕರದೇವರ ನಿಲವ ಬಸವಣ್ಣನಿಂದ ಕಂಡು
ಬದುಕಿದೆನು ಕಾಣಾ ಕಲಿದೇವರದೇವಾ! ॥೩೧॥

ಈ ಹೀಂಗೆಂದು ಮರುಳುಶಂಕರದೇವರ ನಿಲವ ಮಡಿವಾಳಯ್ಯಗಳು ಕೊಂಡಾಡುತ್ತಿರಲು, ಅಲ್ಲಿ ಬಸವರಾಜದೇವರು ಮಡಿವಾಳಯ್ಯಗಳಿಂದ ಮರುಳುಶಂಕರದೇವರ ಇರವ ಕಂಡು ಬದುಕಿದೆನೆಂದು ಕಿನ್ನರಬ್ರಹ್ಮಯ್ಯಗಳ ಕೂಡೆ ನಿರೂಪಿಸಿದ ಪ್ರಸ್ತಾವದ ವಚನ:

೪೨೩

ಎನ್ನ ವಚನರಚನೆಯ ಮೆಚ್ಚ,
ಅಡಿಗಡಿಗೆನ್ನ ಮನದ ಮೈಲಿಗೆಯ ತೊಳೆದು,
ಹೋದ ಪ್ರಾಣವ ಮರಳಿ ತಂದು ರಕ್ಷಿಸಿದ.
ಕೂಡಲಸಂಗಮದೇವಯ್ಯಾ,
ಮಡಿವಾಳಯ್ಯಗಳ ಕರುಣದಿಂದ
ಮರುಳುಶಂಕರದೇವರ ನಿಲವ ಕಂಡು ಬದುಕಿದನು ಕಾಣಾ ಕಿನ್ನರಬ್ರಹ್ಮಯ್ಯಾ! ॥೩೨॥

ಈ ಹೀಂಗೆಂದು ಬಸವರಾಜದೇವರು ನಿರೂಪಿಸಲು, ಅದಕ್ಕೆ ಕಿನ್ನರಬ್ರಹ್ಮಯ್ಯಗಳು ಬಸವರಾಜದೇವರ ನುಡಿಯನೊಳಕೊಂಡು ಮರುಳುಶಂಕರದೇವರ ಕೊಂಡಾಡಿದ ಪ್ರಸ್ತಾವದ ವಚನ:

೪೨೪

ಆಕಾರವೆಂಬೆನೆ? ನಿರಾಕಾರವಾಗಿದೆ.
ನಿರಾಕಾರವೆಂಬೆನೆ? ಅತ್ತತ್ತ ತೋಱುತ್ತದೆ.
ತನ್ನನಳಿದು ನಿಜ ಉಳಿದ
ಮಹಾಲಿಂಗ ತ್ರಿಪುರಾಂತಕನ ನಿಲವ ಕಂಡು ಒಳಕೊಂಡ
ಮರುಳುಶಂಕರದೇವರ ಮೂರ್ತಿಯ ಕಂಡು
ನಿನ್ನಿಂದ ಬದುಕಿದೆನು ಕಾಣಾ ಸಂಗನಬಸವಣ್ಣಾ ! ॥೩೩॥

ಮತ್ತಂ, ಬಸವರಾಜದೇವರಿಂದ ಮರುಳುಶಂಕರದೇವರ ನಿಲವ ಕಂಡೆನೆಂದು ಕಿನ್ನರ ಬ್ರಹ್ಮಯ್ಯಗಳು ನಿರೂಪಿಸಲು, ಅದಕ್ಕೆ ಬಸವರಾಜದೇವರು ಕಿನ್ನರ ಬ್ರಹ್ಮಯ್ಯಗಳಿಂದ ಮರುಳುಶಂಕರದೇವರ ನಿಲವ ಕಂಡು ಬದುಕಿದೆನೆಂದು ಸ್ತುತಿಸಿದ ಪ್ರಸ್ತಾವದ ವಚನ:

೪೨೫

ನಾನಾ ಯುಗಂಗಳಲ್ಲಿ ಬಂದಲ್ಲಿ
ಇಂತಪ್ಪ ನಿಲವ ಕಂಡುದಿಲ್ಲವಯ್ಯಾ !
ಅಂಗ ಮನ ಭಾವ ಕರಣಂಗಳ ಮಾದು,
ಕೂಡಲಸಂಗಮದೇವರ ನಿಲವನೊಳಕೊಂಡ
ಮರುಳುಶಂಕರದೇವರ ನಿಲವ ನಿಮ್ಮಿಂದ ಕಂಡು
ಬದುಕಿದೆನು ಕಾಣಾ ಕಿನ್ನರ ಬ್ರಹ್ಮಯ್ಯಾ! ॥೩೪॥

ಈ ಹೀಂಗೆಂದು ಎಲ್ಲಾ ಗಣಂಗಳು ಮರುಳುಶಂಕರದೇವರ ಸ್ತುತಿಸುತಿರಲು, ಅಲ್ಲಿ ಮರುಳುಶಂಕರದೇವರು ತಮ್ಮ ಸ್ತುತಿಸಿದ ಗಣಂಗಳ ಒಂದೇ ವಚನದಲ್ಲಿ ಕೊಂಡಾಡಿದ ಪ್ರಸ್ತಾವದ ವಚನ:

೪೨೬

ಎನ್ನ ಜ್ಞಾನಾತ್ಮನ ಚೇತನನಯ್ಯಾ ಪ್ರಭುದೇವರು.
ಎನ್ನ ಪರಮಾತ್ಮನ ಚೇತನನಯ್ಯಾ ಸಿದ್ಧರಾಮಯ್ಯದೇವರು.
ಎನ್ನ ಚಿನ್ಮಯಾತ್ಮನ ಚೇತನನಯ್ಯಾ ಸಂಗನಬಸವಣ್ಣನು.
ಎನ್ನ ನಿರ್ಮಳಾತ್ಮನ ಚೇತನನಯ್ಯಾ ಷಡುಸ್ಥಲಬ್ರಹ್ಮಿ ಚನ್ನಬಸವಣ್ಣನು.
ಎನ್ನ ಮಹಾತ್ಮನ ಚೇತನನಯ್ಯಾ ಬಸವಣ್ಣನ ನಿಜಸುಖಿ ಅಪ್ಪಣ್ಣನು.
ಎನ್ನ ಜೀವಾತ್ಮನ ಚೇತನನಯ್ಯಾ ಮಡಿವಾಳಮಾಚಯ್ಯನು.
ಎನ್ನಜೀವಿನ ಚೇತನಾತ್ಮಕನಯ್ಯಾ ಕಿನ್ನರಬ್ರಹ್ಮಯ್ಯನು.
ಇಂತಪ್ಪ ಪ್ರಮಥರ ಕರುಣದಿಂದ
ಶುದ್ಧಸಿದ್ಧಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ಬದುಕಿದೆನು ಕಾಣಾ! ನಿಮ್ಮ ಧರ್ಮ, ನಿಮ್ಮ ಧರ್ಮ! ॥೩೫॥

ಮತ್ತಂ,

೪೨೭

ಸರ್ಪನ ಹೆಡೆಯ ಮೇಲಿಪ್ಪ ಎಪ್ಪತ್ತೇಳು ಲೋಕವ ಕಂಡೆ.
ಎಪ್ಪತ್ತೇಳು ಲೋಕದೊಳಗಿಪ್ಪ ಎಪ್ಪತ್ತೇಳು ಕರ್ಪುರದಗಿರಿಯ ಕಂಡೆ.
ಆ ಎಪ್ಪತ್ತೇಳು ಕರ್ಪುರದ ಗಿರಿಯಮೇಲಿಪ್ಪ
ಎಪ್ಪತ್ತೇಳು ಉರಿಯ ಕಂಭವ ಕಂಡೆ.
ಎಪ್ಪತ್ತೇಳು ಉರಿಯ ಕಂಭದ ಮೇಲಿಪ್ಪ
ಎಪ್ಪತ್ತೇಳು ಅರಗಿನ ಪುತ್ಥಳಿಯ ಕಂಡೆ.
ಆ ಎಪ್ಪತ್ತೇಳು ಅರಗಿನ ಪುತ್ಥಳಿ ಕರಗಿ ಹೋದವು.
ಎಪ್ಪತ್ತೇಳು ಕರ್ಪುರದ ಗಿರಿ ಉರಿದು ಹೋದವು.
ಎಪ್ಪತ್ತೇಳು ಲೋಕ ಹಾಳಾದವು.
ಆ ಸರ್ಪ ಬೆಂದು ಸತ್ತು ಹೋಯಿತ್ತು.
ಇನ್ನು ನಿಷ್ಪತ್ತಿ ನಿರಾಳವೆಂಬ ನಿಜವೊಳಕೊಂಡ ಬಳಿಕ
ನಾನೆತ್ತ ಹೋದೆನೆಂದಱಿಯೆನಯ್ಯಾ!
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ!
ನಿಮ್ಮ ಸರ್ಪನ ಪರಿಯ ನೀವೆ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ? ನಿಮ್ಮ ಧರ್ಮ, ನಿಮ್ಮ ಧರ್ಮ! ॥೩೬॥

ಮತ್ತಂ, ಮರುಳುಶಂಕರದೇವರ ಐಕ್ಯ:

೪೨೮

ಸಂಸಾರವೆಂಬ ಸಾಗರವ ದಾಂಟುವರೆ
ಅಱುಹೆಂಬ ಹಱಿಗೋಲನಿಕ್ಕಿ.

ಜ್ಞಾನವೆಂಬ ಅಂಬಿಗ ಈ ಹಱಿಗೋಲೊಳಗೆ ಕುಳ್ಳಿರ್ದು,
ಸುಜ್ಞಾನವೆಂಬ ಸಟ್ಟುಗವ ಪಿಡಿದು,
ಮಹಾಜ್ಞಾನವೆಂಬ ಘಾತಗಳೆಯಂ ಪಿಡಿದು,
ನಾನೀ ಹೊಳೆಯಂ ಕಂಡು ಅಂಬಿಗನ ಕೇಳಿದರೆ,
ನಾ ನಿನ್ನ ಹಾಯಿಸಿಕೊಟ್ಟೇನೆಂದನು.
ನಾನು ನಿನ್ನ ನಂಬಿ ಹಱಿಗೋಲನೇಱಿದೆನು
ಕಾಣಾ ಅಂಬಿಗರಣ್ಣಾ.
ಇಂದು ನಾನು ಹಱಿಗೋಲಲ್ಲಿ ಕುಳ್ಳಿರ್ದು
ನಡುಹೊಳೆಯಲ್ಲಿ ಹೋಗಲಿಕೆ,
ಕಾಮವೆಂಬ ಕೊರಡು ಅಡ್ಡಬಿದ್ದಿತ್ತು;
ಕ್ರೋಧವೆಂಬ [೧]ಸುಳಿಯೊಳಗೆ[೧] ಸಿಕ್ಕಿತ್ತು.
ಅಹಂಕಾರವೆಂಬ ಮೀನು ಬಂದು [೨]ನಿಂದಿತ್ತು.[೨]
ಮಾಯೆಯೆಂಬ ಮೊಸಳೆ ಬಾಯ ಬಿಡುತ್ತಿದ್ದಿತ್ತು
ಮೋಹವೆಂಬ ನೊರೆ ತೆರೆ ಹೆಚ್ಚಿ ಬರುತಿದ್ದಿತ್ತು.
ಲೋಭವೆಂಬ ಕಡಲು ಎಳೆದೊಯಿವುತ್ತಿದ್ದಿತ್ತು.
ಮದವೆಂಬ ಮರಹು ನೂಕುತ್ತಿದ್ದಿತ್ತು.
ಮತ್ಸರವೆಂಬ ಗಾಳಿ ತಲೆಕೆಳಗೆ ಮಾಡುತ್ತಿದ್ದಿತ್ತು.
ಇವೆಲ್ಲವನೂ ಪರಿಹರಿಸಿ ಎನ್ನ ಹೊಳೆಯ ದಾಂಟಿಸಿದನು ಅಂಬಿಗರಣ್ಣನು.
ಈ ಹೊಳೆಯ ದಾಂಟಿಸಿದ ಕೂಲಿಯ ನನ್ನ ಬೇಡಿದರೆ,
ಕೂಲಿಯ ಕೊಡಲೇನು ಇಲ್ಲಾ ಎಂದರೆ,
ಕೈಸೆಱೆಯಾಗಿ ಎನ್ನನೆಳೆದೊಯ್ದನಯ್ಯಾ!
ಅಱುವೆಯ ಕೊಟ್ಟ ಕೂಲಿಗೆ ಕಱುವ ಕಾಯಿಸಿಕೊಂಡನಯ್ಯಾ.
ಅಱಿಯದೆ ಹಱಿಗೋಲನೇಱಿ ತೊಱೆಯ ದಾಂಟಿದ
ಕೂಲಿಗೆ ಕಱುವ ಕಾದೆ ಕಾಣಾ!
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ. ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ
ನಿಮ್ಮ ನಂಬಿ ನಾನು ಕೆಟ್ಟು ಬಟ್ಟಬಯಲಾಗಿ ನಿಂದೆನಯ್ಯಾ.
ನಿಮ್ಮ ಧರ್ಮ, ನಿಮ್ಮ ಧರ್ಮ! ॥೩೭॥

ಮತ್ತಂ, ಮರುಳುಶಂಕರದೇವರು ತಮ್ಮ ಐಕ್ಯದಲ್ಲಿ ಪ್ರಭುದೇವರ ಸ್ತೋತ್ರಮಂ ಮಾಡಿದ ಪ್ರಸ್ತಾವದ ವಚನ:

೧-೧ ಸುಳಿಹಿನೊಳಗೆ(ಮೂ) ೨-೨ ನುಂಗಿತ್ತು (ಮೂ)

೪೨೯

ನಿಸ್ಸಂಗತ್ವಂ ನಿರಾಭಾರಂ ನಿಸ್ಸೀಮಂ ನಿರುಪಾಧಿಕಂ।
ನಿರ್ದೇಹಂ ನಿರ್ಮಲಂ ನಿತ್ಯಂ ತತ್ ಸ್ಯಾಜ್ಜಂಗಮಲಕ್ಷಣಂ॥
ಇಂತೆಂದುದಾಗಿ,
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ,
ಶಾಂತಚೆನ್ನಮಲ್ಲಿಕಾರ್ಜುನದೇವಾ,
ನಿಮ್ಮ ಘನಕ್ಕೆ ಘನವಾದ ಪ್ರಭುದೇವರ ಘನವ ನೀವೆ ಬಲ್ಲಿರಿ;
ನಾನೆತ್ತ ಬಲ್ಲೆನಯ್ಯಾ? ನಿಮ್ಮ ಧರ್ಮ, ನಿಮ್ಮ ಧರ್ಮ! ॥೩೮॥

ಮತ್ತಂ, ಮರುಳುಶಂಕರದೇವರ ಐಕ್ಯ :

೪೩೦

ಮಹಾಲಿಂಗಂ ತ್ರಯೋಲಿಂಗಂ ತ್ರಿವಿಧಂ ಷಡ್ವಿಧಂ ಮುಖಂ।
ತ್ರಿವಿಧೈಕಮುಖಂ ಲಿಂಗಂ ಮಹಾಲಿಂಗಂ ತು ದರ್ಶನಂ॥
ಇಂತೆಂದುದಾಗಿ, ಒಂದ ಮೂಱ ಮಾಡಿಕೊಂಡನಯ್ಯಾ ನಮ್ಮ ಬಸವಣ್ಣ,
ಮೂಱ ಆಱ ಮಾಡಿಕೊಂಡನಯ್ಯಾ ನಮ್ಮ ೧ಬಸವಣ್ಣನು೧
ಆಱ ಮೂಱ ಮಾಡಿಕೊಂಡನಯ್ಯಾ ನಮ್ಮ ಬಸವಣ್ಣನು.
ಮೂಱ ಒಂದ ಮಾಡಿಕೊಂಡನಯ್ಯಾ ನಮ್ಮ ಬಸವಣ್ಣನು.
ಇಂತಪ್ಪ ಸರ್ವಾವಧಾನಿಯಯ್ಯಾ ನಮ್ಮ ಬಸವಣ್ಣನು.
ಇಂತಪ್ಪ ಸರ್ವ ಸಂಗಪರಿತ್ಯಾಗಿಯಯ್ಯಾ ನಮ್ಮ ಬಸವಣ್ಣನು,
ಇಂತಪ್ಪ ಸರ್ವಕರಣನಿರ್ಮುಕ್ತನಯ್ಯಾ ನಮ್ಮ ಬಸವಣ್ಣನು.
ಇಂತಪ್ಪ ಕಾರುಣ್ಯಪ್ರಸಾದಿಯಯ್ಯಾ ನಮ್ಮ ಬಸವಣ್ಣನು.
ಇಂತಪ್ಪ ಸರ್ವಾಂಗಲಿಂಗಿಯಯ್ಯಾ ನಮ್ಮ ಬಸವಣ್ಣನು.
ಇಂತಪ್ಪ ಸರ್ವನಿರ್ವಾಣಿಯಯ್ಯಾ ನಮ್ಮ ಬಸವಣ್ಣನು.
ಇಂತಪ್ಪ ಬಸವಣ್ಣನ ಮಹಿಮೆಯನು ನೀವೇ ಬಲ್ಲಿರಿ.
ಅಸಂಖ್ಯಾತ ಮಹಾಪುರಾತರು
ಪ್ರಭುದೇವರು ಮುಖ್ಯವಾದ ನಿಲವಿನ ಶ್ರೀಚರಣಕ್ಕೆ
ನಾನು ಶರಣಾರ್ಥಿ ಶರಣಾರ್ಥಿ ಎಂದು, ಶಬ್ದ ಮುಗ್ಧನಾಗಿ,
ಉರಿಯುಂಡ ಕರ್ಪುರದಂತೆ ನಿಮ್ಮ ಶ್ರೀಚರಣವನೈದಿದೆನಯ್ಯಾ!
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ, ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ನಿಮ್ಮ ಬಸವಣ್ಣನ ಪ್ರಸಾದವ ಕೊಂಡು
ನಾನು ಬಸವಣ್ಣನ ಮುಂದೆ ಬಯಲಾಗಿ ಹೋದೆನಯ್ಯಾ!
ನಿಮ್ಮ ಧರ್ಮ, ನಿಮ್ಮ ಧರ್ಮ ! ॥೩೯॥

೧-೧. ಮುದ್ರಿತ ಪ್ರತಿಯಲ್ಲಿ ಎಲ್ಲ ಕಡೆ 'ಬಸವಣ್ಣ' ಎಂದಿದೆ (ಸಂ).

ಇಂತು ಮರುಳುಶಂಕರದೇವರು ನಿರವಯವಾಗಲು, ಚೆನ್ನಬಸವರಾಜದೇವರು ಕೊಂಡಾಡಿದ ಪ್ರಸ್ತಾವದ ವಚನ:

೪೩೧

ಮಾಡಬಾರದ ಭಕ್ತಿಯನೆ ಮಾಡಿ,
ನೋಡಬಾರದ ನೋಟವನೆ ನೋಡಿ,
ಕೂಡಬಾರದ ಕೂಟವನೆ ಕೂಡಿ,
ಸ್ತುತಿಸುವರಿಗೆ ಸ್ತುತಿಗೆ ಬಾರದೆ,
ಮುಟ್ಟುವರಿಗೆ ಮುಟ್ಟಬಾರದೆ
ಬಟ್ಟಬಯಲಾಗಿ ಹೋದ ಮರುಳುಶಂಕರದೇವರ ಮಹಾತ್ಮೆಗೆ
ನಮೋ ನಮೋ ಎಂದು ಬದುಕಿದೆನು ಕಾಣಾ
ಕೂಡಲಚೆನ್ನಸಂಗಮದೇವಾ! ॥೪೦॥

ಇಂತು ಚೆನ್ನಬಸವರಾಜದೇವರು, ಮರುಳುಶಂಕರದೇವರು ನಿರವಯಲನೆಯ್ದಿದಲ್ಲಿ ಕೊಂಡಾಡುತ್ತಿರಲು, ಆ ಪ್ರಸ್ತಾವದೊಳು ಪ್ರಭುದೇವರು ಬಸವರಾಜದೇವರೊಡನೆ ನಿರೂಪಿಸಿದ ಪ್ರಸ್ತಾವದ ವಚನ:

೪೩೨

ಕಾಮನ ಕಣ್ಣ ಮುಳ್ಳ ಕಳೆದು,
ಭೂಮಿಯ ತೈಲದ ಸೀಮೆಯ ಕೆಡಿಸಿ ಹೋಮವನುರುಹಿ,
ದಕ್ಷನ ತಲೆಯನರಿದ ನಿಸ್ಸೀಮ ಶರಣರ ನಿಲವನಱಿಯಬಹುದೆ?
ಅಱಿವಿಂಗಸಾಧ್ಯ, ಉಪಮೆಗೆ ಕಡೆಮುಟ್ಟರು.
ಗೊಹೇಶ್ವರನ ಶರಣರೆಂತಹರೆಂಬುದ ಕಂಡಾ [1]ಸಂಗನ[1]ಬಸವಣ್ಣಾ! ॥೪೧॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಬಸವರಾಜದೇವರು ನಿರಾಕಾರವಾಗಿರ್ದ ಪ್ರಾಣವನು ನಿರವಯವನ್ನೈದುವುದು ಸಾಮ್ಯವಲ್ಲದೆ, ಕಾಯವು ಜಡನು, ನಿರವಯವಹ ಭೇದವೆಂತೆಂದು ಪ್ರಭುದೇವರ ಬೆಸಗೊಂಬ ಪ್ರಸ್ತಾವದ ವಚನ:

೪೩೩

ಲಿಂಗದಲ್ಲಿ ಅರ್ಪಿತವಾದ ಸುಖವು
ಲಿಂಗದಲ್ಲಿ ಲೀಯವಾಯಿತ್ತೆಂದರೆ,
ಅಂಗವ ಲಿಂಗದಲ್ಲಿ ನಿಕ್ಷೇಪಿಸಿಹೆನೆಂಬ ಕಾರಣವೇಕಯ್ಯಾ?
ಶರಣಂಗೆ, ಪ್ರಾಣನ ಲಿಂಗದಲ್ಲಿ ಸವೆಸಿ ನಿರವಯವಾಗಬಹುದಲ್ಲದೆ,
ಕರ್ಮದಿಂದಾದ ಕಾಯವ ಸವೆಸಿ

೧-೧ X (ಮು)

ಸಯವಪ್ಪ ಪರಿ ಎಂತು ಹೇಳಯ್ಯಾ?
ಕೂಡಲಸಂಗಮದೇವಯ್ಯಾ ನಿಮ್ಮ ಶರಣರು
ಕಾಯವಿಡಿದಿರ್ದು ನಿರ್ಮಾಯರಾಗಿಪ್ಪುದ ಹೇಳಯ್ಯಾ, ನಿಮ್ಮ ಧರ್ಮ. ॥೪೨॥

ನಿಮ್ಮ ಶರಣರು ಶರೀರವಿದ್ದು ನಿಜದಲ್ಲಿ ನಿಂದ ಭೇದವ ನಿರೂಪಿಸಿ ಎಂದು ಬಸವರಾಜದೇವರು ಬಿನ್ನಹಂ ಮಾಡಲು, ಇದಕ್ಕೆ ಪ್ರಭುದೇವರು ಮರುಳುಶಂಕರದೇವರೆಂಬ ಶರಣನ ಮಹಾತ್ಮೆಯ ನಿರೂಪಿಸಿದ ಪ್ರಸ್ತಾವದ ವಚನ:

[೧]ಪದಂಗಳು:[೧]

೪೩೪

ರಾಗ : ಬಹುಳಿ

ಕರ್ಮಕಾಯನು ಅಲ್ಲ ಬ್ರಹ್ಮಮೂರುತಿಯಲ್ಲ
ಪರಬ್ರಹ್ಮವ ನುಡಿವಲ್ಲಿ ತಾನಿಲ್ಲದ ನಿರ್ಮೋಹಿ ॥ಪಲ್ಲವಿ॥

ಮಾತೆಪಿತರುಗಳುದರದ ಜಾತ ಜನಿತನು ಅಲ್ಲ
ಶ್ವೇತ ಪೀತ ಕಪೋತ ಷಡುವರ್ಣರಹಿತ
ನವಮಾಸ ತುಂಬಿದ ಮೂರುತಿ ತಾನಲ್ಲ
ಅವಿರಳ ಲಿಂಗದ ಕಳೆಯ ಬೆಳಗು ತಾ ಶರಣ ॥೧॥

ನಡೆಯ ಕಲಿವಲ್ಲಿ ನೋಡಿಳೆಯ ಹಂಗಿಗನಲ್ಲ
ನುಡಿಯ ಸಡಗರದಲಾದ ಬಿಂದು ತಾನಲ್ಲ
ಪದುಮ ಪರಿಮಳಕೆಱಗುವ ಭ್ರಮರ ತಾನಲ್ಲ
ಭವದ ಕುಳವನು ಗೆಲಿದ ನಿಭ್ರಾಂತ ಶರಣ ॥೨॥

ಜಾಗ್ರ ಸ್ವಪ್ನ ಸುಷುಪ್ತಿಯಾಗು ಅನಿಮಿಷನಲ್ಲ
ಆಗಮಕುಳದಲಾದ ಭೋಗಿ ತಾನಲ್ಲ
ತೇಜಸರಂಜನೆಯ ಗಣಿತಗುಣಿತನು ಅಲ್ಲ
ಸಹಜ ನಿತ್ಯನು ತಾನಭೇದ್ಯ ಶರಣ ॥೩॥

ಬಿಂದು ಕಳೆಯಾ ಸುಖದ ಶಯನ ಸಂಪರ್ಕನಲ್ಲ
ಒಂದು ಚಂದದಲಿ ಕಂದಮೂಲವ ಗೆಲಿದ
ಸಂದಳಿದ ಸ್ವಯಸುಖವನೊಂದು ಮಾಡಿ ತ್ರಿ-
ಬಂಧ ಭೇದವ ಗೆಲಿದ ನಿಷ್ಕಾಮಿ ಶರಣ ॥೪॥

೧-೧ X (ಮೂ)

ಚಂದ್ರಧರನೂ ಅಲ್ಲ ಚಂದ್ರಪೂರಿತನಲ್ಲ
ಇಂದ್ರಚಾಪದ ಪರಿಯ ಪ್ರಭಾವ ತಾನಲ್ಲ
ಭೃಂಗ ನುಂಗಿದ ರುಚಿಯನೊಂದುಮಾಡಿ
ಗೊಹೇಶ್ವರನೆಂಬ ಲಿಂಗದ ಹಂಗನಳಿದ ಶರಣ ॥೫॥

ಪದ ಸಹ ವಚನ: ॥೪೭॥

ಇಂತು ಪ್ರಭುದೇವರು ಮರುಳುಶಂಕರದೇವರ ಶರಣತ್ವದ ಮಹಾತ್ಮೆಯನು ನಿರೂಪಿಸಿದ ಪ್ರಸ್ತಾವದಲ್ಲಿ ಬಸವರಾಜದೇವರು ಬಿನ್ನೈಸಿದ ಪ್ರಸ್ತಾವದ ವಚನ:

೪೩೫

ಅಯ್ಯಾ, ನಿಮ್ಮ ಶರಣರು ಪರಮಸುಖಿಗಳಯ್ಯಾ.
ಅಯ್ಯಾ, ನಿಮ್ಮ ಶರಣರು
ಕಾಯವೆಂಬ ಕರ್ಮಕ್ಕೆ ಹೊದ್ದದ ನಿಷ್ಕಾಮಿಗಳಯ್ಯಾ,
ಅಯ್ಯಾ, ನಿಮ್ಮ ಶರಣರು ಮನದಲ್ಲಿ ನಿರ್ಲೇಪಜ್ಞಾನಿಗಳಯ್ಯಾ.
ಕೂಡಲಸಂಗಮದೇವಯ್ಯಾ,
ನಿಮ್ಮ ಶರಣರ ಘನವನೆನಗೆ ಹೇಳಲು,
ನಾನು ಕೇಳಲಮ್ಮದೆ ನಮೋ ಎನುತಿರ್ದೆನು ಕಾಣಾ ಪ್ರಭುವೆ! ॥೪೮॥

ಮತ್ತಂ,

೪೩೬

ಅಯ್ಯಾ, ನಿಮ್ಮ ಶರಣರ ನಿಲವ
ಸ್ವರ್ಗ ಮರ್ತ್ಯ ಪಾತಾಳದೊಳಗೆ ಬಲ್ಲವರಿಲ್ಲಯ್ಯಾ,
ಅಘಟಿತಘಟಿತರು, ಅಖಂಡಿತಮಹಿಮರು!
ನಿಜದಲ್ಲಿ ನಿರ್ಲೇಪಭಾವಕರು,
ಕೂಡಲಸಂಗಮದೇವಾ,
ನಿಮ್ಮ ಶರಣರ ನಿಲವನಱಿವರೆ ನಾನೇತಱವನಯ್ಯಾ? ॥೪೯॥

ಇಂತು ಮರುಳುಶಂಕರದೇವರ ಘನವನು ಪ್ರಭುದೇವರು ಬಸವರಾಜದೇವರು ಆಶ್ಚರ್ಯಂಗೊಂಡು ಕೊಂಡಾಡುತ್ತಿರಲು, ಅಲ್ಲಿ ಚಿಕ್ಕದಣ್ಣಾಯಕರು ಬಿನ್ನೈಸಿದ ಪ್ರಸ್ತಾವದ ವಚನ:

೪೩೭

ಕಾಯವಳಿದರೇನು? ಕಾಯ ಉಳಿದರೇನು?
ಕಾಯ ಬಯಲಾದರೇನು? ಮನ ಮನ ಲಯವಾಗಿ,
ಘನಕ್ಕೆ ಘನವಾದ ಶರಣರ ಕಂಡಡೆ, ಕೂಡಲಚೆನ್ನಸಂಗಮನೆಂದು
ಶಬುದ ಮುಗುದವಾಗಿರಬೇಕಲ್ಲದೆ,
ಚೋದ್ಯಕ್ಕೆ ಕಾರಣವೇನು ಹೇಳಾ ಸಂಗನಬಸವಣ್ಣಾ? ॥೫೦॥

ಮತ್ತಂ,

೪೩೮

ಆದಿಯಲ್ಲಿ ಹುಟ್ಟಿತ್ತಲ್ಲ; ಅನಾದಿಯಲ್ಲಿ ಬೆಳೆಯಿತ್ತಲ್ಲ.
ಮೂರ್ತಿಯಲ್ಲಿ ನಿಂದುದಲ್ಲ;
ಅಮೂರ್ತಿಯಲ್ಲಿ ಭಾವಿಯಲ್ಲ;
ಅಱಿವಿನೊಳಗೆ ಅಱಿದುದಲ್ಲ; ಮಱಹಿನೊಳಗೆ ಮಱಿದುದಲ್ಲ.
ಎಂತಿರ್ದಡಂತೆ ಬ್ರಹ್ಮ ನೋಡಾ!
ಮನ ಮನ ಲೀಯವಾಗಿ, ಘನ ಘನ ಒಂದಾದರೆ,
ಮತ್ತೆ ಮನಕ್ಕೆ ವಿಸ್ಮಯವ ಮಾಡಲುಂಟೆ?
ಕೂಡಲಚೆನ್ನಸಂಗನ ಶರಣರು
ಕಾಯವೆಂಬ ಕಂಥೆಯ ಕಳೆಯದೆ ಬಯಲಾದರೆ;
ನಿಜವೆಂದು ಪರಿಣಾಮಿಸಬೇಕಲ್ಲದೇ
ಅಂತಿಂತೆನಲುಂಟೆ ಸಂಗನಬಸವಣ್ಣಾ? ॥೫೧॥

ಇಂತೀ ಶ್ರೀಮತ್ ಸಕಲಗಣ ಪುರಾತನರೊಳ್ ಪ್ರಭುದೇವರು
ಮಹಾನುಭಾವಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್
ಮರುಳುಶಂಕರದೇವರ ಸಂಪಾದನೆಗಂ
ಷಷ್ಠಮೋಪದೇಶಂ ಸಮಾಪ್ತಂ
ಅಂತು ವಚನ ೪೩೮ ಕಂ ಮಂಗಳಮಹಾ ಶ್ರೀ

❖

೭
ಬಸವೇಶ್ವರನ ಸಂಪಾದನೆ

*ಕಂದ:

ಆದಿಯನಾದಿಯ ಭೇದವ
ಸಾದರದಿಂ ತೋಱೆ ಜಂಗಮಪ್ರಾಣತ್ವದ
ಹಾದಿಯನಱುಹಿಸಿ ಪ್ರಭುವರ
ಮೇದಿನಿಯೊಳ್ ಬಸವರಾಜಗುಸುರ್ದುದ ಪೇಳ್ವೆಂ. ॥೧॥

ಅದೆಂತೆಂದೊಡಾ ಪ್ರಭುದೇವರು ಮರುಳುಶಂಕರದೇವರಿಗೆ ನಿರ್ವಯಲ ನಿಜವಂ ಅಱುಹಲು, ಆ ಮರುಳುಶಂಕರದೇವರು ನಿರವಯವನ್ನೈದಲು, ಅಲ್ಲಿ ಚೆನ್ನಬಸವರಾಜದೇವರು ಮಡಿವಾಳಯ್ಯಗಳು ಹಡಪದಪ್ಪಣ್ಣಗಳು ಸೊಡ್ಡಳ ಬಾಚರಸರು ಕಿನ್ನರ ಬ್ರಹ್ಮಯ್ಯಗಳು ಮುಖ್ಯವಾದ ಸಮಸ್ತ ಪುರಾತನರೆಲ್ಲ ಆಶ್ಚರ್ಯಗೊಂಡು ಆ ಮರುಳುಶಂಕರದೇವರ ಘನವ ಕೊಂಡಾಡುತ್ತಿರಲು, ಆ ಮಹಾಗಣತಿಂಥಿಣಿಯನು ಬಸವರಾಜದೇವರು ನೋಡಿ ಹೃದಯಕಮಲವರಳಿ, ಹಾರೈಸಿ ಪೂರೈಸಿ ಪರಮಾನಂದದಿಂ ಕುಣಿದಾಡುತ್ತಿರ್ದ ಪ್ರಸ್ತಾವದ ವಚನ:

೪೩೯

[1]ಸಸಿಯ[1] ಮೇಲೆ ಸಾಗರವರಿದಂತಾಯಿತ್ತಯ್ಯಾ ಎನ್ನ ಭಕ್ತಿ!
ಆನಂದದಿಂದ ಕುಣಿಕುಣಿದಾಡುವೆ!
ಆನಂದದಿಂದ ನಲಿನಲಿದಾಡುವೆ!
ಕೂಡಲಸಂಗನ ಶರಣರು ಬಂದರೆ
ಉಬ್ಬಿ ಕೊಬ್ಬಿ ನಲಿನಲಿದಾಡುವೆ ! ॥೧॥

ಮತ್ತಂ,

೪೪೦

ಅಯ್ಯಾ, ನಿಮ್ಮ ಶರಣರ ಸಂಗಸುಖವನೇನೆಂದುಪಮಿಸುವೆನಯ್ಯಾ!
ನಿಮ್ಮ ಶರಣರ ಕೂಡೆ ಸಮಗೋಷ್ಠಿಯ

---

* + ಶ್ರೀಗುರುಬಸವಲಿಂಗಾಯ ನಮಃ (ಮೂ) ೧-೧ ಶಶಿಯ (ಮೂ)

ಮಾಡುವುದನುಪಮಿಸಲಮ್ಮೆನಯ್ಯಾ.
ಕೂಡಲಸಂಗಾ, ನಿಮ್ಮ ಪ್ರಮಥರೆಲ್ಲರು ನೆರೆದ
ಗಣತಿಂಥಿಣಿಯೊಳಗೆನ್ನನೇನೆಂದಱಿಯದೆ
ಅಗಲದಂತಿರಿಸಯ್ಯಾ. ನಾ ನಿಮ್ಮ ಧರ್ಮದ ಕವಿಲೆ. ॥೨॥

ಮತ್ತಂ,

೪೪೧

ಅಯ್ಯಾ ನಿಮ್ಮ ಮಹಾನುಭಾವಿಗಳ ಸಂಗದಿಂದೆನ್ನ
ತನು ಶುದ್ಧವಾಯಿತ್ತು; ಮನ ಶುದ್ಧವಾಯಿತ್ತು,
ಧನ ಶುದ್ಧವಾಯಿತ್ತು; ಎನ್ನ ಸರ್ವಾಂಗ ಶುದ್ಧವಾಯಿತ್ತು.
ವಾರಿಕಲ್ಲ ಪುತ್ಥಳಿಯನಪ್ಪಿಕೊಂಡಂತಾಯಿತ್ತು.
ಕೂಡಲಸಂಗಮದೇವಾ,
ನಿಮ್ಮ ಶರಣ ಪ್ರಭುದೇವರ ಕೃಪೆಯಿಂದ
ಎನಗೊದಗಿದ ಘನವನೇನೆಂದುಪಮಿಸುವೆನು! ॥೩॥

ಈ ಹೀಂಗೆಂದು ಬಸವರಾಜದೇವರು ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೪೪೨

ಕಾಯಗೊಂಡು ಹುಟ್ಟಿದವರು
ದೇವರಾದಡಾಗಲಿ, ಈವರಾದಡಾಗಲಿ,
ಮಾಯೆಯ ಸಾಧಿಸಿ ಗೆಲುವುದರಿದು ನೋಡಾ.
ಮನದ ತಮಂಧವ ಗೆಲಿದು,
ನೆನೆದು ಸುಖಿಯಾದಹೆನೆಂಬವರ ಬೆಂಬತ್ತಿ ಕಾಡಿತ್ತು ಕರ್ಮ,
ಗೊಹೇಶ್ವರಲಿಂಗವ ಕಿಱಿಕಿಱಿದಾಗಿ ನೆನೆದರೆ,
ಹಿರಿಹಿರಿದಾಗಿ ಕಾಡುವುದು ನೋಡಾ ಮಱಹು!
ಸಂಗನಬಸವಣ್ಣಾ, ನೀ ನೆನೆದ ನೆನಹು ಆರಂತಹದಲ್ಲ ನೋಡಾ. ॥೪॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ತಾವದ ವಚನ:

೪೪೩

ಕರಿ ಘನ, ಅಂಕುಶ ಕಿಱಿದೆನಬಹುದೇ ಅಯ್ಯಾ?
ಗಿರಿ ಘನ, ವಜ್ರ ಕಿರಿದೆನಬಹುದೇ ಅಯ್ಯಾ
ತಮಂಧ ಘನ, ಜ್ಯೋತಿ ಕಿಱಿದೆನಬಹುದೇ ಅಯ್ಯಾ?
ಮಱಹು ಘನ, ನಿಮ್ಮ ನೆನಹು ಕಿಱಿದೆನಹುದೇ?
ಕೂಡಲಸಂಗಮದೇವಾ, ನಿಮ್ಮ ಕೃಪೆಯ ಘನವ ನೀವೆ ಬಲ್ಲಿರಿ. ॥೫॥

ನಿಮ್ಮ ಸ್ಮರಣೆಯ ಘನದ ಮುಂದೆ ಮಾಯೆ ನಿಲಲರಿಯದು. ನಿಮ್ಮ ನೆನಹು ಮೀಱುವ ಘನವಿಲ್ಲೆಂದು ಬಸವರಾಜದೇವರು ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೪೪೪

ನೆನೆದೆಹೆನೆಂದರೆ ಮನಕ್ಕೆ ಸಿಲುಕದು.
ಅಱಿದೆಹೆನೆಂದರೆ ಕುಱುಹಿಂಗೆ ಬಾರದು.
ಕಂಡೆಹೆನೆಂದರೆ ಮೂರ್ತಿಯಲ್ಲ.
ತನುವಿನೊಳಗಿಲ್ಲ! ಮನದೊಳಗಿಲ್ಲದ ಘನವು
ನಿನ್ನ ಮನಕ್ಕೆ ವೇದ್ಯವಾದ ಪರಿ ಎಂತಯ್ಯಾ?
ಗೊಹೇಶ್ವರನೆಂಬ ಲಿಂಗವು ಜಗದ ಕಣ್ಣಿಂಗೆ ಕತ್ತಲೆಯ ಕವಿಸಿ,
ತನ್ನ ತಪ್ಪಿಸಿಕೊಂಡಿಪ್ಪ ಭೇದ[೧] ನಿನ್ನೊಳಡಗಿದ ಪರಿ
ಎಂತು ಹೇಳಾ ಸಂಗನಬಸವಣ್ಣಾ? ॥೬॥

ವಾಙ್ಮನೋತೀತವಾದ ವಸ್ತು ನಿನ್ನ ಮನದೊಳಡಗಿದ ಪರಿ ಎಂತೆಂದು ಪ್ರಭುದೇವರು ಬೆಸಗೊಳಲು, ಅಲ್ಲಿ ಬಸವರಾಜದೇವರು ಬಿನ್ನೈಸಿದ ವಚನ:

೪೪೫

ಜಗವ ಸುತ್ತಿರ್ಪುದು ನಿನ್ನ ಮಾಯೆಯಯ್ಯಾ;
ನಿನ್ನ ಸುತ್ತಿರ್ಪುದು ಎನ್ನ ಮನ ನೋಡಯ್ಯಾ!
ನೀನು ಜಗಕ್ಕೆ ಬಲ್ಲಿದನು; ನಿನಗೆ ನಾನು ಬಲ್ಲಿದನು ಕಂಡಯ್ಯಾ!
ಕರಿಯು ಕನ್ನಡಿಯೊಳಡಗಿದಂತೆ
ಎನ್ನೊಳಗಡಗಿದೆ ಕೂಡಲಸಂಗಮದೇವಾ! ॥೭॥

ನೀನು ಮಹಾಘನಪರತತ್ವವಾದಡೇನು? ಎನ್ನ ಸೂಕ್ಷ್ಮವಪ್ಪ ಅಂತರಂಗದೊಳಗೆ ಅಡಗಿದಿರೆಂದು ಬಸವರಾಜದೇವರು ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೪೪೬

ಅಂತರಂಗದಲ್ಲಿ ಅಡಗಿತ್ತೆಂದರೆ, ಭಾವಕ್ಕೆ ಪೂಜ್ಯವಲ್ಲ.
ಬಹಿರಂಗದಲ್ಲಿ ಅಡಗಿತ್ತೆಂದರೆ, ಕ್ರಿಯಾಬದ್ಧವಲ್ಲ.
ಅಱಿವಿನೊಳಗಡಗಿತ್ತೆಂದರೆ, ಮತಿಗೆ ಹವಣಿಲ್ಲ.
ಭಾವ ನಿರ್ಭಾವ ನಿಶ್ಶೂನ್ಯವನು ಕಾಬ ಪರಿ ಎಂತು ಹೇಳಾ?
ಕಂಡು ತನ್ನೊಳಗಿಂಬಿಟ್ಟುಕೊಂಬ ಪರಿ ಎಂತು ಹೇಳಾ?
ಗೊಹೇಶ್ವರನೆಂಬ ಲಿಂಗವನಱಿದು
ಕೂಡಿ ಸುಖಿಯಹ ಪರಿ ಎಂತು ಹೇಳಾ ಸಂಗನಬಸವಣ್ಣಾ? ॥೮॥

೧+ವ(ಮೂ)

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ತಾವದ ವಚನ:

೪೪೭

ಎನ್ನ ತನು ಮನವೆಂಬೆರಡನೂ
ಗುರು ಕಳೆದು ಏಕವ ಮಾಡಿದನಾಗಿ,
ಎನ್ನಂತರಂಗ ಬಹಿರಂಗವೆಂಬೆರಡೂ ನಿಮ್ಮವು ನೋಡಾ!
ನಿಮ್ಮಂತರಂಗದೊಳಗೆ ನಿಮ್ಮನಿಂಬಿಟ್ಟುಕೊಂಬೆ,
ನಿಮ್ಮ ಬಹಿರಂಗದಲ್ಲಿ ನೀವಾಗಿ ಪೂಜಿಸುವೆನು.
ನಿಮ್ಮ ಅಱಿವಿನಿಂದ ನಿಮ್ಮನೆ ಅಱಿವೆ ಕಾಣಾ ಕೂಡಲಸಂಗಮದೇವಾ! ॥೯॥

ಇಂತು ಬಸವರಾಜದೇವರು ಬಿನ್ನೈಸಲು. ಇ[1]ದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೪೪೮

ಸಂಗದಿಂದಾಯಿತ್ತು ತನು.
ಆ ತನುವಿನಿಂದಾಯಿತ್ತು ಮಱವೆ.
ಆ ಮಱವೆಯಿಂದಾಯಿತ್ತು ನೋಡಾ, ನೀನಾನೆಂಬುದು.
ನೀನೆಂಬ ಬಹಿರಂಗವಂತಿರಲಿ.
ಈ ಉಭಯ ಭಾವವಲ್ಲದೆ,
ನಿನ್ನಿಂದ ನೀನಱಿದಿಹೆನೆಂಬುದು ವಿಪರೀತ ಭಾವ.
ಈ ಅಱಿವು ಮಱವೆಯಾಟದ ಭ್ರಾಂತು ಬಿಡದು.
ಗೊಹೇಶ್ವರಲಿಂಗವು ನಿನ್ನಲ್ಲಿ ನಿಂದ ಪರಿ
ಎಂತು ಹೇಳಾ ಸಂಗನಬಸವಣ್ಣಾ? ॥೧೦॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ತಾವದ ವಚನ:

೪೪೯

ಮರುಳು ತಲೆ, ಹುರುಳು ತಲೆ ನೀನೆ ದೇವಾ.
ಹೆಂಗೂಸು ಗಂಡುಗೂಸು ನೀನೆ ದೇವಾ.
ಎಮ್ಮಕ್ಕನ ಗಂಡನು ನೀನೆ ದೇವಾ ಕೂಡಲಸಂಗಮದೇವಾ,
ಭ್ರಾಂತಳಿದು ಭಾವ ನೆಲೆಗೊಂಡಿತ್ತಾಗಿ. ॥೧೧॥

ಎನ್ನಱಿವು ಮಱವೆಯು, ಎನ್ನ ಶಕ್ತಿ ಶಿವಾತ್ಮತತ್ತ್ವವು ನೀನೆಯಲ್ಲದೆ ಅನ್ಯತ್ರವಿಲ್ಲ. ಎನ್ನ ಸುಜ್ಞಾನಶಕ್ತಿಯಲ್ಲಿ ಲಿಂಗೋಪಭೋಗಿಯಾಗಿ ನೀನಲ್ಲದನ್ಯವಿಲ್ಲ. ಎನ್ನ ಭ್ರಾಂತಳಿದ ಭಾವವೂ

---

೧. ಅ (ಮೂ)

ನೀವಲ್ಲದೆ ಇಲ್ಲವೆಂದು ಬಸವರಾಜದೇವರು ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೪೫೦

ಅಜ್ಞಾನ ಸುಜ್ಞಾನಗಳೆರಡೂ
ಶಿವನೆಂದರೆ ಶಿವಜ್ಞಾನಿಗಳು ಮೆಚ್ಚುವರೇ?
ಶಿವಶಕ್ತಿಗಳೆರಡೂ ನೀನೆ ಎಂದರೆ
ಮಹಾನುಭಾವಿಗಳು ಪರಿಣಾಮಿಸುವರೇ?
ತನ್ನ ತಾನಾರೆಂಬುದನಱಿಯದೆ, ಅನ್ಯವೆಲ್ಲವೂ ಬೊಮ್ಮವೆಂಬ
ಈ ಕರ್ಮದ ನುಡಿಯ ಮೆಚ್ಚುವನೆ ನಮ್ಮ ಗೊಹೇಶ್ವರಲಿಂಗವು? ॥೧೨॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ತಾವದ ವಚನ;

೪೫೧

ಅಱಿವು[೧]ವಿಡಿದು ಅಱಿವನಱಿದು,
ಅಱಿವೇ ನೀನೆಂಬ ಭ್ರಾಂತು ಎನಗಿಲ್ಲವಯ್ಯಾ!
ಮರಹುವಿಡಿದು ಮಱಹ ಮಱೆದು,
ನೀನೆಂಬ ಮಱಹಿನವ ನಾನಲ್ಲವಯ್ಯಾ!
ದೇಹ ಪ್ರಾಣಂಗಳ ಹಿಂಗಿ, ದೇಹವಿಡಿದು
ದೇಹ ನಿಮ್ಮದೆಂಬ ಭ್ರಾಂತು ಸೂತಕಿಯಾನಲ್ಲವಯ್ಯಾ!
ನಿನ್ನ ಅಱಿದ ಅಱಿವ ಭಿನ್ನವಿಟ್ಟು ಕಂಡೆನಾದರೆ
ನಿಮ್ಮಾಣೆ ಕಾಣಾ ಕೂಡಲಸಂಗಮದೇವಾ! ॥೧೩॥

ಈ ವಚನದ ತಾತ್ಪರ್ಯವ ಕೇಳಿದ ಪ್ರಭುದೇವರು ದೇವಭಕ್ತನೆಂಬ ನಾಮಂಗಳೆರಡೂ ನಿಮ್ಮಲ್ಲಿ ತೋಱುತ್ತಿದ್ದಾವೆ. ಇವು ಅಡಗಿದ ಪರಿ ಹೇಂಗೆಂದು ಬೆಸಗೊಂಬ ಪ್ರಸ್ತಾವದ ವಚನ:

೪೫೨

ಕಾಯವಿಡಿದು ಲಿಂಗವಿದೆ; ಲಿಂಗವಿಡಿದು ಕಾಯವಿದೆ.
ಅಱಿವುವಿಡಿದು ವಚನವಿದೆ; ವಚನವಿಡಿದು ತೋಱುವ ಅಱಿವಿದೆ.
ಲಿಂಗಾಂಗವೆರಡೂ ನಿಮ್ಮಲ್ಲಿ ಐಕ್ಯವಾದ ಪರಿ ಎಂತು ಹೇಳಾ?
ಸ್ವರವಿಡಿದು ಶಬುದ ಸಮರಸವಾದ ಪರಿ ಎಂತು ಹೇಳಾ
ದೇವ ಭಕ್ತನೆಂಬ ನಾಮ ಸೀಮೆಯಡಗಿ,
ಗೊಹೇಶ್ವರಲಿಂಗದಲ್ಲಿ ತದುಗತವಾಗಿದ್ದ ಪರಿ
ಎಂತು ಹೇಳಾ ಸಂಗನಬಸವಣ್ಣಾ? ॥೧೪॥

---

೧ X (ಮೂ)

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ತಾವದ ವಚನ:

೪೫೩

ಘನಗಂಭೀರ ಮಹಾಘನದೊಳಗೆ
ಘನಕ್ಕೆ ಘನವಾಗಿರ್ದೆನಯ್ಯಾ.
ಕೂಡಲಸಂಗನೆಂಬ ಬೆಳಗಿನೊಳಗೆ ಬೆಳಗಾಗಿದ್ದು,
ಶಬ್ದ ಮುಗ್ಧವಾಗಿರ್ದುದನೇನೆಂಬೆನಯ್ಯಾ! ॥೧೫॥

ಈ ಹೀಂಗೆಂದು ಬಸವರಾಜದೇವರು ಬಿನ್ನೈಸಲು, ಇದಕ್ಕೆ ಪ್ರಭುದೇವರು ಪ್ರಸನ್ನರಾಗಿ ಆ ಬಸವಣ್ಣನ ಸ್ತೋತ್ರವ ಮಾಡುವ ವಚನ:

೪೫೪

ಆದಿಯ ಲಿಂಗವ ತೋಱಿದ ಅನಿಮಿಷನ ಕಂಡೆನಯ್ಯಾ ಇಂದು.
ಕೃತಯುಗದ ಸ್ಕಂದನೆಂಬ ಗಣೇಶ್ವರನ ಕಂಡೆನಯ್ಯಾ ಇಂದು.
ತ್ರೇತಾಯುಗದ ನೀಲಲೋಹಿತನೆಂಬ ಗಣೇಶ್ವರನ ಕಂಡೆನಯ್ಯಾ ಇಂದು.
ದ್ವಾಪಾರಯುಗದ ವೃಷಭನೆಂಬ ಗಣೇಶ್ವರನ ಕಂಡೆನಯ್ಯಾ ಇಂದು.
ಕಲಿಯುಗದಲ್ಲಿ ಅನಿಮಿಷ ಬಸವನೆಂಬ ಗಣೇಶ್ವರನ ಕಂಡೆನಯ್ಯಾ ಇಂದು.
ಎನ್ನ ಕಂಡವರನು, ನಿನ್ನ ಕಂಡವರನು ಇಂದು ಕಂಡೆ ಕಾಣಾ
ಗೊಹೇಶ್ವರಾ! ॥೧೬॥

ಇಂತು ಪ್ರಭುದೇವರು ಬಸವರಾಜದೇವರ ಸ್ತೋತ್ರಮಂ ಮಾಡಲು, ಆ ಬಸವರಾಜದೇವರು ಪ್ರಭುದೇವರ ಸ್ತೋತ್ರಮಂ ಮಾಡುವ ಪ್ರಸ್ತಾವದ ವಚನ:

೪೫೫

ಮರುಗದ ಗಿಡುವಿನಂತೆ ಹುಟ್ಟುತ್ತವೆ ಪರಿಮಳ!
ಎರವಿನ ಬಣ್ಣ ದೊರೆಗೆಡಿಸಿದ ಪರಿಯ ನೋಡಾ!
ಹರನ ಪ್ರೇರಣೆಯೊಳಗೆ ಹಿರಿದೊಂದು ವಾರುಧಿ
ವಾರುಧಿಯೊಳಗಣ ಕಮಲ ಬಾಡಿ,
ಕಮಲದೊಳಗೆ ಸುಳಿದ ಭ್ರಮರನ ಪಕ್ಕ ಮುಱಿದುರುಳಿದರೆ
ನಿರಂಜನವಾಯಿತ್ತು ನೋಡಾ !
ಹಱಿಗೊಯಿದ ಮಿಂಚಿನ ಗೊಂಚಲ ನೆಱೆವೋತು
ಇಂದುಕೋಟಿಪ್ರಭೆಯ ಶಾಂತಿಯನೊಳಕೊಂಡು,
ಕೂಡಲಸಂಗಮದೇವರು ನೆಱೆವೋತ
ಪ್ರಭುದೇವರ ಶ್ರೀಪಾದಪದ್ಮದಲ್ಲಿ ಭೃಂಗನಾಗಿ ಬದುಕಿದೆನು ! ॥೧೭॥

ಈ ಹೀಂಗೆಂದು ಬಸವರಾಜದೇವರು ಸ್ತೋತ್ರಮಂ ಮಾಡುತ್ತಿರಲು, ಇದಕ್ಕೆ ಪ್ರಭುದೇವರು ಆ ಬಸವರಾಜದೇವರ ಕೊಂಡಾಡಿ ನಿರೂಪಿಸಿದ ವಚನ:

೪೫೭

ಆಯಿತ್ತು ಬಸವಾ ನಿನ್ನಿಂದ ಗುರುಸ್ವಾಯತವೆನಗೆ.
ಆಯಿತ್ತು ಬಸವಾ ನಿನ್ನಿಂದ ಲಿಂಗಸ್ವಾಯತವೆನಗೆ.
ಆಯಿತ್ತು ಬಸವಾ ನಿನ್ನಿಂದ ಜಂಗಮಸ್ವಾಯತವೆನಗೆ.
ಆಯಿತ್ತು ಬಸವಾ ನಿನ್ನಿಂದ ಪ್ರಸಾದಸ್ವಾಯತವೆನಗೆ.
ಇಂತೀ ಚತುರ್ವಿಧ ಸ್ವಾಯತವನು ನೀನೆ ಮಾಡಿದೆಯಾಗಿ,
ನಮ್ಮ ಗೊಹೇಶ್ವರಲಿಂಗಕ್ಕೆ ವಿಳಾಸವಾದೆಯಲ್ಲೈ ಸಂಗನಬಸವಣ್ಣಾ!॥೧೮॥

ಇಂತು ಪ್ರಭುದೇವರು ಬಸವರಾಜದೇವರಿಂದ ಸರ್ವಸ್ವಾಯತವನೂ ಪಡೆದು ಕೃತಾರ್ಥನಾದೆನೆಂದು ಆ ಬಸವರಾಜದೇವರೊಡನೆ ನಿರೂಪವ ಕೊಡಲು, ಇದಕ್ಕೆ ಬಸವರಾಜದೇವರು ನಾನು ನಿಮ್ಮಿಂದ ಸರ್ವವನೂ ಅಱಿದೆನೆಂದು ಬಿನ್ನಹಂ ಮಾಡುವ ಪ್ರಸ್ತಾವದ ವಚನ:

೪೫೮

ಅಯ್ಯಾ, ನಿಮ್ಮ ಮುಟ್ಟಿದ ಗುಣದಿಂದಲಾನು
ಪೂರ್ವಾಚಾರಿಯಾದೆನಯ್ಯಾ.
ಅಯ್ಯಾ, ನಿಮ್ಮ ಮುಟ್ಟಿದ ಗುಣದಿಂದಲಾನು
ವೃಷಭನಾದೆನಯ್ಯಾ.
ಅಯ್ಯಾ, ನಿಮ್ಮ ಮುಟ್ಟಿದ ಗುಣದಿಂದಲಾನು
ಸಂಗನಬಸವಣ್ಣನಾಗಿ
[1]ಗೊಹೇಶ್ವರನ[1] ಶರಣನ ಮಹಾಬಸುಱೊಳಗೆ
ಕಂದನಾಗಿದ್ದೆ ಕಾಣಾ ಕೂಡಲಸಂಗಮದೇವಾ! ॥೧೯॥

ಈ ಹಿಂಗೆಂದು ಬಸವರಾಜದೇವರು ಬಿನ್ನೈಸಲು, ಇದಕ್ಕೆ ಪ್ರಭುದೇವರು ಗುರು ಲಿಂಗ ಜಂಗಮ ಪ್ರಸಾದವೆಂಬ ಮಹಾಘನವನು ಎನಗೆ ಕರತಳಾಮಳಕವ ಮಾಡಿ ನೀನೆ ತೋಱಿಸಿಕೊಟ್ಟೆಯೆಂದು ನಿರೂಪಿಸಿದ ಪ್ರಸ್ತಾವದ ವಚನ:

೪೫೯

ಗುರು ಒಂದೆ ಬಸುಱು; ಲಿಂಗ ಒಂದೆ ಬಸುಱು;
ಜಂಗಮ ಒಂದೆ ಬಸುಱು; ಪ್ರಸಾದ ಒಂದೆ ಬಸುಱು.
ಇವನಾರಯ್ಯಾ, ಅಮಳೋಕ್ಯವ ಮಾಡಿ ತೋಱಿದವರು?
ಇವನಾರಯ್ಯಾ, ಪ್ರಜ್ವಲಿತವ ಮಾಡಿ
ಬೇಱೆ ಬೇಱೆ ಕರತಳಾಮಳಕವ ಮಾಡಿ ತೋಱಿದವರು?
ಪೂರ್ವಾಚಾರಿ ಭಕ್ತಿಭಂಡಾರಿ ಬಸವಣ್ಣಾ,
ನೀನೆನಗೆ [1]ಗೊಹೇಶ್ವರ[1]ಲಿಂಗವ ತೋಱಿದೆಯಾಗಿ,
ಲೋಕಾದಿಲೋಕವೆಲ್ಲವು ಕಿಂಚಿತ್ತು ! ॥೨೦॥

೧-೧ ಗೊಗ್ಗೇಶ್ವರ(ಮೂ)

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ತಾವದ ವಚನ:

೪೫೯

ಎನ್ನಂತರಂಗದೊಳಗೆ ಅಱಿವಾಗಿ,
ಎನ್ನ ಬಹಿರಂಗದೊಳಗಾಚಾರವಾಗಿ ನೀನೆಡೆಗೊಂಡು,
ಎನ್ನ ಮನದೊಳಗೆ ಘನ ನೆನಹಾಗಿ ಮೂರ್ತಿಗೊಂಡು,
ಗುರುಸ್ಥಲ ಲಿಂಗಸ್ಥಲ ಜಂಗಮಸ್ಥಲ ಪ್ರಸಾದಿಸ್ಥಲವೆಂಬ
ಚತುರ್ವಿಧವನು ಎನಗೆ ಸ್ವಾಯತವ ಮಾಡಿ ತೋಱಿ,
ಪ್ರಾಣಲಿಂಗವೆಂಬ ಹಾದಿಯ ಸೆಱಗ ತೋಱಿಸಿ
ಎಲ್ಲಾ ಅಸಂಖ್ಯಾತರನು ಪಾವನವ ಮಾಡಿದಿರಾಗಿ,
ಕೂಡಲಸಂಗಮದೇವಾ, ನಿಮ್ಮಿಂದ ಸಕಲ ಸನುಮತವ ನಾನಱಿದೆನಲ್ಲದೆ,
ಎನ್ನಿಂದ ನೀನಾದೆಯೆಂಬುದ
ನಿಮ್ಮ ಪ್ರಮಥರು ಮೆಚ್ಚರು ನೋಡಯ್ಯಾ! ॥೨೧॥

ಇದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೪೬೦

ಆದಿಯ ಲಿಂಗ ನಿನ್ನಿಂದೆನಗಾಯಿತ್ತು.
ಅನಾದಿಯ ಜ್ಞಾನ ನಿನ್ನ ನೆನೆದಡೆನಗಾಯಿತ್ತು.
ನಿನ್ನ ಕೃಪೆಯಿಂದ ಪ್ರಾಣಲಿಂಗವೆಂದಱಿದೆನೆಂಬುದ
ನಿಮ್ಮ ಪ್ರಮಥರೆ ಬಲ್ಲರು.
[೧]ಗೊಹೇಶ್ವರ[೧] ಸಾಕ್ಷಿಯಾಗಿ ಸಂಗನಬಸವಣ್ಣಾ,
ನಿಮ್ಮ ಪ್ರಸಾದದ ಶಿಶು ನಾನು ನೋಡಯ್ಯಾ! ॥೨೨॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ತಾವದ ವಚನ:

೪೬೧

ಆದಿ ಭಕ್ತ; ಅನಾದಿ ಜಂಗಮ.
ಆದಿ ಶಕ್ತಿ; ಅನಾದಿ ಶಿವನು ನೋಡಾ!
ಎನ್ನ ಆದಿಪಿಂಡಕ್ಕೆ ನೀನೆ ಆಧಾರವಾಗಿ ತೋಱಿದರೆ,
ನಿಮ್ಮ ಹೃದಯಕಮಲದಲ್ಲಿ ನಿಮ್ಮ ಕಂಡೆನು.
ಆ ಕಾಬ ಜ್ಞಾನವೆ ಜಂಗಮ.
ಆ ಜಂಗಮವಿಡಿದಲ್ಲದೆ ಲಿಂಗವ ಕಾಣಬಾರದು.

೧–೧ ಗೊಗ್ಗೇಶ್ವರ(ಮೂ)

ಆ ಜಂಗಮವಿಡಿದಲ್ಲದೆ ಗುರುವ ಕಾಣಬಾರದು.
ಆ ಜಂಗಮವಿಡಿದಲ್ಲದೆ ಪ್ರಸಾದವ ಕಾಣಬಾರದು
ಕಾಯ ಭಕ್ತ, ಪ್ರಾಣ ಜಂಗಮವೆಂಬ ವಚನವ ತಿಳಿಯಲು,
ಎನ್ನ ಪ್ರಾಣ ನೀವಲ್ಲದೆ ಮತ್ತಾರು ಹೇಳಯ್ಯಾ?
ಇದು ಕಾರಣ ನಿಮ್ಮ ಘನವ ಕಿಱಿದು ಮಾಡಿ,
ಎನ್ನನೊಂದು ಘನವ ಮಾಡಿ ನುಡಿವಿರಿ ಕೂಡಲಸಂಗಮದೇವಾ! ॥೨೩॥

ಈ ಹೀಂಗೆಂದು ಬಸವರಾಜದೇವರು ಬಿನ್ನೈಸಲು ಇದಕ್ಕೆ ಪ್ರಭುದೇವರ ಪ್ರತ್ಯುತ್ತರ :

ಳ೬೨

ಆದಿ ಜಂಗಮ, ಅನಾದಿ ಭಕ್ತನೆಂಬುದನಾರು ಬಲ್ಲರು
ಹೇಳಾ ಬಸವಣ್ಣಾ?
ನಿತ್ಯ ನಿರಾಕಾರ ಘನವು ಶಕ್ತಿ ಇಲ್ಲದೆ ಇದ್ದರೆ
ಆಗಳೆ ಬಯಲಾದ[1]ಹುದೆಂದು,
ನೀನು ಘನಚೈತನ್ಯವೆಂಬ ಕಾಯವ ಧರಿಸಿದರೆ,
ಆ ಬಯಲು ಪರಬ್ರಹ್ಮವೆಂಬ ನಾಮವನೆಯ್ದಿತ್ತು ನೋಡಾ!
ಆ ಮಹಾಘನವು ತನ್ನ ವಿನೋದದಿಂದ ಸಾಕಾರವನೆಯ್ದಿದರೆ,
ಧರ್ಮವೆಂಬ ಕಾಯವ ಧರಿಸಿ,
ಆ ಮೂರ್ತಿಗೆ ಆಧಾರವಾದೆಯಾಗಿ,
ಜಗದ ಕರ್ತ ಶಿವನೆಂಬ ನಾಮವಾಯಿತ್ತಲ್ಲಾ ಬಸವಣ್ಣಾ ನಿನ್ನಿಂದ!
ಜಂಗಮವೆ ಲಿಂಗವೆಂದು ನೀ ಭಾವಿಸಲಾಗಿ,
ನಿನ್ನ ಸನ್ನಿಧಿಯಿಂದ ಪ್ರತಿನಿಧಿಯಾಯಿತ್ತು ನೋಡಾ ಬಸವಣ್ಣಾ!
ಲಿಂಗವನು ನೀನು ಹಿಡಿದು ಪೂಜಿಸಲಾಗಿ,
ಲಿಂಗವು ಹೆಸರುವಡೆಯಿತ್ತು ನೋಡಾ ಬಸವಣ್ಣಾ!
ಪ್ರಸಾದವನು ನೀನು ಕೊಂಡು ಪಥವ ತೋಱಿದೆಯಾಗಿ,
ಪ್ರಸಾದವು ನಿನ್ನಿಂದ ಹೆಸರಾಯಿತ್ತು ನೋಡಾ ಬಸವಣ್ಣಾ!
ಇದು ಕಾರಣ, ನೀನೆ ಅನಾದಿ ಭಕ್ತ, ನಾನೆ ಅನಾದಿಯಿಂದತ್ತತ್ತ.
ನೀನು ಮಾಡಲಾಗಿ ಆನಾದೆನೆಂಬುದ
ನಮ್ಮ [2]ಗೊಹೇಶ್ವರನೆ[2] ಬಲ್ಲ ಕಾಣಾ ಸಂಗನಬಸವಣ್ಣಾ! ॥೨೪॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ತಾವದ ವಚನ:

---

೧ X(ಮೂ) ೨-೨ ಗೊಗ್ಗೇಶ್ವರನೆ(ಮೂ)

೪೬೩

ಜಂಗಮವೆ ಜ್ಞಾನರೂಪು,
ಭಕ್ತನೆ ಆಚಾರರೂಪೆಂಬುದೆ ತಪ್ಪದು ನೋಡಯ್ಯಾ!
ನಾನು ನಿಮ್ಮಲ್ಲಿ ಆಚಾರಿಯಾದಡೇನಯ್ಯಾ, ಜ್ಞಾನವಿಲ್ಲದನ್ನಕ್ಕ?
ತಲೆ ಇಲ್ಲದ ಮುಂಡದಂತೆ, ಜ್ಞಾನ ಉದಯವಾಗದ ಮುನ್ನವೆ
ತಲೆದೋಱುವ ಆಚಾರ ಉಂಟೇ ಜಗದೊಳಗೆ?
ಜ್ಞಾನದಿಂದ ಆಚಾರ, ಜ್ಞಾನದಿಂದ ಅನುಭಾವ,
ಜ್ಞಾನದಿಂದ ಪ್ರಸಾದವಲ್ಲದೆ
ಜ್ಞಾನವನುಳಿದು ತೋಱುವ ಘನವ ಕಾಣೆನು.
ಎನ್ನ ಆಚಾರಕ್ಕೆ ನೀನು ಜ್ಞಾನರೂಪಾದ ಕಾರಣ
ಸಂಗನಬಸವಣ್ಣನೆಂಬ ಹೆಸರುವಡೆದೆನು.
ಅನಾದಿಪರಶಿವನು ನೀನೆಯಾಗಿ,
ಘನಚೈತನ್ಯಾತ್ಮಕನೆಂಬ ಮಹಾಜ್ಞಾನವು ನೀನೆಯಾದೆಯಲ್ಲದೆ
ನಾನೆತ್ತ, ಶಿವತತ್ತ್ವವೆತ್ತ?
ಅಯ್ಯಾ, ಕೂಡಲಸಂಗಮದೇವರು ಸಾಕ್ಷಿಯಾಗಿ,
ನಾನು ಪ್ರಭುದೇವರ ತೊತ್ತಿನ ಮಗನೆಂಬುದ
ಮೂಱುಲೋಕವೆಲ್ಲವು ಬಲ್ಲುದು ಕಾಣಾ ಪ್ರಭುವೆ. ॥೨೫॥

ಈ ಹೀಂಗೆಂದು ಬಸವರಾಜದೇವರು ಬಿನ್ನೈಸಲು, ಇದಕ್ಕೆ ಪ್ರಭುದೇವರು ಪ್ರಸನ್ನರಾಗಿ ನಿರೂಪಿಸಿದ ಪ್ರಸ್ತಾವದ ವಚನ:

೪೬೪

ತನು ದಾಸೋಹ, ಅವಯವಂಗಳೆಲ್ಲವು ಆಚಾರ.
ಮನ ಪ್ರಾಣವೆಂಬವೆಲ್ಲಾ ಅಱುವಿನ ಮೂರ್ತಿ ನೋಡಾ!
ಒಳಗು ಹೊಱಗು, ಹೊಱಗೊಳಗೆಂಬುದನಱಿಯದ
ಸತ್ಯ ಸದಾಚಾರಿ ನೀನು,
ನಿನ್ನಳವನಱಿಯಲಾನೇತಱವನಯ್ಯಾ?
ಅಂತರಂಗದಲ್ಲಿ ಅಱಿವುಂಟಾದರೇನು?
ಎನ್ನ ಕಾಯದಲ್ಲಿ ಭಕ್ತಿಸ್ವಾಯತವಿಲ್ಲ.
ಆಚಾರವೆಂಬುದು ಅತ್ತತ್ತಲಿಲ್ಲ .
ಸರ್ವಾಚಾರಸಂಪನ್ನಾ, ನಿನ್ನಳವ ನಾನೆತ್ತ ಬಲ್ಲೆನಯ್ಯಾ!
[೧]ಗೊಹೇಶ್ವರ[೧] ಸಾಕ್ಷಿಯಾಗಿ,

೧-೧ ಗೊಗ್ಗೇಶ್ವರ (ಮೂ)

ನಿನ್ನ ಮಹಾಮನೆಯ ಕಾವಲ ಬಂಟ ನಾನೆಂಬುದ
ನಿಮ್ಮ ಪ್ರಮಥರೆಲ್ಲರು ಬಲ್ಲರು ಕಾಣಾ ಸಂಗನಬಸವಣ್ಣಾ! ॥೨೬॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ತಾವದ ವಚನ:

೪೬೫

ನಿಮ್ಮ ಕಂಡು ಕೈಮುಗಿದು ನಿಮಗೆ ಭಕ್ತನಾದೆನಲ್ಲದೆ,
ನಿಮ್ಮ ಕಾಣದಲೆ ಕೈಮುಗಿದ ಭಕ್ತಿಯುಂಟೇ ಅಯ್ಯಾ?
ನಿಮ್ಮ ಮುಟ್ಟಿ ಪೂಜಿಸಿ ಆಚಾರಿಯಾದೆನಲ್ಲದೆ,
ನಿಮ್ಮ ಮುಟ್ಟದಡೆ ಎನಗಾಚಾರವೆಲ್ಲಿಯದಯ್ಯಾ?
ನಿಮ್ಮ ಘನವನು ಮನದಲ್ಲಿ ನೆನದು ಧರಿಸಿದ ಕಾರಣ
ಜ್ಞಾನೋದಯವಾಯಿತ್ತಲ್ಲದೆ
ನೀವಿಲ್ಲದಡೆ ಎನಗೆ ಜ್ಞಾನವೆಲ್ಲಿಯದಯ್ಯಾ?
ಇಂತು ಆವ ಮುಖದಲ್ಲಿಯು ಎನ್ನನಾಗುಮಾಡಲೆಂದು,
ನೀನು ಮುಂದುಗೊಂಡಿದ್ದ ಕಾರಣ
ನಿನ್ನ ಸನ್ನಿಧಿಯಲಾನು ಸದಾಚಾರಿಯಾದಡೆ,
ನಿಮಗಾನು ಸರಿಯೆ? ಕೂಡಲಸಂಗಮದೇವಾ,
ಜಂಗಮಮುಖದಿಂದ ಸಂಗನಬಸವಣ್ಣ ಬದುಕಿದನೆಂಬುದ
ಮೂಱುಲೋಕವೆಲ್ಲವು ಬಲ್ಲುದು ಕಾಣಾ ಪ್ರಭುವೆ? ॥೨೭॥

ಈ ಹೀಂಗೆಂದು ಬಸವರಾಜದೇವರು ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೪೬೬

ಬಸವಣ್ಣಾ, ನಿನ್ನ ಕಂಡು ಕಂಡು ಎನ್ನ ತನು ಬಯಲಾಯಿತ್ತು!
ಬಸವಣ್ಣಾ, ನಿನ್ನ ಮುಟ್ಟಿ ಮುಟ್ಟಿ ಎನ್ನ ಕ್ರೀ ಬಯಲಾಯಿತ್ತು.
ಬಸವಣ್ಣಾ, ನಿನ್ನ ನೆನೆನೆನೆದು ಎನ್ನ ಮನ ಬಯಲಾಯಿತ್ತು.
ಬಸವಣ್ಣಾ, ನಿನ್ನ ಮಹಾನುಭಾವವ ಕೇಳಿ ಕೇಳಿ
ಎನ್ನ ಭವಂ ನಾಸ್ತಿಯಾಯಿತ್ತು.
ನಮ್ಮ ಗೊಹೇಶ್ವರಲಿಂಗದಲ್ಲಿ ನೀನು ಅಜಾತನೆಂಬುದ ನೆಲೆಮಾಡಿ,
ಭವಪಾಶಂಗಳ ಹರಿದಿಪ್ಪೆಯಾಗಿ,
ನಿನ್ನ ಸಂಗದಿಂದಲಾನು ಬದುಕಿದೆನು. ॥೨೮॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ತಾವದ ವಚನ:

೪೬೭

ಜನನವಿಲ್ಲದ ಜನಿತನು ನೀನು ನೋಡಯ್ಯಾ!
ಜನಿಸಿ ಸಂಸಾರವನಱಿಯದ ನಿರ್ವಿಕಾರಿ ನೀನು ನೋಡಯ್ಯಾ!
ಭವಬಂಧನಗಳಿಲ್ಲದ ನಿತ್ಯನಿಜತತ್ತ್ವವು ನೀನು ನೋಡಯ್ಯಾ!
ನಿನ್ನ ಚರಣಸೇವೆಯ ಮಾಡಿ ಎನ್ನ ಭವ ಹಱಿಯಲೆಂದಿಪ್ಪೆನಲ್ಲದೆ,
ನಿಮ್ಮ ಘನವೆಂತೆಂದು ಅಱಿಯೆ ನೋಡಯ್ಯಾ!
ಕೂಡಲಸಂಗಮದೇವಾ, ನೀನು ಕೊಂಡಾಡಲಾನು
ಪ್ರಾಪ್ತನೆ ಹೇಳಾ ಪ್ರಭುವೆ? ॥೨೯॥

ಈ ಹೀಂಗೆಂದು ಬಸವರಾಜದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೪೬೮

ಆಚಾರವಂಗಲೇಪವಾಗಿ,
ಕಾಯ ಮುಕ್ತನು ನೀನು ನೋಡಯ್ಯಾ.
ಅಱಿವು ಅಂತರಂಗದಲ್ಲಿ ಭರಿತವಾಗಿಪ್ಪುದಾಗಿ,
ಮನೋಮುಕ್ತನು ನೀನು ನೋಡಯ್ಯಾ
ಅರ್ಪಿತ ಪರಿಣಾಮದಲ್ಲಿ ಅವಿರಳವಾಗಿಪ್ಪುದಾಗಿ,
ಸರ್ವಾಂಗ ಲಿಂಗೈಕ್ಯ ನೋಡಾ!
ಮುಕ್ತನಲ್ಲೆಂಬ ಬಳಕೆಯ ಮಾತಂತಿರಲಿ,
ಬಯಲ ಭ್ರಮೆಯನೆ ಕಳೆದು, ಭವದ ಬಟ್ಟೆಯ ಹಱಿದಿಪ್ಪುದ
ನಮ್ಮ ಗೊಹೇಶ್ವರಲಿಂಗ ಬಲ್ಲನು.
ನೀನು ಮಱೆಯಾಗಿ ನುಡಿವರೇ ಸಂಗನಬಸವಣ್ಣಾ? ॥೩೦॥

ನೀನು ಭವಬಂಧನಂಗಳ ಹಱಿದು ನಿರ್ಭಯನಾಗಿಪ್ಪ ಮಾತು ಸತ್ಯವೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

೪೬೯

ಜ್ಞಾನದ ಬಲದಿಂದ ಅಜ್ಞಾನ ಕೆಡುವುದು ನೋಡಯ್ಯಾ !
ಜ್ಯೋತಿಯ ಬಲದಿಂದ ಕತ್ತಲೆ ಕೆಡುವುದು ನೋಡಯ್ಯಾ!
ಸತ್ಯದ ಬಲದಿಂದ ಅಸತ್ಯ ಕೆಡುವುದು ನೋಡಯ್ಯಾ!
ಪರುಷದ ಬಲದಿಂದ ಅವಲೋಹ ಕೆಡುವುದು ನೋಡಯ್ಯಾ!
ಕೂಡಲಸಂಗಮದೇವಯ್ಯಾ,
ನಿಮ್ಮ ಅನುಭಾವದಿಂದ ಎನ್ನ ಭವ ಕೆಟ್ಟುದನಲ್ಲೆನಬಹುದೆ ಪ್ರಭುವೆ? ॥೩೧॥

೧೩(ಮೂ)

ಈ ಹೀಂಗೆಂದು ಬಸವರಾಜದೇವರು ಬಿನ್ನೈಸಲು, ಇದಕ್ಕೆ ಬಸವಾ ನಿನ್ನ ಮಹಾತ್ಮೆಯನು ನಾಲ್ಕು ಯುಗದಿಂದ ಬಲ್ಲೆನಾಗಿಯು, ಆಚಾರ ಸ್ವಾಯತವಾಗಿದ್ದ ಈ ಅವತಾರದಲ್ಲಿ ನಿಮ್ಮ ಮಹಿಮೆಯನಱಿಯದೆ ಇದ್ದೆನೆಂದು ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೪೭೦

ಕೃತಯುಗದಲ್ಲಿ ನೀನು
ಸ್ಕಂದನೆಂಬ ಗಣೇಶ್ವರನಾಗಿರ್ದುದ ನಾನು ಬಲ್ಲೆ.
ತ್ರೇತಾಯುಗದಲ್ಲಿ ನೀನು
ನೀಲಲೋಹಿತನೆಂಬ ಗಣೇಶ್ವರನಾಗಿರ್ದುದ ನಾನು ಬಲ್ಲೆ.
ದ್ವಾಪಾರದಲ್ಲಿ ನೀನು ವೃಷಭನೆಂಬ ಗಣೇಶ್ವರನಾಗಿರ್ದುದ ನಾನು ಬಲ್ಲೆ.
ಕಲಿಯುಗದಲ್ಲಿ ನೀನು ಬಸವನೆಂಬ ಗಣೇಶ್ವರನಾಗಿ,
ಸರ್ವಾಚಾರಸಂಪನ್ನನಾಗಿ, ಭಕ್ತಿ ಜ್ಞಾನವ ಕಂದೆಱವೆಯ ಮಾಡಿ
ಶಿವಾಚಾರದ ಘನವ ಬೆಳವಿಗೆಯ ಮಾಡಿ,
ಶಿವಭಕ್ತಿಯ ಧ್ವಜವನೆತ್ತಿಸಿ ಮರ್ತ್ಯಲೋಕದೊಳಗೆ ಹರಹಿದ
ಭೇದವ ಭೇದಿಸಿ ನೋಡಿ ಆನು ಅಱಿದೆ.
[೧]ಗೊಹೇಶ್ವರ[೧] ಸಾಕ್ಷಿಯಾಗಿ, ನಿಮ್ಮ ಮಹಾತ್ಮೆಗೆ
ನಮೋ ನಮೋ ಎನುತಿರ್ದೆನು ಕಾಣಾ ಸಂಗನಬಸವಣ್ಣಾ! ॥೩೨॥

ಮರ್ತ್ಯಲೋಕದಲ್ಲಿ ಬಂದವತರಿಸಿ, ಶಿವಾಚಾರದ ಘನವನು ಪ್ರತಿಷ್ಠಿಸಿ ತೋಱಿ ಜಗದೊಳಗೆ ಮೆಱೆವಲ್ಲಿ ನಿಮ್ಮ ಮಹಾತ್ಮೆಯನಱಿಯೆನೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಬಸವರಾಜದೇವರು ಬಿನ್ನೈಸಿದ ಪ್ರಸ್ತಾವದ ವಚನ:

೪೭೧

ಕಕ್ಷೆ ಕರಸ್ಥಲ ಉತ್ತಮಾಂಗ ಉರಸೆಜ್ಜೆ ಅಂಗಸೋಂಕು
ಅಮಳೋಕ್ಯವೆಂಬುದ ನಾನು ಮನದಲ್ಲಿ ಅಱಿಯದಂದು,
ಭಾವ ನಿರ್ಭಾವವೆಂಬುದನಱಿದು
ಆಯತ ಸ್ವಾಯತವ ಮಾಡಲ್ಕೆ ಬಂದ ಪದಾರ್ಥವು
ಲಿಂಗಮುಖದಲ್ಲಿ ಅರ್ಪಿತವಾಗದೆಂದು,
ಜಂಗಮಮುಖದಲ್ಲಿ ಬಂದ ಪದಾರ್ಥವಲ್ಲದೆ ಅರ್ಪಿತವಾಗದೆಂದು,
ಆ ಜಂಗಮವನೆನ್ನ ಮನದಲ್ಲಿ ನೆನೆದುಕೊಂಡು,
ಆ ಜಂಗಮದಾಸೋಹಕ್ಕೆ ಎನ್ನ ಮನವು ವೇದ್ಯವಾದಲ್ಲಿ,
ಅಂಗದ ಮೇಲೆ ಲಿಂಗ ಉಳ್ಳುದೆಲ್ಲವೂ ಸಂಗಮನಾಥನೆಂದಱಿದಲ್ಲಿ
ಲಿಂಗವೂ ಹುಸಿ ಜಂಗಮವೂ ಹುಸಿ ಎಂದು
ಪರವಾದಿ ಬಿಜ್ಜಳನು ಸಂ[೨][ವಾ][೨]ದಿಸುವಲ್ಲಿ,

೧-೧ ಗೊಗ್ಗೇಶ್ವರ(ಮೂ) ೨-೨ ಪಾ(ಮೂ)

ಅವರನು ಆದಿಗಣೇಶ್ವನೆಂದಱಿಯದೆ ತರ್ಕಿಸುವಲ್ಲಿ,
ಅವನೆನ್ನ ಭಕ್ತಿಗೆ ಒರೆಗಲ್ಲಾದಲ್ಲಿ,
ಆತನು ಭಕ್ತಿಯ ಪಥವಲ್ಲೆಂಬುದ, ನಾನಹುದೆಂಬುದ
ಈ[1] ಎರಡನೂ ನೀನು ಸೂತ್ರಧಾರಿಯಾಗಿ ಆಡಿಸುವಲ್ಲಿ,
ಶಿವಭಕ್ತಿಯ ಮುಖ ಮುಸುಕ ತೆಗೆವಲ್ಲಿ,
ಮೂನ್ನೂಱಱುವತ್ತು ಸತ್ತ ಪ್ರಾಣವನೆತ್ತುವಲ್ಲಿ,
ಅಂದು ನೀನೇನಾಗಿದ್ದೆ ಹೇಳಾ ಕೂಡಲಸಂಗಮದೇವಾ? ॥೩೩॥

ಈ ಹೀಂಗೆಂದು ಬಸವರಾಜದೇವರು ತಮ್ಮ ಪೂರ್ವಾಪರ ಸಂಬಂಧದ ವೃತ್ತಾಂತಮಂ ಬಿನ್ನಪಂಗೆಯ್ಯಲು, ಪ್ರಭುದೇವರು ತಮ್ಮ ಪೂರ್ವಾಪರ ಸಂಗತ್ಯಮಂ ಬಸವಣ್ಣನಿಂದಱಿದೆನೆಂದು ಪರಿಣಾಮಿಸಿ ನಿರೂಪಿಸಿದ ಪ್ರಸ್ತಾವದ ವಚನ:

೪೭೨

ಆದಿ ಗುರುಸ್ಥಲ ಲಿಂಗಸ್ಥಲ ಜಂಗಮಸ್ಥಲ,
ಪ್ರಸಾದಿಸ್ಥಲ ಪಾದೋದಕಸ್ಥಲಂಗಳನಾರು ಬಲ್ಲರಯ್ಯಾ?
ಆದಿಯ ತೋಱಿಸಿದ, ಅನಾದಿಯನಱುಪಿದ
ನಾದ ಬಿಂದು ಕಳೆಗಳ ಭೇದಮಂ
ಭೇದಿಸಿ ತೋಱಿದ
ಹುಟ್ಟುವುದ ಮುಟ್ಟದೆ ತೋಱಿದ.
ಹುಟ್ಟದೆ ಇದ್ದುದ ಮುಟ್ಟಿ ತೋಱಿದ,
ಎನ್ನ ಅಂತರಂಗವನನುಮಾಡಿ ನಿಜಲಿಂಗವ ನೆಲೆಗೊಳಿಸಿದ
[1]ಗೊಹೇಶ್ವರನ[1] ಶರಣ ಸಂಗನಬಸವಣ್ಣನಿಂದ
ಸಕಲ ಸನುಮತವನಱಿದೆನಯ್ಯಾ! ॥೩೪॥

ಮತ್ತಂ, ಸ್ತೋತ್ರ;

೪೭೩

ಭಾವುಕರಿಗೆ ಮೂರ್ತಿಯಾರಾಧನೆ ಸಂಸಾರಕ್ಕೆ ಬೀಜ;
ಲಿಂಗಾರಾಧನೆ ಭವಕ್ಕೆ ಬೀಜ.
ಲಿಂಗಸ್ವಾಯತ ಜಂಗಮವೆ ಪ್ರಾಣಲಿಂಗ.
ಇದು ಕಾರಣ [1]ಗೊಹೇಶ್ವರಾ,[1]
ಸಂಗನಬಸವಣ್ಣನ [2]ಮೊಱೆಯ[2] ಹೊಕ್ಕು ಬದುಕಿದೆನು! ॥೩೫॥

೧-೧ ಗೊಗ್ಗೇಶ್ವರ (ಮೂ) ೨-೨ ಮಱೆಯ(ಮೂ)

ಈ ಹೀಂಗೆಂದು ಪ್ರಭುದೇವರು ಬಸವರಾಜದೇವರ ಸ್ತೋತ್ರಮಂ ಮಾಡಲು, ಆ ಬಸವರಾಜದೇವರು ಪ್ರಭುದೇವರೊಡನೆ ನಿಮ್ಮಿಂದಲಾನು ಸಕಲ ಸನುಮತವನಜಿದೆನೆಂದು ಬಿನ್ನಪಂಗೈವ ಪ್ರಸ್ತಾವದ ವಚನ:

೪೭೪

ಲಿಂಗ ಜಂಗಮ, ಜಂಗಮ ಲಿಂಗವೆಂಬುದ
ಎನಗೆ ತೋಱಿದವರಾರಯ್ಯಾ?
ಲಿಂಗವ ಪೂಜಿಸಿದರೆ ಭವ ಹಱಿಯದೆಂದು,
ಜಂಗಮಮುಖ ಲಿಂಗವಾಗಿ ಬಂದು ಶಿಕ್ಷಿಸಿ ರಕ್ಷಿಸಿ,
ಎನ್ನ ಆದಿಯನಾದಿಯ ತೋಱಿ.
ಪ್ರಾಣಲಿಂಗ ಜಂಗಮವೆಂದು ಎನಗೆ ಪ್ರತಿಷ್ಠಿಸಿ ತೋಱಿದಿರಾಗಿ,
ಕೂಡಲಸಂಗಮದೇವಾ,
ನಿಮ್ಮಿಂದಲಾನು ಬದುಕಿದೆನು ಕಾಣಾ ಪ್ರಭುವೆ! ॥೩೬॥

ಇಂತೀ ಶ್ರೀಮತ್ ಸಕಲಗಣ ಪುರಾತನರೊಳ್ ಪ್ರಭುದೇವರು
ಮಹಾನುಭಾವಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್
ಬಸವರಾಜದೇವರ ಸಂಪಾದನೆಗಂ
ಸಪ್ತಮೋಪದೇಶಂ ಸಮಾಪ್ತಂ
ಅಂತು ವಚನ ೪೭೪ ಕ್ಕಂ ಮಂಗಳಮಹಾ ಶ್ರೀ

❖

೮
ಚೆನ್ನಬಸವೇಶ್ವರನ ಸಂಪಾದನೆ

*ಕಂದ:

ಆಚಾರಭಕ್ತಿಯಜೀವಿನ
ಸೂಚನೆಯಂ ಪ್ರಾಣಲಿಂಗ ಸಮರಸಮಂ ಪ್ರಭು
ವಾ ಚೆನ್ನಬಸವರಾಜಗೆ
ಸೂಚಿಸಿದುದ ಪೇಳ್ವೆ ಶರಣಜನರಹುದೆನ್ನಲ್. ॥೧॥

ಅದೆಂತೆಂದೊಡಾ ಪ್ರಭುದೇವರು ಬಸವರಾಜದೇವರು ತಮ್ಮೊಳು ತಾವು ಮಹಾನುಭಾವಗೋಷ್ಠಿಯಂ ಮಾಡುತ್ತಿರ್ಪ ಪ್ರಸ್ತಾವದೊಳು, ಚಿಕ್ಕದಣ್ಣಾಯಕರು ಆ ಪ್ರಭುದೇವರ ಬಸವರಾಜದೇವರ ಸಮರಸಭಾವಮಂ ಪರೀಕ್ಷಿಸಿ ನೋಡುವ ಪ್ರಸ್ತಾವದ ವಚನ:

೪೭೫

ಒಂದಱೊಂದಱ ಸಂಬಂಧ ಮತ್ತೊಂದಕ್ಕಳವಡದು.
ಕಂದನೊಳಗಣ ಸ್ವಪ್ನ ಮುಂದುದೋಱುವುದೆ?
ಚಂದ್ರಕಾಂತದ ಶಿಲೆಯಲ್ಲಿ ರತ್ನವ ಕಂಡೆನೆಂಬ
ಅಹಂಕಾರ ನಿನಗೇಕೆ ಶರಣಾ?
ಕೈಯ ಕುಱುಹಳಿಯದು,
ಬಾಯ ಮೊಱೆ ಮಿಗೆವರಿಯುತ್ತಿದೆ.
[೧]ಕೂಡಲಚೆನ್ನಸಂಗಯ್ಯನಲ್ಲಿ[೧]
ಬಸವನೂ ಪ್ರಭುವೂ ಇಬ್ಬರೂ ಮರುಳಾದರು! ॥೧॥

ಮತ್ತಂ,

* + ಶ್ರೀ ಗುರು ಬಸವಲಿಂಗಾಯ ನಮಃ (ಮೂ) ೧-೧ ಕೂಡಲಚೆನ್ನಸಂಗಮದೇವಯ್ಯನಲ್ಲಿ (ಮೂ)

೪೭೬

ಉಂಟೆಂಬುದ ಬಸವಣ್ಣ ಕೊಂಡ.
ಇಲ್ಲೆಂಬುದನಲ್ಲಮಕೊಂಡ.
ಇನ್ನಾರನಹುದೆಂಬೆನು? ಇನ್ನಾರನಲ್ಲೆಂಬೆನು?
ಇವರಿಬ್ಬರೂ ಛಲಕ್ಕೆ ಸಂಪನ್ನರಲ್ಲದೆ,
ಲಿಂಗಸಂಪನ್ನರ ಕಾಣೆ ಕೂಡಲಚೆನ್ನಸಂಗಮದೇವಾ! ॥೨॥

ಈ ಹೀಂಗೆಂದು ಚಿಕ್ಕದಣ್ಣಾಯಕರು ಪರೀಕ್ಷಿಸಿ ನೋಡಲು, ಇದಕ್ಕೆ ಪ್ರಭುದೇವರು ಚಿಕ್ಕದಣ್ಣಾಯಕರೊಡನೆ ನಿರೂಪಿಸಿದ ಪ್ರಸ್ತಾವದ ವಚನ:

೪೭೭

ಅಂಗಸಂಸಾರ ಲಿಂಗದಲ್ಲಿ ಅಱಿತು,
ಕಾಮವೆಂಬ ಸಂಬಂಧ ಸಂಶಯವಳಿದು,
ನಿಸ್ಸಂದೇಹಿಯಾಗಿಪ್ಪನು ನೋಡಾ ಬಸವಣ್ಣನು,
ಪ್ರಾಣ ಭಾವವೆಂಬ ಶಂಕೆ ತಲೆದೋಱದೆ,
ನಿಶ್ಶಂಕ ನಿಜೈಕ್ಯನಾಗಿಪ್ಪ ನೋಡಾ ಬಸವಣ್ಣನು.
ಆ ಬಸವಣ್ಣನ ಅಂತರಂಗದಲ್ಲಿ ನಿಶ್ಚಿಂತನಿವಾಸಿಯಾಗಿರ್ದೆನು.
ಆ ಬಸವಣ್ಣನ ಬಹಿರಂಗದಲ್ಲಿ ನಿರಾಲಂಬ ಜ್ಞಾನಿಯಾಗಿರ್ದೆನು.
ನಾನು ಬಸವಣ್ಣನೊಳಗೆ ಅಳಿದುಳಿದೆನು,
ಇದು ಕಾರಣ ಬಸವಣ್ಣನೆನ್ನ ಅಂತರಂಗದೊಳಗೆ
ನಿಜನಿವಾಸಿಯಾಗಿರ್ದನು.
ಒಂದಕ್ಕೊಂದ ಬಿಚ್ಚಿ ಬೇಱುಮಾಡಬಾರದು ನೋಡಾ!
[೧]ಗೊಹೇಶ್ವರನ[೧] ಶರಣ ಸಂಗನಬಸವ ಪ್ರಭುವೆಂಬ
ಎರಡು ಭಾವಭ್ರಾಂತಿಯಳಿದುಳಿದು
ನಿಭ್ರಾಂತಿಯೆಡೆಗೊಂಡಿತ್ತು ನೋಡಾ ಚೆನ್ನಬಸವಣ್ಣಾ! ॥೩॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಚಿಕ್ಕದಣ್ಣಾಯಕರು ಬಿನ್ನೈಸಿದ ಪ್ರಸ್ತಾವದ ವಚನ:

೪೭೮

ಭಕ್ತ ಜಂಗಮದ ಸಕೀಲಸಂಬಂಧವೆಂತಿರ್ಪುದನಾರು ಬಲ್ಲರಯ್ಯಾ?
ಅದು ಉಪಮಾತೀತ.
ಭಕ್ತನೊಳಗೆ ಜಂಗಮವಡಗಿದಡೆ,
ಭಕ್ತನಾಗಿ ಕ್ರಿಯಾನಿಷ್ಪತಿಯಲ್ಲಿ

೧-೧ ಗೊಗ್ಗೇಶ್ವರನ(ಮೂ)

ಸಮರಸಸುಖಿಯಾಗಿಪ್ಪನು ನೋಡಯ್ಯಾ.
ಜಂಗಮದೊಳಗೆ ಭಕ್ತನಡಗಿದಡೆ,
ಕರ್ತೃ ಭೃತ್ಯಭಾವವಳಿದು, ಸಂಬಂಧಸಂಶಯ ತಲೆದೋಱದೆ,
ಅಱಿವಱಿತು, ಮಱಹು ನಷ್ಟವಾಗಿ
ಸ್ವತಂತ್ರಶಿವಾಚಾರಿಯಾಗಿರಬೇಕು ನೋಡಯ್ಯಾ!
ಈ ಉಭಯ ಭಾವದ ಸಂಗದ ಪರಿಣಾಮವ ಕಂಡು,
ಕೂಡಲಚೆನ್ನಸಂಗಯ್ಯನಲ್ಲಿ ಬಸವ ಪ್ರಭುದೇವರ ಶ್ರೀಪಾದಕ್ಕೆ
ನಮೋ ನಮೋ ಎಂದು ಬದುಕಿದೆನು! ॥೪॥

ಮತ್ತಂ,

೪೭೯

ಎನ್ನ ಅಱಿವಿನ ಕಣ್ಣ ಕತ್ತಲೆಯ ಕಳೆಯಬಲ್ಲರೆ,
ಸಂಗನಬಸವಣ್ಣನಲ್ಲದೆ ಮತ್ತಾರನೂ ಕಾಣೆನು.
ಎನ್ನ ಭಾವವ ನಿರ್ಭಾವದಲ್ಲಿ ನಿಲ್ಲಿಸಿ
ನಿಶ್ಶೂನ್ಯವ ಮಾಡಿ ಪರಮಸುಖದೊಳಿರಿಸುವರೆ,
ಅಲ್ಲಮಪ್ರಭುದೇವರಲ್ಲದೆ ಮತ್ತಾರನೂ ಕಾಣೆನು.
ಕೂಡಲಚೆನ್ನಸಂಗಮದೇವರಲ್ಲಿ
ಬಸವ ಪ್ರಭುದೇವರ ಶ್ರೀಚರಣಕ್ಕೆ ಶರಣೆಂದು ಬದುಕಿದೆನು ! ॥೫॥

ಇಂತು ಚಿಕ್ಕದಣ್ಣಾಯಕರು ಬಸವರಾಜದೇವರನೂ ಪ್ರಭುದೇವರನೂ ಸ್ತೋತ್ರಮಂ ಮಾಡಲು, ಆ ಪ್ರಭುದೇವರು ಬಸವರಾಜದೇವರನೂ ಚೆನ್ನಬಸವರಾಜ ದೇವರನೂ ಸ್ತೋತ್ರಮಂ ಮಾಡಿದ ಪ್ರಸ್ತಾವದ ವಚನ:

೪೮೦

ಬಸವಣ್ಣ ಎಂಬಲ್ಲಿ, ಎನ್ನ ಕಾಯ ಬಯಲಾಯಿತ್ತು,
ಚೆನ್ನಬಸವಣ್ಣ ಎಂಬಲ್ಲಿ, ಎನ್ನ ಪ್ರಾಣ ಬಯಲಾಯಿತ್ತು.
ಈ ಉಭಯಸ್ಥಲದ ನಿರ್ಣಯದ ನಿಷ್ಪತ್ತಿ,
[1]ಗೊಹೇಶ್ವರಲಿಂಗ[1] ಸಾಕ್ಷಿಯಾಗಿ ಚೆನ್ನಬಸವಣ್ಣನಿಂದ ಸಾಧ್ಯವಾಯಿತ್ತು
ಕಾಣಾ ಸಂಗನಬಸವಣ್ಣಾ. ॥೬॥

ಈ ಹೀಂಗೆಂದು ಚಿಕ್ಕದಣ್ಣಾಯಕರ ಸ್ತೋತ್ರಮಂ ಮಾಡಲು, ಬಸವರಾಜದೇವರು ಪ್ರಭುದೇವರನೂ ಚಿಕ್ಕದಣ್ಣಾಯಕರನೂ ಸ್ತೋತ್ರಮಂ ಮಾಡುವ ಪ್ರಸ್ತಾವದ ವಚನ:

೪೮೧

ಅಂಗದ ಮೇಲೆ ಲಿಂಗ ಸ್ವಾಯತವಾಗಿ
ಲಿಂಗಾರ್ಚನೆಯ ಮಾಡಿದರೆ ಭವ ಹಿಂಗದೆಂದು,

೧-೧ ಗೊಗ್ಗೇಶ್ವರಲಿಂಗ(ಮೂ)

ಪ್ರಾಣದ ಮೇಲೆ ಲಿಂಗ ಸ್ವಾಯತವ ಮಾಡಿ,
ಎನ್ನಂತರಂಗವ ಶುದ್ಧವ ಮಾಡಿ,
ಲಿಂಗೈಕ್ಯದ ಹೊಲಬ ತೋಱಿದನಯ್ಯಾ ಚೆನ್ನಬಸವಣ್ಣನು.
ಕಾಯದ ಕಳವಳ ದಾಸೋಹಮುಖದಲ್ಲಿ ಅಲ್ಲದೆ ಹಱಿಯದೆಂದು,
ಜಂಗಮ ಮುಖ ಲಿಂಗವಾಗಿ ಬಂದು,
ಎನ್ನ ಶಿಕ್ಷಿಸಿ ರಕ್ಷಿಸಿ, ಎನ್ನ ಸಂಸಾರದ ಪ್ರಕೃತಿಯ
ಹಱಿದನಯ್ಯಾ ಪ್ರಭುದೇವರು.
ಕೂಡಲಸಂಗಮದೇವರಲ್ಲಿ ಪ್ರಭುದೇವರ ಚೆನ್ನಬಸವಣ್ಣನ
ಕರುಣದಿಂದಲಾನು ಬದುಕಿದೆನು! ॥೭॥

ಮತ್ತಂ, ಬಸವರಾಜದೇವರು ಚಿಕ್ಕದಣ್ಣಾಯಕರ ಸ್ತೋತ್ರಮಂ ಮಾಡುವ ವಚನ:

೪೮೨

ಭೂಮಿಯ ಸಾ[೧]ರಾಯ[೧]ದಲೊಂದು ತರು ಬೆಳೆಯಿತ್ತು,
ನವರಸಫಲವನಿತ್ತಿತ್ತು ನೋಡಾ!
ಏನೆಂದಱಿಯದೆ ಎಂತೆಂದಱಿಯದೆ ಮರುಳಾದೆನು ನಾನು.
ಮಾರಾರಿಯ ಬಲೆಯಲ್ಲಿ ಸಿಲುಕಿದೆನಯ್ಯಾ.
ಕೂಡಲಸಂಗಮದೇವಯ್ಯಾ,
ಚೆನ್ನಬಸವಣ್ಣನಿಂದಲಾನು ಬದುಕಿದೆನು! ॥೮॥

ಮತ್ತಂ, ಪ್ರಭುದೇವರು ಚಿಕ್ಕದಣ್ಣಾಯಕರ ಸ್ತೋತ್ರಮಂ ಮಾಡುವ ವಚನ:

೪೮೩

ಬೆಳಗುವ ಜ್ಯೋತಿಯ ತಿರುಳಿನಂತೆ
ಹೊಳೆವ ಕಂಗಳ ಕಾಂತಿ ಒಳಹೊಱಗೆನ್ನದೆ ಅಳವಟ್ಟ
ಶಿವಯೋಗಿಯ ಕಂಡೆ ನೋಡಾ!
ನಿಜ ಉಂಡ ನಿರ್ಮಳದ ಘನವ ಕಂಡು ಬೆಱಗಾದೆ ನಾನು!
[೨]ಗೊಹೇಶ್ವರ[೨]ಲಿಂಗದಲ್ಲಿ ಚೆನ್ನಬಸವಣ್ಣನಿಂದಲಾನು ಬದುಕಿದೆನು! ॥೯॥

ಚೆನ್ನಬಸವರಾಜದೇವರೊಡನೆ ಬಸವರಾಜದೇವರು ಪ್ರಭುದೇವರ ಕೊಂಡಾಡಿದ ವಚನ:

೪೮೪

ಕಂಗಳಲ್ಲಿ ಕರಸ್ಥಲದ ನೋಟ.
ಅಂಗವಿಕಾರವೆಂಬುದನಱಿಯ ನೋಡಾ!
ಮನದ ಕೊನೆಯ ಮೊನೆಯ ಮೇಲಣ ಅನುಭಾವ ಗಮನಗೆಟ್ಟು
ಭಾವ ನಿರ್ಭಾವವೆಂಬುದನಱಿಯ ನೋಡಾ!

೧-೧ ರ(ಮು) ೨-೨ ಗೊಗ್ಗೇಶ್ವರ(ಮೂ)

ಕೂಡಲಸಂಗಮದೇವರಲ್ಲಿ
ಪ್ರಭುದೇವರಿಂದಲಾನು ಬದುಕಿದೆನು ಕಾಣಾ ಚೆನ್ನಬಸವಣ್ಣಾ! ॥೧೦॥

ಇದಕ್ಕೆ ಪ್ರಭುದೇವರು ಚೆನ್ನಬಸವರಾಜದೇವರೊಡನೆ ಬಸವರಾಜದೇವರ ಸ್ತೋತ್ರಮಂ ಮಾಡಿದ ಪ್ರಸ್ತಾವದ ವಚನ:

೪೮೫

ಅಂಗದಲಳವಟ್ಟ ಲಿಂಗೈಕ್ಯನ ಸಂಗವನಾರಿಗೆಯೂ
ಕಾಣಬಾರದು ನೋಡಾ!
ಪ್ರಾಣದ ಕೊನೆಯ ಮೊನೆಯ ಮೇಲೆ ಭಾವಸೂತಕವ ಕಳೆದು,
ನಿರ್ಭಾವ ನಿಸ್ಸೂತಕಿಯಾಗಿಪ್ಪ ನಿಜಲಿಂಗಸಮಾಧಿಯ
ಘನವನಾರಿಗೆಯೂ ಕಾಣಬಾರದು ನೋಡಾ!
[1]ಗೊಹೇಶ್ವರ[1]ಲಿಂಗದಲ್ಲಿ ಸಂಗನಬಸವಣ್ಣನ ನಿಲವ ಕಂಡು
ನಾನು ಬದುಕಿದೆನು ಕಾಣಾ ಚೆನ್ನಬಸವಣ್ಣಾ! ॥೧೧॥

ಈ ಹೀಂಗೆಂದು ಪ್ರಭುದೇವರು ಚೆನ್ನಬಸವರಾಜದೇವರೊಡನೆ ಬಸವರಾಜ ದೇವರ ಮಹಾತ್ಮೆಯಂ ಕೊಂಡಾಡಲು, ಆ ಚೆನ್ನಬಸವರಾಜದೇವರು ಪ್ರಭುದೇವರೊಡನೆ ಆ ಬಸವರಾಜದೇವರ ಮಹಾತ್ಮೆಯಂ ಕೊಂಡಾಡಿ ಬಿನ್ನಪಂಗೈದ ಪ್ರಸ್ತಾವದ ವಚನ:

೪೮೬

ಹರನಟ್ಟಿದಾಗ್ರದ ಬೆಸನ ಗುರು ನಿರೂಪವೆಂದು ಕೈಕೊಂಡು,
ಕರುಣಿ ಬಸವಣ್ಣ ಕೈಲಾಸದಿಂದ
ಗುರು ಲಿಂಗ ಜಂಗಮಕ್ಕೆ ಭಕ್ತಿಯ ಮಾಡಬೇಕೆಂದು,
ಏಳುನೂಱೆಪ್ಪತ್ತು ಅಮರಗಣಂಗಳು ಸಹಿತ
ಮರ್ತ್ಯಲೋಕಕ್ಕೈತಂದನಯ್ಯಾ. ಶಿವಸಮಯಕ್ಕಾಧಾರವಾದನಯ್ಯಾ.
ಲೋಕಾದಿಲೋಕಂಗಳಿಗೆ ಪರಮಗುರುವಾದನಯ್ಯಾ ಬಸವಣ್ಣನು.
ಜಡರುಗಳ ಮನದ ಕತ್ತಲೆಯ ಕಳೆಯಬೇಕೆಂದು
ಕಟ್ಟಿತ್ತು ಕಲ್ಯಾಣದಲ್ಲಿ ಮಹಾಮಠವು!
ಪರಮನಟ್ಟಿದ ಓಲೆ ಬಂದಿಳಿಯಿತ್ತು ಬಿಜ್ಜಳನ ಸಿಂಹಾಸನದಲ್ಲಿ.
ಅದ ತಂದು ಓದಿಸಿದರೆ ಸೃಷ್ಟಿಯ ಸೇನಬೋವರಿಗೆ ತಿಳಿಯದು.
ಛಪ್ಪನ್ನ ದೇಶದ ಭಾಷೆಯ ಲಿಪಿ ಮುನ್ನವೆ ಅಲ್ಲ.
ಇದನೋದಿದವರಿಗೆ ಆನೆ ಸೇನೆ ಕುದುರೆ ಭಂಡಾರ
ಅಱುವತ್ತಾಱು ಕರಣಿಕರಿಗೆ ಮುಖ್ಯನ ಮಾಡುವೆನೆಂದು
ಬಿಜ್ಜಳ ಭಾಷೆಯ ಕೊಡುತ್ತಿರಲು,

೧-೧ ಗೊಗ್ಗೇಶ್ವರ(ಮೂ)

ಹರನಿರೂಪವ ಶಿರದ ಮೇಲಿಟ್ಟು ಶಿವ ಶರಣೆಂದು,
ಬಸವಣ್ಣ ಮೆಟ್ಟಿ ನೋಡಿ ತೆಗೆಸಿದನಯ್ಯಾ,
ಅಱುವತ್ತಾಱುಕೋಟಿ ವಸ್ತುವ!
ಅರಮನೆಗೆ ರಾಜ್ಯಕ್ಕೆ ಒಡೆಯನಾಗಿ,
ಹರಗಣಂಗಳಿಗೆ ಗತಿ ಮತಿ ಚೈತನ್ಯನಾಗಿ,
ಕೂಡಲಚೆನ್ನಸಂಗಯ್ಯನಲ್ಲಿ ಅಂಡಜದೊಳಗಿದ್ದು,
ಶಿವನ ಭಂಡಾರಿಯಾದನಯ್ಯಾ
ಎನ್ನ ತಂದೆ ಪೂರ್ವಾಚಾರಿ ಸಂಗನಬಸವಣ್ಣನು! ॥೧೨॥

ಮತ್ತಂ,

೪೮೭

ಭಕ್ತಿಯ ಕುಳಸ್ಥಳವ ಮರ್ತ್ಯಲೋಕದಲ್ಲಿ ಹರಹಲೆಂದು
ಬಂದನಯ್ಯಾ ಬಸವಣ್ಣನು.
ಆಚಾರದ ಶಿವಾಚಾರದ ಮುಂದಣ ಕನ್ನಡಕವ ಕಳೆದು,
ಕರತಳಾಮಳಕವ ಮಾಡಿದನಯ್ಯಾ ಬಸವಣ್ಣನು.
ಪರವಾದಿ ಬಿಜ್ಜಳನು ಒರೆಗಲ್ಲ ಹಿಡಿದು
ಶಿವಭಕ್ತಿಯ ಸಂಪಾನೆಯ ಮಾಡುವಲ್ಲಿ,
ಮೂವತ್ತಾಱು ಕೊಂಡೆಯರ ಪರಿಹರಿಸಿ,
ಶಿವಾಚಾರದ ಧ್ವಜವನೆತ್ತಿಸಿದನಯ್ಯಾ ಬಸವಣ್ಣನು,
ಕೂಡಲಚೆನ್ನಸಂಗಮದೇವರಲ್ಲಿ ಬಸವಣ್ಣನ ನಿಲವ ಹೊಗಳುವರೆ
ಎನ್ನಳವಲ್ಲ, ನಿನ್ನಳವಲ್ಲ ಕೇಳಾ ಪ್ರಭುವೆ! ॥೧೩॥

ಮತ್ತಂ, ಆ ಪ್ರಸ್ತಾವದೊಳು ಹಾಡಿದ ಪದಂಗಳು:

೪೮೮

ರಾಗ: ಆಹಿರ

ಆಚಾರದುಂದುಭಿಯ ನಾನೇನೆಂದುಪಮಿಸುವೆ
ಬೆಳಗಿನೊಳಗೆ ತೊಳತೊಳಗುತಲಿರ್ದುದು ಆಚಾರ ।ಪಲ್ಲವಿ।

ಅಜೆವಿನಾಚರಣೆಯ ತೆಱನ ಹೇಳುತಲಿರ್ದುದು
ಭೇದಾಭೇದದ ಮಹಾಘನದಾಚಾರ ॥೧॥

ಸ್ಫಟಿಕದ ಗಿರಿಯ ತಟದಲ್ಲಿರ್ದರೆ
ಘಟ ಹೊಳೆದುದೊಳಹೊಱಗೆನ್ನದೆ ॥೨॥

ಪರುಷದ ಗಿರಿಯ ಕಡಿಯಲೆಂದು ಹೋದರೆ
ಹಿಡಿದುಳಿ ಕೊಡತಿ ಪರುಷವಾದ ಬಳಿಕ ಮತ್ತಾಚಾರ ॥೩॥

ಮಾಣಿಕವ ಹಿಡಿದವನ ಕೈಯ [1]ಸೆಕೆ[1] ಹತ್ತುವುದೆ
ಲಿಂಗ ಜಂಗಮ ಪ್ರಸಾದವೆಂದಱಿದಂಗಾಚಾರ ॥೪॥

ಸಂಪಿಗೆಯ ಪುಷ್ಪದಲ್ಲಿ ಕಂಪುಂಡ ಭ್ರಮರನಂತೆ
ಕೂಡಲಚೆನ್ನಸಂಗನಲ್ಲಿ ಶರಣ ಬಸವಣ್ಣಂಗಾಚಾರ ॥೫॥

[2]ಪದ ಸಹ ವಚನ:[2]
ಮತ್ತಂ, ಸ್ತೋತ್ರ: ॥೧೮॥

೪೮೯

ನಚ್ಚು ಬಿಚ್ಚದೆ ಮನದಲ್ಲಿ ಅಚ್ಚೊತ್ತಿದಂತಿದ್ದಿತ್ತು.
ಲಿಂಗವೆನ್ನದು; ಜಂಗಮವೆನ್ನದು, ಪ್ರಸಾದವೆನ್ನದು.
ಅದು ತನ್ನಲ್ಲಿ ತಾನಾಗಿ ತಾನೆ ಭರಿತನು.
ಕೂಡಲಚೆನ್ನಸಂಗಯ್ಯಾ,
ನಿಮ್ಮ ಶರಣ ಬಸವಣ್ಣನ ನಿಲವನುಪಮಿಸಬಾರದು! ॥೧೯॥

ಇಂತು ಚಿಕ್ಕದಣ್ಣಾಯಕರು ಪ್ರಭುದೇವರೊಡನೆ ಬಸವರಾಜದೇವರ ಮಹಾತ್ಮೆಯ ಸ್ತೋತ್ರಮುಖದಿಂ ಕೊಂಡಾಡಲು, ಆ ಪ್ರಭುದೇವರು ಚೆನ್ನಬಸವರಾಜದೇವರೊಡನೆ ಆ ಬಸವರಾಜದೇವರ ಮಹಾತ್ಮೆ[3]ಯಂ[3] ಕೊಂಡಾಡಿ ಹೇಳಿದ ಪ್ರಸ್ತಾವದ ವಚನ:

೪೯೦

ಆದಿಯನಾದಿಯೆಂಬೆರಡಱ ಮೂಲವನೆತ್ತಿ,
ಆದಿ ಲಿಂಗ, ಅನಾದಿ ಜಂಗಮವೆಂಬ
ಭೇದವ ವಿವರಿಸಿ ತೋಱಿದನಯ್ಯಾ ಬಸವಣ್ಣನು.
ಕಾಯದ ಜೀವದ ಸಂಬಂಧವ
ಅಸಂಬಂಧವ ಮಾಡಿ ತೋಱಿದನಯ್ಯಾ ಬಸವಣ್ಣನು.
ಎನ್ನ ಆದಿಯನಾದಿಯನು ಬಸವಣ್ಣನಿಂದ ತಿಳಿದು,
ನಮ್ಮ [4]ಗೊಹೇಶ್ವರಲಿಂಗ[4]ದಲ್ಲಿ ಸುಖಿಯಾದೆನು ಕೇಳಾ ಚೆನ್ನಬಸವಣ್ಣಾ! ॥೨೦॥

ಆದಿ ಲಿಂಗ, ಅನಾದಿ ಜಂಗಮವೆಂಬ ಭೇದವನು ಎನಗೆ ಬಸವಣ್ಣ ತೋಱಿಸಿ ಕೃತಾರ್ಥನ ಮಾಡಿದನೆಂದು ಪ್ರಭುದೇವರು ಚೆನ್ನಬಸವರಾಜದೇವರೊಡನೆ ನಿರೂಪಿಸಲು, ಆ ಚೆನ್ನಬಸವರಾಜದೇವರು ಪ್ರಭುದೇವರೊಡನೆ, ನಿನಗೆ ಆದಿಯನಾದಿಗತೀತವಾದ ಲಿಂಗವೆಂತು ಸಾಧ್ಯವಾಯಿತ್ತೆಂದು ಕೇಳುವ ಪ್ರಸ್ತಾವದ ವಚನ:

೧-೧ ಸಿಖೆ(ಮೂ) ೨-೨ X (ಮೂ) ೩-೩ ಯ(ಮು) ೪-೪ ಗೊಗ್ಗೇಶ್ವರಲಿಂಗ(ಮೂ)

೪೯೧

ಆದಿಯಲ್ಲಿ ಬಂದುದಲ್ಲ; ಅನಾದಿ ಬಿಂದುವಿನಲ್ಲಿ ಆದುದಲ್ಲ.
ನಾದವನು ಕಳೆ ನುಂಗಿ, ಕಳೆಯ ನಾದ ನುಂಗಿ.
ಹೊಳೆವ ಲಿಂಗ ನಿನಗೆಂತು ಸಾಧ್ಯವಾಯಿತ್ತು ಹೇಳಾ?
ಅಪ್ಪಣೆಯಿಲ್ಲದ ಅಪ್ಪಣೆ ಸಲುವುದೇ ಜಗದೊಳಗೆ?
ಇದು ಕಾರಣ ಕೂಡಲಚೆನ್ನಸಂಗಮದೇವರಲ್ಲಿ
ಆದಿ ಸೋಂಕು ನಿನಗೆಂತು ಸಾಧ್ಯವಾಯಿತ್ತು ಹೇಳಾ ಪ್ರಭುವೆ? ॥೨೧॥

ಈ ಹೀಂಗೆಂದು ಚಿಕ್ಕದಣ್ಣಾಯಕರು ಬೆಸಗೊಳಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೪೯೨

ಆದಿಯನಾದಿಗೆ ಭೇದ ಉಂಟೇ?
ಆದಿ ಲಿಂಗ, ಅನಾದಿ ಶರಣನೆಂಬುದು
ತನ್ನಿಂದ ತಾ ಮಾಡಲಾಯಿತ್ತು.
ಧರೆಯಾಕಾಶ ಭುವನ ಭವನಂಗಳು ಹುಟ್ಟದ ಮುನ್ನ,
ಅನಾದಿ ಪರಶಿವನು ತಾನೆ ತನ್ನ ಲೀಲೆಗೆ ಸಾಕಾರವ ಧರಿಸಿದಡೆ,
ಆ ಸಾಕಾರವೆ ಈ ಸಾಕಾರವಾಯಿತ್ತು.
ಎನ್ನ ಸಾಕಾರದ ಆದಿಯನೂ ಎನ್ನ ನಿರಾಕಾರದ ಅನಾದಿಯನೂ
ಬಸವಣ್ಣ ಬಲ್ಲನಾಗಿ, ಗೊಹೇಶ್ವರಲಿಂಗದ ಘನವು
ಬಸವಣ್ಣನಿಂದೆನಗೆ ಸಾಧ್ಯವಾಯಿತ್ತು ಕಾಣಾ ಚೆನ್ನಬಸವಣ್ಣಾ. ॥೨೨॥

ಅನಾದಿಪರಶಿವತತ್ತ್ವದ ಘನವು ಸಾಧ್ಯವಾದ ಭೇದವನ್ನು ಪ್ರಭುದೇವರು ನಿರೂಪಿಸಲು, ಇದಕ್ಕೆ ಚಿಕ್ಕದಣ್ಣಾಯಕರು ಪರಿಣಾಮಿಸಿ ಆ ಪ್ರಭುದೇವರನು ಸ್ತುತಿಸಿದ ^೧^ಪ್ರಸ್ತಾವದ^೧^ ವಚನ:

೪೯೩

ಆಯತವಿಲ್ಲದನುಭಾವ, ಸ್ವಾಯತವಿಲ್ಲದ ಸಮಾಧಾನ,
ಸನ್ನಿಹಿತವಿಲ್ಲದ ಸಂಬಂಧವೇನೆನಬಹುದಯ್ಯಾ?
ಘನಮನವ ಭೇದಿಸಿ ಆದಿಯನಾದಿಯನೊಳಕೊಂಡು,
ಆಧಾರವಿಲ್ಲದ ನಿಲವು ಸಾಧ್ಯವಾಯಿತ್ತು ನೋಡಾ!
ಕೂಡಲಚೆನ್ನಸಂಗಮದೇವರ ಶರಣ ಪ್ರಭುದೇವರು
ಅಜಾತನೆಂಬ ಭೇದವೆನಗಿಂದು ತಿಳಿಯಿತ್ತು. ॥೨೩॥

ಇಂತು ಪ್ರಭುದೇವರ ಅಜಾತಪರಶಿವನೆಂದಜಿದ ಚೆನ್ನಬಸವಣ್ಣನು ಮತ್ತಂ ಪ್ರಭುದೇವರಿಂದ ಸಮಸ್ತತತ್ತ್ವಂಗಳೆಲ್ಲಾ ಉತ್ಪತ್ಯವಾದವೆಂಬ ಭೇದವನಜಿದು ಸ್ತುತಿಸುತಿರ್ದ ಪ್ರಸ್ತಾವದ ವಚನ:

೧-೧ X (ಮು)

೪೯೪

ಬಯಲು ಮೂರ್ತಿಯಾಗಿ ನಿಂದನೊಬ್ಬ ಶರಣ.
ಆತನ ವಿದ್ಯಾಬುದ್ಧಿಯಿಂದ ಹುಟ್ಟಿದಾತ ಬ್ರಹ್ಮ.
ಆತನ ಶಾಂತಿಸೈರಣೆಯಿಂದ ಹುಟ್ಟಿದಾತ ವಿಷ್ಣು.
ಆತನ ಕೋಪಕ್ರೋಧದಿಂದ ಹುಟ್ಟಿದಾತ ರುದ್ರ.
ಈ ಮೂಱು ಪೀಠವಂತಿರಲಿ.
ಈ ತತ್ತ್ವತ್ರಯಂಗಳಿಗೆ ತಾನೆ ಕಾರಣವಾಗಿಪ್ಪ
ಶರಣನ ನಿಲವನಱಿದು ಶರಣೆನುತಿರ್ದೆನು
ಕೂಡಲಚೆನ್ನಸಂಗಮದೇವಾ! ॥೨೪॥

ಇಂತು ಚಿಕ್ಕದಣ್ಣಾಯಕರು ಪ್ರಭುದೇವರ ಮೂಲಸಂಭೂತ[1]ತತ್ತ್ವವನೂ ಆತನ ಮಹಾಘನವನೂ ವಿವೇಕದಿಂದಱಿದು ಸ್ತುತಿಸುತ್ತಿರಲು, ಆ ಪ್ರಭುದೇವರು ಚಿಕ್ಕದಣ್ಣಾಯಕರ ಪೂರ್ವಾಪರಸಂಬಂಧವನಱಿತೆನೆಂದು ಸ್ತುತಿಸುತ್ತಿರ್ದ ಪ್ರಸ್ತಾವದ ವಚನ:

೪೯೫

ಅಯ್ಯಾ ತತ್ತ್ವ ವಿತತ್ತ್ವಂಗಳಿಲ್ಲದಂದು,
ಪ್ರಕೃತಿ ಪುರುಷರಿಲ್ಲದಂದು,
ಜೀವ ಪರಮರೆಂಬ ಭಾವ ಲೀಲೆದೋಱದಂದು,
ಏನೂ ಏನೂ ಇಲ್ಲದಂದು,
ಬಯಲು ಬಲಿದು ಒಂದು ಬಿಂದುವಾಯಿತ್ತು ನೋಡಾ!
ಆ ಬಿಂದು ಅಕ್ಷರತ್ರಯದ ಗದ್ದುಗೆಯಲ್ಲಿ ಕುಳ್ಳಿರಲು,
ಓಂಕಾರ ಉತ್ಪತ್ತಿಯಾಯಿತ್ತು
ಆ ನಾದದಲ್ಲಿ ಮೂರ್ತಿಗೊಂಡನೊಬ್ಬ ಶರಣ.
ಆ ಶರಣನಿಂದಾಯಿತ್ತು ಪ್ರಕೃತಿ.
ಆ ಪ್ರಕೃತಿಯಿಂದಾಯಿತ್ತು ಲೋಕ.
ಲೋಕಲೌಕಿಕವನತಿಗಳೆದು, ನಿಜದಲ್ಲಿ ನಿವಾಸಿಯಾಗಿಪ್ಪ
[2]ಗೊಹೇಶ್ವರನ[2] ಶರಣ ಚೆನ್ನಬಸವಣ್ಣನ ಘನವನು
ಬಸವಣ್ಣನಕೃಪೆಯಿಂದಱಿದು ನಮೋ ನಮೋ ಎನುತಿರ್ದೆನು! ॥೨೫॥

ಇಂತು ಬಸವರಾಜದೇವರ ಕೃಪೆಯಿಂದ ಚೆನ್ನಬಸವರಾಜದೇವರ ನಿಜವನಱಿದೆನೆಂದು ಪ್ರಭುದೇವರು ನಿರೂಪಿಸುತ್ತಿರಲು, ಆ ಚೆನ್ನಬಸವರಾಜದೇವರು ಪ್ರಭುದೇವರೊಡನೆ ಆ ಬಸವರಾಜದೇವರ ಘನವನು ಎನಗೆ ತೋಱಿಸಿಕೊಡಿಯೆಂದು ಬಿನ್ನೈಸುತ್ತಿರ್ದ ಪ್ರಸ್ತಾವದ ವಚನ:

---

೧ ತಿ (ಮೂ) ೨-೨ ಗೊಗ್ಗೇಶ್ವರ(ಮೂ)

೪೯೬

ನಿರಾಲಂಬದಲ್ಲಿ ನಿಜಲಿಂಗ ನಾನೆಂಬ
ಮಹದಹಂಕಾರವೆ ಸಂಸಾರಿಯಾಗಿ ಬಂದು
ಬಳಲುವ ಭ್ರಾಂತಿ ಇನ್ನಾರಿಗೆ ತಿಳುವುದಯ್ಯಾ?
ಇನ್ನಾರು ಪರಿಹರಿಸುವರಯ್ಯಾ, ಬಸವಣ್ಣನಲ್ಲದೆ?
ಇದುಕಾರಣ, ಕೂಡಲಚೆನ್ನಸಂಗಮದೇವಾ,
ಬಸವಣ್ಣನ ಶ್ರೀಪಾದದ ಘನವನೊಮ್ಮೆ ಅಱುಹಾ ಪ್ರಭುವೆ. ॥೨೬॥

ಮತ್ತಂ,

೪೯೭

ಎನಗಿಲ್ಲದ ಘನವನೇಜೆಸಿ ನುಡಿದರೆ
ಅದು ನಿಮ್ಮ ಲೀಲೆ,
ನಾನದ ಬೇಕೆನ್ನೆ, ಬೇಡೆನ್ನೆನದಂತಿರಲಿ.
ನಿಮ್ಮ ಶ್ರೀಪಾದದ ಕೃಪೆಯಿಂದ ನಿಮ್ಮ ನಿಲವನಜಿದೆನು
ಕೂಡಲಚೆನ್ನಸಂಗಮದೇವಾ,
ಎನಗೊಮ್ಮೆ ಬಸವಣ್ಣನ ಪರಿಯನಱುಹಾ ಪ್ರಭುವೆ. ॥೨೭॥

ಬಸವಣ್ಣನ, ಘನವನಱುಹೆಂದು ಚಿಕ್ಕದಣ್ಣಾಯಕರು ಪ್ರಭುದೇವರ ಬೆಸಗೊಳಲು, ಆ ಪ್ರಭುದೇವರು ಮರಳಿ ಚಿಕ್ಕದಣ್ಣಾಯಕರ ಬೆಸಗೊಂಬ ಪ್ರಸ್ತಾವದ ವಚನ:

೪೯೮

ಅದ್ವೈತವೆಂಬ ಶಿಶುವೆನ್ನ ಕರಸ್ಥಲವ ಸೋಂಕಲೊಡನೆ
ಎನ್ನ ತನ್ನಂತೆ ಮಾಡಿತ್ತಾಗಿ,
ಎನ್ನ ನಾನೆಂಬ ವಿಚಾರವೂ ಅಱಿತು ಹೋಯಿತ್ತು ಕೇಳಾ.
ಮತ್ತೆ ಅನ್ಯವಿಚಾರವನೆಂತೂ ಅಱಿಯೆ.
ಎನ್ನ ಪೂರ್ವಾಪರವ ನಿಮ್ಮಿಂದಲಱಿಯಲೆಂದು
ಬಂದು ನಿಮ್ಮ ಮಱೆಹೊಕ್ಕೆನಾಗಿ,
ಸಂಗನಬಸವಣ್ಣನ ಮಹಿಮೆಯ ನಾನೆತ್ತ ಬಲ್ಲೆನು
'ಗೊಹೇಶ್ವರ' ಸಾಕ್ಷಿಯಾಗಿ ಸಂಗನಬಸವಣ್ಣ
ನಿನ್ನಂತರಂಗದೊಳಗೆ ಬೆಳುಗುತ್ತೈದಾನೆ!
ಎನಗೊಮ್ಮೆ ಬಸವಣ್ಣನ ಘನವ ತಿಳುಹಿ ಕೊಡಾ ಚೆನ್ನಬಸವಣ್ಣಾ.॥೨೮॥

೪೯೯

ಆದಿಯ ತೋಱಿದೆ; ಅನಾದಿಯನಱುಹಿದೆ.
ಇಹವ ಕೆಡಿಸಿದೆ; ಪರವ ನಿಲಿಸಿದೆ.
ಕಾಯಪ್ರಸಾದ ಭಾವಪ್ರಸಾದ
ಜ್ಞಾನ ಪ್ರಸಾದವನೇಕವ ಮಾಡಿ ತೋಱಿದೆ.

ಪರವನೊಳಕೊಂಡು ಪರಿಣಾಮದಲ್ಲಿರಿಸಿದೆ.
[1]ಗೊಹೇಶ್ವರನ[1] ಶರಣ ಸಂಗನಬಸವಣ್ಣನ ಪೂರ್ವಾಪರವ ಹೇಳಿ
ಎನ್ನನುಳುಹಿಕೊಳ್ಳಾ ಚೆನ್ನಬಸವಣ್ಣಾ. ॥೨೯॥

ಇಂತು ಬಸವರಾಜದೇವರ ನಿಲವನರಿುಹೆಂದು ಪ್ರಭುದೇವರು ಬೆಸಗೊಳಲು, ಅದಕ್ಕೆ ಚಿಕ್ಕದಣ್ಣಾಯಕರು ಪ್ರಭುದೇವರೊಡನೆ ಬಸವರಾಜದೇವರ ಪೂರ್ವಾಪರ ಸಂಬಂಧಮಂ ಸುಜ್ಞಾನದೃಷ್ಟಿಯಿಂದೀಕ್ಷಿಸಿ ಬಿನ್ನೈಸುತ್ತಿರ್ದ ಪ್ರಸ್ತಾವದ ವಚನ:

೫೦೦

ಒಂದೂ ಒಂದೂ ಇಲ್ಲದಂದು,
ನಂದಿವಾಹನರಿಲ್ಲದಂದು,
ಹಿಂದೆ ಹದಿನಾಲ್ಕು ಭುವನಂಗಳಿಲ್ಲದಂದು,
ಅಂದಾರೂ ಲಿಂಗವ ಕಂಡವರಿಲ್ಲ.
ಅಂದು ಲಿಂಗವ ಕಂಡು ಹೇಳಿದರೆ,
ಆತನೆ ಅದ್ವೈತಿ ಎಂಬೆ.
ಅಂದು ಕೂಡಲಚೆನ್ನಸಂಗಯ್ಯನಲ್ಲಿ
ಬಸವಣ್ಣನೊಬ್ಬನೆ ಉದಯವಾಗಿರ್ದನು ಕೇಳಾ ಪ್ರಭುವೆ. ॥೩೦॥

ಮತ್ತಂ,

೫೦೧

ಕೃತಯುಗದಲ್ಲಿ ದೇವರು ದೇವಾಸುರನ ಕೊಲುವಲ್ಲಿ,
ಪ್ರಮಥನೆಂಬ ಗಣೇಶ್ವರನಾಗಿರ್ದನು.
ಗಜಾಸುರನ ಚರ್ಮವ ಬಿಚ್ಚಿ ಅಜಾರಿ ಹೊದೆವಲ್ಲಿ,
ಉಗ್ರನೆಂಬ ಗಣೇಶ್ವರನಾಗಿರ್ದನು.
ಅಸುರರ ಶಿರೋಮಾಲೆಯ ಕೊರಳಲ್ಲಿ ಉರದಲ್ಲಿ
ಹಾರವಾಗಿ ಧರಿಸಿ ಜಗಕ್ಕೆ ಜೂಬಾಗಿಪ್ಪಲ್ಲಿ
ಶಂಕೆ ಇಲ್ಲದೆ ನಿಶ್ಶಂಕನೆಂಬ ಗಣೇಶ್ವರನಾಗಿರ್ದನು.
ಸಮಸ್ತ ದೇವರಿಗೆ ಕರುಣಾಮೃತವ ಸುರಿದು ಸುಖವನಿತ್ತು ರಕ್ಷಿಸುವಲ್ಲಿ,
ಶಂಕರನೆಂಬ ಗಣೇಶ್ವರನಾಗಿರ್ದನು.
ಜಾಳಂಧರನೆಂಬ ಅಸುರನ ಕೊಲುವಲ್ಲಿ,
ಜಾಣರಿಗೆ ಜಾಣನಾಗಿ ವಿಚಿತ್ರನೆಂಬ ಗಣೇಶ್ವರನಾಗಿರ್ದನು.
ತ್ರೇತಾಯುಗದಲ್ಲಿ ಕಾಳಂಧರದೊಳಗೆ
ಶಿವನು ನಿಜಮಂದಿರವಾಗಿಪ್ಪಲ್ಲಿ,

೧-೧ ಗೊಗ್ಗೇಶ್ವರ(ಮೂ)

ಕಾಲಾಗ್ನಿರುದ್ರನೆಂಬ ಗಣೇಶ್ವರನಾಗಿರ್ದನು,
ಪಿತಾಸುರನೆಂಬ ದೈತ್ಯನ ಕೊಂದು ಜನವ ರಕ್ಷಿಸುವಲ್ಲಿ,
ಮಾತಾಪಿತನೆಂಬ ಗಣೇಶ್ವರನಾಗಿರ್ದನು.
ತಾಳಾಸುರನೆಂಬ ದೈತ್ಯನ ಕೊಂದು ಜಗವ ರಕ್ಷಿಸಿ
ಸೃಷ್ಟಿಯ ಕಲ್ಪಿಸಿ ಬ್ರಹ್ಮಾಂಡ ಭಾರಮಂ ಧರಿಸುವಲ್ಲಿ,
ತಾಳಸಮೇಳನೆಂಬಗಣೇಶ್ವರನಾಗಿರ್ದನು.
ಜಲಪ್ರಳಯದಲ್ಲಿ ಜಗನ್ನಾಥನು ಅಳಿಯದೆ ಇಪ್ಪಲ್ಲಿ,
ಜನನಮರಣವರ್ಜಿತನೆಂಬ ಗಣೇಶ್ವರನಾಗಿರ್ದನು.
ಜಗವೆಲ್ಲ ಶೂನ್ಯವೆಂದರೆ, ನಾನೆ ಹುಟ್ಟಿಸಿದೆನೆಂದು,
ಆದಿಗಣನಾಥನೆಂಬ ಗಣೇಶ್ವರನಾಗಿರ್ದನು.
ಸುರಾಸುರರಹಂಕಾರದಲ್ಲಿ ಹೆಚ್ಚಿ ಮೇರೆದಪ್ಪಿದಲ್ಲಿ,
ಗೂಳಿಯಾಗಿ ಹೋರಿ, ಎಲ್ಲರ ತೊತ್ತಳದುಳಿದು ಒಕ್ಕಲಿಕ್ಕಿ
ಮಿಕ್ಕು ಮೀಱಿ ನಂದಿಮಹಾಕಾಳನೆಂಬ ಗಣೇಶ್ವರನಾಗಿರ್ದನು.
ಉರಿಗಣ್ಣ ತೆಗೆದರೆ ಉರಿದಹವು ಲೋಕಂಗಳೆಂದು
ಜಗವ ಹಿಂದಿಕ್ಕಿಕೊಂಡು, ವಂದ್ಯನೆಂಬ ಗಣೇಶ್ವರನಾಗಿರ್ದನು,
ಉಮೆಯ ಕಲ್ಯಾಣದಲ್ಲಿ,
ಕಾಲಲೋಚನನೆಂಬ ಗಣೇಶ್ವರನಾಗಿರ್ದನು.
ಅಂಧಕಾಸುರನ ಕೊಲುವಲ್ಲಿ,
ನೀಲಲೋಹಿತನೆಂಬ ಗಣೇಶ್ವರನಾಗಿರ್ದನು.
ತ್ರಿಪುರದಹನವ ಮಾಡುವಲ್ಲಿ,
ಸ್ಕಂದನೆಂಬ ಗಣೇಶ್ವರನಾಗಿರ್ದನು.
ಬ್ರಹ್ಮಕಪಾಲ ವಿಷ್ಣು ಕಂಕಾಳವನಿಕ್ಕುವಲ್ಲಿ,
ನೀಲಕಂಠನೆಂಬ ಗಣೇಶ್ವರನಾಗಿರ್ದನು,
ದ್ವಾಪಾರದಲ್ಲಿ ಲಿಂಗಪ್ರಾಣ ಸಂಯೋಗವಾಗಿ,
ವೃಷಭನೆಂಬ ಗಣೇಶ್ವರನಾಗಿರ್ದನು.
ಇಂತು ನಾಲ್ಕು ಯುಗ ಹದಿನೆಂಟುಯುಗಂಗಳು
ಮಡಿವಲ್ಲಿ, ಹುಟ್ಟುವಲ್ಲಿ ನಂದಿಕೇಶ್ವರನೆಂಬ ಗಣೇಶ್ವರನಾಗಿರ್ದನಯ್ಯಾ.
ಕಲಿಯುಗದಲ್ಲಿ ಗುರು ಲಿಂಗ ಜಂಗಮ ಪಾದೋದಕ ಪ್ರಸಾದದ
ಪೂರ್ವಾಶ್ರಯವ ಕಳೆದು, ಲಿಂಗವಾಗಿ ಕುಳಸ್ಥಲವನಱಿತ
ಮಹಂತ ಕೂಡಲಚೆನ್ನಸಂಗನ ಮಹಾಮನೆಯಲ್ಲಿ
ಸರ್ವಾಚಾರಸಂಪನ್ನ ಬಸವಣ್ಣನೆಂಬ ಗಣೇಶ್ವರನಾಗಿರ್ದನು ಕೇಳಾ ಪ್ರಭುವೆ. ॥೩೧॥

ಇಂತು ಚಿಕ್ಕದಣ್ಣಾಯಕರು ಬಸವರಾಜದೇವರ ಪೂರ್ವಾಪರ ಸಂಗತ್ಯಮಂ ಬಿನ್ನೈಸಲು, ಆ ಪ್ರಭುದೇವರು ಚಿಕ್ಕದಣ್ಣಾಯಕರಱಿವ ಕೊಂಡಾಡುವ ಪ್ರಸ್ತಾವದ ವಚನ:

೫೦೨

ಅಂದಂದಿನ ಮಾತನು ಅಂದಂದಿಗೆ ಅಱಿಯಬಾರದು,
ಹಿಂದೆ ಹೋದ ಯುಗ ಪ್ರಳಯಂಗಳ ಬಲ್ಲವರಾರಯ್ಯಾ?
ಮುಂದೆ ಬಪ್ಪ ಯುಗ ಪ್ರಳಯಂಗಳ ಬಲ್ಲವರಾರಯ್ಯ?
ಬಸವಣ್ಣನು ಆದಿಯಲ್ಲಿ ಲಿಂಗ ಶರಣನೆಂಬುದ
ಭೇದಿಸಿ ನೋಡಿ ಅಱಿವರಿನ್ನಾರಯ್ಯ?
ಲಿಂಗ ಜಂಗಮ ಪ್ರಸಾದದ ಮಹಾತ್ಮೆಗೆ
ಬಸವಣ್ಣನೆ ಆದಿಯಾದನೆಂಬುದನಱಿದ ಸ್ವಯಂಭುಜ್ಞಾನಿ
[1]ಗೊಹೇಶ್ವರ[1]ಲಿಂಗದಲ್ಲಿ ಚೆನ್ನಬಸವಣ್ಣನೊಬ್ಬನೆ. ॥೩೨॥

ಬಸವಣ್ಣನೆ ಆದಿ ಶರಣ, ಆತನ ಮಹಿಮೆಯನಱಿದ ನಿನ್ನ ಜ್ಞಾನಕ್ಕೆ ಪ್ರತಿ ಇಲ್ಲವೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಚೆನ್ನಬಸವರಾಜದೇವರು ಬಸವಣ್ಣನೆ ಆದಿ ಶರಣನೆಂದು ನುಡಿಯಲಾಗದೆಂದು ಪ್ರಭುದೇವರೊಡನೆ ಬಿನ್ನೈಸುವ ಪ್ರಸ್ತಾವದ ವಚನ:

೫೦೩

ಆದಿ ಬಸವಣ್ಣನು, ಅನಾದಿ ಲಿಂಗವೆಂಬುದು ತಾ ಹುಸಿ ಹುಸಿ.
ಈ ನುಡಿಯ ಕೇಳಲಾಗದು.
ಆದಿ ಲಿಂಗ, ಅನಾದಿ ಬಸವಣ್ಣನು.
ಲಿಂಗವು ಬಸವಣ್ಣನುದರದಲ್ಲಿ ಹುಟ್ಟಿತ್ತು.
ಜಂಗಮವು ಬಸವಣ್ಣನುದರದಲ್ಲಿ ಹುಟ್ಟಿತ್ತು.
ಪ್ರಸಾದವು ಬಸವಣ್ಣನನುಕರಿಸಲಾಯಿತ್ತು.
ಈ ತ್ರಿವಿಧಕ್ಕೆ ಬಸವಣ್ಣನೆ ಕಾರಣನೆಂದಱಿದೆನಯ್ಯಾ
ಕೂಡಲಚೆನ್ನಸಂಗಮದೇವಾ. ॥೩೩॥

ಈ ಹೀಂಗೆಂದು ಚಿಕ್ಕದಣ್ಣಾಯಕರು ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರತ್ಯುತ್ತರ:

೫೦೪

ಕಾಯವಿಡಿದು ಹುಟ್ಟಿದಾತ ಕಾಲಾಗ್ನಿರುದ್ರನಾಗಲಿ,
ಕಾಯವಿಡಿದು ಹುಟ್ಟಿದಾತ ಕಾಮಸಂಹಾರಿಯಾಗಲಿ,
ಕಾಯವಿಡಿದು ಹುಟ್ಟಿದಾತ ಅನಾದಿ ಪರಮೇಶ್ವರನಾಗಲಿ,
ಅಱಿವು ಸಾಧ್ಯವಾಗದು ಆರಿಗೆಯೂ.
[1]ಗೊಹೇಶ್ವರ[1]ಲಿಂಗದಲ್ಲಿ ನೀನು ಕಾಯವಿಡಿದು
ಕಲ್ಪಿತವ ಹೊದ್ದನೆಂಬುದು ಕಾಣಬಂದಿತ್ತು ನೋಡಾ ಚೆನ್ನಬಸವಣ್ಣಾ.॥೩೪॥

೧-೧ ಗೊಗ್ಗೇಶ್ವರ (ಮೂ)

ಇಂತು ಶರೀರವಿಡಿದ ದಿವ್ಯಜ್ಞಾನಿ ನೀನೊಬ್ಬನೆ ಎಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಚಿಕ್ಕದಣ್ಣಾಯಕರು ಕಾಯವಿಡಿದು ನಿಮ್ಮ ಕಂಡೆನೆಂದು ಬಿನ್ನೈಸಿದ ಪ್ರಸ್ತಾವದ ವಚನ:

೫೦೫

ಕಾಯದಿಂದ ಲಿಂಗದರ್ಶನ,
ಕಾಯದಿಂದ ಜಂಗಮದರ್ಶನ,
ಕಾಯದಿಂದ ಪ್ರಸಾದ ಸಂಪತ್ತು
ಕೂಡಲಚೆನ್ನಸಂಗಯ್ಯಾ ಕಾಯದಿಂದ ನಿಮ್ಮ ಕಂಡೆನು! ॥೩೫॥

ಇಂತು ಶರೀರವಿಡಿದು ನಿಮ್ಮ ಕಂಡೆನೆಂದು ಬಿನ್ನೈಸಲು, ಇದಕ್ಕೆ ಪ್ರಭುದೇವರು ಆಚಾರ ಅಂಗವಾಗಿ[1]ಪ್ಪಡೆ[1] ನೀವಲ್ಲದೆ ಮತ್ತಾರೂ ಇಲ್ಲವೆಂದು ಚಿಕ್ಕದಣ್ಣಾಯಕರ ಕೊಂಡಾಡಿದ ವಚನ:

೫೦೬

ಅಂಗವಿಡಿದು, ಅಂಗ ಅನಂಗವೆಂಬೆರಡನೂ
ಹೊದ್ದದ ಮಹಿಮನ ನೋಡಾ!
ಅಂಗವೆ ಆಚಾರವಾಗಿರಬಲ್ಲ,
ಆಚಾರವೆ ಅಂಗವಾಗಿರಬಲ್ಲನಾಗಿ,
ಅಂಗವಿಲ್ಲದಪ್ರತಿಮನ ನೋಡಾ!
ಆಚಾರವೆ ಸ್ವಾಯತ, ಆಚಾರವೆ ಪ್ರಾಣ!
[2]ಗೊಹೇಶ್ವರ[2]ಲಿಂಗದಲ್ಲಿ ನಿನ್ನ ಆಚಾರಭಿಕ್ಷವನಿಕ್ಕಾ ಚೆನ್ನಬಸವಣ್ಣಾ. ॥೩೬॥

ನೀನು ಸದಾಚಾರವೆ ಸರ್ವಾಂಗವಾಗಿಪ್ಪೆಯಾಗಿ, ಎನಗೆ ನಿನ್ನ ಸರ್ವಾಚಾರ ಸಂಪತ್ತಿನ ಕಾರುಣ್ಯಪ್ರಸಾದವನಿಕ್ಕೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಚಿಕ್ಕದಣ್ಣಾಯಕರು ಆಚಾರವೆಂಬುದು ಸಂಗನಬಸವಣ್ಣಂಗುಂಟಲ್ಲದೆ ಎನಗೆ ಇಲ್ಲೆಂದು ಬಿನ್ನೈಸುವ ಪ್ರಸ್ತಾವದ ವಚನ:

೫೦೭

ಗುರುಲಿಂಗದಲ್ಲಿ ಆಗಾಗಿ,
ಆಚಾರಲಿಂಗಪ್ರಸಾದಿಯಾದ.
ಆ ಆಚಾರಲಿಂಗದಲ್ಲಿ ಅವಧಾನಿಯಾಗಿ,
ಸರ್ವಾಚಾರಸಂಪನ್ನನಾದ.
ಸರ್ವಾಚಾರಸಂಪತ್ತಿನಲ್ಲಿ ಲಿಂಗೈಕ್ಯನಾಗಿಪ್ಪನು.
ಕೂಡಲಚೆನ್ನಸಂಗಯ್ಯನಲ್ಲಿ
ಸಂಗನಬಸವಣ್ಣನು ಆಚಾರವ ಬಲ್ಲನಲ್ಲದೆ ನಾನೆತ್ತ ಬಲ್ಲೆನಯ್ಯಾ?॥೩೭॥

ಮತ್ತಂ,

೧-೧ ಪ್ಪುದೆ(ಮೂ) ೨-೨ ಗೊಗ್ಗೇಶ್ವರ(ಮೂ)

೫೦೮

ಆಚಾರವೆಂಬುದು ಅಗೋಚರ ನೋಡಯ್ಯಾ!
ಮಾಡಿದಲ್ಲದೆ ಇಲ್ಲ.
ಒಡಲುವಿಡಿದರೆ ಹಿಡಿಯಲಿಲ್ಲವಯ್ಯಾ
ಮಾಟಕೂಟವೆಂಬ ಈಸುವ ಕಳೆದಿಪ್ಪ
ಕೂಡಲಚೆನ್ನಸಂಗಯ್ಯನಲ್ಲಿ
ಆಚಾರದನುವ ಸಂಗನಬಸವಣ್ಣ ಬಲ್ಲ ನೋಡಾ ಪ್ರಭುವೆ. ॥೩೮॥

ಆಚಾರದನುವ ಬಸವಣ್ಣ ಬಲ್ಲನೆಂದು ಚಿಕ್ಕದಣ್ಣಾಯಕರು ಬಿನ್ನೈಸಲು, ಆ ಬಸವಣ್ಣನಾಚಾರವೆಂತಿರ್ಪುದೆಂದು ಪ್ರಭುದೇವರು ಚಿಕ್ಕದಣ್ಣಾಯಕರ ಬೆಸಗೊಂಬ ಪ್ರಸ್ತಾವದ ವಚನ:

೫೦೯

ಆಯತ ಸ್ವಾಯತ ಸನ್ನಿಹಿತನಾಗಿ
ಆಚಾರಲಿಂಗದಲ್ಲಿ ಅನುಭಾವಿಯಾಗಿಪ್ಪನು.
ಜಂಗಮಲಿಂಗಪ್ರಾಣಿಯಾಗಿ ಪ್ರಾಣ ನಿಷ್ಪ್ರಾಣವಾಗಿಪ್ಪನು,
ಗೊಹೇಶ್ವರಲಿಂಗದಲ್ಲಿ ಸಂಗನಬಸವಣ್ಣನ ಆಚಾರದ ಪರಿ
ನಿನಗಲ್ಲದೆ ಅಱಿಯಬಾರದು.
ಎನಗೊಮ್ಮೆ ತಿಳುಹಿಕೊಡಾ ಚೆನ್ನಬಸವಣ್ಣಾ. ॥೩೯॥

ಇಂತು ಬಸವರಾಜದೇವರ ಆಚಾರದನುವನು ಎನಗೊಮ್ಮೆ ತಿಳುಹಿಕೊಡೆಂದು ಪ್ರಭುದೇವರು ನಿರೂಪಿಸಲು, ಚಿಕ್ಕದಣ್ಣಾಯಕರು ಬಸವರಾಜದೇವರ ಸದಾಚಾರ ವರ್ತನೆಯ ಪ್ರಭುದೇವರೊಡನೆ ಬಿನ್ನೈಸಿದ ಪ್ರಸ್ತಾವದ ವಚನ:

೫೧೦

ಆಚಾರವಂಗಸಂಬಂಧವಾದಲ್ಲಿ ಶ್ರೀಗುರು ಸನ್ನಿಹಿತ.
ಅಱಿವ ಮನ ಲಿಂಗಸಂಬಂಧವಾದಲ್ಲಿ ಶಿವಲಿಂಗ ಸನ್ನಿಹಿತ.
ಈ ಉಭಯ ಸನ್ನಿಹಿತವಾದಲ್ಲಿ ಜಂಗಮ ಸನ್ನಿಹಿತ.
ಇದು ಕಾರಣ ಕೂಡಲಚೆನ್ನಸಂಗಾ,
ನಿಮ್ಮಲ್ಲಿ ತ್ರಿವಿಧಸಂಪನ್ನ ಶರಣ ಸಂಗನಬಸವಣ್ಣನು. ॥೪೦॥

ಮತ್ತಂ,

೫೧೧

ಗುರುವಿನಲ್ಲಿ ಸದಾಚಾರಿ, ಲಿಂಗದಲ್ಲಿ ಶಿವಾಚಾರಿ,
ಜಂಗಮಲ್ಲಿ ಸಮಯಾಚಾರಿ, ಪ್ರಸಾದದಲ್ಲಿ ಬ್ರಹ್ಮಚಾರಿ,
ಆಚಾರದಲ್ಲಿ ಸುವಿಚಾರಿ,
ಕೂಡಲಚೆನ್ನಸಂಗಾ, ನಿಮ್ಮ ಶರಣ ಬಸವಣ್ಣನು. ॥೪೧॥

ಮತ್ತಂ,

೫೧೨

ಮರಕ್ಕೆ ಬಿತ್ತು ಹುಟ್ಟಿದರೇನಯ್ಯಾ?
ಬಿತ್ತಿಂಗೆ ಮರ ಹುಟ್ಟಿದರೇನಯ್ಯಾ?
ಮರದ ಬೆಳಸಿನ ಫಲದ ಪರಿಯ ಬೆಸಗೊಳಲಿಲ್ಲ.
ಸಸಿ ಪಲ್ಲವಿಸಿ ತ್ರಿವಿಧವಾಯಿತ್ತು,
ಕೂಡಲಚೆನ್ನಸಂಗಾ, ನಿಮ್ಮ ಶರಣ ಬಸವಣ್ಣಂಗೆ. ॥೪೨॥

ಇಂತು ಚೆನ್ನಬಸವರಾಜದೇವರು ಸಂಗನಬಸವಣ್ಣನ ಸರ್ವಾಚಾರಸಂಪತ್ತ ಕೊಂಡಾಡಿ ಪ್ರಭುದೇವರಿಗೆ ಬಿನ್ನೈಸಲು, ಆ ಪ್ರಭುದೇವರು ಬಸವರಾಜದೇವರು ಮಾಡುವ ದಾಸೋಹವನ್ನು ಮಥನಿಸಿ ನೋಡುವ ಪ್ರಸ್ತಾವದ ವಚನ:

೫೧೩

ಲಿಂಗದಲ್ಲಿ ಆಗಾಗಿ,
ಅಂಗವಿರಹಿತನಾಗಿ ಫಲವೇನಯ್ಯಾ?
ಜಂಗಮದಲ್ಲಿ ಸನ್ನಿಹಿತನಾಗಿ,
ದಾಸೋಹವ ಮಾಡಿ ಫಲವೇನಯ್ಯಾ?
ನೀನಾನೆಂಬ ಭಾವವುಳ್ಳನ್ನಕ್ಕರ
ಜಂಗಮದಲ್ಲಿ ಸಮಯಾಚಾರಿಯಾಗಿಪ್ಪನ್ನಕ್ಕರ
ಮಾಡುವ ಭಕ್ತಿಗೆ ಭಿನ್ನವದೆ.
[೧]ಗೊಹೇಶ್ವರ[೧]ಲಿಂಗದಲ್ಲಿ ಸಂಗನಬಸವಣ್ಣಂಗೆ
ಆಚರಣೆ ತಿಳಿಯದು ನೋಡಾ ಚೆನ್ನಬಸವಣ್ಣಾ. ॥೪೩॥

ಇಂತು ಪ್ರಭುದೇವರು ಬಸವರಾಜದೇವರಿಗೆ ವರ್ತನೆ ತಿಳಿಯದೆಂದು ನಿರೂಪಿಸಲು, ಚಿಕ್ಕದಣ್ಣಾಯಕರು ಆ ಬಸವರಾಜದೇವರ ವರ್ತನೆಯ ನಿಲವನು ಪ್ರಭುದೇವರೊಡನೆ ಬಿನ್ನೈಸುತಿರ್ದ ಪ್ರಸ್ತಾವದ ವಚನ:

೫೧೪

ಸಂಗವಿಡಿದರೆ ಸಂಗವಿಡಿದು ನೋಡದಿರಯ್ಯಾ.
ಶರಣ ಸಂಗಸೂತಕಿಯಲ್ಲ. ಲಿಂಗಪರಿಚಿತನ ಸಂಗವಂತನೆನ್ನದಿರಯ್ಯಾ!
ಶರಣ ಮನ ಬಂದಂತೆ ಮಾಡುವ.
ಅಱಿಸಿ ಸಕಲಾಗಮಾಚಾರ್ಯನಪ್ಪ.
ಅಹುದಾಗದೆಂಬುದಿಲ್ಲ ನೋಡಯ್ಯಾ.
ಕೂಡಲಚೆನ್ನಸಂಗಾ,
ನಿಮ್ಮ ಶರಣ ಬಸವಣ್ಣನು ಸಂಗಿಯಲ್ಲ, ನಿಸ್ಸಂಗಿಯಲ್ಲ. ॥೪೪॥

ಮತ್ತಂ,

೧-೧ ಗೊಗ್ಗೇಶ್ವರ(ಮೂ)

೫೧೫

ಆನೆಂಬುದಿಲ್ಲವಯ್ಯಾ ಲಿಂಗವೆಂಬ ಮಹಂತಂಗೆ.
ಅಳಿಯನುಳಿಯ ನೋಡಾ!
ಮಿಂಚಿನ ಗೊಂಚಲಂತೆ ಮುಂದೆ ರೂಪಾಗಿ ತೋಱುತ್ತಿರ್ಪನು.
ಶರಣನೊಡಲುಗೊಂಡಡೆ ಸಾಮಾನ್ಯನೆ?
ಪ್ರಕೃತಿಗುಣಭಿನ್ನಭಾವಿಯಲ್ಲ.
ಕೂಡಲಚೆನ್ನಸಂಗಾ, ನಿಮ್ಮ ಶರಣ ಬಸವಣ್ಣನ ಪರಿ ಬೇಱೆ. ॥೪೫॥

ಮತ್ತಂ,

೫೧೬

ಅನಾಯಸದಿಂದ ಮನೆಯ ಮಾಡಿ,
ನಿರಾಯಸದಿಂದ ಪರಮಸುಖಿ.
ರೂಹಿಸುವಲ್ಲಿ ರೂಪಾಧಿಕ, ನೋಡುವಲ್ಲಿ ನೋಟ ಘನ.
ಇಂತಹ ಸಹಜ ಸಂಗಿಯ ನಿಲವಿನ ಪರಿ
ಉದಕದೊಳಗಣ ಬಿಂದು ಉದಯರತ್ನದ ಸಂಚದಂತೆ.
ಕೂಡಲಚೆನ್ನಸಂಗಾ, ನಿಮ್ಮ ಶರಣನ ಪರಿ ಬೇಱೆ. ॥೪೬॥

ಮತ್ತಂ,

೫೧೭

ಶರಣನು ದೃಷ್ಟಾದೃಷ್ಟವನಱಿಯನು.
ಸಾವಯ ನಿರವಯವನೇನೆಂದು ವಿವರಿಸಿ ನುಡಿಯನು.
ತಾನು ಸ್ವತಂತ್ರನಾಗಿ ಭಾವರಹಿತನು.
ವಿಕೃತವೇಷದಿಂದ ಸುಕೃತವ ಜೋಡಿಸುವನಲ್ಲ.
ಪ್ರಕೃತಿಗುಣವಿಡಿದು ಮೂರ್ತಿಯಾದ ಉಪಜೀವಕನಲ್ಲ
ಕೂಡಲಚೆನ್ನಸಂಗಾ, ನಿಮ್ಮ ಶರಣ ಸಾರಾಯಸನುಮತನು. ॥೪೭॥

ಮತ್ತಂ,

೫೧೮

ದೇಹಿಯಲ್ಲ, ನಿರ್ದೇಹಿಯಲ್ಲ,
ಬೋಧಕನಲ್ಲ, ನಿರ್ಬೋಧಕನಲ್ಲ.
ಕಾಮಿಯಲ್ಲ, ನಿಷ್ಕಾಮಿಯಲ್ಲ
ಆಶೆವಿಡಿದು ಬಂದ ಅನಿಮಿಷನಲ್ಲ.
ಅವಗುಣವಿಲ್ಲದ ನಿರ್ಗುಣಿ ನೋಡಯ್ಯಾ!
ಕೂಡಲಚೆನ್ನಸಂಗಾ, ನಿಮ್ಮ ಶರಣ ನೋಡಯ್ಯಾ! ॥೪೮॥

ಮತ್ತಂ,

೫೧೯

ಮೂರ್ತನಲ್ಲ, ಅಮೂರ್ತನಲ್ಲ.
ಲಿಂಗದಲ್ಲಿ ಪ್ರಾಣಸಂಚಿತ.
ಪ್ರಾಣದಲ್ಲಿ ಪ್ರಸಾದ ಸಂವರಣೆ.
ಪ್ರಸಾದದಲ್ಲಿ ಕಾಯಾಶ್ರಿತನು.
ಲೋಕಲೌಕಿಕ ಪ್ರಕಾರದುದಯನಲ್ಲ.
ಕೂಡಲಚೆನ್ನಸಂಗಾ, ನಿಮ್ಮ ಶರಣನು. ॥೪೯॥

ಮತ್ತಂ,

೫೨೦

ಶರಣ ದೃಷ್ಟಾದೃಷ್ಟ ಕಾಣಯ್ಯಾ!
ಮುಟ್ಟದೆ ಮುಟ್ಟುವ ಕಾಣಯ್ಯಾ.
ಆಗಿನ ಆಗು ಕಾಣಯ್ಯಾ.
ಭೇದದ ಭೇದ ಕಾಣಯ್ಯಾ.
ಅರಿವಿನ ಅಜೆವು ಕಾಣಯ್ಯಾ.
ಲಿಂಗದಲ್ಲಿ ಹಿಂಗದ ಬಿಂದು,
ಕೂಡಲಚೆನ್ನಸಂಗಾ ನಿಮ್ಮಲ್ಲಿ ಬಸವಣ್ಣ ಕಾಣಯ್ಯಾ. ॥೫೦॥

ಮತ್ತಂ,

೫೨೧

ಸಕಳ ನಿಷ್ಕಳನಯ್ಯಾ ನಿಷ್ಕಳ ಸಕಳನಯ್ಯಾ.
ಸಕಳನಾಗಿ ಸಂಸಾರಿಯಲ್ಲ.
ನಿಷ್ಕಳನಾಗಿ ವೈರಾಗಿಯಲ್ಲ.
ಸಂಸಾರಿಯಲ್ಲದ ಸಂಗವು;
ವೈರಾಗಿಯಲ್ಲದ ನಿಸ್ಸಂಗವು.
ಉಭಯಸಂಗದಿಂದ ಮಹತ್ತನೈದಿಪ್ಪನಾಗಿ,
'ಸ್ಥಾವರಂ ಜಂಗಮಶ್ಚೈವ ದ್ವಿವಿಧಂ ಲಿಂಗಮುಚ್ಯತೇ'
ಎಂದುದಾಗಿ,
ಕೂಡಲಚೆನ್ನಸಂಗನೆಂತಿದ್ದುದಂತೆ ಇಪ್ಪನಲ್ಲದೆ
ನಿಮ್ಮ ಶರಣ ಕ್ಷೀಣನಲ್ಲ. ॥೫೧॥

ಇಂತು ಚಿಕ್ಕದಣ್ಣಾಯಕರು ಬಸವರಾಜದೇವರ ನಿಲವಿನ ಮಹಾತ್ಮೆಯನು ನಾನಾ ವಿಧದಿಂ ಸ್ತೋತ್ರಮಂ ಮಾಡುತ್ತ ಪ್ರಭುದೇವರಿಗೆ ಬಿನ್ನಪಂಗೈಯಲು, ಆ ಪ್ರಭುದೇವರು ಪ್ರಸನ್ನರಾಗಿ ಚಿಕ್ಕದಣ್ಣಾಯಕರ ಕೊಂಡಾಡಿದ ಪ್ರಸ್ತಾವದ ವಚನ

೫೨೨

ಅಂಗವೆಂಬ ಸಂಸಾರದೊಳಗೆ ಸವೆದವರೆಲ್ಲರೂ ಶಿವನನಜಿವರೆ?
ಮನವೆಂಬ ಸಂಕಲ್ಪದ ಕುಣಿಗೆ ಒಳಗಾದವರೆಲ್ಲರೂ
ಮಾಯದ ಹೊಡೆಗಿಚ್ಚ ಗೆಲಬಲ್ಲರೆ?
[1]ಗೊಹೇಶ್ವರ[1]ಲಿಂಗದಲ್ಲಿ ಸರ್ವಸಂದೇಹವ ಕಳೆದಿಪ್ಪ
ಚೆನ್ನಬಸವಣ್ಣಂಗೆ ನಮೋ ನಮೋ ಎಂಬೆ! ॥೫೨॥

ಮತ್ತಂ,

೫೨೩

ತಾನೆಂದೆನಲೊಲ್ಲದೆ ಗುರುವೆಂದು ಹಿಡಿದವನ,
ಗುರುವೆಂದಲ್ಲಿ ನೀನೆಂದು ನಡೆದವನ,
ನೀನೆಂದಲ್ಲಿಯೆ ಲಿಂಗ ಜಂಗಮದ
ಸಕೀಲಸಂಬಂಧವ ನೆಲೆಗೊಳಿಸಿದವನ,
ಲಿಂಗ ಜಂಗಮದಲ್ಲಿ ತನ್ನ ಮಱೆದು ಕಱೆಗೊಂಡ ಲಿಂಗೈಕ್ಯನ,
ಗೊಹೇಶ್ವರಲಿಂಗದಲ್ಲಿ ಚೆನ್ನಬಸವಣ್ಣನ ಶ್ರೀಪಾದಕ್ಕೆ
ನಮೋ ನಮೋ ಎನುತಿರ್ದೆನು! ॥೫೩॥

ಇಂತು ಪ್ರಭುದೇವರು ಚಿಕ್ಕದಣ್ಣಾಯಕರ ಸ್ತೋತ್ರಮಂ ಮಾಡಲು ಆ ಚಿಕ್ಕದಣ್ಣಾಯಕರು ತಮ್ಮ ಸಂಸಾರಭ್ರಾಂತಿಯ ಪ್ರಭುದೇವರಿಂದಳಿದು ಕೃತಾರ್ಥನಾದೆನೆಂದು ಸ್ತೋತ್ರಮಂ ಮಾಡಿದ ಪ್ರಸ್ತಾವದ ವಚನ:

೫೨೪

ಇಲ್ಲದ ಸಂಸಾರ ಕಣ್ಣ ಮುಂದೆ ರೂಪಾಗಿ ಕಾಡುತ್ತಿರ್ದರೆ,
ಸುಜ್ಞಾನವೆಂಬ ಅಂಜನವ ಹಚ್ಚಿ,
ಸಕಲಭ್ರಮೆಯೆಂಬ ಕತ್ತಲೆಯ ಕಳೆದು,
ನಿಜಲಿಂಗಸಂಬಂಧವ ನೆಲೆಗೊಳಿಸಿ ನಿತ್ಯದಲ್ಲಿ ಅಚ್ಚೊತ್ತಿದನಾಗಿ,
ಕೂಡಲಚೆನ್ನಸಂಗನಲ್ಲಿ ಪ್ರಭುದೇವರ ಶ್ರೀಪಾದಕ್ಕೆ
ನಮೋ ನಮೋ ಎಂಬೆನು! ॥೫೪॥

ಈ ಹೀಂಗೆಂದು ಸ್ತೋತ್ರಂಗೆಯ್ದು ಬಿನ್ನಪಂಗೈಯಲು ಮರಳಿ ಪ್ರಭುದೇವರು ಚಿಕ್ಕದಣ್ಣಾಯಕರ ಕೊಂಡಾಡಿದ ವಚನ:

೫೨೫

ನರಲೋಕದ ನರರುಗಳೆಲ್ಲರು ನರಸಂಸಾರಕ್ಕೊಳಗಾದರು.
ಸುರಲೋಕದ ಸುರರುಗಳೆಲ್ಲರು ಸುರಸಂಸಾರಕ್ಕೊಳಗಾದರು.
ಮುನಿಲೋಕದ ಮುನಿಗಳೆಲ್ಲರು ತಪೋಸಂಸಾರಕ್ಕೊಳಗಾದರು.

೧-೧ ಗೊಗ್ಗೇಶ್ವರ(ಮೂ)

ಜಂಗಮವ ಪೂಜಿಸುವರೆಲ್ಲರು ಸಾಯುಜ್ಯಸಂಸಾರಕ್ಕೊಳಗಾದರು.
ರುದ್ರಲೋಕದ ರುದ್ರಗಣಂಗಳೆಲ್ಲರು
ರುದ್ರಪದವೆಂಬ ಸಂಸಾರಕ್ಕೊಳಗಾದರು.
ಲಿಂಗವ ಧರಿಸಿದವರೆಲ್ಲರು ಲಿಂಗಸಂಸಾರಕ್ಕೊಳಗಾದರು.
ಪ್ರಸಾದ ಪಾದೋದಕ ಸಂಬಂಧಿಗಳೆಲ್ಲರು ಪ್ರಸಾದಸಂಸಾರಕ್ಕೊಳಗಾದರು.
ಗೊಹೇಶ್ವರಲಿಂಗದಲ್ಲಿ ಸರ್ವಸಂಸಾರವಿರಹಿತನು
ಚೆನ್ನಬಸವಣ್ಣಂಗೆ ನಮೋ ನಮೋ ಎಂಬೆನು! ॥೫೫॥

ಇಂತು ಪ್ರಭುದೇವರು ಸ್ತೋತ್ರಮಂ ಮಾಡಲು, ಚಿಕ್ಕದಣ್ಣಾಯಕರು ತಾವು ಪ್ರಭುದೇವರ ಬೆರಸಿ ಕೃತಾರ್ಥರಾದ ಭಾವವ ತೋಱಿ, ಆ ಪ್ರಭುದೇವರ ಕೊಂಡಾಡಿದ ಪ್ರಸ್ತಾವದ ವಚನ:

೫೨೬

ಎನ್ನ ಸಂಸಾರಸೂತಕವ ತೊಡೆದು,
ನಿಜಲಿಂಗದಲ್ಲಿ ನಿರಹಂಕಾರವೆಂಬ
ಘನವ ತೋಱಿದನಯ್ಯಾ ಒಬ್ಬ ಶರಣನು.
ಎನಗಾರೂಯಿಲ್ಲವೆಂದು,
ಪ್ರಭುದೇವರೆಂಬ ಒಬ್ಬ ಶರಣನ ಕೃತಾರ್ಥನ ಮಾಡಿ
ಎನ್ನ ಕಣ್ಣಮುಂದೆ ಸುಳಿಸಿದನಯ್ಯಾ ಒಬ್ಬ ಶರಣನು.
ಆ ಶರಣನ ಕೃಪೆಯಿಂದ ಪ್ರಭುದೇವರೆಂಬ ಘನವ ಕಂಡು,
ಮನ ಮನ ಲೀಯವಾಗಿ ಘನ ಘನ ಒಂದಾದ ಕಾರಣ
ಕೂಡಲಚೆನ್ನಸಂಗಯ್ಯನಲ್ಲಿ ಅಲ್ಲಯ್ಯನೆಂಬ ಮಹಿಮಗೆ
ನಮೋ ನಮೋ ಎನುತಿರ್ದೆನು! ॥೫೬॥

ಇಂತು ಚಿಕ್ಕದಣ್ಣಾಯಕರು ತಮಗೂ ಪ್ರಭುವಿಗೂ ಒಂದೇ ಸಾಂಪ್ರದಾಯದಲ್ಲಿ ನಿಜಪದ ಸಾಧ್ಯವಾಯಿತ್ತೆಂದು ಬಿನ್ನಪಂಗೈಯಲು, ಇದಕ್ಕೆ ಪ್ರಭುದೇವರು ಚಿಕ್ಕದಣ್ಣಾಯಕರೊಡನೆ ಇಬ್ಬರಿಗೆಯೂ ಒಂದೇ ಠಾವಿನಲ್ಲಿ, ಸಾಂಪ್ರದಾಯದಲ್ಲಿ ನಿಜವಳವಟ್ಟ ಪರಿ ಎಂತೆಂದು ಬೆಸಗೊಂಬ ಪ್ರಸ್ತಾವದ ವಚನ:

೫೨೭

ತಿಂಬ ಗಂದೆಯ ಮೇಲೆ ಉಗುರು ಬಿದ್ದಂತಾಯಿತ್ತು.
ಅಱಸುವ ಬಳ್ಳಿ ಕಾಲ ಸುತ್ತಿದಂತಾಯಿತ್ತು.
ನಾನು ಬಯಸುವ ಬಯಕೆ ತಾರ್ಕಣೆಗೆ ಬಂದಿತ್ತು.
[1]ಗೊಹೇಶ್ವರ[1]ಲಿಂಗದಲ್ಲಿ ಎನಗೂ ನಿನಗೂ ಒಂದಾದ ಪರಿ
ಎಂತು ಹೇಳಾ ಚೆನ್ನಬಸವಣ್ಣಾ? ॥೫೭॥

೧-೧ ಗೊಗ್ಗೇಶ್ವರ(ಮೂ)

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಚಿಕ್ಕದಣ್ಣಾಯಕರು ಬಿನ್ನೈಸಿದ ಪ್ರಸ್ತಾವದ ವಚನ:

೫೨೮

ಕಾಯ ಒಂದು, ಪ್ರಾಣ ಒಂದು,
ಭಾವ ಒಂದು, ನಿರ್ಭಾವ ಒಂದು; ಒಂದಲ್ಲದೆ ಎರಡುಂಟೆ?
ಗುರು ಒಂದು, ಲಿಂಗ ಒಂದು, ಉಪದೇಶ ಒಂದು,
ಕೂಡಲಚೆನ್ನಸಂಗಯ್ಯನ ಶರಣ ಬಸವಣ್ಣನ ಗರಡಿಯಲ್ಲಿ
ಇಬ್ಬರಿಗೆಯೂ ಅಭ್ಯಾಸ ಒಂದೆ ಕಾಣಾ ಪ್ರಭುವೆ! ॥೫೮॥

ಈ ಹೀಂಗೆಂದು ಚಿಕ್ಕದಣ್ಣಾಯಕರು ಬಿನ್ನಪಂಗೈಯ್ಯಲು, ಪ್ರಭುದೇವರು ಬಸವಣ್ಣಂಗೆ ನಾವಿಬ್ಬರೂ ಶಿಷ್ಯರಾದೆವೆಂಬುದ ಬೆಸಗೊಂಬ ಪ್ರಸ್ತಾವದ ವಚನ:

೫೨೯

ಒಂದ ಮಾಡ ಹೋದಲ್ಲಿ ಮತ್ತೊಂದಾಯಿತ್ತೆಂಬ ಮಾತು
ದಿಟವಾಯಿತ್ತು ನೋಡಯ್ಯಾ!
ನಿಮ್ಮ ಒಡತಣ ಅನುಭಾವದಿಂದ ಗುರುಮುಖ ಸಾಧ್ಯವಾದುದಯ್ಯಾ!
ಗೊಹೇಶ್ವರಲಿಂಗದಲ್ಲಿ ನನಗೂ ನಿನಗೂ ಉಪದೇಶ
ಒಂದಾದ ಭೇದವ ಹೇಳಾ ಚೆನ್ನಬಸವಣ್ಣಾ. ॥೫೯॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಚಿಕ್ಕದಣ್ಣಾಯಕರು ಇಬ್ಬರಿಗೆಯೂ ಸಾಂಪ್ರದಾಯ ಒಂದಾದ ಭೇದವ ಬಿನ್ನೈಸಲು ಆ ಪ್ರಸ್ತಾವದ ವಚನ:

೫೩೦

ಅಂಗ ಸಂಸಾರವಿರಹದೊಳು ಸವೆದು,
ಲಿಂಗವು ಅವಗ್ರಹಿಸಿಕೊಂಡು,
ಮೃತ್ತಿಕಾಪಂಜರದೊಳಗೆ ಭುಜಂಗ ತಲೆ ಎತ್ತಿ ನೋಡಲು,
ಥಳಥಳನೆ ಹೊಳೆವ ಮಾಣಿಕ್ಯದ ಬೆಳಗುಗಳೆಸೆಯೆ,
ಸದ್ಯೋಜಾತನ ಜಟಾಮಕುಟವ ಸುತ್ತಿರ್ದ ಫಣೀಂದ್ರನಲ್ಲದೆ
ಮತ್ತಾರೂ ಅಲ್ಲವೆಂದು ಶಿಖರವ ಮೊದಲುಗೊಂಡ[೧]ಗುಳಿಸಲು[೧]
ಸುತ್ತಿರ್ದ ಫಣಿಸೂತ್ರವ ಕಂಡು ಚೆಕ್ಕನೆ ಕದವ ತೆಱೆಯಲು,
ದೃಷ್ಟಿ ದೃಷ್ಟವಾದನಿಮಿಷನ ಕರಸ್ಥಲವ ಕಂಡು
ದುಷ್ಟತನದಲ್ಲಿ ಲಿಂಗವ ತೆಗೆದುಕೊಂಡರೆ,
ಸಂದು ಕಳಾಸಂಗಳು ತಪ್ಪಿ ಅಸ್ಥಿಗಳು [೨]ಬೊಳಬೊಳ[೨]ನುದುರಲು,
ಆತನ ಬೆಱಗು ನಿಮ್ಮ ಹೊಡೆದು, ಖ್ಯಾತಿಯಾಯಿತ್ತು ನೋಡಯ್ಯಾ.
ಅಲ್ಲಮಪ್ರಭುವೆಂಬ ನಾಮ ನಿಮಗೆ.

೧-೧ ಗೊಳಿಸಲು(ಮೂ) ೨-೨ ಬಳವಳ (ಮೂ)

ಭಕ್ತಿದಳದುಳದಿಂದ ಬಂದಿಕಾಜಿರಾಗಿ ಬಂದು ಹೊಕ್ಕಡೆ,
ಬದನೆಯ ಕಾಯಿಗಳು ಬಾಣಲಿಂಗವಾಗವೆ
ನಮ್ಮ ಬಸವಣ್ಣನ ದೃಷ್ಟಿ ತಾಗಲು?
ಇದು ಕಾರಣ, ಕೂಡಲಚೆನ್ನಸಂಗನಲ್ಲಿ
ಅನಿಮಿಷ ಪ್ರಭುವಿಂಗೆ ಬಸವಣ್ಣ ಗುರುವಾದ ಕಾರಣ
ನಾನು ನಿಮಗೆ ಚಿಕ್ಕತಮ್ಮ ಕೇಳಾ ಪ್ರಭುವೆ! ॥೬೦॥

[೧]ಮತ್ತಂ,[೧]

೫೩೧

ಅನಿಮಿಷಂಗೆ ಲಿಂಗವ ಕೊಟ್ಟಾತ ಬಸವಣ್ಣ.
ಆ ಲಿಂಗ ನಿನಗೆ ಸೇರಿತ್ತಾಗಿ,
ಬಸವಣ್ಣನ ಸಾಂಪ್ರದಾಯದ ಕಂದನು ನೋಡಾ ನೀನು.
ಭಕ್ತಿದಳದುಳದಿಂದ ಚೆನ್ನಸಂಗಮನಾಥನೆಂಬ
ಲಿಂಗವನವಗ್ರಹಿಸಿಕೊಂಡೆನಾಗಿ,
ಬಸವಣ್ಣನ ಸಾಂಪ್ರದಾಯದ ಕಂದನು ನೋಡಾ ನಾನು.
ಇಂತಿಬ್ಬರಿಗೆಯೂ ಒಂದೆ ಕುಳಸ್ಥಳವಾದ ಕಾರಣ,
ಕೂಡಲಚೆನ್ನಸಂಗಯ್ಯನಲ್ಲಿ
ಬಸವಣ್ಣನ ಮಹಾಮನೆಯ ಪ್ರಸಾದ
ಇಬ್ಬರಿಗೆಯೂ ಒಂದೆ ಕಾಣಾ ಪ್ರಭುವೆ! ॥೬೧॥

ಈ ಹೀಂಗೆಂದು ಚಿಕ್ಕದಣ್ಣಾಯಕರು ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರತ್ಯುತ್ತರ:

೫೩೨

ಕಿಱೆಯರಾದಡೇನು? ಹಿರಿಯರಾದಡೇನು?
ಅಱಿವಿಂಗೆ ಹಿರಿದು ಕಿಱಿದುಂಟೆ?
ಆದಿಯನಾದಿ ಇಲ್ಲದಂದು,
ಅಜಾಂಡ ಬ್ರಹ್ಮಾಂಡಕೋಟಿಗಳುದಯವಾಗದಂದು,
[೨]ಗೊಹೇಶ್ವರ[೨]ಲಿಂಗದಲ್ಲಿ ನೀನೊಬ್ಬನೆ ಮಹಾಜ್ಞಾನಿ ಎಂಬುದು
ಕಾಣಬಂದಿತ್ತು ಕಾಣಾ ಚೆನ್ನಬಸವಣ್ಣಾ! ॥೬೨॥

ಇದಕ್ಕೆ ಚಿಕ್ಕದಣ್ಣಾಯಕರ ಪ್ರತ್ಯುತ್ತರ:

೫೩೩

ಹಾಲುಂಡ ಸವಿಯ ಮೇಲುಪಂಕ್ತಿಯ ಹೇಳಬಹುದಲ್ಲದೆ,
ಸುಖಸೋಂಕಿನ ಸ್ವಾನುಭಾವವ ಹೇಳಬಾರದು, ಕೇಳಬಾರದು.

೩–೩ X(ಮೂ) ೧–೧ ಗೊಗ್ಗೇಶ್ವರ(ಮೂ)

ಇಂಬಿನ ಸೋಂಕು ಸಂಬಂಧವಳಿದ ಬಳಿಕ ಉಪಚಾರ ಉಂಟೆ!
ಕೂಡಲಚೆನ್ನಸಂಗಯ್ಯನಱುಹಿದರೆ ಅಱಿದೆನಲ್ಲದೆ
ಎನಗೆ ಬೇಱೆ ಸ್ವತಂತ್ರಜ್ಞಾನವಿಲ್ಲ ಕೇಳಯ್ಯಾ. ॥೬೩॥

ನಾನು ನೀವುವಿಡಿದು ಅಱಿದೆನಲ್ಲದೆ ಸ್ವತಂತ್ರಜ್ಞಾನಿಯಲ್ಲವೆಂದು ಚಿಕ್ಕದಣ್ಣಾಯಕರು ಬಿನ್ನಪಂಗೆಯ್ಯಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರತ್ಯುತ್ತರ:

೫೩೪

ಲಿಂಗವಿಡಿದು[೧] ಅಱಿದಱಿವು ಅಱಿವಲ್ಲ,
ಗುರುವಿಡಿದು[೧] ಅಱಿದಱಿವು ಅಱಿವಲ್ಲ,
ಗುರುವಿಡಿದು ಲಿಂಗ ಉಂಟೆಂಬುದೆ ಕಲ್ಪಿತ.
ತನ್ನಿಂದ ತಾನಹುದಲ್ಲದೆ,
[೨]ಗೊಹೇಶ್ವರ[೨]ಲಿಂಗದಲ್ಲಿ ಹಂಗು ಹಱಿಯದನ್ನಕ್ಕರ
ತಾನಾಗಬಾರದು ಕಾಣಾ ಚೆನ್ನಬಸವಣ್ಣ! ॥೬೪॥

ಈ ಹೀಂಗೆ ಪ್ರಭುದೇವರು ನಿರೂಪಿಸಲು, ಇದಕ್ಕೆ ಚಿಕ್ಕದಣ್ಣಾಯಕರ ಪ್ರತ್ಯುತ್ತರ:

೫೩೫

ಗುರುವಿಲ್ಲದ ಲಿಂಗ ನಿನಗೆಲ್ಲಿಯಯ್ಯಾ?
ಕೊಂದೆ ನಿಮ್ಮಯ್ಯನ, ಕೊಂಡೆ ಲಿಂಗವನು!
ಅಂದು ನಿನಗೆ ಅನಿಮಿಷ ಗುರುವಾದುದನಱಿಯಾ!
ಕೂಡಲಚೆನ್ನಸಂಗಯ್ಯನಲ್ಲಿ
ಮೂಱುಲೋಕವಱಿಯೆ ಅಲ್ಲಮ ವ್ರತಗೇಡಿ. ॥೬೫॥

ಅನಿಮಿಷನ ಕೊಂದು ಲಿಂಗವ ಕೊಂಡ ಕಾರಣ ನೀನು ಗುರುದ್ರೋಹಿಯೆಂದು ಚಿಕ್ಕದಣ್ಣಾಯಕರು ನುಡಿಯಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರತ್ಯುತ್ತರ:

೫೩೬

ಗುರುವಿನ ಪ್ರಾಣ ಲಿಂಗದಲ್ಲಿ ಲೀಯವಾದ ಬಳಿಕ,
ಆ ಲಿಂಗವೆನ್ನ ಕರಸ್ಥಲಕ್ಕೆ ಬಂದಿತ್ತು ನೋಡಾ!
ಇದ್ದಾನೆ ನೋಡಾ, ಎನ್ನ ಗುರುವು ಅನಿಮಿಷನೆನ್ನ ಕರಸ್ಥಲದಲ್ಲಿ.
ಇದ್ದಾನೆ ನೋಡಾ, ಎನ್ನ ಗುರು ಅನಿಮಿಷನೆನ್ನ ಜ್ಞಾನದೊಳಗೆ,
ಇದ್ದಾನೆ ನೋಡಾ, ಎನ್ನ ಗುರುವಿನ ಗುರು ಬಸವಣ್ಣನೆನ್ನ ಕಂಗಳಮುಂದೆ!
[೨]ಗೊಹೇಶ್ವರ[೨] ಸಾಕ್ಷಿಯಾಗಿ,
ಎನ್ನ ಮೇಲೆ ಗುರುದ್ರೋಹವಿಲ್ಲ ಕಾಣಾ ಚೆನ್ನಬಸವಣ್ಣಾ. ॥೬೬॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಚಿಕ್ಕದಣ್ಣಾಯಕರು ಬಿನ್ನೈಸಿದ ಪ್ರತ್ಯುತ್ತರ:

---

೧ + ದ(ಮೂ) ೨-೨ ಗೊಗ್ಗೇಶ್ವರ(ಮೂ)

೫೩೭

ನೋಡುವುದೊಂದು, ನೋಡಿಸಿಕೊಂಬುದೊಂದು.
ಇನ್ನೂ ನಿನ್ನಲ್ಲಿ ಎರಡುಂಟಲ್ಲಾ!
ಕರಸ್ಥಲದಲ್ಲಿ ಒಂದು, ಮನಸ್ಥಲದಲ್ಲಿ ಒಂದು,
ಇನ್ನೂ ನಿನ್ನಲ್ಲಿ ಎರಡುಂಟಲ್ಲಾ!
ಕೂಡಲಚೆನ್ನಸಂಗಯ್ಯನಲ್ಲಿ [೧]ಗೊಹೇಶ್ವರ[೧]ನೆಂಬ ಲಿಂಗವು
ನಿನಗೆಂತು ಸಾಧ್ಯವಾಯಿತ್ತು ಹೇಳಾ ಪ್ರಭುವೆ? ॥೬೭॥

ಈ ಹೀಂಗೆಂದು ಚಿಕ್ಕದಣ್ಣಾಯಕರು ಬಿನ್ನೈಸಲು, ಪ್ರಭುದೇವರು ನಿರೂಪಿಸಿದ ಪ್ರತ್ಯುತ್ತರ:

೫೩೮

ಕರಸ್ಥಲದ ಲಿಂಗ ಮನಸ್ಥಲಕ್ಕೆ ವೇದ್ಯವಾಗಿ,
ಮನಸ್ಥಲದ ಲಿಂಗ ಮಹಾಸ್ಥಲದಲ್ಲಿ ವೇದ್ಯವಾಗಿ,
ಮಹಾಸ್ಥಲವೆ ಎನ್ನ ಸರ್ವಾಂಗವೇದ್ಯವಾದ ಬಳಿಕ
ಇನ್ನು ಭಿನ್ನಭಾವಕ್ಕೆ ತೆಱಹುಂಟೆ ಹೇಳಾ!
[೧]ಗೊಹೇಶ್ವರ[೧]ನೆಂಬ ಪ್ರಾಣಲಿಂಗವು ಬೆರಸಿ ಸಮಧಾತುವಾದ ಬಳಿಕ,
ಎರಡೆಂಬುದಿಲ್ಲ ನೋಡಾ ಚೆನ್ನಬಸವಣ್ಣಾ! ॥೬೮॥

ಮತ್ತಂ,

೫೩೯

ಲಿಂಗ ಪ್ರಾಣಲಿಂಗವಾಯಿತ್ತು.
ಅಂಗ ಲಿಂಗ, ಲಿಂಗವಂಗವಾಯಿತ್ತು.
[೧]ಗೊಹೇಶ್ವರ[೧]ಲಿಂಗದಲ್ಲಿ ಸರ್ವಾಂಗ ಪ್ರಾಣಲಿಂಗವಾಯಿತ್ತು
ಕೇಳಾ ಚೆನ್ನಬಸವಣ್ಣಾ. ॥೬೯॥

ಆ ಪ್ರಸ್ತಾವದೊಳು ಪ್ರಭುದೇವರು ಪ್ರಾಣಲಿಂಗ ಸಂಬಂಧದ ಭೇದಮಂ ನಿರೂಪಿಸಿದ ಪದಂಗಳು:

೫೪೦

ರಾಗ : ಮಧುಮಾಧವಿ

ನುಡಿಯ ಗಡಣದ ಬೆಳಗು ಮರುತ ಪರಿಮಳದಂತೆ
ಭಾವವಿಲ್ಲದ ಬಯಲು ಪರವು ತಾನೆ
ಅಱಿವು ಕುಱುಹಿನ ಮಱಹು ತೆಱಹಿಲ್ಲದಾ ಘನವು
ನಿಂದ ನಿಜಪದದಿಂದ ಪ್ರಭೆಯಾದುದು ॥ಪಲ್ಲ॥

೧-೧ ಗೊಗ್ಗೇಶ್ವರ(ಮೂ)

[1]ಎಳೆಯ ಮಾಣಿಕದಂತೆ ಹೊಳೆವ ಜ್ಞಾನದ ಜ್ಯೋತಿ
ನವನಾಳದಲಿ ಪ್ರಾಣಲಿಂಗ ಭರಿತಾ
ಪಿಂಡಬ್ರಹ್ಮಾಂಡವನು ಮೀಱಿ ತೋಱುವ ವಚನ
ಗಗನದುದಯದ ಮೇಲೆ ಘನಕೆ ಗಮನಾ ॥೧॥

ಆಕಾಶದಿಂದತ್ತಲಾರು ಬಲ್ಲವರಿಲ್ಲ
ಪಾತಾಳದ ಪ್ರಮಾಣ ಕಾಂಬರಾರೋ
ಆತುಮನವಿಡಿದು ಪರಮಾತುಮನ ಪರಿ ಭಾವ
ನೋಡ ನೋಡ ಘನಕೆ ಗಮನಾ ॥೨॥

ಇರುಳು ಮನವನೆ ನುಂಗಿ ಹಗಲು ಘನವನೆ ನುಂಗಿ
ಮಾತು ಮಥನವ ನುಂಗಿದಾತ ಭರಿತಾ
ನೀತಿ ನಿಜ ನಿಂದಲ್ಲಿ ನಿಜದ ನಿರ್ಮಳ ಜ್ಯೋತಿ
ಪ್ರಾಣಲಿಂಗದ ಘನಕೆ ಪ್ರಮಾಣಿಲ್ಲವೋ ॥೩॥

ಆಱು ದರುಶನದೊಡೆಯನಂತರಂಗದೊಳಿಪ್ಪ
ನಾರಿಗಾದಡೆ ಗಗನ ಭುವನ ಒಂದೆ
ಹೃದಯಕಮಲದ ಬೆಳಗು ಪರಬ್ರಹ್ಮದಲಿ ತುಂಬಿ
ಪರಿಣಾಮ ಪರಮಪದವಿಯ ತೋಱಿತು ॥೪॥

ಧರೆಗೆ ನಿದ್ರೆಯು ಇಲ್ಲ ಉದಕಕ್ಕೆ ಕನಸಿಲ್ಲ
ಅಗ್ನಿ ಕಳವಳಕೆ ಒಳಗಾಗದೆಂತೋ
ಸುಳಿವ ಪವನನು ತಾನು ತಾಮಸಕ್ಕೊಳಗಾಗ
ಬಯಲಿಂಗೆ ಭ್ರಮೆಯುಂಟೆ ಗೊಹೇಶ್ವರಾ ॥೫॥
ಪದ ಸಹ ವಚನ: ॥೭೪॥

ಈ ಹೀಂಗೆಂದು ಪ್ರಭುದೇವರು ತಮ್ಮ ಪ್ರಾಣಲಿಂಗದ ನಿರ್ಣಯಮಂ ನಿರೂಪಿಸಲು, ಇದಕ್ಕೆ ಚೆನ್ನಬಸವರಾಜದೇವರು ಬಿನ್ನೈಸಿದ ಪ್ರತ್ಯುತ್ತರ:

೫೪೧

ಮುಟ್ಟದ ಮುನ್ನ ಗುರು ಉಂಟು, ಲಿಂಗ ಉಂಟು,
ಜಂಗಮ ಉಂಟು, ಪ್ರಸಾದ ಉಂಟು.
ಮುಟ್ಟಿದ ಬಳಿಕ ಗುರುವಿಲ್ಲ, ಲಿಂಗವಿಲ್ಲ,

---

೧ + ಪದ (ಮೂ)

ಜಂಗಮವಿಲ್ಲ, ಪ್ರಸಾದವಿಲ್ಲ.
ಕೂಡಲಚೆನ್ನಸಂಗಯ್ಯನಲ್ಲಿ ಸ್ವಯವಲ್ಲದೆ ಪರವಿಲ್ಲವೆಂಬುದು
ನಿನ್ನಲ್ಲಿ ಕಾಣಬಂದಿತ್ತು ಕಾಣಾ ಪ್ರಭುವೆ! ॥೭೫॥

ಈ ಹೀಂಗೆಂದು ಚಿಕ್ಕದಣ್ಣಾಯಕರು ಬಿನ್ನೈಸಲು, ಪ್ರಭುದೇವರು ನಿರೂಪಿಸಿದ ಪ್ರತ್ಯುತ್ತರ:

೫೪೨

ಮನ ಮನ ಬೆರಸಿದನುಭಾವ,
ಘನಕ್ಕೆ ಘನ ಒಂದಾಯಿತ್ತು ನೋಡಾ!
ಅದು ತನ್ನಲ್ಲಿ ತಾನು ತೃಪ್ತಿಯಾದ ನಿಜವು,
ನಿರ್ಣಯದ ಮೇಲೆ ನಿರ್ಧರವಾಯಿತ್ತು ನೋಡಾ!
[1]ಗೊಹೇಶ್ವರ[1]ಲಿಂಗದಲ್ಲಿ ಚೆನ್ನಬಸವಣ್ಣನಿಂದ ಸುಖಿಯಾದೆನು. ॥೭೬॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಚೆನ್ನಬಸವರಾಜದೇವರು ಪ್ರಭುದೇವರ ಸ್ತೋತ್ರಮಂ ಮಾಡಿ, ತಮ್ಮ ಪರಿಣಾಮವ ಹೇಳಿದ ಪ್ರಸ್ತಾವದ ವಚನ:

೫೪೩

ಅಱಿವಿನ ತೃಪ್ತಿಗೆ ಅನುಭಾವವಾಶ್ರಯ.
ಲಿಂಗದ ಅನುಭಾವದಿಂದ ನಿಮ್ಮ ಕಂಡೆನು.
ನಿಮ್ಮ ಕಂಡೆನ್ನ ಮಱೆದೆ ಕಾಣಾ ಪ್ರಭುವೆ
ಕೂಡಲಚನ್ನಸಂಗಮದೇವಾ. ॥೭೭॥

ನಿಮ್ಮ ಸಂಗದಿಂದಾನು ಲಿಂಗೈಕ್ಯನಾದೆನೆಂದು ಚಿಕ್ಕದಣ್ಣಾಯಕರು ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿಮ್ಮಿಂದ ಲಿಂಗೈಕ್ಯರಾದೆವೆಂದು ನಿರೂಪಿಸಿದ ಪ್ರಸ್ತಾವದ ವಚನ:

೫೪೪

ನಚ್ಚುಮಚ್ಚಿನ ಲಿಂಗವ ಗ್ರಹಿಸುವಲ್ಲಿ,
ಮಚ್ಚು ಒಳಕೊಂಡಿತ್ತು ನೋಡಾ!
ಕರ್ಪುರದ ಕರಡಿಗೆಯ ಘಾಸಿಮಾಡಿದಂತಾಯಿತ್ತು.
ಲಿಂಗಾನುಭಾವಿಗಳ ಸಂಗದಿಂದ ಕಂದೆಱೆದು
[1]ಗೊಹೇಶ್ವರ[1]ನಲ್ಲಿ ತಲ್ಲೀಯವಾದೆನು ಕಾಣಾ ಚೆನ್ನಬಸವಣ್ಣಾ! ॥೭೮॥

ಅನುಭಾವಿಗಳ ಸಂಗದಿಂದ ಕೃತಾರ್ಥನಾದೆನೆಂದು, ಪ್ರಭುದೇವರು ನಿರೂಪಿಸಲು, ಇದಕ್ಕೆ ಚಿಕ್ಕದಣ್ಣಾಯಕರು ಆ ಪ್ರಭುದೇವರ ಬಸವರಾಜದೇವರ ಸಂಗಸುಖವ ಕೊಂಡಾಡಿದ ಪ್ರಸ್ತಾವದ ವಚನ:

೫೪೫

ಸಮಸುಖಸಂಧಾನವಿಲ್ಲದ ಸಂಗವ ನೋಡಾ!
ತಾಗು ನಿರೋಧವಿಲ್ಲದ ಸಂಗವ ನೋಡಾ!

೧-೧ ಗೊಗ್ಗೇಶ್ವರ(ಮೂ)

ಆವಂಗೆ ಅನುಭಾವವಿಲ್ಲದ ಸಂಗವ ನೋಡಾ!
ಕೂಡಲಚೆನ್ನಸಂಗಯ್ಯನಲ್ಲಿ ಲಿಂಗಲೀಯವಾದ ಸಂಗವ ನೊಡಾ!! ॥೭೯॥

ಈ ಹೀಂಗೆಂದು ಚಿಕ್ಕದಣ್ಣಾಯಕರು ಪ್ರಭುದೇವರು ಬಸವರಾಜದೇವರನು ಸಮರಸಭಾವದಿಂದ ಕೊಂಡಾಡಲು, ಆ ಬಸವರಾಜದೇವರು ಚಿಕ್ಕದಣ್ಣಾಯಕರೊಡನೆ ನಾನು ಶರಣಸಂಗಕ್ಕೆ ಸಮವೇದಿಯಲ್ಲವೆಂದು ಭೀತಿಯಿಂದ ನುಡಿದ ಪ್ರಸ್ತಾವದ ವಚನ:

೫೪೬

ಅಯ್ಯಾ, ನಿಮ್ಮ ಶರಣರೆನ್ನ ಪಾವನವ ಮಾಡಿ,
ತಿಳುಹಿ ತಮ್ಮಂತೆ ಎನ್ನ ಮಾಡಿದ ಬಳಿಕ
ನಾನು ಅವರು ಮಾಡಿದಂತಾದೆನಯ್ಯಾ.
ನಾನೊಬ್ಬನು ನಿಮ್ಮ ಶರಣರ ಬಳಿಬಳಿಯವನು.
ಕೂಡಲಸಂಗನ ಶರಣರು ಮಚ್ಚಿ ಎನಗೊಲಿದರೆ
ನಾನು ಬದುಕಿದೆನಲ್ಲದೆ,
ಸಮರಸ ಸಂಗಕ್ಕೆ ಸರಿಯೆ ಹೇಳಾ ಚೆನ್ನಬಸವಣ್ಣಾ? ॥೮೦॥

ಇದಕ್ಕೆ ಚೆನ್ನಬಸವರಾಜದೇವರ ಪ್ರತ್ಯುತ್ತರ:

೫೪೭

ತೆಱಹಿಲ್ಲದ ಘನವು ಮನದೊಳಗೆ ನಿಂದು ನೆಲೆಗೊಂಡ ಬಳಿಕ,
ಆ ಘನವ ತೆರೆಯಮಱೆಯಲಡಗಿಸಿಹೆನೆಂದರೆ ಅಡಗುವುದೆ?
ಹೇಮಗಿರಿಯ ಕದ್ದು ಭೂಮಿಯಲಡಗಿಸಿಹೆನೆಂದರೆ,
ಆ ಕಳವು ಸಿಕ್ಕದೆ ಮಾಣ್ಬುದೆ?
ಕೂಡಲಚೆನ್ನಸಂಗನ ಶರಣ ಪ್ರಭುವಿನಲ್ಲಿ ಬೆರಸಿದ ಸುಖವ
ಮಱಸಿಹೆನೆಂದರೆ ನಿನ್ನಳವೆ ಹೇಳಾ ಸಂಗನಬಸವಣ್ಣಾ? ॥೮೧॥

ಈ ಹೀಂಗೆಂದು ಚೆನ್ನಬಸವರಾಜದೇವರು ಬಿನ್ನೈಸಲು, ಇದಕ್ಕೆ ಬಸವರಾಜದೇವರು ನಿರೂಪಿಸಿದ ಪ್ರತ್ಯುತ್ತರ:

೫೪೮

ಸಮರತಿ ಸಮಸಂಧಾನದ ಸಂಗಸುಖವು
ನಿನ್ನಿಂದಲೆನಗೆ ಸಾಧ್ಯವಾಯಿತ್ತಲ್ಲದೆ,
ಎನಗೆ ತೋಱಿದವರಾರು ಹೇಳಾ ಲಿಂಗೈಕ್ಯದ ಹೊಲಬ?
ಕೂಡಲಸಂಗಮದೇವರ ಶರಣ ಪ್ರಭುದೇವರಲ್ಲಿ ನೀನೆನ್ನನಿರಿಸದನ್ನಕ್ಕರ
ನಾನು ಬಲ್ಲೆನೆ ಹೇಳಾ ಚೆನ್ನಬಸವಣ್ಣಾ? ॥೮೨॥

ಈ ಹೀಂಗೆಂದು ಬಸವರಾಜದೇವರು ನಿರೂಪಿಸಲು, ಇದಕ್ಕೆ ಚಿಕ್ಕದಣ್ಣಾಯಕರು ಬಿನ್ನೈಸಿದ ಪ್ರಸ್ತಾವದ ವಚನ:

೫೪೯

ಧರೆಯಾಕಾಶವಿಲ್ಲದಂದು,
ಅನಲ ಪವನ ಜಲ ಕೂರ್ಮರಿಲ್ಲದಂದು,
ಚಂದ್ರ ಸೂರ್ಯರೆಂಬವರು ಕಳೆದೋಱದಂದು,
ಆತ್ಮಸ್ಥಲ ಅನುಭಾವಕ್ಕೆ ಬಾರದಂದು,
ನಿತ್ಯನಿಜಲಿಂಗವ ಬಲ್ಲವರಾರಯ್ಯಾ ನೀವಲ್ಲದೆ?
ಮಹಾಘನಕ್ಕೆ ಘನವಾಗಿ ಅಗಮ್ಯಸ್ಥಲದಲ್ಲಿ ನಿಂದು
ಭರಿತರಾಗಿರಬಲ್ಲವರಾರಯ್ಯಾ, ನೀವಲ್ಲದೆ?
ನಿಮ್ಮ ಒಕ್ಕುಮಿಕ್ಕ ಶೇಷಪ್ರಸಾದದ ಕಾರುಣ್ಯದ ಶಿಶುವಾಗಿ
ಒಡಲೊಳಗೆ ಇದ್ದಲ್ಲಿ, ವಿಭೂತಿಯ ಪಟ್ಟವ ಕಟ್ಟಿ,
ಹಸ್ತಮಸ್ತಕ ಸಂಯೋಗವ ಮಾಡಿ
ಎನ್ನನುಳುಹಿದವರಾರಯ್ಯಾ, ನೀವಲ್ಲದೆ?
ಕೂಡಲಚೆನ್ನಸಂಗಮದೇವರು ಸಾಕ್ಷಿಯಾಗಿ,
ನಾನು ನಿಮ್ಮ ಕರುಣದ ಕಂದನೆಂಬುದ
ಮೂಱುಲೋಕವೆಲ್ಲವು ಬಲ್ಲುದು ಕಾಣಾ ಸಂಗನಬಸವಣ್ಣಾ. ॥೮೩॥

ಈ ಹೀಂಗೆಂದು ಚಿಕ್ಕದಣ್ಣಾಯಕರು ಬಿನ್ನೈಸಲು, ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

೫೫೦

ಕೃತಯುಗ ತ್ರೇತಾಯುಗ ದ್ವಾಪಾರ ಕಲಿಯುಗಂಗಳು
ಭವಜಾಟಳದಲ್ಲಿ ತಿರುಗುತ್ತಿರ್ಪಲ್ಲಿ,
ಅನಂತಕೋಟಾನುಕೋಟಿ ಯುಗಂಗಳು ಮಡಿದು ಹೋದವು.
ಅನಂತ ಜಲಪ್ರಳಯಂಗಳು ಸುರಿಸುರಿದು ಹೋದವು.
ಹದಿನಾಲ್ಕು ಲೋಕಂಗಳೆಂಬ ಅನಂತಕೋಟಿ
ಬ್ರಹ್ಮಾಂಡಗಳೆಲ್ಲ ಲಯವಾಗಿ ಹೋದವು.
ಇದಱೊಳಗೆ ಆವ ಲೋಕದಲ್ಲಿ, ಆವ ಯುಗದಲ್ಲಿ
ಪ್ರಾಣಲಿಂಗ, ಲಿಂಗಪ್ರಾಣವೆಂಬ
ಭೇದವನಱಹಿದವರಾರು ಹೇಳಾ?
ಗಂಗೆ ಗೌರೀವಲ್ಲಭರು ಮೊದಲಾದ
ಅನಂತಕೋಟಿ ರುದ್ರಾದಿಗಳೆಲ್ಲರು
ಪ್ರಾಣಲಿಂಗ ಸಂಬಂಧದ ಹೊಲಬನಱಯದೆ,
ಅಣಿಮಾದಿ ಚತುರ್ವಿಧ ಫಲಪ್ರಾಪ್ತಿಗೆ ಒಳಗಾದರು.
ಶಿವಾಚಾರದ ವಿಚಾರವನಱಯದೆ, ಜಗವು ಕೆಟ್ಟುಹೋಹುದೆಂದು
ಪರಮ ಪುರುಷಾರ್ಥಕಾರಣವಾಗಿ ಮರ್ತ್ಯದಲ್ಲಿ ಅವತರಿಸಿ,
ಗುರು ಲಿಂಗ ಜಂಗಮ ಪಾದೋದಕ ಪ್ರಸಾದವೆಂಬ

ಪಂಚಾಚಾರಸ್ಥಲವ ನೆಲೆಗೊಳಿಸಿ,
ಷಡುಸ್ಥಲವೆಂಬ ಮಹಾನುಭಾವಮಂ
ಕರತಳಾಮಳಕವಾಗಿ ಸ್ಥಲಗೊಳಿಸಿ,
ಪ್ರಾಣಲಿಂಗ, ಲಿಂಗಪ್ರಾಣವೆಂಬ ಭೇದವನೆನಗೆ ತಿಳುಹಿ,
ಎನ್ನ ಭ್ರಾಂತಿಸೂತಕವ ಬಿಡಿಸಿ,
ಲಿಂಗೈಕ್ಯವೆಂಬುದನೆನಗೆ ತೋಱಿದೆಯಾಗಿ,
ನಿನ್ನಿಂದಲಾನು ಸಂಗನಬಸವಣ್ಣನೆಂಬ ಹೆಸರು ಪಡೆದೆನು.
ಕೂಡಲಸಂಗಮದೇವರು ಸಾಕ್ಷಿಯಾಗಿ
ಎನಗೆ ನೀನು ಪರಮಾರಾಧ್ಯ ಕಾಣಾ ಚೆನ್ನಬಸವಣ್ಣಾ! ॥೮೪॥

ಇಂತೀ ಶ್ರೀಮತ್ ಸಕಲಗಣ ಪುರಾತನರೊಳ್ ಪ್ರಭುದೇವರು
ಮಹಾನುಭಾವ ಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್
ಪ್ರಭುದೇವರ ಚೆನ್ನಬಸವರಾಜದೇವರ ಸಂಪಾದನೆಗಂ
ಅಷ್ಟಮೋಪದೇಶಂ ಸಮಾಪ್ತಂ
ಅಂತು ವಚನ ೫೫೦ ಕ್ಕಂ ಮಂಗಳಮಹಾ ಶ್ರೀ

❖

೯

ಮಡಿವಾಳಯ್ಯಗಳ ಸಂಪಾದನೆ

ಕಂದ:

ಗುರುಹರಚರಸಾಹಿತ್ಯದ
ನಿಜೆಗೆಯ ಸುಜ್ಞಾನದಿರವ ಘನಲಿಂಗೈಕ್ಯವ
ಪರಮಪ್ರಭು ಮಡಿವಾಳಂ
ಗೊರೆದುದ ನಾಂ ಪೇಳ್ವೆ ಶರಣ ಜನರಿಂಗೊಲವಿಂ. ॥೧॥

ಅದೆಂತೆಂದೊಡಾ ಬಸವರಾಜದೇವರು ಚಿಕ್ಕದಣ್ಣಾಯಕರೊಡನೆ ಸ್ವಾನುಭಾವ ಸದ್‌ಗೋಷ್ಠಿಯಂ ಮಾಡುತ್ತಿರಲು, ಆ ಪ್ರಭುದೇವರು ಚೆನ್ನಬಸವರಾಜದೇವರ ಕೊಂಡಾಡಿದ ಪ್ರಸ್ತಾವದ ವಚನ:

೫೫೧

ತನುವ ಗುರುವಿಂಗೆ ಸಮರ್ಪಿಸಿ,
ಮನವ ಲಿಂಗಕ್ಕೆ ಸಮರ್ಪಿಸಿ,
ಭಾವವ ಜಂಗಮಕ್ಕೆ ಸಮರ್ಪಿಸಿ,
ನಿಜವ ತೃಪ್ತಿಯಲರ್ಪಿಸಿ, ಘನವನಱಿವಿಂಗರ್ಪಿಸಿ,
ಅರ್ಪಿತವೆ ಅನರ್ಪಿತವಾಗಿ, ಅನರ್ಪಿತವೆ ಅರ್ಪಿತವಾಗಿ,
ಅರ್ಪಿತ ಅನರ್ಪಿತಂಗಳಳಿದು ನಿತ್ಯ ಪ್ರಸಾದಿಯಾಗಿ,
ಪ್ರಸಾದದ ಹಾದಿಯನೆಲ್ಲರಿಗೆ ತೋಱಿ
ಮಹಾಪ್ರಸಾದದ ಬೆಳವಿಗೆಯ ಮಾಡಿದನು
[1]ಗೊಹೇಶ್ವರನ[1] ಶರಣ ಚೆನ್ನಬಸವಣ್ಣನು. ॥೧॥

ಈ ಹೀಂಗೆಂದು ಪ್ರಭುದೇವರು ಚಿಕ್ಕದಣ್ಣಾಯಕರ ಸ್ತೋತ್ರಮಂ ಮಾಡುತ್ತಿರಲು, ಆ ಚಿಕ್ಕದಣ್ಣಾಯಕರು ಎನ್ನ ಶಿವಜ್ಞಾನದ ಕಂದೆಱವೆಯೂ ಎನ್ನ ಮಹಾ ಪ್ರಸಾದಿತ್ವವೂ, ಮಡಿವಾಳಮಾಚಿತಂದೆ ಯಿಂದವು ಸಂಗನಬಸವಣ್ಣನಿಂದವು ಆಯಿತ್ತೆಂದು ಬಿನ್ನಹಂ ಮಾಡುವ ಪ್ರಸ್ತಾವದ ವಚನ:

೧–೧ ಗೊಗ್ಗೇಶ್ವರನ (ಮೂ)

೫೫೨

ನಿರವಯವಾದಡೆಯೂ ಭಕ್ತಿತನುವಿನ ಮೇಲೆ ಸ್ವಾಯತವಾಯಿತ್ತು.
ಮಹಾ ಪ್ರಸಾದವಾದಡೆಯೂ
ಸಂಗನಬಸವಣ್ಣನ ಕರಸ್ಥಲದಲ್ಲಿ ಮೂರ್ತಿಯಾಯಿತ್ತು.
ಮಹಾಪ್ರಸಾದವ ನಾನೆತ್ತ ಬಲ್ಲೆನಯ್ಯಾ?
ಮಡಿವಾಳ ತೋಱಲಿಕೆ ಅಱಿವು ಕಂದೆಱವಾದುದ ಕಂಡೆನು.
ಬಸವಣ್ಣನಿಂದ ಭಕ್ತಿಯ ಮುಸುಕು
ಕಂದೆಱವಾದುದ ಕಂಡೆನು. ಕೂಡಲಚೆನ್ನಸಂಗಮದೇವಯ್ಯಾ,
ಮಡಿವಾಳನೂ ಬಸವಣ್ಣನೂ ಪದಾರ್ಥವನಾರೋಗಿಸಿ ಕೊಡುತ್ತ
ಕರುಣಿಸಿದ ಪ್ರಸಾದಿಯಾನು ಕಾಣಾ ಪ್ರಭುವೆ. ॥೨॥

ಮತ್ತಂ,

೫೫೩

ಅನಾಹತಮಾಹೇಶ್ವರನೆಂಬಾತಂಗೆ
ಪ್ರಸಾದಸ್ಥಲದ ಪ್ರಸಾದಾಶ್ರಮದ ಭವಿತ್ವವ ನೀಕರಿಸಿ
ಪ್ರಸಾದವನು ನೆಲೆಗೊಳಿಸಿ,
ಅನ್ಯಥಾ ಪವನ ಆಧಾರ ಆಶ್ರಮವ ನೀಕರಿಸಿ,
ವ್ರಜ ದ್ವಿಜ ಪ್ರಜವೆಂಬ ಡಿಂಬ ಮರ್ತ್ಯಕ್ಕೆ ಕಳುಹಿದಿರಿ
ಬಸವಣ್ಣನನು ಮಡಿವಾಳನನು ಒಡನೆ ಕಳುಹಿದಿರಿ.
ಕನ್ನಡಿಯಾಗಿ ಭವಕ್ಕೆ ಬಾರದಂತೆ ಭಾವವ ನಿಲಿಸಿದಿರಿ.
ಬಳಿಕ ಲಿಂಗಸ್ಥಲ ಜಂಗಮಸ್ಥಲ ಪ್ರಸಾದಸ್ಥಲ ನಿರ್ಧರವಾದವು.
ಚಿರಕಾಲದಲ್ಲಿ ಮಹಾ ಸುನಾದಗಣ ಅನಾಹತನಾದಗಣ
ಸಂಪೂರ್ಣವಾಗಿಪ್ಪನಯ್ಯಾ,
ಕೂಡಲಚೆನ್ನಸಂಗಾ, ನಿಮ್ಮ ಶರಣ ಬಸವಣ್ಣನು. ॥೩॥

ಈ ಹೀಂಗೆಂದು ಚಿಕ್ಕದಣ್ಣಾಯಕರು ನಿರೂಪಿಸಲು, ಇದಕ್ಕೆ ಮಡಿವಾಳ ತಂದೆಗಳು ಚೆನ್ನಬಸವಣ್ಣನ ಸ್ತುತಿಸುವ ಪ್ರಸ್ತಾವದ ವಚನ:

೫೫೪

ಅಂಗವೆ ಲಿಂಗವಾಗಿ, ಲಿಂಗವೆ ಪ್ರಾಣವಾಗಿ,
ಜಂಗಮವೆ ಸಂಗವಾಗಿ, ಸಂಗವೆ ಸುಸಂಗವಾಗಿ,
ಪ್ರಾಣವೆ ಪ್ರಸಾದವಾಗಿ, ಪ್ರಸಾದವೆ ಪ್ರಾಣವಾಗಿ,
ಇಂತೀ ತ್ರಿವಿಧದಲ್ಲಿ ಸಂಪನ್ನನಾದ ಸಮತಾಪ್ರಸಾದಿ,
ಸನ್ನಿಹಿತಪ್ರಸಾದಿ, ಸಮಾಧಾನಪ್ರಸಾದಿ.
ಕಲಿದೇವಯ್ಯಾ, ಚೆನ್ನಬಸವಣ್ಣನ ಪ್ರಸಾದವ ಕೊಂಡು
ನಾನು ಬದುಕಿದೆನು ಕಾಣಾ ಪ್ರಭುವೆ. ॥೪॥

ಈ ಹೀಂಗೆಂದು ಮಡಿವಾಳಮಾಚಿತಂದೆಗಳು ಪ್ರಭುದೇವರೊಡನೆ ಬಿನ್ನಪಂಗೈಯಲು, ಆ ಪ್ರಭುದೇವರು ಮಡಿವಾಳಮಾಚಿತಂದೆಗಳ ಒರೆದು ನೋಡುವ ಪ್ರಸ್ತಾವದ ವಚನ:

೫೫೫

ಎಂತಯ್ಯಾ? ನೊಸಲಲ್ಲಿ ಕಣ್ಣು, ಮನದಲ್ಲಿ ವಿರಸ,
ನುಡಿವುದೆಲ್ಲವೂ ಭಕ್ತಿರಸ.
ಜ್ಞಾನವೆಂತು ಹೇಳಾ? ನಿರಹಂಕಾರವೆಂತು ಹೇಳಾ?
ಅಱುಹಿನ ಕುಱುಹಿನ ಮಱವೆ ಮಾತಿನೊಳಗಿದೆ.
ನಿನ್ನಿಂದ ನಿಜಪದವೆಂತು ಸಾಧ್ಯವಪ್ಪುದು ಹೇಳಾ?
ಕುಱುಹಳಿದು ಕುಱುಹನಱಿಯಬಲ್ಲರೆ,
[೧]ಗೊಹೇಶ್ವರ[೧]ಲಿಂಗದಲ್ಲಿ ಉಭಯಗೆಟ್ಟಲ್ಲದೆ
ಪ್ರಸಾದವಿಲ್ಲ ಕಾಣಾ ಮಡಿವಾಳ ಮಾಚಯ್ಯಾ. ॥೫॥

ಈ ಹೀಂಗೆಂದು ಪ್ರಭುದೇವರು ಮಡಿವಾಳತಂದೆಗಳ ಸ್ಥಿತಿಗತಿಯನೊರೆದು ನೋಡಲು, ಇದಕ್ಕೆ ಮಡಿವಾಳತಂದೆಗಳು ತಮ್ಮ ಪೂರ್ವಾಪರಸಂಬಂಧದ ವೃತ್ತಾಂತಮಮ ಪ್ರಭುದೇವರಿಗೆ ಬಿನ್ನಹಂ ಮಾಡುವ ಪ್ರಸ್ತಾವದ ವಚನ:

೫೫೬

ಎನ್ನ ಆದಿಯನೆತ್ತುವೆನೆ? ಅದ ನೀನೆ ಬಲ್ಲೆ,
ಘನಗಂಭೀರದಲ್ಲಿ ಹುಟ್ಟಿದೆನೆಂಬುದ.
ಎನ್ನ ಅನಾದಿಯನೆತ್ತಿ ತೋಱುವೆನೆ? ಅದ ನೀನೆ ಬಲ್ಲೆ,
ಎನಗೆ ಕಾಯವಿಲ್ಲೆಂಬುದನು.
ಬಸವಣ್ಣನ ಕಾರಣ ಮರ್ತ್ಯಕ್ಕೆ ಬಂದರೆ,
ಒಡಲುಪಾಧಿಯೆಂಬುದಿಲ್ಲ ನೋಡಾ!
ಒಡಲೆ ಬಸವಣ್ಣ, ಪ್ರಾಣವೆ ಚೆನ್ನಬಸವಣ್ಣ,
ಎನ್ನ ಮಹಾಜ್ಞಾನವೆ ನೀವು ನೋಡಾ!
ಇಂತು ಎರಡಿಲ್ಲದಿಪ್ಪಲ್ಲಿ ನುಡಿಯಡಗಿದ ಪರಿಯ
ನಿಮ್ಮ ಶರಣ ಬಸವಣ್ಣ ಬಲ್ಲ ಕಾಣಾ ಕಲಿದೇವರದೇವಾ! ॥೬॥

ಇಂತು ಮಡಿವಾಳತಂದೆಗಳು ತಮ್ಮ ಪೂರ್ವಾಪರಸಂಬಂಧ ವೃತ್ತಾಂತಮಂ ಬಿನ್ನಪಂಗೆಯ್ಯಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರತ್ಯುತ್ತರ:

೫೫೭

ಗುರುವಿದು, ಲಿಂಗವಿದು, ಜಂಗಮವಿದು ಎಂಬ ಭೇದವ
ಏಕವ ಮಾಡಿ ನಿನಗೆ ತೋಱಿದವರಾರು ಹೇಳಾ?

೧–೧ ಗೊಗ್ಗೇಶ್ವರ(ಮೂ)

ಆದಿಯನಾದಿಯನು ಒಂದು ಮಾಡುವ
ಭಾವ ನಿರ್ಭಾವವನಱುಹಿದವರಾರು ಹೇಳಾ?
ದೀಕ್ಷೆ ಶಿಕ್ಷೆ ಸ್ವಾನುಭಾವದ ಪರಿಯ ತೋಜೆ,
ನಿಜಪದದಲ್ಲಿ ನಿಲಿಸಿದವರಾರು ಹೇಳಾ?
ಗೊಹೇಶ್ವರಲಿಂಗದಲ್ಲಿ ನಿನ್ನ ಆಯತವ ಹೇಳಾ
ಮಡಿವಾಳ ಮಾಚಯ್ಯಾ? ॥೭॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಮಡಿವಾಳತಂದೆಗಳು ಬಿನ್ನೈಸಿದ ಪ್ರತ್ಯುತ್ತರ:

೫೫೮

ಗುರು ಸ್ವಾಯತವಾಯಿತ್ತು.
ಎಂಟು ಭಾವ ಸ್ವಾಯತವಾಯಿತ್ತು.
ಹದಿನಾಱುತೆಱನ ಭಕ್ತಿ ಸ್ವಾಯತವಾಯಿತ್ತು!
ಅಷ್ಟವಿಧಾರ್ಚನೆ ಸ್ವಾಯತವಾಯಿತ್ತು.
ತ್ರಿವಿಧದ ಅಱಿವು ಸ್ವಾಯತವಾಯಿತ್ತು.
ಮಹಾಲಿಂಗದ ನಿಲವು, ಮಹಾಜಂಗಮದ ನಿಲವು
ಸ್ವಾಯತವಾಯಿತ್ತು.
ಶುದ್ಧಪ್ರಸಾದ ತನು ಸ್ವಾಯತವಾಯಿತ್ತು.
ಸಿದ್ಧಪ್ರಸಾದ ಚೈತನ್ಯ ಸ್ವಾಯತವಾಯಿತ್ತು.
ಪ್ರಸಿದ್ಧಪ್ರಸಾದ ಮನ ಸ್ವಾಯತವಾಯಿತ್ತು.
ವಾಮಭಾಗದಲ್ಲಿ ಮಹವು ಉದಯವಾಯಿತ್ತು.
ಶಿವಾಚಾರದಲ್ಲಿ ನಿರವಯ ಉದಯವಾಯಿತ್ತು;
ನಿಜಸ್ಥಾನದಲ್ಲಿ ನಿಂದಿತ್ತು;
ಕ್ಷೀರ[೧]ಸ್ಥಾನದಲ್ಲಿ ಸಾರಾಯವಾಯಿತ್ತು;
ಅನುಭಾವದಲ್ಲಿ ಘನಾಗಮವೆನಿಸಿತ್ತು;
ಸ್ವಾನುಭಾವದಲ್ಲಿ ನಿಮ್ಮ ಬಸವಣ್ಣಂಗೆ ಶರಣೆಂದಿತ್ತು.
ನೆಮ್ಮುಗೆವಿಡಿದು ಬಸವಣ್ಣನ ಪ್ರಸಾದವ ಕೊಂಡಿತ್ತು.
ನಿಮ್ಮ ಬಸವಣ್ಣನ ಪ್ರಸಾದದಿಂದ
ಇಂತಹ ಘನವು ಸ್ವಾಯತವಾಯಿತ್ತು.
ನೀವು ಬಸವಣ್ಣನಿಂದಾದಿರಾಗಿ ಬಸವಣ್ಣಂಗೆ
ನಮೋ ನಮೋ ಎನುತಿರ್ದೆನು ಕಾಣಾ ಕಲಿದೇವರದೇವಾ. ॥೮॥

ಮತ್ತಂ,

---

೧ + ಕ (ಮು)

೫೫೯

ಒಬ್ಬಳು ಆದಿಯುಗದಲ್ಲಿ ಮಾಯಾಂಗನೆ
ಹಲವು ಬಣ್ಣದ ವಸ್ತ್ರವನುಟ್ಟುಕೊಂಡು,
ಹೆಡಗೆ ತುಂಬ ದೇವರ ಹೊತ್ತುಕೊಂಡು,
'ಓ ದೇವರ ಕೊಳ್ಳಿರಯ್ಯಾ, ಓ ದೇವರ ಕೊಳ್ಳಿರಯ್ಯಾ,'
ಎಂದಳು, ಎಂದರೆ ಆ ದೇವರನಾರೂ ಕೊಂಬುವರಿಲ್ಲ.
ನಾನು ಒಂದಜುವೆಯ ಕೊಟ್ಟು ಆ ದೇವರ ಕೊಂಡು,
ಎನ್ನ ಹೆತ್ತತಂದೆ ಬಸವಣ್ಣನ ಪ್ರಸಾದದಿಂದ ಬದುಕಿದೆನು
ಕಾಣಾ ಕಲಿದೇವರದೇವಾ. ॥೯॥

ಮತ್ತಂ,

೫೬೦

ಎಲ್ಲಾ ಭಕ್ತಿಯ ಭೇದವನು, ಎಲ್ಲಾ ಕೂಟದ ಭೇದವನು,
ಎಲ್ಲಾ ಶೀಲದ ಭೇದವನು ನಾನು ನಿಮಗೆ ಬಿನ್ನೈಸುವೆನು ಕೇಳಯ್ಯಾ.
ನೀನು ಕರ್ತನಾಗಿ, ನಾನು ಭೃತ್ಯನಾಗಿ,
ಅವಧರಿಸಯ್ಯಾ. ಎಲ್ಲಾ ಭೇದಂಗಳನೂ ಬಸವಣ್ಣ ಮಾಡಿದನು.
ಆದಿಯನಾದಿಯ ಬಸವಣ್ಣ ಮಾಡಿದನು.
ಸಾಧ್ಯ ಅಸಾಧ್ಯವ ಬಸವಣ್ಣ ಮಾಡಿದನು.
ಲಿಂಗವನು ಜಂಗಮವನು ಬಸವಣ್ಣ ಮಾಡಿದನು.
ಎನ್ನ ಸರ್ವ ಸ್ವಾಯತವನು ಬಸವಣ್ಣ ಮಾಡಿದ ಕಾರಣ,
ಆ ಬಸವಣ್ಣನ ನೆನೆದು ಬದುಕಿದೆನು
ಕಾಣಾ ಕಲಿದೇವರದೇವಾ. ॥೧೦॥

ಮತ್ತಂ, ಮಡಿವಾಳಯ್ಯಗಳು ಬಸವರಾಜದೇವರ ತೋಱಿ ಬಿನ್ನಪಂಗೆಯ್ವ ಪ್ರಸ್ತಾವದ ವಚನ:

೫೬೧

ಶಿವ ತಾನೀತ ಮರ್ತ್ಯಲೋಕ ಪಾವನವ ಮಾಡಲು.
ಗುರು ತಾನೀತ ಎನ್ನ ಭವರೋಗವ ಛೇದಿಸಲು.
ಭಕ್ತ ತಾನೀತನೆನಗೆ ವಿಸ್ತಾರವಾಗಿ.
ಎನಗೆ ಜಂಗಮ ತಾನೀತ ಅನಾದಿಸಂಸಿದ್ಧಘನಮಹಿಮನಾಗಿ.
ಲಿಂಗವು ತಾನೀತನೆನಗೆ ಪ್ರಾಣಲಿಂಗ ತಾನಾಗಿ.
ಎನ್ನ ವಿಸ್ತಾರವು ತಾನೀತನೆನ್ನ ನಿಲುಕಡೆಯು ತಾನಾಗಿ.
ಎನಗೆ ಸರ್ವಸ್ವಾಯತವ ಮಾಡಿದ ಮಹಿಮನೀತ ಕಾಣಾ
ಕಲಿದೇವರದೇವಾ, ನಿಮ್ಮ ಶರಣ ಬಸವಣ್ಣನು! ॥೧೧॥

ಮತ್ತಂ,

೫೬೨

ಅಱಿವನಾಱಿಡಿಗೊಂಡಿತ್ತು ಮಱಹು.
ಮಱಹನಾಱಿಡಿಗೊಂಡಿತ್ತು ಮಾಯೆ.
ಮಾಯೆಯನಾಱಿಡಿಗೊಂಡಿತ್ತು ಕರ್ಮ.
ಕರ್ಮವನಾಱಿಡಿಗೊಂಡಿತ್ತು ತನು.
ತನುವನಾಱಿಡಿಗೊಂಡಿತ್ತು ಸಂಸಾರ.
ಮಱಹು ಬಂದಹುದೆಂದಱಿದು,
ಅಱಿವ ಬೆಲೆಮಾಡಿ, ಅಱಿವ ಕೊಟ್ಟು
ಗುರುವಿನ ಕೈಯಲ್ಲಿ ಲಿಂಗವ ಕೊಂಡೆ ನೋಡಯ್ಯಾ ನಾನು.
ಎನ್ನಱಿವನಾಯತದಲ್ಲಿ ನಿಲಿಸಿ,
ನಿಜಸ್ವಾಯತವ ಮಾಡಿದನು–
ಕಲಿದೇವರದೇವಾ, ನಿಮ್ಮ ಶರಣ ಬಸವಣ್ಣನು. ॥೧೨॥

ಈ ಹೀಂಗೆಂದು ಮಡಿವಾಳತಂದೆಗಳು ಬಿನ್ನಪಂಗೆಯ್ಯಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೫೬೩

ಅಱಿವು ಉದಯವಾದಲ್ಲದೆ ಮಱಹು ನಷ್ಟವಾಗದು.
ಮಱಹು ನಷ್ಟವಾದಲ್ಲದೆ ಅಱಿವು ಸಯವಾಗದು.
ಅಱಿವು [1]ಸಯ[1]ವಾಗಿ ದೊರೆಕೊಂಡ ಬಳಿಕ
ಗುರುವಾರು? ಲಿಂಗವಾರು? ಆವುದು ಘನ?
ಆವುದು ಕಿಱಿದು ಹೇಳಾ?
[2]ಗೊಹೇಶ್ವರ[2]ಲಿಂಗದಲ್ಲಿ ಅಱಿದು ಮಱೆದು
ಉಪದೇಶವ ಹಡೆದರೆ,
ಮುಂದೆ ನಿಜವೆಂತು ಸಾಧ್ಯವಪ್ಪುದು ಹೇಳಾ ಮಡಿವಾಳಮಾಚಯ್ಯಾ॥೧೩॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಮಡಿವಾಳತಂದೆಗಳು ಬಿನ್ನೈಸಿದ ಪ್ರತ್ಯುತ್ತರ:

೫೬೪

ಅಱಿದಲ್ಲದೆ ಗುರುವ ಕಾಣಬಾರದು.
ಅಱಿದಲ್ಲದೆ ಲಿಂಗವ ಕಾಣಬಾರದು.
ಅಱಿದಲ್ಲದೆ ಜಂಗಮವ ಕಾಣಬಾರದು.
ಇಂತೀ ತ್ರಿವಿಧವು ಬಸವಣ್ಣನ ಕೃಪೆಯಿಂದಲೆನಗೆ

೧–೧ಸ್ವಯ (ಮೂ) ೨–೨ಗೊಗ್ಗೇಶ್ವರ (ಮೂ)

ಸ್ವಾಯತವಾಯಿತ್ತಾಗಿ
ಭಿನ್ನವಿಲ್ಲ ಕಾಣಾ ಕಲಿದೇವರದೇವಾ. ॥೧೪॥

ಇದಕ್ಕೆ ಪ್ರಭುದೇವರ ನಿರೂಪ:

೫೬೫

ಗುರು ಸ್ವಾಯತವಾಯಿತ್ತು,
ಲಿಂಗ ಸ್ವಾಯತವಾಯಿತ್ತು,
ಜಂಗಮ ಸ್ವಾಯತವಾಯಿತ್ತು ಬಸವಣ್ಣನಿಂದಲೆಂದರೆ,
ತನುವಿಲ್ಲದಿರಬೇಕು; ಮನವಿಲ್ಲದಿರಬೇಕು; ಧನವಿಲ್ಲದಿರಬೇಕು;
ಅಱಿವಱಿತು ಮಱಹು ನಷ್ಟವಾಗಿರಬೇಕು.
ಗೊಹೇಶ್ವರಲಿಂಗದಲ್ಲಿ ನಿರ್ಲೇಪಿಯಾದಲ್ಲದಿಲ್ಲ
ಕಾಣಾ ಮಡಿವಾಳ ಮಾಚಯ್ಯಾ. ॥೧೫॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಮಡಿವಾಳತಂದೆಗಳ ಪ್ರತ್ಯುತ್ತರ:

೫೬೬

ತನುವಿನಲ್ಲಿ ಹೊಱೆಯಿಲ್ಲ, ಮನದಲ್ಲಿ ವ್ಯಾಕುಳವಿಲ್ಲ,
ಭಾವದಲ್ಲಿ ಬಯಕೆಯಿಲ್ಲ, ಅಱಿವಿನಲ್ಲಿ ವಿಚಾರವಿಲ್ಲ.
ನಿಜದಲ್ಲಿ ಅವಧಾನವಿಲ್ಲ, ನಿರ್ಲೇಪಸಂಗದಲ್ಲಿ ಬಿಚ್ಚಿಬೇಱಾಗಲಿಲ್ಲ.
ಕಲಿದೇವರದೇವಾ, ನಿಮ್ಮಲ್ಲಿ ಬೆರಸಿ ಬೇಱಾಗದಿದ್ದೆನು. ॥೧೬॥

ಈ ಹೀಂಗೆಂದು ಮಡಿವಾಳತಂದೆಗಳು ಬಿನ್ನಪಂಗೈಯ್ಯಲು, ಇದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೫೬೭

ತನುವಿನಲ್ಲಿಪ್ಪ ಲೋಭವ ಮನವ ಕದ್ದು ಮಾತನಾಡಿದರೆ,
ಆ ತನುವೇ ಮನರೂಪಾಗಿ ಕಾಣಬರುತ್ತಿದೆ.
ಆ ಮನದಲ್ಲಿ ಬಯಕೆ ಸಮರತಿಯಾಗದಾಗಿ,
ಕಾಮದ ಕರುಳು ಲೋಭದ ಬಯಕೆಯೊಳಗದೆ,
ಅಱಿದೆನೆಂದು ಬಱುಮಾತನಾಡಿದರೆ
ನಮ್ಮ [1]ಗೊಹೇಶ್ವರ[1]ಲಿಂಗವು ಮೆಚ್ಚ ನೋಡಾ
ಮಡಿವಾಳ ಮಾಚಯ್ಯಾ. ॥೧೭॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಮಡಿವಾಳತಂದೆಗಳು ಬಿನ್ನೈಸಿದ ಪ್ರತ್ಯುತ್ತರ:

೧-೧ ಗೊಗ್ಗೇಶ್ವರಾ (ಮೂ)

೫೬೮

ಕಾಮದ ಕರಸ್ಥಲದಲ್ಲಿ ಗುರುಸ್ವಾಯತವ ಮಾಡಿದೆನು.
ಕ್ರೋಧದ ನಯನದಲ್ಲಿ ಜಂಗಮಸ್ವಾಯತವ ಮಾಡಿದೆನು.
ಲೋಭವಿಲ್ಲದೆ ಪ್ರಸಾದವ ಗ್ರಹಿಸಿದೆನು.
ಇಂತೀ ತ್ರಿವಿಧದಲ್ಲಿ ಶುದ್ಧನಾದೆನು ಕಾಣಾ
ಕಲಿದೇವರದೇವಾ, ನಿಮ್ಮಾಣೆ! ॥೧೮॥

[1]ಮತ್ತಂ,[1]

೫೬೯

ಎನ್ನ ಅಷ್ಟವಿಧಾರ್ಚನೆ ಶುದ್ಧವಾಯಿತ್ತಯ್ಯಾ-
ನೀವು ಮೂರ್ತಿಲಿಂಗವಾದ ಕಾರಣ.
ಎನ್ನ ತನು ಮನ ಶುದ್ಧವಾಯಿತ್ತಯ್ಯಾ-
ನೀವು ಜಂಗಮ ಲಿಂಗವಾದ ಕಾರಣ.
ಎನ್ನ ಆಪ್ಯಾಯನ ಶುದ್ಧವಾಯಿತ್ತಯ್ಯಾ-
ನಿಮ್ಮ ಪ್ರಸಾದವ ಕೊಂಡೆನಾಗಿ.
ಎನ್ನ ಕಾಮ ಕ್ರೋಧ ಲೋಭ ಮೋಹ ಮದ
ಮತ್ಸರಂಗಳೆಲ್ಲವಳಿದವಯ್ಯಾ,- ನೀವು ಜ್ಞಾನಲಿಂಗವಾದ ಕಾರಣ.
ಇಂತೀ ಎನ್ನ ಸರ್ವದಲ್ಲಿ ಸನ್ನಿಹಿತವಾದೆಯಲ್ಲಾ ಕಲಿದೇವರದೇವಾ.॥೧೯॥

ಈ ಹೀಂಗೆಂದು ಮಡಿವಾಳತಂದೆಗಳು ಬಿನ್ನೈಸಲು, ಇದಕ್ಕೆ ಪ್ರಭುದೇವರು ಆ ಮಡಿವಾಳತಂದೆಗಳ ಸಮರಸಭಾವವನೊರೆದು ನೋಡುವ ಪ್ರಸ್ತಾವದ ವಚನ:

೫೭೦

ತನುಗುಣ ನಾಸ್ತಿ, ಮನಗುಣ ನಾಸ್ತಿ,
ಧನಗುಣ ನಾಸ್ತಿಯಾದಡೇನು?
ಭಾವನಾಸ್ತಿಯಾಗಬೇಕು.
ಭಾವನಾಸ್ತಿಯಾದಲ್ಲದೆ ಅಱಿವು ನೆಲೆಗೊಳ್ಳದು.
ಅಱಿವು ನೆಲೆಗೊಂಡಲ್ಲಿ ಕುಱುಹಿಂಗೆ ಹೊಱಗು
ಕುಱುಹಳಿದು ಕೂಡುವ ಪರಮಸುಖವು-
[2]ಗೊಹೇಶ್ವರ[2]ಲಿಂಗದಲ್ಲಿ ನಿನಗೆ ಸಾಧ್ಯವಾದ ಪರಿಯ
ಹೇಳಾ ಮಡಿವಾಳ ಮಾಚಯ್ಯಾ? ॥೨೦॥

ಈ ಹೀಂಗೆಂದು ಪ್ರಭುದೇವರು ಮಡಿವಾಳತಂದೆಗಳ ಒಳಗನೊರೆದು ನೋಡಲು, ಮರಳಿಯಾ ಮಡಿವಾಳತಂದೆಗಳು ಬಿನ್ನೈಸಿದ ಪ್ರತ್ಯುತ್ತರ:

೧-೧X(ಮು) ೨-೨ ಗೊಗ್ಗೇಶ್ವರ (ಮೂ)

೫೭೧

ಆಲೀಯವಾಗಿ ಬಂದ ಪರಿಯ,
ಅಕಾರ ಉಕಾರ ಮಕಾರಂಗಳು ಸೋಂಕದಿದ್ದ ಪರಿಯ,
ನಿರ್ಲೇಪಸ್ಥಲವಾಧಾರವಾದ ಪರಿಯ
ನಿಮ್ಮ ಶರಣ ಬಸವಣ್ಣ ಬಲ್ಲನು;
ಬೆಸಗೊಳ್ಳಾ ಕಲಿದೇವರದೇವಾ. ॥೨೧॥

ಎನ್ನ ಅಂತಃಸ್ಥಿತಿಗತಿಯ ಬಸವಣ್ಣ ಬಲ್ಲನಾಗಿ, ಆತನಿಂದಲೆನ್ನ ಪರಿಯ ವಿಚಾರಿಸಿ ನೋಡಿ ಎಂದು ಮಡಿವಾಳತಂದೆಗಳು ಬಿನ್ನೈಸಲು, ಇದಕ್ಕೆ ಪ್ರಭುದೇವರು ಬಸವರಾಜದೇವರ ಬೆಸಗೊಂಡ ಪ್ರಸ್ತಾವದ ವಚನ:

೫೭೨

ಮನ ಮನ ಬೆರಸಿ ಸಮರತಿಯ ಸಂಗದಲ್ಲಿ ಸುಖಿಗಳಾಗಿಪ್ಪ
ಶರಣರ ಸಂಗ ಸುಖವನಾ ಶರಣರೆ ಬಲ್ಲರಲ್ಲದೆ,
ಕೆಲದಲ್ಲಿ ಇದ್ದವರಿಗೆ ಅಱಿಯಬಹುದೆ?
ನಿಜಗುಣಭರಿತರು ಶಿವಶರಣರ ನಿಲವ
ಕಂಡೆಹೆನೆಂದರೆ ಕಾಣಬಹುದೆ?
[1]ಗೊಹೇಶ್ವರ[1]ಲಿಂಗದಲ್ಲಿ ಮಡಿವಾಳಮಾಚಯ್ಯನ ಪರಿಯ ನೀ ಬಲ್ಲೆ;
ಎನಗೊಮ್ಮೆ ಹೇಳಾ ಸಂಗನಬಸವಣ್ಣಾ. ॥೨೨॥

ಈ ಹೀಂಗೆಂದು ಪ್ರಭುದೇವರು ಬೆಸಗೊಳ್ಳಲು, ಬಸವರಾಜದೇವರು ಮರಳಿ ಪ್ರಭುದೇವರೊಡನೆ ಬಿನ್ನಪಂಗೈವ ಪ್ರಸ್ತಾವದ ವಚನ:

೫೭೩

ಎನ್ನ ಕಾಯದ ಕತ್ತಲೆಯ ಕಳೆಯಲಱಿಯೆನು.
ಎನ್ನ ಜೀವದ ನಿಲವ ಗೆಲಲಱಿಯೆನು.
ಎನ್ನ ಭಾವದ ಸೂತಕವ ಕಳೆಯಲಱಿಯೆನು.
ನಾನೆಂತು ಬಲ್ಲೆನಯ್ಯಾ ನಿಮ್ಮ ಘನಮಹಿಮರ ನಿಲವ?
ಕೂಡಲಸಂಗಮದೇವಾ,
ನಿಮ್ಮ ಶರಣ ಮಡಿವಾಳ ಮಾಚಿತಂದೆಯ ಘನವ ನೀವೆ ಬಲ್ಲಿರಿ. ॥೨೩॥

ಮತ್ತಂ,

೫೭೪

ಆದುದನಱಿಯೆ; ಹೋದುದನಱಿಯೆ.
ಬಂದುದನಱಿಯೆ; ನಿಂದುದನಱಿಯೆ.

೧-೧ ಗೊಗ್ಗೇಶ್ವರಾ(ಮೂ)

ಒಳಗನಱಿಯೆ; ಹೊರಗನಱಿಯೆ.
ಇಹವನಱಿಯೆ; ಪರವನಱಿಯೆ.
ಭಾವವನಱಿಯೆ; ನಿರ್ಭಾವವನಱಿಯೆ.
ಶೂನ್ಯವನಱಿಯೆ; ನಿಶ್ಶೂನ್ಯವನಱಿಯೆ.
ಕೂಡಲಸಂಗಮದೇವಯ್ಯಾ,
ಇವೆಲ್ಲವ ಮಾಡಿ ಕೂಡಿದಾತ ಮಡಿವಾಳ ಬಲ್ಲನಾಗಿ
ನಾನೆಂದೂ ಅಱಿಯೆನಯ್ಯಾ. ॥೨೪॥

ಮತ್ತಂ.

೫೭೫

ಅಯ್ಯಾ, ನಾನು ದಾಸೋಹವ ಮಾಡುವೆನಲ್ಲದೆ
ಸಮಯವನಱಿಯೆ.
ಅಯ್ಯಾ, ನಾನು ಭಕ್ತಿಯ ಮಾಡುವೆನಲ್ಲದೆ ಭಾವವನಱಿಯೆ.
ಸ್ಥಳಕುಳವ ವಿಚಾರಿಸಿದರೆ, ಎನ್ನಲ್ಲಿ ಏನೂ ಹುರುಳಿಲ್ಲ.
ನಿಮ್ಮ ಶರಣರ ಸೋಂಕಿನಲ್ಲಿ ಶುದ್ಧನಾದೆನು.
ಕೂಡಲಸಂಗಮದೇವರು ಸಾಕ್ಷಿಯಾಗಿ,
ಮಾಡಿವಾಳ ಮಾಚಿತಂದೆಗಳ ಶ್ರೀಪಾದಕ್ಕೆ
ನಮೋ ನಮೋ ಎಂದು ಬದುಕಿದೆನು! ॥೨೫॥

ಈ ಹೀಂಗೆಂದು ಬಸವರಾಜದೇವರು ಬಿನ್ನೈಸಲು, ಪ್ರಭುದೇವರು ಆ ಬಸವರಾಜದೇವರ ಪರಿಯ ಹೇಂಗೆಂದು ಮಾಡಿವಾಳತಂದೆಗಳ ಬೆಸಗೊಂಬ ಪ್ರಸ್ತಾವದ ವಚನ:

೫೭೬

ಯುಕ್ತಿಯ ಕೇಳಿದರೆ ಭಕ್ತಿಯ ತೋಱಿದ;
ಭಕ್ತಿಯ ಕೇಳಿದರೆ ಯುಕ್ತಿಯ ತೋಱಿದ.
ನಿತ್ಯವ ಬೆಸಗೊಂಡರೆ ಅತ್ತತ್ತಲೋಸರಿಸಿದ.
[1]ಗೊಹೇಶ್ವರ[1]ನ ಶರಣ ಬಸವಣ್ಣ ಮಱೆಗೆ ಮಱೆಯನೊಡ್ಡಿ ಜಾಱಿದನು.
ಬಸವಣ್ಣನ ಪರಿ ಎಂತು ಹೇಳಾ ಮಡಿವಾಳ ಮಾಚಯ್ಯಾ? ॥೨೬॥

ಈ ಹೀಂಗೆಂದು ಪ್ರಭುದೇವರು ಬೆಸಗೊಳ್ಳಲು, ಆ ಮಡಿವಾಳತಂದೆಗಳು ಬಸವರಾಜದೇವರ ಮಹಾತ್ಮೆಯನ್ನು ಬಿನ್ನಪಂಗೆಯ್ವ ಪ್ರಸ್ತಾವದ ವಚನ:

೫೭೭

ಪ್ರಥಮಕಾಲದಲ್ಲಿ ದೇವಗಣ ಮಹಾಗಣ
ಕಿನ್ನರಗಣ ಆಳಾಪಗಣ ಸಹಿತ ಸಂಗನಬಸವಣ್ಣನು.

೧–೧ ಗೊಗ್ಗೇಶ್ವರಾ (ಮೂ)

ಗಣಪ್ರಸಾದಿಯಾಗಿ ಮರ್ತ್ಯಲೋಕಕ್ಕೆ ಮಹವ ತಂದು,
ಶಿವಗಣಂಗಳ ಮಾಡಿದಾತ ಬಸವಣ್ಣನು.
ಸ್ವರೂಪು ಸಾರಾಯವನು ಪದಾರ್ಥವೆಂದಾತ ಬಸವಣ್ಣನು.
ಕಲಿದೇವಯ್ಯಾ, ನಿಮ್ಮ ಶರಣನಿಂತಹ ಮಹಿಮನು! ॥೨೭॥

ಮತ್ತಂ,

೫೭೮

ಎಲ್ಲಾ ವ್ಯಾವರ್ಣಂಗಳು ಸ್ಥಾಪ್ಯದೊಳಗು.
ಎಲ್ಲಾ ವಚನಂಗಳು ತಾಪದೊಳಗು.
ಎಲ್ಲಾ ಸ್ತೋತ್ರಂಗಳು ಕ್ರೋಧದೊಳಗು.
ಎಲ್ಲಾ ಅಱಿವು ಮಥನದೊಳಗು.
ಎಲ್ಲಾ ಮೂರ್ತಿಗಳು ಪ್ರಳಯದೊಳಗು.
ಎಲ್ಲಾ ಗೀತಂಗಳು ಸಂವಾದದೊಳಗು.
ಲಿಂಗಾನುಭಾವಿ ಇವನೊಂದನೂ ಮನದಲ್ಲಿ ನೆನೆಯ;
ಏನೆಂದು ಅಱಿಯ.
ಸ್ವತಂತ್ರ ನಿತ್ಯನಾಗಿ ಭಕ್ತಿದಾಸೋಹವ
ನಿಮ್ಮ ಬಸವಣ್ಣನಳವಡಿಸಿಕೊಂಡನು.
ನಿಮ್ಮ ಬಸವಣ್ಣನಿಂತಹ ಸ್ವತಂತ್ರನಯ್ಯಾ ಕಲಿದೇವರದೇವಾ! ॥೨೮॥

ಮತ್ತಂ,

೫೭೯

ಆದಿಯನಾದಿಯಿಲ್ಲದಂದು,
ಸಾಧ್ಯ ಅಸಾಧ್ಯಂಗಳಿಲ್ಲದಂದು,
ಸ್ಥೂಲ ಸೂಕ್ಷ್ಮಂಗಳೆಂಬ ಮೂರ್ತಿಗಳಿಲ್ಲದಂದು,
ಸಾಕಾರ ನಿರಾಕಾರವೆಂಬ ವಾಕ್ಕು ಹುಟ್ಟದಂದು,
ಶಂಕರ ಶಶಿಧರ ಈಶ್ವರರೆಂಬ ಗಣಾಧೀಶ್ವರರಿಲ್ಲದಂದು.
ಉಮೆಯ ಕಲ್ಯಾಣವಿಲ್ಲದಂದು,
ಶಿವರತಿ ಮಹಾರತಿ ಬಸವಣ್ಣನಿಂದಾಯಿತ್ತು.
ಸರ್ವವಿಸ್ತೀರ್ಣವ ನೀಕರಿಸಿ ಶಿವಲಿಂಗಾರ್ಚನೆಯ ತೋಱಿದ.
ನಿತ್ಯ ಲಿಂಗಾರ್ಚನೆಯಲ್ಲಿ ಪ್ರಸಾದಧ್ಯಾನ,
ಜಂಗಮಾರ್ಚನೆಯಲ್ಲಿ ಪ್ರಸಾದಭೋಗವೆಂಬುದನು
ಸಂಗನಬಸವಣ್ಣನಲ್ಲದೆ ಮತ್ತಾರೂ ಅಱಿಯರು.
ಭಕ್ತಿಯ ಕುಳಸ್ಥಳವನಱಿಯದೆ ಎಲ್ಲರು ಎಂದಂತೆ ಎಂದರು;
ಬಂದಲ್ಲಿಯೆ ಬಂದರು.
ಇದ ನೀಕರಿಸಿ, ಜಂಗಮವೆ ಲಿಂಗವೆಂದು

ಸಂಗಸಾಹಿತ್ಯವಾದನು.

ಸಂಗನಬಸವಣ್ಣನಿಂತಹ ನಿತ್ಯನಯ್ಯಾ ಕಲಿದೇವರದೇವಾ! ॥೨೯॥

ಮತ್ತಂ,

೫೮೦

ಆಕಾರ ನಿರಾಕಾರವೆನುತಿಹರೆಲ್ಲರು.
ಆಕಾರವೆನ್ನೆ: ನಿರಾಕಾರವೆನ್ನೆ.
ಲಿಂಗ ಜಂಗಮ ಪ್ರಸಾದ ತದ್ಗತನಾದ,
ನಿಮ್ಮ ಬಸವಣ್ಣನಿಂತಹ ಸ್ವತಂತ್ರನಯ್ಯಾ ಕಲಿದೇವರದೇವಾ! ॥೩೦॥

ಮತ್ತಂ,

೫೮೧

ಬಸವಣ್ಣನ ನಡೆ ಪರುಷ, ಬಸವಣ್ಣನ ನುಡಿ ಪರುಷ,
ಬಸವಣ್ಣನ ದೃಷ್ಟಿ ಪರುಷ, ಬಸವಣ್ಣನ ಹಸ್ತ ಪರುಷ,
ಬಸವಣ್ಣನ ಭಾವ ಪರುಷ, ಬಸವಣ್ಣನ ಮನ ಪರುಷ.
ತನು ಮನ ಧನವ ನಿವೇದಿಸಿದಾತ ಬಸವಣ್ಣನು.
ಬಸವಣ್ಣನ ನೆನೆವುದೆ ಲಿಂಗಾರ್ಚನೆ.
ಬಸವಣ್ಣನ ನೆನೆವುದೆ ಪರತತ್ತ್ವ.
ಬಸವಣ್ಣನ ನೆನೆವುದೆ ಕಲ್ಯಾಣವೆನಗೆ.
ಕಲಿದೇವಯ್ಯಾ, ನಿಮ್ಮ ಶರಣ ಬಸವಣ್ಣನಿಂತಹ
ಮಹಿಮ ನೋಡಯ್ಯಾ! ॥೩೧॥

ಇಂತು ಮಡಿವಾಳತಂದೆಗಳು ಪ್ರಭುದೇವರೊಡನೆ ಬಸವರಾಜದೇವರ ಮಹಾತ್ಮೆಯಂ ಕೊಂಡಾಡಲು, ಇದಕ್ಕೆ ಪ್ರಭುದೇವರು ಪ್ರಸನ್ನರಾಗಿ ಬಸವರಾಜದೇವರೊಡನೆ ಮಡಿವಾಳತಂದೆಗಳ ಕೊಂಡಾಡಿದ ಪ್ರಸ್ತಾವದ ವಚನ:

೫೮೨

ವಾರಿಕಲ್ಲ ಪುತ್ಥಳಿಯನಪ್ಪುಕೊಂಡಂತಾಯಿತ್ತು.
ಅಗ್ನಿಯ ಮುಸುಕ ತೆಗೆದ ಕರ್ಪುರದಂತಾಯಿತ್ತು.
ಕತ್ತಲೆಯೊಳಗೆ ರವಿಯ ಬೆಳಗು ಹೊಕ್ಕಂತಾಯಿತ್ತು.
[1]ಗೊಹೇಶ್ವರ[1]ನ ಶರಣ ಮಡಿವಾಳಮಾಚಿತಂದೆಯ ಕೃಪೆಯಿಂದ–
ಬಸವಣ್ಣಾ, ನಿನ್ನನೂ ಮಡಿವಾಳನನೂ ನೀನೆಂದೆ ಕಂಡೆನಯ್ಯಾ. ॥೩೨॥

ಮತ್ತಂ,

೧–೧ ಗೊಗ್ಗೇಶ್ವರ (ಮೂ)

೫೮೩

ಅಷ್ಟತನುವಿನ ಘಟ್ಟಿಯ ಕರಗಿಸಿ,
ಕಟ್ಟುಗ್ರದ ಕಾಮ ಕ್ರೋಧ ಲೋಭ ಮೋಹ
ಮದ ಮತ್ಸರಂಗಳೆಂಬವ ಸುಟ್ಟುರುಹಿ,
ತನುವಿನ ಅವಲೋಹವ ಕೆಡಿಸಿ,
ಮನದ ಸಂಚಲವ ನಿಲಿಸಿ,
ಸಕಲ ಕರಣಂಗಳ ಅಱಿವಿಂಗಾಹುತಿಯನಿಕ್ಕಿ
ಸುಜ್ಞಾನಪ್ರಭೆಯನಿಟ್ಟು, ಸುಜ್ಞಾನಪ್ರಭೆಯ ಹೊದೆದು,
ಸುಜ್ಞಾನಪ್ರಭೆಯ ಸುತ್ತಿ, ಸುಜ್ಞಾನಪ್ರಭೆಯ ಹಾಸಿ
ಮಹಾಜ್ಞಾನದಲ್ಲಿ ನಿರ್ಭಾವಸಂಪನ್ನನಾದ
ಮಡಿವಾಳನ ಮಡಿಯ ಪ್ರಸಾದವ ನಾನು ಹೊದೆದ ಕಾರಣ
ನಿರ್ಮಳನಾದೆನು; ನಿಜೈಕ್ಯನಾದೆನು; ನಿಶ್ಚಿಂತನಾದೆನು.
ಇದು ಕಾರಣ, ‘ಗುಹೇಶ್ವರ’ಲಿಂಗದಲ್ಲಿ
ತೆಱಹಿಲ್ಲದಿಪ್ಪ ಮಡಿವಾಳನ ಪ್ರಸಾದದಿಂದ
ನಿಮ್ಮ ಘನವನಱಿದು ಬದುಕಿದೆನು ಕಾಣಾ ಸಂಗನಬಸವಣ್ಣಾ! ॥೩೩॥

ಈ ಹೀಂಗೆಂದು ಪ್ರಭುದೇವರು ಮಡಿವಾಳಮಾಚಿತಂದೆಗಳ ಸ್ತುತಿಸಿ ಬಸವರಾಜದೇವರೊಡನೆ ನಿರೂಪಿಸಲು, ಆ ಮಡಿವಾಳಮಾಚಿತಂದೆಗಳು ಪ್ರಭುದೇವರೊಡನೆ ಬಸವರಾಜದೇವರಿಂದ ನಿಮ್ಮ ಪ್ರಸಾದದ ನಿಲವ ಕಂಡೆನೆಂದು ಬಿನ್ನೈಸಿದ ಪ್ರಸ್ತಾವದ ವಚನ:

೫೮೪

ಅಯ್ಯಾ, ನಿಮ್ಮ ಪ್ರಸಾದದ ಮಹಿಮೆಯನೇನೆಂಬೆನಯ್ಯಾ!
ವೇದಂಗಳಱಿಯವು; ಶಾಸ್ತ್ರಂಗಳಱಿಯವು.
ಛಲವ ಸಾಧಿಸಿ, ತನುದಂಡನೆಯ ಮಾಡಿ,
ಸಕಲ ಭೋಗಂಗಳ ಬಿಟ್ಟು, ದುಃಖವನನುಭವಿಸಿ,
ತಪ್ಪಿಲ್ಲದೆ ನಡೆದರೆ ಹಡೆವರಯ್ಯಾ ಒಚ್ಚೆ ಸ್ವರ್ಗದ ಭೋಗವನು.
ಒಂದುವನೂ ಬಿಡಲಿಲ್ಲ, ಸಂದೇಹ ಮಾತ್ರವಿಲ್ಲ,
ಆಗ ಬಿತ್ತಿ ಆಗ ಬೆಳೆವಂತೆ,
ರೋಗಿ ಬಯಸಿತ್ತ ವೈದ್ಯ ಕೊಡುವಂತೆ
ಪಾಪದಂತವಾದುದು, ಪುಣ್ಯವನೆ ಮಾಡುವುದು,
ಆತ ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿ ಎನಿಸುವ.
ಹಿಡಿತಡೆ ಇಲ್ಲ,– ನಡೆದುದೆ ಬಟ್ಟೆಯಾದ ಕಾರಣ,
ಪ್ರಸಾದದಿಂದತಃಪರವಿಲ್ಲ; ಪ್ರಸಾದಿಯಿಂದ ಮುಕ್ತರಿಲ್ಲ.
ಇಂತಪ್ಪ ಪ್ರಸಾದವನು ನಿಮ್ಮ ಶರಣ ಬಸವಣ್ಣ ತೋಱಿದನಾಗಿ,
ಎನ್ನ ಭವಂ ನಾಸ್ತಿಯಾಯಿತ್ತು ಕಾಣಾ ಪ್ರಭುವೆ, ಕಲಿದೇವರದೇವಾ.॥೩೪॥

ಇಂತು ಮಡಿವಾಳತಂದೆಗಳು ಪ್ರಭುದೇವರೊಡನೆ ಬಸವರಾಜದೇವರ ಕೊಂಡಾಡಿ ಬಿನ್ನೈಸಲು, ಆ ಬಸವರಾಜದೇವರು ಮಡಿವಾಳತಂದೆಗಳ ಸ್ತುತಿಸಿದ ಪ್ರಸ್ತಾವದ ವಚನ:

೫೮೫

ಕೋಟಿರುದ್ರರು ಮಡಿದರು.
ಅನಂತಕೋಟಿ ಬ್ರಹ್ಮವಿಷ್ಣುಗಳು ಮಡಿದರು.
ನರರು ಸುರರು ಗರುಡಗಂಧರ್ವರು ಮಡಿದರು.
ಅವರ ಮಡಿಯೊಳಗೆ ತಾನಾಗದೆ,
ತಾನೊಂದು ಹೊಸ ಬಿಳಿದ ಮಡಿಮಾಡಿ,
ಎನಗುಡಕೊಟ್ಟು ಎನ್ನ ಬದುಕಿಸಿ ಕೊಂಡಾತ
ಮಡಿವಾಳ ಕಾಣಾ ಕೂಡಲಸಂಗಮದೇವಾ! ॥೩೫॥

ಇಂತು ಬಸವರಾಜದೇವರು ಮಡಿವಾಳತಂದೆಗಳ ಸ್ತುತಿಸುತ್ತಿರಲು, ಆ ಮಡಿವಾಳ ಮಾಚಿತಂದೆಗಳು ಬಸವರಾಜದೇವರೊಡನೆ ಪ್ರಭುದೇವರ ಕೊಂಡಾಡಿದ ಪ್ರಸ್ತಾವದ ವಚನ:

೫೮೬

ಅಂಗಯ್ಯ ಲಿಂಗ ಕಂಗಳ ನೋಟದಲ್ಲಿ ಅಚಿತ ಲಿಂಗೈಕ್ಯ.
ಮನದ ಅಱಿವು ನಿರ್ಭಾವದಲ್ಲಿ ಅಚಿತ ಲಿಂಗೈಕ್ಯ.
ಸರ್ವಾಂಗನಿಷ್ಠೆ ನಿರ್ಣಯವಾದ ಲಿಂಗೈಕ್ಯ.
ನಿಜವನುಂಡು ತೃಪ್ತನಾದ ಲಿಂಗೈಕ್ಯ.
ಮಹವನವಗ್ರಹಿಸಿದ ಘನವೇದ್ಯನಾದ ಲಿಂಗೈಕ್ಯ.
ಕಲಿದೇವರದೇವಾ,
ಪ್ರಭುವೆಂಬ ಲಿಂಗೈಕ್ಯನ ಶ್ರೀಪಾದದಲ್ಲಿ ಮಗ್ನನಾಗಿದ್ದೆನು. ॥೩೬॥

ಮತ್ತಂ,

೫೮೭

ಗುರುವಾಗಿ ಉಪದೇಶವ ತೋಱಿದನೀತ.
ಲಿಂಗವಾಗಿ ಮನವನಿಂಬುಗೊಂಡಾತನೀತ.
ಜಂಗಮವಾಗಿ ಅರ್ಥಪ್ರಾಣಾಭಿಮಾನ ದರ್ಪವ ಕೆಡಿಸಿದಾತನೀತ.
ಪ್ರಸಾದವಾಗಿ ಎನ್ನ ಸರ್ವಾಂಗವನವಗ್ರಹಿಸಿದಾತನೀತ.
ಪಾದೋದಕವಾಗಿ ಎನ್ನ ಒಳಹೊಱಗೆ ತೊಳೆದಾತನೀತ.
ಕಲಿದೇವರದೇವಾ, ಬಸವಣ್ಣನ ತೋಱಿದನಾಗಿ
ಪ್ರಭುವೆಂಬ ಮಹಿಮನ ಸಂಗದಿಂದ ಬದುಕಿದೆನು. ॥೩೭॥

ಈ ಹೀಂಗೆಂದು ಮಡಿವಾಳತಂದೆಗಳು ಪ್ರಭುದೇವರ ಸ್ತುತಿಸಿ, ಬಸವರಾಜದೇವರೊಡನೆ ಬಿನ್ನೈಸಲು, ಆ ಬಸವರಾಜದೇವರು ಪ್ರಭುದೇವರೊಡನೆ ಮಡಿವಾಳ ತಂದೆಗಳ ಸ್ತುತಿಸಿದ ಪ್ರಸ್ತಾವದ

ವಚನ:

೫೮೮

ಎನ್ನ ಕಾಯವ ಶುದ್ಧವ ಮಾಡಿದಾತ ಮಡಿವಾಳ.
ಎನ್ನ ಮನವ ನಿರ್ಮಲವ ಮಾಡಿದಾತ ಮಡಿವಾಳ.
ಎನ್ನಂತರಂಗವ ಬೆಳಗಿದಾತ ಮಡಿವಾಳ.
ಎನ್ನ ಬಹಿರಂಗವ ಬಿಡಿಸಿದಾತ ಮಡಿವಾಳ.
ಕೂಡಲಸಂಗಮದೇವಾ,
ಎನ್ನ ನಿಮಗೆ ಯೋಗ್ಯನ ಮಾಡಿದಾತ ಮಡಿವಾಳ. ॥೩೮॥

ಮತ್ತಂ,

೫೮೯

ಸೂತ್ರಧಾರಿ ಮನದ ಮೈಲಿಗೆಯಂ
ಕಳೆಯ ಬಂದನಯ್ಯಾ ಮಡಿವಾಳನು.
ಎನ್ನ ಕಾಯದ ಮೈಲಿಗೆಯ ತಂದು ತನ್ನ ಮುಂದೆ ಇರಿಸಿದರೆ,
ಸಮತೆಯೆಂಬ ಕೂಪ ತೋಹಿನಲ್ಲಿ ಅದ್ದಿ ಕಟ್ಟಿ ಹಿಳಿದನಯ್ಯಾ.
ಅವಗುಣವೆಂಬ ಪಂಚೇಂದ್ರಿಯವರ್ಗಂಗಳ
ಜ್ಞಾನವೆಂಬ ನಿರ್ಮಳಜಲದಲ್ಲಿ ಅಲುಬಿ ಸೆಳೆದನಯ್ಯ.
ರವಿ ಶಶಿ ಶಿಖಿಯ ತೇಜದಲ್ಲಿ ಆಱಿಸಿದನು;
ಚತುರ್ದಶ ಷೋಡಶವೆಂಬ ಗಳಿಗೆಯಂ ಮಾಡಿದನು.
ಸಮಾಧಾನವೆಂಬ ಅಡೆಯ ಮೇಲಿರಿಸಿ
ಸಮಗುಣವೆಂಬ ಕೊಡತಿಯಲ್ಲಿ ಘಟ್ಟಿಸಿದನು.
ಹಱಿಯಿತ್ತಯ್ಯಾ ಸೆಱಗು ಮೂಱಾಗಿ!
ಆ ಮೂಱುಱುವೆಯ ಕೊಟ್ಟನಯ್ಯಾ ಎನ್ನ ಕೈಯಲ್ಲಿ.
ಆ ಅಱುವೆಯ ಗುರುವಿಂಗೊಂದ ಕೊಟ್ಟೆನು,
ಲಿಂಗಕ್ಕೊಂದ ಕೊಟ್ಟೆನು, ಜಂಗಮಕ್ಕೊಂದ ಕೊಟ್ಟೆನು,
ಎನಗೆ ಕೊಟ್ಟ ಮೂಱುಱುವೆಯನೂ ಒಂದುಮಾಡಿ
ಹೊದೆದುಕೊಂಡು ನಿಶ್ಚಿಂತನಾಗಿ,
ಮಡಿವಾಳನ ಕೃಪೆಯಿಂದಲಾನು ಬದುಕಿದೆನು
ಕಾಣಾ ಕೂಡಲಸಂಗಮದೇವಾ! ॥೩೯॥

ಮತ್ತಂ,

೫೯೦

ಮಡಿವಾಳ ಮಡಿವಾಳನೆಂಬರು.
ಮಡಿವಾಳನೆಂಬುದನಾರು ಅಱಿಯರು.
ಎನ್ನ ಮಲತ್ರಯದಲ್ಲಿ ಹೊದಕುಳಿಗೊಂಬ
ಮನದ ಮೈಲಿಗೆಯ ತಂದು

ತಾನು ತನ್ನ ಮನೆಗೆ ಕೊಂಡು ಹೋಗಿ ಹಾಯಿಕಿದರೆ,
ಕೈಮುಟ್ಟಿದರೆ ಆಗದೆಂದು
ತನ್ನ ಪಾದದೊಳಗೆ ಮುಟ್ಟಿ ಅಲುಬಿ ಸೆಳೆದನಯ್ಯಾ.
ತನ್ನ ನಿರ್ಮಲವ ಕೊಟ್ಟನೆನಗೆ.
ಆ ಕೊಟ್ಟ ಬೀಳುಡಿಗೆಯ ಹೊದೆದುಕೊಂಡೆನಾಗಿ,
ಆ ಮಡಿವಾಳಮಾಚಿತಂದೆಯ ಕೃಪೆಯಿಂದಲಾನು
ಬದುಕಿದೆನಯ್ಯಾ ಕೂಡಲಸಂಗಮದೇವಾ! ॥೪೦॥

ಈ ಹೀಂಗೆಂದು ಬಸವರಾಜದೇವರು ಮಡಿವಾಳಮಾಚಿತಂದೆಗಳ ಹೊಗಳಲು, ಆ ಮಡಿವಾಳತಂದೆಗಳು ಮರಳಿ ಆ ಬಸವರಾಜದೇವರ ಕೊಂಡಾಡುವ ವಚನ:

೫೯೧

ಬಿಂದುವ ಹಜೆದು, ನಾದವನತಿಗಳೆದು,
ಕಳೆಯ ಬೆಳಗ ಸಾಧಿಸಿ, ಅಸಾಧ್ಯ ಸಾಧಕನಾದೆಯಲ್ಲಾ ಬಸವಣ್ಣಾ!
ಕಾಯವ ಹೊದ್ದದೆ, ಮಾಯವ ಸೋಂಕದೆ,
ನಿರಾಳನಾಗಿ ನಿಂದೆಯಲ್ಲಾ ಬಸವಣ್ಣಾ!
ನಾ ನಿಮ್ಮನವಗ್ರಹಿಸಿ, ನೀನೆನ್ನನವಗ್ರಹಿಸಿ
ಸಂದು ಭೇದವಿಲ್ಲದಿಪ್ಪಲ್ಲಿ ಹೊಗಳಲಿಂಬುಂಟೆ ಬಸವಣ್ಣಾ?
ಕಲಿದೇವರದೇವನು ಕಾಯಗೊಂಡಿಪ್ಪುದ
ನಿನ್ನಿಂದಲಾನು ಕಂಡೆ ನೋಡಾ ಸಂಗನಬಸವಣ್ಣಾ! ॥೪೧॥

ಈ ಹೀಂಗೆಂದು ಮಡಿವಾಳತಂದೆಗಳು ಬಸವರಾಜದೇವರ ಕೊಂಡಾಡುತ್ತಿರಲು, ಇದಕ್ಕೆ ಪ್ರಭುದೇವರು ಬಸವಣ್ಣನ ಕೃಪೆಯಿಂದ ನಿಮ್ಮ ಘನವನಜೆದೆನೆಂದು ಮಡಿವಾಳ ಮಾಚಿತಂದೆಗಳ ಕೊಂಡಾಡುವ ಪ್ರಸ್ತಾವದ ವಚನ:

೫೯೨

ಆದಿಯ ಕಂಡೆ; ಅನಾದಿಯ ಕಂಡೆ,
ಘನವ ಕಂಡೆ, ಮನವ ಕಂಡೆ, ಅನುವ ಕಂಡೆ,
ಆಯತ ಸ್ವಾಯತ ಸನ್ನಿಹಿತವ ಕಂಡೆ.
[೧]ಗೊಹೇಶ್ವರ[೧]ಲಿಂಗದಲ್ಲಿ ಬಸವಣ್ಣನ ಕೃಪೆಯಿಂದ ನಿನ್ನ ಕಂಡೆ
ಕಾಣಾ ಮಡಿವಾಳಮಾಚಯ್ಯಾ! ॥೪೨॥

ಈ ಹೀಂಗೆಂದು ಪ್ರಭುದೇವರು ಮಡಿವಾಳತಂದೆಗಳ ಸ್ತೋತ್ರಮಂ ಮಾಡಲು, ಆ ಮಡಿವಾಳತಂದೆಗಳು ಬಸವಣ್ಣನ ಕೃಪೆಯಿಂದ ನಿನ್ನ ಕಂಡು ಬದುಕಿದೆನೆಂದು ಪ್ರಭುದೇವರ ಸ್ತೋತ್ರಮಂ ಮಾಡಿದ ಪ್ರಸ್ತಾವದ ವಚನ:

೧-೧ ಗೊಗ್ಗೇಶ್ವರ (ಮೂ)

೫೯೩

ಎಲೆ ಕಲಿದೇವಯ್ಯಾ, ಆದಿಯ ಕುಳವು ಅನಾದಿಯ ಕುಳವು
ನಿಮ್ಮ ಜಂಗಮಮೂರ್ತಿಯಲ್ಲಿ ನಿಂದಿತ್ತು.
ಮೂಲಶುದ್ಧದ ಮುಕ್ತಾಯ ನಿಮ್ಮ ಜಂಗಮಮೂರ್ತಿಯಲ್ಲಿ ನಿಂದಿತ್ತು.
ಉಭಯಕುಳ ಕಿರಣಶಕ್ತಿ ನಿಮ್ಮ ಜಂಗಮಮೂರ್ತಿಯಲ್ಲಿ ನಿಂದಿತ್ತು.
ಭಾವ ನಿರ್ಭಾವ ನಿಮ್ಮ ಜಂಗಮಮೂರ್ತಿಯಲ್ಲಿ ನಿಂದಿತ್ತು.
ಆದಿಯನಾದಿಯೂ ನಿಮ್ಮ ಜಂಗಮಮೂರ್ತಿಯಲ್ಲಿ ನಿಂದಿತ್ತು.
ಸಾಧ್ಯ ಅಸಾಧ್ಯ ನಿಮ್ಮ ಜಂಗಮಮೂರ್ತಿಯಲ್ಲಿ ನಿಂದಿತ್ತು.
ಅರ್ಥಪ್ರಾಣಾಭಿಮಾನ ನಿಮ್ಮ ಜಂಗಮಮೂರ್ತಿಯಲ್ಲಿ ನಿಂದಿತ್ತು.
ಅಂಗಲಿಂಗಸಂಗ ನಿಮ್ಮ ಜಂಗಮಮೂರ್ತಿಯಲ್ಲಿ ನಿಂದಿತ್ತು.
ಅಷ್ಟದಳಕಮಲದ ಸಪ್ತಕರ್ಣಿಕೆಯು
ನಿಮ್ಮ ಜಂಗಮಮೂರ್ತಿಯಲ್ಲಿ ನಿಂದವು.
ಎನ್ನ ನಡೆಗೆಟ್ಟಿತ್ತು ನಿಮ್ಮ ಜಂಗಮಮೂರ್ತಿಯಿಂದ.
ಎನ್ನ ನುಡಿಗೆಟ್ಟಿತ್ತು ನಿಮ್ಮ ಜಂಗಮಮೂರ್ತಿಯಿಂದ.
ಎನ್ನ ನೋಟ ಕೆಟ್ಟಿತ್ತು ನಿಮ್ಮ ಜಂಗಮಮೂರ್ತಿಯಿಂದ.
ಎನ್ನ ಮಾಟ ಸಮಾಪ್ತಿಯಾಯಿತ್ತು
ನಿಮ್ಮ ಜಂಗಮಮೂರ್ತಿಯಿಂದ.
ನಿಮ್ಮ ಪ್ರಸಾದದಿಂದ ತನು ಶುದ್ಧವಾಯಿತ್ತು.
ಬಸವಣ್ಣ ತೋಜಿದ ಕಾರಣ
ನಿಮ್ಮ ಜಂಗಮಮೂರ್ತಿಯ ಕಂಡು
ಬದುಕಿದೆ ಕಾಣಾ ಕಲಿದೇವರದೇವಾ! ॥೪೩॥

ಈ ಹೀಂಗೆಂದು ಮಡಿವಾಳತಂದೆಗಳು ಬಸವರಾಜದೇವರ ಮುಖದಿಂದ ನಿಮ್ಮ ಮಹಾತ್ಮೆಯನಱಿದು ಕೃತಾರ್ಥನಾದೆನೆಂದು ಪ್ರಭುದೇವರೊಡನೆ ಬಿನ್ನೈಸುತ್ತಿರಲು, ಇದಕ್ಕೆ ಬಸವರಾಜದೇವರು ಪ್ರಭುದೇವರೊಡನೆ ನಾನು ಮಡಿವಾಳತಂದೆಯ ಸಮರಸಭಾವದೊಳಿರ್ದೆನೆಂದು ಬಿನ್ನೈಸುವ ಪ್ರಸ್ತಾವದ ವಚನ:

೫೯೪

ಕಲ್ಪಿತವ ಕಳೆದು ಅಕಲ್ಪಿತವ ತಿಳುಹಿದ.
ಮನವ ಮಾಣಿಸಿ ಘನವ ನೆಲೆಗೊಳಿಸಿದ.
ತನುವ ಕೆಡಿಸಿ ಅನುವ ಸ್ಥಾಪ್ಯವ ಮಾಡಿದ.
ಅಂತರಂಗದಲ್ಲಿ ಮಹಾಜ್ಞಾನವ ತುಂಬಿದ.
ಬಹಿರಂಗದಲ್ಲಿ ಸದಾಚಾರವ ನೆಲೆಗೊಳಿಸಿದ.
ನಿಮ್ಮ ನಿಲವನೆನಗೆ ಒರೆದೊರೆದು ಹೇಳಿ ತೋಜಿಸಿ,
ಎನ್ನ ನಿಮ್ಮ ಶ್ರೀಪಾದಕ್ಕೆ ಯೋಗ್ಯನ ಮಾಡಿದ.

ಕೂಡಲಸಂಗಮದೇವಯ್ಯಾ,
ನಿಮ್ಮ ಮಹಾಮನೆಯಲ್ಲಿ
ಮಡಿವಾಳನೂ ನಾನೂ ಕೂಡಿ ಸುಖದಲ್ಲಿ ಇದ್ದೆವಯ್ಯಾ! ॥೪೪॥

ಈ ಹೀಂಗೆಂದು ಬಸವರಾಜದೇವರು ಪ್ರಭುದೇವರೊಡನೆ ಮಡಿವಾಳತಂದೆಗಳ ತಮ್ಮ ಸಮರಸಸ್ವಾನುಭಾವಮಂ ಬಿನ್ನೈಸಲು, ಇದಕ್ಕೆ ಮಡಿವಾಳತಂದೆಗಳು ತಮ್ಮ ಬಸವರಾಜದೇವರ ಸಮರಸಭಾವಮಮಂ ಬಿನ್ನೈಸುತ್ತಿರ್ದ ಪ್ರಸ್ತಾವದ ವಚನ:

೫೯೫

ಹೊಗಬಾರದು ಕಲ್ಯಾಣವನಾರಿಗೆಯೂ.
ಹೊಕ್ಕಡೇನು? ಕಲ್ಯಾಣದ ಸ್ಥಾನಮಾನಂಗಳನಜಿಯಬಾರದು.
ಕಲ್ಯಾಣದ ಕಡೆಯ ಕಾಣಬಾರದು.
ಕಲ್ಯಾಣದೊಳಗೆ ಹೊಕ್ಕೆಹೆನೆಂದು, ಕಲ್ಯಾಣಚರಿತ್ರರಾದೆವೆಂದು
ದೇವ ದಾನವ ಮಾನವರೆಲ್ಲರೂ ಭಾವಿಸುತ್ತಿರ್ದರು ನೋಡಾ!
ಕಲ್ಯಾಣವನು ಅನಂತ ಮೂರ್ತಿಗಳು,
ಅನಂತ ಸ್ಥೂಲಮೂರ್ತಿಗಳು, ಅನಂತ ಸೂಕ್ಷ್ಮಮೂರ್ತಿಗಳು,
ಅನಂತ ಮಂತ್ರಧ್ಯಾನರೂಪರು,
ಪುಣ್ಯಕ್ಕೆ ಅಭಿಲಾಷೆಯ ಮಾಡುವವರು,
ಪೂಜಕರು, ಯೋಗಿಗಳು, ಭೋಗಿಗಳು,
ದ್ವೈತರು ಅದ್ವೈತರು, ಕಾಮಿಗಳು ನಿಷ್ಕಾಮಿಗಳು,
ಆಶ್ರಿತರು ಅದೆಂತು ಹೊಗಬಹುದಯ್ಯಾ ಕಲ್ಯಾಣವನು?
ಅದೆಂತು ಕಾಣಬಹುದಯ್ಯಾ ಕಲ್ಯಾಣವನು,
ಲಿಂಗದೃಷ್ಟಂಗಲ್ಲದೆ? ಲಿಂಗವೇದ್ಯಂಗಲ್ಲದೆ?
ಲಿಂಗಗಂಭೀರಂಗಲ್ಲದೆ? ಪ್ರಸಾದ ಕುಳಾನ್ವಯಂಗಲ್ಲದೆ?
ಆಶೆಗೆಡೆಗುಡದಿಪ್ಪುದೆ ಕಲ್ಯಾಣ.
ಸರ್ವಾಂಗವರ್ಣವಳಿದು, ಕುಲಮದ ತಲೆದೋಱದೆ,
ಭಕ್ತಿ ನಿತ್ಯವಾದುದೇ ಕಲ್ಯಾಣ.
ಈ ಕಲ್ಯಾಣವೆಂಬ ಮಹಾಘನದೊಳಗೆ
ಬಸವಣ್ಣನು ನಾನು ಕೂಡಿ ಹದುಳಿರ್ದೆವು
ಕಾಣಾ ಕಲಿದೇವಯ್ಯಾ. ॥೪೫॥

ಈ ಹೀಂಗೆಂದು ಮಡಿವಾಳತಂದೆಗಳು ಬಿನ್ನೈಸಲು, ಇದಕ್ಕೆ ಪ್ರಭುದೇವರು ಬಸವರಾಜದೇವರೊಡನೆ ಹೇಳಿ ಮಡಿವಾಳತಂದೆಗಳ ಸ್ತೋತ್ರಮಂ ಮಾಡುವ ಪ್ರಸ್ತಾವದ ವಚನ:

೫೯೬

ಒಂದ ಮಾಡಹೋದರೆ ಮತ್ತೊಂದಾಯಿತ್ತೆಂಬುದು
ಎನಗಾಯಿತ್ತು ನೋಡಾ!

ಮಡಿವಾಳನ ಪರಿಯನೊರೆದು ನೋಡಿದರೆ,
ನಿನ್ನ ಪೂರ್ವಾಪರವೆನಗಱಿಯ ಬಂದಿತ್ತು.
ನಿನ್ನ ಪೂರ್ವಾಪರ ಸಂಗವ ಮಾಡಬಂದರೆ,
ಎನ್ನ ಪೂರ್ವಾಪರವೆನಗಱಿಯಬಂದಿತ್ತು ನೋಡಾ!
ಮಹಾಜ್ಞಾನಿಗಳ ಸಂಗದಿಂದ ಉಭಯಸಂಗಸಿದ್ಧಿ ಎಂಬುದು
ದಿಟವಾಯಿತ್ತು ನೋಡಾ ಬಸವಣ್ಣಾ.
[1]ಗೊಹೇಶ್ವರ[1]ನ ಶರಣ ಮಡಿವಾಳನ ಪಾದಕ್ಕೆ
ನಮೋ ನಮೋ ಎನುತಿರ್ದೆನು! ॥೪೬॥

ಈ ಹೀಂಗೆಂದು ಪ್ರಭುದೇವರು ಬಸವರಾಜದೇವರೊಡನೆ ಮಡಿವಾಳತಂದೆಗಳ ಮಹಾತ್ಮೆಯನು ನಿನ್ನಿಂದ ಕಂಡೆನೆಂದು ಕೊಂಡಾಡಿ ಹೇಳುತ್ತಿರಲು, ಇದಕ್ಕೆ ಬಸವರಾಜದೇವರು ಮಡಿವಾಳತಂದೆಗಳ ಶ್ರೀಪಾದದ ಘನವನು ಚೆನ್ನಬಸವಣ್ಣ ತೋಱಿದನಾಗಿ ಅಱಿದು ಸುಖಿಯಾದೆನೆಂದು ಬಿನ್ನೈಸುವ ಪ್ರಸ್ತಾವದ ವಚನ:

೫೯೭

ಅಯ್ಯಾ, ಎನ್ನ ಕಾಯದಲ್ಲಿ ಮಡಿವಾಳನ ತೋಱಿದ,
ಎನ್ನ ಮನದಲ್ಲಿ ತನ್ನ ನಿಲವ ತೋಱಿದ.
ಎನ್ನ ಅಱಿವಿನಲ್ಲಿ ನಿಮ್ಮ ತೋಱಿದ.
ಇಂತೀ ತ್ರಿವಿಧ ಸ್ವಾಯತವನೂ
ಎನ್ನ ಸರ್ವಾಂಗದಲ್ಲಿ ಪ್ರತಿಷ್ಠಿಸಿ ತೋಱಿದ.
ಕೂಡಲಸಂಗಮದೇವಯ್ಯಾ,
ಚೆನ್ನಬಸವಣ್ಣನ ಕರುಣದಿಂದ
ಮಡಿವಾಳನೆಂಬ ಪರುಷ ಸಾಧ್ಯಯಿತ್ತೆನಗೆ! ॥೪೭॥

ಈ ಹೀಂಗೆಂದು ಬಸವರಾಜದೇವರು ನಿರೂಪಿಸಲು, ಇದಕ್ಕೆ ಚಿಕ್ಕದಣ್ಣಾಯಕರು ಆ ಬಸವರಾಜದೇವರಿಗೆ ಕೊಟ್ಟ ಪ್ರತ್ಯುತ್ತರ:

೫೯೮

ನಾನೊಂದ ತೋಱಲಱಿಯೆನು.
ನಾನೊಂದ ಹೇಳಲಱಿಯೆನು.
ನಾನೊಂದ ಸ್ಥಲವಿಡಲಱಿಯೆನು.
ನಾನೊಂದು ಕುಳವಿಡಲಱಿಯೆನು.
ಕೂಡಲಚೆನ್ನಸಂಗಮದೇವರಲ್ಲಿ ಮಡಿವಾಳನ ನಿಲವ
ನಾನೆತ್ತ ಬಲ್ಲೆನು ಹೇಳಾ ಸಂಗನಬಸವಣ್ಣಾ? ॥೪೮॥

೧-೧ ಗೊಗ್ಗೇಶ್ವರ (ಮೂ)

ಈ ಹೀಂಗೆಂದು ಚಿಕ್ಕದಣ್ಣಾಯಕರು ಮಡಿವಾಳತಂದೆಗಳ ಮಹಾತ್ಮೆಯನು ಕೊಂಡಾಡುತ್ತಿರಲು, ಇದಕ್ಕೆ ಮಡಿವಾಳತಂದೆಗಳು ಚೆನ್ನಬಸವರಾಜದೇವರ ಸ್ತೋತ್ರವ ಮಾಡುವ ಪ್ರಸ್ತಾವದ ವಚನ:

೫೯೯

ಅಹುದಹುದು, ಇಂತಿರಬೇಡವೆ ನಿರಹಂಕಾರ!
ಮಹಾಜ್ಞಾನಕ್ಕೆ ನಿರಹಂಕಾರವೆ ಶೃಂಗಾರ.
ನಿರಹಂಕಾರಕ್ಕೆ ಭಕ್ತಿಯೆ ಶೃಂಗಾರ.
ಭಕ್ತಿಗೆ ಬಸವಣ್ಣನೆ ಶೃಂಗಾರ.
ಬಸವಣ್ಣಂಗೆ ಚೆನ್ನಬಸವಣ್ಣನೆ ಶೃಂಗಾರ.
ಕಲಿದೇವರದೇವಾ, ಎನಗೆಯೂ ನಿನಗೆಯೂ
ಚೆನ್ನಬಸವಣ್ಣನೆ ಶೃಂಗಾರ. ॥೪೯॥

ಈ ಹೀಂಗೆಂದು ಮಡಿವಾಳತಂದೆಗಳು ಚಿಕ್ಕದಣ್ಣಾಯಕರ ಮಹಾತ್ಮೆಯಂ ಪೊಗಳಲು, ಆ ಚಿಕ್ಕದಣ್ಣಾಯಕರು ಆ ಮಡಿವಾಳತಂದೆಗಳ ಸ್ತೋತ್ರವ ಮಾಡಿದ ಪ್ರಸ್ತಾವದ ವಚನ:

೬೦೦

ಅಘಟಿತಘಟಿತವೆಂಬ ಮಹಾಘನವ ಸಾಧಿಸುವರೆ?
ಮಡಿವಾಳನ ಕೃಪೆಯಿಲ್ಲನ್ನಕ್ಕರ
ಎಂತಱಿಯಬಪ್ಪುದು ನಿಜಲಿಂಗೈಕ್ಯವನು?
ಎನ್ನ ಆರೂಢಿಯ ಅಱಿವಿಂಗೆ ನೀನೆ ಶೃಂಗಾರ.
ಕೂಡಲಚೆನ್ನಸಂಗಮದೇವರಲ್ಲಿ
ಮಡಿವಾಳನ ಕೈಯ ಸ್ವಾಯತವಾದೆನು ಕಾಣಾ ಪ್ರಭುವೆ. ॥೫೦॥

ಈ ಹೀಂಗೆಂದು ಚಿಕ್ಕದಣ್ಣಾಯಕರು ನಿರೂಪಿಸಲು, ಇದಕ್ಕೆ ಮಡಿವಾಳತಂದೆಗಳು ಚಿಕ್ಕದಣ್ಣಾಯಕರ ಕೃಪೆಯ ಎನಗೆ ಸಾಧ್ಯವ ಮಾಡಿ ಕೊಡಿ ಎಂದು ಪ್ರಭುದೇವರನುಪಾವಸ್ತೆಯಂ ಮಾಡಿದ ವಚನ:

೬೦೧

ಒಂದು ಕೈಯ ಬಯಲನೆನಗೆ ಕೊಟ್ಟನು
ಒಂದು ಕೈಯ ಬಯಲ ಚೆನ್ನಬಸವಣ್ಣಂಗೆ ಕೊಟ್ಟನು.
ನೀವು ಬಂದಹರೆಂದು ಎಂಟುಸಾವಿರ ವರುಷ
ಒಗೆದೊಗೆದು ಬಿಳಿದು ಮಾಡುತ್ತಿದ್ದೆನು.
ಒಂದು ಬಿಳಿದ-ಬಸವಣ್ಣಾ, ನಿನ್ನ ಲಿಂಗಕ್ಕೆ ಕೊಡೆಂದು ಕೊಟ್ಟರೆ,
ಲಿಂಗಕ್ಕೆ ಕೊಡಲೊಲ್ಲದೆ ತಲೆಗೆ ಸುತ್ತಿಕೊಂಡನು.
ಮಡಿಯ ಕೂಲಿಯ ಬೇಡಹೋದರೆ,
ಬಿಳಿದ ಹಱಿದು ಎನ್ನ ಮೇಲೆ ಬಿಸಾಟನು.
ನೀನುಟ್ಟು ಬಿಟ್ಟುಡುಗೆಯ ಚೆನ್ನಬಸವಣ್ಣನ ಕೈಯಲ್ಲಿ
ನಿರಾಳವನೆನಗೆ ಕೊಡಿಸಾ ಪ್ರಭುವೆ, ಕಲಿದೇವರದೇವಾ. ॥೫೧॥

ಈ ಹೀಂಗೆಂದು ಮಡಿವಾಳತಂದೆಗಳು ನಿರೂಪಿಸಲು, ಇದಕ್ಕೆ ಚಿಕ್ಕದಣ್ಣಾಯಕರು ಆ ಮಡಿವಾಳತಂದೆಗಳೊಡನೆ ನುಡಿದ ಪ್ರತ್ಯುತ್ತರ:

೬೦೨

ನರಸುರಾದಿಗಳೆಲ್ಲರೂ ನಿಮ್ಮ ಹೊಳೆಯಲ್ಲಿದ್ದರು.
ಮನು ಮುನಿ ಯತಿವ್ರತಿಗಳೆಲ್ಲರೂ
ನಿಮ್ಮ ತೋಹಿನೊಳಗಿದ್ದರು.
ಗಂಗೆವಾಳುಕರೆಲ್ಲರೂ ನಿಮ್ಮ ಮಡಿಯೊಳಗಿದ್ದರು.
ಗಂಗೆ ಗೌರೀವಲ್ಲಭರೆಲ್ಲರು,
ಚತುರ್ಮುಖ ಪಂಚಮುಖ ಷಣ್ಮುಖ
ದಶಮುಖರೆಲ್ಲರೂ ನಿಮ್ಮ ಮಡಿಯ ಗಳಿಗೆಯೊಳಡಗಿದರು.
ಲೋಕಾದಿಲೋಕವೆಲ್ಲವು ನಿಮ್ಮ ಕುಕ್ಷಿಯೊಳಗು.
ಕೂಡಲಚೆನ್ನಸಂಗಮದೇವರು ಸಾಕ್ಷಿಯಾಗಿ,
ನಿಮ್ಮ ನಿರಾಳದ ಪ್ರಸಾದದಿಂದ
ನಿರವಯದ ಹಾದಿಯ ಕಂಡೆನಲ್ಲದೆ,
ನಿಮ್ಮಿಂದಲಾನು ಘನವೆ ಮಡಿವಾಳಮಾಚಯ್ಯಾ? ॥೫೨॥

ಈ ಹೀಂಗೆಂದು ಚೆನ್ನಬಸವರಾಜದೇವರು ನಿರೂಪಿಸಲು, ಇದಕ್ಕೆ ಮಡಿವಾಳತಂದೆಗಳು ಆ ಬಸವರಾಜದೇವರು ಚೆನ್ನಬಸವರಾಜದೇವರನು ಪ್ರಭುದೇವರನು ಸ್ತೋತ್ರವ ಮಾಡಿದ ಪ್ರಸ್ತಾವದ ವಚನ:

೬೦೩

ಎನ್ನಂಗದಾಚಾರದಲ್ಲಿ ಸಂಗನಬಸವಣ್ಣನ ಕಂಡೆನು.
ಎನ್ನ ಮನದ ಅಜಿವಿನಲ್ಲಿ ಚೆನ್ನಬಸವಣ್ಣನ ಕಂಡೆನು.
ಎನ್ನ ಭಾವದ ಕೊನೆಯ ಮೊನೆಯ ಮೇಲೆ
ಅಲ್ಲಮಪ್ರಭುದೇವರ ಕಂಡೆನು.
ಎಲೆ ಕಲಿದೇವಯ್ಯಾ, ನಿಮ್ಮ ಶರಣರ ಘನವನು
ಎನ್ನ ಸರ್ವಾಂಗದಲ್ಲಿ ಕಂಡು ನಮೋ ನಮೋ ಎನುತಿರ್ದೆನಯ್ಯಾ!॥೫೩।

ಇಂತೀ ಶ್ರೀಮತ್ ಸಕಲಗಣ ಪುರಾತನರೊಳ್ ಪ್ರಭುದೇವರು
ಮಹಾನುಭಾವಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್
ಪ್ರಭುದೇವರ ಮಡಿವಾಳಯ್ಯಗಳ ಸಂಪಾದನೆಗಂ
ನವಮೋಪದೇಶಂ ಸಮಾಪ್ತಂ
ಅಂತು ವಚನ ೬೦೩ ಕ್ಕಂ ಮಂಗಳಮಹಾ ಶ್ರೀ

❖

೧೦
ಸಿದ್ಧರಾಮೇಶ್ವರನ ಗುರುಕರುಣ

ಕಂದ:

ಶಿವಯೋಗಿ ಸಿದ್ಧರಾಮಗೆ
ಅವಿರಳ ಶಿವಲಿಂಗದೀಕ್ಷೆಯಂ ಸಂತಸದಿಂ
ಭುವಿಯಱಿಯೆ ಚೆನ್ನಬಸವಂ
ತವೆ ಇತ್ತುದ ಪೇಳ್ವೆ ಶರಣಜನ ಮುದವೆಯ್ದಲ್ ॥೧॥

ಅದೆಂತೆಂದೊಡಾ ಪ್ರಭುದೇವರು ಬಸವರಾಜದೇವರು ಚನ್ನಬಸವರಾಜದೇವರು ಮಡಿವಾಳಮಾಚಿತಂದೆಗಳು ಮುಖ್ಯವಾದ ಅಸಂಖ್ಯಾತ ಮಹಾಪುರಾತನರು ಮಹಾನುಭಾವಗೊಷ್ಠಿಯಂ ಮಾಡುತ್ತಿರ್ಪ ಪ್ರಸ್ತಾವದಲ್ಲಿ, ಪರಶಿವಯೋಗೀಶ್ವರನಪ್ಪ ಸಿದ್ಧರಾಮಯ್ಯದೇವರು ಪ್ರಭುದೇವರ ಕೂಡೆ, ನೀವು ನಿಮ್ಮ ಕರಸ್ಥಲದ ಲಿಂಗದ ನಿಜವ ಬಸವರಾಜದೇವರಿಂದ ಹೇಳಿಸಿಹೆವೆಂದು ಕರೆದುಕೊಂಡು ಬಂದಿರಿ. ಆ ಲಿಂಗದ ನಿಜಮಂ ಎನಗೆ ನಿರೂಪಿಸೆಂದು ಬಿನ್ನೈಸುವ ಪ್ರಸ್ತಾವದ ವಚನ:

೬೦೪

ಅಯ್ಯಾ, ಕಾಯ ಲಿಂಗವೊ?
ಕಾಯದಲ್ಲಿ ಸಾರಿಪ್ಪ ಲಿಂಗ ಲಿಂಗವೊ?
ಪ್ರಾಣ ಲಿಂಗವೊ? ಪ್ರಾಣದಲ್ಲಿ ಸಾರಿಪ್ಪ ಲಿಂಗ ಲಿಂಗವೊ?
ಜ್ಞಾನ ಲಿಂಗವೊ? ಜ್ಞಾನದ ಮೊನೆಯಲ್ಲಿ ಬೆಳಗುವ ಲಿಂಗ ಲಿಂಗವೊ?
ಲಿಂಗ ಪ್ರಾಣ, ಪ್ರಾಣ ಲಿಂಗವೆಂತೆದಱಿಯೆನು.
ನಿಮ್ಮ ಕಾಯದ ಕರಸ್ಥಲವ ಸಾರಿದ ಲಿಂಗ
ಪ್ರಾಣದೊಳಗೆ ವೇದ್ಯವಾದ ಪರಿಯನುಪದೇಶಿಸಿ
ಕೃಪೆಯ ಮಾಡಾ ಪ್ರಭುವೆ, ಕಪಿಲಸಿದ್ಧಮಲ್ಲಿಕಾರ್ಜುನಾ. ॥೧॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಪ್ರಭುದೇವರ ಬೆಸಗೊಳಲು, ಆ ಪ್ರಭುದೇವರು ಸಿದ್ಧರಾಮಯ್ಯದೇವರಿಗೆ ಹೇಳೆಂದು ಬಸವರಾಜದೇವರ ಬೆಸಗೊಂಬ ಪ್ರಸ್ತಾವದ ವಚನ:

೬೦೫

ಒಂದೂ ಇಲ್ಲದ ಬಿಂದುವ,
ತಂದೆ ಇಲ್ಲದ ಕಂದನ,
ಮಾತೆ ಇಲ್ಲದ ಜಾತನ, ಗಮನವಿಲ್ಲದ ಗಮ್ಯನ,
ಮೂವರಱಿಯದ ಮುಗ್ಧನ ತಾವ ತೋಱಿಸಾ–
[1]ಗೊಹೇಶ್ವರ[1]ಲಿಂಗದಲ್ಲಿ ಸಂಗನಬಸವಣ್ಣಾ. ॥೨॥

ಇಂತು ಪ್ರಭುದೇವರು ಮಹಾಘನವಪ್ಪ ಇಷ್ಟಲಿಂಗದ ನಿಲವ ಸಿದ್ಧರಾಮಯ್ಯದೇವರ ಕುಱಿತು ಬಸವರಾಜದೇವರ ಬೆಸಗೊಳಲು, ಆ ಬಸವರಾಜದೇವರು ಸಿದ್ಧರಾಮಯ್ಯದೇವರ ಅಂಗದ ಮೇಲೆ ಲಿಂಗವಿಲ್ಲದುದನಱಿದು, ಪ್ರಭುದೇವರಿಗೆ ನಮಸ್ಕಾರವ ಮಾಡುವ ಮುಖದಲ್ಲಿ ನಿರೂಪಿಸಿದ ಪ್ರಸ್ತಾವದ ವಚನ:

೬೦೬

ಎನ್ನ ಕಾಯದ ಕರಸ್ಥಲದಲ್ಲಿ ಅಲ್ಲಮಪ್ರಭುದೇವರ ಕಂಡೆನು.
ಎನ್ನ ಮನದ ಕರಸ್ಥಲದಲ್ಲಿ ಚೆನ್ನಬಸವಣ್ಣನ ಕಂಡೆನು.
ಎನ್ನ ಅಱುವಿನ ಕರಸ್ಥಲದಲ್ಲಿ ಮಡಿವಾಳಯ್ಯನ ಕಂಡೆನು.
ಒಳಗು ಹೊಱಗು, ಹೊಱಗೊಳಗೆಂಬ
ಭೇದವನಱಿಯದೆ ಇದ್ದೆನು. ಕೂಡಲಸಂಗಮದೇವಯ್ಯಾ,
ನಿಮ್ಮ ಶರಣರು ಎನ್ನ ಪಾವನವ ಮಾಡಿದ ಪರಿಣಾಮವ
ಅಂತಿಂತೆನಲಮ್ಮದೆ ನಮೋ ನಮೋ ಎನುತಿರ್ದೆನು. ॥೩॥

ಈ ಹೀಂಗೆಂದು ಬಸವರಾಜದೇವರು ಸಿದ್ಧರಾಮಯ್ಯದೇವರಿಗೆ ಅಂಗಲಿಂಗ ಸಂಬಂಧವಿಲ್ಲದಿರ್ದರೆ ಎನ್ನ ಮನ ಒಪ್ಪದೆಂದು ಬಿನ್ನೈಸಿದ ಪ್ರಸ್ತಾವದ ವಚನ:

೬೦೭

ಸಮಯವಿರುದ್ಧಕ್ಕಂಜಿ ವಿನಯವ ನುಡಿವೆ.
ಕೊಂದರೆ ಕೊಲ್ಲು, ಕಾಯ್ದರೆ ಕಾಯಿ.
ಎನ್ನವರೆಂದು ಮನ ಹಿಡಿಯದು, ಕೂಡಲಸಂಗಮದೇವಾ. ॥೪॥

ಈ ಹೀಂಗೆಂದು ಬಸವರಾಜದೇವರು ಪ್ರಭುದೇವರೊಡನೆ ಬಿನ್ನೈಸಲು, ಸಿದ್ಧರಾಮಯ್ಯದೇವರು ಆ ಪ್ರಭುದೇವರ ಕೂಡೆ ಮಡಿವಾಳನೆಂಬ ಪರಬ್ರಹ್ಮವ ಎನ್ನಂತರಂಗದಲ್ಲಿ ಕಂಡು, ಮನ ಮಗ್ನವಾಗಿಪ್ಪೆನೆಂದು ಬಿನ್ನೈಸಿದ ಪ್ರಸ್ತಾವದ ವಚನ:

೬೦೮

ಬೆಳಗು ಬೆಳಗು ಹಳಚುವಲ್ಲಿ
ಕತ್ತಲೆ ಉಳಿಯಬಲ್ಲದೆ ಅಯ್ಯಾ?

೧–೧ ಗೊಗ್ಗೇಶ್ವರ(ಮೂ)

ಶರಣರು ಶರಣರು ಮಹಾನುಭಾವಗೋಷ್ಠಿಯಂ ಮಾಡುವಲ್ಲಿ,
ಸಂಗದೊಳಿದ್ದವರ ಅಜ್ಞಾನವಳಿದು ನಿಜವನೈದುವರಯ್ಯಾ!
ಮಹಾನುಭಾವರ ಸೋಂಕಿನ ಸೆಱಗಿನೊಳಗಿರ್ದು,
ನಾನು ಪರಮಸುಖಿಯಾಗಿ
ಮಡಿವಾಳನ ಪಾದದಲ್ಲಿ ಮನ ಮಗ್ನನಾದೆನು
ಕಾಣಾ ಪ್ರಭುವೆ, ಕಪಿಲಸಿದ್ಧಮಲ್ಲಿಕಾರ್ಜುನಾ. ॥೫॥

ಇಂತೆಂದು ಸಿದ್ಧರಾಮಯ್ಯದೇವರು ನುಡಿಯಲು, ಚೆನ್ನಬಸವಣ್ಣ ಕೇಳಿ ಅಂಗದ ಮೇಲೆ ಲಿಂಗಸಂಬಂಧವಿಲ್ಲದವರಿಗೆ ಪ್ರಾಣಲಿಂಗಸಂಬಂಧವಿಲ್ಲೆಂದು ನಿರೂಪಿಸಿದ ಪ್ರಸ್ತಾವದ ವಚನ:

೬೦೯

ಅಂಗದ ಮೇಲೆ ಲಿಂಗವಿಲ್ಲದನ್ನಕ್ಕರ,
ಪ್ರಾಣದಲ್ಲಿ ಲಿಂಗ ಪರಿಣಾಮವನೆಯ್ದುವ ಪರಿ ಎಂತಯ್ಯಾ?
ಅಂಗತ್ರಯವುಳ್ಳವರು ಲಿಂಗತ್ರಯ ಸಂಪನ್ನರಾಗಬೇಕು.
ಒಂದಂಗ ವಿರಹಿತರಾಗಿಪ್ಪವರುಂಟೆ?
ಕಂಗಳ ನೋಟಕಿಂಬಾವುದು ಹೇಳಾ?
ಒಂದಂಗವ ಬಿಟ್ಟು ಒಂದಂಗ ತೋಱದಾಗಿ,
ಸಂದು ಭೇದವಿಲ್ಲದಿಪ್ಪ ಮಡಿವಾಳನ ನಿಲವು,
ಕೂಡಲಚೆನ್ನಸಂಗನಲ್ಲಿ ನಿನಗೆಂತು ಸಾಧ್ಯವಾಯಿತ್ತು
ಹೇಳಾ ಸಿದ್ಧರಾಮಯ್ಯಾ? ॥೬॥

ಈ ಹೀಂಗೆಂದು ಚಿಕ್ಕದಣ್ಣಾಯಕರು ನಿರೂಪಿಸಲು, ಇದಕ್ಕೆ ಸಿದ್ಧರಾಮಯ್ಯ ದೇವರು ಕೊಟ್ಟ ಪ್ರತ್ಯುತ್ತರ:

೬೧೦

ತನು ಉಂಟೆಂಬ ಭಾವ ಮನದಲ್ಲಿಲ್ಲವಯ್ಯಾ,
ಮನ ಉಂಟೆಂಬ ಭಾವ ಅಱಿವಿನಲ್ಲಿಲ್ಲವಯ್ಯಾ.
ಅಱಿವು ಉಂಟೆಂಬ ಭಾವ ನುಡಿಯೊಳಗಿಲ್ಲವಯ್ಯಾ.
ಇಂತು ತನು ಮನ ಜ್ಞಾನವೆಂಬ ತ್ರಿವಿಧವೂ ಏಕಾರ್ಥವಾದ ಬಳಿಕ,
ಆವ ತನುವಿನ ಮೇಲೆ ಸ್ವಾಯತವ ಮಾಡುವೆನು?
ಎನ್ನ ಕಾಯವೆ ಬಸವಣ್ಣನು,
ಎನ್ನ ಪ್ರಾಣವೆ ಪ್ರಭುದೇವರು.
ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ
ಒಳ ಹೊಱಗೆಂಬುದಿಲ್ಲ ಕಾಣಾ ಚೆನ್ನಬಸವಣ್ಣಾ. ॥೭॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಇದಕ್ಕೆ ಚಿಕ್ಕದಣ್ಣಾಯಕರು ಕೊಟ್ಟ ಪ್ರತ್ಯುತ್ತರ:

೬೧೧

ಅಂಗವಿಲ್ಲೆಂಬಲ್ಲಿಯೆ ಅಂಗಶಂಕೆ ಬಿಡದು.
ಲಿಂಗ ಉಂಟೆಂಬಲ್ಲಿಯೆ ಲಿಂಗಶಂಕೆ ಬಿಡದು.
ಇಲ್ಲೆಂಬುದಕ್ಕೆ ಉಂಟೆಂಬುದೆ ಮಱಹು.
ಉಂಟೆಂಬುದಕ್ಕೆ ಇಲ್ಲೆಂಬುದೆ ಮಱಹು.
ಉಂಟಿಲ್ಲೆಂಬುದಳಿದುದಲ್ಲದೆ
ಪ್ರಾಣಲಿಂಗಸಂಬಂಧ ಸ್ವಯವಾಗದು.
ಕೂಡಲಚೆನ್ನಸಂಗಯ್ಯನಲ್ಲಿ
ಪ್ರಾಣಲಿಂಗ ಸಂಬಂಧ ನಿನಗೆಲ್ಲಿಯದು ಹೇಳಾ ಸಿದ್ಧರಾಮಯ್ಯ? ॥೮॥

ಈ ಹೀಂಗೆಂದು ಚಿಕ್ಕದಣ್ಣಾಯಕರು ನಿರೂಪಿಸಲು, ಇದಕ್ಕೆ ಸಿದ್ಧರಾಮಯ್ಯ ಕೊಟ್ಟ ಪ್ರತ್ಯುತ್ತರ:

೬೧೨

ತನುವಿದ್ದು ತನುವಿಲ್ಲ; ಮನವಿದ್ದು ಮನವಿಲ್ಲ.
ಭಾವವಿದ್ದು ಭಾವವಿಲ್ಲ; ನೀನೆಂಬುದುಂಟಾಗಿ ಭೃತ್ಯಾಚಾರವಿಲ್ಲ.
ನಾನೆಂಬುದುಂಟಾಗಿ ಅಹಂಕಾರವಿಲ್ಲ.
ಕಪಿಲಸಿದ್ಧಮಲ್ಲಿನಾಥಯ್ಯನಲ್ಲಿ
ಲಿಂಗಸಂಗ ನಿರ್ಲೇಪವೆಂಬುದನಿದಿರಿಂಗೆ ನುಡಿದು
ಹೇಳಬಾರದು ಕಾಣಾ ಚೆನ್ನಬಸವಣ್ಣಾ. ॥೯॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಚೆನ್ನಬಸವರಾಜದೇವರು ಮಥನ ಸಂಪರ್ಕಗೋಷ್ಠಿಯೊಳು ಒರೆದೊರೆದು ನೋಡುವ ಪ್ರಸ್ತಾವದೊಳು ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೬೧೩

ನಿಮ್ಮನಜಿದ ಶರಣಂಗೆ
ಶಿವಪೂಜೆಯ ಮಾಡುವ ದಂದುಗವೇಕೊ?
ಒಲುಮೆಯ ಕೂಟಕ್ಕೆ ಹಾಸಿನ ಹಂಗೇಕೊ?
ಬೇಟದ ಮರುಳಿಂಗೆ ಲಜ್ಜೆ ಮುನ್ನೇಕೊ?
ಮಿಸುನಿಯ ಚಿನ್ನಕ್ಕೆ ಒರೆಗಲ್ಲ ಹಂಗೇಕೊ?
[1]ಗೊಹೇಶ್ವರ[1]ಲಿಂಗವು ಪ್ರಾಣವಾಗಿಪ್ಪ ಸಿದ್ಧರಾಮಯ್ಯಂಗೆ
ಕುಱುಹು ಮುನ್ನೇಕೋ ಚೆನ್ನಬಸವಣ್ಣಾ?. ॥೧೦॥

ಮತ್ತಂ,

೧-೧ ಗೊಗ್ಗೇಶ್ವರಾ(ಮೂ)

೬೧೪

ಆಕಾಶವನಡರುವಂಗೆ ಅಟ್ಟಗೋಲ ಹಂಗೇಕೆ?
ಸಮುದ್ರವ ದಾಂಟುವಂಗೆ ಹರಿಗೋಲ ಹಂಗೇಕೆ?
ಸೀಮೆಯ ಮೀಜೆದ ನಿಸ್ಸೀಮಂಗೆ ಸೀಮೆಯ ಹಂಗೇಕೆ?
[1]ಗೊಹೇಶ್ವರ[1]ಲಿಂಗದಲ್ಲಿ ನಿಸ್ಸೀಮ ಸಿದ್ಧರಾಮಯ್ಯಂಗೆ
ಲಿಂಗವೆಂದೇನು ಹೇಳಾ ಚೆನ್ನಬಸವಣ್ಣಾ? ॥೧೧॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಚೆನ್ನಬಸವರಾಜದೇವರು ಆ ಉತ್ತರಮಂ ಖಂಡಿಸಿ ನುಡಿದ ಪ್ರಸ್ತಾವದ ವಚನ:

೬೧೫

ಆಕಾಶದಲಾಡುವ ಪಟಕ್ಕಾದರೂ ಮೂಲಸೂತ್ರವಿರಬೇಕು.
ಕಲಿಯಾದಡೂ ಕಜ್ಜವಿಲ್ಲದೆಯಾಗದು.
ಭೂಮಿ ಇಲ್ಲದೆ ಬಂಡಿ ನಡೆವುದೆ?
ಅಂಗಕ್ಕೆ ಲಿಂಗಸಂಗವಿಲ್ಲದೆ ನಿಸ್ಸಂಗವಾಗಬಾರದು.
ಕೂಡಲಚೆನ್ನಸಂಗಮದೇವರಲ್ಲಿ
ಸಂಗವಿಲ್ಲದೆ ನಿಸ್ಸಂಗಿಯೆಂದು ನುಡಿಯಬಹುದೇ ಪ್ರಭುವೆ? ॥೧೨॥

ಮತ್ತಂ,

೬೧೬

ಪಟವಾಕಾಶವನೆಡರಿತ್ತೆಂದಡೆ,
ಪಟಸೂತ್ರದ ಸಂಚ ಕೆಳಗಿಪ್ಪುದು ನೋಡಾ!
ವ್ಯೋಮದಲ್ಲಿ ಚರಿಸುವ ಸೋಮಸೂರ್ಯರೆಂದಡೆ,
ಹೇಮಗಿರಿಯ ಸಂಚ ತಪ್ಪದು ನೋಡಾ!
ಭೂಮಿಯನ್ನೊಲ್ಲದೆ ಗಗನಕ್ಕೆ ಹಾಜೆದವಂಗೆ,
ಆ ವ್ಯೋಮದಲ್ಲಿ ನಿಲುವುದಕ್ಕೆ ಒಂದೆಡೆಯುಂಟೆ?
ಮಣ್ಣು ಮರನನುಳಿದು ತೋಱುವ ಹಣ್ಣು ರುಚಿಯುಂಟೆ?
ನಮ್ಮ ಕೂಡಲಚೆನ್ನಸಂಗನ ಶರಣರೊಳಗಿರ್ದು,
ಸೀಮೆಯ ಮೀಜೆದ ನಿಸ್ಸೀಮನು
ಸಿದ್ಧರಾಮಯ್ಯನೆಂಬ ಮಾತು ಅಂತಿರಲಯ್ಯಾ ಪ್ರಭುವೆ. ॥೧೩॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೬೧೭

ಕಾಯವೆ ಸಕಲ, ಪ್ರಾಣವೆ ಸಕಲನಿಃಕಲ,
ಭಾವವೆ ನಿಃಕಲಲಿಂಗವಾಗಿರ್ದ ಮತ್ತೆ,
ಬೇಱೆ ಆಯತ ಸ್ವಾಯತ ಸನ್ನಿಹಿತವೆಂಬುದಿಲ್ಲ ನೋಡಾ.

ಶಿವ ಶಕ್ತಿ ಸಂಬಂಧವೆ ದೇಹ ದೇಹಿಗಳಾಗಿರ್ದ ಬಳಿಕ,
[1]ಗೊಹೇಶ್ವರ[1]ಲಿಂಗದಲ್ಲಿ ಬೇಱೊಂದು ಕುಱುಹುವಿಡಿದು
ಅಱಿಯಲೇಕಯ್ಯಾ ಚೆನ್ನಬಸವಣ್ಣಾ? ॥೧೪॥

ಇದಕ್ಕೆ ಚೆನ್ನಬಸವರಾಜದೇವರ ಪ್ರತ್ಯುತ್ತರ:

೬೧೮

ಆಚಾರ ಅಂಗದ ಮೇಲೆ ಆಯತವಾದುವೆ ಇಷ್ಟಲಿಂಗ.
ಆ ಇಷ್ಟಲಿಂಗವಿಡಿದಿಹುದೆ ಪ್ರಾಣಲಿಂಗಸ್ವಾಯತ.
ಪ್ರಾಣಲಿಂಗ ಉದಯಿಸಿದಲ್ಲದೆ ಇಷ್ಟಲಿಂಗವ ಕಾಣಬಾರದು.
ಈ ಭೇದವ ಭೇದಿಸಬಲ್ಲರೆ,
ಕೂಡಲಚೆನ್ನಸಂಗಯ್ಯನಲ್ಲಿ ಲಿಂಗೈಕ್ಯ ಕಾಣಾ ಪ್ರಭುವೆ. ॥೧೫॥

ಮತ್ತಂ,

೬೧೯

ತಿಳಿದುಪ್ಪ ಗಟ್ಟಿದುಪ್ಪಕ್ಕೆ ಭೇದ ಉಂಟೆ?
ದೀಪಕ್ಕೆ ದೀಪ್ತಿಗೆ ಭಿನ್ನ ಉಂಟೆ?
ಆತ್ಮಕ್ಕೆಯೂ ದೇಹಕ್ಕೆಯೂ ಸಂದುಂಟೆ?
ಕ್ಷೀರಕ್ಕೆಯೂ ಸ್ವಾದುವಿಂಗೆಯೂ ಭಿನ್ನ ಉಂಟೆ?
ಇದು ಕಾರಣ ಸಾಕಾರವೆ ನಿರಾಕಾರವೆಂದಱಿದು,
ಅಂಗ ಲಿಂಗಸಂಬಂಧವಿಲ್ಲದವರ ಸಂಗ ಭಂಗವೆಂದು,
ಕೂಡಲಚೆನ್ನಸಂಗನ ಶರಣರು ಮೆಚ್ಚರಯ್ಯಾ ಪ್ರಭುವೆ. ॥೧೬॥

ಮತ್ತಂ, ಚೆನ್ನಬಸವರಾಜದೇವರು ಸಿದ್ಧರಾಮಯ್ಯನಿಗೆ ಅಂಗಲಿಂಗ ಸಂಬಂಧವಿಲ್ಲದಿರ್ದರೆ ನಮ್ಮ ಶರಣರು ಒಪ್ಪರೆಂದು ಮೋಳಿಗಯ್ಯಗಳು ಮುಖ್ಯವಾದ ಶರಣರ ಮುಖವ ನೋಡಿ ನಿರೂಪಿಸಿದ ಪ್ರಸ್ತಾವದ ವಚನ:

೬೨೦

ಸತಿಸಂಗವತಿಸುಖವೆಂದಱಿದಡೇನು–
ಗಣಸಾಕ್ಷಿಯಾಗಿ ವಿವಾಹವಾಗದನ್ನಕ್ಕರ?
ಕಣ್ಣು ಕಾಬುದೆಂದಡೆ, ಕತ್ತಲೆಯಲ್ಲಿ ಕಾಬುದೆ ದೀಪವಿಲ್ಲದನ್ನಕ್ಕರ?
ಸೂರ್ಯನ ಪ್ರಕಾಶದಿಂದ, ತಾನೆ ಕಂಡೆನೆಂಬ
ಜಗದ ನಾಣ್ಣುಡಿಯಂತಾಯಿತ್ತು.
ಅಂಗವ ಬಿಟ್ಟು ಆತ್ಮನುಂಟೆ? ಶಕ್ತಿಯ ಬಿಟ್ಟು ಶಿವನುಂಟೆ?

೧–೧ ಗೊಗ್ಗೇಶ್ವರಾ(ಮೂ)

ಇದು ಕಾರಣ ಸ್ಥೂಲ ಸೂಕ್ಷ್ಮ ಕಾರಣವೆಂಬ ತನುತ್ರಯವಿರಲು,
ಇಷ್ಟ ಪ್ರಾಣ ಭಾವವೆಂಬ ತ್ರಿವಿಧಲಿಂಗ ಸಂಬಂಧಬೇಡವೆಂದಡೆ,
ಅಸಂಖ್ಯಾತ ಪ್ರಮಥಗಣಂಗಳೊಪ್ಪುವರೆ?
ಇದು ಕಾರಣ, ಕೂಡಲಚೆನ್ನಸಂಗಯ್ಯನಲ್ಲಿ
ಇಷ್ಟಲಿಂಗ ಸಂಬಂಧವಿಲ್ಲದವರ ಮುಖವ
ನೋಡಲಾಗದಯ್ಯಾ ಪ್ರಭುವೆ. ॥೧೭॥

ಈ ಹೀಂಗೆಂದು ಚೆನ್ನಬಸವರಾಜದೇವರು ಅಸಂಖ್ಯಾತ ಮಹಾಗಣಂಗಳ ಮುಖಮಂ ನೋಡಲು, ಆ ಸಮಯದಲ್ಲಿ ಮೋಳಿಗೆಯ ಮಾರಿತಂದೆಗಳು ಮುಖ್ಯವಾದ ಏಳನೂಱೆಪ್ಪತ್ತು ಅಮರಗಣಂಗಳೆಲ್ಲರು ಕೇಳಿ, ಕನಲಿ ನುಡಿವ ಪ್ರಸ್ತಾವದ ವಚನಂಗಳು:

ಆ ಸಮಯದಲ್ಲಿ ಮೋಳಿಗಯ್ಯಗಳು ನಿರೂಪಿಸಿದ ಪ್ರಸ್ತಾವದ ವಚನ:

೬೨೧

ಗರಳವಿಲ್ಲದುರಗಂಗೆ ಹಲಬರಂಜಿದರುಂಟೆ?
ಕೈದುವಿಲ್ಲದ ಬಂಟ ಗರ್ಜಿಸಿದರೆ ಅಂಜಿದವರುಂಟೆ?
ಇಷ್ಟ ಬಾಹ್ಯ ದೃಷ್ಟದ ಮಾತನಾಡಿದರೆ,
ನೆಟ್ಟನೆ ಪ್ರಾಣಲಿಂಗಿಯಪ್ಪನೆ?
ಇದು ನಿಶ್ಚಯವಲ್ಲ ನಿಃಕಳಂಕಮಲ್ಲಿಕಾರ್ಜುನಾ. ॥೧೮॥

ಮತ್ತಂ,

೬೨೨

ಸರ್ವ ಸ್ಥಾವರ ಮೂಲಂಗಳಿಗೆಲ್ಲಕ್ಕು
ಪೃಥ್ವಿಯಾದಿ, ಅಪ್ಪುವಿನ ಸಾರದಿಂದ ಪಲ್ಲವಿಸಿ
ದೃಕ್ಕಿಂಗೆ ದೃಷ್ಟವಾದ ತೆಱನಂತೆ,
ಇಷ್ಟದ ಪೂಜೆ ದೃಷ್ಟವಾಗಿ, ಆ ದೃಷ್ಟ ನಿಶ್ಚಯವಾದಲ್ಲಿ,
ಪ್ರಾಣಲಿಂಗಸಂಬಂಧ ನಿಃಕಳಂಕ ಮಲ್ಲಿಕಾರ್ಜುನಾ. ॥೧೯॥

ಮತ್ತಂ,

೬೨೩

ತಿಲದ ಮಱೆಯ ತೈಲವನರಿದು ಕಾಬ ತೆಱನಂತೆ,
ಫಲದ ಮಱೆಯ ರಸವ ಹಿಳಿದು ಕಾಬ ಸವಿರುಚಿಯಂತೆ,
ತೆರೆಯ ಮಱೆಯ ರೂಪ ತೆಗೆದು ಕಾಬ ತೆಱನಂತೆ,
ಇಷ್ಟದ ಮಱೆಯಲ್ಲಿರ್ದ ದೃಷ್ಟವನುಭಯ ನಿಶ್ಚೈಸಿದಲ್ಲಿ
ಪ್ರಾಣಲಿಂಗ ಸಂಬಂಧಿ ನಿಃಕಳಂಕಮಲ್ಲಿಕಾರ್ಜುನಾ. ॥೨೦॥

ಇದಕ್ಕೆ ದಾಸಿಮಯ್ಯಗಳ ವಚನ:

೬೨೪

ಕರಸ್ಥಲದ ಜ್ಯೋತಿಯದು, ಕರುವಿಟ್ಟೆಱಕವದು,
ಅದಱ ನೆಲೆಯ ತಿಳಿದರೆ ನಿಜದಾನಂದವು
ಹೊಲಬುದೋಱದಿಹ ನಿಸ್ಸೀಮನ
ಹೊಲಬನಱದು ಕೂಡಿದಾತನೆ
ಮೃಡನು ಕಾಣಾ ರಾಮನಾಥಾ! ॥೨೧॥

ಇದಕ್ಕೆ ಮೆಱೆಮಿಂಡದೇವರ ವಚನ:

೬೨೫

ಮೊನೆ ಇಱೆವರೆ, ಕರದಲ್ಲಿ ಪಿಡಿದಲ್ಲದಾಗದು,
ಮನವಱೆವರೆ, ಕುಱುಹಿನ ನಿಱೆಗೆಯಲ್ಲಿ ಸಲೆ ಸಂದು ನಿಂದಲ್ಲದಾಗದು.
ಕ್ರಿಯಾನುಭಾವ ಶುದ್ಧವಾದಲ್ಲದೆ
ಐಘಟದೂರ ರಾಮೇಶ್ವರಲಿಂಗವ ಕೂಡಬಾರದು. ॥೨೨॥

ಇದಕ್ಕೆ ಉರಿಲಿಂಗಪೆದ್ದಣ್ಣಗಳ ವಚನ:

೬೨೬

ಸಾಕಾರವಿಡಿದು ಅರ್ಚನೆ ಪೂಜನೆಯ ಮಾಡಬೇಕಲ್ಲದೆ,
ನಿರಾಕಾರವ ನಂಬಲಾಗದು.
ಶ್ರೀಗುರು ಪ್ರಾಣಲಿಂಗವನು ಕರಸ್ಥಲಕ್ಕೆ ಬಿಜಯಂಗೈಸಿ ಕೊಟ್ಟ ಬಳಿಕ,
ವಜ್ರದಲ್ಲಿ ಬಯಲನಱಸಲುಂಟೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ? ॥೨೩॥

ಇದಕ್ಕೆ ರಾಯಸದ ಮಂಚಣ್ಣಗಳ ವಚನ:

೬೨೭

ಉಂಬರೆ ಬಂದು, ಬಾಯ ಮಱೆದೆನೆಂದು
ಮೊಱೆಯಿಡುತಿರ್ಪ ಅಱೆಕೆಹೀನನ ತೆಱನಂತಾಯಿತ್ತು.
ಅಱೆಕೆಯನಱೆಯೆಂದು ಕುಱುಹ ಕೊಟ್ಟರೆ,
ಆ ಕುಱುಹ ಮಱೆದು,
ಅಱೆದೆನೆಂಬ ಕುಱುಬರ ನೋಡಾ ಜಾಂಬೇಶ್ವರಾ! ॥೨೪॥

ಇದಕ್ಕೆ ಡಕ್ಕೆಯ ಬೊಮ್ಮಣ್ಣಗಳ ವಚನ:

೬೨೮

ಮಾತ ಅಲೇಖದ ಮೇಲೆ ಕುಱುಹಿಟ್ಟಲ್ಲದೆ,
ನೀತಿ ಲಕ್ಷಣವ ಕಾಣಬಾರದು.
ಚಿತ್ತ ತಾ ಪೂಜಿಸುವ ವಸ್ತುವಿನಲ್ಲಿ ಲಕ್ಷಿಸಿದಲ್ಲದೆ,
ಮೇಲಣ ಲಕ್ಷಣವ ಕಾಣಬಾರದು.

ಕಾಬನ್ನಕ್ಕರ ಉಭಯದ ಆಚರಣೆ ತಾನುಳ್ಳನ್ನಕ್ಕರ
ಕಾಲಾಂತಕ ಭೀಮೇಶ್ವರಲಿಂಗವ ಪೂಜಿಸಬೇಕು. ॥೨೫॥

ಇದಕ್ಕೆ ಅಮುಗಿದೇವಯ್ಯಗಳ ವಚನ:

೬೨೯

ಜ್ಞಾನದಲ್ಲಿ ಅಱಿದರೇನಯ್ಯಾ, ಸತ್‌ಕ್ರೀಯನಾಚರಿಸದನ್ನಕ್ಕರ?
ನೆನೆದ ಮಾತ್ರದಲ್ಲಿ ಕಾಬುದೆ, ಕಾರ್ಯದಲ್ಲಲ್ಲದೆ?
ಕುರುಡ ಕಾಣ ಪಥವ, ಹೆಳವ ನಡೆಯಲಱಿಯ.
ಒಂದಿಲ್ಲದಿದ್ದರೆ ಒಂದಾಗದು.
ಜ್ಞಾನವಿಲ್ಲದ ಕ್ರೀ ಜಡನು, ಕ್ರೀಯಿಲ್ಲದ ಜ್ಞಾನ ಭ್ರಾಂತು.
ಇದು ಕಾರಣ ಸಿದ್ಧಸೋಮನಾಥನಲ್ಲಿ ಎರಡೂ ಬೇಕು. ॥೨೬॥

ಇದಕ್ಕೆ ಶಿವನಾಗಮಯ್ಯಗಳ ವಚನ:

೬೩೦

ಅಂಗದ ಮೇಲೆ ಲಿಂಗವಿದ್ದ ಬಳಿಕ,
ಲಿಂಗಹೀನರ ಬೆರಸಲಾಗದು.
ಅಂಗದ ಮೇಲೆ ಲಿಂಗವಿದ್ದ ಬಳಿಕ,
ಲಿಂಗ ಮುಂತಾಗಿ ಎಲ್ಲ ಕ್ರೀಗಳನು ಗಮಿಸಬೇಕಲ್ಲದೆ,
ಅಂಗ ಮುಂತಾಗಿ ಗಮಿಸಲಾಗದು.
ಲಿಂಗಸಂಬಂಧಿಯಾಗಿ, ಅಂಗ ಮುಂತಾಗಿ ಇಪ್ಪವರು
ಲಿಂಗಕ್ಕೆ ದೂರವಯ್ಯಾ ನಾಗಪ್ರಿಯ ಚೆನ್ನರಾಮೇಶ್ವರಾ! ॥೨೭॥

ಇದಕ್ಕೆ ತೆಲುಗ ಜೊಮ್ಮಣ್ಣಗಳ ವಚನ:

೬೩೧

ಗುರುಕಾರುಣ್ಯವ ಪಡೆದುದಕ್ಕೆ ಚಿಹ್ನವಾವುದೆಂದರೆ,
ಅಂಗದ ಮೇಲೆ ಲಿಂಗ ಸ್ವಾಯತವಾಗಿರಬೇಕು.
ಅಂಗದ ಮೇಲೆ ಲಿಂಗ ಸ್ವಾಯತವಿಲ್ಲದೆ,
ಬಱಿದೆ ಗುರುಕಾರುಣ್ಯವಾಯಿತ್ತೆಂದರೆ, ಅದೆಂತೋ?
ಲಿಂಗಹೀನವಾಗಿ ಗುರುಕಾರುಣ್ಯ ಉಂಟೆ? ಇಲ್ಲ.
ಆ ಮಾತ ಕೇಳಲಾಗದು.
ಇದು ಕಾರಣ ಲಿಂಗಧಾರಣವುಳ್ಳುದೆ ಸದಾಚಾರ,
ಇಲ್ಲದಡೆ ಅನಾಚಾರವೆಂಬೆನಯ್ಯಾ ತೆಲುಗೇಶ್ವರಾ. ॥೨೮॥

ಈ ಹೀಂಗೆಂದು ಸಮಸ್ತ ಶರಣರೆಲ್ಲರು ವಿಡಂಬಿಸಿ ನುಡಿಯಲು, ಮರಳಿ ಚೆನ್ನಬಸವರಾಜದೇವರು ಅಂಗದ ಮೇಲೆ ಲಿಂಗವಿಲ್ಲದ ಸಿದ್ಧರಾಮಯ್ಯನೊಡನೆ ಬರಬಹುದೆ ಎಂದು ಪ್ರಭುದೇವರ ಕನಲಿ ನುಡಿದ ಪ್ರಸ್ತಾವದ ವಚನ:

೬೩೨

ನೊಸಲಲೊಂದು ಕಣ್ಣುಳ್ಳವನಾದರು
ಅವನಂಗದ ಮೇಲೆ ಲಿಂಗ ಸ್ವಾಯತವಿಲ್ಲದಿದ್ದರೆ,
ಅವನ ಮನೆಯಲ್ಲಿ ಮಾಡಿದ ಪಾಕ
ಶ್ವಾನನ ಮಾಂಸ ತಪ್ಪದಾಗಿ, ಬಲ್ಲವರೊಲ್ಲರು.
ಶಿವಭಕ್ತರಲ್ಲದವರ ಮನೆಯಲ್ಲಿ ಉಂಡರೆ,
ಜನ್ಮಜನ್ಮಾಂತರದಲ್ಲಿ ಶ್ವಾನನ ಯೋನಿಯಲ್ಲಿ ಬಪ್ಪುದು ತಪ್ಪದು.
ಎಲೆ ಶಿವನೆ, ನೀನಿಲ್ಲದವರ ಮನೆಯಲ್ಲಿ ತಿಂಬವರ ಕಂಡರೆ,
ಎನ್ನ ಮನ ಸೊಗಸದಯ್ಯಾ ಕೂಡಲಚೆನ್ನಸಂಗಮದೇವಾ. ॥೨೯॥

ಮತ್ತಂ,

೬೩೩

ಲಿಂಗವಿಲ್ಲದೆ ನಡೆವವನ, ಲಿಂಗವಿಲ್ಲದೆ ನುಡಿವವನ,
ಲಿಂಗವಿಲ್ಲದೆ ಉಗುಳ ನುಂಗಿದರೆ ಅಂದಂದಿಗೆ ಕಿಲ್ಬಿಷವಯ್ಯಾ !
ಏನೆಂಬೆನೇನೆಂಬೆ ? ಲಿಂಗವಿಲ್ಲದೆ ನುಡಿವವನ,
ಲಿಂಗವಿಲ್ಲದೆ ನಡೆವವನ ಅಂಗ ಸೂತಕ, ಮುಟ್ಟಲಾಗದು.
ಲಿಂಗವಿಲ್ಲದೆ ನುಡಿವ ಶಬ್ದ ಸೂತಕ ಕೇಳಲಾಗದು.
ಲಿಂಗವಿಲ್ಲದೆ ಗಮಿಸಿದರೆ,
ಆ ನಡೆನುಡಿಗೊಮ್ಮೆ ವ್ರತಗೇಡಿ ಕೂಡಲಚೆನ್ನಸಂಗಮದೇವಾ. ॥೩೦॥

ಇದಕ್ಕೆ ಬಸವರಾಜದೇವರ ವಿಡಂಬನ:

೬೩೪

ಗುರು ತೋಱಿದ ಲಿಂಗವೆ ಮನಸಾಹಿತ್ಯವಾಗಿರುತ್ತಿರಲು,
ಪವನಭೇದದಿಂದ ಅಱಿದೆನೆಂದರೆ, ಅದೇ ದ್ರೋಹ.
ಈಡ ಪಿಂಗಳ ಸುಷುಮ್ನನಾಳದಿಂದ ಅಱಿದೆಹೆನೆಂದರೆ,
ಕೂಡಲಸಂಗಮದೇವರು ಮೂಗ ಕೊಯ್ಯದೆ ಬಿಡುವನೆ? ॥೩೧॥

ಇದಕ್ಕೆ ಚೆನ್ನಬಸವರಾಜದೇವರ ವಚನ:

೬೩೫

ಕಾಯಾನುಭಾವಿಗಳು ಕಾಯದಲೆ ಮುಕ್ತರು.
ಜೀವಾನುಭಾವಿಗಳು ಜೀವದಲೆ ಮುಕ್ತರು.
ಪ್ರಾಣಾನುಭಾವಿಗಳು ಪ್ರಾಣದಲೆ ಮುಕ್ತರು.
ಪವನಾನುಭಾವಿಗಳು ಪವನದಲೆ ಮುಕ್ತರು.
ಲಿಂಗಾನುಭಾವಿಗಳಿಗೆಂತು ಸರಿಯೆಂಬೆ?
ನಿರವಯ ಸ್ವಯಂಜ್ಯೋತಿಪ್ರಕಾಶವಾಗಿಪ್ಪರು–
ಕೂಡಲಚೆನ್ನಸಂಗಾ, ನಿಮ್ಮ ಶರಣರು! ॥೩೨॥

ಇಂತು ವೇದಾಂತ ಸಿದ್ಧಾಂತ ದ್ವೈತತ್ರೀ ಶೈವಜ್ಞಾನದಿಂದಱಿದು ನೋಡಿ, ಲಕ್ಷ್ಯವಿಟ್ಟು ಕೂಡಿಹೆನೆಂಬ ಆತ್ಮಜ್ಞಾನದಿಂದ ಶಿವತತ್ವವ ಕಾಬುದು ಹುಸಿ ಎಂದು ಬಸವರಾಜದೇವರು [1]ಚೆನ್ನಬಸವರಾಜದೇವರು[1] ಮೋಳಿಗೆಯ ಮಾರಿತಂದೆಗಳು ಮೊದಲಾದ ಏಳು ನೂಱೆಪ್ಪತ್ತಮರಗಣಂಗಳು ಸಿದ್ಧರಾಮಯ್ಯನ ಅಷ್ಟಾಂಗಯೋಗಂಗಳ ಜಱೆದು ಖಂಡಿಸಿ ನಿರಸನಮಂ ಮಾಡಿ ಪ್ರಭುದೇವರೊಡನೆ ಬಿನ್ನೈಸುತ್ತಿರಲು, ಆ ಪ್ರಭುದೇವರು ಚೆನ್ನಬಸವಣ್ಣ ಮುಖ್ಯವಾದ ಅಸಂಖ್ಯಾತಗಣಂಗಳು ಅಂಗದ ಮೇಲೆ ಲಿಂಗವಿಲ್ಲದೆ ಒಪ್ಪರೆಂದು ಸಿದ್ಧರಾಮಯ್ಯದೇವರಿಗೆ ನಿರೂಪಿಸುವ ಪ್ರಸ್ತಾವದ ವಚನ:

೬೩೬

ಬೆಳಗಿನೊಳಗೊಂದು ಬೆಳಗು ದೊರೆಕೊಂಡಡೆ,
ಮತ್ತೊಂದು ಬೆಳಗು ಮತ್ತೆಲ್ಲಿಯದೊ?
ಘನದೊಳಗೊಂದು ಘನವು ದೊರೆಕೊಂಡಡೆ.
ಮತ್ತೊಂದು ಘನವು ಮತ್ತೆಲ್ಲಿಯದೊ?
ಸಮೀಪನ ಮೇಲೆ ಸಮೀಪ ದಾಳಿವರಿದನು
[2]ಗೊಹೇಶ್ವರ[2]ನ ಶರಣ ಚೆನ್ನಬಸವಣ್ಣನು. ॥೩೩॥

ಮತ್ತಂ,

೬೩೭

ಎಳ್ಳಿಂಗೆ ಪರಿಮಳವ ಕಟ್ಟಿದಲ್ಲದೆ,
ಎಣ್ಣೆಗೆ ಪರಿಮಳ ವೇಧಿಸದು.
ದೇಹದಲ್ಲಿ ಇಷ್ಟಲಿಂಗ ಸ್ಥಾಪಿಸಿದಲ್ಲದೆ,
ಪ್ರಾಣಲಿಂಗ ಸಂಬಂಧವಾಗದು.
ಇದು ಕಾರಣ ಗೊಹೇಶ್ವರಲಿಂಗದಲ್ಲಿ
ಇಷ್ಟಲಿಂಗ ಸಂಬಂಧಿಯಾದಲ್ಲದೆ,
ಪ್ರಾಣಲಿಂಗ ಸಂಬಂಧಿಯಾಗಬಾರದು ಕಾಣಾ ಸಿದ್ಧರಾಮಯ್ಯಾ. ॥೩೪॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಸಿದ್ಧರಾಮಯ್ಯದೇವರು ಜಜ್ಜನೆ ಜರಿದು ಬಿಬ್ಬನೆ ಬಿರಿದು, ಪ್ರಾಣ ಹಮ್ಮನೆ ಹಾಱಿ, ಭಯವಟ್ಟು ನಡುನಡುಗಿ, ಪ್ರಭುದೇವರ ಪಾದಕ್ರಾಂತನಾಗಿ, ನಿಮ್ಮ ಶರಣರ ಕರುಣವ ಕೃಪೆಮಾಡಾ ಪ್ರಭುವೆ ಎಂದು ಉಪಾವಸ್ತೆಯಂ ಮಾಡುವ ಪ್ರಸ್ತಾವದ ವಚನ:

೬೩೮

ಪುಣ್ಯ ಪಾಪಂಗಳನಱಿಯದ ಮುನ್ನ
ಅನೇಕ ಭವಂಗಳಲ್ಲಿ ಬಂದು
ನಿಮ್ಮ ನಿಲವನಱಿಯದೆ ಕೆಟ್ಟೆನಯ್ಯಾ!

೧–೧ X(ಮೂ) ೨–೨ ಗೊಗ್ಗೇಶ್ವರ(ಮೂ)

ಇನ್ನು ನಿಮ್ಮ ಶರಣುವೊಕ್ಕೆನಾಗಿ,
ನಾ ನಿಮ್ಮನೆಂದೂ ಅಗಲದಂತೆ ಮಾಡಾ ಅಯ್ಯಾ,
ನಿಮ್ಮ ಧರ್ಮ, ನಿಮ್ಮ ಧರ್ಮ.
ನಿಮ್ಮಲ್ಲಿ ಒಂದ ಬೇಡುವೆ.
ಎನ್ನ ಕರ್ಮಬಂಧನ ಬಿಡುವಂತೆ ಮಾಡಾ ಅಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನಾ. ॥೩೫॥

ಮತ್ತಂ,

೬೩೯

ಎಂದಿಪ್ಪೆನಯ್ಯಾ ನಿಮ್ಮ ಗಣಂಗಳ ಸಮೂಹದಲ್ಲಿ?
ಎಂದಿಪ್ಪೆನಯ್ಯಾ ನಿಮ್ಮವರ ನಡುವೆ?
ಎಂದಿಪ್ಪೆನಯ್ಯಾ ಕೀಳಿಲ ಕಾಯ್ದು?
ಎಂದಿಪ್ಪೆನಯ್ಯಾ ಕಿಂಕಿಲನಾಗಿ?
ಎಂದಿಪ್ಪೆನಯ್ಯಾ ನಿಮ್ಮ ನಾಮಡಿಂಗರಿಗನಾಗಿ?
ಎಂದಿಪ್ಪೆನಯ್ಯಾ ಶಿವನೇ ಕಪಿಲಸಿದ್ಧಮಲ್ಲಿಕಾರ್ಜುನಾ? ॥೩೬॥

ಮತ್ತಂ,

೬೪೦

ಎಂದಿಪ್ಪೆನಯ್ಯಾ ಶುದ್ಧಸಿದ್ಧಪ್ರಸಿದ್ಧ ಪ್ರವೇಶಿಯಾಗಿ?
ಎಂದಿಪ್ಪೆನಯ್ಯಾ ಭಕ್ತಿ ಜ್ಞಾನ ವೈರಾಗ್ಯ ಸಂಪನ್ನನಾಗಿ?
ಎಂದಿಪ್ಪೆನಯ್ಯಾ ತತ್ತ್ವಾತತ್ತ್ವ ತೂರ್ಯಾತೂರ್ಯ ನೀನೆಯಾಗಿ?
ಎಂದಿಪ್ಪೆನಯ್ಯಾ ದೀಕ್ಷಾತ್ರಯದಲ್ಲಿ ಸಂಪನ್ನನಾಗಿ?
ಎಂದಿಪ್ಪೆನಯ್ಯಾ ಲಿಂಗತ್ರಯದಲ್ಲಿ ಪ್ರಸಾದಸಂಪನ್ನನಾಗಿ?
ಎಂದಿಪ್ಪೆನಯ್ಯಾ– ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನಿಮ್ಮವರ ನಡುವೆ ಓರಂತೆ? ॥೩೭॥

ಮತ್ತಂ,

೬೪೧

ಒಡೆಯರುಳ್ಳ ತೊತ್ತಾನು; ತಾಯುಳ್ಳ ಶಿಶುವಾನು.
ಸ್ವತಂತ್ರವೇಕಯ್ಯಾ ನಿನ್ನವರ ನಡುವೆ ಎನಗೆ?
ನಿನ್ನವರು ಎನ್ನನೊಲ್ಲದಿದ್ದ ದುಃಖವನು ಮರೆದೆನೆ ನಾನು?
ನಿನ್ನವರಾಜ್ಞೆಯ ಮೀಜಿದೆನಾಯಿತ್ತಾದಡೆ ನಿಮ್ಮಾಣೆಯಯ್ಯಾ
ಕಪಿಲಸಿದ್ಧಮಲ್ಲಿಕಾರ್ಜುನಾ ॥೩೮॥

ಮತ್ತಂ,

೬೪೨

ಆವಾಗಳೂ ನಿನ್ನವರುಗಳ ನೀನೆಂಬ ಮನವ,
ಅತಿಯುನ್ನತೋನ್ನತವ ಕೊಡು ಕಂಡಾ,
ಎಲೆ ಅಯ್ಯಾ, ನಿಮ್ಮ ಧರ್ಮವಯ್ಯಾ!
ನಿನ್ನ ಲಾಂಛನವ ಕಂಡು
ತಾತ್ಪರ್ಯವೆಂದು ನಂಬುವ ಮನಸಿಂಗೆ ಮಂಗಳವನೀಯಯ್ಯಾ.
ನಿನ್ನವರ ಸಹಲೋಕದಲ್ಲಿ
ಅವರ ಕೀಳಿಲ ಕಾಯ್ದಿಪ್ಪ ಸುಕೃತವನು ತಪ್ಪದೆ ಕೊಡು
ಕಪಿಲಸಿದ್ಧಮಕಾರ್ಜುನಯ್ಯಾ, ನಿಮ್ಮ ಧರ್ಮ, ॥೩೯॥

ಮತ್ತಂ, ಸಿದ್ಧರಾಮದೇವರು ತಾ ಮಾಡುವ ಶೈವಯೋಗಾಭ್ಯಾಸ ಭಿನ್ನ ಕ್ರೀಗಳನು ತಾವೆ ಜಜಿದುಕೊಂಡು ನುಡಿದು, ಶರಣ ಕರುಣವ ಸಾಧ್ಯವ ಮಾಡಿ ಕೊಡು ಎಂದು ಪ್ರಭುದೇವರಿಗೆ ಬಿನ್ನೈಸುವ ಪ್ರಸ್ತಾವದ ವಚನ:

೬೪೩

ಹಿಂದೆ ಬಯಸಿದೆ ಕಾಳುತನದಲ್ಲಿ,
ಎನ್ನ ಮಂದಮತಿಯ ನೋಡಿರಯ್ಯಾ,
ಕೆಱೆ ಬಾವಿ ಹೂದೋಟ ಚೌಕ ಛತ್ರಂಗಳ ಮಾಡಿ,
ಜೀವಂಗಳ ಮೇಲೆ ಕೃಪೆಯುಂಟೆಂದು,
ಎನ್ನ ದಾನಿ ಎಂಬರು;
ಆನು ದಾನಿಯಲ್ಲ ಅಯ್ಯಾ.
ನೀ ಹೇಳಿದಂತೆ ನಾ ಮಾಡಿದೆನು.
ನೀ ಬರಹೇಳಿದಲ್ಲಿ ನಾನು ಬಂದೆನು.
ನೀನು ಇರಿಸಿದಂತೆ ಇದ್ದೆನು.
ನಿನ್ನ ಇಚ್ಛಾಮಾತ್ರವ ಮೀಱಿದೆನಾಯಿತ್ತಾದಡೆ,
ಫಲಪದ ಜನನವ ಬಯಸಿದೆನಾದಡೆ ನಿಮ್ಮಾಣೆ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಭವಕ್ಕೆ ಬರಿಸದಿರಯ್ಯಾ ನಿಮ್ಮ ಧರ್ಮ. ॥೪೦॥

ಮತ್ತಂ,

೬೪೪

ಮಾಡಿಸಯ್ಯಾ ಎನಗೆ ನಿಮ್ಮವರ ಸಂಗವ.
ಮಾಡಿಸಯ್ಯಾ ಎನಗೆ ನಿಮ್ಮವರಾನಂದವ.
ಆಗಿಸಯ್ಯಾ ನಿನ್ನವರಾದಂತೆ,

ನೋಡಿಸಯ್ಯಾ ನಿನ್ನವರ ಕೂಡೆ, ಸಂಗವನು ಮಾಡಿಸಯ್ಯಾ.
ಎನಗೆ ಬಚ್ಚಬಚಿಯ ಭಕ್ತಿಯನ್ನು ಕೊಡಿಸಯ್ಯಾ.
ಎನಗೆ ಪಾದೋದಕ ಪ್ರಸಾದವನೊಚ್ಚತ ಸಲಿಸಯ್ಯಾ.
ನಿಮ್ಮವರ ಕೂಡೆ ಸಿಕ್ಕಿ ಇರಿಸಯ್ಯಾ.
ನಿನ್ನವರ ಪಾದದ ಕೆಳಗೆ ನಿತ್ಯವಾಗಿ ಬರಿಸಯ್ಯಾ ಎನ್ನ ಭವಭವದಲ್ಲಿ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ
ನೀನು ಇಂತು ಕೆಡಿಸಯ್ಯಾ ಎನ್ನ ಭವಭವದ ಹುಟ್ಟು. ॥೪೧॥

೬೪೫

ನುಡಿಯಬಹುದು ಅದ್ವೈತವನೊಂದುಕೋಟಿ ವೇಳೆ.
ಒಮ್ಮೆ ನಡೆಯಬಹುದೆ ನಿರ್ಧರವಾಗಿ ಸದ್‌ಭಕ್ತಿ ಸದಾಚಾರವ?
ನುಡಿದಂತೆ ನಡೆವ, ನಡೆದಂತೆ ನುಡಿವ
ಸದ್‌ಭಕ್ತಿ ಸದಾಚಾರಯುಕ್ತ
ಮಹಾತ್ಮರ ಪಾದವ ಹಿಡಿದು ಬದುಕಿಸಯ್ಯಾ ಪ್ರಭುವೆ,
ಕಪಿಲಸಿದ್ಧಮಲ್ಲಿಕಾರ್ಜುನಾ! ॥೪೨॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿನಗೆ ಅಂತರ್ಲಕ್ಷಾನುಸಂಧಾನ ಧ್ಯಾನಯೋಗದಿಂದ ವಸ್ತುವ ಕಂಡೆಹೆನೆಂದರೆ ಸಾಧ್ಯವಾಗದು; ಎನ್ನ ಶ್ರೀಗುರುವಪ್ಪ ಅನಿಮಿಷದೇವರಂತೆ ಕರಸ್ಥಲದ ಲಿಂಗದಲ್ಲಿ ವಸ್ತುನಿಶ್ಚಯವ ಕಂಡು ಬದುಕೆಂದು ನಿರೂಪಿಸಿದ ಪ್ರಸ್ತಾವದ ವಚನ:

೬೪೬

ಶ್ರುತಿಯ ನಂಬದಿರೊ, ಶ್ರುತಿಯ ನಂಬದಿರೊ,
ಶ್ರುತಿತತಿಗಳು ಮುನ್ನವೆ ಶಿವನಡಿಯ ಕಾಣದೆ,
ಶ್ರುತಿ 'ಚಕಿತಮಭಿದತ್ತೇ' ಎನುತ್ತ
ಮುನ್ನವೆ ಅಱಿಸಿ ತೊಳಲಿ ಬಳಲುತ್ತೈದಾವೆ.
ಶ್ರುತಿ ಹೇಳಿದತ್ತ ಹರಿಹರಿದು ಬಳಲದಿರೊ.
ಶೂನ್ಯಕ್ಕೆ ತಲೆವಾಱನಿಕ್ಕದಿರೊ.
ವಸ್ತು ಹೃದಯದಲುಂಟೆಂದು ನೆನೆಯದಿರೊ.
ವಸ್ತು ಭ್ರೂಮಧ್ಯದಲುಂಟೆಂದು ಭ್ರಮಿಸದಿರೊ.
ವಸ್ತು ಬ್ರಹ್ಮರಂಧ್ರದಲ್ಲಿ ಉಂಟೆಂದು ಹೊಲಬುಗೆಡದಿರೊ.
ವಸ್ತುನಿಶ್ಚಯ ಕಾಬಡೆ, ಎನ್ನ ಸದ್‌ಗುರು ಅನಿಮಿಷದೇವನಂತೆ
ನಿನ್ನ ಕರಸ್ಥಲದಲ್ಲಿ ನಿಕ್ಷೈಸಿ, ವಸ್ತುನಿಶ್ಚಯವ ಕಂಡು,
ನಮ್ಮ ಗೊಹೇಶ್ವರಲಿಂಗದಲ್ಲಿ ನಿಬ್ಬೆಱಗಾಗೋ ಮರುಳೇ! ॥೪೩॥

ಮತ್ತಂ, ಪ್ರಭುದೇವರು ಅನಿಮಿಷದೇವರೆಂಬ ಗುರುವಿನ ಕೃಪೆಯಿಂದ ಇಷ್ಟಲಿಂಗ ಸಂಬಂಧವ ಪಡೆದೆನಾಗಿ ಪ್ರಾಣಲಿಂಗಸಂಬಂಧವಾಯಿತ್ತು, ನಿನಗೆ ಇಷ್ಟಲಿಂಗ ಸಂಬಂಧವಿಲ್ಲದೆ ಇದ್ದರೆ ಆಗದು ಎಂದು ನಿರೂಪಿಸಿದ ವಚನ:

೬೪೭

ಅಂಗ ಲಿಂಗ, ಪ್ರಾಣ ಲಿಂಗ, ಮನ ಲಿಂಗವಾಯಿತ್ತು ನೋಡಾ!
ಅಂಗ ಲಿಂಗವಾಗಿ ನಡೆನುಡಿ ಗತಿಯನಱಿಯದು.
ಪ್ರಾಣ ಲಿಂಗವಾಗಿ ನವನಾಳದ ಸುಳುಹನಱಿಯದು
ಮನ ಲಿಂಗವಾಗಿ ನೆನಹುಗೆಟ್ಟಿತ್ತು.
ಅನುಭಾವ ಲಿಂಗವಾಗಿ ವಿಚಾರವಱಿತಿತ್ತು.
ಭಾವ ಲಿಂಗವಾಗಿ ಭಾವನೆಯಳಿಯಿತ್ತು.
ಸರ್ವಕ್ರಿಯೆಗಳೆಲ್ಲವು ಲಿಂಗವಾಗಿ ಮಾರ್ಗಕ್ರೀಯ ಹೊಲಬನಱಿಯದು.
ಅಱಿವು ಲಿಂಗವಾಗಿ ಅಱಿವು ಮಱಹುಗೆಟ್ಟಿತ್ತು.
ಅಂತರಂಗ ಲಿಂಗವಾಗಿ, ಬಹಿರಂಗವೆಂದಱಿಯದು.
ಬಹಿರಂಗ ಲಿಂಗವಾಗಿ ಅಂತರಂಗದ[1] ಸುದ್ದಿಯನಱಿಯದು.
ಸರ್ವಾಂಗ ಲಿಂಗವಾಗಿ ಸರ್ವೇಂದ್ರಿಯ ಗಮನಗೆಟ್ಟಿತ್ತು.
ಮಹಾಘನವಿಂಬುಗೊಂಡಿತ್ತಾಗಿ ನಿಷ್ಪತಿ ಕಱಿಗೊಂಡಿತ್ತು.
[2]ಗೊಹೇಶ್ವರ[2]ಲಿಂಗದಲ್ಲಿ ಪ್ರಾಣಲಿಂಗಸಂಬಂಧ
ಸಯವಾಯಿತ್ತು ನೋಡಾ ಸಿದ್ಧರಾಮಯ್ಯಾ. ॥೪೪॥

ಈ ಹೀಂಗೆಂದು ಪ್ರಭುದೇವರು ಸಿದ್ಧರಾಮಯ್ಯದೇವರಿಗೆ ನಿರೂಪಿಸುತ್ತಿರಲು, ಆ ಸಮಯದಲ್ಲಿ ಅಮುಗಿದೇವಯ್ಯಗಳು ಬಿನ್ನೈಸುವ ಪ್ರಸ್ತಾವದ ವಚನ:

೬೪೮

ಕ್ಷುತ್ತು ಪಿಪಾಸೆಯಱತಡೇನು, ಭಕ್ತನಪ್ಪನೆ?
ಸ್ವೇಚ್ಛಾಗಮನಿಯಾದಡೇನು, ಭಕ್ತನಪ್ಪನೆ?
ತನು ಬಯಲಾದಡೇನು, ಭಕ್ತನಪ್ಪನೆ?
ಅಷ್ಟಮಹಾಸಿದ್ಧಿಯುಳ್ಳರೇನು, ಭಕ್ತನಪ್ಪನೆ?
ಚತುರ್ವಿಧಪದವ ಪಡೆದು ಕೈಲಾಸದಲ್ಲಿದ್ದಡೇನು, ಭಕ್ತನಪ್ಪನೆ?
ಮಹತ್ವವ ಹಲವು ತೋಱಿ ಮೆಱೆದರೇನು, ಭಕ್ತನಪ್ಪನೆ?
ಅಲ್ಲಲ್ಲ; ಭಕ್ತಿಯ ಪರಿ ಎಂತೆಂದಡೆ:
ಅಂಗತ್ರಯದಲ್ಲಿ ಲಿಂಗತ್ರಯ ಸಂಬಂಧವಾಗಿ,

೧x(ಮು) ೨-೨ ಗೊಗ್ಗೇಶ್ವರ(ಮೂ)

ಗುರು ಲಿಂಗ ಜಂಗಮವನಾರಾಧಿಸಿ ಲಿಂಗತ್ರಯದಲ್ಲಿ ಸಮವೇಧಿಸಿ,
ಆ ತ್ರಿವಿಧಲಿಂಗ ಜಂಗಮವನಾರಾಧಿಸಿ
ಪ್ರಸಾದಗ್ರಾಹಿಯಾದಲ್ಲದೆ ಭಕ್ತನಲ್ಲವೆಂದು
ಸಿದ್ಧಸೋಮನಾಥನ ಶರಣರು ನುಡಿವರಯ್ಯಾ ಪ್ರಭುವೆ. ॥೪೫॥

ಮತ್ತಂ,

೬೪೯

ಗುರುಕಾರುಣ್ಯವ ಪಡೆದು ಲಿಂಗದೊಳಗವಗ್ರಾಹಕನಾಗದೆ,
ಅಂಗಲಿಂಗ, ಪ್ರಾಣಲಿಂಗ, ಆತ್ಮಲಿಂಗಸಂಬಂಧದ ವಿಚಾರವಿಲ್ಲದೆ,
ಬಜೆಯ ಜ್ಞಾನಯೋಗವೆಂಬ ಶೂನ್ಯದನುಭಾವಿಗೆ ಗುರುಭಕ್ತಿ ಇಲ್ಲ.
ಗುರುಭಕ್ತಿ ಇಲ್ಲವಾಗಿ ಲಿಂಗಭಕ್ತಿ ಇಲ್ಲ.
ಲಿಂಗಭಕ್ತಿಯಿಲ್ಲವಾಗಿ ಜಂಗಮಭಕ್ತಿ ಇಲ್ಲ.
ಜಂಗಮಭಕ್ತಿ ಇಲ್ಲವಾಗಿ ಪ್ರಸಾದವಿಲ್ಲ.
ಪ್ರಸಾದಪ್ರಸನ್ನವಿಲ್ಲವಾಗಿ ಮೋಕ್ಷವಿಲ್ಲ.
ಇದು ಕಾರಣ ಸದ್‌ಗುರು ಸಿದ್ಧಸೋಮನಾಥನಲ್ಲಿ
ಗುರುಕರಜಾತರಾದ ಲಿಂಗಾಂಗಸಂಬಂಧಿಗಳ–
ಪೂರ್ವವಯ್ಯಾ ಪ್ರಭುವೆ. ॥೪೬॥

[೧]ಈ ಹೀಂಗೆಂದು[೧] ಅಮುಗಿದೇವಯ್ಯಗಳು ಪ್ರಭುದೇವರೊಡನೆ ಬಿನ್ನೈಸಲು, ಸಿದ್ಧರಾಮಯ್ಯದೇವರು ಬಸವಣ್ಣ ಮುಖ್ಯವಾದ ಅಸಂಖ್ಯಾತ ಮಹಾಗಣಂಗಳಿಂದ ಚೆನ್ನಬಸವೇಶ್ವರನ ಕೈಯಿಂದ ಅನುಗ್ರಹವ ಕೊಡಿಸಿ ಎಂದು ಪ್ರಭುದೇವರಿಗೆ ಭಕ್ತಿ ಜ್ಞಾನಾತುರದಿಂದ ಬಿನ್ನೈಸುವ ಪ್ರಸ್ತಾವದ ವಚನ:

೬೫೦

ಇನಮಂಡಲದೊಳಗೆ ಕಿರಣವಡಗಿಪ್ಪಂತೆ,
ಫಲವಹ ಬೀಜದಲ್ಲಿ ವೃಕ್ಷವಡಗಿಪ್ಪಂತೆ,
ಇಂದುಕಾಂತ ರವಿಕಾಂತದಲ್ಲಿ ಜಲಬಿಂದು ಅಗ್ನಿ ಇಪ್ಪಂತೆ,
ಸಂದ ಕ್ಷೀರದಲ್ಲಿ ಹೊಂದಿದ ದಧಿ ತಕ್ರ ನವನೀತ ಘೃತವಿಪ್ಪಂತೆ,
ಅಂಗದಮೇಲೆ ಲಿಂಗ ಸಾಹಿತ್ಯವಾಗಿ,
ತನ್ನೊಳಗೆ ಆ ಲಿಂಗವ ಕಂಡು, ಲಿಂಗದೊಳಗೆ ತನ್ನ ಕಂಡು,
ತನ್ನೊಳಗೆ ಸಮಸ್ತ ವಿಸ್ತಾರವೆಲ್ಲವನೂ ಕಂಡು,
ಜಂಗಮಮುಖ ಲಿಂಗವೆಂಬ ಭೇದವನೂ
ಲಿಂಗಕ್ಕೆ ಜಂಗಮವೆ ಪ್ರಾಣವಾಗಿಪ್ಪ ಭೇದವನೂ

೧–೧ ಹಿಂಗೆಂದು (ಮೂ)

ಅಂಗದೊಳಗೆ ಲಿಂಗವೆ ಆಚಾರವಾಗಿ ಅಳವಟ್ಟ ವಿವರವನೂ
ಲಿಂಗಾಂಗಸಂಬಂಧ ಸ್ಥಲಕುಳಂಗಳವಿರಳವಾಗಿ ಇದ್ದಿತ್ತೆಂಬುದನೂ
ಕಂಗಳ ನೋಟಕ್ಕೆ ಗುಜೆಯಾದ ಲಿಂಗವೆ
ಅಂಗವನೊಳಕೊಂಬ ಭೇದವನೂ
ಸಂಗನಬಸವಣ್ಣ ಚೆನ್ನಬಸವಣ್ಣನಿಂದ ಕೃಪೆಮಾಡಿಸಿ
ಎನ್ನನುಳುಹಾ ಪ್ರಭುವೆ
ಕಪಿಲಸಿದ್ಧಮಲ್ಲಿಕಾರ್ಜುನದೇವರದೇವಯ್ಯಾ. ॥೪೭॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಪ್ರಭುದೇವರೊಡನೆ ಬಸವಣ್ಣ ಚೆನ್ನಬಸವಣ್ಣನವರಿಂದ ಲಿಂಗಧಾರಣವ ಮಾಡಿಸಿ ಎಂದು ಬಿನ್ನೈಸಲು, ಆ ಪ್ರಭುದೇವರು ಚೆನ್ನಬಸವರಾಜದೇವರೊಡನೆ ಸಿದ್ಧರಾಮಯ್ಯದೇವರಿಗೆ ಲಿಂಗವ ಧರಿಸಬೇಕೆಂದು ನಿರೂಪಿಸಿದ ಪ್ರಸ್ತಾವದ ವಚನ:

೬೫೧

ರತ್ನ ದೀಪ್ತಿಯಾದಡೇನು?
ಬಂಧಿಸಿದ ಕುಂದಣದಲ್ಲಿಯೆ ಸಂದಿರಬೇಕು.
ಸ್ವಾದುರಸದ ರುಚಿಯನೀವ ಫಲವೆಂದಡೇನು? ವೃಕ್ಷವಿಲ್ಲದನ್ನಕ್ಕರ?
ಚಿತ್ರ ಸೌಂದರ್ಯ ನೋಟಕ್ಕೆ ಸುಖವೆಂದಡೇನು,
ಭಿತ್ತಿಯ ಪಟಮುಖ್ಯಸ್ಥಾನವಿಲ್ಲದನ್ನಕ್ಕರ?
ಅಂಜನಸಿದ್ಧಿಯಿಂ ನಿಧಾನವ ಕಂಡಡೇನು,
ಸಾಧನಕ್ರೀಯಿಂದ ಸಾಧ್ಯವ ಮಾಡಿಕೊಳ್ಳದನ್ನಕ್ಕರ?
ಇದು ಕಾರಣ, ಕಾಯದ ಕರಸ್ಥಲಕ್ಕೆ ಇಷ್ಟಲಿಂಗಸಾಹಿತ್ಯವಿಲ್ಲದಿದ್ದರೆ,
ನಿರವಯವಾದ ಜ್ಞಾನಯೋಗದ ಕೂಟ ಸಾಧ್ಯವಾಗದು.
ಇದು ಕಾರಣ, ಕ್ರಿಯಾಲಿಂಗಸಂಬಂಧವೆ ಭಕ್ತಂಗೆ ಮತವು,
ಇದೆ ದೇಹಶೌಚವು.
ನಮ್ಮ [೧]ಗೊಹೇಶ್ವರ[೧]ನ ಶರಣರ ಮನ ಒಪ್ಪುವಂತೆ
ಸಿದ್ಧರಾಮಯ್ಯಂಗೆ ಲಿಂಗಸಾಹಿತ್ಯವ ಮಾಡಾ ಚೆನ್ನಬಸವಣ್ಣ. ॥೪೮॥

ಇಂತು ಪ್ರಭುದೇವರು ಸಿದ್ಧರಾಮಯ್ಯದೇವರಿಗೆ ಉಪದೇಶವ ಮಾಡೆಂದು ಚೆನ್ನಬಸವರಾಜದೇವರಿಗೆ ನಿರೂಪಿಸಲು, ಆ ಚೆನ್ನಬಸವರಾಜದೇವರು ಸಿದ್ಧರಾಮದೇವರಿಗೆ ದೀಕ್ಷೆಯಂ ಮಾಡಿದ ಪ್ರಸ್ತಾವದ ವಚನ:

೧-೧ ಗೊಗ್ಗೇಶ್ವರ (ಮೂ)

೬೫೨

ಆಣವಮಲ ಮಾಯಾಮಲ ಕಾರ್ಮಿಕಮಲವೆಂಬ
ಮಲತ್ರಯಂಗಳಂ ಕಳೆದು,
ಆಜ್ಞಾದೀಕ್ಷೆ ಉಪಮಾದೀಕ್ಷೆ ಸ್ವಸ್ತಿಕಾರೋಹಣ
ಕಳಸಾಭಿಷೇಕ ವಿಭೂತಿಯ ಪಟ್ಟ ಲಿಂಗಾಯತ ಲಿಂಗಸ್ವಾಯತ–
ಈ ಏಳನೂ ಕಾಯಕ್ಕುಪದೇಶವಮಾಡುವುದು.
ಸಮಯ ನಿಸ್ಸಂಸಾರ ನಿರ್ವಾಣ ತತ್ತ್ವದೀಕ್ಷೆ
ಆಧ್ಯಾತ್ಮಿಕ ಅನುಗ್ರಹ ಸತ್ಯಶುದ್ಧ–
ಈ ಏಳನೂ ಪ್ರಾಣಕ್ಕುಪದೇಶವ ಮಾಡುವದು.
ಏಕಾಗ್ರಚಿತ್ತ ದೃಢವ್ರತ ಪಂಚೇಂದ್ರಿಯಾರ್ಪಿತ
ಅಹಿಂಸೆ ಮನೋಲಯ ಲಿಂಗನಿಜ ಸದ್ಯೋನ್ಮುಕ್ತಿ–
ಈ ಏಳನೂ ಮನಕ್ಕುಪದೇಶವ ಮಾಡುವುದು.
ಈ ಕ್ರಮವನಱಿದು ಮಾಡುವುದು
ಕೂಡಲಚೆನ್ನಸಂಗಯ್ಯನಲ್ಲಿ ಸಹಜ ದೀಕ್ಷೆಯಯ್ಯಾ. ॥೪೯॥

ಇಂತು ಚೆನ್ನಬಸವರಾಜದೇವರು ಕಾಯ ಪ್ರಾಣ ಮನವೆಂಬ ತ್ರಿವಿಧದಲ್ಲಿ ಇಪ್ಪತ್ತೊಂದು ದೀಕ್ಷೆಯಂ ಮಾಡಿ, ತ್ರಿವಿಧಲಿಂಗಧಾರಣಮಂ ಸಂಬಂಧಿಸಲು, ಇದಕ್ಕೆ ಸಿದ್ಧರಾಮಯ್ಯದೇವರು ಪರಮಾನಂದ ಹರುಷವನೆಯ್ದಿ ಬಿನ್ನೈಸಿದ ವಚನ:

೬೫೩

ಅಧ್ಯಾತ್ಮ ಅಧ್ಯಾತ್ಮವೆಂದೆಂಬಿರಿ. ಅಧ್ಯಾತ್ಮವಾರಿಗೆ?
ಶ್ರೀಗುರುಸ್ವಾಮಿ ಬಹಳವಪ್ಪ ಶಿವಲಿಂಗವ
ಸೂಕ್ಷ್ಮವಮಾಡಿ ಕರಸ್ಥಲದಲ್ಲಿ ಕೊಟ್ಟ ಬಳಿಕ,
ಬೇಱೆ ಯೋಗ ಉಂಟೆ?
ತನ್ನ ಹಸ್ತವ ಮಸ್ತಕದಲ್ಲಿಟ್ಟು, ವಾಯುಪ್ರಾಣಿಯಾಗಿದ್ದುದ ಕೊಂದು
ಲಿಂಗಪ್ರಾಣಿಯ ಮಾಡಿದ ಬಳಿಕ,
ಅಕ್ಷರ ಐದಱಲ್ಲಿ ಮುಕ್ತನ ಮಾಡಿದ ಬಳಿಕ,
ಮರಳಿ ಯೋಗ ಉಂಟೇ, ಶಿವಯೋಗವಲ್ಲದೆ?
ಲಿಂಗಾರ್ಚನೆಯಂ ಮಾಡಿ, ಜಂಗಮಪ್ರಸಾದವ ಕೊಂಡ ಬಳಿಕ,
ಮರಳಿ ಬಱಿಯ ಯೋಗಕ್ಕೆ ಒಡಂಬಡುವುದೆ ಅಱಿವು?
ಇಂತಪ್ಪವನತಿಗಳೆದು ಶುದ್ಧಶಿವಯೋಗಿಯ
ಮಾಡಿದಾತ ಚೆನ್ನಬಸವಣ್ಣ.
ಮಹಾಲೋಕದಲ್ಲಿಪ್ಪ ಆದ್ಯಕ್ಷರದ್ವಯವ ಭೇದಿಸಿ ತಂದು
ಕರಸ್ಥಲದಲ್ಲಿ ಇರಿಸಿ,

ಇದು ಉತ್ತರಪದವೆಂದು ತೋಱಿಕೊಟ್ಟು,
ಎನ್ನ ತನ್ನಂತೆ ಮಾಡಿದ ಗುರು ಚೆನ್ನಬಸವಣ್ಣ.
ಆನು ಚೆನ್ನಬಸವಣ್ಣನ ಕರುಣದಿಂದ ಅಭ್ಯಾಸಯೋಗವನತಿಗಳೆದು,
ಶಿವಯೋಗದಲ್ಲಿ ನಿತ್ಯನಾಗಿ,
ಭಕ್ತ ಮಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯನೆಂಬ
ಷಡುಸ್ಥಲಕ್ಕಧಿಕಾರಿಯಾದೆ; ನಿನ್ನವರ ಸಲುಗೆಗೆ ಸಂದೆ.
ಚೆನ್ನಬಸವಣ್ಣನ ಕೃಪೆ ಎನ್ನನಿಂತು ಮಾಡಿತ್ತು ಕಾಣಾ,
ಗುರುವೇ ಕಪಿಲಸಿದ್ಧಮಲ್ಲಿಕಾರ್ಜುನಾ. ॥೫೦॥

ಮತ್ತಂ,

೬೫೪

ಹೆಸರಿಡಬಾರದ ಲಿಂಗವ ಹೆಸರಿಟ್ಟು,
ಎನ್ನ ಕರಸ್ಥಲಕ್ಕೆ ತಂದು ಕರತಳಾಮಳಕದಂತೆ ಮಾಡಿ,
ಎನ್ನ ಕರಸ್ಥಲಕ್ಕೆ ಕ್ರಿಯಾಲಿಂಗವ ಕೊಟ್ಟ ಶ್ರೀಗುರು ಚೆನ್ನಬಸವಣ್ಣ.
ಹೆಸರಿಟ್ಟ ಲಿಂಗದ ಹೆಸರ ಹೇಳುವೆನು ಕೇಳಯ್ಯಾ.
ಕಂಜಕರ್ಣಿಕೆಯ ಹಣೆಯಲ್ಲಿ
ವಿಹತ್ತವಸವೆಂದು ಬರೆದ ಐದಕ್ಷರವೆ ಆತನ ಪ್ರಥಮ ನಾಮ.
ಅವ್ವೆಯ ಕರದೊಳಿಪ್ಪ ಆರಕ್ಷರವೆ ಆತನ ದ್ವಿತೀಯ ನಾಮ.
ಅವ್ವೆಯ ಆನಂದಮಸ್ತಕದೊಳೊಪ್ಪಿಪ್ಪ ೧[ಅಕ್ಷರದ್ವಯವೆ]೧
ಆತನ ಆಚಾರ್ಯ ನಾಮ.
ಇಂತೀ ನಾಮತ್ರಯಂಗಳನಱಿದು,
ಧ್ಯಾನಾರೂಢನಾಗಿ ಮಾಡುವರು ಎತ್ತಾನಕೊಬ್ಬರು.
ಈ ಬಸವಣ್ಣ ಮೊದಲಾದ ಪುರಾತನರು
ಆ ಅವ್ವೆಯ ಅನುಮತದಿಂದ ಲಿಂಗಾರ್ಚನೆಯ ಮಾಡಿ,
ನಿತ್ಯ ನಿಜವಾಸಿಗಳಾದರು.
ಆ ಶರಣರ ಅನುಮತದರಿವಿನ ಉಪದೇಶವ ಕೇಳಿ,
ಎನಗಿನ್ನಾವುದು ಹದನಯ್ಯಾ ಎಂಬ ಚಿಂತೆಯ ಬಿಟ್ಟು,
ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಕೈಯಲ್ಲಿ ಪಿಡಿದೆನು. ॥೫೧॥

ಮತ್ತಂ,

೬೫೫

ಆದಿಯಾಧಾರವಿಲ್ಲದಂದಿನ, ಸಾದಾಖ್ಯದೇಹವಿಲ್ಲದಂದಿನ,
ಸೀಮೆ ಸಂಬಂಧಗಳಿಲ್ಲದಂದಿನ

೧–೧ ಅಕ್ಷರವೆ (ಮು)

ಅನಾದಿಸಂಸಿದ್ಧನ ಆಗುಮಾಡಿ,
ಹೆಸರಿಟ್ಟು ಕರಸ್ಥಲಕ್ಕೆ ತಂದುಕೊಟ್ಟ ಗುರು
ಚೆನ್ನಬಸವಣ್ಣನಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನಾ. ॥೫೨॥

ಮತ್ತಂ,

೬೫೬

ಇಹಲೋಕ ಪರಲೋಕವೆಂಬ ಸಂದಳಿಯಿತ್ತಯ್ಯಾ,
ಗುರುವಿನ ಹಸ್ತದಲ್ಲಿ ಸತ್ತು, ಪಂಚಾಕ್ಷರಿಯಿಂದೆತ್ತಿದ ಕಾರಣದಲ್ಲಿ;
ನಿತ್ಯವೂ ಲಿಂಗಾರ್ಚನೆಯ ಮಾಡುವ ಕಾರಣದಲ್ಲಿ;
ನಿತ್ಯವೂ ವಿಭೂತಿ ರುದ್ರಾಕ್ಷೆ ಧಾರಣವ ಮಾಡುವ ಕಾರಣದಲ್ಲಿ.
ಇಹಲೋಕವೆಂದೇನು, ಪರಲೋಕವೆಂದೇನು,
ಹಂಗುಹಜೆದು ಒಂದಾದ ಬಳಿಕ?
ಮಲ ಮದಂಗಳು ಹಜೆದು ನಾನು ನೀನಾದ ಬಳಿಕ?
ಎಲೆ ಅಯ್ಯಾ, ಭಕ್ತರ ಸರ್ವಾಂಗ ಲಿಂಗತನು.
ಭಕ್ತರಿಪ್ಪ ಲೋಕವೆ ರುದ್ರಲೋಕ,
ಗುರುವೇ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನಿನ್ನ ಹಸ್ತವ ಮಸ್ತಕದಲ್ಲಿ ಇಟ್ಟಡಾಯಿತ್ತು. ॥೫೩॥

[೧]ಮತ್ತಂ[೧],

೬೫೭

ಶುದ್ಧವನಜೆದೆ ಚೆನ್ನಬಸವಣ್ಣಾ ನಿಮ್ಮಿಂದ.
ಸಿದ್ಧವನಜೆದೆ ಚೆನ್ನಬಸವಣ್ಣಾ ನಿಮ್ಮಿಂದ,
ಪ್ರಸಿದ್ಧವನಜೆದೆ ಚೆನ್ನಬಸವಣ್ಣಾ ನಿಮ್ಮಿಂದ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಚೆನ್ನಬಸವಣ್ಣ ಗುರುವಾಗಿ ಬಂದು
ಎನ್ನ ಜನ್ಮಕರ್ಮವ ನಿವೃತ್ತಿಯ ಮಾಡಿದನಯ್ಯಾ. ॥೫೪॥

ಮತ್ತಂ,

೬೫೮

ಹೃದಯಕಮಲದ ಅಷ್ಟದಳದ
ದ್ವಾತ್ರಿಂಶ ಕುಸುಮಮಧ್ಯದಲ್ಲಿ ಇಪ್ಪನಾ ಸೂರ್ಯ.
ಆ ಸೂರ್ಯನ ಮಧ್ಯದಲ್ಲಿ ಇಪ್ಪನಾ ಚಂದ್ರ.
ಆ ಚಂದ್ರನ ಮಧ್ಯದಲ್ಲಿ ಇಪ್ಪನಾ ಅಗ್ನಿ

೧–೧ x(ಮು)

ಆ ಅಗ್ನಿಯ ಮಧ್ಯದಲ್ಲಿ ಇಪ್ಪುದಾ ಕಾಂತಿ.
ಆ ಕಾಂತಿಯ ಮಧ್ಯದಲ್ಲಿ ಇಪ್ಪುದಾ ಸುಜ್ಞಾನ.
ಆ ಸುಜ್ಞಾನದ ಮಧ್ಯದಲ್ಲಿಪ್ಪುದಾ ಚಿದಾತ್ಮ.
ಆ ಚಿದಾತ್ಮನ ಮಧ್ಯದಲ್ಲಿಪ್ಪನಾ ಚಿತ್‌ಪ್ರಕಾಶನಪ್ಪ ಪರಶಿವನು.
ಅಂತಪ್ಪಾ ಪರಶಿವನೆನ್ನ ಸುಜ್ಞಾನಕಾಯದ ಮಸ್ತಕದ ಮೇಲೆ ಹಸ್ತವನಿರಿಸಿ,
ಮನ ಭಾವ ಕರಣೇಂದ್ರಿಯಗಳಿಂದೆ ಸ್ವರೂಪೀಕರಿಸಿ,
ದೃಷ್ಟಿಗೆ ತೋಱಿ, ಕೈಯಲ್ಲಿ ಲಿಂಗವ ಕೊಟ್ಟ
ಚೆನ್ನಬಸವಣ್ಣನ ಶ್ರೀಪಾದಕ್ಕೆ
ನಮೋ ನಮೋ ಎಂದು ಬದುಕಿದೆನಯ್ಯಾ ಪ್ರಭುವೇ
ಕಪಿಲಸಿದ್ಧಮಲ್ಲಿಕಾರ್ಜುನಾ. ॥೫೫॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಚೆನ್ನಬಸವರಾಜದೇವರಿಂದ ಲಿಂಗಾಂಗ ಸಂಬಂಧಿಯಾಗಿ ಬದುಕಿದೆನೆಂದು ಸ್ತುತಿಸುತ್ತಿರಲು, ಆ ಚೆನ್ನಬಸವರಾಜದೇವರು ಸಂತೋಷಿಸಿ ಕೊಂಡಾಡಿದ ಪ್ರಸ್ತಾವದ ವಚನ:

೬೫೯

ಕಂಗಳ ನೋಟ ಮನದ ಕೂಟದಲ್ಲಿಯೆ
ಏಕತ್ವಭಾವದ ಲಿಂಗೈಕ್ಯದ ನಿಲವು
ತನ್ನಿಂದ ತಾನೆಯಾದ ಬಗೆಯ ನೋಡಾ!
ಅಱಿಯಲಿಲ್ಲದ ಅಱಿವಿನ ತೆಱನು ಸಯವಾಯಿತ್ತು,
ಕೂಡಲಚೆನ್ನಸಂಗಯ್ಯನಲ್ಲಿ ಸಿದ್ಧರಾಮಯ್ಯಂಗೆ. ॥೫೬॥

ಈ ಹೀಂಗೆಂದು ಚೆನ್ನಬಸವರಾಜದೇವರು ಸಿದ್ಧರಾಮಯ್ಯದೇವರ ಕೊಂಡಾಡಲು, ಪ್ರಭುದೇವರು ಚೆನ್ನಬಸವರಾಜದೇವರೊಡನೆ ಸಿದ್ಧರಾಮಯ್ಯದೇವರ ಕೊಂಡಾಡಿದ ಪ್ರಸ್ತಾವದ ವಚನ:

೬೬೦

ಸ್ವಾನುಭಾವದ ಬೆಳಗಿನಲ್ಲಿ ಒಂದು ಬೆಕ್ಕು ಹುಟ್ಟಿತ್ತು.
ಆ ಬೆಕ್ಕಿನ ತಲೆಯ ಮೇಲೆ ಒಂದು ಗಿರಿ ಹುಟ್ಟಿತ್ತು.
ಆ ಗಿರಿಯ ಮೇಲೆ ಎರಡು ರತ್ನ ಹುಟ್ಟಿದವು.
ಆ ರತ್ನವನಱಸಿಕೊಂಡು ಬರಲು,
ಅವು ತನ್ನನವಗ್ರಹಿಸಿದವು.
ಒಂದು ರತ್ನ ಅಂಗವನವಗ್ರಹಿಸಿತ್ತು.
ಮತ್ತೊಂದು ರತ್ನ ಪ್ರಾಣವನವಗ್ರಹಿಸಿತ್ತು.
ಆ ರತ್ನಂಗಳ ಪ್ರಭೆ ತಾನಾದ ನಮ್ಮ ಗೊಹೇಶ್ವರನ ಶರಣ

ಸಿದ್ಧರಾಮಯ್ಯನ ನಿಲವಿಂಗೆ
ನಮೋ ನಮೋ ಎನುತಿರ್ದೆನಯ್ಯಾ ಚೆನ್ನಬಸವಣ್ಣಾ! ॥೫೭॥

ಇದಕ್ಕೆ ಚೆನ್ನಬಸವರಾಜದೇವರು ಪರಿಣಾಮಿಸಿ, ತಾವು ಮತ್ತು ಸಿದ್ಧರಾಮಯ್ಯದೇವರ ನಿಜಲಿಂಗೈಕ್ಯದ ಭೇದಮಂ ಕೊಂಡಾಡಿ ನಿರೂಪಿಸಿದ ಪ್ರಸ್ತಾವದ ವಚನ:

೬೬೧

ಅಹುದಹುದು. ಅಂಗಕ್ಕೆ ಲಿಂಗವನಱಿಸಬೇಕಲ್ಲದೆ,
ಲಿಂಗಕ್ಕೆ ಲಿಂಗವನಱಿಸಲುಂಟೆ?
ಪ್ರಾಣಕ್ಕೆ ಜ್ಞಾನವನಱಿಸಬೇಕಲ್ಲದೆ,
ಜ್ಞಾನಕ್ಕೆ ಜ್ಞಾನವನಱಿಸಲುಂಟೆ?
ಎರಡಾಗಿದ್ದುದನೊಂದು ಮಾಡಿಹೆನೆನಬಹುದಲ್ಲದೆ,
ಒಂದಾಗಿದ್ದುದನೆರಡ ಮಾಡಲಿಲ್ಲ.
ಕೂಡಲಚೆನ್ನಸಂಗಮದೇವರಲ್ಲಿ
ಸಿದ್ಧರಾಮಯ್ಯದೇವರ ಶ್ರೀಪಾದಕ್ಕೆ
ನಮೋ ನಮೋ ಎಂದು ಬದುಕಿದೆನು ಕಾಣಾ ಪ್ರಭುವೆ! ॥೫೮॥

ಈ ಹೀಂಗೆಂದು ಚೆನ್ನಬಸವರಾಜದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ಆ ಸಿದ್ಧರಾಮಯ್ಯದೇವರ ನಿಲವ ಕೊಂಡಾಡಿದ ಪ್ರಸ್ತಾವದ ವಚನ:

೬೬೨

ಪಂಚಭೂತ ತ್ರಿಗುಣವನು ಸಂಚರಿಸಿ,
ರವಿಶಶಿಯ ಅಂತು ಕೂಡದ
ರಜಬೀಜ ಬದ್ಧಬಂಧವಾಯಿತ್ತೋ!
ಸಂಗತಿ ಇಲ್ಲದವನಲ್ಲ, ಪವನಗತಿಯ ನಡೆವವನಲ್ಲ.
ಭೇದಿಸುತ್ತಿದ್ದಿತ್ತು ಲೋಕವೆಲ್ಲಾ ಆತನ!
ರಜಬೀಜವಿಲ್ಲದ ಬಯಲು ಬದ್ಧವಾಯಿತ್ತೆ?
ಇನ್ನೇನೆಂದುಪಮಿಸುವೆ [೧]ಗೊಹೇಶ್ವರಾ[೧], ಸಿದ್ಧರಾಮನ ನಾಮವನು?।೫೯।

ಮತ್ತಂ,

೬೬೩

ಕಾಮನ ಕೊಲುವಲ್ಲಿ, ಹೋಮವ ಸುಡುವಲ್ಲಿ,
ತ್ರಿಪುರಸಂಹಾರದ ಕೀಲನಱಿವಲ್ಲಿ,
ಆತನ ಯೋಗಿ ಎನಬೇಡ; ಆತನ ಭೋಗಿ ಎನಬೇಡ.
ಆತನೆ ಅಚ್ಚಲಿಂಗೈಕ್ಯನು.

೧–೧ ಗೊಗ್ಗೇಶ್ವರ(ಮೂ)

ಹಸಿವ ಮಱೆದಲ್ಲಿ, ವ್ಯಸನವಱತಲ್ಲಿ,
[1]ಗೊಹೇಶರ[1]ಲಿಂಗವು ಸಿದ್ಧರಾಮಯ್ಯದೇವರು ತಾನೆ. ॥೬೦॥

ಈ ಹೀಂಗೆಂದು ಪ್ರಭುದೇವರು ಸ್ತುತಿಸುತ್ತಿರಲು, ಚೆನ್ನಬಸವರಾಜದೇವರು ಮರಳಿ ಸಿದ್ಧರಾಮಯ್ಯದೇವರ ಕೊಂಡಾಡಿದ ಪ್ರಸ್ತಾವದ ವಚನ:

೬೬೪

ಕಾಯಕಲ್ಪಿತದಿಂದ ಭೊಗಾದಿಭೊಗಂಗಳ
ಭೋಗಿಸಬಲ್ಲಡೆ ದೇವಲೋಕವೆ ಸರ್ವತಃ
ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯ
ಇಂತೀ ಚತುರ್ವಿಧವನೆ ಮೀಱೆ,
ಶಿವನ ಶ್ರೀಪಾದದಲ್ಲಿ ಇರಬಲ್ಲರೆ ಕೈಲಾಸವೆ ಕಲ್ಯಾಣ.
ಲಿಂಗವೆ ತಾನು, ತಾನೆ ಲಿಂಗಾಂಗವಾಗಿರಬಲ್ಲ
ಅಸಮಯೋಗಿ ಸಿದ್ಧರಾಮಯ್ಯದೇವರ ಶ್ರೀಪಾದದಲ್ಲಿ
ಎಂದಿಪ್ಪೆ ಹೇಳಾ, ಪ್ರಭುವೇ ಕೂಡಲಚೆನ್ನಸಂಗಮದೇವಾ? ॥೬೧॥

[2]ಮತ್ತಂ[2],

೬೬೫

ಹಸು ಹಯನಾಯಿತ್ತು; ಹಸು ಮನೆಗೆ ಬಂದಿತ್ತು.
ಹಸುವ ಕಟ್ಟುವರೆಲ್ಲರ ಕಟ್ಟಿ,
ಕಟ್ಟ ಬಂದವರ ಒಕ್ಕಲಿಕ್ಕಿ[3] ತುಳಿಯಿತ್ತು.
ಕೂಡಲಚೆನ್ನಸಂಗಯ್ಯನಲ್ಲಿ,
ಹಸುವ ಕಟ್ಟಿದಾತ ನಮ್ಮ ಸಿದ್ಧರಾಮಯ್ಯದೇವರೊಬ್ಬರೆ. ॥೬೨॥

ಮತ್ತಂ,

೬೬೬

ಹರ ತನ್ನ ರೂಪ ತೋಱಲಿಕ್ಕೆ ಶ್ರೀಗುರುವಾದ.
ಆ ಗುರುವೆ ಕರಸ್ಥಲಕ್ಕೆ ಲಿಂಗವಾದ;
ಮನಸ್ಥಲಕ್ಕೆ ಮಂತ್ರವಾದ;
ತನುಸ್ಥಲಕ್ಕೆ ಪ್ರಸಾದವಾದ; ಪ್ರಾಣಸ್ಥಲಕ್ಕೆ ಜಂಗಮವಾದ;
ಕೂಡಲಚೆನ್ನಸಂಗಯ್ಯನಲ್ಲಿ
ಅಸಮಯೋಗಿ ಸಿದ್ಧರಾಮಯ್ಯದೇವರು ಒಬ್ಬರೆ ತಾವಾದರು. ॥೬೩॥

೬೬೭

ಕಬ್ಬುನಗಿದ ಗಾಣ ಬಲ್ಲುದೆ, ಹಾಲ ಸವಿಯ?
ಗಗನದಲಾಡುವ ಪಕ್ಷಿ ಬಲ್ಲುದೆ, ರವಿಯ ನಿಲವ?

೧–೧ ಗೊಗ್ಗೇಶ್ವರ(ಮೂ) ೨–೨ x (ಮೂ) ೩+ಯೆ(ಮು)

ಹಗರಣಕ್ಕೆ ಪೂಜಿಸುವವರು ಬಲ್ಲರೆ, ನಮ್ಮ ಶರಣರ ಸುಳುಹ?
ನಡುಮುಱಿದು ಗುಡುಗೂಱಿದರೇನು,
ಲಿಂಗದ ನಿಜವನಱಿಯದನ್ನಕ್ಕ?
ಸಾವನ್ನಕ್ಕ ಜಪವ ಮಾಡಿದರೇನು,
ಲಿಂಗದ ಪ್ರಾಣ ತನ್ನ ಪ್ರಾಣವ ಒಡಗೂಡದನ್ನಕ್ಕ?
ಇಂತಿವರೆಲ್ಲರೂ ಅಭ್ಯಾಸ ಶಕ್ತಿಗಱುಹಿಗರು.
ನಮ್ಮ ಕೂಡಲಚೆನ್ನಸಂಗಯ್ಯನಲ್ಲಿ
ಮಾಯಾಕೋಳಾಹಳ ಸಿದ್ಧರಾಮಯ್ಯದೇವರಿಗೆ
ಅಹೋ ರಾತ್ರಿ ನಮೋ ನಮೋ ಎಂದು
ಬದುಕಿದೆನು ಕಾಣಾ ಪ್ರಭುವೆ. ॥೬೪॥

ಈ ಹೀಂಗೆಂದು ಚೆನ್ನಬಸವರಾಜದೇವರು ಕೊಂಡಾಡುತ್ತಿರಲು, ಆ ಸಿದ್ಧರಾಮಯ್ಯದೇವರು ಅತ್ಯಂತ ಭೀತಾತುರದಿಂದ ಬಿನ್ನೈಸುವ ಪ್ರಸ್ತಾವದ ವಚನ:

೬೬೮

ಮಲತ್ರಯಂಗಳ ಕುದಿಯಲೀಯದೆ,
ಮನಸಿಜನ ಬಾಣಕ್ಕೆ ಗುಱಿಯಾಗಲೀಯದೆ,
ಎನ್ನ ತನ್ನಂತೆ ಮಾಡಿದನಯ್ಯಾ ಶ್ರೀಗುರು.
ಪದನಾಲ್ಕು ಮೀಱಿ ಭವಕ್ಕೆ ಹೇತುವಾಗಲೀಯದ ಕಾರಣ
ಸದ್ಯೋನ್ಮುಕ್ತನ ಮಾಡಿದನಯ್ಯಾ,
ಶ್ರೀಗುರುವೆ, ಪರಮಗುರುವೆ,
ಪರಿಭವಕ್ಕೆ ಬರಲೀಯದಂತೆ
ಎನ್ನ ನಿನ್ನವರೊಳಗೊಬ್ಬನೆಂದೆನಿಸಿದೆಯಲ್ಲಾ ಗುರುವೆ!
ಪರಮಗುರುವೆ, ಕಾಲನ ಕಮ್ಮಟಕ್ಕೆ ಗುಱಿಯಹ ಎನ್ನನು ತೆಗೆದು
ಗುರುಲಿಂಗಜಂಗಮ ತ್ರೈಲಿಂಗಕ್ಕೆ ಕಾರಣಿಕನ ಮಾಡಿದೆ
ಇನ್ನು ಭವಕ್ಕೆ ಬಾರೆನು, ನಿನ್ನವರಾದಂತೆ ಅಪ್ಪೆ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಎನ್ನ ಮೀಱಿದ ಪದವೊಂದೂ ಇಲ್ಲವಯ್ಯಾ! ॥೬೫॥

ಮತ್ತಂ,

೬೬೯

ರೂಪಿಂಗೆ ರೂಪು, ಜ್ಞಾನಕ್ಕೆ ಜ್ಞಾನ, ಪ್ರಾಣಕ್ಕೆ ಪ್ರಸಾದ,
ಲಿಂಗತ್ರಯವ ವೇಧೆಯಿಂದವೆ ತಂದು,
ಅವರವರ ಕರದಲ್ಲಿ ದೀಕ್ಷೆಯ ಮಾಡಿದನು ಚೆನ್ನಬಸವಣ್ಣ
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥೬೬॥

ಮತ್ತಂ,

೬೭೦

ಎಂದೋ? ಎನಗೆ ಶಿವಪದವೆಂದೋ?-ಎಂದು ಚಿಂತಿಸುವಂಗೆ
ಮುಂದೆ ತೋಱುತ್ತಿದೆ ಪರಮಪ್ರಸಾದದ ಬೀಡು!
ಆ ಬೀಡ ಕಂಡು ಶಿವಗಣಂಗಳ ನೆರವ ಮಾಡಿಕೊಂಡು,
ಪರಮಗುರು ಚೆನ್ನಬಸವಣ್ಣನ ಶ್ರೀಪಾದಾರವಿಂದವನಱಿದು,
ಅವರ ಕೃಪಾವಲೋಕನದಿಂದ
ನಿಮ್ಮ ಶ್ರೀಪಾದವನಱಿದೆ ಕಾಣಾ ಕಪಿಲಸಿದ್ಧಮಲ್ಲಿನಾಥಯ್ಯಾ. ॥೬೭॥

ಮತ್ತಂ,

೬೭೧

ಇನ್ನು ಜನನವು ಇಲ್ಲ, ಮುನ್ನವೇ ಸಂದಳಿದೆ.
ಮನ್ನಣೆಯಿಂದ ನೀ ಕಳುಹಿದಂತೆ ಉನ್ನತೋನ್ನತನಾದೆ.
ಚೆನ್ನಬಸವಣ್ಣನ ಕರುಣದಿಂ ನಿನ್ನ ರೂಪಾದೆ.
ಇನ್ನೆನಗೆ ಅರಿದುಂಟೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥೬೮॥

ಮತ್ತಂ,

೬೭೨

ಎನ್ನ ತನ್ನವನೆನಿಸಿ ಮನ್ನಿಸಿದ ಭಕ್ತಿಯೊಳು
ಸನ್ನುತನು ಆದೆನ್ನೈ ಸಕಲದೊಳಗೆ
ಬಿನ್ನಾಣದೇಹವನು ತನ್ನಂತೆ ಮಾಡಿದನು
ಚೆನ್ನಬಸವಣ್ಣನೈ ಶ್ರೀಮಲ್ಲಿಕಾರ್ಜುನಾ. ॥೬೯॥

ಈ ಹೀಂಗೆಂದು ಚೆನ್ನಬಸವರಾಜದೇವರಂ ಸ್ತುತಿಸಿ, ತಮ್ಮ ಲಿಂಗಾಂಗ ಸಮರಸಮಂ ಪ್ರಭುದೇವರಿಗೆ ಬಿನ್ನೈಸುವ ಪ್ರಸ್ತಾವದ ವಚನ:

೬೭೩

ನೆರೆದೆನು ನೆರೆದೆನು ಎಂಬಡೆ ನಾನೇನು ಎರವೆ?
ಶ್ರೀಗುರುಸ್ವಾಮಿ ಎನ್ನ ನಿನ್ನ, ನಿನ್ನ ಎನ್ನ ಕರಸ್ಥಲದಲ್ಲಿ ಸ್ಥಾಪ್ಯಗೊಳಿಸಿದ ಬಳಿಕ,
ಮಹಾಜ್ಯೋತಿರ್ಮಯದಲ್ಲಿ ತಮ ಉಂಟೆ?
ಕಪಿಲಸಿದ್ಧಮಲ್ಲಿಕಾರ್ಜುನನೆಂಬ
ಮಹಾಸಮುದ್ರವನೊಡಗೂಡಿದ ಬಳಿಕ,
ಬೇಱೆ ನಾನೊಂದು ನದಿ ಎನಲುಂಟೆ ಪ್ರಭುವೆ? ॥೭೦॥

ಮತ್ತಂ,

೬೭೪

ಕರಣಂಗಳ ಕಳೆದ ಇರವಿನ ಬ್ರಹ್ಮ ನಿಜದಲ್ಲಿ ನಿಂದಿತ್ತಯ್ಯಾ!
ಆತ್ಮ ಸಂಗ ಸಂಯೋಗದ ಇರವು
ನಿಮ್ಮಲ್ಲಿ ನಿಜವಾಯಿತ್ತಯ್ಯಾ! ಕಪಿಲಸಿದ್ಧಮಲ್ಲಿನಾಥಯ್ಯಾ,
ನಿಮ್ಮ ಚೆನ್ನಬಸವಣ್ಣನ ಕೃಪೆ
ನಿಮ್ಮಿಂದ ಸಾಧ್ಯವಾಯಿತಯ್ಯಾ ಪ್ರಭುವೆ! ॥೭೧॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಪ್ರಭುದೇವರು ತಮ್ಮ ಲಿಂಗಾಂಗಸಮರಸದ ಪರಿಣಾಮವ ಸಿದ್ಧರಾಮಯ್ಯದೇವರಿಂದ ಅಱಿದೆನೆಂದು ನಿರೂಪಿಸಿದ ಪ್ರಸ್ತಾವದ ವಚನ:

೬೭೫

ಲಿಂಗವನಱಿಯದೆ ಏನನಱಿದಡೆಯೂ ಫಲವಿಲ್ಲ.
ಲಿಂಗವನಱಿದ ಬಳಿಕ ಮತ್ತೇನನಱಿದಡೆಯೂ ಫಲವಿಲ್ಲ–
ಸರ್ವಕಾರಣ ಲಿಂಗವಾಗಿ.
ಲಿಂಗವನೆ ಅಱಿದಱಿದು, ಲಿಂಗಸಂಗವನೆ ಮಾಡುವೆ;
ಸಂಗಸುಖದೊಳೋಲಾಡುವೆ [1]ಗೊಹೇಶ್ವರಾ[1]! ॥೭೨॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಆ ಸಿದ್ಧರಾಮಯ್ಯದೇವರು ಪ್ರಭುದೇವರ ಸ್ತೋತ್ರಮಂ ಮಾಡಿದ ಪ್ರಸ್ತಾವದ ವಚನ:

೬೭೬

ಭವದ ಬೇರ ಹಱಿಯಲ್ಕೆ ಪ್ರಭುವಾಗಿ ಬಂದ.
ಮಲತ್ರಯಂಗಳ ಕೆಡಿಸಲ್ಕೆ ಪ್ರಭುವಾಗಿ ಬಂದ.
ಅಜ್ಞಾನಿಗಳಿಗೆ ಸುಜ್ಞಾನವ ತೋಱಲ್ಕೆ ಪ್ರಭುವಾಗಿ ಬಂದ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಎನ್ನ ಭವದ ಬೇರ ಹಱಿಯಲ್ಕೆ ಪ್ರಭುವಾಗಿ ಬಂದ! ॥೭೩॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಪ್ರಭುದೇವರ ಸ್ತುತಿಸುತ್ತಿರಲು, ಆ ಪ್ರಸ್ತಾವದಲ್ಲಿ ಚೆನ್ನಬಸವರಾಜದೇವರು ಸಿದ್ಧರಾಮಯ್ಯದೇವರ ಸ್ತೋತ್ರಮಂ ಮಾಡಿದ ಪ್ರಸ್ತಾವದ ವಚನ–ಪದಂಗಳು:

೬೭೭

ರಾಗ : ರಾಮಕ್ರೀ

ಬೀಜವಿಲ್ಲದ ಸಸಿಗೆ ಸೌಖ್ಯ ರಾಜಿಸುವ ಸುಗಂಧ ಒಡಲು
ತ್ರೈಜಗಂಗಳನಿಂಬುಗೊಂಡ ಲಿಂಗದೇಹಿ ಶರಣನು ।ಪಲ್ಲವಿ।

೧–೧ ಗೊಗ್ಗೇಶ್ವರ (ಮೂ)

ಆದಿಯಿಂದತತ್ತ್ವಲಾದನಾದಿಸಂಸಿದ್ಧನನು
ವೇದಂಗಳರಸಿ ಕಾಣದಾಗಮಕತ್ಯಧಿಕನಾ
ಸಾಧಕಾಂಗದೊಳಗೆಯ್ದೆ ಭೇದಿಸಿ ಪರತತ್ವದಿರವ
ದಾದಡದುವೆ ಲಿಂಗದಂಗ ಅಂಗಲಿಂಗ ಶರಣನು ॥೧॥

ಪರುಷಸೋಂಕಿನಿಂದ ಲೋಹ ಪರುಷವಾದುದೆಂಬ ಶಬ್ದ
ಸ್ಪರುಶ ರೂಪು ರಸವು ಗಂಧವೆರಸಿದರ್ಪಿತಂಗಳ
ಪರಶಿವನೊಳು ಬೆರಸಿ ಪರಮತತ್ತ್ವ ತುರಿಯವಾದ ಬಳಿಕ
ಶರಣಭರಿತಲಿಂಗವೋ ಲಿಂಗಭರಿತಶರಣನೋ ॥೨॥

ಅಂಗ ಲಿಂಗ ಸಂಗ ಸಂಚು ಹಿಂಗೆ ಕಂಗಳಂಗದಲ್ಲಿ
ಹಿಂಗದಾ ನೋಟ ಘೃತದ ನೆಳಲೊಳಿಪ್ಪ ಬಿಂಬವು
ಲಿಂಗವೇ ಶರಣಭರಿತ ಶರಣನೇ ಲಿಂಗಭರಿತ
ಅಭಂಗ ಕೂಡಲಚೆನ್ನಸಂಗ ನಿಮ್ಮ ಶರಣನು ॥೩॥

ಪದ ಸಹ ವಚನ: ॥೭೬॥

ಇಂತು ಚೆನ್ನಬಸವರಾಜದೇವರು ಸಿದ್ಧರಾಮಯ್ಯದೇವರ ಸ್ತುತಿಸುತ್ತಿರಲು, ಆ ಸಿದ್ಧರಾಮಯ್ಯದೇವರು ಚೆನ್ನಬಸವರಾಜದೇವರ ಕೊಂಡಾಡುವ ಪ್ರಸ್ತಾವದ ವಚನ:

೬೭೮

ಕರಂಗಳೆ ಮನೆಯಾಗಿ, ಕರಂಗಳೆ ಕರಂಗಳಾಗಿ
ಅರ್ಪಿಸುವ ಭೇದವನಾರು ಬಲ್ಲರಯ್ಯಾ, ಚೆನ್ನಬಸವಣ್ಣನಲ್ಲದೆ?
ತನು ಪ್ರಾಣ ಇಷ್ಟಲಿಂಗಸಂಬಂಧಿಯಾಗಿ,
ಇಂದ್ರಿಯಂಗಳೈದು ಮುಖಂಗಳಾಗಿ
ಅರ್ಪಿಸುವ ಭೇದವನಾರು ಬಲ್ಲರಯ್ಯಾ, ಚೆನ್ನಬಸವಣ್ಣನಲ್ಲದೆ?
ಆನಂದಸ್ಥಾನದಲ್ಲಿ ಅನುಮಿಷಾಕ್ಷರದ ಸಂಯೋಗ.
ಅರ್ಪಣದ ಭೇದವ ಕಪಿಲಸಿದ್ಧಮಲ್ಲಿಕಾರ್ಜುನಯ್ಯನಲ್ಲಿ
ಚೆನ್ನಬಸವಣ್ಣ ಬಲ್ಲ; ಮಿಕ್ಕಿನವರಿಗೆ ಸಾಮಾನ್ಯವೆಂಬೆನೆ? ॥೭೭॥

ಮತ್ತಂ,

೬೭೯

ಭಕ್ತಿವಿಡಿದು ಭಕ್ತನಾದ ಪ್ರಸಾದಿ.
ಮೋಕ್ಷವಿಡಿದು, ಧೈರ್ಯವಿಡಿದು,
ಆ ಭಕ್ತಂಗೆ ಮಾಹೇಶ್ವರನಾದ ಪ್ರಸಾದಿ.

ಕಾರಣವಿಡಿದು, ಅವಧಾನ ತಪ್ಪದೆ,
ಆ ಭಕ್ತಂಗೆ ಪ್ರಸಾದಿಯಾದ ಪ್ರಸಾದಿ.
ಕರ್ಮರಹಿತನಾಗಿ, ಕಾಲಕಲ್ಪಿತವಿಲ್ಲದೆ,
ಆ ಭಕ್ತಂಗೆ ಪ್ರಾಣಲಿಂಗಿಯಾದ ಪ್ರಸಾದಿ.
ಪತಿಭಕ್ತಿವಿಡಿದು, ಧರ್ಮಾರ್ಥ ಕಾಮ ಮೋಕ್ಷಂಗಳಾಸೆಯ
ನಿವೃತ್ತಿಯಂ ಮಾಡಿದ ಆ ಭಕ್ತಂಗೆ ಶರಣನಾದ ಪ್ರಸಾದಿ.
ಉಭಯ ಸಮರಸ ಏಕವೆಂದು ತಿಳಿದು,
ಉಭಯಭಾವ ಉರಿ ಕರ್ಪುರ ಸಂಯೋಗವಾದ
ಆ ಭಕ್ತಂಗೈಕ್ಯನಾದ ಪ್ರಸಾದಿ.
ನಮ್ಮ ಕಪಿಲಸಿದ್ಧಮಲ್ಲಿನಾಥನಲ್ಲಿ
ಸರ್ವಕ್ಕೆ ಚೈತನ್ಯವಾದ ನಮ್ಮ ಚೆನ್ನಬಸವಣ್ಣನೆಂಬ ಅಚ್ಚಪ್ರಸಾದಿ. ॥೭೮॥

ಇಂತು ಸಿದ್ಧರಾಮಯ್ಯದೇವರು ಚೆನ್ನಬಸವರಾಜದೇವರ ಸ್ತೋತ್ರಮಂ ಮಾಡುತ್ತಿರಲು, ಪ್ರಭುದೇವರು ಆ ಸಿದ್ಧರಾಮಯ್ಯದೇವರಿಂದ ಮಡಿವಾಳನೆಂಬ ಪರಬ್ರಹ್ಮವ ಕಂಡು ಒಡವೆರಸಿ ನಿರವಯಲಾದೆನೆಂದು ನಿರೂಪಿಸುವ ವಚನ:

೬೮೦

ಹಲವು ಮಕ್ಕಳ ತಾಯಂತೆ ಹೇಸದವರನಾರೈದ
ತನುಸಮರ್ಥವು ನಿಮಗಲ್ಲದೆ ಇನ್ನಾರಿಗೆ ಅಳವಡುವುದು?
ಮುನ್ನಾರಿಗೆ ಅಳವಡುವುದು?
ಇನ್ನು ಎನ್ನಳವೆ ನಿಮ್ಮುವನು ತಿಳಿಯಲು?
ಮುನ್ನಿನ ಸುಕೃತ ಉಂಟಾಗಿ
ನಿಮ್ಮ ಪಾದ ದೊರೆಕೊಂಡಿತ್ತು.
ಇನ್ನು ನಮ್ಮನಿಳಿಯಬಿಡದೆ,
ಎನ್ನುವನು ಇವನೆಂದು ವಿವರಿಸಿ,
ಎನ್ನ ನಿನ್ನತ್ತ ತೆಗೆ ಕರುಣಿಸಿ.
ಎನ್ನ ಮಾತಾಪಿತ [1]ಗೊಹೇಶ್ವರಾ[1],
ನಿಮ್ಮ ಶರಣ ಮಡಿವಾಳ ಮಾಚಯ್ಯನಿಂದ ಬಯಲಾದೆನು,
ಮುಕ್ತನಾದೆನು ನಿಮ್ಮ ಕರುಣದಿಂದ! ॥೭೯॥

ಇದಕ್ಕೆ ಮಡಿವಾಳಮಾಚಿತಂದೆಗಳು ಬಸವಣ್ಣ ಚೆನ್ನಬಸವಣ್ಣ ಪ್ರಭುದೇವರಿಂದ ಬದುಕಿದೆನೆಂದು ಬಿನ್ನೈಸುವ ಪ್ರಸ್ತಾವದ ವಚನ:

೧-೧ ಗೊಗ್ಗೇಶ್ವರ (ಮೂ)

೬೮೧

ಬಸವಣ್ಣಾ ಎಂದಡೆ, ಚೆನ್ನಬಸವಣ್ಣಾ ಎಂದಡೆ,
ಪ್ರಭುದೇವಾ ಎಂದಡೆ, ಮಹಾದೇವಾ ಎಂದಡೆ,
ಮಹಾಸ್ಥಾನದಲ್ಲಿರ್ದು ಕರೆದರೆ
ಓ ಎನುತಿರ್ದೆ ಕಾಣಾ ಕಲಿದೇವರದೇವಾ. ॥೮೦॥

ಇದಕ್ಕೆ ಚೆನ್ನಬಸವರಾಜದೇವರು ನಿರೂಪಿಸಿದ ಪ್ರಸ್ತಾವದ ವಚನ:

೬೮೨

ಲಿಕಾರವೆ ಶೂನ್ಯ, ಬಿಂದುವೆ ಲೀಲೆ, ಗಕಾರವೆ ಚಿತ್ತು,
ಈ ತ್ರಿವಿಧದೊಳಗದೆ ಲಿಂಗವೆಂಬ ಸಕೀಲ,
ಇದಱ ಸಂಚವನಾವಾತ ಬಲ್ಲ, ಆತನೆ ಲಿಂಗಸಂಗಿ,
ಲಿಂಗಾನುಭಾವಿಗಳ ಶ್ರೀಚರಣಕ್ಕೆ
ನಮೋ ನಮೋ ಎಂಬೆ ಕೂಡಲಚೆನ್ನಸಂಗಮದೇವಾ. ॥೮೧॥

ಇದಕ್ಕೆ ಸಿದ್ಧರಾಮಯ್ಯದೇವರ ವಚನ:

೬೮೩

ಮೂಱು ಲಿಂಗಕ್ಕೆ ಮೂಲಮಂತ್ರವಾದಾತ ಗುರು.
ಮೂಱು ವಿದ್ಯಕ್ಕೆ ವಿದ್ಯಾರೂಪಾದಾತ ಗುರು.
ಹೊದ್ದಿದ ಪ್ರಪಂಚನತಿಗಳೆದು ರೂಪೆಯಾ ರೂಪಾದಾತ ಗುರು.
ಲೋಕತ್ರಯಕ್ಕೆ ಕಪಿಲಸಿದ್ಧಮಲ್ಲಿಕಾರ್ಜುನಯ್ಯನೆ ಗುರು. ॥೮೨॥

೬೮೪

ಐದು ಬ್ರಹ್ಮದಲ್ಲಿ ಅಯ್ಯಾ,
ನೀನು ಅತಿಶಯ ಜ್ಯೋತಿರ್ಮಯನು.
ಆನಂದ ಸ್ಥಾನದಲ್ಲಿ ಅಯ್ಯಾ,
ನೀನು ಅತಿಶಯ ನಿತ್ಯಮಯನು,
ಬಾಹ್ಯಭ್ಯಂತರದಲ್ಲಿ ಪರಿಪೂರ್ಣನು.
ನಿನ್ನ ಆಧಿಕ್ಯವನಱಿಯಲ್ಕೆ ನಿಗಮಕ್ಕಭೇದ್ಯ.
ಗುರುವಿನ ಕರುಣದಿಂದ ಎನ್ನ ಕರಸ್ಥಲದಲ್ಲಿ ಚುಳುಕಾದೆ,
ಶಿವನೇ ಮಹಾಲಿಂಗ ಕಪಿಲಸಿದ್ಧಮಲ್ಲಿಕಾರ್ಜುನಾ. ॥೮೩॥

ಮತ್ತಂ,

೬೮೫

ಭೇದಿಸಬಾರದೆ ಇಪ್ಪ ಅಭೇದ್ಯ ಶಿವನೇ,
ನಿನ್ನ ಭೇದಿಸಿ ತಂದು ಕೊಟ್ಟನೆನ್ನಯ ಗುರು.
ಇನ್ನು ನಾ ನಿನ್ನ ಬಿಡುವೆನೆ? ಬಿಡೆ ಬಿಡೆ,

ಮಚ್ಚಿದೆ ಪಾದೋಕವ, ನಚ್ಚಿದೆ ಪ್ರಸಾದವ,
ಗುರುವೇ ಕಪಿಲಸಿದ್ಧಮಲ್ಲಿಕಾರ್ಜುನಾ. ॥೮೪॥

ಇದಕ್ಕೆ ಬಸವರಾಜದೇವರು ಸಿದ್ಧರಾಮಯ್ಯದೇವರ ಮಹಾತ್ಮೆಯಂ ಕೊಂಡಾಡಿದ ಪ್ರಸ್ತಾವದ ವಚನ:

೬೮೬

ಅಡಿಗಡಿಗೆ ಸ್ಥಾನನಿಧಿ, ಅಡಿಗಡಿಗೆ ದಿವ್ಯಕ್ಷೇತ್ರ.
ಅಡಿಗಡಿಗೆ ನಿಧಿಯು ನಿಧಾನ ನೋಡಾ!
ಆತನ ಇರವೆ ವಾರಣಾಸಿ, ಅವಿಮುಕ್ತಿಕ್ಷೇತ್ರ,
–ಕೂಡಲಸಂಗನ ಶರಣ ಸ್ವತಂತ್ರನಾಗಿ. ॥೮೫॥

ಇದಕ್ಕೆ ಸಿದ್ಧರಾಮಯ್ಯದೇವರು ಬಸವರಾಜದೇವರ ಕೊಂಡಾಡಿದ ಪ್ರಸ್ತಾವದ ವಚನ:

೬೮೭

ಸೀಮೆ ಸಂಬಂಧಕ್ಕೆ ಮೀಱಿಪ್ಪ ಮಂತ್ರಕ್ಕೆ
ರಾಜಮಂತ್ರವು ತಾನು ಪಂಚಾಕ್ಷರಿ.
ಪಂಚಾಕ್ಷರಿಯ ಗುಣದ ಬಸವಾಕ್ಷರತ್ರಯದ
ಧ್ಯಾನಮೌನದ ಗುಣದ ಸತ್ತ್ವವಿಡಿದು
ಆನಂದ ತ್ರೈಲಿಂಗ ಮೂಲಮಂತ್ರಕ್ಕೀಗ
ಬಸವಾಕ್ಷರತ್ರಯವು ಮಾತೆಯಯ್ಯಾ
ಕಪಿಲಸಿದ್ಧಮಲ್ಲಿಕಾರ್ಜುನಾ. ॥೮೬॥

ಮತ್ತಂ,

೬೮೮

ದೆಸೆದಿಗ್ವಳಯದಲ್ಲಿ ಪಸರಿಸಿ ಪರ್ಬಿತ್ತು ನಿನ್ನ ನಾಮ.
ವಸುಧೆಯೆಲ್ಲವು ಹೆಣ್ಣು, ನೀನೆ ಗಂಡು.
ಬಸವಾಕ್ಷರತ್ರಯದಿಂದುದ್ಭವಿಸಿ
ಸಕಲ ಬ್ರಹ್ಮಾಂಡಂಗಳಾದವ್ವೆ ಕಪಿಲಸಿದ್ಧಮಲ್ಲಿಕಾರ್ಜುನಾ! ॥೮೭॥

ಮತ್ತಂ,

೬೮೯

ಮುನ್ನ ಮುನ್ನ, ಶಶಿರವಿಗಳಿಲ್ಲದ ಮುನ್ನ,
ಬ್ರಹ್ಮ ವಿಷ್ಣ್ವಾದಿಗಳುದ್ಭವಿಸದ ಮುನ್ನ ಮುನ್ನ,
ಮೂರ್ತಿಗಳೆಂಟೂ ಒಂದಾಗದ ಮುನ್ನ,
ತನುಮಧ್ಯವಳಯದಲ್ಲಿ ಸಕಲಬ್ರಹ್ಮಾಂಡ
ಜಲಮಯವಾಗಿಪ್ಪ ಶಿವಭಕ್ತಿ ಕಾರಣ ಬಸವನವಗ್ರಹಿಸಿಪ್ಪಲ್ಲಿ,

ಅಂದೆತ್ತಲಿದ್ದೆ? ಅದ ನೀನೆ ಬಲ್ಲೆಯಯ್ಯಾ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯ ಕುಱುಹುಗೆಟ್ಟ ನಿಶ್ಚಿಂತನು. ॥೮೮॥

ಮತ್ತಂ,

೬೯೦

ಇಂದ್ರಾದಿ ದೇವತಾ ಸಂಕುಳಕ್ಕೆ
ಅಂತಪ್ಪ ಪದವನಿತ್ತಾತ ಬಸವಣ್ಣನಯ್ಯಾ.
ಬ್ರಹ್ಮ ವಿಷ್ಣು ಮೊದಲಾದ ದೇವತಾ ಮೊತ್ತಕ್ಕೆ
ಅಂತಪ್ಪ ಪದವನಿತ್ತಾತ ಬಸವಣ್ಣನಯ್ಯಾ.
ಶಿವಲಿಂಗಭಕ್ತರಿಗೆ ಚರಲಿಂಗಧಾರಣೆಯ
ಪರಿಯಾಯದಿಂದಲೊರೆದಾತ ಗುರು.
ಇಹಲೋಕ ಪರಲೋಕದನುಮಿಷದ
ಸುದ್ದಿಯನಱುಪಿದಾತ ಗುರು ಬಸವಣ್ಣನಯ್ಯಾ
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ. ॥೮೯॥

ಮತ್ತಂ,

೬೯೧

ಪ್ರಸಾದವೈದಾಱ ಪಾದೋದಕವೆರಡೈದ
ಆದಿ ಅಕ್ಷರದಲ್ಲಿ ದೀಕ್ಷಾತ್ರಯ.
ನಾದದಿಂದವೆ ತೂಗಿ ಬಿಂದು ಸಮನಿಸದೀಗ
ಆಧಾರಸ್ಥಾನಕ್ಕೆ ಅತ್ಯತಿಷ್ಠತ್
ಮೂಲಸ್ಥಾನದಲಿರ್ದ ಮುನ್ನೂಱು ಕಮಲಕ್ಕೆ
ಆದಿಭ್ರಮರನು ಬಸವ ಕಪಿಲಸಿದ್ಧಮಲ್ಲಿಕಾರ್ಜುನಾ. ॥೯೦॥

೬೯೨

ಅಣ್ಣನ ನೋಡಿರೇ ಲೋಕಕ್ಕೆ!
ಜಗದ ಕಣ್ಣ ಮದವ ಕಳೆದನು
ಮುಕ್ಕಣ್ಣನಿಪ್ಪೆಡೆಯ ತೋಱಿದ.
ಅಣ್ಣ ಬಸವಣ್ಣ ವಾಙ್ಮನಕ್ಕಗೋಚರ.
ಮುಕ್ಕಣ್ಣನವತಾರಂಗಳನು ನಾಟಕವೆಂದಱಿದು ಮೆಱೆದ.
ಸತ್ಯಶುದ್ಧ ನಿರ್ಮಳ ಕೈವಲ್ಯ ವಾಙ್ಮನಕ್ಕಗೋಚರ.
ಸತ್ಯಶುದ್ಧ ಬಸವಣ್ಣ.
ಅಣ್ಣಾ, ನಿಮ್ಮಿಂದ ಶುದ್ಧವ ಕಂಡೆ; ಸಿದ್ಧವ ಕಂಡೆ; ಪ್ರಸಿದ್ಧವ ಕಂಡೆ.
ಆಱಱಲ್ಲಿ ಆಂದೋಳವಾದೆ, ಆಱು ವ್ರತದಲ್ಲಿ ನಿಪುಣನಾದೆ.
ನೀನೊಂದು ಮೂಱಾಗಿ, ಮೂಱೊಂದಾರಾಗಿ ತೋಱಿದ

ಗುಣವಿಂತುಟಯ್ಯಾ ಬಸವಣ್ಣಾ.
ಇನ್ನೆನಗಾಧಿಕ್ಯವಪ್ಪುದೊಂದು ಇಲ್ಲ.
ನಾನಿನ್ನುರವಣಿಸಿ ಹರಿವೆ; ಹರಿಹರಿದು ಭರದಿಂ ಗೆಲುವೆ,
ತತ್ತ್ವ ಮೂವತ್ತಾಱಱಿಂ ಮೇಲೆ ಒಪ್ಪಿಪ್ಪ ತತ್ತ್ವಮಸಿಯನ್ನೈದುವೆ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಎನಗರಿದಿಪ್ಪುದಿಲ್ಲ ಕಾಣಾ ಬಸವನ ಪ್ರಸಾದದಿಂದ! ॥೯೧॥

೬೯೩

ಲೋಕಲೌಕಿಕಂಗಳೆಲ್ಲಾ ನೀವು ಕೇಳಿರೆ.
ಏಕೈಕರುದ್ರನ ಅವತಾರವನಱಿದೆವೆಂಬಿರಿ.
ನೋಡಿ ನಚ್ಚಿರೆ ಶಿವನ, ಶಿವನು ಬಸವಣ್ಣನಾದ ನೋಡಿರೆ!
ಬಸವಣ್ಣ ಗುರುವಾದ, ಬಸವಣ್ಣ ಲಿಂಗವಾದ, ಬಸವಣ್ಣ ಚರವಾದ.
ಬಸವಣ್ಣ ಪರಿಣಾಮ ಪ್ರಸನ್ನ ಪರವಾದ.
ಬಸವಣ್ಣ ಮೂಲತ್ರಯವಾದ; ಬಸವಣ್ಣ ಭಕ್ತಿ ಎರಡು ತ್ರಯವಾದ.
ಬಸವಣ್ಣ ಆಱಾಱಱಿಂ ಮೇಲೆ ತೋಱಿದ.
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ,
ಬಸವಣ್ಣನ ಪ್ರಸಾದವ ಕೊಂಡು ಭವಂ ನಾಸ್ತಿಯಾದೆ. ॥೯೨॥

ಮತ್ತಂ,

೬೯೪

ಸೀಮೆಯ ಮೀಱಿದ ಸಂಬಂಧನೆ,
ಸಂಬಂಧದಲ್ಲಿ ಸಮನಿಸದ ಸಂಯೋಗನೆ,
ಎನ್ನ ಸಲಹುವ ಗುರು ಲಿಂಗ ಜಂಗಮ
ಪಾದೋದಕ ಪ್ರಸಾದಕ್ಕೆ ಅರ್ಹನ ಮಾಡಿದೆ.
ಗುರುವೇ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನೀ ಬಸವನಾಗಿ ಬಂದು ನಿನ್ನವರಿಗೆ ಯೋಗ್ಯನ ಮಾಡಿ
ಭವವ ತಪ್ಪಿಸಿದೆ. ॥೯೩॥

ಮತ್ತಂ,

೬೯೫

ಗುರುವಾಗಿ ಬಂದೆನಗೆ ದೀಕ್ಷೆಯ ಮಾಡಿದಿರಿ.
ಲಿಂಗವಾಗಿ ಬಂದೆನ್ನ ಮನದ ಮಲಿನವ ಕಳೆದಿರಿ.
ಜಂಗಮವಾಗಿ ಬಂದೆನ್ನ [೧]ಪ್ರಪಂಚಕ[೧] ತನುವಂ ಕಳೆದು,
ಪರಮಸೀಮೆಯ ಮಾಡಿದಿರಿ.

೧–೧ ಪ್ರಪಂಚವ (ಮೂ)

ಇಂತಿವೆಲ್ಲವೂ ಬಸವಣ್ಣನಾಗಿ,
ಎನಗೆ ಪ್ರಸಾದವ ನೀಡಿ ಸಲುಹಿದ.
ಕಪಿಲಸಿದ್ಧಮಲ್ಲಿಕಾರ್ಜುನಾ ಇನ್ನೆನಗತಿಶಯವೇನೂ ಇಲ್ಲ. ॥೯೪॥

ಮತ್ತಂ,

೬೯೬

ಅರ್ಪಿತ ಅವಧಾನಮುಖಂಗಳು ಎಲ್ಲರಿಂಗೆ ಸುಲಭವೆ,
ಅನಾದಿ ಸಂಸಿದ್ಧವಾಗಿ ಬಂದ ಬಸವಣ್ಣಂಗಲ್ಲದೆ?
ತ್ರೈಲಿಂಗಮೂಲಕ್ಕೆ ಮಂತ್ರಾದಿರೂಪು ಬಸವಣ್ಣ.
ತ್ರೈಲಿಂಗ ಪ್ರಸಾದಕ್ಕೆ ಅರ್ಹ ಬಸವಣ್ಣ.
ಮೂಜುಲಿಂಗ ಒಂದಾದ ಮೂರ್ತಿ ಬಸವಣ್ಣ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನೀ ಸಾಕ್ಷಿಯಾಗಿ ಬಸವನ ನೆನೆವವರು ನೀನಹರು. ॥೯೫॥

ಮತ್ತಂ,

೬೯೭

ಪ್ರಥಮನಾಮಕ್ಕೀಗ ಬಸವಾಕ್ಷರವೆ ಬೀಜ.
ಗುರುನಾಮಮೂಲಕ್ಕೆ ಅಕ್ಷರಾಂಕ ಬಸವಣ್ಣ.
ಬಸವಣ್ಣ ಬಸವಣ್ಣ ಬಸವಣ್ಣ ಎಂದೀಗ
ದೆಸೆಗೆಟ್ಟೆ ಗುರುವೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥೯೬॥

ಮತ್ತಂ,

೬೯೮

ಆದಿಯಾಧಾರಕ್ಕೆ ಮೂಲ ತಾ ಬಸವಣ್ಣ
ಹೋದನ್ಯೆ ಭಕ್ತಿಯೊಳಗೆ ಹೊಲಬುದಪ್ಪಿ.
ಊಜಿನಜೆಯದ ಗ್ರಾಮ ಹೊಲಬುದಪ್ಪಿದ ಸೀಮೆ
ಆತನಾನತದಿಂದ ನೀನಾದೆನ್ಯೆ
ಬಸವಣ್ಣ ಬಸವಣ್ಣ ಬಸವಣ್ಣ ಎಂಬ ನಾಮಾಕ್ಷರದೊಳಗೆ
ದೆಸೆಗೆಟ್ಟೆನ್ಯೆ ಗುರುವೆ ಕಪಿಲಸಿದ್ಧಮಲ್ಲಿಕಾರ್ಜುನಾ. ॥೯೭॥

ಇಂತು ಸಿದ್ಧರಾಮಯ್ಯದೇವರು ಬಸವರಾಜದೇವರ ಕೊಂಡಾಡುತ್ತಿರಲು, ಇದಕ್ಕೆ ಚೆನ್ನಬಸವರಾಜದೇವರು ಸಿದ್ಧರಾಮಯ್ಯದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳ ಅನುಭಾವಸಂಪರ್ಕದಿಂದ ತ್ರಿವಿಧವು ಸಾಧ್ಯವಾಯಿತ್ತೆಂದು ನಿರೂಪಿಸಿದ ಪ್ರಸ್ತಾವದ ವಚನ:

೬೯೯

ಅನಂತಕಾಲ ಹೋಗಿ ತರುಮರಾದಿಗಳಲ್ಲಿ ತಪವಿರುವದನು,
ಒಂದುದಿನ ಗುರುಕರುಣಸೇವೆ ಸಾಲದೆ ಅಯ್ಯಾ?

ಅನಂತಕಾಲ ಗುರುಚರಣಸೇವೆಯ ಮಾಡುವುದನು,
ಒಂದುದಿನ ಲಿಂಗಪೂಜೆ ಸಾಲದೆ ಅಯ್ಯಾ?
ಅನಂತಕಾಲ ಲಿಂಗಪೂಜೆಯ ಮಾಡವುದನು,
ಒಂದು ದಿನ ಜಂಗಮತೃಪ್ತಿ ಸಾಲದೆ ಅಯ್ಯಾ?
ಅನಂತಕಾಲ ಜಂಗಮತೃಪ್ತಿ ಮಾಡುವುದನು,
ಒಂದು ನಿಮಿಷ ನಿಮ್ಮ ಶರಣರ ಅನುಭಾವ ಸಾಲದೆ
ಕೂಡಲಚೆನ್ನಸಂಗಮದೇವಾ? ॥೯೮॥

ಇದಕ್ಕೆ ಸಿದ್ಧರಾಮಯ್ಯದೇವರು ಚೆನ್ನಬಸವಣ್ಣ ಮುಖ್ಯವಾದ ಅಸಂಖ್ಯಾತ ಮಹಾಗಣಂಗಳಿಂದ ಸರ್ವವೂ ಸಾಧ್ಯವಾಯಿತ್ತೆಂದು ಬಿನ್ನೈಸುವ ಪ್ರಸ್ತಾವದ ವಚನ:

೭೦೦

ಶುದ್ಧ ಸಿದ್ಧ ಪ್ರಸಿದ್ಧದ ನೆಲೆಯನಱಿದೆಹೆನೆಂದು
ತೊಳಲಿ ಬಂದೆ ಗಿರಿಗಹ್ವರದೊಳಗೆ.
ಕಂಡೆ ಕಾಣೆನೆಂಬ ಸಂಶಯವಾಯಿತ್ತು.
ಅದೇನು ಕಾರಣ?
ನಿನ್ನವರ ಗಣಸಮೂಹಕ್ಕೆ ತಾತ್ಪರ್ಯವನೊಲ್ಲರಾಗಿ,
ನೀನು ಸದ್ಭಕ್ತದೇಹಿಕನಾಗಿ,
ಸದ್ಭಕ್ತರಲ್ಲಿ ಒಚ್ಚತವೋಗಿ ಇಪ್ಪೆಯಾಗಿ.
ಇಪ್ಪಾ ಗಿರಿಗಹ್ವರದಲ್ಲಿ
ಗುರುವಿನ ಕರುಣದಿಂದ ಕಂಡೆ ನೀನಿಪ್ಪ ನೆಲೆಯ.
ಶುದ್ಧವ ಗುರುವಿನಲ್ಲಿ, ಸಿದ್ಧವ ಲಿಂಗದಲ್ಲಿ,
ಪ್ರಸಿದ್ಧವ ಜಂಗಮದಲ್ಲಿ ಕಂಡೆ.
ಅಱಿದೆ, ನೆಚ್ಚಿದೆ, ಮಚ್ಚಿದೆ;
ಎನ್ನ ಸರ್ವ ಸ್ವಯವನೊಚ್ಚತಗೊಟ್ಟೆ.
ನಿನ್ನ ಗಣಸಮೂಹಕ್ಕೆ ಪ್ರಾಪ್ತನಾದೆ.
ನಿನ್ನ ಭಕ್ತರ ಸಲುಗೆಗೆ ಸಂದೆ,
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ ತಂದೆ! ॥೯೯॥

ಮತ್ತಂ,

೭೦೧

'ಸೋಹಂ' ನೀನೆ ಎಲೆ ಅಯ್ಯಾ.
'ಕೋಹಂ' ತತ್ತ್ವ ತೂರ್ಯಾರ್ಥವೂ ನೀನೆ ಅಯ್ಯಾ.
ನಾಹಂ ನಾಹಂ ನೀನೆ ಅಯ್ಯಾ.
ಆನೆಂಬುದೊಂದು ಭ್ರಾಂತುಂಟೆ?

ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಗುರುವಿನ ಕೈಯಲು ನಾನು ಸತ್ತು ಹುಟ್ಟಿದ ಬಳಿಕ,
ಆನು ನೀನೆಂಬ ಸಂದಳಿದೆ. ॥೧೦೦॥

ಇದಕ್ಕೆ ಪ್ರಭುದೇವರು ಪರಮಹರುಷವನೈದಿ ನಿರೂಪಿಸಿದ ಪ್ರಸ್ತಾವದ ವಚನ:

೭೦೨

ಪರಿಣಾಮದೊಳಗೆ ಮನದ ಪರಿಣಾಮವೆ ಚೆಲುವ!
ಸಂಗದೊಳಗೆ ಶರಣರ ಸಂಗವೆ ಚೆಲುವ!
ಕಾಯಗೊಂಡು ಹುಟ್ಟಿದ ಮೂಢರೆಲ್ಲಾ
ಸಾಯದ ಸಂಚವನಱಿವುದೆ ಚೆಲುವ, [1]ಗೊಹೇಶ್ವರಾ[1]! ॥೧೦೧॥

ಇದಕ್ಕೆ ಸಿದ್ಧರಾಮಯ್ಯದೇವರು ಹರುಷಂದಳೆದು ಚೆನ್ನಬಸವರಾಜದೇವರೊಡನೆ ಪ್ರಭುದೇವರ ಸ್ತೋತ್ರಮಂ ಮಾಡುವ ಪ್ರಸ್ತಾವದ ವಚನ:

೭೦೩

ಅಂಗಯ್ಯ ನೋಟದೊಳು ಕಂಗಳು ನಟ್ಟು
ಕಂಗಳ ತೇಜ ಹಿಂಗದು.
ಲಿಂಗಪ್ರಭೆಯೊಳಗೆ ಅಂಗವೆಲ್ಲಾ ಲಿಂಗಲೀಯವಾಗಿ,
ಸಂಗನಿಸ್ಸಂಗವೆಂಬ ದಂದುಗವ ಹಱಿದು,
ಹಿಂದುಮುಂದೆಂಬ ಭಾವವಳಿದು
ನಿಂದ ನಿಜದ ನಿರಾಳದಲ್ಲಿ ಪ್ರಾಣ ಸಮರತಿಯಾಗಿ,
ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಪ್ರಭುದೇವರ ಪಾದಕ್ಕೆ
ನಮೋ ನಮೋ ಎಂದು ಬದುಕಿದೆನು ಕಾಣಾ ಚೆನ್ನಬಸವಣ್ಣಾ! ॥೧೦೨॥

ಇದಕ್ಕೆ ಆ ಚೆನ್ನಬಸವರಾಜದೇವರು ಸಿದ್ಧರಾಮಯ್ಯದೇವರೊಡನೆ ಪ್ರಭುದೇವರ ಸ್ತೋತ್ರಮಂ ಮಾಡುವ ಪ್ರಸ್ತಾವದ ವಚನ:

೭೦೪

ಕಾಯವೆಂಬ ಕನ್ನಡವಿಲ್ಲ–ಪ್ರಾಣವಿಲ್ಲಾಗಿ.
ಮನವೆಂಬ ನೆನಹಿಲ್ಲ–ಅನುಭಾವವಿಲ್ಲಾಗಿ.
ಅಱಿವೆಂಬ ಕುಱುಹಿಲ್ಲ_ಪ್ರತಿಯಿಲ್ಲಾಗಿ,
ಕೂಡಲಚೆನ್ನಸಂಗಮದೇವರಲ್ಲಿ ಪ್ರಭುದೇವರ ಪಾದಕ್ಕೆ
ನಮೋ ನಮೋ ಎಂದು ಬದುಕಿದೆನು
ಕಾಣಾ ಸಿದ್ಧರಾಮಯ್ಯಾ! ॥೧೦೩॥

೧–೧ ಗೊಗ್ಗೇಶ್ವರ (ಮೂ)

ಇದಕ್ಕೆ ಪ್ರಭುದೇವರು ಚಿಕ್ಕದಣ್ಣಾಯಕರ ಸ್ತೋತ್ರಮಂ ಮಾಡುವ ಪ್ರಸ್ತಾವದ ವಚನ:

೭೦೫

ಗಗನ ಪವನದ ಮೇಲೆ ಉದಯ ಮುಖದನುಭಾವ
ಸದಮದಗಜವ ನಿಲಿಸುವ ಮಾವತಿಗ ಬಂದ.
ಅಷ್ಟದಳಕಮಲದೊಳು ಸೃಷ್ಟಿಯಂಕುರ ಭಜನೆ.
ಮೆಟ್ಟಿ ನಿಂದಾತ ಪರಮಯೋಗಿಯಾಗದೆ ಮಾಣ.
ಬಯಲ ಬಣ್ಣವ ತುಂಬಿ ನೆಳಲ ಶೃಂಗಾರವ ಮಾಡಿದ
ಗೊಹೇಶ್ವರನ ಶರಣ ಚೆನ್ನಬಸವಣ್ಣಂಗೆ ಶರಣೆನುತಿರ್ದೆನು. ॥೧೦೪॥

ಈ ಹೀಂಗೆಂದು ಪ್ರಭುದೇವರು ಚಿಕ್ಕದಣ್ಣಾಯಕರ ಸ್ತೋತ್ರಮಂ ಮಾಡುತ್ತಿರಲು, ಸಿದ್ಧರಾಮಯ್ಯದೇವರು ತಾವು ಚಿಕ್ಕದಣ್ಣಾಯಕರ ಸ್ತೋತ್ರಮಂ ಮಾಡಿದ ಪ್ರಸ್ತಾವದ ವಚನ:

೭೦೬

ವಾಣಿ ನಾಲ್ಕಱ ಮೇಲೆ, ಮಾಣದೆ ನುಡಿವ
ನಿರ್ವಾಣಿಯ ಸಂಭಾಷಣೆಯ ಮಾಡಬಲ್ಲರೆ ನಿರ್ವಾಣ.
ವರ್ಣವೇಳಱೊಳಗೆ ಪರಿಪೂರ್ಣವಾಗಿಪ್ಪ
ಮಹಾವರ್ಣವ ತನ್ಮಯವ ಮಾಡಬಲ್ಲರೆ ನಿರ್ವಾಣ.
ಸ್ಥಾನ ಹತ್ತಱಲ್ಲಿ ಆನಂದ ಸಿಂಹಾಸನದ
ನಾನಾ ಬೆಳಗಿನ ಬೀಜದ ತಿರುಳನನುಭವಿಸಬಲ್ಲರೆ
ಲಿಂಗಾನುಭಾವಿ.
ಪ್ರಣವ ಹತ್ತಱಲ್ಲಿ ಧ್ಯಾನಚತುಷ್ಟಯ ಕೂಡಿದಲ್ಲಿಯ
ಕೀಲ ಬಲ್ಲರೆ ಲಿಂಗೈಕ್ಯ.
ಇದು ಕಾರಣ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣ ಚೆನ್ನಬಸವಣ್ಣನ ಶ್ರೀಪಾದಕ್ಕೆ
ನಮೋ ನಮೋ ಎನುತಿರ್ದೆನು. ॥೧೦೫॥

ಮತ್ತಂ, ಸಿದ್ಧರಾಮಯ್ಯದೇವರು ಬಸವಣ್ಣ ಚೆನ್ನಬಸವಣ್ಣ ಪ್ರಭುದೇವರು ಮೂವರನೂ ಕೂಡಿ ಸ್ತೋತ್ರವ ಮಾಡಿದ ಪ್ರಸ್ತಾವದ ವಚನ:

೭೦೭

ಭಕ್ತಿರೂಪು ಬಸವಣ್ಣ,
ಕ್ಷಮಾ ರೂಪು ಬಸವಣ್ಣ.
ಗುರುರೂಪು ಬಸವಣ್ಣ; ಪ್ರಸಾದರೂಪು ಚೆನ್ನಬಸವಣ್ಣ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ ಪ್ರಭುವಾಗಿ ಬಂದು,
ಬಸವಣ್ಣ ಚೆನ್ನಬಸವಣ್ಣನ ಒಕ್ಕುದ ಕೊಂಡು ಜಂಗಮವಾದನು. ॥೧೦೬॥

ಮತ್ತಂ,

೭೦೮

ವರ್ಮವನಱಿದು ಅಯ್ಯಾ, ನಿಮ್ಮ ಕಾಬವರು ಸುಲಭವೆ ಲೋಕದಲ್ಲಿ?
ಲಿಂಗಭಕ್ತಿ ಜಂಗಮಭಕ್ತಿ ಗುರುಭಕ್ತಿ ಸುಲಭವೆ?
ಲಿಂಗಭಕ್ತ ಪ್ರಭುದೇವರು; ಜಂಗಮಭಕ್ತ ಬಸವಣ್ಣ;
ಗುರು ಮೊದಲಾದ ಪ್ರಸಾದ ಸರ್ವಕ್ಕೆ ಅನುಭಾವಿ ಚೆನ್ನಬಸವಣ್ಣ.
ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ,
ಇಂತಿವರ ಪಾದಕ್ಕೆ ನಮೋ ನಮೋ ಎಂಬೆನು. ॥೧೦೭॥

ಮತ್ತಂ, ಸಿದ್ಧರಾಮಯ್ಯದೇವರು ಗುರುಸ್ತೋತ್ರಮಂ ಮಾಡುವ ಪ್ರಸ್ತಾವದ ವಚನ:

೭೦೯

ಗುರುವಿನ ಕೃಪೆಯಿಂದ ಸಾಧಾರಣತನುವ ಮಱೆದೆ.
ಗುರುವಿನ ಕೃಪೆಯಿಂದ ಮಲತ್ರಯದ ಪಂಕವ ತೊಳೆದೆ.
ಗುರುವಿನ ಕೃಪೆಯಿಂದ ದೀಕ್ಷಾತ್ರಯದಿಂದನುಭಾವಿಯಾದೆ.
ಗುರುವಿನ ಕೃಪೆಯಿಂದ ಶುದ್ಧ ಸಿದ್ಧ ಪ್ರಸಿದ್ಧ ಪ್ರಮಾಣವನಱಿದೆ.
ಎನಗಾಧಿಕ್ಯವಪ್ಪ ವಸ್ತು ಬೇಱೊಂದಿಲ್ಲ.
ಅದೇನು ಕಾರಣ? ಅವ ನಾನಾದೆನಾಗಿ.
ಗುರುವೆ, ಎನ್ನ ತನುವಿಂಗೆ ಲಿಂಗದೀಕ್ಷೆಯ ಮಾಡಿ,
ಎನ್ನ ಜ್ಞಾನಕ್ಕೆ ಸ್ವಾನುಭಾವ ದೀಕ್ಷೆಯ ಮಾಡಿ,
ಎನ್ನ ತನು ಮನ ಧನದಲ್ಲಿ ವಂಚನೆಯಿಲ್ಲದೆ ಮಾಡಲೆಂದು
ಜಂಗಮದೀಕ್ಷೆಯ ಮಾಡಿ,
ಎನ್ನ ಸರ್ವಾಂಗವು ನಿನ್ನ ವಿಶ್ರಾಮಸ್ಥಾನ ಶುದ್ಧಮಂಟಪವಾದ ಕಾರಣ,
ಲೋಕ ವ್ಯಾಪ್ತಿಯನಱಿಯದೆ ಲೋಕ ಎನ್ನೊಳಗಾಯಿತ್ತು.
ಆ ಲೋಕಕ್ಕೆ ಹೊಱಗಾದೆ.
ಅದೇನು ಕಾರಣ? ಜನನ ಮರಣ ಪ್ರಳಯಕ್ಕೆ ಹೊಱಗಾದೆನಾಗಿ.
ಗುರುವೆ, ಸದ್‌ಗುರುವೆ, ಎನ್ನ ಭವದ ಬೇರ ಹಱಿದೆ!
ಗುರುವೆ ಭವಪಾಶ ವಿಮೋಚನ, ಅವ್ಯಯ,
ಮನದ ಸರ್ವಾಂಗ ಲೋಲುಪ್ತ,
ಭಕ್ತಿ ಮುಕ್ತಿ ಫಲಪ್ರದಾಯಕ ಗುರುವೆ ಬಸವಣ್ಣಾ,
ಕಪಿಲಸಿದ್ಧಮಲ್ಲಿಕಾರ್ಜುನಾ,
ಚೆನ್ನಬಸವಣ್ಣನಾಗಿ ಪ್ರಭು ಮೊದಲಾಗಿ
ಅಸಂಖ್ಯಾತರನೆಲ್ಲರನು ತೋಱಿದೆ. ॥೧೦೮॥

ಇಂತೀ ಶ್ರೀಮತ್ ಸಕಲಗಣ ಪುರಾತನರೊಳ್ ಪ್ರಭುದೇವರು
ಮಹಾನುಭಾವಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್
ಸಿದ್ಧರಾಮಯ್ಯದೇವರ ಗುರುಕರುಣಕ್ಕಂ
ದಶಮೋಪದೇಶಂ ಸಮಾಪ್ತಂ
ಅಂತು ವಚನ ೭೦೯ ಕ್ಕಂ ಮಂಗಳ ಮಹಾಶ್ರೀ

❖

೧೧
ಪ್ರಭುದೇವರ ಪೂಜಾಸ್ತುತಿ

ಕಂದ :

ಪರಮಗುರು ಪ್ರಭುವರನು ಬಸ
ವರಸರ ಅಂತರ್ನಿವಾಸಕೆಯ್ದಲ್ ಮುದದಿಂ
ಶರಣಸಮೂಹಂ ಭಜಿಸಿದ
ಪರಿಯಂ ವಿರಚಿಸುವೆ ಶರಣಜನರಹುದೆನ್ನಲ್. ॥೧॥

ಅದೆಂತೆಂದೊಡಾ ಪ್ರಭುದೇವರು ಸಿದ್ಧರಾಮಯ್ಯದೇವರಿಗೆ ಚೆನ್ನಬಸವರಾಜದೇವರಿಂದ ಇಷ್ಟಲಿಂಗೋಪದೇಶಮಂ ಮಾಡಿಸಿ, ಪರಮಹರುಷಿತರಾಗಿ ಬಸವರಾಜದೇವರ ಪರಿಮಿತದ ಗೃಹಕ್ಕೆ ಬಿಜಯಂಗೈದ ಪ್ರಸ್ತಾವದ ವಚನ:

೭೧೦

ಮನದೊಡೆಯ ಮನೆಗೆ ಬಂದರೆ
ಕನಕದ ತೋರಣವ ಕಟ್ಟಿ
ಷಡುಸಮ್ಮಾರ್ಜನೆಯ ಮಾಡಿ,
ರಂಗವಾಲಿಯನಿಕ್ಕಿ, ಉಘೇ ಚಾಂಗು ಭಲಾ ಎಂಬೆನು.
ಕೂಡಲಸಂಗಮದೇವಾ, ನಿಮ್ಮ ಶರಣ ಪ್ರಭುದೇವರು ಬಂದರೆ
ಉಬ್ಬಿ ಕೊಬ್ಬಿ ನಲಿನಲಿದಾಡುವೆ! ॥೧॥

ಇಂತು ಪ್ರಭುದೇವರು ಬಸವರಾಜದೇವರ ಮಠಕ್ಕೆ ಬಿಜಯಂಗೈಯ್ಯೆ, ಮುತ್ತಿನ ತೋರಣಂಗಟ್ಟಿ ದೇವಾಂಗಮಂ ನಡೆಮಡಿಯಂ ಹಾಸಿ, ನವರತ್ನ ಖಚಿತದಿಂದೆಸೆವ ಮೇಲುಕಟ್ಟಂ ಕಟ್ಟಿ, ಷಡುಸಮ್ಮಾರ್ಜನೆಯಂ ಮಾಡಿ ರಂಗವಾಲಿಯನಿಕ್ಕಿ, ಪಂಚಮಹಾವಾದ್ಯಂಗಳೊಡನೆ ಕಳಸಕನ್ನಡಿಯಿಂದಿದಿರ್ಗೊಂಡು, ಮುತ್ತು ಮಾಣಿಕ್ಯದಾರತಿಗಳ ಪಿಡಿದೆತ್ತಿ, ಮಂಗಳಸ್ವರದಿಂ ಪಾಡಿ, ಪರಮಹರುಷದಿಂದ ಆ ಬಸವರಾಜದೇವರು ಕೈಗುಡೆ, ಮಡಿವಾಳಯ್ಯಗಳು ಪಾಯವಧಾರೆಂದುಗ್ಘಡಿಸೆ, ಸೊಡ್ಡಳ ಬಾಚರಸರ ಹೆಗಲ ಮೇಲೆ ಹಸ್ತಮಂ ಮಡಗಿ, ಚೆನ್ನಬಸವರಾಜದೇವರೊಡನೆ ನಸುನಗೆಯಿಂ ಪ್ರಸಂಗಿಸುತ್ತ ಏಕಾಂತದ ಮಠಕ್ಕೆ ಬಿಜಯಂಗೈದು ಮೂರ್ತಿಗೊಂಡಲ್ಲಿ, ಬಸವರಾಜದೇವರು ಪ್ರಭುದೇವರ ಪಾದಾರ್ಚನೆಯಂ ಮಾಡಿದ ಪ್ರಸ್ತಾವದ ವಚನ:

೭೧೧

ಪರಿಮಿತಕ್ಕೆ ನಡೆತಂದು,
ಪರುಷದ ಸಿಂಹಾಸನದ ಮೇಲೆ
ಪರಮಗುರು ಮೂರ್ತಿಗೊಂಡಿರಲು,
ಪರಮಾನಂದ ಜಲದಿಂದ ಪಾದಾರ್ಚನೆಯಂ ಮಾಡಿ,
ದಿವ್ಯ ಸುಗಂಧಮಂ ಲೇಪಿಸಿ, ಅಕ್ಷಯವೆಂಬ ಅಕ್ಷತೆಯನಿಟ್ಟು,
ಹೃದಯಕಮಲದ ಪುಷ್ಪದಿಂದ ಪೂಜೆಯ ಮಾಡಿ,
ಸುಜ್ಞಾನ ವಾಸನೆಯೆಂಬ ಧೂಪಮಂ ಬೀಸಿ,
ಭಕ್ತಿ ಸಾರಾಯವೆಂಬ ನೈವೇದ್ಯಮಂ ಸಮರ್ಪಿಸಿ,
ಪರಮಹರುಷವನೆ ಹಸ್ತ ಮಜ್ಜನಕ್ಕೆಱೆದು,
ತ್ರಿಕರಣಶುದ್ಧವೆಂಬ ತಾಂಬೂಲಮಂ ಕೊಟ್ಟು,
ಸಮರಸ ಸಂಗದಿಂದ ಕೂಡಲಸಂಗಮದೇವರ ಕರುಣವೆನಗಾಯಿತ್ತು.೨।

ಆ ಪ್ರಸ್ತಾವದೊಳು ಬಸವರಾಜದೇವರು ನಿವಾಳಿಯನೆತ್ತುತ್ತ ಹಾಡಿದ ಪದಂಗಳು:

೭೧೨

ರಾಗ: ಲಳಿತೆ

ಜಯ ಜಯ ಶ್ರೀಮಹಾದೇವ ಜಯ ಜಯ ಶ್ರೀಮಹಾದೇವ
ಜಯ ಜಯ ಶ್ರೀಮಹಾದೇವಗೆ ಶರಣೆಂಬುದೆನ್ನ ಮನವು ॥ಪಲ್ಲವಿ॥

ಓಂ ಭೂಃ ಓಂ ಭುವಃ ಎನುತಿರ್ಪುದೆನ್ನ ಮನವು
ಭರ್ಗೋ ದೇವಸ್ಯ ಧೀಮಹಿ ಶರಣೆಂಬುದೆನ್ನ ಮನವು ॥೧॥

ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ
ತಸ್ಮೈ ಶ್ರೀಗುರುವೇ ಲಿಂಗವೇ ಶರಣೆಂಬುದೆನ್ನ ಮನವು ॥೨॥

ಹರರೂಪಂ ಕಾಯಸಂಬಂಧಂ ಗುರುರೂಪಂ ಪ್ರಾಣಸಂಯುತಂ
ಅಶರೀರಾತ್ಮ ಸಂಬಂಧಂ ಗುರುಶಿಷ್ಯಮನುಗ್ರಹಂ ಎಂದುದಾಗಿ ॥೩॥

ದೀರ್ಘದಂಡನಮಸ್ಕಾರಂ ನಿರ್ಲಜ್ಜಂ ಗುರುಸನ್ನಿಧೌ
ಶರೀರಮರ್ಥಂ ಪ್ರಾಣಂ ಚ ಸದ್ಗುರುಭ್ಯೋ ನಿವೇದಯೇತ್ ಎಂದುದಾಗಿ ॥೪॥

ಭವರೋಗ ವೈದ್ಯನೆಂದು ನಂಬುವುದೆನ್ನ ಮನ
ಕೂಡಲಸಂಗಮದೇವಂಗೆ ಶರಣೆಂಬುದೆನ್ನ ಮನ ॥೫॥

ಪದ ಸಹ ವಚನ: ॥೭॥

ಇಂತು ಬಸವರಾಜದೇವರು ಪ್ರಭುದೇವರಿಗೆ ಅಷ್ಟವಿಧಾರ್ಚನೆ ಷೋಡಶೋಪಚಾರಗಳಿಂದ ಅಭಿವಂದಿಸಲು, ಅಲ್ಲಿ ಚಿಕ್ಕದಣ್ಣಾಯಕರು ಪ್ರಭುದೇವರಿಗೆ ಶರಣೆಂದು ಪಾದಾರ್ಚನೆಯಂ ಮಾಡಿ, ಪಾದೋದಕಮಂ ಕೊಂಬ ಪ್ರಸ್ತಾವದ ವಚನ:

೭೧೩

ನಿತ್ಯವೆಂಬ ಭಕ್ತನ ಮನೆಗೆ
ಘನಚೈತನ್ಯವೆಂಬ ಜಂಗಮ ಬಂದರೆ,
ಜಲವಿಲ್ಲದ ಜಲದಲ್ಲಿ ಪಾದಾರ್ಚನೆಯ ಮಾಡಿ,
ಆ ಪಾದೋದಕವೆ ಮಹಾ ಪಾದೋದಕವಯ್ಯಾ.
'ಸ್ವಚ್ಛಾನಂದ ಜಲಂ ಕೃತ್ವಾ ಪ್ರಕ್ಷಾಲ್ಯ ಚರಣಾಂಬುಜಂ।
ತಸ್ಯ ಪಾದೋದಕ ಪೀತ್ವಾ ಸಮುಕ್ತೊ ನಾತ್ರ ಸಂಶಯಃ॥"
ಇಂತೆಂದುದಾಗಿ, ಆ ಪಾದೋದಕವ ಕೊಂಡು
ಪರಿಣಾಮಿಸಿದೆನಯ್ಯಾ ಕೂಡಲಚೆನ್ನಸಂಗಮದೇವಯ್ಯಾ! ॥೮॥

ಮತ್ತಂ, ಚಿಕ್ಕದಣ್ಣಾಯಕರು ಅಷ್ಟವಿಧಾರ್ಚನೆಯ ಮಾಡುವ ಪ್ರಸ್ತಾವದ ವಚನ:

೭೧೪

ಅಂಗದ ಮೇಲೆ ಲಿಂಗವುಳ್ಳುದೆಲ್ಲಾ
ಸಂಗಮನಾಥನೆಂಬ ಭಾವ ಬಸವಣ್ಣಂಗಾಯಿತ್ತಲ್ಲದೆ,
ಎನಗೆ ಆ ಭಾವವಿಲ್ಲ ನೋಡಾ.
ಲಿಂಗೈಕ್ಯ ಶರಣರ ಕಂಡಡೆ ನಂಬಿ ನಚ್ಚಿ,
ಅವರ ಪಾದಕ್ಕೆಱಗುವುದೆನ್ನ ಮನವು.
ಅವರ ಕಂಡಡೆ ಕರುಣಾಮೃತ ಸುರಿವುದೆನಗೆ.
ಅವರ ಪಾದಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರ
ಮಾಡುವುದೆನ್ನ ಮನವು.
ಕೂಡಲಚೆನ್ನಸಂಗಮದೇವಾ,
ನಿಮ್ಮ ಪ್ರಭುವೆಂಬ ಜಂಗಮವ ಕಂಡು ಪೂಜಿಸಿ ಪೂಜಿಸಿ
ದಣಿಯದೆನ್ನ ಮನವು. ॥೯॥

ಮತ್ತಂ, ಚಿಕ್ಕದಣ್ಣಾಯಕರು ಅಷ್ಟವಿಧಾರ್ಚನೆಯಂ ಮಾಡುತ್ತ ಪ್ರಭುದೇವರಿಗೆ ಮಂಗಳಾರತಿಯನೆತ್ತುವ ಪ್ರಸ್ತಾವದ ಪದಂಗಳು:

೭೧೫

ರಾಗ : ಲಳಿತೆ

ಮಂಗಳವ ಪಾಡುವೆ ಚೆನ್ನಸಂಗಮದೇವಂಗೆ
ಶರಣಮುಖ ಲಿಂಗವ ಸುಖದಿಂದ ನೋಡುತ [1]॥ಪಲ್ಲವಿ॥[1]

೧-೧ ಪಲ್ಲವ (ಮೂ)

ತನ್ನಹಂಕಾರಾದಿ ಗುಣಂಗಳೆಲ್ಲವ ಮಱೆದು ಕಳೆದು
ಲಿಂಗದಲ್ಲಿ ಸಂಗಿಯಾಗಿ ಸಂಗನಾದ ಲಿಂಗವು
ತನ್ನ ಸರ್ವಾಂಗತತ್ತ್ವವು ಮಹತ್ತಾದಿ ಗುಣಂಗಳೆಲ್ಲವ
ಮಱೆದು ಆ ಶರಣನಲ್ಲಿಗೆ ಸಂಗನಾದ ॥೧॥

[1]ತನಗೇನುವ[1] ಕಾಮಿಸುವನಲ್ಲ ಲಿಂಗ
ಪ್ರೇರಣೆಯಲ್ಲಿ ಬಂದಡೆ ಬಂದಿತ್ತು
ಏನಾದಡೆಯು ಸಕಲ ಸಂಬಂಧ ಸನ್ನಿಹಿತ
ಲಿಂಗದಲ್ಲಿ ಅನುಗ್ರಹಿಸಿ ಸಂಗನಾದ ॥೨॥

ಆವಾವ ಪದಾರ್ಥ ತನ್ನ ಕಾಮಿಸಿ
ಬಂದುದ ಲಿಂಗದೇವಂಗಿತ್ತಲ್ಲಿ ಮುನ್ನವೆಂತಿದ್ದುದ
ತಾನು ಲಿಂಗದಲ್ಲಿ ಮುನ್ನವೆ ಸಂದು
ಬಂದುದನೆಲ್ಲವನಾನಂದದಿಂದಲಲ್ಲಿಯೆ ಸಂಗಿಸುವಾ ॥೩॥

ತನ್ನ ಮನವು ಲಿಂಗಸಂಗ ನಯನಾದಿಗಳಿಗೆ
ಅಲ್ಲಿಯೆ ಸಂಗ ಪ್ರಾಣಕ್ಕೆ ಲಿಂಗ
ನಿಕ್ಷೇಪಸಂಗ ಆತನೆಲ್ಲಿಗೆ ಸಂಗವ ಮಾಡಿದಡಲ್ಲಿಯೆ
ಸಂಗ ಲಿಂಗದಲ್ಲಿ ನಿರಂತರ ಸಂಗನಾದ ॥೪॥

ನಿರುಪಾಧಿಕ ಲಿಂಗದಲ್ಲಿ ತಾನುಪಾಧಿಯವಧಿಯೆಂಬ
ಸೋಪಾಧಿ ಸಮಯವ ಸಮನಿಸುವನಲ್ಲ
ಮರ್ತ್ಯಲೋಕ ದೇವಲೋಕವೆಂಬ ಸೀಮೆಯ
ಮೀಱಿದ ನಿಸ್ಸೀಮ ಶರಣ ಕೂಡಲಚೆನ್ನಸಂಗನಾದ ॥೫॥

ಪದ ಸಹ ವಚನ: ॥೧೪॥

ಇಂತು ಚಿಕ್ಕದಣ್ಣಾಯಕರು ಪ್ರಭುದೇವರಿಗೆ ಅಷ್ಟವಿಧಾರ್ಚನೆ ಷೋಡಶೋಪಚಾರದಿಂದ ಪೂಜೆಮಾಡಿ, ಪರಮಹರುಷತೆಯನ್ನೈದಿದ ತದನಂತರದಲ್ಲಿ, ಮಡಿವಾಳಮಾಚಿತಂದೆಗಳು ಪ್ರಭುದೇವರ ಪಾದಾರ್ಚನೆಯಂ ಮಾಡುವ ಪ್ರಸ್ತಾವದ ವಚನ:

೭೧೬

ಸತ್ತು ಚಿತ್ತು ಆನಂದ ನಿತ್ಯ ಪರಿಪೂರ್ಣವೆಂಬರು.
ನಾನದ ಹಿಡಿದು ಮಾತಾಡುವನಲ್ಲ,

೧-೧ ತಾನಾಗೆ ತನುವ (ಮೂ)

ಸತ್ತೇ ಗುರು, ಚಿತ್ತೇ ಲಿಂಗ, ಆನಂದವೇ ಜಂಗಮ,
ನಿತ್ಯವೇ ಪ್ರಸಾದ, ಪರಿಪೂರ್ಣವೆ ಪಾದೋದಕವೆಂಬುದನವಗ್ರಹಿಸಿ,
ನಿಮ್ಮ ಜಂಗಮಕ್ಕೆ ಭಕ್ತನಾದೆನಯ್ಯಾ.
ನಿತ್ಯನಾಗಿ ನಿಮ್ಮ ಜಂಗಮಕ್ಕೆ ವಂದಿಸುವೆ.
ಆನಂದದಿಂದ ನಿಮ್ಮ ಜಂಗಮದ ಪಾದೋದಕವ ಕೊಂಬೆ.
ಪರಿಪೂರ್ಣನಾಗಿ ನಿಮ್ಮನರ್ಚಿಸಿ ಪೂಜಿಸಿ ಪರವಶವಪ್ಪೆನಾಗಿ,
ಭಕ್ತಿಪ್ರಸಾದ ಮುಕ್ತಿಪ್ರಸಾದ ನಿತ್ಯಪ್ರಸಾದವ
ನಿಮ್ಮ ಜಂಗಮದಲ್ಲಿ ವರವ ಪಡೆದು-
ಕಲಿದೇವರದೇವಾ, ನಿಮ್ಮ ಶರಣ ಪ್ರಭುದೇವರ ಶ್ರೀಪಾದದಲ್ಲಿ
ಮನಮಗ್ನವಾಗಿರ್ದೆನಯ್ಯಾ. ॥೧೫॥

ಇಂತು ಮಡಿವಾಳಮಾಚಿತಂದೆಗಳು ಅಷ್ಟವಿಧಾರ್ಚನೆ ಷೋಡಶೋಪಚಾರದಿಂದ ಪ್ರಭುದೇವರನರ್ಚಿಸಿದ ತದನಂತರದಲ್ಲಿ, ಸೊಡ್ಡಳ ಬಾಚರಸರು ಬಂದು ಪ್ರಭುದೇವರ ಪೂಜಿಸುವ ಪ್ರಸ್ತಾವದ ವಚನ:

೭೧೭

ಏಕಮೇವ ನ ದ್ವಿತೀಯ ಬ್ರಹ್ಮವೆಂಬ
ಘನಮಹಿಮನ ಕಂಡ ಕಾಣಿಕೆಯಲ್ಲಿ
ಮನ ಮನ ಬೆರಸಿ, ತನು ತನು ಕರಗಿ,
ಕರಣಂಗಳೆಲ್ಲಾ ತರಹರವಾದವಯ್ಯಾ.
"ದೀರ್ಘದಂಡನಮಸ್ಕಾರಂ ನಿರ್ಲಜ್ಜಂ ಗುರುಸನ್ನಿಧೌ।
ಶರೀರಮರ್ಥ ಪ್ರಾಣಂ ಚ ಸದ್‌ಗುರುಭ್ಯೋ ನಿವೇದಯೇತ್॥"
ಎಂದುದಾಗಿ, ಶರಣು ಹೊಕ್ಕೆ ನಾನು.
ಎನ್ನ ಶಿರ ನಿಮ್ಮ ಚರಣದಲ್ಲಿ ಬಿಡಿಸಬಾರದ ಸಂಗ,
ಮಹಾದಾನಿ ಸೊಡ್ಡಳನ ಶರಣ ಪ್ರಭುದೇವರ ಕಂಡು,
ಎನ್ನ ಭವದ ಬಳ್ಳಿಯ ಬೇರು ಹಱಿಯಿತ್ತಯ್ಯಾ! ॥೧೬॥

ಮತ್ತಂ,

೭೧೮

ನಿತ್ಯ ನಿಜತತ್ತ್ವವು ಭಕ್ತಿಕಂಪಿತವಾಗಿ ಎನ್ನತ್ತ ತಿರುಗಿತ್ತು.
'ವತ್ಸಂ ಗೌರಿವ ಗೌರೀಶಃ' ಎಂಬ ಶ್ರುತಿಯ ತೋಱಲೆಂದು
ಎನಗೆ ಕೃಪೆಯಾಗಿ ತನ್ನ ಶ್ರೀಪಾದವ ತೋಱಿದನು.
ಜಯ ಜಯ ಶ್ರೀ ಮಹಾದೇವಾ, ಜಯ ಜಯ ಶ್ರೀ ಮಹಾದೇವ,
ಗುರುವೇ ನಮೋ ನಮೋ.
ಎನ್ನ ಪರಮಗುರವೇ ನಮೋ ನಮೋ.

ಎನ್ನ ಭವಬಂಧನಂಗಳ ಬಿಡಿಸಿದೆಯಾಗಿ,
ಗುರುವೇ ನಮೋ ನಮೋ ಎಂಬೆನು.
ಮಹಾದಾನಿ ಸೊಡ್ಡಳಾ, ನಿಮ್ಮ ಶರಣ ಪ್ರಭುದೇವರ ಶ್ರೀಪಾದಕ್ಕೆ
ನಮೋ ನಮೋ ಎಂದು ಬದುಕಿದೆನು! ॥೧೭॥

ಇಂತು ಸೊಡ್ಡಳ ಬಾಚರಸರು ಪ್ರಭುದೇವರ ಶ್ರೀಪಾದವನರ್ಚಿಸಿ ಆಡಿ ಹಾಡಿ ಮನದಣಿಯ ಭಕ್ತಿ ಮಾಡಿದ ತದನಂತರದಲ್ಲಿ ಹಡಪದಪ್ಪಣ್ಣಗಳು ಬಂದು ಪೂಜಿಸುವ ಪ್ರಸ್ತಾವದ ವಚನ:

೭೧೯

ಮನಕ್ಕೆ ಮನೋಹರ ಒಂದಾಗಿ, ಭಾವಕ್ಕೆ ಭಾವ ಒಂದಾಗಿ,
ನಚ್ಚಿ ಮಚ್ಚಿದ ಶರಣರ ದರುಶನವಾದ ಬಳಿಕ,
ಎತ್ತಲೆಂದಱಿಯೆನಯ್ಯಾ ಲೌಕಿಕವ!
ಬಸವಪ್ರಿಯ ಕೂಡಲಚೆನ್ನಸಂಗಾ,
ನಿಮ್ಮ ಶರಣ ಪ್ರಭುದೇವರಿಗೆ
ಶರಣು ಶರಣೆಂಬುದಲ್ಲದೆ ಅನ್ಯವನೇನೆಂದು ಅಱಿಯೆನು. ॥೧೮॥

ಇಂತು ಅಸಂಖ್ಯಾತರೆಲ್ಲರು ಬಂದು ಪ್ರಭುದೇವರ ದರುಶನವಾಗಿ ಪಾದಾಕ್ರಾಂತರಾಗಿ, ಅರ್ಚಿಸಿ ಪೂಜಿಸಿ ವರಂಬಡೆದು ಸುಖಸಂಕಥಾವಿನೋದದಿಂದ ಪ್ರಭುದೇವರಿಗೊಡ್ಡೋಲಗಂಗೊಟ್ಟು ಇರೆ, ಬಸವರಾಜದೇವರು ಪ್ರಭುದೇವರ ಕೊಂಡಾಡಿದ ಪ್ರಸ್ತಾವದ ಪದಂಗಳು:

೭೨೦

ರಾಗ: ಭೂಪಾಳಿ

ನಾನಾವಿಧ ಬ್ರಹ್ಮಾಂಡದಾಲಯ ಸ್ಥಾನವೆನಿಪ ಮಾತಾಶ್ರಯ ರೂಪಾ ॥ಪಲ್ಲವಿ॥

ಇನಮಂಡಲ ಕಿರಣಾವಳಿಯಾ ತನ್ನೊಳಗೆ ಅಡಗಿಸಿಪ್ಪಂತೆ
ನೆರೆದ ಜಗಂಗಳನೆಲ್ಲವ ನಿಮ್ಮಯ ಉದರದೊಳಡಗಿಸಿದಾ ಗುರುವೆ ॥೧॥

ಅಣುಮಾತ್ರ ಬೀಜದೊಳಗೆ ಘನವೃಕ್ಷವು ಅಡಗಿಪ್ಪಂತೆ ನಿಜ
ತನುವಿನೊಳಗೆ ತೋಱುವ ತೋಱಿಕೆ ನಿಮ್ಮನುವಿನೊಳಡಗಿತ್ತದೇನೆಂಬೆ ॥೨॥

ಭಾಂಡದೊಳಗೆ ದ್ರವ್ಯಗಳಿಪ್ಪಂತೆ ಪಿಂಡದೊಳಗೆ ಶಿವತತ್ತ್ವದ
ಖಂಡಾಖಂಡಿತವನುವಾಲಿಂಗಿಸಿ ನಿಂದ ನಿರ್ಲೇಪ ನಿರಂಜನನೆ ॥೩॥

ಸಕಲಪ್ರಪಂಚ ಗರ್ಭೀಕರಿಸಿ ಸಕಲಪ್ರಪಂಚೆಂದಱಿಯದಾ
ಉಪಮಾತೀತ ಮಹಂತ ನಿಮ್ಮಯ ನಿಜವನಾರು ಬಲ್ಲರು ಹೇಳಾ ॥೪॥

ಸರ್ವಾಚಾರಸಂಪತ್ತಿನಾ ಸರ್ವಾನುಭಾವಸತ್ಕ್ರಿಯೆಗಳ
ಗರ್ಭೀಕರಿಸಿಕೊಂಡಿಪ್ಪ ಕೂಡಲಸಂಗನಲ್ಲಿ ಅಲ್ಲಮ ಪ್ರಭುವೆ ॥೫॥

ಪದ ಸಹ ವಚನ: ॥೨೩॥

ಇಂತು ಬಸವರಾಜದೇವರು ಪ್ರಭುದೇವರ ಸ್ತೋತ್ರಮಂ ಮಾಡುತ್ತಿರಲು, ಆ ಪ್ರಸ್ತಾವದಲ್ಲಿ ಚೆನ್ನಬಸವರಾಜದೇವರು ಪ್ರಭುದೇವರ ಹಾಡಿ ಹೊಗಳಿದ ಪದಂಗಳು:

೭೨೧

ರಾಗ : ಧನ್ಯಾಸಿ

ಪರಕೆ ಪರವಾ ಘನಕೆ ಘನತರ ಮಹಾಘನವು
ವರಕೆ ವರ ನಿಜ ವಾಙ್ಮನೋತೀತಗತಿಶಯವು
ಸರಿಯಿಲ್ಲದಪ್ರತಿಮ ಲಿಂಗದ ಮಹಾತ್ಮೆಗಿಂದಿಲ್ಲ ಮೇಲಾವ ಘನವು
॥ಪಲ್ಲವಿ॥

[1]ವೇದಾದಿವೇದಗಳಿಗುಪಮೆಗುಪಮಾತೀತ
ಆದಿಮಧ್ಯಾಂತಗಳಿಗತ್ತಣತ್ತಣ ಘನವು
ಸಾಧಕರ ಸತ್ತ್ವ ರಜ ತಮ ದೇವತೆಗಳ ಗೋಚರಕಗೋಚರ ತತ್ತ್ವವು
ಭೇದಾದಿಭೇದ ಬ್ರಹ್ಮಾಂಡಕೋಟಿಗಳು ರೋ
ಮಾದಿಗಳೊಳಡಕವಾಗಿಹವು ಸಚರಾಚರವ
ನಾದಿ ಲೋಕಲೋಕವೆಲ್ಲ ಲೀಲಾಸೂತ್ರ ಮಾತ್ರದೊಳಗಿಹವು ಶಿವನ ॥೧॥

ದೆಸೆ ಶ್ರೋತ್ರದಲ್ಲಿ ನೇತ್ರದಲಿ ರವಿ ಮನಸಿನಲಿ
ಶಶಿ ಪ್ರಾಣದಲಿ ವಾಯುವನಲ ಮುಖದಲಿ ಶಿರದ
ವಿಸರದಲಿ ತೆತ್ತೀಸಕೋಟಿ ದೇವತೆಗಳಭ್ಯಂತರವು ನಾಭಿಯಲ್ಲಿ
ವಸುಧೆ ಪದತಳದಲ್ಲಿ ಪ್ರಸರದಲಿ ಶಕ್ರನಜ
ನೆಸೆವ ಜಂಘೆಯಲಿ ಭುಜದಲ್ಲಿ ವಿಷ್ಣು ರುದ್ರ ಮುಖ
ವಿಷರುಹದೊಳಖಿಳಜಗ ಜಠರದಲಿ ಜನಿತ ಶಿವಲಿಂಗಾಂಗ ಮಹಿಮೆಯಲ್ಲಿ ॥೨॥

ಉಪಮೆಗುಪಮಾನ ಮನುದೇವತಾದಿಗಳೆಲ್ಲ
ಜಪತಪ ಮಹಾ ದಿವ್ಯಮಂತ್ರಧ್ಯಾನಂಗಳಿಂ
ದಪರಿಮಿತ ಸೇವನಾರತರಾಗಿ ನಿಮ್ಮ ಪದನುತಿಯಿಂ ಕೃತಾರ್ಥರಾಗಿ
ತೃಪ್ತಿಪಟ್ಟಿಪ್ಪರಲ್ಲದೆ ನಿಶ್ಚಯದ ಮಹಿಮೆ

೧+ ಪದ (ಮೂ)

ಯ ಪರಾಪರಂ ಪರಮಗಮ್ಯ ಭಾವಾತೀತ
ವಿಪುಳ ಜ್ಯೋತಿರ್ಲಿಂಗ ವಿಶ್ವತೋಮುಖನಮುಖ ಘನ ಗಾಬ ಘನವಾವುದು
॥೩॥

ಮನು ಮುನೀಶ್ವರ ವೇದ ಶಾಸ್ತ್ರ ಶ್ರುತಿ ಸ್ಮೃತಿಯೆಲ್ಲ
ತಮತಮಗೆ ಹೊಗಳುತಿರುತಿಹವು ಶಿವನ ಘನತೆಯ
ಘನ ತರಂತರಗಾಣದತ್ಯತಿಷ್ಠದ್ದಶಾಂಗುಲನೆಂದು ಒಱಲುತಿಹವು
ಎನಲಾ ಘನವದಾವ ದರುಶನಾಗಮ ತರ್ಕ
ದನುಮತಕಸಾಧ್ಯ ಲಿಂಗದ ಮಹಾತ್ಮೆಗೆ ಕಡೆಯ
ನೆಣಿಸಲಿಲ್ಲಾಗಿ ಪ್ರಣವಾದಿ ಪಂಚಾಕ್ಷರಿಯೊಳಡಕವಾಗಿಹವು ಸತ್ಯ ॥೪॥

ನಿತ್ಯನನನಿತ್ಯದೇವತೆಗಳಱಿಯಲಿಕಳವೆ
ಸಚ್ಚಿದಾನಂದ ಶಿವಜ್ಞಾನಾನುಭಾವ ಭಾ
ವೋತ್ತಮರ ಭಾವ ಕರಣದ ಕರದೊಳಮೃತಕರ ಕಿರಣ ಸಮ್ಯಗ್‌ಜ್ಯೋತಿಯ
ವಿಸ್ತರಿಸಿ ತೊಳತೊಳಗುವತ್ಯಂತ ನಿರವಯದ
ಸಚ್ಚಿದಾನಂದ ನಿರಂಜನ್ಯ ನಿರ್ಮಳದ
ನಿತ್ಯ ಕೂಡಲಚೆನ್ನಸಂಗ ಸಂಗವನು ಪ್ರಭುಲಿಂಗದಲ್ಲಿಯೆ ಕಂಡೆನು ॥೫॥

ಪದ ಸಹ ವಚನ: ॥೨೮॥

ಇಂತು ಚೆನ್ನಬಸವರಾಜದೇವರು ಪ್ರಭುದೇವರ ಸ್ತೋತ್ರಂಗೆಯ್ಯುತ್ತಿರಲು, ಆ ಪ್ರಸ್ತಾವದಲ್ಲಿ ಸಿದ್ಧರಾಮಯ್ಯ ತಂದೆಗಳು ಪ್ರಭುದೇವರ ಸ್ತುತಿಸಿ ಕೊಂಡಾಡಿದ ಪದಂಗಳು:

೭೨೨

ರಾಗ: ಆಹೇರ

ಸ್ವಾನುಭಾವಸಿದ್ಧಿಯಿಂದ ತಾನು ತನ್ನನಱಿದಂಗಿ-
ದೇನು ತನಗನ್ಯ ಆ ಸುಜ್ಞಾನಿಯಾದ ಶರಣ ¹॥ಪಲ್ಲವಿ॥¹

²ಬ್ರಹ್ಮದಿಂದಲೊಗೆದ ಶರಣನ ಪೆರ್ಮೆಯಾನದನೇನೆಂಬೆ
ಕರ್ಮಕ್ರೀಗಳದಱ ಸದ್ಧರ್ಮವಲ್ಲೆಂದಱಿದು
ನಿರ್ಮಳ ನಿಜಲಿಂಗದಾ ವರ್ಮವಱಿದು ಭಕ್ತಿಯ ಸ-
ದ್ಧರ್ಮದಲ್ಲಿ ನಡೆವ ನಿಷ್ಕರ್ಮಿ ತಾನೆ ಶರಣ ॥೧॥

೧-೧ ಪಲ್ಲವ (ಮೂ) ೨+ ಪದ(ಮೂ)

ಅಳಿಯನುಳಿಯ ಬ್ರಹ್ಮವೆಂಬ ಬೆಳೆಯಲೊದಗಿದಜೆದ ಶರಣ
ತಿಳಿದು ತಿಳಿದು ನಿತ್ಯದಾ ನಿಳಯವೇ ತಾನಾಗಿ
ಹೊಳೆಯಲೀಯ ಮುಕ್ತಿಯೆಂಬ ವಳಯದತ್ತ ನಿತ್ಯ ನಿಜದ
ಕಳೆಯ ಬೆಳಗು ತಾನೆಯಾದ ಬೆಳಗು ತಾನೆ ಶರಣ ||೨||

ಚಂದ್ರಕಾಂತದ ಶಿಲೆಯೊಳು ಜಲಬಿಂದುವ ತಂದಿರಿಸಿದವರುಂಟೆ
ಸಂದನಳಿದು ಲಿಂಗದೊಳು ಒಂದಿ ನಿಜ ಸುಖದಿ
ನಿಂದ ನಿಜಪದದೊಳಗೊಂದಿತಾನಂದದಿಂದ
ದ್ವಂದ್ವವಳಿದು ನಿಂದ ನಿಸ್ಸಂಬಂಧಿ ತಾನೆ ಶರಣ ||೩||

ಮೇಘವೊಸರಿ ಜಲಬಿಂದುಗಳು ಭೂಗಗನಾಂಗಣದಿ ಸುರಿಯುತಿರೆ
ವೇಗ ವಾಯು ಸಂಗ ತಾನಾಗಿ ನಾದ ಬಲಿದು
ಆಗ ವಾರಿಕಲ್ಲೆಂದೆನಿಸಿ ಶೀಘ್ರದಿಂದ ತೋಜೆಯಡಗಿ
ಮುನ್ನಿನ ಹಾಗೆ ತನ್ನ ನಿಜವು ತಾನಾಗಿ ನಿಂದ ಶರಣ ||೪||

ಕೀಟ ಭೃಂಗನ ಪರಿಯಂತೊಡನಾಡಿಯಾಡಿ ಲಿಂಗವೆ
ಗೂಡಾಗಿ ಪರಮಸುಖದೊಳಗೋಲಾಡಿ
ಹಾಡಿ ಹರಸಿ ಲಿಂಗಸಂಗದಿ ಮೂಡಿ ಮುಳುಗಿ ಶರಣರೊಡ-
ನಾಡಿಯಾಡಿಯಾಜೂಢನಾದ ಶರಣ ||೫||

ಸರ್ಪ ಮುಟ್ಟಲು ದೇಹಭಾವದರ್ಪವಳಿದು ಕರಣದುಪಟಳ
ಒಪ್ಪವಳಿದು ನಿಂದ ನಿಜವುಯಿಪ್ಪುದು ಹೀಗೆಂದು
ಕರ್ಪುರ ಉರಿಕೊಂಡಂತಾತನ ಸರ್ಪಭೂಷಣನಾಜ್ಞೆಯ ಪಿಡಿ
ದಪ್ಪಿಯಪ್ಪಿ ತಾನೆ ನಿಷ್ಪತ್ತಿಯಾದ ಶರಣ ||೬||

ದೀಪವೊಂದಜೊಳುದಿಸಿ ಶತಕೋಟಿ ದೀಪಗಳೊಗೆದಡೇನು ಪ್ರಭೆ
ಯೇಪರಿ ಲಿಂಗಾಂಗಸಂಗವಾ ಪರಿ ಎಂದಜೆದು
ಭಾಪುರೆ ನಿಜಲಿಂಗ ಸಂಗದೀ ಪರಿ ಎಂದಜೆದು ನಿಜ
ರೂಪು ಕಪಿಲಸಿದ್ಧಮಲ್ಲೇಶನಾದ ಶರಣ ||೭||

ಪದ ಸಹ ವಚನ: ||೩೫||

ಇಂತು ಸಿದ್ಧರಾಮದೇವರು ಪ್ರಭುದೇವರ ಸ್ತೋತ್ರಮಂ ಮಾಡುತ್ತಿರಲು, ಆ ಪ್ರಭುದೇವರು ಚೆನ್ನಬಸವರಾಜದೇವರ ಸ್ತೋತ್ರಮಂ ಮಾಡುವ ಪ್ರಸ್ತಾವದ ವಚನ:

೭೨೩

ಚೌದಂತ ಮದಕರಿಯೊಳಡಗಿತ್ತು.
ಬೆಳಗಿನ ಬಳಗದ ನವಪಂಜರವೊ!
ಭಾವಪರಿಮಳವ ಭೇದಿಸಬಾರದು,
ಮದಾಳಿಯ ಸುಳುಹಿನ ಸೂಕ್ಷ್ಮಂಗಲ್ಲದೆ,
ಅಳಿ ರತುನವ ನುಂಗಿದ ಪರಿ ಇನ್ನೆಂತೋ?
ಸಾಧ್ಯವಾಯಿತ್ತು ಸುಖ ಸಂಭಾಷಣೆ
[೧]ಗೊಹೇಶ್ವರ[೧]ಲಿಂಗದಲ್ಲಿ ಚೆನ್ನಬಸವಣ್ಣಂಗೆ ॥೩೬॥

ಈ ಹೀಂಗೆಂದು ಪ್ರಭುದೇವರು ಚಿಕ್ಕದಣ್ಣಾಯಕರ ಸ್ತೋತ್ರಮಂ ಮಾಡಲು, ಆ ಪ್ರಸ್ತಾವದೊಳು ಬಸವರಾಜದೇವರು ಚಿಕ್ಕದಣ್ಣಾಯಕರ ಸ್ತೋತ್ರಮಂ ಮಾಡಿದ ಪ್ರಸ್ತಾವದ ವಚನ:

೭೨೪

ಇಂದ್ರ ವ್ಯಾಸ ಉಪೇಂದ್ರನ ಓಲಗ
ಚಂದ್ರಮೌಳಿಯನಱಿಯದೆ ಹೋಯಿತ್ತು.
ಬಂಧಮೋಕ್ಷದ ಭವಬಂಧನ ಬಿಡದನ್ನಕ್ಕರ
ಮತ್ತೊಂದಱ ಮುಖ ಜನಿಸಿತ್ತಲ್ಲಾ! ಕೂಡಲಸಂಗಮದೇವಾ,
ಚೆನ್ನಬಸವಣ್ಣನ ಸನ್ನಿಧಿಯಿಂದಲಾನು ಬದುಕಿದೆನು. ॥೩೭॥

ಮತ್ತಂ,

೭೨೫

ಪ್ರಸಾದಿಯ ಪ್ರಸಾದದಲೊದಗಿದ
ಪ್ರಸಾದಿಯನೇನೆಂದುಪಮಿಸುವೆನು!
ಏನೆಂದು ಸ್ತುತಿಸುವೆನಯ್ಯಾ,
ಮಹಾ ಪ್ರಸಾದಕ್ಕೆ ಮಹಾ ಘನ ಪ್ರಸಾದಿಯಾದ ಪ್ರಸಾದಿಯನು?
ಅಗಮ್ಯ ಪ್ರಸಾದದಲ್ಲಿ ಸ್ವಾಯತವಾದ ಕೂಡಲಸಂಗಮದೇವರಲ್ಲಿ
ಚೆನ್ನಬಸವಣ್ಣಂಗೆ ನಮೋ ನಮೋ ಎನುತಿರ್ದೆನು. ॥೩೮॥

ಈ ಹೀಂಗೆಂದು ಬಸವರಾಜದೇವರು ಚಿಕ್ಕದಣ್ಣಾಯಕರ ಸ್ತೋತ್ರಮಂ ಮಾಡುತ್ತಿರಲು, ಆ ಚಿಕ್ಕದಣ್ಣಾಯಕರು ಬಸವರಾಜದೇವರ ಸ್ತೋತ್ರಮಂ ಮಾಡುವ ಪ್ರಸ್ತಾವದ ವಚನ:

೭೨೬

ಅಯ್ಯಾ, ಘನಗಂಭೀರಮಪ್ಪ
ಸಮುದ್ರದೊಳಗೊಂದು ರತ್ನ ಹುಟ್ಟಿದರೆ,
ಆ ಸಮುದ್ರದೊಳಡಗಿಪ್ಪುದಲ್ಲದೆ ಘನವಾಗಿ ತೋಱಬಲ್ಲುದೆ?

೧–೧ ಗೊಗ್ಗೇಶ್ವರ (ಮೂ)

ನಿಮ್ಮ ಕರುಣ ಕಟಾಕ್ಷದಿಂದಲುದಯಿಸಿ,
ಅನಂತ ಲಿಂಗಪುರಾಣವೆಲ್ಲವು
ನಿಮ್ಮ ಕೃಪೆಯಿಂದ ಸಾಧ್ಯವಾಯಿತ್ತೆನಗೆ.
ಆದಿಯನಾದಿ ಇಲ್ಲದಂದು ನೀನೊಬ್ಬನೆ ಪ್ರಸಾದಿ.
ಉಮೆಯ ಕಲ್ಯಾವಿಲ್ಲದಂದು ನೀನೊಬ್ಬನೆ ಪ್ರಸಾದಿ.
ಕೂಡಲಚೆನ್ನಸಂಗಮದೇವರು ಸಾಕ್ಷಿಯಾಗಿ,
ಬಸವಣ್ಣಾ, ನಿಮ್ಮ ತೊತ್ತಿನ ತೊತ್ತಿನ ಮಱುದೊತ್ತಿನ ಮಗ ನಾನಯ್ಯಾ. ॥೩೯॥

ಮತ್ತಂ,

೭೨೭

ತನುವ ಗುರುವಿನಲ್ಲಿ ಸವೆಸಿ, ಮನವ ಲಿಂಗದಲ್ಲಿ ಸವೆಸಿ,
ಧನವ ಜಂಗಮದಲ್ಲಿ ಸವೆಸಿ,
ತನುವೆ ಗುರುವಾಗಿ, ಮನವೆ ಲಿಂಗವಾಗಿ, ಧನವೆ ಜಂಗಮವಾಗಿ,
ಇಂತೀ ತ್ರಿವಿಧವು ನಿಮ್ಮಲ್ಲಿ ನಿಜಭರಿತನಾದ,
ಕಾಯವಿಡಿದು ಕರ್ಮವಿರಹಿತನಾದ–
ಕೂಡಲಚೆನ್ನಸಂಗಮದೇವರಲ್ಲಿ ಸಂಗನಬಸವಣ್ಣಂಗೆ
ನಮೋ ನಮೋ ಎನುತಿರ್ದೆನು. ॥೪೦॥

ಇಂತು ಚಿಕ್ಕದಣ್ಣಾಯಕರು ಬಸವರಾಜದೇವರ ಸ್ತೋತ್ರಮಂ ಮಾಡುತ್ತಿರಲು, ಆ ಪ್ರಸ್ತಾವದೊಳು ಮಡಿವಾಳತಂದೆಗಳು ಬಸವರಾಜದೇವರ ಹೊಗಳಿದ ಪ್ರಸ್ತಾವದ ವಚನ:

೭೨೮

ಅಂಗಾಲ ಕಣ್ಣವರಾಗಬಹುದಲ್ಲದೆ,
ಮೈಯೆಲ್ಲಾ ಕಣ್ಣವರಾಗಬಾರದು.
ಮೈಯೆಲ್ಲಾ ಕಣ್ಣವರಾಗಬಹುದಲ್ಲದೆ,
ನೊಸಲಕಣ್ಣು ಚತುರ್ಭುಜದವರಾಗಬಾರದು.
ನೊಸಲ ಕಣ್ಣು ಚತುರ್ಭುಜದವರಾಗಬಹುದಲ್ಲದೆ,
ಪಂಚಮುಖ ದಶಭುಜದವರಾಗಬಾರದು.
ಪಂಚವಕ್ತ್ರ ದಶಭುಜದವರಾಗಬಹುದಲ್ಲದೆ,
ಸರ್ವಾಂಗಲಿಂಗಿಗಳಾಗಬಾರದು.
ಸರ್ವಾಂಗಲಿಂಗಿಗಳಾಗಬಹುದಲ್ಲದೆ,
ಕಲಿದೇವಯ್ಯಾ, ನಿಮ್ಮ ಶರಣ ಬಸವಣ್ಣನಾಗಬಾರದೆಂದಱಿದು,
ಆ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು! ॥೪೧॥

ಮತ್ತಂ,

೭೨೯

ಬಸವಣ್ಣನ ಬಳಿಯಯ್ಯಾ ಗಂಗೆವಾಳುಕ ಸಮಾರುದ್ರರು,
ಬಸವಣ್ಣನ ಫಲವಯ್ಯಾ ಓಂ ನಮಃಶಿವಾಯ ಎಂಬವರೆಲ್ಲರು.
ಬಸವಣ್ಣನ ಆಜ್ಞೆಯಯ್ಯಾ ಎಲ್ಲಾ ಶಿವಾರ್ಚಕರು.
ಬಸವಣ್ಣನ ಘನವಯ್ಯಾ ಸೋಹಿ ದಾಸೋಹಿಗಳು.
ಬಸವಣ್ಣನ ಧನವಯ್ಯಾ ಪಾದೋದಕ ಪ್ರಸಾದಿಗಳು.
ಬಸವಣ್ಣನ ಮನವಯ್ಯಾ
ತನು ಮನ ಧನವ ಗುರು ಲಿಂಗ ಜಂಗಮಕ್ಕೆ ಇಕ್ಕುವರು.
ಬಸವಣ್ಣನ ತನುವಯ್ಯಾ
ತನು ಪದಾರ್ಥವ ಮಾಡಿ ಗುರುಲಿಂಗ ಜಂಗಮಕ್ಕರ್ಪಿಸುವರು.
ಬಸವಣ್ಣ ಮಾಡಿದ ಅನುಗಳಯ್ಯಾ
ಕನಸಿನಲ್ಲಿ ಮನಸಿನಲ್ಲಿ ಶಿವ ಶಿವಾ ಎಂಬುವರೆಲ್ಲರು.
ಬಸವಣ್ಣನ ಬಂಧುಗಳಯ್ಯಾ ಎಲ್ಲಾ ಶಿವಲಾಂಛನಿಗಳು.
ಬಸವಣ್ಣನ ಪ್ರಸಾದಿಗಳಯ್ಯಾ
ಬಸವಣ್ಣನ ನಾಮಾಮೃತವ ನೆನೆವವರೆಲ್ಲರೂ,
ಎಲೆ ಕಲಿದೇವರದೇವಾ, ಬಸವಣ್ಣನ ಆಜ್ಞೆಯಲ್ಲಿ ನೀನಿದ್ದೆಯಾಗಿ,
ಎಲ್ಲಾ ಶಿವಭಕ್ತರ ತನು ಮನ ಧನ ಸಹಿತ ನಾನಾದೆನಯ್ಯಾ. ॥೪೨॥

ಮತ್ತಂ,

೭೩೦

ಕರಸ್ಥಲವು ಕರ್ಣಸ್ಥಲವು ಕಂಠಸ್ಥಲವು
ಲಲಾಟಸ್ಥಲವು ಮಧ್ಯಸ್ಥಲವು,
ಇಂತೆಲ್ಲಾ ಸ್ಥಲಂಗಳನು ಮಹಾಸ್ಥಲಕ್ಕೆ ತಂದು,
ಬಸವಣ್ಣ ಸಂಪೂರ್ಣವಾದ ಪರಿಯ ನೋಡಾ
ಕಲಿದೇವರದೇವಾ! ॥೪೩॥

ಮತ್ತಂ,

೭೩೧

ಪ್ರಾಣೋಪಾನ ಮೊದಲಾದ ದಶವಾಯುಗಳಿಚ್ಛೆಯಲ್ಲಿ ಸುಳಿದಾಡದು.
ಜ್ಞಾನದಲ್ಲಿ ಬೆಳೆವುದು, ನಿರಾಲಂಬದಲ್ಲಿ ಆಡುವುದು,
ಹೃದಯ ಕಮಲ ಪದ್ಮಪತ್ರದುಸುರನಾಲಿಸಿ
[೧]ಸಂಘಟ[೧] ಜಂಗಮದಾಟವನಾಡುವುದು.

೧-೧ ಸಂಪುಟ (ಮೂ)

ಲಿಂಗದ ನೋಟವ ನೋಡುವುದು.
ಮಹಾಪ್ರಸಾದದಲ್ಲಿ ಬೆಳೆವುದು.
ಕಲಿದೇವರದೇವಾ ನಿಮ್ಮ ಶರಣ ಬಸವಣ್ಣನ ನಿಲವಿದು. ॥೪೪॥

ಮತ್ತಂ,

೭೩೨

ಅಯ್ಯಾ, ನಿಮ್ಮ ಧ್ಯಾನದಲ್ಲಿರಿಸಲೊಲ್ಲದೆ
ಬಸವಣ್ಣನ ಧ್ಯಾನದೊಳಿರಿಸೆನ್ನ.
ಲಿಂಗವೇದ್ಯ ಜಂಗಮವೇದ್ಯ ಪ್ರಸಾದವೇದ್ಯ
ನಿಜಪದವೇದ್ಯ ಮಹಾವೇದ್ಯ,
ಬಸವಣ್ಣನ ಸಂಗದೊಳಿರಿಸು ಕಲಿದೇವರದೇವಾ. ॥೪೫॥

ಈ ಹೀಂಗೆಂದು ಮಡಿವಾಳತಂದೆಗಳು ಬಸವರಾಜದೇವರ ಸ್ತೋತ್ರಮಂ ಮಾಡಲು, ಆ ಬಸವರಾಜದೇವರು ಮಡಿವಾಳತಂದೆಗಳ ಸ್ತೋತ್ರಮಂ ಮಾಡುವ ಪ್ರಸ್ತಾವದ ವಚನ:

೭೩೩

ಭಕ್ತಿ ಯುಕ್ತಿಯನಜಿಯೆ.
ಷೋಡಶೋಪಚಾರವನಜಿಯೆ.
ಭಾವ ನಿರ್ಭಾವವನಜಿಯೆ.
ಜ್ಞಾನಮಹಾಜ್ಞಾನವನಜಿಯೆ.
ಕೂಡಲಸಂಗಮದೇವಯ್ಯಾ,
ಮಡಿವಾಳತಂದೆಗಳ ಪಾದಕ್ಕೆ ನಮೋ ನಮೋ ಎನುತಿರ್ದೆನು. ॥೪೬॥

ಇಂತು ಬಸವರಾಜದೇವರು ಮಡಿವಾಳತಂದೆಗಳ ಸ್ತೋತ್ರಮಂ ಮಾಡಲು, ಆ ಮಡಿವಾಳತಂದೆಗಳು ಆ ಬಸವರಾಜದೇವರನು ಚೆನ್ನಬಸವಣ್ಣನನು ಪ್ರಭುದೇವರನು ಕೂಡಿ ಸ್ತೋತ್ರಮಂ ಮಾಡಿದ ಪ್ರಸ್ತಾವದ ವಚನ:

೭೩೪

ಎನ್ನ ಮನ ಬಸವಣ್ಣನು.
ಎನ್ನ ವಾಕು ಚೆನ್ನಬಸವಣ್ಣನು.
ಎನ್ನ ಕಾಯ ಪ್ರಭುದೇವರು.
ಇಂತೀ ಮೂವರ ಪಾದವನು ತ್ರಿಕರಣ ಶುದ್ಧದಿಂದ ನಂಬಿ,
ನಮೋ ನಮೋ ಎನುತಿರ್ದೆನು ಕಾಣಾ ಕಲಿದೇವರದೇವಾ! ॥೪೭॥

ಈ ಹೀಂಗೆಂದು ಮಡಿವಾಳತಂದೆಗಳು ಬಸವಣ್ಣ ಚೆನ್ನಬಸವಣ್ಣ ಪ್ರಭುದೇವರನೂ ಒಂದೆ ವಚನದಲ್ಲಿ ಸ್ತೋತ್ರಮಂ ಮಾಡಲು, ಆ ಪ್ರಸ್ತಾವದೊಳು ಚಿಕ್ಕದಣ್ಣಾಯಕರು ಬಸವರಾಜದೇವರನು ಪ್ರಭುದೇವರನು ಮಡಿವಾಳತಂದೆಗಳನು ಒಂದೆ ವಚನದಲ್ಲಿ ಸ್ತೋತ್ರಮಂ ಮಾಡುವ ಪ್ರಸ್ತಾವದ ವಚನ:

೭೩೫

ಎನ್ನ ಅಂತರಂಗ ಬಸವಣ್ಣ,
ಬಹಿರಂಗ ಮಡಿವಾಳನು.
ಈ ಉಭಯ ಸಂಗವೆ ಪ್ರಭುದೇವರು.
ಇಂತಿವರ ಕರುಣದ ಕಂದನಾಗಿ ಬದುಕಿದೆನು ಕಾಣಾ
ಕೂಡಲಚೆನ್ನಸಂಗಮದೇವಾ! ॥೪೮॥

ಈ ಹೀಂಗೆಂದು ಚಿಕ್ಕದಣ್ಣಾಯಕರು ಬಸವಣ್ಣ ಮಡಿವಾಳತಂದೆಗಳು ಪ್ರಭುದೇವರನೂ ಒಂದೆ ವಚನದಲ್ಲಿ ಸ್ತೋತ್ರಮಂ ಮಾಡಲು, ಆ ಪ್ರಸ್ತಾವದೊಳು ಪ್ರಭುದೇವರು ಬಸವಣ್ಣ ಚೆನ್ನಬಸವಣ್ಣ ಮಡಿವಾಳತಂದೆಗಳನು ಕೂಡಿ ಹೊಗಳುವ ಪ್ರಸ್ತಾವದ ವಚನ:

೭೩೬

ಎನ್ನ ಕಾಯವ ಬಸವಣ್ಣನಳವಡಿಸಿಕೊಂಡ.
ಎನ್ನ ಮನವ ಚೆನ್ನಬಸವಣ್ಣನಳವಡಿಸಿಕೊಂಡ.
ಎನ್ನ ಭಾವವ ಮಡಿವಾಳಯ್ಯನಳವಡಿಸಿಕೊಂಡ.
ಇಂತೀ ಮೂವರು ಒಂದೊಂದನಳವಡಿಸಿಕೊಂಡ ಕಾರಣ,
ಗೊಹೇಶ್ವರಾ, ನಿಮ್ಮ ಶರಣರೆಂಬ ತ್ರಿಮೂರ್ತಿಗಳಿಗೆ
ನಮೋ ನಮೋ ಎನುತಿರ್ದೆನು. ॥೪೯॥

ಮತ್ತಂ,

೭೩೭

ಎನ್ನ ತನುವೆ ಚೆನ್ನಬಸವಣ್ಣನಯ್ಯಾ.
ಎನ್ನ ಮನವೆ ಮಡಿವಾಳನಯ್ಯಾ.
ಎನ್ನ ಪ್ರಾಣವೆ ಸಂಗನಬಸವಣ್ಣನಯ್ಯಾ.
ಗೊಹೇಶ್ವರಾ, ನಿಮ್ಮ ಶರಣರ ಘನವನು
ಎನ್ನ ಸರ್ವಾಂಗದಲ್ಲಿ ಕಂಡು ಪರಮಸುಖಿಯಾಗಿರ್ದೆನು. ॥೫೦॥

ಇಂತೆಲ್ಲಾ ಶಿವಗಣಂಗಳು ಓರೋರ್ವರ ಸ್ತೋತ್ರಮಂ ಮಾಡುತ್ತಿರಲು, ಆ ಪ್ರಸ್ತಾವದೊಳು ಸಿದ್ಧರಾಮಯ್ಯದೇವರು ಬಸವರಾಜದೇವರಿಗೆ ಶರಣಸಂಗದಿಂದ ಸರ್ವವು ಅಳವಟ್ಟು ಮಹಾಘನಲಿಂಗಸಂಗವಾಯಿತ್ತೆಂದು ಸ್ತುತಿಸುವ ಪ್ರಸ್ತಾವದ ವಚನ:

೭೩೮

ಆಯಿತ್ತಾಯಿತ್ತು ಫಲವಿಲ್ಲದ ವೃಕ್ಷ.
ಆಯಿತ್ತಾಯಿತ್ತು ಪದವಿಲ್ಲದ ಫಲ.
ಆಯಿತ್ತಾಯಿತ್ತು ಸೀಮೆಯ ಮಿಜಿದ ಸಂಬಂಧ.
ಆಯಿತ್ತಾಯಿತ್ತು ಅನ್ವಯದಲ್ಲಿ ಆಂದೋಳ
ಆಯಿತ್ತಾಯಿತ್ತು ನಿತ್ಯದಲ್ಲಿ ಭಕ್ತಿ.

ಆಯಿತ್ತಾಯಿತ್ತು ಭಕ್ತಿಯಲ್ಲಿ ವೈರಾಗ್ಯ.
ಆಯಿತ್ತಾಯಿತ್ತು ವೈರಾಗ್ಯದಲ್ಲಿ ಅನುಗುಣ.
ಆಯಿತ್ತಾಯಿತ್ತು ಸ್ವಾನುಭಾವ;
ಸ್ವಾನುಭಾವದಲ್ಲಿ ಸಕಲಭಕ್ತಿ;
ಸಕಲಭಕ್ತಿಯಿಂದ ಕಪಿಲಸಿದ್ಧಮಲ್ಲಿಕಾರ್ಜುನಯ್ಯನ
ಸಂಯೋಗ ಬಸವಣ್ಣಂಗೆ. ॥೫೧॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಮರಳಿಯಾ ಬಸವರಾಜದೇವರ ಸ್ತೋತ್ರಮಂ ಮಾಡಿದ ಪ್ರಸ್ತಾವದ ವಚನ:

೭೩೯

ಅಯ್ಯಾ, ನಿಮ್ಮ ಶರಣ ಬಸವಣ್ಣನಿಂದ ಲಿಂಗವ ಕಂಡು
ಒಳಗೆ ಬೈಚಿಟ್ಟುಕೊಂಡೆನಯ್ಯಾ!
ನಿಮ್ಮ ಶರಣ ಬಸವಣ್ಣನಿಂದ
ಲಿಂಗವ ಹಾಸಿ ಹೊದೆದುಕೊಂಡೆನು.
ನಿಮ್ಮ ಶರಣ ಬಸವಣ್ಣನಿಂದ ನಿರವಯವಾದೆನು.
ಎಲೆ ಕಪಿಲಸಿದ್ಧಮಲ್ಲಿನಾಥಯ್ಯಾ,
ನಿಮ್ಮ ಶರಣ ಬಸವಣ್ಣಂಗೆ ನಮೋ ನಮೋ ಎನುತಿರ್ದೆನು. ॥೫೨॥

ಮತ್ತಂ, ಸಿದ್ಧರಾಮಯ್ಯದೇವರು ಪ್ರಭುದೇವರ ಸ್ತೋತ್ರಮಂ ಮಾಡಿದ ಪ್ರಸ್ತಾವದ ವಚನ:

೭೪೦

ಎಲೆ ಅಯ್ಯಾ, ನಿಮ್ಮ ನಚ್ಚಿನ ಮಚ್ಚಿನ ಶರಣರ
ಸಂಗದಲ್ಲಿರಿಸಿ ಎನ್ನನಾಗುಮಾಡಿದಿರಿ.
ಆಹಾ! ನಿಮ್ಮ ಕರುಣವನೇನೆಂದುಪಮಿಸುವೆನು?
ಎರಡು ಪುರವ ಮೆಟ್ಟಿ, ಮೇಲುಪುರವ ನೋಡುತ್ತಿರ್ದೆನು.
ಮೇಲುಪುರವ ಭೇದಿಸಲೊಡನೆ ನೀನು ನಾನಾದೆನಯ್ಯಾ.
ಕಪಿಲಸಿದ್ಧಮಲ್ಲಿನಾಥಾ,
ನಿಮ್ಮ ಶರಣ ಪ್ರಭುದೇವರ ಕರುಣದಿಂದಲಾನು ಬದುಕಿದೆನು! ॥೫೩॥

ಮತ್ತಂ, ಸಿದ್ಧರಾಮಯ್ಯದೇವರು ಚೆನ್ನಬಸವರಾಜದೇವರ ಸ್ತೋತ್ರಮಂ ಮಾಡುವ ಪ್ರಸ್ತಾವದ ವಚನ:

೭೪೧

ಅಯ್ಯಾ, ಮೂಜುಪುರದ ಮೇಲುಪ್ಪರಿಗೆಯ
ಕೆಲಸವನೇನೆಂಬೆನಯ್ಯಾ!
ಮುತ್ತಿನ ಕಳಸದ ಮೇಲೆ ಒಂದು
ಅರಳಿದ ಪುಷ್ಪದ ಪರಿಯೊಳಗೆ ಅಗ್ನಿಯ ಕಂಡೆನಾಗಿ,

ಕಪಿಲಸಿದ್ಧಮಲ್ಲಿನಾಥಾ,
ನಿಮ್ಮ ಶರಣ ಚೆನ್ನಬಸವಣ್ಣ ತೋಱಿದ ಹಾದಿ ಸುಪಥವಾಯಿತ್ತಾಗಿ,
ನಾನು ಚೆನ್ನಬಸವಣ್ಣಂಗೆ ನಮೋ ನಮೋ ಎನುತಿರ್ದೆನು. ॥೫೪॥

ಮತ್ತಂ,

೭೪೨

ಅಜ್ಞಾನ ಸಿದ್ಧನನರ್ಚಿಸುವಲ್ಲಿ,
ಆರಯ್ಯಾ ಬಲ್ಲವರು ಚೆನ್ನಬಸವಣ್ಣನಲ್ಲದೆ?
ಮೂರ್ತಿ ಎಂಟು ಆಗದ ಮುನ್ನ,
ಮುಖಲಿಂಗವಾಗಿರ್ದ ಸುದ್ದಿಯನಾರಯ್ಯಾ ಬಲ್ಲವರು ಚೆನ್ನಬಸವಣ್ಣನಲ್ಲದೆ?
ಸದಮಳಜ್ಞಾನದಲ್ಲಿ ಒಪ್ಪಿಪ್ಪ
ಅಕ್ಷರದ್ವಯದ ಭೇದಾದಿಭೇದಮಂ ಭೇದಿಸಿ,
ಲೋಕಕ್ಕೆ ಭಕ್ತಿಯ ಸಾಧಿಸಿ ಕೊಟ್ಟ,
ಲೋಕಕ್ಕೆ ಉರುತರ ಗುರುವಾದ ಕಾರಣ,
ಚೆನ್ನಬಸವಣ್ಣನೈ ಕಪಿಲಸಿದ್ಧಮಲ್ಲಿಕಾರ್ಜುನ. ॥೫೫॥

ಮತ್ತಂ, ಸಿದ್ಧರಾಮಯ್ಯದೇವರು ಮಡಿವಾಳತಂದೆಗಳ ಸ್ತೋತ್ರಮಂ ಮಾಡಿದ ಪ್ರಸ್ತಾವದ ವಚನ:

೭೪೩

ಎಲೆ ಅಯ್ಯಾ, ಗಾರುಡವ ಬಲ್ಲನಯ್ಯಾ,
ಮತ್ತೆ ಗಾರುಡಿಗನಲ್ಲ ನೋಡಯ್ಯಾ.
ಎನ್ನ ಮನದ ಮೇಲಿಪ್ಪ ಶಂಕೆ ಎಂಬ ವಿಷವ
ಗಾರುಡಿಸಿ ಮಾಣಿಸಿ ನಿಶ್ಶಂಕನ ಮಾಡಿದ–
ಕಪಿಲಸಿದ್ಧಮಲ್ಲಿನಾಥನಲ್ಲಿ ಮಡಿವಾಳಮಾಚಿತಂದೆಯ ಪಾದಕ್ಕೆ
ನಮೋ ನಮೋ ಎನುತಿರ್ದೆನು. ॥೫೬॥

ಈ ಹೀಂಗೆಂದು ಸಿದ್ಧರಾಮಯ್ಯದೇವರು ಮಡಿವಾಳತಂದೆಗಳ ಸ್ತೋತ್ರಮಂ ಮಾಡಲು, ಆ ಮಡಿವಾಳಯ್ಯಗಳು ಸಿದ್ಧರಾಮಯ್ಯದೇವರ ಸ್ತೋತ್ರಮಂ ಮಾಡಿದ ಪ್ರಸ್ತಾವದ ವಚನ:

೭೪೪

ಅಕ್ಕತಂಗಿಯರೈವರು ಒಬ್ಬನ ಅರಸಿಯರು.
ಕಿಱಿಯಕ್ಕನ ಕೂಡುವರೆ ಹಿರಿಯರಸಿ ಕುಂಟಣಿ.
ಹಿರಿಯರಸಿಯ ಕೂಡುವರೆ ಕಿಱಿಯರಸಿ ಕುಂಟಣಿ.
ಈ ಇಬ್ಬರನು ಕೂಡುವರೆ,
ಬೇಱುಮಾಡಿ ಬೆರಸಬಾರದೆಂದಱಿದು ಒಂದಾಗಿ ಕೂಡಲು,
ಒಬ್ಬಾಕೆ ಕಣ್ಣ ಕೆಚ್ಚನೆ ಮಾಡುವಳು; ಒಬ್ಬಾಕೆ ಬುದ್ಧಿಯ ಹೇಳುವಳು.

ಒಬ್ಬಾಕೆ ಹಾಸಿ ಕೊಡುವಳು.
ಈ ಐವರನ್ನು ಅಪ್ಪಿಕೊಂಡು ಒಂದೆ ಬಾರಿ ಬೆರಸಲು,
ನೀರು ನೀರ ಬೆರಸಿದಂತಾಯಿತ್ತು.
ಕಲಿದೇವಯ್ಯಾ, ನಿಮ್ಮ ಶರಣ ಸಿದ್ಧರಾಮಯ್ಯದೇವರು
ಈ ಪಥವ ಕಲಿಸಿ ನಿಜವಾಸದಲ್ಲಿರಿಸಿದ ಕಾರಣ,
ಆನು ನಮೋ ನಮೋ ಎನುತಿರ್ದೆನು! ॥೫೭॥

ಇಂತೀ ಶ್ರೀಮತ್ ಸಕಲಗಣ ಪುರಾತನರೊಳ್ ಪ್ರಭುದೇವರು
ಮಹಾನುಭಾವಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್
ಪ್ರಭುದೇವರ ಪೂಜಾಸ್ತುತಿಗಂ
ಏಕಾದಶೋಪದೇಶಂ ಸಮಾಪ್ತಂ
ಅಂತು ವಚನ ೭೪೪ ಕ್ಕಂ ಮಂಗಳ ಮಹಾ ಶ್ರೀ

❖

೧೨
ಆಯ್ದಕ್ಕಿ ಮಾರಯ್ಯಗಳ ಸಂಪಾದನೆ

*ಕಂದ:

ಅಕ್ಕಿಯೊಪ್ಪಿಡಿಯನಾಯ್ತಂ
ದಕ್ಕಜೆನಿಂ ಬಸವಮುಖ್ಯ ಶರಣರಿಗರ್ಪಿಸಿ
ದಿಕ್ಕನೆ ನಿಜದೊಳು ನಿಂದಾ-
ಯ್ದಕ್ಕಿಯ ಮಾರಯ್ಯಗಳ ಚರಿತ್ರವನುಸುರ್ವೆಂ ॥೧॥

ಅದೆಂತೆಂದೊಡಾ ಪ್ರಭುದೇವರು ಬಸವರಾಜದೇವರು ಚೆನ್ನಬಸವರಾಜದೇವರು ಮಡಿವಾಳಮಾಚಿತಂದೆಗಳು ಸಿದ್ಧರಾಮಯ್ಯದೇವರು ಸೊಡ್ಡಳಬಾಚರಸರು ಹಡಪದಪ್ಪಣ್ಣಗಳು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳು ಸುಖಾನುಭಾವಗೋಷ್ಠಿಯೊಳಿರುತ್ತಿರಲು, ಆ ಪ್ರಸ್ತಾವದೊಳ್ ಆಯ್ದಕ್ಕಿಮಾರಿತಂದೆಗಳೆಂಬ ಶಿವಶರಣನು ಬಸವರಾಜದೇವರು ಮೊದಲಾದ ಶರಣಸಮೂಹದಲ್ಲಿಗೆ ಬಂದು, ಪ್ರಭುದೇವರೊಡನೆ ತನ್ನ ಕಾಯಕದ ನಿರ್ವಂಚಕತ್ವವೆ ಗುರು ಲಿಂಗ ಜಂಗಮ, ಕಾಯಕವೆ ಕೈಲಾಸವೆಂದು ಬಿನ್ನಹಂ ಮಾಡುವ ಪ್ರಸ್ತಾವದ ವಚನ:

೭೪೫

ಕಾಯಕದಲ್ಲಿ ನಿರತನಾದರೆ,
ಗುರುದರುಶನವಾದಡೂ ಮಱೆಯಬೇಕು;
ಲಿಂಗಪೂಜೆಯಾದಡೂ ಮಱೆಯಬೇಕು:
ಜಂಗಮ ಮುಂದಿದ್ದಡೂ ಹಂಗು ಹಱೆಯಬೇಕು.
ಕಾಯಕವೆ ಕೈಲಾಸವಾದ ಕಾರಣ,
[1]ಅಮರೇಶ್ವರಲಿಂಗ[1]ವಾಯಿತ್ತಾದಡೂ ಕಾಯಕದೊಳಗು. ॥೧॥

೭೪೬

ಹಾಗದ ಕಾಯಕವ ಮಾಡಿಕೊಂಡು,
ಹಣವಡ್ಡವ ತಾ ಎಂಬಲ್ಲಿ ಸತ್ಯದ ಕಾಯಕವುಂಟೆ?

---

*+ಶ್ರೀಗುರುವೆ ಗತಿ (ಮೂ)
೧-೧ ಆಯ್ದಕ್ಕಿ ಮಾರಯ್ಯ ಹಾಗೂ ಲಕ್ಕಮ್ಮನ ಎಲ್ಲ ವಚನಗಳಲ್ಲಿ 'ಅಮಲೇಶ್ವರಲಿಂಗ' ಎಂದು ಬಂದಿದೆ (ಮೂ)

ಭಕ್ತರಲ್ಲಿ ಕಾಯಕಕ್ಕೆ ಕಡಿಮೆಯಾಗಿ ತಾ ಎಂಬುದು
ಅಮರೇಶ್ವರಲಿಂಗಕ್ಕೆ ಚಿತ್ತಶುದ್ಧದ ಕಾಯಕ. ॥೨॥

ಮತ್ತಂ,

೭೪೭

ನೇಮವ ಮಾಡಿಕೊಂಡು, ಭಕ್ತರ ಭವನಂಗಳ ಹೊಕ್ಕು,
ಕಾಯಕ ಸತ್ತು ಹಣ ಹೊನ್ನ ಬೇಡಿಹೆನೆಂಬುದು
ಕಷ್ಟವಲ್ಲವೆ ಸದ್‌ಭಕ್ಕಂಗೆ? ಆ ಗುಣ ಅಮರೇಶ್ವರಲಿಂಗಕ್ಕೆ ದೂರ. ॥೩॥

ಮತ್ತಂ,

೭೪೮

ಗುರು ಲಿಂಗ ಜಂಗಮದಲ್ಲಿ ಬೆರಸಿ ದಾಸೋಹವ ಮಾಡುವಲ್ಲಿ,
ಹೊನ್ನು ಹೆಣ್ಣು ಮಣ್ಣು ಇವೆ ಮೂಲ ಮೊದಲು.
ಮಾಟ ಸ್ವಸ್ಥವಾದಲ್ಲಿ ಈ ಮೂಱು ಮಱೆಯಬೇಕು,
ಅಮರೇಶ್ವರಲಿಂಗವನಱಿವುದಕ್ಕೆ. ॥೪॥

ಈ ಹೀಂಗೆಂದು ಆಯ್ದಕ್ಕಿಮಾರಿತಂದೆಗಳು ತಮ್ಮ ಕಾಯಕದ ನಿರುತಮಂ ಪ್ರಭುದೇವರೊಡನೆ ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೭೪೯

ಕಂಗಳ ಮುಂದಣ ಗೊತ್ತ ಹಱಿದು
ಕಾಮ್ಯದ ಮುಂದಣ ಚಿತ್ತವ ಹಱಿದು,
ಮಾಡಿಹೆನೆಂಬ ಮಾಟಕೂಟದ ಚಿತ್ತ ನಿಂದಲ್ಲದೆ ಸ್ವಸ್ಥವಿಲ್ಲ.
ಹಾಂಗಲ್ಲದೆ ಗೊಹೇಶ್ವರಲಿಂಗವ ಕಾಣಬಾರದು
ಆಯ್ದಕ್ಕಿಯ ಮಾರಯ್ಯಾ. ॥೫॥

ಇದಕ್ಕೆ ಆಯ್ದಕ್ಕಿಯ ಮಾರಿತಂದೆಗಳು ಬಿನ್ನೈಸುವ ಪ್ರಸ್ತಾವದ ವಚನ:

೭೫೦

ಒಂದ ಬಿಟ್ಟು ಒಂದ ಕಂಡೆಹೆನೆಂದಡೆ,
ಅದು ಕಾಣಬಾರದ ಬಯಲು.
ಒಂದಱಲ್ಲಿ ಸಲೆ ಸಂದು ಹಿಂಗದ ಭಾವ ನೆಲೆಗೊಂಡಲ್ಲೆ
ಅಮರೇಶ್ವರಲಿಂಗವು ತಾನೆ. ॥೬॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೭೫೧

ಮಾಡಿಹೆ ಮಾಡಿಹೆನೆಂಬನ್ನಬರ
ತನ್ನ ಅವಧಿಗೆ ಬಂದುದನಱಿವ ಪರಿ ಇನ್ನೆಂತೊ?
ಅಸಗ ನೀರಡಿಸಿ ನಿಂದಂತೆ ಆಗಬೇಡಾ,
ಗೊಹೇಶ್ವರಲಿಂಗವನಱಿವುದಕ್ಕೆ ಮಾರಯ್ಯಾ. ॥೭॥

ಇದಕ್ಕೆ ಆಯ್ದಕ್ಕಿಯ ಮಾರಿತಂದೆಗಳು ಬಿನ್ನೈಸುವ ಪ್ರಸ್ತಾವದ ವಚನ:

೭೫೨

ತೊಟ್ಟು ಬಿಡದನ್ನಕ್ಕ ಮತ್ತಾ ಬುಡದಾಸೆ ಬೇಕು.
ಮರ್ತ್ಯದ ಹಂಗುಳ್ಳನ್ನಕ್ಕ ಸತ್ಯಶರಣರ ಸಂಗ,
ನಿತ್ಯ ಜಂಗಮಸೇವೆ ಕೃತ್ಯವಿರಬೇಕು ಅಮರೇಶ್ವರಲಿಂಗವನಱಿವುದಕ್ಕೆ. ॥೮॥

ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೭೫೩

ಮಾಡುವ ಮಾಟದಿಂದವೆ ಬೇಱೊಂದಱಿಯಬೇಕು.
ಅಱಿವಿಂಗೆ ನೆಮ್ಮುಗೆ ಒಡಗೂಡಬೇಕು.
ಅಱಿವಿಂಗೆ ನೆಮ್ಮುಗೆ ಒಡಗೂಡಿದ ಬಳಿಕ,
ಬಯಲ ಭ್ರಮೆಯ ಕಳೆದು
ನಮ್ಮ ಗೊಹೇಶ್ವರಲಿಂಗದಲ್ಲಿ ನಿಜಪದವನೈದುವುದು ಮಾರಯ್ಯಾ. ॥೯॥

ಈ ಹೀಂಗೆಂದು ಪ್ರಭುದೇವರು ಮಹಾಘನಲಿಂಗದ ನಿಜಪದದಲ್ಲಿ ಬೆರಸಿ ಎರಡಳಿದಿರಬೇಕೆಂದು ನಿರೂಪಿಸಲು, ಇದಕ್ಕೆ ಆಯ್ದಕ್ಕಿಯ ಮಾರಿತಂದೆಗಳು ಕೃತನಿಶ್ಚಯವನೆಯ್ದಿ, ತಮ್ಮ ಕಾಯಕವ ತಾವೆ ಜಱಿದು, ಘನಲಿಂಗದ ನಿಜಸಮಾಧಿಯೊಳಗೆ ಬೆರಸಿ ನಿಂದು, ಪ್ರಭುದೇವರ ಶ್ರೀಪಾದಕ್ಕೆ ನಮಸ್ಕರಿಸುವ ಪ್ರಸ್ತಾವದ ವಚನ:

೭೫೪

ಅಹುದಹುದು ಗೆಜ್ಜಲು ಮನೆಯ ಮಾಡೆ
ಸರ್ಪಂಗೆ ಇಂಬಾದಂತೆ,
ನಾನತ್ತಣ ದ್ರವ್ಯವ ತಂದು ಇತ್ತ ಮಾಡಿದರೆ ನನಗಿನ್ನೆತ್ತಣ ಮುಕ್ತಿ?
ಘನಮಹಿಮ ಶರಣರ ಸಂಗದಿಂದ
ಘನಕ್ಕೆ ಘನ ವೇದ್ಯವಾದ ಬಳಿಕ,
ಅಱಿವಱಿತು ಮಱಹು ನಷ್ಟವಾಗಿ,
ಅಮರೇಶ್ವರಲಿಂಗದಲ್ಲಿ ನಿಜಪದವ,
ಪ್ರಭುದೇವರ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು. ॥೧೦॥

ಈ ಹೀಂಗೆಂದು ಆಯ್ದಕ್ಕಿಯ ಮಾರಿತಂದೆಗಳು ನಿಮ್ಮ ಸಂಗದಿಂದ ಘನಲಿಂಗದಲ್ಲಿ ಮನಮಗ್ನಯೋಗವಾಯಿತ್ತೆಂದು ಪ್ರಭುದೇವರೊಡನೆ ಬಿನ್ನೈಸುತ್ತಿರಲು, ಆ ಪ್ರಸ್ತಾವದೊಳು ಆಯ್ದಕ್ಕಿಯ ಮಾರಯ್ಯಗಳ ಪುಣ್ಯಾಂಗನೆಯಪ್ಪ ಲಕ್ಕಮ್ಮಗಳು ಬಂದು, ಪ್ರಭುದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳಿಗೆ ನಮಸ್ಕರಿಸಿ, ತಮ್ಮ ಪತಿಗೆ ಕಾಯಕ ನಿಂದಿತ್ತು ಹೋಗಯ್ಯಾ ಎನ್ನಾಳ್ದನೆ ಎಂದು ಬಿನ್ನೈಸಿ ಕಳುಹುವ ಪ್ರಸ್ತಾವದ ವಚನ:

೭೫೫

ಕಾಯಕ ನಿಂದಿತ್ತು ಹೋಗಯ್ಯಾ ಎನ್ನಾಳ್ದನೆ.
ಭಾವ ಶುದ್ಧವಾಗಿ ಮಹಾ ಶರಣರ ತಿಪ್ಪೆಯ ತಪ್ಪಲ ಅಕ್ಕಿಯ ತಂದು

ನಿಶ್ಚೈಸಿ ಮಾಡಬೇಕು ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ.
ಬೇಗ ಹೋಗು ಮಾರಯ್ಯಾ. ॥೧೧॥

ಮತ್ತಂ,

೭೫೬

ಅರಿವಱಿತ ಅಱುವೆಯ ಅಂಗದಲ್ಲಿ,
ಬಯಕೆಯಱಿತ ಕೈಯಲ್ಲಿ
ತಂಡುಲವನಾಯ್ದುಕೊಂಡು,
ಸಂದ ಪ್ರಮಥರ ಅಂಗಳಕ್ಕೆ ಬೇಗ ಹೋಗಿ ಕೊಂಡು ಬಾ
ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ಮಾರಯ್ಯಾ. ॥೧೨॥

ಈ ಹೀಂಗೆಂದು ಲಕ್ಕಮ್ಮಗಳು ಆಯ್ದಕ್ಕಿಯ ಮಾರಯ್ಯಗಳ ಕಾಯಕಕ್ಕೆ ಕಳುಹಲು, ಆ ಆಯ್ದಕ್ಕಿಯ ಮಾರಿತಂದೆಗಳು ಸಂತೋಷಚಿತ್ತರಾಗಿ ದಳದಳನೆ ಬಸವೇಶ್ವರನ ಅಂಗಳಕ್ಕೆ ಬಂದು, ಅಲ್ಲಿ ಚಲ್ಲಿರ್ದ ತಂಡುಲಮಂ ಪಿರಿದಾಗಿ ಆಯ್ದು ತರಲು, ಅದು ಆಶೆಯೆಂದು ಲಕ್ಕಮ್ಮಗಳು ವಿಡಂಬಿಸುವ ಪ್ರಸ್ತಾವದ ವಚನ:

೭೫೭

ಸಂದಣಿಗೊಂಡು ಮನಹರುಷದಿಂದ
ಬಸವಣ್ಣನ ಅಂಗಳಕ್ಕೆ ಹೋಗಿ,
ತಿಪ್ಪೆಯ ತಪ್ಪಲಲ್ಲಿ ಬಿದ್ದಿರ್ದ ತಂಡುಲವ ಕಟ್ಟಿಕೊಂಡು
ಎಯ್ದಾಗಿ ತರಲು ಎಯ್ದಾಗಿ ಬಂದಿತ್ತಲ್ಲಾ!
ಎಂದಿನಂದವೆ ಸಾಕು.
ಮತ್ತೆ ಕೊಂಡು ಹೋಗಿ ಅಲ್ಲಿಯೆ ಸುರಿ.
ಮಾರಯ್ಯಪ್ರಿಯ ಅಮರೇಶ್ವರಲಿಂಗ ಕೊಟ್ಟ
ಕಾಯಕವೆ ಸಾಕು ಮಾರಯ್ಯಾ. ॥೧೩॥

[೧]ಮತ್ತಂ,[೧]

೭೫೮

ಆಸೆಯೆಂಬುದು ಅರಸಿಂಗಲ್ಲದೆ
ಶಿವಭಕ್ತರಿಗುಂಟೆ ಅಯ್ಯಾ?
ರೋಷವೆಂಬುದು ಯಮದೂತರಿಗಲ್ಲದೆ
ಅಜಾತರಿಗುಂಟೆ ಅಯ್ಯಾ?
ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ.
ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ದೂರ ಮಾರಯ್ಯಾ. ॥೧೪॥

ಮತ್ತಂ,

೧–೧ X(ಮು)

೭೫೯

ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ?
ಬೆಟ್ಟ ಬಲ್ಲಿತ್ತೆಂದರೆ
ಉಳಿಯ ಮೊನೆಯಲ್ಲಿ ಬಡತನವಿದ್ದರೆ ಒಡೆಯದೆ?
ಘನಶಿವಭಕ್ತರಿಗೆ ಬಡತನವಿಲ್ಲ.
ಸತ್ಯರಿಗೆ ದುಷ್ಕರ್ಮವಿಲ್ಲ.
ಎನಗೆ ಮಾರಯ್ಯಪ್ರಿಯ ಅಮರೇಶ್ವರಲಿಂಗವುಳ್ಳನ್ನಕ್ಕರ
ನನಗಾರ ಹಂಗಿಲ್ಲ ಮಾರಯ್ಯಾ. ॥೧೫॥

ಮತ್ತಂ,

೭೬೦

ಭಕ್ತರು ಕಾಯಕವೆಂದು ದಾಯಗಾಜಿಕೆಯಲ್ಲಿ ತಂದು
ದಾಸೋಹವ ಮಾಡಬಹುದೆ?
ಒಮ್ಮನವ ತಂದು ಒಮ್ಮನದಲ್ಲಿಯೆ ಮಾಡಿ,
ಇಮ್ಮನವಾಗದ ಮುನ್ನವೆ
ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ಸಲ್ಲಬೇಕು ಮಾರಯ್ಯಾ. ॥೧೬॥

ಮತ್ತಂ,

೭೬೧

ಭಕ್ತಂಗೆ ಬಡತನವುಂಟೆ? ನಿತ್ಯಂಗೆ ಮರಣವುಂಟೆ?
ಭಕ್ತರು ಬಡವರೆಂದು ಮತ್ತೊಂದ ಕೊಟ್ಟಹೆನೆಂದರೆ,
ಮಾರಯ್ಯಪ್ರಿಯ ಅಮರೇಶ್ವರಲಿಂಗವು ಸತ್ತಂದಿಗಲ್ಲದೆ ಬಡತನವಿಲ್ಲ. ॥೧೭॥

ಮತ್ತಂ,

೭೬೨

ಐದು ಇಲ್ಲವಾದಂದಿಗಲ್ಲದೆ,
ಜಗದೊಳಗಾರಿಗೂ ಬಡತನವಲ್ಲದಿಲ್ಲ.
ಐದುವುಳ್ಳನ್ನಕ್ಕ ಸಕಲಜೀವನಕ್ಕೆ ಚೇತನ.
ಮಾರಯ್ಯಪ್ರಿಯ ಅಮರೇಶ್ವರಲಿಂಗವುಳ್ಳನ್ನಕ್ಕ
ಘನಮನಸಂಪನ್ನರು. ॥೧೮॥

ಮತ್ತಂ,

೭೬೩

ಬಹಾಗ ಕೊಂಡುಬಂದ ಪ್ರಾಪ್ತಿಯಲ್ಲದೆ,
ಬೇಱೊಂದ ಗಳಿಸಲಿಲ್ಲ; ಬೇಱೊಂದ ಕೆಡಿಸಲಿಲ್ಲ,
ಬಂದುದು ನಿಂದುದು.
ಮಾರಯ್ಯಪ್ರಿಯ ಅಮರೇಶ್ವರಲಿಂಗ ಕೊಟ್ಟಲ್ಲದಿಲ್ಲ. ॥೧೯॥

ಮತ್ತಂ,

೭೬೪

ಕಾಯವಳಿದ ಠಾವಿನಲ್ಲಿ ಜೀವದ ಎಡೆಯಾಟವುಂಟೆ?
ಭಾವ ಶುದ್ಧವಿಲ್ಲದ ಭಕ್ತಿ ಹೋಯಿತ್ತು–
ಮಾರಯ್ಯಪ್ರಿಯ ಅಮರೇಶ್ವರಲಿಂಗವ ಮುಟ್ಟದೆ. ॥೨೦॥

[1]ಮತ್ತಂ[1],

೭೬೫

ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು.
ನಡೆಯಿಲ್ಲದ ನುಡಿ ಅಱಿವಿಂಗೆ ಹಾನಿ.
ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ.
ದೃಢವಿಲ್ಲದ ಭಕ್ತಿ, ಅಡಿ ಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ,
ಮಾರಯ್ಯಪ್ರಿಯ ಅಮರೇಶ್ವರಲಿಂಗವ ಮುಟ್ಟದ ಭಕ್ತಿ. ॥೨೧॥

ಮತ್ತಂ,

೭೬೬

ಒಮ್ಮನವ ಮೀಱಿ ಇಮ್ಮನದಲ್ಲಿ ತಂದಿರಿ.
ಇದು ನಿಮ್ಮ ಮನವೋ?
ಬಸವಣ್ಣನ ಅನುಮಾನದ ಚಿತ್ತವೊ?
ಈ ಮಾತು ಮಾರಯ್ಯಪ್ರಿಯ
ಅಮರೇಶ್ವರಲಿಂಗಕ್ಕೆ ಸಲ್ಲದ ಬೋನ,
ಅಲ್ಲಿಯೇ ಸುರಿದು ಬನ್ನಿ ಮಾರಯ್ಯಾ. ॥೨೨॥

ಈ ಹೀಂಗೆಂದು ಆಯ್ದಕ್ಕಿಯ ಮಾರಯ್ಯಗಳ ಪುಣ್ಯಾಂಗನೆ ಆಸೆಯ ವಿಡಂಬಿಸಿ ಲಿಂಗೈಕ್ಯದ ಭೇದವನೆಚ್ಚರಿಸಿ ಬಿನ್ನೈಸುತ್ತಿರಲು, ಆ ಮಾರಯ್ಯತಂದೆಗಳು ಜಜ್ಜರಂಬೋಗಿ, ಮಹಾಘನಲಿಂಗದೊಳಗೆ ವಾರಿ ವಾರಿ ಬೆರೆದ ಹಾಗೆ, ಶಿಖಿ ಕರ್ಪುರ ಸಂಯೋಗದಂತೆ ಎಂದಪ್ಪುದೆಂದು ಬೆಸಗೊಂಬ ಪ್ರಸ್ತಾವದ ವಚನ:

೭೬೭

ಗಂಗೆವಾಳುಕ ಸಮಾರುದ್ರರೆಲ್ಲರು
ತಾವು ಬಂದಲ್ಲಿಯೆ ಬಟ್ಟೆಯ ಮೆಟ್ಟಿದಂತಾದರು.
ಪ್ರಮಥಗಣಂಗಳೆಲ್ಲರು ಪ್ರಮಾಣಿಸಿದಲ್ಲಿ ಹರಿದರು.
ಎನಗೆ ಅಱಿವು ಕಱಿಗೊಂಬ ಅಱಿವೆಲ್ಲಿ
ಅಮರೇಶ್ವರಲಿಂಗದಲ್ಲಿ ಹೇಳಾ? ॥೨೩॥

೧–೧ X (ಮು)

ಈ ಹೀಂಗೆಂದು ಮಾರಯ್ಯಗಳು ತಮ್ಮ ಪುಣ್ಯಾಂಗನೆಯ ಬೆಸಗೊಳಲು, ಆ ಲಕ್ಕಮ್ಮಗಳು ಶಿವಲೋಕಭ್ರಮೆಯ ವಿಡಂಬಿಸುವ ಪ್ರಸ್ತಾವದ ವಚನ:

೭೬೮

ಮಾಡುವ ಮಾಟವುಳ್ಳನ್ನಕ್ಕ,
ಬೇಱೊಂದು ಪದವನಱಸಲೇತಕ್ಕೆ?
ದಾಸೋಹವೆಂಬ ಸೇವೆಯ ಬಿಟ್ಟು, ನೀಸಲಾರದೆ,
ಕೈಲಾಸವೆಂಬ ಆಸೆ ಬೇಡ.
ಮಾರಯ್ಯಪ್ರಿಯ ಅಮರೇಶ್ವರಲಿಂಗವಿದ್ದ ಠಾವೆ ಕೈಲಾಸ. ॥೨೪॥

ಮತ್ತಂ,

೭೬೯

ಮಾಡಿ ನೀಡಿ ಹೋದೆಹೆನೆಂಬಾಗ
ಕೈಲಾಸವೇನು ಕೈಕೂಲಿಯೆ?
ಮುಂದೊಂದ ಕಲ್ಪಿಸದೆ, ಹಿಂದೊಂದ ಭಾವಿಸದೆ,
ಸಲೆ ಸಂದಿದ್ದಾಗವೆ
ಮಾರಯ್ಯಪ್ರಿಯ ಅಮರೇಶ್ವರಲಿಂಗವಿದ್ದ ಠಾವೆ ಕೈಲಾಸ. ॥೨೫॥

೭೭೦

ಇದ್ದೆಹೆನೆಂಬ ಕಾಯದ ಅಱಿಕೆ ಹಿಂಗಿತ್ತೆ?
ನಾ ಮಾಡಿಹೆನೆಂಬ ತವಕ ಹಿಂಗಿತ್ತೆ?
ಉಭಯದ ಕೈಕೂಲಿ ಹಿಂಗಿ
ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ಅಲಸಿಕೆಯಾಯಿತ್ತು. ॥೨೬॥

ಈ ಹೀಂಗೆಂದು ಆಯ್ದಕ್ಕಿಯ ಮಾರಯ್ಯಗಳ ಪುಣ್ಯಾಂಗನೆ ತಮ್ಮ ಪತಿಗೆ ಬಿನ್ನೈಸಲು, ಇದಕ್ಕೆ ಮಾರಯ್ಯಗಳು ತಮ್ಮ ಸತಿಯ ಲಿಂಗಾಂಗಯೋಗಮಂ ಬೆಸಗೊಂಬ ಪ್ರಸ್ತಾವದ ವಚನ:

೭೭೧

ಅಂಧಕಂಗೆ ಜೀವವಿದ್ದಡೆ,
ಕಣ್ಣಿಂದಲೆ ಕಂಡು ನಡೆಯಬಲ್ಲನೆ?
ನೀ ಸತಿಯಾಗಿ, ನಾ ಪತಿಯಾಗಿ,
ಉಭಯ ಪ್ರಾಣ ಏಕರೂಪಾಗಿ
ಯೋಗದ ಅಂಗ ಅಮರೇಶ್ವರಲಿಂಗವ ತೋಱಾ. ॥೨೭॥

ಈ ಹೀಂಗೆಂದು ಆಯ್ದಕ್ಕಿಯ ಮಾರಯ್ಯಗಳು ಲಿಂಗದೊಳು ಒಡವೆರೆದು ಬೆರಸುವ ಭೇದ ಹೇಂಗೆಂದು ತಮ್ಮ ಸತಿಯ ಬೆಸಗೊಳಲು, ಇದಕ್ಕೆ ಅಹಂಕಾರಗುಣವಳಿದು, ತ್ರಿವಿಧ ದಾಸೋಹವೆ ಮಹಾಘನಲಿಂಗೈಕ್ಯವೆಂದು ಬಿನ್ನೈಸುವ ಪ್ರಸ್ತಾವದ ವಚನ:

೭೭೨

ಕೈದ ಕೊಡುವರಲ್ಲದೆ,
ಕಲಿತನವ ಕೊಡುವರುಂಟೆ ಮಾರಯ್ಯಾ?
ಹೆಣ್ಣು ಕೊಡುವರಲ್ಲದೆ
ಕೂಟಕ್ಕೊಳಗಾದವರುಂಟೆ ಮಾರಯ್ಯಾ?
ಕಳುವ ಚೋರಂಗೆ ಬಡವರೆಂದು ದಯ ಉಂಟೆ ಮಾರಯ್ಯಾ?
ಮನವ ನೋಡಿ ಭಕ್ತಿಯ ನೋಡಿಹೆನೆಂಬವಂಗೆ
ಎಮ್ಮಲ್ಲಿ ಗುಣವ ಸಂಪಾದಿಸಲಿಲ್ಲ ಮಾರಯ್ಯಾ.
ಶೂಲವ ಹಾಯ ಬಂದಲ್ಲಿ
ಮತ್ತಿನ್ನು ಸಾವಿಂಗೆ ಹಂಗುಪಡಲೇಕೆ?
ಮಾರಯ್ಯಪ್ರಿಯ ಅಮರೇಶ್ವರಲಿಂಗ, ನೀನೆ ಬಲ್ಲೆ. ॥೨೮॥

ಮತ್ತಂ,

೭೭೩

ಸಸಿಗೆ ನೀರೆಱೆದರೆ ಎಳಕುವುದಲ್ಲದೆ,
ನಷ್ಟಮೂಲಕ್ಕೆ ಹೊತ್ತು ನೀರ ಹೊಯ್ದರೆ ಎಳಕುವುದೆ ಮಾರಯ್ಯಾ?
ನಿನ್ನ ವಿರಕ್ತಿ ನಷ್ಟವಾಗದ ಮುನ್ನವೆ
ಮಾರಯ್ಯಪ್ರಿಯ ಅಮರೇಶ್ವರಲಿಂಗವನಱೆಯಿರಯ್ಯಾ. ॥೨೯॥

[೧]ಮತ್ತಂ,[೧]

೭೭೪

ಪೂಜೆಯುಳ್ಳನ್ನಕ್ಕ ಪುಣ್ಯದ ಗೊತ್ತು ಕಾಣಬಂದಿತ್ತು.
ಮಾಟವುಳ್ಳನ್ನಕ್ಕ ಮಹಾಪ್ರಮಥರ ಭಾಷೆ-ಭಾಗ್ಯ ದೊರೆಕೊಂಡಿತ್ತು.
ಮಾಟವಿಲ್ಲದವನ ಭಕ್ತಿ ಹಾಳೂರ ವಂಕಕ್ಕೆ ಕೋಲ ಹಿಡಿದಂತಾಯಿತ್ತು.
ಮಾಡುವಲ್ಲಿ ಉಭಯವಳಿದು ಮಾಡಬಲ್ಲಡೆ,
ಮಾರಯ್ಯಪ್ರಿಯ ಅಮರೇಶ್ವರಲಿಂಗವ ಕೂಡುವ ಕೂಟ. ॥೩೦॥

ಮತ್ತಂ,

೭೭೫

ಪ್ರತಿಷ್ಠೆಗೆ ಮಾಟವಲ್ಲದೆ ಸ್ವಯಂಭುವಿಗುಂಟೆ ಉಳಿ?
ನನಗೂ ನಿನಗೂ ಮಾರಯ್ಯಪ್ರಿಯ ಅಮರೇಶ್ವರಲಿಂಗವನಱೆವುದಕ್ಕೆ
ಬೇಱೊಂದು ಠಾವುಂಟೆ ಮಾರಯ್ಯಾ? ॥೩೧॥

ಮತ್ತಂ,

೧-೧ X (ಮು)

೭೭೬

ಆವ ಬೀಜವು ಬೀಳುವಲ್ಲಿ,
ಮೊಳೆಯ ಮುಖ ಹಿಂಚು ಮುಂಚುಂಟೆ?
ನೀನು ಮಱೆದಲ್ಲಿ, ನಾನಱಿದಲ್ಲಿ, ಬೇಱೊಂದೊಡಲುಂಟೆ?
ಮೂಲ ನಷ್ಟವಾದಲ್ಲಿ ಅಂಕುರ ನಿಂದಿತ್ತು.
ಕೂಟಕ್ಕೆ ಸತಿ ಪತಿ ಎಂಬ ನಾಮವಲ್ಲದೆ,
ಅಱಿವಿಂಗೆ ಬೇಱೊಂದೊಡಲುಂಟೆ?
ಬೇಱೊಂದಡಿಯಿಡದಿರು,
ಮಾರಯ್ಯಪ್ರಿಯ ಅಮರೇಶ್ವರಲಿಂಗವನಱಿಯಬಲ್ಲರೆ. ॥೩೨॥

ಇಂತು ತ್ರಿವಿಧ ದಾಸೋಹವೆ ಲಿಂಗೈಕ್ಯವೆಂದು ಆಯ್ದಕ್ಕಿಯ ಮಾರಯ್ಯಗಳ ಸತಿ ತಮ್ಮ ಪತಿಗಱುಹಲು, ಆ ಮಾರಯ್ಯಗಳು ಆ ತ್ರಿವಿಧ ದಾಸೋಹವೆ ಸಚ್ಚಿದಾನಂದ ಬ್ರಹ್ಮವೆಂದು ನಿಶ್ಚೈಸಿದ ಪ್ರಸ್ತಾವದ ವಚನ:

೭೭೭

ಗುರುಪೂಜೆಯ ಮಾಡವಲ್ಲಿ
ಗುರುಪೂಜೆಯಲ್ಲಿಯೆ ಮುಕ್ತರು.
ಲಿಂಗ ಪೂಜೆಯ ಮಾಡುವಲ್ಲಿ
ಲಿಂಗಪೂಜೆಯಲ್ಲಿಯೆ ಮುಕ್ತರು.
ಜಂಗಮಪೂಜೆಯ ಮಾಡುವಲ್ಲಿ
ಜಂಗಮಪೂಜೆಯಲ್ಲಿಯೆ ಮುಕ್ತರು.
ಈ ಮೂಱೊಂದಾಗಲಲ್ಲಿ ಬೇಱೊಂದಂಗವಿಲ್ಲ.
ಆಗು ಚೇಗೆ ಮೂಱಱಲ್ಲಿಯೆ ಅಡಗಿದ ಮತ್ತೆ,
ಅಮರೇಶ್ವರಲಿಂಗವ ಪೂಜಿಸಲಿಲ್ಲ. ॥೩೩॥

ಇಂತು ಆಯ್ದಕ್ಕಿಯ ಮಾರಯ್ಯಗಳೂ ಆ ಮಾರಯ್ಯಗಳ ಸತಿಯೂ ಮಹಾನುಭಾವ ದಿಂದೋಲಾಡುತ್ತ, ಮತ್ತಂ–ಮಾರಯ್ಯಗಳ ಸತಿ ತಮ್ಮ ಪತಿಯೊಡನೆ ಬಸವಣ್ಣ ಚೆನ್ನಬಸವಣ್ಣ ಪ್ರಭುದೇವರು ಮುಖ್ಯವಾದ ಅಸಂಖ್ಯಾತಮಹಾಗಣಂಗಳಿಗೆ ಲಕ್ಷದ ಮೇಲೆ ತೊಂಬತ್ತಾಱುಸಾವಿರ ಜಂಗಮದೇವರುಗಳಿಗೆ ಅಮರೇಶ್ವರಲಿಂಗದ ಮನೆಯಲ್ಲಿ ಪದಾರ್ಥವಾಯಿತ್ತೆಂದು ವಿಭೂತಿಯ ಕಳುಹುವ ಪ್ರಸ್ತಾವದ ವಚನ:

೭೭೮

ಬಸವಣ್ಣ ಚೆನ್ನಬಸವಣ್ಣ ಪ್ರಭುದೇವರು
ಮೊದಲಾದ ನೇಮ ನಿತ್ಯಕೃತ್ಯ ಸಕಲಸಮೂಹ,
ನಿತ್ಯನೇಮದ ಜಂಗಮಭಕ್ತರು ಗಣಂಗಳು
ಮುಂತಾದ ಸಮೂಹ ಸಂಪದಕ್ಕೆ
ನೈವೇದ್ಯಕ್ಕೆ ವೇಳೆ ಎಂದು ಹೇಳಿ ಬಾ,

ಮಾರಯ್ಯಪ್ರಿಯ ಅಮರೇಶ್ವರಲಿಂಗದ
ಮಹಾಮನೆಯಲ್ಲಿ ಪದಾರ್ಥವಾಯಿತ್ತೆಂದು. ॥೩೪॥

ಈ ಹೀಂಗೆಂದು ಆಯ್ದಕ್ಕಿಯ ಮಾರಯ್ಯಗಳ ಸತಿ ಪತಿಗೆ ಅಸಂಖ್ಯಾತ ಮಹಾಗಣಂಗಳಿಗೆ ವಿಭೂತಿಯ ಸಂಬಂಧಿಸಿ ಬನ್ನಿ ಎಂದು ಬಿನ್ನೈಸಲು, ಆ ಮಾರಯ್ಯಗಳು, ಶಿವಶಿವಾ! ನಾವೆತ್ತ, ನಿತ್ಯ ನೇಮ ವ್ರತ ಶೀಲ ಸಂಪನ್ನರುಗಳಿಗೆ ಅವರವರ [1]ನೇಮಗಳಂ[1] ಸಲಿಸುವರೆಮಗಳವೆ? ನಾವು ನಿರ್ಧನಿಕರು. ಅಸಂಖ್ಯಾತ ಮಹಾಗಣಂಗಳಿಗೆ ತೃಪ್ತಿಬಡಿಸುವುದಕ್ಕೆ ನಾವು ಅಶಕ್ತರೆಂದು ನಿರೂಪಿಸಿದ ಪ್ರಸ್ತಾವದ ವಚನ:

೭೭೯

ಗಣಸಮೂಹವೆಂದು ಕೂಡಿ ಮಾಡುವಲ್ಲಿ
ಸಮಯ ಸಮಯದ ನೋಪಿಂಗೀಡಾಗಿ
ಮಾಟದ ಸಂದೇಹವ ಹೊತ್ತು,
ಮಾತಿಗೊಳಗಾದಲ್ಲಿ ಭಕ್ತಿಯ ನೀತಿ ಸಿಕ್ಕಿತ್ತು.
ಅಮರೇಶ್ವರಲಿಂಗಕ್ಕೆ ದೂರವಾಯಿತ್ತು. ॥೩೫॥

ಈ ಹೀಂಗೆಂದು ಮಾರಯ್ಯಗಳು ತಮ್ಮ ಸತಿಯೊಡನೆ ಭಕ್ತಿ ನಿಜವಾಗದೆಂದು, ಎಡೆಯಲ್ಲಿ ಕೆಡುವುದೆಂದು ನಿರೂಪಿಸಲು, ಇದಕ್ಕೆ ಮಾರಯ್ಯಗಳ ಸತಿ ಶಿವನ ಕರುಣವ ಪಡೆದ ಶಿವಭಕ್ತರುಗಳು ಅಹುದಾಗದೆಂಬ ಸಂದೇಹವ ಮಾಡಲಾಗದೆಂದು ಬಿನ್ನೈಸುವ ಪ್ರಸ್ತಾವದ ವಚನ:

೭೮೦

ಮನ ಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ,
ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ,
ಸದ್‌ಭಕ್ತಂಗೆ ಎತ್ತ ನೋಡಿದತ್ತ ಲಕ್ಷ್ಮಿ ತಾನಾಗಿಪ್ಪಳು,
ಮಾರಯ್ಯಪ್ರಿಯ ಅಮರೇಶ್ವರಲಿಂಗದ ಸೇವೆಯುಳ್ಳನ್ನಕ್ಕ. ॥೩೬॥

ಮತ್ತಂ,

೭೮೧

ಅವಾರಿ ಎಂದು ಮಾಡುವಲ್ಲಿ
ಅವರಿವರೆಂದು ಪ್ರಮಾಣಿಸಲುಂಟೆ?
ಸಮಯಕ್ಕೆ ಹೋಗಿ ಸಮಯವ-
ನಜೆಯರೆಂದು ಭವಗೆಡಲುಂಟೆ?
ಭಾವಜ್ಞನಾದಡೆ ಭಾವವಜಿದಲ್ಲಿ ಶುಚಿಯಾಗಿರಬಲ್ಲಡೆ,
ಮಾರಯ್ಯಪ್ರಿಯ ಅಮರೇಶ್ವರಲಿಂಗವ ಹೊಂದುವ ಭಾವ. ॥೩೭॥

ಈ ಹೀಂಗೆಂದು ಮಾರಯ್ಯಗಳ ಸತಿ ತಮ್ಮ ಪತಿಗೆ ಬಿನ್ನೈಸಲು, ಆ ಮಾರಯ್ಯಗಳು ಹರುಷಂದಳೆದು ದರಹಸಿತವದನದಿಂದ ಸಕಲಪ್ರಮಥರ್ಗೆ ವಿಭೂತಿಯ ಸಂಬಂಧಿಸುವೆ, ನೀನು

೧-೧ ನೇಮಂಗಳ(ಮೂ)

ತಳುವದೆ ಎಲ್ಲಾ ಪ್ರಮಥರ್ಗೆ ಸಲುಸಲುವ ನೇಮಂಗಳಲ್ಲಿ ಪದಾರ್ಥವನನುಗೆಯ್ಯೆನಲು, ಅನಿತಜೊಳಗೆ ಆ ಮಾರಯ್ಯಗಳ ಸತಿ ಬಸವರಾದಿ ಅಸಂಖ್ಯಾತರ ಹೃತ್ಕಮಲಮಧ್ಯದಲ್ಲಿ ಮಹಾಜ್ಞಾನದಿಂ ನಿರೀಕ್ಷಿಸಿ, ಅವರವರ ಆಯತದ ಪದಾರ್ಥವ ನಿಮಿಷದೊಳನುಗೆಯ್ದು, ವಿಭೂತಿಯ ಸಂಬಂಧಿಸಿ, ಬಿಜಯಂಗೈಸಿ ತಹುದೆಂದು ಬಿನ್ನೈಸಲು, ಆ ಮಾರಯ್ಯಗಳು ಅಸಂಖ್ಯಾತ ಪ್ರಮಥರೆಲ್ಲರೂ ಸಹವಾಗಿ ಅಮರೇಶ್ವರಲಿಂಗದ ಮನೆಯಲ್ಲಿ ಪ್ರಸಾದವ ಸಲಿಸಲು ಬಾರಾ ಸಂಗನಬಸವಣ್ಣಾ ಎಂದು ವಿಭೂತಿಯ ಸಂಬಂಧಿಸುವ ಪ್ರಸ್ತಾವದ ವಚನ:

೭೮೨

ನಿರಾಕಾರವ ಮೀರುವ ಸಾಕಾರವುಂಟೆ?
ಗುಹೇಶ್ವರಲಿಂಗವ ಮೀರುವ
ಒಡೆತನವುಂಟೇ ಸಂಗನಬಸವಣ್ಣಾ?
ಸತಿಪುರುಷರಿಬ್ಬರೂ ಸತ್ಯವೆಂಬ ತಟ್ಟೆಯಲ್ಲಿ
ಚಿತ್ತಶುದ್ಧವೆಂಬ ವಿಭೂತಿಯ ಬೈಚಿಟ್ಟು,
ಸಕಲ ಸಂಪದ ಪ್ರಮಥರು ಮುಂತಾಗಿ
ಅಮರೇಶ್ವರಲಿಂಗದ ಆಶ್ರಯದಲ್ಲಿ
ಪ್ರಸಾದವ ಕೊಂಬುದಕ್ಕೆ ಬಾರಾ ಸಂಗನಬಸವಣ್ಣಾ. ॥೩೮॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

೭೮೩

ಅಲ್ಲಾ ಎನಬಾರದು; ಅಹುದೆನಬಾರದು,
ಕೂಡಲಸಂಗನ ಶರಣರ ಸಂಗ
ಕರಗಸದ ಬಾಯಿಧಾರೆಯಂತೆ ಅತಿಬಿರಿದಯ್ಯಾ. ॥೩೯॥

ಇದಕ್ಕೆ ಮಾರಯ್ಯಗಳ ಪ್ರತ್ಯುತ್ತರ :

೭೮೪

ಸಮಯಕ್ಕೆ ಬಂದೆಹೆನೆಂದು ಕಂದದೆ,
ಬಾರೆನೆಂದು ಕುಂದದೆ,
ಉಭಯದ ಸಂದನಳಿದು ನಿಂದಲ್ಲಿ
ಅಮರೇಶ್ವರಲಿಂಗವು ತಾನೆ. ॥೪೦॥

ಈ ಹೀಂಗೆಂದು ಮಾರಯ್ಯಗಳು ಬಿನ್ನೈಸಲು, ಅದಕ್ಕೆ ಬಸವರಾಜದೇವರು ಅಸಂಖ್ಯಾತರು ಸಹಿತ ಮಾರಯ್ಯಗಳ ಮಠಕ್ಕೆ ಪೋಪೆವೆಂದು ಹಾರೈಸಿ ಎದ್ದ ಪ್ರಸ್ತಾವದ ವಚನ:

೭೮೫

ಆಕಾಶವ ಮೀಱುವ ತರುಗಿರಿಗಳುಂಟೆ?
ಪ್ರತಿದೃಷ್ಟಿಯಾಗಿ ಮಾಡಬಲ್ಲಡೆ ಅದೆ ಮಾಟ,
ಕೂಡಲಸಂಗಮದೇವರ ಕೂಡುವ ಕೂಟ! ॥೪೧॥

ಈ ಹೀಂಗೆಂದು ಅಸಂಖ್ಯಾತರು ಮುಖ್ಯವಾಗಿ ಬಸವರಾಜದೇವರು ಏಳಲು, ಆ ಮಾರಯ್ಯಗಳು ಬಿಜಯಂಗೆಯ್ಸಿ ತಮ್ಮ ಮನೆಯೊಳಿರಿಸಿದ ಪ್ರಸ್ತಾವದ ವಚನ:

೭೮೬

ವಿಶ್ವಮಯರೂಪಾಗಿ ಬಂದೆಯಯ್ಯಾ ಭಕ್ತಿಗೆ,
ಎನ್ನ ಮನಕ್ಕೆ ಭಿನ್ನವಿಲ್ಲದೆ ಸಲೆ ಸಂದ ನಿಲವು
ಅಮರೇಶ್ವರಲಿಂಗಕ್ಕೆ ಕೂಟವಾಯಿತ್ತು. ॥೪೨॥

ಇಂತು ಅಸಂಖ್ಯಾತಮಹಾಗಣಂಗಳು ಸಹಿತ ಬಸವರಾಜದೇವರು ಪ್ರಭುದೇವರು ಸಹಿತ ಬಿಜಯಂಗೆಯ್ಸಿ ತಂದು ಪಾದಾರ್ಚನೆಯಂ ಮಾಡಿ, ಸಿಂಹಾಸನವನಿಕ್ಕಿ, ಶರಣರ ಮನದ ನೇಮಂಗಳಂ ಎಡೆಮಾಡಿ, ಓರೋರ್ವರ ಮನದ ಆಯತ ಪದಾರ್ಥಂಗಳಂ, ಮತ್ತಂ, ಮಾಹೇಶ್ವರರ ಇಚ್ಛಾಪದಾರ್ಥಮಂ ಸಲಿಸಲು, ಎಲ್ಲ ಗಣಂಗಳು ಷಡುರುಚಿಯ ಲಿಂಗಕ್ಕರ್ಪಿಸಿ ತೃಪ್ತಿವಡೆಯಲು, ಅದಂ ಕಂಡು ಪ್ರಭುದೇವರು ಆಶ್ಚರ್ಯಂಬಟ್ಟು ಬಸವರಾಜದೇವರೊಡನೆ ನಿರೂಪಿಸುವ ಪ್ರಸ್ತಾವದ ವಚನ:

೭೮೭

ಆರಾರ ನೇಮಕ್ಕೆ ಸಂದಿತ್ತು.
ಇಚ್ಛಾಭೋಜನಕ್ಕೆ ಕೃತ್ಯವಾಯಿತ್ತು.
ಮನ ಘನದೊದಗ ಕಂಡೆಯಾ ಸಂಗನಬಸವಣ್ಣಾ?
ಗೊಹೇಶ್ವರಲಿಂಗಕ್ಕೆ ಆಶ್ಚರ್ಯವಾಯಿತ್ತು. ॥೪೩॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಬಸವರಾಜದೇವರು ನಿಮ್ಮ ಶರಣರು ಬಡವರಲ್ಲ, ಘನಮಹಿಮರೆಂದು ಬಿನ್ನೈಸುವ ಪ್ರಸ್ತಾವದ ವಚನ:

೭೮೮

ಮನೆ ನೋಡಾ ಬಡವರು,
ಮನ ನೋಡಾ ಸಂಪನ್ನರು!
ಧನ ನೋಡಾ ಬಡವರು,
ಘನಮನಸಂಪನ್ನರು!
ಕೂಡಲಸಂಗನ ಶರಣರು ಕರುಳಿಲ್ಲದ ಕಲಿಗಳು!
ಆರಿಗೆ ಉಪಮಿಸಬಹುದು? ॥೪೪॥

ಈ ಹೀಂಗೆಂದು ಬಸವರಾಜದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ತೃಪ್ತಿವಡೆದೆವೆಂದು ನಿರೂಪಿಸುವ ಪ್ರಸ್ತಾವದ ವಚನ:

೭೮೯

ಉಭಯದೃಷ್ಟಿ ಏಕದೃಷ್ಟಿಯಲ್ಲಿ ಕಾಂಬಂತೆ,
ದಂಪತಿ ಏಕಭಾವವಾಗಿ ನಿಂದಲ್ಲಿ
ಗೊಹೇಶ್ವರಲಿಂಗಕ್ಕೆ ಅರ್ಪಿತವಾಯಿತ್ತು ಸಂಗನಬಸವಣ್ಣಾ! ॥೪೫॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಆ ಮಾರಯ್ಯಗಳು ನಿರಹಂಭಾವದಲ್ಲಿ ನುಡಿವ ಪ್ರಸ್ತಾವದ ವಚನ:

೭೯೦

ತನುವೀವಡೆ ತನುವೆನಗಿಲ್ಲ.
ಮನವೀವಡೆ ಮನವೆನಗಿಲ್ಲ.
ಧನವೀವಡೆ ಧನವೆನಗಿಲ್ಲ.
ಇಂತೀ ತನುಮನಧನ ಸಕಲಸಂಪತ್ತುಳ್ಳ
ನಿಮ್ಮ ಶರಣರ ತಪ್ಪಲಕ್ಕಿಯನಾಯ್ದು ತಂದು
ಎನ್ನೊಡಲ ಹೊರೆವೆನಲ್ಲದೆ
ಅಮರೇಶ್ವರಲಿಂಗಕ್ಕೆ ನೀಡುವ ಬಯಕೆ ಎನಗಿಲ್ಲ ಸಂಗನಬಸವಣ್ಣಾ. ॥೪೬॥

ಮತ್ತಂ,

೭೯೧

ಎನಗೆ ಮನೆ ಇಲ್ಲ, ಎನಗೆ ಧನವಿಲ್ಲ,
ಮಾಡುವುದೇನು? ನೀಡುವುದೇನು?
ಮನೆ ಧನ ಸಕಲ ಸಂಪದ ಸೌಖ್ಯವುಳ್ಳ
ನಿಮ್ಮ ಶರಣರ ತಪ್ಪಲಕ್ಕಿಯನಾಯ್ದು ತಂದು,
ಎನ್ನೊಡಲ ಹೊರೆವೆನಾಗಿ,
ಅಮರೇಶ್ವರಲಿಂಗಕ್ಕೆ ನೀಡುವ ಬಯಕೆ ಎನಗಿಲ್ಲ ಸಂಗನಬವಣ್ಣಾ. ॥೪೭॥

ಈ ಹೀಂಗೆಂದು ಆಯ್ದಕ್ಕಿಯ ಮಾರಯ್ಯಗಳು ನಿರಹಂಭಾವದಿಂದ ನುಡಿಯುತ್ತಿರೆ, ಬಸವರಾಜದೇವರು ಆ ಮಾರಯ್ಯಗಳು ವಿಭೂತಿಯಂ ಸಂಬಂಧಿಸುವಲ್ಲಿ ಸಂಕಲ್ಪಿಸಿದೆನಲಾ ಎಂದು ಅನುತಾಪಂಬಟ್ಟ ಪ್ರಸ್ತಾವದ ವಚನ:

೭೯೨

ನಾ ನಡೆವುದೆಲ್ಲಾ ಅನಾಚಾರ, ನಾ ನುಡಿವುದೆಲ್ಲಾ ಅವಿಚಾರ.
ನಡೆನುಡಿ ಶುದ್ಧವಿಲ್ಲದ ಅಪವಿತ್ರನ ತಂದು,
ನಿಮ್ಮೊಕ್ಕುದನಿಕ್ಕಿ ಸಲುಹಿದಿರಾಗಿ
ಎನಗಿನ್ನಾವ ಭಯವೂ ಇಲ್ಲ. ಕೂಡಲಸಂಗಮದೇವರು ಸಾಕ್ಷಿಯಾಗಿ,
ಆಯ್ದಕ್ಕಿಯ ಮಾರಯ್ಯನ ಮನೆಯ ಮಗ ನಾನು. ॥೪೮॥

ಈ ಹೀಂಗೆಂದು ಬಸವರಾಜದೇವರು ನುಡಿಯಲು, ಆ ಮಾರಯ್ಯಗಳು ಬಸವರಾಜದೇವರ ಸ್ತುತಿಸಿದ ಪ್ರಸ್ತಾವದ ವಚನ:

೭೯೩

ಹಮ್ಮುಬಿಮ್ಮಳಿದ ಅನವರತ ಶಿವ ನೀನು!
ಎನ್ನ ಕರಸ್ಥಲದ ಕಳೆ ನೀನು!

ಎನ್ನ ಮನೋಮಧ್ಯದ ಸ್ವಯಂಜ್ಯೋತಿ ನೀನು!
ಅಮರೇಶ್ವರಲಿಂಗದ ಅನುವಿನ ಕಳೆ ನೀನು ಸಂಗನಬಸವಣ್ಣಾ!! ॥೪೯॥

ಮತ್ತಂ, ಆ ಮಾರಯ್ಯಗಳು ತಮ್ಮ ಕಟ್ಟಿನ ನೇಮದ ನಿಷ್ಠೆ, ಬಸವಣ್ಣಾ ನೀನೇ ಎಂಬುದ ಮಾಡಿವಾಳಮಾಚಿತಂದೆಗಳು ಬಲ್ಲರೆಂದು ಬಿನ್ನೈಸುವ ಪ್ರಸ್ತಾವದ ವಚನ:

೭೯೪

ಭಕ್ತರ ಭಾವದಲ್ಲಿ ಸುಳಿವ ಸುಳುಹು,
ವಿರಕ್ತರ ಜ್ಞಾನದಲ್ಲಿ ಹೊಳೆವ ಕಳೆಯು ನೀನೆಯಯ್ಯಾ!
ಸೂರ್ಯನ ಬೆಳಗಿನೊಳಗೆ ಸಚರಾಚರ ಪ್ರಾಣಿಗಳು ಸುಳಿವಂತೆ,
ನಮ್ಮ ಕಟ್ಟಿನ ನೇಮದ ನಿಷ್ಠೆ ನೀನೆಯಯ್ಯಾ.
ಅಮರೇಶ್ವರಲಿಂಗದ ಒಡಲು ಸಂಗನಬಸವಣ್ಣನೆಂಬುದನು
ಮಡಿವಾಳಮಾಚಿತಂದೆಗಳೆ ಬಲ್ಲರು ಕಾಣಾ ಸಂಗನಬಸವಣ್ಣಾ. ॥೫೦॥

ಮತ್ತಂ, ಆ ಮಾರಯ್ಯಗಳು ಬಸವರಾಜದೇವರ ಸ್ತೋತ್ರಮಂ ಮಾಡುವ ಪ್ರಸ್ತಾವದ ವಚನ:

೭೯೫

ಮನದಲ್ಲಿ ಹುಟ್ಟಿದ ಅಱಿವು
ಮಾಡುವ ಮಾಟದಲ್ಲಿ ಕಾಣಬಹುದು.
ಶರಣರ ಸಂಗಕ್ಕೆಳಸಿದ ಚಿತ್ತವ ಅನುಭಾವದಲ್ಲಿ ಕಾಣಬಹುದು.
ಒಳಹೊಱಗೆ ತೆಱಹಿಲ್ಲದ ಕೂಟ ನಿನ್ನದು.
ಅಮರೇಶ್ವರಲಿಂಗದಲ್ಲಿ ಸಂಗನಬಸವಣ್ಣಾ
ನಿನ್ನ ಪಾದಕ್ಕೆ ನಮೋ ನಮೋ ಎಂಬೆನು. ॥೫೧॥

ಮತ್ತಂ,

೭೯೬

ಅಮೃತದ ಸವಿ ಸ್ವಾದಿಸುವರಿಗಲ್ಲದೆ,
ಅಮೃತ ತನ್ನ ತಾ ಸ್ವಾದಿಸದ ಪರಿಯಂತೆ,
ನಿತ್ಯತೃಪ್ತಂಗೆ ಆಪ್ಯಾಯನ ಉಂಟೆ?
ಏಳುನೂಱೆಪ್ಪತ್ತಮರಗಣಂಗಳ ಕಟ್ಟಳೆಯ ನೇಮದ ಕಟ್ಟು ನಿನ್ನದು.
ನಿನಗೆ ಭಾವ ನಿರ್ಭಾವವೆಂಬುದುಂಟೆ?
ಅಮರೇಶ್ವರಲಿಂಗದಲ್ಲಿ ಸಂಗನಬಸವಣ್ಣಾ,
ನಿನ್ನ ಪಾದಕ್ಕೆ ನಮೋ ನಮೋ ಎಂಬೆನು. ॥೫೨॥

ಈ ಹೀಗೆಂದು ಸ್ತೋತ್ರಮಂ ಮಾಡಿದ ತದನಂತರದಲ್ಲಿ ಆ ಮಾರಯ್ಯಗಳು ತಮ್ಮ ಭಕ್ತಿ ಪ್ರಕಟವಾಯಿತ್ತೆಂದು ತಮ್ಮ ಲಿಂಗದಲ್ಲಿ ಐಕ್ಯವಾದ ಪ್ರಸ್ತಾವದ ವಚನ:

೭೯೭

ಚಂದ್ರಕಾಂತದ ಶಿಲೆಯಲ್ಲಿ ಬಿಂದುವಡಗಿದಂತೆ,
ಗೋವುಗಳಲ್ಲಿ ಗೋರೋಜನ ರಂಜಿಸುವಂತೆ,

ಶಿಲೆ ಕಾಷ್ಠಂಗಳಲ್ಲಿ ಅನಲನಡಗಿಪ್ಪಂತೆ,
ಸತ್ಯರ ಹೃದಯದಲ್ಲಿ ಮೌಕ್ತಿಕದ ಉದಕದಂತೆ
ಭಾವವಿಲ್ಲದೆ ಅಡಗಿದೆ ಅಮರೇಶ್ವರಲಿಂಗದಲ್ಲಿ! ॥೫೩॥

ಇಂತು ಆಯ್ದಕ್ಕಿಯ ಮಾರಯ್ಯಗಳು ತಮ್ಮ ಲಿಂಗದಲ್ಲಿ ನಿರವಯವನೆಯ್ದಲು, ಆ ಮಾರಯ್ಯಗಳ ಸತಿ ತಮ್ಮ ಪತಿಯೊಡನೆ ಲಿಂಗೈಕ್ಯವಾದ ಪ್ರಸ್ತಾವದ ವಚನ:

೭೯೮

ಪ್ರಭುದೇವರು ಬಸವಣ್ಣ ಮೊದಲಾದ
ಸಕಲಪ್ರಮಥಗಣಂಗಳು,
ನೇಮ ನಿತ್ಯದ ಜಂಗಮಲಿಂಗ ಮುಂತಾದ
ಸರ್ವಸಮೂಹಕ್ಕೆ ತ್ರಿಕರಣ ಶುದ್ಧವಾಗಿ,
ಭಾವದ ಭ್ರಮೆಯಡಗಿ, ಜೀವವಿಕಾರ ನಿಂದು,
ಮಾಡುವ ಮಾಟದ ಸಮಯದಿಂದವೆ
ಮಾರಯ್ಯಪ್ರಿಯ ಅಮರೇಶ್ವರ ಲಿಂಗದಲ್ಲಿಯೆ ಐಕ್ಯ! ॥೫೪॥

ಇಂತೀ ಶ್ರೀಮತ್ ಸಕಲಗಣ ಪುರಾತನರೊಳ್ ಪ್ರಭುದೇವರು
ಮಹಾನುಭಾವಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್
ಆಯ್ದಕ್ಕಿಯ ಮಾರಯ್ಯಗಳ ಸಂಪಾದನೆಗಂ
ದ್ವಾದಶೋಪದೇಶಂ ಸಮಾಪ್ತಂ
ಅಂತು ವಚನ ೭೯೮ ಕ್ಕಂ, ಮಂಗಳಮಹಾಶ್ರೀ

❖

೧೩
ಮೋಳಿಗೆ ಮಾರಯ್ಯಗಳ ಸಂಪಾದನೆ*

ಕಂದ:

ಹೊನ್ನ ಜಾಳಿಗೆಯೆರಡ ಬಸ
ವಣ್ಣಂ ನಿರ್ಧನಿಕರೆಂದು ಇರಿಸಲ್ ಮಾರ
ಯ್ಯಂ ನಗುತ ಜಱಿದು ಚರಕಂ
ಸ್ವರ್ಣದ ದಂಡಗಳನಿತ್ತುದೆಂತೆನೆ ಪೇಳ್ವೆಂ ॥೧॥

ಅದೆಂತೆಂದೊಡಾ ಆಯ್ದಕ್ಕಿಯ ಮಾರಯ್ಯಗಳೂ ಅವರ ಸತಿಯೂ ಲಿಂಗೈಕ್ಯವಾಗಲು, ಅವರ ಲಿಂಗೈಕ್ಯದ ಪರಮಸೌಖ್ಯವನು ಕಂಡು ಎಲ್ಲಾ ಗಣಂಗಳು ಸಂತೋಷಂಬಟ್ಟು ಬಸವರಾಜದೇವರ ಮಹಾಮನೆಗೆಯ್ದಿ, ಬಸವಣ್ಣ ಚೆನ್ನಬಸವಣ್ಣ ಪ್ರಭುದೇವರು ಸಿದ್ಧರಾಮಯ್ಯದೇವರು ಅಪ್ಪಣ್ಣಗಳು ಸೊಡ್ಡಳಬಾಚರಸರು ಮೊದಲಾದ ಅಸಂಖ್ಯಾತ ಪ್ರಮಥಗಣಂಗಳೆಲ್ಲರು ಷಡುಸ್ಥಲಸ್ವರೂಪನಿರ್ಣಯ ಪ್ರಸಂಗ ಪರಿಣಾಮದ ಪರಮಾನಂದಪರಮಾಮೃತಶರಧಿಯೊಳಗೋಲಾಡುತ್ತಂ ಇರಲು, ಇತ್ತ ಮತ್ತೋರ್ವ ಮೋಳಿಗೆಮಾರಯ್ಯನೆಂಬ ಶರಣನು ಕಾಶ್ಮೀರ ದೇಶಾಧಿಪತಿತ್ವದಿಂದಿರ್ದು, ಅದಂ ತ್ಯಜಿಸಿ ಸತಿಪತಿಗಳೀರ್ವರು ಕಲ್ಯಾಣಕ್ಕೆ ಬಂದು, ಮೋಳಿಗೆ ಕಾಯಕಮಂ ಮಾಡಿಕೊಂಡು ಜಂಗಮಾರ್ಚನೆಯಂ ಮಾಡುತ್ತಿರೆ, ಬಸವರಾಜದೇವರ ಗೃಹದಲ್ಲಿ ಇಚ್ಛಾಪದಾರ್ಥಮಂ ಷಡುರುಚಿಯಂ ಸ್ವೀಕರಿಸಿದ ಜಂಗಮಮೂರ್ತಿಗಳು ಆ ಮೋಳಿಗಯ್ಯನ ಗೃಹಕ್ಕೆ ಬಂದು ಅಂಬಕಳಮಂ ಸ್ವೀಕರಿಸಿ, ಆ ಬಸವರಾಜದೇವರ ಗೃಹಕ್ಕೆ ಹೋಗಿ ಅತಿಶಯದಿಂದ ಕೊಂಡಾಡಿ ಹೇಳುತ್ತಿರೆ, ಬಸವರಾಜದೇವರು ಆ ಮೋಳಿಗಯ್ಯಗಳ ಸ್ತುತಿಸಿದ ಪ್ರಸ್ತಾವದ ವಚನ:

೭೯೯

ನಿಷ್ಠೆಯಿಂದ ಲಿಂಗವ ಪೂಜಿಸಿ
ಮತ್ತೊಂದು ಪಥವನಱಿಯದ ಶರಣರು,
ಸರ್ಪನ ಹೆಡೆಯ ಮಾಣಿಕ್ಯದಂತಿರ್ಪರು ಭೂಷಣರಾಗಿ.

---

* ಮೋಳಿಗಯ್ಯಗಳ ಸಂಪಾದನೆ(ಮು)

ದರ್ಪಣದೊಳಗಣ ಪ್ರತಿಬಿಂಬದಂತೆ ಹಿಂಗದಿಪ್ಪರು
ಕೂಡಲಸಂಗಮದೇವಾ, ನಿಮ್ಮ ಶರಣರು! ॥೧॥

ಮತ್ತಂ, ಬಸವರಾಜದೇವರು ಆ ಮೋಳಿಗಯ್ಯಗಳ ಗೃಹಕ್ಕಂ ಪೋಗಬೇಕೆಂದು, ಎರಡು ಜಾಳಿಗೆ ಹೊನ್ನಂ ಕೊಂಡು ಬಂದು, ಅವರಂಗಳದಲ್ಲಿ ನಿಂದು, ಇಂಥ ಭಕ್ತರುಗಳ ಗೃಹದಲ್ಲಿ ಅನ್ನೋದಕಾದಿಗಳಂ ಬೇಡಿ ತೆಗೆದುಕೊಂಡು ಸ್ವೀಕರಿಸಿದರೆ, ಸಮಸ್ತ ಪಾಪ ಕ್ಷಯವೆಂದು ಕೊಂಡಾಡಿದ ಪ್ರಸ್ತಾವದ ವಚನ:

೮೦೦

ಪಾತಕ ಮಹಾಪಾತಕವ ಮಾಡಿದವನು
ಸದ್‌ಭಕ್ತರ ಮನೆಗೆ ಹೋಗಿ,
ಅವರೊಕ್ಕ ಪ್ರಸಾದವನಾಯ್ದುಕೊಂಡುಂಡಡೆ,
ಸಕಲ ಬ್ರಹ್ಮಹತ್ಯಾದಿ ಪಾತಕ ಪರಿಹಾರ, ಒಮ್ಮೆ ಬೇಡಿ ಕೊಂಡುಂಡಡೆ,
ಪಾತಕೇಷು ಮನಃ ಪ್ರಾಪ್ತೌ ಶಿವಭಕ್ತಗೃಹಂ ವ್ರಜೇತ್।
ಯಾಚೇತ ಚಾನ್ನಮಮೃತಂ ತದಲಾಭೇ ಜಲಂ ಪಿಬೇತ್॥
ಇದು ಕಾರಣ ಕೂಡಲಸಂಗಮದೇವಾ,
ನಿಮ್ಮ ಸದ್‌ಭಕ್ತರಿಗೆ ನಮೋ ನಮೋ ಎಂಬೆನು. ॥೨॥

ಈ ಹೀಂಗೆಂದು ಬಸವರಾಜದೇವರು ಅವರ ಗೃಹಕ್ಕಂ ಪೋಗಲು, ಆ ಮೋಳಿಗಯ್ಯಗಳ ಸತಿಯು ಪಾದಾರ್ಚನೆಗೆ ಅಗ್ಗವಣಿಯಂ ಕೊಟ್ಟು ಲಿಂಗಾರ್ಚನೆಯಂ ಮಾಡಿಸಿ, ತಮ್ಮ ಗೃಹದಲ್ಲಿರ್ದ ಪದಾರ್ಥಮಂ ನೀಡಲು, ಲಿಂಗಾರ್ಪಿತಮಂ ಮಾಡಿ ಬರುತ್ತಿರುವಲ್ಲಿ ಎರಡು ಜಾಳಿಗೆ ಹೊನ್ನನು ಮಜ್ಜನಸಾಲೆಯ ಮಱೆಯಲ್ಲಿರಿಸಿ ಬರಲು, ಇತ್ತ ಆ ಮೋಳಿಗೆ ಮಾರಿತಂದೆಗಳು ಕಟ್ಟಿಗೆಗಳಂ ಕೊಂಡು ಬಂದು, ಪಾದಾರ್ಚನೆಯ ಮಾಡಿಕೊಂಡು ಶಿವಾರ್ಚನೆಯಂ ಮಾಡುವಲ್ಲಿ, ಆ ಜಾಳಿಗೆಯ ಹೊನ್ನಂ ಕಂಡು, ಇಲ್ಲಿ ಬಂದಿದ್ದವರಾರೆಂದು ತಮ್ಮ ಸತಿಯ ಕೇಳಲು, ಒಬ್ಬ ಭಕ್ತರು ಬಂದು ಲಿಂಗಾರ್ಚನೆಯಂ ಮಾಡಿ ಹೋದರೆಂದು ಹೇಳಲು, ನಾವು ಬಡವರೆಂದು ಬಸವಣ್ಣನು ಗರ್ವದಿಂದ ಜಾಳಿಗೆ ಹೊನ್ನ ಮಡಗಿ ಹೋದನೆಂದು ಕನಲಿ ಜಱೆದ ಪ್ರಸ್ತಾವದ ವಚನ:

೮೦೧

ಗುರು ಲಿಂಗ ಜಂಗಮಕ್ಕೆ ತನು ಮನ ಧನವ ಸವೆಸಿ,
ದೃಢಚಿತ್ತವಿಲ್ಲದೆ ಪೊಡವಿಯ ಜನಂಗಳು ಮೆಚ್ಚಬೇಕೆಂದು
ಮೃಡನ ಭಕ್ತರಿಗೆ ನೆಱೆ ನಿಚ್ಚಟವುಂಟೆನಿಸಿಕೊಂಡಿಹೆನೆಂಬ
ಧಾರುಣಿಯ ಚೋರರಿಗೆ ಎಲ್ಲಿಯದೊ
ನಿಜಭಕ್ತಿ ನಿಃಕಳಂಕ ಮಲ್ಲಿಕಾರ್ಜುನಾ? ॥೩॥

ಮತ್ತಂ,

೮೦೨

ಆತ್ಮತೇಜನ ಬಿಟ್ಟಾಗವೆ ಗುರುವನಜೆದವ.
ಮನವಿಕಾರವ ಬಿಟ್ಟಾಗವೆ ಲಿಂಗವನಜೆದವ.

ಧನವಿಕಾರವ ಬಿಟ್ಟಾಗವೆ ಜಂಗಮವನಱಿದವ.
ಇಂತೀ ತ್ರಿವಿಧ ನಾಸ್ತಿಯಾದಂಗಲ್ಲದೆ
ನಿಃಕಳಂಕಮಲ್ಲಿಕಾರ್ಜುನನಲ್ಲಿ ಸಹಜಭಕ್ತನಲ್ಲ. ॥೪॥

[೧]ಮತ್ತಂ[೧],

ಲ೦೩

ಅರ್ಚನೆ ಆವರ್ಚಿಸಿದಲ್ಲಿ ಪುಣ್ಯದ ಫಲ.
ಭಕ್ತಿಯಿಂದ ದ್ರವ್ಯವ ಕೊಡುವುದು ಮುಕ್ತಿಲೋಕದೊಳಗು.
ಈ ಉಭಯದ ಭಿತ್ತಿಯನಱಿದು ನಿತ್ಯವ ತಿಳಿದವಂಗೆ
ಏನೂ ಎನಲಿಲ್ಲ ನಿಃಕಳಂಕಮಲ್ಲಿಕಾರ್ಜುನಾ. ॥೫॥

ಇಂತು ತಾನೆ ಧನಿಕನೆಂದು ಆತ್ಮತೇಜದಿಂ ಭಕ್ತಿಯಂ ಮಾಡಿದಡೆ, ಫಲ ಪದಕ್ಕೆ ಕಾರಣವಲ್ಲದೆ ಸಹಜವಲ್ಲೆಂದು ಜಱೆ[೨]ದು, ಆ ಎರಡು ಜಾಳಿಗೆ ಹೊನ್ನನೂ ಈರ್ವರು ಚರಮೂರ್ತಿಗಳಿಗೆ ಸಮರ್ಪಿಸಿ, ಬಸವಣ್ಣನ ಗೃಹಕ್ಕಂ ಪೋಗಿ, ಲಕ್ಷದ ಮೇಲೆ ತೊಂಬತ್ತಾಱುಸಾವಿರ ಜಂಗಮದೇವರುಗಳಂ ಬಿಜಯಂಗಳೆಯ್ಸಿ ತಂದು, ಅವರಿಗೆ ಇಚ್ಛಾಪದಾರ್ಥಮಂ ನೀಡಿ ತೃಪ್ತಿಬಡಿಸಿ, ತಾವು ತಂದ ಕಟ್ಟಿಗೆಯ ಸರಬುಗಳ ಮೇಲೆ ಪಾದಾರ್ಚನೆಯುದಕಮಂ ತಳಿದು ಸುವರ್ಣದಂಡಂಗಳಂ ಮಾಡಿ, ಎಲ್ಲಾ ಜಂಗಮದೇವರುಗಳಿಗೆ ಒಂದೊಂದಂ ಕೊಡಲು, ಅವರು ಬಸವರಾಜದೇವರ ಗೃಹಕ್ಕಂ ಬರಲು, ಆ ಬಸವರಾಜದೇವರು ಈ ಸುವರ್ಣದಂಡಂಗಳೆಲ್ಲಿಯವೆಂದು ಕೇಳಲು, ಮೋಳಿಗೆಮಾರಯ್ಯಗಳು ಕೊಟ್ಟರೆಂದು ಹೇಳೆ, ಆ ಬಸವರಾಜದೇವರು ಇಂತಹ ನಿರಾಶಾಮಹಾತ್ಮರೆಂದಱಿಯದೆ ಇರ್ದೆನಲ್ಲಾ ಎಂದು ಭೀತಿಯಿಂ ನುಡಿದ ಪ್ರಸ್ತಾವದ ವಚನ:

ಲ೦೪

ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯ,
ಇದಾರಿಂಗಳವಡುವುದ[೩]ಯ್ಯಾ?
ನಿಧಾನ ತಪ್ಪಿ ಬಂದರೆ ಒಲ್ಲೆನೆಂಬವರಿಲ್ಲ.
ಪ್ರಮಾದವಶ ಬಂದರೆ ಹುಸಿಯೆನೆಂಬವರಿಲ್ಲ.
ನಿರಾಶೆ ನಿರ್ಭಯ ಕೂಡಲಸಂಗಮದೇವಾ,
ನೀನೊಲಿದ ಶರಣಂಗಲ್ಲದಿಲ್ಲ. ॥೬॥

ಈ ಹೀಂಗೆಂದು ಬಸವರಾಜದೇವರು ಅನುತಾಪಂಬಟ್ಟು ಚೆನ್ನಬಸವರಾಜದೇವರು ಹಡಪದಪ್ಪಣ್ಣಗಳು ಸಿದ್ಧರಾಮತಂದೆ ಮುಖ್ಯವಾದ ಶರಣರುಗಳು ಸಹವಾಗಿ ಬಂದು, ಸಾಷ್ಟಾಂಗಪ್ರಣಿ[೩]ತರಾಗಿ ದೈನ್ಯದಿಂ ಬಿನ್ನೈಸುವ ಪ್ರಸ್ತಾವದ ವಚನ:

ಲ೦೫

ಭಕ್ತಿವಿಶೇಷವ ಮಾಡುವರೆ ಹತ್ತು ಬೆರಳುಂಟು.
ಹಾಸಿ ದುಡಿವರೆ ತನಗುಂಟು, ತನ್ನ ಪ್ರಮಥರಿಗುಂಟು.

೧-೧ X (ಮು) ೨. ವ (ಮು) ೩. ಣ(ಮು)

ಮೋಳಿಗೆಮಾರಿತಂದೆಗಳಂತೆ ನನಗೇಕಹುದಯ್ಯಾ?
ರತ್ನದ ಸಂಕಲೆಯನಿಕ್ಕಿ ಕಾಡಿಹನಯ್ಯಾ ಕೂಡಲಸಂಗಮದೇವ.
ಶಿವ ಧೋ! ಶಿವ ಧೋ!! ॥೭॥

ಮತ್ತಂ,

೮೦೬

ಮನೆಯ ನೋಡಾ ಬಡವರು,
ಮನವ ನೋಡಾ ಧೀರರು!
ಸೋಂಕಿನಲ್ಲಿ ಶುಚಿಗಳು, ಸರ್ವಾಂಗ ಧೀರರು
[1]ಪಸರವ[1] ನೋಡಿದೊಡೇನೂ ಇಲ್ಲ.
ಸಮಯೋಚಿತಕ್ಕೆ ಸಕಲಪದಾರ್ಥ ಬಂದಿಹುದು.
ಕೂಡಲಸಂಗಮದೇವಾ,
ನಿಮ್ಮ ಶರಣ ಸರ್ವಾಂಗ ಧೀರ ಮೋಳಿಗೆಯ ಮಾರಿತಂದೆ. ॥೮॥

ಈ ಹೀಂಗೆಂದು ಬಸವರಾಜದೇವರು ದೈನ್ಯದಿಂ ಬಿನ್ನೈಸುತ್ತಿರೆ, ಆ ಮೋಳಿಗೆ ಮಾರಿತಂದೆಗಳು ಭಕ್ತಿಯಿಂದ ಫಲಪದವ ಪಡೆದವರಿಗೆ ಭವ ಉಂಟು, ಫಲಪದವಿ ರಹಿತ ಚೆನ್ನಬಸವಣ್ಣನೆಂದು ನುಡಿದ ಪ್ರಸ್ತಾವದ ವಚನ:

೮೦೭

ಬಸವಣ್ಣ ಮೊದಲಾದ ಮಹಾಭಕ್ತರೆಲ್ಲರೂ ಕಂಡರಯ್ಯಾ
ಮಹಾ ಕೈಲಾಸವೆಂಬ ಬೆಳ್ಳಿಯ ಬೆಟ್ಟವನೇಜಿ,
ಒಳ್ಳಿಹ ಪದದಲ್ಲಿ ತಲ್ಲೀಯರಾದಿಹೆವೆಂದು
ಬಲ್ಲತನವ ಮಚ್ಚಿ ಇರಲಾಗಿ,
ಆ ಬೆಳ್ಳಿಯ ಬೆಟ್ಟ ಕಲ್ಲೋಲವಾಗಲಾಗಿ,
ಅಲ್ಲಿದ್ದವರನೆಲ್ಲಿಯೂ ಕಾಣೆ.
ಇವರಿಗಿನ್ನೆಲ್ಲಿಯ ಮುಕ್ತಿ?
ಜಲ್ಲೆಯನಡರ್ದು ಎಲ್ಲೆಯ ಪಾಯಿಸುವನಂತೆ
ಇವರೆಲ್ಲರು ಬಲ್ಲಹರೆ, ಬಲ್ಲಹ ಚೆನ್ನಬಸವಣ್ಣನಲ್ಲದೆ?
ಇವರೆಲ್ಲರನೊಲ್ಲೆನೆಂದೆ,
ಬಲ್ಲರ ಬಲ್ಲಹನೆ ನಿಃಕಳಂಕಮಲ್ಲಿಕಾರ್ಜುನಾ. ॥೯॥

ಈ ಹೀಂಗೆಂದು ಮೋಳಿಗೆಮಾರಿತಂದೆಗಳು ನಿರೂಪಿಸಲು, ಚೆನ್ನಬಸವರಾಜದೇವರು, ಸಮಸ್ತ ದೇಹಿಗಳಿಗೆ ಭೋಗಲಕ್ಷ್ಮಿಯಾಗಿರ್ದ ದ್ರವ್ಯವ ಶಿವಶರಣರ ಗೃಹದಲ್ಲಿ ಇರಿಸಬಹುದೆ?–ಎಂದು ಬಸವರಾಜದೇವರ ನುಡಿದು, ಆ ಮೋಳಿಗೆಮಾರಿತಂದೆಗಳಿಗೆ ನಮಸ್ಕರಿಸಿದ ಪ್ರಸ್ತಾವದ ವಚನ:

೧–೧. ಪರವದ್ಯೆವದಿಂ(ಮೂ)

೮೦೮

ಹಸಿವು ತೃಷೆ ವಿಷಯವೆಂಬ ಕರ್ಮಂಗಳನೆ ಕಂಡು,
ಪರಿಣಾಮವೆಂಬ ಕೊಡಲಿಯಲ್ಲಿ ತತ್ತಱದಱಿದು,
ಕಾಮ [ಕ್ರೋಧ] ಲೋಭ ಮೋಹ ಮದ ಮತ್ಸರಂಗಳ
ತಱಿದೊಟ್ಟಿದನೊಂದೆಡೆಯಲ್ಲಿ.
ಪಂಚೇಂದ್ರಿಯ, ಷಡುವರ್ಗ, ಸಪ್ತಧಾತು,
ಅಷ್ಟಮದವೆಂಬ ಬಳ್ಳಿಯ ಸೀಳಿ,
ಏಳುಕಟ್ಟಿನ ಮೋಳಿಗೆಯನೆ ಹೊತ್ತು ನಡೆದನಯ್ಯಾ.
ಆಶೆಯಾಮಿಷ ತಾಮಸವೆಂಬ ತುರಗವನ್ನೇಱಿ
ಆತುರದ ತುರವನೆ ಕಳೆದನಯ್ಯಾ.
ಈ ಮಹಾಮಹಿಮಂಗೆ ಜಗದ ಜತ್ತಿಗೆಯ ಹಾದರಗಿತ್ತಿಯ,
ಹದಿನೆಂಟು ಜಾತಿಯ ಮನೆಯಲ್ಲಿ ತೊತ್ತಾಗಿಹ ಶಿವದ್ರೋಹಿಯ
ಲಿಂಗವಂತರ ಮನೆಯಲ್ಲಿ ಹೊಗಿಸುವರೆ, ಎಲೆ ಲಿಂಗತಂದೆ?
ಜಡವಿಡಿದು ಕೆಟ್ಟೆನಯ್ಯಾ ಭಕ್ತಿಯ ಕುಳವನಱಿಯದೆ!
ಎಲೆ ಲಿಂಗದಾಜ್ಞಾಧಾರಕಾ, ಎಲೆ ಲಿಂಗಸನುಮತಾ,
ಎಲೆ ಲಿಂಗ ಏಕೋಪ್ರತಿಗ್ರಾಹಕಾ,
ಕೂಡಲಚೆನ್ನಸಂಗನಲ್ಲಿ ಮೋಳಿಗೆಯ ಮಾರಿತಂದೆಗಳ ಶ್ರೀಪಾದಕ್ಕೆ
ನಮೋ ನಮೋ, ಜಯ ಜಯ ಜಯತು! ॥೧೦॥

ಈ ಹೀಂಗೆಂದು ಚೆನ್ನಬಸವರಾಜದೇವರು ಬಸವರಾಜದೇವರ ನುಡಿದು, ಆ ಮೋಳಿಗೆಮಾರಿತಂದೆಗಳ ಸ್ತುತಿಸುತ್ತಿರಲು, ಆ ಮೋಳಿಗೆಮಾರಿತಂದೆಗಳು ಅಱಿವು ಮಱವೆಯಿಂದ ಮಾಡುವ ಭಕ್ತಿ ಸ್ಥಿರವಲ್ಲವೆಂದು ಚೆನ್ನಬಸವರಾಜದೇವರಿಗೆ ನಮಸ್ಕಾರವ ಮಾಡುವ ಪ್ರಸ್ತಾವದ ವಚನ:

೮೦೯

ಅಱಿದು ಮಾಡುವ ಮಾಟ ಮಱವೆಗೆ ಬೀಜವೆಂಬೆ.
ಅದಕ್ಕೆ ಮಱೆದಱಿವುದೆ ತಪ್ಪದು.
ಅಱಿವಿನ ಭೇದ ಎತ್ತಿದ ದೀಪದ ಬೆಳಗಿನಂತೆ.
ಅಱಿದು ಮಱೆಯದೆ ಇಂತೀ ಅಱಿಕೆಯಲ್ಲಿ ಮಾಡುವವನ ಅಱಿವು
ಹೊತ್ತದ ದೀಪದ ನಿಶ್ಚಯದಂತೆ.
ನಿಃಕಳಂಕಮಲ್ಲಿಕಾರ್ಜುನನಲ್ಲಿ ಚೆನ್ನಬಸವಣ್ಣಂಗೆ
ನಮೋ ನಮೋ ಎನುತಿರ್ದೆನು. ॥೧೧॥

ಇಂತು ಮೋಳಿಗೆಮಾರಿತಂದೆಗಳು ಚೆನ್ನಬಸವಣ್ಣಂಗೆ ನಮಸ್ಕರಿಸಿ, ಇನ್ನು ಕಂಡು ಕೇಳಿ ಅಱಿದು ಭಕ್ತಿಯ ಮಾಡಿಹೆನೆಂಬಾಗ ಮುಂದಕ್ಕೆ ನಿಶ್ಚಯವಲ್ಲವೆಂದು ನಿರೂಪಿಸಿದ ಪ್ರಸ್ತಾವದ

ವಚನ:

೮೧೦

ಇನ್ನು ಕೇಳಿ ಅಱಿದೆಹೆನೆಂಬಾಗ ಮುಂದಕ್ಕೆ ಮಱವೆಯೆ?
ಮುಂದನಱಿದು ಹಿಂದೆ ಮಱೆವಾಗ ಭೂತಕಾಯವೆ?
ಹಿಂದಕ್ಕೂ ಮುಂದಕ್ಕೂ ಈ ದ್ವಂದ್ವದ ಭೇದವ,
ಇದಱಂದವ ಹೇಳಾ ನಿಃಕಳಂಕಮಲ್ಲಿಕಾರ್ಜುನಾ. ॥೧೨॥

ಮತ್ತಂ,

೮೧೧

ಅಱಿದೆಹೆ ಅಱಿದೆಹೆನೆಂದು ಹೊಱಹೊಮ್ಮುವಾಗ,
ಕಾಯ ಮಱುಜವಣಿಯೆ?
ಮಹಾಪ್ರಳಯಕ್ಕೆ ಹೊಱಗಾದ ಶ್ರವಣವೆ?
ಅವತಾರಕ್ಕೆ ಹೊಱಗಾದ ನಿರಂಗನೆ?
ಅಸಗ ನೀರಡಿಸಿ ಸತ್ತಂತಾಯಿತ್ತು ಇವರಿರವು
ನಿಃಕಳಂಕಮಲ್ಲಿಕಾರ್ಜುನಾ. ॥೧೩॥

ಮತ್ತಂ,

೮೧೨

ಬಯಲು ಬತ್ತಲೆಯಾದಡೆ ಹೊದಿಸುವರಿನ್ನಾರು?
ಏರಿ ನೀರು ಕುಡಿವರೆ ಬಿಡಿಸುರಿನ್ನಾರು?
ಮಹಾಮೇರು ನಡೆವಡೆ ಪಥಕಿಂಬುಗೊಡುವರಾರು?
ಅಱಿದವ ಮಱೆದವನಾದಡೆ ಅಱಿಕೆಯ ಹೇಳುವರಾರು?
ನಿಮ್ಮ ನಿಜವ ನೀವೆ ಬಲ್ಲಿರಿ ನಾನಂಜುವೆ ನಿಃಕಳಂಕಮಲ್ಲಿಕಾರ್ಜುನಾ॥೧೪॥

ಈ ಹೀಂಗೆಂದು ಮೋಳಿಗೆಮಾರಿತಂದೆಗಳು ನುಡಿಯಲು, ಬಸವರಾಜದೇವರು ಸಮಸ್ತ ಪದಾರ್ಥವನೊಪ್ಪಿಸಿದಲ್ಲಿ ಭಕ್ತನಲ್ಲ. ನಿಮ್ಮ ಮನವ ನಿಮಗೊಪ್ಪಿಸಿ ಶುದ್ಧನೆಂದು ನಿರಹಂಭಾವದಿಂದ ನುಡಿದ ಪ್ರಸ್ತಾವದ ವಚನ:

೮೧೩

ಅರ್ಥಪ್ರಾಣಾಭಿಮಾನವನೊಪ್ಪಿಸಿದಲ್ಲಿ ಭಕ್ತನಪ್ಪೆನೆ? ಅಲ್ಲ.
ಆದಿ ರುದ್ರನ ಮಗಳು ಆದಿಶಕ್ತಿ.
ಆದಿಶಕ್ತಿಯ ಮಗ ವಿಷ್ಣು.
ವಿಷ್ಣುವಿನ ಅರ್ಧಾಂಗಿ ಲಕ್ಷ್ಮಿ.
ಈ ತೊತ್ತಿನ ತೊತ್ತಿನ ಪಡಿದೊತ್ತನೊಪ್ಪಿಸಿದಲ್ಲಿ ಭಕ್ತನಪ್ಪೆನೆ? ಅಲ್ಲ.
ಎನ್ನ ಮನದೊಡೆಯ ಮಹಾದೇವ,
ನಿಮ್ಮ ಮನವ ನಿಮಗೊಪ್ಪಿಸಿ
ನಾನು ಶುದ್ಧ ಕಾಣಾ ಕೂಡಲಸಂಗಮದೇವಾ. ॥೧೫॥

ಈ ಹೀಂಗೆಂದು ಬಸವರಾಜದೇವರು ಬಿನ್ನೈಸಲು, ಆ ಮೋಳಿಗೆಯ ಮಾರಿತಂದೆಗಳು ಪ್ರಸನ್ನಮುಖರಾಗಿ ಸ್ತೋತ್ರಮಂ ಮಾಡಿದ ಪ್ರಸ್ತಾವದ ವಚನ:

೮೧೪

ಎನ್ನ ಚಿತ್ತಕ್ಕೆ ನಕಾರವಾಗಿ ಬಂದೆಯಯ್ಯಾ ಬಸವಣ್ಣಾ.
ಎನ್ನ ಬುದ್ಧಿಗೆ ಮಕಾರವಾಗಿ ಬಂದೆಯಯ್ಯಾ ಬಸವಣ್ಣಾ.
ಎನ್ನ ಅಹಂಕಾರಕ್ಕೆ ಶಿಕಾರವಾಗಿ ಬಂದೆಯಯ್ಯಾ ಬಸವಣ್ಣಾ.
ಎನ್ನ ಮನಕ್ಕೆ ವಕಾರವಾಗಿ ಬಂದೆಯಯ್ಯಾ ಬಸವಣ್ಣಾ.
ಎನ್ನ ಜ್ಞಾನಕ್ಕೆ ಯಕಾರವಾಗಿ ಬಂದೆಯಯ್ಯಾ ಬಸವಣ್ಣಾ.
ಎನ್ನ ಮತಿಗೆ ಓಂಕಾರವಾಗಿ ಬಂದೆಯಯ್ಯಾ ಬಸವಣ್ಣಾ.
ಎನ್ನ ನಾದಕ್ಕೆ ಅಕಾರವಾಗಿ ಬಂದೆಯಯ್ಯಾ ಬಸವಣ್ಣಾ.
ಎನ್ನ ಬಿಂದುವಿಂಗೆ ಉಕಾರವಾಗಿ ಬಂದೆಯಯ್ಯಾ ಬಸವಣ್ಣಾ.
ಎನ್ನ ಕಳೆಗೆ ಮಕಾರವಾಗಿ ಬಂದೆಯಯ್ಯಾ ಬಸವಣ್ಣಾ.
ಎನ್ನ ಭವವ ಕೊಂದೆಹೆನೆಂದು ಬಕಾರವಾಗಿ ಬಂದೆಯಯ್ಯಾ ಬಸವಣ್ಣಾ.
ಎನ್ನ ಶಕ್ತಿಗೆ ಸಕಾರವಾಗಿ ಬಂದೆಯಯ್ಯಾ ಬಸವಣ್ಣಾ.
ಎನ್ನ ವಚಸ್ಸಿಂಗೆ ವಕಾರವಾಗಿ ಬಂದೆಯಯ್ಯಾ ಬಸವಣ್ಣಾ.
ಇಂತಪ್ಪ ಮಹಾಪ್ರಣವಂಗಳೆ ಬಸವಣ್ಣನಾಗಿ,
ಆ ಬಸವಣ್ಣನೆ ಮಹಾಪ್ರಣವಂಗಳಾಗಿ
ತನ್ನ ಮತಕ್ಕೆ ತಾನೆ ಬಂದು ಭಕ್ತಿ ವಸ್ತುವನಿತ್ತಡೆ,
ಇವ ನಾನು ನಿಃಕಳಂಕ ಮಲ್ಲಿಕಾರ್ಜುನನ ಭಕ್ತರಿಗಿತ್ತು ಬದುಕಿದೆನಯ್ಯಾ॥೧೬॥

ಇಂತು ಮೋಳಿಗೆಯ ಮಾರಿತಂದೆಗಳು ಬಸವರಾಜದೇವರ ಸ್ತೋತ್ರಮಂ ಮಾಡುತ್ತಿರಲು, ಆ ಪ್ರಸ್ತಾವದೊಳು ಸಿದ್ಧರಾಮಯ್ಯದೇವರು ಆ ಮೋಳಿಗೆಮಾರಿತಂದೆಗಳ ಸ್ತೋತ್ರಮಂ ಮಾಡಿದ ಪ್ರಸ್ತಾವದ ವಚನ:

೮೧೫

ಮೂಱುಕಟ್ಟಿಗೆಯನ್ನು ಮುಯ್ಯೂರಲಿರಿಸಿದನು.
ನೀಱ ನಿಃಪತಿಯಾದ ಲಿಂಗದಲ್ಲಿ
ಆಱೂಢ ಅಂಗುಲದೊಳಗೆ ಅಱುವೆರಳನಿರಿಸಿದನು.
ಧೀರ ಮೋಳಿಗೆಮಾರ ಶರಣು ಶರಣು
ಆಱೂಢ ದಶಗಳ ಭೇದವನಱಿದಂತೆ ತೋಱಿದ
ಶರಣೆಂದೆನಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನಾ. ॥೧೭॥

ಇಂತು ಬಸವರಾಜದೇವರು ಚೆನ್ನಬಸವರಾದೇವರು ಸಿದ್ಧರಾಮಯ್ಯದೇವರು ಮೋಳಿಗೆಮಾರಿತಂದೆಗಳೊಡನೆ ಮಹಾನುಭಾವ ಸದ್ಗೋಷ್ಠಿಯಂ ಮಾಡಿ ತಮ್ಮ ಗೃಹಕ್ಕೆ ಬಿಜಯಂಗೈಯಲು, ಇತ್ತ ಆ ಮೋಳಿಗೆಯ ಮಾರಿತಂದೆಗಳು ಲಿಂಗೈಕ್ಯವಾದಿಹೆವೆಂಬ ಆತುರದಿಂ ನುಡಿದ ಪ್ರಸ್ತಾವದ ವಚನ:

೮೧೬

ಓ ಎಂದಲ್ಲಿ ನಿರಾಕಾರವಸ್ತುವಾದೆಯಲ್ಲಾ.
ಓಂ ಎಂದಲ್ಲಿ ಸಾಕಾರವಸ್ತುವಾದೆಯಲ್ಲಾ.
ತತ್ತ್ವಮಸಿ ಎಂದಲ್ಲಿ ತತ್ತ್ವರೂಪಾಗಿ ಜಗವ ರಕ್ಷಿಸಿಹೆನೆಂದು
ಕರ್ತೃ ರೂಪಾದೆಯಲ್ಲಾ.
ನಿಮಗೆ ಮರ್ತ್ಯದ ಮಣಿಹ ಎಲ್ಲಿ ಪರಿಯಂತರ?
ಎನಗೆ ಕಟ್ಟುಗುತ್ತಿಗೆಯೆ?
ನಾ ಕಟ್ಟಿಗೆಯ ಹೊತ್ತು ಶಿವಭಕ್ತರ ಮನೆಗೆ
ನೀವು ಕೊಟ್ಟ ಕಾಯಕದ ಕೃತ್ಯ
ಇನ್ನೆಷ್ಟು ದಿನ ಹೇಳಾ ನಿಃಕಳಂಕಮಲ್ಲಿಕಾರ್ಜುನಾ? ॥೧೮॥

೮೧೭

ಊರು ಕೆಟ್ಟು ಸೂಱೆಯಾಡುವಾಗ ಆರಿಗಾರೂ ಇಲ್ಲ.
ಬಸವಣ್ಣ ಸಂಗಮಕ್ಕೆ, ಚೆನ್ನಬಸವಣ್ಣ ಉಳುವೆಗೆ, ಪ್ರಭು ಕದಳಿಗೆ,
ಮಿಕ್ಕಾದ ಪ್ರಮಥರೆಲ್ಲರೂ
ತಮ್ಮ ತಮ್ಮ ಲಕ್ಷ್ಯಭಾವಕ್ಕೆ ಮುಕ್ತಿಯನೈದಿಹರು.
ನನಗೊಂದು ಬಟ್ಟೆಯ ಹೇಳಾ
ನಿಃಕಳಂಕಮಲ್ಲಿಕಾರ್ಜುನಾ. ॥೧೯॥

ಮತ್ತಂ,

೮೧೮

ಕಾಯಸಮಾಧಿಯನೊಲ್ಲೆ,
ನೆನಹುಸಮಾಧಿಗೆ ನಿಲ್ಲೆ, ಕೈಲಾಸವೆಂಬ ಭವಸಾಗರನೊಲ್ಲೆ.
ಎನ್ನ ಅಲ್ಲಿಗೆ ಇಲ್ಲಿಗೆ ಎಂದೆಳೆಯದೆ,
ನಿನ್ನಲ್ಲಿ ಕೂಟಸ್ಥವ ಮಾಡು ನಿಃಕಳಂಕಮಲ್ಲಿಕಾರ್ಜುನಾ. ॥೨೦॥

ಮತ್ತಂ,

೮೧೯

ಎನಗೆ ನೀನಿಂಬುಗೊಡುವಲ್ಲಿ
ಸಕಲವ ಪ್ರಮಾಣಿಸುವುದ ಬಿಟ್ಟು ನಿಃಕಲವಸ್ತುವಾಗು.
ಶಕ್ತಿಸಮೇತವ ಬಿಟ್ಟು ನಿಶ್ಶಕ್ತಿ ನಿರ್ಲೇಪನಾಗು.
ಚಿತ್ತವ ನೋಡಿಹೆನೆಂಬ ಹೆಚ್ಚುಕುಂದ ಬಿಟ್ಟು ನಿಶ್ಚಿಂತನಾಗು.
ಅಂದು ಮಿಕ್ಕಾದ ಭಕ್ತರ ಗುಣವ ನೋಡಿಹೆನೆಂದು
ತೊಟ್ಟ ಠಕ್ಕು ಠವಾಳವ ಬಿಡು.
ಸರ್ವರಾಗ ವಿರಾಗನಾಗಿ, ಸರ್ವಗುಣ ಸಂಪನ್ನನಾಗಿ,
ಜ್ಞಾನಸಿಂಧು ಸಂಪೂರ್ಣನಾಗಿ

ನಿನ್ನಱಿವಿನ ಗುಡಿಯ ಬಾಗಿಲ ತೆಱೆದೊಮ್ಮೆ ತೋಱಾ.
ಎನ್ನಡಿಗೆ ನಿನ್ನ ಗುಡಿಯ ಸಂಬಂಧವ ನೋಡಿಹೆ.
ಇದಕ್ಕೆ ಗನ್ನ ಬೇಡ ಚೆನ್ನ ನಿಃಕಳಂಕ ಮಲ್ಲಿಕಾರ್ಜುನಾ. ॥೨೧॥

ಮತ್ತಂ,

೮೨೦

ನಿನ್ನನಱಿವುದಕ್ಕೆ ಹೆಣ್ಣು ಹೊನ್ನು ಮಣ್ಣೆಂಬ
ಸನ್ನೆಯ ತೊಱೆಯ ಹಾಯಬೇಕು.
ಆ ಮೂಱನಱಿವಲ್ಲಿ, ಮಱೆದು ಹಿಡಿವಲ್ಲಿ,
ಅಱಿದು ಬಿಡುವಲ್ಲಿ, ಆ ಉಭಯದ ಒಡಲು ಹಱಿದು
ತೋಱಿಕೆ ನಷ್ಟವಾಗಿ ನಿಂದವಂಗಲ್ಲದೆ,
ನಿನ್ನ ಚರಣದ ಬಾಗಿಲ ಬಾದಳವನೇಱಬಾರದು.
ಅದಕ್ಕೆ ಸನ್ನೆಗಟ್ಟಿಗೆಯೆ ಚೆನ್ನ ನಿಃಕಳಂಕಮಲ್ಲಿಕಾರ್ಜುನಾ? ॥೨೨॥

ಈ ಹೀಂಗೆಂದು ಮೋಳಿಗೆಯ ಮಾರಿತಂದೆಗಳು ಲಿಂಗೈಕ್ಯವಾದೆಹೆವೆಂದು ಅವಸ್ಥೆಯಿಂ ನುಡಿಯಲು, ಆ ಪ್ರಸ್ತಾವದೊಳು ಅವರ ಪುಣ್ಯಾಂಗನೆ ಮಹಾದೇವಿಯಮ್ಮನು, ಇನ್ನು ಭಿನ್ನವಾಗಿ ಲಿಂಗೈಕ್ಯವಾದೆಹೆನೆಂಬಾಗ ಮುನ್ನ ಲಿಂಗದಲ್ಲಿ ಏಕಾರ್ಥವಿಲ್ಲವೆ? ಎಂದು ನುಡಿದ ಪ್ರಸ್ತಾವದ ವಚನ:

೮೨೧

ಅದೇತಕ್ಕಯ್ಯಾ, ಶಿವನೊಳಗೆ ಕೂಟಸ್ಥನಾದೆಹೆನೆಂಬ ಹಲುಬಾಟ?
ಇದು ಭಕ್ತಿ ಸತ್ಯದ ಆಟವಲ್ಲ.
ಇನ್ನಾರ ಕೇಳಿ, ಮತ್ತಿನ್ನಾರಿಗೆ ಹೇಳಿ, ನೀ ಮಾಡುವ ಮಾಟ?
ಮುನ್ನ ನೀನಾರೆಂದಿದ್ದೆ ಹೇಳಾ?
ಆ ಭಾವವನಱಿದು ನಿನ್ನ ನೀನೆ ತಿಳಿ
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನಾ. ॥೨೩॥

ಮತ್ತಂ,

೮೨೨

ಕಾಷ್ಠವ ಸುವರ್ಣವ ಮಾಡಿದೆನೆಂಬ
ಘಾತಕತನವೆ ನಿಮ್ಮ ಭಕ್ತಿ?
ಸಕಲ ದೇಶಕೋಶವಾಸ ಭಂಡಾರ ಸವಾಲಕ್ಷ ಮುಂತಾದ
ಸಂಬಂಧ ಸ್ತ್ರೀಯರ ಬಿಟ್ಟು ಬಂದೆನೆಂಬ ಕೈಕೂಲಿಯೆ ನಿಮ್ಮ ಭಕ್ತಿ?
ಬಸವಣ್ಣ ಚೆನ್ನಬಸವಣ್ಣ ಪ್ರಭುದೇವರು ಮುಂತಾದ
ಏಳುನೂಱೆಪ್ಪತ್ತು ಅಮರಗಣಂಗಳ ಭಾವವಿದ್ದಂತೆ
ನಿಮ್ಮ ಅಗಡವೇಕಯ್ಯಾ?
ನಿಮ್ಮ ಅಱಿವಿಂಗೆ ಇದಿರಿನಲ್ಲಿ ಕೂಡಿಹೆನೆಂಬ ಭಿನ್ನಭಾವ ಉಂಟೇ ಅಯ್ಯಾ?

ಕರ್ಪುರದ ಅರಣ್ಯವ ಕಿಚ್ಚು ಹತ್ತಿ ಬೆಂದಲ್ಲಿ,
ಭಸ್ಮ ಇದ್ದಿಲೆಂದು ಲಕ್ಷಿಸಲುಂಟೆ?
ನಿಮ್ಮ ಭಾವವ ನಿಮ್ಮಲ್ಲಿಗೆ ತಿಳಿದುಕೊಳ್ಳಿ.
ನಿಮ್ಮ ಕೂಟಕ್ಕೆ, ಎನ್ನ ನಾಚಿಕೆಯ ಬಿಡಿಸಿದ ತೆಱನ ತಿಳಿದುಕೊಳ್ಳಿ.
ಶಕ್ತಿಯ ಮಾತೆಂದು ಧಿಕ್ಕರಿಸಬೇಡ.
ಹೊಱಗೆ ಕೂಡಿಹೆನೆಂಬುದು ನಿಮ್ಮ ಅಱಿವಿಂಗೆ ಹಾನಿ.
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನಾ,
ನಿಮ್ಮ ಶರಣರ ನೆಲೆಯ ನೀವೆ ನೋಡಿಕೊಳ್ಳಿ. ॥೨೪॥

ಮತ್ತಂ,

೮೨೩

ಸ್ವಯವಿದ್ದಂತೆ ಲಯವ ಕೂಡುವರೆ ಅಯ್ಯಾ?
ಪರುಷವಿದ್ದಂತೆ ಹೇಮವನಱಸುವರೆ ಅಯ್ಯಾ?
ಸ್ವಯಂಜ್ಯೋತಿ ಇದ್ದಂತೆ ದೀಪವನಱಸುವರೆ ಅಯ್ಯಾ?
ನೀನಲ್ಲಿ ಇಲ್ಲಿ ಕೂಡಿಹೆನೆಂಬ ಕೂಟದ ಭಿನ್ನವ ಹೇಳಯ್ಯಾ?
ಕಣ್ಣಿನಲ್ಲಿ ನೋಡಿ ಕಣ್ಣ ಮಱೆದೆನೆಂದು,
ಆ ಭಿನ್ನಭಾವನಂತೆ ಆದಿರಲ್ಲಾ!
ಅದು ನಿಮ್ಮ ಗುಣವಲ್ಲ, ಎನ್ನ ಗುಣ.
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನಾ. ॥೨೫॥

ಮತ್ತಂ,

೮೨೪

ಕೈಯಲ್ಲಿ ಜ್ಯೋತಿಯ ಹಿಡಿದು ಕತ್ತಲೆ ಎನಲೇತಕ್ಕೆ?
ಪರುಷರಸ ಕೈಯಲಿದ್ದು ಕೂಲಿಯ ಮಾಡಲೇತಕ್ಕೆ?
ಕ್ಷುತ್ತು ನಿವೃತ್ತಿಯಾದವಂಗೆ ಕಟ್ಟೋಗರದ ಹೊಱೆಯ ಹೊಱಲೇತಕ್ಕೆ?
ನಿತ್ಯ ಅನಿತ್ಯವ ನೀ ತಿಳಿದು,
ಮರ್ತ್ಯ ಕೈಲಾಸವೆಂಬುದು ಭಕ್ತರಿಗೆ ಯುಕ್ತಿಯಲ್ಲ.
ನಿಶ್ಚಯವ ತಾನಱಿತು, ಅತ್ತಣ ಇತ್ತಣ ಗೊತ್ತು ನಿಶ್ಚಯವಾಗಿ ನಿಂದಲ್ಲಿ,
ಆ ಬಚ್ಚಬಯಲ ಬೆಳಗ ನಿನ್ನ ನೀನೇ ನೋಡಿಕೋ,
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನಲ್ಲಿ. ॥೨೬॥

ಮತ್ತಂ,

೮೨೫

ಕಾಣಿಗೆ ಹೋರಿ ಕಡವರವ ನೀಗಲೇತಕ್ಕೆ?
ಅಲುಗಾಡಿ ತುಂಬಿದ ಕೊಡನ ಹೊಡಗೆಡಹಲೇತಕ್ಕೆ?
ನಿನ್ನಂಗದಲ್ಲಿ ಗುರು ಕೊಟ್ಟ ಲಿಂಗವೆಂಬುದೊಂದು ಕುರುಹು ಇರುತ್ತಿರಲಿಕ್ಕೆ,

ಆ ನಿಜಲಿಂಗ ಸಂಗವನಱಿಯದೆ,
ಸಂದಿಗೊಂದಿಯಲ್ಲಿ ಹೊಕ್ಕೆಹೆನೆಂಬ ಗೊಂದಣವೇತಕ್ಕೆ?
ತಾ ನಿಂದಲ್ಲಿ ಕೆಡಹಿದ ಒಡವೆಯ ಆಚೆಯಲ್ಲಿ ನೆನೆದು ಅಱಸಿದಡಿಲ್ಲ;
ಅದು ಮತ್ತೆ ತನಗೆ ಸಂದಿಸುವುದೆ?
ಘನಲಿಂಗ ನಿನ್ನಂಗದಲ್ಲಿ ಇದ್ದಂತೆ,
ಕಂಡೆ ಕಾಣೆನೆಂಬ ನಿನ್ನ ನಿಜ ನಿಂದಲ್ಲಿಯ ಸಂದೇಹವ ತಿಳಿದುಕೊಳ್ಳಿ,
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನಲ್ಲಿ. ॥೨೭॥
ಮತ್ತಂ,

೮೨೬

ತನ್ನ ಕಣ್ಣಿಂದ ಕನ್ನಡಿಯ ನೋಡಿ
ಆ ದೃಷ್ಟಿ ಕಾಣಲಿಕ್ಕೆ ಕಣ್ಣೋ? ಕನ್ನಡಿಯೋ?
ಆ ಉಭಯ ದೃಷ್ಟಿಯಿಂದ ಇಷ್ಟದ ದೃಷ್ಟವ ಕಂಡು,
ಉಭಯ ನಿಶ್ಚಯವಾದಲ್ಲಿ ಕೈವಲ್ಯವೆಂಬ ಕರ್ಕಶ ಬೇಡಾ.
ಕೈಯ ಮುದ್ದೆಯ ಕೆಡಹಿದಲ್ಲಿ ಬಾಯಿಗೆ ಬಯಲು.
ಅದ ನಿಮ್ಮ ನೀವೇ ತಿಳಿದುಕೊಳ್ಳಿ,
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನಾ. ॥೨೮॥
ಮತ್ತಂ,

೮೨೭

ಸಕಲದಲ್ಲಿ ಅಳಿದು ನಿಷ್ಕಲದಲ್ಲಿ ಉಳಿದು ಮತ್ತೆ,
ಸಕಲವ ಕೂಡಿಹೆನೆಂಬ ನಿಷ್ಕಲ ಉಂಟೆ ಅಯ್ಯಾ?
ನಿಷ್ಕಲದೊಳಗೆ ಸಕಲವಡಗಿ, ಆ ಗುಣ ಉಪದೃಷ್ಟಕ್ಕೆ ಈಡಿಲ್ಲದಲ್ಲಿ,
ಅಖಿಳಜಗವೆಂಬುದು ಹೊಱಗು.
ಆ ಗುಣ ನಿನ್ನ ಸದ್‌ಭಾವ ನಿಜವಾದಲ್ಲಿ, ನಿನ್ನಂಗವೆ ಕೈಲಾಸ.
ಆ ಲಿಂಗದ ಕೂಟವೆ ನಿರ್ಯಾಣ.
ಇದು ನಿಸ್ಸಂಗದ ಸಂಗ.
ನಿಮ್ಮ ನೀವೆ ತಿಳಿದುಕೊಳ್ಳಿ,
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನಾ. ॥೨೯॥
ಮತ್ತಂ,

೮೨೮

ಅಂಗಕ್ರೀಯನಱಿವಲ್ಲಿ ಸ್ಥಾಣುವಿನ ಬಾಯ ತಿಲದಂತೆ,
ಆತ್ಮನ ಕಳೆಯ ತಿಳಿವಲ್ಲಿ
ಶಿಲೆಯಲ್ಲಿ ಬಿಂದು ಒಲವರದಿಂದ ಜಾಱುವಂತೆ,
ಆ ಅಱಿವು ಮಹದಲ್ಲಿ ಬೆರಸುವಾಗ

ವಾರಿಶಿಲೆ ನೋಡನೋಡಲಿಕ್ಕೆ ನೀರಾದಂತೆ ಇರಬೇಕು.
ಕಾಯವಶದಿಂದ ಕರ್ಮವ ಮೀಱಿ,
ಕರ್ಮವಶದಿಂದ ವಶಗತವಾದಲ್ಲಿ,
ಅದೆ ಕಾಯ ಬೆರಸಿ ಎಯ್ದಿದ ಕೈಲಾಸ.
ಆ ಭಾವವ ನಿಮ್ಮ ನೀವೆ ತಿಳಿದು ಕೊಳ್ಳಿ.
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನಾ. ॥೩೦॥

ಮತ್ತಂ,

೮೨೯

ಮನೆಯಲ್ಲಿ ವೀರಧೀರ; ರಣದಲ್ಲಿ ಓಸರಿಸಿದ ಮತ್ತೆ ಭಾಷೆಯ ಬಂಟನಲ್ಲ.
ನೀ ಬಂದ [೧]ದೇಶ[೧], ನೀ ಮಾಡುವ ಮಾಟ,
ನೀ ಪ್ರಮಥರೆಲ್ಲರ ಹಂಗಿಸುವ ನಿರಂಗದ ವಚ,
ನಾ ಕೂಡಿಹೆನೆಂಬ ಸಂಧಿಯಲ್ಲಿ ನಿಂದಿತ್ತು ನಿಜಲಿಂಗದ ಕೂಟ.
ಆ ಸುಸಂಗವ ನಿನ್ನ ನೀನೆ ನೋಡಿಕೊ,
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನಾ. ॥೩೧॥

ಈ ಹೀಂಗೆಂದು ಮಹಾದೇವಿಯಮ್ಮ ನುಡಿಯಲು, ಆ ಮೋಳಿಗೆಮಾರಿತಂದೆಗಳು ಲಿಂಗೈಕ್ಯದ ನಿಶ್ಚಯಭಾವವ ಕೇಳಿದ ಪ್ರಸ್ತಾವದ ವಚನ:

೮೩೦

ಭಕ್ತಿಯುಳ್ಳನಕ್ಕ ಇಷ್ಟಲಿಂಗದ ಹಂಗು ಬೇಕು.
ಆತ್ಮನುಳ್ಳನ್ನಕ್ಕ ಅಱಿವೆಂಬುದ ವಿಚಾರಿಸಬೇಕು.
ಮರ್ತ್ಯವೆಂಬುದು ನಾ ಬಲ್ಲನ್ನಕ್ಕ ಕರ್ಕಶದ ಜಗ.
ಇದು ಕಾರಣದಲ್ಲಿ, ಕೈಲಾಸವೆಂಬ ಬಟ್ಟೆಯನಱಿಸಬೇಕು.
ಎನ್ನ ಸತ್ಯಕ್ಕೆ, ಎನ್ನ ಭಕ್ತಿಗೆ, ಎನ್ನ ಮನಕ್ಕೆ,
ಎನ್ನ ಮುಕ್ತ್ಯಾಂಗನೆ,
ಎನ್ನ ನಿಶ್ಚಯಕ್ಕೆ ಒಂದು ಗೊತ್ತ ತೋಱಾ!
ನಿಃಕಳಂಕಮಲ್ಲಿಕಾರ್ಜುನನು ಎಲ್ಲಿದ್ದಹನು ಹೇಳಾ? ॥೩೨॥

ಈ ಹೀಂಗೆಂದು ಮೋಳಿಗೆಮಾರಿತಂದೆಗಳು ಕೇಳಲು, ಅವರ ಸತಿಯು ಮಹಾಘನ ಲಿಂಗಸ್ವರೂಪರು ನೀವಾದ ಕಾರಣ, ಎನಗೆ ಸ್ವತಂತ್ರವಿಲ್ಲೆಂದು ಬಿನ್ನೈಸಿದ ಪ್ರಸ್ತಾವದ ವಚನ:

೮೩೧

ಕಾಯವಿದ್ದಂತೆ ತಲೆ ನಡೆದುದುಂಟೆ ಅಯ್ಯಾ?
ಕಣ್ಣಿದ್ದಂತೆ ಕರ್ಣ ನೋಡಿದುದುಂಟೆ ಅಯ್ಯಾ?
ಬಾಯಿ ಇದ್ದಂತೆ ನಾಸಿಕ ಉಂಡುದುಂಟೆ ಅಯ್ಯಾ?

೧–೧ ದ್ವೇಷ(ಮು)

ತಾಯಿಲ್ಲದೆ ಮಕ್ಕಳು ಬಂದ ತೆಱನ ಹೇಳಯ್ಯಾ?
ನಿಮ್ಮ ಸೇವೆಯ ತೊತ್ತಿನ ಭಾವವ ಕೇಳಲೇತಕ್ಕೆ?
ಪಟದೊಳಗಣ ಬಾಲಸರಕ್ಕೆ ಪ್ರತಿಸೂತ್ರ ನೇಣುಂಟೆ?
ನಿಮ್ಮಲ್ಲಿ ಎನ್ನ ಭಾವ ಲೇಪ,
ಎನ್ನಯ್ಯಪ್ರಿಯ ಇಮ್ಮಡಿ [೧]ನಿಃಕಳಂಕ[೧] ಮಲ್ಲಿಕಾರ್ಜುನನಲ್ಲಿಯೇ. ॥೩೩॥

ಮತ್ತಂ,

೮೩೨

ಚಿತ್ರದ ಬೊಂಬೆಯ ಹಾಹೆ
ಎಲ್ಲಕ್ಕೂ ಆತ್ಮನಿಂದ ಚೇತನಿಸಿ ನಡೆವುತ್ತಿಹವೆ?
ಅವು ಸೂತ್ರಾಧಿಕನ ಭೇದ, ಎನ್ನ ಶಕ್ತಿ ಜಾತಿಯ ಲಕ್ಷಣ.
ನಿಮ್ಮ ಭಕ್ತಿ ಸೂತ್ರದಿಂದ
ಎನ್ನ ಸ್ತ್ರೀಜಾತಿ ನಿಮ್ಮ ಶ್ರೀಪಾದದಲ್ಲಿ ಅಡಗಿತ್ತು.
ಎನಗೆ ಭಿನ್ನದ ಮಾತಿಲ್ಲ.
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನೆಂಬುವರು ನೀವೆ! ॥೩೪॥

ಈ ಹೀಂಗೆಂದು ಮಹಾದೇವಿಯಮ್ಮ ನುಡಿಯಲು, ಆ ಮೋಳಿಗೆಮಾರಿತಂದೆಗಳು ಎನ್ನ ಸದಾಚಾರ ಭಕ್ತಿಗೆ ನೀನೊಳಗಾದ ಕಾರಣ, ಎನಗೆ ನಿನಗೆ ಭಿನ್ನಭಾವವಿಲ್ಲೆಂದು ಕೇಳಿದ ಪ್ರಸ್ತಾವದ ವಚನ:

೮೩೩

ತಲೆ ಇಲ್ಲದೆ ಕಾಲು ನಡೆಯಬಲ್ಲುದೆ?
ಕುಕ್ಷಿ ಇಲ್ಲದೆ ಬಾಯಿ ಉಣಬಲ್ಲುದೆ?
ಆತ್ಮನಿಲ್ಲದಿರೆ ಕರಚರಣಾದಿಗಳಿಗೆ ಏತಱ ಹೊಲಬು?
ನಿನ್ನ ಭಕ್ತಿಯ ಬೆಳೆಯೆ ಎನಗೆ ಸತ್ಯದ ಹಾದಿ.
ಇದು ನಿಶ್ಚಯ ನಿಃಕಳಂಕಮಲ್ಲಿಕಾರ್ಜುನ. ॥೩೫॥

ಮತ್ತಂ,

೮೩೪

ಸತ್ವಗೆಟ್ಟಲ್ಲಿ ಕಾಷ್ಠವನೂಱಿ ನಡೆಯಬೇಕು.
ಮತ್ತತ್ವವಿದ್ದಲ್ಲಿ ನಿಶ್ಚಯವ ಹೇಳಲಾಗಿ
ಮಹಾಪ್ರಸಾದವೆಂದು ಕೈಕೊಳಬೇಕು.
ಎನ್ನ ಭಕ್ತಿಗೆ ನೀ ಶಕ್ತಿಯಾದ ಕಾರಣ,
ಎನ್ನ ಸತ್ಯಕ್ಕೆ ನೀ ಸತಿಯಾದ ಕಾರಣ,

೧–೧ ನಿಷ್ಕಳಂಕ(ಮು)

ಎನ್ನ ಸುಖ ದುಃಖ, ನಿನ್ನ ಸುಖದುಃಖ, ಅನ್ಯವಿಲ್ಲ.
ಇದಕ್ಕೆ ಭಿನ್ನಭೇದವನು ಹೇಳಾ ನಿಃಕಳಂಕಮಲ್ಲಿಕಾರ್ಜುನಾ? ॥೩೬॥

ಈ ಹಿಂಗೆಂದು ಮೋಳಿಗೆಮಾರಿತಂದೆಗಳು ಕೇಳಲು, ಅವರ ಸತಿಯು ಮಹಾಘನ ಲಿಂಗಕ್ಕೂ ನಿಮಗೂ ಅನ್ಯಭಿನ್ನವಿಲ್ಲೆಂದು ನಿಶ್ಚಯವ ತೋಱಿ ನುಡಿದ ಪ್ರಸ್ತಾವದ ವಚನ:

೮೩೫

ಕೂಟಕ್ಕೆ ಕುಱುಹಾದುದನಱಿಯದೆ,
ಆತ್ಮಕ್ಕೆ ಅಱಿವಾದುದನಱಿಯದೆ,
ಕೈಲಾಸವೆಂಬ ಸೂತ್ರದ ಒಳಗಿಗೆ ಮನ ಸೋತಿರಲ್ಲಾ!
ಅಂಧಕನ ಕೈಯ ರತ್ನದಂತೆ ಆದಿರಲ್ಲಾ!
ಪಂಗುಳನ ಕೈಯ ಶಸ್ತ್ರದಂತೆ ಆದಿರಲ್ಲಾ!
ಈ ನಿರಂಗವ ತಿಳಿದು ನಿಂದಲ್ಲಿ,
ಬೇಱೆ ಅಂಗವಡಗುವುದಕ್ಕೆ ಉಭಯವುಂಟೆಂಬ ದಂದುಗ ಬೇಡ.
ತಾ ನಿಂದಲ್ಲಿಯೆ ನಿಜಕೂಟ;
ತಿಳಿದಲ್ಲಿಯೆ ನಿರಂಗವೆಂಬುದು,
ಉಭಯವಿಲ್ಲ ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನಲ್ಲಿ. ॥೩೭॥

ಮತ್ತಂ,

೮೩೬

ಇಷ್ಟದಲ್ಲಿ ನೋಟ, ಜ್ಞಾನದಲ್ಲಿ ಕೂಟ,
ಏಕಾರ್ಥವಾದಲ್ಲಿ ಕಾಯವೆಂಬ ಕದಳಿಯ ಬಿಟ್ಟುದು;
ಭಾವವೆಂಬ ಕುಱುಹ ಮಱೆದುದು.
ಇಂತೀ ಉಭಯ ನಿರ್ಭಾವವಾದಲ್ಲಿ
ಇಹಪರವೆಂಬ ಹೊಲಬುಗೆಟ್ಟಿತ್ತು,
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನು ಒಂದೆಂದಲ್ಲಿ. ॥೩೮॥

ಮತ್ತಂ,

೮೩೭

ಹೇಮದ ಬೆಂಬಳಿಯ ಸ್ವರೂಪದಂತೆ,
ಗ್ರಾಮದ ಬೆಂಬಳಿಯ ಬಟ್ಟೆಯಂತೆ,
ಹೇಮರೂಪಳಿದು ಸ್ವರೂಪವಡಗಿದಲ್ಲಿ, ಕುಶಲ ಚಿತ್ರ ಎಲ್ಲಿದ್ದಿತ್ತು?
ಬಟ್ಟೆಯ ಮೆಟ್ಟಿ ಹೋಗಿ ಪುನರಪಿಯಾಗಿ ತಿರುಗಿದಲ್ಲಿ,
ಊರ ಬಾಗಿಲ ಬಟ್ಟೆಯ ಒಂದಱಲ್ಲಿ ಹೋಗಬೇಕು.
ಇದು ದೃಷ್ಟಕ್ಕೆ ಕೊಟ್ಟ ಇಷ್ಟ.
ಆ ಇಷ್ಟ ಚಿತ್ತದಲ್ಲಿ ಅಚ್ಚೊತ್ತಿದ ಮತ್ತೆ
ಆ ನಿಶ್ಚಯ ಉಭಯವ ತಿಳಿದಲ್ಲಿ ಕಾಯಕ್ಕೆ ಕೈಲಾಸವೆಂಬುದಿಲ್ಲ;

ಭಾವಕ್ಕೆ ಬಯಲೆಂಬುದಿಲ್ಲ.
ಅನಲನಲ್ಲಿ ಅಜಿತ ದ್ರವ್ಯದಂತೆ ಅದು ಅಮೂರ್ತಿಭಾವ,
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನಲ್ಲಿ
ಸದ್‌ಭಾವವಂತನ ಲಕ್ಷಣ. ॥೩೯॥

ಮತ್ತಂ,

೮೩೮

ಗುರುವನಜಿದು ಲಿಂಗವನಜಿವವರುಂಟು.
ಲಿಂಗವನಜಿದು ಪಂಚಾಚಾರವನಜಿವವರುಂಟು.
ಪಂಚಾಚಾರವನಜಿದು ಜಂಗಮವನಜಿವವರುಂಟು.
ಆ ಜಂಗಮವನಜಿದಲ್ಲಿ ಷಟ್‌ಸ್ಥಲ ಸಂಬಂಧವಾಯಿತ್ತು.
ಆ ಸಂಬಂಧ ಸಮಯ ನಿಂದು, ಉಭಯವಳಿದು ಏಕವಾದಲ್ಲಿ,
ಹಲವು ನೆಲೆ ತನ್ನ ವಿಶ್ವಾಸದ ಹೊಲಬಿನಲ್ಲಿ ಅಡಗಿತ್ತು.
ಆ ಹೊಲದ ಹೊಲಬಿನಲ್ಲಿ ನಿಂದವಂಗೆ ಇಹಪರವೆಂಬ ಕಲೆ ಇಲ್ಲ–
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನ ಒಂದೆ ಎಂದಲ್ಲಿ.॥೪೦॥

ಮತ್ತಂ,

೮೩೯

ಪೂಜೆಯಲ್ಲಿ ಲಕ್ಷಿತವಪ್ಪವರು ಪುಣ್ಯದ ಆಗಿಂಗೆ ಒಡಲು.
ದಾಸೋಹವೆಂಬ ಸೋಹವನಜಿದಲ್ಲಿ
ಚತುರ್ವಿಧಫಲಪದದಾಸೆಗೆ ಒಡಲು.
ಇಂತೀ ಉಭಯದ ಪ್ರೀತಿಯನಜಿದು
ತೋಜಿದ ತೋಜಿಕೆ ಬಂದಂತೆ ಅವನಾರೈದು
ಗುರುವಿಂಗೆ ತನು ಹೋಯಿತ್ತು.
ಲಿಂಗಕ್ಕೆ ಮನ ಹೋಯಿತ್ತು,
ಜಂಗಮಕ್ಕೆ ಧನ ಹೋಯಿತ್ತು.
ಇಂತೀ ಎಲ್ಲಾ ಲಕ್ಷದಲ್ಲಿ ಲಕ್ಷಿಸಿ,
ನೀವು ಕೈಲಾಸಕ್ಕೆ ಹೋದೆಹೆನೆಂಬ ಕಲ್ಲೆದೆಗೆ ನಾನಂಜುವೆ,
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನಾ! ॥೪೧॥

ಮತ್ತಂ,

೮೪೦

ಕಾಯವುಳ್ಳನ್ನಕ್ಕ ಲಿಂಗಪೂಜೆ,
ಆತ್ಮವುಳ್ಳನ್ನಕ್ಕ ಅಜಿವಿನ ಭೇದ.
ಪುರುಷ ನೀ, ಸತಿ ನಾನೆಂಬಲ್ಲಿ ಉಭಯದ ಬೀಜ

ನಾನೀನೆಂಬನ್ನಕ್ಕ ಅಂಗದ ಲಿಂಗದಲ್ಲಿಯೇ ನಿರಂಗವಾಗಬೇಕು
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನಾ! ॥೪೨॥

ಮತ್ತಂ,

೮೪೧

ಕಾಯವೆರಸಿ ಕೈಲಾಸಕ್ಕೆ ಎಯ್ದಿಹೆನೆಂಬುದು ಮತವಲ್ಲ.
ಘನಲಿಂಗ ಕರಸ್ಥಲದಲ್ಲಿ ಇಪ್ಪ ಅನುವನಱಿಯದೆ,
ಇಲ್ಲಿಗೆ ಕರ್ಮ, ಅಲ್ಲಿಗೆ ನಿಷ್ಕರ್ಮವೆ?
ಹೇಮದ ಮಾಟದ ಒಳಹೊಱಗಿನಂತೆ,
ಮರ್ತ್ಯ ಕೈಲಾಸವೆಂಬ ಕಟ್ಟಳೆ ಇಲ್ಲ.
ಆತ್ಮ ನಿಶ್ಚಯವಾದಲ್ಲಿಯೆ ಕೈವಲ್ಯ.
ಮತ್ತತ್ವವಾದಲ್ಲಿಯೆ ಮರ್ತ್ಯದ ಒಳಗು.
ಈ ಗುಣ ಸದಮಲ ಭಕ್ತನ ಯುಕ್ತಿ.
ಎನ್ನಯ್ಯಪ್ರಿಯ ಇಮ್ಮಡಿನಿಃಕಳಂಕಮಲ್ಲಿಕಾರ್ಜುನನು ಇಕ್ಕಿದ ಗೊತ್ತು.॥೪೩॥

ಮತ್ತಂ,

೮೪೨

ಮಾಡಿದ ಭಕ್ತಿಗೆ ಕೈಲಾಸಕ್ಕೆ ಹೋದೆಹೆನೆಂಬುದು ಕೈಕೂಲಿ.
ಭಾಷೆಗೆ ತಪ್ಪಿ ಓಸರಿಸಿದ ಮತ್ತೆ,
ಆನೀ ಹಿತವ ಹೇಳಿದಲ್ಲಿ ಮತ್ತೆ ಘಾತಕತನದಿಂದ
ಎಯ್ದಿಹೆನೆಂಬುದು ಭಕ್ತರಿಗೆ ನಿಹಿತವಲ್ಲ.
ದೃಷ್ಟದಲ್ಲಿ ಕೊಟ್ಟುದ ಲಕ್ಷಿಸಲರಿಯದೆ
ಅಲಕ್ಷ್ಯವ ಲಕ್ಷಿಸಿ ಕಾಬುದಕ್ಕೆ ಲಕ್ಷವೇನು?
ಅದು ನಿರೀಕ್ಷಣೆಯ ಲಕ್ಷದಿಂದಲ್ಲದೆ ಆತ್ಮಂಗೆ ಲಕ್ಷವಿಲ್ಲ.
ಇಂತೀ ಉಭಯದಲ್ಲಿ ಲಕ್ಷಿತವಾದವಂಗೆ ಮರ್ತ್ಯ ಕೈಲಾಸವೆಂಬುದು.
ಅದೆ ತನ್ನಱಿವು ನಿಶ್ಚಯವಾದಲ್ಲಿ ಅದೆ ಲಕ್ಷ್ಯ.
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನ
ಅಲ್ಲಿ ಇಲ್ಲಿ ಎಲ್ಲಿಯೂ ತಾನೆ. ॥೪೪॥

ಮತ್ತಂ,

೮೪೩

ಕಾಯಭ್ರಮೆಯಿಂದ ಕೈಲಾಸ,
ಜೀವಭ್ರಮೆಯಿಂದ ಮಹದ ಕೂಟವೆಂಬುದು.
ಕಾಯದ ಜೀವದ ಭೇದವಱಿತಲ್ಲಿ
ಅತ್ತಲಿತ್ತಲೆಂದು ಮತ್ತೆ ಹಲುಬಲಿಲ್ಲ.

ಇದು ನಿಶ್ಚಯದ ಕೂಟ,
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನಲ್ಲಿ. ॥೪೫॥

೮೪೪

ಸುಮನ ಸುಬುದ್ಧಿ ಭಕ್ತಿಸ್ಥಲ.
ಮಲ ಅಮಲ ಮಹೇಶ್ವರಸ್ಥಲ.
ಅಜ್ಞಾನ ಸುಜ್ಞಾನ ಪ್ರಸಾದಿಸ್ಥಲ.
ಉಭಯಕೂಟಸ್ಥಲವೆಂಬುದ ಪರಿಹರಿಸಿದಲ್ಲಿ ಪ್ರಾಣಲಿಂಗಿಸ್ಥಲ.
ಸ್ತುತಿನಿಂದ್ಯಾದಿಗಳಲ್ಲಿ ಒಡಲಳಿದು ನಿಂದುದು ಶರಣಸ್ಥಲ.
ಇಂತೀ ಪಂಚಭೇದಂಗಳ ಸಂಚವನಱಿತು ವಿಸಂಚವಿಲ್ಲದೆ,
ಪರುಷ ಪಾಷಾಣದಂತೆ ಭಿನ್ನಭಾವವಿಲ್ಲದೆ,
ಅಱಿದಱುಹಿಸಿಕೊಂಬ ಕುಱುಹು ಏಕವಾದಲ್ಲಿ ಐಕ್ಯಸ್ಥಲ.
ಎನ್ನಯ್ಯ, ಎನ್ನ ನಿನ್ನ ಷಟ್‌ಸ್ಥಲ.
ಇದಕ್ಕೆ ಭಿನ್ನಭಾವವಿಲ್ಲ.
ಅದು ಎನ್ನ ನಿನ್ನ ಕೂಟದ ಸುಖದಂತೆ,
ಇದ ಚೆನ್ನಾಗಿ ತಿಳಿದು ನೋಡಿಕೊಳ್ಳಿ.
ಅಲ್ಲಿ ಇಲ್ಲಿ ಎಂಬ ಗೆಲ್ಲಗೂಳಿತನ ಬೇಡ.
ಹಾಗೆಂಬಲ್ಲಿಯೆ ಬಯಲಾಗಬೇಕು,
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನಲ್ಲಿ. ॥೪೬॥

ಮತ್ತಂ,

೮೪೫

ಬಿಡುವುದಕ್ಕೆ ಮುನ್ನವೆ ಮೊನೆ ಮುಂಚಿದಂತಿರಬೇಕು.
ಅಡಿ ಏಱುವುದಕ್ಕೆ ಮುನ್ನವೆ,
ಆ ಮೊನೆಯ ಜಾಱಿ ಮತ್ತೆ ತಾನಡಿ ಏಱಿ
ಮೀಱಿ ಮುಂಚಿದಂತಿರಬೇಕು.
ನೀನೆಂಬನ್ನಕ್ಕ ಲಕ್ಷ್ಯದಲ್ಲಿ ಅಲಕ್ಷ್ಯವಾಗಬೇಕು–
ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನೆಂಬುದಕ್ಕೆ ಮುನ್ನವೆ.॥೪೭॥

ಇಂತು ಮಹಾದೇವಿಯಮ್ಮನು ಲಿಂಗೈಕ್ಯದ ನಿರ್ಣಯವ ಬಿನ್ನೈಸಲು, ಆ ಮೋಳಿಗೆ ಮಾರಿತಂದೆಗಳು ಘನಲಿಂಗದಲ್ಲಿ ತನಗೆ ಸಮರಸಭಾವವ ತಿಳಿದು ನಿಶ್ಚಯಿಸಿದ ಪ್ರಸ್ತಾವದ ವಚನ:

೮೪೬

ಹಲವು ಬಹುರೂಪ ಬರೆವ ಕರದ ಕಡ್ಡಿಯ ಭೇದದಂತೆ,
ಮನವಱಿದು, ಕಣ್ಣು ನೋಡಿ,
ಕೈ ಕಡ್ಡಿಯ ಹಿಡಿದು ಲಕ್ಷಿಸುವಂತೆ
ಸ್ಥಲದಲ್ಲಿ ನಿಂದು, ಅಱಿವಿನಲ್ಲಿ ಆಶ್ರಯಿಸಿ,

ಇಷ್ಟ ವಿಶ್ವಾಸ ಭಕ್ತಿಯೊಳಡಗಿ,
ಭಕ್ತಿ ವಸ್ತುವಿನಲ್ಲಿ ಲೇಪವಾದಲ್ಲಿ,
ನಿಃಕಳಂಕಮಲ್ಲಿಕಾರ್ಜುನಲಿಂಗವು ನಿರ್ಲೇಪವಾಯಿತ್ತು. ॥೪೮॥

ಮತ್ತಂ,

೮೪೭

ವಿಶ್ವಾಸದ ಹರವರಿಯಲ್ಲಿ ವಿಶ್ವಮಯ ಸ್ಥಲಕುಳಂಗಳಾದವು.
ಅದು ನಾನಾ ತಟಾಕಂಗಳಲ್ಲಿ ತೋಱುವ ದಿನಕರನಂತೆ,
ಹಲವುಮಯ ತೋಱುವುದಲ್ಲಿಗಲ್ಲಿಗೆ.
ಒಲವರವಿಲ್ಲದೆ, ಆ ವರುಣನ ನೆಲೆ ಒಂದೆ
ಹಲವು ಜಗಕ್ಕೆ ಹೊಲಬಾದಂತೆ, ಸ್ಥಲಜ್ಞನಾದೆಯಲ್ಲಾ!
ಸ್ಥಲನೆಲೆ ಒಂದೆಂದಱಿತಲ್ಲಿ ಏಕಸ್ಥಲಮೂರ್ತಿ ನೀನೆ.
ಏಕ ಸಾಕೆಂದಲ್ಲಿ ನಿರಾಕಾರನಾದೆಯಲ್ಲಾ ನಿಃಕಳಂಕಮಲ್ಲಿಕಾರ್ಜುನಾ!!॥೪೯॥

ಇಂತೀ ಶ್ರೀಮತ್ ಸಕಲಗಣ ಪುರಾತನರೊಳ್ ಪ್ರಭುದೇವರು
ಮಹಾನುಭಾವಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್
ಮೋಳಿಗೆಯ ಮಾರಯ್ಯಗಳ ಸಂಪಾದನೆಗಂ
ತ್ರಯೋದಶೋಪದೇಶಂ ಸಮಾಪ್ತಂ.
ಅಂತು ವಚನ ೮೪೭ ಕ್ಕಂ ಮಂಗಳಮಹಾ ಶ್ರೀ

❖

೧೪
ನುಲಿಯ ಚಂದಯ್ಯಗಳ ಸಂಪಾದನೆ

[೧]ಕಂದ:

ನುಲಿಯ ಚಂದಯ್ಯನೆಂದೆಂ
ಬಲಘುತರದ ಶರಣ ತನ್ನ ಲಿಂಗದ ಕಯ್ಯಲಿ
ಸಲೆ ಕಾಯಕ ಮಾಡಿಸಿದ
ಗ್ಗಳ ಚರಿತವ ಪೇಳ್ವೆನಿಳೆಯೊಳಾನಂದದೊಳಂ ॥೧॥

ಅದೆಂತೆಂದೊಡಾ ಮೋಳಿಗೆ ಮಾರಿತಂದೆಗಳು ಘನಲಿಂಗದಲ್ಲಿ ಸಮರಸಭಾವವನೆಯ್ದಿ ನಿಶ್ಚಯಿಸಲಿತ್ತ ಬಸವಣ್ಣ ಚೆನ್ನಬಸವಣ್ಣ ಪ್ರಭುದೇವರು ಸಿದ್ಧರಾಮಯ್ಯದೇವರು ಅಪ್ಪಣ್ಣಗಳು ಸೊಡ್ಡಳಬಾಚರಸರು ಮೊದಲಾದ ಅಸಂಖ್ಯಾತ ಪ್ರಮಥಗಣಂಗಳೆಲ್ಲರು ಮಹಾನುಭಾವದ ನಿಜಾನಂದಶರಧಿಯೊಳೋಲಾಡುತ್ತಮಿರಲು, ಮತ್ತೋರ್ವ ಶರಣ ನುಲಿಯ ಚಂದಯ್ಯನ ಮಹಾತ್ಮೆ ಎಂತೆಂದೊಡೆ: ಮೊದಲು ಶಿವನಿರೂಪದಿಂ ಈ ಗಣಂಗಳೆಲ್ಲರು ಜಗದ್ಧಿತಾರ್ಥಮಾಗಿ ವೀರಶೈವ ನಿಜವರ್ತನಾ ಸಂಬಂಧಮಂ ಮರ್ತ್ಯದಲ್ಲಿ ಪಸರಿಸಲೆಂದು ಭೂಮಿಗೆ ಬಿಜಯಂಗೆಯ್ವಾಗ, ತಾನೊಬ್ಬ ಶರಣನಾಗಿ ಜನಿಸಿ, ಚಂದಯ್ಯನೆಂಬ ನಾಮದಿಂ ಜಂಗಮದಾಸೋಹಕ್ಕೆ ಸತ್ಯಶುದ್ಧ ನಿಜಕಾಯಕದಿಂ ನುಲಿಯ ಮಾಡಿ, ಹಾಗಕ್ಕೆ ಮಾಜಿ ತಂದ ದ್ರವ್ಯದಿಂ ಪದಾರ್ಥಮಂ ತಂದು, ಜಂಗಮಕ್ಕೆ ನೀಡಿ, ತತ್‌ಪ್ರಸಾದಮಂ ಲಿಂಗಭೋಗೋಪಭೋಗಿಯಾಗಿರುತ್ತಂ, ಬಸವಣ್ಣನ ಭಕ್ತಿ, ಮಡಿವಾಳಯ್ಯನ ನಿಷ್ಠೆ, ಚೆನ್ನಬಸವಣ್ಣನ ಸಾವಧಾನ ಜ್ಞಾನ, ಸತ್ಯಣ್ಣನ ಸ್ವಾನುಭಾವಪ್ರಭೆ, ಪ್ರಭುದೇವರ ಸದಾನಂದಪರಮಕಾಷ್ಠೆ, ಅಜಗಣ್ಣನ ಸಮರಸದೈಕ್ಯತ್ವ, ಇಂತಿವರು ಮೊದಲಾದ ಗಣಂಗಳ ನಿಜವೆ ರೂಪಾದಂತೆ ಜಂಗಮಭಕ್ತಿಯೆ ಅಧಿಕ, ಜಂಗಮಪೂಜೆಯೆ ಲಿಂಗಪೂಜೆ, ಜಂಗಮ ಭಕ್ತಿಯೆ ಲಿಂಗಭಕ್ತಿ, ಜಂಗಮತೃಪ್ತಿಯೆ ಲಿಂಗತೃಪ್ತಿ, ಜಂಗಮದಾಸೋಹವೆ ಪರಮಪದವೆಂದಜಿದು, ಎಲ್ಲಾ ಕ್ರೀಗಳನು ಜಂಗಮದಾಸೋಹದಲ್ಲಿಯೆ ತಿಳಿದು ಅಲ್ಲಿಯೆ ಮನಮಗ್ನವಾಗಿ, ಅದೆ ತನ್ನ ನಿಜಪದವಾಗಿರುತ್ತಂ, ಒಂದು ದಿನ ತನ್ನ ನಿಜಕಾಯಕಕ್ಕೈತಂದು, ಹುಲ್ಲಂ ಕೊಯ್ದು ಹೊಜೆಯಂ ಕಟ್ಟುವ ಕಾಲದಲ್ಲಿ, ತನ್ನ ಇಷ್ಟಲಿಂಗವು, ಈತನು ಜಂಗಮ ದಾಸೋಹವೆ ಪರಮವೆಂಬುದು

೧ + ಶ್ರೀ ಮದ್ಗುರು ಬಸವಲಿಂಗಾಯ ನಮಃ (ಮೂ)

ನಿಜವೊ? ಅಲ್ಲವೊ? ಎಂದು ನೋಡುವುದು ನಿಮಿತ್ತಂ, ಮತ್ತೆ ಈತನಂ ಅಸಂಖ್ಯಾತರ ಮುಂದೆ ಪ್ರಜ್ವಲಿಸಿ ಅಜಿಕೆಯ ಮಾಡುವುದು ನಿಮಿತ್ತಂ, ಈತನಲ್ಲಿ ತಾವು ಸೇವೆಯ ಮಾಡಬೇಕೆಂಬುದು ನಿಮಿತ್ತಂ, ಈ ಮೂಱು ಭಾವದಿಂ ಸರಿದು ಜಲದಲ್ಲಿ ಬೀಳಲು, ನುಲಿಯ ಚಂದಯ್ಯಗಳು ಈ ಲಿಂಗದ ಮನೋಭಾವದಿಚ್ಛೆಯನಱಿದು, ಚರಸೇವೆ ಬೇಕಾದಡೆ ಲಿಂಗ ತಾನೆ ಬಂದಿತ್ತೆಂಬುದಱಿಂ, ಪರಿಪೂರ್ಣವಹ ವಸ್ತು ಎಲ್ಲಿದ್ದರೇನು? ಎಂಬ ಭಾವದಿಂ ಜಂಗಮದಾಸೋಹದಲ್ಲಿಯೆ ಲಿಂಗ ಉಂಟೆಂದಱಿದು, ಆ ಚಂದಯ್ಯಂ ಬಿಟ್ಟು ಪೋಗುತ್ತಿರೆ, ಆ ಲಿಂಗವು ಆತನ ಮನದ ಜಂಗಮಸೇವಾನಿಷ್ಠೆಯಂ ಕಂಡು, 'ಎಲೆ ಚಂದಯ್ಯಾ, ನಾವೂ ಬಂದೆ'ವೆಂದು ಮೇಲಕ್ಕೆ ಬಂದು ಧ್ವನಿಯ ಮಾಡಲಾತಂ 'ನಿಮ್ಮ ಭಾವ ಹೇಂಗೆ ಇದ್ದಿತ್ತು ಹಾಂಗೆ ಇರಿ. ನನಗೆ ನಮ್ಮ ಒಡೆಯರ ಸೇವೆ ಉಳಿದಿತ್ತು' ಎಂದು ಪೋಗುತ್ತಿರೆ, ಆ ಲಿಂಗವು ತಾನೆ ವೃತ್ತಗೋಳಕಮುಖಾಕಾರಮಂ ಉಳಿದು, ಪುರುಷಾಕಾರಮಂ ತಳೆದು, 'ನಾನು ಬಂದೆನು ಬಿಟ್ಟು ಹೋಗದಿರಯ್ಯಾ' ಎನಲಾ ಚಂದಯ್ಯಂ ಕೇಳ್ದು, 'ಮೊದಲು ಹೋಗಿ ಈಗ ಬಂದೆಹೆನೆಂದರೆ ನಾನೊಲ್ಲೆ'ನೆನಲು, ಆ ಲಿಂಗವು 'ನೀನೊಲ್ಲೆನೆಂದಡೆ ನಾನು ಬಿಡೆ'ನೆಂದು ಸೆಱಗಂ ಸುತ್ತಿಕೊಂಡು ಬಿಡದಿರಲು, ಆ ಚಂದಯ್ಯ 'ನೀವು ಸುಮ್ಮನೆ ಬಂದೆಹೆನೆಂದರೆ ನಾನೊಪ್ಪೆನು. ಮುಂದೆ ನಾವು ಹೋಹ ದಾರಿಯಲ್ಲಿ ಮಡಿವಾಳಯ್ಯಗಳು ಸೀರೆಯ ಪ್ರಕ್ಷಾಲಿಸುತ್ತಿದ್ದಾರು. ಅಲ್ಲಿಗೆ ಹೋಗಿ ಇನ್ನು ಒಡೆಯರ ಸೇವೆಯ ಮಾಡಿಕೊಂಡಿದ್ದೆಹೆನೆಂದು ಆತನ ಹೊಣೆಯಂ ಕೊಟ್ಟು ಬಾ, ಅಲ್ಲದಿರ್ದಡೆ ನಿನ್ನ ನಾನೊಲ್ಲೆನೆಂ'ದಡಾ ಲಿಂಗವು ತಾನು ಮಡಿವಾಳಯ್ಯಗಳ ಮುಂದಕ್ಕೆ ಬಂದು ನಮಸ್ಕರಿಸಿ ನಿಂದಿರೆ, ಆ ಮಡಿವಾಳಯ್ಯಗಳು ನಮಸ್ಕರಿಸಿ 'ಏನು ಬಂದಿರಿ?' ಎಂದು ಕೇಳಲಾಗಿ, ಆ ಲಿಂಗವು ಮಡಿವಾಳಯ್ಯಂಗೆ ತಮ್ಮ ಸ್ಥಿತಿಯನು ಹೇಳಲಾಗಿ, ಆ ಮಡಿವಾಳಯ್ಯಗಳು ಚಂದಯ್ಯಂಗೆ ನಿರೂಪಿಸಿದ ಪ್ರಸ್ತಾವದ ವಚನ:

೮೪೮

ಬಂದೆಹೆನೆಂಬ ಸುಖವ ಹೆರೆಹಿಂಗಿದವರುಂಟೆ?
ಕಂಡ ನಿಧಾನವ ನಡೆ ಎಂದವರುಂಟೆ?
ಸುಖಕ್ಕೆ ಸುಖ ಒದಗಿದರೆ ಒಲ್ಲೆನೆಂಬವರುಂಟೆ?
ಕಲಿದೇವಯ್ಯ ಬಂದೆಹೆನೆಂದಡೆ ಬೇಡವೆನಲೇಕೆ ಚಂದಯ್ಯಾ? ॥೧॥

ಇದಕ್ಕೆ ಚಂದಯ್ಯಗಳ ಪ್ರತ್ಯುತ್ತರ:

೮೪೯

ಅಂದು ಹೋಗಿ ಇಂದು ಬಂದೆಹೆನೆಂಬಾಗ
ಈ ದಂದುಗದೊಡಲು ತನಗುಂಟೆ?
ಘನಲಿಂಗವೆಲ್ಲಿರ್ದಡಲ್ಲಿಯೆ ಪರಿಪೂರ್ಣ,
ಲಿಂಗ ಹೋಯಿತ್ತೆಂಬ ಸಂದೇಹವೆನಗುಂಟಾದರೆ,
ಅಂಗ ಉಳಿಯಬಲ್ಲುದೆ?
ಆತ್ಮ ಹೋದಲ್ಲಿ ಘಟವೆಷ್ಟು ದಿನ ಉಳಿವುದು?
ಜಂಗಮವುಳ್ಳನ್ನಕ್ಕರ ಚಂದೇಶ್ವರಲಿಂಗಕ್ಕೆ ಸಂದಿಲ್ಲ ಕಾಣಾ ಮಡಿವಾಳಯ್ಯಾ. ॥೨॥

ಇದಕ್ಕೆ ಮಡಿವಾಳಯ್ಯಗಳ ನಿರೂಪ:

೮೫೦

ದಾಸೋಹವೆಂಬನ್ನಕ್ಕರ
ಈಶ್ವರಪೂಜೆಯ ಆಚಾರದಲ್ಲಿ ಇರಬೇಕು.
ಮಾಡೆನೆಂಬ ನೇಮ ಬೇಡಾ,
ಮಾಡಿಹೆನೆಂಬ ಕೃತ್ಯ ಬೇಡಾ.
ಈ ಉಭಯ ಸನ್ಮತವಳವಟ್ಟಲ್ಲಿ,
ಕಲಿದೇವಯ್ಯಂಗೆ ಭಾವ ಶುದ್ಧವಾಯಿತ್ತು ಕಾಣಾ ಚಂದಯ್ಯಾ. ॥೩॥

ಇದಕ್ಕೆ ಚಂದಯ್ಯಗಳ ಬಿನ್ನಹ:

೮೫೧

ಮಾಡುವ ಮಾಟವಿಲ್ಲದೆ
ಮಾತಿಂಗೆ ಮಾತಾಡುವುದು ಅದೇತರ ಪೂಜೆ?
ಆವಾವ ಕಾಯಕದಲ್ಲಿ ಬಂದರೂ ಭಾವ ಶುದ್ಧವಾಗಿ
ಗುರುಲಿಂಗ ಜಂಗಮಕ್ಕೆ ಮಾಡುವುದೆ ಶಿವಪೂಜೆ,
ಅದು ಚಂದೇಶ್ವರಲಿಂಗಕ್ಕೆ ಒಪ್ಪವಲ್ಲ ಮಡಿವಾಳಯ್ಯಾ? ॥೪॥

ಮತ್ತಂ,

೮೫೨

ಲಿಂಗವೆಂಬುದು ಗುರುವಿನ ಹಂಗು,
ಗುರುವೆಂಬುದು ಲಿಂಗದ ಹಂಗು.
ಈ ಉಭಯಕ್ಕತೀತ ಜಂಗಮಲಿಂಗ ದಾಸೋಹ.
ಅದೆ ಚಂದೇಶ್ವರಲಿಂಗಕ್ಕೆ ಕಟ್ಟುವ ಗೊತ್ತು
ಕಾಣಾ ಮಡಿವಾಳಯ್ಯಾ. ॥೫॥

ಇದಕ್ಕೆ ಮಡಿವಾಳಯ್ಯಗಳ ವಚನ:

೮೫೩

ಗುರುವಾದರೂ ಲಿಂಗವ ಪೂಜಿಸಬೇಕು
ಲಿಂಗವಾದರೂ ದೇವತ್ವವಿರಬೇಕು.
ಜಂಗಮವಾದರೂ ಲಿಂಗವ ಪೂಜಿಸಬೇಕು.
ಜಂಗಮಕ್ಕೆ ಲಿಂಗವಿಲ್ಲದೆ ಪ್ರಮಾಣವಿಲ್ಲ.
ಆದಿಗಾಧಾರವಿಲ್ಲದೆ ಜಗವೇನೂ ಇಲ್ಲ.
ಅಜಿದೆಹೆನೆಂದರೆ ಅಂಗದಲ್ಲಿ ಲಿಂಗವಿರಬೇಕು.
ಕಲಿದೇವಯ್ಯನನಜಿವುದಕ್ಕೆ ಇದೆ ಮಾರ್ಗ ಚಂದಯ್ಯಾ. ॥೬॥

ಇದಕ್ಕೆ ಚಂದಯ್ಯಗಳ ಬಿನ್ನಹ:

೮೫೪

ಭಾವ ಶುದ್ಧವಾಗಿಪ್ಪುದೆ ಗುರುಪೂಜೆ.
ಜ್ಞಾನ ಶುದ್ಧವಾಗಿಪ್ಪುದೆ ಲಿಂಗಪೂಜೆ.
ತ್ರಿಕರಣ ಶುದ್ಧವಾಗಿ, ತ್ರಿವಿಧಮಲ ಶುದ್ಧವಾಗಿ ನಿಂದುದೆ ಜಂಗಮಪೂಜೆ.
ಆ ತ್ರಿವಿಧಭೇದದಲ್ಲಿ ತ್ರಿವಿಧಾರ್ಪಣವನರ್ಪಿಸಿ ನಿಂದುದೆ
ಚಂದೇಶ್ವರಲಿಂಗಕ್ಕರ್ಪಿತವಯ್ಯಾ ಮಡಿವಾಳಯ್ಯಾ. ॥೭॥

ಇದಕ್ಕೆ ಮಡಿವಾಳಯ್ಯಗಳ ನಿರೂಪ:

೮೫೫

ಅಜೀವನಜೀದೆಹೆನೆಂದು ಕ್ರೀಯ ಬಿಡಬಹುದೆ?
ಮಧುರಕ್ಕೆ ಮಧುರ ಒದಗಲಾಗಿ,
ಆ ಸವಿಗೆ ಕೊಱತೆಯುಂಟೆ?
ದ್ರವ್ಯಕ್ಕೆ ದ್ರವ್ಯ ಒದಗಲಾಗಿ,
ಬಡತನಕಡಹುಂಟೆ?
ಮಾಡುವ ಮಾಟ ಶಿವಪೂಜೆಯ ನೋಟ ಭಾವವಿರಬೇಕು.
ಅದು ಕಲಿದೇವಯ್ಯನ ಕೂಟವಲ್ಲವೆ ಚಂದಯ್ಯಾ? ॥೮॥

ಇದಕ್ಕೆ ಚಂದಯ್ಯಗಳ ಬಿನ್ನಹ:

೮೫೬

ಕಪಿತ್ಥಕಾಯ ಹಿಡಿದು ಜಲವನೀಸಬಹುದೆ?
ಲಿಂಗಪೂಜೆಗೆ ಷೋಡಶೋಪಚಾರ ಬೇಕು.
ಅದ ಮಾಡುವನ್ನಕ್ಕರ ಕಾಯಕ ನಿಂದಿತ್ತು.
ಕಾಯಕದೊದಗೆ ಮೂಱಱ ಕೂಟ ಚಂದೇಶ್ವರಲಿಂಗಕ್ಕೆ ಮಡಿವಾಳಯ್ಯ. ॥೯॥

ಇದಕ್ಕೆ ಮಡಿವಾಳಯ್ಯಗಳ ನಿರೂಪ:

೮೫೭

ಕಿಂಚಿತ್ತಾದರೂ ನೇಮವ ಮಾಡುವಲ್ಲಿ ಶೂನ್ಯವಿಲ್ಲದಿರಬೇಕು.
ಸತ್ತ್ವಕ್ಕೆ ತಕ್ಕ ಸಮರ್ಥತ್ವ
ಒಚ್ಚಿ ಹೊತ್ತಾದರೆಯೂ ಶಿವಪೂಜೆಯ ನಿಶ್ಚಯವಾಗಿ ಮಾಡಬೇಕು.
ಅದು ತನಗೆ ಸು[೧]ಚಿತ್ತದ ಹಾದಿ,
ಕಲಿದೇವರದೇವನ ಒಳಗು ಕಾಣಾ ಚಂದಯ್ಯಾ. ॥೧೦॥

---

೧ x (ಮೂ)

ಇದಕ್ಕೆ ಚಂದಯ್ಯಗಳ ಬಿನ್ನಹ :

೮೫೮

ಗೋಡೆಯ ತೊಳೆದು ಕೆಸಱ ಕೆಡಿಸಿಹೆನೆಂದರೆ ಅದಾರ ವಶ?
ನಿಯಮಕ್ಕೆ ಕಡೆ ನಡು ಮೊದಲಿಲ್ಲ.
ಒಂದ ಬಿಟ್ಟು ಒಂದ ಹಿಡಿದೆಹೆನೆಂದರೆ ಸಂದಿಲ್ಲದ ಸಂಶಯ.
ಅದು ಚಂದೇಶ್ವರಲಿಂಗಕ್ಕೆ ಮಾಟ ಕಾಣಾ ಮಡಿವಾಳಯ್ಯಾ. ॥೧೧॥

ಇದಕ್ಕೆ ಮಡಿವಾಳಯ್ಯಗಳ ವಚನ:

೮೫೯

ಜಂಗಮಸೇವೆ ಲಿಂಗವಿರಹಿತವಾಗಿರಬೇಕೆ?
ಲಿಂಗವೆಂಬುದು ಜಂಗಮದಂಗ.
ಆ ಅಂಗವಿಲ್ಲದೆ ಪ್ರಾಣವುಂಟೆ?
ಹಣ್ಣಿಲ್ಲದ ರುಚಿಯ ಬಯಸುವಂತೆ,
ನಿನ್ನ ಕಾಯಕದ ಕ್ರೀಯೆಲ್ಲವು ಲಿಂಗವಾದ ಬಳಿಕ
ಮತ್ತೇನು ಭಾವಭೇದ?
ನೀನೆಂದಂತೆ ಇರಲಿ.
ಆಱೆನೆಂದರೆ ನಿನ್ನ ಮನವ ತಿಳಿಹಿಕೊಳು.
ಇದಕ್ಕೆ ಕಲಿದೇವಯ್ಯ ಹೊಣೆ.
ಕರಕೊಳ್ಳಾ ಎನ್ನೊಡೆಯನ ಚಂದಯ್ಯಾ.. ॥೧೨॥

ಈ ಹೀಂಗೆಂದು ಮಡಿವಾಳತಂದೆಗಳು ನಿರೂಪಿಸಲು, ಇದಕ್ಕೆ ತಮ್ಮ ಲಿಂಗಮಂ 'ಕಣ್ಣಿಯ ಮಾಡಿಕೊಂಡಿರಬಲ್ಲರೆ ಬಾ'ರೆಂದು ಚಂದಯ್ಯಗಳು ಕರೆವ ಪ್ರಸ್ತಾವದ ವಚನ:

೮೬೦

ಇಷ್ಟವೆಂಬುದು ಗುರುವಿನ ಹಂಗು.
ಆ ಗುರುವಿಗೆಯೂ ಇಷ್ಟಲಿಂಗಕ್ಕೆಯೂ
ಜಂಗಮವೆ ಪ್ರಾಣವೆಂದಱಿದ ಬಳಿಕ,
ಆ ಗುರುವೂ ಇಷ್ಟವೂ ಜಂಗಮದಲ್ಲಿಯೆ ಅಡಕ ನೋಡಾ.
ಆ ಗುರುವೂ ಲಿಂಗವೂ ಜಂಗಮದ ಹಂಗಿಗಳು.
ಇದು ಕಾರಣ ಚಂದೇಶ್ವರಲಿಂಗಕ್ಕೆ
ಕಣ್ಣಿಯ ಮಾಡಬಲ್ಲರೆ ಬಾರಾ ಎನ್ನ ತಂದೆ. ॥೧೩॥

ಇದಕ್ಕೆ ಮಡಿವಾಳಯ್ಯಗಳಿಗೆ ನಮಸ್ಕರಿಸಿ, ಹೊಣೆಯ ಕೊಂಡು, ತನ್ನ ಲಿಂಗ ಸಹಿತ ಬೀಳ್ಕೊಂಡು, ನಿಜಗೃಹಕ್ಕೆ ಬಂದು, ಆ ಲಿಂಗದ ಕಯ್ಯಲ್ಲಿ ಕಾಯಕವ ಮಾಡಿಸಿ, ಆ ಕಣ್ಣಿಯಂ ಮಾಱಿ ಹಾಗವ ಕೊಂಡು ಬಾರೆಂದು ಕಳುಹಲು, ಆ ಲಿಂಗವು ಸಂಗನಬಸವಣ್ಣನ ಮಠಕ್ಕೆಯ್ದಿ ಕಣ್ಣಿಯಂ ಕೊಡಲು, ಇತ್ತ ಬಸವರಾಜದೇವರು ಶಿವಪೂಜೆಯ ಮಾಡುತ್ತ ಈ ವೃತ್ತಾಂತಮಂ ತಮ್ಮ ಲಿಂಗದಲ್ಲಿ ಕಂಡು ಇದಿರೆದ್ದು, ಕಣ್ಣಿಯ ತಂದಯ್ಯಂಗೆ ಶರಣೆಂದು, ಸಾವಿರ ಹೊನ್ನಂ

ಕೊಟ್ಟು ಆ ನುಲಿಯಂ ತೆಗೆದುಕೊಂಡು ಬೀಳ್ಕೊಡಲಾ ಲಿಂಗವು ಮರಳಿ ಬಂದಾ ಚಂದಯ್ಯಂಗೆ ಹೊನ್ನಂ ಕೊಡೆ, ಕಂಡಾತ ಇದೆಲ್ಲಿಂದ ತಂದೆಯಯ್ಯಾ? ಕಳವಿಂದ ತಂದೆಯೋ? ಎಂದು ಕೋಪದಿಂ ನುಡಿವ ಪ್ರಸ್ತಾವದ ವಚನ:

೮೬೧

ಸತ್ಯಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ
ಚಿತ್ತ ವಿಚ್ಛಂದವಾಗದಿರಬೇಕು.
ನೇಮದ ಕೂಲಿಯೆಂದಿನ ನಿತ್ಯನೇಮದಲ್ಲಿ ಸಂದಿಲ್ಲದಿರಬೇಕು.
ನೇಮದ ಕೂಲಿಯ ಬಿಟ್ಟು,
ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದರೆ,
ತಾ ಮಾಡುವ ಸೇವೆ ನಷ್ಟವಯ್ಯಾ!
ನಿನ್ನಾಸೆಯ ವೇಷದ ಪಾಶಕ್ಕೆ ನೀನೇ ಹೋಗು.
ನನಗೆ ನನ್ನ ಜಂಗಮದ ಪ್ರಸಾದದಾಗೆ
ಚಂದೇಶ್ವರಲಿಂಗಕ್ಕೆ ಪ್ರಾಣವಯ್ಯಾ. ॥೧೪॥

ಮತ್ತಂ,

೮೬೨

ಕಂದಿಸಿ ಕುಂದಿಸಿ, ಬಂಧಿಸಿ, ನೋಯಿಸಿ,
ಕಂಡಕಂಡವರ ಬೇಡಿ ತಂದು,
ಜಂಗಮಲಿಂಗಕ್ಕೆ ಮಾಡಿಹೆನೆಂಬ ದಂದುಗದೋಗರ
ಲಿಂಗಕ್ಕೆ ನೈವೇದ್ಯ ಸಲ್ಲದು.
ತನು ಕರಗಿ, ಮನ ಬಳಲಿ, ಬಂದ ತೆಱದನುವನಱಿದು,
ಸಂದಿಲ್ಲದೆ ಸಂಶಯವಿಲ್ಲದೆ ಜಂಗಮಲಿಂಗಕ್ಕೆ
ದಾಸೋಹವ ಮಾಡುವುದೆ ಮಾಟ.
ಕಾರೆಯ ಸೊಪ್ಪಾದರೂ
ಕಾಯಕದಿಂದ ಬಂದುದು ಲಿಂಗಕ್ಕರ್ಪಿತವಲ್ಲದೆ,
ದುರಾಶೆಯಿಂದ ಬಂದುದು ಅನರ್ಪಿತ.
ಇದು ಕಾರಣ ಸತ್ಯಶುದ್ಧ ಕಾಯಕದ ನಿತ್ಯದ್ರವ್ಯವಾದರೆ,
ಚಂದೇಶ್ವರಲಿಂಗಕ್ಕೆ ನೈವೇದ್ಯ ಸಂದಿತ್ತು ಕೇಳಯ್ಯಾ. ॥೧೫॥

ಈ ಹೀಂಗೆಂದು ಚಂದಯ್ಯಗಳು ತಮ್ಮ ಲಿಂಗದೇವರ ನೋಡಿ, ನೀ ತಂದ ಅನ್ಯದ್ರವ್ಯಸಹಿತ ನೀನೆಲ್ಲಿಯಾದರೂ ಹೋಗು. ಮೊದಲು ಗುರುವಾಜ್ಞೆಗೆಟ್ಟುದೊಂದು, ಮತ್ತೆ ಹೋದ ಅಪರಾಧಕ್ಕೆ ಒಡೆಯರ ಸೇವೆಯ ಮಾಡಿಹೆನೆಂದು ಅವಗಡೆಯ ಶರಣ ಮಾಡಿವಾಳಯ್ಯನ ಹೊಣೆಯ ಕೊಟ್ಟುದೊಂದು, ಈ ಎರಡಕ್ಕೂ ನೀನೆ ಗುಜೀಯಾಗು ಹೋಗೆಂದು ಝಂಕಿಸಿ ನುಡಿದು ಹೊರಡಿಸಲು, ಆ ಲಿಂಗವು ಚಂದಯ್ಯ ಸಹಿತವಾಗಿ ಮಡಿವಾಳಯ್ಯನ ಮಠಕ್ಕೆಯ್ದಿ ಈ ವೃತ್ತಾಂತವೆಲ್ಲವನು ಹೇಳಲು, ಆ ಮಾಚಯ್ಯಗಳು ಚಂದಯ್ಯಂಗೆ ನಿರೂಪಿಸಿದ ಪ್ರಸ್ತಾವದ ವಚನ:

೮೬೩

ಕಾಯಕದಲ್ಲಿ ನಿಂದ ಶರಣಂಗೆ
ಸೇವೆಯವರ ತಪ್ಪ ಹಿಡಿದೆಹೆನೆಂದರೆ
ಕಾಯಕವೆಂತು ನಡೆವುದಯ್ಯಾ?
ಅವಗುಣಕ್ಕೆ ಮುನಿಯಬೇಕಲ್ಲದೆ,
ಲಾಂಛನಕ್ಕೆ ಮುನಿಯಬಹುದೆ?
ಮುಗ್ಗಿದ ತುರಗವ ಕಾಲ ಕತ್ತರಿಸಿದವರುಂಟೆ?
ಕಚ್ಚುವ ತಿಗುಣೆಗಾಗಿ ಮನೆಯ ಸುಟ್ಟವರುಂಟೆ?
ಕಲಿದೇವರದೇವನಲ್ಲಿ ತಪ್ಪ ಹಿಡಿಯಲಿಲ್ಲ ಕೇಳಾ ಚಂದಯ್ಯಾ? ॥೧೬॥

ಇಂತು ಶಿವಲಿಂಗದಲ್ಲಿ ತಪ್ಪ ಹಿಡಿಯಬಹುದೇ ಎಂದು ಮಡಿವಾಳಯ್ಯಗಳು ನುಡಿಯೆ, ಇದಕ್ಕೆ ಚಂದಯ್ಯನ ಪ್ರತ್ಯುತ್ತರ:

೮೬೪

ನುಡಿದ ಮಾತಿಂಗೆ ತಡಬಡ ಬಂದಲ್ಲಿ,
ನುಡಿದ ಭಾಷೆಗೆ ಭಂಗ ನೋಡಾ.
ಹಿಡಿದ ಕುಳಕ್ಕೆ ಹಾನಿ ಬಂದಲ್ಲಿ,
ಒಡಲನಿರಿಸುವುದೆ ಭಂಗ ನೋಡಯ್ಯಾ.
ಇದು ಕಾರಣ, ನಡೆ ನುಡಿ ಶುದ್ಧವಿಲ್ಲದಿದ್ದರೆ
ಚಂದೇಶ್ವರಲಿಂಗವಾದರೂ ತಪ್ಪನೊಳಕೊಳ್ಳೆ
ಕಾಣಾ ಮಡಿವಾಳಮಾಚಯ್ಯಾ ॥೧೭॥

ಈ ಹೀಂಗೆಂದು ಚಂದಯ್ಯಗಳು ಬಿನ್ನೈಸಲು ಆತನ ತಿಳುಹುವುದಕ್ಕೆ ಅನುಭವ ಮಂಟಪದಲ್ಲಿ ಬಸವರಾಜದೇವರು ಚೆನ್ನಬಸವರಾಜದೇವರು ಪ್ರಭುದೇವರು ಮುಂತಾದ ಗಣಂಗಳ ಕೈಯ್ಯಲಲ್ಲದೆ ಆಗದೆಂದು, ಶರಣರ ಸಂಗವೆ ಮುಖ್ಯವೆಂದು ಅಲ್ಲಿಗೆ ಕರೆವ ಪ್ರಸ್ತಾವದ ವಚನ:

೮೬೫

ಗುರುಪೂಜೆಯನಱಿದಿಹೆನೆಂದು
ಲಿಂಗಪೂಜೆಯ ಬಿಡಲಾಗದು.
ಲಿಂಗಪೂಜೆಯನಱಿದಿಹೆನೆಂದು
ಜಂಗಮಪೂಜೆಯ ಮಱೆಯಲಾಗದು.
ಜಂಗಮಪೂಜೆಯನಱಿದಿಹೆನೆಂದು,
ಶರಣರ ಸಂಗವ ಮಱೆಯಲಾಗದು.
ಇದು ಕಾರಣ ಶರಣರ ಸಂಗದ ಸಮ್ಯಗ್‌ಜ್ಞಾನದಲಲ್ಲದೆ
ಕಲಿದೇವಯ್ಯನ ಕೂಡುವ ಕೂಟ ಕಾಣಬಾರದು;
ಹೋಹ ಬಾರಾ ಚಂದಯ್ಯಾ. ॥೧೮॥

ಈ ಹೀಂಗೆಂದು ಮಡಿವಾಳ ತಂದೆಗಳು ಆ ಚಂದಯ್ಯಗಳನು, ಆತನಂಗದ ಮೇಲಣ ಲಿಂಗವೆ ಚರಸೇವೆಯ ಮಾಡಬೇಕೆಂಬ ಮೋಹದಿಂ ಲಿಂಗಮೂರ್ತಿಯನು ಅನುಭವ ಮಂಟಪಕ್ಕೆ ಬಿಜಯಂಗೈಸಿಕೊಂಡು ಬರಲು, ಆ ಲಿಂಗಭಕ್ತಮೂರ್ತಿಯು ಮೊದಲು ಕಣ್ಣಿಯ ಬಸವಣ್ಣಂಗೆ ಕೊಡಲು, ಅದಕ್ಕೆ ಕೂಲಿಯಾಗಿ ಕೊಟ್ಟ ಸಾವಿರ ಹೊನ್ನಂ ಮರಳಿ ಬಸವಣ್ಣಂಗೆ ಇತ್ತು, ಈ ವೃತ್ತಾಂತಮಂ ಹೇಳಲು, ಆ ಪ್ರಸ್ತಾವದೊಳು ಗಣಂಗಳಿಗೆ ಚಂದಯ್ಯ ನಮಸ್ಕರಿಸಿ, ತನ್ನ ಕಾಯಕದ ಕ್ರಮವನೂ ದಾಸೋಹದ ನೆಲೆಯನೂ ನಿಷ್ಠೆಯ ಬಗೆಯನೂ ಎಲ್ಲಾ ಪ್ರಮಥರು ಕೇಳುವ ಹಾಗೆ ಬಿನ್ನೈಸುವ ಪ್ರಸ್ತಾವದ ವಚನ:

೮೬೬

ಕೈದ ಹಿಡಿದಾಡುವರೆಲ್ಲಾ ಇಜಿವರೆ?
ಸಾಧನೆಯ ಮಾಡಬಲ್ಲವರೆಲ್ಲರೂ ಕಾದಬಲ್ಲರೆ?
ಅರ್ಥಿಗೆ ಮಾಡುವ ಕೃತ್ಯವಂತರೆಲ್ಲರೂ ಭಕ್ತರಪ್ಪರೆ?
ಅದು ಚಂದೇಶ್ವರಲಿಂಗಕ್ಕೆ ಮುಟ್ಟದ ಮಾಟ. ॥೧೯॥

ಮತ್ತಂ,

೮೬೭

ರಣವ ನಿಶ್ಚೈಸಿದ ಸುಭಟಂಗೆ
ಮನೆಯ ಮೇಲಣ ಮೋಹ ಉಂಟೆ?
ಅರ್ಥ ಪ್ರಾಣಾಭಿಮಾನ ಈ ಮೂಱನು ಕರ್ತಂಗಿತ್ತು
ಮತ್ತೆ ಹೊತ್ತು ಹೋರುವಂಗೆ ಸದ್‌ಭಕ್ತಿಯುಂಟೆ?
ಅದು ಚಂದೇಶ್ವರಲಿಂಗವ ಮುಟ್ಟದ ಮಾಟ. ॥೨೦॥

[೧]ಮತ್ತಂ,[೧]

೮೬೮

ಗುರುವಿಂಗೆ ತನುವೆಂದಲ್ಲಿ,
ಲಿಂಗಕ್ಕೆ ಮನವೆಂದಲ್ಲಿ,
ಜಂಗಮಕ್ಕೆ ಧನವೆಂದಲ್ಲಿ,
ಮತ್ತೊಂದಱಾಸೆಗೆ ಕೊಂಡಾಡಲೇಕೆ?
ಅದು ಚಂದೇಶ್ವರಲಿಂಗಕ್ಕೆ ದೂರ. ॥೨೧॥

ಮತ್ತಂ,

೮೬೯

ಇದಿರ ಭೂತಹಿತಕ್ಕೆ ಗುರುಪೂಜೆಯ ಮಾಡಲಿಲ್ಲ.
ಅರ್ತಿಗಾಜಿಕೆಯಲ್ಲಿ ಲಿಂಗವ ಬಿಟ್ಟು ಪೂಜಿಸಲಿಲ್ಲ.

೧–೧ X (ಮು)

ರಾಜ ಚೋರರ ಭಯಕ್ಕಂಜಿ ಜಂಗಮ ದಾಸೋಹವ ಮಾಡಲಿಲ್ಲ.
ಆವ ಕೃತ್ಯವಾದರೂ ಮನ ಶುದ್ಧವಾಗಿರಬೇಕು,
ಚಂದೇಶ್ವರಲಿಂಗವನಱಿಯಬಲ್ಲರೆ. ॥೨೨॥

ಮತ್ತಂ,

೮೭೦

ಗುರು ಇಷ್ಟವ ಕೊಟ್ಟ ಕೂಲಿಗೆ ಮುಟ್ಟಿ ಪೂಜಿಸಲು,
ಅದಕ್ಕೆ ದೃಷ್ಟವ ತೋಱಿ ತನ್ನ ಬೆಳ್ಳಿಯ ಬೆಟ್ಟದ ಮೇಲೆ ಇರಿಸಿದ.
ಇಂತು ಗುರುವಿಂದ ಲಿಂಗಕ್ಕೆ ಮಾಡಿ,
ಹಿಂದಣ ಮುಂದಣ ಸಂದೇಹಕ್ಕೀಡಾಗದೆ,
ಪ್ರಸಿದ್ಧಮಪ್ಪ ಜಂಗಮಲಿಂಗಕ್ಕೆ
ಮನ ಸಂದು ಧನವ ಕೊಟ್ಟು,
ಸರ್ವ ಪದಾರ್ಥವ ಅರ್ಪಿತವ ಮಾಡಲಾಗಿ
ಚಂದೇಶ್ವರಲಿಂಗಕ್ಕೆ ಹಿಂದು ಮುಂದೆಂಬುದಿಲ್ಲ. ॥೨೩॥

ಮತ್ತಂ,

೮೭೧

ಸಂಸಾರಸಾಗರದ ಮಧ್ಯದೊಳಗೆ ಬೆಳೆದ
ಹೊಡಕೆಯ ಹುಲ್ಲ ಕೊಯಿತಂದು,
ಮತ್ತಮಾ ಕಣ್ಣ ತೆಗೆದು ಕಣ್ಣಿಯ ಮಾಡಿ
ಇಹಪರವೆಂಬ ಉಭಯವ ಗಂಟನಿಕ್ಕಿ,
ತುದಿಯಲ್ಲಿ ಮಾಟಕೂಟವೆಂಬ
ಮನದ ಕುಣಿಕೆಯೊಳಗೆ ಕಾಯಕವಾಯಿತ್ತು.
ಇದು ಕಾರಣ ಚಂದೇಶ್ವರಲಿಂಗವೆಂಬ ಭಾವವೆನಗಿಲ್ಲ. ॥೨೪॥

ಈ ಹೀಂಗೆಂದು ಚಂದಯ್ಯಗಳು ತಮ್ಮ ಕಾಯಕದ ವಿವರವನು, ದಾಸೋಹದ ನಿಷ್ಠೆಯನು ಗಣಂಗಳ ಮುಂದೆ ಬಿನ್ನೈಸಲು, ಆ ಪ್ರಸ್ತಾವದೊಳು ಪ್ರಭುದೇವರು ಲಿಂಗವ ಬಿಡಲಾಗದೆಂದು ನಿರೂಪಿಸಿದ ಪ್ರಸ್ತಾವದ ವಚನ:

೮೭೨

ಪರುಷವಾದರೂ ಒಂದೞಿಲ್ಲಿ ಇರಿಸಿರಬೇಕು.
ರತ್ನವಿಶೇಷವಾದರೂ ಕುಂದಣದಲ್ಲಿ ಬಂಧಿಸಿ ಸಂದಿರಬೇಕು
ಲಿಂಗವ ಹಿಡಿದಲ್ಲಿ ಪೂಜಿಸುವ ಅಂಗವಿರಬೇಕು.
ಇದು ಕಾರಣ ಗೊಹೇಶ್ವರಲಿಂಗವನಱಿದು
ಮಱೆಯಲಿಲ್ಲ ಕಾಣಾ ಚಂದಯ್ಯಾ. ॥೨೫॥

ಈ ಹೀಂಗೆಂದು ಪ್ರಭುದೇವರು ಜಂಗಮದಾಸೋಹವಾದರೂ ಲಿಂಗವ ಬಿಡಲಾಗದೆಂದು ನಿರೂಪಿಸಲು, ಇದಕ್ಕೆ ಚಂದಯ್ಯಗಳು ಬಿನ್ನೈಸುವ ಪ್ರಸ್ತಾವದ ವಚನ:

೮೭೩

ಗುರುಸೇವೆಯ ಮಾಡಿದರೆ ಇಹದಲ್ಲಿ ಸುಖ.

ಲಿಂಗಸೇವೆಯ ಮಾಡಿದರೆ ಪರದಲ್ಲಿ ಸುಖ,

ಜಂಗಮಸೇವೆಯ ಮಾಡಿದರೆ ಇಹಪರವೆಂಬುಭಯ ನಾಸ್ತಿ.

ಇದು ಚಂದೇಶ್ವರಲಿಂಗದ ಭಾವ ಕಾಣಾ ಪ್ರಭುವೆ. ॥೨೬॥

ಇದಕ್ಕೆ ಪ್ರಭುದೇವರ ನಿರೂಪ:

೮೭೪

ಅಂಗವುಳ್ಳನ್ನಬರ ಲಿಂಗಪೂಜೆಯೆ ಬೇಕು.

ಲಿಂಗವೆಂಬ ಮೂರ್ತಿಯುಳ್ಳನ್ನಬರ ಸಂದಿಲ್ಲದೆ ಅರ್ಪಿಸಬೇಕು.

ಅಂಗವಳಿದ ಮತ್ತೆ ಲಿಂಗವೆಂಬ ಭಾವ ಹಿಂಗದಿರಬೇಕು.

ಅದು ಗೊಹೇಶ್ವರಲಿಂಗದ ಇರವು ಚಂದಯ್ಯಾ. ॥೨೭॥

ಇದಕ್ಕೆ ಚಂದಯ್ಯಗಳ ಬಿನ್ನಹ:

೮೭೫

ಗುರುಪೂಜಕರು ಲಿಂಗವನೆತ್ತ ಬಲ್ಲರು?

ಲಿಂಗಪೂಜಕರು ಜಂಗಮವನೆತ್ತಬಲ್ಲರು?

ಜಂಗಮದಾಸೋಹ ಉಭಯಸಂಗ ನಾಸ್ತಿ.

ಅದು ಚಂದೇಶ್ವರಲಿಂಗವೆಂಬುದರ ಅಱಿವು ಕಾಣಾ ಪ್ರಭುವೆ.॥೨೮॥

ಇದಕ್ಕೆ ಪ್ರಭುದೇವರ ನಿರೂಪ:

೮೭೬

ಐದಿಂದ್ರಿಯವನಱಿದಲ್ಲದೆ

ಒಂದಿಂದ್ರಿಯಕ್ಕೆ ಸಂದ ಗುಣವನಱಿಯಬಾರದು,

ಆ ಗುಣ ಏಕಮೂರ್ತಿ ತ್ರಿವಿಧ ರೂಪಾದ ಕಾರಣ.

ಪೂಜೆಯೆಂಬುದು ಪುಣ್ಯವೆಂಬ ಭಾವವಿಲ್ಲದೆ ಮಾಡಿದರೆ,

ನಮ್ಮ ಗೊಹೇಶ್ವರಲಿಂಗಕ್ಕೆ ಅನ್ಯವಿಲ್ಲ ಕಾಣಾ ಚಂದಯ್ಯಾ. ।೨೯।

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಚಂದಯ್ಯಗಳು ಗುರುವಾದರೂ ಲಿಂಗವಾದರೂ ಜಂಗಮವಾದರೂ ಜಂಗಮದಾಸೋಹವೆ ಬೇಕು. ನನಗೆ ಹೇಳುವಾಗ ನಿನಗೆ ಬೇಡವೆ ಎಂದು ಬಿನ್ನೈಸುವ ಪ್ರಸ್ತಾವದ ವಚನ:

೮೭೭

ಗುರುವಾದರೂ ಕಾಯಕದಿಂದವೆ ಜೀವನ್ಮುಕ್ತಿ.

ಲಿಂಗವಾದರೂ ಕಾಯಕದಿಂದವೆ ಶಿಲೆಯ ಕುಱುಹು ಹಱಿವುದು.

ಜಂಗಮವಾದರೂ ಕಾಯಕದಿಂದವೆ ತನ್ನ ವೇಷದ ಪಾಶ ಹಱಿವುದು.

ಗುರುವಾದರೂ ಚರಸೇವೆಯ ಮಾಡಬೇಕು.

ಲಿಂಗವಾದರೂ ಚರಸೇವೆಯ ಮಾಡಬೇಕು.

ಜಂಗಮವಾದರೂ ಚರಸೇವೆಯ ಮಾಡಬೇಕು.
ಇದು ಚಂದೇಶ್ವರಲಿಂಗದಱಿವು ಕೇಳಾ ಪ್ರಭುವೆ. ॥೩೦॥

ಮತ್ತಂ,

೮೭೮

ಗುರುವ ತಾನಱಿದು ವರಗುರು ತಾನಾಗಬೇಕು.
ಲಿಂಗವಾದರೂ ನಿಷ್ಠೆಯಾಗಿ ಪೂಜೆಗೊಳ್ಳಬೇಕು.
ಜಂಗಮವಾದರೂ ತ್ರಿವಿಧವ ಮಱೆದು,
ಜಂಘೆನಾಸ್ತಿಯಾಗಿ ಜಂಗಮವಾಗಬೇಕು.
ಜಂಗಮಕ್ಕೆ ನೀಡಿ ಮಾಡಿ ಸಂದುಸಂಶಯವಳಿದು
ಚಂದೇಶ್ವರಲಿಂಗವನಱಿಯಬೇಕು ಕೇಳಾ ಪ್ರಭುವೆ. ॥೩೧॥

ಇದಕ್ಕೆ ಪ್ರಭುದೇವರ ನಿರೂಪ:

೮೭೯

ಆರಾರ ಭಾವಕ್ಕೆ ತೋಱಿದಂತೆ ಆ ಕುಳಕ್ಕೆ ಸುಖವಾಗಿಪ್ಪನು.
ಹಿಡಿದ ವ್ರತ ನಿಯಮಂಗಳಲ್ಲಿ ಬಿಡುಗಡೆ ಇಲ್ಲದಿರಬೇಕು.
ತಾ ಮಾಡುವ ನಿತ್ಯ ನೇಮಂಗಳಲ್ಲಿ ಭಾವ ಶುದ್ಧವಾಗಿಪ್ಪಡೆ,
ಗೊಹೇಶ್ವರಲಿಂಗಕ್ಕೆ ಅನ್ಯಭಿನ್ನವಿಲ್ಲ ಮಡಿವಾಳಮಾಚಯ್ಯಾ. ॥೩೨॥

ಇದಕ್ಕೆ ಮಡಿವಾಳಯ್ಯಗಳ ವಚನ:

೮೮೦

ಅಂಗದ ಕ್ರಿಯೆಯೇ ಲಿಂಗದ ನಿಜ.
ಲಿಂಗದ ನಿಜವೇ ಜಂಗಮ.
ಆ ಜಂಗಮದ ಕ್ರಿಯೆಯೆಲ್ಲಾ ಲಿಂಗಮಯ.
ಜಂಗಮದ ಸೇವೆಯೆ ಲಿಂಗದ ಕಳೆ.
ಲಿಂಗದ ಕಳೆಯೇ ಜಂಗಮ,
ಜಂಗಮದಿಂದೊದಗಿದುದೇ ಪ್ರಸಾದ.
ಪ್ರಸಾದದೊದವೇ ಲಿಂಗೈಕ್ಯವು.
[1][ಈ ಗುಣವನರಿದು ಅಂಗವೇ ಲಿಂಗ, ಜಂಗಮವೇ ಪ್ರಾಣವಾದ
ನಮ್ಮ ಸಂಗನಬಸವಣ್ಣನು.
ಆತನ ಬಳಿವಿಡಿದು ಪ್ರಭುದೇವರು-ನಾನು ನಿಜವಸಾಧಿಸಿದೆವು][1]
ನಮ್ಮ ಕಲಿದೇವರದೇವನ ಬಸವಣ್ಣನಿಂದ ಕೇಳ ಚಂದಯ್ಯಾ ॥೩೩॥

ಇದಕ್ಕೆ ಚಂದಯ್ಯಗಳ ವಚನ:

೧-೧ ಈ ಗುರು, ನಾನು ನಿಜವ ಸಾಧಿಸಿದೆನು(ಮೂ)

೭೭೧

ಒಂದ ಬಿಟ್ಟು ಒಂದ ಹಿಡಿದಲ್ಲಿ
ಆ ಮೂಱಂಗ ಒಂದೂ ಇಲ್ಲ.
ಹಿಡಿದ ಭಾವ ಒಂದುಂಟಾಯಿತ್ತಾದರೆ,
ಉಭಯದಸಂಗ ಸಲೆ ಸಂದಿತ್ತು.
ಅದು ಸಂಗನಬಸವಣ್ಣಪ್ರಿಯ ಚಂದೇಶ್ವರಲಿಂಗಕ್ಕೆ
ಸಂದಿತ್ತು ಮಡಿವಾಳಯ್ಯಾ. ॥೩೪॥

ಮತ್ತಂ,

೭೭೨

ಶಿಷ್ಯಂಗೆ ಗುರು ಬೋಧಿಸುವಲ್ಲಿ,
ತನ್ನನಳಿದು ಲಿಂಗವ ತೋಱಿಸಬೇಕು.
ಲಿಂಗದ ಸಂಗ ನೆನಹಾದಲ್ಲಿ,
ಆ ಲಿಂಗಕ್ಕೆ ಉಂಬ ಬಾಯಿ ಜಂಗಮವಾದ ಕಾರಣ
ಆ ಜಂಗಮಲಿಂಗದ ದಾಸೋಹದಿಂದ ಬೇಱೊಂದಂಗವಿಲ್ಲ.
ಸಂಗನಬಸವಣ್ಣಪ್ರಿಯ ಚಂದೇಶ್ವರಲಿಂಗವು
ಹಿಂಗದ ಭಾವ ಕಾಣಾ ಮಡಿವಾಳಯ್ಯಾ. ॥೩೫॥

ಮತ್ತಂ,

೭೭೩

ತನುಭಾವವನಱಿದಿಪ್ಪುದು ಗುರುಭಕ್ತಿ.
ಮನಭಾವವನಱಿದಿಪ್ಪುದು ಲಿಂಗಭಕ್ತಿ.
ಎರಡು ಭಾವವನೂ ಮಱೆದು,
ತ್ರಿವಿಧ ಮಲತ್ರಯಂಗಳ ಮಱೆದಿಪ್ಪುದು ಜಂಗಮಭಕ್ತಿ.
ಈ ಗುಣ ನಿಶ್ಚಯವಾಗಿ ನಿಂದುದು,
ಸಂಗನಬಸವಣ್ಣಪ್ರಿಯ ಚಂದೇಶ್ವರಲಿಂಗವನಱಿದುದು. ॥೩೬॥

ಈ ಹೀಂಗೆಂದು ಚಂದಯ್ಯಗಳು ತಮ್ಮ ಭಕ್ತಿ ಕ್ರಿಯೆ ಜ್ಞಾನಾಚಾರದ ದಾಸೋಹವು ಸಂಗನಬಸವಣ್ಣಂಗೆ ಪ್ರಿಯವೆಂದು ಬಿನ್ನೈಸಲು, ಆ ಪ್ರಸ್ತಾವದೊಳು ಪ್ರಭುದೇವರು ಮತ್ತಂ ಬಸವಣ್ಣನ ಸ್ವರೂಪಮಂ ಹೇಳಿ, ಆತನ ಕೇಳಿ ಬದುಕೆಂದು ನಿರೂಪಿಸಿದ ಪ್ರತ್ಯುತ್ತರ:

೭೭೪

ಅಂಗದಲ್ಲಿ ಅಳವಟ್ಟಿರ್ಪ ಆಚಾರವೆ ಲಿಂಗವೆಂದಱಿದನು.
ಮನದಲ್ಲಿ ಬೆಳಗುತ್ತಿರ್ಪ ಅಱಿವೆ ಜಂಗಮವೆಂದಱಿದನು.
ಈ ಎರಡಱ ಸಂಗವೆ ತಾನೆಂದಱಿದನು.
ಮಾಡುವ ದಾಸೋಹವೆ ಲಿಂಗಜಂಗಮವೆಂದಱಿದನು.
ನಮ್ಮ ಗುಹೇಶ್ವರಲಿಂಗದಲ್ಲಿ
ಸಂಗನಬಸವಣ್ಣನ ನಿಲವನಱಿಯಬೇಕು ಕೇಳಾ ಚಂದಯ್ಯಾ. ॥೩೭॥

ಈ ಹೀಂಗೆಂದು ಪ್ರಭುದೇವರು ಬಸವರಾಜದೇವರ ನೋಡಿ ತಿಳಿದು ಬದುಕೆಂದು ನಿರೂಪಿಸಲು, ಅದಕ್ಕೆ ಬಸವರಾಜದೇವರು ಆ ಚಂದಯ್ಯಗಳ ಜಂಗಮದಾಸೋಹ ನಿಷ್ಠೆಗೆ ಶರಣೆಂಬ ಪ್ರಸ್ತಾವದ ವಚನ:

೮೮೫

ಜಂಗಮಸೇವೆಯೆ ಗುರುಪೂಜೆ ಎಂದಱಿದ.
ಜಂಗಮಸೇವೆಯೆ ಲಿಂಗಪೂಜೆ ಎಂದಱಿದ.
ಜಂಗಮಸೇವೆಯೆ ತನ್ನಿರವೆಂದಱಿದ.
ಜಂಗಮಸೇವೆಯೆ ತನ್ನ ನಿಜವೆಂದಱಿದ.
ಜಂಗಮಸೇವೆಯೆ ಸ್ವಯವೆಂದಱಿದ.
ಜಂಗಮಸೇವೆಯೆ ನಿತ್ಯಪದವೆಂದಱಿದ.
ಇದು ಕಾರಣ, ನಮ್ಮ ಕೂಡಲಸಂಗಮದೇವರಲ್ಲಿ
ಜಂಗಮಾಪ್ರಾಣಿಯಾದ ಚಂದಯ್ಯನ ಹಳೆಯ ಮಗನಾಗಿ
ಆತನ ಶ್ರೀಚರಣಕ್ಕೆ ಶರಣೆಂದು ಶುದ್ಧನು.
ಆ ಮಹಾಮಹಿಮನ ಘನವ ನಾನೆತ್ತ ಬಲ್ಲೆನಯ್ಯಾ ಪ್ರಭುವೆ? ॥೩೮॥

ಇದಕ್ಕೆ ಪ್ರಭುದೇವರು 'ಬಸವಣ್ಣಾ, ನೀನು ಅಱಿಯೆನೆನಬಹುದೆ? ಕುಱಿತು ಬಂದ ಠಾವಿನಲ್ಲಿ ಮಱೆಯ ಮಾಡಿ ನುಡಿವುದುಚಿತವೆ? ಚಂದಯ್ಯಂಗೆ ನೀನೇನ ಮಾಡಿಯೂ ನಿಜವ ಹೇಳೆ'ಂದು ನಿರೂಪಿಸಿದ ಪ್ರಸ್ತಾವದ ವಚನ:

೮೮೬

ಆದಿಯಲ್ಲಿ ನೀನೆ ಗುರುವಾದ ಕಾರಣ
ನಿನ್ನಿಂದ ಹುಟ್ಟಿತ್ತು ಲಿಂಗ.
ಆದಿಯಲ್ಲಿ ನೀನೆ ಲಿಂಗವಾದ ಕಾರಣ
ನಿನ್ನಿಂದ ಹುಟ್ಟಿತ್ತು ಜಂಗಮ.
ಆದಿಯಲ್ಲಿ ನೀನೆ ಜಂಗಮವಾದ ಕಾರಣ
ನಿನ್ನಿಂದ ಹುಟ್ಟಿತ್ತು ಪ್ರಸಾದ.
ಆದಿಯಲ್ಲಿ ನೀನೆ ಪ್ರಸಾದಿಯಾದ ಕಾರಣ
ನಿನ್ನಿಂದ ಹುಟ್ಟಿತ್ತು ಪಾದೋದಕ.
ಇಂತೀ ಗುರು ಲಿಂಗ ಜಂಗಮ ಪ್ರಸಾದ
ಪಾದೋದಕ ಸ್ವರೂಪ ನೀನೆಯಾದ ಕಾರಣ,
ಜಂಗಮಪ್ರಾಣಿಯಾಗಿ ಸದಾಚಾರಿಯಾದೆ.
ಅದು ಕಾರಣ ನೀನೆ ಸರ್ವಾಚಾರಸಂಪನ್ನನಾಗಿ,
ಪೂರ್ವಾಚಾರಿ ನೀನೆಯಾದ ಕಾರಣ,
ಗೊಹೇಶ್ವರಲಿಂಗದಲ್ಲಿ ಚಂದಯ್ಯಂಗೆ
ಲಿಂಗದ ನಿಜವ ತಿಳುಪಾ ಸಂಗನಬಸವಣ್ಣಾ. ॥೩೯॥

ಈ ಹೀಂಗೆಂದು ಪ್ರಭುದೇವರು ಆ ಬಸವರಾಜದೇವರ ಅನಾದಿಯನೆತ್ತಿ ಗುರು ಲಿಂಗ ಜಂಗಮ ಪ್ರಸಾದ ಪಾದೋದಕಸ್ವರೂಪ ಬ್ರಹ್ಮವೆ ನೀನೆಂದು, ಪೂರ್ವಾಚಾರಿಯೂ ನೀನೆ ಎಂದು ಕೊಂಡಾಡಿ, ಚಂದಯ್ಯನ ತಿಳುಹೆನಲು, ಬಸವರಾಜದೇವರು ನಾನೇನ ಬಲ್ಲೆನು? ಎನಗೆ ನಿಜವ ತಿಳುಹಿದಾತ ಚೆನ್ನಬಸವಣ್ಣ ಆತನ ಕೇಳುವುದೆಂದು ಬಿನ್ನೈಸಿದ ಪ್ರಸ್ತಾವದ ವಚನ:

೮೮೭

ಮೆಲ್ಲಮೆಲ್ಲನೆ ಭಕ್ತಾದ್ಯೈಕ್ಯಾಂತವಾದೆಹೆನೆಂದು
ತಾಮಸಜ್ಞಾನದಲ್ಲಿರಲು,
ಅದಕ್ಕೆ ನೀನು ನಿತ್ಯವ ಪಡೆದು ಬಂದೆಯಾ?
ಎಂದು ನಿಂದ ಸ್ಥಲದಲ್ಲಿಯೆ
ನಿಜಷಡುಸ್ಥಲವಡಗದಿರ್ದಡೆ
ಜಂಗಮದಾಸೋಹವೇಕೆಂದು ಹೇಳಿ,
ನಿಜವ ಕರುಣಿಸಿದನಾಗಿ,
ಲಿಂಗ ಜಂಗಮದ ಭೇದವ ಚೆನ್ನಬಸವಣ್ಣ ಬಲ್ಲ.
ನಾನು ಆತನಿರಿಸಿದಂತಿರ್ಪೆನಯ್ಯಾ.
ಇದು ಕಾರಣ ಕೂಡಲಸಂಗಮದೇವರಲ್ಲಿ
ಚಂದಯ್ಯಂಗೆ ಶರಣೆಂದು ಶುದ್ಧನಯ್ಯಾ ಪ್ರಭುವೆ. ॥೪೦॥

ಈ ಹೀಂಗೆಂದು ಬಸವರಾಜದೇವರು ನಾನಱಿಯೆ, ಚೆನ್ನಬಸವಣ್ಣನ ಕೇಳಿ ಎಂದು ಬಿನ್ನೈಸಲು, ಅದಕ್ಕೆ ಚಂದಯ್ಯಗಳು ತಮ್ಮ ಸುಜ್ಞಾನಾಚಾರ ಜಂಗಮದಾಸೋಹ ನಿರ್ಣಯವೆಲ್ಲವೂ ಚೆನ್ನಬಸವಣ್ಣಂಗೆ ಪ್ರಿಯವೆಂದು ಬಿನ್ನೈಸುವ ಪ್ರಸ್ತಾವದ ವಚನ:

೮೮೮

ಜಂಗಮಸೇವೆಯ ಚಿತ್ತಶುದ್ಧನಾಗಿ ಮಾಡುವಲ್ಲಿ,
ಗುರುಪೂಜೆ ಸಂದಿತ್ತು.
ಜಂಗಮಸೇವೆಯ ಚಿತ್ತಶುದ್ಧನಾಗಿ ಮಾಡುವಲ್ಲಿ,
ಲಿಂಗಪೂಜೆ ಸಂದಿತ್ತು.
ಜಂಗಮದಾಸೋಹದಿಂದ ಸರ್ವಪದವಾಯಿತ್ತು.
ಆ ಗುಣವನಱಿತು ಮಾಡಲಾಗಿ,
ಬಟ್ಟಬಯಲು ಕಾಣಬಂದಿತ್ತು.
ಹುಟ್ಟುವ ಹೊಂದುವ ನೆಲೆ ಇತ್ತಲೆ ಉಳಿಯಿತ್ತು,
ಚೆನ್ನಬಸವಣ್ಣಪ್ರಿಯ ಚಂದೇಶ್ವರಲಿಂಗವನಱಿಯಲಾಗಿ. ॥೪೧॥

ಮತ್ತಂ,

೮೮೯

ಜಂಗಮನಮಸ್ಕಾರವೆ ಗುರುಪೂಜೆ.
ಜಂಗಮಪೂಜೆಯೆ ಲಿಂಗಪೂಜೆ

ಜಂಗಮತೃಪ್ತಿಯೆ ತನಗೆ ಪ್ರಸನ್ನ.
ತನಗೆ ಪ್ರಸಾದವಾದುದೆ ನಿತ್ಯ ಪ್ರಸಾದದಾಗು,
ಚೆನ್ನಬಸವಣ್ಣಪ್ರಿಯ ಚಂದೇಶ್ವರಲಿಂಗಕ್ಕೆ
ಕಟ್ಟುಗೊತ್ತು ಕಾಣಾ ಸಂಗನಬಸವಣ್ಣಪ್ರಭುವೆ. ॥೪೨॥

ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ:

೮೯೦

ಕಣ್ಣು ಕಂಡಲ್ಲದೆ ಮನ ನೆನೆಯದು.
ಆ ಮನ ನೆನೆದಲ್ಲಿಗೆ ಕಾಲು ನಡೆವುದು.
ಕಾಲು ನಡೆದಲ್ಲದೆ ಕಾರ್ಯವಾಗದು.
ಕಾಲೆಂದರೆ ನೀ ಚರಿಸುವ ವರ್ತನೆ.
ಆ ವರ್ತನಾಚಾರವೆಲ್ಲವೂ ಲಿಂಗವು.
ಇದು ಕಾರಣ ಲಿಂಗವ ಹಿಂಗಿದ ಮಾಟ,
ಮೀಸಲಿಲ್ಲದ ಮನೆದೇವರ ಹಬ್ಬದಂತೆ.
ನಮ್ಮ ಗೊಹೇಶ್ವರಲಿಂಗಕ್ಕೆ
ಇದೇ ಬೇಹ ಶೌಚ ಕೇಳಾ ಚಂದಯ್ಯಾ. ॥೪೩॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಆ ಚಂದಯ್ಯಗಳು ಲಿಂಗಜಂಗಮದ ನಿಜವನು ಚೆನ್ನಬಸವಣ್ಣನಿಂದ ತಿಳುಹಿಕೊಡೆಂದು ಪ್ರಭುದೇವರ ಬೆಸಗೊಂಬ ಪ್ರಸ್ತಾವದ ವಚನ:

೮೯೧

ಎನ್ನ ಸತ್‌ಕ್ರೀಯೆ ಬಸವಣ್ಣನು.
ಎನ್ನ ಸುಜ್ಞಾನವೆ ಚೆನ್ನಬಸವಣ್ಣನು.
ಎರಡಱ ಏಕೋಭಾವದ ಪ್ರಭೆಯೆ ನೀವು.
ನಿಮ್ಮೆಲ್ಲರ ನಿಷ್ಠೆಯ ನಿಜವೆ ಮಡಿವಾಳಯ್ಯನು.
ಇಂತೀ ಚತುರ್ವಿಧವೆನಗೆ ಬೇಕಾದ ಕಾರಣ
ಸಂಗನಬಸವಣ್ಣಪ್ರಿಯ ಚಂದೇಶ್ವರಲಿಂಗದಲ್ಲಿ
ಇಷ್ಟಲಿಂಗದ ಸೇವೆ ಚರಲಿಂಗದ ದಾಸೋಹವೆಂಬುದ
ಚೆನ್ನಬಸವಣ್ಣನಿಂದ ತಿಳುಹಿಕೊಡಾ ಪ್ರಭುವೆ. ॥೪೪॥

ಈ ಹೀಂಗೆಂದು ಚಂದಯ್ಯಗಳು ನಿಶ್ಚೈಸಲು, ಆ ಪ್ರಭುದೇವರು ಚೆನ್ನಬಸವಣ್ಣ, ನೀನೆ ಹೇಳೆಂದು ನಿರೂಪಿಸಿದ ಪ್ರಸ್ತಾವದ ವಚನ:

೮೯೨

ಅಂಗದ ಲಿಂಗವೆ ಮನದ ಲಿಂಗ.
ಮನದ ಲಿಂಗವೆ ಭಾವದ ಲಿಂಗ.
ಭಾವದ ಲಿಂಗವೆ ಜಂಗಮದಾಸೋಹ.
ದಾಸೋಹವೆಂಬುದು ಸಂದಿಲ್ಲದ ನಿಜ ನೋಡಾ!

ಅದಱಿಂದವನೆ ತಿಳಿದು, ನಿಂದ ನಿಲುಕಡೆಯ ಭೇದವನೆ
ಕೇಳಬೇಕೆಂದು ಬಂದಲ್ಲಿಯೆ ತಿಳುಹಬೇಕಯ್ಯಾ.
ಇಂತೀ ಪ್ರಕಾರದಲ್ಲಿ ಸಂದ ಸೌಖ್ಯದ ಭೇದವನು,
ಸಂದಿಲ್ಲದ ಲಿಂಗದ ನಿಜವನು.
ಇಂದು ನಮ್ಮ ಗೊಹೇಶ್ವರಲಿಂಗದಲ್ಲಿ
ಚಂದಯ್ಯಂಗೆ ತಿಳುಹಿಕೊಡಾ ಚೆನ್ನಬಸವಣ್ಣಾ. ॥೪೫॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು. ಇದಕ್ಕೆ ಚೆನ್ನಬಸವರಾಜ ದೇವರು ನಿರ್ವಾಹವಾಗಿ ನಿರೂಪಿಸಿದ ಪ್ರಸ್ತಾವದ ವಚನ:

೮೯೩

ಶ್ರೀಗುರುಕರುಣವೆ ಲಿಂಗ; ಲಿಂಗದ ನಿಜವೆ ಜಂಗಮ.
ಇಂತು ಇದು ಬಹಿರಂಗದ ವರ್ತನೆ.
ಇನ್ನು ಅಂತರಂಗದ ಸುಜ್ಞಾನವೆ ಜಂಗಮ;
ಆ ಜಂಗಮದ ನಡೆವ ಸತ್‌ಕ್ರೀಯೆ ಲಿಂಗ.
ಆ ಉಭಯದ ಏಕತ್ವಸಿದ್ಧಿಯೆ ಗುರು.
ಇದು ಕಾರಣ, ಅಂಗತ್ರಯದಲ್ಲಿ ಲಿಂಗತ್ರಯ
ಸಂಬಂಧವಾದಲ್ಲಿ ಜಂಗಮದಾಸೋಹ.
ಜಂಗಮ ದಾಸೋಹವಿಲ್ಲದಡೆ, ಲಿಂಗತೃಪ್ತಿ ಇಲ್ಲ.
ಅಂಗದ ಮೇಲೆ ಲಿಂಗವಿಲ್ಲದಿರ್ದಡೆ,
ಆ ಜಂಗಮ ಸೇವೆಯ ಕೈಕೊಳ್ಳ.
ಅದು ಕಾರಣ ಒಂದ ಬಿಟ್ಟು ಒಂದಱಲ್ಲಿ ನಿಂದರೆ,
ಅಂಗವಿಲ್ಲದ ಆತ್ಮನಂತೆ, ಶಕ್ತಿಯಿಲ್ಲದ ಶಿವನಂತೆ,
ದೀಪವಿಲ್ಲದ ಪ್ರಕಾಶದಂತೆ,
ಒಂದಂಗ ಶೂನ್ಯವಾಗಿ ಭಕ್ತಿಯುಂಟೆ?
ಅವಯವಹೀನನು ರಾಯಪಟ್ಟಕ್ಕೆ ಸಲುವನೆ?
ಲಿಂಗಹೀನನು ಭೃತ್ಯಾಚಾರಕ್ಕೆ ಸಲುವನೆ?
ಅದು ದೇವತ್ವಕ್ಕೆ ಸಲ್ಲದು.
ನಮ್ಮ ಕೂಡಲಚೆನ್ನಸಂಗಯ್ಯನಲ್ಲಿ
ತ್ರಿವಿಧ ಸನ್ಮತವೆ ಚರಸೇವೆಯಯ್ಯಾ ಚಂದಯ್ಯಪ್ರಭುವೆ. ॥೪೬॥

ಮತ್ತಂ,

೮೯೪

ಜಂಗಮವೆ ಪರವೆಂದಱಿದಡೇನು?
ಆ ಜಂಗಮದಂಗವಲ್ಲವೆ ಲಿಂಗ?
ಆ ಲಿಂಗಚೈತನ್ಯದಱಿವೆಲ್ಲವು ಜಂಗಮವಲ್ಲವೆ?

ಅಂಗವಿಲ್ಲದ ಜೀವ, ಆತ್ಮನಿಲ್ಲದಂಗಕ್ಕೆ
ಸರ್ವಭೋಗದ ಸುಖ ಉಂಟೆ?
ಮಣ್ಣಿಲ್ಲದ ಮರನುಂಟೆ?
ಮರನಿಲ್ಲದ ಹಣ್ಣುಂಟೆ?
ಹಣ್ಣಿಲ್ಲದ ಸ್ವಾದವುಂಟೆ?
ಹೀಂಗಱಿವುದಕ್ಕೆ ಕ್ರಮ:
ಅಂಗವೆ ಮಣ್ಣು, ಲಿಂಗವೆ ಮರನು,
ಫಲವೆ ಜಂಗಮ, ರುಚಿಯೆ ಪ್ರಸಾದ.
ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ
ಸಾಕಾರಲಿಂಗವೆ ಜಂಗಮದಂಗವಯ್ಯಾ ಪ್ರಭುವೆ! ॥೪೭॥

ಈ ಹೀಂಗೆಂದು ಚೆನ್ನಬಸವರಾಜದೇವರು ನಿರೂಪಿಸಲು, ಅದಕ್ಕೆ ಪ್ರಭುದೇವರು 'ಸಮ್ಯಕ್ಕಾಗಿ' ನುಡಿದು, ಚೆನ್ನಬಸವಣ್ಣನ ಪ್ರಸಾದವಾಕ್ಯವ ಕೇಳೆಂದು ಚಂದಯ್ಯಂಗೆ ನಿರೂಪಿಸಿದ ಪ್ರಸ್ತಾವದ ವಚನ:

೮೯೫

ಆಚಾರವೆ ಲಿಂಗ, ಆ ಆಚಾರದಱಿವೆ ಜಂಗಮ.
ಆ ಅಂಗವೆ ಲಿಂಗ, ಚೈತನ್ಯವೆ ಜಂಗಮ,
ಆ ಜಂಗಮದ ಸೇವೆಯೆ ಲಿಂಗ, ಕೊಂಬುದೆ ಜಂಗಮ.
ನಮ್ಮ ಗೊಹೇಶ್ವರನ ಶರಣರು ಮಚ್ಚುವಂತೆ
ಮಡಿವಾಳನ ಕಾಯಕದಂತೆ ನಿರೂಪಿಸಿದ
ಚೆನ್ನಬಸವಣ್ಣನ ಕರುಣದಲ್ಲಿ ಬದುಕಾ ಚಂದಯ್ಯಾ. ॥೪೮॥

ಈ ಹೀಂಗೆಂದು ಪ್ರಭುದೇವರು ಚೆನ್ನಬಸವಣ್ಣನ ನಿರೂಪವ ಕೇಳಿ ಬದುಕೆಂದು ಹೇಳಲಾ ಚಂದಯ್ಯಗಳು ಆ ನಿರೂಪಕ್ಕೆ ಒಪ್ಪಿ ಒಡಂಬಟ್ಟು, ತಮ್ಮ ಇಷ್ಟಲಿಂಗಮಂ ಧರಿಸಿಕೊಂಡು, ಚಿತ್ತ ನಿಸ್ತರಂಗವನೆಯ್ದಿ, ಬಸವಣ್ಣ ಮೊದಲಾದ ಶರಣರ ಸಮ್ಯಗ್‌ಜ್ಞಾನವೆನಗಾಯಿತ್ತೆಂದು ಬಿನ್ನೈಸಿದ ಪ್ರಸ್ತಾವದ ವಚನ:

೮೯೬

ಎನ್ನಂಗದ ಸತ್‌ಕ್ರೀಯೆ ಬಸವಣ್ಣನು.
ಎನ್ನ ಲಿಂಗದ ಸತ್‌ಕ್ರೀಯೆ ಚೆನ್ನಬಸವಣ್ಣನು.
ಎನ್ನ ಅಱಿವಿನ ಸತ್‌ಕ್ರೀಯೆ ಪ್ರಭುವೆ ನೀವು.
ಎನ್ನ ದಾಸೋಹದ ನಿಷ್ಠೆಯೆ ಮಡಿವಾಳಯ್ಯನು.
ಇದು ಕಾರಣ ಎನ್ನಂಗ ಲಿಂಗ ಜ್ಞಾನ ದಾಸೋಹ
ಇವು ಮುಂತಾದ ಸಮಸ್ತವೂ ನಿಮ್ಮ ಪುರಾತನರಾದ ಕಾರಣ,
ಚೆನ್ನಬಸವಣ್ಣನ ಕರುಣ ಇಂತು ಮಾಡಲಾಗಿ,
ನಾನು ನಿಮ್ಮ ಪಾದವ ಬೆರೆದು ಬೇಱಿಲ್ಲದೆ

ನಿಜವನೆಯ್ದಿದೆ ಚೆನ್ನಬಸವಣ್ಣಾ.
ಚಂದೇಶ್ವರಲಿಂಗದಲ್ಲಿ
ಶರಣರ ಸಮ್ಯಗ್‍ಜ್ಞಾನವೆನಗಾಯಿತ್ತಯ್ಯಾ ಪ್ರಭುವೆ! ॥೪೯॥

[೧]ಇಂತೀ[೧] ಶ್ರೀಮತ್ ಸಕಲಗಣ ಪುರಾತನರೊಳ್ ಪ್ರಭುದೇವರು
ಮಹಾನುಭಾವಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್
ನುಲಿಯ ಚಂದಯ್ಯಗಳ ಸಂಪಾದನೆಗಂ
ಚತುರ್ದಶೋಪದೇಶಂ ಸಮಾಪ್ತಂ
ಅಂತು ವಚನ ೪೯೬ ಕ್ಕಂ ಮಂಗಳ ಮಹಾ ಶ್ರೀ

❖

೧–೧ ಇತಿ (ಮೂ)

೧೫
ಘಟ್ಟಿವಾಳಯ್ಯನ ಸಂಪಾದನೆ

[೧]ಕಂದ:

ಘಟ್ಟಿವಾಳಯ್ಯನೆಂಬ ಘ
ರಟ್ಟಂ ತನ್ನಿಷ್ಟಲಿಂಗದೊಳ್ ಮಿಗೆ ಗುಂಡಂ
ನಿಷ್ಠೆಯಿನಡಗಿಸಿದುದ ನಾಂ
ಸೃಷ್ಟಿಯೊಳಜೀವಂತೆ ಶರಣಜನರಿಂಗುಸುರ್ವೆಂ ॥೧॥

ಅದೆಂತೆಂದೊಡಾ ಪ್ರಭುದೇವರು ಬಸವರಾಜದೇವರು ಚೆನ್ನಬಸವರಾಜದೇವರು ಮಡಿಮಾಳಮಾಚಿತಂದೆಗಳು ಆ ನುಲಿಯ ಚಂದಯ್ಯಗಳೊಡನೆ ಮಹಾನುಭಾವ ಸದ್‌ಗೋಷ್ಠಿಯಂ ಮಾಡಿ ಓಲಾಡುತ್ತಿರಲು, ಆ ನುಲಿಯ ಚಂದಯ್ಯಗಳು ತಮ್ಮ ನಿಜಕಾಯಕಕ್ಕೆಯ್ದಲು, ಇತ್ತ ಮತ್ತೋರ್ವ ಗಣಾಧೀಶ್ವರನು ಕೈಲಾಸದಿಂದ ಸ್ವೇಚ್ಛಾಲೀಲಾವಿಲಾಸದಿಂದ ಮರ್ತ್ಯಕ್ಕವತರಿಸಿ, ಘಟ್ಟಿವಾಳಮುದ್ದಣ್ಣಗಳೆಂಬ ನಿಜನಾಮದಿಂ ಪರಮವೈರಾಗ್ಯದ ಹೆಚ್ಚುಗೆಯಿಂ ದೇಹೇಂದ್ರಿಯಾದಿ ವಿಷಯಂಗಳಂ ತೃಣಸಮಾನಂಗೈದು, ನಿರಾಶಾಭರಿತನಾಗಿ ಚರಿಸಾಡುತ್ತಲೊಂದುದಿನಂ ಬಸವರಾಜದೇವರ ಗೃಹಸಮೀಪಸ್ಥರಾಗಿ ನಿಂದಿರಲು, ಆ ಬಸವರಾಜದೇವರ ಗೃಹದ ಬಾಗಿಲಲ್ಲಿ ಹೊಗುವ ಹೊಱಡುವ ಜಂಗಮಸಮೂಹಮಂ ಕಂಡು, ಇವರು ಉಪಾಧಿಯಿಂ ಶರೀರಪೋಷಣರಲ್ಲದೆ, ಜ್ಞಾನಜಂಗಮಸ್ಥಲಕ್ಕೆ ಸಲ್ಲರೆಂದು ವಿಡಂಬಿಸುವ ಪ್ರಸ್ತಾವದ ವಚನ:

೮೯೭

ಕಾಳುದೇಹದೊಳಗೊಂದು
ಕೀಳು ಜೀವ ಹುಟ್ಟಿತ್ತಾಗಿ,
ಆಪ್ಯಾಯನವಡಗದು; ಸಂದೇಹ ಹಿಂಗದು.
ಇದೇನೊ? ಇದೇನೊ?
ಹಂದೆಗಳ ಮುಂದೆ ಬಂದು ಕಾಡುತ್ತಲಿದ್ದುದೆ

೧ + ಶ್ರೀಗುರು ಬಸವಲಿಂಗಾಯ ನಮಃ (ಮೂ)

ಇದೇನೊ? ಇದೇನೊ?
ಕಾಲಾಳು ಮೇಲಾಳುಗಳು ಬೇಳುವೆಗೊಳಗಾದರು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂಬರು. ॥೧॥

ಮತ್ತಂ,

೮೯೮

ಜಂಗಮವಾಗಿ ಹುಟ್ಟಿದ ಮತ್ತೆ
ಹಿಂದಣ ಹೆಜ್ಜೆಯ ಮೆಟ್ಟಲುಂಟೆ?
ಜಂಗಮವೆಂಬ ಮಾತಿಂಗೊಳಗಾದಲ್ಲಿ
ಮೂಱು ಮಲತ್ರಯವ ಹಿಂಗಿರಬೇಕು;
ಅನಂಗನ ಬಲೆಗೆ ಎಂದಿಗೂ ಸಿಲುಕದಿರಬೇಕು.
ಅದು ನಿಜದ ಸಂಗ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ, ಈ ಗುಣ ಆರಿಗೂ ಇಲ್ಲ ಇಲ್ಲ ಎಂದೆ.॥೨॥

ಮತ್ತಂ,

೮೯೯

ಹೊನ್ನು ಹೆಣ್ಣು ಮಣ್ಣು ಕುಱಿತು ಚರಿಸುವನ್ನಬರ
ಉಭಯದ ಕೇಡು.
ವರ್ಮವನಱಿಯದೆ ಮಾಡುವನ್ನಬರ ದ್ರವ್ಯದ ಕೇಡು.
ಇಂತೀ ಉಭಯದ ಭೇದವನಱಿತು
ಚರಸಿ ಮಾಡಿ ಅಱಿಯಬೇಕು,
ಚಿಕ್ಕಯ್ಯಪ್ರಿಯ ಸಿದ್ಧಲಿಂಗವನಱಿಯಬಲ್ಲಡೆ. ॥೩॥

ಮತ್ತಂ,

೯೦೦

ಹೊಱಗಣ ಮಲತ್ರಯಕ್ಕೆ ಒಳಗಣ ಅಱಿವ ನೀಗಾಡಲೇಕೆ?
ಅಲ್ಪ ಸುಖಕ್ಕೆ ಮಚ್ಚಿ ಕುಕ್ಕುರನಂತೆ ಸಿಕ್ಕಿ ಸಾಯಲೇಕೆ?
ನಿಶ್ಚಯವಾಗಿ ತಾ ಬಂದ ಆದಿ ಅನಾದಿಯೆಂಬ ವಸ್ತುವ ತಿಳಿದು ನೋಡಿ
ಚಿಕ್ಕಯ್ಯಪ್ರಿಯ ಸಿದ್ಧಲಿಂಗವನಱಿಯಬಲ್ಲಡೆ ಇಲ್ಲ ಇಲ್ಲ ಎಂದೆ. ॥೪॥

ಮತ್ತಂ,

೯೦೧

ಹೊನ್ನು ಹೆಣ್ಣು ಮಣ್ಣಿಂಗೆ ಹೊಡೆದಾಡುವನ್ನಬರ,
ಅವರು ಹಿರಿಯರೆಂತಪ್ಪರೊ?
ತ್ರಿವಿಧ ಮಲಕ್ಕೆ ತ್ರಿವಿಧ ಅಮಲದಿಂದ ಮಲ ಹಱಿದಲ್ಲದೆ,
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದೆ. ॥೫॥

ಮತ್ತಂ,

೯೦೨

ಜಂಗಮಕ್ಕೆ ಅಱಿವ ಮಱೆದಾಗಲೆ ಅಪಮಾನ ಹೋಯಿತ್ತು.
ಭಕ್ತಂಗೆ ಸತ್ಯಸದಾಚಾರವ ಬಿಟ್ಟಾಗಲೆ ಅಪಮಾನ ಹೋಯಿತ್ತು.
ಈ ಅಪಮಾನವಲ್ಲದೆ, ದ್ವಾದಶ ಮಲಭಾಂಡಕ್ಕೆ
ಹೋರಿಯಾಡುವರಿಗೇಕೆ ಚಿತ್ತಶುದ್ಧಿ?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೬॥

ಮತ್ತಂ,

೯೦೩

ತನುವ ಮಱೆಯಬೇಕೆಂದು ಗುರುವ ತೋಱೆ,
ಮನವ ಮಱೆಯಬೇಕೆಂದು ಲಿಂಗವ ತೋಱೆ,
ಧನವ ಮಱೆಯಬೇಕೆಂದು ಜಂಗಮವ ತೋಱೆ,
ಲೇಸ ಮಱೆದು ಕಷ್ಟಕ್ಕೆ ಕಡಿದಾಡುವ
ಭಾಷೆಹೀನರ ಕಂಡು ನಾಚಿಕೆಯಾಯಿತ್ತು!
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೭॥

ಮತ್ತಂ,

೯೦೪

ತಮ್ಮ ಮಲವ ತಾವು ಮುಟ್ಟವು ಆವ ಜಾತಿಯೂ.
ತ್ರಿವಿಧ ಮಲಕ್ಕೆ ಹೊಱಗಾಗಿ,
ಮತ್ತೆ ಮಲತ್ರಯಕ್ಕೆ ಬೀಳುವ ಮಲಭಾಂಡದೇಹಿಗೆ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಒಲವರ ಇಲ್ಲಾ ಇಲ್ಲಾ ಎಂದೆ. ॥೮॥

ಮತ್ತಂ,

೯೦೫

ಕಾಯ ಜೀವವನಱಿದೆನೆಂಬವರೆಲ್ಲರೂ
ಹೋದರಲ್ಲಾ ಹೊಲಬುದಪ್ಪಿ!
ಹೊನ್ನು ಹೆಣ್ಣು ಮಣ್ಣಿಗೆ ಹೋರಿಯಾಡುವರೆಲ್ಲರು!
ಬಸವಣ್ಣನ ಬಾಗಿಲಲ್ಲಿ ಬಂಧಿತರಾಗಿ
ನೊಂದವರಿಗೇಕೆ ಚಿಕ್ಕಯ್ಯಪ್ರಿಯ ಸಿದ್ಧಲಿಂಗ? ಇಲ್ಲ ಇಲ್ಲಾ ಎಂದೆ. ॥೯॥

ಮತ್ತಂ,

೯೦೬

ಬಸವ ಮಾಡಿಹನೆಂದು
ಬಾಯಲ್ಲಿ ಬಸಿವ ಲೋಳೆಯನಱಿಯದೆ,
ಎಸಕದಿಂದ ಮಾಡುವ ಹುಸಿಭಕ್ತಿಯನಱಿಯದ
ಈ ಕಿಸಿವಾಯರಿಗೇಕೆ? ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೧೦॥

ಈ ಹೀಂಗೆಂದು ಘಟ್ಟಿವಾಳಯ್ಯಗಳು ಆ ಜಂಗಮಸಮೂಹಮಂ ವಿಡಂಬಿಸುತ್ತಿರಲು, ಆ ಜಂಗಮದೇವರುಗಳು ಘಟ್ಟಿವಾಳಯ್ಯಗಳಂ ನೋಯಿಸಿ ಲಿಂಗಮಂ ತೆಗೆದುಕೊಳ್ಳಲು, ಆ ಪ್ರಸ್ತಾವದಲ್ಲಿ ನುಡಿದ ವಚನ:

೯೦೭

ಗೋಕುಲರೆಲ್ಲರೂ ಕೂಡಿ
ಗೋಪತಿಯಣ್ಣನ ಮನೆಗೆ ಉಣಬಂದರೆಲ್ಲರು.
ನಾವೀಸಕೆ ಕೂಳ ಕೇಳಿದರೆ,
ವೇಷಧಾರಿಗಳು ಘಾಸಿಮಾಡಿದರಿಂದೆನ್ನುವ.
ಜಗದೀಶ ನೀನೆ ಬಲ್ಲೆ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೧೧॥

೯೦೮

ಹಸಿದು ತಾರಕ್ಕೂಟವ ಕೇಳಹೋದರೆ ಕೂಟವೆದ್ದು ಬಡಿದರು.
ಸಾಕಾರ ಮೊದಲು ಧಾತುಗೆಟ್ಟೆಯಲ್ಲಾ!
ಪರಶಿವಾತ್ಮನಾಗಿ ಇದೇತಕ್ಕೆ ಬಂದೆ ತನುವಿನಾಸೆಗಾಗಿ?
ಇದಱಾಸೆಯ ಹೊಗದಿರು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆನು. ॥೧೨॥

ಮತ್ತಂ,

೯೦೯

ಹಾದಿಯ ಬೆಳ್ಳನ ಕಳ್ಳರು ತಾಗಿದರೆ,
ಇನ್ನಾರಿಗೆ ಮೊಱೆ ಇಡುವ?
ತಾ ಸತ್ತ ಮತ್ತೆ ತನ್ನನಜಿದವಂಗೆ ಇನ್ನಾರಿಗೂ ಮಿಥ್ಯವೇಕೆ?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೧೩॥

ಮತ್ತಂ,

೯೧೦

ಬಾಯಕ್ಕಿಯ ಬೇಡುವವರೆಲ್ಲರೂ
ಬಡಪಾಯಿವಂತರ ನೋವ ಬಲ್ಲರೆ?
ಹಿಸಿವ ವಿಹಂಗ ಪಶುವಿನ ನೋವ ಬಲ್ಲುದೆ?
ಇಂತೀ ದೆಸೆಯ ಕಂಡು ನಾನಂಜಿದೆ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೧೪॥

ಮತ್ತಂ,

೯೧೧

ಹುಟ್ಟಿದ ಮರ, ನೆಟ್ಟ ಕಲ್ಲು,
ಮತ್ತೇತಱಿ ಇಷ್ಟದಲ್ಲಿ ಒತ್ತಿದ ಲಿಂಗ ಮುದ್ರೆ ಇರಲಿಕ್ಕೆ,

ಕಿತ್ತುಕೊಂಡವ ದ್ರೋಹಿ ಎಂಬರು,
ದೃಷ್ಟದಲ್ಲಿ ಜಂಗಮ ಭಕ್ತರ ಕೊಲುತ್ತ.
ಇಂತೀ ಉರುಳುಗಳ್ಳರ ಭಕ್ತರು ಜಂಗಮವೆಂದರೆ ಒಪ್ಪನಯ್ಯಾ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೧೫॥

ಮತ್ತಂ,

೯೧೨

ಜಂಗಮವಾಗಿ ಜಂಗಮವ ಕೊಂದಾಗಲೆ
ತನ್ನ ದೈವ ತನಗಿಲ್ಲ.
ಭಕ್ತನಾಗಿ ಭಕ್ತರ ಸ್ತುತಿ ನಿಂದ್ಯವ ಮಾಡಲಾಗಿಯೆ
ಸತ್ಯಸದಾಚಾರ ತನಗಿಲ್ಲ.
ದೀಹದ ವಿಹಂಗ ಮೃಗಗಳಂತೆ,
ಕುಲಿಶದ ಕಾವು ಕುಲಕ್ಕೆ ಮಿತ್ತಾದಂತೆ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೧೬॥

ಮತ್ತಂ,

೯೧೩

ಇಱಿವುದು ಕಡಿವುದು ಕೊಲುವುದು
ಮಲದೇಹಿಗಳಿಗಲ್ಲದೆ ನಿರ್ಮಲ ದೇಹಿಗಳಿಗುಂಟೆ?
[1]ಸಮಯ[1] ಸಮುದ್ರದಂತಿರಬೇಕು.
ತಪ್ಪನಱಿಸಿ ಶಿಕ್ಷಿಸುವನ್ನಬರ,
ನರ[2]ದೂತ[2] ಕುಲಕ್ಕೆ ಪರಶಿವ ರೂಪುಂಟೆ?
ಆ ಹರವರಿಯ ನುಡಿದಡೆನಗೇನು?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೧೭॥

ಇಂತು ಘಟ್ಟಿವಾಳಯ್ಯಗಳು ತಮ್ಮ ನೋಯಿಸಿ ಲಿಂಗವ ತೆಗೆದುಕೊಂಡ ಜಂಗಮದೇವರುಗಳ ವಿಡಂಬಿಸುತ್ತಿರಲು, ಆ ಪ್ರಸ್ತಾವದೊಳು ಪ್ರಭುದೇವರು ಮಹಾಜ್ಞಾನಿಗಳಿಗೆ ಸಮಯವನ್ಯವಲ್ಲ. ಬಿಱುನುಡಿ ಸಲ್ಲದೆಂದು ನಿರೂಪಿಸಿದ ಪ್ರಸ್ತಾವದ ವಚನ:

೯೧೪

ಅಱಿವ ಬಲ್ಲೆನೆಂದು ಬಿಱುನುಡಿಯ ನುಡಿವರೆ?
ಸತ್ಯವನಱಿದವಂಗೆ ಮಿಥ್ಯಭಾವ ಉಂಟೆ?
ತಥ್ಯ ಮಿಥ್ಯ ಉಭಯ ಭಾವವಳಿದಿರಬೇಕು
ಸಮಯವೆಂಬುದು ಸಂಪದ.
ಅದು ನಿನಗನ್ಯವೆ?

೧-೧ ಸಮ (ಮೂ) ೨-೨ ಧೂತ(ರ್ತ)(ಮು)

ಸರ್ವ ಸಮಯಸಂಪದನಾದಲ್ಲಿ,
ಗುಹೇಶ್ವರಲಿಂಗಕ್ಕೆ ತಥ್ಯಮಿಥ್ಯವಿಲ್ಲ ಘಟ್ಟಿವಾಳಯ್ಯ. ॥೧೮॥

ಈ ಹೀಂಗೆ ಪ್ರಭುದೇವರು ನಿರೂಪಿಸಲು, ಅದಕ್ಕೆ ಘಟ್ಟಿವಾಳಯ್ಯಗಳ ಪ್ರತ್ಯುತ್ತರ:

೯೧೫

ಸರ್ಪಂಗೆ, ಪಿಕಂಗೆ ಒಪ್ಪದ ಮನೆಯುಂಟೆ?
ಎನಗಾ ಹೆಚ್ಚು ಕುಂದೆಂಬ ಮಿಥ್ಯದ ಭಾವವಿಲ್ಲ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೧೯॥

ಮತ್ತಂ,

೯೧೬

ಚಿನ್ನವ ಕೊಂಬಲ್ಲಿ ಅದಱ ಬಣ್ಣವ ಕಂಡು,
ಬಣ್ಣದ ವಾಸಿಯ ಕುಱುಹಿಟ್ಟು,
ಅದು ತನಗೆ ಚೆನ್ನಾದಡೆ ಕೊಂಬ; ಅಲ್ಲದೊಡೊಲ್ಲ.
ಇದಕ್ಕೆ ಗೆಲ್ಲಸೋಲವೇಕೆ?
ಚಿಕ್ಕಯ್ಯಪ್ರಿಯಸಿದ್ಧಲಿಂಗ ಇಲ್ಲ ಇಲ್ಲಾ ಎನುತಿರ್ದೆನು. ॥೨೦॥

ಇದಕ್ಕೆ ಪ್ರಭುದೇವರ ನಿರೂಪ:

೯೧೭

ಸಮಯವ ಬಿಡಬಹುದೆ ಅಯ್ಯಾ?
ಅಟ್ಟ ಅಶನವಾದಡೂ ಕಲಸುವ ಕೈ,
ಉಂಬುದಕ್ಕೆ ಬಾಯಿ ಬೇಕು.
ಉಂಬುದಿಲ್ಲಾ ಎಂದು ಸಂದೇಹವ ಹಱಿದಲ್ಲಿ,
ಸಮಯ ಒಂದು ಇಲ್ಲ ಎನಬೇಕು.
ಗುಹೇಶ್ವರನೆಂಬನ್ನಕ್ಕ
ಬಂಧಮೋಕ್ಷವನಱಿಯಬೇಕು ಘಟ್ಟಿವಾಳಯ್ಯ. ॥೨೧॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಘಟ್ಟಿವಾಳಯ್ಯಗಳ ಪ್ರತ್ಯುತ್ತರ:

೯೧೮

ದಗ್ಧವಾದ ಮರ ಇದ್ದಿಲಲ್ಲದೆ ಕಾಷ್ಠಕ್ಕೆ ಹೊದ್ದಿಗೆ ಉಂಟೆ?
ಕಿಗ್ಗಯ್ಯ ನೀರು ತಟಾಕಕ್ಕೆ ಹೊದ್ದಿದುದುಂಟೆ?
ಅಱಿದು ಮಱೆದವಂಗೆ ಸಮಯದ ಹೊದ್ದಿಗೆ ಏನು?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೨೨॥

ಮತ್ತಂ,

೯೧೯

ಸತ್ತ ಶವ ಕಿಚ್ಚ ಬಲ್ಲುದೆ?
ನಿಷ್ಠೆ ನಿಬ್ಬೆಱಗಾದ ಕರ್ತು ಮರ್ತ್ಯರ ಹಂಗು ಬಲ್ಲನೆ?

ತೊಟ್ಟು ಬಿಟ್ಟ ಹಣ್ಣು ಮತ್ತೆ ಹತ್ತುವುದೆ?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲವೆಂದೆನು. ॥೨೩॥

ಮತ್ತಂ,

೬೨೦

ಒಡೆದ ಮಡಕೆಗೆ ಸಜೆಯಿಂದ ಸಂದು ಕೂಡುವುದೇ?
ದಗ್ಧವಾದ ಪಟ ಅಗಸರ ಕಲ್ಲಿಗೆ ಹೊದ್ದುವುದೇ?
ಬದ್ಧಭವಿಗಳೆಂದು ಬಿಟ್ಟ ಮತ್ತೆ ಸಮಯದ ಹೊದ್ದಿಗೆ ಏಕೆ?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೨೪॥

ಮತ್ತಂ,

೬೨೧

ಕೂಟವ ಕೂಡಿಹೆನೆಂದಡೆ ಸಮಯದವನಲ್ಲ.
ಮಾಟವ ಮಾಡಿಹೆನೆಂದಡೆ
ಹಿಂದುಮುಂದಣ ದಂದುಗದವನಲ್ಲ.
ಸಮಯಕ್ಕೆ ಮುನ್ನವೆ ಅಲ್ಲ. ಆರಾದಡೂ ಎನಲಿ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೨೫॥

ಈ ಹೀಂಗೆಂದು ಘಟ್ಟಿವಾಳಯ್ಯಗಳು ನುಡಿಯಲು ಪ್ರಭುದೇವರ ನಿರೂಪ:

೬೨೨

ಕುಱುಹುಳ್ಳನ್ನಕ್ಕ ಸಮಯದ ಹಂಗು.
ಅಱಿದಿಹೆನೆಂಬನ್ನಕ್ಕ ಆತ್ಮನ ಹಂಗು.
ಅಲ್ಲಹುದೆಂಬನ್ನಕ್ಕ ಎಲ್ಲರ ಹಂಗು.
ಗೊಹೇಶ್ವರನೆಂಬನ್ನಕ್ಕ
ಲಿಂಗದ ಹಂಗು ಬೇಕು ಘಟ್ಟಿವಾಳಣ್ಣಾ. ॥೨೫॥

ಇದಕ್ಕೆ ಘಟ್ಟಿವಾಳಯ್ಯಗಳ ಪ್ರತ್ಯುತ್ತರ:

೬೨೩

ಇಷ್ಟ ಬಾಹ್ಯವಾಯಿತ್ತೆಂದು ಸಮಯ ಒಪ್ಪದಿದೆ ನೋಡಾ.
ಅಱಿವು ಬಾಹ್ಯವಾಗಿ ತ್ರಿವಿಧಕ್ಕೆ ಕಚ್ಚಾಡಲೇತಕ್ಕೆ?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೨೭॥

ಮತ್ತಂ,

೬೨೪

ಸ್ಥಾವರವಾಗಿ ಭೂಮಿಯಲ್ಲಿ ಪೂಜಿಸಿಕೊಂಬುದು ಶೈವಲಿಂಗ.
ಚರವಾಗಿ ಭೂಮಿಯಲ್ಲಿ ಪೂಜಿಸಿಕೊಂಬುದು ಇಷ್ಟಲಿಂಗ.
ಅಱಿವಿನ ಮನದ ಕೊನೆಯಲ್ಲಿ
ನಿತ್ಯನಿವಾಸವಾಗಿ ಪೂಜಿಸಿಕೊಂಬುದು ವೀರಶೈವಲಿಂಗ.

ಇಂತೀ ಲಿಂಗತ್ರಯದ ಆದಿಯಾಧಾರವನಱಿಯದೆ
ಹೋದರಲ್ಲಾ ಹೊಲಬುದಪ್ಪಿ!
ಇನ್ನಾರಿಗೆ ಹೇಳುವೆ? ಚಿಕ್ಕಯ್ಯಪ್ರಿಯ ಸಿದ್ಧಲಿಂಗ
ಇಲ್ಲ ಇಲ್ಲಾ ಎಂದೆ. ॥೨೮॥

ಮತ್ತಂ, ಘಟ್ಟಿವಾಳಯ್ಯಗಳು ಪ್ರಭುದೇವರೊಡನೆ ನಿಜಜಂಗಮಸ್ಥಲವಪೂರ್ವವೆಂದು ನುಡಿದ ಪ್ರಸ್ತಾವದ ವಚನ:

೯೨೫

ವೇಷವೆಂಬ ರುದ್ರನ ಪಾಶವ ಹೊತ್ತು,
ಈಷಣತ್ರಯಕ್ಕೆ ತಿರುಗಾಡುವ
ವೇಷಧಾರಿಗಳಿಗುಂಟೆ ಮಹಾಜ್ಞಾನದ ಸಂಪತ್ತಿನ ಸಂಬಂಧ?
ಸ್ವಾದು ಉದಕದಲ್ಲಿ ಉಂಟೆ ಕ್ಷಾರದ ವಾರಿ?
ಸಮಯದಲುಂಟೆ ನಿಜಶರಣರ ನೆಲೆ?
ಎನಗಾ ಭ್ರಮೆಯಿಲ್ಲ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೨೯॥

ಮತ್ತಂ,

೯೨೬

ಆಸೆಗಾಗಿ ವೇಷವ ಹೊತ್ತು ತಿರುಗುವ ವೇಷದ ಗಂಡ.
ಈಷಣತ್ರಯಕ್ಕಾಗಿ ಈಶನ ಪೂಜಿಸುವ ದಾಸರ ಗಂಡ.
ಇಷ್ಟನಱಿತು ತನುವಿಗೆ ಆಸೆಯ ಮಾಡುವ ಭಾಷೆವಂತರ ಗಂಡ.
ನಾನಂಜುವೆ ತ್ರಿವಿಧದ ಹಂಗಳಿದವರಿಗೆ.
ನಾನವರಿಗಿಳಿದ ಬಂಟ;
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲವೆಂದೆನು. ॥೩೦॥

ಮತ್ತಂ,

೯೨೭

ಸಬಳದ ತುದಿಯಲ್ಲಿ ಬಿರಿದ ಕಟ್ಟಿದ ಮತ್ತೆ,
ಅದಱ ತಲೆವಿಡಿಯತೊಡಗಿದರೆ ನಾನಲ್ಲ,
ಸಬಳಕ್ಕೆ ಬಿರಿದೆಂಬವನಂತೆ.
ಹಾಂಗೆಂದ ಮತ್ತೆ ತೊಡಗುವನೆಗ್ಗ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲವೆಂದೆನು. ॥೩೧॥

ಮತ್ತಂ,

೯೨೮

ಮೂಱ ಬಿಟ್ಟವಂಗಲ್ಲದೆ ಸತ್ಯ ಸಾಗಿಸಬಾರದು.
ಆಱ ಬಿಟ್ಟವಂಗಲ್ಲದೆ ಆದರಿಸಬಾರದು.

ಎಂಟ ಬಿಟ್ಟವಂಗಲ್ಲದೆ ಸಾಕಾರದ ಕಂಟಕವನಱಿಯಬಾರದು.
ರಣದಲ್ಲಿ ಓಡಿ ಮನೆಯಲ್ಲಿ ಬಂಟನಾಡುವನಂತೆ!
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲವೆಂದೆನು. ॥೩೨॥

ಈ ಹೀಂಗೆಂದು ಘಟ್ಟಿವಾಳಯ್ಯಗಳು ಅಲ್ಲಿಂದ ಪೋಗಿ, ಒಂದು ಪಿರಿದಪ್ಪ ಗುಂಡ ತಂದು ಬಸವರಾಜದೇವರ ಮಠದ ಬಾಗಿಲಲ್ಲಿ ನಿಲಿಸಿ, ಹೊಡಕೆಯ ಕಣ್ಣಿಯಿಂದ ತಮ್ಮ ಕೊರಳಿಗೆ ಧರಿಸಿಕೊಂಡು, ಆ ಜಂಗಮದೇವರುಗಳ ಮರಳಿ ವಿಡಂಬಿಸುವ ಪ್ರಸ್ತಾವದ ವಚನ:

೯೨೯

ಅಂಡಜ ಮುಗ್ಧೆಯ ಮಕ್ಕಳಿರಾ,
ಕೆಂಡದ ಮಳೆ ಕಱೆವಲ್ಲಿ
ನಿಮ್ಮ ಹೆಂಡಿರು ಹಳುಹೊಕ್ಕು ಹೋದಿರಲ್ಲಾ!
ಜಂಗಮವೆಂಬುದಕ್ಕೆ ನಾಚಿರಿ.
ನಿಮ್ಮ ಕಂಗಳ ಹೆಂಡಿರ ತಿಂಬಳೆಂಬುದನಱಿಯಿರಿ.
ಅವಳು ಒಮ್ಮೆ ತಿಂಬಳು,
ಒಮ್ಮೆ ಕರುಣಿಸಿ ಬಿಡುವಳು,
ಅವಳು ತಿಂದು ತಿಂದು ಉಗುಳುವ
ಬಾಯೊಳಗಣದೆಲ್ಲಾ ಜಂಗಮವೆ?
ಲೋಕವೆಲ್ಲಾ ಅವಳು.
ಅವಳು ವಿಹಿತವಾದ ಜಂಗಮವಾರೈ ಬಸವಣ್ಣಾ?
ಅವಳು ವಿರಹಿತವಾದ ಭಕ್ತರಾರೈ ಬಸವಣ್ಣಾ?
ಅವಳ ಮಕ್ಕಳು ನಿನ್ನ ಕೈಯಲ್ಲಿ ಆರಾಧಿಸಿಕೊಂಬ
ಜಂಗಮ ಕಾಣಯ್ಯಾ, ಬಸವಣ್ಣಾ!
ಅವಳು ವಿರಹಿತವಾದ ಚಿಕ್ಕಯ್ಯಪ್ರಿಯ ಸಿದ್ಧಲಿಂಗನಲ್ಲದಿಲ್ಲ
ನಿಲ್ಲು, ಮಾಣು. ॥೩೩॥

ಈ ಹೀಂಗೆಂದು ಘಟ್ಟಿವಾಳಯ್ಯಗಳು ನಿರೂಪಿಸಲು, ಅದಕ್ಕೆ ಸಮಯದ ವಾಕ್ಯ:

೯೩೦

ಫಳವ ಸಲಿಸುವನ್ನಬರ ಬಿತ್ತು ಸಿಪ್ಪೆ ಉಭಯವೂ ಇರಬೇಕು.
ಸಾರವ ಸವಿದಲ್ಲಿ ಸಮಯ ಉಳಿಯಿತ್ತು.
ಹಾಗಱಿಯಬೇಕು ಘಟ್ಟಿವಾಳಣ್ಣಾ. ॥೩೪॥

ಇದಕ್ಕೆ ಘಟ್ಟಿವಾಳಯ್ಯಗಳು ನೀವೆಲ್ಲರೂ ಘನಲಿಂಗದ ನಿಜವನಱಿಯಿರಿ ಎಂದು ನಿರೂಪಿಸಿದ ಪ್ರಸ್ತಾವದ ವಚನ:

೯೩೧

ಇಷ್ಟಲಿಂಗವ ತೆಕ್ಕೊಂಡಲ್ಲಿ ದೃಷ್ಟವಾಯಿತ್ತೆ ನಿಮಗೆ?
ಬಂಧಿಕಾರನ ಬಂಧನವ ಮಾಡುವದು

ಲಿಂಗದೇಹಿಗಳಿಗುಂಟೆ ಅಯ್ಯ?
ಜಗದಲ್ಲಿ ಉಂಡುಂಡು ಕೊಂಡಾಡುವರಿಗೆ
ಘನಲಿಂಗದ ಸುದ್ದಿ ಏಕೆ?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೩೫॥

ಮತ್ತಂ,

೯೩೨

ಕೈಯ ಲಿಂಗ ಕೈಯಲ್ಲಿ; ಮೈಯ ಲಿಂಗ ಮೈಯಲ್ಲಿ;
ತಲೆಯ ಲಿಂಗ ತಲೆಯಲ್ಲಿ.
ಮತ್ತೆ ಹೊಲಬನಱಸಲೇತಕ್ಕೆ?
ಹೊಲಬುದಪ್ಪಿ ಬಿದ್ದಿರಿ ಮೂಱಱ ಬಲೆಯಲ್ಲಿ.
ಬಲುಹೇತಕ್ಕೆ? ಸಾಕು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೩೬॥

ಮತ್ತಂ,

೯೩೩

ಅರ್ತಿಗೆ ಕಟ್ಟಿದ ಲಿಂಗ ಕೈಯೊಳಗಾಯಿತ್ತು.
ನಿಶ್ಚಯದ ಲಿಂಗ ಆರ ಗೊತ್ತಿಗೆ ಸಿಕ್ಕದು.
ಆ ಘನಲಿಂಗವುಳ್ಳನ್ನಕ್ಕ ನಾ ಜಂಗಮ, ನೀವು ಜಂಗುಳಿಗಳು.
ಎನಗಾ ಭೀತಿ ಇಲ್ಲ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೩೭॥

ಮತ್ತಂ,

೯೩೪

ಅಂಗವ ಬಂಧಿಸಿದಲ್ಲಿ ನಾ ನೊಂದುದಿಲ್ಲ.
ಅದು ಮಲದೇಹ,
ಮಾಯೆಯ ಸೊಮ್ಮು ಲಿಂಗವ ತೆಗೆದೆನೆಂದಡೆ,
ಅದು ಜಗದ ಕುಱುಹು; ನನ್ನದಲ್ಲ.
ಆ ಗುಣ ನಿಮ್ಮ ಸಂದೇಹಕ್ಕೊಳಗಾಯಿತ್ತು.
ಎನಗೆ ಉಭಯದ ಹಂಗಿಲ್ಲ.
ಚಿಕ್ಕಯ್ಯಪ್ರಿಯಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೩೮॥

ಮತ್ತಂ,

೯೩೫

ಎನಗೆ ಹಳ್ಳದ ಹೊಡಕೆಯೇ ಶಿವದಾರವಾಗಿ,
ಬೆಟ್ಟದ ಗುಂಡೇ ಲಿಂಗವಾಗಿ,
ಕಾಡ ಸೊಪ್ಪು ಹಾಕಿದ ಮಡಕೆಯ ಉದಕವೆ

ಮಜ್ಜನವಾಗಿ ಪೂಜಿಸುತ್ತಿದ್ದೆ.
ಬಸವನ ಮನೆಗೆ ಹೋಹ ವ್ರತಗೇಡಿಗಳ ನೋಡಿ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎನುತಿರ್ದೆ. ॥೩೯॥

ಈ ಹೀಂಗೆಂದು ಘಟ್ಟಿವಾಳಯ್ಯಗಳು ನಿರೂಪಿಸಲು, ಅದಕ್ಕೆ ಸಮಯದ ವಾಕ್ಯ:

೯೩೬

ಬಲ್ಲ ವಿರಕ್ತಂಗೆ ಗೆಲ್ಲ ಸೋಲದ ಹೋರಾಟ ಉಂಟೆ?
ಒಳ್ಳಿತ್ತು ಹೊಲ್ಲವೆಂಬುದು ಭ್ರಾಂತರ ಮಾತು.
ಸಮಯಕ್ಕೆ ನೀ ಹಂಗು. ॥೪೦॥

ಇದಕ್ಕೆ ಘಟ್ಟಿವಾಳಯ್ಯಗಳ ಪ್ರತ್ಯುತ್ತರ:

೯೩೭

ಮುನ್ನವೆ ಆಚಾರಕ್ಕೆ ಹೊಱಗು,
ನಾನನಾಚಾರಿಯಾದ ಕಾರಣ, ನಿಮ್ಮಂತಹವನಲ್ಲ.
ಸಮಯಕ್ಕೆ ಹೊಱಗು, ಜಗದೊಳಗು.
ಎನ್ನಱಿಕೆ ಎನಗೆ, ನಿಮ್ಮ ಸಮಯ ನಿಮಗೆ.
ಓಗರವನಿಕ್ಕುವಾತನ ಮನೆಯ ಬಾಗಿಲು ಮುಚ್ಚಿಹಿತು ಹೋಗಿರಣ್ಣಾ.
ಅನಾಚಾರಿಯ ಮುಖವ ಸದಾಚಾರಿಗಳು ನೋಡಿ ಕೆಡಬೇಡ.
ಕೀಳ ಕೆಣಕಲಿಲ್ಲ.
ಚಿಕ್ಕಯ್ಯಪ್ರಿಯಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೪೧॥

ಇದಕ್ಕೆ ಸಮಯದ ವಾಕ್ಯ:

೯೩೮

ಕೇಳಿದಡೆ ದೋಷ ಉಂಟೆ?
ಮಾತನಾಡಿದಡೆ ಶಾಪ ಉಂಟೆ?
ನಿನ್ನಯ ಅಱಿವು ಮಹತ್ತು ಪದಕೆ ಇದಿರುಂಟೆ?
ನಿನ್ನ ಅಱಿವಿನ ಭೇದದ ದುರಾಳಿತನವಾವುದು ಹೇಳಣ್ಣಾ. ॥೪೨॥

ಇದಕ್ಕೆ ಘಟ್ಟಿವಾಳಯ್ಯಗಳ ಪ್ರತ್ಯುತ್ತರ:

೯೩೯

ಇಱಿವ ಕೈದಿಂಗೆ ದಯ ಧರ್ಮದ ಮೊನೆಯುಂಟೆ?
ಕಾಳೋರಗನ ದಾಡೆಯಲ್ಲಿ ಅಮೃತದ ಸುಧೆಯುಂಟೆ?
ಕೂಟವ ಕೂಡಿ ಸಮಯ ನೊಂದಲ್ಲಿ ಅಜಾತನ ಬಲ್ಲರೆ?
ಎನಗೆ ನಿಮ್ಮೊಳಗಿನ್ನೇತಱ ಮಾತು, ವೇಷಧಾರಿಗಳಲ್ಲಿ?
ನಿಮ್ಮ ಕೂಟಕ್ಕೆ ಹೊಱಗು.
ಚಿಕ್ಕಯ್ಯಪ್ರಿಯಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೪೩॥

ಇದಕ್ಕೆ ಸಮಯದ ವಾಕ್ಯ:

೯೪೦

ಅಂಬು ತಾಗಿಹೆನೆಂದಡೆ
ಧನುವಿನ ಸಂಗದಿಂದಲ್ಲದೆ ತಾಗದು.
ಹಣ್ಣು ಸವಿ ಎಂದಡೆ,
ವೃಕ್ಷದ ಶಾಖೆಯ ಸಂಗದಿಂದಲ್ಲದೆ ಬೆಳೆಯದು.
ಲಿಂಗವನಜೆತೆನೆಂದು ಶರಣರ ಸಂಗವ ಬಿಟ್ಟಡೆ,
ಅದು ಎದೆಯಲ್ಲಿ ನಿಂದ ನಂಜು ಕಾಣಾ, ಭಂಗಿತನಾದವನೆ! ॥೪೪॥

ಇದಕ್ಕೆ ಘಟ್ಟಿವಾಳಯ್ಯಗಳ ನಿರೂಪ:

೯೪೧

ರೋಗಿಗೆ ಹಾಲು ಸಿಹಿಯಪ್ಪುದೆ?
ಗೂಗೆಗೆ ರವಿ ಲೇಸಪ್ಪುದೆ?
ಚೋರಂಗೆ ಬೆಳಗು ಗುಣವಪ್ಪುದೆ?
ಭವಸಾಗರದ ಸಮಯದಲ್ಲಿದ್ದವ[೧][ರು][೧]
ನಿರ್ಭಾವನ ಭಾವವನೆತ್ತ ಬಲ್ಲರು?
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೪೫॥

ಇದಕ್ಕೆ ಸಮಯದ ವಾಕ್ಯ:

೯೪೨

ಎಲೆಯಿಲ್ಲದ ವೃಕ್ಷ ಉಲಿಯಬಲ್ಲುದೆ?
ಜಲವಿಲ್ಲದ ತಟಾಕ ತೆರೆಗೊಡಲುಂಟೆ?
ಶಬ್ದ ಮುಗ್ಧವಾದವಂಗೆ ಸಮಯವ ಸಂಪಾದಿಸುವನ್ನಬರ,
ಭ್ರಾಂತಮರ್ಕಟವ ವೃಶ್ಚಿಕ ಹೊಯಿದಂತೆ
ಮಱಿದಾಡಬೇಡಾ, ಭ್ರಾಂತಯೋಗಿ! ॥೪೬॥

ಇದಕ್ಕೆ ಘಟ್ಟಿವಾಳಯ್ಯಗಳ ಪ್ರತ್ಯುತ್ತರ:

೯೪೩

ಉತ್ತರಕ್ಕೆ ನುಡಿವನ್ನಬರ, ನಾನು ಚಿತ್ತದ ಕಲೆಯವನಲ್ಲ.
ಮದ ಮಚ್ಚರಕ್ಕೆ ಹೋರುವನ್ನಬರ,
ಕರಣೇಂದ್ರಿಯದ ಹುತ್ತದ ಮೊತ್ತದವನಲ್ಲ.
ಮತ್ತೆ ಸಮಯದಲ್ಲಿ ಹೊತ್ತು ಹೋರಿಹೆನೆಂದಡೆ,
ಸಂಸಾರದ ಕತ್ತಲೆಯವನಲ್ಲ.

೧-೧ ಂಗೆ (ಮೂ)

ಎನ್ನ ನಿಶ್ಚಯದ ಗುಂಡು ಎನ್ನ ಬಚ್ಚಬಯಲ ಬೆಳಗು.
ಚಿಕ್ಕಯ್ಯಪ್ರಿಯಸಿದ್ಧಲಿಂಗ ಇಲ್ಲ ಇಲ್ಲಾ ಎಂದೆ. ॥೪೭॥

ಇಂತು ಘಟ್ಟಿವಾಳಯ್ಯಗಳು ಗುಂಡನೆ ತನಗೆ ಬಚ್ಚಬಯಲ ಪರಬ್ರಹ್ಮವೆನಲು, ಆದಡೆ ಆ ಲಿಂಗವು ನಿನ್ನ ಕೈಯೊಳಗೇಕೆ ಅಡಗದು? ಎಂದ ಸಮಯದ ವಾಕ್ಯ:

೯೪೪

ಲಿಂಗವು ನಿನ್ನದಾದಡೆ ಅಂಗೈಯೊಳಗೇಕೆ ಅಡಗದು?
ನೀ ಮಂಗಳಮಯನಾದಡೆ
ಸಂಸಾರದ ಅಂಗದ ಉಲುಹೇತಕ್ಕೆ?
ಅದು ಲಿಂಗದ ಮಚ್ಚಲ್ಲ, ಭ್ರಾಂತಯೋಗಿ! ॥೪೮॥

ಈ ಹೀಂಗೆಂದು ಸಮಯ ನುಡಿದು ಆ ಲಿಂಗವ ಕೊಡಲು, ಅದಕ್ಕೆ ಘಟ್ಟಿವಾಳಯ್ಯಗಳು ಆ ಗುಂಡನು ತಮ್ಮ ಕರಸ್ಥಲದ ಲಿಂಗದಲ್ಲಿ ಅಡಗಿಸಿಕೊಂಡ ಪ್ರಸ್ತಾವದ ವಚನ:

೯೪೫

ಲೀಲೆಗೆ ಹೊಱಗಾದ ಲಿಂಗವೇ,
ಬಾರಯ್ಯಾ, ಎನ್ನಂಗದೊಳಗಾಗು.
ಶ್ರುತ ದೃಷ್ಟ ಅನುಮಾನದಲ್ಲಿ ನೋಡುವವರಿಗೆಲ್ಲಕ್ಕೂ ಅತೀತವಾಗು.
ಆಗೆಂಬುದಕ್ಕೆ ಮುನ್ನವೆ
ಆ ಗುಂಡು ಕಾಯದ ಕರಸ್ಥಲದಲ್ಲಿ ನಿರ್ಭಾವವಾಗಿ,
ಕಾಯವಡಗಿ, ಭಾವವೆಂಬ ಭಾವ ಬಯಲಾಯಿತ್ತು
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎಂಬುದಕ್ಕೆ ಮುನ್ನವೆ. ॥೪೯॥

ಇಂತು ಘಟ್ಟಿವಾಳಯ್ಯಗಳು ಆ ಗುಂಡನು ಪರಬ್ರಹ್ಮವೆಂದು ತಮ್ಮ ಕಾಯದ ಕರಸ್ಥಲದಲ್ಲಿ ಅಡಗಿಸಿಕೊಳ್ಳಲು, ಅದಂ ಕಂಡು ಪ್ರಭುದೇವರು ಕೊಂಡಾಡಿದ ಪ್ರಸ್ತಾವದ ವಚನ:

೯೪೬

ಅಂಗದ ಮೇಲಣ ಲಿಂಗವ ಹಿಂಗಿದಾತನ ಭವಿಯೆಂಬರು.
ಅಂಗದ ಮೇಲಣ ಲಿಂಗವಿಪ್ಪಾತನೆ ಭಕ್ತನೆಂಬರು,
ಅಂಗದೊಳಗೆ ಬೆರಸಿಪ್ಪ ಲಿಂಗದ ಹೊಲಬನಱಿಯದೆ.
ಲಿಂಗವಿಲ್ಲದೆ ಒಂದು ಕ್ಷಣ,
ಒಂದಂಗ ಸುಳಿದುದುಂಟೆ ಜಗದೊಳಗೆ?
ಅಂಗದೊಳಗಣ ಲಿಂಗವನು ಹಿಂಗಿದವರಿಗೆ ಭವಮಾಲೆಯುಂಟು;
ಹಿಂಗದವರಿಗೆ ಭವಮಾಲೆಯಿಲ್ಲ ಗುಹೇಶ್ವರಾ. ॥೫೦॥

ಇದಕ್ಕೆ ಚೆನ್ನಬಸವರಾಜದೇವರು ಕೊಂಡಾಡಿದ ಪ್ರಸ್ತಾವದ ವಚನ:

೯೪೭

ಅಂಗದ ಮೇಲಣ ಲಿಂಗ ಹಿಂಗಿತ್ತೆಂದಾತ್ಮಘಾತಕವ
ಮಾಡಬೇಕೆಂಬ ಅಜ್ಞಾನಿಗಳು

ಅಂಗವಾವುದು, ಲಿಂಗವಾವುದೆಂದವರೆತ್ತ ಬಲ್ಲರು?
ಅಂಗವೆ ಆತ್ಮ, ಲಿಂಗವೆ ಸಂವಿತ್ತು.
ಈ ಎರಡಱ ಸಂಬಂಧ ಸಂಚ ತಿಳಿಯದೆ,
ಅಂಗ ಲಿಂಗ ಹಿಂಗಿತ್ತೆಂಬವರಿಗೆ ಪ್ರಾಣಲಿಂಗ ನಾಸ್ತಿ,
ಪ್ರಸಾದವೆಲ್ಲಿಯದೊ ಕೂಡಲಚೆನ್ನಸಂಗಮದೇವಾ? ॥೫೧॥

ಮತ್ತಂ, ಸ್ತೋತ್ರ:

೯೪೮

ಅಜೆವಱತು ಕುಱುಹು ನಷ್ಟವಾದ ಬಳಿಕ,
ಕುಱುಹಿನ ಬಣ್ಣ ಅಂಗದ ಮೇಲೇಕೋ ಘಟ್ಟಿವಾಳಂಗೆ?
ಅಜೆವನಾರು? ಅಱುಹಿಸಿಕೊಂಬವನಾರು?
ಬಜೆಯ ಬಯಲು ಕಾಣಾ.
ಕೂಡಲಚೆನ್ನಸಂಗಾ,
ನಿಮ್ಮ ಶರಣ ಘಟ್ಟಿವಾಳನಲ್ಲದೆ ನೆಱೆ ಅಜೆವವರಾರೊ? ॥೫೨॥

ಆ ಪ್ರಸ್ತಾವದೊಳು ಸಿದ್ಧರಾಮತಂದೆಗಳು ಸ್ತೋತ್ರಮಂ ಮಾಡಿದ ವಚನ:

೯೪೯

ಆದಿ ಮಧ್ಯಾಂತವ ಭೇದಿಸಿದ ಮಹಿಮನು.
ನಾದಕ್ಕತೀತನು.
ಪರಬ್ರಹ್ಮದ ಭೇದಾದಿ ಭೇದವ
ಪರತತ್ತ್ವ ಮೂಲವೆಯಾದ
ಆದಿಗುರು ಘಟ್ಟಿವಾಳ ಕಪಿಲಸಿದ್ಧಮಲ್ಲಿನಾಥ. ॥೫೩॥

ಇಂತು ಪ್ರಭುದೇವರು ಚೆನ್ನಬಸವರಾಜದೇವರು ಸಿದ್ಧರಾಮಯ್ಯದೇವರು ಘಟ್ಟಿವಾಳಯ್ಯಗಳ ಸ್ತುತಿಸುತ್ತಿರಲು, ಆ ಘಟ್ಟಿವಾಳಯ್ಯಗಳು ಪ್ರಭುದೇವರ ಸ್ತೋತ್ರಮಂ ಮಾಡಿದ ಪ್ರಸ್ತಾವದ ವಚನ:

೯೫೦

ನೀರೊಳಗೆ ಕಿಚ್ಚೆದ್ದು ನೆಳಲ ಸುಟ್ಟಿತ್ತು.
ಸುಟ್ಟ ವಿಭೂತಿಯನ್ನಿಟ್ಟುಕೊಂಡರೆ,
ಭೂಮಿ ಸತ್ತಿತ್ತು; ಆಕಾಶ ಹೊತ್ತಿತ್ತು;
ದೇವನ ದೇವತ್ವ ಕೆಟ್ಟಿತ್ತು; ದೇವಿಯ ಒಕತನ ಮುಱೆಯಿತ್ತು.
ಹೇಳಬಾರದ ಠಾವಿನಲ್ಲಿ ಕಾಣಬಾರದಲಿಂಗ ಮೂರ್ತಿಗೊಂಡಡೆ,
ನೋಡಬಾರದ ಪೂಜೆಯಾಯಿತ್ತು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ
ಪ್ರಭುದೇವರ ನಿಲವ ಕಂಡು ಇಲ್ಲ ಇಲ್ಲಾ ಎನುತಿರ್ದೆನು. ॥೫೪॥

ಮತ್ತಂ,

೯೫೧

ಯೋಗದ ಹೊಲಬ ಸಾಧಿಸಬಾರದು.
ಯೋಗವೆಂಟಱ ಹೊಲಬಲ್ಲ.
ಯೋಗ ಒಂಬತ್ತಱ ನಿಲವಲ್ಲ.
ಯೋಗವಾಱಱ ಪರಿಯಲ್ಲ.
ಧರೆಯ ಮೇಲಣ ಅಗ್ನಿ ಮುಗಿಲ ಮುಟ್ಟದೆ ಇಪ್ಪರೆ ಯೋಗ,
ಜ್ಞಾನದ ಕಂಗಳ ಬೆಳಗು ಶಶಿಯ ಮುಟ್ಟಿದವೆಂದರೆ
ಘನಮನವನೊಳಕೊಂಡುದು ಯೋಗ.
ವನಿತೆಯರಱುವರನು ಪತಿಯೊಮ್ಮೆ ಕೂಡಿ
ತಳುವಳಿದಿರಬಲ್ಲಡೆ, ಅದು ಯೋಗ.
ಘನಮಹಿಮ ಪ್ರಭುವಿನ ಸಮರಸವ ಕಂಡು,
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ ಎನುತಿರ್ದೆನು. ॥೫೫॥

ಇಂತು ಘಟ್ಟಿವಾಳಯ್ಯಗಳು ಪ್ರಭುದೇವರ ಸ್ತುತಿಸಿ, ಆ ಪ್ರಭುದೇವರು ತಾವು ಬಸವರಾಜದೇವರು ಚೆನ್ನಬಸವರಾಜದೇವರು ಸಿದ್ಧರಾಮಯ್ಯದೇವರು ಮಹಾನುಭಾವ ಸಂಗೋಷ್ಠಿಯೊಳಿರುತ್ತಿರ್ದು, ಮತ್ತೊಂದಾನೊಂದು ದಿನದಲ್ಲಿ ಆ ಘಟ್ಟಿವಾಳಯ್ಯಗಳಿಗೆ ಲಿಂಗೈಕ್ಯ ಸಮನಿಸಿ, ಆ ಕಲ್ಯಾಣ ಪಟ್ಟಣದ ಬೀದಿಯಲ್ಲಿ ಲಿಂಗೈಕ್ಯವಾಗಿರಲು, ಅಲ್ಲಿಗೆ ಬಸವರಾಜದೇವರು ಮುಖ್ಯವಾದ ಗಣಂಗಳು ಬಂದು, ಇವರ ಭಾಷೆ ಬೀಸರವೋದುದಲಾ! ಎಂದು ನೊಂದು, ಸಮಾಧಿಕ್ರೀಯ ಮಾಡಬೇಕೆಂದು ಎಲ್ಲಾ ಗಣಂಗಳು ಸರ್ವಾಂಗವ ಮುಟ್ಟಿ ಎತ್ತಿಕೊಳ್ಳಲು, ಅವರ ಸರ್ವಾಂಗವು ಮುಟ್ಟದ ಮುನ್ನವೆ ಎಲ್ಲಾ ಶರಣರ ಹಸ್ತದಲ್ಲಿ ನಿರ್ವಯಲನೈದಲು, ಎಲ್ಲರೂ ಚೋದ್ಯಂಬಡುತ್ತಿರೆ, ಆ ಪ್ರಸ್ತಾವದಲ್ಲಿ ಬಸವರಾಜದೇವರು ಆ ಘಟ್ಟಿವಾಳಯ್ಯಗಳ ಸ್ತುತಿಸಿದ ವಚನ:

೯೫೨

ಸತ್ತು ಹುಟ್ಟುವನಲ್ಲ; ಸಂದೇಹ ಸೂತಕಿಯಲ್ಲ.
ಆಕಾರ ನಿರಾಕಾರನಲ್ಲ ನೋಡಯ್ಯಾ!
ಕಾಯವಂಚಕನಲ್ಲ, ಜೀವವಂಚಕನಲ್ಲ,
ನಿರಂತರ ಸಹಜ ನೋಡಯ್ಯಾ!
ಶಂಕೆಯಿಲ್ಲದ ಮಹಾಮಹಿಮನು.
ಕೂಡಲಸಂಗನ ಶರಣನುಪಮಾತೀತ ನೋಡಯ್ಯಾ! ॥೫೬॥

ಮತ್ತಂ, ಪ್ರಭುದೇವರು ಆ ಘಟ್ಟಿವಾಳಯ್ಯಗಳ ಸ್ತುತಿಸಿದ ವಚನ:

೯೫೩

ಅಶನಕ್ಕಂಜಿ ವೇಷವನೆ ಹೊತ್ತು ತೊಳಲುವ ಹಿರಿಯರ ಗಂಡ.
ಕಾಲದ ಗಂಡ ಕರ್ಮದ ಗಂಡ.
ಲಿಂಗವಿಡಿದು ಸಾವ ಹಿರಿಯರ ಗಂಡ.

ಗೊಹೇಶ್ವರಾ, ನಿಮ್ಮ ಶರಣ ಘಟ್ಟಿವಾಳ
ಅಲ್ಲಮನಂತಿಂತೆಂಬರ ಗಂಡ. ॥೫೭॥

ಮತ್ತಂ, ಆ ಪ್ರಸ್ತಾವದೊಳು ಹಾಡಿ ಹೊಗಳಿದ ಪದಂಗಳು:

೯೫೪

ರಾಗ: ಬೌಳಿ

ದೇಹಗುಣಗಳಳಿದು ಲಿಂಗದೇಹಿಯಾದ ಶರಣನು
ಬಹಿರಂಗದ ಬಳಕೆ ಮಾಯಾಮೋಹವನು ಜಜಿದನು ॥ಪಲ್ಲವಿ॥

ಭಾವ ಬ್ರಹ್ಮವಾದ ಯತಿಗಿನ್ನಾವ ವೇಷವೇತಕೋ
ದೇಹಲಿಂಗವಾದ ಬಳಿಕಿನ್ನಾವ ಪದಗಳೇತಕೋ ॥೧॥

ಮಲವ ತೊಳೆಯಲಜಿಯದಮಲಜಲವ ತೊಳೆವೆನೆಂಬೆಯೊ
ಒಳಗೆ ಹೊಱಗೆ ಲಿಂಗವಿರಲು ತೊಳಲಿ ಬಳಲಲೇತಕೊ ॥೨॥

ಮುತ್ತು ರತ್ನ ಸಿತಕೆ ಘೃತಕೆ ಮತ್ತೆ ಪೂರ್ವಕ್ರೀಗಳುಂಟೆ
ನಿತ್ಯ ಮುಕ್ತ ಶರಣಗುಂಟೆ ಮತ್ತೆ ಪೂರ್ವ ಚರಿತವು ॥೩॥

ಬ್ರಹ್ಮ ವಿಷ್ಣು ರುದ್ರಪದದ ಪೆರ್ಮೆಗಳಿಗೆ ಎಣಿಸದಾ
ನಿರ್ಮಳದ ಲಿಂಗದಲ್ಲಿ ಸಂಬಂಧಿಸಿದ ಶರಣನು ॥೪॥

ಅಪ್ರತಿಮನಗಮ್ಯದಲ್ಲಿ ನಿಷ್ಪತಿಯನ್ನೆಯ್ದಿದಾ
ಅಪ್ರಮಾಣ ಗೊಹೇಶ್ವರನೊಳಿಪ್ಪಗಮ್ಯ ಶರಣನು ॥೫॥

ಪದ ಸಹ ವಚನ: ॥೬೨॥

ಆ ಪ್ರಸ್ತಾವದೊಳು ಚೆನ್ನಬಸವರಾಜದೇವರು ಆ ಘಟ್ಟಿವಾಳಯ್ಯಗಳ ಸ್ತೋತ್ರಮಂ ಮಾಡಿದ ಪದಂಗಳು:

೯೫೫

ರಾಗ: ದೇಶಿ

ಭಾವಿಸಿ ನಡೆದೆಹೆನೆಂದಡೆ ತಾನಾ
ಭಾವದೊಳಗೆ ತನ್ನೊಳು ಸದ್‌ಭಾವವು
ಭಾವಭೇದವಿಲ್ಲದ ಶರಣನ
ಸತುಪಥವ ನಾನೇನೆಂಬೆನು ॥ಪಲ್ಲವಿ॥

ಮಾರುಗ ಕ್ರೀಗಳೊಳಗೆ ನಿಷ್ಪತಿಯಾಗಿ
ದೇವಕ್ರೀವಿಡಿದ ಕಾರಣ
ಭಿನ್ನಭಾವವಳಿದು ಶಿವಾಚಾರವೆ ಜೀವವಾಗಿ
ಲಿಂಗದೊಳು ಬೆರಸಬಲ್ಲಡೆ ಯೋಗಿ ॥೧॥

ತದುಗತವಾಗಿ ನಿರಂತರ ನಿಜಲಿಂ-
ಗದಿ ಪರಮಾನಂದವನೆಯ್ದಿ
ಸದಮಲ ನಿರುಪಾಧಿಕನಾಗಿಪ್ಪಾ ಚರಿ
ತದಾಚಾರವನೇನೆಂಬೆನು ॥೨॥

ಧ್ಯಾನವೆ ನಿಶ್ಚಲವಾಗಿ ಶರಣನ
ಕಾಮಿತ ಭಾವಿತ ಕ್ರೀಗಳು ತಾ
ಮುನ್ನವೆ ಲಿಂಗದೊಳವಿರಳವಾಗಿ
ಸೀಮೆಯ ನೀಕರಿಸಿರ್ಪನು ॥೩॥

ಪ್ರಾಣನ ಹಸ್ತದೊಳಗಣ ಲಿಂಗ
ಲಿಂಗಭಾವ ಹಸ್ತದೊಳಗಣ ಪ್ರಾಣ
ಪ್ರಾಣಭಾವವೆನ್ನದಿಪ್ಪ ಶರಣನ
ಆಚಾರ ವಿಚಾರವನೇನೆಂಬೆನು ॥೪॥

ಒಡಲಳಿದು ಒಡಲುವಿಡಿದಾ ಕ್ರೀಗಳ
ಗಡಣವಡಗಿ ನಿರ್ದೇಹದೊಳೆಂಬ ಭಾವ-
ವೆಡೆಗೊಂಡ ನಿಷ್ಠೆಯಾಚರಣೆ
ಕೂಡಲಚೆನ್ನಸಂಗನೊಳು ಸತ್ಪಥವು ॥೫॥

ಪದ ಸಹ ವಚನ: ॥೬೭॥

[೧]ಇಂತೀ[೧] ಶ್ರೀಮತ್ ಸಕಲಗಣ ಪುರಾತನರೊಳ್ ಪ್ರಭುದೇವರು
ಮಹಾನುಭಾವಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್
ಘಟ್ಟಿವಾಳಯ್ಯಗಳ ಸಂಪಾದನೆಗಂ
ಪಂಚದಶೋಪದೇಶಂ ಸಮಾಪ್ತಂ
ಅಂತು ವಚನ ೯೫೫ ಕ್ಕಂ ಮಂಗಳ ಮಹಾ ಶ್ರೀ

೧-೧ ಇತಿ(ಮೂ)

೧೬
ಮಹಾದೇವಿಯಕ್ಕಗಳ ಸಂಪಾದನೆ

ಕಂದ:

ಪರಮ ನಿರ್ವಾಣದಿಂದಂ
ತರುಣಿ ಮಹಾದೇವಿ ಬಂದು ಪ್ರಭುವಿನ ಕರುಣವ
ನಿರುತದಿಂ ಪಡೆದು ಶಿವನೊಳು
ಬೆರಸಿದುದಂ ಪೇಳ್ವೆ ಶರಣಜನರಿಂಗೊಲವಿಂ ॥೧॥

ಅದೆಂತೆಂದೊಡಾ ಪ್ರಭುದೇವರು ಬಸವರಾಜದೇವರು ಚಿಕ್ಕದಣ್ಣಾಯಕರು ಸಿದ್ಧರಾಮಯ್ಯದೇವರು, ಘಟ್ಟಿವಾಳಯ್ಯಗಳು ನಿರ್ವಯಲ ಸಮಾಧಿಯನೆಯ್ದಿದುದಂ ಕಂಡು ಹರುಷಾನಂದಶರಧಿಯೊಳ್ ತೇಂಕಾಡುತ್ತ ಮಹಾನುಭಾವಗೋಷ್ಠಿಯಂ ಮಾಡುತ್ತಿರಲು, ಕೆಲಬಲದಲ್ಲಿದ್ದ ಸೊಡ್ಡಳಬಾಚರಸರು ಹಡದಪ್ಪಣ್ಣಗಳು ಪಡಿಹಾರಿ ಉತ್ತಣ್ಣ ಅಕ್ಕನಾಗಾಯಿಗಳು ಮೋಳಿಗೆ ಮಾರಯ್ಯ ಡೋಹರ ಕಕ್ಕಯ್ಯ ಕಿನ್ನರ ಬೊಮ್ಮಣ್ಣ ಕನ್ನದ ಮಾರಯ್ಯ ಮಿಂಡಮಲ್ಲಿನಾಥ ಕೋಲಶಾಂತಯ್ಯ ಮೊಗವಾಡದ ಕೇಶಿರಾಜದೇವರು ಖಂಡೆಯದ ಕೇಶಿರಾಜದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳೆಲ್ಲರೂ ಮಹಾನುಭಾವಪ್ರಸಂಗಮಂ ಕೇಳಿ, ನಿತ್ಯ ನಿಜತತ್ತ್ವದಲ್ಲಿ ಸಮರಸರಾಗಿ ಪರಮಾನಂದದಲ್ಲಿ ಓಲಾಡುತ್ತಿರಲು,

ಇತ್ತಲು ಪರಮೇಶ್ವರನ ನಿರೂಪದಿಂದ ಒಬ್ಬ ರುದ್ರಕನ್ನಿಕೆ ಮರ್ತ್ಯದಲ್ಲೊಗೆದು, ಉಡುತಡಿಯ ಮಹಾದೇವಿಯಕ್ಕನೆಂಬ ನಾಮವಂ ಧರಿಸಿ, ಲಿಂಗಧಾರಣವಾಗಲೊಲ್ಲೆನೆಂದ ಭವಿಯಂ ಸೋಂಕದೆ, ಅಂಗಸಂಗಮಂ ತೊಱೆದು ಲಿಂಗಸಂಗದೊಳು ಅವಿರಳ ಸಂಗಿಯಾಗಿ, ತನ್ನ ದಿವ್ಯ ರೂಪ ಲಾವಣ್ಯವನೆಡೆಗೊಂಡು, ಷೋಡಶಪ್ರಾಯದ ಯೌವನದ ಸುಖದ ಸುಗ್ಗಿ ಶಿವನೊಳ್ಪರವಶವನೆಯ್ದಿ, ಸರ್ವ ಕರಣಂಗಳ ಅಱುಹಿಂಗಾಹುತಿಯನಿಕ್ಕಿ, ದಿಗಂಬರದುಡಿಗೆಯನುಟ್ಟು, ತನ್ನ ಕೇಶವೆಂಬಂಬರಮಂ ಮುಸುಕಿಟ್ಟು, ಕರಸ್ಥಲದೊಳಗಿಪ್ಪ ಇಷ್ಟಲಿಂಗದೊಳ್ ದೃಷ್ಟಿ ನಟ್ಟು, ಮನ ಮುಟ್ಟಯಿಸಿ, ಭಾವ ಕಱೆಗೊಂಡು, ಲೌಕಿಕಲಜ್ಜಾಭಿಮಾನ ಭಾವಮಂ ತೊಱೆದು, ಭವಸಾಗರಮಂ ದಾಂಟಿ, ಚೆನ್ನಮಲ್ಲಿಕಾರ್ಜುನ ವಿಕಳಾವಸ್ಥೆಯೊಳು ತನ್ನ ಮಱೆದು, ಇತರಮಂ ಪಱೆದು, ಮಹಾವೈರಾಗ್ಯಮಂ ಬೀಱುತ್ತ ಕರುಣರಸಮಂ ಹೇಱುತ್ತ, ನಿಶ್ಚಲಬುದ್ಧಿಯನೆಡೆಗೊಂಡು, ಭಕ್ತಿಯ ಭಾಗ್ಯವೆನಿಪ ಮುಕ್ತಿಯ ತವರ್ಮನೆಯೆನಿಪ ಶಿವಭಾವಸಂಪನ್ನೆ, ಪ್ರಸಾದದ ಮೇರುವೆ, ತತ್ತ್ವ ಶಿಖಾಮಣಿ, ಪುಣ್ಯದ ಪುಂಜೆ,

ನೈಷ್ಠೆಯ ಕಣಿ, ಸತ್ಯದ ಸದನ, ಶಾಂತಿಯ ನಿಧಿ, ಚಿದಂಬರ ಸಂಯುತೆ, ಸ್ವಾನುಭಾವದ ಸಾಗರೆ, ನಿತ್ಯದ ನಿವಾಸೆ ಎನಿಪ ಮಹಾದೇವಿಯಕ್ಕಗಳು ಶಿವಸುಖಾಳಾಪಂಗೆಯ್ಯುತ್ತ, ಪ್ರತ್ಯಕ್ಷ ಮುಕ್ತ್ಯಂಗನೆಯ ಸುಳುಹು ದಿಟದಿಟವೆನಿಸಿ, ಸಕಲ ಲೋಕಂಗಳಂ ಪಾವನವ ಮಾಡುತ್ತ, ಮುಟ್ಟಿದುದು ಪರುಷ, ಮೆಟ್ಟಿದ ಧರೆ ಪಾವನ, ನೋಡಿತ್ತೆಲ್ಲಾ ಪವಿತ್ರ, ನುಡಿದುದೆಲ್ಲಾ ಶಿವತತ್ತ್ವ, ನಡೆದುದೆಲ್ಲಾ ಶಿವಮಾರ್ಗ, ನೆರೆದುದೆ ದೇವಸಭೆಯಾಗಿ, ಸಕಲಕ್ಷೇತ್ರಂಗಳಂ ಪಾವನವ ಮಾಡುತ್ತ, ತನ್ನ ಕೇಳ್ದು ಕಂಡು ಕೈಮುಗಿದು ಸಕಲ ಜನಂಗಳೆಲ್ಲರ ಕೃತಾರ್ಥರಂ ಮಾಡುತ್ತ ಬಪ್ಪಾಗಳು, ಇತ್ತ ಬಸವಣ್ಣ ಚೆನ್ನಬಸವಣ್ಣ ಪ್ರಭುದೇವರು ಮುಖ್ಯವಾದ ಅಸಂಖ್ಯಾತರ ಮಧ್ಯದಲ್ಲಿ ಆ ಬಸವರಾಜದೇವರು ಪ್ರಭುದೇವರೊಡನೆ ಎನ್ನ ಹೆತ್ತ ತಾಯಿ ಅಕ್ಕಮಹಾದೇವಿಯರು ವಿರಕ್ತಿಯಿಂದ ದಿಗಂಬರೆಯಾಗಿ ಕಾಮಾರಿಯಾಗಿ ಬರುತ್ತಿರ್ದಪಳೆಂದು ಬಿನ್ನೈಸಿ, ಆ ಪ್ರಭುದೇವರು ಸಕಲಪ್ರಮಥರಿಗೆ ಕಾಮಸಂಹಾರಿ ಎಂಬುದಂ ಪ್ರತ್ಯಕ್ಷವ ತೋಱಬೇಕೆಂದು ಭಕ್ತಿವಿಸ್ತಾರದಿಂದ ಕಿನ್ನರಯ್ಯಗಳಂ ಒಪ್ಪಿ ಕಳುಹಲು, ಆ ಪರಮಜ್ಞಾನಿಯಪ್ಪ ಕಿನ್ನರಯ್ಯಗಳು ದಳದಳನೆ ಇದಿರಿನಲಿ ಬಂದು ಕಂಡು, ಆ ಮಹಾದೇವಿಯಕ್ಕಗಳ ಒರೆದು ನೋಡುವ ಪ್ರಸ್ತಾವದ ವಚನ:

೯೫೬

ಕಾಯದಲ್ಲಿ ಕಳವಳವಿರಲು, ಪ್ರಾಣದಲ್ಲಿ ಮಾಯೆಯಿರಲು,
ಏತಱ ಮನ? ಇದೇತಱ ನಿರ್ವಾಣ?
ಮಹಾಲಿಂಗ ತ್ರಿಪುರಾಂತಕನು ನಿನ್ನ ಸಂಸಾರಿಯೆಂಬನಲ್ಲದೆ
ಸಜ್ಜನೆಯೆಂದು ಕೈವಿಡಿವನಲ್ಲ ಕೇಳಾ ಮರುಳೆ. ॥೧॥

ಮತ್ತಂ, ಕಿನ್ನರಯ್ಯಗಳು ಭಕ್ತಿಭಾವದಿಂದ ಸರ್ವಾಂಗಮಂ ಪರೀಕ್ಷಿಸಿ ನೋಡಲು, ಆ ಮಹಾದೇವಿಯಕ್ಕಗಳು ತಮ್ಮ ಅಂತರಂಗದ ಜ್ಞಾನಾಗ್ನಿಯೊಳಾ ಕಾಮನಂ ಸುಟ್ಟು ಭಸ್ಮಮಂ ಮಾಡಿತೋಱಿದ ಪ್ರಸ್ತಾವದ ವಚನ:

೯೫೭

ಅಂಗದ ಭಂಗವ ಲಿಂಗಮುಖದಿಂದ ಗೆಲಿದೆ.
ಮನದ ಭಂಗವ ಅಱುಹಿನ ಮುಖದಿಂದ ಗೆಲಿದೆ.
ಜೀವದ ಭಂಗವ ಶಿವಾನುಭಾವದಿಂದ ಗೆಲಿದೆ.
ಕರಣದ ಕತ್ತಲೆಯ ಬೆಳಗನುಟ್ಟು ಗೆಲಿದೆ.
ಜವ್ವನದ ಹೊಱಮಿಂಚಿನಲ್ಲಿ ಕಣ್ಣಿಂಗೆ ತೋಱುವ
ಕಾಮನ ಸುಟ್ಟುರುಹಿದ ಭಸ್ಮವ ನೋಡಯ್ಯಾ!
ಚೆನ್ನಮಲ್ಲಿಕಾರ್ಜುನ ಕಾಮನ ಕೊಂದು ಮನಸಿಜನಾಗುಳುಹಿದರೆ,
ಮನಸಿಜನ ತಲೆಯ ಬರಹವ ತೊಡೆದೆನು. ॥೨॥

ಇಂತು ಕಾಮನಂ ಸುಟ್ಟು ಭಸ್ಮಮಂ ಮಾಡಿದ ಎನಗೆ ಲಿಂಗವೆ ಪುರುಷ, ನೀನೆ ಎನಗೆ ಒಡಹುಟ್ಟಿದನೆಂದು ನುಡಿದ ಪ್ರಸ್ತಾವದ ವಚನ:

೯೫೮

ಎನ್ನಂತೆ ಪುಣ್ಯಂಗೆಯ್ದವರುಂಟೆ?
ಎನ್ನಂತೆ ಭಾಗ್ಯಂಗೆಯ್ದವರುಂಟೆ? ಕಿನ್ನರನಂತಪ್ಪ ಸೋದರನೆನಗೆ.

ಏಳೇಳು ಜನ್ಮದಲ್ಲಿ ಶಿವಭಕ್ತರೆ ಬಂಧುಗಳೆನಗೆ
ಚೆನ್ನಮಲ್ಲಿಕಾರ್ಜುನನಂತಪ್ಪ ಗಂಡ ನೋಡಾ ಎನಗೆ! ॥೩॥

ಈ ಹೀಂಗೆಂದು ಮಹಾದೇವಿಯಕ್ಕಗಳು ಆ ಕಿನ್ನರಯ್ಯಗಳಂ ಬೀಳ್ಕೊಂಡು, ಕಲ್ಯಾಣದತ್ತಲಭಿಮುಖವಾಗಿ ನಡೆತಂದು ತತ್ಪುರಮಂ ಕಂಡ ಪ್ರಸ್ತಾವದ ವಚನ:

೯೫೯

ಕಲ್ಯಾಣವೆಂಬುದನಾರಿಗೆ ಹೊಗಬಾರದು,
ಹೊಗಬಾರದು, ಹೊಗಬಾರದು! ಅಸಾಧ್ಯವಯ್ಯಾ.
ಆಸೆಯಾಮಿಷವನಳಿದವಂಗಲ್ಲದೆ ಕಲ್ಯಾಣದತ್ತಲಡಿ ಇಡಬಾರದು.
ಒಳಹೊಱಗು ಶುದ್ಧವಾದವರಿಗಲ್ಲದೆ ಕಲ್ಯಾಣವ ಹೊಗಬಾರದು.
ನೀ ನಾನೆಂಬುದ ಹಱಿದವಂಗಲ್ಲದೆ ಕಲ್ಯಾಣವ ಹೊಗಬಾರದು
ಚೆನ್ನಮಲ್ಲಿಕಾರ್ಜುನಂಗೊಲಿದು ಉಭಯಲಜ್ಜೆಯಳಿದೆನಾಗಿ,
ಕಲ್ಯಾಣವ ಕಂಡು ನಮೋ ನಮ್ಮೊ ಎನುತಿರ್ದೆನು! ॥೪॥

ಇಂತು ಕಲ್ಯಾಣಮಂ ಕಂಡು ಒಳಹೊಕ್ಕು ಬರುತಿರ್ಪಾಗಳು ಬಸವರಾಜದೇವರ ಮಹಾತ್ಮೆಯಂ ಕೊಂಡಾಡುತ್ತಿರ್ದ ಪ್ರಸ್ತಾವದ ವಚನ:

೯೬೦

ಅಯ್ಯಾ, ನಿಮ್ಮ ಶರಣರು ಮೆಟ್ಟಿದ ಧರೆ ಪಾವನವಯ್ಯಾ.
ಅಯ್ಯಾ, ನಿಮ್ಮ ಶರಣರು ಇದ್ದ ಪುರವೆ ಕೈಲಾಸಪುರವಯ್ಯ.
ಅಯ್ಯಾ, ನಿಮ್ಮ ಶರಣರು ನಿಂದುದೆ ನಿಜನಿವಾಸವಯ್ಯಾ.
ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣ ಬಸವಣ್ಣನಿದ್ದ ಕ್ಷೇತ್ರ ಅವಿಮುಕ್ತಕ್ಷೇತ್ರವಾಗಿ,
ಆನು ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು! ॥೫॥

ಇಂತು ಬಸವರಾಜದೇವರ ಮಹಾತ್ಮೆಯಂ ಕೊಂಡಾಡುತ್ತ ಬಂದು, ಆ ಬಸವರಾಜದೇವರ ನಿಜನಿವಾಸಮಂ ಪೊಕ್ಕು, ಪ್ರಭುದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳೊಳ್ ಪರಮಾನಂದ[1]ಸಂಗಿಯಾಗಿಪ್ಪ ಆ ಸಂಗನಬಸವಣ್ಣನ ಶ್ರೀಮೂರ್ತಿಯನು ಮಹಾದೇವಿಯಕ್ಕಗಳು ಕಂಡ ಪ್ರಸ್ತಾವದ ವಚನ:

೯೬೧

ಅಱಿಸಿ ತೊಳಲಿದರಿಲ್ಲ, ಹರಸಿ ಬಳಲಿದರಿಲ್ಲ.
ಬಯಸಿ ಹೊಕ್ಕರಿಲ್ಲ, ತಪಸು ಮಾಡಿದರಿಲ್ಲ.
ಅದು ತಾನಹ ಕಾಲಕ್ಕಲ್ಲದೆ ಸಾಧ್ಯವಾಗದು.
ಶಿವನೊಲಿದಲ್ಲದೆ ಕೈಗೂಡದು.
ಚೆನ್ನಮಲ್ಲಿಕಾರ್ಜುನನೆನಗೊಲಿದನಾಗಿ
ಸಂಗನಬಸವಣ್ಣನ ಶ್ರೀಪಾದವ ಕಂಡು ಬದುಕಿದೆನು! ॥೬॥

---

೧ + ಸಂದ (ಮೂ)

ಮತ್ತಂ,

೯೬೨

ಅಯ್ಯಾ, ನಿಮ್ಮ ಸಜ್ಜನ ಸದ್ಭಕ್ತರ ಕಂಡೆನಾಗಿ,
ಎನ್ನ ಕಂಗಳ ಪಟಲ ಹಱೆಯಿತ್ತಿಂದು.
ಅಯ್ಯಾ, ನಿಮ್ಮ ಸಜ್ಜನ ಸದ್‌ಭಾವರ ಶ್ರೀಚರಣಕ್ಕೆಱಗಿದೆನಾಗಿ,
ಎನ್ನ ಹಣೆಯ ಲಿಖಿತ ತೊಡೆಯಿತ್ತಿಂದು.
ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣ ಸಂಗನಬಸವಣ್ಣನ ಪಾದವ ಕಂಡು
ಮಿಗೆ ಮಿಗೆ ನಮೋ ನಮೋ ಎನುತಿರ್ದೆನು! ॥೭॥

ಇಂತು ಮಹಾದೇವಿಯಕ್ಕಗಳು ಬಸವರಾಜದೇವರ ಶ್ರೀಪಾದಮಂ ದರ್ಶನ ಮಾಡಿ ನಮಸ್ಕರಿಸಿ ನಿಂದಿರಲು, ಆ ಪ್ರಸ್ತಾವದೊಳು ಬಸವರಾಜದೇವರು ಮಹಾದೇವಿಯಕ್ಕನಂ ಕಂಡು ಪ್ರಭುದೇವರಿಗೆ ತೋಱಿ ನುಡಿದ ಪ್ರಸ್ತಾವದ ವಚನ:

೯೬೩

ಕಾಯದ ಲಜ್ಜೆಯ ಕಲ್ಪಿತವ ಕಳೆದು,
ಜೀವದ ಲಜ್ಜೆಯ ಮೋಹವನಳಿದು,
ಮನದ ಲಜ್ಜೆಯ ನೆನಹ ಸುಟ್ಟು,
ಭಾವದ ಕೂಟ ಬತ್ತಲೆಯೆಂದಱಿದು,
ತವಕದ ಸ್ನೇಹ ವ್ಯವಹಾರಕ್ಕೆ ಹುಗದು.
ಕೂಡಲಸಂಗಮದೇವಯ್ಯಾ,
ಎನ್ನ ಹೆತ್ತ ತಾಯಿ ಮಹಾದೇವಿಯಕ್ಕನ ನಿಲವ ನೋಡಯ್ಯಾ ಪ್ರಭುವೆ. ॥೮॥

ಮತ್ತಂ,

೯೬೪

ರೂಹಿಲ್ಲದಂಗೆ ಒಲಿದವರಿಗೆ ತನುವಿನ ಹಂಗುಂಟೆ?
ಮನವಿಲ್ಲದವಂಗೆ ಮಚ್ಚಿದವರಿಗೆ ಅಭಿಮಾನದ ಹಂಗುಂಟೆ?
ದಿಗಂಬರಂಗೆ ಒಲಿದವರಿಗೆ ಕೌಪೀನದ ಹಂಗುಂಟೆ?
ಕೂಡಲಸಂಗಮದೇವಯ್ಯಾ,
ಮಹಾದೇವಿಯಕ್ಕನೆಂಬ ಭಕ್ತೆಗೆ
ಆವ ಹೊಱಿಯೂ ಇಲ್ಲ ನೋಡಾ ಪ್ರಭುವೆ! ॥೯॥

ಈ ಹೀಂಗೆಂದು ಬಸವರಾಜದೇವರು ಪ್ರಭುದೇವರಿಗೆ ಮಹಾದೇವಿಯಕ್ಕನ ನಿಲವನೊರೆದೊರೆದು ಹೇಳಿ ತೋಱಲು, ಆ ಪ್ರಭುದೇವರು ಮಹಾದೇವಿಯಕ್ಕನ ಅನುಭಾವಸುಖಮುಖದಿಂದ ನುಡಿಸುವ ಪ್ರಸ್ತಾವದ ವಚನ:

೯೬೫

ಉದಮದದ ಯೌವನವನೊಳಕೊಂಡ ಸತಿ
ನೀನು ಇತ್ತಲೇಕೆ ಬಂದೆಯವ್ವಾ?

ಸತಿಯೆಂದರೆ ಮುನಿವರು ನಮ್ಮ ಶರಣರು.
ನಿನ್ನ ಪತಿಯ ಕುಱುಹ ಹೇಳಿದರೆ ಬಂದು ಕುಳ್ಳಿರು.
ಅಲ್ಲದಿರೆ ತೊಲಗು ತಾಯೆ.
ನಮ್ಮ ಗೊಹೇಶ್ವರನ ಶರಣರಲ್ಲಿ
ಸಂಗಸುಖಸನ್ನಿಹಿತವ ಬಯಸುವರೆ,
ನಿನ್ನ ಪತಿಯಾರೆಂಬುದ ಹೇಳಾ ಎಲೆ ಅವ್ವಾ. ॥೧೦॥

ಮತ್ತಂ,

೯೬೬

ಕಾಯ ಸತಿಯೆಂದು ಹೇಸಿ ಕಳೆದೆ.
ವಾಯದ ಮನ ಮಾಯೆಯೆಂದು ಹೇಸಿ ಬಿಟ್ಟೆ.
ವಾಯದ ಸತಿಯೆಂಬ ಸಂದೇಹವೆಮಗೇಕೆ?
ಸತಿಯರ ಗೋಷ್ಠಿ ವಿಷ ಕಾಣವ್ವಾ.
ಗೊಹೇಶ್ವರಲಿಂಗದಲ್ಲಿ ನಿನ್ನ ಪತಿಯ ಕುಱುಹ ಹೇಳಾ ಎಲೆ ಅವ್ವಾ ॥೧೧॥

ಈ ಹೀಂಗೆಂದು ಪ್ರಭುದೇವರು ಮಹಾದೇವಿಯಕ್ಕಗಳ ಬೆಸಗೊಳಲು, ಆ ಮಹಾದೇವಿಯಕ್ಕಗಳು ತನ್ನ ಪತಿಯ ಕುಱುಹ ಬಿನ್ನಹಮಂ ಮಾಡುವ ಪ್ರಸ್ತಾವದ ವಚನ:

೯೬೭

ಹರನೆ, ನೀನೆನಗೆ ಗಂಡನಾಗಬೇಕೆಂದು
ಅನಂತಕಾಲ ತಪಸಿದ್ದೆ ನೋಡಾ!
ಹಸೆಯ ಮೇಲಣ ಮಾತ ಬೆಸಗೊಳಲಟ್ಟಿದರೆ,
ಶಶಿಧರನ ಹತ್ತಿರಿಗೆ ಕಳುಹಿದರೆಮ್ಮವರು,
ಭಸ್ಮವನೆ ಹೂಸಿ, ಕಂಕಣವನೆ ಕಟ್ಟಿ,
ಚೆನ್ನಮಲ್ಲಿಕಾರ್ಜುನ ತನಗೆ ನಾನಾಗಬೇಕೆಂದು. ॥೧೨॥

ಮತ್ತಂ,

೯೬೮

ಪಚ್ಚೆಯ ನೆಲೆಗಟ್ಟು, ಕನಕದ ತೋರಣ,
ವಜ್ರದ ಕಂಭ, ಪವಳದ ಚಪ್ಪರವಿಕ್ಕಿ
[1]ಮುತ್ತು ಮಾಣಿಕದ ಮೇಲುಕಟ್ಟುಕಟ್ಟಿ[1]
ಮದುವೆಯ ಮಾಡಿದರು;
ನಮ್ಮವರೆನ್ನ ಮದುವೆಯ ಮಾಡಿದರು.
ಕಂಕಣ ಕೈಧಾರೆ ಸ್ಥಿರಸೇಸೆಯನಿಕ್ಕಿ,
ಚೆನ್ನಮಲ್ಲಿಕಾರ್ಜುನನೆಂಬ ಗಂಡಗೆನ್ನ ಮದುವೆಯ ಮಾಡಿದರು. ॥೧೩॥

೧–೧ x (ಮೂ)

ಮತ್ತಂ,

೯೬೯

ಗುರುವೆ ತೆತ್ತಿಗನಾದ, ಲಿಂಗವೆ ಮದುವಳಿಗನಾದ.
ನಾನೆ ಮದವಳಿಗೆಯಾದೆನು.
ಈ ಭುವನವೆಲ್ಲಱಿಯಲು ಅಸಂಖ್ಯಾತರೆನಗೆ ತಾಯಿ ತಂದೆಗಳು.
ಕೊಟ್ಟರು ಪ್ರಭುವಿನ ಮನೆಗೆ ಸಾದೃಶ್ಯವಪ್ಪ ವರನ ನೋಡಿ.
ಇದು ಕಾರಣ ಚೆನ್ನಮಲ್ಲಿಕಾರ್ಜುನ ಗಂಡನೆನಗೆ.
ಮಿಕ್ಕಿನ ಲೋಕದವರೆನಗೆ ಸಂಬಂಧವಿಲ್ಲವಯ್ಯಾ ಪ್ರಭುವೆ. ॥೧೪॥

ಈ ಹೀಂಗೆಂದು ಮಹಾದೇವಿಯಕ್ಕಗಳು ತಮ್ಮ ಪತಿಯ ಕುಱುಹ ಹೇಳಲು, 'ಆದರೆ ನೀನು ಕೌಶಿಕನೆಂಬ ಭವಿಯ ಮೇಲೆ ಲಿಂಗಧಾರಣವಾಗದ ತಪ್ಪ ಹೊಱಿಸಿ, ನಿರ್ವಾಣವಾಗಿ ಬಹಲ್ಲಿ ಕೇಶ ಮರೆಯಾದರೆ ಅಭಿಮಾನ ಹಱಿಯದೆ'ಂದು ನಿರೂಪಿಸಿದ ಪ್ರಸ್ತಾವದ ವಚನ:

೯೭೦

ತಪ್ಪ ಹೊಱಿಸಿ ಹೊರಟಿಹೆನೆಂಬುದು ಸತ್ಯವೆ?
ತನು ಸೀರೆಯನಳಿದು ನಿರ್ವಾಣವಾದಲ್ಲಿ,
ಮನದ ಭ್ರಾಂತು ನಿಶ್ಚಯವಾಗದು.
ಕೇಶವೆಂಬ ಸೀರೆ ಅಂಗಕ್ಕೆ ಮಱೆಯಾಯಿತ್ತು.
ಅಪಮಾನವೆಂತು ಹಱಿಯಿತ್ತು?
ಅದು ಗೊಹೇಶ್ವರಲಿಂಗಕ್ಕೆ ಸಲ್ಲದ ವೇಷ. ॥೧೫॥

ಇದಕ್ಕೆ ಮಹಾದೇವಿಯಕ್ಕಗಳ ಬಿನ್ನಹ:

೯೭೧

ಕಾಯ ಕಱ್ರನೆ ಕಂದಿದಡೇನಯ್ಯಾ?
ಕಾಯ ಮಿಱ್ರನೆ ಮಿಂಚಿದಡೇನಯ್ಯಾ?
ಅಂತರಂಗ ಶುದ್ಧವಾದ ಬಳಿಕ,
ಚೆನ್ನಮಲ್ಲಿಕಾರ್ಜುನಲಿಂಗವು ಒಲಿದ ಕಾಯವು
ಹೇಗಿದ್ದಡೇನಯ್ಯಾ? ॥೧೬॥

ಇದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೯೭೨

ದೇವನೊಲಿದ ನೀನೊಲಿದೆನೆಂಬುದು ಅದಾವುದಕ್ಕೆ?
ಭಾವ ಶುದ್ಧವಾದಲ್ಲಿ ಸೀರೆಯನಳಿದು ಕೂದಲು ಮಱಿಸಲೇತಕ್ಕೆ?
ಅದು ಅಂತರಂಗದ ನಾಚಿಕೆ ಬಾಹ್ಯದಲ್ಲಿ ತೋಱಿತ್ತು.
ಅದು ಗೊಹೇಶ್ವರಲಿಂಗಕ್ಕೆ ಒಲವರವಲ್ಲ. ॥೧೭॥

ಇದಕ್ಕೆ ಮಹಾದೇವಿಯಕ್ಕಗಳ ಬಿನ್ನಹ:

೯೭೩

ಫಲ ಒಳಗೆ ಪಕ್ವವಾಗಿಯಲ್ಲದೆ, ಹೊಱಗಣ ಸಿಪ್ಪೆ ಒಪ್ಪಗೆಡದು.
ಕಾಮನ ಮುದ್ರೆಯ ಕಂಡು ನಿಮಗೆ ನೋವಾದಿಹಿತೆಂದು,
ಆ ಭಾವದಿಂದ ಮುಚ್ಚಿದೆ; ಇದಕ್ಕೆ ನೋವೇಕೆ?
ಕಾಡದಿರಣ್ಣಾ, ಚೆನ್ನಮಲ್ಲಿಕಾರ್ಜುನದೇವರದೇವನ ಒಳಗಾದವಳಾ. ॥೧೮॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರದ ವಚನ:

೯೭೪

ನೀ ದೇವರೊಳಗೊ? ದೇವರು ನಿನ್ನೊಳಗೊ?
ಎಂಬ ಠಾವನಱಿಯೆ.
ಸಿಪ್ಪೆ ಒಪ್ಪಗೆಟ್ಟಾಗ ಹಣ್ಣಿನ ರಸ ಕೊಳಕಾಯಿತ್ತು.
ಅದು ಗೊಹೇಶ್ವರನೊಪ್ಪದ ಮಾತು. ॥೧೯॥

ಇದಕ್ಕೆ ಮಹಾದೇವಿಯಕ್ಕಗಳ ಬಿನ್ನಹ:

೯೭೫

ಗುಣದೋಷವ ಸಂಪಾದನೆಯ ಮಾಡುವನ್ನಕ್ಕ
ಕಾಮದ ಒಡಲು, ಕ್ರೋಧದ ಗೊತ್ತು, ಲೋಭದ ಇಕ್ಕೆ,
ಮೋಹದ ಮಂದಿರ, ಮದದ ಆವರಣ, ಮತ್ಸರದ ಹೊದಿಕೆ.
ಆ ಭಾವವಱತಲ್ಲದೆ ಚೆನ್ನಮಲ್ಲಿಕಾರ್ಜುನನ ಅರಿವುದಕ್ಕಿಂಬಿಲ್ಲ,
ಎಲೆ ಅಣ್ಣಗಳಿರಾ. ॥೨೦॥

ಇದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೯೭೬

ಕಾಮದಿಂದ ಕಂಡ, ಕ್ರೋಧದಿಂದ ಅಸ್ಥಿ,
ಲೋಭದಿಂದ ಸಕಲ ವಿಷಯಂಗಳು.
ಮೋಹದಿಂದ ನೋಡಿಹೆನೆಂಬುದೆಲ್ಲವು ಕಾಮನ ಬಲೆಯೊಳಗು.
ಕಾಮನ ಗೆದ್ದ ಠಾವಾವುದು ಹೇಳಾ ಗೊಹೇಶ್ವರಲಿಂಗಕ್ಕೆ? ॥೨೧॥

ಇದಕ್ಕೆ ಮಹಾದೇವಿಯಕ್ಕಗಳ ಬಿನ್ನಹ:

೯೭೭

ಕೆಂಡದ ಶವದಂತೆ, ಸೂತ್ರ ತಪ್ಪಿದ ಬೊಂಬೆಯಂತೆ,
ಜಲವಱತ ತಟಾಕದಂತೆ, ಬೆಂದ ನುಲಿಯಂತೆ,
ಮತ್ತೆ ಹಿಂದಣಂಗ ಉಂಟೆ ಅಣ್ಣಾ,
ಚೆನ್ನಮಲ್ಲಿಕಾರ್ಜುನನಂಗವೆ ಆಶ್ರಯವಾದವಳಿಗೆ? ॥೨೨॥

ಇಂತು ಮಹಾದೇವಿಯಕ್ಕಗಳು ನಾನು ನಿಃಕಾಮಿಯಾಗಿ ನಿರಾಕಾರಬ್ರಹ್ಮವನೆ ಕೈವಿಡಿದೆನೆಂದು ನಿರೂಪಿಸುವ ಪ್ರಸ್ತಾವದ ವಚನ:

೯೭೮

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ,
ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೆ
ನಾನೊಲಿದೆನಯ್ಯಾ. ಚೆನ್ನಮಲ್ಲಿಕಾರ್ಜುನ ಗಂಡನೆನಗೆ.
ಮಿಕ್ಕಿನ ಲೋಕದ ಗಂಡರೆನಗೆ ಸಂಬಂಧವಿಲ್ಲವಯ್ಯಾ. ॥೨೩॥

ಈ ಹೀಂಗೆಂದು ಮಹಾದೇವಿಯಕ್ಕಗಳು ಬಿನ್ನೈಸಲು ಇದಕ್ಕೆ ಪ್ರಭುದೇವರು ಆ ಉತ್ತರಮಂ ಖಂಡಿಸಿ ನುಡಿದ ಪ್ರಸ್ತಾವದ ವಚನ:

೯೭೯

ರೂಪಿಂಗೆ ಕೇಡುಂಟು; ನಿರೂಪಿಂಗೆ ಕೇಡಿಲ್ಲ.
ರೂಪು ನಿರೂಪನೊಡಗೂಡುವ ಪರಿ ಎಂತು ಹೇಳಾ?
ಅಸಂಬಂಧ ಸಂಬಂಧವಾಗಿ ಇದೆ.
ದೇಹ ಇಂದ್ರಿಯವೆಂಬ ಜಾತಿಸೂತಕವಿರಲು,
ಗೊಹೇಶ್ವರಲಿಂಗವ ಮುಟ್ಟಬಾರದು ಕೇಳವ್ವಾ. ॥೨೪॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಮಹಾದೇವಿಯಗಳು ಬಿನ್ನೈಸುವ ಪ್ರಸ್ತಾವದ ವಚನ:

೯೮೦

ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲರೆ,
ಹಾವಿನ ಸಂಗವೆ ಲೇಸು ಕಂಡಯ್ಯಾ.
ಕಾಯದ ಸಂಗವ ವಿವರಿಸಬಲ್ಲರೆ,
ಕಾಯದ ಸಂಗವೆ ಲೇಸು ಕಂಡಯ್ಯಾ.
ತಾಯಿ ರಕ್ಕಸಿಯಾದಂತೆ ಕಾಯವಿಕಾರವು,
ಚೆನ್ನಮಲ್ಲಕಾರ್ಜುನಯ್ಯಾ,
ನೀನೊಲಿದವರ ಕಾಯಗೊಂಡಿದ್ದರೇನಬೇಡಾ. ॥೨೫॥

ಈ ಉತ್ತರಕ್ಕೆ ಪ್ರಭುದೇವರ ವಚನ:

೯೮೧

ತನುಗುಣವ ವಿವರಿಸಿಹೆನೆಂದರೆ, ಮನ ಶುದ್ಧವಾಗಬೇಕು.
ಮನದ ಗುಣವ ವಿವರಿಸಿಹೆನೆಂದರೆ,
ಇಂದ್ರಿಯ ಶುದ್ಧವಾಗಬೇಕು.
ತನು ಮನ ಇಂದ್ರಿಯಂಗಳು ಶುದ್ಧ ಸುಯಿಧಾನವಾಗಿ
ಲಿಂಗಮುಖಕ್ಕೆ ವೇದ್ಯವಾದಲ್ಲದೆ
ಗೊಹೇಶ್ವರನ ಬೆರಸಬಾರದು ಕೇಳಾ ತಾಯೆ. ॥೨೬॥

ಈ ಉತ್ತರಕ್ಕೆ ಮಹಾದೇವಿಯಕ್ಕಗಳು ಕೊಟ್ಟ ಪ್ರತ್ಯುತ್ತರ:

೯೮೨

ತನು ಶುದ್ಧವಾಯಿತ್ತು, ಶಿವಭಕ್ತರೊಕ್ಕುದ ಕೊಂಡೆನ್ನ,
ಮನ ಶುದ್ಧವಾಯಿತ್ತು, ಅಸಂಖ್ಯಾತರ ನೆನೆದೆನ್ನ.
ಕಂಗಳು ಶುದ್ಧವಾಯಿತ್ತು, ಸಕಲ ಪುರಾತರ ನೋಡಿಯೆನ್ನ
ಶ್ರೋತ್ರ ಶುದ್ಧವಾಯಿತ್ತು, ಅವರ ಕೀರ್ತಿಯ ಕೇಳಿಯೆನ್ನ.
ಭಾವನೆಯೆನಗಿದು ಜೀವನವು ಕೇಳಾ ಲಿಂಗತಂದೆ.
ನೆಟ್ಟನೆ ನಿಮ್ಮುವ ಪೂಜಿಸಿ ಭವಗೆಟ್ಟೆನು ಕಾಣಾ
ಚೆನ್ನಮಲ್ಲಿಕಾರ್ಜುನಾ. ॥೨೭॥

ಮತ್ತಂ,

೯೮೩

ಬಸವಣ್ಣನ ಪಾದವ ಕಂಡೆನಾಗಿ,
ಎನ್ನಂಗ ನಾಸ್ತಿಯಾಯಿತ್ತು.
ಚೆನ್ನಬಸವಣ್ಣನ ಪಾದವ ಕಂಡೆನಾಗಿ,
ಎನ್ನ ಪ್ರಾಣ ಬಯಲಾಯಿತ್ತು.
ಪ್ರಭುವೆ, ನಿಮ್ಮ ಶ್ರೀಚರಣಕ್ಕೆ ಶರಣೆಂದೆನಾಗಿ,
ಎನ್ನ ಅಱಿವು ಸ್ವಯವಾಯಿತ್ತು.
ಚೆನ್ನಮಲ್ಲಿಕಾರ್ಜುನದೇವಯ್ಯಾ,
ನಿಮ್ಮ ಶರಣರ ಪಡೆದೆನಾಗಿ,
ಎನಗೆ ಮತ್ತಾವುದಿಲ್ಲವಯ್ಯಾ. ಪ್ರಭುವೆ. ॥೨೮॥

ಈ ಹೀಂಗೆಂದು ಮಹಾದೇವಿಯಕ್ಕಗಳು ಬಿನ್ನೈಸಲು, ಪ್ರಭುದೇವರು ಕೊಟ್ಟ ಪ್ರತ್ಯುತ್ತರ:

೯೮೪

ಕಾಯ ಶುದ್ಧವಾಯಿತ್ತೆಂದರೆ ಲಿಂಗ ನೆಲೆಗೊಳ್ಳದು.
ಜೀವ ಶುದ್ಧವಾಯಿತ್ತೆಂದರೆ ಲಿಂಗ ನೆಲೆಗೊಳ್ಳದು.
ಭಾವ ಶುದ್ಧವಾಯಿತ್ತೆಂದರೆ ಲಿಂಗ ನೆಲೆಗೊಳ್ಳದು.
ಗೊಹೇಶ್ವರಲಿಂಗದಲ್ಲಿ ಶುದ್ಧ ಸುಯಿಧಾನಿಯಾದೆನೆಂದರೆ
ನಿಜವು ಸಾಧ್ಯವಾಗದು ಕೇಳಾ ಅವ್ವಾ ॥೨೯॥

ಇದಕ್ಕೆ ಅಕ್ಕಗಳ ಪ್ರತ್ಯುತ್ತರ :

೯೮೫

ಕಾಯದೊಳಗೆ ಅಕಾಯವಾಯಿತ್ತು.
ಜೀವದೊಳಗೆ ನಿರ್ಜೀವವಾಯಿತ್ತು.
ಭಾವದೊಳಗೆ ನಿರ್ಭಾವವಾಯಿತ್ತು.
ಎನ್ನ ಮನದೊಳಗೆ ಘನ ನೆನಹಾಯಿತ್ತು.
ಎನ್ನ ತಲೆ ಮೊಲೆಗಳ ನೋಡಿ ಸಲಹಿದಿರಾಗಿ,
ಚೆನ್ನಮಲ್ಲಿಕಾರ್ಜುನನ ಧರ್ಮದವಳಾನು. ॥೩೦॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೯೮೬

ಕೂಡಲಿಲ್ಲದ ಅಗಲಲಿಲ್ಲದ ಘನವ ಕೂಡುವ ಪರಿ ಎಂತವ್ವಾ?
ಹೇಳಿದರೆ ಅದಕ್ಕದೆ ಕೊಱತೆ.
ಗೊಹೇಶ್ವರಲಿಂಗವ
ಬೇಱ ಮಾಡಿ ಬೆರಸುವ ಪರಿ ಎಂತು ಹೇಳಾ. ॥೩೧॥

ಇದಕ್ಕೆ ಅಕ್ಕಗಳ ಪ್ರತ್ಯುತ್ತರ:

೯೮೭

ಗಟ್ಟಿದುಪ್ಪ ತಿಳಿದುಪ್ಪಕ್ಕೆ ಹಂಗುಂಟೇ ಅಯ್ಯಾ?
ದೀಪಕ್ಕೆ ದೀಪ್ತಿಗೆ ಭೇದ ಉಂಟೇ ಅಯ್ಯಾ?
ಅಂಗಕ್ಕೆ ಆತ್ಮಂಗೆ ಭಿನ್ನ ಉಂಟೇ ಅಯ್ಯಾ?
ಎನ್ನಂಗವನು ಶ್ರೀಗುರು ಮಂತ್ರವ ಮಾಡಿ ತೋಱದನಾಗಿ,
ಸಾವಯ ನಿರವಯಕ್ಕೆ ಭಿನ್ನವಿಲ್ಲವಯ್ಯಾ.
ಚೆನ್ನಮಲ್ಲಿಕಾರ್ಜುನದೇವರ ಬೆರಸಿ ಮತಿಗೆಟ್ಟವಳ
ಏತಕ್ಕೆ ನುಡಿಸುವಿರಯ್ಯಾ ಪ್ರಭುವೆ? ॥೩೨॥

ಮತ್ತಂ,

೯೮೮

ಅಂಗವ ಲಿಂಗಮುಖದಲ್ಲಿ ಅರ್ಪಿಸಿ,
ಅಂಗ ಅನಂಗವಾಯಿತ್ತು.
ಮನವ ಅಱವಿಂಗರ್ಪಿಸಿ ಮನ ಲಯವಾಯಿತ್ತು.
ಭಾವವ ತೃಪ್ತಿಗರ್ಪಿಸಿ ಭಾವ ಬಯಲಾಯಿತ್ತು.
ಅಂಗ ಮನ ಭಾವವಳಿದ ಕಾರಣ ಕಾಯ ಅಕಾಯವಾಯಿತ್ತು.
ಎನ್ನ ಕಾಯದ ಸುಖಭೋಗವ ಲಿಂಗವೆ ಭೋಗಿಸುವುದಾಗಿ,
ಶರಣಸತಿ ಲಿಂಗಪತಿಯಾದೆನು.
ಇದು ಕಾರಣ ಚೆನ್ನಮಲ್ಲಿಕಾರ್ಜುನನೆಂಬ ಗಂಡನ
ಒಳ ಹೊಕ್ಕು ಬೆರೆಸಿದೆನು. ॥೩೩॥

ಈ ಹೀಂಗೆಂದು ಮಹಾದೇವಿಯಕ್ಕಗಳ ಚಿದಹಂತೆಯ ಪ್ರಭುದೇವರು ಖಂಡಿಸಿ ನುಡಿದ ಪ್ರಸ್ತಾವದ ವಚನ:

೯೮೯

ನಾ ಸತ್ತೆನೆಂದು ಹೆಣ ಕೂಗಿದುದುಂಟೆ?
ಬೈಚಿಟ್ಟ ಬಯಕೆ ಕರೆದುದುಂಟೆ?
ಹೆಪ್ಪಿಟ್ಟ ಹಾಲು ಸಿಹಿಯಪ್ಪುದೆ?
ಈ ಮಾತು ಒಪ್ಪವಲ್ಲ ಗೊಹೇಶ್ವರಲಿಂಗಕ್ಕೆ. ॥೩೪॥

ಇದಕ್ಕೆ ಅಕ್ಕಗಳ ಪ್ರತ್ಯುತ್ತರ:

೯೯೦

ಸತ್ತ ಹೆಣ ಕೂಗಿದುದುಂಟು.
ಬೈಚಿಟ್ಟ ಬಯಕೆ ಕರೆದುದುಂಟು.
ಹೆಪ್ಪಿಟ್ಟ ಹಾಲು ಗಟ್ಟಿಗೊಂಡು ಸಿಹಿಯಾದುದುಂಟು.
ಇದ ನಿಶ್ಚೈಸಿ ನೋಡಿ ಚೆನ್ನಮಲ್ಲಿಕಾರ್ಜುನದೇವರಲ್ಲಿ. ॥೩೫॥

ಇದಕ್ಕೆ ಪ್ರಭುದೇವರ ವಚನ:

೯೯೧

ಇದು ಎನಗೆ ಆಶ್ಚರ್ಯ ಹೇಳವ್ವಾ,
ಕಾಯವಿಲ್ಲದ ಸುಖವ,
ಜೀವವಿಲ್ಲದ ಭವವ,
ಆ ಠಾವ ಹೇಳಾ ಗೊಹೇಶ್ವರಲಿಂಗಕ್ಕೆ. ॥೩೬॥

ಇದಕ್ಕೆ ಅಕ್ಕಗಳ ಪ್ರತ್ಯುತ್ತರ:

೯೯೨

ಮಱೆದೊಱಗಿ ಕನಸ ಕಂಡು ಹೇಳುವಲ್ಲಿ,
ಸತ್ತ ಹೆಣ ಎದ್ದಿತ್ತು.
ತನ್ನ ಋಣ ನಿಧಾನವೆದ್ದು ಕರೆಯಿತ್ತು.
ಹೆಪ್ಪಿಟ್ಟ ಹಾಲು ಘಟ್ಟಿತುಪ್ಪವಾಗಿ ಸಿಹಿಯಾಯಿತ್ತು.
ಇದಕ್ಕೆ ತಪ್ಪ ಸಾಧಿಸಲೇಕೆ,
ಚೆನ್ನಮಲ್ಲಿಕಾರ್ಜುನದೇವರ ದೇವನಣ್ಣಗಳಿರಾ? ॥೩೭॥

ಇದಕ್ಕೆ ಪ್ರಭುದೇವರು ಒಡಂಬಟ್ಟ ಪ್ರಸ್ತಾವದ ವಚನ:

೯೯೩

ಇದು ಲೇಸಾಯಿತ್ತು.
ತುಂಬಿದ ಲೆಕ್ಕಕ್ಕೆ ಮತ್ತೊಂದೆಂದು ಕಡೆಗಾಣಿಸುವಂತೆ,
ಸ್ಥಾಣುವಿನ ಮಱೆಯ ಚೋರನಂತೆ,
ಅಂಬುಧಿಯ ಕೊಂಬಿನಲ್ಲಿದ್ದ ವಿಹಂಗನಂತೆ,
ಎಲ್ಲಿ ಬಂದಡೂ ಗೊಹೇಶ್ವರನೆಂಬ ಭಾವ ಒಂದಾಯಿತ್ತು. ॥೩೮॥

ಇದಕ್ಕೆ ಮಹಾದೇವಿಯಕ್ಕಗಳ ನಿರಹಂಭಾವದ ವಚನ:

೯೯೪

ಎನಗೇಕಯ್ಯಾ? ನಾ ಪ್ರಪಂಚಿನ ಪುತ್ಥಳಿ.
ಮಾಯಿಕದ ಮಲಭಾಂಡ, ಆತುರದ ಭವನಿಳಯ.
ಜಲಕುಂಭದಲ್ಲಿ ಒಸರುವ ನೆಲೆಮನೆಗೇಕಯ್ಯಾ?
ಬೆರಳು ತಾಳಹಣ್ಣ ಹಿಸಿಕಿದಡೆ ಮೆಲಲುಂಟೆ?

ಬಿತ್ತೆಲ್ಲಾ ಜೀವ, ಅದಱೊಪ್ಪದ ತೆಱ ಎನಗೆ.
ಎನ್ನ ತಪ್ಪನೊಪ್ಪುಗೊಳ್ಳಿ.
ಚೆನ್ನಮಲ್ಲಿಕಾರ್ಜುನದೇವರ ದೇವ ನೀವೆ ಅಣ್ಣಗಳಿರಾ. ॥೩೯॥

[೧]ಮತ್ತಂ,[೧]

೯೯೫

ಚಂದನವ ಕಡಿದು ಕೊಱೆದು ತೆಯ್ದಡೆ
ನೊಂದೆನೆಂದು ಕಂಪ ಬಿಟ್ಟಿತ್ತೆ?
ತಂದು ಸುವರ್ಣವ ಕಡಿದೊರೆದಡೆ,
ಬೆಂದು ಕಳಂಕ ಹಿಡಿಯಿತ್ತೆ?
ಸಂದು ಸಂದನು ಕಡಿದ ಕಬ್ಬನು ತಂದು ಗಾಣದಲ್ಲಿಕ್ಕಿ ಅರೆದಡೆ,
ಬೆಂದು ಪಾಕಗೂಳ ಸಕ್ಕರೆಯಾಗಿ ನೊಂದೆನೆಂದು ಸಿಹಿಯ ಬಿಟ್ಟಿತ್ತೆ?
ನಾ ಹಿಂದೆ ಮಾಡಿದ ಹೀನಂಗಳೆಲ್ಲವತಂದು
ಮುಂದಿಳುಹಲು ನಿಮಗೇ ಹಾನಿ.
ಎನ್ನ ತಂದೆ ಚೆನ್ನಮಲ್ಲಿಕಾರ್ಜುನದೇವಯ್ಯಾ,
ನೀ ಕೊಂದಡೆಯೂ ಶರಣೆಂಬುದ ಮಾಣೆ. ॥೪೦॥

ಇದಕ್ಕೆ ಪ್ರಭುದೇವರು ಸಂತೋಷಿಸಿ, ಕೊಂಡಾಡಿದ ಪ್ರಸ್ತಾವದ ವಚನ:

೯೯೬

ಅಂಗ ಅಂಗನೆಯ ರೂಪಲ್ಲದೆ
ಮನ ವಸ್ತುಭಾವದಲ್ಲಿ ಬೆಚ್ಚಂತಿರ್ಪುದು.
ಬಂದ ಕಥನದಲ್ಲಿ ಬಂದು ಹಿಂಗಿದೆಯಲ್ಲಾ!
ಅಕ್ಕ, ಗೊಹೇಶ್ವರಲಿಂಗದಲ್ಲಿ ಉಭಯ ನಾಮವಳಿದೆ ಎನ್ನಕ್ಕಾ! ॥೪೧॥

ಇಂತು ಪ್ರಭುದೇವರು ಉಭಯನಾಮವಳಿದೆಯೆಂದು ಕೊಂಡಾಡಲು, ಆ ಮಹಾದೇವಿಯಕ್ಕಗಳು ಎರಡಿಲ್ಲದೆ ಬೆರಸಿದುದಂ ಬಿನ್ನೈಸುವ ಪ್ರಸ್ತಾವದ ವಚನ:

೯೯೭

ಅಂಗಸಂಗದಲ್ಲಿ ಲಿಂಗಸಂಗಿಯಾದೆ.
ಲಿಂಗಸಂಗದಲ್ಲಿ ಅಂಗಸಂಗಿಯಾದೆ.
ಉಭಯಸಂಗವನಱಿಯದೆ ಪರಿಣಾಮಿಯಾದೆನು.
ನುಡಿಯ ಗಡಣವ ಮಱೆದು ತೆಱಹಿಲ್ಲದಿದ್ದರೇನು?
ಎನ್ನ ದೇವ ಚೆನ್ನಮಲ್ಲಿಕಾರ್ಜುನನ ಬೆರಸಿದ ಬಳಿಕ,
ಎನ್ನ ನಾನು ಏನೆಂದೂ ಅಱಿಯೆನಯ್ಯಾ. ॥೪೨॥

ಈ ಹೀಂಗೆಂದು ಪ್ರಭುದೇವರೊಡನೆ ಅಕ್ಕಗಳು ಪ್ರಸಂಗಿಸುತ್ತಿರಲು, ಬಸವರಾಜದೇವರು ಆ ಮಹಾದೇವಿಯಕ್ಕಗಳ ನುಡಿಸಿ ನೋಡುವ ಪ್ರಸ್ತಾವದ ವಚನ:

೧–೧ x (ಮು)

೯೯೮

ಅಂಗದಲ್ಲಿ ಲಿಂಗಸಂಗ,
ಲಿಂಗದಲ್ಲಿ ಅಂಗಸಂಗವ ಮಾಡಿದೆನೆಂದರೆ,
ಸಂದು ಭೇದವಳಿವ ಪರಿ ಎಂತು ಹೇಳಾ?
ಅಂಗದಲ್ಲಿ ಲಿಂಗ ಸಂಗವ ಮಾಡಿಹೆನೆಂದರೆ
ಮುಂದುಗೆಡಿಸಿ ಕಾಡುವನು ಶಿವನು.
ಕಾಮವೆಂಬ ಬಯಕೆಯಲ್ಲಿ ಅಳಲಿಸುವ ಬಳಲಿಸುವ ಶಿವನು.
ಲಿಂಗದಲ್ಲಿ ಅಂಗವ ತಂದು ನಿಕ್ಷೇಪಿಸಿಹೆನೆಂದರೆ,
ಅಂಗದಿಂದಲತ್ತತ್ತಲೋಸರಿಸಿ ಓಡುವನಯ್ಯಾ ಶಿವನು.
ಹೆಣ್ಣು ಗಂಡಾದರೆ ಸಂಗಕ್ಕೆ ಒಲಿವನು ಕೇಳಾ ಶಿವನು.
ಕೂಡಲಸಂಗಮದೇವರ ಬೆರಸುವರೆ
ಭಿನ್ನವಿಲ್ಲದೆ ಕಲಿಯಾಗಬೇಕು ಕೇಳಾ ಅವ್ವಾ. ॥೪೩॥

ಇದಕ್ಕೆ ಅಕ್ಕಗಳ ಬಿನ್ನಹ:

೯೯೯

ಕಾಮನ ಗೆಲಿದೆನಯ್ಯಾ ಬಸವಣ್ಣಾ, ನಿನ್ನ ದಯದಿಂದ.
ಸೋಮಧರನ ಹಿಡಿತಪ್ಪೆನಯ್ಯಾ ಬಸವಣ್ಣಾ, ನಿನ್ನ ದಯದಿಂದ.
ನಾಮದಲ್ಲಿ ಹೆಣ್ಣು ರೂಪಲ್ಲದೆ,
ಭಾವಿಸಲು ಗಂಡುರೂಪು ನೋಡಾ ಬಸವಣ್ಣಾ, ನಿನ್ನ ದಯದಿಂದ.
ಅತಿಕಾಮಿ ಚೆನ್ನಮಲ್ಲಿಕಾರ್ಜುನಯ್ಯಂಗೆ ತೊಡರನಿಕ್ಕಿ ಕೂಡಿದೆ,
ಎರಡಳಿಯೆನಯ್ಯಾ ಬಸವಣ್ಣಾ, ನಿನ್ನ ದಯದಿಂದ. ॥೪೪॥

ಇಂತು ಅಂಗವಿಕಾರವ ಗೆಲಿದು, ಲಿಂಗವನು ಎನ್ನೊಳಗೆ ದೃಢವಿಡಿದು, ಸರ್ವಾಂಗದೊಳು ಐಕ್ಯವ ಮಾಡಿಕೊಂಡು, ನಿಜಗಲಿಯಾಗಿ ಗೆಲಿದೆನೆಂದು ಬಿನ್ನೈಸುವ ಪ್ರಸ್ತಾವದ ವಚನ:

೧೦೦೦

ಭಾವಿಸಿ ನೋಡಿದರಂಗವಾಯಿತ್ತು.
ಅಂಗಗುಣವಳಿದ ಬಳಿಕ ನಾ ನಿನಗಂಗವಾದೆ.
ಭಿನ್ನರುಚಿಯ ಬಿಟ್ಟು ಲಿಂಗರುಚಿಯಾದ ಬಳಿಕ,
ಚೆನ್ನಮಲ್ಲಿಕಾರ್ಜುನನ ಕೊಂದು ಸಾವ ಭಾಷೆ! ॥೪೫॥

ಇದಕ್ಕೆ ಬಸವರಾಜದೇವರು ನಿರೂಪಿಸಿದ ವಚನ:

೧೦೦೧

ಅಳಿವನಲ್ಲ, ಉಳಿವನಲ್ಲ.
ಪ್ರಳಯವೆಂಬುದ ಮುನ್ನಱಿಯನು.
ಕಳಾಕುಳರಹಿತನು ಉಭಯಕುಳರಹಿತನು.
ಅಱಿವ ಬೈಚಿಟ್ಟು ಮಱೆವ ಗಮನನಲ್ಲ.

ಕೂಡಲಸಂಗಯ್ಯನೆಂಬ ಶಬ್ದಮುಗ್ಧನ
ಭಾವದ ಬಳಲಿಕೆಯಲ್ಲಿ ಗೆಲಬಹುದೆ ಹೇಳಾ? ॥೪೬॥

ಇದಕ್ಕೆ ಮಹಾದೇವಿಯಕ್ಕಗಳು ಬಿನ್ನೈಸಿದ ಪ್ರತ್ಯುತ್ತರ:

೧೦೦೨

ಅಂಗದೊಳಗೆ ಅಂಗವಾಗಿ, ಅಂಗವ ಲಿಂಗೈಕ್ಯವ ಮಾಡಿದೆ.
ಮನದೊಳಗೆ ಮನವಾಗಿ, ಮನವ ಲಿಂಗೈಕ್ಯವ ಮಾಡಿದೆ.
ಭಾವದೊಳಗೆ ಭಾವವಾಗಿ ಭಾವವ ಲಿಂಗೈಕ್ಯವ ಮಾಡಿದೆ.
ಅಱಿವಿನೊಳಗೆ ಅಱಿವಾಗಿ, ಜ್ಞಾನವ ಲಿಂಗೈಕ್ಯವ ಮಾಡಿದೆ.
ಕ್ರೀಗಳೆಲ್ಲವ ನಿಲಿಸಿ, ಕ್ರಿಯಾತೀತನಾಗಿ ನಿಷ್ಪತ್ತಿ ಲಿಂಗೈಕ್ಯವಾದೆ.
ನಾನೆಂಬುದ ನಿಲಿಸಿ, ನೀನೆಂಬುದ ಕೆಡಿಸಿ,
ಉಭಯವ ಲಿಂಗೈಕ್ಯವ ಮಾಡಿದೆ.
ಚೆನ್ನಮಲ್ಲಿಕಾರ್ಜುನನೊಳಗೆ ನಾನಳಿದೆನಾಗಿ,
ಲಿಂಗವೆಂಬ ಘನವು ಎನ್ನಲ್ಲಿ ಅಳಿಯಿತ್ತು
ಕಾಣಾ ಸಂಗನಬಸವಣ್ಣಾ! ॥೪೭॥

ಈ ಹೀಂಗೆಂದು ಅಕ್ಕಗಳು ಬಿನ್ನೈಸಲು, ಬಸವರಾಜದೇವರು ಮೆಚ್ಚಿ ನಿರೂಪಿಸಿದ ವಚನ:

೧೦೦೩

ಹೆಂಗೂಸಿನಂಗವ ನೋಡಿರೆ, ಪುರಾತನರು!
ಬಾಲತನದಂಗವ ನೋಡಿರೆ, ಪುರಾತನರು!
ಬ್ರಹ್ಮವನಾಚರಿಸಿ ತನ್ನ ಮಱೆದಿಪ್ಪುದ ನೋಡಿರೆ, ಲಿಂಗವಂತರು!
ತನ್ನಲ್ಲಿ ತಾನು ನಿಶ್ಚಯವಾಗಿ, ಭಾಷೆ ಬೀಸರವೋಗದೆ ಇಪ್ಪ ಇರವು,
ಕೂಡಲಸಂಗಮದೇವರಲ್ಲಿ ನಮ್ಮ ಮಹಾದೇವಿಯಕ್ಕಂಗಾಯಿತ್ತು. ।೪೮।

ಈ ಹೀಂಗೆಂದು ಬಸವರಾಜದೇವರು ನಿರೂಪಿಸಲು, ಇದಕ್ಕೆ ಅಕ್ಕಗಳ ಬಿನ್ನಹ:

೧೦೦೪

ನಿನ್ನ ಅಂಗದಾಚಾರವ ಕಂಡು,
ಎನಗೆ ಲಿಂಗ ಸಂಗವಾಯಿತ್ತಯ್ಯಾ ಬಸವಣ್ಣಾ.
ನಿನ್ನ ಮನದ ಸುಜ್ಞಾನವ ಕಂಡು,
ಎನಗೆ ಜಂಗಮ ಸಂಬಂಧವಾಯಿತ್ತಯ್ಯಾ, ಬಸವಣ್ಣಾ.
ನಿನ್ನ ಸದ್‌ಭಕ್ತಿಯ ತಿಳಿದು,
[೧]ಎನಗೆ[೧] ನಿಜ ಸಾಧ್ಯವಾಯಿತ್ತಯ್ಯಾ ಬಸವಣ್ಣಾ.
ಚೆನ್ನಮಲ್ಲಿಕಾರ್ಜುನನ ಹೆಸರಿಟ್ಟ ಗುರು ನೀನಾದ ಕಾರಣ,
ನಾನೆಂಬುದಿಲ್ಲವಯ್ಯಾ ಬಸವಣ್ಣಾ! ॥೪೯॥

೧-೧ ಎನ್ನ (ಮೂ)

ಮತ್ತಂ,

೧೧೦೫

ಅಂಗದಲ್ಲಿ ಆಚಾರವ ತೋಱಿದ;
ಆ ಆಚಾರವೆ ಲಿಂಗವೆಂದಱುಹಿದ.
ಪ್ರಾಣದಲ್ಲಿ ಅಱಿವ ನೆಲೆಗೊಳಿಸಿದ;
ಆ ಅಱಿವೆ ಜಂಗಮವೆಂದು ತೋಱಿದ.
ಚೆನ್ನಮಲ್ಲಿಕಾರ್ಜುನನ ಹೆತ್ತ ತಂದೆ ಸಂಗನಬಸವಣ್ಣನು
ಎನಗೀ ಕ್ರಮವನಱುಹಿದನಯ್ಯಾ. ॥೫೦॥

ಮತ್ತಂ, ಅಕ್ಕಗಳು ಅನಾದಿ ಪರಶಿವ ತಾನೆ ಜಗದ್ಧಿತಾರ್ಥವಾಗಿ ಮರ್ತ್ಯಕ್ಕವತರಿಸಿ, ಬಸವಣ್ಣನೆಂಬ ನಾಮಕರಣಮಂ ಧರಿಸಿ, ವೀರಶೈವಮಾರ್ಗವನಱುಹುವುದಕ್ಕೆ ಬಾವನ್ನ ವಿವರವನೊಳಕೊಂಡು ಚರಿಸಿದನೆಂದು ಬಸವೇಶ್ವರದೇವರ ಮಹಾತ್ಮೆಯಂ ಕೊಂಡಾಡುವ ಪ್ರಸ್ತಾವದ ವಚನ:

೧೧೦೬

ಶಿವಶಿವಾ! ಆದಿಯನಾದಿಗಳೆಂಬೆರಡಿಲ್ಲದ
ನಿರವಯವಾಗಿಪ್ಪ ಶಿವ ನಿಮ್ಮ ನಿಜವನಾರಯ್ಯ ಬಲ್ಲವರು?
ವೇದಂಗಳಿಗಭೇದ್ಯನು, ಶಾಸ್ತ್ರಕ್ಕಸಾಧ್ಯನು.
ಪುರಾಣಕ್ಕೆ ಪುಣ್ಯನು,
ಆಗಮಕ್ಕಗೋಚರನು, ತರ್ಕಕ್ಕೆ ಅತರ್ಕ್ಯನು.
ವಾಙ್ಮನೋತೀತನೆಂಬ ಪರಶಿವಲಿಂಗವನು
ಕೆಲಂಬರು ಸಕಲನೆಂಬರು, ಕೆಲಂಬರು ನಿಃಕಲನೆಂಬರು,
ಕೆಲಂಬರು ಸೂಕ್ಷ್ಮನೆಂಬರು, ಕೆಲಂಬರು ಸ್ಥೂಲನೆಂಬರು.
ಈ ಬಗೆಯ ಭಾವದಿಂದ ಹರಿಬ್ರಹ್ಮರು
ಇಂದ್ರ ಚಂದ್ರ ರವಿ ಕಾಲ ಕಾಮ ದಕ್ಷ
ದೇವ ದಾನವ ಮಾನವರೆಲ್ಲರು
ಕಾಣಲಱಿಯದೆ ಅಜ್ಞಾನದಿಂದ ಭವಭಾರಿಗಳಾಗಿ ಹೋದರು.
ಈ ಪರಿಗಳಲ್ಲಿ ಬಯಲಾಗಿ ಹೋಗಬಾರದೆಂದು
ನಮ್ಮ ಬಸವಣ್ಣನು ಜಗಹಿತಾರ್ಥವಾಗಿ ಮರ್ತ್ಯಕ್ಕವತರಿಸಿ,
ವೀರಶೈವಮಾರ್ಗವನಱುಪುವುದಕ್ಕೆ
ಬಾವನ್ನ ವಿವರವನೊಳಕೊಂಡು ಚರಿಸಿದನದೆಂತೆಂದಡೆ:
ಗುರುಕಾರುಣ್ಯವೇದ್ಯನು.
ವಿಭೂತಿ ರುದ್ರಾಕ್ಷಿಧಾರಕನು.
ಪಂಚಾಕ್ಷರಭಾಷಾ ಸಮೇತನು.
ಲಿಂಗಾಂಗಸಂಬಂಧಿ. ನಿತ್ಯ ಲಿಂಗಾರ್ಚಕನು.
ಅರ್ಪಿತದಲ್ಲಿ ಅವಧಾನಿ; ಪಾದೋದಕ ಪ್ರಸಾದಗ್ರಾಹಕನು.

ಗುರುಭಕ್ತಿಸಂಪನ್ನನು; ಏಕಲಿಂಗನಿಷ್ಠಾಪರನು.
ಚರಲಿಂಗಲೋಲುಪ್ತನು; ಶರಣ ಸಂಗಮೈಶ್ವರ್ಯನು.
ತ್ರಿವಿಧಕ್ಕಾಯತನು, ತ್ರಿಕರಣ ಶುದ್ಧನು; ತ್ರಿವಿಧಲಿಂಗಾಂಗಸಂಬಂಧಿ.
ಅನ್ಯದೈವ ಸ್ಮರಣೆಯ ಹೊದ್ದ,
ಭವಿಯ ಸಂಗವ ಮಾಡ, ಭವಿಯ ಪಾಕವ ಕೊಳ್ಳ,
ಪರಸ್ತ್ರೀಯ ಬೆರಸ, ಪರಧನವನೊಲ್ಲ, ಪರನಿಂದೆಯ ಮಾಡ,
ಅನೃತವ ನುಡಿಯ, ಹಿಂಸೆಯ ಮಾಡ,
ತಾಮಸಭಕ್ತಸಂಗವ ಮಾಡ,
ಗುರುಲಿಂಗಜಂಗಮಕ್ಕೆ ಅರ್ಥಪ್ರಾಣಾಭಿಮಾನ
ಮುಂತಾದವೆಲ್ಲವ ಸಮರ್ಪಿಸಿ, ಪ್ರಸಾದ ಮುಂತಾಗಿ ಭೋಗಿಸುವ.
ಜಂಗಮನಿಂದೆಯ ಸೈರಿಸ, ಪ್ರಸಾದನಿಂದೆಯ ಕೇಳ.
ಅನ್ಯರನಾಸೆಗೆಯ್ಯ,
[೧]ಪಾತ್ರಾಪಾತ್ರವನಱಿದೀವ,[೧] ಚತುರ್ವಿಧ ಪದವಿಯ ಹಾರ,
ಅರಿಷಡ್ವರ್ಗಕ್ಕೆ ಅಳುಕ, ಕುಲಾದಿ ಮದಂಗಳ ಬಗೆಗೊಳ್ಳ,
ದ್ವೈತಾದ್ವೈತವ ನುಡಿವನಲ್ಲ. ಸಂಕಲ್ಪ ವಿಕಲ್ಪವ ಮಾಡುವವನಲ್ಲ,
ಕಾಲೋಚಿತವ ಬಲ್ಲ, ಕ್ರಮಯುಕ್ತನಾಗಿ ಷಟ್‌ಸ್ಥಲಭರಿತ,
ಸರ್ವಾಂಗಲಿಂಗಿ, ದಾಸೋಹಸಂಪನ್ನ.
ಇಂತೀ ಐವತ್ತೆರಡು ವಿಧದಲ್ಲಿ ನಿಪುಣನಾಗಿ
ಮೆಱೆದ ನಮ್ಮ ಬಸವಣ್ಣನು.
ಆ ಬಸವಣ್ಣನ ಶ್ರೀಪಾದಕ್ಕೆ ಅಹೋ ರಾತ್ರಿಯಲ್ಲಿ
ನಮೋ ನಮೋ ಎಂದು ಬದುಕಿದೆನು
ಕಾಣಾ ಚೆನ್ನಮಲ್ಲಿಕಾರ್ಜುನ! ॥೫೧॥

ಮತ್ತಂ,

೧೦೦೭

ಎನ್ನ ಭಕ್ತಿ ಬಸವಣ್ಣನ ಧರ್ಮ.
ಎನ್ನ ಜ್ಞಾನ ಪ್ರಭುದೇವರ ಧರ್ಮ.
ಎನ್ನ ಪರಿಣಾಮ ಚೆನ್ನಬಸವಣ್ಣನ ಧರ್ಮ.
ಈ ಮೂವರು ಒಂದೊಂದ ಸಮರ್ಪಿಸಿದ ಬಳಿಕ
ಎನಗಾವ ಜಂಜಡವಿಲ್ಲ.
ಚೆನ್ನಮಲ್ಲಿಕಾರ್ಜುನದೇವರ ನೆನಹಿನಲ್ಲಿ
ನಿನ್ನ ಕರುಣದ ಶಿಶು ನಾನು ಕಾಣಾ ಸಂಗನಬಸವಣ್ಣಾ. ॥೫೨॥

೧-೧ ಪಾತ್ರಸತ್ಪಾತ್ರವನಜೀವ(ಮು)

ಈ ಹೀಂಗೆಂದು ಮಹಾದೇವಿಯಕ್ಕಗಳು ಬಿನ್ನೈಸುವ, ಸಮಯದಲ್ಲಿ ಪ್ರಭುದೇವರು ಮಹಾದೇವಿಯಕ್ಕಗಳಿಗೆ ನಮಸ್ಕರಿಸಿದ ಪ್ರಸ್ತಾವದ ವಚನ:

೧೦೦೮

ಆದಿಶಕ್ತಿ ಅನಾದಿಶಕ್ತಿಯೆಂಬರು: ಅದನಾರು ಬಲ್ಲರಯ್ಯಾ?
ಆದಿ ಎಂದರೆ ಕುಜುಹಿಂಗೆ ಬಂದಿತ್ತು;
ಅನಾದಿ ಎಂದರೆ ನಾಮಕ್ಕೆ ಬಂದಿತ್ತು.
ಆದಿಯಲ್ಲ, ಅನಾದಿಯಲ್ಲ.
ನಾಮವಿಲ್ಲದ ಸೀಮೆಯಿಲ್ಲದ ನಿಜಶಕ್ತಿ ಚಿಚ್ಛಕ್ತಿಯಾಯಿತ್ತು ನೋಡಾ!
ಅಂತರಂಗದ ಪ್ರಭೆ ಬಹಿರಂಗವೆಲ್ಲಾ ತಾನೆಯಾಗಿ,
ಗೊಹೇಶ್ವರಲಿಂಗದಲ್ಲಿ ಸಂದಿಲ್ಲದಿಪ್ಪ
ಮಹಾದೇವಿಯಕ್ಕನ ಶ್ರೀಪಾದಕ್ಕೆ ನಮೋ ನಮೋ ಎಂಬೆನು. ॥೫೩॥

ಮತ್ತಂ,

೧೦೦೯

ಅಂಗೈಯ ಲಿಂಗದಲ್ಲಿ ಕಂಗಳ ನೋಟ
ಸ್ವಯವಾದ ಇವರ ನೋಡಾ!
ತನ್ನ ಸ್ವಾನುಭಾವದ ಉದಯದಿಂದ
ತನ್ನನಜಿದ ನಿಜಶಕ್ತಿಯ ನೋಡಾ!
ಭಿನ್ನವಿಲ್ಲದಿರವು ಮನ್ನಣೆಯ ಮಮಕಾರವ ಮೀಜಿದ ಭಾವ.
ತನ್ನಿಂದ ತಾನಾದಳು.
ನಮ್ಮ ಗೊಹೇಶ್ವರಲಿಂಗದಲ್ಲಿ ಸ್ವಯಲಿಂಗವಾದ
ಮಹಾದೇವಿಯಕ್ಕನ ನಿಲವಿಂಗೆ
ನಮೋ ನಮೋ ಎನುತಿರ್ದೆ ಕಾಣಾ ಚೆನ್ನಬಸವಣ್ಣಾ. ॥೫೪॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಚಿಕ್ಕದಣ್ಣಾಯಕರು ಆ ಮಹಾದೇವಿಯಕ್ಕಂಗೆ ಪ್ರಸನ್ನರಾಗಿ ಸ್ತುತಿಸಿದ ವಚನ:

೧೦೧೦

ಅಜಕಲ್ಪಕೋಟಿ ವರುಷದವರೆಲ್ಲರೂ ಹಿರಿಯರೆ?
ಹುತ್ತೇಜಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೆ?
ನಡು ಮುಜಿದು, ಗುಡುಗೂಜಿ, ತಲೆ ನಡುಗಿ,
ನರೆ ತೆರೆ ಹೆಚ್ಚಿ, ಮತಿಗೆಟ್ಟು,
ಒಂದನಾಡಹೋಗಿ ಒಂಬತ್ತನಾಡುವ ಅಜ್ಞಾನಿಗಳೆಲ್ಲರೂ ಹಿರಿಯರೆ?
ಅನುವನಜಿದು, ಘನವ ಬೆರಸಿ, ಹಿರಿದುಕಿಜಿದೆಂಬ ಭೇದವ ಮುಜಿದು,
ಕೂಡಲಚೆನ್ನಸಂಗಯ್ಯನಲ್ಲಿ ಬೆರಸಿ ಬೇಜಿಲ್ಲದಿಪ್ಪ ಹಿರಿಯತನ
ನಮ್ಮ ಮಹಾದೇವಿಯಕ್ಕಂಗಾಯಿತ್ತು. ॥೫೫॥

ಆ ಸಮಯದಲ್ಲಿ ಸಿದ್ಧರಾಮಯ್ಯತಂದೆಗಳು ಮಹಾದೇವಿಯಕ್ಕಗಳ ಸ್ತುತಿಸಿದ ವಚನ:

೧೦೧೧

ಅಹುದಹುದು, ಮತ್ತೇನು?
ಮಱಹಿಂಗೆ ಹಿರಿದು ಕಿಱದುಂಟಲ್ಲದೆ,
ಅಱವಿಂಗೆ ಹಿರಿದು ಕಿಱದುಂಟೆ ಹೇಳಯ್ಯಾ?
ಸಾವಂಗೆ ಭಯ ಉಂಟಲ್ಲದೆ,
ಅಜಾತಂಗೆ ಭಯ ಉಂಟೆ ಹೇಳಯ್ಯಾ?
ಕಪಿಲಸಿದ್ಧಮಲ್ಲಿನಾಥನಲ್ಲಿ ಮಹಾದೇವಿಯಕ್ಕನ ನಿಲವಿಂಗೆ
ಶರಣೆಂದು ಶುದ್ಧನಾದೆನು ಕಾಣಾ ಚೆನ್ನಬಸವಣ್ಣಾ. ॥೫೬॥

ಇದಕ್ಕೆ ಅಕ್ಕಗಳ ಬಿನ್ನಹ:

೧೦೧೨

ಮರ್ತ್ಯಲೋಕದ ಭಕ್ತರ ಮನವ ಬೆಳಗಲೆಂದು
ಇಳಿತಂದನಯ್ಯಾ ಶಿವನು.
ಕತ್ತಲೆಯ ಪಾಳೆಯವ ರವಿ ಹೊಕ್ಕಂತಾಯಿತ್ತಯ್ಯಾ.
ಚಿತ್ತದ ಪ್ರವೃತ್ತಿಯ ಹಿಂಗಿಸಿ,
ಮುಕ್ತಿಪಥವ ತೋಱದನೆಲ್ಲಾ ಅಸಂಖ್ಯಾತ ಗಣಂಗಳಿಗೆ.
ತನುವೆಲ್ಲಾ ಸ್ವಯಲಿಂಗ, ಮನವೆಲ್ಲಾ ಚರಲಿಂಗ,
ಭಾವವೆಲ್ಲಾ ಮಹಾಘನದ ಬೆಳಗು.
ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣ ಸಮಗ್ಜ್ಞಾನಿ ಚೆನ್ನಬಸವಣ್ಣನ ಶ್ರೀಪಾದಕ್ಕೆ
ಶರಣೆಂದು ಎನ್ನ ಭವಂ ನಾಸ್ತಿಯಾಯಿತ್ತಯ್ಯಾ ಪ್ರಭುವೆ. ॥೫೭॥

ಇದಕ್ಕೆ ಪ್ರಭುದೇವರ ನಿರೂಪ:

೧೦೧೩

ತನುಗುಣ ನಾಸ್ತಿಯಾಗಿ ಲಿಂಗಸಂಗಿಯಾದಳು.
ಮನಗುಣ ನಾಸ್ತಿಯಾಗಿ ಅಱವು ಸಂಗಿಯಾದಳು.
ಭಾವಗುಣ ನಾಸ್ತಿಯಾಗಿ ಮಹಾಪ್ರಭೆ ತಾನಾದಳು.
ತಾನಿದಿರೆಂಬೆರಡಳಿದು,
ನಮ್ಮ ಗೊಹೇಶ್ವರಲಿಂಗದಲ್ಲಿ ಸ್ವಯಲಿಂಗವಾದ
ಮಹಾದೇವಿಯಕ್ಕಗಳ ನಿಲವಿಂಗೆ ಶರಣೆನುತಿರ್ದೆನು. ॥೫೮॥

ಇದಕ್ಕೆ ಅಕ್ಕಗಳ ಬಿನ್ನಹ:

೧೦೧೪

ನೀರು ಕ್ಷೀರದಂತೆ ನೀನಿಪ್ಪೆಯಾಗಿ,
ಆವುದು ಮುಂದು ಆವುದು ಹಿಂದೆಂದಱಯೆನು.

ಆವುದು ಕರ್ತೃ ಆವುದು ಭೃತ್ಯನೆಂದಱಿಯೆನು.
ಆವುದು ಘನ ಆವುದು ಕಿಱಿದೆಂದಱಿಯೆನು
ಚೆನ್ನಮಲ್ಲಿಕಾರ್ಜುನಯ್ಯಾ, ನೀನೊಲಿದು ಕೊಂಡಾಡಿದರೆ
ಇಱುಹೆ ರುದ್ರನಾಗದೆ ಹೇಳಯ್ಯಾ? ॥೫೯॥

ಇದಕ್ಕೆ ಚೆನ್ನಬಸವರಾಜದೇವರ ನಿರೂಪ:

೧೦೧೫

ಆದ್ಯರ ಅಱುವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ;
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ.
ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ.
ಅಜಗಣ್ಣನ ಐದು ವಚನಕ್ಕೆ ಕೂಡಲಚೆನ್ನಸಂಗಯ್ಯನಲ್ಲಿ
ಮಹಾದೇವಿಯಕ್ಕಗಳ ಒಂದು ವಚನ ನಿರ್ವಚನ
ಕಾಣಾ ಸಿದ್ಧರಾಮಯ್ಯಾ. ॥೬೦॥

ಆ ಸಮಯದಲ್ಲಿ ಬಸವರಾಜದೇವರು ನಿರೂಪಿಸಿದ ವಚನ:

೧೦೧೬

ಎನ್ನ ಭಕ್ತಿಯ ಶಕ್ತಿಯೂ ನೀನೆ.
ಎನ್ನ ಮುಕ್ತಿಯ ಶಕ್ತಿಯೂ ನೀನೆ.
ಎನ್ನ ಯುಕ್ತಿಯ ಶಕ್ತಿಯೂ ನೀನೆ.
ಎನ್ನ ಮಹಾಘನದ ನಿಲವಿನ ಪ್ರಭೆಯನುಟ್ಟು
ತಳುವೆಳಗಾದ ಸ್ವಯಜ್ಞಾನಿ ಕೂಡಲಸಂಗಯ್ಯನಲ್ಲಿ
ಮಹಾದೇವಿಯಕ್ಕಗಳ ನಿಲವ
ಮಡಿವಾಳನಿಂದಱಿದು ಬದುಕಿದೆನಯ್ಯಾ ಪ್ರಭುವೆ. ॥೬೧॥

ಆ ಸಮಯದಲ್ಲಿ ಮಡಿವಾಳತಂದೆಗಳು ಮಹಾದೇವಿಯಕ್ಕನ ಸ್ತುತಿಸುವ ಪ್ರಸ್ತಾವದ ವಚನ:

೧೦೧೭

ಕಾಮಿಯಾಗಿ ನಿಃಕಾಮಿಯಾದಳು.
ಸೀಮೆಯಲ್ಲಿದ್ದು ನಿಸ್ಸೀಮೆಯಾದಳು.
ಭವಿಯ ಸಂಗವ ತೊಱೆದು ಭವಬಾಧೆಯ ಹಱಿದಳು.
ಬಸವಣ್ಣ ಗತಿಯೆಂದು ಬರಲು,
ನಾರು ಮಡಿಯ ಹಾಸಿ ನಡೆಸಿದೆ.
ನಡೆವುದಕ್ಕೆ ಹಾಸಿದ ಮಡಿಯ ಸರ್ವಾಂಗಕ್ಕೆ ಹೊದ್ದಳು.
ಆ ಮಡಿಯ ಬೆಳಗಿನ ಬೆಳಗಿನೊಳಗೆ ನಿರ್ವಯಲಾದಳು.
ಕಲಿದೇವರದೇವಯ್ಯಾ. ಮಹಾದೇವಿಯಕ್ಕಗಳ ನಿಲವ
ಬಸವಣ್ಣನ ಕೃಪೆಯಿಂದಲಱಿದೆನಯ್ಯಾ ಪ್ರಭುವೆ. ॥೬೨॥

ಆ ಸಮಯದಲ್ಲಿ ಪ್ರಭುದೇವರ ವಚನ:

೧೦೧೮

ನುಡಿಗೆಡೆಗೊಡದ ಘನವ ಹಿಡಿದು ಒಡಬಂದಿಯಾದಳು.
ಎಡೆಯಿಲ್ಲದ ಪರಿಪೂರ್ಣದೊಳಗೆ ನಡೆನುಡಿಗೆಟ್ಟಳು.
ತನ್ನ ನಿಲುಕಡೆಯ ನಿಜವ ತಾನಱಿಯದಂತೆ
ಎನ್ನಿಂದ ಕೇಳಿ ಸ್ವಯವಾದಳು.
ಗುಹೇಶ್ವರ ಸಾಕ್ಷಿಯಾಗಿ,
ಮಹಾದೇವಿಯಕ್ಕನ ನಿಲವ ಕೊಂಡಾಡುವುದಕ್ಕೆ
ತೆಱಹಿಲ್ಲ ಕಾಣಾ ಮಡಿವಾಳಯ್ಯಾ. ॥೬೩॥

ಇದಕ್ಕೆ ಅಕ್ಕಗಳ ಬಿನ್ನಹ:

೧೦೧೯

ಎಲ್ಲಾ ಎಲ್ಲವನಱಿದು ಫಲವೇನಯ್ಯಾ,
ತನ್ನ ತಾನಱಿಯಬೇಕಲ್ಲದೆ?
ತನ್ನಲ್ಲಿ ಅಱಿವು ಸ್ವಯವಾಗಿರಲು ಅನ್ಯರ ಕೇಳಲುಂಟೆ?
ಚೆನ್ನಮಲ್ಲಿಕಾರ್ಜುನ,
ನೀನಱಿವಾಗಿ ಮುಂದುದೋಱಿದ ಕಾರಣ
ನಿಮ್ಮಿಂದ ನಿಮ್ಮನಱಿದೆನಯ್ಯಾ ಪ್ರಭುವೆ. ॥೬೪॥

ಮತ್ತಂ, ಅಕ್ಕಗಳು ಶರಣರ ಸಂಗದಿಂದ ನಿಮ್ಮ ನಿಜದವಿರಳಸುಖವಾಯಿತ್ತೆಂದು ಬಿನ್ನೈಸುವ ಪ್ರಸ್ತಾವದ ವಚನ:

೧೦೨೦

ಸಂಗದಿಂದಲ್ಲದೆ ಅಗ್ನಿ ಹುಟ್ಟದು.
ಸಂಗದಿಂದಲ್ಲದೆ ಬೀಜ ಮೊಳೆದೋಱದು.
ಸಂಗದಿಂದಲ್ಲದೆ ದೇಹವಾಗದು.
ಸಂಗದಿಂದಲ್ಲದೆ ಸರ್ವಸುಖದೋಱದು.
ಚೆನ್ನಮಲ್ಲಿಕಾರ್ಜುನದೇವಯ್ಯಾ,
ನಿಮ್ಮ ಮಹಾನುಭಾವಿಗಳ ಸಂಗದಿಂದಲಾನು
ಪರಮಸುಖಿಯಾಗಿ ಬದುಕಿದೆನಯ್ಯಾ ಪ್ರಭುವೆ! ॥೬೫॥

ಮತ್ತಂ,

೧೦೨೧

ಅಯ್ಯಾ, ನಿಮ್ಮ ಅನುಭಾವಿಗಳ ಸಂಗದಿಂದ
ಎನ್ನ ತನು ಶುದ್ಧವಾಯಿತ್ತು.
ಅಯ್ಯಾ, ನಿಮ್ಮ ಅನುಭಾವಿಗಳು ಎನ್ನ ಒರೆದೊರೆದು,
ಕಡಿಕಡಿದು, ಅರೆದರೆದು ಅನುಮಾಡಿದ ಕಾರಣ,

ಎನ್ನ ಮನ ಶುದ್ಧವಾಯಿತ್ತು.
ಎನ್ನ ಸರ್ವಭೋಗಾದಿ ಭೋಗಂಗಳೆಲ್ಲ
ನಿಮ್ಮ ಶರಣರಿಗರ್ಪಿತವಾಗಿ,
ಎನ್ನ ಪ್ರಾಣ ಶುದ್ಧವಾಯಿತ್ತು.
ಎನ್ನ ಸರ್ವೇಂದ್ರಿಯಂಗಳೆಲ್ಲವು
ನಿಮ್ಮ ಶರಣರ ಪ್ರಸಾದವ ಕೊಂಡ ಕಾರಣ,
ಎನ್ನ ಸರ್ವಾಂಗ ಶುದ್ಧವಾಯಿತ್ತಯ್ಯ.
ನಿಮ್ಮ ಶರಣರಿಂತು ಎನ್ನನಾಗುಮಾಡಿದ ಕಾರಣ
ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಶರಣರಿಗೆ ತೊಡಿಗೆಯಾದೆನಯ್ಯಾ ಪ್ರಭುವೆ. ॥೬೬॥

ಮತ್ತಂ, ಮಹಾದೇವಿಯಕ್ಕಗಳು ಬಸವಣ್ಣ ಚೆನ್ನಬಸವಣ್ಣ ಮಡಿವಾಳಯ್ಯ ಸಿದ್ಧರಾಮಯ್ಯದೇವರು ಪ್ರಭುದೇವರು ಮುಖ್ಯವಾದ ಏಳುನೂಱೆಪ್ಪತ್ತು ಅಮರ ಗಣಂಗಳಿಂದ ಕೃತಾರ್ಥಳಾದೆನೆಂದು ಬಿನ್ನೈಸುವ ಪ್ರಸ್ತಾವದ ವಚನ:

೧೦೨೨

ಬಸವಣ್ಣನ ಮನೆಯ ಮಗಳಾಗಿ ಬದುಕಿದೆನಾಗಿ,
ತನ್ನ ಕರುಣ ಭಕ್ತಿಪ್ರಸಾದವ ಕೊಟ್ಟನು.
ಚೆನ್ನಬಸವಣ್ಣನ ತೊತ್ತಿನ ಮಗಳಾದ ಕಾರಣ,
ಒಕ್ಕ ಪ್ರಸಾದವ ಕೊಟ್ಟನು.
ಪ್ರಭುದೇವರ ತೊತ್ತಿನ ಮಗಳಾದ ಕಾರಣ
ಜ್ಞಾನಪ್ರಸಾದವ ಕೊಟ್ಟನು.
ಸಿದ್ಧರಾಮಯ್ಯನ ಶಿಶುಮಗಳಾದ ಕಾರಣ,
ಪ್ರಾಣಪ್ರಸಾದವ ಸಿದ್ಧಿಸಿಕೊಟ್ಟನು.
ಮಡಿವಾಳಮಾಚಿತಂದೆಯ ಮನೆಯ ಮಗಳಾದ ಕಾರಣ,
ನಿರ್ಮಳ ಪ್ರಸಾದವ ನಿಶ್ಚಯಿಸಿ ಕೊಟ್ಟನು.
ಇಂತೀ ಅಸಂಖ್ಯಾತರೆಲ್ಲರು ತಮ್ಮ ಕರುಣದ ಕಂದನೆಂದು
ತಲೆದಡಹಿ ರಕ್ಷಿಸಿದ ಕಾರಣ,
ಚೆನ್ನಮಲ್ಲಿಕಾರ್ಜುನನ ಪಾದಕ್ಕೆ ಯೋಗ್ಯಳಾದೆನು. ॥೬೭॥

ಮತ್ತಂ, ಮಹಾದೇವಿಯಕ್ಕಗಳು ತಮ್ಮ ಐಕ್ಯಸ್ಥಲವಾವುದೆಂದು ಪ್ರಭುದೇವರ ಕೇಳುವ ಪ್ರಸ್ತಾವದ ವಚನ:

೧೦೨೩

ಕರ್ಮವೆಂಬ ಕದಳಿ ಎನಗೆ.
ಕಾಯವೆಂಬ ಕದಳಿ ನಿಮಗೆ.
ಮಾಟವೆಂಬ ಕದಳಿ ಬಸವಣ್ಣಂಗೆ.

ಭಾವವೆಂಬ ಕದಳಿ ಚೆನ್ನಬಸವಣ್ಣಂಗೆ.
ಬಂದ ಬಂದ ಭಾವ ಸಲೆ ಸಂದಿತ್ತು.
ಎನ್ನಂಗದವಸಾನವ ಹೇಳಾ ಚೆನ್ನಮಲ್ಲಿಕಾರ್ಜುನಾ. ॥೬೮॥

ಇದಕ್ಕೆ ಪ್ರಭುದೇವರ ನಿರೂಪ:

೧೦೨೪

ಕಾಯವುಳ್ಳನ್ನಕ್ಕ ಶರಣರ ಸಂಗದಿಂದ ಅಱಿಯಬೇಕು.
ಜೀವವುಳ್ಳನ್ನಕ್ಕ ಅಱಿವಿನ ಮುಖದಿಂದ ಹರಿಯಬೇಕು.
ಅಱಿವನ್ನಬರ ಗೊಹೇಶ್ವರನೆಂಬ ಕುಱುಹಾಯಿತ್ತು. ॥೬೯॥

ಇದಕ್ಕೆ ಅಕ್ಕಗಳ ಬಿನ್ನಹ:

೧೦೨೫

ಲಿಂಗಸುಖಸಂಗದಲ್ಲಿ ಮನ ವೇದ್ಯವಾಯಿತ್ತು.
ಇನ್ನೆಲ್ಲಿಯಯ್ಯಾ ಎನಗೆ ನಿಮ್ಮಲ್ಲಿ ನಿರವಯವು?
ಇನ್ನೆಲ್ಲಿಯಯ್ಯಾ ನಿಮ್ಮಲ್ಲಿ ಕೂಡುವುದು?
ಪರಮಸುಖ ಪರಿಣಾಮ ಮನ ಮೇರೆದಪ್ಪಿ
ನಾನು ನಿಜವನ್ನೈದುವ ಠಾವ ಹೇಳಾ ಚೆನ್ನಮಲ್ಲಿಕಾರ್ಜುನಯ್ಯಾ. ॥೭೦॥

ಇಂತು ಮಹಾದೇವಿಯಕ್ಕಗಳು ತಮ್ಮ ಲಿಂಗೈಕ್ಯದ ಸ್ಥಾನ ಸ್ಥಿತಿ ಯಾವುದೆಂದು ಬೆಸಗೊಳಲು, ಇದಕ್ಕೆ ಪ್ರಭುದೇವರು ತತ್ಕಾಲ ಸ್ಥಾನ ಸಮರಸಮಂ ನಿರೂಪಿಸಿದ [1]ಪ್ರಸ್ತಾವದ[1] ವಚನ:

೧೦೨೬

ನೀ ನಾನೆಂಬುಭಯ ಸಂಗವಳಿದು
ತಾನು ತಾನಾದ ತ್ರಿಕೂಟವೆಂಬ ಮಹಾಗಿರಿಯ
ತುಟ್ಟತುದಿಯ ಮೆಟ್ಟಿ ನೋಡಲು,
ಬಟ್ಟಬಯಲು ಕಾಣಬಹುದು ನೋಡಾ.
ಆ ಬಯಲ ಬೆರಸುವರೆ ತ್ರಿಕೂಟ ಗಿರಿಯೊಳಗೊಂದು
ಕಾಣಬಾರದ ಕದಳಿಯುಂಟು ನೋಡಾ.
ಕದಳಿಯ ಕಳೆದಲ್ಲಿ ಒಳಹೊಕ್ಕು ನೋಡಲು,
ತೊಳಗಿ ಬೆಳಗುವ ಜ್ಯೋತಿಯುಂಟು ಕೇಳಾ.
ನಡೆಯಲ್ಲಿಗೆ ತಾಯೆ
ಗೊಹೇಶ್ವರಲಿಂಗದಲ್ಲಿ ಪರಮ ಪದವಿ
ನಿನಗೆ ಸ್ವಯವಹುದು ನೋಡಾ. ॥೭೧॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಮಹಾದೇವಿಯಕ್ಕಗಳು ಬಸವ ಮೊದಲಾದ ಗಣಂಗಳಿಗೆ ಲಿಂಗೈಕ್ಯವ ಹವಣಿಸಿ, ತನ್ನ ನಿಜದೈಕ್ಯವನು ನಿಶ್ಚಯಿಸಿದ ಪ್ರಸ್ತಾವದ ವಚನ:

೧–೧ x (ಮೂ)

೧೦೨೭

ಮಾಟಕೂಟವಾಯಿತ್ತಯ್ಯಾ ಬಸವಣ್ಣಂಗೆ.
ನೋಟಕೂಟವಾಯಿತ್ತಯ್ಯಾ ಅಲ್ಲಮಪ್ರಭುದೇವರಿಗೆ.
ಭಾವಕೂಟವಾಯಿತ್ತಯ್ಯಾ ಅಜಗಣ್ಣಂಗೆ.
ಸ್ನೇಹ ಕೂಟವಾಯಿತ್ತಯ್ಯಾ ಸೊಡ್ಡಳಬಾಚರಸರಿಗೆ.
ಇವರೆಲ್ಲರ ಕೂಟವಾಯಿತ್ತಯ್ಯಾ ಚೆನ್ನಬಸವಣ್ಣಂಗೆ.
ಎನಗೆ ನಿಮ್ಮಲ್ಲಿ ಅವಿರಳ[೧] ಕೂಟ ಚೆನ್ನಮಲ್ಲಿಕಾರ್ಜುನಾ. ॥೭೨॥

ಮತ್ತಂ, ಅಕ್ಕಗಳು ಆ ಶರಣರಿಗೂ ತಮಗೂ ಐಕ್ಯ ನಿಷ್ಪತ್ತಿಯ ಬಿನ್ನೈಸುವ ವಚನ:

೧೦೨೮

ಮಾಟಕೂಟವೆಂಬುದಿಲ್ಲ ಬಸವಣ್ಣಂಗೆ,
ನೋಟ ಕೂಟವೆಂಬುದಿಲ್ಲ ಪ್ರಭುದೇವರಿಗೆ.
ಭಾವಕೂಟವೆಂಬುದಿಲ್ಲ ಅಜಗಣ್ಣಂಗೆ.
ಸ್ನೇಹಕೂಟವೆಂಬುದಿಲ್ಲ ಚೆನ್ನಬಸವಣ್ಣಂಗೆ
ಎನಗೆ ನಿಮ್ಮ ಕೂಟವೆಂಬುದಿಲ್ಲ ಚೆನ್ನಮಲ್ಲಿಕಾರ್ಜುನ. ॥೭೩॥

ಮತ್ತಂ, ಅಕ್ಕಗಳು ತಮ್ಮ ಲಿಂಗೈಕ್ಯವ ನಿಶ್ಚಯಿಸಿ, ತಮ್ಮ ಷಟ್‌ಸ್ಥಲ ನಿಷ್ಪತ್ತಿಯ ನಿರೂಪಿಸುವ ವಚನ:

೧೦೨೯

ಭಕ್ತೆಯಾನಪ್ಪೆನಯ್ಯಾ,
ಕರ್ತೃ ಭೃತ್ಯತ್ವವನಜೆಯೆ.
ಮಾಹೇಶ್ವರಿಯಾನಪ್ಪೆನಯ್ಯಾ,
ವ್ರತ ನಿಯಮ ಛಲವನಜೆಯೆ.
ಪ್ರಸಾದಿಯಾನಪ್ಪೆನಯ್ಯಾ,
ಅರ್ಪಿತ ಅನರ್ಪಿತವ ಮುನ್ನಜೆಯೆ.
ಪ್ರಾಣಲಿಂಗಿಯಾನಪ್ಪೆನಯ್ಯಾ,
ಅನುಭಾವದ ಗಮನವ ನಾನಜೆಯೆ.
ಶರಣೆಯಾನಪ್ಪೆನಯ್ಯಾ,
ಸತಿಪತಿಯೆಂಬ ಭಿನ್ನವನಜೆಯೆ.
ಐಕ್ಯಳಾನಪ್ಪೆನಯ್ಯಾ, ಬೆರಸಿ ಭೇದವನಜೆಯೆ.
ಚೆನ್ನಮಲ್ಲಿಕಾರ್ಜುನಯ್ಯಾ,
ಷಟ್‌ಸ್ಥಲದಲ್ಲಿ ನಿಸ್ಥಲದ ವರ್ತನೆಯ ಪರಿಜ್ಞಾನಿಯಾಗಿಪ್ಪೆನಯ್ಯಾ. ॥೭೪॥

ಈ ಹೀಂಗೆಂದು ಮಹಾದೇವಿಯಕ್ಕಗಳು ಆ ಪ್ರಭುದೇವರು ಮುಖ್ಯವಾದ ಎಲ್ಲಾ ಪುರಾತನರ ಬೀಳ್ಕೊಂಡ ಪ್ರಸ್ತಾವದ ವಚನ:

---

೧ + ದ(ಮು)

೧೦೩೦
ಒಡಲಿಲ್ಲದ, ನುಡಿಯಿಲ್ಲದ, ಕಡೆಯಿಲ್ಲದ
ನಲ್ಲನ ಒಡಗೂಡಿ
ಸುಖಿಯಾದೆ ಕೇಳಿರಯ್ಯಾ,
ಭಾಷೆ ಪೈಸರವಿಲ್ಲ ಓಸರಿಸೆನನ್ನಕ್ಕೆ.
ಆಶೆಮಾಡೆನು ಮತ್ತೆ ಭಿನ್ನ ಸುಖಕ್ಕೆ.
ಆಱಳಿದು ಮೂಱಾಗಿ, ಮೂಱಳಿದು ಎರಡಾಗಿ,
ಎರಡಳಿದು ಒಂದಾಗಿ ನಿಂದೆನಯ್ಯಾ!
ಬಸವಣ್ಣ ಮೊದಲಾದ ಶರಣರಿಗೆ ಶರಣಾರ್ಥಿ.
ಪ್ರಭುವಿನಿಂದ ಕೃತಕೃತ್ಯಳಾದೆ ನಾನು.
ಮಱೆಯಲಾಗದು, ನಾನು ನಿಮ್ಮ ಶಿಶುವೆಂದು.
ಎನ್ನನು ಚೆನ್ನಮಲ್ಲಿಕಾರ್ಜುನನ ಬೆರಸೆಂದು ಹರಸುತ್ತಿಹುದು. ॥೭೫॥

೧೦೩೧
ಹುಟ್ಟಿದೆ ಶ್ರೀ ಗುರುವಿನ ಹಸ್ತದಲ್ಲಿ.
ಬೆಳೆದೆನು ಅಸಂಖ್ಯಾತರ ಕರುಣದೊಳಗೆ.
ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ,
ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ!
ಇಂತಪ್ಪ ತ್ರಿವಿಧಾಮೃತವನು ದಣಿಯಲೆಱೆದು ಸಲಹಿದರೆನ್ನ.
ವಿವಾಹವ ಮಾಡಿದಿರಿ; ಸಯವಪ್ಪ ಗಂಡಂಗೆ ಕೊಟ್ಟಿರಿ.
ಕೊಟ್ಟ ಮನೆಗೆ ಕಳುಹಲೆಂದು
ಅಸಂಖ್ಯಾತರೆಲ್ಲರೂ ನೆರೆದು ಬಂದಿರಿ.
ಬಸವಣ್ಣ ಮೆಚ್ಚಲೊಗತನವ ಮಾಡುವೆ.
ಚೆನ್ನಮಲ್ಲಿಕಾರ್ಜುನನ ಕೈವಿಡಿದು,
ನಿಮ್ಮ ತಲೆಗೆ ಹೂವ ತಹೆನಲ್ಲದೆ ಹುಲ್ಲು ತಾರೆನವಧರಿಸಿ,
ನಿಮ್ಮಡಿಗಳೆಲ್ಲರು, ಮರಳಿ ಬಿಜಯಂಗೆಯ್ವುದು;
ಶರಣು ಶರಣಾರ್ಥಿ. ॥೭೬॥

ಇಂತು ಮಹಾದೇವಿಯಕ್ಕಗಳು, ಬಸವರಾಜದೇವರು ಚೆನ್ನಬಸವರಾಜದೇವರು ಪ್ರಭುದೇವರು ಮುಖ್ಯವಾದ ಅಸಂಖ್ಯಾತರ ಬೀಳ್ಕೊಂಡು ಕಲ್ಯಾಣಪುರಮಂ ಪೊಱಮಟ್ಟು ಬರುತ್ತ, ಅಸಂಖ್ಯಾತರ ವಿಯೋಗದಿಂದ ಅವಸ್ಥೆಯಿಂ ನುಡಿದ ಪ್ರಸ್ತಾವದ ವಚನ:

೧೦೩೨
ಅಯ್ಯ, ನಿಮ್ಮ ಮಹಾಂತರ ಕೂಡಿದ ಸುಖವನುಪಮೆಗೆ ತರಬಾರದಯ್ಯಾ!
ಅಯ್ಯಾ, ನಿಮ್ಮ ಮಹಾಂತರ ಕೂಡಿ ಅಗಲುವ ಧಾವತಿಯಿಂದ
ಸಾವುದು ಕರ ಲೇಸಯ್ಯಾ.

ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ನಿಜವನಜೆದ ಮಹಾ ಮಹಿಮರನಗಲಿ ನಿಲಲಾಜೆನಯ್ಯಾ. ॥೭೭॥

ಈ ಹೀಂಗೆಂದು ಮಹಾದೇವಿಯಕ್ಕಗಳು ಶರಣರನಗಲ್ವ ದುಃಖಮಂ ತಮ್ಮ ತಾವೆ ಸಂತೈಸಿಕೊಂಡು, ಶ್ರೀಗಿರಿಯತ್ತಲಭಿಮುಖವಾಗಿ ಬರುತ್ತ, ಮಹಾರಣ್ಯಮಂ ಪೊಕ್ಕು, ಚೆನ್ನಮಲ್ಲಿಕಾರ್ಜುನನ ವಿಕಳಾವಸ್ಥೆಯಿಂ ಸುಳಿದಾಡುತ್ತಿರ್ದ ಪ್ರಸ್ತಾವದ ವಚನ:

೧೦೩೩

ಇಂದ್ರನೀಲದ ಗಿರಿಯನೇಜೆಕೊಂಡು,
ಚಂದ್ರಕಾಂತದ ಶಿಲೆಗಳನಪ್ಪಿಕೊಂಡು,
ಕೊಂಬ ಬಾರಿಸುತ್ತ ಶಿವನೇ, ನಿಮ್ಮ ನೆನೆವುತ್ತ ಎಂದಿಪ್ಪೆನೂ?
ಅಂಗಭಂಗ ಮನಭಂಗವಳಿದು ನಿಮ್ಮ ನೆನೆವುತ್ತ ಎಂದಿಪ್ಪೆನೂ?
ಅಂಗಭಂಗವಳಿದು ನಿಮ್ಮನೆಂದಿಗೆ ನೆರೆವೆನಯ್ಯಾ
ಚೆನ್ನಮಲ್ಲಿಕಾರ್ಜುನಾ? ॥೭೮॥

ಮತ್ತಂ,

೧೦೩೪

ಒಡಲ ಕಳವಳಕ್ಕಾಗಿ ಅಡವಿಯ ಹೊಕ್ಕೆನು.
ಗಿಡುಗಿಡುದಪ್ಪದೆ ಬೇಡಿದೆನೆನ್ನಂಗಕ್ಕೆಂದು.
ಅವು ನೀಡಿದವು ತಮ್ಮ ಲಿಂಗಕ್ಕೆಂದು.
ಆನು ಬೇಡಿ ಭವಿಯಾದೆನು; ಅವು ನೀಡಿ ಭಕ್ತರಾದವು.
ಇನ್ನು ಬೇಡಿದೆನಾದರೆ, ಚೆನ್ನಮಲ್ಲಿಕಾರ್ಜುನಯ್ಯಾ ನಿಮ್ಮಾಣೆ. ॥೭೯॥

ಇಂತು ಮಹಾದೇವಿಯಕ್ಕಗಳು ಶ್ರೀಗಿರಿಯತ್ತ ಬರುತ್ತ, ವನಾಂತರದೊಳು ಖಗಮೃಗಂಗಳಂ ಕಂಡು ನುಡಿಸುತ್ತಿರ್ದ ಪ್ರಸ್ತಾವದ ವಚನ:

೧೦೩೫

ಅಳಿಸಂಕುಳವೆ, ಮಾಮರವೆ, ಬೆಳದಿಂಗಳೆ, ಕೋಗಿಲೆಯೆ,
ನಿಮ್ಮನೆಲ್ಲರನೂ ಒಂದ ಬೇಡುವೆನು.
ಎನ್ನೊಡೆಯ ಚೆನ್ನಮಲ್ಲಿಕಾರ್ಜುನದೇವರ
ಕಂಡರೆ ಕರೆದು ತೋಜೆರೆ. ॥೮೦॥

ಮತ್ತಂ,

೧೦೩೬

ಚಿಲಿಮಿಲಿ ಎಂದೋದುವ ಗಿಳಿಗಳಿರಾ, ನೀವು ಕಾಣಿರೆ?
ಸ್ವರವೆತ್ತಿ ಪಾಡುವ ಕೋಗಿಲೆಗಳಿರಾ, ನೀವು ಕಾಣಿರೆ?
ಎಜಗಿ ಬಂದಾಡುವ ತುಂಬಿಗಳಿರಾ ನೀವು ಕಾಣಿರೆ?
ಸರವರದೊಳಗಾಡುವ ಹಂಸೆಗಳಿರಾ, ನೀವು ಕಾಣಿರೆ?
ಗಿರಿಗಹ್ವರದೊಳಗಾಡುವ ಪುಳಿಂದರು ನೀವು ಕಾಣಿರೆ?
ಚೆನ್ನಮಲ್ಲಿಕಾರ್ಜುನನೆಲ್ಲಿದ್ದಾನೆಂದು ಹೇಳಿರೆ. ॥೮೧॥

ಮತ್ತಂ,

೧೦೩೭

ವನವೆಲ್ಲಾ [1]ನೀವೆ.[1] ವನದೊಳಗಣ ದೇವತರುವೆಲ್ಲಾ [1]ನೀವೆ.[1]
ತರುವಿನೊಳಗಾಡುವ ಖಗಮೃಗವೆಲ್ಲ [1]ನೀವೆ.[1]
ಚೆನ್ನಮಲ್ಲಿಕಾರ್ಜುನಾ ಸರ್ವಭರಿತನಾಗಿ ಎನಗೇಕೆ ಮುಖದೋಜೆ? ॥೮೨॥

ಇಂತು ಮಹಾದೇವಿಯಕ್ಕಗಳು ವನಾಂತರದೊಳು ಬರುತ್ತ ಪರ್ವತವನೇಱುತ್ತಲಿರ್ದ ಪ್ರಸ್ತಾವದ ವಚನ:

೧೦೩೮

ಮೂಲಾ[2]ಧಾರದ[2] ಬೇರ ಮೆಟ್ಟಿ ಭೂಮಂಡಲವನೇಱಿದೆ.
ಆಚಾರದ ಬೇರ ಹಿಡಿದು ಐಕ್ಯದ ತುದಿಯನೇಱಿದೆ.
ವೈರಾಗ್ಯದ ಸೋಪಾನದಿಂದ ಶ್ರೀಗಿರಿಯನೇಱಿದೆ.
ಕೈವಿಡಿದು ತೆಗೆದುಕೊಳ್ಳಾ ಚೆನ್ನಮಲ್ಲಿಕಾರ್ಜುನಾ! ॥೮೩॥

ಇಂತು ಶ್ರೀಗಿರಿಯನೇಱಿ ಶಿವನೊಳಗೆ ಐಕ್ಯವಾಗಬೇಕೆಂದು ನೊಂದು ಬಿನ್ನೈಸುವ ಪ್ರಸ್ತಾವದ ವಚನ:

೧೦೩೯

ಕ್ರೀಯುಳ್ಳಡಂತೊಂದಾಸೆ.
ಸದ್‌ಭಕ್ತರ ನುಡಿಗಡಣವುಳ್ಳಡಂತೊಂದಾಸೆ.
ಶ್ರೀಗಿರಿಯನೇಱಿ ನಿಮ್ಮ ಬೆರಸಿದರೆ
ಎನ್ನಾಸೆಗೆ ಕಡೆಯೆ ಅಯ್ಯಾ!
ಆವಾಸೆಯೂ ಇಲ್ಲದೆ ನಿಮ್ಮ ನಂಬಿ ಬಂದು ಕೆಟ್ಟೆನಯ್ಯಾ
ಚೆನ್ನಮಲ್ಲಿಕಾರ್ಜುನಾ! ॥೮೪॥

ಮತ್ತಂ,

೧೦೪೦

ಬಯಲು ಲಿಂಗವೆಂಬೆನೆ? ಬಗಿದು ನಡೆವಲ್ಲಿ ಹೋಯಿತ್ತು.
ಬೆಟ್ಟ ಲಿಂಗವೆಂಬೆನೆ? ಮೆಟ್ಟಿ ನಿಂದಲ್ಲಿ ಹೋಯಿತ್ತು.
ತರುಮರಾದಿಗಳು ಲಿಂಗವೆಂಬೆನೆ? ತಱಿದಲ್ಲಿ ಹೋಯಿತ್ತು.
ಲಿಂಗಜಂಗಮದ ಪಾದವೆ ಗತಿ ಎಂದು ನಂಬಿದ
ಸಂಗನಬಸವಣ್ಣನ ಮಾತ ಕೇಳದೆ ಕೆಟ್ಟೆನಯ್ಯಾ
ಚೆನ್ನಮಲ್ಲಿಕಾರ್ಜುನಾ. ॥೮೫॥

ಮತ್ತಂ,

೧–೧ ನೀನೆ (ಮೂ) ೨–೨ ದ್ವಾರದ(ಮೂ)

೧೦೪೧

ಬೆರಸುವರೆ ಬೇಗ ತೋಱು,
ಹೊಱಹಾಯ್ಕದಿರಯ್ಯಾ.
ನಿಮ್ಮಲ್ಲಿಗೆ ಸಲೆ ಸಂದ ತೊತ್ತಾನು,
ಎನ್ನ ಹೊಱಹಾಯ್ಕದಿರಯ್ಯಾ.
ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ನಂಬಿ ಬೆಂಬಳಿಬಂದೆನು.
ಇಂಬುಗೊಳ್ಳಯ್ಯಾ ಬೇಗದಲ್ಲಿ. ॥೮೬॥

ಇಂತು ಮಹಾದೇವಿಯಕ್ಕಗಳು ಚೆನ್ನಮಲ್ಲಿಕಾರ್ಜುನನೊಳಗೆ ಸಮರಸೈಕ್ಯಮಂ ಶೀಘ್ರದಿಂ ಬಯಸಿ, ಉಪಾವಸ್ತೆಗೆಯ್ದು ಬಂದು ಕದಳಿಯಂ ಕಂಡ ಪ್ರಸ್ತಾವದ ವಚನ:

೧೦೪೨

ವನವೆಲ್ಲಾ ಕಲ್ಪತರು, ಗಿಡುವೆಲ್ಲಾ ಮರುಜೇವಣಿ,
ಶಿಲೆಗಳೆಲ್ಲಾ ಪರುಷ; ನೆಲನೆಲ್ಲಾ ಅವಿಮುಕ್ತಕ್ಷೇತ್ರ.
ಜಲವೆಲ್ಲಾ ನಿರ್ಜರಾಮೃತ; ಮೃಗವೆಲ್ಲಾ ಪುರುಷಮೃಗ.
ಎಡಹುವ ಹರಳೆಲ್ಲಾ ಚಿಂತಾಮಣಿ.
ಚೆನ್ನಮಲ್ಲಿಕಾರ್ಜುನಯ್ಯನ ನಚ್ಚಿನ ಗಿರಿಯ ಸುತ್ತಿ ನೋಡುತ್ತ ಬಂದು,
ಕದಳಿಯ ಬನವ ಕಂಡೆ ನಾನು! ॥೮೭॥

ಇಂತು ಮಹಾದೇವಿಯಕ್ಕಗಳು ಕದಳಿಯ ಬಾಗಿಲಲ್ಲಿ ನಿಂದು, ಕರಕಮಲದಿಷ್ಟಲಿಂಗಮಂ ತೂರ್ಯದಿಂ ಜ್ಞಾನಪ್ರಭಾವದೊಳು ಸ್ತುತಿಸುತ್ತಿರಲು, ಅಂತರಂಗದ ಚಿತ್ಪ್ರಕಾಶವೆ ಬಹಿಷ್ಕರಿಸಿ ಜಂಗಮಸ್ವರೂಪವನೆಯ್ದಿ, ಹೊಳೆವ ಕೆಂಜೆಡೆಗಳಿಂ ಸುಲಿಪಲ್ಗಳಿಂ ಕಂಗಳ ಕಾಂತಿಯಿಂ ದರಹಸಿತವದನದಿಂ ಮಾಣಿಕ್ಯಮಕುಟದಿಂ ತೊಳಗಿ ಬೆಳಗುತ್ತ ಮುಂದೆ ಪ್ರಸನ್ನವಾಗಲು, ಮಹಾದೇವಿಯಕ್ಕಗಳು ಆ ಶ್ರೀಮೂರ್ತಿಯಂ ಕಂಡ ಪ್ರಸ್ತಾವದ ವಚನ:

೧೦೪೩

ಹೊಳೆವ ಕೆಂಜೆಡೆಗಳು, ಮಣಿಮಕುಟ
ಒಪ್ಪುವ ಸುಲಿಪಲ್ಲ, ನಗೆ ಮೊಗದ,
ಕಂಗಳ ಕಾಂತಿಯಿಂ ಈರೇಳು ಭುವನಮಂ ಬೆಳಗುವ
ದಿವ್ಯಸ್ವರೂಪನ ಕಂಡೆನ್ನ ಕಂಗಳ ಬರ ಹಿಂಗಿತ್ತಿಂದು
ಗಂಡಗಂಡರೆಲ್ಲರ ಹೆಂಡಿರಾಗಿ ಆಳುವ [1]ಗರುವನ[1] ಕಂಡೆ ನಾನು
ಜಗದಾದಿಶಕ್ತಿಯೊಳು ಬೆರಸಿ ಮಾತಾಡುವ
ಪರಮ ಗುರು ಚೆನ್ನಮಲ್ಲಿಕಾರ್ಜುನನ
ನಿಲವ ಕಂಡು ಬದುಕಿದೆನು! ॥೮೮॥

೧-೧ ಗುರುವನ (ಮೂ)

ಇಂತು ಮಹಾದೇವಿಯಕ್ಕಗಳು ಆ ಚರಮೂರ್ತಿಯಂ ಕಂಡು ಸ್ತುತಿಸಿ ನಮಸ್ಕಾರಮಂ ಮಾಡಿ, ಎಲೆ ದೇವಾ, ಸಕಲಕರಣಂಗಳ ಉಪಟಳಕ್ಕಂಜಿ ನಿಮ್ಮ ಶರಣರ ಮಱೆಹೊಕ್ಕೆ . ಅವರ ಕಾರುಣ್ಯಮಂ ಪಡೆದು ಬಂದು ನಿಮ್ಮ ಶ್ರೀಮೂರ್ತಿಯ ಕಂಡೆ. ಇನ್ನು ಎನ್ನ ನಿಮ್ಮೊಳಗೆ ಐಕ್ಯವ ಮಾಡಿಕೊಳ್ಳಾ ಚೆನ್ನಮಲ್ಲಿಕಾರ್ಜುನಾ ಎಂದು ಬಿನ್ನೈಸಲು, ಆ ಚಿತ್‌ಸ್ವರೂಪನಪ್ಪ ಜಂಗಮವು ಭವಗೆಟ್ಟು ಬಂದ ಮಗಳೆ ಬಾರಾ ಎಂದು ತೆಗೆದು ಬಿಗಿಯಪ್ಪಲು, ಆ ಮಹಾದೇವಿಯಕ್ಕಗಳು ಲಿಂಗೈಕ್ಯವಾದ ವಚನ:

೧೦೪೪

ಕದಳಿಯೆಂಬುದು ತನು; ಕದಳಿಯೆಂಬುದು ಮನ;
ಕದಳಿಯೆಂಬುದು ವಿಷಯಂಗಳು;
ಕದಳಿಯೆಂಬುದು ಭವಘೋರಾರಣ್ಯ.
ಕದಳಿಯೆಂಬುದ ಗೆದ್ದು ತವೆ ಬದುಕಿ ಬಂದು
ಕದಳಿಯ ಬನದಲ್ಲಿ ಭವಹರನ ಕಂಡೆನು.
ಭವಗೆಟ್ಟು ಬಂದ ಮಗಳೆಂದು ಕರುಣದಿಂ ತೆಗೆದು ಬಿಗಿದಪ್ಪಿದರೆ,
ಚೆನ್ನಮಲ್ಲಿಕಾರ್ಜುನನ ಹೃದಯಕಮಲದಲ್ಲಿ ಅಡಗಿದೆನು. ೮೯॥

ಮತ್ತಂ, ಅಕ್ಕಗಳು ನಿಜೈಕ್ಯವನೆಯ್ದಿ ಶಬ್ದಮುಗ್ಧವಾದೆನೆಂದು ಬಿನ್ನೈಸುವ ವಚನ:

೧೦೪೫

ಲಿಂಗವೆನ್ನೆ, ಲಿಂಗೈಕ್ಯವೆನ್ನೆ; ಸಂಗವೆನ್ನೆ, ನಿಸ್ಸಂಗವೆನ್ನೆ.
ಆಯಿತ್ತೆನ್ನೆ, ಆಗದೆನ್ನೆ, ನೀನೆನ್ನೆ, ನಾನೆನ್ನೆ.
ಚೆನ್ನಮಲ್ಲಿಕಾರ್ಜುನಲಿಂಗದಲ್ಲಿ
ಘನಲಿಂಗೈಕ್ಯವಾದ ಬಳಿಕ ಮತ್ತೇನೂ ಎನಲೊಲ್ಲದೆ ಇದ್ದೆನು. ॥೯೦॥

ಇಂತು ಮಹಾದೇವಿಯಕ್ಕಗಳು ಚೆನ್ನಮಲ್ಲಿಕಾರ್ಜುನನು ತನ್ನ ಹೃತ್ಕಮಲದಲ್ಲಿ ವಾರಿಕಲ್ಲು ವಾರಿಯ ಬೆರೆದಂತೆ, ಉಪ್ಪಿನ ಪೊಟ್ಟಣವ ಉದಕದಲ್ಲಿ ಬೈಚಿಟ್ಟಂತೆ, ಕ್ಷೀರ ಕ್ಷೀರ ಬೆರೆದಂತೆ ಅಡಗಿಸಿಕೊಂಡು ನಿರವಯಲಾಗಲು, ಇತ್ತ ಕಲ್ಯಾಣದೊಳಗೆ ಚೆನ್ನಬಸವರಾಜದೇವರು ಬಸವಾದಿಪ್ರಮಥರ ಮಧ್ಯದಲ್ಲಿ ಕಂಡು, ಅಕ್ಕಗಳು ಪ್ರಭುದೇವರೊಳಗೆ ನಿರವಯಲಾದಳೆಂದು ಆ ಅಕ್ಕಗಳ ಸ್ತೋತ್ರಮಂ ಮಾಡಿದ ಪ್ರಸ್ತಾವದ ವಚನ:

೧೦೪೬

ತನುವಿನೊಳಗಿದ್ದು ತನುವ ಗೆದ್ದಳು.
ಮನದೊಳಗಿದ್ದು ಮನವ ಗೆದ್ದಳು.
ವಿಷಯದೊಳಗಿದ್ದು ವಿಷಯಂಗಳ ಗೆದ್ದಳು.
ಅಂಗಸುಖವ ತೊಱೆದು ಭವವ ಗೆದ್ದಳು.
ಕೂಡಲಚೆನ್ನಸಂಗಯ್ಯನ ಹೃದಯಕಮಲವ ಬಗಿದು ಹೊಕ್ಕು
ನಿಜಪದವನೆಯ್ದಿದ ಮಹಾದೇವಿಯಕ್ಕನ ಶ್ರೀಪಾದಕ್ಕೆ
ನಮೋ ನಮೋ ಎನುತಿರ್ದೆನು. ॥೯೧॥

ಆ ಸಮಯದಲ್ಲಿ ಮಡಿವಾಳತಂದೆಗಳು ಮಹಾದೇವಿಯಕ್ಕಗಳಿಗೆ ಉರಿ ಕರ್ಪುರ ಸಂಯೋಗವಾಯಿತ್ತೆಂದು ಸ್ತುತಿಸಿದ ವಚನ:

೧೦೪೭

ಕಂಗಳ ನೋಟ ಕರಸ್ಥಲದ ಪ್ರಾಣ.
ಅಂಗವಿಕಾರ ನಿರ್ವಿಕಾರವಾಯಿತ್ತು.
ಸಂಗಸುಖ ನಿಸ್ಸಂಗವಾಯಿತ್ತು.
ಹೆಂಗೂಸೆಂಬ ಭಾವ ಬಯಲ ಬೆರಸಿತ್ತು.
ಕಲಿದೇವರದೇವಾ, ನಿಮ್ಮನೊಲಿಸಿ ಒಚ್ಚತವೋದ
ಮಹಾದೇವಿಯಕ್ಕನ ಪಾದವ ನೆನೆದು ನಾನು ಬದುಕಿದೆನು! ॥೯೨॥

ಇಂತೀ ಶ್ರೀಮತ್ ಸಕಲಗಣ ಪುರಾತನರೊಳ್ ಪ್ರಭುದೇವರು
ಮಹಾನುಭಾವಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್
ಮಹಾದೇವಿಯಕ್ಕಗಳ ಸಂಪಾದನೆಗಂ
ಷೋಡಶೋಪದೇಶಂ ಸಮಾಪ್ತಂ
ಅಂತು ವಚನ ೧೦೪೭ ಕ್ಕಂ ಮಂಗಳಮಹಾ ಶ್ರೀ

❖

೧೭
ಪ್ರಭು ದೇಶಾಂತರ ಪೋಗಿ ಬಂದ ಸಂಪಾದನೆ

ಕಂದ:

ಎಲ್ಲ ಗಣಂಗಳ ಬೀಳ್ಕೊಂ
ಡಲ್ಲಮಪ್ರಭು ದೇಶಪಾವನಾರ್ಥಂ ಚರಿಯಿಸಿ
ಸಲ್ಲೀಲೆಯಿಂದ ಮುದದಿಂ
ಕಲ್ಯಾಣಕೆ ಬಂದ ಪರಿಯದೆಂತೆನಲುಸುರ್ವೆಂ ॥೧॥

ಅದೆಂತೆಂದೊಡಾ ಚೆನ್ನಬಸವರಾಜದೇವರು ಮಡಿವಾಳಮಾಚಿತಂದೆಗಳು ಮಹಾದೇವಿಯಕ್ಕನ ಐಕ್ಯಸ್ಥಲಮಂ ಕೊಂಡಾಡುತ್ತಿರಲು, ಆ ಸಮಯದಲ್ಲಿ ಪ್ರಭುದೇವರು ಎಲ್ಲರ ಸ್ತುತಿಗಳ ಸಂತೈಸಿ ಮತ್ತೊಮ್ಮೆ ಬಂದಪೆನೆಂದು ಎಲ್ಲರ ಕೈಯಲ್ಲಿ ಕಳುಹಿಸಿಕೊಂಬ ಪ್ರಸ್ತಾವದ ವಚನ:

೧೦೪೮

ನಚ್ಚು ಮಚ್ಚಿನ ಸುಖಪರಿಣಾಮ ಸನ್ನಿಹಿತವಾದ ಬಳಿಕ
ಇನ್ನು ಅನುಭಾವವೆಂಬುದಿಲ್ಲ.
ಅಂತಿರಲಿ ನುಡಿಗಡಣ.
ಶಶಿಧರನಟ್ಟಿದ ಬೆಸನ ಮಾಡಬಂದ ಬಳಿಕ
ಹೇಳಿದ ಮಣಿಹವ ಮಾಡುತ್ತಿಹುದಲ್ಲದೆ,
ಅದು ತನ್ನ[1]ಲೀಲೆ[1] ತಾನು ಬೆರಸುವಂದಿಗೆ ಬೆರಸಲಿ.
ಆ ದಿನಕ್ಕೆ ಬಂದು ಹೇಳುವೆವು ನಿರ್ಣಯವ.
ಗೊಹೇಶ್ವರಲಿಂಗದ ಆಣತಿ ಬಪ್ಪನ್ನಬರ[2]
ಶಿವಶರಣರೆಲ್ಲರೂ ಸಂಗನಬಸವಣ್ಣ ಸಹಿತ ನಿತ್ಯರಾಗಿರಯ್ಯಾ॥೧॥

ಆ ಸಮಯದಲ್ಲಿ ಸಿದ್ಧರಾಮಯ್ಯದೇವರು ಅನುಜ್ಞೆಯಂ ಪಡೆದು ಬೀಳ್ಕೊಂಬ ಪ್ರಸ್ತಾವದ ವಚನ:

೧-೧ ಲ್ಲಿ (ಮೂ) ೨ x (ಮೂ)

೧೦೪೯

ಎಲೆ ಎಲೆ ಅಯ್ಯಾ, ನೀವು ಹೇಳಿರಯ್ಯಾ
ಎನಗೆ ಗತಿಯೇನು? ಎನಗೆ ಮತಿಯೇನು?
ನಿಮ್ಮಲ್ಲಿ ಸಮರಸವೆಂತು ಹೇಳಾ?
ಮೂರನೆಯ ನೆಲೆಯ ಕರುವಾಡದ
ಮೇಲುವಾಗಿಲು ಮನೆಯೊಳಗಿಪ್ಪೆನೊ ನಾನು?
ಚೌಕಮಧ್ಯದ ಎಂಟೆಸಳ ಮೊನೆಯ ಮೋಹರದ ನಡುವಣ
ಕೋಣೆಯೊಳಗಿಪ್ಪೆನೊ ನಾನು?
ಕಾಮನ ಕಟ್ಟುಪಂಜರವ ಬಿಟ್ಟು ನಿಲುವೆನೊ?
ಬಿಡದೆ ನಿಲುವೆನೊ ಹೇಳು ಹೇಳಾ ನಿರ್ಣಯವ,
ಎಲೆ ಎಲೆ ಕಪಿಲಸಿದ್ಧಮಲ್ಲಿನಾಥಯ್ಯಾ. ॥೨॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ :

೧೦೫೦

ಗುರುತತ್ತ್ವದಲ್ಲಿ ಹುಟ್ಟಿ, ಶಿವತತ್ತ್ವದಲ್ಲಿ ಬೆಳೆದು,
ಪರತತ್ತ್ವದಲ್ಲಿ ಮಗ್ನವಾದ ಶರಣಂಗೆ
ಕಾಯವಳಿದು ನಿರ್ವಯಲಾದಡೇನು?
ಕಂಥೆಯ ಕಳೆದು ನಿರ್ವಯಲಾದಡೇನು?
ಕಾಯಸಮಾಧಿ ಕರಣಸಮಾಧಿ ಭಾವಸಮಾಧಿಯಾದ ಬಳಿಕ,
ಗೊಹೇಶ್ವರಲಿಂಗದಲ್ಲಿ ಬಯಲ ಭ್ರಮೆಯ ಕಳೆದು
ಸುಜ್ಞಾನಸಮಾಧಿಯನೆಯ್ದಬಲ್ಲರೆ,
ಅದು ನಿಜಸಮಾಧಿ ಕೇಳಾ ಸಿದ್ಧರಾಮಯ್ಯಾ. ॥೩॥

ಇಂತು ಸಿದ್ಧರಾಮಯ್ಯದೇವರಿಗೆ ನಿಲುಕಡೆಯ ನಿರೂಪಿಸಿ ಬಿಜಯಂಗೆಯ್ಯಲು, ಆ ಬಸವರಾಜದೇವರು ಪ್ರಭುದೇವರನಗಲಿ ಪ್ರಳಾಪಿಸುತ್ತಿರ್ದ ಪ್ರಸ್ತಾವದ ವಚನ:

೧೦೫೧

ನಿಮ್ಮ ನೋಡನೋಡಲಿಕೆನ್ನ ಹರಣವಿದ್ದುದ ಕಂಡೆ.
ನಿಮ್ಮನಗಲಲೆನ್ನ ಹರಣವಿಲ್ಲಯ್ಯಾ.
ಇರುಳೊಂದು ಜುಗ ಮೇಲೆ ಕೆಡೆದಂತೆ ಆದೆ.
ಎಂತು ಆಳವಾಡಿ ಕಳೆವೆನಯ್ಯಾ?
ಹಲವನೆಲ್ಲ ಪಂಬಲಿಸಿ ಹಲುಬುವೆನಯ್ಯಾ!
ಕೂಡಲಸಂಗನ ಶರಣರನಗಲುವ ಧಾವತಿಯಿಂದ
ಮರಣವೆ ಲೇಸಯ್ಯಾ. ॥೪॥

ಮತ್ತಂ,

೧೦೫೨

ಅಯ್ಯಾ ನಿಮ್ಮ ಮಹಾನುಭಾವರನಗಲಿ ಬದುಕಲಾಱೆ.

ಶಿವಧೋ! ಕಂಗಳಶ್ರುಗಳಿಂದ ಮುಂದುಗಾಣೆ.

ಲಿಂಗಸಂಗಿಗಳನಗಲಿ ನಾನೆಂತು ಬದುಕುವೆ ಕೂಡಲಸಂಗಮದೇವಾ?॥೫॥

ಮತ್ತಂ,

೧೦೫೩

ಜಜ್ಜನೆ ಜರಿದೆನು, ಜಜ್ಜನೆ ಜರಿದೆನು ನೋಡಯ್ಯಾ!

ಬಿಬ್ಬನೆ ಬಿರಿದೆನು, ಬಿಬ್ಬನೆ ಬಿರಿದೆನು ನೋಡಯ್ಯಾ!

ನಾನೊಬ್ಬನೆ ಉಳಿದೆನು, ನಾನೊಬ್ಬನೆ ಉಳಿದೆನು,

ಕೂಡಲಸಂಗಮದೇವಯ್ಯಾ-ನಿಮ್ಮ ಶರಣರನಗಲಿದ ಕಾರಣ. ॥೬॥

ಮತ್ತಂ,

೧೦೫೪

ಕಂಡಡೆ ಮನೋಹರವು, ಕಾಣದಿರ್ದಡೆ ಅವಸ್ಥೆ ನೋಡಯ್ಯಾ!

ಹಗಲು ಇರುಳಹುದು, ಇರುಳು ಹಗಲಹುದು.

ಇರುಳುಹಗಲೊಂದು ಜುಗ ಮೇಲೆ ಕೆಡೆದಂತೆ ಇಹುದು.

ಕೂಡಲಸಂಗನ ಶರಣರನಗಲುವ ಧಾವತಿಯಿಂದ

ಮರಣವೇ ಲೇಸು ಕಂಡಯ್ಯಾ! ॥೭॥

ಚಿಕ್ಕದಣ್ಣಾಯಕರ ವಿಯೋಗಾವಸ್ಥೆಯ ವಚನ:

೧೦೫೫

ಮನಕ್ಕೆ ಮನವೇಕಾರ್ಥವಾಗಿ,

ಪ್ರಾಣಕ್ಕೆ ಪ್ರಾಣವೇಕಾರ್ಥವಾಗಿ,

ಭಾವಕ್ಕೆ ಭಾವವೇಕಾರ್ಥವಾಗಿ,

ಸಂಗಕ್ಕೆ ಸಂಗ ಸಮರತಿಯಾಗಿ

ಕೂಡಿದ ಕೂಟವನಗಲಬಾರದಯ್ಯಾ.

ಅಗಲಿ ಒಂದು ನಿಮಿಷ ಸೈರಿಸಬಾರದಯ್ಯಾ.

ಕೂಡಲಚೆನ್ನಸಂಗಾ ನಿಮ್ಮ ನಚ್ಚುಮಚ್ಚಿನ ಶರಣರನಗಲುವ ಅಗಲಿಕೆ

ಎನ್ನ ಪ್ರಾಣದ ಹೋಕಯ್ಯಾ! ॥೮॥

ಇಂತು ಚೆನ್ನಬಸವರಾಜದೇವರು ವಿಯೋಗಾವಸ್ಥೆಯೊಳಿರಲು, ಮಡಿವಾಳ ತಂದೆಗಳು ಸಂತೈಸುವ ವಚನ:

೧೦೫೬

ಹೊಱಗಿದ್ದಾನೆಂಬೆನೆ? ಒಳಗೂ ತಾನೆ ನೋಡಾ!

ಒಳಗಿದ್ದಾನೆಂಬೆನೆ? ಹೊಱಗೂ ತಾನೆ ನೋಡಾ!

ಒಳಹೊಱಗು ಸರ್ವಾಂಗ ಸನ್ನಿಹಿತವಾಗಿರ್ದ
ಸಮರಸದ ಮಹಿಮನ ತಿಳಿದು ನೋಡಾ.
ಅಗಲಲಿಲ್ಲದ ಘನವನಗಲಿದೆನೆಂಬ ಮಾತು
ಶಿವಶರಣರ ಮನಕ್ಕೆ ಬಹುದೆ?
ಮರಣವಿಲ್ಲದ ಮಹಿಮನ ನಿಲವ ತನ್ನಲ್ಲಿ ನೋಡಿ
ಶರಣೆಂಬುದಲ್ಲದೆ ಮಱೆಯಲಹುದೆ?
ತೆಱಹಿಲ್ಲದ ನಿಲವು
ಕಲಿದೇವರದೇವನು ಕರಸ್ಥಲದೊಳೈದಾನೆ ಕಾಣಾ ಚೆನ್ನಬಸವಣ್ಣಾ. ॥೯॥

ಮತ್ತಂ, ಮಡಿವಾಳಯ್ಯಗಳು ಪ್ರಭುದೇವರ ದೇಶಾಂತರಮಂ ಕೊಂಡಾಡಿದ ವಚನ:

೧೦೫೭

ದೇಶವಿನೋದಿಗಳಲ್ಲ; ದೇಶಭಾಷಿತರಲ್ಲ.
ದೇಶಾಶ್ರಯವ ತಮ್ಮದೆಂದೆನ್ನರು.
ದಾಸಭಾವದಲ್ಲಿಪ್ಪ ಸದ್‌ಭಕ್ತರಲ್ಲಿ ದೇಶಾಂತರವ ಮಾಡುವರು
ಭಕ್ತಿವತ್ಸಲರು, ಭಕ್ತಿ ನಿಶ್ಚಲರು ಕಲಿದೇವಾ, ನಿಮ್ಮ ಶರಣರು. ॥೧೦॥

ಮತ್ತಂ,

೧೦೫೮

ಭಕ್ತಿವತ್ಸಲರು ಕಲಿದೇವನ ಶರಣರು ಮಹಾಪುರುಷರು.
ಕಾಮ ಕ್ರೋಧಾದಿಗಳ ನಂದಿಸುವರು.
ಮದಮತ್ಸರವ ಸಿಂಹಾಸನವ ಮಾಡಿಕೊಂಬರು.
ಆಸೆಯಾಹಾರಕ್ಕೆ ಕೈಯಾನರು.
ದೇಶವೆನ್ನರು; ದೇಶಾಂತರವ ಮಾಡುವರು–
ಕಲಿದೇವಾ, ನಿಮ್ಮ ಶರಣರು. ॥೧೧॥

ಇಂತು ಪ್ರಭುದೇವರು, ಬಸವಣ್ಣ ಚೆನ್ನಬಸವಣ್ಣ ಮಡಿವಾಳಮಾಚಿತಂದೆಗಳಿಗೆ ಮಹಾಜ್ಞಾನಮಂ ಬೋಧಿಸಿ, ಸಕಲಪುರಾತನರ ಕೃತಾರ್ಥರಂ ಮಾಡಿ, ಮಹಾದೇವಿಯಕ್ಕಂಗೆ ನಿಜಶಿವತತ್ತ್ವಮಂ ನಿರ್ವಹಿಸಿ ತೋಱಿಕೊಟ್ಟು ಪರ್ವತಕ್ಕೆ ಕಳುಹಿ, ಸಿದ್ಧರಾಮಯ್ಯದೇವರಿಗೆ ನಿಜಸಮಾಧಿಯ ನಿರ್ಣಯಮಂ ತಿಳುಹಿ ಸೊನ್ನಲಿಗೆಯ ಪುರಕ್ಕೆ ಕಳುಹಿ, ತಾನು ನಿರ್ಗಮನದ ನಡೆವಿಡಿದು ನಾನಾ ದೇಶ ನಾನಾ ಗಿರಿ ಗುಹಾಂತರಂಗಳೊಳು ಸುಳಿದಾಡುತಿರ್ದನದೆಂತೆಂದಡೆ:

೧೦೫೯

ನಡೆದಡೆ ನಿರ್ಗಮನಿ,
ಸುಳಿದಡೆ ಗತಿವಿರಹಿತನನೇನೆಂಬೆನೆಂತೆಂಬೆ?
ಅಘಟಿತ ಘಟಿತನನೇನೆಂಬೆನೆಂತೆಂಬೆ?
ಅಖಂಡಿತಮಹಿಮನನೇನೆಂಬೆ?

ಆದಿಯಿಂದತತ್ತ [1]ಗೊಹೇಶ್ವರ[1]ನ ಶರಣ
ಅಲ್ಲಯ್ಯನ ಸುಳುಹು ಜಗಕ್ಕೆ ಪಾವನ. ॥೧೨॥

ಮತ್ತಂ,

೧೦೬೦

ನಡೆದಡೆ, ನಡೆಗೆಟ್ಟ ನಡೆಯ ನಡೆವುದಯ್ಯಾ.
ನುಡಿದಡೆ, ನುಡಿಗೆಟ್ಟ ನುಡಿಯ ನುಡಿವುದಯ್ಯಾ.
ಒಡಲ ಹಿಡಿದಡೆ, ಹಿಡಿಯದೆ ಹಿಡಿವುದಯ್ಯಾ.
ಕೂಡುವರೆ, ಕೇಡಿಲ್ಲದ ಕೂಟವ ಕೂಡುವುದಯ್ಯಾ.
ಗೊಹೇಶ್ವರಾ, ನಿಮ್ಮಲ್ಲಿ ನಿಲುವುದಯ್ಯಾ. ॥೧೩॥

ಮತ್ತಂ,

೧೦೬೧

ಗಿರಿಗಳ ಗುಹೆಗಳ ಕಂದರದಲ್ಲಿ
ನೆಲಹೊಲನ ಮುಟ್ಟದೆ ಇಪ್ಪೆ ದೇವಾ!
ಎಲ್ಲಿ ನೋಡಿದಡಲ್ಲಿ ಇಪ್ಪೆ ದೇವಾ!
ಮನಕ್ಕಗಮ್ಯ ಅಗೋಚರನಾಗಿ
ಅಲ್ಲಲ್ಲಿ ಎಲ್ಲಿಯೂ ನೀನೆ ಇಪ್ಪೆಯಯ್ಯಾ!,
ಗೊಹೇಶ್ವರಾ ನಿಮ್ಮನಗಲಕ್ಕೆ ಹರಿವರಿದು ಕಂಡೆ ನಾನು! ॥೧೪॥

ಇಂತು ಸುಳಿದು ಬರುತಿರ್ಪ ಪ್ರಭುದೇವರು ಪೊನ್ನಾಂಬಲನಾಥನಂ ನಿರೀಕ್ಷಿಸಿ ಅಲ್ಲಿಯುಳ್ಳ ಸದ್‌ಭಕ್ತಿಯುಕ್ತರಂ, ಸದಾಚಾರ ಸನ್ಮಾರ್ಗಿಗಳಂ, ಶಿವಲಿಂಗಾರ್ಚನ ಪರಾಯಣರಂ, ಶಿವಧ್ಯಾನೈಕನಿಷ್ಠರಂ, ಶಿವಪ್ರಸಾದ ಪಾದೋದಕಸೇವ್ಯರಂ, ಶಿವಲಿಂಗಾಂಗ ಸಂಬಂಧಿಗಳಂ, ಶಿವಾನುಭಾವಸಂಪನ್ನರಂ, ಶಿವಾದ್ವೈತವೇದ್ಯರಂ, ಶಿವಜ್ಞಾನೋದಯ ಪ್ರಸನ್ನರೊಳು ಸದ್‌ಗೋಷ್ಠಿಸಂಬಂಧಮಂ ಸಮವೇಧಿಸಿ, ಸರ್ವರಂ ಜೀವನ್ಮುಕ್ತರಂ ಮಾಡಿ, ಪೂರ್ವಾಬ್ಧಿಯ ತೀರಂಗೊಂಡು ರಾಮೇಶ್ವರಕ್ಕೆ ಬಂದು, ಆ ರಾಮನಾಥನೊಳು ಸುಖಸಂಕಥಾಪ್ರಸಂಗಮಂ ಮಾಡಿ, ಆ ರಾಮನಾಥನಿಂ ಪೂಜೆಯಂ ಕೈಕೊಂಡು, ಅಲ್ಲಿಂದ ದಕ್ಷಿಣ ಸಮುದ್ರಮಂ ನಿರೀಕ್ಷಿಸಿ, ಪಶ್ಚಿಮಾಂಬುಧಿಯಲ್ಲಿ ನಿಂದು, ಮಹಾಬಲೇಶ್ವರನ ಸ್ಥಾನಮಂ ಪೊಕ್ಕು, ಸ್ವಲೀಲೆಯಿಂ ತಿರುಗಿ ಉತ್ತರಾಬ್ಧಿಮುಖವಾಗಿ ಸೌರಾಷ್ಟ್ರ ಸೋಮನಾಥನಂ ನೋಡುತ್ತ, ತನ್ನ ಕಂಡು ಕೇಳ್ದ, ಪೆಸರ್ಗೊಂಡ, ನುಡಿದ ವಂದಿಸಿದ ಸರ್ವಜನಂಗಳ ಭವಪಾಶಬಂಧಮಂ ಪಱಿವುತ್ತ, ಅಲ್ಲಿಂದಂ ಪೊಱಮಟ್ಟು ನಾನಾ ಪುಣ್ಯಕ್ಷೇತ್ರಂಗಳಂ ನಿರೀಕ್ಷಿಸಿ, ಆ ಕ್ಷೇತ್ರಂಗಳಿಗೆ ಅಗಮ್ಯ ಪುಣ್ಯವರಂಗಳಂ ಕೊಡುತ್ತ, ಅಷ್ಟಾಷಷ್ಠಿತೀರ್ಥಂಗಳಂ ಸಮಸ್ತ ನಿಕರಮಂ ಮೆಟ್ಟಿ ನೋಡಿ, ಆ ಮಹಾತೀರ್ಥಂಗಳಿಂ ಪೂಜೆಗೊಂಡು, ತನ್ನ ಪರಮಾನಂದರಸವೆಂಬ ನಿರ್ಮಲ ಗಂಗಾಂಬುಕಣಮಂ ಆ ಸಕಲ ತೀರ್ಥಂಗಳಿಗೆ ಕಾರುಣ್ಯದಿಂದಿತ್ತು, ನಿತ್ಯನಿರ್ಮಳ ಪದಮಂ ಕೊಟ್ಟು, ಅಲ್ಲಿ ನಾನಾ ದೇಶಂಗಳೊಳು ಸುಳಿದು ಬರುತ್ತ, ತದ್ದೇಶಂಗಳಂ ಪಾವನವ ಮಾಡುತ್ತ,

---

೧–೧ ಗೊಗ್ಗೇಶ್ವರ (ಮೂ)

ಶ್ರೀಕೇತಾರಮಂ ಪೊಕ್ಕು ಅತ್ಯುತ್ಕಟ ಹಿಮವಂ ಗೆಲ್ದು, ಸವಾಲಕ್ಷ ಪರ್ವತಂಗಳಂ ತಿರುಗಿ, ತದ್ಗಿರಿ ಗುಹಾಂತರದೊಳು ಅಲ್ಲಲ್ಲಿ ವಿಶ್ರಮಂಗೈವುತ್ತಂ, ಒಂದು ಪಿರಿದಪ್ಪ ಗುಹೆಯಂ ಕಂಡು, ಆ ನಿವಾಸದೊಳು ಸ್ವಲೀಲೆಯಿಂ ಪದ್ಮಾಸನದೊಳ್ ಕುಳ್ಳಿರ್ದು, ಏಕಾಗ್ರಚಿತ್ತ ಮನ ಪವನ ಜ್ಞಾನ ಧ್ಯಾನ ಸಮ್ಮತ ಸಮರಸಭಾವದಿಂದ ನಿರ್ಭಾವಪದದೊಳು ನಿಂದು, ನಿಶ್ಶೂನ್ಯಮಂ ನಿರೀಕ್ಷಿಸಿ, ನಿಜಸಮಾಧಿಯೊಳು ಮೂರ್ತಿಗೊಂಡು ಇದ್ದರದೆಂತೆಂದಡೆ, ತತ್‌ಸಮಾಧಿಯ ಪ್ರಸ್ತಾವದ ವಚನ:

೧೦೬೨

ಅಚಲಸಿಂಹಾಸನದಲ್ಲಿ ನಿಶ್ಚಲವೆಂಬ ಮಂಟಪವು.
ಸಂಚದೋವರಿಯೊಳಗೆ ರುಚಿಗಳೆಲ್ಲವ ನಿಲಿಸಿ,
ಪಂಚರತ್ನದ ಶಿಖರ, ಮಿಂಚುವ ಕೋಟಿಕಳಶ
ವಚನವಿಚಿತ್ರದ ಪುಷ್ಪದ ರಚನೆ.
ನವರಂಗದಲ್ಲಿ ಖೇಚರಾದಿ ಗಮನವನು ವಿಚಾರಪರ ನುಂಗಿ,
ಗೊಹೇಶ್ವರ ನಿಂದ ನಿಲವು ಸಚರಾಚರವ ಮೀಱಿತ್ತು! ॥೧೫॥

ಮತ್ತಂ,

೧೦೬೩

ಸ್ವಸ್ಥಾನ ಸ್ವಸ್ಥಿರದ ಸುಮನಮಂಟಪದೊಳಗೆ
ನಿತ್ಯನಿರಂಜನ ಪ್ರಭೆಯ ಬೆಳಗು.
ಶಿವಯೋಗದನುಭಾವವೇಕಾರ್ಥವಾಗಿ–
ಗೊಹೇಶ್ವರಾ, ನಿಮ್ಮ ಶರಣನು ಉಪಮಾತೀತನಾಗಿರ್ದನು! ॥೧೬॥

ಮತ್ತಂ,

೧೦೬೪

ಸ್ಥೂಲ ಸೂಕ್ಷ್ಮದೊಳಗೆ ಬೆಳಗುವ ಮಹಾಬೆಳಗಾಗಿ
ಹೊಳೆವ, ಜ್ಞಾನ ಜ್ಯೋತಿ ದಳಗಳೆಲ್ಲವ ಮೀಱಿ,
ನೆಳಲ ನುಂಗಿದ ಬಿಸಿಲಿನೊಳಗೆ ಚಂದ್ರಮನುದಯ.
ಜಲಧಿವಳಯದ ಬೆಳಸ ಹೇಳಲಾರಳವಲ್ಲ.
ಆಳು ಆಳ್ದನ ನುಂಗಿ ಈರೇಳು ಭುವನವ ದಾಂಟಿ,
ಗೊಹೇಶ್ವರ ನಿಂದ ನಿಲವು ಹೊರಗು ಒಳಗ ನುಂಗಿತ್ತು. ॥೧೭॥

ಮತ್ತಂ,

೧೦೬೫

ಜಲದೊಳಗೆ ಹುಟ್ಟಿದ ಹಲವು ಬಣ್ಣದ ವೃಕ್ಷ
ಕೊಂಬಿಲ್ಲದೆ ಹೂವಾಯಿತ್ತು.
ಇಂಬಿನಲ್ಲಿ ಫಲದೋಱಿ,
ಜಂಬುದ್ವೀಪದ ಮುಗ್ಧೆಯ ಅಂಗೈಯ ಅರಳುದಲೆ
ಇಂದ್ರನ ವಾಹನವ ನುಂಗಿ,

ಬ್ರಹ್ಮರಂಧ್ರದೊಳಗೆ ಆಸನ ಪವನವ ಸೂಸಿ
ಬೀಸರವೋಗದ ಶಿವಯೋಗ.
ಸಾಕ್ಷೀಭೂತಾತ್ಮದ ಮಾತು ಮಥನವ ನುಂಗಿ,
ಜ್ಯೋತಿಯೊಳಗಣ ಕರ್ಪುರದ ಬೆಳಗಿನಂತಿದ್ದಿತ್ತು.
ಗೊಹೇಶ್ವರಲಿಂಗದಲ್ಲಿ ಯೋಗವು. ॥೧೮॥

ಮತ್ತಂ,

೧೦೬೬

ಸಹಸ್ರದೆಂಟನೆಯ ದಳದಲ್ಲಿ ಖೇಚರ ಚಲ್ಲಣಗಟ್ಟಿ,
ವಾಸುಗಿ ಫಣಿ ಪ್ರಜ್ವಲಿಸುವುದ ಕಂಡೆ.
ಆ ಸುರರೆಲ್ಲಾ ತಮತಮಗಂಜಿ ಓಸರಿಸಿ ಮುಂದೆ ನಡೆವಲ್ಲಿ,
ನಾಸಿಕ ಮನ ಮುಸುಕುವುದ ಕಂಡೆ.
ತಾ ಸುಖಿಯಾದ ಸುಖಮುಖ ಪ್ರವೇಶದಿಂದ
ಗೋಸಾಸಿರ ನಡೆಗೆಟ್ಟವು ಗೊಹೇಶ್ವರಾ, ನಿಮ್ಮ ನೆರೆದೆನಾಗಿ. ॥೧೯॥

[೧]ಮತ್ತಂ,[೧]

೧೦೬೭

ಜಗದಗಲದ ಮಂಟಪಕ್ಕೆ ಮುಗಿಲಗಲದ ಮೇಲುಕಟ್ಟಿನಲ್ಲಿ
ವಿಚಿತ್ರವ ನೋಡುತ್ತ ನೋಡುತ್ತ,
ಧ್ಯಾನವಿಶ್ರಾಂತಿಯಲ್ಲಿ ದಿಟದಿಟವೆಂಬುದೊಂದು ದರುಶನವ ನೋಡುತ್ತ,
ಗಗನಗಂಭೀರದಲ್ಲಿ ಉದಯವಾಯಿತ್ತ ಕಂಡೆ,
ಗೊಹೇಶ್ವರಲಿಂಗವು ತಾನಾಗಿ. ॥೨೦॥

ಮತ್ತಂ,

೧೦೬೮

ಏಳು ತಾಳ ಮೇಲೆ ಕೇಳುವ ಸುನಾದ,
ಸ್ಥೂಲ ಸೂಕ್ಷ್ಮ ಕೈಲಾಸದ ರಭಸ.
ಗಂಗೆವಾಳುಕ ಸಮಾರುದ್ರರ ತಿಂಥಿಣಿ.
ಗಗನ ಗಂಭೀರದ ಶಿವಸ್ತುತಿಯ ನೋಡನೋಡಲು
ಪಿಂಡ ಬ್ರಹ್ಮಾಂಡವಾಯಿತ್ತು; ಅಖಂಡಿತ ನಿರಾಳ ಗೊಹೇಶ್ವರ. ॥೨೧॥

ಮತ್ತಂ,

೧೦೬೯

ಪಂಚಬ್ರಹ್ಮಮೂರ್ತಿ ಪ್ರಣವಮಂತ್ರರೂಪ
ಪಂಚಮುಖ ದಶಭುಜದ ಫಣಿಯ ಮಣಿಯ ಮೇಲೆ ನೋಡುತ್ತೈದಾನೆ,

೧–೧ x (ಮೂ)

ಈರೇಳು ಭುವನವೆಲ್ಲಾ ತಾನಾಗಿ
ಸಮತೆ ಸಮಾಧಿಯೆಂಬ ಸಮರಸದೊಳಗೆ.
ಚಂದ್ರಕಾಂತದ ಕೊಡದೊಳಗೆ ಅಮೃತವ ತುಂಬಿ
ಕೊಡನೊಡೆಯದೆ ಬೆಳಗುತ್ತಿದೆ ಗೊಹೇಶ್ವರಾ! ॥೨೨॥

ಮತ್ತಂ,

೧೦೭೦

ಬಂದೂ ಬಾರದು; ಹೊಂದಿಯೂ ಹೊಂದದು.
ನಿಂದೂ ನಿಲ್ಲದ ಪರಿಯ ನೋಡಾ!
ಅಖಂಡಿತಚರಿತನನೇನೆಂದುಪಮಿಸುವೆ?
ನವಖಂಡಪೃಥ್ವಿಯನೊಳಕೊಂಡ ಬಯಲು!
ಅಗಮ್ಯ ಸಂಯೋಗ ಸಮಾಧಿಯಲ್ಲಿ
ಗೊಹೇಶ್ವರಲಿಂಗವನೇನೆಂದುಪಮಿಸುವೆ? ॥೨೩॥

ಮತ್ತಂ,

೧೦೭೧

ಖೇಚರ ಪವನದಂತೆ, ಜಾತಿಯೋಗಿಯ ನಿಲವು
ಮಾತಿನೊಳು ಧಾತು ನುಂಗಿ ಉಗುಳದಿನ್ನೆಂತೊ?
ಭೂಚಕ್ರವಳಯವನು ಆಚಾರ್ಯ ರಚಿಸಿ,
ಗ್ರಾಮವೆಲ್ಲವ ಸುಟ್ಟು ನೇಮ ನೆಲಗತವಾಯಿತ್ತು.
ನಾಮ ನೇಮವ ನುಂಗಿ,
ಗ್ರಾಮ ಪ್ರಭುವನೆ ನುಂಗಿ,
ಗೊಹೇಶ್ವರ ಗೊಹೇಶ್ವರ ಎನುತ್ತ ನಿರ್ವಯಲಾಯಿತ್ತು! ॥೨೪॥

ಮತ್ತಂ,

೧೦೭೨

ಇಹಲೋಕ ಪರಲೋಕ ತಾನಿದ್ದಲ್ಲಿ.
ಗಗನ ಮೇರುಮಂದಿರ ತಾನಿದ್ದಲ್ಲಿ
ಸಕಲಭುವನ ಸತ್ಯಲೋಕ ತಾನಿದ್ದಲ್ಲಿ.
ನಿತ್ಯ ನಿರಂಜನತತ್ತ್ವ ತಾನಿದ್ದಲ್ಲಿ.
ಉತ್ತರೋತ್ತರಪದ ತಾನಿದ್ದಲ್ಲಿ.
ಚಂದ್ರ ಸೂರ್ಯ ತಾರಾಮಂಡಲ ತಾನಿದ್ದಲ್ಲಿ.
ಅಂತರ ಮಹದಂತರ ತಾನಿದ್ದಲ್ಲಿ.
ಸ್ವತಂತ್ರ ಗೊಹೇಶ್ವರ ತಾನಿದ್ದಲ್ಲಿ. ॥೨೫॥

ಇಂತು ಪರಶಿವಯೋಗದಲ್ಲಿ ನಿಂದು ನಿರವಯವಾಗಿ, ಅನಂತಕೋಟಿ ಬ್ರಹ್ಮಾಂಡಂಗಳೆಲ್ಲವನೂ ತನ್ನ ಮಹಾಜ್ಞಾನಪ್ರಕಾಶದಲ್ಲಿ ಆಲಿಂಗಿಸಿ, ತೊಳಗಿ ಬೆಳಗಿ ಒಪ್ಪುತ್ತಿರ್ಪ ಪ್ರಭುದೇವರು ತಮ್ಮ

ಲೀಲೆಯವಸಾನಕಾಲಮಂ ವಿವೇಕದಿಂ ತಿಳಿದೆದ್ದು, ಕಲ್ಯಾಣದತ್ತಲಭಿಮುಖವಾಗಿ ಬರುತಿರ್ಪಾಗಳು, ಇತ್ತಲು ಬಸವರಾಜದೇವರು, ಪ್ರಭುದೇವರು ಬರಬೇಕೆಂದು ಶೂನ್ಯಸಿಂಹಾಸನಮಂ ರಚಿಸಿ, ಬರವ ಹಾರುತ್ತಿರ್ದರದೆಂತೆಂದೊಡೆ, ಆ ಪ್ರಸ್ತಾವದೊಳು ಹಡಪದಪ್ಪಣ್ಣಗಳ ವಚನ:

೧೦೭೩

ಅಷ್ಟದಳಕಮಲದ ಹೂಗಲ್ಲ ಹಿಡಿದು
ಶೂನ್ಯಸಿಂಹಾಸನಕ್ಕೆ ಧವಳಾಲಯವೆತ್ತಿತ್ತು.
ಚಂದ್ರಕಾಂತದ ಶಿಲೆಯಲ್ಲಿ ಪಶ್ಚಿಮದ್ವಾರಮಂ
ತೆಗೆದು ನೋಡುವರೆ ವಿಪರೀತ.
ಏಕೋಭಾವವೆಂಬುದೊಂದು ಕಂಭ.
ಅದಕ್ಕೆ ಅನೇಕ ಚಿತ್ರಂಗಳಡಗಿದ ಪ್ರಭೆ.
ಆ ಪ್ರಭೆಯೊಳಗೆ ಬ್ರಹ್ಮರಂಧ್ರವೆಂಬ ಮಸ್ತದಕ ಮೇಲೆ
ಪಂಚಮೌಕ್ತಿಕದ ಮಾಲೆಯನಿಳಿಯಬಿಟ್ಟು,
ಮೂಲೆ ಮೂಲೆಗಳ ನಡುವೆ ಕಟ್ಟಿದವು
ನವರತ್ನದ ಗೊಂಡೆಯಂಗಳು.
ಕಾಳಿಕೆಯ ಕಪ್ಪಡವದಕೆ ಮೇಲುವೊದಕೆ.
ಉಲುಹಿನ ಅರಳೆಲೆಯ ಬಳಸುದೋರಣವ ಕಟ್ಟಿ
ದಶವಾಯುವನೆಲ್ಲವನೊಂದು ಮಾಡಿ,
ಲಿಂಗಸುಖವಾಯುವ ಸಂತೈಸಿ ಆಲವಟ್ಟವಂ ಮಾಡಿ,
ಲಂಬಿಸಿದ ಮಂದಾನಿಲನಂ ಮಲಗಂ ಮಾಡಿ,
ಹರುಷವನೆ ವಸಂತನ ಚೌಕದ ಆಸನವಟ್ಟಗೆಯ ಮಾಡಿ,
ನವನಾಳದೊಳು ಮೊರೆವ ಶಬ್ದವಂ
ಶುಕಪಿಕಭ್ರಮರಂಗಳ ಆಮೋದಮಂ ಮಾಡಿ,
ಪರಮ ಶಾಂತಿಯೆಂಬ ಶೈತ್ಯಾಕಾರದ
ಸುಸೋಂಕಿನ ಚೂತಪಲ್ಲವಂಗಳಂ ಹಾಸಿ,
ಉತ್ತರದ್ವಾರವೆಂಬ ನುಸುಳುಗಂಡಿಯಂ ರಚಿಸಿ,
ಪೂರ್ವಯೋಗವೆಂಬ ಸೋಪಾನಮಂ ಮಾಡಿ,
ಪಶ್ಚಿಮದ್ವಾರವೆಂಬ ನಿಜದ್ವಾರವಟ್ಟವಂ ಮಾಡಿ,
ಸಪ್ತವ್ಯಸನ ಪಂಚೇಂದ್ರಿಯಂಗಳೆಂಬ ಪೌಳಿಯನಿಕ್ಕಿ,
ಆಸೆಯಾಮಿಷಮಂ ಕೆಡಿಸಿ,
ಊರ್ಧ್ವಚಕ್ರವೆಂಬ ಮೇಲುಪ್ಪರಿಗೆಯಂ ಮಾಡಿ,
ಚಂದ್ರ ಸೂರ್ಯರೆಂಬ ದೀಪಮಂ ಬೆಳಗಿ,
ಸೋಹಂ ಎಂಬ ಶಿಖರಿಯ ಮೇಲೆ
ಮಹಾಜ್ಞಾನಪ್ರಕಾಶವೆಂಬ ಹೊನ್ನ ಕಳಶಮಂ ಮಾಡಿ,

ನಿಶ್ಶೂನ್ಯ ನಿರಾಳವೆಂಬ ಶೂನ್ಯಸಿಂಹಾಸನಮಂ ಮಾಡಿದ-
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ
ಎನ್ನ ಪರಮಗುರು ಬಸವಣ್ಣನು. ॥೨೬॥

ಮತ್ತಂ,

೧೦೭೪

ಅಂಗದ ಪ್ರಕೃತಿಯ ಲಿಂಗದಲ್ಲಿ ಅಳಿದು,
ಮನದ ವಿಕೃತಿಯ ಅಜಿವಿನಲ್ಲಿ ಅಳಿದು,
ಜೀವಭ್ರಾಂತಿಯ ನಿಶ್ಚಿಂತಪದದಲ್ಲಿ ಅಳಿದು,
ನಿಶ್ಶೂನ್ಯ ನಿರಾಮಯವಾದ ನಿವಾಸಕ್ಕೆ
ಸದಾಚಾರವೆಂಬ ಕೆಸಱುಗಲ್ಲನಿಕ್ಕಿ,
ಸರ್ವಾಚಾರ ಸಂಪತ್ತೆಂಬ ಹೂಗಲ್ಲ ಮುಚ್ಚಿ,
ಅಂತಃಕರಣ ಚತುಷ್ಟಯವೆಂಬ ನಾಲ್ಕು ಕಂಭಂಗಳಂ ನಿಲಿಸಿ,
ಜ್ಞಾತೃವೆಂಬ ಭಿತ್ತಿಯ ಮೇಲೆ
ಜ್ಞಾನವೆಂಬ ಶಿಖರಿಯನನುಗೊಳಿಸಿ
ಜ್ಞೇಯವೆಂಬ ಹೊನ್ನ ಕಲಶವಂ ಶೃಂಗಾರಮಂ ಮಾಡಿ,
ಬ್ರಹ್ಮರಂಧ್ರದ ಊರ್ಧ್ವ ದ್ವಾರವೆಂಬ ನಿಜದ್ವಾರಮಂ ಮಾಡಿ
ನಿರ್ವಯಲಲ್ಲಿ ನೆಲೆಗೊಳಿಸಿ,
ಬಸವಪ್ರಿಯ ಕೂಡಲಚೆನ್ನಸಂಗಯ್ಯನ ಶರಣ
ಪ್ರಭುದೇವರ ಬರವಿಂಗೆ ಶೂನ್ಯಸಿಂಹಾಸನವ ರಚಿಸಿ,
ಬರವ ಹಾರುತ್ತಿರ್ದನೆನ್ನ ಪರಮಗುರು ಬಸವಣ್ಣನು. ॥೨೭॥

ಆ ಪ್ರಸ್ತಾವದೊಳು ಪ್ರಭುದೇವರ ಬರವಿಂಗೆ ಗುಡಿತೋರಣಮಂ ಕಟ್ಟಿ ಸಂಭ್ರಮಿಸುತ್ತಿರ್ದ ವಚನ:

೧೦೭೫

ಉಪ್ಪರಗುಡಿ ತೋರಣವ ಕಟ್ಟಿತ್ತು ಕಲ್ಯಾಣದಲ್ಲಿ.
ಅಷ್ಟದ್ವಾರದಂಗಡಿ, ರಾಜಬೀದಿಯೊಳೆಲ್ಲಾ ವ್ಯಾಸನ ಬಾಹುಗಳುಪ್ಪರಿಸಿದವು.
ಎಂಟು ಬಾಗಿಲಲ್ಲಿ ನಡೆಮಡಿಯ ಹಾಸಿ,
ಸಂಕಲ್ಪ ಸಂತೋಷವಂ ಮಾಡಿದನು ವೃಷಭೇಶ್ವರನು,
ಬಸವಪ್ರಿಯ ಕೂಡಲಚೆನ್ನಸಂಗಯ್ಯ ಬಂದಹನೆಂದು. ॥೨೮॥

ಇಂತು ಶೂನ್ಯಸಿಂಹಾಸನವ ರಚಿಸಿ ಬಸವರಾಜದೇವರು ಪ್ರಭುದೇವರ ಬರವ ಹಾರುತ್ತಿರ್ದ ವಚನ:

೧೦೭೬

ಹಮ್ಮಿ ಹನ್ನೆರಡು ಸಂವತ್ಸರ ಹಿಂದಾಯಿತ್ತು,
ಏನ ಮಾಡಿದಡೇನಯ್ಯಾ, ಎನ್ನಲ್ಲಿ ದಿಟವಿಲ್ಲದನ್ನಕ್ಕರ?

ಏನ ಹಮ್ಮಿದರೇನಯ್ಯಾ, ಎನ್ನಲ್ಲಿ ದಿಟವಿಲ್ಲದನ್ನಕ್ಕರ?
ಎನ್ನ ಪುಣ್ಯದ ಫಲ! ಕೂಡಲಸಂಗಮದೇವಾ,
ಬಾಯಿನದುಂಡೆಗೆ ತೋಯ ನಟ್ಟಂತಾಯಿತ್ತು! ॥೨೯॥

[1]ಮತ್ತಂ,[1]

೧೦೭೭

ಸಮುದ್ರಕ್ಕೆ ಚಂದ್ರಮನ ಬರವೆ ಜೀವಾಳವಯ್ಯಾ.
ಬತ್ತಿದ ಕೆಱೆಯ ಕಮಲಕ್ಕೆ ಉದಕವೆ ಜೀವಾಳವಯ್ಯಾ.
ಚಕೋರಂಗೆ ಚಂದ್ರಮನ ಬರವೆ ಜೀವಾಳವಯ್ಯಾ.
ಕೂಡಲಸಂಗಮದೇವಾ,
ಎನಗೆ ನಿಮ್ಮ ಶರಣರ ಬರವೆ ಜೀವಾಳವಯ್ಯಾ! ॥೩೦॥

ಮತ್ತಂ,

೧೦೭೮

ಕಾಣಬಹುದೆ ಪರುಷದ ಗಿರಿಯಂಧಕಂಗೆ?
ಮೊಗೆಯಬಹುದೆ ರಸದ ಬಾವಿ ನಿರ್ಭಾಗ್ಯಂಗೆ?
ತೆಗೆಯಬಹುದೆ ಕಡವರವು ದರಿದ್ರಂಗೆ?
ಕಱೆವುದೆ ಕಾಮಧೇನು ಅಶುದ್ಧಂಗೆ?
ಕೂಡಲಸಂಗನ ಶರಣರ ಪುಣ್ಯವಿಲ್ಲದ ಕಾಲಕ್ಕೆ
ಎನಗೆ ಕಾಣಬಹುದೆ? ॥೩೧॥

ಮತ್ತಂ,

೧೦೭೯

ಸೂರ್ಯನ ಬರವು ತಾವರೆಗೆ ಜೀವಾಳವಯ್ಯಾ.
ಚಂದ್ರಮನ ಬರವು ನೈದಿಲೆಗೆ ಜೀವಾಳವಯ್ಯ.
ಕೂಪರ ತಾವಿನಲ್ಲಿ ಕೂಟವೆ ಜೀವಾಳವಯ್ಯಾ.
ಒಲಿದ ತಾವಿನಲ್ಲಿ ನೋಟ ಜೀವಾಳವಯ್ಯಾ.
ಕೂಡಲಸಂಗನ ಶರಣರ ಬರವು
ಎನಗೆ ಪ್ರಾಣ ಜೀವಾಳವಯ್ಯಾ! ॥೩೨॥

ಮತ್ತಂ,

೧೦೮೦

ಹೊಲಬುಗೆಟ್ಟ ಶಿಶು ತನ್ನ ತಾಯ ಬಯಸುವಂತೆ,
ಬಳಿದಪ್ಪಿದ ಕಱು ತನ್ನ ಹಿಂಡ ಬಯಸುವಂತೆ
ಬಯಸುತ್ತಿರ್ದೆನಯ್ಯಾ ನಿಮ್ಮ ಶರಣರ ಬರವನು!

೧–೧ x (ಮು)

ದಿನಕರನುದಯಕ್ಕೆ ಕಮಲ ವಿಕಸಿತವಪ್ಪಂತೆ
ಎನಗೆ ನಿಮ್ಮ ಶರಣರ ಬರವು ಕೂಡಲಸಂಗಮದೇವಾ. ॥೩೩॥

ಮತ್ತಂ,

೧೦೮೧

ಎಡದ ಕೈಯಲ್ಲಿ ಹಾಲ ಬಟ್ಟಲು,
ಬಲದ ಕೈಯಲ್ಲಿ ಓಜುಗಟ್ಟಿಗೆ
ಅವಾಗ ಬಂದಾನೆಮ್ಮಯ್ಯ,
ಬಡಿದು ಹಾಲು ಕುಡಿಸುವ ತಂದೆ?
ದಂಡಕ್ಷೀರದ್ವಯಾ ಹಸ್ತೌ ಜಂಗಮೋ ಭಕ್ತಿಮಂದಿರಮ್।
ಅತಿಭಕ್ತಾ ಲಿಂಗ [1]ಸಂತುಷ್ಟಿರಪಹಾಸ್ಯಾ[1] ದಂಡನಮ್॥
ಇಂತೆಂದುದಾಗಿ ಕೂಡಲಸಂಗಮದೇವಾ,
ಭಕ್ತಿಯ ಪಥವ ತೋಱುವ ತಂದೆ ಆವಾಗ ಬಂದಹನೊ? ॥೩೪॥

ಇದಕ್ಕೆ ಚಿಕ್ಕದಣ್ಣಾಯಕರ ಉತ್ತರ:

೧೦೮೨

ಮನದಂತೆ ಮಂಗಳವೆಂಬುದು ತಪ್ಪದು ನೋಡಾ ಬಸವಣ್ಣಾ.
ಅಱಸುವಂಗೆ ಅಱಕೆ ಸಾಧ್ಯವಪ್ಪುದು ತಪ್ಪದು ನೋಡಾ ಬಸವಣ್ಣಾ.
ನಿಮ್ಮ ಮನದಾರ್ತವನಡಗಿಸುವರೆ,
ಕೂಡಲಚೆನ್ನಸಂಗಮದೇವರ ಶರಣ ಪ್ರಭುದೇವರು
ಬಹುದು ತಪ್ಪಲಱಯದು ಕೇಳಾ ಸಂಗನಬಸವಣ್ಣಾ. ॥೩೫॥

ಇದಕ್ಕೆ ಮಡಿವಾಳತಂದೆಗಳ ಉತ್ತರ:

೧೦೮೩

ಮಾಡುವ ಭಕ್ತಂಗೆ ಒಲಿವ ದೇವಂಗೆ,
ಭೇದ ಉಂಟೇ ಅಯ್ಯಾ?
ಕಾಯದೊಳಗೆ ಕಾಯವಾಗಿಪ್ಪ,
ಪ್ರಾಣದೊಳಗೆ[2] ಪ್ರಾಣವಾಗಿಪ್ಪ.
ಅಱಸಿಹೆನೆಂದರೆ ತಾನೆಯಾಗಿಪ್ಪ.
ಅಱಸಿ ಬಯಸಿದರೆ ಕರುಣದಿಂದ ನಡೆದು ಬಹನು.
ಕಲಿದೇವರದೇವನ ಬರವನೀಗಳೆ
ತೋಱ ಕೊಟ್ಟಹೆನು ಕೇಳಾ ಸಂಗನಬಸವಣ್ಣಾ. ॥೩೬॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

೧–೧ ಸಂತುಷ್ಟ ಅಪಹಾಸ್ಯ ಏವ (ಮೂ) ೨–೨ x (ಮೂ)

೧೦೮೪

ಹಸಿದಳುವ ಶಿಶುವಿಂಗೆ ತಾಯಿ ಮೊಲೆ ಕೊಟ್ಟರೆ,
ಆ ಶಿಶು ಜೀವಿಸದಿಪ್ಪುದೆ ಹೇಳಯ್ಯಾ?
ಪ್ರಾಣವಲ್ಲಭನ ಅಗಲಿಕೆಯಿಂದ
ಪ್ರಾಣ ವಿಯೋಗವಾಗಿಹ ಹೆಂಗೂಸಿಂಗೆ,
ಆ ಪ್ರಾಣವಲ್ಲಭ ಬಂದರೆ
ವಿರಹ ಸಂತಾಪಿಸದಿಪ್ಪುದೆ ಹೇಳಯ್ಯಾ?
ಕೂಡಲಸಂಗಮದೇವರು ಸಾಕ್ಷಿಯಾಗಿ,
ಪ್ರಭುದೇವರೆನ್ನ ಮನೆಗೆ ಬಂದರೆ ಎನ್ನ ಬಯಕೆ ಕೈಸಾರಿ,
ಚೆನ್ನಬಸವಣ್ಣನ ಕರುಣದ ಕಂದನಾಗಿ
ಉಳಿವೆನು ಕಾಣಾ ಮಡಿವಾಳಯ್ಯಾ. ॥೩೭॥

ಈ ಹೀಂಗೆಂದು ನುಡಿವುತ್ತಿರ್ಪ ಪ್ರಸ್ತಾವದೊಳು ಪ್ರಭುದೇವರ ಬರವಿನ ಸೂಚನೆ ಬಸವರಾಜದೇವರಿಗೆ ತೋಱುತ್ತಿದ್ದಿತ್ತದೆಂತೆಂದೊಡೆ ವಚನ:

೧೦೮೫

ಅಂಗೈ ತಿಂದಿಹುದೆನ್ನ,
ಕಂಗಳು ಕೆತ್ತಿಹವಯ್ಯಾ!
ಬಂದಹರೇಕೈ ಎನ್ನ ಮನೆಗೆ ಪ್ರಮಥರು?
ಬಂದಹರೇಕೈ ಎನ್ನ ಮನೆಗೆ ಪುರಾತನರು?
ಕಂಡ ಕನಸು ದಿಟವಾಗಿ ಜಂಗಮ ಮನೆಗೆ ಬಂದರೆ
ಶಿವಾರ್ಚನೆಯ ಮಾಡುವೆನು–
ಕೂಡಲಸಂಗಮದೇವಾ, ನಿಮ್ಮ ಮುಂದೆ. ॥೩೮॥

ಇದಕ್ಕೆ ಮೋಳಿಗೆಯ ಮಾರಿತಂದೆಗಳ ಪ್ರತ್ಯುತ್ತರ:

೧೦೮೬

ನಿಮಿತ್ತ [೧]ಶುಭ[೧]ಸೂಚನೆಯ ಬಿನ್ನಪವನವಧರಿಸು.
ಅತಿಥಿಯ ಮಸ್ತಕ ತಾಗಿ,
ಶೂನ್ಯಸಿಂಹಾಸನದ ಪಳಹರಂಗಳೆಲ್ಲವೂ ಅಲ್ಲಾಡುವುದ ಕಂಡೆನಯ್ಯಾ.
ಮುತ್ತಿನಾರತಿಯ ಮುಂದೆ ಹಿಡಿದುಕೊಂಡು ಮುಕ್ತಿವನಿತೆಯರು
ನಿತ್ಯನಿರಂಜನಂಗೆ ನಿವಾಳಿಸುವುದ ಕಂಡೆನಾಗಿ,
ಅದಱಿಂದ ನಿಃಕಳಂಕಮಲ್ಲಿಕಾರ್ಜುನದೇವರು ಬಾರದಿರ್ದಡೆ
ನಾ ನೀನಾದಂತೆ ಅಹೆನು; ಕಟ್ಟು ಗುಡಿಯ ಸಂಗನಬಸವಣ್ಣಾ. ॥೩೯॥

ಇದಕ್ಕೆ ಸೊಡ್ಡಳ ಬಾಚರಸರ ಪ್ರತ್ಯುತ್ತರ:

೧–೧ ಶಬ್ದ (ಮೂ)

೧೦೮೭

ಮನದೊಡೆಯ ಮನೆಗೆ ಬಹಡೆ
ಮನ ಮನ ಅಚ್ಚೊತ್ತಿದಂತಿರ್ಪುದು ನೋಡಯ್ಯಾ.
ಮನಕ್ಕೆ ಮನೋಹರ, ಚಿತ್ತಕ್ಕೆ ಮನೋಹರವಾಗಿಹುದಯ್ಯಾ.
ಮಹಾದಾನಿ ಸೊಡ್ಡಳನ ಬರವಿಂಗೆ ಶುಭಸೂಚನೆ ಮೈದೋಱುತ್ತಿದೆ.
ಪ್ರಭುದೇವರ ಬರವನೀಗಳೆ ತೋಱುವೆನಯ್ಯಾ ಸಂಗನಬಸವಣ್ಣಾ. ॥೪೦॥

ಇದಕ್ಕೆ ಬಸವರಾಜದೇವರು ಕೃತನಿಶ್ಚಯವನೆಯ್ದಿದ ವಚನ:

೧೦೮೮

ಶರಣೆಂದು ಕರಸಂತೋಷವ ಮಾಡಿ,
ಮುರಿದು ಮುಂಜೆಱಗ ಗಂಟಿಕ್ಕಿ
ನೆಲನ ಹೊಯಿದ ಕೈ ತಪ್ಪುವು[1]ದಲ್ಲದೆ,
ಆದಿ ಶರಣರ ನುಡಿ ತಪ್ಪುವುದೆ?
ಕೂಡಲಸಂಗಮದೇವರು ಸಾಕ್ಷಿಯಾಗಿ,
ಕಟ್ಟುವೆನು ಗುಡಿಯನೆತ್ತುವೆನು ಧ್ವಜವ! ॥೪೧॥

ಮತ್ತಂ,

೧೦೮೯

ಅಡವಿಯೊಳಗೆ ನೀರಡಿಸಿ
ಎಡೆಯಲ್ಲಿ ನೀರ ಕಂಡಂತಾದೆನಯ್ಯಾ!
ಕುರುಡಂಗೆ ಕಣ್ಣು ಬಂದಂತಾದೆನಯ್ಯಾ!
ಬಡವ ನಿಧಾನವ ಹಡೆದಂತಾಯಿತ್ತಯ್ಯಾ!
ನಮ್ಮ ಕೂಡಲಸಂಗನ ಶರಣರು ಬಂದಹರೆಂದಡೆ
ಹೋದ ಪ್ರಾಣ ಬಂದಂತಾದೆನಯ್ಯಾ! ॥೪೨॥

ಹಡಪದಪ್ಪಣ್ಣಗಳ ವಚನ:

೧೦೯೦

ಬಯಸುವ ಬಯಕೆ ಕೈಸಾರುವಂತೆ,
ನಿಧಿನಿಧಾನ ಮನೆಗೆ ಬಪ್ಪಂತೆ,
ಪರಿಮಳವನಱಸಿ ಬರ್ಪ ಭ್ರಮರನಂತೆ,
ಚಿಂತಾಮಣಿಯ ಪುತ್ಥಳಿ ನಡೆಗಲಿತಂತೆ,
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ
ಪ್ರಭುದೇವರ ಬರವು ಕಾಣಬರುತ್ತಿದೆ ನೋಡಾ
ಸಂಗನಬಸವಣ್ಣಾ. ॥೪೩॥

---

೧ x (ಮೂ)

ಇದಕ್ಕೆ ಬಸವರಾಜದೇವರ ವಚನ:

೧೮೯೧

ನಚ್ಚು ಮಚ್ಚಿನ ಶರಣರೆನ್ನ ಕಣ್ಣ ಮುಂದೆ ಬಂದು ನಿಂದಿರಲು,
ಎನ್ನ ತನುವ ಬಗಿದು, ಎನ್ನ ತನುವಿನೊಳಗೆ ಇಟ್ಟುಕೊಂಬೆನು.
ಎನ್ನ ಮನವ ಬಗಿದು ಮನದೊಳಗಿಟ್ಟುಕೊಂಬೆನು.
ಎನ್ನ ಕಂಗಳ ಬಗಿದು ಕಂಗಳೊಳಗಿಟ್ಟುಕೊಂಬೆನು.
ಕೂಡಲಸಂಗನ ಶರಣರೆನ್ನ ಒಡೆಯರಾಗಿ,
ಎನ್ನ ಮನೆಗೆ ಬಂದರೆ ಭಕ್ತಿಯ ಮಾಡುವೆನು ಕಾಣಾ ಅಪ್ಪಣ್ಣಾ! ॥೪೪॥

ಇದಕ್ಕೆ ಚಿಕ್ಕದಣ್ಣಾಯಕರ ವಚನ:

೧೮೯೨

ಕಂಗಳ ನೋಟ, ಕರಸ್ಥಲದ ಪ್ರಾಣ,
ಮನದೊಳಗೆ ಪರಿಣಾಮವ ತೋಱುತ್ತದೆ ನೋಡಾ.
ನಡೆವರೆ ಗತಿಯಿಲ್ಲ; ನಿಂದರೆ ಹಜ್ಜೆಯಿಲ್ಲ.
ಸುಳುಹಿನೊಳಗೊಂದು ಅತಿಶಯದ ಸುಳುಹು ನೋಡಾ.
ತೆರೆಯ ಮಱೆಯ ಪರಶಿವನು ನಡೆಗಲಿತು
ಬಪ್ಪ ಕರುಣವ ನೋಡಾ ಸಂಗನಬಸವಣ್ಣಾ!
ಕೂಡಲಚೆನ್ನಸಂಗಮದೇವರು ಸಾಕ್ಷಿಯಾಗಿ
ಪ್ರಭುದೇವರ ಬರವು ತಪ್ಪದು. ॥೪೫॥

ಇದಕ್ಕೆ ಬಸವಣ್ಣನ ವಚನ:

೧೮೯೩

ಸಂಗಸನ್ನಿಹಿತ ಶರಣರು ಮನೆಗೆ ಬಂದರೆ
ನಂಬುವುದೆನ್ನ ಮನ, ನಚ್ಚುವುದೆನ್ನ ಮನ.
ಹಾವು ನೇಣೆಂಬ ಭ್ರಾಂತುಳ್ಳನ್ನಕ್ಕರ ನಾನೆಂತು ಭಕ್ತನಪ್ಪೆನಯ್ಯಾ?
ಅಂಗ ಲಿಂಗ ಸನ್ನಿಹಿತನಪ್ಪ ಪ್ರಭುದೇವರ ಕಂಡು
ಮನದಲ್ಲಿ ಮತ್ತೆ ಸಂದೇಹ ಹೊಳೆದರೆ,
ಬೆಂದೆನಲ್ಲಾ ನಾನು ಕೂಡಲಸಂಗಮದೇವಾ! ॥೪೬॥

ಅಲ್ಲಿ ಬಸವರಾಜದೇವರು ಪ್ರಭುದೇವರ ಬರವ ಕಂಡ ಪ್ರಸ್ತಾವದ ವಚನ:

೧೮೯೪

ಕಂಗಳೆ ಕರುಳಾಗಿ ಉರವಣಿಸಿ ಬಪ್ಪವನ ಬರವ ನೋಡಾ!
ಇರವ ನೋಡಾ! ಪರವ ನೋಡಾ! ಇಹಪರವ ನೋಡಾ!
ಇಹಪರ ಒಂದಾದ ಘನವ ನೋಡಾ!
ಎಲೆ ಘನಕ್ಕೆ ಘನವ ನೋಡಾ!
ಕರುವಿಟ್ಟ ರೂಪಿನಂತೆ ಕಂಗಳೆರಡೂ ಹಳಚದೆ ಭುಗಿಲನೆ ನಡೆತಹ
ಇಂತಪ್ಪ ಗರುವ ಪ್ರಭುವ ಕಂಡೆವ್ವೆ ಕೂಡಲಸಂಗಮದೇವಾ! ॥೪೭॥

ಮತ್ತಂ, ಬಸವರಾಜದೇವರು ಪ್ರಭುದೇವರ ಮೂರ್ತಿಯ ನಿಲವನು ಚೆನ್ನಬಸವಣ್ಣಂಗೆ ತೋಱಿ ನುಡಿದ ಪ್ರಸ್ತಾವದ ವಚನ:

೧೮೯೫

ಕೆದಱಿದ ತಲೆಯ, ತೊನೆವ ನಡೆಯ, ಹಣೆಯ ಬುಗುಟಿನ,
ಕರಸ್ಥಲದ ಅನಿಮಿಷದಿಂ ಬಹಿರಂಗದವಧಾನ ತಪ್ಪಿ
ಇದಿರುಗೊಯಿಲು ತಾಗಿ ಪುರ್ಬೊಡೆದು,
ಕಣ್ದೆರೆದು, ಕಿವಿ ಹಱಿದು, ಜೋಲುವ ರಕ್ತಧಾರೆಯ,
ಗಾಳಿ ಧೂಳಿಯ ಮಳೆಯ ಜೋಱಿನ,
ಬೆನ್ನ ಬಾಸುಳದ, ಎಡಬಲದ ಬಱಿಯ ತಟ್ಟಿನ,
ಮುಳ್ಳು ದಱಹಿನ, ಕಂಕುಳ ಸೀಳ ಕಂಡು
ನೋಡುವ ಜನರು ಬೆಱಗಾಗೆ,
ಪೊಱವಾಱಿನ ಮರೆಯ ದಿಗಂಬರದ ಬಣಗು ಸುರಿವುತ್ತ,
ಆಪ್ಯಾಯನವಱತು, ಬಿದ್ದು ಮಣಿಕಾಲೊಡೆದು,
ಹೊಸ ಹುಣ್ಣಿನ ರಕ್ತದ ಜೋಱು ಹರಿದು,
ಮುಂಗಾಲ ಕಣೆ ಹೊಳೆದು,
ಕಣಕಾಲ ಸಂದು ತಪ್ಪಿ ಬಿಱು ಬೇನೆಯ,
ಎಡಹಿ ಹೆಬ್ಬೆಟ್ಟೊಡೆದ ಗಾಯದ, ಉಱುಗು ಟೊಂಕದ
ಬಱುಗುಂಟನ ನೋಡಾ ಚೆನ್ನಬಸವಣ್ಣಾ.
ಅತ್ಯಂತ ಮಲಿನ, ಕೂಡಲಸಂಗಮದೇವರ ಕುಱುಹು ವಿಪರೀತ!
ನೋಡುವರೆ ಭಯಂಕರವಾಗಿದೆ ನೋಡಯ್ಯಾ! ॥೪೮॥

ಇದಕ್ಕೆ ಚಿಕ್ಕದಣ್ಣಾಯಕರ ಪ್ರತ್ಯುತ್ತರ :

೧೮೯೬

ಆದಿಯಿಂದತ್ತತ್ತ ನೀನಯ್ಯಾ.
ಅನಾದಿಯಿಂದತ್ತತ್ತ ನೀನಯ್ಯಾ.
ಈ ಎರಡನೂ ಮೀಱಿದ ಅತ್ಯತಿಷ್ಠದ್ದಶಾಂಗುಲನಾದೆಯಯ್ಯಾ.
'ಚತುರ್ಯುಗ ಸಹಸ್ರಾಣಿ' ಎಂಬ ಸಂಖ್ಯೆ
ಯುಗಂಗಳ ಪವಣಿಸದಂದು, ಕೆಸಱುಗಲ್ಲಿಕ್ಕಿದರೆ ಮೇರುವ ನೆಲೆಗೊಳಿಸಿ,
ಅಂಡಜ ಉತ್ಪತ್ಯವಾಗದಂದು ಆತನಂತುವ ನೀನೆ ಬಲ್ಲೆ.
ನಿನ್ನಂತುವನಾತನೆ ಬಲ್ಲ.
ನಿಮ್ಮಿಬ್ಬರ ಮಹಿಮೆಯ ನಾನೆತ್ತ ಬಲ್ಲೆನಯ್ಯಾ
ಕೂಡಲಚೆನ್ನಸಂಗಮದೇವಾ? ॥೪೯॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

೧೯೭

ಹುಟ್ಟುತ ದ್ರವ್ಯವನಱಿಯದ ಒಬ್ಬ ಬಡವಂಗೆ
ಲಕ್ಷ ಸಂಖ್ಯೆಯ ಧನ ಸಂಪತ್ತಾಗಲು
ಆ ಸಿರಿಯ ನೋಡಿ ಪರಿಣಾಮಿಸುವಂತೆ,
ಕಾಳೆಗದ ಮುಖವನೆಂದೂ ಕಂಡಱಿಯದ ಅರಸಿಂಗೆ
ಒಬ್ಬ ಖಡ್ಗವುಳ್ಳ ಕುಮಾರ ಹುಟ್ಟಿ,
ಕಿಗ್ಗಡಲ ರಕ್ತದ ಹೊನಲಲ್ಲಿ ಮುಳುಗಾಡುವ
ಕೊಳುಗುಳವ ಕಂಡು ಪರಿಣಾಮಿಸುವಂತೆ,
ನಾನು ಪರಿಣಾಮಿಸುತ್ತಿರುವೆನಯ್ಯಾ,-ಚೆನ್ನಬಸವಣ್ಣಾ,
ನೀನು ಕೂಡಲಸಂಗನ ಶರಣ ಪ್ರಭುದೇವರ ನಿಜವನಱುಹಿದರೆ. ॥೫೦॥

ಇಂತು ಬಸವರಾಜದೇವರು ಪ್ರಭುದೇವರ ನಿಲವು ಅತ್ಯಂತ ನಿರಾಮಯವಾಗಿ ಇದೆ ಎಂದು ನಿರೂಪಿಸಲು, ಆ ಪ್ರಭುದೇವರ ನಿಲವನಾರೂ ಅಱಿಯರೆಂದು ಚಿಕ್ಕದಣ್ಣಾಯಕರು ಸ್ತುತಿಗೈದ ಪ್ರಸ್ತಾವದ ವಚನ:

೧೯೮

ಕಾಲಿಲ್ಲವೆಂದರಯ್ಯಾ ಪ್ರಭುದೇವರ-
ಸಂಸಾರ ಸೂತಕವ ಮೆಟ್ಟನಾಗಿ,
ಕೈಯಿಲ್ಲವೆಂಬರಯ್ಯಾ ಪ್ರಭುದೇವರ-
ಪರಧನವ ಕೊಳ್ಳನಾಗಿ.
ಕಿವಿಯಿಲ್ಲವೆಂಬರಯ್ಯಾ ಪ್ರಭುದೇವರ-
ಅನ್ಯವ ಕೇಳನಾಗಿ.
ಮೂಗಿಲ್ಲವೆಂಬರಯ್ಯಾ ಪ್ರಭುದೇವರ-
ದುರ್ಗಂಧಕ್ಕೆಳಸನಾಗಿ.
ಎದೆ ಇಲ್ಲವೆಂಬರಯ್ಯಾ ಪ್ರಭುದೇವರ-
ಪರಸ್ತ್ರೀಯನಪ್ಪನಾಗಿ.
ಇದು ಕಾರಣ, ಕೂಡಲಚೆನ್ನಸಂಗಯ್ಯನಲ್ಲಿ
ಪ್ರಭುದೇವ ಒಕ್ಕು ಮಿಕ್ಕ ಪ್ರಸಾದವ ಕೊಂಡು
ನಾನು ಧನ್ಯನಾದೆನು ಕಾಣಾ ಸಂಗನಬಸವಣ್ಣಾ! ॥೫೧॥

ಮತ್ತಂ, ಚಿಕ್ಕದಣ್ಣಾಯಕರು ಪ್ರಭುದೇವ ಬಸವರಾಜದೇವರ ಪೂರ್ವಾಪರ ಸಂಬಂಧಮಂ ತಿಳಿಯ ಪೇಳಿದ ಪ್ರಸ್ತಾವದ ವಚನ:

೧೯೯

ಕೃತಯುಗದಲ್ಲಿ ದೇವಾಂಗನೆಂಬ ಗಣೇಶ್ವರನಾಗಿ
ನೀವು ಬಂದು ಆರಾಧಿಸುವಲ್ಲಿ,

ಸ್ಥೂಲಕಾಯನೆಂಬ ಜಂಗಮವಾಗಿ ಬಂದು
ಲಿಂಗಾರ್ಚನೆಯ ಮಾಡಿ ಹೋದ.
ಅದಱ ಕ್ರಿಯಾಂಗವನು ಮಱೆದೆಯಲ್ಲಾ ಬಸವಣ್ಣಾ.
ತ್ರೇತಾಯುಗದಲ್ಲಿ ಘಂಟಾಕರ್ಣನೆಂಬ ಗಣೇಶ್ವರನಾಗಿ
ಬಂದು ಆರಾಧಿಸುವಲ್ಲಿ,
ಶೂನ್ಯಕಾಯನೆಂಬ ಜಂಗಮವಾಗಿ ಬಂದು
ಲಿಂಗಾರ್ಚನೆಯ ಮಾಡಿ ಹೋದ.
ಅದಱ ಕ್ರಿಯಾಂಗವ ಮಱೆದೆಯಲ್ಲಾ ಬಸವಣ್ಣಾ,
ದ್ವಾಪಾರದಲ್ಲಿ ನೀನು ವೃಷಭನೆಂಬ ಗಣೇಶ್ವರನಾಗಿ
ಬಂದು ಆರಾಧಿಸುವಲ್ಲಿ,
ಅನಿಮಿಷನೆಂಬ ಜಂಗಮವಾಗಿ ಬಂದು
ಲಿಂಗಾರ್ಚನೆಯ ಮಾಡಿ ಹೋದ.
ಅದಱ ಕ್ರಿಯಾಂಗವ ಮಱೆದೆಯಲ್ಲಾ ಬಸವಣ್ಣಾ.
ಕಲಿಯುಗದಲ್ಲಿ ನೀನು ಬಸವನೆಂಬ ಗಣೇಶ್ವರನಾಗಿ
ಬಂದು ಆರಾಧಿಸುವಲ್ಲಿ,
ಪ್ರಭುದೇವರೆಂಬ ಜಂಗಮವಾಗಿ
ಲಿಂಗಾರ್ಚನೆಯ ಮಾಡಬಂದ ಕಾರಣ,
ಇಂತೀ ದೇವಭಕ್ತನೆಂಬ ನಾಮನಾಟಕ ಬಿನ್ನಾಣವಲ್ಲದೆ,
ಬೇಱೆಂದು ಕಂಡವರಿಗೆ
ನಾಯಕ ನರಕ ತಪ್ಪದು ಕೂಡಲಚೆನ್ನಸಂಗಮದೇವಾ. ॥೫೨॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

೧೧೦೦

ಇದ್ದ ಪರಿ ಎಂತುಟೆಂದು ನೋಡಯ್ಯಾ!
ನಿಂದಡೆ ನೆಳಲಿಲ್ಲ, ನಡೆದರೆ ಹಜ್ಜೆ ಇಲ್ಲ.
ಭೂತಳದೊಳಗೆ ಕಂಡುದಿಲ್ಲ.
ಇಂತಪ್ಪ ಅನಿಯಮದ ಸುಳುಹು,
ಅಹುದಹುದು, ಅರಿದರಿದು ಜಂಗಮಸ್ಥಲ
ಇಂತುಟಲ್ಲದೆ ಎಂತುಟು ಹೇಳಾ?
ಆಪ್ಯಾಯನದ ಅಱಿಕೆಯ ಹೊಲಬ ಕಾಣಬಾರದು.
ಊಡಿಸಿದರೆ ಉಣ್ಣನೊ? ಉಂಬನೊ?
ಉಂಬಂಥವರಾದಡೆ ನೀಡುವೆ ಕೂಡಲಸಂಗಮದೇವರಿಗೆ,
ಚೆನ್ನಬಸವಣ್ಣ ನೀನಹುದೆನಲಿಕ್ಕೆ. ॥೫೩॥

ಇದಕ್ಕೆ ಚೆನ್ನಬಸವರಾಜದೇವರ ಪ್ರತ್ಯುತ್ತರ:

೧೧೦೧

ಅಱಸುವಂಗೆ ಅಱಸುವಂಗೆ, ಅಱಕೆ ತಾನಹುದು ದೇವಾ.
ಬಯಸುವಂಗೆ ಬಯಸುವಂಗೆ ಬಯಕೆ ತಾನಹುದು ದೇವಾ,
ನೀವು ಭಾವಿಸಿದಂತೆ ಅಲ್ಲ ಬೇಱೊಂದಾಗಬಲ್ಲುದೆ?
ಈರೇಳು ಭುವನದ ಸ್ಥಾಪ್ಯದ ಪ್ರೇರಣೆಗಳೆಲ್ಲ
ನಿಮ್ಮಿಂದಲಾದವಾಗಿ, ನಿಮ್ಮಿಂದಲಹುದಾಗದೆಂಬ
ಸಂದೇಹ ಉಂಟೆ ಬಸವಣ್ಣಾ?
ನಿಮ್ಮಡಿಗಳೆಂದಂತೆ, ನೆನೆದಂತೆ, ನೋಡಿದಂತೆ ತಪ್ಪದು.
ಕೂಡಲಚೆನ್ನಸಂಗಮದೇವರು ಸಾಕ್ಷಿಯಾಗಿ,
ಪ್ರಭುವಿನಾಣೆ, ಕಟ್ಟು ಗುಡಿಯನು! ॥೫೪॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

೧೧೦೨

ಬಡಗವಾಗಿಲ ಪೌಳಿಯ ಭರವಸದಿಂ ಪೊಕ್ಕು,
ಪಶ್ಚಿಮದ್ವಾರದ ಧವಳಾರಮಂ ಪಶ್ಚಿಮದಿ ಪೊಕ್ಕು,
ತ್ರಿವಿಧಗತಿಯ ಶೂನ್ಯಸಿಂಹಾಸನದ ಮೇಲೆ
ತರಹರವಾದಡೆ ನಂಬುವುದೆನ್ನ ಮನವು.
ಕೂಡಲಸಂಗಮದೇವರು ಸಾಕ್ಷಿಯಾಗಿ,
ನೀನು ನಮ್ಮ ಕೋಪಿಸಿದರೆ ಕೋಪಿಸು ಚೆನ್ನಬಸವಣ್ಣಾ. ॥೫೫॥

ಇದಕ್ಕೆ ಚಿಕ್ಕದಣ್ಣಾಯಕರ ಉತ್ತರ:

೧೧೦೩

ದೇವದೇವ, ಮಹಾಪ್ರಸಾದ.
ನಿಮ್ಮಡಿಗಳಿಗೆ ಉತ್ತರವ ಕೊಡಲಮ್ಮೆನಯ್ಯಾ.
ಇದ ಬಲ್ಲೆನೆಂಬ ಬಲುಮೆಯ ದೇಹಿ ನೀನಲ್ಲವಾಗಿ,
ಆನು ಭಕ್ತನೆಂಬ ಭಕ್ತಿಶೂನ್ಯನಲ್ಲವಾಗಿ,
ಆನು ಬಲ್ಲೆನೆಂಬ ನುಡಿ ಎನ್ನನಿಱಿದಿಱಿದು ಸುಡದೆ?
ತಪ್ಪೆನ್ನದು ಕ್ಷಮೆ ನಿಮ್ಮದು.
ಕೂಡಲಚೆನ್ನಸಂಗಮದೇವರು ಸಾಕ್ಷಿಯಾಗಿ,
ಕೊಲ್ಲು ಕಾಯಿ ನಿಮ್ಮ ಧರ್ಮ. ॥೫೬॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

೧೧೦೪

ಪುಣ್ಯಗಳಹ ಕಾಲಕ್ಕೆ ಹಗೆ ತನ್ನವರಹರು.
ಪುಣ್ಯಗಳಹ ಕಾಲಕ್ಕೆ ಮಣ್ಣು ಹೊನ್ನಹುದು.

ಪುಣ್ಯಗಳಹ ಕಾಲಕ್ಕೆ ಹಾವು ಲೇವಳವಹುದು
ಪುಣ್ಯಗಳಹ ಕಾಲಕ್ಕೆ ಅನ್ಯರು ತನ್ನವರಹರು.
ಇಂತಪ್ಪ ಪುಣ್ಯಗಳೆಲ್ಲವು ಭಕ್ತಿಯಿಂದಹುದು.
ಭಕ್ತಿ ಕೆಟ್ಟರೆ ಪುಣ್ಯವು ಕೆಡುವುದು.
ಇಂತಪ್ಪ ಭಕ್ತಿಯೂ ಪುಣ್ಯವೂ ಚೆನ್ನಬಸವಣ್ಣನಿಗುಂಟಾಗಿ,
ನಾನು ಬದುಕಿದೆನಯ್ಯಾ ಕೂಡಲಸಂಗಮದೇವಾ. ॥೫೭॥

ಇಂತು ಬಸವರಾಜದೇವರು ಚಿಕ್ಕದಣ್ಣಾಯಕರು ಪ್ರಸಂಗವ ಮಾಡುತ್ತ ಪ್ರಭುದೇವರ ತೋಱಿ ನುಡಿವುತ್ತಿರಲು, ಆ ಪ್ರಸ್ತಾವಕ್ಕೆ ಸೊಡ್ಡಳಬಾಚರಸರು ಹೇಳಿದ ವಚನ:

೧೧೦೫

ಅಟ್ಟಿ ಹಾವುತಲೊಮ್ಮೆ, ಹೋಗಿ ನಿಲುವುತಲೊಮ್ಮೆ,
ಬೀಗಿ ನಗುತಲೊಮ್ಮೆ ಮರುಳಿನಂತೆ ಮಂಕಿನಂತೆ
ದೆಸೆದೆಸೆಯ ನೋಡುತ್ತ,
ಅಂಗಡಿ ರಾಜಬೀದಿಯ ಶೃಂಗಾರಂಗಳ
ನಲಿನಲಿದು ನೋಡುತ್ತ,
ಇತ್ತರದ ಭದ್ರದ ಮೇಲೆ ನಾಟ್ಯವನಾಡುವವರ ನೋಡಿ ಬರುತ್ತ
ನೋಡುವ ಗಾವಳಿಯ ಜನರನಟ್ಟಿ ಹೊಯಿವಂತೆ ಹರಿವುತ್ತ,
ಗುಡಿ ಇಕ್ಕಿದಂತಿರೆ ನಿಂದಿರೆ ಬೀಳುತ್ತ,
ನಾಟ್ಯವನಾಡುವವರಿಗೆ ಇದಿರಾಗಿ ತಾ ಮರಳಿಯಾಡುತ್ತ,
ಹಾಡುತ್ತ ಬೈವುತ್ತ ಕೆರಳಿ ನುಡಿವುತ್ತ,
ವಾದ್ಯ ಮೇಳಾಪಮಂ ಕಂಡು ಆಳಿಗೊಂಡು ನಗುತ್ತ,
ಹಸ್ತವನಾಡಿಸಿ ಗತಿಯನುಚ್ಚರಿಸಿ ಕಯ್ಯೊಡನೆ ಮರುಳಾಟವನಾಡುತ್ತ,
ಮೆಲ್ಲಮೆಲ್ಲನೆ ನೋಡಿ ನಿಂದು ನಗುತ್ತ,
ಎಂದಿನ ಸುಳುಹಿನೊಳಗಲ್ಲದ ಸುಳುಹು.
ಬಸವಣ್ಣಾ ಸೊಡ್ಡಳನಾಗದೆ ಮಾಣನು. ॥೫೮॥

ಇದಕ್ಕೆ ಮಡಿವಾಳತಂದೆಗಳ ವಚನ:

೧೧೦೬

ಬಾಲನಹನೊಮ್ಮೆ, ಲೋಲನಹನೊಮ್ಮೆ.
ವೃದ್ಧನಹನೊಮ್ಮೆ; ಮತ್ತನಹನೊಮ್ಮೆ.
ಹೊಳೆದು ತೋಱುತ್ತಲೊಮ್ಮೆ, ತೋಱಿಯಡಗುತ್ತಲೊಮ್ಮೆ,
ವಿಶ್ವವು ನೋಡಿ ಬೆಱಗಾಗುತ್ತಲಿರೆ,
ಇದ್ದ ಠಾವಿನಲ್ಲಿರ್ದು ಮುಂದೆ ತೋಱುತ್ತಿರಲು,
ಸಾಂಪ್ರದಾಯದವರು ಒಡನೊಡನೆ ಹರಿದು ಬಂದು ಹೇಳುತ್ತಿರಲು,
ಹರಿದು ಬಂದು ಹತ್ತೆ ಸಾರಿದ.

ಬಸವನ ಮಹಾಮನೆಯ ತಲೆಯೆತ್ತಿ ನೋಡಿದ.
ಮುಗಿಲ ಮೂಲೆದಪ್ಪದೆ ಕುಸುರಿಗೆಲಸದ ನಂದಿಯ ಮಂಟಪಂಗಳ
ಮೇಲುಪ್ಪರಿಗೆ ಭದ್ರಂಗಳ ನೋಡಿ ತಲೆದೂಗುತ್ತ,
ಕಲಿದೇವರದೇವ ಬಸವನ ಮಹಾಮನೆಯ ಪ್ರದಕ್ಷಿಣ ಬಂದು
ದ್ವಾರವಟ್ಟದ ಮುಂದೆ ನಿಂದಿರ್ದನು! ॥೫೯॥

ಇಂತೀ ಶ್ರೀಮತ್ ಸಕಲಗಣ ಪುರಾತನರೊಳ್ ಪ್ರಭುದೇವರು
ಮಹಾನುಭಾವಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್
ಪ್ರಭುದೇವರು ಸವಾಲಕ್ಷಪರ್ವತದಿಂ ಕಲ್ಯಾಣಕ್ಕೆ ಬಂದುದು
ಸಪ್ತದಶೋಪದೇಶಂ ಸಮಾಪ್ತಂ
ಅಂತು ವಚನ ೧೧೦೬ ಕ್ಕಂ ಮಂಗಳಮಹಾ ಶ್ರೀ

❖

೧೮
ಪ್ರಭುದೇವರು ಶೂನ್ಯಸಿಂಹಾಸನವನೇಱಿದ ಸಂಪಾದನೆ

ಕಂದ:

ಪ್ರಭು ಶೂನ್ಯವಿಷ್ಟರದೊಳಂ
ವಿಭವದಿ ಮಂಡಿಸಿ ಸಮಸ್ತ ಶರಣರ ಕರದಿಂ
ಶುಭದಿಂದರ್ಚಿಸಿಕೊಂಡುದ
ತ್ರಿಭುವನವಱಿಯಲ್ಕೆ ಪೇಳ್ವೆನತಿಕೌತುಕದಿಂ ॥೧॥

ಅದೆಂತೆಂದೊಡಾ ಪ್ರಭುದೇವರು ಬಸವರಾಜದೇವರ ಅರಮನೆಯಂ ಪೊಕ್ಕು, ಆ ಬಸವೇಶ್ವರನ ಮಹಾಮನೆಯ ಚಿತ್ರಮಯದ ಭಾಸುರತೇಜಂಗಳನೊಳಕೊಂಡ ಹೊಂಭಿತ್ತಿಗಳ ರತ್ನದೆನೆಗಳಿಂ, ನೆಲೆ ನೆಲೆಯು ಮಂಟಪಂಗಳಿಂ, ನೀಲದುಪ್ಪರಿಗೆಗಳ ಮೇಲೆ ಮಾಣಿಕ್ಯದ ಕಲಶಂಗಳಿಂದೊಪ್ಪುವತಿಗೋಪುರಂಗಳಿಂ ವಜ್ರಧಾರೆಯ ಭಿತ್ತಿಗಳೊಳ್ ಮೆಱೆವ ಬಹುವಿಧದ ಚಿತ್ರಂಗಳಿಂ, ಕಣ್ಗೊಪ್ಪುವ ಪೊಂಜಗಲಿಗಳ್ ವಿರಾಜಿಸುವತಿನವರತ್ನಂಗಳೊಳ್ ಕೂಡಿದ ರಂಗಮಂಟಪದಿಂ, ಪಚ್ಚೆಯು ಕಂಭಂಗಳಿಂ, ಪುಷ್ಯರಾಗದ ತೊಲೆಗಳಿಂದೆಸೆವ ಶಶಿಗಲ್ಗಳೇಱುಜಂತೆಗಳಿಂದ್ಯೆವಣ್ಣದ ಲೋವೆಗಳಿಂ, ತೋರ್ಪ ಬಳ್ಳಿಮಿಂಚುಗಳಂದದೊಳಿರ್ಪ ಸೂರ್ಯಕಾಂತದಂಗಜ ಹಸ್ತಂಗಳಿಂ, ನೀಲದ ನೆಲಗಟ್ಟುಗಳಿಂದಚ್ಚುಗಳ್ ಸಂದ ಕೊನ್ನವಾಡಂಗಳ ಸಾಲ್ಗಳಿಂದವಱೊಳ್ ನಿಂದ ಅಮೃತದ ಕೊಡಂಗಳಿಂ, ಮತ್ತಂ ಕಿಱುವಾಡದೊಳ್ ಗಂಧವಟ್ಟಲುಗಳಿಂ, ರುದ್ರಾಕ್ಷೆಯ ಮಾಲೆಗಳಿಂ ದೇಹಾರದುಪಕರಣಂಗಳ ಎಡೆಮಾಡುವ ಶಿವಶರಣರ ಪ್ರತಿಬಿಂಬಂಗಳು ಮಣಿಸ್ತಂಭಂಗಳೊಳ್ ಭಿತ್ತಿಗಳೊಳ್ ಮೇಲ್ಗೊಲೆ ಕವಾಟಂಗಳೊಳ್ ಸಹಸ್ರಮದಾಗಿ ತೋಱಲು, ಕಂಡತಿಹರುಷಂಗೊಳುತಿಹ ಶಿವಸುಖಿಗಳ ಪಚ್ಚೆಯ ನೆಲ ಸಮದೊಳು ಪಾದಮಂ ತೊಳೆದುಱೆ ಪರಿವ ವಾರಿಯು ಮಱೆಸಿರೆ ಬೀಳುವ ಮುಗ್ಧರಂ ಕಂಡುಱೆ ಗಹಗಹಿಸುವ ಶರಣರುಮವರೆ ಮರಳ್ದಿದ್ದಾ ಪಚ್ಚೆಯ ನೆಲನಂ ಕಾಣುತ ಮೊದಲಾ ಜಲಮೆಂದೆ ನಿಱಿವಿಡಿದುರುಗಿಸುತ್ತೈತಪ್ಪವರಂ ಕಾಣುತ ಕೈವೊಯ್ದಿಂಚರದಿಂ ನಗುವತಿ ಮುಕ್ತಾಂಗನೆಯರುಂ, ಮತ್ತಂ ಭವನದ ದ್ವಾರವಟ್ಟದೊಳ್ ರುದ್ರಾಕ್ಷಿಯ ಸೂಸಕಗಳ, ಮುತ್ತಿನ ತೋರಣಂಗಳ, ರತ್ನದ ಗೊಂಡೆಯಗಳ, ಥಳಥಳಿಸುವ ಪೊಂಗವಾಟಂಗಳ, ಕನ್ನಡಿ ಕಲಶಂಗಳ ಪಿಡಿದಾರತಿಯನೆತ್ತುವ ಕನ್ನಿಕೆಯರ, ಮತ್ತಂ, ಭವನದ ಇಕ್ಕೆಲದೊಳ್ ಮಧ್ಯದೊಳ್ ಮಂಟಪಾಗ್ರದೊಳ್ ಶಿವಲಿಂಗಾರ್ಚನೆಯ ಮಾಡುವ, ಬಸವನ

ಸ್ತುತಿಸುವ, ವಚನವನೋದುವ, ಗದ್ಯಮಂ ಕೇಳುವ, ಅರ್ಥಮಂ ಪೇಳುವ, ಹಾಡುವ, ಆದ್ಯರ ಅನುಭಾವಮಂ ಲಾಲಿಸುತ ರಹಸ್ಯವನುಚ್ಚರಿಪರ, ಹಾಡುವ ಗಾನದ, ಆಡುವ ಪಾತ್ರದ, ಕೊಂಡಾಡುವ ಭಟ್ಟಾಳಿಗಳಿಂ ಮೆಱೆವ ಬಸವೇಶ್ವರನ ಹೆಮ್ಮನೆಯಂ ಪ್ರಭುದೇವರು ಕಾಣುತ್ತ ಹರುಷಂದಳೆವುತ, ಆನಂದಶರಧಿಯ ಕೂಡುತ, ನಲಿನಲಿದಾಡುತ ಇಕ್ಕೆಲದೊಳ್ ಮೆಱೆವತಿಭದ್ರಮಂಟಪಗಳ ಆ ಭಿತ್ತಿಯ ಆ ತೆನೆಗಳ ಆ ಗೋಪುರಂಗಳ ಆ ಕಲಶಮನಾತೋರಣಂಗಳನೀಕ್ಷಿಸುತ್ತಿರೆ, ಸ್ತುತಿಸುತ್ತ ಉಘೇ ಎನುತಿಹ, ಪುಷ್ಪಾಂಜಲಿಯಂ ಮಾಡುವ, ಆರತಿಯನೆತ್ತುವ ಶಿವಭಕ್ತರ ರುದ್ರಕನ್ನಿಕೆಯರ ಅತ್ಯಂತ ಸ್ತೋತ್ರಮಂ ಮಾಡುವ ನಿಜಘೋಷದೊಳ್ ಶೂನ್ಯಸಿಂಹಾಸನಮನಡರ್ದು ಮೇಲೆ ಮೂರ್ತಿಗೊಳುವ ಪ್ರಸ್ತಾವದ ವಚನ:

೧೧೦೭

ಮಲೆತು ಮೆಟ್ಟುತ್ತ, ತನುವನೊಲೆವುತ್ತ,
ತಲೆದೂಗಿ ಮನವನಲ್ಲಾಡಿಸಿ ನೋಡಿದ
ಭುವನ ಭುವನೇಶ್ವರನ
ಹಿಂದು ಮುಂದು ನೋಡುತ್ತ ಬರುತ್ತ
ಮುತ್ತಿನ ತೋರಣಕ್ಕೆ ಹಾರೈಸಿ
ಬಸವನರಮನೆಯ ಪೊಕ್ಕನು ಕಲಿದೇವರದೇವನು. ॥೧॥

ಮತ್ತಂ, ಶೂನ್ಯಸಿಂಹಾಸನದ ಮೇಲೆ ಮೂರ್ತಿಗೊಂಡ ಪ್ರಸ್ತಾವದ ವಚನ:

೧೧೦೮

ಬಲಕ್ಕೆ ಮುರಿದನು.
ಪೌಳಿಯ ಉತ್ತರ ಬಾಗಿಲಲ್ಲಿ ತಲೆವಾಗಿ ಹೊಕ್ಕ,-
ಗತಿಯ ಪವಣಿನಲ್ಲಿ,
ಧವಳಾರಮಪ್ಪ ಪಶ್ಚಿಮದ್ವಾರದಿಂ
ತ್ರಿವಿಧಗತಿಯ ಶೂನ್ಯಸಿಂಹಾಸನದ ಮೇಲೆ
ಮುಕ್ತಕೇಶದ ಪರಮಗುರುರಾಜನೇಱಿದ ಕಲಿದೇವರದೇವನು. ॥೨॥

ಶೂನ್ಯಸಿಂಹಾಸನದ ಮೇಲೆ ಪ್ರಭುದೇವರು ಮೂರ್ತಿಗೊಳಲು, ಬಸವರಾಜದೇವರು ನಮಸ್ಕರಿಸಿದ ವಚನ:

೧೧೦೯

ಬಟ್ಟಬಯಲಲ್ಲಿ ಒಂದು ತಲೆಯಿಲ್ಲದ ಆನೆ ಇದ್ದಿತ್ತು.
ಆನೆ ಬಂದು ಆನೆ ನುಂಗಿ ತಾನೆ ಅಳಿಯಿತ್ತು.
ಅಂತರವಿಲ್ಲದ ಒಳಗು, ಅವಲಂಬನವಿಲ್ಲದ ಹೊಱಗು ನೋಡಾ,
ದಳವಿಲ್ಲದ ಕುಸುಮದ ಗದ್ದುಗೆಯಲ್ಲಿ
ಒಡಲಿಲ್ಲದ ಘನವು ಮೂರ್ತಿಗೊಂಡರೆ,
ವಿಚಿತ್ರವಾಯಿತ್ತು ಜಗವೆಲ್ಲಾ!

ಕೂಡಲಸಂಗಮದೇವರ ಶರಣ ಪ್ರಭುದೇವರ ಶ್ರೀಪಾದಕ್ಕೆ
ಆನು ನಮೋ ನಮೋ ಎಂಬೆನು. ॥೩॥

ಅಲ್ಲಿ ಹಡಪದಪ್ಪಣ್ಣಗಳ ವಚನ:

೧೧೧೦

ನೆಲನ ಹೊದ್ದದು, ಆಕಾಶವ ಮುಟ್ಟದು.
ಎಡೆಯಲೊಂದು ರೂಪಿಲ್ಲ.
ಭಾವವೆಂಬ ಜ್ಞಾನವೆ ನಿವಾಸ,
ನಿಲವೆ ಭಿತ್ತಿ, ನಿರಹಂಕಾರವೆ ಶಿಖರಿ,
ಮಹದಹಂಕಾರವೆ ಶೃಂಗಾರಕಳಶ.
ಸಹಸ್ರಪತ್ರದ ನವಕಮಲಸಿಂಹಾಸನದ ನಿತ್ಯವೆ ಮಲಗು.
ನಿಜವೆಂಬ ವಿಸ್ತರದಲ್ಲಿ ನಿತ್ಯ ನಿರಾಳವೆಂಬ
ಮಹಾಘನವು ಬಂದು ಮೂರ್ತಿಗೊಳ್ಳಲು,
ಕಾಯದ ಕಂಗೆ ಕಾಣಬಾರದು;
ಮನದ ಮುಂದೆ ಅಳವಡದು;
ಭಾವದ ಬಗೆಗೆ ಮೈದೋಱದು.
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ
ಪ್ರಭುದೇವರ ಶ್ರೀಪಾದಕ್ಕೆ ನಮೋ ನಮೋ ಎಂಬೆನು. ॥೪॥

ಅಲ್ಲಿ ಸೊಡ್ಡಳಬಾಚರಸರ ವಚನ:

೧೧೧೧

ಆಕಾರವಿಲ್ಲದ ನಿರಾಕಾರದ ಮಠಕ್ಕೆ
ನಿರಾಲವೆಂಬ ಗಂಡ ಬಂದು ಕುಳ್ಳಿರಲು,
ಮೂವರು ಹೆಮ್ಮಕ್ಕಳು ಸೇವೆಯ ಮಾಡುವರು.
ಇಬ್ಬರು ಸಂಗವ ಮಾಡುತ್ತಿರ್ಪರು.
ಒಬ್ಬಾಕೆ ಪುರುಷನ ನುಂಗಿಕೊಂಡಿಪ್ಪಳು.
ಇವರಱುವರ ಕೂಡೆ ಹೊಯಿಕೈಯಾಗಿ ಇಪ್ಪನ ಕಂಡು
ಆನು ಪ್ರಭುವೆಂದಱಿದು, ಆತನ ನಿಜ ಪಾದಕ್ಕೆಱಗಿ,
ಎನ್ನ ಭವವ ಹಱಿದೆನು.
ಮಹಾದಾನಿ ಸೊಡ್ಡಳನ ಕಂಡ ಕಡುಸುಖವ ಉಪಮಿಸಬಾರದು. ॥೫॥

ಇದಕ್ಕೆ ಬಸವರಾಜದೇವರ ವಚನ:

೧೧೧೨

ಎನ್ನ ಗಂಡ ಬರಬೇಕೆಂದು ಆನು
ಎನ್ನಂತರಂಗವೆಂಬ ಮನೆಯ ತೆಱಹುಮಾಡಿ,

ಅಷ್ಟದಳವೆಂಬ ಓವರಿಯೊಳಗೆ
ನಿಜನಿವಾಸವೆಂಬ ಹಾಸುಗೆಯ ಹಾಸಿ,
ಧ್ಯಾನವೆಂಬ ಮೇಲುಕಟ್ಟಂ ಕಟ್ಟಿ,
ಜ್ಞಾನವೆಂಬ ದೀಪವ ಬೆಳಗಿ,
ನಿಃಕ್ರೀಯೆಂಬ ಉಪಚಾರಂಗಳ ಹರಹಿಕೊಂಡು,
ಪಶ್ಚಿಮದ್ವಾರವೆಂಬ ಬಾಗಿಲ ತೆಗೆದು,
ಕಂಗಳೆ ಪ್ರಾಣವಾಗಿ ಬರವ ಹಾರುತ್ತಿರ್ದೆನಯ್ಯಾ ನಾನು!
ಬಾರನೆಂದು ಉಮ್ಮಳಿಸಿಹಳೆಂದು ತಾನೆ ಬಂದು,
ಎನ್ನ ಹೃದಯ ಸಿಂಹಾಸನದ ಮೇಲೆ ಮೂರ್ತಿಗೊಂಡರೆನ್ನ
ಮನದ ಬಯಕೆ ಸಯವಾಯಿತ್ತು.
ಹಿಂದೆ ಹನ್ನೆರಡು ವರುಷದಲ್ಲಿದ್ದ ಚಿಂತೆ
ಇಂದು ನಿಶ್ಚಿಂತೆಯಾಯಿತ್ತು.
ಕೂಡಲಸಂಗಮದೇವರು ಕೃಪಾಮೂರ್ತಿಯಾದ ಕಾರಣ
ನಾನು ಬದುಕಿದೆನು! ॥೬॥

ಮತ್ತಂ, ಬಸವರಾಜದೇವರು ಪಾದಾರ್ಚನೆಯಂ ಮಾಡುವ ಪ್ರಸ್ತಾವದ ವಚನ:

೧೧೧೩

ಎನ್ನ ಮನವು ನಿಮ್ಮ ಚರಣವ ಕಂಡ ಬಳಿಕ,
ಬೆರಸಿಯಲ್ಲದೆ ಅಗಲಿ ಸೈರಿಸಲಾಱೆನಯ್ಯಾ.
ತ್ರಾಹಿ ತ್ರಾಹಿ! ಘನಮಹಿಮ,
ನಿಮ್ಮ ಪಾದಾರ್ಚನೆಗೆ
ಎನ್ನ ಪರಮಾನಂದಜಲವ ತುಂಬುವೆನಯ್ಯಾ.
ಪೂಜೆಯ ಮಾಡುವರೆ ಎನ್ನ ಹೃದಯ ಕಮಲವನರ್ಚಿಸುವೆ.
ಆ ರತಿಯಿಂದ ಆರತಿಯನೆತ್ತುವೆನೆನ್ನ
ಮಹಾಪ್ರಕಾಶ ಧೂಪವ ಬೀಸುವೆನೆನ್ನ
ಸ್ವಾನುಭಾವದ ಗಂಧವನೀವೆ.
ಈ ತೆಱನಲ್ಲದೆ ನಾ ಕಾಣೆನಯ್ಯಾ.
ಕೂಡಲಸಂಗಮದೇವಯ್ಯಾ,
ಪ್ರಭುವೆನ್ನ ಪ್ರಾಣಲಿಂಗವೆಂಬುದು
ಎನಗಿಂದು ಕಾಣ ಬಂದಿತ್ತು ನೋಡಯ್ಯಾ! ॥೭॥

ಮತ್ತಂ, ದರ್ಶನದ ಸುಖಾನಂದದ ವಚನ:

೧೧೧೪

ನಿಮ್ಮ ನೋಟವನಂತ ಸುಖವು!
ನಿಮ್ಮ ಕೂಟ ಪರಮಸುಖವು!

ಅಷ್ಟಕೋಟಿ ರೋಮಂಗಳೆಲ್ಲಾ
ಕಂಗಳಾಗಿ ನೋಡುತ್ತಿದ್ದೆನು!
ಕೂಡಲಸಂಗಮದೇವಯ್ಯಾ,
ನಿಮ್ಮ ನೋಡಿ ನೋಡಿ ಎನ್ನ ಮನದಲ್ಲಿ
ರತಿ ಹುಟ್ಟಿ ನಿಮಿರ್ದವೆನ್ನ ಕಳೆಗಳು. ॥೮॥

ಮತ್ತಂ,

೧೧೧೫

ಎನ್ನ ವಚನದಲ್ಲಿ ನಾಮಾಮೃತ ತುಂಬಿ,
ಎನ್ನ ನಯನದಲ್ಲಿ ಮೂರುತಿ ತುಂಬಿ,
ಎನ್ನ ಮನದಲ್ಲಿ ನಿಮ್ಮ ನೆನಹು ತುಂಬಿ,
ಎನ್ನ ಕಿವಿಯಲ್ಲಿ ನಿಮ್ಮ ಕೀರ್ತಿ ತುಂಬಿ–
ಕೂಡಲಸಂಗಮದೇವಾ,
ನಿಮ್ಮ ಚರಣಕಮಲದೊಳಗಾನು ತುಂಬಿ. ॥೯॥

ಮತ್ತಂ,

೧೧೧೬

ಕಂಡ ಕನಸು ನಿಧಾನವ ಕಂಡೆನಯ್ಯಾ
ಬಿಡಲಾರದ ನಿಧಾನವ ಕಂಡೆನಯ್ಯಾ,
ಕೂಡಲಸಂಗಯ್ಯನೆಂಬ ನಿಧಾನವ ಕಂಡು ಬಿಡಲಾರೆನಯ್ಯಾ ॥೧೦॥

[1]ಮತ್ತಂ[1],

೧೧೧೭

ಕಾಣಬಾರದ ವಸ್ತು ಕೈಗೆ ಸಾರಿತ್ತಯ್ಯ
ಆನಂದದಿಂದ ಆಡುವೆ, ಹಾಡುವೆ.
ಎನ್ನ ಕಣ್ಣ ತುಂಬಿ ನೋಡುವೆ.
ಎನ್ನ ಮನವೊಲಿದು ಭಕ್ತಿಯ ಮಾಡುವೆ–
ಕೂಡಲಸಂಗಯ್ಯಾ ನಿನಗೆ! ॥೧೧॥

ಮತ್ತಂ,

೧೧೧೮

ಆಡಿ ಕಾಲು ದಣಿಯವು; ನೋಡಿ ಕಂಗಳು ದಣಿಯವು.
ಹಾಡಿ ಮನದಣಿಯದಿನ್ನೇವೆನಿನ್ನೇವೆನಯ್ಯಾ?

---

೧ x (ಮೂ)

ನಿಮ್ಮುವ ಕೈಮುಟ್ಟಿ ಪೂಜಿಸಿ,
ಮನ ದಣಿಯಲೊಲ್ಲದಿನ್ನೇವೆನಿನ್ನೇವೆ?
ಕೂಡಲಸಂಗಮದೇವಾ,
ನಿಮ್ಮ ಉದರವ ಬಗಿದು ಹೊಗುವ ಭರವೆನಗೆ. ॥೧೨॥

ಇಂತು ಪ್ರಭುದೇವರು ಶೂನ್ಯಸಿಂಹಾಸನದ ಮೇಲೆ ಮೂರ್ತಿಗೊಂಡಿರಲು, ಬಸವರಾಜದೇವರು ಪರಮಾನಂದಯುಕ್ತವಾದ ಸದ್‌ಭಕ್ತಿಯಿಂದ ಪ್ರಭುದೇವರ ಪೂಜಿಸಿ, ಆಡಿ ಹಾಡಿ ಓಲಾಡುತ್ತಿರಲು, ಇತ್ತಲು ಆರೋಗಣೆಗೆ ಬಂದು ಕುಳ್ಳಿರ್ದ ಲಕ್ಷದ ಮೇಲೆ ತೊಂಬತ್ತಾಱುಸಾವಿರ ಜಂಗಮವೆಲ್ಲವೂ ಕ್ರೋಧದಿಂದ ಬಸವರಾಜದೇವರ ಮೇಲೂ ಪ್ರಭುದೇವರ ಮೇಲೆಯೂ ಡಂಗುರವನಿಕ್ಕಿ ಎದ್ದು ಹೋದ ಪ್ರಸ್ತಾವದ ವಚನ:

೧೧೧೯

ಅರಳುಗಂಗಳವರಿಗೆ ಹರಳುಗಂಗಳವರು ಸೈರಿಸದಂತೆ,
ತುಱುಬುಳ್ಳವರಿಗೆ ಹಜೆಮಂಡೆಯವರು ಸೈರಿಸದಂತೆ,
ಅರಸನ ಕಂಡು ಪುರಷನ ಮಱೆದಂತೆ
ಮಾಡಿದನೀ ವ್ರತಗೇಡಿ ಬಸವನು.
ಮಹೇಂದ್ರಜಾಲಿಕನೊಬ್ಬನ ಪ್ರಭುವೆಂದು ಕುಳ್ಳಿರಿಸಿಕೊಂಡು,
ತನ್ನ ಪ್ರಾಣಲಿಂಗವೆಂದು ನಮ್ಮ ತಿರುಗಿ ನೋಡಲೊಲ್ಲ.
ಆತನಲ್ಲಿ ಏನು ಲೇಸ ಕಂಡನು?
ನಮ್ಮಲ್ಲಿ ಏನು ಹೊಲ್ಲಹವ ಕಂಡನು?
ಕಂಚನೊಲ್ಲದೆ ಬಿಟ್ಟು ಹಂಚ ಹಿಡಿದನು.
ಅನಾಚಾರಿಯವನೊಬ್ಬ, ವ್ರತಗೇಡಿ ಬಸವನೊಬ್ಬ.
ಇವರಿಬ್ಬರೂ ದೇವಲೋಕ ಮರ್ತ್ಯಲೋಕಕ್ಕೆ ಹೊಱಗು.
ಇವಂದಿರ ಮುಖವ ನೋಡಲಾಗದು
ಎನ್ನುತ ಹೋದರು ಕಲಿದೇವನ ಶರಣರು. ॥೧೩॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ;

೧೧೨೦

ಅಯ್ಯಾ, ಸಾತ್ತ್ವಿಕ ಶರಣರ ನುಡಿ ಹುಸಿಯೆ?
ಅದು ದಿಟ, ಅದು ದಿಟ,
ಒಳಗೆಂಬುದೇ ದೇವಲೋಕ.
ಹೊಱಗೆಂಬುದೇ ಮರ್ತ್ಯಲೋಕ,
ಈ ಎರಡು ಲೋಕಕ್ಕೆ ಹೊಱಗಾಗಿ ನಾವಿರಲು,
ಈ ಎರಡು ಲೋಕದೊಳಗೆಯೂ ತಾವೆ ಇರಲಿ ಗೊಹೇಶ್ವರಾ! ॥೧೪॥

ಮತ್ತಂ, ಪ್ರಭುದೇವರು ಉದ್ದಂಡಿಸುತ್ತ ಎದ್ದುಹೋದ ಜಂಗಮವ ವಿಡಂಬಿಸುವ ಪ್ರಸ್ತಾವದ

ವಚನ:

೧೧೨೧

ಅಂಗಜಂಗುಳಿಗಳೆಲ್ಲಾ ಅಶನಕ್ಕೆ ನೆರೆದರು.
ಲಿಂಗದ ಹವಣನಿವರೆತ್ತ ಬಲ್ಲರು?
ಕಾಯಜೀವಿಗಳು ಕಳವಳಧಾರಿಗಳು,
ದೇವರ ಸುದ್ದಿಯನಿವರೆತ್ತ ಬಲ್ಲರು?
ಮದ್ಯಪಾನವನುಂಡು ಮದವೆದ್ದ ಜೋಗಿಯಂತೆ ನುಡಿವರು.
ಗೊಹೇಶ್ವರನ ನಿಲವನಿವರೆತ್ತ ಬಲ್ಲರು? ॥೧೫॥

ಆ ಪ್ರಸ್ತಾವದೊಳು ಚಿಕ್ಕದಣ್ಣಾಯಕರು ವಿಡಂಬಿಸುವ ಪ್ರಸ್ತಾವದ ವಚನ:

೧೧೨೨

ಅತಿಮಥನವೆಂಬ ಶೂನ್ಯಸಿಂಹಾಸನವನೇಜಿಕೊಂಡು
ನಾವೆ ಹಿರಿಯರು, ನಾವು ದೇವರೆಂಬರು.
ತಮ್ಮ ತಾವಜಿಯರು, ಅದ್ಭುತ!
ಮನಭುಂಜಕರ ಮೆಚ್ಚ ನಮ್ಮ ಕೂಡಲಚೆನ್ನಸಂಗಯ್ಯನು. ॥೧೬॥

ಮತ್ತಂ,

೧೧೨೩

ಪಥವನಜಿಯದೆ ಮಂಡೆಯ ಬೋಳಿಸಿಕೊಂಡಾತ ಜಂಗಮವಲ್ಲ.
ಸತ್ತರೆ ತೆಗೆವರಿಲ್ಲೆಂದು ಕಟ್ಟಿಕೊಂಡಾತ ಭಕ್ತನಲ್ಲ.
ತನು ಮನ ಧನ ಎನ್ನದಲ್ಲ,
ಲಿಂಗದ ಒಡವೆ, ಲಿಂಗಕ್ಕೆಂದು ಮಾಡುವಾತ ಭಕ್ತ.
ತನುಗುಣ ವಿರಹಿತನಾಗಿ
ಲಿಂಗದಲ್ಲಿ ಸಯವಾಗಿ ಬಂದು ನಿಂದಾತನೆ ಜಂಗಮ.
ಅಂಥ ಭಕ್ತನು ಅಂಥ ಜಂಗಮವು
ಕೂಡಲಚೆನ್ನಸಂಗಯ್ಯನಲ್ಲಿ ಬಸವನು ಪ್ರಭುವಲ್ಲದಿಲ್ಲ.
ಉಳಿದವರೆಲ್ಲಾ ಲಾಂಛನಧಾರಿಗಳು. ॥೧೭॥

ಮತ್ತಂ,

೧೧೨೪

ಬಜಿಯ ಬೋಳುಗಳೆಲ್ಲಾ ಜಂಗಮವೆ?
ವೇಷಧಾರಿಗಳೆಲ್ಲ ಜಂಗಮವೆ?
ಜಡಜೀವಿಗಳೆಲ್ಲಾ ಜಂಗಮವೆ?
ನಿರ್ಗಮನವೆ ಜಂಗಮ, ನಿಸ್ಸೀಮನೆ ಜಂಗಮ, ನಿಜೈಕ್ಯನೆ ಜಂಗಮ,
ಇಂಥ ಜಂಗಮದ ಸುಳುಹ ಕಾಣದೆ,
ಕೂಡಲಚೆನ್ನಸಂಗಮದೇವ, ತಾನೆ ಪ್ರಭುವೆಂಬ ಜಂಗಮವಾದ. ॥೧೮॥

ಮತ್ತಂ,

೧೧೨೫

ಧರೆಯ ಮೇಲೆ ಸುಳಿದಾಡುವ ಲಾಂಛನಧಾರಿಗಳೆಲ್ಲರೂ
ಹದಿನೆಂಟು ಜಾತಿಯ ಮನೆಯ ಭಿಕ್ಷವನುಂಡು ಕೆಟ್ಟರಯ್ಯಾ!
ಗಿರಿಯಲ್ಲಿಪ್ಪ ಜಡೆಯಧಾರಿಗಳೆಲ್ಲರೂ
ಫಲವೃಕ್ಷಂಗಳನುಂಡು ಕೆಟ್ಟರಯ್ಯಾ!
ತಱಗೆಲೆಯ ಮೆಲಿದು ತಪಸ್ಸಿಪ್ಪವರೆಲ್ಲರೂ
ವಾಯುಭಿಕ್ಷವನುಕೊಂಡು ಕೆಟ್ಟರಯ್ಯಾ!
ಅರಿಯದೆ ಇಂದ್ರಿಯಂಗಳಂ ಕಟ್ಟಿ
ಕುಱುಹಿನ ರಾಜಕ್ಕೆ ಬಂದು
ನರಕಕ್ಕಿಳಿವವರ ಹಿರಿಯರೆಂದೆನ್ನದೆನ್ನ ಮನವು.
ಇದು ಕಾರಣ ಕೂಡಲಚೆನ್ನಸಂಗಯ್ಯನೊಲ್ಲದಿದ್ದರೆ
ಅವರ ಬೆನ್ನಲ್ಲಿ ಹೋಗಲಿ, ನಾನು ಪ್ರಭುದೇವರ ಬಿಡೆನು. ॥೧೯॥

ಆ ಪ್ರಸ್ತಾವದೊಳು ಸೊಡ್ಡಳಬಾಚರಸರ ವಚನ:

೧೧೨೬

ವಿಪಿನದೊಳು ಮದಕರಿಯ ಹಿಂಡು
ಆನಂದಲೀಲೆಯೊಳಾಡುತ್ತಿರಲು,
ಕೇಸರಿ ಬರಲು ಮದಕರಿಗಳೆಲ್ಲಾ ಕೆದಱಿ ಓಡುವ ತೆಱನಂತೆ,
ಸಾಕಾರ ಸೊಡ್ಡಳಾ, ನಿಮ್ಮ ಶರಣ ಪ್ರಭುದೇವರು ಬರಲೊಡನೆ
ಹರಿದುದಯ್ಯಾ ನೆರೆದ ಶಿವಗಣಂಗಳು. ॥೨೦॥

ಇಂತು ಜಂಗಮವೆಲ್ಲಾ ಮುಳಿದು ಹೋಗಲು, ಬಸವರಾಜದೇವರು ಅತ್ಯಂತ ಭೀತರಾಗಿ ಪ್ರಭುದೇವರೊಡನೆ ಬಿನ್ನೈಸುವ ವಚನ:

೧೧೨೭

ಅಯ್ಯಾ, ನಿಮ್ಮ ಶರಣರ ಸಂಗವೆನಗೆ ಪರಮ ಸುಖವಯ್ಯಾ.
ಅಯ್ಯಾ, ನಿಮ್ಮ ಶರಣರ ಅಗಲಿಕೆ ಎನ್ನ ಪ್ರಾಣವಿಯೋಗವಯ್ಯಾ.
ಶಿವ ಶಿವಾ! ಸಂತವಿಡುವೆನು ಇನ್ನೆಂತಯ್ಯಾ!
ಎನಗೇನು ಗತಿ? ಕೂಡಲಸಂಗಮದೇವಾ,
ನಿಮ್ಮ ಶರಣರ ಮುನಿಸು ಎನಗೆ ಬಿಡಿಸಬಾರದ ತೊಡಕು. ॥೨೧॥

ಮತ್ತಂ,

೧೧೨೮

ಗುರು ಮುನಿದರೆ ಒಂದು ದಿನ ತಾಳುವೆ.
ಲಿಂಗ ಮುನಿದರೆ ಅರೆ ದಿನ ತಾಳುವೆ.

ಜಂಗಮ ಮುನಿದರೆ, ಕ್ಷಣಮಾತ್ರ ತಾಳಿದರೆ
ಎನ್ನ ಪ್ರಾಣದ ಹೋಕು ನೋಡಾ ಕೂಡಲಸಂಗಮದೇವಾ. ॥೨೨॥

ಮತ್ತಂ,

೧೧೨೯

ಅರಸು ಮುನಿದರೆ ನಾಡೊಳಗಿರಬಾರದು.
ಪತಿ ಮುನಿದರೆ ಸತಿ ಇರಬಾರದು.
ಕೂಡಲಸಂಗಮದೇವಾ,
ಜಂಗಮ ಮುನಿದರೆ ನಾನೆಂತು ಬದುಕುವೆನು? ॥೨೩॥

ಇದಕ್ಕೆ ಪ್ರಭುದೇವರು ಬಸವರಾಜದೇವರ ಭಯಮಂ ಸಂತೈಸಿ ಬೋಧಿಸುವ ವಚನ:

೧೧೩೦

ಅಂಜಬೇಡ, ಅಳುಕಬೇಡ,
ಹೋದವರಾರು? ಇದ್ದವರಾರು? ಎಲೆ ಮರುಳೆ,
ಒಂದು ಮುಖದಲ್ಲಿ ಇಪ್ಪ ದೇವನೊಬ್ಬನೆ;
ಹಲವು ಮುಖದಲ್ಲಿ ಇಪ್ಪ ದೇವನೊಬ್ಬನೆ.
ನಾಮ ಹಲವಲ್ಲದೆ ಕಾರ್ಯ ಒಂದೆ ನೋಡಾ.
ಮನದೊಳಗಣ ಘನವು ತನುವನಗಲುವುದೆ?
ಗೊಹೇಶ್ವರಲಿಂಗದಲ್ಲಿ ವಿಯೋಗಕ್ಕೆ ತೆಱಹಿಲ್ಲ ಕೇಳಾ
ಸಂಗನಬಸವಣ್ಣಾ. ॥೨೪॥

ಮತ್ತಂ,

೧೧೩೧

ಮತಿಯೊಳಗೆ ದುರ್ಮತಿ ಹುಟ್ಟಿ
ಕಲಿ ಗಸಣೆಗೊಳಗಾದ ಪರಿಯ ನೋಡಾ!
ಜ್ಞಾನವನು ಅಜ್ಞಾನ ನುಂಗಿದ ಬಳಿಕ,
ಭಾನು ಗ್ರಹಣಕ್ಕೊಳಗಾದಂತೆ ಇದ್ದಿತ್ತು.
ಕ್ಷೀರವುಳ್ಳ ಪಶು ಕರುವನಗಲಿ
ಅರಿಯದ ಮೋಹದಂತೆ ಇದ್ದಿತ್ತು.
ಹೇಳುವಲ್ಲಿ ಯುಕ್ತನು, ಕೇಳುವಲ್ಲಿ ಯುಕ್ತನು ಎಂಬುದು
ಅಜ್ಞಾನ ಭಾವಕ್ಕೆ ಬಂದಿತ್ತು.
ನೀರ ಮೇಲಣ ಲಿಪಿಯನೋದಬಲ್ಲವರುಂಟೆ
ಸಾರಾಯವೇದ್ಯರಿಗಲ್ಲದೆ?
ಕನ್ನಡಿಯೊಳಗೆ ನೋಡಲು ಭಿನ್ನವುಂಟೆ ಅಯ್ಯಾ?
ತನ್ನ ಕಣ್ಣಿನಲ್ಲಿ ಕಾಣದಂತೆ

ದರ್ಪಣದೊಳಗಣ ಬೆಳಗು.
ಬೆಳಗಿನೊಳಗಣ ಬೆಳಗು ಗೊಹೇಶ್ವರನಿಪ್ಪೆಡೆಯ
ತಿಳಿದು ನೋಡಯ್ಯಾ ಸಂಗನಬಸವಣ್ಣಾ. ॥೨೫॥

ಇದಕ್ಕೆ ಬಸವರಾಜರ ಪ್ರತ್ಯುತ್ತರ:

೧೧೩೨

ಅದ್ವೈತವ ಅಂತರಂಗದಲ್ಲಿ ಅಱಿದು,
ಹೊಱಗೆ ದಾಸೋಹವ ಮಾಡದಿರ್ದರೆಂತಯ್ಯಾ?
ಉಭಯ ಸಂದೇಹದಲ್ಲಿ ನಿಜವಿಪ್ಪುದೆ?
ನಿಮ್ಮ ಶರಣರ ಮನ ನೊಂದಲ್ಲಿ
ನಾನು ಸೈರಿಸಿಕೊಂಬೆನೆಂತಯ್ಯಾ? ಕೂಡಲಸಂಗಮದೇವಾ,
ಹಾವು ಸಾಯದೆ ಕೋಲು ನೋಯದಂತೆ ಮಾಡಾ
ನಿಮ್ಮ ಧರ್ಮ. ॥೨೬॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೧೧೩೩

ಒಂದಾದುದು ಎರಡಪ್ಪುದೆ? ಎರಡಾದುದು ಒಂದಪ್ಪುದೆ?
ಪರಿಣಾಮದ ವೇಳೆಯಲ್ಲಿ ಸಂದೇಹ ಹುಟ್ಟಲುಂಟೆ?
ಬಂದ ಜಂಗಮದ ನಿಲವನಱಿಯದೆ,
ಹಿಂದನೆಣಿಸಿ ಹಲವ ಹಂಬಲಿಸುವರೆ?
ಈ ಒಂದು ನಿಲವಿಂಗೆ ಪರಿಣಾಮವ ಮಾಡಬಲ್ಲರೆ,
ನಿನ್ನ ಲಕ್ಷದ ಮೇಲೆ ತೊಂಬತ್ತಾಱುಸಾವಿರ ಜಂಗಮಕ್ಕೆ
ಪರಿಣಾಮವಹುದು ನೋಡಾ.
[1]ಗೊಹೇಶ್ವರ[1]ನೆಂಬ ಲಿಂಗದ ನೆಲೆಯನರಿಯದೆ
ಮರುಳಾದೆಯಲ್ಲಾ ಸಂಗನಬಸವಣ್ಣಾ. ॥೨೭॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

೧೧೩೪

ದೇವದೇವ, ಮಹಾಪ್ರಸಾದ.
ನಿಮ್ಮಡಿಗಳೆಂದಂತೆಯಲ್ಲದೆ ಎನಗೆ ಬೇಱೆ ಸ್ವತಂತ್ರವುಂಟೆ?
ಸಂದು ಸಂಶಯವುಂಟೆ?
ದರ್ಪಣದೊಳಗಣ ಪ್ರತಿಬಿಂಬವ ನೋಡುವ ಮುಖಕ್ಕೆ ಭಿನ್ನಭಾವವುಂಟೆ?
ಚರಿಸಿ ಬಪ್ಪ ಅನಂತ ಸುಳುಹಿನೊಳಗೆ

೧-೧ ಗೊಗ್ಗೇಶ್ವರ (ಮೂ)

ನೀನೊಬ್ಬನೆ; ನಿನ್ನೊಳಗೆ ಅನಂತ ಸುಳುಹು ಅಡಗಿದವು.
ನಿಮಗೆ ಮಾಡಿದ ಸಯಿದಾನವ ನಿಮಗೆ ನೀಡುವೆನು.
ಅವಧರಿಸಬೇಕಯ್ಯಾ, ಕೂಡಲಸಂಗಮದೇವಾ. ॥೨೮॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೧೧೩೫

ತನಗುಳ್ಳ ನಿಧಾನ ತನಗಿಲ್ಲದಂತೆ ಬಂಧುಗಳೆಲ್ಲ ನುಂಗಿ
ಅಂಬುಧಿ ಬತ್ತಿತ್ತು;
ಅದ್ಭುತ ಸತ್ತಿತ್ತು; ರಣರಂಗವತ್ತಿತ್ತು.
ಇರುಳು ಮಾಣಿಕವ ನುಂಗಿ ಮರಣವಾದ ಬಳಿಕ,
ಅಮೃತದ ಪುತ್ಥಳಿಯ ಹಾಲ ಕುಡಿಯ ಕರೆದಡೆ,
ಗೊಹೇಶ್ವರಲಿಂಗಕ್ಕೆ ಊಟವೆಂಬುದಿಲ್ಲ ನೋಡಾ ಸಂಗನಬಸವಣ್ಣಾ. ॥೨೯॥

ಮತ್ತಂ,

೧೧೩೬

ಕಾಯದಲ್ಲಿ ಕಾಯ ಸವೆದು,
ಪ್ರಾಣದಲ್ಲಿ ಪ್ರಾಣ ಸವೆದು ನಿಶ್ಚಿಂತವಾದ ಬಳಿಕ,
ಹಸಿವು ತೃಷೆಗಳೆಂಬವು ಅಳಿದು ಹೋದವು ಕೇಳಾ.
ಉಂಡೆನೆಂಬ ಬಯಕೆಯು, ಒಲ್ಲೆನೆಂಬ ವೈರಾಗ್ಯವು ಇಲ್ಲ
ಇದು ಸ್ವಭಾವ ತೃಪ್ತಿಯೊಳಡಗಿತ್ತು.
ಇದು ಕಾರಣ ನಮ್ಮ ಗೊಹೇಶ್ವರಲಿಂಗಕ್ಕೆ
ಆರೋಗಣೆ ಇಲ್ಲ ಕಾಣಾ ಸಂಗನಬಸವಣ್ಣಾ. ॥೩೦॥

ಇದಕ್ಕೆ ಚಿಕ್ಕದಣ್ಣಾಯಕರ ವಚನ:

೧೧೩೭

ಒಲ್ಲೆನೆಂದರೆ ಭಂಗ;
ಒಲಿವೆನೆಂದರೆ ಅದೆ ಭಂಗ.
ಒಲ್ಲೆನೊಲಿವೆನೆಂಬೆರಡನೂ ಅಳಿದು
ತೃಪ್ತನಾದೆನೆಂದಡೆ ಅದೆ ಕೊಜಿತೆ.
ಕೂಡಲಚೆನ್ನಸಂಗಯ್ಯ ಭಕ್ತನಾಧೀನವಾಗಿ
ಇಲ್ಲಿಗೆ ನಡೆದು ಬಂದ ಬಳಿಕ ಉಪಚಾರವುಂಟೆ ಅಯ್ಯಾ? ॥೩೧॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೧೧೩೮

ಭಕ್ತನಾಧೀನವಾಗಿ ಭಕ್ತಿಯ ಬೇಡ ಬಂದವನಲ್ಲ.
ಮುಕ್ತಿಯಾಧೀನವಾಗಿ ಮುಕ್ತಿಯ ಬೇಡ ಬಂದವನಲ್ಲ.

ಅಶನಾತುರನಾಗಿ ವಿಷಯವ ಬಯಸಿ ಬಂದವನಲ್ಲ.
ಗೊಹೇಶ್ವರನ ಶರಣ ಸಂಗನಬಸವಣ್ಣ
ಮಾಡುವ ಭಕ್ತನಲ್ಲಾಗಿ,
ನಾನು ಬೇಡುವ ಜಂಗಮವಲ್ಲ ಕಾಣಾ ಚೆನ್ನಬಸವಣ್ಣಾ! ॥೩೨॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

೧೧೩೯

ಆನು ನಿಮ್ಮಲ್ಲಿ ಪ್ರಪಂಚಿನ ಉಪಚಾರವನಱಿಯೆನಯ್ಯಾ.
ನಿಮ್ಮ ಪಾದದಲ್ಲಿ ತದ್‌ಗತನಾಗಿಪ್ಪೆ.
ಭಕ್ತಿ ಯುಕ್ತಿ ವಿರಕ್ತಿಯ ಉಪಚಾರವ ನಾನಱಿಯೆನು.
ಕೂಡಲಸಂಗಮದೇವಾ,
ಭಿನ್ನವಿಲ್ಲದ ಭೃತ್ಯಾಚಾರಕ್ಕೆ ಬಂದ ಪದಾರ್ಥವ
ನೀನೆಂದೆ ಚಿತ್ತೈಸಯ್ಯಾ. ॥೩೩॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೧೧೪೦

ಕಾಯವೆಂಬ ಕಲ್ಪಿತವ ಕಳೆದು, ಪ್ರಾಣವೆಂಬ ಸೂತಕವ ಹಱಿದು,
ನಿಜಭಕ್ತಿ ಸಾಧ್ಯವಾದಲ್ಲದೆ ಲಿಂಗಪರಿಣಾಮ ವೇಧಿಸಬಾರದು.
ಆನು ಮಾಡಿದೆ, ನೀವು ಕೈಕೊಳ್ಳಿ ಎಂದರೆ ಅದೇ ಅಜ್ಞಾನ.
ನಮ್ಮ ಗೊಹೇಶ್ವರಲಿಂಗಕ್ಕೆ ಕುಱುಹಳಿದು ನಿಜ ಉಳಿದವಂಗಲ್ಲದೆ
ಪದಾರ್ಥವ ನೀಡಬಾರದು ಕಾಣಾ ಸಂಗನಬಸವಣ್ಣಾ. ॥೩೪॥

ಇದಕ್ಕೆ ಬಸವರಾಜದೇವರ ಬಿನ್ನಹ:

೧೧೪೧

ಮಱಹಿಂದಲಾದ ಕುಱುಹಿನ ಕಾಯವ ಧರಿಸಿಕೊಂಡು ಬಂದರೆ,
ಅದು ಎನಗೆ ಕುಂದಲ್ಲ ನೋಡಾ
ದೇವಾ, ನಿಮ್ಮ ಲೀಲೆಯಿಂದ ಹಿಂದಾಱುಜನ್ಮದಲ್ಲಿ ಬಂದರೆ,
ಅದ ನಿಮ್ಮ ಜಂಗಮಭಕ್ತಿಯಿಂದ ಕಳೆದೆ ನೋಡಯ್ಯಾ.
ಕಾಯವಿಲ್ಲದ ಜಂಗಮಕ್ಕೆ ಪ್ರಾಣವಿಲ್ಲದ ಮಾಟ.
ಒಲ್ಲೆನೆಂಬುದಕ್ಕೆ ಕಾರಣವೇನು ಹೇಳಾ ಕೂಡಲಸಂಗಮದೇವಾ. ॥೩೫॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೧೧೪೨

ತಾನಿಟ್ಟ ಬೇತಾಳ ತನ್ನ ತಿಂದಿತೆಂಬಂತೆ,
ನಿಮ್ಮ ಭವಾಳಿಯನೆತ್ತುವನ್ನಕ್ಕರ

ಎನ್ನ ಮಱವೆ ಎನಗೆ ಎಚ್ಚಱಕೆಯಾಯಿತ್ತು.
ಎನ್ನ ಪೂರ್ವ ನಿರ್ವಾಹವಾಯಿತ್ತು.
ನಿಮ್ಮ ವರ್ಮ ತಿಳಿಯದೆನಗೆ.
ಅದೆಂತೆಂದಡೆ:
ಹಿಂದೆ ನೀನೇನಾಗಿದ್ದೆಯೆಂಬುದನಱಯೆನಾಗಿ,
ಇಂದು ನಿಮ್ಮ ಮನೆಯಲಾರೋಗಣೆಯಾಗದು ಕಾಣಾ,
ಸಂಗನಬಸವಣ್ಣಾ ಗೊಹೇಶ್ವರಂಗೆ. ॥೩೬॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

೧೧೪೩

ಅಯ್ಯಾ, ಏಳೇಳು ಭವಾಂತರದಲ್ಲಿ
ಶಿವಭಕ್ತನಾಗಿ ಬಾರದಿದ್ದರೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ.
ನಿಮ್ಮ ಪ್ರಸಾದಕ್ಕಲ್ಲದೆ ಬಾಯ್ದೆಱೆಯೆನಯ್ಯಾ.
ಅದೆಂತೆಂದಡೆ:
ಪ್ರಥಮ ಭವಾಂತರದಲ್ಲಿ
ಶಿಲಾದನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು,
ನಿಮ್ಮ ಭೃತ್ಯನ ಮಾಡಿಕೊಂಡಿದ್ದಿರಯ್ಯಾ.
ಎರಡನೆಯ ಭವಾಂತರದಲ್ಲಿ
ಸ್ಕಂದನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು,
ನಿಮ್ಮ ಕಾರುಣ್ಯವ ಮಾಡಿಕೊಂಡಿದ್ದಿರಯ್ಯಾ
ಮೂಱನೆಯ ಭವಾಂತರದಲ್ಲಿ
ನೀಲಲೋಹಿತನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು,
ನಿಮ್ಮ ಲೀಲಾವಿನೋದದಿಂದಿರಿಸಿಕೊಂಡಿದ್ದಿರಯ್ಯಾ.
ನಾಲ್ಕನೆಯ ಭವಾಂತರದಲ್ಲಿ
ಮನೋಹರನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು,
ನಿಮ್ಮ ಮನಃಪ್ರೇರಕನಾಗಲೆಂದಿರಿಸಿಕೊಂಡಿದ್ದಿರಯ್ಯಾ,
ಐದನೆಯ ಭವಾಂತರದಲ್ಲಿ
ಕಾಲಲೋಚನನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು,
ಸರ್ವಕಾಲ ಸಂಹಾರವ ಮಾಡಿಸುತ್ತಿದ್ದಿರಯ್ಯಾ.
ಆಱನೆಯ ಭವಾಂತರದಲ್ಲಿ
ವೃಷಭನೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು,
ನಿಮಗೇಱಲು ವಾಹನವಾಗಲೆಂದಿರಿಸಿಕೊಂಡಿದ್ದಿರಯ್ಯಾ.
ಏಳನೆಯ ಭವಾಂತರದಲ್ಲಿ

ಬಸವದಣ್ಣಾಯಕರೆಂಬ ಗಣೇಶ್ವರನ ಮಾಡಿ ಹೆಸರಿಟ್ಟು ಕರೆದು,
ನಿಮ್ಮ ಒಕ್ಕುದ ಮಿಕ್ಕುದಕ್ಕೆ ಯೋಗ್ಯನಾಗಲೆಂದಿರಿಸಿಕೊಂಡಿದ್ದಿರಯ್ಯಾ.
ಇದು ಕಾರಣ-ಕೂಡಲಸಂಗಮದೇವಾ,
ನೀವು ಬರಿಸಿದ ಭವಾಂತರದಲ್ಲಿ ನಾನು ಬರುತ್ತಿರ್ದೆನಯ್ಯಾ. ॥೩೭॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೧೧೪೪

ಕೆಳಗೇಳು ಲೋಕಂಗಳಿಲ್ಲದ ಮುನ್ನ,
ಮೇಲೇಳು ಲೋಕಂಗಳಿಲ್ಲದ ಮುನ್ನ
ಸಮಸ್ತ ಬ್ರಹ್ಮಾಂಡಗಳಿಲ್ಲದ ಮುನ್ನ,
ಅಲ್ಲಿಂದತ್ತತ್ತ ಬಸವಣ್ಣಾ, ನೀನು ಲಿಂಗಭಕ್ತ, ಜಂಗಮಪ್ರಾಣಿ.
ಶಶಿಧರನ ಶರಣಂಗೆ ವೃಷಧರ ಸ್ವಾಯತವಾಗಿ
ನಮ್ಮ ಗೊಹೇಶ್ವರಲಿಂಗಕ್ಕೆ
ಬಸವಣ್ಣನೇ ಭಕ್ತನೆಂದು ಇಂದಜೆದೆನಯ್ಯಾ. ॥೩೮॥

ಇದಕ್ಕೆ ಬಸವರಾಜದೇವರೆ ಪ್ರತ್ಯುತ್ತರ:

೧೧೪೫

ಅಯ್ಯಾ, ನೀವೆನ್ನ ಬಲ್ಲಿರಲ್ಲದೆ ನಾ ನಿಮ್ಮ ಬಲ್ಲೆನೆ?
ನಿಮ್ಮ ನಿಲವ ನೋಡಿ ಮಾಡಿಹೆನೆಂದರೆ,
ನಿಮ್ಮ ಘನವೆನ್ನ ಮನಕ್ಕೆ ಸಾಧ್ಯವಾಗದ ಕಾರಣ,
ಅಂತಿಂತೆಂದುಪಮಿಸಲಮ್ಮದೆ ಇದ್ದೆ ನೋಡಯ್ಯಾ.
ನಿತ್ಯತೃಪ್ತ ಮಹಿಮಾ, ನಿಮಗೆಂದಳವಡಿಸಿದ ಪದಾರ್ಥವ
ಸುಚಿತ್ತದಿಂದ ಅವಧರಿಸಿ ಸಲಹಯ್ಯಾ ಪ್ರಭುವೆ
ಕೂಡಲಸಂಗಮದೇವಾ. ॥೩೯॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೧೧೪೬

ಪೌರ್ಣಮಿ ಬಪ್ಪನ್ನಕ್ಕ ಬಾಯಿ ಬಂಧನದಲ್ಲಿದ್ದ
ಚಕೋರನಂತೆ ಇದ್ದೆನಯ್ಯಾ.
ಉಣಲಾಗದೆಂಬ ಶಾಸ್ತ್ರವಿಡಿದು ಇದ್ದವನಲ್ಲ.
ಉಣಲಾಗದೆಂಬ ಶಾಸ್ತ್ರವುಂಟೆ ಲಿಂಗವಂತಂಗೆ?
ಅಹೋರಾತ್ರಿ ಅಷ್ಟಭೋಗಂಗಳ ಲಿಂಗಕ್ಕೆ ಕೊಟ್ಟು ಕೊಳಬೇಕು.
ಮಾಡುವ ನೀಡುವ ನಿಜಭಕ್ತರಿಲ್ಲದ ಕಾರಣ ಬಾಯ್ದೆಱೆಯದಿರ್ದೆನು.
ಮಾಡಿಹೆ, ನೀಡಿಹೆನೆಂಬ ಶಬ್ದಕ್ಕೆ

ಸಂತೋಷದಾಪ್ಯಾಯನ ಹಿರಿಹಿರಿದಾಯಿತ್ತು.
ನೀಡೈ ಸಂಗನಬಸವಣ್ಣಾ ಗೊಹೇಶ್ವರಂಗೆ. ॥೪೦॥

ಮತ್ತಂ,

೧೧೪೭

ಸಮತೆಯೆಂಬ ಕಂಥೆಯ ತೊಟ್ಟು,
ಸುಬುದ್ಧಿಯೆಂಬ ಟೊಪ್ಪರವನಿಕ್ಕಿ,
ವಿಷಯವೆಂಬ ಹಾವುಗೆಯ ಮೆಟ್ಟಿ,
ತಮಂಧವೆಂಬ ಕುಣಿಯ ಬೀಳದೆ,
ವೈರಾಗ್ಯವೆಂಬ ಕೊರಡನೆಡಹದೆ,
ಮದವೆಂಬ ಚೇಳ ಮೆಟ್ಟದೆ,
ಗೊಹೇಶ್ವರನ ಶರಣ ಬಂದೆನು
ಭಕ್ತಿಭಿಕ್ಷೆಯನಿಕ್ಕೈ ಸಂಗನಬಸವಣ್ಣಾ. ॥೪೧॥

ಮತ್ತಂ,

೧೧೪೮

ಕಡೆಯಿಲ್ಲದ ದೇಶವ ತಿರುಗಿದೆನು.
ಹವಣಿಲ್ಲದ ಕಂಥೆಯ ತೊಟ್ಟೆನು.
ಹಸಿವಿಲ್ಲದ ಕಪ್ಪರವ ಹಿಡಿದು ಭಕ್ತಿಭಿಕ್ಷವ ಬೇಡ ಬಂದೆ.
ಗೊಹೇಶ್ವರ ಹಸಿದನು ಉಣಲಿಕ್ಕೇಳಾ ಸಂಗನಬಸವಣ್ಣಾ. ॥೪೨॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

೧೧೪೯

ಕಾಯದ ಕುಱುಹುವಿಡಿದು ಬಂದೆನೆಂಬ
ಆ ಭಾವದ ಇರವೇತಕ್ಕೆ ನಿಮಗೆ?
ಅಂಬರದ ಚಾಪ ಮುಗಿಲೊಳಗೆ ಹೊಂದಿತೆ?
ಬೇಱೊಂದಱಲ್ಲಿ ಸಂದಿತ್ತೇ ಅದಱಂಗದ ಛಾಯೆ?
ಪ್ರಭುದೇವರು ನಿಂದ ಸುಳುಹು
ಕೂಡಲಸಂಗಮದೇವರಲ್ಲಿ ಭಿನ್ನವಿಲ್ಲದೆ ನಿಂದ ಕಾಯದಂಗ. ॥೪೩॥

ಮತ್ತಂ,

೧೧೫೦

ಏರಂಡದ ಬಿತ್ತಿನಂತೆ, ರಸವಾರಿಯಂತೆ,
ಪಶುವಿನ ಪಿಶಿತದಲ್ಲಿ ತಲೆದೋಱುವ ಅಮೃತದಂತೆ,
ಕಾಯವಿಡಿದು ಬಂದಡೆ ನಿನಗಾ ಭಾವವಿಲ್ಲ.
ಕೂಡಲಸಂಗಮದೇವರಲ್ಲಿ
ಪ್ರಭುದೇವರ ಸುಳುಹು ಅಗಮ್ಯವಾಯಿತ್ತು. ॥೪೪॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೧೧೫೧

ಬಂದು ನಿಂದು ಹೊಲೆನೀರ ಮಿಂದವರೆಲ್ಲರು
ಹೆಂಡತಿಯರಾಗಬಲ್ಲರೆ?
ಬಂದು ನಿಂದು ಸುಳಿದು ಮಾಡುವರೆಲ್ಲರು
ಸಂಗನಬಸವಣ್ಣನಂತೆ ಗೊಹೇಶ್ವರಲಿಂಗವ ಬಲ್ಲರೆ? ॥೪೫॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

೧೧೫೨

ರೂಹಿಲ್ಲದ ಸುಯಿಧಾನವ ನೀಡುವೆ.
ರುಚಿಯಿಲ್ಲದ ಪದಾರ್ಥವ ಮಥನಿಸದೆ ನೀಡುವೆನು.
ಲಿಂಗಕ್ಕೆಂದು ಲಿಂಗಪದಾರ್ಥವನಂಗಮುಖವ ಮಱೆದು
ನಿಮಗೆ ನೀಡುವೆ.
ಕಾಮಿಸದೆ ಕಲ್ಪಿಸದೆ ಭಾವಿಸದೆ ನಿಮ್ಮ ಪರಿಯಾಣಕ್ಕೆ ನೀಡುವೆನು.
ಸುಚಿತ್ತ ಸಮಾಧಾನದಿಂದ ಅವಧರಿಸಬೇಕಯ್ಯಾ
ಕೂಡಲಸಂಗಮದೇವಯ್ಯಾ. ॥೪೬॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೧೧೫೩

ನಿಮ್ಮ ಲೀಲೆ, ನಿಮ್ಮ ವಿನೋದ,
ನಿಮ್ಮ ಹಱೆ, ನಿಮ್ಮ ಕೊಳಲು,
ಅದಕ್ಕೆ ಬೇಕೆನ್ನೆ, ಬೇಡೆನ್ನೆ.
ಮೇಘವಹ್ನಿ ಧರೆಗೆಱಗುತ್ತ ಲೋಕವ ಬೆಸಗೊಂಡಿತ್ತೆ?
ಉದರಾಗ್ನಿ ಧರೆಗೆಱಗುತ್ತ ಭೂತಂಗಳ ಬೆಸಗೊಂಡಿತ್ತೆ?
ಗೊಹೇಶ್ವರಲ್ಲಮನ ನಿರುಪಮಮಹಿಮೆ ಎಂತಿದ್ದಿತ್ತು
ಆ ಹಾಂಗೆ ನೀನು ಮಾಡುವುದಲ್ಲದೆ
ನಾನಿದಕೆ ಬೇಕೆನ್ನೆನು ಬೇಡೆನ್ನನು ॥೪೭॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

೧೧೫೪

ಮಾಡುವ ಮಾಡಿಸಿಕೊಂಬ
ಈ ಎರಡಱ ನಡುವೆ ಸಂದು ಭೇದವುಂಟೆ ದೇವಾ,
ಕಾಯ ಪ್ರಾಣದ ಸಂಗದಂತೆ ಇದ್ದುದಲ್ಲದೆ?
ಬಲ್ಲಂತೆ ಮಾಡು, ಬಲ್ಲಂತೆ ನೀಡು,
ನಾನಱೆಯೆನೆಂಬುದು ನಿಮಗುಚಿತವೆ?

ಮಾಡುವಲ್ಲಿ ನೀಡುವಲ್ಲಿ ಹೇಳಿ ಮಾಡಿಸಿಕೊಂಬುದಲ್ಲದೆ,
ಕೈ ಕಲಸಿದರೆ ಬಾಯಿಗೆ ಹಂಗುಂಟೆ ಕೂಡಲಸಂಗಮದೇವಾ? ॥೪೮॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೧೧೫೫

ಉಳ್ಳವರು ಹಗೆಯವ ತೆಗೆವನ್ನಕ್ಕರ
ಇಲ್ಲದವರ ಹರಣ ಹೋಯಿತ್ತೆಂಬ
ಗಾದೆ ಎನಗಾಯಿತ್ತಯ್ಯಾ.
ಮಾತು ಬಣ್ಣಿಸಲು ಹೊತ್ತು ಹೋಯಿತ್ತಯ್ಯಾ.
ನಿನಗದೆ ಹರಿನುಡಿಗೆ ಕಡೆಯಿಲ್ಲ.
ಒಬ್ಬರ ನೋಡುವಾಗ
ಅಱುವತ್ತು ಮನುಷ್ಯರ ನೋಡುವ ಹಾಗೆ ಆಗುತ್ತಿದೆ.
ಶೂನ್ಯಸಿಂಹಾಸನ ಬವರಿಗೊಡುತ್ತಿದೆ.
ಪ್ರಾಣ ಹೆಡತಲೆಯಲ್ಲಿ ಹೋಗುತ್ತಿದೆ
ಗೊಹೇಶ್ವರ ಹಸಿದನು, ಪದಾರ್ಥವ ನೀಡೈ ಸಂಗನಬಸವಣ್ಣಾ. ॥೪೯॥

ಇದಕ್ಕೆ ಬಸವರಾಜದೇವರ ವಚನ:

೧೧೫೬

ಶುದ್ಧವಾಯಿತ್ತೆಂಬೆನೆ? ಸುಯಿಧಾನಿ ನಾನಲ್ಲ.
ಅನುವಾಯಿತ್ತೆಂಬೆನೆ? ಅವಧಾನಿ ನಾನಲ್ಲ.
ಸುಯಿಧಾನ ಅವಧಾನ ಅರ್ಪಿತವ ಮುನ್ನಱಿಯೆ.
ಇದ್ದ ಪರಿಯಲ್ಲಿ ನೀಡಿದರೆ ಬಂದ ಪರಿಯಲ್ಲಿ ಕೈಕೋ
ಕೂಡಲಸಂಗಮದೇವಾ. ॥೫೦॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೧೧೫೭

ಅಹುದಹುದು ಕಿಂಕುರ್ವಾಣ! ಮಝು ಭಾಪು!
ಬಲ್ಲವರು ಬಲ್ಲೆವೆಂದೆಂಬರೆ?
ಲಿಂಗವಂತರ ಮಹಿಮೆ ಈ ಹೀಂಗಿರಬೇಡಾ?
ಗೊಹೇಶ್ವರನ ಆಪ್ಯಾಯನವನಡಗಿಸುವ ಅನುಮಾನವನು
ನೀನಲ್ಲದೆ ಮಹೀತಳದೊಳು ಮತ್ತೆ ಬಲ್ಲವರಾರು
ಹೇಳಾ ಸಂಗನಬಸವಣ್ಣಾ? ॥೫೧॥

ಇದಕ್ಕೆ ಬಸವರಾಜದೇವರ ವಚನ:

೧೧೫೮

ಅಗ್ಘವಣಿಯವಸರ ಸದಾಚಾರ ಸತ್ಕ್ರೀಯೆಂಬ ಭೂಮಿಯ ಮೇಲೆ
ಸರ್ವಶುದ್ಧವೆಂಬ ಗೋಮಯಮಂ ತಂದು,
ವಿನಯಾರ್ಥವೆಂಬ ಉದಕದಿಂದ ಸಮ್ಮಾರ್ಜನೆಯಂ ಮಾಡಿ,
ತನುವಿನ ಅವಗುಣಂಗಳ ಹುಡಿಗುಟ್ಟಿ ರಂಗವಾಲೆಯನಿಕ್ಕಿ,
ಅಕ್ಷತವೆಂಬ ಬಿಂದಿಗೆಯಲ್ಲಿ ಪರಮಾನಂದವೆಂಬ ಅಗ್ಘವಣಿಯ ತುಂಬಿ,
ಸಮರಸದಿಂದ ಮಜ್ಜನಕ್ಕೆಱೆಯಲು,
ಹೃದಯಕಮಲವೆಂಬ ಪುಷ್ಪಮಂ ಸಲಿಸಿ,
ಸೌಖ್ಯತರ ಶಾಂತಿಯೆಂಬ ಗಂಧವನಿಟ್ಟು,
ಅಕ್ಷಯವೆಂಬ ಅಕ್ಷತೆಯನಳವಡಿಸಿ,
ಸದ್‌ಭಾವವೆಂಬ ಧೂಪಮಂ ಬೀಸಿ,
ಸುಜ್ಞಾನವೆಂಬ ನಿವಾಳಿಯನೆತ್ತಿ,
ನಿತ್ಯನಿರಂಜನವೆಂಬ ನೀರಾಜನಮಂ ಬೆಳಗಲು,
ಬ್ರಹ್ಮನಾದವೆಂಬ ಘಂಟೆಯಂ ಬಾಜಿಸಲು,
ನಿತ್ಯಲಿಂಗಾರ್ಚನೆಗೆಡೆಮಾಡಲು,
ಇದಱ ವರ್ಮ ಕರ್ಮ ಸ್ಥಿತಿಯನಱಿದು
ಶಿವಲಿಂಗಾರ್ಚನೆಯ ಮಾಡಬಲ್ಲರೆ,
ಮರ್ತ್ಯದಲ್ಲಿ ನಾನಾರನೂ ಕಾಣೆನು.
ಕೂಡಲಸಂಗದೇವಾ,
ಪ್ರಭು ಶಿವಲಿಂಗಾರ್ಚನೆಯ ಮಾಡಲು ನಾನೆ ಪರಿಚಾರಕನು. ॥೫೨॥

ಇದಕ್ಕೆ ಪ್ರಭುದೇವರು ತಮ್ಮ ಕರಸ್ಥಲದ ಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡುತ್ತ ನಿವಾಳಿಯನೆತ್ತುವ ಪ್ರಸ್ತಾವದ ಪದಂಗಳು:

೧೧೫೯

ರಾಗ: ದೇಶಿ

ಮಂಗಳಂ ಮಂಗಳಂ ಗೊಹೇಶ್ವರನಾ
ಶರಣ ಲಿಂಗೈಕ್ಯಂಗೆ ಮಂಗಳಂ ॥ಪಲ್ಲ॥

ಜಗವೆಲ್ಲವನೂರ ಮಾಡಿ ಊರೆಲ್ಲವ ಮನೆಯ ಮಾಡಿ
ಹೊಗದೆಸೆಯಿಲ್ಲದ ಸುಳುಹು ನೋಡಾ
ಸುಳುಹಿನ ಭೇದವನಱಿಯದ ಕಾರಣ
ದೇವಲೋಕ ಮರ್ತ್ಯಲೋಕವೆಲ್ಲಾ ಭ್ರಮೆಗೊಂಡಿತ್ತಲ್ಲಾ ॥೧॥

ಎಂಬತ್ತುನಾಲ್ಕು ಲಕ್ಷಯೋನಿಮುಖಜೀವಿಗಳಿಗೆ
ಎಂಬತ್ತುನಾಲ್ಕುಲಕ್ಷಾರಾಧನೆ

ಒಂದೊಂದರಾರಾಧನೆಯನೊಂದೊಂದಱಿಯದೆ
ಗೊಂದಣಗೊಂಡು ಲಯವಾದುವಲ್ಲಾ ॥೨॥

ಭಕುತಿ ಯುಕುತಿಯನಱಿಯೆ ಷೋಡಶೋಪಚಾರವನಱಿಯೆ
ಭಾವ ಸಂಕಲ್ಪ ವಿಕಲ್ಪವನಱಿಯೆ
ನಾಮಸೀಮೆಗಳೆಲ್ಲವ ನೇಮಿಸಿ ಕಳೆದಂಗೆ
ಆವ ಲೋಕ ಕಲ್ಪಿತವಾದಂಗೆ ॥೩॥

ಕುಲವಳಿದು ಛಲವಳಿದು ಬಲುಹಳಿದು ನಿಲಲು
ಸೂತ್ರದ ಜಂತ್ರವಳಿಯಲು
ಫಲಸಿದ್ಧಿಯೆನಿಸಿ ನಿಷ್ಫಲಸಿದ್ಧಿಯನೆ ಬಿಟ್ಟು
ಭಕ್ತ್ಯಂಗನೆಯ ಮರ್ತ್ಯಕ್ಕೆ ತಂದಂಗೆ ॥೪॥

ಮಧ್ಯಸ್ಥಾನದ ಲೋಕಕ್ಕೆ ಹೋಗಿ ಮಱುವಾಳ
ನಱಿಯದ ಪರಿಯ ನೋಡಿರೆ
ತನುರುಚಿಯನೆ ಮಱೆದು ಘನರುಚಿಯಱಿದೆನ್ನ
ತನ್ನಂತೆ ಮಾಡಿದ ಗೊಹೇಶ್ವರಲಿಂಗಾ. ॥೫॥

ಪದ ಸಹ ವಚನ: ॥೫೭॥

ಆ ಪ್ರಸ್ತಾವದಲ್ಲಿ ಮೋಳಿಗಯ್ಯಗಳ ವಚನ:

೧೧೬೦

ಮುತ್ತೊಡೆದ ಚಿಪ್ಪಿನಲ್ಲಿ ನಿವಾಳಿಗಳ ಮಾಡಿ,
ಹೊನ್ನ ಪರಿಯಾಣಂಗಳ ನಡುವೆ ತಂದು ಮೇಳೈಸಿ,
ಉಟ್ಟ ಪಟ್ಟಾವಳಿಯ ದೇವಾಂಗದ ಸರ್ವಾಂಗಮಯ ಶೃಂಗಾರದಿಂದ
ಕಳಸಕನ್ನಡಿಯ ಕನ್ನಿಕೆಯರ ಜವಳಿಪಂಕ್ತಿ ಶೋಭಿಸುತ್ತಿರಲು,
ಶಿವಭಕ್ತಜನಸತಿಯರು ನಡೆದು ಬಂದು
ಶೂನ್ಯಸಿಂಹಾಸನದ ಮುಂದೆ ನಿಂದಿರ್ದರು–
ನಿಃಕಳಂಕಮಲ್ಲಿಕಾರ್ಜುನ ಪ್ರಭುವಿಂಗೆ ಆರತಿಯನೆತ್ತಿಹೆವೆಂದು. ॥೫೮॥

ಮತ್ತಂ, ನಾಗಲಾಂಬಿಕೆಯಮ್ಮನು ನಿವಾಳಿಯನೆತ್ತುವ ಪ್ರಸ್ತಾವದಲ್ಲಿ ಮೋಳಿಗಯ್ಯಗಳ ವಚನ:

೧೧೬೧

ಕೊಟ್ಟ ದ್ರವ್ಯವನು ತಮ್ಮ ತಮ್ಮ ಲಿಂಗಕ್ಕೆ
ಸಮರ್ಪಣೆಯ ಮಾಡಿಕೊಂಡು,
ತನುಭೋಗಾದಿಭೋಗಂಗಳ ಭೋಗಿಸುತ್ತಿರ್ದರಲ್ಲಾ

ಹೊನ್ನ ಪರಿಯಾಣಂಗಳಲ್ಲಿ!
ಅನಂತಪರಿಯ ಗುಗ್ಗುಳ ಧೂಪ ದಶಾಂಗವೆಸೆಯಲು,
ಭರದಿಂದ ನಡೆತಂದು ಶೂನ್ಯಸಿಂಹಾಸನದ ಮುಂದೆ ನಿಂದಿರ್ದರು.
ಪಂಚಮಹಾವಾದ್ಯ ಮೊಳಗುತ್ತಿರಲು,
ಅವರವರ ಕೈಯ ನಿವಾಳಗಳನೀಸಿಕೊಂಡು
ನಾಗಾಯವ್ವೆಗಳು ನಿಃಕಳಂಕ ಮಲ್ಲಿಕಾರ್ಜುನಪ್ರಭುವಿಂಗೆ
ಆರತಿಯನೆತ್ತುತ್ತಿರ್ದರಲ್ಲಾ! ॥೫೯॥

ಇಂತೀ ಶ್ರೀಮತ್ ಸಕಲಗಣ ಪುರಾತನರೊಳ್ ಪ್ರಭುದೇವರು
ಮಹಾನುಭಾವಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್
ಪ್ರಭುದೇವರು ಶೂನ್ಯಸಿಂಹಾನದ ಮೇಲೆ ಮೂರ್ತಿಗೊಂಡುದು
ಅಷ್ಟಾದಶೋಪದೇಶ ಸಮಾಪ್ತಂ
ಅಂತು ವಚನ ೧೧೬೧ ಕ್ಕಂ ಮಂಗಳಮಹಾ ಶ್ರೀ

❖

೧೯
ಪ್ರಭುದೇವರ ಆರೋಗಣೆ

[1]ಕಂದ:

ಶೂನ್ಯಪೀಠದೊಳು ಮಂಡಿಸಿ
ಚಿನ್ಮಯ ಗುರುಮೂರ್ತಿ ಪ್ರಭುದೇವರನು ಅತಿಶಯವ
ಪ್ಪುನ್ನತದಾರೋಗಣೆಯಂ
ನನ್ನಿಯೊಳರ್ಪಿಸಿದ ಪರಿಯದೆಂತೆನಲುಸುರ್ವೆಂ ॥೧॥

ಅದೆಂತೆಂದೊಡಾ ಪ್ರಭುದೇವರು ಶೂನ್ಯಸಿಂಹಾಸನದ ಮೇಲೆ ಮೂರ್ತಿಗೊಂಡಿರಲು, ಬಸವರಾಜದೇವರು ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಂ ಮಾಡಿಸಿ ಅತ್ಯಂತ ಸಂತೋಷದಿಂದಿರಲು, ಆ ಪಟ್ಟಣದಲ್ಲಿ ಸಕಲ ಶರಣರ ಸತಿಯರೆಲ್ಲರು ನಿವಾಳಿಗಳನೆತ್ತಿ ಕೊಂಡಾಡುತ್ತಿರೆ, ಪಂಚಮಹಾವಾದ್ಯರಭಸದಿಂ ಶರಣರೆಲ್ಲರು 'ಜಯ ಜಯ' ಎಂದು ಹರುಷಾಂಬುಧಿಯೊಳ್ ತೇಂಕಾಡುತ್ತಿರಲಾ ಪ್ರಸ್ತಾವದೊಳು, ಬಸವರಾಜದೇವರು ಪ್ರಭುದೇವರಿಗೆ ಆರೋಗಣೆಯ ಮಾಡಿಸಬೇಕೆಂದು ಪರಿಯಾಣವ ತಂದಿಳುಹಿದ ಪ್ರಸ್ತಾವದ ವಚನ:

೧೧೬೨

ಅಂಗದಲಳವಟ್ಟ ಲಿಂಗಕ್ಕೆ ಅಂಗವೆ ಭಾಜನ.
ಪ್ರಾಣದ ಮೇಲಣ ಲಿಂಗಕ್ಕೆ ಮನವೆ ಭಾಜನ.
ಅಱಿವಿನ ಮೇಲಣ ಲಿಂಗಕ್ಕೆ ನಿರ್ಭಾವವೆ ಭಾಜನ.
ಕೂಡಲಸಂಗಮದೇವಯ್ಯಾ,
ಪ್ರಭುದೇವರು ಆರೋಗಣೆಯ ಮಾಡುವರೆ
ಭಕ್ತಿಪರಿಯಾಣವಲ್ಲದೆ ಬೇಱೆ ಭಾಜನವ ಕಾಣೆನು. ॥೧॥

[2]ಮತ್ತಂ,[2] ಪರಿಯಾಣದಲ್ಲಿ ಸಕಲಪದಾರ್ಥಂಗಳ ನೀಡುವ ಪ್ರಸ್ತಾವದಲ್ಲಿ ಪ್ರಭುದೇವರ ವಚನ:

---

೧ + ಶ್ರೀಗುರು ಬಸವಲಿಂಗಾಯ ನಮಃ (ಮೂ) ೨–೨ x (ಮೂ)

೧೧೬೩

ಘನವಪ್ಪ ಪರಿಯಾಣದಲ್ಲಿ ಒಂದನುವಿನ ಬೋನವನಳವಡಿಸಿ,
ಪರಿಪರಿಯ ಪದಾರ್ಥಂಗಳು ಬಗೆಬಗೆಯಿಂದ ಬರಲು,
ನೋಡದ ಮುನ್ನವೆ ರೂಪರ್ಪಿತವಾಯಿತ್ತು;
ಮುಟ್ಟದ ಮುನ್ನವೆ ಸೋಂಕರ್ಪಿತವಾಯಿತ್ತು;
ರುಚಿಸದ ಮುನ್ನವೆ ಸುಖವರ್ಪಿತವಾಯಿತ್ತು.
ಅವಧಾರು, ಅವಧಾರು, ಲಿಂಗ,
ನಿಮ್ಮ ಮನಕ್ಕೆ ಬಂದ ಪದಾರ್ಥವ ನಿನ್ನ ಘನಕ್ಕೆ ನೀನರ್ಪಿಸಿದರೆ,
ಎನ್ನ ಮನಕ್ಕೆ ಬಂದ ಪದಾರ್ಥವ ನಿನಗರ್ಪಿಸುವೆನು,
ಗೊಹೇಶ್ವರಾ, ನಿನಗೆ ಭರಿತಬೋನವನಳವಡಿಸಿ ನೀಡಬಲ್ಲವನಾಗಿ,
ಎನಗೂ ನಿನಗೂ ಸಂಗನಬಸವಣ್ಣನ ಪ್ರಸಾದವ ಆರೋಗಿಸು ದೇವಾ. ॥೨॥

ಮತ್ತಂ, ಪ್ರಭುದೇವರಾರೋಗಣೆ:

೧೧೬೪

ಕಾಯದಲಾದ ಅರ್ಪಿತ ಅರ್ಪಿತವಲ್ಲ.
ಪ್ರಾಣದಲಾದ ಅರ್ಪಿತ ಅರ್ಪಿತವಲ್ಲ.
ಭಾವದಲಾದ ಅರ್ಪಿತ ಅರ್ಪಿತವಲ್ಲ.
ಅಱಿವಿನಲಾದ ಅರ್ಪಿತ ಅರ್ಪಿತವಲ್ಲ.
ನೆನಹಿಲ್ಲದ ಅವಧಾನ, ಮಱಹಿಲ್ಲದಾರೋಗಣೆ,
ತಟ್ಟದ ಮುಟ್ಟದ ಅರ್ಪಿತ.
ಗೊಹೇಶ್ವರಲಿಂಗದ ಆರೋಗಣೆಯನಿಂದು
ಸಂಗನಬಸವಣ್ಣನಿಂದ ಕಂಡೆನು. ॥೩॥

ಆ ಪ್ರಸ್ತಾವದೊಳು ಬಸವರಾಜದೇವರ ವಚನ:

೧೧೬೫

ಕೈಹಾರ ನೀಡಿದರೆ ಮನಹಾರ ಕೊಳುತ್ತೈದಾನೆ.
ಅಹುದಹುದು, ಸ್ವಾಮಿಯ ಹಸಿವು ಲೋಕಕ್ಕೆ ಹೊಸತು.
ಕೂಡಲಸಂಗಮದೇವ ನೆಱೆ ಹಸಿದ.
ಮೊಱಮೊಱದಲ್ಲಿ ನೀಡಿ. ॥೪॥

ಮತ್ತಂ,

೧೧೬೬

ಮೊಱಹಾರ ನೀಡಿದರೆ ತೆಱಹಾರ ಕೊಳುತ್ತೈದಾನೆ.
ಅಹುದಹುದು, ಮತ್ತೇನು?
ದೇವರ ಹಸಿವು ನಮಗೆ ಹೊಸತಲಾ!

ದೆಸೆದಿಕ್ಕೆಲ್ಲಾ ವಿಶ್ವತೋಮುಖದ
ಕೂಡಲಸಂಗಮದೇವಂಗೆ ದೆಸೆದೆಸೆಯಲ್ಲಿ ನೀಡಿ. ॥೫॥

ಇದಕ್ಕೆ ಚಿಕ್ಕದಣ್ಣಾಯಕರ ವಚನ:

೧೧೬೭

ಅನಾಹತದಲ್ಲಿ ಶಿವ ತನ್ನ ಲೀಲಾವಿನೋದದಿಂದ
ನೀವು ಸಹಿತ ಮೂರ್ತಿಯಾದನು.
ಹೊಱಗೆ ಆಕಾರವ ಧರಿಸಿ,
ಒಳಗೆ ನಿರವಯಕ್ಕೆ ಆರೋಗಣೆಯ ಮಾಡಿಸಲು,
ಕೂಡಲಸಚೆನ್ನಸಂಗಮದೇವಾ,
ಪ್ರಭುದೇವರ ಅಪರಿಮಿತದಾರೋಗಣೆಗೆ
ಬಸವಣ್ಣ ಮಡಿವಾಳನೆಂಬೆರಡು ತೋಳ
ಧರಿಸಿದನು. ಏನೆಂದುಪಮಿಸುವೆನು! ॥೬॥

ಇದಕ್ಕೆ ಮಡಿವಾಳಯ್ಯಗಳ ವಚನ:

೧೧೬೮

ತನುಮುಖಕ್ಕೆ ನೀಡಿದ ಬೋನ
ಅನುವಾಗಿ ಅಳವಡದ ಮುನ್ನ
ಮನ ಮುಖಕ್ಕೆ ಸರಿಯಾಯಿತ್ತು.
ಮನ ಮುಖಕ್ಕೆ ನೀಡಿನ ಬೋನ
ಅನುವಾಗಿ ಅಳವಡದ ಮುನ್ನ
ನೋಡನೋಡಲೈಕ್ಯವಾಯಿತ್ತು.
ಆಕಾಶ ಬಾಯ್ದೆಗೆದಂತೆ ಆರೋಗಣೆಯ ಮಾಡುತ್ತಿದ್ದನು
ಮಾಡಿಸುವ ಗರುವರಾರೋ?
ಕಲಿದೇವರದೇವನ ಅನುವಱಿದು ನೀಡುವರೆ,
ಸಂಗನಬಸವಣ್ಣಂಗಲ್ಲದೆ ಮತ್ತಾರಿಗೂ ಅಳವಡದು. ॥೭॥

ಹಡಪದಪ್ಪಣ್ಣಗಳ ವಚನ:

೧೧೬೯

ಹೆಡಗೆಹಾರ ಮೊಱಹಾರ ಗೆರಸಿಹಾರ ಮಡಕೆಹಾರ
ದೆಸೆದೆಸೆಯಲ್ಲಿ ತಂದು ನೀಡುತ್ತಿರಲು,
ಹೊಸ ಪರಿಯಲಾರೋಗಣೆಯನವಧರಿಸುತ್ತಿರ್ದನು.
ಆವ ದೆಸೆಯಲ್ಲಿ ತಂದು ನೀಡುತ್ತಿದ್ದರೆ,
ಆ ದೆಸೆದೆಸೆಗಳೆಲ್ಲಾ ಬಾಯಾಗಿ ಕೊಳ್ಳುತ್ತಿರ್ದನು.
ಎತ್ತೆತ್ತ ನೊಡಿದಡತ್ತತ್ತ ಮುಖವಗೆಯ ಹೊಯ್ದಂತೆ ತೆಱಹಿಲ್ಲ.

ಒಂದು ನಿಮಿಷ ಎಡಹಿದರೆ ಅಕ್ಕಿಗಚ್ಚು ನುಚ್ಚುತೌಡು
ಮೊದಲಾಗಿ ಹೆಚ್ಚಿದವು ನಿಮಿಷದೊಳು.
ಭಕ್ತಿಬಂಧುಗಳೆಲ್ಲಾ ತಮ್ಮ ತಮ್ಮ ಮಠದ
ಸಯದಾನವ ತಂದು ಸಾರೆಗಟ್ಟಿ ನೀಡುತ್ತಿದ್ದರೆ,
ಅದ್ಭುತದಾರೋಗಣೆಯ ಕಂಡು,
ಹರಿಹರಿದು ಪಾಕ ಪ್ರಯತ್ನಮಮಂ ಮಾಡಿ ಎನುತ್ತೆ,
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ
ಸಂತೋಷದಲ್ಲೋಲಾಡುತ್ತಿರ್ದನು
ಎನ್ನ ಪರಮಗುರು ಬಸವಣ್ಣನು, ॥೮॥

ಬಸವರಾಜದೇವರ ವಚನ:

೧೧೭೦

ಅರಿದರಿದು! ಎನಗಿಂದು ಕಂಗೆ ಮಂಗಲವಾಯಿತ್ತು.
ಒಂದಹುದು, ಒಂದಾಗದೆಂಬ ಭ್ರಮೆಯವನಲ್ಲ.
ಬೇಕು ಬೇಡೆಂಬ ಜಂಜಡದವನಲ್ಲ.
ಎಡೆವಱೆಯದ ನೋಟ,
ನುಡಿಯ ಸಡಗರವಱಿತು
ಎಡೆಯಾಟ ಕೋಟಲೆಯ ಕಳೆಯ ಬಂದನು.
ನೋಡುವರ ಮನದ ಸುಖದ ಸಾಗರ
ನಿಧಿಯನೇನೆಂದುಪಮಿಸುವೆನು?
ಎನ್ನ ಉಭಯ ಕರ್ಮವ ಕಳೆದು,
ತನ್ನೊಳಗೆ ಇಂಬಿಟ್ಟುಕೊಳಬಂದನು
ಕೂಡಲಸಂಗಮದೇವ ಕೃಪಾಮೂರ್ತಿ! ॥೯॥

ಮತ್ತಂ,

೧೧೭೧

ಬೆದಱಿಸುವ ಸಂಗ, ಬೆಚ್ಚಿಸುವ ಸಂಗ, ಬಿಚ್ಚಿ ಬಿಸುಡುವ ಸಂಗ.
ತನ್ನ ನಚ್ಚಿ ಮಚ್ಚಿ ಮುಯ್ಯಾಂತೆನೆಂದರೆ ಮೇಳವಾಡುವ ಸಂಗ.
ಬೋಳೈಸುವ ಸಂಗ, ಆಳಿಗೊಳಿಸುವ ಸಂಗ,
ಇದಿರ ಕೈಯಲ್ಲಿ ಅಳಲಿಸುವ ಸಂಗ, ಬಳಲಿಸುವ ಸಂಗ.
ಒತ್ತಿ ನೋಡುವ ಸಂಗ ಒಳಹೊಱಗೆನ್ನದೆ.
ಕೂಡಲಸಂಗಮದೇವಯ್ಯಾ,
ಮಡಿವಾಳ ಮಾಚಿತಂದೆಯ ಕೃಪೆಯುಳ್ಳನ್ನಕ್ಕರ ನಾನಂಜೆನು. ॥೧೦॥

ಇದಕ್ಕೆ ಮಡಿವಾಳಯ್ಯಗಳ ಪ್ರತ್ಯುತ್ತರ:

೧೧೭೨

ಮಾಚಿತಂದೆಯ ಕೈಲಾಗದು, [೧]ಹೋಚಿತಂದೆಯ ಕೈಲಾಗದು.[೧]
ಇಚ್ಛೆಗೆಟ್ಟಂತೆ ಇರಲಾಗದು, ಅಚ್ಚೊತ್ತಿದಂತೆ ಇರಬೇಕು.
ಅತಿಚೋದ್ಯವಾಗಿ ಎಚ್ಚಱಿಕೆಯ ಮಚ್ಚುಮಱಹಿಲ್ಲದೆ ಬೆಚ್ಚಂತಿರಬೇಕು.
ಮಚ್ಚು ಪಲ್ಲಟವಾಗದೆ ಆಶ್ಚರ್ಯ ಭಕ್ತಿ ಭರಿತನಾಗಿರಬೇಕು.
ಕಲಿಕರುಳನೊತ್ತಿ ಮುಂದಕ್ಕೆ ಹರಿವನಲ್ಲದೆ,
ಎಡೆಗೋಲಿನಾಸೆ ಮಾಡುವನೆ ಹೇಳಾ?
ಕಲಿದೇವರದೇವನ ಅಂಕೆಗೆ ಝುಂಕೆಗೆ ಬೆಚ್ಚಿ ಬೆದಱಿ ಓಡದಿರು.
ವೀರಗಂಕಣವ ಕಟ್ಟು ಸಂಗನಬಸವಣ್ಣಾ. ॥೧೧॥

ಇದಕ್ಕೆ ಬಸವರಾಜದೇವ ಪ್ರತ್ಯುತ್ತರ:

೧೧೭೩

ಸಯಧಾನ ಸವೆಯಿತ್ತೆಂದು ಬೆದಱಿದೆನಾದರೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ,
ಪಡಿಪದಾರ್ಥಂಗಳು ಅವಸರಕ್ಕೆ ಒದಗದೆ ಇದ್ದಲ್ಲಿ,
ಮನವಳುಕಿ ಬೆದಱಿದೆನಾದರೆ ನಿಮ್ಮ ಭಕ್ತರಿಗೆ ಸಲ್ಲೆನು.
ಒಡವೆ ಸವದರೆ ಒಡಲನೆ ಸಲಿಸುವೆನು.
ಕಡೆಮುಟ್ಟ ಪೂರೈಸದಿದ್ದೆನಾದರೆ,
ಮಡಿವಾಳಮಾಚಿತಂದೆಯ ಪಾದಸಾಕ್ಷಿಯಾಗಿ
ಕೂಡಲಸಂಗಮದೇವರಿಗೆ ದೂರವಹೆನು. ॥೧೨॥

ಮತ್ತಂ,

೧೧೭೪

ಅಳವಡಿಸಿದ ಪದಾರ್ಥ ಅರ್ಪಿತಕ್ಕೆ ಸರಿಯಾಯಿತ್ತು.
ಅಳವಡಿಸದ ಮುನ್ನವೆ ಕೈಕೊಳುತ್ತೈದಾನೆ ಶಿವನು.
ಸಂದ ಪದಾರ್ಥ ಸಲ್ಲಲಿ.
ಕೂಡಲಸಂಗಮದೇವರ ಆರೋಗಣೆಯ ಅವಸರಕ್ಕೆ
ಸಂಚಿತ ಸಯದಾನವ ತೆಗೆಸಿರೆ ಸೊಡ್ಡಳ ಬಾಚರಸರೆ. ॥೧೩॥

ಇದಕ್ಕೆ ಸೊಡ್ಡಳಬಾಚರಸರ ವಚನ:

೧೧೭೫

ಬನ್ನಿ ಕರಣಿಕರು ನೀವು ಲೆಕ್ಕವ ಹೇಳಿ,
ಧಾನ್ಯ ಧಾನ್ಯ ಸಂಚವನು.

೧-೧ x (ಮೂ)

ಹೊಸ ಜೋಳ ಅಱುವತ್ತು ಲಕ್ಷ ಖಂಡುಗ.
ಸಾಲಿಧಾನ್ಯ ಮೂವತ್ತುಲಕ್ಷ ಖಂಡುಗ.
ಗೋದಿ ಹನ್ನೆರಡುಲಕ್ಷ ಖಂಡುಗ.
ಕಡಲೆ ಬತ್ತೀಸಲಕ್ಷ ಖಂಡುಗ.
ಹೆಸಱು ಮೂವತ್ತು ಲಕ್ಷ ಖಂಡುಗ.
ನವಣೆ ಹಾರಕ ಬರಗು ಸಾವೆ ಮಾಷಗಳೆಂಬ
ಧಾನ್ಯಂಗಳು ಐವತ್ತುಲಕ್ಷ ಖಂಡುಗ.
ಹೊಸ ಸುಗ್ಗಿ ಈ ವೇಳೆಗೆ ಬಹ ಬತ್ತ ಅಗಣಿತ.
ಮಹಾದಾನಿ ಸೊಡ್ಡಳನ ಆರೋಗಣೆಯ
ಅವಸಕ್ಕೆ ಅಳವಟ್ಟ ಸಯದಾನವಿನಿತವಧರಿಸಯ್ಯಾ
ಸಂಗನಬಸವಣ್ಣಾ. ॥೧೪॥

ಬಸವರಾಜದೇವರ ವಚನ:

೧೧೭೬

ಎಣಿಕೆಗೆ ಬಂದ ಸಯದಾನ ಕ್ಷಣಕ್ಕೆ ಪಾಕವಾಗಲು,
ಗಣನೆಯಿಲ್ಲದೆ ನೀಡುತ್ತಿರಲು,
ತೋಱದ ಮುನ್ನವೆ ಅರ್ಪಿತವಾದವು.
ಇಂತು ಎಣಿಸಿ ನೋಡಿಹೆನೆಂದರೆ ಮನಕ್ಕೆ ಸಾಧ್ಯವಲ್ಲ.
ಬಯಲು ಬಾಯ್ದೆಗೆದಂತೆ ಉಣುತ್ತಿದ್ದಾನು
ಕೂಡಲಸಂಗಮದೇವನು. ॥೧೫॥

ಮತ್ತಂ,

೧೧೭೭

ಖಂಡ ಮಂಡಗೆ ಬೆಲ್ಲ ದ್ರಾಕ್ಷೆ ಸಕ್ಕರೆ ಸರಿಭಾಗವಾದ
ಹೊಸ ಹೆಸಱ ಭಕ್ಷ ಪನ್ನಿರ್ಖಂಡುಗ.
ಸುಲಿಗಡಲೆಯ ಕಜ್ಜಾಯ ಹದಿನೆಂಟು ಖಂಡುಗ.
ಅಕಾಲ ಮಾವಿನ ಹಣ್ಣು ಇಪ್ಪತ್ತುನಾಲ್ಕು ಲಕ್ಷ
ಕಡೆಯಿಲ್ಲದ ಕದಳಿಯ ಫಲ.
ಚಾರಬೀಜ ಎಂಬತ್ತು ಖಂಡುಗ.
ತವರಾಜ ಹೆತ್ತ ತುಪ್ಪ ಹಲಸಿನ ಹಣ್ಣು ಮನ ಮೇರೆ.
ಹಾಲ ಕೆನೆ ಹದಿನೆಂಟು ಖಂಡುಗ.
ಉತ್ತುತ್ತೆ ಚಿಲುಪಾಲು ಘಟ್ಟಿಗೆ ಕಟ್ಟಣೆಯಿಲ್ಲ
ಮನ ಒಲಿದ ಕಜ್ಜಾಯವನಾರೋಗಣೆಯ
ಮಾಡು ದೇವಾ ಕೂಡಲಸಂಗಮದೇವಾ. ॥೧೬॥

ಮತ್ತಂ,

೧೧೭೮

ಕೈಯ್ಯಲ್ಲಿ ಮುಟ್ಟಿದ ಪದಾರ್ಥ ಕೈಯ್ಯೊಳಗೆ ಐಕ್ಯ.
ಕಂಗಳು ತಾಗಿದ ಪದಾರ್ಥ ಕಂಗಳೊಳೈಕ್ಯ.
ನಾಲಗೆ ತಾಗಿದ ಪದಾರ್ಥ ನಾಲಗೆಯೊಳಗೈಕ್ಯ.
ನೀಡುತ ಪರಿಚಾರಕರು ಬೇಸತ್ತರಲ್ಲದೆ,
ಆರೋಗಣೆಯ ಮಾಡುವ ದೇವನೆತ್ತಲೆಂದಱಿಯೆನು.
ಬ್ರಹ್ಮಾಂಡವನೊಡಲೊಳಗಡಗಿಸಿಕೊಂಡು ಬಂದ ದೇವಂಗೆ
ಆರೋಗಣೆಯ ಮಾಡಿಸಿಹೆನೆಂಬ ಅಹಂಕಾರದಲ್ಲಿ ಇದ್ದೆನಾಗಿ,
ನಾನು ಕೆಟ್ಟ ಕೇಡನೇನೆಂಬೆನಯ್ಯಾ?
ಕೂಡಲಸಂಗಮದೇವರ ತೃಪ್ತಿಯ ತೆಱನ ಬಲ್ಲರೆ
ಹೇಳಾ ಮಡಿವಾಳಮಾಚಯ್ಯಾ. ॥೧೭॥

ಇದಕ್ಕೆ ಮಡಿವಾಳತಂದೆಗಳ ವಚನ:

೧೧೭೯

ಮರುಳುಗೊಂಡೆಯಲ್ಲಾ ಬಸವಣ್ಣ!
ಪಿತ್ತ ತಲೆಗೇಱಿತ್ತೆ ನಿನಗೆ?
ನೆಱೆಯಱಿದವರು ಮರುಳಹರೆಂಬ ನಾಣ್ನುಡಿ ದಿಟವಾಯಿತ್ತು.
ಜಗದಗಲಕ್ಕೆ ಮಿಗೆಯಗಲದ ದೇವಂಗೆ
ಕುಱುಹಿನ ಪದಾರ್ಥಂಗಳು ನಿಲುಕಲಾಪವೆ?
ಎಡೆಯಲೊಬ್ಬರಲಾಗದು ಮಾಡುವರೆ;
ಕಡೆಯಲ್ಲಿ ಕೆಡುವುದು ನಿನ್ನ ಭಕ್ತಿ.
ಕಲಿದೇವರದೇವನ ತೃಪ್ತಿಯನು ಚೆನ್ನಬಸವಣ್ಣ ಬಲ್ಲ.
ಕೇಳಿ ನೋಡಾ ಸಂಗನಬಸವಣ್ಣಾ. ॥೧೮॥

ಇದಕ್ಕೆ ಬಸವರಾಜದೇವರ ವಚನ:

೧೧೮೦

ಧನಮದದಿಂದ, ಸಯದಾನ ಮದದಿಂದ
ಮಾಡಿದೆನೆಂಬುದು ಕಡೆ ಮುಟ್ಟದೆ ಹೋಯಿತ್ತು.
ಹಸ್ತಪರುಷದಿಂದ ಮುಟ್ಟಿ ಮಾಡಿದುದೆಲ್ಲವೂ ಅಂತರಿಸಿತ್ತು.
ದೃಷ್ಟಿಪರುಷದಿಂದ ನೋಡಿ ಮಾಡಿದೆನೆಂಬುದೆಲ್ಲವೂ ಹೆಚ್ಚಿತ್ತು.
ವಾಕ್‌ಪರುಷದಿಂದ ನುಡಿದು ಮಾಡಿದುದೆಲ್ಲವೂ ಸವೆಯಿತ್ತು.
ಮನಪರುಷದಿಂದ ನೆನೆದು ಮಾಡಿದುದೆಲ್ಲವೂ ನಿಂದಿತ್ತು.
ಭಾವಪರುಷದಿಂದ ಭಾವಿಸಿದ ಪದಾರ್ಥವೆಲ್ಲವೂ

ನಿರ್ಭಾವದತ್ತ ವೇಧಿಸದಾಯಿತ್ತು.
ಇಂತೀ ಪಂಚಪರುಷದಿಂದ ಮುಟ್ಟಿ ನೀಡಿದ ಪದಾರ್ಥ
ತೋಱದ ಮುನ್ನ ಅಮಳೋಕ್ಯವಾದವು.
ಕೂಡಲಸಂಗಮದೇವರ ತೃಪ್ತಿಯನಱದಿಹೆನೆಂದು ಕೆಟ್ಟೆನು. ॥೧೯॥

ಮತ್ತಂ,

೧೧೮೧

ತೋಱಲಿಲ್ಲದ ಸಿಂಹಾಸನದ ಮೇಲೆ
ಹೇಳಬಾರದ ಘನವು ಬಂದೆಱಗಿದರೆ,
ತೋಱ ಮೆಱವ ಸಂಗಮನಾಥನು ಎದ್ದು ಹೋದನು.
ನೀಡ ನೀಡ ಸಯದಾನವೆಲ್ಲವೂ ನಿರ್ವಯಲಾಯಿತ್ತು.
ಮಾಡ ಮಾಡ ಸಯದಾನವ ಮರಳಿ ನೋಡಲಿಲ್ಲ.
ಇದೇನು ಹೇಳುವೆ ಅನಿಯಮ ಚರಿತ್ರವನು!
ಇದೆಂತುಪಮಿಸುವೆನು ವಿಸ್ಮಯವನು?
ಕೂಡಲಸಂಗಮದೇವರ ತೃಪ್ತಿಯ ತೆಱನ
ಹೇಳಯ್ಯಾ ಚೆನ್ನಬಸವಣ್ಣಾ. ॥೨೦॥

ಇಂತು ಬಸವರಾಜದೇವರು ಪ್ರಭುದೇವರಿಗೆ ತೃಪ್ತಿಯ ಮಾಡುವ ಬುದ್ಧಿ ಯಾವುದೆಂದು ಕೇಳಲು, ಅದಕ್ಕೆ ಚಿಕ್ಕದಣ್ಣಾಯಕರ ಪ್ರತ್ಯುತ್ತರ:

೧೧೮೨

ಅನಂತ ವರುಷದವರ ಹಿರಿಯರೆಂದೆಂಬೆನೆ?
ಎನ್ನೆನು, ಅವರು ಭೂಭಾರಕರಾಗಿ.
ಏಳು ವರುಷದ ಹಿರಿಯ ಚೇಲಾಳ.
ಹನ್ನೆರಡು ವರುಷದ ಹಿರಿಯಳು ಮಹಾದೇವಿಯಕ್ಕ.
ಅಂಡಜ ಪಿಂಡಜ ಮೀನಜರೆಂಬವರೆಲ್ಲಾ ಅಂದಂದಿನ ಬಾಲಕರು.
ನಿಮಗೆ ಬುದ್ಧಿಯ ಹೇಳುವರೆ ಎನಗೆ ಬುದ್ಧಿಯಿಲ್ಲ
ಕೂಡಲಚೆನ್ನಸಂಗಮದೇವಾ. ॥೨೧॥

ಮತ್ತಂ,

೧೧೮೩

ಪಂಚಶತಕೋಟಿ ವಿಸ್ತೀರ್ಣಭೂಮಂಡಲ ಮೊದಲಾದ
ನವಖಂಡ ಪೃಥ್ವಿಯೆಲ್ಲವು ಒಂದು ಭುವನದೊಳಡಗಿತ್ತು.
ಅಂತಹ ಈರೇಳು ಭುವನವನೊಳಕೊಂಡ ಮಹಾಘನಕ್ಕೆ
ಸಯದಾನವ ನೀಡಿಹೆನೆಂಬ ಸ್ವಾಮಿಯ ಮರುಳತನವನೇನೆಂಬೆನು?
ಕೂಡಲಚೆನ್ನಸಂಗಮದೇವರ ತೃಪ್ತಿಯ ತೆಱನನೊಲಿವರೆ,

ನೀವು ಬೋನ, ನಾನು ಪದಾರ್ಥ.
ಇದಱಿಂದು ಮೇಲೇನೂ ಘನವಿಲ್ಲ ಕಾಣಾ ಸಂಗನಬಸವಣ್ಣಾ.॥೨೨॥

ಇದಕ್ಕೆ ಬಸವರಾಜದೇವರ ವಚನ:

೧೧೮೪

ಎನ್ನ ಕಾಯದ ಕತ್ತಲೆ ಹಿಂಗಿತ್ತು ಚೆನ್ನಬಸವಣ್ಣಾ.
ಇಂದಿನಲ್ಲಿ ಎನ್ನ ತನು ಮನ ಧನದ ಲೋಭವಳಿದು
ತಳವೆಳಗಾಯಿತ್ತು ಚೆನ್ನಬಸವಣ್ಣಾ.
ಇಂದಿನಲ್ಲಿ ಎನ್ನೆಡೆಗೊಂಡ ಅಹಂಕಾರ
ನಿರ್ವಯಲಾಯಿತ್ತು ಚೆನ್ನಬಸವಣ್ಣಾ.
ಇಂದಿನಲ್ಲಿ ಕೂಡಲಸಂಗಮದೇವರ ತೆಱನ ನೀನು ತೋಱಿದೆಯಾಗಿ
ನಾನು ಬದುಕಿದೆನು ಕಾಣಾ ಚೆನ್ನಬಸವಣ್ಣಾ! ॥೨೩॥

ಇದಕ್ಕೆ ಚೆನ್ನಬಸವರಾಜದೇವರ ವಚನ:

೧೧೮೫

ಎನ್ನ ಹೊಗಳಲಿಕೆ ನಿಮಗೆ ತೆಱಹಿಲ್ಲ.
ನಿಮ್ಮ ಹೊಗಳಲಿಕೆ ಎನಗೆ ತೆಱಹಿಲ್ಲ.
ಒಬ್ಬರನೊಬ್ಬರ ಹೊಗಳಲಿಕೆ ಹೊತ್ತು ಹೋಯಿತ್ತಲ್ಲದೆ,
ಸಂಗಮನಾಥನ ಆಪ್ಯಾಯನಕ್ಕೆ ಪದಾರ್ಥವ ನೀಡಲಿಲ್ಲ.
ಕೂಡಲಚೆನ್ನಸಂಗಯ್ಯಂಗೆ
ಪದಾರ್ಥವನಳವಡಿಸಿ ನಡೆಯಿಸಿರೆ ಸಂಗನಬಸವಣ್ಣಾ. ॥೨೪॥

ಇದಕ್ಕೆ ಬಸವರಾಜದೇವರ ವಚನ:

೧೧೮೬

ಧನ ಸವೆದರೆ ತನುವನರ್ಪಿಸುವೆನು.
ತನು ಸವೆದರೆ ಮನವನರ್ಪಿಸುವೆನು.
ಮನ ಸವೆದರೆ ಭಾವವನರ್ಪಿಸುವೆನು.
ಭಾವ ಸವೆದರೆ ನಿರ್ಭಾವವನರ್ಪಿಸುವೆನು.
ಕೂಡಲಸಂಗಮದೇವಯ್ಯಾ,
ಚೆನ್ನಬಸವಣ್ಣ ತೆತ್ತಿಗನಾದ ಬಳಿಕ
ನಾನು ನಿಮ್ಮಲ್ಲಿ ಕೂಡಿ ಅರ್ಪಿಸಿ ಶುದ್ಧನಪ್ಪೆನಯ್ಯಾ. ॥೨೫॥

ಮತ್ತಂ,

೧೧೮೭

ಆದಿಯ ಲಿಂಗವ ತಂದಾತನಲ್ಲಯ್ಯನು,
ಅನಾದಿಯ ಲಿಂಗವ ತಂದಾತನಲ್ಲಯ್ಯನು.

ಭಾಪುರೆ ಜಂಗಮವೆ! ನಿರವಯಲನವಗ್ರಹಿಸಿದಿರಿ.
ನಿಮಗೋಸುಕ ಮಾಡುವ ಸಯಧಾನವನು
ನಡೆಗೆಟ್ಟು ಮಾಡುವೆನು; ನುಡಿಗೆಟ್ಟು ಮಾಡುವೆನು.
ಸರ್ವ ಕುಳಕ್ಕೆ ನೀನೆಂದು ಅಲ್ಲಯ್ಯನ ಪ್ರಸಾದಕ್ಕೆ ಕೈಯಾನುವೆನು.
ನವಬ್ರಹ್ಮರ ಕೇರಿಯೊಳಗೆ ಅಲ್ಲಯ್ಯನ ಪ್ರಭೆ!
ರುದ್ರಭೂಮಿಯೊಳಗೆ ಅಲ್ಲಯ್ಯನ ಪ್ರಭೆ!
ಬಂದು ನಿಂದ ನಿಲವಿಂಗೆ ಅಲ್ಲಯ್ಯನ ಪ್ರಭೆ!
ಸಯಧಾನವಿಲ್ಲದಿರೆ ಎನ್ನ ನೀಡುವೆನು ಕೂಡಲಸಂಗಮದೇವಯ್ಯಾ! ॥೨೬॥

[೧]ಮತ್ತಂ[೧],

೧೧೮೮

ದೇವದೇವ, ಮಹಾಪ್ರಸಾದ ಅವಧರಿಸಯ್ಯಾ ಎನ್ನ ಬಿನ್ನಪವ.
ಅತಳ ವಿತಳ ಸುತಳ ತಳಾತಳ ರಸಾತಳ ಮಹಾತಳ
ಪಾತಾಳಾದಿ ಲೋಕದಿಂದತ್ತತ್ತ ನಿಮ್ಮ ಶ್ರೀಚರಣ,
ಭೂಲೋಕ ಭುವರ್ಲೋಕ ಸ್ವರ್ಲೋಕ ಮಹರ್ಲೋಕ
ಜನೋಲೋಕ ತಪೋಲೋಕ ಸತ್ಯಲೋಕದಿಂದತ್ತತ್ತ ನಿಮ್ಮುತ್ತಮಾಂಗ.
ತರುವಿನೊಳಗೆ ಅನಲ ಭರಿತವಾಗಿರ್ದು
ಮಥನದಿಂದ ತೋಱಿ ಆಹುತಿಗೊಂಬಂತೆ,
ಸರ್ವಕರ್ತ ನಿತ್ಯಾನಂದಮಯನೆ, ಭಕ್ತಿಲೀಲಾವಿನೋದನೆ,
ಕೂಡಲಸಂಗಮದೇವಾ,
ಸುಚಿತ್ತದಲ್ಲಿ ಮನಮೀಸಲ ಬೋನವನಾರೋಗಿಸಯ್ಯಾ. ॥೨೭॥

[೨]ಮತ್ತಂ,[೨]

೧೧೮೯

ಕಾಲ ಮುಟ್ಟಲಮ್ಮದ ಸಯದಾನ.
ಕಲ್ಪಿತವಿಲ್ಲದ ಸಯದಾನ.
ಅನಂತರತಿಯೆಂಬ ಹೆಂಗೂಸು ಮುಟ್ಟದ ಸಯದಾನ.
ಭಾಳಲೋಚನನೆಂಬ ಜಂಗಮ ಮುಟ್ಟದ ಸಯದಾನ!
ಎಲ್ಲಿಯೂ ಮುಟ್ಟದ ಸಯಧಾನವ ನಿಮಗರ್ಪಿಸಿದೆನು.
ಆರೋಗಿಸಯ್ಯ ಪ್ರಭುವೆ ಕೂಡಲಸಂಗಮದೇವಾ. ॥೨೮॥

ಇದಕ್ಕೆ ಚಿಕ್ಕದಣ್ಣಾಯಕರ ವಚನ:

೧-೧ x (ಮು) ೨-೨ ಮಲವ (ಮು)

೧೧೯೦

ಅಂಗ ಲಿಂಗಕ್ಕೆ ಭಾಜನವೆಂಬರು,
ಅಂಗ ಲಿಂಗಕ್ಕೆ ಭಾಜನವಲ್ಲ.
ಕಾಯ ಗುಣಂಗಳ ಕಳೆದುಳಿದು, ಮಾಯಾಮದವ ಹಿಂಗಿಸಿ,
ಮನವೆಂಬ ಘನ ಪರಿಯಾಣವ ಬೆಳಗಿ,
ಷಡಾಧಾರಚಕ್ರವೆಂಬ ಅಡ್ಡಣಿಗೆಯನಿಟ್ಟು,
ಸಕಲ ಇಂದ್ರಿಯಂಗಳೆಂಬ ಕೆಲವಟ್ಟಲನಳವಡಿಸಿ,
ಜ್ಞಾನಪ್ರಕಾಶವೆಂಬ ದೀಪಸ್ತಂಭಮಂ ಬೆಳಗಿ,
ಸಕಲ ಕರಣಂಗಳೆಂಬ ಮೇಲಸಾಧನಂಗಳಂ ಹಿಡಿದು,
ಸದ್‌ಭಕ್ತ್ಯಾನಂದವೆಂಬ ಬೋನಮಂ ಬಡಿಸಿ,
ವಿನಯವಿವೇಕವೆಂಬ ಅಭಿಗಾರಮಂ ಗಡಣಿಸಿ,
ಪ್ರಸನ್ನ ಪರಿಣಾಮದ ಮಹಾರುಚಿಯೆಂಬ
ಚಿಲುಪಾಲ ಘಟ್ಟಿಯಂ ತಂದಿಳುಹಿ,
ಸುಚಿತ್ತಸುಯಿದಾನದಿಂದ ನಿಮ್ಮ ಹಸ್ತದ ಅವಧಾನವೆ ಅನುವಾಗಿ,
ಬಸವಣ್ಣನೆ ಬೋನ, ನಾನೇ ಪದಾರ್ಥವಾಗಿ
ನಿಮ್ಮ ಪರಿಯಾಣಕ್ಕೆ ನಿವೇದಿಸಿದೆನು.
ಆರೋಗಣೆಯ ಮಾಡಯ್ಯಾ ಕೂಡಲಚೆನ್ನಸಂಗಮದೇವಾ. ||೨೯||

ಮತ್ತಂ,

೧೧೯೧

ಕಾಯವೆಂಬ ಘಟಕ್ಕೆ ಕರಣಾದಿಗಳೆ ಸಯದಾನ.
ಅದಕ್ಕೆ ಚೈತನ್ಯವೆ ಜಲವಾಗಿ,
ಸಮತೆಯೆಂಬ ಮುಚ್ಚಳಮಂ ಮುಚ್ಚಿ,
ಧೃತಿಯೆಂಬ ಸಮಿತೆಯನೊಡ್ಡಿ,
ಮತಿಯೆಂಬ ಅಗ್ನಿಯನ್ನಿಕ್ಕಿ,
ಜ್ಞಾನವೆಂಬ ದರ್ವಿಯಲ್ಲಿ ಘಟ್ಟಿಸಿ ಪಕ್ವಕ್ಕೆ ತಂದು,
ಭಾವದಲ್ಲಿ ಕುಳ್ಳಿರಿಸಿ ಪರಿಣಾಮದೋಗರವ ನೀಡುವೆನಯ್ಯಾ
ಕೂಡಲಚೆನ್ನಸಂಗಮದೇವಾ. ||೩೦||

ಮತ್ತಂ,

೧೧೯೨

ಕಂಗಳಾಶ್ರಯದ ಸೋಂಕಿನ ಸುಖಸಂಬಂಧವನು
ಮಹದಾಶ್ರಯಕ್ಕೆ ತಂದು ಸೂಸಲೀಯದೆ ನಿಮಗರ್ಪಿಸುವೆ.
ನಾಸಿಕದಾಶ್ರಯವನು ತಟ್ಟು ಮುಟ್ಟಿಲ್ಲದೆ ನಿಮಗರ್ಪಿಸುವೆನು.

ಆಪ್ಯಾಯನದಲ್ಲಿ ಅಂಗವಿಸುವ ಸಚರಾಚರ ಚೈತನ್ಯ
ಮಧ್ಯಕ್ಕೆ ತಂದು ನಿಮಗರ್ಪಿಸುವೆ.
ಪ್ರಸಾದಿ, ಅನುಭವಪ್ರಸಾದಿ, ಶರಣಪ್ರಸಾದಿ.
ಜಂಗಮವೆ ಲಿಂಗವೆಂಬುದನಜಿದೆನಾಗಿ.
ಕೂಡಲಚೆನ್ನಸಂಗಾ,
ಬಸವಣ್ಣನ ಪ್ರಸಾದದಿಂದ ನಾನು ಪ್ರಸಾದಿಯಾದೆನಾಗಿ,
ಆನು ನಿನಗೆ ಪ್ರಸಾದವಾದೆನು, ಆರೋಗಿಸಯ್ಯಾ ಪ್ರಭುವೆ. ॥೩೧॥

ಮತ್ತಂ,

೧೧೯೩

ನೀನಳವಡಿಸಿಕೊಟ್ಟ ಪದಾರ್ಥ ನಿಮಗರ್ಪಿತವಯ್ಯಾ.
ನಿಮ್ಮ ಆರೋಗಣೆ ಮಹಾ ಆರೋಗಣೆ,
ಸಕಲಕರಣಂಗಳಿಗೆ ಹಿತಾರ್ಥ. ಕೂಡಲಚೆನ್ನಸಂಗಮದೇವಾ,
ನಿನಗೆ ಕ್ಷುತ್ತಿಲ್ಲಾಗಿ ನಾನು ಅರ್ಪಿತವ ಮಾಡಲಿಲ್ಲವಯ್ಯಾ. ॥೩೨॥

ಮತ್ತಂ,

೧೧೯೪

ಗುರುವೆ ಬೋನ, ಶಿಷ್ಯನೇ ಮೇಲೋಗರ.
ಲಿಂಗಕ್ಕೆ ಪದಾರ್ಥವರ್ಪಿತವಯ್ಯಾ.
ಘನಕ್ಕೆ ಮನವೇ ಅರ್ಪಿತ, ಮನಕ್ಕೆ ಮಹವೇ ಅರ್ಪಿತ.
ಘನದೊಳಗೆ ಮನವು ತಲ್ಲೀಯವಾದ ಬಳಿಕ
ಅರ್ಪಿಸುವ ಭಕ್ತರಾರು?
ಆರೋಗಿಸುವ ದೇವರಾರು?
ನಿತ್ಯತೃಪ್ತ ಉಣಕಲಿತನೆಂದರೆ
ಅರ್ಪಿಸಲುಂಟೆ ದೇವಾ ಮತ್ತೊಂದನು?
ಕೂಡಲಚೆನ್ನಸಂಗಮದೇವಾ,
ಬಸವಣ್ಣನೇ ಬೋನ, ನಾನೇ ಪದಾರ್ಥ,
ಸುಚಿತ್ತದಿಂದ ಆರೋಗಿಸಯ್ಯಾ ಪ್ರಭುವೆ. ॥೩೩॥

ಇದಕ್ಕೆ ಪ್ರಭುದೇವರು ತೃಪ್ತಿಯಾಗಿ ನಿರೂಪಿಸಿದ ವಚನ:

೧೧೯೫

ಮನಮುಕ್ತಿವಿವೇಕವೆಂಬ ಅಕ್ಕಿಯನು,
ಗುಪಿತವೆಂಬ ಒರಳೊಳಗಿಕ್ಕಿ,
ಅಭಿನ್ನಮಥನವೆಂಬ ಒನಕೆಯಲ್ಲಿ ಥಳಿಸಿ,

ಕಲ್ಮಷವೆಂಬ ತೌಡ ಹಾಜಿಸಿ,
ಸಮತೆಯೆಂಬ ಸಲಿಲದಲ್ಲಿ ಜಾಲಿಸಿ,
ಅಳುಪೆಂಬ ಹರಳಂ ಕಳೆದು,
ದಯಾಮೃತವೆಂಬ ಹಾಲು ಬೋನಮಂ ಮಾಡಿ,
ಸಮರಸವೆಂಬ ರುಚಿಕರದಿಂದ ಶಾಕಪಾಕಂಗಳಂ ಮಾಡಿ,
ನೆನಹದ ಲವಲವಿಕೆಯೆ ಅಭಿಗಾರವಾಗಿ,
ನಿರ್ಮಲವೆಂಬ ಶಿವದಾನವ ಗಡಣಿಸಿ,
ಕಾಯ್ದಿರ್ದರಯ್ಯಾ, ಪಂಚೇಂದ್ರಿಯವೆಂಬ ಸೊಣಗ ಮುಟ್ಟದಂತೆ.
ಕಾಯ್ದಿರ್ದರಯ್ಯಾ, ಷಡುವರ್ಗವೆಂಬ ತೊತ್ತಿರು ಮುಟ್ಟದಂತೆ.
ಕಾಯ್ದಿರ್ದರಯ್ಯಾ, ಅಷ್ಟಮದವೆಂಬ ಮಕ್ಕಳು ಮುಟ್ಟದಂತೆ.
ಇನಿತು ಮುಖ್ಯವಾದ ಹೀನಂಗಳಾವವೂ
ಮುಟ್ಟದಂತೆ ಕಾಯ್ದಿರ್ದರಾಗಿ,
ಈ ಬೋನ ಗೊಹೇಶ್ವರಲಿಂಗಕ್ಕೆ ಅರ್ಪಿತವಾಯಿತ್ತು
ಕಾಣಾ ಚೆನ್ನಬಸವಣ್ಣಾ! ॥೩೪॥

ಮತ್ತಂ,

೧೧೯೬

ಭರಿತಬೋನ ಭರಿತಬೋನವೆಂದು ಭ್ರಮೆಗೊಂಡು
ಭ್ರಮಿತರಾದಿರಿ ಲೋಕವೆಲ್ಲ,
ಭರಿತಬೋನವೆ ದಿಟವಾದರೆ ಮರ್ತ್ಯದಲ್ಲಿ ಸುಳಿಯಲುಂಟೆ?
ಚತುರ್ವಿಧ ಅರ್ಪಿತದೊಳಗೆ
ಆವುದು ಭರಿತವೆಂಬುದನಱಿಯರಾಗಿ,
ಗೊಹೇಶ್ವರಲಿಂಗದಲ್ಲಿ ಭರಿತಬೋನದ ಅನು
ಚೆನ್ನಬಸವಣ್ಣಂಗಾಯಿತ್ತು ॥೩೫॥

ಪ್ರಭುದೇವರು ಬಸವರಾಜದೇವರೊಡನೆ ನಿರೂಪಿಸಿದ ಪ್ರತ್ಯುತ್ತರ:

೧೧೯೭

ಭಕ್ತಿಯೆ ಓಗರವಾಗಿ,
ಸತ್ಯವೆ ಮೇಲೋಗರವಾಗಿ,
ನಿಜತತ್ತ್ವವೆ ಸವಿಯಾಗಿ,
ಗೊಹೇಶ್ವರಲಿಂಗಕ್ಕಿಕ್ಕಬಲ್ಲವ ಸಂಗನಬಸವಣ್ಣನಲ್ಲದಿಲ್ಲಾ. ॥೩೭॥

ಮತ್ತಂ,

೧೧೯೮

ಭೂಮಿಯಿಂದ ಹುಟ್ಟಿ ಅಂತರದಲ್ಲಿ ಬೆಳೆವ ಫಲವೃಕ್ಷದಂತೆ,
ಸರ್ವರಿಗೆ ಭೂತಹಿತವಾಗಿ ಫಲರಸವನೀವಂತೆ,
ನೀ ಭೂಮಿಯಾಗಿ ನಾ ಸಸಿಯಾಗಿ ಬೆಳೆದ ಬೆಂಬಳಿಯಲ್ಲಿ
ಗೊಹೇಶ್ವರಲಿಂಗವೆಂಬುದು ಫಲವಾಯಿತ್ತು.
ಅಱಿದಱಿಕೆ ರಸವಾಯಿತ್ತು.
ಸಂಗನಬಸವಣ್ಣನಿಂದ ಎನ್ನಂಗ ಬಯಲಾಯಿತ್ತು. ॥೩೭॥

ಮತ್ತಂ,

೧೧೯೯

ಅಂದು ನೀ ಬಂದ ಬೆಂಬಳಿಯಲ್ಲಿ ನಾ ಬಂದೆ.
ಅಂದಂದಿನ ಸಂದೇಹ ಹಱಿಯಿತ್ತು.
ನೀ ಭಕ್ತನಾಗಿ ನಾ ಜಂಗಮವಾಗಿ
ಗೊಹೇಶ್ವರಲಿಂಗವೆಂಬುದಕ್ಕೆ ಅಂಗವಾಯಿತ್ತು. ॥೩೮॥

ಮತ್ತಂ,

೧೨೦೦

ಕಾಯ ಉಭಯಭೇದವಾಗಿ, ಆತ್ಮನೇಕವಾಗಿ,
ಕಾಯ ಭಕ್ತನಾಗಿ, ಪ್ರಾಣ ಜಂಗಮವಾಗಿ,
ನಾ ಹಿಡಿದ ರೂಪು ಬಸವಣ್ಣನಾಗಿ,
ಅಱಿದಱಿವು ಗೊಹೇಶ್ವರಲಿಂಗವಾಗಿ ನೆನೆವುತ್ತಿದ್ದೆನು: ॥೩೯॥

ಇದಕ್ಕೆ ಬಸವರಾಜದೇವರ ವಚನ:

೧೨೦೧

ಆತ್ಮನ ಸುಳುಹಿನಿಂದ ಮತ್ತೆ
ಕಾಯದ ಅವತಾರವಳಿಯಿತ್ತು.
ನೀನೆಂಬ ಭಾವವಱತಲ್ಲಿ
ಕೂಡಲಸಂಗಮದೇವರ ಭಾವ
ಪ್ರಭುದೇವರಲ್ಲಿ ಐಕ್ಯವಾಯಿತ್ತು. ॥೪೦॥

ಇದಕ್ಕೆ ಪ್ರಭುದೇವರ ವಚನ:

೧೨೦೨

ಅನ್ನಬರ ಹಾಗೆನ್ನದಿರು ಸಂಗನಬಸವಣ್ಣಾ.
ನಿನಗೆ ಬೇಱೆ ಅಡಗುವ ಕುಱುಹೆಂಬುದೊಂದೊಡಲುಂಟೆ?
ಎನಗೆ ಅಂಗೈಯ ನಾಮ, ಕಾಯವೆಂಬ ಕದಳಿ,
ಗೊಹೇಶ್ವರನೆಂಬ ಭ್ರಮೆ ಬಿಡದು. ॥೪೧॥

ಮತ್ತಂ, ಪ್ರಭುದೇವರು ಬಸವರಾಜದೇವರ ಸ್ತುತಿಸಿದ ವಚನ:

೧೨೦೩

ತನು ಶುದ್ಧವಾಯಿತ್ತು ಬಸವಾ ಇಂದೆನ್ನ,
ಮನ ಶುದ್ಧವಾಯಿತ್ತು ಬಸವಾ ಇಂದೆನ್ನ.
ಭಕ್ತಿ ಯುಕ್ತಿ ಮುಕ್ತಿ ಶುದ್ಧವಾಯಿತ್ತು ಬಸವಾ ಇಂದೆನ್ನ.
ಇವೆಲ್ಲ ಶುದ್ಧವಾದವು ಬಸವಾ ಇಂದೆನ್ನ.
ನಮ್ಮ ಗೊಹೇಶ್ವರಲಿಂಗಕ್ಕೆ ಆದಿಯಾಧಾರವಾದೆಯಲ್ಲ ಬಸವಣ್ಣಾ! ॥೪೨॥

ಮತ್ತಂ, ಚೆನ್ನಬಸವಣ್ಣನ ಸ್ತುತಿಸಿದ ವಚನ:

೧೨೦೪

ಪಂಚವರ್ಣದ ಬಿಂದು ಪ್ರಪಂಚನಳಿದುಳಿದಿರಲು,
ಸಂಚಲಿಸುವರೆ ಆವೆಡೆಯೂ ಇಲ್ಲ.
ನಿಂದ ಚಿತ್ತಿನ ಪ್ರಭೆ ಅಂಗವ ನೆಱಿ ನುಂಗಿ,
ಹಿಂದುಮುಂದು ಎಡಬಲ ಅಡಿಯಾಕಾಶಯೆಂಬುದಿಲ್ಲ.
ಕೆಳಗೆ ನಿಲಲಾಧಾರ ಮೊದಲಿಂಗಿಲ್ಲ.
ಕಡೆಗೆ ಸಾರುವೆನೆನಲು ಊರ್ಧ್ವವಿಲ್ಲ.
ನಡುವೆ ನಾನಿದ್ದೆಹೆನೆಂದರೆನ್ನೊಡಲೊಳಗೆ
ಒಡೆದು ಅದು ಮೂಡಿತ್ತು. ತನ್ನಂತೆ ಬಯಲು.
ಈ ಬೆಡಗು ಬಿನ್ನಾಣವ ಬಡವರಱಿವರೆ?
ಇದನಱಿದು ನುಡಿದು ತೋಱಿದನು
ಗೊಹೇಶ್ವರನ ಶರಣ ಚೆನ್ನಬಸವಣ್ಣನು. ॥೪೩॥

ಇದಕ್ಕೆ ಬಸವರಾಜದೇವರ ವಚನ:

೧೨೦೫

ಕಾಣಬಾರದ ಘನವ ಕರಸ್ಥಲದಲ್ಲಿ ತೋಱಿದ,
ಹೇಳಬಾರದ ಘನವ ಮನಸ್ಥಲದಲ್ಲಿ ತೋಱಿದ.
ಉಪಮಿಸಬಾರದ ಘನವ ನಿಮ್ಮ ತೃಪ್ತಿಯ ಮುಖದಲ್ಲಿ ತೋಱಿದ
ಇಂತೀ ತ್ರಿವಿಧವು ಏಕಾರ್ಥವಾಗಿಹ ಭೇದವ
ಚೆನ್ನಬಸವಣ್ಣ ತೋಱಿದನಾಗಿ,
ಆನು ಬದುಕಿದೆನು ಕಾಣಾ ಕೂಡಲಸಂಗಮದೇವಾ! ॥೪೪॥

ಇದಕ್ಕೆ ಪ್ರಭುದೇವರು ಚೆನ್ನಬಸವರಾಜದೇವರ ಸ್ತುತಿಸುವ ವಚನ:

೧೨೦೬

ಗುರುಶಿಷ್ಯರಿಬ್ಬರ ಮಧ್ಯದಲ್ಲಿ ಒಂದು ಮಗು ಹುಟ್ಟಿತ್ತು ನೋಡಾ.
ಗುರುವಿಂಗೆ ಗುರುವಾದ ಪರಿ ಎಂತೋ?

ಶಿಷ್ಯನಾದ ಪರಿ ಎಂತೋ?
ಆದಿಯ ಲಿಂಗವ ಸಾಧ್ಯವ ಮಾಡಿ ತೋಱಿದ
ಗೊಹೇಶ್ವರನ ಶರಣ ಚೆನ್ನಬಸವಣ್ಣಂಗೆ
ಶರಣೆಂದು ಬದುಕಿದೆನು ಕಾಣಾ ಸಂಗನಬಸವಣ್ಣಾ! ॥೪೫॥

ಮತ್ತಂ,

೧೨೦೭

ಅದೃಷ್ಟ ಕರಣದ ಮೇಲಣ ಪೂರ್ವಾಶ್ರಯವ ಕಳೆದು,
ಗುರುವಿನ ಹಸ್ತ ಮುಟ್ಟಿತ್ತೆಂಬ ಸಂದಣಿಯಲ್ಲಿ ಹೋಗದು.
ಪಂಚೇಂದ್ರಿಯ ಲಿಖಿತವ ತೊಡೆದು ಲಿಂಗಲಿಖಿತವ ಬರೆವುದು
ಶಿಷ್ಯನ ಕೈಯಲಲ್ಲದೆ ಗುರುವಿನ ಕೈಯಲಾಗದು.
ಭವಿ ಮಾಡುವ ಬೋನವ ಭಕ್ತ ಕಾಣದಹಾಂಗೆ
ಅರ್ಪಿಸುವ ಭೇದವಱಿದು,
ಪ್ರಸಾದದ ಪೂರ್ವಾಶ್ರಯವ ಕಳೆದು ರೂಪಿಸಬಲ್ಲರೆ ಹಱಿಯದು.
ಗುರುವಿಲ್ಲದ ಶಿಷ್ಯ, ಶಿಷ್ಯನಿಲ್ಲದ ಗುರು–
ಇಂತೀ ಒಂದಕ್ಕೊಂದು ಇಲ್ಲದೆ
ಗೊಹೇಶ್ವರಲಿಂಗದಲ್ಲಿ ಸಹಜದುದಯವಾದ
ನಮ್ಮ ಚೆನ್ನಬಸವಣ್ಣಂಗೆ ನಮೋ ನಮೋ ಎಂಬೆನು. ॥೪೬॥

ಬಸವರಾಜದೇವರು ಚೆನ್ನಬಸವರಾಜದೇವರ ಸ್ತುತಿಸುವ ವಚನ:

೧೨೦೮

ಪ್ರಸಾದಿಯ ಪ್ರಸಾದದಲೊದಗಿದ
ಪ್ರಸಾದಿಯನೇನೆಂದುಪಮಿಸುವೆನು?
ಏನೆಂದು ಸ್ತುತಿಸುವೆನಯ್ಯಾ
ಮಹಾಪ್ರಸಾದಿಗೆ ಮಹಾಘನ ಪ್ರಸಾದವಾದ ಪ್ರಸಾದಿಯನು?
ಅಗಮ್ಯ ಪ್ರಸಾದದಲ್ಲಿ ಸ್ವಾಯತವಾದ
ಕೂಡಲಸಂಗಮದೇವಾ.
ನಿಮ್ಮ ಶರಣ ಚೆನ್ನಬಸವಣ್ಣಂಗೆ,
ನಮೋ ನಮೋ ಎಂಬೆನು. ॥೪೭॥

ಮತ್ತಂ,

೧೨೦೯

ಲೋಕದಿಚ್ಛೆಯ ನಡೆವವನಲ್ಲ.
ಲೋಕದಿಚ್ಛೆಯ ನುಡಿವವನಲ್ಲ;
ಲೋಕ ವಿರಹಿತ ಶರಣ,

ಶರಣ ವಿರಹಿತ ಲೋಕವೆಂಬುದು ಕಾಣಬಂದಿತ್ತು. ನೋಡಾ.
ಲಿಂಗವೆ ಗೂಡಾಗಿ, ಜಂಗಮವೆ ಸ್ವಾಯತವಾಗಿ,
ಪ್ರಸಾದವೆ ಪ್ರಾಣವಾಗಿ ಪರಿಣಾಮದಲ್ಲಿ ಇಪ್ಪ ನೋಡಯ್ಯಾ.
ಕೂಡಲಸಂಗಮದೇವಾ,
ನಿಮ್ಮ ಶರಣ ಚೆನ್ನಬಸವಣ್ಣಂಗೆ ನಮೋ ನಮೋ ಎಂಬೆನು. ॥೪೮॥

ಇದಕ್ಕೆ ಚೆನ್ನಬಸವಣ್ಣ ಬಸವಣ್ಣನ ಸ್ತುತಿಸುವ ವಚನ:

೧೨೧೦

ಅಂಗದ ಮೇಲೆ ಆಚಾರಲಿಂಗ ಸ್ವಾಯತವಾಯಿತ್ತು.
ಪ್ರಾಣದ ಮೇಲೆ ಜಂಗಮಲಿಂಗ ಸ್ವಾಯತವಾಯಿತ್ತು.
ಆತ್ಮನ ಮೇಲೆ ಸಮ್ಯಗ್‌ಜ್ಞಾನಲಿಂಗ ಸ್ವಾಯತವಾಯಿತ್ತು.
ಇಂತೀ ತ್ರಿವಿಧಕ್ಕೆ ತ್ರಿವಿಧ ಸ್ವಾಯತವಾಗಿಪ್ಪ
ನಮ್ಮ ಕೂಡಲಚೆನ್ನಸಂಗನ ಶರಣ ಬಸವಣ್ಣಂಗೆ
ನಮೋ ನಮೋ ಎನುತಿರ್ದೆನು. ॥೪೯॥

ಮತ್ತಂ,

೧೨೧೧

ತನು ಗುರುವಿನಲ್ಲಿ ಸವೆದು,
ಮನ ಲಿಂಗದಲ್ಲಿ ಸವೆದು,
ಧನ ಜಂಗಮದಲ್ಲಿ ಸವೆದು,
ತನುವೆ ಗುರುವಾಗಿ,
ಮನವೆ ಲಿಂಗವಾಗಿ,
ಧನವೆ ಜಂಗಮವಾಗಿ,
ತ್ರಿವಿಧವೂ ಐಕ್ಯವಾಗಿ ನಿಂದಲ್ಲಿ ನಿಜಭರಿತನಾಗಿ,
ಕಾಯವಿಡಿದು ಕರ್ಮವಿರಹಿತವಾಗಿ,
ಕೂಡಲಚೆನ್ನಸಂಗನಲ್ಲಿ ಬಸವಣ್ಣನು ಉಪಮಾತೀತನಾಗಿರ್ದನು. ॥೫೦॥

ಮತ್ತಂ, ಚೆನ್ನಬಸವಣ್ಣನು ಪ್ರಭುದೇವರ ಸ್ತುತಿಸುವ ವಚನ:

೧೨೧೨

ಮನೆಯೊಳಗಣ ಕಿಚ್ಚು ಕಾನನವ ಸುಟ್ಟಿತ್ತು.
ಕಾನನ ಬೆಂದಲ್ಲಿ ಮನೆ ಉರಿಯ ಹತ್ತಿತ್ತು.
ಮನೆ ಬೆಂದು ಕಂಬ ಉಳಿಯಿತ್ತು.
ಆ ಕಂಭದ ಮೇಲೊಂದು ರತ್ನವಿದ್ದುದ ಕಂಡೆ.
ಅದಱ ಬೆಳಗು ಮೂಱು ಲೋಕವ ತುಂಬಿತ್ತಲ್ಲಾ!

ಇದು ಕಾರಣ, ಕೂಡಲಚೆನ್ನಸಂಗಯ್ಯನಲ್ಲಿ
ಪ್ರಭುದೇವರ ನಿಲವಿಂಗೆ ನಾನು ಶರಣೆನುತಿರ್ದೆನು. ॥೫೧॥

ಮತ್ತಂ,

೧೨೧೩

ಅಂಗದಲ್ಲಿ ಲಿಂಗವಱಿತು, ಲಿಂಗದಲ್ಲಿ ಅಂಗವಱಿತು,
ಒಡಲುಪಾಧಿ ಎಂಬುದಿಲ್ಲ ನೋಡಾ!
ನಿಂದಡೆ ನೆಳಲಿಲ್ಲ, ಸುಳಿದಡೆ ಹಜ್ಜೆ ಇಲ್ಲ.
ಅಪರಮಿತ ಘನಮಹಿಮನನೇನೆಂಬೆನಯ್ಯಾ?
ಶಬ್ದವನಱಿದು ಸಾರಾಯನಲ್ಲ; ಗತಿವಿಡಿದು ಅಜಡನಲ್ಲ.
ಈ ಎರಡೂ ಅಳಿದುಳಿದ ನಿಶ್ಚಿಂತನು ತನಗೆ ತಾ ನಿಜವಾದ
ಕೂಡಲಚೆನ್ನಸಂಗಯ್ಯನಲ್ಲಿ ಪ್ರಭುದೇವರ ಪಾದಕ್ಕೆ
ನಮೋ ನಮೋ ಎನುತಿರ್ದೆನು. ॥೫೨॥

ಮತ್ತಂ,

೧೨೧೪

ಹೆಣ್ಣಿಂಗೆ ಬಂದಾತನಲ್ಲ; ಹೊನ್ನಿಂಗೆ ಬಂದಾತನಲ್ಲ;
ಮಣ್ಣಿಂಗೆ ಬಂದಾತನಲ್ಲ.
ಅಶನಕ್ಕೆ ಬಂದಾತನಲ್ಲ; ವ್ಯಸನಕ್ಕೆ ಬಂದಾತನಲ್ಲ.
ಕೂಡಲಚೆನ್ನಸಂಗಯ್ಯನಲ್ಲಿ
ಭಕ್ತಿಯ ಪಥವ ತೋಱಬಂದನಯ್ಯಾ ಪ್ರಭುದೇವರು. ॥೫೩॥

ಇಂತು ಪ್ರಭುದೇವರು ಚೆನ್ನಬಸವಣ್ಣನು ಬಸವಣ್ಣನು ಒಬ್ಬರನೊಬ್ಬರ ಕೊಂಡಾಡುತ್ತಿರ್ಪ ಪ್ರಸ್ತಾವದೊಳು, ಬಸವರಾಜದೇವರು ಲಕ್ಷದ ಮೇಲೆ ತೊಂಬತ್ತಾಱುಸಾವಿರ ಜಂಗಮದ ಮುಳಿಸ ತಿಳುಹಿಕೊಡಬೇಕೆಂದು ಪ್ರಭುದೇವರಿಗೆ ಬಿನ್ನಹಂ ಮಾಡುವ ಪ್ರಸ್ತಾವದ ವಚನ:

೧೨೧೫

ಚಂದ್ರಮ ಅಮೃತಕರನಾದಡೇನಯ್ಯಾ,
ಒಳಗಣ ಕಳಂಕು ಬಿಡದನ್ನಕ್ಕರ?
ಸೂರ್ಯ ಮಹಾಪ್ರಕಾಶನಾದಡೇನಯ್ಯಾ,
ಅಸ್ತಮಾನಕ್ಕೆ ಅಸ್ತಂಗತನೆಂಬ ಹೀನ ಬಿಡದನ್ನಕ್ಕರ?
ಆನು ನಿಮ್ಮ ಕೃಪೆಯ ಹಡೆದು ಫಲವೇನಯ್ಯಾ,
ನಿಮ್ಮ ಶರಣರು ಎನ್ನ ಮೇಲೆ ಮುನಿದು ಹೋದ ಬಳಿಕ?
ಕೂಡಲಸಂಗಮದೇವಯ್ಯಾ,
ನಿಮ್ಮ ಶರಣರ ಮನದಲ್ಲಿ
ಎನ್ನ ಮೇಲೆ ಕರುಣ ಹುಟ್ಟಿ ಬಪ್ಪಂತೆ ಮಾಡಯ್ಯಾ.॥೫೪॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೧೨೧೬

ನಾನೆಂಬಹಂಕಾರದಲ್ಲಿ ನಾನುಂಡೆನಾದರೆ
ಎನಗದೇ ಭಂಗ.
ಸ್ತುತಿನಿಂದೆಗೆ ನೊಂದೆನಾದಡೆ,
ಅಂಗೈಯಲ್ಲಿರ್ದ ಗೊಹೇಶ್ವರಲಿಂಗಕ್ಕೆ
ದೂರ ಸಂಗನಬಸವಣ್ಣಾ. ॥೫೫॥

ಮತ್ತಂ,

೧೨೧೭

ನೋಡುವ ಸೂರ್ಯ, ಸುರಿವ ಜಲ
ಹೊಲೆ ನೆಲೆ ಶುದ್ಧವೆಲ್ಲಕ್ಕೂ ಸರಿ.
ಅಱಿದು ನುಡಿವಂಗೆ, ಮಱೆದು ನುಡಿದು ತಲ್ಲಣಿಸುವಂಗೆ,
ಅವನ ಹೃದಯವೆ ಸಾಕ್ಷಿ
ಗೊಹೇಶ್ವರಲಿಂಗಕ್ಕೆ ತಥ್ಯಮಿಥ್ಯವಿಲ್ಲ ಸಂಗನಬಸವಣ್ಣಾ. ॥೫೬॥

ಮತ್ತಂ,

೧೨೧೮

ಸುರಿವ ಜಲಕ್ಕೆ ನೆಲೆಹೊಲೆಯೆಂದು ಪ್ರಮಾಣಿಸಬಹುದೆ?
ಉರಿವ ಅನಲಂಗೆ ಶತಡೊಂಕು ಸಸಿನವೆಂಬುದುಂಟೆ?
ಗೊಹೇಶ್ವರಲಿಂಗಕ್ಕೆ ಲೇಸು ಕಷ್ಟವೆಂಬುದಿಲ್ಲ ಸಂಗನಬಸವಣ್ಣಾ. ।೫೭।

ಮತ್ತಂ,

೧೨೧೯

ಕಾಯದ ಮೇಲೆ ಕಲ್ಲು ಬೀಳಲಿಕ್ಕೆ,
ಜೀವ ಆ ಠಾವನಱಿದು ಕಾವು ಮಾಡಿಸಿಕೊಂಬಾಗ
ನೋವನಱಿವುದು ಕಾಯವೋ? ಜೀವವೋ?
ಉಭಯ ಸಮಯವೋ?
ಗೊಹೇಶ್ವರಲಿಂಗಕ್ಕೆ ಅನ್ಯವಿಲ್ಲ ಸಂಗನಬಸವಣ್ಣಾ. ॥೫೮॥

೧೨೨೦

ನಿಜ ಬಲ್ಲವಂಗೆ ಜಲವೂ ಸರಿ, ನೆಲನೂ ಸರಿ.
ಅಱಿದು ನುಡಿವಂಗೆ ಜಗವೂ ಸರಿ, ಸಮಯವೂ ಸರಿ.
ಎಮಗಾ ಮಿಥ್ಯವಿಲ್ಲ,
ಗೊಹೇಶ್ವರಲಿಂಗವು ಪರಿಪೂರ್ಣವಾದ ಕಾರಣ ಸಂಗನಬಸವಣ್ಣಾ. ॥೫೯॥

ಮತ್ತಂ,

೧೨೨೧

ನೀರನೀಜುವನ ದೇಹ ಬಳಲುವದಲ್ಲದೆ,
ನೀರು ಬಳಲುವುದೆ?
ಸಮಯವ ನುಡಿದಡೆ ಸಮಯಕ್ಕೆ ನೋವಲ್ಲದೆ
ಗೊಹೇಶ್ವರಲಿಂಗಕ್ಕೆ ಭ್ರಮೆ ಇಲ್ಲ ಸಂಗನಬಸವಣ್ಣಾ. ॥೬೦॥

ಮತ್ತಂ, ವಿಡಂಬನ:

೧೨೨೨

ಜಂಗಮ ಘನವೆಂಬೆನೆ? ಬೇಡಿದಾಗಳೆ ಕಿಜಿದಾಯಿತ್ತು.
ಲಿಂಗ ಘನವೆಂಬೆನೆ?
ಕಲ್ಲುಕುಟಿಕನ ಕೈಯಲ್ಲಿ ಮಾಡಿಸಿಕೊಂಡು ಕಿಜಿದಾಯಿತ್ತು.
ಭಕ್ತ ಘನವೆಂಬೆನೆ?
ತನುಮನ ಧನ ವಂಚಕನಾಗಿ ಕಿಜಿದಾದ.
ಇಂತೀ ತ್ರಿವಿಧದಲ್ಲಿ ಪರಿಣಾಮವಿಲ್ಲ, ಪರಮಾರ್ಥವಿಲ್ಲ.
ಗೊಹೇಶ್ವರಲಿಂಗದ ಘನವ ಬಲ್ಲವರಾರು ಹೇಳೈ ಸಂಗನಬಸವಣ್ಣಾ? ॥೬೧॥

ಮತ್ತಂ,

೧೨೨೩

ತನು ಬತ್ತಲೆ ಇದ್ದರೇನಯ್ಯಾ,
ಮನ ಶುಚಿಯಾಗದನ್ನಕ್ಕರ?
ಮಂಡೆ ಬೋಳಾದಡೇನು,
ಭಾವ ಬಯಲಾಗದನ್ನಕ್ಕರ?
ಭಸ್ಮವ ಹೂಸಿದಡೇನು,
ಕರಣಾದಿಗುಣಂಗಳನೊತ್ತಿ ಮೆಟ್ಟಿ ಸುಡದನ್ನಕ್ಕರ?
ಇಂತೀ ಆಸೆಯ ವೇಷದ ಭಾಷೆಗೆ
ಗೊಹೇಶ್ವರ ಸಾಕ್ಷಿಯಾಗಿ
ಛೀ ಎಂಬೆನು ಕಾಣಾ ಸಂಗನಬಸವಣ್ಣಾ. ॥೬೨॥

ಮತ್ತಂ,

೧೨೨೪

ಆಸೆಯೆಂಬ ಶೂಲದ ಮೇಲೆ
ವೇಷವೆಂಬ ಹೆಣನ ಕುಳ್ಳಿರಿಸಿ,
ಧರೆಯ ಮೇಲುಳ್ಳ ಹಿರಿಯರು

ಹೀಗೆ ಸವೆದರು ನೋಡಾ!
ಆಸೆಯ ಮುಂದಿಟ್ಟುಕೊಂಡು
ಸುಳಿವ ಹಿರಿಯರ ಕಂಡು,
ಗೊಹೇಶ್ವರಲಿಂಗಕ್ಕೆ ಹೇಸಿಕೆಯಾಯಿತ್ತು
ಕಾಣಾ ಸಂಗನಬಸವಣ್ಣಾ! ॥೬೩॥

ಮತ್ತಂ,

೧೨೨೪

ಆಚಾರವಱಿಯದೆ, ಕ್ರಿಯಾಕಾರ ಉಡುಗದೆ,
ವಿಭವವಳಿಯದೆ, ಕೋಪವಡಗದೆ, ತಾಪ ಮುಱಿಯದೆ,
ಬಱಿದೆ ಭಕ್ತರಾದೆವೆಂದು ನನೆದ ಹೊಱಸಿನಂತೆ
ಬೆಬ್ಬಳಿಸಿ ಬೆಬ್ಬನೆ ಬೆಱಿವವರ ಕೇಡಿಂಗೆ
ನಾನು ಬೆಱಗಾದೆ ಕಾಣಾ ಗೊಹೇಶ್ವರಾ! ॥೬೪॥

ಮತ್ತಂ,

೧೨೨೬

ತಮ್ಮ ತಾವಱಿಯರು, ಹೇಳಿದರೂ ಕೇಳರು,
ಆಱಱ ಹೊಲಬನೇನೆಂದಱಿಯರು.
ಎಂಟಱ ಕಂಟಕವ ಮುನ್ನಱಿಯರು.
ಏಱಿದ ಬೆಟ್ಟವನಿಳಿಯಲಱಿಯದವರನೇನೆಂಬೆ ಗೊಹೇಶ್ವರಾ? ॥೬೫॥

ಮತ್ತಂ,

೧೨೨೬

ಅಱಿದ ಶರಣಂಗೆ ಆಚಾರವಿಲ್ಲ; ಆಚಾರವುಳ್ಳವಂಗೆ ಲಿಂಗವಿಲ್ಲ.
ಲಿಂಗವಿಲ್ಲದ ಶರಣನ ಸುಳುಹು ಜಗಕ್ಕೆ ವಿಪರೀತ ಚರಿತ್ರವದು,
ಪ್ರಕಟವಲ್ಲ ನೋಡಾ!
ಸಂಸಾರಿ ಬಳಸುವ ಬಯಕೆಯನೆಂದು ಹೊದ್ದನು.
ಸಟೆಯ ಹಿಡಿದು, ದಿಟವ ಮಱೆದು,
ಇಲ್ಲದ ಲಿಂಗವನುಂಟೆಂದು, ಪೂಜಿಸುವರಾಗಿ ಆಚಾರ ಉಂಟು.
ಆಚಾರವುಳ್ಳವಂಗೆ ಗುರುವುಂಟು, ¹ಗುರುವುಳ್ಳವಂಗೆ¹ ಲಿಂಗವುಂಟು.
ಲಿಂಗಪೂಜಕಂಗೆ ಭೋಗವುಂಟು.
ಈ ಬಱಿಯ ಬಾಯ ಬಣ್ಣಕರೆಲ್ಲರೂ ಪೂಜಕರಾದರು.
ಗೊಹೇಶ್ವರಲಿಂಗವು ಅಲ್ಲಿ ಇಲ್ಲವೆಂಬುದನು
ಈ ವೇಷಲಾಂಛನರೆತ್ತ ಬಲ್ಲರು ಹೇಳಾ ಸಂಗನಬಸವಣ್ಣಾ? ॥೬೬॥

೧–೧ ಗುರುವುಳ್ಳವರಿಗೆ (ಮೂ)

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

೧೨೨೮

ಘನಗಂಭೀರವಾರಿಧಿಯೊಳಗೆ ತೋಱುವ ವೀಚಿಗಳು,
ಆ ವಾರಿಧಿಯ ಬಿಟ್ಟು ತೋಱಬಲ್ಲವೆ?
ತೋಱಿದರೆ ಆ ವಾರಿಧಿ ತನ್ನ ತಾ ಜಱಿದುಕೊಂಬುದೆ?
ನಿಮ್ಮೊಳಗಡಗಿದ ಪ್ರಮಥರೆಲ್ಲರ
ಗುಣಾದಿಗುಣಂಗಳೆಲ್ಲವನು ನಿಮ್ಮಡಿಗಳೆತ್ತಲುಂಟೆ?
ಜಗದೊಳಗೆ ಕೂಡಿ ಪರಿಪೂರ್ಣವಾದ ಬಳಿಕ
ಇದಿರ ನೋಡಿ, ಜಱಿದು ನುಡಿವ ಠಾವಾವುದು ಹೇಳಯ್ಯಾ?
ಕೂಡಲಸಂಗಮದೇವಯ್ಯಾ,
ನಿಮ್ಮ ನೀವು ಪರಿಣಾಮಿಸಿಕೊಂಬುದಲ್ಲದೆ ಭಿನ್ನವ ಮಾಡಲುಂಟೆ? ॥೬೭॥

ಮತ್ತಂ,

೧೨೨೯

ಕುಲವ ನೋಡದೆ, ಛಲವ ನೋಡದೆ,
ನಿಲವ ನೋಡದೆ ಕೂಡಿದ ಬಳಿಕ,
ಅಲ್ಲಿ ಹೆಚ್ಚು ಕುಂದನಱಸಲುಂಟೆ?
ಮುಂದುವರಿದು ಜಂಗಮಕ್ಕೆ
ನಿಮ್ಮ ಕಾರುಣ್ಯವನುಪದೇಶವ ಮಾಡಿದ ಬಳಿಕ,
ಬಂದುದ ಬಂದಂತೆ ಸಮನಿಸಿಕೊಳ್ಳಬೇಕಲ್ಲದೆ
ಅಂತಿಂತೆನಬಾರದು ಕೇಳಯ್ಯಾ,
ನೀನು ನಿರಾಕಾರ ಸಾಕಾರವೆಂಬೆರಡು ಮೂರ್ತಿಯ ಧರಿಸಿಪ್ಪೆಯಾಗಿ,
ಒಂದ ಜರಿದು ಒಂದ ಹಿಡಿದೆಹೆನೆಂದರೆ
ಅದೇ ಕೊಱತೆ ನೋಡಾ ಪ್ರಭುವೆ ಕೂಡಲಸಂಗಮದೇವಾ! ॥೬೮॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೧೨೩೦

ಆಕಾರ ನಿರಾಕಾರವೆಂಬೆರಡೂ ನಾನೆ;
ದಿಟದಿಟ ತಪ್ಪದು ಕೇಳಾ.
ಆಕಾರಕ್ಕೆ ಭಾವವೆ ಪ್ರಾಣ,
ನಿರಾಕಾರಕ್ಕೆ ಮಹಾಜ್ಞಾನವೆ ಪ್ರಾಣ.
ಇಂತೀ ಉಭಯ ಕುಳಕ್ಕೆ ಇದು ಲಕ್ಷಣ ಕೇಳಾ.
ಎರಡಱೊಳಗೆ ಆವ ಮುಖದಲ್ಲಿ ಇಪ್ಪಾತನು,
ಆ ಮುಖದಲ್ಲಿ ಶುದ್ಧವಾಗದನ್ನಕ್ಕರ
ಗೊಹೇಶ್ವರಲಿಂಗಕ್ಕೆ ದೂರ ಕೇಳಾ ಸಂಗನಬಸವಣ್ಣಾ. ॥೬೯॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

೧೨೩೧

ಅಱಿವಿಲ್ಲದ ಕಾಯ ಉಂಟೆ?
ಅಱಿವಿಲ್ಲದ ಪ್ರಾಣ ಉಂಟೆ?
ಅಱಿವಿಲ್ಲದ ನಿಲವು ಉಂಟೆ?
ಭಾವವಿಲ್ಲದ ಭಕ್ತಿ ಉಂಟೆ?
ಕೂಡಲಸಂಗಮದೇವಾ,
ನೀವು ಪರಿಪೂರ್ಣರಾಗಿಪ್ಪಿರಿ; ಅವಗುಣಕ್ಕೆ ತೆಱಹಿಲ್ಲ. ॥೭೦॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೧೨೩೨

ಅಹುದಹುದು ಬಸವಣ್ಣಾ, ನೀನೆಂದುದನಲ್ಲೆನಬಹುದೆ?
ಎನ್ನ ಮನದ ಕಪ್ಪ ಕಳೆದು ನಿರ್ಲೇಪವ ಮಾಡಿ,
ಎನ್ನ ನಿರವಯಲಲ್ಲಿ ನಿಲಿಸಿ ಪ್ರತಿಷ್ಠೆಯ ಮಾಡುವಾತನೂ
ನೀನೆಂಬುದು ಸತ್ಯವಚನ ನೋಡಾ.
ಗೊಹೇಶ್ವರನ ಮಹಾ ಗಣಂಗಳಿದ್ದಲ್ಲಿಗೆ ಹೋಗಿ
ತಿಳುಹಿಕೊಂಡು ಬಾರಾ ಸಂಗನಬಸವಣ್ಣಾ. ॥೭೧॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

೧೨೩೩

ಕಾಲದಿಂದ ಕಡೆ ಮುಟ್ಟ ಮಾಡಿದ ಲೇಸು,
ಒಂದು ದಿನ ಉದಾಸೀನವ ಮಾಡಿದರೆ,
ಅದೆಲ್ಲವೂ ವ್ಯರ್ಥವಾಗಿ ಹೋಹುದು ಕೇಳಯ್ಯಾ.
ಸಾವಿರ ನೋಂಪಿಯ ನೋಂತು
ಒಂದು ಬಾರಿ ಹಾದರವನಾಡಿದರೆ,
ಆ ನೋಂಪಿ ಎಲ್ಲವೂ ನೀರಲ್ಲಿ ನೆರೆದು ಹೋಹಂತೆ ಕೇಳಯ್ಯ.
ನಾನೆಷ್ಟು ಭಕ್ತಿಯ ಮಾಡಿದರೇನು?
ನಿಮ್ಮ ಶರಣರ ಮನವೆಳ್ಳನಿತು ನೊಂದರೆ,
ಎನ್ನ ಭಕ್ತಿಯ ಅಭಿಮಾನ ಹೋಯಿತ್ತಯ್ಯಾ.
ಕೂಡಲಸಂಗಮದೇವಾ,
ನಿಮ್ಮ ಶರಣರ ಮುನಿಸನಾವ ಪರಿಯಲ್ಲಿ ತಿಳುಹುವೆ
ಹೇಳಾ ಎಲೆ ಪ್ರಭುವೆ? ॥೭೨॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೧೨೩೪

ಎಡದ ಕಾಲಲೊದ್ದರೆ ಬಲದ ಕಾಲ ಹಿಡಿವುದು.
ಬಲದ ಕಾಲಲೊದ್ದರೆ ಎಡದ ಕಾಲ ಹಿಡಿವುದು.
ತ್ರಾಹಿ ತ್ರಾಹಿ, ತಪ್ಪೆನ್ನದೆಂದು
ಗೊಹೇಶ್ವರನ ಶರಣರನೊಡಗೊಂಡು
ಬಾರೈ ಸಂಗನಬಸವಣ್ಣಾ. ॥೭೩॥

ಇದಕ್ಕೆ ಬಸವರಾಜದೇವರು ಮಹಾಶಿವಗಣಂಗಳ ಬಳಿಗೆ ಬಂದು ಮುನಿಸ ತಿಳುಹಿ ಕರೆವ ಪ್ರಸ್ತಾವದ ವಚನ:

೧೨೩೫

ತೊತ್ತಿನ ತೊತ್ತಿನ ಮಱುದೊತ್ತಿನೊಡನೆ
ಮುನಿವುದು ನಿಮಗೆ ಗುಣವೆ ಅಯ್ಯಾ?
ಅಯ್ಯಾ, ನಿಮ್ಮ ಧರ್ಮದವ ನಾನಯ್ಯಾ.
ಒಮ್ಮಿಂಗೆ ಕೃಪೆಮಾಡಿ ಕರುಣಿಸಿರಯ್ಯಾ.
ಕೂಡಲಸಂಗಮದೇವಾ,
ಇಲಿಗಂಜಿ ಮನೆಯ ಸುಡುವರುಂಟೆ? ॥೭೪॥

ಮತ್ತಂ,

೧೨೩೬

ಆನು ಭಕ್ತನಲ್ಲ, ಆನು ಯುಕ್ತನಲ್ಲ.
ನೀವು ಮಾಡಿದ ಸೂತ್ರದ ಬೊಂಬೆ ನಾನಯ್ಯಾ.
ಎನಗೆ ಬೇಱೆ ಸ್ವತಂತ್ರ ಉಂಟೆ?
ನೀವೆನ್ನ ಮಾನಾಭಿಮಾನಕ್ಕೊಡೆಯರಾದ ಬಳಿಕ,
ಎನ್ನ ತಪ್ಪ ಲೆಕ್ಕಿಸದೆ ಬಿಜಯಂಗೆಯ್ವುದಯ್ಯಾ
ಕೂಡಲಸಂಗಮದೇವಾ. ॥೭೫॥

ಮತ್ತಂ,

೧೨೩೭

ಎನ್ನ ಭಕ್ತಿ ಎಲವದ ಕಾಯ ಫಲದಂತೆ ನೋಡಯ್ಯಾ!
ಹೊಱಗೆ ಹೆಂಪು, ಒಳಗೆ ಬೂರವಯ್ಯಾ.
ನಿಮ್ಮ ದೇವರೆಂದು ಪೂಜಿಸಿ ಮಾನವರೆಂದು ಮರೆವೆನು.
ಸಗುಣ ನಿರ್ಗುಣವೆರಡೂ ಅಳವಡದ ಸಂದೇಹಿ ನಾನಯ್ಯಾ.
ಕೂಡಲಸಂಗಮದೇವಾ, ಎನ್ನಪರಾಧವ ಸೈರಿಸುವರೆ ನೀವಲ್ಲದೆ ಮತ್ತಾರನೂ ಕಾಣೆ.
ಶರಣಾರ್ಥಿ ಶರಣಾರ್ಥಿ, ಕೃಪೆಯಿಂದ [1]ಕರುಣಿಸಿರಯ್ಯಾ![1] ॥೭೬॥

೧-೧ ಕರುಣಿಸಯ್ಯ (ಮೂ)

ಇದಕ್ಕೆ ಶರಣರ ಪ್ರತ್ಯುತ್ತರ, ಸೊಡ್ಡಳಬಾಚರಸರ ವಚನ:

೧೨೩೮

ಹಿಡಿದು ಬಿಟ್ಟ ಬಳಿಕ ಅಂತಿರಬೇಕಲ್ಲದೆ,
ಇನ್ನು ಹಿಡಿದು ತಪ್ಪಿದ ವಸ್ತುವನಱಿಸಿ ಹಿಡಿಯಲುಂಟೆ?
ಮುನಿದು ಹೂವಿನೊಳಿಟ್ಟು, ಒಸೆದು ಆನೆಯನೇಱಿಸಿಹೆನೆಂದರೆ,
ಶಿವಶರಣರ ಮನಸ್ಸು ತಿಳಿಯದು ನೋಡಾ.
ಒಡೆದ ಮುತ್ತು ನಾಣ್ಯಕ್ಕೆ ಸಲ್ಲದು.
ಒಡೆದ ಹಾಲು ಅಮೃತಕ್ಕೆ ಸಲ್ಲದು.
ನಾವೇಕಯ್ಯಾ ನಿಮಗೆಂದು
ಸೊಡ್ಡಳನ ಶರಣರು ನಿರೂಪವ ಕೊಡಲು,
ಎನ್ನ ಪರಮಾರಾಧ್ಯರು ಸಂಗನಬಸವಣ್ಣ ತಿಳುಹುತ್ತಿರ್ದನು. ॥೭೭॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

೧೨೩೯

ಎಡದ ಪಾದದಲೊದ್ದರೆ ಬಲದ ಪಾದವ ಹಿಡಿವೆ.
ಬಲದ ಪಾದದಲೊದ್ದರೆ ಎಡದ ಪಾದವ ಹಿಡಿವೆ.
ತ್ರಾಹಿ ತ್ರಾಹಿ! ತಪ್ಪೆನ್ನದು, ಕ್ಷಮೆ ನಿಮ್ಮದು.
ಕೂಡಲಸಂಗಮದೇವಾ,
ನಿಮ್ಮ ಕರುಣದ ಕಂದ ನಾನು. ॥೭೮॥

ಮತ್ತಂ,

೧೨೪೦

ಎನ್ನಂತರಂಗ ನೀವಯ್ಯಾ, ಎನ್ನ ಬಹಿರಂಗ ನೀವಯ್ಯಾ.
ಎನ್ನಱಿವು ನೀವಯ್ಯಾ, ಎನ್ನ ಮಱಹು ನೀವಯ್ಯಾ.
ಎನ್ನ ಭಕ್ತಿ ನೀವಯ್ಯಾ, ಎನ್ನ ಯುಕ್ತಿ ನೀವಯ್ಯಾ.
ಎನ್ನ ಆಲಸ್ಯ ನೀವಯ್ಯಾ, ಎನ್ನ ಪರವಶ ನೀವಯ್ಯಾ.
ಸಮುದ್ರವ ಹೊಕ್ಕ ಕಾಲುವಳ್ಳದಲ್ಲಿ
ಕೊಱತೆಯನಱಸುವುದೆ ಆ ಸಮುದ್ರವು?
ಎನ್ನ ಲೇಸು ಹೊಲ್ಲೆಹವೆಂಬುದು ನಿಮ್ಮದೆಂಬುದ ನೀವೆ ಬಲ್ಲಿರಿ.
ಇದಕ್ಕೆ ನಿಮ್ಮ ಪಾದವೆ ಸಾಕ್ಷಿ, ಎನ್ನ ಮನವೆ ಸಾಕ್ಷಿ
ಕೂಡಲಸಂಗಮದೇವಾ. ॥೭೯॥

ಇದಕ್ಕೆ ಚೆನ್ನಬಸವರಾಜದೇವರ ವಚನ:

೧೨೪೧

ಆರಿಗೆ ಮಾಡಬಹುದಯ್ಯಾ ಸದ್‌ಭಕ್ತಿಯೆಂಬುದನು?
ಆರಿಗೆ ತಿಳಿವುದಯ್ಯಾ. ಶಿವಜ್ಞಾನದ ಸೆಱಗು?
ನಿರಾಳದ ಸಿಂಹಾಸನದ ಮೇಲೆ ನಿರವಯ ಬಂದೆಱಗಿದರೆ,
ಆ ನಿರಾಕಾರ ಪದಾರ್ಥವನರ್ಪಿಸಿ ಪ್ರಸನ್ನವ ಹಡೆದ.
ಸಾಕಾರ ಸಿಂಹಾಸನದ ಮೇಲೆ ಮೂರ್ತಿಗೊಂಡ
ಸಂಗಮನಾಥ ಮುನಿದೆದ್ದು ಹೋದರೆ,
ತನುವಿನೊಳಗೆ ತನುವಾಗಿ ಹೊಕ್ಕು,
ಮನದೊಳಗೆ ಮನವಾಗಿ, ಭಾವದೊಳಗೆ ಭಾವವಾಗಿ ವೇಧಿಸಿ,
ಶಿವಶರಣರ ಮನದ ಕಂದುಕಲೆಯ ಕಳೆದು,
ತನ್ನತ್ತ ತಿರುಗಿಸಿ ಪ್ರಸನ್ನತೆವಡೆದ.
ಇಂತೀ ಉಭಯ ನಿರ್ಣಯದಲ್ಲಿ ನಿಸ್ಸೀಮನಾದ
ಕೂಡಲಚೆನ್ನಸಂಗಮದೇವರ ಶರಣ ಬಸವಣ್ಣಂಗೆ
ತ್ರಿಜಗದೊಳಗೆ ಆರನೂ ಸರಿಗಾಣೆನು. ॥೮೦॥

ಮತ್ತಂ,

೧೨೪೨

ರಣವನರ್ಚಿಸಿ ಭೂತಕ್ಕೆ ಬಲಿಯ ಕೊಡುವ
ಕಲಿಯ ಮನದ ಮೊನೆಯ ಕೊನೆಯ ಮೇಲೆ ಇಪ್ಪಂತೆ,
ಸಮಯಾಚಾರವ ಮಾಡಬೇಕು.
ಮಾಡಿಹೆನೆಂಬುದು ಸಾಮಾನ್ಯವೆ?
ಇದು ಕಾರಣ ಕೂಡಲಚೆನ್ನಸಂಗಯ್ಯಾ,
ಸಮಯಭಕ್ತಿ ಸಂದಿತ್ತು ಸಂಗನಬಸವಣ್ಣಂಗೆ. ॥೮೧॥

ಇದಕ್ಕೆ ಬಸವರಾಜದೇವರು ಬೇಡಿಕೊಳ್ಳಲು, ಮಹಾಗಣಂಗಳು ಮುನಿಸು ತಿಳಿದು ಪ್ರಸನ್ನರಾದ ಪ್ರಸ್ತಾವದಲ್ಲಿ ಚಿಕ್ಕದಣ್ಣಾಯಕರ ವಚನ:

೧೨೪೩

ಭಕ್ತಿಯುಕ್ತಿಯ ಹೊಲಬ
ಮೂಱು ಲೋಕದೊಳಗೆ ಬಲ್ಲವರನಾರನೂ ಕಾಣೆ.
ಲಿಂಗದಲ್ಲಿ ಭಕ್ತಿಯ ಮಾಡಿದರೆ ಭವ ಹಱಿಯದೆಂದು,
ಜಂಗಮಮುಖ ಲಿಂಗವೆಂದಱಿದು,
ಅರ್ಚಿಸಿ ಪೂಜಿಸಿ ದಾಸೋಹವ ಮಾಡಿ,
ಪ್ರಸನ್ನತೆಯ ಹಡೆದ ಬಸವಣ್ಣನು.
ಆ ಪ್ರಸನ್ನತೆಯ ರುಚಿಯನುಪಮಿಸಬಾರದು.

ಆ ಬಸವಣ್ಣನ ಭಕ್ತಿ ಪ್ರಸಾದವ ಕೊಂಡು ನಾನು ಬದುಕಿದೆನು.
ಆ ಬಸವಣ್ಣನ ಪ್ರಸಾದವ ಕೊಂಡು ಅಲ್ಲಮಪ್ರಭು ತೃಪ್ತನಾದನು.
ಅಲ್ಲಮಪ್ರಭು ಕೊಂಡ ಪ್ರಸಾದದ ತೃಪ್ತಿ
ಲಕ್ಷದ ಮೇಲೆ ತೊಂಬತ್ತಾಱುಸಾವಿರ ಜಂಗಮಕ್ಕೆ ತೃಪ್ತಿಯಾಯಿತ್ತು.
ಆ ಲಕ್ಷದ ಮೇಲೆ ತೊಂಬತ್ತಾಱುಸಾವಿರ ಜಂಗಮ ತೃಪ್ತಿಯಾದಲ್ಲಿ
ಸಚರಾಚರವೆಲ್ಲಾ ಕೂಡೆ ತೃಪ್ತಿಯಾಯಿತ್ತೆಂದರೆ,
ಇಲ್ಲವೆಂದು ಬಿಜ್ಜಳ ತರ್ಕಿಸಲು,
ಕಪ್ಪೆಯ ಒಡಲೊಳಗೆ
ಪ್ರಭುವಿನ ಪ್ರಸಾದವ ತೋಱಿನೇ ಬಸವಣ್ಣನು?
ಇದು ಕಾರಣ, ಕೂಡಲಚೆನ್ನಸಂಗಮದೇವರಲ್ಲಿ
ಬಸವಣ್ಣ ಪ್ರಭುದೇವರ ಪ್ರಸಾದದ ಘನವು
ತ್ರೈಲೋಕದೊಳಗೆ ಬೆಳವಿಗೆಯಾಯಿತ್ತು. ॥೮೨॥

ಇದಕ್ಕೆ ಪ್ರಭುದೇವರ ವಚನ:

೧೨೪೪

ಲಿಂಗಜಂಗಮವೆಂಬ ಸಕೀಲವನಱಿದು,
ಲಿಂಗಾರ್ಚನೆ ಜಂಗಮಾರ್ಚನೆಯ ಮಾಡಲು,
ಆ ಲಿಂಗವೆ ಜಂಗಮದೊಳಗಡಗಿ,
ಆ ಜಂಗಮವೆ ಪರಾಪರವೆಂದಱಿದು ತೋಱಿದ.
ಆ ಜಂಗಮವೆಂಬ ಘನವು ನಿಮ್ಮೊಳಗಡಗಿದ ಕಾರಣ
ಗೊಹೇಶ್ವರಾ, ನಿಮ್ಮ ಅನುವನಱಿದು
ಸಂಗನಬಸವಣ್ಣನು ತನ್ನ ಪ್ರಸಾದವನಿಕ್ಕಿದರೆ,
ನಿಮ್ಮ ಪ್ರಮಥರೆಲ್ಲರೂ ಜಯ ಜಯಾ ಎನುತಿರ್ದ ಕಾರಣ,
ನಾನು ಬಸವಣ್ಣಂಗೆ ನಮೋ ನಮೋ ಎನುತಿರ್ದೆನು. ॥೮೩॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

೧೨೪೫

ತೊಱೆಯುದಕವ ಕಱೆಯುಂಡು ತೃಪ್ತವಾಗಲು,
ಆ ಕೆಱೆಯುದಕವ ಹಲವು ಕೆಲವು
ಸ್ಥಾವರ ಜಂಗಮಂಗಳುಂಡು ತೃಪ್ತಿವಡೆದಂತೆ,
ಪ್ರಭುದೇವರ ತೃಪ್ತಿ ಅಸಂಖ್ಯಾತಮಹಾಗಣಂಗಳೆಲ್ಲಕ್ಕೆ
ತೃಪ್ತಿಯಾಯಿತ್ತು ನೋಡಾ.
ಬಸಿಱುವೆಂಡತಿಯುಂಡಲ್ಲಿ ಒಡಲ ಶಿಶು ತೃಪ್ತಿಯಾದಂತೆ,
ಸಚರಾಚರವೆಲ್ಲವೂ ತೃಪ್ತಿಯಾದವು ನೋಡಾ.

ಕೂಡಲಸಂಗಮದೇವಾ,
ನಿಮ್ಮ ಶರಣ ಪ್ರಭುದೇವರ ಪ್ರಸಾದದ ಮಹಿಮೆಗೆ
ನಮೋ ನಮೋ ಎಂಬೆನು! ॥೮೪॥

ಇದಕ್ಕೆ ಪ್ರಭುದೇವರು ಬಸವಣ್ಣನ ಸ್ತೋತ್ರವ ಮಾಡುವ ವಚನ:

೧೨೪೬

ಲಿಂಗದ ಪೂರ್ವಾಶ್ರಯವ ಕಳೆಯಲೆಂದು ಲಿಂಗಪ್ರಾಣಿಯಾದ. ಲಾಂಛನದ ಪೂರ್ವಾಶ್ರಯವ
ಕಳೆಯಲೆಂದು ಜಂಗಮಪ್ರಾಣಿಯಾದ.
ಪ್ರಸಾದದ ಪೂರ್ವಾಶ್ರಯವ ಕಳೆಯಲೆಂದು ಮಹಾಪ್ರಸಾದಿಯಾದ.
ಇಂತೀ ತ್ರಿವಿಧದ ಪೂರ್ವಾಶ್ರಯವ ಕಳೆಯಲೆಂದು
ಬಸವಣ್ಣನು ಮರ್ತ್ಯಕ್ಕೆ ಬಂದನು ಕಾಣಾ ಗೊಹೇಶ್ವರಾ. ॥೮೫॥

ಮತ್ತಂ,

೧೨೪೭

ಆದಿಯಾಧಾರಮಂ ಮಾಡಿ,
ಅಜಕೋಟಿ ಬ್ರಹ್ಮಾಂಡಂಗಳಂ ಮಾಡಿ,
ಈರೇಳು ಭುವನಂಗಳಂ ಮಾಡಿ ಹರ ಲೀಲೆಯಾಡುವಲ್ಲಿ,
ಹರಿವಿರಿಂಚಿಗಳ ಸುರಾಸುರರ ಶಿರೋಮಾಲೆ ಇಕ್ಕಿಕೊಂಡಾಡುವಲ್ಲಿ,
ಪಾದ ರಸಾತಳಕ್ಕಿಳಿದು ಭುವನ ಜಲಮಯವಾದಲ್ಲಿ,
ಹಸ್ತ ಮುಕುಟ ತಾಗಿ ಸಕಲ ಲೋಕಂಗಳೆಲ್ಲವೂ ನಿರವಯಲಾದಲ್ಲಿ,
ನಿಜದ ಬೆಳಗಿನೊಳಗೆ ಸೊಹಂ ಎನಲು,
ವಿಚಾರದಿಂದ ಘನಮನವಾದಂದು
ಗೊಹೇಶ್ವರಾ, ನೀನೆ ಲಿಂಗ, ನಾನೆ ಜಂಗಮ, ಬಸವಣ್ಣನೆ ಭಕ್ತ. ॥೮೬॥

ಮತ್ತಂ,

೧೨೪೮

ಭೂವಳಯ ಮಧ್ಯದಲ್ಲಿ
ಎಂಟೆಸಳ ಮೇಲೆ ಸುಳಿದಾಡುವನ ಎಚ್ಚಱಲೀಯ.
ಕಂಟಕ ವಿರಹಿತ ನಂಟರಿಗೆ ವಿರೋಧಿ.
ಇಳೆಯ ಗುಣ ವಿರಹಿತನು.
ಗಗನಕಮಲಕುಸುಮ ಪರಿಣಾಮದೊಳಗೆ ಪರಿಣಾಮಿ ನೋಡಾ.
ತಾನೆಂಬುದ ಹುಸಿಮಾಡಿ,
ಲಿಂಗಜಂಗಮ ದಿಟವೆಂದು ಸಕಲ ಸುಖಭೋಗಂಗಳನರ್ಪಿಸಿದ.
ಗೊಹೇಶ್ವರಾ, ನಿಮ್ಮ ಶರಣ ಬಸವಣ್ಣಂಗಲ್ಲದೆ
ಇನ್ನಾರಿಗೆಯೂ ಅಳವಡದು. ॥೮೭॥

ಮತ್ತಂ,

೧೨೪೯

ಹಾಳುಮನೆಯ ಹೊಸ್ತಿಲಲ್ಲಿ ನಿಂದಿದ್ದು,
ಆರೂ ಬಾರದ ಬಟ್ಟೆಯ ನೋಡುತ್ತ,
ಆರಿಂಗಾಗದಿರವು ನಮಗಾಯಿತ್ತೆನುತಲಿ,
ಆರಯ್ಯ ಬಂದವರಿಗೆ ಶಂಕೆಯಿಲ್ಲ?
ಕಾಲಿಲ್ಲದೆ ಬಂದವರು, ಕೈಯಿಲ್ಲದೆ ಕೊಂಬವರು,
ಮೇಲು ತಲೆ ಇದ್ದವರು ನುಡಿವಾಗ,
ಮಾರಾರಿಯ ಬೆಳಸನಾರಯ್ಯಾ ಸಂತವಿಡುವರೆಂದರೆ,
ಸಾರಾಯಂಗಲ್ಲದೆ ಮತ್ತಿನ್ನಾರಿಗಹುದು ಹೇಳಾ?
ಸಂತೆಯ ಗುಡಿಸಿಲ ಸೂಳೆಗೆ
ಕೊಂತವ ಕೊಂಡರೆ ಎಂತು ಬಚ್ಚಿಡಬಹುದು?
ಮರುಳುತನವು! ಶಂಕಿಸಿತು ಎನ್ನ ಮನವು,
ಹಿಂದು ಮುಂದು ಕೂಡುವರಿಲ್ಲೆಂದು ಉಮ್ಮಳದಲ್ಲಿ.
ಗೊಹೇಶ್ವರಾ, ನಿಮ್ಮ ಶರಣ ಬಸವಣ್ಣನ ಪ್ರಸಾದವ ಕೊಂಡು
ನಿರುಪಮ ಸುಖಿಯಾದೆನು. ॥೮೮॥

ಮತ್ತಂ,

೧೨೫೦

ಆದಿಯಲ್ಲಿ ಬಸವಣ್ಣನುತ್ಪತ್ಯವಾದ ಕಾರಣ,
ನಾಗಲೋಕದ ನಾಗಗಣಂಗಳಿಗೆ ಬಸವಣ್ಣನ ಪ್ರಸಾದ,
ಮರ್ತ್ಯಲೋಕದ ಮಹಾಗಣಂಗಳಿಗೆ ಬಸವಣ್ಣನ ಪ್ರಸಾದ,
ದೇವಲೋಕದ ದೇವಗಣಂಗಳಿಗೆ ಬಸವಣ್ಣನ ಪ್ರಸಾದ
ಗೊಹೇಶ್ವರಾ ನಿಮ್ಮಾಣೆ,
ಎನಗೂ ನಿನಗೂ ಬಸವಣ್ಣನ ಪ್ರಸಾದ. ॥೮೯॥

ಮತ್ತಂ,

೧೨೫೧

ಎತ್ತಿದ ಮಣಿಮಕುಟದ ಮೇಲಣ
ಸುತ್ತಿದ ನಾಗಭೂಷಣದ ಪೆಡೆಯೊಂದು ಕೋಟಿ.
ಶಿವನಿಪ್ಪ ನೆಲೆಯನಾರೂ ಅಜಿಯರಯ್ಯಾ.
ಇಕ್ಕಿದ ಕರೋಟಿಮಾಲೆಯೊಳಗಿಪ್ಪ ರುದ್ರರು ಕೋಟಿ.
ಶಿವನಿಪ್ಪ ನೆಲೆಯನಾರೂ ಅಜಿಯರಯ್ಯಾ.
ಇಕ್ಕಿದ ರುಂಡಮಾಲೆಯೊಳಗಿಪ್ಪ ಮುಂಡಧಾರಿಗಳು ಕೋಟಿ.

ಶಿವನಿಪ್ಪ ನೆಲೆಯನಾರೂ ಅಱಿಯರಯ್ಯಾ.
ಖಂಡಕಪಾಲವ ಧರಿಸಿಪ್ಪ ಮುಂಡಧಾರಿಗಳೊಂದು ಕೋಟಿ.
ಶಿವನಿಪ್ಪ ನೆಲೆಯನಾರೂ ಅಱಿಯರಯ್ಯಾ.
ಎಲೆ ಗೊಹೇಶ್ವರಾ,
ನಿಮ್ಮ ಪೂರ್ವಾಚಾರಿ ಸಂಗನಬಸವಣ್ಣನೊಬ್ಬನೆ ಬಲ್ಲನು. ॥೯೦॥

ಮತ್ತಂ,

೧೨೫೨

ಕಡುಜಲಕ್ಕೆ ಇದಿರಾಗಿ ಹರಿವ ಸ್ವಾಮಿಯ ಬರವ ಕಂಡು
ಬಿಡದೆ ಬೆಂಬತ್ತಿಸುವ ಪರಿಯ ನೋಡಾ!
ನಡೆ ನುಡಿ ಚೈತನ್ಯ ಒಡಲನೊಂದು ಮಾಡಿ,
ಬಿಡದೆ ವೇಧಿಸುವ ಬೆಡಗ ಕಂಡೆನಯ್ಯಾ!
ಕಡೆಗೆ ಸೂಸದ ದೃಷ್ಟಿ, ಹಿಡಿದು ತೊಲಗದ ಹಸ್ತ,
ಬಿಡಬೇಡ ತನಗೆನ್ನದ ಸಜ್ಜನ ಮಡದಿ,
ತನ್ನ ಗಂಡನ ಅಡಗಿ ಕೂಡುವ ಭೇದ
ನಡುವಿರುಳು ಕೂಡಿ ನಿಮಿರಿ ಬೆಳಗಾಯಿತ್ತು.
ಮಾಡಿ ನೀಡುವವನ ಕಂಡು,
ನಾಡು ಬೀಡೆಲ್ಲಾ ನೆರೆದು ಕು[1]ಡಕ್ಕೆಯಲ್ಲಿ ಕೊಟ್ಟರೆ,
ತೃಪ್ತರಾಗಿ, ಮಾಡುವರ ಹರಸುವರು;
ನೋಡುವರು ಮನದಣಿಯೆ; ಕೊಡುವರು ಕೋಟಿ,
ಸಹಜ, ಒಂದೆ ಎಂದು! ಜೋಡ ತೊಡೆದಾತನ
ಮೈಯಲ್ಲಿ ಕೂಡೆ ಘಾಯವಿಲ್ಲದುದ ಕಂಡು ನೋಡಿರೆ.
ಮಸೆ ಮುಟ್ಟದ ಮಹಂತನ ಬೇಡುವೆನಾತನ ಕರುಣವನು
ಪಾದವ ನೊಸಲಲ್ಲಿ ಸೂಡುವೆ.
ಗೊಹೇಶ್ವರನ ಶರಣ ಬಸವಣ್ಣಂಗೆ
ನಮೋ ನಮೋ ಎಂಬೆನು. ॥೯೧॥

ಮತ್ತಂ,

೧೨೫೩

ಯುಗದ ಉತ್ಸಾಹವ ನೋಡಿರೆ.
ಪಂಚಶಕ್ತಿಗಳಿಗೆ ಪಂಚ ಪ್ರಧಾನರು.
ಅವರಾಗುಹೋಗನಾ ಶರಣನೆ ಬಲ್ಲ.

---

೧ ಕೊ (ಮು)

ಆ ಶರಣನು ತಾನು ತಾನಾಗಿ,
ಆಱು ದರುಶನಕ್ಕೆ ಯಾಚಕನಲ್ಲ.
ಮೂಱು ದರುಶನಕ್ಕೆ ಮುಯ್ಯಾನುವನಲ್ಲ
ವೇದ ಶಾಸ್ತ್ರ ಆಗಮ ಪುರಾಣ ಛಂದಸ್ಸು
ನಿಘಂಟುಗಳೆಂಬುವಕ್ಕೆ ಭೇದಕನಲ್ಲ.
ಅದೆಂತೆಂದಡೆ:
ಅವಱಂಗದ ಮೇಲೆ ಗುರುವಿಲ್ಲ,
ಲಿಂಗವಿಲ್ಲ, ಜಂಗಮವಿಲ್ಲ,
ಪ್ರಸಾದವಿಲ್ಲ, ಪಾದೋದಕವಿಲ್ಲದ ಭಾಷೆ.
ಆ ಗುರು ಲಿಂಗ ಜಂಗಮ ಪ್ರಸಾದ ಪಾದೋದಕ
ಏಕಾರ್ಥವಾದ ಕಾರಣ,
ಪ್ರಾಣಿಗಳೆಲ್ಲವೂ ಪ್ರಣಮಂಗೈವುತ್ತಿರ್ದವು.
ಜೀವಗಳೆಲ್ಲವೂ ಜಯ ಜೀಯಾ ಎನುತ್ತಿರ್ದವು.
ಆತ್ಮಂಗಳೆಲ್ಲಾ ಅನುವ ಬೇಡುತ್ತಿರ್ದವು.
ಗೊಹೇಶ್ವರಾ, ಸಂಗನಬಸವಣ್ಣನ ಪಾದಕ್ಕೆ
ಈರೇಳು ಲೋಕವೆಲ್ಲವೂ ಜಯ ಎನುತ್ತಿರ್ದವು! ॥೯೨॥

ಇದಕ್ಕೆ ಬಸವರಾಜದೇವರು ಪ್ರಭುದೇವರ ಸ್ತೋತ್ರವ ಮಾಡುವ ವಚನ:

೧೨೫೪

ಹೊನ್ನಿನ ಆಪ್ಯಾಯನಕ್ಕೆ ಬೋಳಾದವನಲ್ಲ.
ಮಣ್ಣಿನ ಆಪ್ಯಾಯನಕ್ಕೆ ಬೋಳಾದವನಲ್ಲ.
ಹೆಣ್ಣಿನ ಆಪ್ಯಾಯನಕ್ಕೆ ಬೋಳಾದವನಲ್ಲ.
ಕೂಡಲಸಂಗಮದೇವರಲ್ಲಿ
ಎನಗಾರೂ ಇಲ್ಲವೆಂದು ಬೋಳಾದನೆನ್ನ ಪ್ರಭುದೇವರು. ॥೯೩॥

ಮತ್ತಂ,

೧೨೫೫

ಶ್ರೋತ್ರದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು.
ತ್ವಕ್ಕಿನಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು.
ನಾಸಿಕದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು.
ನೇತ್ರದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು.
ಜಿಹ್ವೆಯಲ್ಲಿ ಬ್ರಹ್ಮಚಾರಿಯಾಗಿ, ಕೂಡಲಸಂಗಮದೇವರಲ್ಲಿ
ಎನ್ನನಾಗು ಮಾಡಲಿಕ್ಕೆ ಬ್ರಹ್ಮಚಾರಿಯಾದರು ಪ್ರಭುದೇವರು. ॥೯೪॥

ಮತ್ತಂ,

೧೨೫೬

ಬಸುಱೆ ಬಾಯಾಗಿ, ಬಾಯೆ ಬಸುಱಾಗಿ ಇಪ್ಪುದ ತೊಡೆದ.
ಕಣ್ಣೆ ತಲೆಯಾಗಿ, ತಲೆಯೆ ಕಣ್ಣಾಗಿರಿಸಿದ.
ಕಾಲೆ ಕೈಯಾಗಿ, ಕೈಯೆ ಕಾಲಾಗಿ ನಡೆಸಿದ.
ನೆಳಲ ಸುಟ್ಟು ಸೀರೆಯನೆನಗೆ ಉಡುಗೊಱೆಯ ಕೊಟ್ಟನು.
ಮಥನವಿಲ್ಲದ ಸಂಗಸುಖವನೆನಗೆ ತೋಱಿಸಿದನು.
ಕೂಡಲಸಂಗಮದೇವಾ, ಪ್ರಭುವಿನ ಶ್ರೀಪಾದಕ್ಕೆ ಶರಣೆನುತ್ತಿರ್ದೆನು. ॥೯೫॥

ಮತ್ತಂ,

೧೨೫೭

ವೀರದನುಜರೆಲ್ಲಾ ಧಾರುಣಿ ಎಂಬುದಱೊಳಗೆ
ಸಾಗರವಾಗಿದ್ದುದನಾರೂ ಅಱಿಯರಲ್ಲಾ.
ದ್ವಾರಾವತಿಯ ಪುರದೊಳಗೆ ಪರವು ಬಂದಿದ್ದರೆ
ಶರೀರ ಸಂಬಂಧವ ಮಾಡಲಱಿಯರಲ್ಲಾ.
ಕರಗಸವ ಕಳೆದುಕೊಂಡು, ಪರಶುರಾಮನ ಗೆಲಿದು,
ಸುರರೊಳಗೆ ಸುಳಿದಾಡಲಱಿಯರಲ್ಲಾ.
ವಾರುಧಿಯನೇಱಿಕೊಂಡು, ಮರಣವೆಂಬುದ ನಿಲಿಸಿ,
ತ್ರಿಪುರವ ಮೂರ್ತಿಗೊಳಿಸಲಱಿಯರಲ್ಲಾ.
ಮೇರುವೆಂಬುದ ಹೊಕ್ಕು, ನೂಱೆಂಟನೆಣಿಸಿಕೊಂಡು,
ನಿರಾಕಾರದಲಡಗುವರಿನ್ನಾರು ಹೇಳಾ?
ಸಾಸಿರದ ಮೇಲೆ ನೂಱೆಂಬತ್ತೆಂಟು ರಾಶಿ
ಪರುಷವೇಧಿಗಳಾಗಲಱಿಯರಲ್ಲಾ. ಕೂಡಲಸಂಗನ ಶರಣರ ಸಂಬಂಧವು
ಪ್ರಭುವಿಂಗಲ್ಲದೆ ಮತ್ತಾರಿಗೆಯೂ ಅಳವಡದು. ॥೯೬॥

ಮತ್ತಂ,

೧೨೫೮

ನೀಲದ ಮಣಿಯೊಂದು ಮಾಣಿಕವ ನುಂಗಿದರೆ,
ವಜ್ರ ಬಂದು ಅದ ಬೇಡವೆಂದುಗುಳಿಸಿತ್ತು ನೋಡಾ!
ಅಡಗಿರ್ದ ಮಾಣಿಕ್ಯ ನೀಲದ ತಲೆಯ ಮೆಟ್ಟಿ
ಆನಂದನಾಟ್ಯವನಾಡುತ್ತಿದ್ದಿತ್ತು.
ಅಂಬರದೊಳಗಣ ಮುಗ್ಧೆ
ಕಂಗಳ ಮುತ್ತಿನ ಮಣಿಯ
ಮಥನವಿಲ್ಲದೆ ನುಂಗಿ ಉಗುಳುತ್ತಿದ್ದಳು.
ಲಿಂಗಜಂಗಮವೆಂಬುದ ಇಂದಱಿದು ಸುಖಿಯಾದೆನು.

ಕೂಡಲಸಂಗಮದೇವರಲ್ಲಿ ಪ್ರಭುವಿನ ಕೃಪೆಯಿಂದ
ನಾನು ಬದುಕಿದೆನು. ॥೯೭॥

ಮತ್ತಂ,

೧೨೫೯

ನೀರ ಒರಳ ಮಾಡಿ, ನೆಳಲ ಒನಕೆಯ ಮಾಡಿ,
ಆಕಾರವಿಲ್ಲದಕ್ಕಿಯ ಥಳಿಸುತ್ತಿರಲು,
ಮೇರುಗಿರಿಯಾಕಳ ಕಱೆದು,
ಕ್ಷೀರದಲ್ಲಿ ಅಡಿಗೆಯ ಮಾಡಿ,
ನಾರಿಯ ಬಸುಱೊಳಗೆ ಗಂಡ ಬಂದು ಕುಳ್ಳಿರಲು,
ಮಾಡಿದಡಿಗೆಯ ಮನವುಂಡು ಹೋಗಲು,
ಮೇಲು ಕೈತಲೆ ಹಿಡಿದು ಸಂತೋಷದಿಂದ
ಪ್ರಾಣಸಖಿ ತನ್ನ ಗಂಡನಿಗೆ ನೀಡುತ್ತಿರಲು,
ಅರಳ ಹುಟ್ಟಿಗೆಯಲ್ಲಿ ಹೊರಳಿ ಕೂಡುವ ಭೇದ,
ಮರಳಿ ಕೂಡಲಿಕೆಂತು ರಪಣವಿಲ್ಲ.
ಕೆರಳಿ ಮುನಿದು ಘುಡುಘುಡಿಸಿ ಘರ್ಜಿಸಲೊಡನೆ
ತೆರಳಲಮ್ಮದೆ ಅಂಜಿ ಒಳಗಡಗಿದ.
ಶರಣ ಸತಿ, ಲಿಂಗ ಪತಿಯೆಂಬ ಭಾಷೆ.
ನೀವು ಹರನ ಬಟ್ಟೆಯ ನೋಡಿ ಸುಯ್ಯಬೇಡ.
ಜನನಮರಣ ವಿರಹಿತ ಕೂಡಲಸಂಗನ ಅನುಭಾವ
ಪ್ರಭುದೇವನ ಶ್ರೀಪಾದದೊಳಗಿದ್ದು ಸುಖಿಯಾದೆನು. ॥೯೮॥

ಪ್ರಭುದೇವರು ಚಿಕ್ಕದಣ್ಣಾಯಕರ ಹೊಗಳಿದ ವಚನ:

೧೨೬೦

ಬಸವಣ್ಣಾ, ನಿನ್ನ ಹೊಗಳತೆ ಅಂತಿರಲಿ.
ಎನ್ನ ಹೊಗಳತೆ ಅಂತಿರಲಿ.
ಗುರುವಾಗಬಹುದು, ಲಿಂಗವಾಗಬಹುದು,
ಜಂಗಮವಾಗಬಹುದು.
ಇಂತೀ ತ್ರಿವಿಧವೂ ಆಗಬಹುದು.
ನಿನ್ನ ಆಚಾರಕ್ಕೆ ಪ್ರಾಣವಾಗಿ,
ಎನ್ನ ಜ್ಞಾನಕ್ಕೆ ಆಚಾರವಾಗಿ,
ಈ ಉಭಯಸಂಗದ ಸುಖದ ಪ್ರಸನ್ನಕ್ಕೆ
ಪರಿಣಾಮಪ್ರಸಾದಿಯಾಗಿ ಬಂದ ಘನಮಹಿಮನು,
ಗೊಹೇಶ್ವರಲಿಂಗದಲ್ಲಿ
ಚೆನ್ನಬಸವನಾಗಬಾರದು ಕಾಣಾ ಸಂಗನಬಸವಣ್ಣಾ. ॥೯೯॥

ಮತ್ತಂ,

೧೨೬೧

ಪ್ರಕೃತ್ತಿಗುಣವುಳ್ಳನ್ನಕ್ಕರ ಭಕ್ತನಲ್ಲ.
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವುಳ್ಳನ್ನಕ್ಕರ ಶರಣನಲ್ಲ.
ಹಸಿವು ತೃಷೆ ನಿದ್ರೆ ವಿಷಯವುಳ್ಳನ್ನಕ್ಕರ ಪ್ರಸಾದಿಯಲ್ಲ.
ಆಚಾರದಲ್ಲಿ ಅನುಭಾವಿ, ಪ್ರಸಾದದಲ್ಲಿ ಪರಿಣಾಮಿ.
ಗೊಹೇಶ್ವರಲಿಂಗದಲ್ಲಿ ಚೆನ್ನಬಸವಣ್ಣನೆಂಬ ಪ್ರಸಾದಿಗೆ
ನಮೋ ನಮೋ ಎಂಬೆನು. ॥೧೦೦॥

ಮತ್ತಂ,

೧೨೬೨

ಆದಿವಿಡಿದು ಬಹಾತ ಭಕ್ತನಲ್ಲ.
ಅನಾದಿವಿಡಿದು ಬಹಾತ ಭಕ್ತನಲ್ಲ.
ಸ್ಥಲವಿಡಿದು ಬಹಾತ ಭಕ್ತನಲ್ಲ.
ಲಿಂಗವಿಡಿದು ಬಹಾತ ಭಕ್ತನಲ್ಲ.
ಶೂನ್ಯಕಾಯ ನಿಶ್ಶೂನ್ಯಂಗಿಕ್ಕಿ
ಪ್ರಾಣಲಿಂಗ ಪ್ರಸಾದವ ಕೊಳಬಲ್ಲನು.
ಗೊಹೇಶ್ವರಲಿಂಗದಲ್ಲಿ ಚೆನ್ನಬಸವಣ್ಣಂಗೆ
ನಮೋ ನಮೋ ಎಂಬೆನು. ॥೧೦೧॥

ಮತ್ತಂ,

೧೨೬೩

ಸದ್ಯೋಜಾತ ಬದ್ಧಜ್ಞಾನಿ.
ವಾಮದೇವನಾತುರಜ್ಞಾನಿ.
ಅಘೋರ ಕೋಪಜ್ಞಾನಿ.
ತತ್ಪುರುಷ ಕ್ಷಣಿಕಜ್ಞಾನಿ.
ಈಶಾನನತೀತಜ್ಞಾನಿ.
ಈ ಪರಿಯಲ್ಲ ನೋಡಾ!
ಗೊಹೇಶ್ವರಲಿಂಗಲ್ಲಿ ಅವಿರಳಜ್ಞಾನಿ ಚೆನ್ನಬಸವಣ್ಣನ ಶ್ರೀಪಾದಕ್ಕೆ
ನಮೋ ನಮೋ ಎಂಬೆನು. ॥೧೦೨॥

ಮತ್ತಂ,

೧೨೬೪

ವೀರಧಾರುಣಿಯೊಳಗೆ ನಾರಿ ಶೃಂಗಾರವ ಮಾಡಿ,
ಈರೇಳು ಭುವನವನಮಲೋಕ್ಯವ ಮಾಡಿ,

ಬಿಂದುಶಕ್ತಿಯ ಭೇದ ಸಂಚಯೋಗದ ಸುಖವ ತಂದು
ಮೂರ್ತಿಗೊಳಿಸಿದವರಾರು?
ಒಂದೆರಡರ ನುಡಿಯ ಮತ್ತೊಂದು ಗ್ರಹಿಸಿತ್ತ ಕಂಡೆ.
ಬಿಂದುವಿನ ರಸದ ಪರೀಕ್ಷೆಯ ಭೇದವ,
ಚಂದ್ರಕಾಂತದ ಗಿರಿಗೆ ಅರುಣ ಚಂದ್ರನೊಡನೆ
ಇಂಬಿನಲ್ಲಿಪ್ಪ ಪರಿಯ ನೋಡಾ!
ಅಂಗೈಯ ತಳದೊಳು ಮೊಲೆ,
ಕಂಗಳಲ್ಲಿ ಉರ ಸನ್ನೆ,
ಇಂಬಿನಲ್ಲಿ ನೆರೆವ ಸುಖ.
ಅಂದಿನಾದಿಯ ಪ್ರತಿಬಿಂಬ ಇಂದೆನಗೆ ತೋಱಿತ್ತು.
ಗೊಹೇಶ್ವರನ ಶರಣ ಚೆನ್ನಬಸವಣ್ಣಂಗೆ
ನಮೋ ನಮೋ ಎನುತಿರ್ದೆನು ॥೧೦೩॥

ಮತ್ತಂ,

೧೨೬೫

೧ವಸುಧೆಯ೧ ಮುಟ್ಟದೆ, ರಸವನೊಸರಲೀಯದೆ,
ರಸದಲ್ಲಿ ಕಟ್ಟಬಲ್ಲರೆ ಅದು ಯೋಗ.
ಹೊಱಗಿದ್ದ ರಸವ ಕಟ್ಟಬಲ್ಲೆವೆಂಬರೆಲ್ಲಾ
ಅಂಜನಸಿದ್ಧರಾಗಿ ಹೋದರು.
ಸುಷುಮ್ನ ಸೂಕ್ಷ್ಮ ನಿಧಿಯ ಮಧ್ಯದ ಕೂಪಕಂಭದ ಮೇಲೆ
ಪಂಚೇಂದ್ರಿಯವೆಂಬ ಗುಹ್ಯವ ತೊಡೆದು ರಸವ ಕಟ್ಟಬಲ್ಲ
ಗೊಹೇಶ್ವರನ ಶರಣ ಚೆನ್ನಬಸವಣ್ಣಂಗೆ
ನಮೋ ನಮೋ ಎನುತಿರ್ದೆನು. ॥೧೦೪॥

ಚೆನ್ನಬಸವಣ್ಣನು ಪ್ರಭುದೇವರ ಹೊಗಳುವ ವಚನ:

೧೨೬೬

ರೂಪಿಲ್ಲದ ರೂಪು, ನಿಜವಿಲ್ಲದ ನಿಷ್ಪತ್ತಿ.
ಸೀಮೆಯ ಮೀಱಿದ ನಿಸ್ಸೀಮ,
ಗಮನವಿಲ್ಲದಗಮ್ಯ, ನುಡಿಯುಡುಗಿದ ನಿಶ್ಶಬ್ದ.
ಪರಮವನಱಿಯದ ಪರಿಣಾಮಿ.
ಕೂಡಲಚೆನ್ನಸಂಗನ ಶರಣ ಪ್ರಭುದೇವರಿಗೆ
ನಮೋ ನಮೋ ಎನುತಿದ್ದೆನು. ॥೧೦೫॥

೧-೧ ವಸುದೇಯ (ಮು)

ಮತ್ತಂ,

೧೨೬೭

ಬಟ್ಟಬಯಲೊಳಗೊಂದು ಐವಾಗಿಲ ಪಟ್ಟಣ.
ಆ ಪಟ್ಟಣಕ್ಕೆ ಒಡಲಿಲ್ಲದಾತ ಅರಸು ನೋಡಾ.
ಆ ಅರಸಂಗೆ ಅಱುವರು ಅರಸಿಯರು.
ಮೂವರು ಸುರೂಪಿಯರು, ಮೂವರು ಕುರೂಪಿಯರು.
ಇವರೊಬ್ಬರಿಗೊಬ್ಬರಿಗೊಂದೊಂದು ಪರಿಯ ಕೂಟ ನೋಡಾ.
ಐವರ ಕಣ್ಣ ಕಟ್ಟಿ, ಒಬ್ಬಳ ನೆರೆದರೆ
ಪ್ರತಿಯಿಲ್ಲದ ಸುಖವು ಸಯವಾದ ಕಾರಣ
ಕೂಡಲಚೆನ್ನಸಂಗಾ, ನಿಮ್ಮ ಶರಣ ಪ್ರಭುವಿಂಗೆ
ನಮೋ ನಮೋ ಎನುತಿರ್ದೆನು. ॥೧೦೬॥

ಚಿಕ್ಕದಣ್ಣಾಯಕರು ಬಸವರಾಜದೇವರ ಹೊಗಳುವ ವಚನ:

೧೨೬೮

ಅಂತರಂಗದಲ್ಲಿ ಪ್ರಭುದೇವರನೊಳಕೊಂಡ.
ಬಹಿರಂಗದಲ್ಲಿ ಎನ್ನನೊಳಕೊಂಡ.
ಈ ಉಭಯಸಂಗದ ಮಧ್ಯದಲ್ಲಿ ನಿಜೈಕ್ಯನಾಗಿದ್ದನು.
ಪ್ರಸಾದದಲ್ಲಿ ಪರಮಾನಂದ ಸುಖಿ.
ಅಱಿವಿನಲ್ಲಿ ಕುಱುಹಳಿದ ಘನದ ನಿಲವು.
ಕೂಡಲಚೆನ್ನಸಂಗಮದೇವಾ,
ಬಸವಣ್ಣನ ಪಾದಕ್ಕೆ ನಮೋ ನಮೋ ಎಂಬೆನು. ॥೧೦೭॥

ಇದಕ್ಕೆ ಬಸವಣ್ಣ ಚೆನ್ನಬಸವಣ್ಣನ ಹೊಗಳುವ ವಚನ:

೧೨೬೯

ಶಿಶುವೆನ್ನಬಹುದೆ ನಂಬಿಯಣ್ಣನ? [ಶಿವನ ಕುಂಟಣಿ ಮಾಡಿದನು]
ಸೂಕ್ಷ್ಮನೆನಬಹುದೆ ರವಿಯನು? ಜಗವ ಬೆಳಗುವ.
ದೃಷ್ಟಿ ಕಿಱಿದೆನಬಹುದೆ? ಸೃಷ್ಟಿಯನು ಕಾಬುದು.
ಭಾವ ಕಿಱಿದೆನಬಹುದೆ? ಬಳ್ಳ ಲಿಂಗವಾದುದನು.
ಕೂಡಲಸಂಗಮದೇವಯ್ಯಾ.
ಯುಗಜುಗವೆಲ್ಲವನು ಮೀಱಿದ ಶರಣನ
ಕಿಱಿದೆನಬಹುದೆ, ಚೆನ್ನಬಸವಣ್ಣನ? ॥೧೦೮॥

ಮತ್ತಂ,

೧೨೬೦
ಒತ್ತಿ ಹೊಸೆದ ಕಿಚ್ಚ ನಾ ಮಾಡಿದೆನೆಂದು ಮುಟ್ಟಿ ಹಿಡಿದಡೆ,
ಕೈ ಬೇಯದಿಹುದೆ?
ಎನ್ನಿಂದಾಯಿತ್ತು, ಎನ್ನಿಂದ ಹೋಯಿತ್ತು ಎನ್ನದಿರು ಮನವೆ.
ನಾನು ಮಾಡಿದೆನೆನ್ನದಿರು ಮನವೆ.
ಕೂಡಲಸಂಗಮದೇವ ಕೇಳಯ್ಯಾ,
ಚೆನ್ನಬಸವಣ್ಣನ ಪಾದಕ್ಕೆ ನಮೋ ನಮೋ ಎಂಬೆನು. ॥೧೦೯॥

ಮತ್ತಂ,

೧೨೬೧
ಲಿಂಗಗಂಭೀರದೊಳಗೆ ಜಗ ಹುಟ್ಟಿದರೇನು,
ಆ ಲಿಂಗದಿಂದ ಘನವೆ?
ಶಿವಲಿಂಗದೊಳಗೆ ಜಗ, ಜಗದೊಳಗೆ ಲಿಂಗ.
ಲೋಕಾದಿಲೋಕಂಗಳಿಗೆ ನೀನು ಭಕ್ತಿಯ ಕಂದೆಱೆದು ತೋಱಿದೆ
ಕೂಡಲಸಂಗಮದೇವರಲ್ಲಿ –ಚೆನ್ನಬಸವಣ್ಣಾ,
ನಿನ್ನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು. ॥೧೧೦॥

ಮತ್ತಂ,

೧೨೬೨
ಪ್ರಾಣಲಿಂಗ ಪ್ರವೇಶಿತವಾಗಿ, ಪ್ರಸಾದದಲ್ಲಿ ಸನ್ನಿಹಿತನಯ್ಯಾ.
ಲಿಂಗಾರ್ಪಿತವಲ್ಲದೆ ಅನರ್ಪಿತವ ಮುಟ್ಟಲೀಯನಯ್ಯಾ.
ಅಂಗಗುಣಂಗಳೆಲ್ಲವನತಿಗಳೆದು,
ಪ್ರಸಾದದಲ್ಲಿ ಬ್ರಹ್ಮಚಾರಿಯಾದನು,
ಕೂಡಲಸಂಗಮದೇವರಲ್ಲಿ ಚೆನ್ನಬಸವಣ್ಣನು. ॥೧೧೧॥

ಮತ್ತಂ,

೧೨೬೩
ಸರ್ವಾವಧಾನಿ ಸಮಯಪ್ರಸಾದಿ ನೋಡಯ್ಯಾ.
ಲಿಂಗಾರ್ಪಿತದಲ್ಲಿ ಸರ್ವಾವಧಾನಿ ಸಮಯಪ್ರಸಾದಿ ನೋಡಯ್ಯಾ.
ಅಯ್ಯಾ, ಅನಾಗತಂಗಳ ಮುನ್ನವೆ ಇರಲೀಯ
ಕೂಡಲಸಂಗದೇವರಲ್ಲಿ ಚೆನ್ನಬಸವಣ್ಣಂಗೆ
ನಮೋ ನಮೋ ಎನುತಿರ್ದೆನು ॥೧೧೨॥

ಮತ್ತಂ,

೧೨೭೪

ಅಂಗವಿಕಾರವಳಿದು ಸತಿಯ ಸಂಗವರ್ಜಿಯ ನೋಡಾ.
ದೇಹ ಗುಣಂಗಳಿಲ್ಲಾಗಿ ನಿರ್ದೇಹಿ ಪ್ರಸಾದಿ ನೋಡಯ್ಯಾ.
ಅಶನ ವ್ಯಸನಾದಿಗಳೆಲ್ಲವೂ ಬೆಂದವು ನೋಡಯ್ಯಾ.
ಈ ಎಲ್ಲ ಗುಣಂಗಳಳಿದ, ಕೂಡಲಸಂಗಮದೇವರಲ್ಲಿ
ಸಾವಧಾನ ಪ್ರಸಾದಿ ಚೆನ್ನಬಸವಣ್ಣನು. ॥೧೧೩॥

ಮತ್ತಂ,

೧೨೭೫

ಘನವನರ್ಜಿದು, ಘನವ ವೇದಿಸಿ,
ಘನಗುರುವ ತನ್ನೊಳಗೆ ಬೈಚಿಟ್ಟ ಪರಿಣಾಮಿಯ ನೋಡಾ!
ಗುರು ಲಿಂಗ ಜಂಗಮದಲ್ಲಿ
ತನು ಮನ ಧನವ ವೇಧಿಸುವ ಪರಿಯ ನೋಡಯ್ಯಾ!
ಕಾಯ ಪ್ರಸಾದದಲ್ಲಿ ಸ್ವಾಯತವ ಮಾಡಿಕೊಂಡಿಪ್ಪ ಪರಿಯ ನೋಡಾ!
ಷಡುಸ್ಥಲದಲ್ಲಿ ಸ್ವಾಯತವಾದ ಕೂಡಲಸಂಗಮದೇವರಲ್ಲಿ ಚೆನ್ನಬಸವಣ್ಣನು. ॥೧೧೪॥

ಮತ್ತಂ,

೧೨೭೬

ನಿರ್ಲೇಪವಾದ ನಿಜಗುಣಿ ನೋಡಯ್ಯಾ.
ಕಾಮಿಸದ ಕಲ್ಪಿಸದ ಪ್ರಸಾದಿ ನೋಡಯ್ಯಾ.
ಬಯಸಲಿಲ್ಲದ ಪ್ರಸಾದಿ,
ಗುರುವಿನ ಮುಖದಿಂದ ಬಂದ ಪ್ರಸಾದವಲ್ಲದೆ
ಮತ್ತೇನನು ಮುಟ್ಟಲೀಯನು,
ಕೂಡಲಸಂಗಮದೇವರಲ್ಲಿ ಚೆನ್ನಬಸವಣ್ಣನು. ॥೧೧೫॥

ಮತ್ತಂ,

೧೨೭೭

ಅರ್ಪಿತವ ಮಾಡುವ ಅವಧಾನವು.
ಅನ್ಯವು ಸೋಂಕದ ಅವಧಾನವು.
ಅರಿಷಡ್ವರ್ಗಂಗಳು ಮುಟ್ಟಲೀಯದ
ಅವಧಾನದ ಪರಿಯ ನೋಡಾ.
ಪಂಚಭೂತವೆಂಬ ಭವಿಯ ಕಳೆದು
ಪ್ರಸಾದಿಯಾಗಿಪ್ಪ ಪರಿಯ ನೋಡಾ.
ಪಂಚೇಂದ್ರಿಯಂಗಳ ಗುಣವಳಿದು

ಪಂಚವಿಂಶತಿತತ್ತ್ವದಲ್ಲಿ ಪರಿಣಾಮಿ,
ಕೂಡಲಸಂಗಮದೇವರಲ್ಲಿ ಚೆನ್ನಬಸವಣ್ಣನು. ॥೧೧೬॥

ಚೆನ್ನಬಸವಣ್ಣನು ಬಸವಣ್ಣನ ಸ್ತುತಿಸುವ ವಚನ:

೧೨೭೮

ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯರೆಂದೆ
ಬೇಱು ಮಾಡಿ ನಡೆದು, ಬೇಱು ಮಾಡಿ ನುಡಿವ ಭಿನ್ನವಲ್ಲ.
ಅಂತರಂಗದಲ್ಲಿ ಅಱಿವು ಪರಿಪೂರ್ಣ,
ಬಹಿರಂಗದಲ್ಲಿ ದಾಸೋಹಸಂಪನ್ನ,
ಮನೋವಾಕ್ಕಾಯಕರ್ಮಂಗಳಲ್ಲಿ ಸದ್‌ಭಕ್ತಿ ಸಂಪನ್ನ.
ಎಡೆದೆಱಹಿಲ್ಲದೆ ಲಿಂಗಸಂಪನ್ನ.
ಸರ್ವಾಂಗದಲ್ಲಿ ಸರ್ವಾಚಾರ ಸಂಪನ್ನ.
ಕೂಡಲಚೆನ್ನಸಂಗಮದೇವರಲ್ಲಿ
ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತ್ತಿದ್ದೆನು. ॥೧೧೭॥

ಮತ್ತಂ,

೧೨೭೯

ಮಾತು ಮಾಣಿಕವ ನುಂಗಿ,
ಜ್ಯೋತಿ ಕತ್ತಲೆಯ ನುಂಗಿ, ಆಳು ಆಳ್ದನ ನುಂಗಿ
ಉಗುಳಲಿಲ್ಲದ ಮಥನ, ಮಥನವಿಲ್ಲದ ಸಂಗ.
ಮರಣವಿಲ್ಲದ ಉದಯ, ಅಳಲಿಲ್ಲದ ಶೋಕ.
ಸಮರಸವಿಲ್ಲದ ಉದಯದ ಬೆಳಗನು
ಮದಗಜ ಒಳಕೊಂಡು, ಮಾವತಿಗನ ನುಂಗಿ ಉಗುಳದಲ್ಲಾ!
ಸದಮದದಿಭದ [೧][ಬ][೧]ರಿಕ್ಕೈಯೊಳಗೆ
ಈರೇಳು ಭುವನವನೊದಱಿ ಹಾಯ್ಕಿ ನಿಂದುದಲ್ಲಾ!
ಸದಮಲ್ಲಜ್ಞಾನ ಸಂಪನ್ನ,
ಕೂಡಲಚೆನ್ನಸಂಗಯ್ಯನಲ್ಲಿ ಬಸವಣ್ಣಂಗೆ ಸಯವಾಯಿತ್ತು. ॥೧೧೮॥

ಮತ್ತಂ,

೧೨೮೦

ಉರಿಯ ಸೀರೆಯನುಟ್ಟು, ಕಡೆಸೆಱಗ ಬಿಡುಬೀಸಿ,
ಮಡದಿ ತನ್ನ ಕೆಳದಿಯರನೊಡಗೊಂಡು ಆಡುತಿರೆ,
ಪತಿ ಬಂದು ಮುಡಿಯಹಿಡಿದು ಉಟ್ಟ ಸೀರೆಯನುಗಿಯೆ,

೧–೧ ಭ (ಮೂ)

ಮಡದಿಯ ಒಡಗೂಡುತಿರೆ, ಸಮರಸದಲ್ಲಿ ಸತಿಯಳಿದು ಪತಿಯಾಗಿ,
ಪತಿಯಳಿದು ನಿಃಪತಿಯಾಗಿ,
ಸತಿ ಪತಿ ನಿಃಪತಿ ಎಂಬ ತ್ರಿವಿಧವು ಏಕಾರ್ಥವಾದ,
ಕೂಡಲಚೆನ್ನಸಂಗನಲ್ಲಿ ಬಸವಣ್ಣನ ಪಾದಕ್ಕೆ
ನಮೋ ನಮೋ ಎನುತಿರ್ದೆನು. ॥೧೧೯॥

ಮತ್ತಂ, ಚೆನ್ನಬಸವಣ್ಣನು ಬಸವಣ್ಣನ ಸ್ತುತಿಸುವ ಪದಂಗಳು:

೧೨೮೧

ರಾಗ: ಭೂಪಾಳಿ

ಪರಮಮೂರುತಿ ಪರಮಜ್ಞಾನಿ ಲೋಕಪ್ರಪಂಚನಲ್ಲ
ನಿಃಪ್ರಪಂಚ ನಾಮನಿರ್ನಾಮ ನಿಃಕಾಮಿಯಾಗಿ ॥ಪಲ್ಲವಿ॥

ಕಾಯಗುಣಗಳ ತಂದು ಜೀವದೊಳಗಿರಿಸಿ
ಪ್ರಾಣಲಿಂಗಕ್ಕೆ ಸಮಾಧಾನ ಮಾಡಿ
ಆಶ್ರಮವ ಸ್ವೀಕರಿಸನಾಶ್ರಮವ ನೀಕರಿಸ
ದ್ವೈತಾದ್ವೈತನು ಅಲ್ಲ ಲಿಂಗಸಂಗಿ ॥೧॥

ಕಾಯ ಶೂನ್ಯ ಲಿಂಗ ಪ್ರಾಣ ಶೂನ್ಯ ಶರಣ
ಭಾವಭೇದಂಗಳು ಇಲ್ಲವಾಗಿ
ಒಳಹೊಱಗುವನ್ನು ಸರ್ವಾಂಗಲಿಂಗದಲಿ
ಅನುಭವಕೆ ತರಲಿಲ್ಲದನುಪಮನು ॥೨॥

ಕಾರಣವಕಾರಣವ ಕಲ್ಪಿತಾಕಲ್ಪಿತಂ
ಸಂಕಲ್ಪವಿಕಲ್ಪನಲ್ಲ ಸುಜ್ಞಾನಿಯಾಗಿ
ಸಾವಯ ನಿರವಯ ಸಂಗಿ ನಿಸ್ಸಂಗಿ
ಪರಮಾತ್ಮ ತಾನಾದ ನಿರ್ಬೋಧ ಬೋಧಿ ॥೩॥

ನಿರ್ಭಾವ ನಿರ್ನಾಮ ನಿರ್ದೇಹ ದೇಹಿ
ನಿರ್ಗುಣಕೆ ಅವಯವಾಕಾರರೂಪಾ
ಪರತತ್ತ್ವವನೆ ಬಿಟ್ಟು ಉಭಯವಳಿದುಳಿದಾತ
ತ್ರಿವಿಧ ಸಂಪನ್ನನೀತನುಭಯಲಿಂಗಿ ॥೪॥

ಲಿಂಗಭುಕ್ತಾ ಶೇಷಭುಕ್ತಾ ಚ ಪ್ರಾಣಿ
ನಿರ್ಗಮನ ಗಮನಿಗೆ ಗಮನವಿಲ್ಲ

ಸ್ವತಂತ್ರ ಕೂಡಲಚೆನ್ನಸಂಗಯ್ಯನಲ್ಲಿ
ಅಸಾಧ್ಯಸಾಧಕನಾದ ಲಿಂಗಸಂಗಿ ॥೫॥

ಪದ ಸಹ ವಚನ: ॥೧೨೪॥

ಮತ್ತಂ,

೧೨೮೨

ವೇದವಂತಿರಲಿ, ಶಾಸ್ತ್ರ ಸಾಕು, ಸಾಕು.
ಪುರಾಣವಂತಿರಲಿ, ಆಗಮ ಸಾಕು ಸಾಕು. ಅಂತಿರಲಿ.
ಸಾಧಿಸಿದನು ಸಜ್ಜನಸಾರಾಯವನು.
ಲಿಂಗಜಂಗಮದ ಪ್ರಸಾದವೆ ಪ್ರಾಣವೆಂದು,
ಇದಱಿಲ್ಲಿ ಸಜ್ಜನ ಸದರ್ಥ ಕೂಡಲಚೆನ್ನಸಂಗಯ್ಯನಲ್ಲಿ ಬಸವಣ್ಣನು. ॥೧೨೫॥

ಆ ಪ್ರಸ್ತಾವದೊಳು ಮಡಿವಾಳಮಾಚಿತಂದೆಗಳು ಪ್ರಭುದೇವರ ಸ್ತುತಿಸುವ ವಚನ:

೧೨೮೩

ತನುಗುಣವಳಿದು ಲಿಂಗಸಂಗಿಯಾದ.
ಮನಗುಣವಳಿದು ಜ್ಞಾನಸಂಬಂಧಿಯಾದ.
ಪ್ರಾಣಗುಣವಳಿದು ಪ್ರಸಾದಸಂಬಂಧಿಯಾದ.
ಭಾವಭ್ರಮೆಯಳಿದು ನಿಜಲಿಂಗಸಂಬಂಧಿಯಾದ.
ಇಂತೀ ಚತುರ್ವಿಧ ಸಂಬಂಧಿಯಾಗಿ
ಶೂನ್ಯಸಿಂಹಾಸನವನಿಂಬುಗೊಂಡ
ಕಲಿದೇವರದೇವಾ, ನಿಮ್ಮ ಶರಣ ಪ್ರಭುದೇವರ ಶ್ರೀಪಾದಕ್ಕೆ ॥೧೨೬॥
ನಮೋ ನಮೋ ಎಂಬೆನು.

ಮತ್ತಂ,

೧೨೮೪

ಲಿಂಗಬೆಱಗಿನ ಪರಮಸುಖಿಯನೇನೆಂಬೆನಯ್ಯಾ?
ಕಂಗಳ ಕಳೆಯ ಸಂಗವಗಲಿದ ಅಂಗವಿರಹಿತನನೇನೆಂದುಪಮಿಸುವೆ?
ನೋಟದಲ್ಲಿ ಅನಿಮಿಷ, ಕೂಟದಲ್ಲಿ ನಿಸ್ಸಂಗಿ,
ಎಡೆಯಾಟದಲ್ಲಿ ನಿರ್ಗಮನ.
ನಿಂದಲ್ಲಿ ನಿರಾಳ, ಸುರಾಳದಲ್ಲಿ ಪರಿಪೂರ್ಣ.
ಘನಕ್ಕೆ ಘನಮಹಿಮನು.
ಕಲಿದೇವಾ, ನಿಮ್ಮ ಶರಣ ಪ್ರಭುದೇವರ ಶ್ರೀಪಾದಕ್ಕೆ
ನಮೋ ನಮೋ ಎನುತ್ತಿರ್ದೆನು. ॥೧೨೭॥

ಮತ್ತಂ,

೧೨೮೫

ಸಂಸಾರದ ಸಾರಾಯದ ತನಿರಸವ
ಹಿಂಡಿ ಹಿಳಿದಾಡಿದರಯ್ಯಾ.
ಕೈಯ ಸವಚಿಕೊಂಡು ಹರಿದು ಹತ್ತುವನಲ್ಲ,
ಮರಳಿ ನೋಡುವನಲ್ಲ.
ಇಂತಪ್ಪ ವೀರರುಂಟೆ? ಇಂತಪ್ಪ ಧೀರರುಂಟೇ?
ಇಂತಪ್ಪ ಪೌರುಷಚರಿತನಾಗಿ ಮಾಯೆಯ ಹಿಂಗಿಸಿ,
ಮುಯ್ಯಾಂತು ಮುಂದಣ ನಿಲವನಾಗುಮಾಡಿದ
ನಿಜೈಕ್ಯ ನಿರ್ವಯಲ ನಿಃಪತಿಗೆ ನಿಜವಾಗಿ,
ನಿರಾಳದೊಳಗೆ ತಾನೆ ತೊಳಲುತ್ತಿರ್ದನು.
ಕಲಿದೇವಾ, ನಿಮ್ಮ ಲಿಂಗೈಕ್ಯ ಪ್ರಭುದೇವರ
ಶ್ರೀಪಾದದಲಿ ಭೃಂಗನಾಗಿಪ್ಪೆನು. ||೧೨೮||

ಪ್ರಭುದೇವರು ಮಡಿವಾಳಮಾಚಿತಂದೆಗಳ ಸ್ತೋತ್ರವ ಮಾಡುವ ವಚನ:

೧೨೮೬

ಲಿಂಗಗಂಭೀರ ಸುನಾದ, ಜಂಗಮಗಂಭೀರ ತನುಗುಣ[೧]ಚರಿತ್ರ,[೧]
ಜಂಗಮ ಗಂಭೀರ ಅನಾಹತವೆ ಮನಗುಣ ಚರಿತ್ರ
ಈ ಎರಡಱ ಸಂಬಂಧವೆ ಒಡಲು,
ಪರಮಾನಂದಜಲದಲ್ಲಿ ಅಲುಬಿ, ಮಹಾಪ್ರಕಾಶದಲ್ಲಿ ಆಱಿಸಿ,
ಅನಾಹತ ಮಥನದಲ್ಲಿ ಘಟ್ಟಿಸಿ,
ಆ ವಸ್ತ್ರವನೆನಗೆ ಕೊಟ್ಟರೆ,
ಉಡದ ಮುನ್ನವೆ ಉರಿ ಹತ್ತಿತ್ತು ನೋಡಾ!
ಆ ಉರಿಯು ಕಣ್ಣಿಗೆ ಕಾಣಬಾರದು,
ಮನಕ್ಕೆ ನೆನೆಯಬಾರದು.
ಉರಿ ಉಂಡು ಉಷ್ಣವಿಲ್ಲದ ಆ ಸ್ವಯಂಜ್ಯೋತಿಯ
ನಿಜನಿವಾಸದಲ್ಲಿ ನಿಶ್ಚಿಂತನಾಗಿದ್ದು,
ಮಡಿವಾಳನ ಕೃಪೆಯಿಂದ ನಾನು ಬದುಕಿದೆನು ಕಾಣಾ
ಗೊಹೇಶ್ವರಾ! ||೧೨೯||

ಮತ್ತಂ,

೧೨೮೭

ತಾಯಿಯಿಲ್ಲದ ಶಿಶುವಿಂಗೆ,
ಶಿಶುವಿಲ್ಲದ ತಾಯಿ ಮೊಲೆಯನೂಡಿದಳು.

೧-೧ ಚರಿತ್ರಂ (ಮೂ)

ಮೊಲೆವಾಲನುಂಡ ಶಿಶು ತಾಯ ತಕ್ಕೈಸಿದರೆ,
ತಾಯಾ ಶಿಶುವಿಂಗೆ ಸತಿಯಾದಳಲ್ಲಾ!
ಸತಿಯ ಸಂಗದ ಸುಖವ ಪತಿಯಿಲ್ಲದಜೆದಲ್ಲಿ,
ಸತಿಪತಿ ಎಂಬೆರಡೂ ಅಳಿಯತ್ತು ನೋಡಾ!
ಈ ನಿಜದ ನಿರ್ಣಯವ ತೋಱಿದನೆನಗೆ;
ಗೊಹೇಶ್ವರನ ಶರಣ ಮಡಿವಾಳತಂದೆಗಳ ಪಾದಕ್ಕೆ
ನಮೋ ನಮೋ ಎಂಬೆನು. ॥೧೩೦॥

ಚಿಕ್ಕದಣ್ಣಾಯಕರು ಮಡಿವಾಳತಂದೆಗಳ ಸ್ತೋತ್ರವ ಮಾಡುವ ವಚನ:

೧೨೮೮

ಹೊಟ್ಟೆಯಲ್ಲಿ ಎನ್ನ ತೆಗೆದ.
ಬೆನ್ನಿನಲ್ಲಿ ಬಸವಣ್ಣನ ತೆಗೆದ.
ಬ್ರಹ್ಮರಂಧ್ರದಲ್ಲಿ ಅಲ್ಲಮನ ತೆಗೆದ.
ಸಂಗನೊ, ಮಡಿವಾಳನೊ? ಮಡಿವಾಳನೊ, ಸಂಗನೊ?
ಕೂಡಲಚೆನ್ನಸಂಗನಲ್ಲಿ
ಮಡಿವಾಳ ಸ್ವಾಯತ ನಮ್ಮ ಬಸವಣ್ಣಂಗೆ. ॥೧೩೧॥

ಮತ್ತಂ,

೧೨೮೯

ಅಂಗದ ಮೇಲಣ ಲಿಂಗವು ಹಿಂಗದಂತಿರಬೇಕು.
ಅಂಗಕ್ಕೆ ಲಿಂಗಕ್ಕೆ ಸಂಬಂಧವೇನೋ, ಮನ ಮುಟ್ಟದನ್ನಕ್ಕರ?
ಕಾಯ ಕಾಯಕವ ಮಾಡುತ್ತಿರಲು,
ಮನವು ಲಿಂಗದಲ್ಲಿ ಬೆರಸಿ ತೆಱಹಿಲ್ಲದಿಪ್ಪ ಮಡಿವಾಳನ ಪರಿಯ ನೋಡಾ!
ಅಂಗ ಲಿಂಗ ಸಂಗವೆಂಬ ಸಂದು ಸಂಶಯವಳಿದು,
ಸರ್ವಾಂಗ ಲಿಂಗಸಂಬಂಧಿ,
ಕೂಡಲಚೆನ್ನಸಂಗಯ್ಯನಲ್ಲಿ ಮಡಿವಾಳಮಾಚಯ್ಯನು. ॥೧೩೨॥

ಮಡಿವಾಳತಂದೆಗಳು ಚಿಕ್ಕದಣ್ಣಾಯಕರ ಸ್ತುತಿಸುವ ವಚನ:

೧೨೯೦

ವಾಯದ ಮಾಯದ ಸಂಭ್ರಮದೊಳಗೆ ಸಿಲುಕಿತ್ತು
ನೋಡಾ ಭುವನವೆಲ್ಲವು!
ಮಾಯಕ್ಕೆ ಹೊರಗಾದ ನಿರ್ಮಾಯನ ಕಂಡೆನು.
ತಾನೆಂಬ ನುಡಿಗೆ ನಾಚಿ, ನೀನೆಂಬ ನುಡಿಗೆ ಹೇಸಿ,
ತಾನು ತಾನಾದ ಘನಮಹಿಮನು.
ಕಾಯದಲ್ಲಿ ಕುಱುಹಿಲ್ಲ, ಭಾವದಲ್ಲಿ ಭ್ರಮೆಯಿಲ್ಲ.

ಜ್ಞಾನ ತಾನೆಂಬ ಭೇದವಿಲ್ಲ.
ಸಾವಯನಲ್ಲ, ನಿರವಯನಲ್ಲ–
ಕಲಿದೇವರದೇವಾ, ನಿಮ್ಮ ಶರಣ ಚೆನ್ನಬಸವಣ್ಣನು. ॥೧೩೩॥

ಮತ್ತಂ,

೧೨೯೧

ಅತಿಶಯವನತಿಗಳೆದು, ನಿರತಿಶಯಸುಖದೊಳಗೆ
ಪರಮ ಸುಖಿಯಾಗಿಪ್ಪರಾರು ಹೇಳಾ?
ನಿಜನಿರ್ಣಯವನಱಿದು, ಭಜನೆಯ ಭಾವನೆಯಳಿದು,
ತ್ರಿಜಗಪತಿಯಾಗಿಪ್ಪರಾರು ಹೇಳಾ?
ಕೋಡಗದ ಮನದೊಳಗೆ ಗಮನವಿರಹಿತನಾಗಿ,
ಗಮನಗೆಡದಿಪ್ಪರಿನ್ನಾರು ಹೇಳಾ?
ಹಗೆಯಲ್ಲಿ ಹೊಕ್ಕು, ಹಗೆಯಳಿದು ಸುಖಿಯಾಗಿ,
ತನಗೆ ತಾ ಕೆಳೆಯಾಗಿಪ್ಪರಾರು ಹೇಳಾ?
ಒಳಗು ಹೊಱಗು ಸರ್ವಾಂಗವೆಲ್ಲಾ
ಲಿಂಗವಾಗಿರಬಲ್ಲ ಪರಮಾತ್ಮನಾರು ಹೇಳಾ?
ಕಲಿದೇವರದೇವಾ, ನಿಮ್ಮ ಶರಣ ಚೆನ್ನಬಸವಣ್ಣನ ನಿಲವನಱಿದು
ಶರಣೆಂದು ನಾನು ಸುಖಿಯಾದೆನು. ॥೧೩೪॥

ಮಡಿವಾಳಯ್ಯಗಳು ಬಸವರಾಜದೇವರ ಸ್ತುತಿಸುವ ವಚನ:

೧೨೯೨

ಮಾರಾರಿಯ ಬೆಸನದಿಂದ ಧಾರುಣಿಗವತರಿಸಿ,
ಸಾರಾಯ ಸದ್‌ಭಕ್ತಿಯ ತೋಱಿದನು ಶಿವಶರಣರೆಲ್ಲರಿಗೆ.
ಭಕ್ತಿಯ ಸಂಚವ, ಮುಕ್ತಿಯ ಭೇದವ
ಸತ್ಯಶರಣರಿಗೆಲ್ಲಾ ಉಪದೇಶವ ಮಾಡಿ,
ನಿತ್ಯಲಿಂಗಾರ್ಚನೆಯೊಳಗೆನ್ನನಿರಿಸಿ
ರಕ್ಷಿಸಿದಾತ ಬಸವಣ್ಣ ಕಾಣಾ ಕಲಿದೇವರದೇವಾ. ॥೧೩೫॥

ಮತ್ತಂ,

೧೨೯೩

ಆಱು ಜನ್ಮದವನೆಂದೆಂಬರು ಬಸವಣ್ಣನ.
ಈ ಗಾಱು ಮಾತ ಕೇಳಲಾಗದು.
ಅಱು ಸ್ಥಲವನಾಱು ಪಥವ ತೋಱಲಿಕೆ
ಪರಶಿವ ತಾ ಮೂಱು ಮೂರ್ತಿಯಾದ.

ಅಱಾಱು ತತ್ತ್ವಂಗಳ ಮೇಲಣಾತ
ಆ ಬಸವಣ್ಣ ಕಾಣಾ ಕಲಿದೇವರದೇವಾ. ॥೧೩೬॥

ಮತ್ತಂ,

೧೯೪

ಕಲ್ಯಾಣವೆಂಬ ಪಟ್ಟಣದೊಳಗೆ ಛತ್ತೀಸ ಪುರದ ಮಹಾಗಣಂಗಳು.
ಒಂದು ಪುರದವರು ಅಗ್ಘವಣಿಯ ತಹರು.
ಎರಡು ಪುರದವರು ಸಮ್ಮಾರ್ಜನೆ ರಂಗವಾಲಿಯ ಮಾಡುವರು.
ಮೂರು ಪುರದವರು ಲಿಂಗಾರ್ಚನೆಗೆ ನೀಡುವರು.
ನಾಲ್ಕು ಪುರದವರು ಲಿಂಗಕ್ಕೆ ಬೋನವ ಮಾಡುವರು.
ಐದು ಪುರದವರು ಅರ್ಪಿತಕ್ಕೆ ನೀಡುವರು.
ಆಱು ಪುರದವರು ಪ್ರಸಾದದಲ್ಲಿ ತದ್‌ಗತವಾಗಿಹರು.
ಏಳು ಪುರದವರು ಧ್ಯಾನಾರೂಢರಾಗಿಹರು.
ಮುಂದಣ ಪುರದವರು ನಿಶ್ಚಿಂತ ನಿವಾಸಿಗಳಾಗಿಹರು.
ಈ ಪುರದ ಗಣಂಗಳು ಓಲೈಸುವ
ಬಸವನ ಮಹಾಮನೆಯ ಮಡಿವಾಳ ನಾನು
ಕಾಣಾ ಕಲಿದೇವರದೇವಾ. ॥೧೩೭॥

ಮತ್ತಂ,

೧೯೫

ಶಿವಭಕ್ತಿ ಸಂಪುಟವಾದ ಮಹಾಮಹಿಮರ ನಿಲವು
ನಾದದ ಉತ್ಪತ್ಯವ ಸೋಂಕದು.
ಬಿಂದುವಿನಾಶ್ರಯದಲ್ಲಿ ಬೆಳೆಯದು.
ಶುಕ್ಲಶೋಣಿತವೆಂಬ ಪಂಚವರ್ಣಾಶ್ರಮವನು ಹೊದ್ದದು.
ಅಷ್ಟದಳ ಕಮಲವ ಮುಟ್ಟದು.
ಪ್ರಾಣಾಪಾನವ್ಯಾನೋದಾನ ಸಮಾನ
ನಾಗ ಕೂರ್ಮ ಕೃಕರ ದೇವದತ್ತ ಧನಂಜಯವೆಂಬ
ದಶವಾಯುಗಳಿಚ್ಛೆಯಲ್ಲಿ ಸುಳಿದಾಡದು,
ಜ್ಞಾನದಲ್ಲಿ ಬೆಳೆವುದು.
ನಿರಾಲಂಬದಲ್ಲಿ ಆಡುವುದು.
ಹೃದಯಕಮಲದ ಪದ್ಮಪತ್ರದ ಉಸುರನಾಲಿಸಿ
ಸಂಪುಟ ಜಂಗಮದಾಟವನಾಡುವುದು.
ಲಿಂಗದ ನೋಟವ ನೋಡುವುದು.
ಮಹಾಘನದಲ್ಲಿ ಬೆಳಗುವುದು.

ನಿಜನಿರಾಳದಲ್ಲಿ ನಿವಾಸಿಯಾಗಿಪ್ಪುದು.
ಕಲಿದೇವರದೇವಾ, ನಿಮ್ಮ ಶರಣ ಬಸವಣ್ಣನ ನಿಲವಿದು. ॥೧೩೮॥

ಮತ್ತಂ,

೧೨೯೬

ಅಷ್ಟತನುವಿನಲ್ಲಿ ಹುಟ್ಟಿದ ನಿಷ್ಠಾಪರದಲ್ಲಿ,
ಮುಟ್ಟುವ ^೧ಭರದಲ್ಲಿ^೧,
ವಿದ್ಯದೊಳಗಣ ಆಧಾರಮಂಟಪದೊಳಗಣ
ಸಹಜವನಱಿದವಂಗಲ್ಲದೆ ಲಿಂಗವೆನಬಾರದು,
ಜಂಗಮವೆನಬಾರದು, ಪ್ರಸಾದವೆನಬಾರದು,
ದ್ವಾರಮಂಟಪದೊಳಗಣ ಸಹಜವನಱಿಯದೆ
ಕರಣಂಗಳಿಗೆ ಗುಱಿಯಾದರು.
ಕರಣ ಲಿಂಗಾರ್ಚಕರಾದರು.
ಕರಣ ಮರಣ ತಪ್ಪದಿದೆಂತೋ?
ಇವನೆಲ್ಲವನತಿಗಳೆದು, ನಿಜಲಿಂಗಾರ್ಚನೆಯ ತೋಱಿ,
ನಿಜೈಕ್ಯದೊಳಗಿರಿಸಿ ಬದುಕಿಸಿದಾತ ಬಸವಣ್ಣ
ಕಾಣಾ ಕಲಿದೇವರದೇವಾ. ॥೧೩೯॥

ಬಸವರಾಜದೇವರು ಮಡಿವಾಳತಂದೆಗಳ ಸ್ತೋತ್ರವ ಮಾಡುವ ವಚನ:

೧೨೯೭

ಎನ್ನ ಕಾಯದ ಕರಸ್ಥಲದಲ್ಲಿ ಪ್ರಭುದೇವರ ಕಂಡೆನು.
ಎನ್ನ ಪ್ರಾಣದ ಕರಸ್ಥಲದಲ್ಲಿ ಚೆನ್ನಬಸವಣ್ಣನ ಕಂಡೆನು.
ಎನ್ನ ಸರ್ವಾಂಗದ ಕರಸ್ಥಲದಲ್ಲಿ ಮಡಿವಾಳನ ಕಂಡೆನು.
ಸಂಗನೋ ಮಡಿವಾಳನೋ ಎಂದು ನುಡಿಯಲಱಿಯೆ.
ಮಡಿವಾಳನೋ ಸಂಗನೋ ಎಂದು ನುಡಿಯಲಱಿಯೆ.
ಎನ್ನೊಡಲ ಗುಣಂಗಳ ಕೆಡಿಸಿ ಕಡೆಯ ಕಾಣಿಸಿದ,
ಎನ್ನನುಳುಹಿದ ಪರಮಯೋಗಿ–
ಕೂಡಲಸಂಗಮದೇವಾ,
ಮಡಿವಾಳಮಾಚಿತಂದೆಯ ಪಾದಕ್ಕೆ ನಮೋ ನಮೋ ಎಂಬೆನು. ॥೧೪೦॥

ಮತ್ತಂ,

೧೨೯೮

ಆಚಾರದ ಸುಖವನಂಗದಲ್ಲಿ ನೆಲೆಗೊಳಿಸಿ ತೋಱಿದ.
ಅನುಭಾವದನುವ ಪ್ರಾಣದಲ್ಲಿ ನೆಲೆಗೊಳಿಸಿ ತೋಱಿದ.

೧–೧ ಭಾವ (ಭರ) (ಮು)

ಮಹಾಜ್ಞಾನದ ಸುಖವ ಸರ್ವಾಂಗದಲ್ಲಿ ನೆಲೆಗೊಳಿಸಿ ತೋಱಿದ.
ಇಂತೀ ತ್ರಿವಿಧಸ್ಥಲದ ನಿರ್ಣಯವನೆನಗೆ ಅಱುಹಿದ ಕಾರಣ–ಕೂಡಲಸಂಗಮದೇವಯ್ಯಾ,
ಮಡಿವಾಳಮಾಚಯ್ಯನ ಪಾದಕ್ಕೆ ನಮೋ ನಮೋ ಎನುತಿರ್ದೆನು. ॥೧೪೧॥

ಹಡಪದಪ್ಪಣ್ಣಗಳು ಪ್ರಭುದೇವರ ಸ್ತುತಿಸುವ ವಚನ:

೧೨೯೯

ಅನಿಮಿಷನಾದ ನಿಬ್ಬೆಱಗಿನ ಲಿಂಗೈಕ್ಯನು.
ಭಾವ ನಿರ್ಭಾವವನೈದಿ,
ಜ್ಞಾನವೆ ಪರಮಾಶ್ರಯವಾಗಿಪ್ಪ ಲಿಂಗೈಕ್ಯನು.
ಮಹವನೊಳಕೊಂಡ ಮಹಿಮ ಲಿಂಗೈಕ್ಯನು.
ಬಸವಪ್ರಿಯ ಕೂಡಲಚೆನ್ನಸಂಗಯ್ಯಾ,
ನಿಮ್ಮ ಶರಣ ಪ್ರಭುದೇವರಿಗೆ ನಮೋ ನಮೋ ಎನ್ನುತ್ತಿರ್ದೆನು. ॥೧೪೨॥

೧೩೦೦

ನಿರಾಕಾರದ ಶಕ್ತಿಯಲ್ಲಿ ನಿರಾಳವೆಂಬ ತನು
ನಿಶ್ಶೂನ್ಯವೆಂಬ ಸಿಂಹಾಸನದ ಮೇಲೆ
ಘನವಾಗಿ ತೊಳಗಿ ಬೆಳಗುತ್ತಿದ್ದನು.
ದೆಸೆಯೆಲ್ಲಾ ಮುಖವಾಗಿ, ಮುಖವೆಲ್ಲಾ ಜಗವಾಗಿ,
ಅಖಂಡ ಪರಿಪೂರ್ಣ ಪರಬ್ರಹ್ಮ ತಾನಾದನು.
ಈ ಮಹಿಮನ ನೆನೆದರೆ ಮನೋಮುಕ್ತಿ,
ಕಂಡರೆ ರೂಪು ಮುಕ್ತಿ, ನುಡಿಸಿದರೆ ಶಬ್ದ ಮುಕ್ತಿ.
ಸಂಗವ ಮಾಡಿದರೆ ಸರ್ವಾಂಗ ಲಿಂಗೈಕ್ಯ.
ಬಸವಪ್ರಿಯ ಕೂಡಲಚೆನ್ನಸಂಗಯ್ಯ,
ನಿಮ್ಮ ಪ್ರಭುವಿನ ಶ್ರೀಪಾದಕ್ಕೆ ಶರಣೆಂದು ಬದುಕಿದೆನು. ॥೧೪೩॥

ನಾಗಾಯಕ್ಕಗಳು ಪ್ರಭುದೇವರನು ಬಸವರಾಜದೇವರನು ಚೆನ್ನಬಸವಣ್ಣನನು ಸ್ತೋತ್ರವ ಮಾಡುವ ವಚನ:

೧೩೦೧

ಎನ್ನ ಭವದ ಬಳ್ಳಿಯ ಬೇರು ಹಱಿಯಿತ್ತಯ್ಯಾ,
ಸಂಗನಬಸವಣ್ಣನ ಒಕ್ಕುದ ಕೊಂಡೆನಾಗಿ.
ಎನ್ನ ಮನದ ಕಪಟ ಹಿಂಗಿತ್ತಯ್ಯಾ
ಚೆನ್ನಬಸವಣ್ಣನ ಕರುಣವ ಪಡೆದೆನಾಗಿ.
ಎನ್ನ ಮನದ ಸಂಶಯ ತೊಲಗಿತ್ತಿಂದು,
ಬಸವಣ್ಣಪ್ರಿಯ ಚೆನ್ನಸಂಗಯ್ಯಾ,
ಎನ್ನ ಪರಮಗುರು ಪ್ರಭುವಿನ ಶ್ರೀಪಾದವ ಕಂಡೆನಾಗಿ. ॥೧೪೪॥

ಮತ್ತಂ,

೧೩೦೨

ಅಱಿಯದೆ ಮಱಹಿಂದ ಭವದಲ್ಲಿ ಬಂದೆನಲ್ಲದೆ,
ಇನ್ನು ಅಱಿದ ಬಳಿಕ ಬಳಲಲುಂಟೆ?
ಹೃದಯಕಮಲಮಧ್ಯದಲ್ಲಿ ನಿಜವು ನೆಲೆಗೊಂಡ ಬಳಿಕ,
ಪುಣ್ಯ ಪಾಪವೆಂಬವಕ್ಕೆ ಹೊಱಗಾದೆನು.
ಭುವನ ಹದಿನಾಲ್ಕಱೊಳಗೆ
ಪರಿಪೂರ್ಣ ನಿರಂಜನಜ್ಯೋತಿಯಾಗಿ
ಬೆಳಗುವ ಪ್ರಭುವ ಕಂಡು ಬದುಕಿದೆನು ಕಾಣಾ
ಬಸವಣ್ಣಪ್ರಿಯ ಚೆನ್ನಸಂಗಯ್ಯಾ. ॥೧೪೫॥

ಸೊಡ್ಡಳಬಾಚರಸರು ಪ್ರಭುದೇವರ ಸ್ತೋತ್ರವ ಮಾಡುವ ವಚನ:

೧೩೦೩

ಬಱಿದಲ್ಲಿ ಅಱಿಲುಗೊಂಡವಂಗೆ ಅಮೃತ ಸಿಕ್ಕಿದಂತೆ,
ಜರಾಮರಣ ದುಃಖಿ ಮಱುಜೀವಣಿಯ ಕಂಡಂತೆ,
ಭವದ ಬಾಗಿಲ ಹೊಗದೆ ಬದುಕಿದೆನಯ್ಯಾ,
ನಿತ್ಯವ ಕಂಡು, ಒಳಗೆ ಬೆಳಗುವ ಪ್ರಕಾಶ
ಹೊಱಗೆ ಮೂರುತಿಗೊಂಡಂತೆ,
ಕಂಗೆ ಮಂಗಳವಾಯಿತ್ತಯ್ಯಾ.
ಮಹಾಘನದಲ್ಲಿ ಸಾಕಾರ ಸೊಡ್ಡಳನ ಶರಣ ಪ್ರಭುವಿಂಗೆ
ನಮೋ ನಮೋ ಎನುತಿರ್ದೆನು. ॥೧೪೬॥

ಮತ್ತಂ,

೧೩೦೪

ಮನದ ಸಂಚದೋವರಿಯೊಳಗೆ
ಮಿಂಚಿನ ಗೊಂಚಲು ಬಳ್ಳಿವರಿಯಿತ್ತಯ್ಯಾ.
ಎನ್ನ ಕಾಯದ ಕಂಗಳೊಳಗೆ ನಿರುಪಮಸುಖಿ ಸಾಧ್ಯವಾಯಿತ್ತು.
ಬಯಸುವ ಬಯಕೆ ಕೈಸಾರಿತ್ತು.
ಅಱಿಸುವ ಅಱಿಕೆ ನಿಂದಿತ್ತು.
ಆಹಾ! ಕರತಳಾಮಳಕವಾಯಿತ್ತಲ್ಲಾ!
ಸತ್ಯಶರಣರ ದರುಶನವೇನ ಮಾಡದು?
ಮಹಾದಾನಿ ಸೊಡ್ಡಳನ ಶರಣ ಪ್ರಭುವಿನ
ಶ್ರೀಪಾದವ ಕಂಡು ಬದುಕಿದೆನಯ್ಯಾ! ॥೧೪೭॥

ಬಹುರೂಪಿಚೌಡಯ್ಯಗಳು ಬಸವಣ್ಣ ಚೆನ್ನಬಸವಣ್ಣ ಪ್ರಭುದೇವರ ಸ್ತುತಿಸುವ ವಚನ:

೧೩೦೫

ಸಂಗನಬಸವಣ್ಣ ಎನ್ನ ಕರಸ್ಥಲಕ್ಕೆ ಬಂದ ಕಾರಣ ಗುರುವಾದ.
ಚೆನ್ನಬಸವಣ್ಣ ಎನ್ನ ಕರಸ್ಥಲಕ್ಕೆ ಬಿಜಯಂಗೈದ ಕಾರಣ ಎನಗೆ ಲಿಂಗವಾದ.
ಪ್ರಭುದೇವರು ಎನ್ನ ಕರಸ್ಥಲಕ್ಕೆ ಬಂದ ಕಾರಣ ಎನಗೆ ಪ್ರಾಣಲಿಂಗವಾದ.
ಈ ಮೂವರಿಗೆ ನಾ ಭಕ್ತನಾಗಿ ಹುಟ್ಟಿದೆನಾಗಿ,
ರೇಕಣ್ಣಪ್ರಿಯನಾಗಿನಾಥ ಎನಗೆ ಒಚ್ಚತವಾದ. ॥೧೪೮॥

ಮತ್ತಂ,

೧೩೦೬

ಬಸವಣ್ಣನಿಂದ ಶುದ್ಧಪ್ರಸಾದಿಯಾದೆ.
ಚೆನ್ನಬಸವಣ್ಣನಿಂದ ಸಿದ್ಧಪ್ರಸಾದಿಯಾದೆ.
ಪ್ರಭುದೇವರಿಂದ ಪ್ರಸಿದ್ಧಪ್ರಸಾದಿಯಾದೆ.
ರೇಕಣ್ಣಪ್ರಿಯ ನಾಗಿನಾಥನಲ್ಲಿ ಸೊಬಗ ಮೆಱೆದೆ. ॥೧೪೯॥

ಕಕ್ಕಯ್ಯಗಳು ಪ್ರಭುದೇವರ ಸ್ತುತಿಸುವ ವಚನ:

೧೩೦೭

ಕಷ್ಟಕುಲದಲ್ಲಿ ಹುಟ್ಟಿದ ಕರ್ಮವ ಕಳೆದು,
ಮುಟ್ಟಿ ಪಾವನವ ಮಾಡಿ,
ಕೊಟ್ಟನಯ್ಯಾ, ಎನ್ನ ಕರಸ್ಥಲಕ್ಕೆ ಲಿಂಗವ.
ಆ ಲಿಂಗ ಬಂದು ಸೋಂಕಲೊಡನೆ
ಎನ್ನ ಸರ್ವಾಂಗದ ಅವಲೋಹವಳಿಯಿತ್ತಯ್ಯಾ.
ಎನ್ನ ತನುವಿನಲ್ಲಿ ಗುರುವ ನೆಲೆಗೊಳಿಸಿದ.
ಎನ್ನ ಮನದಲ್ಲಿ ಜಂಗಮವ ನೆಲೆಗೊಳಿಸಿದ.
ಎನ್ನ ಅಱಿವಿನಲ್ಲಿ ಪ್ರಸಾದವ ನೆಲೆಗೊಳಿಸಿದ.
ಇಂತೀ ತ್ರಿವಿಧಸ್ಥಾನವ ಶುದ್ಧವ ಮಾಡಿದ
ಬಸವಣ್ಣನ ಕರುಣದಿಂದ
ಪ್ರಭುವಿನ ಶ್ರೀಪಾದವ ಕಂಡು ಬದುಕಿದೆನು
ಕಾಣಾ ಅಭಿನವ ಮಲ್ಲಿಕಾರ್ಜುನಾ! ॥೧೫೦॥

ಮತ್ತಂ,

೧೩೦೮

ಆಸೆಯಾಮಿಷವಳಿದು, ಹುಸಿವಿಷಯಂಗಳೆಲ್ಲಾ ಹಿಂಗಿ,
ಸಂಶಯ ಸಂಬಂಧವಾಯಿತ್ತು ನೋಡಾ.
ಎನ್ನ ಮನದೊಳಗೆ ಘನಪರಿಣಾಮವ ಕಂಡು
ಮನ ಮಗ್ನವಾಯಿತ್ತಯ್ಯಾ.

ಅಭಿನವಮಲ್ಲಿಕಾರ್ಜುನಾ,
ನಿಮ್ಮ ಶರಣ ಪ್ರಭುದೇವರ ಕರುಣದಿಂದ ಬದುಕಿದೆನು! ॥೧೫೧॥

ಮೋಳಿಗಯ್ಯಗಳು ಪ್ರಭುದೇವರ ಸ್ತುತಿಸುವ ವಚನ:

೧೩೦೯

ಬಡವಂಗೆ ನಿಧಾನ ಕಡವರ ಕೈಸಾರಿತ್ತಯ್ಯಾ.
ಕಾಣಬಾರದ ಬಯಲು ರೂಪಗೊಂಡಿತ್ತಯ್ಯಾ.
ನಿರಾಳ ನಿರ್ಣಯದ ಮೇಲೆ ನಿಂದಿತ್ತು.
ಎನ್ನ ಭಾವದ ಕೊನೆಯ ಮೊನೆಯ ಮೇಲೆ
ಮನೆಮಾಡಿಕೊಂಡಿಪ್ಪ ಪ್ರಭುದೇವರ ಕಂಡು ಬದುಕಿದೆನು
ಕಾಣಾ ನಿಃಕಳಂಕ ಮಲ್ಲಿಕಾರ್ಜುನಾ! ॥೧೫೨॥

ಮತ್ತಂ,

೧೩೧೦

ನೆನಹಿನ ನಿಧಿಯ ನೋಡಾ!
ಎನ್ನ ಅನುವಿನ ಘನವ ನೋಡಾ!
ಆಹಾ, ಎನ್ನ ಪುಣ್ಯವೇ! ಆಹಾ, ಎನ್ನ ಭಾಗ್ಯವೇ!
ಆಹಾ, ಎನ್ನ ಕಂಗಳ ಮನೆಯ ಮಾಡಿಕೊಂಡಿಪ್ಪ ನಿತ್ಯದ ಬೆಳಗೇ,
ಎನ್ನ ಧ್ಯಾನದೊಳಗಣ ದೃಢವೇ!
ಎನ್ನ ಸುಖದೊಳಗಣ ಸುಗ್ಗಿಯೆ !
ನಿಃಕಳಂಕ ಮಲ್ಲಿಕಾರ್ಜುನಾ,
ನಿಮ್ಮ ಶರಣ ಪ್ರಭುದೇವರ ಶ್ರೀಪಾದಕ್ಕೆ
ನಮೋ ನಮೋ ಎನುತಿರ್ದೆನು. ॥೧೫೩॥

ಏಕಾಂತರಾಮಿತಂದೆಗಳು ಪ್ರಭುದೇವರ ಸ್ತುತಿಸುವ ವಚನ:

೧೩೧೧*

ಲೋಕಾಂತವಳಿದು ಏಕಾಂತ ಉಳಿದಲ್ಲಿ,
ಏಕೈಕಮೂರ್ತಿಯ ಸಂಗ ಸಮನಿಸಿತ್ತೆನಗೆ.
ಎನ್ನ ನುಡಿ ಆತನ ಕಿವಿಗಿನಿದಾಯಿತ್ತು.
ಆತನ ನುಡಿ ಎನ್ನ ಕಿವಿಗೆ ಇನಿದಾಯಿತ್ತು,
ಇಬ್ಬರ ನುಡಿಯು ಒಂದೆಯಾಗಿ ನಿಶ್ಶಬ್ದ ವೇಧಿಸಿತ್ತು.
ಈ ಸುಖದ ಸೋಂಕಿನ ಪುಣ್ಯದ ಫಲದಿಂದ
ಅನುಪಮ ಚರಿತ್ರ ಅಲ್ಲಮ ಪ್ರಭುದೇವರ ನಿಲವ ಕಂಡು
ನಾನು ಧನ್ಯನಾದೆನು ಕಾಣಾ ಏಕಾಂತವೀರ ಸೊಡ್ಡಳಾ. ॥೧೫೪॥

---

* ೧೩೧೧–೧೩೧೨ ಈ ಎರಡು ವಚನಗಳು ಮೂಲತಃ ಸೊಡ್ಡಳ ಬಾಚರಸನವು. ಇಲ್ಲಿ ತಪ್ಪಾಗಿ 'ಏಕಾಂತರಾಮಿತಂದೆ' ಎಂದು ಕರ್ತೃವಿನ ಹೆಸರನ್ನು ಸೂಚಿಸಲಾಗಿದೆ. ಏಕಾಂತರಾಮಿತಂದೆಯ ಅಂಕಿತ 'ಎನ್ನಯ್ಯ ಚೆನ್ನರಾಮ' ಎಂದಿದೆ.

ಮತ್ತಂ,

೧೩೧೨*

ಕೂರ್ಮನ ಶಿಶುವಿನ ಸ್ನೇಹದಂತಿಪ್ಪ ದೇವನೆನಗಿಂದು
ಪ್ರತ್ಯಕ್ಷ ಕಣ್ಣ ಮುಂದೆ ಗೋಚರವಾದ ನೋಡಾ!
ಎನ್ನಂತರಂಗದಲ್ಲಿ ಹೂಣಿ ಹೊಕ್ಕು
ವಿನಯ ಸದ್‌ಗೋಷ್ಠಿಯ ಮಾಡುವ ನಿಃಕಳಂಕ ಚೈತನ್ಯನು
ಸಕಲರೂಪು ಸನ್ನಿಹಿತನಾದ ನೋಡಾ!
ಬಟ್ಟಬಯಲು ಗಟ್ಟಿಗೊಂಡಂತೆ ಏಕಾಂತವೀರಸೊಡ್ಡಳಾ,
ನಿಮ್ಮ ಶರಣ ಪ್ರಭುದೇವರ ನಿಲವು. ॥೧೫೫॥

ಶಂಕರದಾಸಿಮಯ್ಯಗಳು ಪ್ರಭುದೇವರ ಸ್ತುತಿಸುವ ವಚನ:

೧೩೧೩

ಹರನಿರೂಪದಿಂದ ಧರೆಗೆ ಬಸವಣ್ಣನವತರಿಸಿದ ಕಾರಣ,
ಶಿವಾಚಾರ ಸದಾಚಾರವೆಂಬುದು ಧರೆಗೆ ವಿಖ್ಯಾತವಾಯಿತ್ತು.
ಶಿವಗಣ ಪ್ರಮಥಗಣಂಗಳೆಂಬ
ಮಹಾ ಮಹಿಮರ ಸುಳುಹು
ಧರೆಯ ಮೇಲೆ ಕಾಣಬಂದಿತ್ತು ನೋಡಯ್ಯಾ.
ಪರುಷವ ಸಾಧಿಸಿದಂತಾಯಿತ್ತು ನಿಮ್ಮ ಶರಣರ ಸಂಗದಿಂದ.
ಎನ್ನ ನಂದಿಯ ಮೊಗವಾಡ ನೊಸಲ ಕಣ್ಣೆಂಬ
ಅಹಂಕಾರವ ಮುಂದುಗೊಂಡಿದ್ದೆನಯ್ಯಾ.
ಎನ್ನ ಮದ ಉಡುಗಿ, ಸಂಗನಬಸವಣ್ಣನ ಕರುಣದಿಂದ
ಪ್ರಭುದೇವರ ನಿರಾಳವ ಕಂಡು ಬದುಕಿದೆನು ಕಾಣಾ
ನಿಜಗುರು ಶಂಕರದೇವಾ. ॥೧೫೬॥

ಮತ್ತಂ,

೧೩೧೪

ಕಾಯದ ಮದವಳಿದಲ್ಲದೆ ಮಾಯಾವಿಕಾರವಳಿಯದು.
ಮಾಯಾವಿಕಾರವಳಿದಲ್ಲದೆ ಭಾವ ನಾಶವಾಗದು,
ಭಾವ ನಾಶವಾದಲ್ಲದೆ ಲಿಂಗಸಂಬಂಧವಳವಡದು.
ಲಿಂಗಸಂಬಂಧವಳವಟ್ಟಲ್ಲದೆ ಸುಳುವು ಸಾಧ್ಯವಾಗದು.
ಪರಮಸುಖ ಪರಿಣಾಮಕ್ಕೆ ಮಹಾನುಭಾವಿಗಳ ಸಂಗವೆ ಬೇಕು.
ಮಹಾನುಭಾವಿಗಳ ಸಂಗದಿಂದಲ್ಲದೆ ವಿಶ್ರಾಮವಿಲ್ಲ.
ಇಂತಪ್ಪ ಮಹಾನುಭಾವದ ಮೂರ್ತಿ
ಸಂಗನಬಸವಣ್ಣನ ಕೃಪೆಯಿಂದಲೆನಗೆ ನಿಜವು ಕಾಣಬಂದಿತ್ತು.
ಇದು ಕಾರಣ ನಿಜಗುರುಶಂಕರದೇವರ ಶರಣ
ಪ್ರಭುದೇವರ ಶ್ರೀಪಾದವ ಕಂಡು ನಿಶ್ಚಿಂತನಾದೆನಯ್ಯಾ! ॥೧೫೭॥

ಮೇದಾರ ಕೇತಯ್ಯಗಳು ಪ್ರಭುದೇವರ ಸ್ತುತಿಸುವ ವಚನ:

೧೩೧೫

ಎನ್ನ ಕಾಯದ ಕಳವಳವ ಕಳದು
ಗುರುಲಿಂಗವ ತೋಱಿದ.
ಎನ್ನ ಮನದ ವ್ಯಾಕುಲವ ನಿಲಿಸಿ,
ಜಂಗಮಲಿಂಗವ ತೋಱಿದ.
ಇಂತು ಅಂತರಂಗ ಬಹಿರಂಗದಲ್ಲಿ ತಾನೆಯಾಗಿ
ಎನ್ನ ಪಾವನವ ಮಾಡಿದನು.
ಅಮರಗಣಂಗಳು ಮುನಿದು ಎನ್ನ ಕೈಲಾಸಕ್ಕೊಯ್ದರೆ,
ಸದ್ಯೋನ್ಮುಕ್ತಿಯ ತೋಱಲೆಂದು ಮರ್ತ್ಯಕ್ಕೆ ಮರಳಿ ತಂದ
ಸಂಗನಬಸವಣ್ಣನೆ ಗುರುವೆನಗೆ.
ಸಂಗನಬಸವಣ್ಣನೆ ಪರವೆನಗೆ.
ಸಂಗನಬಸವಣ್ಣನ ಕರುಣದಿಂದ ಘನಕ್ಕೆ ಘನಮಹಿಮ
ಅಲ್ಲಮಪ್ರಭುವಿನ ಶ್ರೀಪಾದವ ಕಂಡು ಬದುಕಿದೆನು ಕಾಣಾ
ಗೌರೇಶ್ವರಾ. ॥೧೫೮॥

ಮತ್ತಂ,

೧೩೧೬

ಪ್ರಾಣಸ್ಥಾನದಲ್ಲಿ ಆಪ್ಯಾಯನವಾಯಿತ್ತು.
ಲಿಂಗಜಂಗಮ ತನುಸ್ಥಲದಲ್ಲಿ ಆಪ್ಯಾಯನವಾಯಿತ್ತು.
ಆಚಾರಲಿಂಗಸ್ಥಲ ಗುರುಲಿಂಗಸ್ಥಲ, ಈ ಉಭಯಸ್ಥಲ
ನಿಃಸ್ಥಲವಾಗಿ ತಾನೊಂದೆ ತೋಱುತಿರ್ದಿತ್ತು.
ಆ ತೋಱುವ ತೋಱಿಕೆಯೆ ಬಸವಣ್ಣನೆನಗೆ.
ಆ ಬಸವಣ್ಣನ ಕರುಣದಿಂದ
ಪ್ರಭುದೇವರ ಶ್ರೀಪಾದವ ಕಂಡು ಬದುಕಿದೆನು ಕಾಣಾ
ಗೌರೇಶ್ವರಾ. ॥೧೫೯॥

ಇಂತೀ ಶ್ರೀಮತ್ ಸಕಲಗಣ ಪುರಾತನರೊಳ್ ಪ್ರಭುದೇವರು
ಮಹಾನುಭಾವ ಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್
ಪ್ರಭುದೇವರ ಆರೋಗಣೆ, ಎಲ್ಲ ಪುರಾತನರ ಸ್ತುತಿಗಂ
ಏಕೋನವಿಂಶತ್ಯುಪದೇಶಂ ಸಮಾಪ್ತಂ
ಅಂತು ವಚನ ೧೩೧೬ ಕ್ಕಂ ಮಂಗಳಮಹಾ ಶ್ರೀ

❖

೨೦
ಶರಣರವಸಾನ ಪರಾಮರಿಕೆ

[೧]ಕಂದ:

ಸಂಗನಬಸವಣ್ಣಗೆ ಘನ
ಲಿಂಗದೊಳವಿರಳ ನಿಜೈಕ್ಯಮಂ ಶರಣಸ್ತೋ
ಮಂಗಳ ಅವಸಾನವ ಪ್ರಭು
ಲಿಂಗಂ ಪೇಳಿದ ಸುಬೋಧೆಯೆಂತೆನಲುಸುರ್ವೆಂ ॥೧॥

ಅದೆಂತೆಂದೊಡಾ ಪ್ರಭುದೇವರು ಎಲ್ಲಾ ಗಣಂಗಳೂ ತಮ್ಮ ಸ್ತೋತ್ರಮಂ ಮಾಡುತ್ತಿರಲು, ಆ ಪ್ರಭುದೇವರು ಬಱಿಯ ಸ್ತೋತ್ರವ ಮಾಡಿ ಫಲವೇನು? ನಿಶ್ಶಬ್ದ ಬ್ರಹ್ಮವು ನುಡಿಯ ಗಡಣಕ್ಕೆ ಸಾಧ್ಯವಪ್ಪುದೆ, ಎಲೆ ಮರುಳುಗಳಿರಾ? ಆದಿಯಲ್ಲಿ ಪರಶಿವನ ಸದ್‌ರೂಪವಾದ ಸ್ಥೂಲತತ್ತ್ವವೆ ಮರ್ತ್ಯಲೋಕದ ಮಹಾಮನೆಯನ್ನುದ್ಧರಿಸಲೆಂದು ರುದ್ರಗಣ ಪ್ರಮಥಗಣಂಗಳು ಮೊದಲಾದ ಸಮಸ್ತಗಣನಿಕರ ಸಹಿತ ಐತಂದು, ಕಲ್ಯಾಣವೆಂಬ ಕಟಕವ ಶಿವಪುರವ ಮಾಡಿ, ರುದ್ರಗಣ ಮೊದಲಾದ ಪ್ರಮಥಗಣವ ಅಸಂಖ್ಯಾತರೆಂದು ಹೆಸರಿಟ್ಟು ಕರೆದು, ಶಿವಾಚಾರಧ್ವಜವನೆತ್ತಿ, ಭಕ್ತಿಯ ಕುಳಸ್ಥಳವ ಶ್ರುತ ದೃಷ್ಟ ಪವಾಡವ ತೋಱಿ, ಶಿವಲೋಕ ಮರ್ತ್ಯಲೋಕಕ್ಕೆ ತಾನೆ ನಿಚ್ಚಣಿಗೆಯಾಗಿ ಮೆಱೆದು, ಮರ್ತ್ಯವ ಪಾವನವ ಮಾಡಿದ ಬಳಿಕ, ಇನ್ನು ಮರ್ತ್ಯದ ಹಂಗೇತಕ್ಕೆ? ತನಿರಸ ತುಂಬಿದ ಫಳ ಒಮ್ಮಿಂಗೆ ತೊಟ್ಟು ಬಿಡುವಂತೆ, ಬಂದ ಮಣಿಹ ಪೂರೈಸಿತ್ತು ನೋಡಿರೆ. ಅಸಂಖ್ಯಾತರು ಇನ್ನು ನಿಮ್ಮ ನೀವೆ ತಿಳಿದು, ನಿರಾಳದಲ್ಲಿ ನಿಜವನ್ನೈದಿ. ಸಾವನ್ನಕ್ಕರ ಸರವ ಕಲಿತರೆ ಕಾದುವ ದಿನವಿನ್ನಾವುದೆಂದು ಪ್ರಭುದೇವರು ತಮ್ಮ ಅವತಾರದ ಅವಸಾನಮಂ ನಿರೂಪಿಸುವ ಪ್ರಸ್ತಾವದ ವಚನ:

೧೩೧೭

ಅನುವನಱಿಯದೆ, ಆದಿಯ ವಿಚಾರಿಸದೆ,
ಅನಾದಿಯಲ್ಲಿ ತಾನಾರೆಂಬುದ ನೋಡದೆ

೧ + ಶ್ರೀಗುರು ಬಸವಲಿಂಗಾಯ ನಮಃ (ಮೂ)

ಸ್ತೋತ್ರವ ಮಾಡಿ ಫಲವೇನು?
'ನಿಶ್ಶಬ್ದಂ ಬ್ರಹ್ಮಮುಚ್ಯತೇ' ಎಂಬ ಘನವು
ಹೊಗಳತೆಗೆ ಸಿಕ್ಕುವುದೆ, ಎಲೆ ಮರುಳುಗಳಿರಾ?
ಅನಾದಿಯಲ್ಲಿ ಬಸವಣ್ಣನು
ಏಳನೂಱೆಪ್ಪತ್ತಮರಗಣಂಗಳು ಸಹಿತ
ಮರ್ತ್ಯಕ್ಕೆ ಬಂದನೊಂದು ಕಾರಣದಲ್ಲಿ.
ಬಂದ ಮಣಿಹ ಪೂರೈಸಿತ್ತು.
ಸಂದ ಪುರಾತರೆಲ್ಲರೂ ಕೇಳಿ
ಇಂದು ನಿಮ್ಮೆಲ್ಲರು ನಿಮ್ಮ[೧] ನೀವು ತಿಳಿದು ನೋಡಿ ನಿಜವನೈದುವುದು.
ಇನ್ನು ನಮ್ಮ ಗೊಹೇಶ್ವರಲಿಂಗಕ್ಕೆ ಸುರಾಳದ ಸುಳುಹಿಲ್ಲ. ॥೧॥

ಮತ್ತಂ,

೧೩೧೮

ಸಾವನ್ನಕ್ಕರ ಸರವ ಮಾಡಿದರೆ ಇನ್ನು
ಕಾದುವ ದಿನವಾವುದು?
ಬಾಳುವನ್ನಕ್ಕರ ಭಜಿಸುತ್ತಿದ್ದರೆ
ತಾನಹ ದಿನವಾವುದು?
ಅರ್ಥವುಳ್ಳನ್ನಕ್ಕರ ಅಜಿವುತ್ತಿದ್ದರೆ
ನಿಜವನೈದುವ ದಿನವಾವುದು?
ಕಾರ್ಯಕ್ಕೆ ಬಂದು ಆ ಕಾರ್ಯ ಕೈಸಾರಿದ ಬಳಿಕ,
ಇನ್ನು ಮರ್ತ್ಯಲೋಕದ ಹಂಗೇಕೆ?
ತನಿರಸ ತುಂಬಿದ ಅಮೃತ ಫಲ
ಒಮ್ಮಿಂಗೆ ತೊಟ್ಟುಬಿಡುವುದು,
ನೋಡಿರೆ ದುಷ್ಟಾಂತವ.
ಬಸವಣ್ಣ ಚೆನ್ನಬಸವಣ್ಣ ಮೊದಲಾದ ಪ್ರಮಥರು
ಗೊಹೇಶ್ವರಲಿಂಗದಲ್ಲಿ ನಿಜವನೈದಿ ನಿಶ್ಚಿಂತರಾಗಿರಯ್ಯಾ. ॥೨॥

ಈ ಹೀಂಗೆಂದು ಪ್ರಭುದೇವರು ನಿರೂಪಿಸುತ್ತಿರಲು, ಬಸವರಾಜದೇವರು ತಮ್ಮ ಲಿಂಗಾಂಗಸಮರಸೈಕ್ಯವೆಂತೆಂದು ಬೆಸಗೊಂಬ ಪ್ರಸ್ತಾವದ ವಚನ:

೧೩೧೯

ದೇವದೇವ, ಮಹಾಪ್ರಸಾದ.
ಅವಧರಿಸು ದೇವ ಎನ್ನ ಬಿನ್ನಹವ,

---

೧ + ನಿಮ್ಮ (ಮೂ)

ಕಾಯದ ಮಾಯದ ಸಡಗರದಲ್ಲಿ ಹುಟ್ಟಿಸಿದಿರಿ ಎನ್ನ;
ಅದು ನಿಮ್ಮ ಲೀಲಾವಿನೋದ.
ಆ ಕಾಯದ ಮಾಯದ ತಲೆಯ ಚಿವುಟಿ,
ಶ್ರೀ ಗುರು ಕಾರುಣ್ಯವ ಮಾಡಿ,
ಗುರು ಲಿಂಗ ಜಂಗಮ ತ್ರಿವಿಧಭಕ್ತಿಯ ಘನವ ತೋಱಿ,
ನಿಮ್ಮ ಪಾದೋದಕ ಪ್ರಸಾದವನ್ನಿತ್ತು ರಕ್ಷಿಸಿದಿರಿ;
ಅದು ನಿಮ್ಮ ಲೀಲಾವಿನೋದ,
ಪರವಾದಿ ಬಿಜ್ಜಳ ಒರೆಗಲ್ಲಾದಲ್ಲಿ
ಮೂನ್ನೂಱಱುವತ್ತು ಸತ್ತ ಪ್ರಾಣವನೆತ್ತಿ,
ಮೂವತ್ತಾಱು ಕೊಂಡೆಯವ ಪರಿಹರಿಸಿ,
ಎಂಬತ್ತೆಂಟು ಪವಾಡವ ಮೆಱೆದಿರಿ;
ಅದು ನಿಮ್ಮ ಲೀಲಾವಿನೋದ.
ಎನ್ನ [1]ಮನದ[1] ಮಲಿನವ ತೊಳೆಯಲೆಂದು ಬಂದು
ಶೂನ್ಯಸಿಂಹಾಸನದ ಮೇಲೆ ಮೂರ್ತಿಗೊಂಡು
ನಿಮ್ಮ ನಿಜಮಹಿಮೆಯನೆಲ್ಲಾ ಪ್ರಮಥರ ಮುಂದೆ ತೋಱಿ,
ಎನ್ನ ಪಾವನ ಮಾಡಿ,
ಷಡುಸ್ಥಲಮಂ ಎನ್ನ ಸರ್ವಾಂಗದಲ್ಲಿ ಪ್ರತಿಷ್ಠಿಸಿ,
ಎನ್ನ ನಿಮ್ಮಂತೆ ಮಾಡಿದಿರಿ;
ಅದು ನಿಮ್ಮ ಲೀಲಾವಿನೋದ.
ಕೂಡಲಸಂಗಮದೇವಾ,
ಎನ್ನ ವರ್ಮದ ಸಕೀಲವ ನೀವೆ ಬಲ್ಲಿರಾಗಿ,
ಎನಗೊಮ್ಮೆ ತಿಳುಹಿಕೊಟ್ಟು ಎನ್ನನುಳುಹಿಕೊಳ್ಳಾ ಪ್ರಭುವೆ. ||೩||

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೧೩೨೦
ಕಾಯದೊಳಗೆ ಕಾಯವಾಗಿ,
ಪ್ರಾಣದೊಳಗೆ ಪ್ರಾಣವಾಗಿ,
ಮನದೊಳಗೆ ಮನವಾಗಿ,
ಭಾವದೊಳಗೆ ಭಾವವಾಗಿ,
ಅಱುಹಿನೊಳಗೆ ಅಱುಹಿನ ತಿರುಳಾಗಿ,

೧-೧ x (ಮೂ)

ಮಱಹು ಮಾರಡೆಯಿಲ್ಲದೆ ನಿಜಪದವು ಸಾಧ್ಯವಾದ ಬಳಿಕ,
ಆವುದು ವರ್ಮ, ಆವುದು ಕರ್ಮ,
ಆವುದು ಬೋಧೆ, ಆವುದು ಸಂಬಂಧ
ನಾ ಹೇಳಲಿಲ್ಲ; ನೀ ಕೇಳಲಿಲ್ಲ.
ಅದೇನು ಕಾರಣವೆಂದರೆ,
ಬೆಸಗೊಂಬರೆ ತೆಱಹಿಲ್ಲವಾಗಿ.
ಗೊಹೇಶ್ವರಲಿಂಗದಲ್ಲಿ
ತೆಱಿಮಱಿ ಯಾವುದು ಹೇಳಯ್ಯಾ ಬಸವಣ್ಣಾ? ॥೪॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

೧೩೨೧

ಅಱಿದೆಹೆನೆಂದಡೆ ಅಱಿ[1]ವಿಂಗಸಾಧ್ಯ.
ನೆನೆದೆಹೆನೆಂದಡೆ ನೆನಹಿಂಗಸಾಧ್ಯ.
ಭಾವಿಸಿಹೆನೆಂದಡೆ ಭಾವಕ್ಕಸಾಧ್ಯ.
ವಾಙ್ಮನಕ್ಕಗೋಚರ ಲಿಂಗವನಱಿವ ಪರಿ ಎಂತಯ್ಯಾ,
ಗುರು ತೋಱದನ್ನಕ್ಕರ?
ಗುರುಶಿಷ್ಯರ ಮಥನದಲ್ಲಿ ಸ್ವಯಂಜ್ಯೋತಿ ಲಿಂಗವು
ಉದಯವಪ್ಪುದೆಂಬ ಶ್ರುತಿ ಹುಸಿಯೇ?
ಕೂಡಲಸಂಗಮದೇವಾ,
ನಿಮ್ಮ ಮಹಾನುಭಾವರ ಮಥನದಿಂದ
ಎನ್ನಲ್ಲಿ ನಿಜವ ನೆಲೆಗೊಳಿಸಾ ಪ್ರಭುವೆ. ॥೫॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೧೩೨೨

ಮಥನದ ಲೀಲೆಯಲ್ಲಿ ಹುಟ್ಟುವುದೆ ಬ್ರಹ್ಮವು?
ಶ್ರುತಿ ಸ್ಮೃತಿಗಳಿಗೆ ಅಳವಡದು ನೋಡಾ.
ಪೃಥ್ವಿಯೊಳಗಿಲ್ಲದ ಅಚಳವಪ್ಪ ಲಿಂಗವನು
ಸಚರಾಚರದಲ್ಲಿ ಭರಿತವೆಂತೆಂಬೆ?
ಇಲ್ಲದ ಲಿಂಗವನಲ್ಲಲ್ಲಿಗೆ ಉಂಟೆಂಬ ಲಿಂಗದ ವಾರ್ತೆ!
ಗೊಹೇಶ್ವರನೆಂಬ ಲಿಂಗವು ಸಾಧ್ಯವಾಗದು ಕಾಣಾ
ಸಂಗನಬಸವಣ್ಣಾ. ॥೬॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

---

೧ ಱು (ಮೂ)

೧೩೨೩

ಅನುಭಾವವಿಲ್ಲದ ಭಕ್ತಿ ಅನುವಿಂಗೆ ಬಾರದು.
ಅನುಭಾವವಿಲ್ಲದ ಲಿಂಗ ಸಮರಸಸುಖಕ್ಕೆ ನಿಲುಕದು.
ಅನುಭಾವವಿಲ್ಲದ ಪ್ರಸಾದ ಪರಿಣಾಮವ ಕೊಡದು.
ಅನುಭಾವವಿಲ್ಲದೆ ಏನನೂ ಅಱಿಯಬಾರದು.
ತನ್ನಲ್ಲಿ ಸನ್ನಿಹಿತವುಳ್ಳಡೆ ಶಿವಶರಣರ ಸಂಗವೇತಕ್ಕೆನಲುಂಟೆ?
ಕೂಡಲಸಂಗಮದೇವಯ್ಯಾ,
ನಿಮ್ಮ ಅನುಭಾವ ಮಾತಿನ ಮಥನವೆಂದು ನುಡಿಯಬಹುದೆ ಪ್ರಭುವೆ?॥೭॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೧೩೨೪

ನೆಲದ ಮುಂದಣ ಬಾಗಿಲು,
ಮೂಱು ಮೊನೆಯ ಕಂಭದ ಶೂಲದಲ್ಲಿ ಒಂದು ದೇಗುಲ,
ಅಲ್ಲಿ ಒಳಗಣ ಹೂವಿನ ಕಲ್ಲಿನಲ್ಲಿ ಸಿಲುಕಿತ್ತು
ನಾದ ಮೂರುತಿ ಲಿಂಗವಿಪ್ಪುದು.
ಒಂದು ಮಾತನಾಡುವರಳುಕಿ ನುಡಿವುದು.
ಗೊಹೇಶ್ವರ ಮೆಚ್ಚಲು ಬಹುಮಾತಿನ ಮಾಲೆಯ ಅನುಭಾವಕ್ಕೆ
ನಾಚುವೆನು ಕಾಣಾ ಸಂಗನಬಸವಣ್ಣಾ! ॥೮॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

೧೩೨೫

ಅಱಿವಿಂದಲಱಿವೆನೆಂದರೆ ಅಱಿವಿಂಗಸಾಧ್ಯ.
ಅಱಿಯದೆ ಅಱಿದ ಪರಿ ಎಂತಯ್ಯಾ?
ಭಾವಿಸಿ ಬೆಱಸುವೆನೆಂದರೆ ಭಾವ ನಿರ್ಭಾವವೆಂದುದಾಗಿ,
ಮತ್ತೆ ಭಾವಿಸಿಯಲ್ಲದೆ ಕಾಣಬಾರದಯ್ಯಾ.
ವಾಙ್ಮನಕ್ಕಗೋಚರನೆಂದರೆ,
ನುಡಿಯಲ್ಲಿಲ್ಲದೆ ನಡೆ ಸಾಧ್ಯವಹ ಪರಿ ಎಂತು ಹೇಳಯ್ಯಾ?
ಹಲವು ಮಾತಿನ ನಿಲವು ಒಂದೆಂಬ ನುಡಿಯ ಗಡಣದ ನಿಜವ[1]
ಬಲ್ಲವರಾರು ಹೇಳಯ್ಯಾ?
ನಿಮ್ಮ ಮಾತೆಂಬ ಪರತತ್ತ್ವ ಒಂದಲ್ಲದೆ ಎರಡುಂಟೆ?
ಕೂಡಲಸಂಗಮದೇವ ಕಡೆಮುಟ್ಟ[2] ನೋಡುವಡೆ ನುಡಿಗೆಡೆಯಿಲ್ಲ.
ಕೃಪೆಯಿಂದ ಕರುಣವ ಮಾಡಯ್ಯಾ ಪ್ರಭುವೆ. ॥೯॥

---

೧ ವು (ಮೂ) ೨ ಟ್ಟಿ (ಮು)

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೧೩೨೬

ಪ್ರಸಾದಲಿಂಗವುಳ್ಳನ್ನಕ್ಕರ ಪ್ರಾಣಲಿಂಗವೆಂಬ ವಾರ್ತೆ
ಭಂಗ ನೋಡಾ ಸಂಗನಬಸವಣ್ಣಾ.
ಬೀದಿಯಲ್ಲಿ ಕೊಡನ[1]ನೊಡೆದು
[2]ಬಯಲನುಡುಗಿದರೆ[2] ಉಂಟೆ ಹೇಳಾ?
ಗೊಹೇಶ್ವರಲಿಂಗವ ಬೇಱುಮಾಡಿ ಅಱಸಲುಂಟೆ ಬಸವಣ್ಣಾ? ॥೧೦॥

ಇದಕ್ಕೆ ಬಸವರಾಜದೇವರ ಪ್ರತ್ಯುತ್ತರ:

೧೩೨೭

ಆದಿಯಲ್ಲಿ ಸಾಧ್ಯವೆಂಬೆನೆ? ಅಲ್ಲಿಂದತ್ತತ್ತ.
ಅನಾದಿಯಲ್ಲಿ ಸಾಧ್ಯವೆಂಬೆನೆ? ಅಲ್ಲಿಂದತ್ತತ್ತ.
ಸಾಧ್ಯಾಸಾಧ್ಯವೆಂಬ ಸೂತಕ ಶಬ್ದಕ್ಕತೀತ.
ಆ ಲಿಂಗವೇ ಆಲಿಂಗನವಾಗಿ ಅವಿರಳಸಂಪನ್ನನಾದಲ್ಲಿ,
ಭೇದಭಾವವುಂಟೆಂಬೆನೆ? ಅದೇ ಭವಕ್ಕೆ ಬೀಜ.
ಎನ್ನ ಪ್ರಾಣಲಿಂಗ [3]ನೀವೆಂದೆ ಇಪ್ಪೆನಯ್ಯಾ[3] ಕೂಡಲಸಂಗಮದೇವಾ ॥೧೧॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ:

೧೩೨೮

ಬಸವಣ್ಣನೆ ಪ್ರಾಣಲಿಂಗವೆಂದು ಭಾವಿಸಿ,
ದೃಷ್ಟಿ ನಟ್ಟು ಸೈವೆಱಗಾದುದ ಕಂಡೆ.
ಕಲ್ಪಿಸಿ ಮನ ನಟ್ಟು ನಿಬ್ಬೆಱಗಾಯಿತ್ತಯ್ಯಾ!
ಗೊಹೇಶ್ವರಾ, ನಿಮ್ಮಲ್ಲಿ ಸರ್ವನಿರ್ವಾಣಿ ಸಂಗನಬಸವಣ್ಣನೆ
ಎನ್ನ ಪ್ರಾಣಲಿಂಗವೆಂದಱಿದು,
ನೀನೆನ್ನನೊಳಗೊಂಡ ಗುರುವೆಂದು ಕಂಡೆನಯ್ಯಾ.
ನಿಮ್ಮ ಧರ್ಮ, ನಿಮ್ಮ ಧರ್ಮ. ॥೧೨॥

ಮತ್ತಂ,

೧೩೨೯

ಎತ್ತೆತ್ತ ನೋಡಿದರೆ ಬಸವಣ್ಣನೆಂಬ ಬಳ್ಳಿ.
ಆ ಬಳ್ಳಿಯ ಹಿಡಿದೆತ್ತಿದರೆ ಲಿಂಗವೆಂಬ ಗೊಂಚಲು.

---

೧ x (ಮೂ) ೨–೨ ಬಯಲು ಮಡುಲು ಮಡುಗಿದರೆ(ಮೂ) ೩–೩ ನೀವೆಂದಿಪ್ಪನಯ್ಯಾ(ಮೂ)

ಆ ಲಿಂಗದ[೧] ಗೊಂಚಲ ಹಿಡಿದೆತ್ತಿದರೆ
ಭಕ್ತಿರಸಮಯವಾಯಿತ್ತಯ್ಯ!
ಇದಾರಯ್ಯ, ಅಮಳೋಕ್ಯವ ಮಾಡಬಲ್ಲವರು?
ಇದಾರಯ್ಯಾ, ಹೊಱಗೆ ಪ್ರಜ್ವಲಿಸಿ ತೋಱಬಲ್ಲವರು?
ಬಸವಗುರು ಎನ್ನ ಕರಸ್ಥಲದ ಲಿಂಗದ
ಆದಿಯನಱುಹಿ ತೋರಿದ ಕಾರಣ,
ಗೊಹೇಶ್ವರಲಿಂಗದ ನಿಲವ ನಿನ್ನಿಂದಲಱಿದೆ.
ಈ ಉಳಿದ ಲೋಕಾದಿಲೋಕಂಗಳೆಲ್ಲಾ
ಎನ್ನ ಮುಖದಲ್ಲಿ ಕಿಂಚಿತ್ತು. ॥೧೩॥

ಮತ್ತಂ,

೧೩೩೦

'ಬ' ಎಂಬಲ್ಲಿ ಭವ ಹರಿಯಿತ್ತಯ್ಯಾ.
'ಸ' ಎಂಬಲ್ಲಿ ಸರ್ವಜ್ಞಾನಿಯಾದೆನು.
'ವ' ಎಂಬಲ್ಲಿ ವಱಿಸುವರೆ ಚೈತನ್ಯಾತ್ಮಕನಾದೆನು.
ಇಂತೀ ಬಸವಾಕ್ಷರತ್ರಯವೆನ್ನ ಸರ್ವಾಂಗದಲ್ಲಿ
ತೊಳಗಿ ಬೆಳಗುವ ಭೇದವನಱಿದು,
ಆನು ಬಸವಾ ಬಸವಾ ಎನುತಿರ್ದೆನು ಕಾಣಾ ಗೊಹೇಶ್ವರಾ! ॥೧೪॥

ಮತ್ತಂ,

೧೩೩೧

ಅಳಿಯ ಬಳಿಯ ಸುಳಿವನಲ್ಲ.
ಪ್ರಳಯವಿಲ್ಲದ ವಿಜಯನು.
ಕಳಾಕುಳದ ಆತ್ಮನ ಅಂಗಸಂಗಿಯಲ್ಲ.
ಸುಳುಹಿನೊಳಗಣ ಸೂಕ್ಷ್ಮವ ತಿಳಿದು ನೋಡುವರೆ,
ಅಣಿಮಾದಿ ಗುಣರಹಿತನ, ಅಕಲ್ಪಿತಮಹಿಮನನೇನೆಂಬೆನು?
ನೆಳಲ ಕಳವಳದ ಬಳಿಯ ಭಾವರೂಪನಲ್ಲ.
ಬೆಳಗಿನೊಳಗಣ ಬೆಳಗು ಗೊಹೇಶ್ವರನೆಂಬ ನಿಲವು
ಸಂಗನಬಸವಣ್ಣನ ಕರಸ್ಥಲದೊಳಗೆ ತೊಳಗಿ ಬೆಳಗುತ್ತಿದ್ದಿತ್ತು! ॥೧೫॥

[೨]ಮತ್ತಂ,[೨]

---

೧. ವೆಂಬ(ಮೂ) ೨–೨ x (ಮೂ)

೧೩೩೨

ಅಂಗದ ಕೈಯಲ್ಲಿ ಲಿಂಗ,
ಮನದ ಕೈಯಲ್ಲಿ ನಿಸ್ಸಂಸಾರ ಎಂತಯ್ಯಾ?
ಪ್ರಾಣಲಿಂಗ, ಪ್ರಾಣಲಿಂಗವೆಂದು ಭಿನ್ನವಿಟ್ಟು ನುಡಿವೆನು.
ಹೊಱಗೆ ಕುಱುಹಾಗಿ ತೋಱುತ್ತಿದೆ.
ಇದು ಕೃತಯುಗದಲ್ಲಿ ಮೂರ್ತಿಯಾದ ಕರಸ್ಥಲವಲ್ಲ.
ಇದು ತ್ರೇತಾಯುಗದಲ್ಲಿ ಮೂರ್ತಿಯಾದ ಕರಸ್ಥಲವಲ್ಲ.
ದ್ವಾಪಾರ[೧]ಯುಗ[೧]ದಲ್ಲಿ ಮೂರ್ತಿಯಾದ ಕರಸ್ಥಲವಲ್ಲ.
ಕಲಿಯುಗದಲ್ಲಿ ಮೂರ್ತಿಯಾದ ಕರಸ್ಥಲವಲ್ಲ.
ಕೆಳಗೇಳು ಲೋಕ ಮೇಲೇಳು ಲೋಕ ಹುಟ್ಟದಲ್ಲಿಂದತ್ತತ್ತ
ಮುನ್ನಲಾದ ಕರಸ್ಥಲ. ಸಂಗನಬಸವಣ್ಣನ ಕರಸ್ಥಲದೊಳಗೆ
ಗೊಹೇಶ್ವರನೆಂಬ ಲಿಂಗ ತೊಳಗಿ ಬೆಳಗುತ್ತಿರ್ದುದ ಕಂಡು
ನಮೋ ನಮೋ ಎನುತಿರ್ದೆನು. ॥೧೬॥

ಮತ್ತಂ,

೧೩೩೩

ಜಗತ್ ಸ್ವಯಂಭುವೆಂಬ ಗಣೇಶ್ವರನ
ಕರಸ್ಥಲದಲ್ಲಿ ಹಿಡಿದಾಡುತ್ತಿರ್ದರೆ,
ಆದಿ ಲಿಂಗವೆಂದು ಬಗೆಯದು ಲೋಕವೆಲ್ಲಾ.
ಗೊಹೇಶ್ವರಾ, ನಿಮ್ಮ ಶರಣ ಬಸವಣ್ಣನಚ್ಚಲಿಂಗವ
ಹಿಡಿದ ಕಾರಣ ಬಱಿಯ ಲಿಂಗದ ಮಸ್ತಕವಾಯಿತ್ತು ತ್ರಿಜಗದೊಳಗೆ! ॥೧೭॥

ಮತ್ತಂ,

೧೩೩೪

ಎನ್ನ ಕರಸ್ಥಲದೊಳಗೊಂದು ಮಹಾಬೆಳಗ ಕಂಡೆನಯ್ಯಾ!
ಮಹಾ ಮಂಗಳ ನಿಳಯವಾಗಿ ತೋಱುತ್ತಿದೆ!
ಗೊಹೇಶ್ವರಲಿಂಗದ ಕಂಗಳ [೨]ಕಾಂತಿಗಳು[೨]
ಸಂಗನಬಸವಣ್ಣನ ನಿವಾಳಿಸುತ್ತಿದ್ದವಯ್ಯಾ! ॥೧೮॥

ಮತ್ತಂ,

೧೩೩೫

ಗುರುಸ್ಥಲ ಲಿಂಗಸ್ಥಲ ಜಂಗಮಸ್ಥಲ ಪ್ರಸಾದಸ್ಥಲ
ಅಡಗಿತ್ತಲ್ಲಾ ಸಂಗನಬಸವಣ್ಣನ ಕರಸ್ಥಲದೊಳಗೆ!

೧-೧ x (ಮೂ) ೨-೨ ಕಾಜೆಗಳು (ಮೂ)

ಇನ್ನಾರಿಗಹುದೀ ಭಕ್ತಿಸ್ಥಲ?
ಇನ್ನಾರಿಗೆ [೧]ಸಾರುವುದೀ[೧] ಲಿಂಗಸ್ಥಲ?
ಗೊಹೇಶ್ವರಾ, ಸಂಗನಬಸವಣ್ಣನ ಮಱೆಹೊಕ್ಕು ಬದುಕಿದೆನು! ॥೧೯॥

[೨]ಮತ್ತಂ,[೨] ಪ್ರಭುದೇವರು ಬಸವರಾಜದೇವರ ಐಕ್ಯಸ್ಥಲಮಂ ಕೊಂಡಾಡಿದ ಪ್ರಸ್ತಾವದ ವಚನ:

೧೩೩೬

ಅವಸ್ಥೆ ಅವಸ್ಥೆಯ ಕೂಡಿ, ಬಿಂದು ನಾದವ ಕೂಡಿ,
ಕಳೆ ಕಳೆಗಳು ಒಂದಾದ ಪರಿಯ ನೋಡಾ!
ಅದು ಲಿಂಗದಲನುಮಿಷ ಆನೆಂಬ ಗುರುಪದವಾದನಯ್ಯಾ.
ಹಿಂದು ಮುಂದ ಒಂದು ಮಾಡಿ, ಮೂರ್ತಿಯಾಗಿ,
ಲಿಂಗ ಜಂಗಮವಾದ ಪರಿಯ ನೋಡಾ!
ಗೊಹೇಶ್ವರನ ಅಮಳೋಕ್ಯವಾದ ಸಂಗನಬಸವಣ್ಣನ ಶ್ರೀಪಾದಕ್ಕೆ
ನಮೋ ನಮೋ ಎಂಬೆನು. ॥೨೦॥

ಮತ್ತಂ,

೧೩೩೭

ಕೈಲಾಸಕ್ಕೆ ಹೋದವರೆಲ್ಲಾ ಕೈಸೆಱೆಯಾದರು.
ಲಿಂಗದಲ್ಲಿ ಲೀಯವಾದವರೆಲ್ಲರೂ[೩] ಬಂಧನಕ್ಕೊಳಗಾದರು.
ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯದವರೆಲ್ಲಾ
ಎಡೆಯಾಡುತ್ತಿರ್ದರು. ಗೊಹೇಶ್ವರಾ, ನಿಮ್ಮ ಶರಣ ಸಂಗನಬಸವಣ್ಣ
ಜಂಗಮಪ್ರಸಾದಿಯಾದನಾಗಿ ಸ್ವಯಲಿಂಗವಾದ. ॥೨೧॥

ಮತ್ತಂ, ಪ್ರಭುದೇವರು ಬಸವರಾಜದೇವರ ನಿರ್ವಯಲ ಜ್ಞಾನಶೂನ್ಯಮಂ ನಿರೂಪಿಸುವ ಪದಂಗಳು:

೧೩೩೮

ರಾಗ : ನಾಟಿ
ತಾನಿದಿರೆಂಬೆರಡಱೆಯದೆ ಧ್ಯಾನ[೪] ನಷ್ಟವಾಗಿ ಜ್ಞಾತೃ
ಜ್ಞಾನ ಜ್ಞೇಯವೆಂಬ ತ್ರಿವಿಧವನಜಿತ[೫] ಮಹಿಮಾ [೬]ಪಲ್ಲವಿ[೬]

[೭]ಹೊಱಗೊಳಗೆಂಬೆರಡಱ ಬಗೆಯನ್ನಱಸದೆ
ಎರಡಱ ತೆಱನೆಂಬ ನುಡಿಯ ಮುನ್ನವೆ ತಾನಱೆಯದೆ

೧–೧ ಸಾರೂದೀ(ಮೂ) ೨–೨ x (ಮೂ) ೩ x (ಮೂ) ೪ ನಂ (ಮೂ) ೫–೫ ತಂ (ಮೂ) ೬–೬ ಪಲ್ಲವ (ಮೂ) ೭ + ಪದ (ಮೂ)

ಅಱಿವಿನ ಮೂಲವ ಹಱಿದು ಮಱವೆ ನಷ್ಟವಾದ ಅಱಿವು
ಅಱಿವಿನ ಮಱವೆಯ ಕುಱುಹಳಿದ ನಿಶ್ಚಿಂತಾ ॥೧॥

ಉಲುಹಡಗಿದ ಸಮುದ್ರದ ನಿಲವಿನ ಘಾತದಂತೆ
ತಿಳಿವಿನ ಮಹಾಘನವಿವೇಕ ಹಱಿಹಂಚಾಗಿ
ಉಳಿದೆನೆಂಬಾ ಉಳುಮೆಯ ಮೂಲವ [೧]ಮಱಿದು[೧]
ಕಳೆಯ ಬೆಳಗಳಿದು ನಿಜದೊಳು ನಿಂದ ಮಹಿಮಾ ॥೨॥

ಉರಿ ಕರ್ಪುರವೊಡಗೂಡಿ ಎರಡೂ ಅಳಿದ ಬಳಿಕ
ಮರಳಿ ನೋಡಿಹೆನೆಂದರೆ ಭಸ್ಮವಿಲ್ಲ ನೋಡಾ
ಅಱಿವನಱಿದೆಹೆನೆಂಬ ಅಱಿವಿನ ಮೂಲವ ದಹಿಸಿ
ಧರಿಸಿದ ಜ್ಞಾನಭಸ್ಮವೆಂಬುದಿಲ್ಲದ ಮಹಿಮಾ ॥೩॥

ನಿಜದಲ್ಲಿ ನಿರ್ಣಯವಡಗಿ ಗತಿಮತಿ ನಷ್ಟವಾಗಿ
ಕಳೆಯೊಳಗಣ ಬೆಳಗು ತಾನೆಂದು ತೋಱುತಲಿರ್ಪ
ತೊಳಗಿ ಬೆಳಗುವ ಚೈತನ್ಯ ತನ್ನಲ್ಲಿ ತಾನೆ ನಿಃ
ಕಳೆಯಾಗಿ ನಿಜದೊಳು ನಿಶ್ಶೂನ್ಯವಾದ ಮಹಿಮಾ ॥೪॥

ತನ್ನೊಳು ತಾನೆಯಾಗಿ ಎನ್ನಲ್ಲಿ ನಾನಱಿದು
ಎನ್ನಲ್ಲಿ ತಾನಱಿದೆನೆಂಬ ಅ[೨]ಱುಹಿಗೆ ತೆಱಹುಗುಡದೆ
ಬಿಮ್ಮು ಬೀಸರವಾಗಿ ಹಮ್ಮು ಶೂನ್ಯವಾಗಿ
ನಿರ್ಮಳ ನಿಜಪದವಾದ ಉಪಮಾತೀತ[೩] ಮಹಿಮಾ ॥೫॥

ಜ್ಞಾನಜ್ಯೋತಿಯ ಪ್ರಭೆ ತಾನಾಗಿ ನಿಂದಿರ್ದು
ತಾನಾಗಿರ್ದೆನೆಂಬ ಜ್ಞಾನ ಶೂನ್ಯವಾಗಿ
ತಾನೆ ತನ್ನೊಳು ಮೈಮಱೆದೊಱಗಿದ ನಿರಾಳ
ಜ್ಞಾನಾತೀ[೪]ತಂ[೪] ನಿರುಪಮ ನಿಶ್ಚಲ ನಿರ್ಭೇದ್ಯಾ ॥೬॥

ಶಬ್ದ ನಿಶ್ಶಬ್ದ[೫]ವಾಗಿ ನಿಶ್ಶಬ್ದ[೫]ವನಾಹತವಾಗಿ
ಶಬ್ದ ನಿಶ್ಶಬ್ದವೆಂಬ ಬುದ್ಧಿ ನಿರ್ವಯಲಾಗಿ

೧–೧ ಮಱಿದು(ಮೂ)೨ x (ಮೂ) ೩.ತಂ (ಮೂ) ೪–೪ ತ (ಮೂ) ೫–೫ x (ಮೂ)

ಇದ್ದುದು ಹೋದುದನಱಿಯದೆ ಮೇಱೆಗೆಟ್ಟಾ
ನಿಶ್ಶಬ್ದ ಗಂಭೀರ ಗೊಹೇಶ್ವರ ನಿಮ್ಮ ಬಸವಣ್ಣಾ ॥೭॥

ಪದ ಸಹ ವಚನ: ॥೨೮॥

ಇಂತು ಪ್ರಭುದೇವರು ಬಸವರಾಜದೇವರಿಗೆ ಲಿಂಗಾಂಗಸಮರಸದ ನಿರ್ವಯಲ ನಿಜಸಮಾಧಿಯ ನಿರ್ಣಯವನಱುಹಿ ತೋಱಲು, ಆ ಬಸವರಾಜದೇವರು ಕೃತ ನಿಶ್ಚಯವನೈದಿದ ವಚನ:

೧೩೩೯

ಆರತವಡಗಿತ್ತೆನ್ನ, ಬಯಕೆ ಸಮನಿಸಿತ್ತೆನ್ನ,
ಸಂಕಲ್ಪ ಸಮನಿಸಿತ್ತೆನ್ನ, ಸ್ವಯವು ದೊರಕೊಂಡಿತ್ತೆನ್ನ.
ನಿಮ್ಮ ನೋಡಿ ಎನ್ನ ಕಂಗಳು
ಮಂಗಳಮಯದ ಸುಖಸಂಗವಾಯಿ[1]ತ್ತಯ್ಯ.[1]
ಒಳಗು ಹೊಱಗು, ಹೊಱಗೊಳಗೆಂಬುದ ತಿಳಿದು,
ಪ್ರಭುವಿನ ಕರುಣದಿಂದ ಕೂಡಲಸಂಗಮದೇವರಲ್ಲಿ ತೆಱಹಿಲ್ಲದಿದ್ದೆನು. ॥೨೯॥

ಆ ಪ್ರಸ್ತಾವದೊಳು ಚೆನ್ನಬಸವರಾಜದೇವರು ಬಸವರಾಜದೇವರ ನಿರ್ವಯಲ ಪ್ರಸಾದದ ಕೃತನಿಶ್ಚಯವ ಕಂಡು ಸ್ತೋತ್ರವ ಮಾಡುವ [2]ವಚನ.[2] ಪದಂಗಳು:

೧೩೪೦

ರಾಗ : ಭೂಪಾಳಿ
ಮಹಾಘನಲಿಂಗದೊಳಗೆ
ಮಹಾಘನ ತದ್ರೂಪಾಗಿ
ಸಹಜ ಪರಿಣಾಮ ಪ್ರಸಾದವನಾರೋಗಿಸಿ
ನಿರ್ವಯಲಾದ ಬಸವಣ್ಣ ಗುರುವೆ [3]॥ಪಲ್ಲವಿ॥[3]

[4]ಇತರೇತರ ಭಾವವನಱಿಯದೆ
ಸತತ ವಿಧಾನವೆಂದಱಿಯದೆ
ಕೃತನಿಶ್ಚಯ ಪರಿಣಾಮಪ್ರಸಾದವ-
ನಾರೋಗಿಸಿ ನಿರ್ವಯಲಾದ ॥೧॥

ನಿಂದ ಸುಖವ ನಿಂದೆನೆಂದೆಂಬಾ
ಸಂದುಸಂಶಯ ಭಾವವ ಮಱೆದು

೧-೧ ತ್ತು ಅಯ್ಯಾ (ಮೂ) ೨-೨ ವಚನದ (ಮು) ೩-೩ ಪಲ್ಲದ (ಮೂ) ೪ + ಪದ(ಮೂ)

ನಿಂದ ನಿಜಪರಿಣಾಮಪ್ರಸಾದದೊ-
ಳೊಂದಿ ನಿಜಗ್ರಾಹಕನಾದ ಸುಖಿಯೆ ॥೨॥

ಅರ್ಪಿತವಿಲ್ಲದ ಮುನ್ನವೆ
ಅರ್ಪಿತ ನಿಜರೂಪಾಗಿ
ಅರ್ಪಿತ [೧]ಗ್ರಾಹಕ[೧] ಪರಿಣಾಮ
ಪ್ರಸಾದದ ತವನಿಧಿಯೆ ॥೩॥

ಮುಟ್ಟದ ಮುನ್ನವೆ ಪ್ರಸಾದಗ್ರಾಹಕನಾಗಿ
ಮುಟ್ಟಿದೆನೆಂಬುದನಱಿಯದೆ
ಬಟ್ಟಬಯಲ ಪರಮಾನಂದದಿ
ದೃಷ್ಟಿ ಮುಟ್ಟಿದ ನಿಜವೆ ॥೪॥

ನಿರ್ಣಯ ನಿರ್ಲಯವಾದ
ನಿರಂಜನ [೨]ಸನ್ನಿಹಿತ[೨]
ಕೂಡಲಚೆನ್ನಸಂಗಯ್ಯನಲ್ಲಿ
ನಿತ್ಯತೃಪ್ತನಾದ ಪರಿಣಾಮಿ ಬಸವಣ್ಣತಂದೆ ॥೫॥

ಪದ ಸಹ ವಚನ: ॥೩೪॥

ಮತ್ತಂ,

೧೩೪೧

ಅಪ್ಪುವನಪ್ಪಿದ ವಾರಿಕಲ್ಲಿನಂತೆ,
ವಾಯುವನಪ್ಪಿದ ಪರಿಮಳದಂತೆ,
ಲಿಂಗವನಪ್ಪಿದ ಶರಣನ ದೇಹಿ ಎನಬಹುದೆ?
ಅನಲನನಪ್ಪಿದ ಕರ್ಪೂರದಂತೆ
ಕೂಡಲಚೆನ್ನಸಂಗಯ್ಯಾ, ನಿಮ್ಮ ಶರಣ ಬಸವಣ್ಣನ ನಿಲವು. ॥೩೫॥

ಮತ್ತಂ,

೧೩೪೨

ತಾನೆಲ್ಲ ಜಗ, ಜಗವೆಲ್ಲ ತಾನೆಂಬ ಅಱಿವಱಿತು,
ಮನ ವೇದ್ಯ [೩]ರೂಪಾಗಿ,[೩]
ಅನ್ಯವಿಲ್ಲದ ಅನ್ಯವನಱಿಯಲೆಲ್ಲಿಯದು?[೪]

೧-೧ x (ಮೂ) ೨-೨ ಸಹಿತ (ಮೂ) ೩-೩ ರೂಪವಾಗಿ (ಮೂ) ೪ ದೊ(ಮೂ)

ನಿರಂಜನ ನಿಜಚಿದ್‌ರೂಪನಾಗಿ,
ಅಜಿವು ತಾನೆಂಬ ಮಮತೆಗೆ ತೆರಹಿಲ್ಲೆಂದು
ಆನೆನ್ನ ತಾನೆನ್ನದುಳಿದುಳುಮೆಯನುಪಮಿಸಬಹುದೆ?
ಅನುಪಮ ಸುಖಸಾರಾಯ
ಕೂಡಲಚೆನ್ನಸಂಗಯ್ಯಾ ನಿಮ್ಮ ಶರಣ ಬಸವಣ್ಣನು. ॥೩೬॥

ಮತ್ತಂ,

೧೩೪೩

ವೇದ ವೇದಾರ್ಥ ಸಾರಾಯದಿಂದ
ಹದಿನಾಲು ಶಾಸ್ತ್ರ ಪುರಾಣಂಗಳಾದವು.
ಆ ಪುರಾಣಂಗಳ ಸಾರಾಯವನಜಿವುದರಿಂದ ಜ್ಯೋತಿಜ್ಞಾನವಾಯಿತ್ತು.
ಆ ಜ್ಯೋತಿಜ್ಞಾನದಿಂದ ಮತಿಜ್ಞಾನ ಶ್ರುತಜ್ಞಾನ
ಮನಪರಿಪೂರ್ಣಜ್ಞಾನ ಅವಧಿಜ್ಞಾನ ಕೇವಲಜ್ಞಾನ–
ಇಂತೀ ಪಂಚಜ್ಞಾನವೇ ಪಂಚಸ್ಥಲವಾಯಿತ್ತು.
ಮತಿಜ್ಞಾನವುಳ್ಳಾತನೆ ಭಕ್ತ.
[೧]ಶ್ರುತ[೧]ಜ್ಞಾನವುಳ್ಳಾತನೆ ಮಾಹೇಶ್ವರ.
ಮನ ಪರಿಪೂರ್ಣಜ್ಞಾನವುಳ್ಳಾತನೆ ಪ್ರಸಾದಿ.
ಅವಧಿಜ್ಞಾನವುಳ್ಳಾತನೆ ಪ್ರಾಣಲಿಂಗಿ.
ಕೇವಲ ಜ್ಞಾನವುಳ್ಳಾತನೆ ಶರಣ.
ಶರಣಸ್ಥಲವೆಂಬುದು ಭವಂ ನಾಸ್ತಿ.
ಪಂಚಜ್ಞಾನಕ್ಕೆ ಮೂಲವಾದ ಜ್ಯೋತಿಜ್ಞಾನವೆ
ಪಂಚಸ್ಥಲದಲ್ಲಿ ಏಕಾಕಾರದ ಐಕ್ಯನು.
ಇಂತೆಂದುದಾಗಿ ಕೂಡಲಚೆನ್ನಸಂಗಯ್ಯನಲ್ಲಿ
ಪಂಚಸ್ಥಲದ ನೆಲೆಯ ಬಲ್ಲ ಐಕ್ಯ ಬಸವಣ್ಣಂಗೆ
ನಮೋ ನಮೋ ಎಂಬೆನು. ॥೩೭॥

ಆ ಪ್ರಸ್ತಾವದೊಳು ಬಸವರಾಜದೇವರ ಪರಾಮರಿಕೆ:

೧೩೪೪

ಏನೆಂಬೆನೇನೆಂಬೆನೊಂದೆರಡಾದುದ!
ಎಂತೆಂಬೆನೆಂತೆಂಬೆ ಎರಡೊಂದಾದುದ!
ಅವಿರಳಘನಲಿಂಗೈಕ್ಯ ಮಹಾದಾನಿ
ಕೂಡಲಸಂಗಮದೇವಯ್ಯ ತಾನೆ ಬಲ್ಲ! ॥೩೮॥

೧–೧ ಶ್ರುತಿ(ಮೂ)

ಮತ್ತಂ,

೧೩೪೫

ಘನಗಂಭೀರ ಮಹಾಘನದೊಳಗೆ
ಘನಕ್ಕೆ ಘನವಾಗಿದ್ದೆನಯ್ಯಾ.
ಕೂಡಲಸಂಗಮದೇವಯ್ಯನೆಂಬ ಮಹಾಬೆಳಗಿನೊಳಗೆ
[1]ಬೆಳ[1]ಗಾಗಿರ್ದೆನೆಂಬ ಶಬ್ದ ಮುಗ್ಧವಾದುದನೇನೆಂಬೆನಯ್ಯಾ! ॥೩೯॥

ಮತ್ತಂ,

೧೩೪೬

ದೆಸೆ ದಿಕ್ಕು ಧರೆ ಗಗನವೆಂಬುದ ನಾನಱಿಯೆನಯ್ಯಾ.
'ಲಿಂಗ ಮಧ್ಯೇ ಜಗತ್ ಸರ್ವಂ' ಎಂಬುದ ನಾನಱಿಯೆನಯ್ಯಾ.
ಲಿಂಗಸೋಂಕಿನ ಸುಖದೊಳಗೆ ಶಿವಶಿವಾ ಎನುತಿರ್ದೆನಯ್ಯಾ.
ಅಂಬುಧಿಯೊಳಗೆ ಬಿದ್ದ ವಾರಿಕಲ್ಲಿನಂತೆ ಭಿನ್ನಭಾವವಿಲ್ಲದೆ
ಶಿವ ಶಿವಾ ಎನುತಿರ್ದೆನು ಕಾಣಾ ಕೂಡಲಸಂಗಮದೇವಾ. ॥೪೦॥

ಮತ್ತಂ,

೧೩೪೭

ಅಱಿವನ್ನಕ್ಕರ ಅರ್ಚಿಸಿದೆ.
ಅಱಿವನ್ನಕ್ಕರ ಪೂಜಿಸಿದೆ.
ಅಱಿವನ್ನಕ್ಕರ ಹಾಡಿ ಹೊಗಳಿದೆ.
ಅಱಿವುಗೆಟ್ಟು, ಮಱಹು ನಷ್ಟವಾಗಿ,
ಭಾವ ನಿರ್ಭಾವವಾಗಿ, ನಿಜ ಒಳಕೊಂಡಿತ್ತಾಗಿ
ಕೂಡಲಸಂಗಯ್ಯನಲ್ಲಿ ಸರ್ವ ನಿವಾಸಿಯಾಗಿದ್ದೆನು. ॥೪೧॥

ಮತ್ತಂ,

೧೩೪೮

ಅಱಿಯಲಿಲ್ಲದ ಅಱಿವು ಅವಗ್ರಹಿಸಿತ್ತಾಗಿ,
ಅಱಿಯಲಿಲ್ಲದ ಮಱ[2]ಯಲಿಲ್ಲದ ನಿಜವು ನಿಂದಿ[2]ತ್ತಾಗಿ
ನಿರ್ನಾಮವಾಯಿತ್ತು; ನಿಃಪತಿಯಾಯಿತ್ತು.
ಅಗಮ್ಯದಲ್ಲಿ ಗಮನಗೆಟ್ಟಿತ್ತು; ನಿಂದಲ್ಲಿ ನಿರಾಳವಾಯಿತ್ತು.
ಕೂಡಲಸಂಗಮದೇವರಲ್ಲಿ ಶಬ್ದ ಮುಗ್ಧವಾಯಿತ್ತು. ॥೪೨॥

ಮತ್ತಂ,

೧-೧ ಬೆಱ(ಮೂ) ೨ ದು(ಮು)

೧೩೪೯

ಅಂತರಂಗ ಬಹಿರಂಗ ಆತ್ಮಸಂಗ ಒಂದೆಯಯ್ಯಾ.
ನಾದ ಬಿಂದು ಕಳಾತೀತ ಆದಿಯಾಧಾರ ಒಂದೆಯಯ್ಯಾ.
ಆರೂಢದ ಕೂಟದ ಸುಖವನು
ಕೂಡಲಸಂಗಮದೇವ ತಾನೇ ಬಲ್ಲನು. ॥೪೩॥

ಮತ್ತಂ,

೧೩೫೦

ಸಮಸ್ತ ಕತ್ತಲೆಯ ಮಸಕವ [೧]ಕಳೆದಿಪ್ಪ[೧] ಇರವ ನೋಡಾ!
ಬೆಳಗಿನ ಬೆಳಗು ಸಿಂಹಾಸನವಾಗಿ,
ಬೆಳಗು ಬೆಳಗ ಕೂಡಿದ ಕೂಟವ ಕೂಡಲಸಂಗಯ್ಯ ತಾನೆ ಬಲ್ಲ! ॥೪೪॥

ಮತ್ತಂ, ಚಿಕ್ಕದಣ್ಣಾಯಕರ ಸಮರಸ:

೧೩೫೧

ಅಜೀವಿನಾಶ್ರಯ ಸಂಗ
[೨]ಅಜೆತು ನೆಜಿ[೩] ಮಾಡಲು,[೨]
ಭಾವದಲ್ಲಿ ಸರ್ಪದಷ್ಟವಾಗಿ, ಆಕಾರ ಪ್ರಾಣದಲ್ಲಿ ವಿಶ್ರಮಿಸಿತ್ತು.
ಭಾವದಲ್ಲಿ ಭರಿತ, ನಿರ್ಭಾವದಲ್ಲಿ ನಿರತ
ಕೂಡಲಚೆನ್ನಸಂಗಯ್ಯ, ಸಕಳಾಶ್ರಯದಲ್ಲಿ ನಿರ್ಣಯ. ॥೪೫॥

ಮತ್ತಂ,

೧೩೫೨

ನೇಹದ ಸುಖವ ನೋಟ ನುಂಗಿತ್ತು.
ನೋಟದ ಸುಖವ ಕೂಟ ನುಂಗಿತ್ತು.
ಕೂಟದ ಸುಖವ ಆಲಿಂಗನ[೩] ನುಂಗಿತ್ತು.
ಆಲಿಂಗನದ ಸುಖವ ಸಂಗ ನುಂಗಿತ್ತು.
ಸಂಗದ ಸುಖವ ಸಮರಸ ನುಂಗಿತ್ತು.
ಸಮರಸದ ಸುಖವ ಪರವಶ ನುಂಗಿತ್ತು.
ಪರವಶದ ಸುಖವ ಕೂಡಲಚೆನ್ನಸಂಗಯ್ಯ ತಾನೇ ಬಲ್ಲ! ॥೪೬॥

ಮತ್ತಂ,

೧–೧ ಕಳದಿಪ್ಪ (ಮೂ) ೨–೨ ಅರಜೆತ್ತುಂ ನೆಜಿ ಮೂಡಲು (ಮೂ) ೩ x (ಮೂ)

೧೩೫೩

ಅಱಿಯಲಿಲ್ಲದ ಅಱಿವು, ಮಱೆಯಲಿಲ್ಲದ ಮಱಹು,
ನೋಡಲಿಲ್ಲದ ನೋಟ, ಕೂಡಲಿಲ್ಲದ ಕೂಟ,
ಬೆರಸಲಿಲ್ಲದ ಬೆಱಗು.
ನಿಂದುದು ಕೂಡಲಚೆನ್ನಸಂಗಯ್ಯಾ, ಲಿಂಗೈಕ್ಯವು! ॥೪೭॥

ಮತ್ತಂ,

೧೩೫೪

ಅಱುಹಿಂದಾದ ಮಱಹಿನ ಶಬ್ದವನಱಿಯಲಾಗದು.
ಅಱಿದಡೆ ಅದಕ್ಕದೆ ಭಂಗವು.
ಅಱಿವಱಿತು ಮಱಹು ನಷ್ಟವಾಗಿ,
ಜ್ಞಾನವೆಂದಲ್ಲಿ [1]ನಿರ್ನಾಮವೆಲ್ಲಿಯದು?[1]
ಜ್ಞಾನದೊಳಗಣ ಬುದ್ಧಿಯ ಭಸ್ಮವಾಗಿ ಧರಿಸಿ[2]ದಲ್ಲಿ[2]
ಕೂಡಲಚೆನ್ನಸಂಗಯ್ಯ ಸರ್ವನಿವಾಸಿ. ॥೪೮॥

ಮತ್ತಂ,

೧೩೫೫

ಏನೆಂಬೆನೇನೆಂಬೆನಾಶ್ರಯವಿರಹಿತನ!
ಏನೆಂಬೆನೇನೆಂಬೆ ನಾಮ ನಿರ್ನಾಮನ!
ಏನೆಂಬೆನೇನೆಂಬೆ ಸಾರಾಯಭರಿತನಲ್ಲದುದ?
ಏನೆಂಬೆ ದೇವಾ, ಕ್ರೀಯ ಮೀಱಿದ ಸಂಬಂಧವ?
ಕೂಡಲಚೆನ್ನಸಂಗಮದೇವಾ,
ನಾನೆಂಬುದಿಲ್ಲದುದನೇನೆಂದುಪಮಿಸುವೆನು? ॥೪೯॥

ಮತ್ತಂ,

೧೩೫೬

ಎನ್ನ ಮನದಲ್ಲಿ ಇದೇ ಪಥವಯ್ಯಾ.
ಬೆರಸುವರೆ ಪ್ರಾಣದ ಮಥನ ಭಾವ ನಟ್ಟು,
ತನುಸ್ಥಿತಿ ಮಱೆದು, ಭ್ರಾಂತಸೂತಕವೆಲ್ಲಾ ವಿವರಿಸಿ ಹೋದವು,-
ಶೂನ್ಯಸಿಂಹಾಸನದ ಮೇಲೆ
ಕೂಡಲಚೆನ್ನಸಂಗಾ, ನಿಮ್ಮ ಶರಣನ ಪ್ರಭೆಯಿಂದ. ॥೫೦॥

ಮತ್ತಂ,

೧-೧ ನಿರ್ಣವಿಲ್ಲಯ್ಯ (ಮೂ) ೨-೨ x (ಮೂ)

೧೩೫೭

ದೃಷ್ಟ ನಷ್ಟವಾದುದಕ್ಕೇನು ದೃಷ್ಟ?
ಭಾವ ನಷ್ಟವಾದುದೇ ದೃಷ್ಟ.
ಭಾವ ನಷ್ಟವಾದುದಕ್ಕೇನು ದೃಷ್ಟ?
ಸ್ವಯಪರವಜೆಯದುದೆ ದೃಷ್ಟ.
ಸ್ವಯ ಪರವಜೆಯದುದಕ್ಕೇನು ದೃಷ್ಟ?
ಕೂಡಲಚೆನ್ನಸಂಗಯ್ಯನೆನ್ನದುದೇ ದೃಷ್ಟ. ॥೫೧॥

ಮತ್ತಂ,

೧೩೫೮

ಸಹಜವೆನ್ನದೆ, ನಿಜವೆನ್ನದೆ, ಖಂಡಿತವೆನ್ನದೆ,
ಪರಿಪೂರ್ಣವೆನ್ನದೆ, ಏನೂ ಎನ್ನದೆ–
ಕೂಡಲಚೆನ್ನಸಂಗಯ್ಯಾ, ಲಿಂಗೈಕ್ಯವು. ॥೫೨॥

ಮತ್ತಂ,

೧೩೫೯

ಆನೆಂಬುದಿಲ್ಲ ನೀನೆಂಬುದಿಲ್ಲ,
ಸ್ವಯವೆಂಬುದಿಲ್ಲ, ಪರವೆಂಬುದಿಲ್ಲ,
ಅಜಿವೆಂಬುದಿಲ್ಲ, ಮಱಹೆಂಬುದಿಲ್ಲ,
ಒಳಗೆಂಬುದಿಲ್ಲ, ಹೊಱಗೆಂಬುದಿಲ್ಲ.
ಕೂಡಲಚೆನ್ನಸಂಗಯ್ಯನೆಂಬ ಶಬ್ದ ಮುನ್ನಿಲ್ಲ. ॥೫೩॥

ಮತ್ತಂ,

೧೩೬೦

ತನುಬಯಲು ನಿರವಯದೊಳಡಗಿತ್ತು.
ಮನಬಯಲು ನಿರವಯದೊಳಡಗಿತ್ತು.
ಭಾವ ಬಯಲು ನಿರವಯದೊಳಡಗಿತ್ತು.
ಬಯಲು ಬಯಲು ಬೆರಸಿ ಬಯಲೆಯಾಯಿತ್ತು.
ಕೂಡಲಚೆನ್ನಸಂಗಯ್ಯನೆಂಬ ನುಡಿಯಡಗಿತ್ತು. ॥೫೪॥

ಮಡಿವಾಳಯ್ಯಗಳ ಪರಾಮರಿಕೆ:

೧೩೬೧

ನಿತ್ಯ ಸತ್ಯದೊಳಡಗಿ, ಸತ್ಯವಾಚಾರದೊಳಡಗಿ,
ಆಚಾರ ಅನುಭಾವದೊಳಗಡಗಿ,
ಅನುಭಾವ ಜ್ಞಾನದೊಳಡಗಿ,

ಮಹಾಜ್ಞಾನ ಮನೋಲಯದೊಳಗಡಗಿ,
ಮನೋಲಯವೆ ಮಹಾಘನವಾಯಿತ್ತು.
ಕಲಿದೇವರದೇವಾ, ನಿಮ್ಮ ನಿಜೈಕ್ಯವು. ॥೫೫॥

ಮತ್ತಂ,

೧೩೬೨

ತನು ನಷ್ಟ, ಮನ ನಷ್ಟ
ನೆನಹು ನಷ್ಟ, ಭಾವ ನಷ್ಟ, ಜ್ಞಾನ ನಷ್ಟ,
ಇಂತೀ ಪಂಚನಷ್ಟದೊಳಗೆ ನಾ ನಷ್ಟವಾದೆನು.
ಆ ನಷ್ಟದೊಳಗೆ ನೀನೂ ನಷ್ಟವಾದೆ.
ಕಲಿದೇವರದೇವನೆಂಬ ನುಡಿ '[೧]ನಿಶ್ಶಬ್ದಂ[೧] ಬ್ರಹ್ಮಮುಚ್ಯತೇ'. ॥೫೬॥

ಮತ್ತಂ.

೧೩೬೩

ಅಱಿವಿನೊಳಗಣ ಕುಱುಹು ಮಱಹಿಂಗೆ ಬೀಜ.
ಕುಱುಹಿನ ಮಱಹನಱಿವು ನುಂಗಿ,
ಘನಕ್ಕೆ ಘನವೇದ್ಯವಾದ ಬಳಿಕ,
ನಿತ್ಯಪರಿಪೂರ್ಣ ತಾನೆ ಕಲಿದೇವರದೇವನು ವಾಙ್ಮನಕ್ಕಗೋಚರನು. ॥೫೭॥

ಮತ್ತಂ,

೧೩೬೪

ಎನ್ನ ಆಯತ ಅವಧಾನಗೆಟ್ಟಿತ್ತಯ್ಯಾ.
ಎನ್ನ ಸ್ವಾಯತ ಸಂದಳಿಯಿತ್ತಯ್ಯಾ.
ಎನ್ನ ಸಮಾಧಾನ ತರಹರವಾಯಿತ್ತಯ್ಯಾ.
ಎನ್ನ ಅಱಿವು ನಿಜದಲ್ಲಿ ನಿಃಪತಿಯಾಯಿತ್ತಯ್ಯಾ.
ಕಲೀದೇವರದೇವಯ್ಯಾ, ನಿಮ್ಮಲ್ಲಿ ಶಬ್ದಮುಗ್ಧವಾಗಿದ್ದೆನು. ॥೫೮॥

ಮತ್ತಂ,

೧೩೬೫

ತನುವಳಿಯಿತ್ತು, ಮನವಳಿಯಿತ್ತು,
ಭಾವವಳಿಯಿತ್ತು, ಬಯಕೆಯಳಿಯಿತ್ತು.
[೨]ನಿಜವೆಂಬುದುಳಿಯಿತ್ತು[೨], ನಾಮ ಸೀಮೆ ಬಯಲಲ್ಲಿ.
ಕಲಿದೇವರದೇವನಲ್ಲಿ ಬೆರೆಸಿ ಬೇರಿಲ್ಲದಿದ್ದೆನು. ॥೫೯॥

ಮತ್ತಂ,

೧-೧ ನಿಶ್ಶಬ್ದ (ಮೂ) ೨-೨ ನಿಜವೆಂಬುದಳಿಯಿತ್ತು (ಮು)

೧೩೬೬

ತ್ರಿವಿಧ ಮಧ್ಯ ಶೇಷ, ತ್ರಿಕೂಟ ಬೆಳಸು,
ದೇವ ಮಧ್ಯದ ಪರಿಯಾಣ.
ನಿರ್ಭಾವ ಮಧ್ಯದ ಧಾನ್ಯವನೆ ತಂದು,
ರತ್ನಾಭರಣದ ಭಾಜನದಲ್ಲಿ ಇವನೆಲ್ಲವನು ಸಂಹರಿಸುವೆ.
[1]ಹಿಂದೆ[1] ನೋಡಿಯು ಆರುವ ಕಾಣೆ.
[2]ಮುಂದೆ[2] ನೋಡಿಯೂ ಆರುವ ಕಾಣೆ,
ಮಧ್ಯದಲ್ಲಿ [3]ನೋಡುವ್ಯೆಸಕ್ಕರ,[3]
ನಾ ಮಾಡಿದ ಭಕ್ತಿಯ ಬೇಡಲೆಂದು ಒಬ್ಬ ಜಂಗಮ ಬಂದರೆ
ಕೊಟ್ಟು, ಆ ಭಕ್ತಿಯ ಶೇಷಪ್ರಸಾದದಿಂದ ಶುದ್ಧನಾದೆನು
ಕಾಣಾ ಕಲಿದೇವರದೇವಯ್ಯಾ. ॥೬೦॥

[4]ಮತ್ತಂ,[4] ಬಹುರೂಪ[5] ಚೌಡಯ್ಯಗಳ ಸಮರಸದ ವಚನ:

೧೩೬೭

ಷಡುಚಕ್ರವಳಯದೊಳಗೆ ನಾನಾಡುವೆ ಬಹುರೂಪ.
ಭ್ರೂಮಧ್ಯ ಮಂಡಲ ಹೃದಯಕಮಲಮಧ್ಯದ
[6]ಅಬ್ಜ[6]ಸ್ವರದ ಮಣಿಪೂರಕದ ಮೇಲೆ ನಾನಾಡುವೆ ಬಹುರೂಪ.
ಉರಿಯುಂಡ ಕರ್ಪುರದಂತೆ ನಾನಾಡುವೆ ಬಹುರೂಪ.
ಬಯಲ ಬೆರಸಿದ ಮರೀಚಿಯಂತೆ ನಾನಾಡುವೆ ಬಹುರೂಪ.
ರೇಕಣ್ಣಪ್ರಿಯನಾಗಿನಾಥಾ ಬಸವಣ್ಣನಿಂದ ಬದುಕಿದೆನು. ॥೬೧॥

೧೩೬೮

ನಿಷ್ಪತಿ ಬಂದು ಒಳಕೊಂಡಲ್ಲಿ,
ನಿರಾಶ್ರಯ ಬಂದು ಹೊದಕೆಯಾದಲ್ಲಿ ನಿರಾಲಂಬವಾಯಿತ್ತಯ್ಯಾ.
ಎನ್ನ ಬಹುರೂಪು ನಿರುಹರಣ ಮಧ್ಯದಲ್ಲಿ ಆಡುತ್ತಿದ್ದುದಲ್ಲಾ.
ಎನ್ನ ಬಹುರೂಪಕ್ಕೆ ಪ್ರಾಣಲಿಂಗ ಬಸವಣ್ಣ ಕಾಣಾ.
ರೇಕಣ್ಣಪ್ರಿಯ ನಾಗಿನಾಥಾ ಬಸವಣ್ಣನಿಂದ ಬದುಕಿದೆನು. ॥೬೨॥

ಮತ್ತಂ,

೧೩೬೯

ಇಂದು ಬಂದು ಬಹುರೂಪವ ನೋಡಿರಯ್ಯಾ.
ಗತಿಯ ಹೊದ್ದದೆ, ಮತಿಯ ಹೊದ್ದದೆ,

೧-೧ ಹಿಂದ(ಮೂ) ೨-೨ ಮುಂದ (ಮೂ) ೩-೩ ನೋಡುವ್ಯೋಲ್ಯೆ ಸಕ್ಕರ (ಮೂ) ೪-೪ x (ಮೂ) ೫ ಪಿ (ಮೂ) ೬-೬ ಅಬ್ಜೆ(ಮೂ)

ಸ್ಥಿತಿಯ ಹೊದ್ದದೆ, ಸ್ಥಾನವ ಹೊದ್ದದೆ,
ಐವರು ಕಟ್ಟಿದ ಕಟ್ಟಳೆಯ ಮೀಜಿ ನಾನಾಡುವೆ ಬಹುರೂಪ.
ರೇಕಣ್ಣಪ್ರಿಯ ನಾಗಿನಾಥ ಬಸವಣ್ಣನಿಂದ ಬದುಕಿದೆನು. ॥೬೩॥

ಮತ್ತಂ,

೧೩೭೦

ಇನ್ನಾಡುವೆ ಜಂಗಮರೂಪ ಅಲ್ಲಮನಂತೆ,
ಆಡುವೆ ಬಹುರೂಪ ಅಜಗಣ್ಣನಂತೆ,
ಆಡುವೆ ಬಹುರೂಪ ಮುಖವಾಡದಯ್ಯಗಳಂತೆ,
ಆಡುವೆ ಬಹುರೂಪ ಪುರುಷಾಂಗಣವ ಮೆಟ್ಟಿ
ಆಡುವೆ ಬಹುರೂಪ.
ರೇಕಣ್ಣಪ್ರಿಯ ನಾಗಿನಾಥಾ
ಬಸವಣ್ಣನಿಂದ ಬದುಕಿತ್ತೀ ಲೋಕವೆಲ್ಲಾ! ॥೬೪॥

ಮತ್ತಂ,

೧೩೭೧

ಶೂನ್ಯ ಸನ್ನಿಹಿತವಾದಲ್ಲಿ, ಶೂನ್ಯ ಪದಾರ್ಥವಾದಲ್ಲಿ,
ಬಸವನ ಪ್ರಸಾದವೆಂದು ಆನು ಬಸವನ ಕೂಡೆ ಆಡುತ್ತಿದ್ದೆ.
ರೇಕಣ್ಣಪ್ರಿಯ ನಾಗಿನಾಥಾ
ಬಸವಣ್ಣನಿಂದ ಬದುಕಿತ್ತೀ ಲೋಕವೆಲ್ಲಾ! ॥೬೫॥

ಮತ್ತಂ,

೧೩೭೨

ಶುದ್ಧವೆ ಜವನಿಕೆಯಾಗಿ, ಸಿದ್ಧವೆ ಸಿಂಹಾಸನವಾಗಿ,
ಪ್ರಸಿದ್ಧದ ಹೊದಿಕೆಯ [1]ಹೊದ್ದು ನಾನಾಡುತ್ತಿರ್ದೆ ಬಹುರೂಪ.
ಶುದ್ಧವೋಡಿದಲ್ಲಿ ಇದ್ದ ನಿಜ ನಾಸ್ತಿಯಾಯಿತ್ತೆನ್ನ ಬಹುರೂಪು.
ಸಿದ್ಧವೆಂಬ ಸಿಂಹಾಸನವಳಿದಲ್ಲಿ
ಬುದ್ಧಿಗೆಟ್ಟಾಡುತ್ತಿದ್ದುದಯ್ಯಾ ಎನ್ನ ಬಹುರೂಪ.
ಪ್ರಸಿದ್ಧದ ಹೊದಕೆ ಹಜೆದಲ್ಲಿ ನಾ ಬಸವನ ಕೂಡೆ [2]ಆಡುತ್ತಿರ್ದೆ[2] ಕಾಣಾ.
ರೇಕಣ್ಣಪ್ರಿಯ ನಾಗಿನಾಥಾ, ಬಸವಣ್ಣನಿಂದ ಬದುಕಿತ್ತೀ ಲೋಕವೆಲ್ಲಾ! ॥೬೬॥

ಮತ್ತಂ,

೧+ನಾ(ಮೂ) ೨–೨ ಅಡಗುತಿರ್ದೆ(ಮೂ)

೧೩೭೩

[೧]ಸರದೊಳಗೆ[೧] ಸರಗಟ್ಟಿ ಸರ ಹಜೆದವ ನಾನಯ್ಯ.
ಮಹದಲ್ಲಿ ಮನೆಗಟ್ಟಿ ಮನೆ ಬೆಂದವ ನಾನಯ್ಯಾ.
ಕಿಚ್ಚಿನೊಳಗೆ ಕಿಚ್ಚನೊಟ್ಟಿ ಕಾದವ ನಾನಯ್ಯಾ.
ಆ ಕಿಚ್ಚಿನೊಳಗೆ ಬಿದ್ದು ಉರಿದವ ನಾನಯ್ಯಾ.
ಬಸವಣ್ಣ[೨] ಎನ್ನ ಬಹುರೂಪಕ್ಕೆ ಸೂತ್ರಧಾರಿಯಾದ;
ಸೂತ್ರವಾಗಿ ಹೋದೆ ನಾ, ಬಸವಣ್ಣ[೩]ನಿಂದ ಕೆಟ್ಟೆ ಕಾಣಾ.
ರೇಕಣ್ಣಪ್ರಿಯನಾಗಿನಾಥಾ, ಬಸವಣ್ಣನಿಂದ ಬದುಕಿತ್ತೀ ಲೋಕವೆಲ್ಲಾ! ॥೬೭॥

ಹಡಪದಪ್ಪಣ್ಣಗಳ ಪರಾಮರಿಕೆ:

೧೩೭೪

ಎನ್ನ ತನು ನಿಮ್ಮ ಸೇವೆಯಲ್ಲಿ [೪]ಸವೆದು[೪],
ಎನ್ನ ಮನ ನಿಮ್ಮ ನೆನಹಿನಲ್ಲಿ ಸವೆದು,
ಎನ್ನ ಅಜಿವು ನಿಮ್ಮ [೫]ಘನದೊಳಗೆ[೫] [೪]ಸವೆದು[೪],
ನಿಷ್ಕಲ ನಿಜೈಕ್ಯವಾಗಿ–ಬಸವಪ್ರಿಯ ಕೂಡಲಚೆನ್ನಸಂಗಯ್ಯಾ,
ನೀನಾನೆಂಬುದು ಏನಾಯಿತ್ತೆಂದಜಿಯೆ. ॥೬೮॥

ಮತ್ತಂ,

೧೩೭೫

ಎನ್ನ ಆಚಾರ ವಿಚಾರ ಬಸವಣ್ಣಂಗರ್ಪಿತವಾದವು.
ಎನ್ನ ಅವಧಾನ ಅನುಭಾವ ಬಸವಣ್ಣಂಗರ್ಪಿವಾದವು.
ಎನ್ನ ಸರ್ವಾಚಾರಸಂಪತ್ತು ಬಸವಣ್ಣನಲ್ಲಿ ವೇದ್ಯವಾಯಿತ್ತು.
ಬಸವಪ್ರಿಯ ಕೂಡಲಚೆನ್ನಸಂಗಮದೇವರಲ್ಲಿ ನಿಜ ನಿವಾಸಿಯಾಗಿರ್ದೆನು. ॥೬೯॥

ಮತ್ತಂ,

೧೩೭೬

ಹರಿದು ಹತ್ತಿ ಮುಟ್ಟಲಿಲ್ಲ.
ಮುಟ್ಟಿ ಮರಳಿ ಇಳಿಯಲಿಲ್ಲ.
[೬]ಬೆರಸಿಹೆನೆಂದು[೬] ನೆನೆಯಲಿಲ್ಲ.
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ
ಶಬ್ದಕ್ಕೆ ಇಂಬಿಲ್ಲದಿದ್ದೆನು. ॥೭೦॥

ಸೊಡ್ಡಳ ಬಾಚರಸರ ಪರಾಮರಿಕೆ:

೧–೧ ಸಂಸಾರದೊಳಗೆ (ಮೂ) ೨+ನು (ಮೂ) ೩ x (ಮೂ) ೪–೪ ಸವದು (ಮೂ) ೫–೫ಘನದಲ್ಲಿ (ಮೂ) ೬–೬ ಬೆರಸೆನೆಂದು (ಮೂ)

೧೩೭೭

ಎನ್ನ ಕಾಯವೆಂಬ ಸಿಂಹಾಸನದಲ್ಲಿ
ಪ್ರಾಣವೆಂಬ ಲಿಂಗವ ಮೂರ್ತಿಗೊಳಿಸಿ,
ಧ್ಯಾನವೆಂಬ ಹಸ್ತದಲ್ಲಿ ಮುಟ್ಟಿ ಪೂಜಿಸುತ್ತಿರಲು,
ಮೆಲ್ಲಮೆಲ್ಲನೆ ಸುತ್ತಿಮುತ್ತಿದ ಸಂಸಾರ ಬಯಲ ಬೆರಸಿ,
ನೀನಾನೆಂಬ ಭೇದವಳಿದು,
ಮಹಾದಾನಿ ಸೊಡ್ಡಳನಲ್ಲಿ ನಿಜಲಿಂಗೈಕ್ಯವಾಯಿತ್ತು. ॥೭೧॥

ಮತ್ತಂ,

೧೩೭೮

ಅಂಗ ಲಿಂಗಕ್ಕೆ ಗೂಡಾಯಿತ್ತು.
ಲಿಂಗ ಅಂಗಕ್ಕೆ ಗೂಡಾಯಿತ್ತು.
ಅಂಗ ಲಿಂಗ ಸಂಗವೆಂಬ ಸಂದಳಿದು ನಿಜಲಿಂಗೈಕ್ಯವಾಯಿತ್ತು.
ಭಾವ ನಿರ್ಭಾವ ನಿಷ್ಪತಿಯಲ್ಲಿ,
ಮಹಾದಾನಿ ಸೊಡ್ಡಳಂಗೆ ಸರ್ವನಿರ್ವಾಣವಾಯಿತ್ತು. ॥೭೨॥

ಮತ್ತಂ,

೧೩೭೯

ಎನ್ನ ಅಷ್ಟವಿಧಾರ್ಚನೆ ಷೋಡಶೋಪಚಾರ ಹಂಗುಹಜಿದು,
ಸೋಹಂ ಸೋಹಂ ಎನ್ನುತ್ತಿದ್ದಿತ್ತು.
ಸೋಹಂ ಎಂಬ ಸುಖದ ಸವಿಯ
ಮಹಾದಾನಿ ಸೊಡ್ಡಳ ಆರೋಗಣೆಯ ಮಾಡಿ
ನಿಜನಿವಾಸಿಯಾದ ಕಾರಣ ನಾನು ನಾಮಸೀಮೆಗೆಟ್ಟೆನು. ॥೭೩॥

ಮತ್ತಂ, ಅಕ್ಕ ನಾಗಾಯಿಗಳ ಪರವಶ:

೧೩೮೦

ಎನ್ನ ತನು ಚೆನ್ನಬಸವಣ್ಣನ ಬಯಲ ಬೆರಸಿತ್ತು.
ಎನ್ನ ಮನ ಸಂಗನಬಸವಣ್ಣನ ನಿಜಪದವ ಬೆರಸಿತ್ತು.
ಎನ್ನ ಪ್ರಾಣ ಪ್ರಭುದೇವರ ಬಯಲ ಬೆರಸಿತ್ತು.
ಬಸವಣ್ಣ[1]ಪ್ರಿಯ ಚೆನ್ನಸಂಗನ ಶರಣರು
ಒಬ್ಬರೊಂದ ಹಂಚಿಕೊಂಡ ಕಾರಣ,
ಎನಗೇನೂ ಇಲ್ಲದೆ ಮಹಾಘನದಲ್ಲಿ ನಿಜನಿವಾಸಿಯಾಗಿದ್ದೆನು. ॥೭೪॥

---

೧ x (ಮೂ)

ಮತ್ತಂ.

೧೩೮೧

ಎನ್ನ ಕುಲಸೂತಕವನ[೧]ಳಿದ ಬಸವಣ್ಣ
ಎನ್ನ ಛಲಸೂತಕವ [೨]ಕಳೆದ[೨] ಬಸವಣ್ಣ.
ಎನ್ನ ತನುಸೂತಕ[೩]ವ ಕಳೆದ[೩] ಬಸವಣ್ಣ.
ಎನ್ನ ಮನಸೂತಕವ ಕಳೆದ ಬಸವಣ್ಣ.
ಎನ್ನ ಪ್ರಾಣಸೂತಕವ ಕಳೆದ ಬಸವಣ್ಣ.
ಎನ್ನ ಭಾವಸೂತಕವ ಕಳೆದ ಬಸವಣ್ಣ.
ಎನ್ನಱಿವು ಮಱಹಿನ ಸಂದ [೪]ಬಿಡಿಸಿದ[೪] ಬಸವಣ್ಣ.
ಎನ್ನ ತನ್ನಲ್ಲಿ ಇಂಬಿಟ್ಟುಕೊಂಡ ಬಸವಣ್ಣ.
[೫]ತನ್ನ ಎನ್ನಲ್ಲಿ ಇಂಬಿಟ್ಟುಕೊಂಡ ಬಸವಣ್ಣ.[೫]
ನಿಜ ನಿರ್ವಯಲ ಸಮಾಧಿಯ
ನಿಜ ನಿವಾಸದ ಬಾಗಿಲ ತೋಱಿದ ಬಸವಣ್ಣ.
ಬಸವಣ್ಣಪ್ರಿಯ ಚೆನ್ನಸಂಗಯ್ಯನ ಹೃದಯಕಮದಲ್ಲಿ
ಸಯವಾಗಿರಿಸಿದ ಎನ್ನ ತಂದೆ ಸಂಗನಬಸವಣ್ಣನು. ॥೭೫॥

ಮೋಳಿಗೆಯ ಮಾರಯ್ಯಗಳ ಪರವಶ:

೧೩೮೨

ಎನ್ನಱಿವು ಮಱಹು ಬಸವಣ್ಣಂಗರ್ಪಿತ.
ಎನ್ನ ಆಚಾರ ವಿಚಾರ ಬಸವಣ್ಣಂಗರ್ಪಿತ.
ಎನ್ನ ಭಾವ ನಿರ್ಭಾವ ಬಸವಣ್ಣಂಗರ್ಪಿತ.
ಎನ್ನಂತರಂಗ ಬಹಿರಂಗ ಬಸವಣ್ಣಂಗರ್ಪಿತ.
ನೀನಾನೆಂಬುದು ಬಸವಣ್ಣಂಗರ್ಪಿತ.
ಇಂತು ಎನ್ನನೆ ಬಸವಣ್ಣಂಗೆ ನಿವೇದಿಸಿ,
ಆವ ಅ[೬]ವಲಂಬವೂ ಇಲ್ಲದೆ, ನಿರಾಲಂಬದಲ್ಲಿ
ನಿಜನಿ[೭]ವಾಸಿಯಾದೆನು ಕಾಣಾ ನಿಃಕಳಂಕಮಲ್ಲಿಕಾರ್ಜುನಾ. ॥೭೬॥

ಮತ್ತಂ,

೧೩೮೩

'ಬ'[೮] ಎಂಬಲ್ಲಿ ಬಳಿಸಂದೆನು.
'ಸ'[೯] ಎಂಬಲ್ಲಿ ಸಯವಾದೆನು.

---

೧ x (ಮೂ) ೨–೨ ಕಳದ(ಮೂ) ೩–೩ ವಳದ (ಮೂ) ೪–೪ x (ಮೂ) ೫–೫ x (ಮು) ೬ x (ಮು) ೭ x (ಮೂ) ೮ ಬಾ (ಮೂ) ೯ ಸಾ(ಮೂ)

'ವ' ಎಂಬಲ್ಲಿ ನಿರವಯವಾದೆನು.
ನಿಃಕಳಂಕ ಮಲ್ಲಿಕಾರ್ಜುನಾ,
ಬಸವಣ್ಣನ ನಿಜಪದದಲ್ಲಿ ಸಂದಿಲ್ಲದೆ ಬೆರಸಿ,
ನಮೋ ನಮೋ ಎಂಬ ಹಂಗಳಿದುಳಿದೆನು. ॥೭೭॥

[೧]ಡೋಹರ[೧] ಕಕ್ಕಯ್ಯಗಳ ಪರವಶ:

೧೩೮೪

ಎನ್ನ ಕಷ್ಟಕುಲದ[೨] ಸೂತಕ
ನಿಮ್ಮ ಹಸ್ತ ಮುಟ್ಟಿದಲ್ಲಿ ಬಯಲಾಯಿತ್ತು.
ಶುಕ್ಲಶೋಣಿತದಿಂದಾದ ಸೂತಕ
ಲಿಂಗ ಮುಟ್ಟಲೊಡನೆ ಬಯಲಾಯಿತ್ತು.
ತಟ್ಟಿದ ಮುಟ್ಟಿದ ಸುಖಂಗಳ ಲಿಂಗಮುಖಕ್ಕೆ ಅರ್ಪಿಸಿದೆನಾಗಿ,
ಎನ್ನ ಪಂಚೇಂದ್ರಿಯಂಗಳು ಬಯಲಾಯಿತ್ತು.
ಎನ್ನಂತರಂಗದಲ್ಲಿ ಜ್ಞಾನಜ್ಯೋತಿ ಎಡೆಗೊಂಡಿತ್ತಾಗಿ,
ಒಳಗೂ ಬಯಲಾಯಿತ್ತು.
ಸಂಸಾರಸಂಗದ ಅವಸ್ಥೆ
ಮೀಜಿದ ಕ್ರೀಯಲ್ಲಿ ತರಹರವಾಯಿತ್ತಾಗಿ,
ಬಹಿರಂಗ ಬಯಲಾಯಿತ್ತು.
ಅಭಿನವ ಮಲ್ಲಿಕಾರ್ಜುನಾ,
ನಿಮ್ಮ ಮುಟ್ಟಿದ ಕಾರಣ ನಾನು ಬಯಲಾದೆನು. ॥೭೮॥

ಮತ್ತಂ,

೧೩೮೫

ನೆನೆಯಲಜಿಯೆ, ನಿರ್ಧರಿಸಲಜಿಯೆ,–ಮನವಿಲ್ಲಾಗಿ.
ಭಾವಿಸಲಜಿಯೆ, ಬಳಸಲಜಿಯೆ,
ಭಾವ ನಿರ್ಭಾವವಾಯಿತ್ತಾಗಿ.
ಧ್ಯಾನ[೩]ಮೌನ[೩]ವನಜಿಯೆ,–
ಧ್ಯಾನಾತೀತ ತಾನೆಯಾಯಿತ್ತಾಗಿ.
ಜ್ಞಾತೃ ಜ್ಞಾನ ಜ್ಞೇಯಂಗಳೆಲ್ಲವು ಮೀಜಿ,
ಅಭಿನವಮಲ್ಲಿಕಾರ್ಜುನನಲ್ಲಿ ಪರಮಸುಖಿಯಾದೆನು. ॥೭೯॥

ಇಂತು ಎಲ್ಲಾ ಗಣಂಗಳು ತಮ್ಮ ತಮ್ಮ ನಿಜಪದದ ನಿಲುಕಡೆಯ ಹೇಳಿದ ತದನಂತರದಲ್ಲಿ, ಚೆನ್ನಬಸವರಾಜದೇವರು ಬಿನ್ನೈಸುವ ಅವಸಾನದ ಸೂಚನೆಯ ಪದಂಗಳು:

೧–೧ ಡೋಹಾರ (ಮೂ) ೨ + ಲ್ಲಿ (ಮೂ) ೩–೩ ಮೋನ (ಮೂ)

೧೩೮೬

ರಾಗ: ಶ್ರೀರಾಗ

ಏನ ಹೇಳುವೆನಕ್ಕ ಕನಸುವ
ಮಾನವರಿಗೆ ತಿಳಿವಡೆ[೨] ಸಾಧ್ಯತರವಲ್ಲ [೧]॥ಪಲ್ಲವಿ॥[೧]

[೩]ನಾನೊಂದು ಕನಸ ಕಂಡೆನು ಕೇಳೆಲೆಯಕ್ಕ
ಮಾನದೊ[೪]ಳಗೆ ಒಂ[೪]ದಾನೆಯಾ
ಆನೆ ನಿಂದುರಿದು ಮಾವತಿಗ ಮಾನವ ಮೊಕ್ಕು
ಕಾನನದೊಳು ತೊಳಲ್ವುದ ಕಂಡೆ ॥೧॥

ದಾರಿವಿಡಿದು ಬರೆ ಬರೆ [೫]ಸರವರ[೫] ಕಂಡೆ
ಸರವರದೊಳಗೊಂದು ಕಮಲವಾ
ಸರವರ ಕಮಲಕರ್ಣಿಕೆಯ [೬]ಮಧ್ಯದೊಳೊಂದು[೬]
ಉರಿಯ ಬೀಜವ ಕಂಡೆನಿದಿರೊಳು ॥೨॥

ಉರಿಯ ಬೀಜವ ಸರಗೊಳಿಸಿ ಕೊರಳೊಳಿಟ್ಟು
[೭]ಪರವೂರರಸ ಸಮ್ಮುಖವಾಗಿ[೭]
ಬರುತ ಬರುತ ಬರೆ ಬರೆ ಘನದುರಿಯೆದ್ದು
ನೆರೆದ ಮನೆಯ ಹುಲ್ಲುರಿದುದಾ ॥೩॥

ನೆಲೆಗೆಟ್ಟು ಶೂನ್ಯದ ಸುಖವ ಬಯಸಿ ಬಂದು
ಹಲವು ಬಣ್ಣದ ನೂಲ ಹುರಿಮಾಡಿ
ತಲೆ ಕಾವಲೊಳಮೃತದ [೮]ಸೇದೆಯ[೮] ಬಾವಿ
ತೊಲಗಲೀಯದು [೯]ಜಾಲ[೯]ಗಾರನಾ ॥೪॥

ಬಟ್ಟಬಯಲ ತುಟ್ಟತುದಿಯ ಕೊನೆಯ ಮೇಲೆ
ಉಟ್ಟುದ ತೊಱೆದು ನಿಂದುದ ಕಂಡೆ
ಮುಟ್ಟಿ ಕೂಡಲಚೆನ್ನಸಂಗನ ಶರಣರು
[೧೦]ಹುಟ್ಟ[೧೦] ಮುಱಿದು ಹೋಹುದ ಕಂಡೆ ॥೫॥

[೧೧]ಪದ ಸಹ ವಚನ: ॥೮೪॥

೧-೧ ಪಲ್ಲವ (ಮೂ) ೨+ಅ (ಮೂ) ೩+ಪದ (ಮೂ) ೪-೪ ಳೊಂ(ಮೂ) ೫-೫ ಸರ (ಮೂ) ೬-೬ ದೊಂದು(ಮೂ) ೭-೭ ಪರವೂರರಸಂ ಮುಖಕಾಗಿ(ಮೂ) ೮-೮ ಸದೆಯ (ಮೂ) ೯-೯ ಜಲ(ಮೂ) ೧೦-೧೦ ಹುಟ್ಟಿ (ಮು) ೧೧+ಅಂತು (ಮೂ)

ಆ ಪ್ರಸ್ತಾವದೊಳು ಪ್ರಭುದೇವರು ತಮ್ಮ ಪರಾಮರಿಕೆಯ ಹೇಳುವ ವಚನ:

೧೩೮೭

ಮನದ ಕೊನೆಯ ಮೊನೆಯ ಮೇಲೆ
ನೆನೆದ ನೆನಹು ಜನನ ಮರಣವ ನಿಲಿಸಿ,
ಜ್ಞಾನ ಜ್ಯೋತಿಯ ಉದಯ ಭಾನುಕೋಟಿಯ ಮೀಜಿ,
ಸ್ವಾನುಭಾವದ ಉದಯ ಜ್ಞಾನಶೂನ್ಯದಲಡಗಿದ
ಘನವನೇನೆಂಬೆನು ಗೊಹೇಶ್ವರಾ! ॥೮೫॥

ಮತ್ತಂ,

೧೩೮೮

ನಿರ್ವಿಕಲ್ಪವೆಂಬ ನಿಜದೊಳಗಯ್ಯಾ.
ನಿರಹಂಭಾವದಲ್ಲಿ ನಾನಿದ್ದೆನಯ್ಯ.
ನೋಡಿಹೆನೆಂದರೆ ನೋಡಲಿಲ್ಲ.
ಕೇಳಿಹೆನೆಂದರೆ ಕೇಳಲಿಲ್ಲ.
ಘನ ನಿರಂಜನದ ಬೆಳಗಿಂದಲಾದುದ[೧]ನೇನೆಂಬೆನು[೧] ಗೊಹೇಶ್ವರಾ! ॥೮೬॥

ಮತ್ತಂ,

೧೩೮೯

ಘನವ ಕಂಡು ಮನವು ಗ್ರಹಿಸಿತ್ತು.
ಕಂಡು ಕಂಡು ಮನ ಮಹಾಘನವಾಯಿತ್ತು.
ತತ್ತಲ್ಲೀಯವಾಯಿತ್ತು; ತದುಗತವಾಯಿತ್ತು,
ಶಬ್ದ ಮುಗ್ಧವಾದುದನೇನೆಂಬೆ ಗೊಹೇಶ್ವರಾ! ॥೮೭॥

ಮತ್ತಂ,

೧೩೯೦

ಬಯಲ ಬೆಱಗಿನ ಸುಖದ ಸವಿಯ,
ಬೆಱಗಲ್ಲದೆ ಕಾಣೆ; ಕಾಣೆನೆಂಬ ನುಡಿಗೆಡೆಯ ಕಾಣೆ.
ಕುಱುಹಳಿದು ಅಱಿವ ನೆಱೆಯಱಿದು ಬೆಱೆಸಿದೆನೆಂಬ
ಬಱುನುಡಿಯ ನುಡಿಗೆ ನಾಚಿದೆನಯ್ಯಾ ಗೊಹೇಶ್ವರಾ! ॥೮೮॥

ಮತ್ತಂ,

೧೩೯೧

ಉಪಮೆ ಉಪಮಿಸಲಱಿಯದೆ ಉಪಮಾತೀತವೆನುತ್ತಿದ್ದಿತ್ತು.
ಅಱಿವು ಅಱಿವಿನ ಮಱೆಯಲಿದ್ದುದನಱಿಯದೆ,

೧-೧ ಯೇನೆಂಬೆನು (ಮೂ)

ಅಱಿವು ಪರಾಪರವೆನುತ್ತಿದ್ದಿತ್ತು.
ಧ್ಯಾನಧ್ಯಾನಿಸಲಱಿಯದೆ ಧ್ಯಾನರೂಪಾತೀತನೆಂದು
ತತ್‌ಧ್ಯಾನಗೊಂಡಿತ್ತು.
ಜ್ಞಾತೃ ಜ್ಞಾನ ಜ್ಞೇಯಕ್ಕೆ ಇನ್ನಾವ ಜ್ಞಾನವು?
ವೇದ ವಿಜ್ಞಾನವೆಂದುದಾಗಿ,
ತತ್ತ್ವಮಸಿ ವಾಕ್ಯಂಗಳೆಲ್ಲವೂ ಹುಸಿಯಾಗಿ ಹೋದವು.
ಸಚ್ಚಿದಾನಂದವೆಂದುದಾಗಿ,
ದ್ವೈತಾದ್ವೈತ ಬ್ರಹ್ಮವಾದಿಗಳೆಲ್ಲರೂ ಸಂಹಾರವಾಗಿ ಹೋದರು.
ಬಂದೂ ಬಾರದು, ಹೊಂದಿಯೂ ಹೊಂದದು
ನಿಂದ ನಿರಾಳ ಗೊಹೇಶ್ವರ! ॥೮೯॥

ಮತ್ತಂ,

೧೩೯೨

ಗುರುವಿನಿಂದಾದ ಕಾಯವ ಬೆರಸಿ,
ಗುರುವನಱಿಯದಾದೆನಯ್ಯಾ.
ಲಿಂಗದಿಂದಾದ ಜೀವವ ಬೆರಸಿ,
ಲಿಂಗವನಱಿಯದಾದೆನಯ್ಯಾ.
ಜಂಗಮದಿಂದಾದ ಮನವ ಬೆರಸಿ,
ಜಂಗಮವನಱಿಯದಾದೆನಯ್ಯಾ.
[೧]ಇಂತೀ[೧] ತ್ರಿವಿಧಭಕ್ತಿಯನಱುಹಿಸಿಕೊಟ್ಟ ಸಂಗನಬಸವಣ್ಣನ ಬೆರಸಿ,
ನೀನೂ ನಾನೂ ಬದುಕಿದೆವು ಕಾಣಾ ಗೊಹೇಶ್ವರಾ! ॥೯೦॥

ಮತ್ತಂ,

೧೩೯೩

ನಾನೆಂಬುದು ಪ್ರಮಾಣ, ನೀನೆಂಬುದು ಪ್ರಮಾಣ.
ಸ್ವಯವೆಂಬುದು ಪ್ರಮಾಣ, ಪರವೆಂಬುದು ಪ್ರಮಾಣ.
ಪ್ರಮಾಣವೆಂಬುದು ಪ್ರಮಾಣ.
ಗೊಹೇಶ್ವರನೆಂಬುದು ಅಪ್ರಮಾಣ. ॥೯೧॥

ಇಂತು ಪ್ರಭುದೇವರು ತಮ್ಮ ಪರಾಮರಿಕೆಯ ಹೇಳಿ, ತಾವು ಲಿಂಗೈಕ್ಯವಾಗುವ ಅವಸ್ಥೆಯ ನಿರೂಪಿಸಿದ ವಚನ:

೧೩೯೪

ಇಂದುವಿನ ಬೆಳಗಿನ ಸಂಪತ್ತನಿಂಬುಗೊಂಬ
ಚಕೋರನ ಧ್ಯಾನವೆಂತಿಪ್ಪುದು, ಅಂತಾಗಿದ್ದೆ ನಾನು.

---

೧ ಈ (ಮು)

ಮಾತೆ ವಿಯೋಗವಾದ ಶಿಶುವಿನ ಧ್ಯಾನವೆಂತಿಪ್ಪುದು,
ಅಂತಾಗಿದ್ದೆ ನಾನು.
ಬಂಧನದಲ್ಲಿ ಸಿಕ್ಕದ ಫಣಿಯ ಧ್ಯಾನವೆಂತಿಪ್ಪುದು,
ಅಂತಾಗಿದ್ದೆ ನಾನು.
ರಾತ್ರಿಯೊಳ್ ಮುಗಿದ ಪದ್ಮದ ಭ್ರಮರನ ಧ್ಯಾನವೆಂತಿಪ್ಪುದು,
ಅಂತಾಗಿದ್ದೆ ನಾನು.
ಸ್ವಪ್ನದಲ್ಲಿ ದುಷ್ಟಕೇಸರಿಯ ಧ್ಯಾನದ ಮದಹಸ್ತಿಯೆಂತಿಪ್ಪುದು,
ಅಂತಾಗಿದ್ದೆ ನಾನು.
ನೋಟವಗಲಿದ ನೇಹದ ಧ್ಯಾನವೆಂತಿಪ್ಪುದು,
ಅಂತಾಗಿದ್ದೆ ನಾನು.
ಬ್ರಹ್ಮಪಾಶ ವಿಷ್ಣು ಮಾಯವನತಿಗಳೆದ ಛಲದಲ್ಲಿ
ಏನೆಂದಱಿಯದಿದ್ದೆ ನಾನು.
ಗೊಹೇಶ್ವರಲಿಂಗಾ, ಸಂಗನಬಸವಣ್ಣನೊಳಗೆ
ಲೀಯವಹ ಭರದಲ್ಲಿ ಏನೆಂದಱಿಯದಿರ್ದೆ ನಾನು. ॥೯೨॥

ಇಂತೀ ಶ್ರೀಮತ್ ಸಕಲಗಣ ಪುರಾತನರೊಳ್ ಪ್ರಭುದೇವರು
ಮಹಾನುಭಾವ ಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್
ಎಲ್ಲಾ ಪುರಾತನರ ಅವಸಾನದ ಪರಾಮರಿಕೆಗಂ
ವಿಂಶತ್ಯುಪದೇಶಂ ಸಮಾಪ್ತಂ
ಅಂತು ವಚನ ೧೫೪೪ ಕ್ಕಂ ಮಂಗಳಮಹಾ ಶ್ರೀ

❖

೨೧
ಗೋರಕ್ಷನ ಸಂಪಾದನೆ ಮತ್ತು ಎಲ್ಲಾ ಗಣಂಗಳ ಐಕ್ಯ

ಕಂದ:

ಗೋರಕ್ಷಗೆ ನಿಜಪದಮಂ
ಓರಂತಿರದಿತ್ತು ಪ್ರಭುವು ನಿರ್ವಯಲಾಗಲು,
ಭೂರಿ ಮಹಾಶರಣರುಗಳು
ಧಾರುಣಿಯೊಳಗಿರದೆ ಐಕ್ಯವಡೆದುದ ಪೇಳ್ವೆಂ ॥೧॥

ಅದೆಂತೆಂದೊಡಾ ಪ್ರಭುದೇವರು ಬಸವರಾಜದೇವರು ಚೆನ್ನಬಸವರಾಜದೇವರು ಮಡಿವಾಳಮಾಚಿತಂದೆಗಳು ಮೊದಲಾದ ಅಸಂಖ್ಯಾತ ಮಹಾಗಣಂಗಳೆಲ್ಲರೂ ತಮ್ಮ ತಮ್ಮ ನಿಜಪದದ ನಿಜೈಕ್ಯಮಂ ಪೇಳಲು, ಪ್ರಭುದೇವರು ಕೇಳ್ದು ತಮ್ಮ ನಿಜಪದಮಂ ಪೇಳಿ, ಮತ್ತೆಲ್ಲಾ ಅಸಂಖ್ಯಾತರಿಗೆ ನಿರ್ವಾಹ ಸ್ಥಿತಿಗತಿಯ ನಿರೂಪಿಸುವ ಪ್ರಸ್ತಾವದ ವಚನ:

೧೬೫೩

ಅವಧಿಯಳಿಯಿತ್ತು, ವ್ಯವಧಾನ ಉಳಿಯಿತ್ತು.
ನಿಜವೆ ನಿಜವನೊಡಗೂಡಿತ್ತು ಕೇಳಾ ಬಸವಣ್ಣಾ.
ಕಲಿಯುಗದಲ್ಲಿ ಮುಂದೆ ಇರಬಾರದು ನಿಜಶರಣರಿಗೆ,
ನಡೆ ನೀನು, ಕಪ್ಪಡಿಯ ಸಂಗಯ್ಯನಲ್ಲಿ ಒಡಗೂಡು.
ಉಳುಮೆಯಲ್ಲಿ ನಿಜವನೆಯ್ದು ನಡೆ ಚೆನ್ನಬಸವಣ್ಣಾ.
ಮಹವನೊಡಗೂಡು ಮಡಿವಾಳಯ್ಯಾ.
ಸೊಡ್ಡಳಬಾಚರಸರು ಮೊದಲಾದ ಪ್ರಮಥರೆಲ್ಲರೂ
ನಿಜವನೈದುವುದು ನಿರ್ವಯಲ ಸಮಾಧಿಯಲ್ಲಿ.
ಬಗಿದು ಹೊಗಿ ಲಿಂಗದೊಳಗೆ ಹೊಗುವರೆಲ್ಲರೂ.
ನಡೆಯಿರಿ ಕಾಯವೆರಸಿ ಕೈಲಾಸಕ್ಕೆ

---

೧. ಲಿ (ಮೂ)

ಕಾಯ ಸಹಿತೈದುವುದು ನಿಮಗೆಲ್ಲರಿಗೆಯೂ.
ಈ[೧] ಉಪದೇಶ ಮಂತ್ರ ತಪ್ಪದು.
ನಮಗೆ ಕದಳಿಯಲ್ಲಿ ಹೊಕ್ಕು ನಿಜದಲ್ಲಿ ಒಡಗೂಡುವ ಪರಿಣಾಮ.
ಇದು ನಮ್ಮ ಗೊಹೇಶ್ವರಲಿಂಗದಾಣತಿ ನಿಮಗೆಲ್ಲರಿಗೆಯೂ. ॥೧॥

ಇಂತು ಪ್ರಭುದೇವರು ಬಸವರಾಜದೇವರು ಮೊದಲಾದ ಅಸಂಖ್ಯಾತರೆಲ್ಲರಿಗೆ ನಿಜ ಸಮಾಧಿಯ ಹರಿವ ನಿರೂಪಿಸಿ ಬೀಳ್ಕೊಂಡು, ಕಲ್ಯಾಣಮಂ ಪೊಜಿಮಟ್ಟು, ಶ್ರೀಪರ್ವತಕ್ಕೆ ಬಿಜಯಂಗೈವುತ್ತಿರಲಲ್ಲಿ ಗೋರಕ್ಷನೆಂಬ ಸಿದ್ಧನಂ ಕಂಡು ಸಂಭಾಷಣೆಯಂ ಮಾಡಿ, ಅವನ ವಜ್ರದೇಹಮಂ ಅಸಿತಾಳಪತ್ರದಿಂ ಹೊಯಿದು ನೋಡಿ ಪರೀಕ್ಷೆಯಂ [೨]ಕಂಡು[೨] ನುಡಿವ ಪ್ರಸ್ತಾವದ ವಚನ:

೧೩೯೬

ಹಿಂದನಱಿಯದುದು ಮುಂದನೇನ ಬಲ್ಲುದೊ?
ಉದಯಮುಖದಲ್ಲಿ ಹುಟ್ಟಿದ ಪ್ರಾಣಿಗಳು ಅಸ್ತಮಾನಕ್ಕೆ ಅಳಿದರಲ್ಲಾ!
ಅಂದಂದಿನ ಘಟಜೀವಿಗಳು ಬಂದ ಬಟ್ಟೆಗೆ ಹೋದರು.
ಗೊಹೇಶ್ವರಲಿಂಗವು ಆರಿಗೂ ಇಲ್ಲವಯ್ಯಾ. ॥೨॥

ಮತ್ತಂ,

೧೩೯೭

ಅಮೃತಸೇವನೆಯ ಮಾಡಿ ಆಪ್ಯಾಯನ ಘನವಾಯಿತ್ತ ಕಂಡೆ.
ಪರುಷವೇದಿಯ ಸಾಧಿಸ ಹೋದರೆ ದಾರಿದ್ರ ಘನವಾಯಿತ್ತ ಕಂಡೆ.
ಮಱುಜವಣೆಯ ಹಣ್ಣ ಮೆದ್ದು ಮರಣವಾಯಿತ್ತ ಕಂಡೆ,
ಇವನೆಲ್ಲವನು ಸಾಧಿಸ ಹೋದರೆ ಏನೂ ಇಲ್ಲದಂತಾಯಿತ್ತು.
ನಾನು ನಿಜವ ಸಾಧಿಸಿ ಬದುಕಿದೆನು ಗೊಹೇಶ್ವರಾ. ॥೩॥

ಮತ್ತಂ,

೧೩೯೮

ಧರೆಯ ಮೇಲುಳ್ಳ ಅರುಹಿರಿಯರೆಲ್ಲಾ ಮರುಳುಗೊಂಡಾಡುತ್ತಿದ್ದಾರೆ ನೋಡಾ!
ಮಂಜಿನ ಮಡಕೆಯೊಳಗೆ ರಂಜನೆಯ ಭಂಡವ ತುಂಬಿ,
ಅಂಜದೆ ಪಾಕವ ಮಾಡಿಕೊಂಡುಂಡು,
ಭಂಡವ ಮಾಱು[೩]ತ್ತಿರ್ಪರು[೩] ನೋಡಾ!
ಸಂಜೀವಿನಿಯ ಬೇರ ಕಾಣದೆ ಮರಣಕ್ಕೊಳಗಾದರು,
ಗೊಹೇಶ್ವರನನಱಿಯದ ಭವಭಾರಕರೆಲ್ಲರು. ॥೪॥

ಮತ್ತಂ,

---

೧ x (ಮೂ) ೨–೨ ಕೊಂಡು (ಮೂ) ೩–೩ ತಿಪ್ಪರು (ಮೂ)

೧೩೯೯

ನಾರು ಬೇರಿನ ಕುಟಿಲ ಕುಹಕದ ಯೋಗವಲ್ಲದು ನಿಲ್ಲಿರೋ।
ಕಾಯುಸಮಾಧಿ ಕರಣಸಮಾಧಿ
ಜೀವಸಮಾಧಿ ಯೋಗವಲ್ಲದು ನಿಲ್ಲಿರೊ
ನಿಜಸಹಜಸಮಾಧಿ ಗೊಹೇಶ್ವರ. ॥೫॥

ಈ ಹೀಂಗೆಂದು ಪ್ರಭುದೇವರು ಆತನ ಕಾಯಸಿದ್ಧಿ ಮೊದಲಾದ ಸಿದ್ಧಿಗಳಂ, ಆತನ ಭಿನ್ನಯೋಗಾಭ್ಯಾಸಮಂ ಜಱೆಯಲವಂ ಬಿಟ್ಟು ಉಪದೇಶಮಂ ಪಡೆದು ಬಿನ್ನೈಸುವ ಪ್ರಸ್ತಾವದ ವಚನ:

೧೪೦೦

ರಸವಾದಂಗಳ ಕಲಿತಲ್ಲಿ,
ಲೋಹಸಿದ್ಧಿಯಲ್ಲದೆ ರಸಸಿದ್ಧಿಯಾದುದಿಲ್ಲ.
ನಾನಾ ಕಲ್ಪಯೋಗ ಅದೃಶ್ಯ[೧]ಕರಣಂಗಳ ಕಲಿತಲ್ಲಿ,
ಕಾಯಸಿದ್ಧಿಯಲ್ಲದೆ ಆತ್ಮಸಿದ್ಧಿಯಾದುದುಂಟೆ?
ನಾನಾ ವಾಗ್ವಾದಂಗಳಿಂದ ಹೋರಿ
ಮಾತಿನ ಮಾಲೆಯಾಯಿತ್ತಲ್ಲದೆ, ಆತ್ಮನಿಹಿತವಾದುದಿಲ್ಲ.
ನೀನಾನೆಂದಲ್ಲಿ ನೀನು ನಾನಾದೆಯಲ್ಲದೆ,
ನಾನು ನೀನಾದುದಿಲ್ಲ.
ಗೋರಕ್ಷಪಾಲಕ ಮಹಾಪ್ರಭು ಸಿದ್ಧಸೋಮನಾಥಲಿಂಗವಾದೆಯಲ್ಲದೆ,
ಲೀಯವಾಗಿ ಆ ಲಿಂಗವೆ ಆದುದಿಲ್ಲ. ॥೬॥

ಮತ್ತಂ,

೧೪೦೧

ಕುಂಡಲಿಯೆಂಬ ಆಧಾರದಲ್ಲಿ
ಜಲ ತೇಜ ವಾಯುವೆಂಬ ತ್ರಿವಿಧ ಕೂಡಿ
ಕಮಂಡಲ ಹುಟ್ಟಿತ್ತು.
ಅದಕ್ಕೆ ಬಾಯಿ ಮೂಱು, ಹಿಡಿಯಾಱು.
ಜೂಳಿ ಒಂದಱಲ್ಲಿ ಉದಕವ ಕೊಳುತ್ತಿರಲಾಗಿ,
ಆ[೨] ಅಸುವಿನ ತೃಷೆಯಡಗಿ[೩] ಬಯಕೆ ಸಲೆ ಬತ್ತಿದಲ್ಲಿ,
ಮಹಾಗಣನಾಥನ ಐವತ್ತೆರಡು ಸರ ಹಱಿದವು.
ಮೂವತ್ತಾಱು ಮಣಿ ಕೆಟ್ಟವು.

---

೧ + ಶಾಸ್ತ್ರ (ಮೂ) ೨ x (ಮೂ) ೩ + ಹ (ಮು)

ಇಪ್ಪತ್ತೈದು ಮಣಿ ಪುಂಜವಾಯಿತ್ತು.
ಆಱು ನಾಯಕರತ್ನವೆಲ್ಲಿ ಅಡಗಿತ್ತೆಂದಱಿಯೆ.
ಮೂಱು ರತ್ನವ ಕಂಡೆ.[೧]
ಒಂದು ಉರಿವುದು, ಒಂದು [೨]ಉಲಿವುದು,[೨]
ಒಂದು ಬೆಳಗು ನಂದಿಹುದು,
ಇಂತೀ ತ್ರಿವಿಧದಂಗವ ಕಂಡು,
ಈ ಅಂಗದ ಮಣಿಯ ಒಂದೊಂದ ಪವಣಿಸಲಾಱದೆ,
ಈ ದಿನಮಣಿಯ ವಿರಳವ ತೋಱಿಸಾ
ಗೋರಕ್ಷಪಾಲಕ ಮಹಾಪ್ರಭು ಸಿದ್ಧಸೋಮನಾಥಲಿಂಗವೆ. ॥೭॥

ಈ ಹೀಂಗೆಂದು ಗೋರಕ್ಷನು ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿರ್ವಯಲ ಸಮಾಧಿ ಭೇದವ ನಿರೂಪಿಸುವ ಪ್ರಸ್ತಾವದ ವಚನ:

೧೪೦೨

ಅಱಿವಱಿತು ಬೆಱಗು ಹತ್ತಿತ್ತೆಂಬಜ್ಞಾನವಿದೇನೋ?
ನಾಹಂ ಎಂಬಲ್ಲಿ ತಾನಾರೊ? ಕೋಹಂ ಎಂಬಲ್ಲಿ ಮುನ್ನಾರೊ?
ಪರಬ್ರಹ್ಮ ಸೋಹಂ ಎಂಬಲ್ಲಿ ಮುನ್ನ ತಾನೇನಾಗಿರ್ದ?
[೩]ಚಿದೋಹಂ[೩] ಎಂಬ ಹಮ್ಮಿನ ಭವಮಾಲೆ ಇದೇನೊ?
[೪]'ನಿಶ್ಶಬ್ದಂ[೪] ಬ್ರಹ್ಮಮುಚ್ಯತೇ' ಎಂಬ ಶಬ್ದವಿಡಿದು
ಬಳಲುವ ಕಾರಣವಿದೇನೋ ಗುಹೇಶ್ವರ? ॥೮॥

ಈ ಹೀಂಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಗೋರಕ್ಷನು ಲಿಂಗಾಂಗ ಸಂಬಂಧದ ಕೃತನಿಶ್ಚಯವನ್ನೈದಿದ ಪ್ರಸ್ತಾವದ ವಚನ:

೧೪೦೩

ನಾನಿನ್ನ ಕೇಳಿಹೆನೆಂದಡೆ, ನಾನಂಗಿ ನೀ ನಿರಂಗಿ.
ನಾ ನಿನಗೆ ಹೇಳಿಹೆನೆಂದಡೆ, ನಾ ಸಂಗಿ ನೀ ನಿಸ್ಸಂಗ.
ನಿನ್ನಂಗ ಎನ್ನಂಗದಲ್ಲಿ ಪ್ರೇರಿಸಿ,
ನಿನ್ನ ಅಱಿವು ಎನ್ನ ಆತ್ಮದಲ್ಲಿ ನಿಂದು ಅಱಿವಹನ್ನಕ್ಕ,
ನನಗೂ ನಿನಗೂ ತತ್ತು ಗೊತ್ತು.
ಗೋರಕ್ಷ ಪಾಲಕ ಮಹಾಪ್ರಭು ಸಿದ್ಧಸೋಮನಾಥಲಿಂಗವು
ಸರಿಹುದುಗು. ॥೯॥

---

೧ ಡೇ(ಮೂ) ೨-೨ ಉರಿದು (ಮೂ) ೩-೩ ಚಿದಹಂ (ಮು) ೪-೪ ನಿಶ್ಶಬ್ದ (ಮು)

ಮತ್ತಂ,

೧೪೦೪

ಅರಗಿನ ತೇಜಿಯ ಮೇಲೆ
ಉರಿಯ ಹಿರಿಯರಸು ಮೂರ್ತಿಗೊಂಡು,
ಮಂಜಿನ ಪರಿವಾರ ಸಂದಣಿಸಿ, ಸಂತೈಸಿ
ಅವರಂಗಕ್ಕೆ ಬಿಸಿಲಂಗದ ಜೋಡ ತೊಡಿಸಿ,
ಚಾತುರಂಗದ ಮೇಲೆ ಪಶು [೧]ತಮವೆಂಬ[೧] ಖಂಡೆಯವ ಪಿಡಿದು
ಚಂದ್ರಿಕಾಕಿರಣದ ಮೇಲೆ ಅಂಗವಿಸಿ ಏಱಲಾಗಿ ಪೌಜು ಬೆದಱಿತ್ತು.
ಊರರಸು ಎತ್ತಿದ ಖಂಡೆಯವರುಣಕಿರಣದೊಳಗಡಗಿತ್ತು.
ಮಂಜಿನ ಪರಿವಾರ ಆ ರಂಜನೆಯೊಳಗೆ ಬಯಲಾಯಿತ್ತು.
ಉರಿಯರಸು ವಾಯುವಿನ ಸಿರಿಯೊಳಗಾದ.
ಅರಗಿನ ಅಶ್ವ ಅರಸಿನ ತೊಡೆಯೊಳಗೆ ಹರಿಯಿತ್ತು.
ಇಂತೀ ದೊರೆಗೆ ಅರಿದಿಲ್ಲಾ ಎಂದು,
ಗೊರಕ್ಷಪಾಲಕ ಮಹಾಪ್ರಭು ಸಿದ್ಧಸೋಮನಾಥಲಿಂಗಕ್ಕೆ
ಇದಿರಿಲ್ಲಾ ಎನುತಿರ್ದೆನು. ॥೧೦॥

ಇಂತು ಪ್ರಭುದೇವರು ಗೋರಕ್ಷಂಗೆ ಲಿಂಗಾಂಗಸಂಬಂಧವ ಬೋಧಿಸಿ ನಿಲಿಸಿ, ಅವನಂ ಬೀಳ್ಕೊಂಡು ಮುಂಬಾಗಿಲಲ್ಲಿ ನಿಂದ ಪ್ರಸ್ತಾವದ ವಚನ:

೧೪೦೫

ಕಾಯವೆಂಬ ಕದಳಿಯ ಹೊಕ್ಕು,
ಪ್ರಾಣವೆಂಬ ಗಹ್ವರದಲ್ಲಿ
ಸಕಲೇಂದ್ರಿಯವೆಂಬ ಕೋಣೆಕೋಣೆಗಳಲ್ಲಿ ತಿರುಗಾಡುತ್ತ ಬರಲಾಗಿ,
ಮೇರು ಮಂದಿರದ ತ್ರಿಕೋಣೆಯಲ್ಲಿ ಬೆಳಗಾಯಿತ್ತು.
ಗುಹೇಶ್ವರಲಿಂಗವೆಂಬುದು ರೂಪಾಯಿತ್ತು. ॥೧೧॥

ಇಂತು ತಮ್ಮ ನಿಜವನಱುಹಿದ ಪ್ರಭುದೇವರು ಆ ಕದಳಿಯ ಹೊಕ್ಕು ನಿರವಯದೊಳು ನಿಜನಿವಾಸಿಯಾಗಿರ್ದ ಪ್ರಸ್ತಾವದ ವಚನ:

೧೪೦೬

ಕಾಯವೆಂಬ ಮಹಾ ಕದಳಿಯ
ಗೆಲಬಲ್ಲವರನಾರನೂ ಕಾಣೆ.
ಸಂಸಾರವೆಂಬ ಸಪ್ತಸಮುದ್ರ ಬಳಸಿ ಬಂದಿಪ್ಪವು.

೧-೧ ತಮನೆಂಬ(ಮೂ)

ಭವವೆಂಬ ಮಹಾರಣ್ಯದೊಳು
ಪಂಚೇಂದ್ರಿಯವೆಂಬ ವಿಷದ ಮಳೆ [೧]ಸುರಿವುತ್ತಿರ್ಪುದು.[೧]
ಕೋಪವೆಂಬ ಪೆರ್ಬುಲಿ [೨]ಮೊರೆ[೨]ವುತ್ತಿರ್ಪುದು.
ಅಷ್ಟಮದಗಜಂಗಳು ಬೀದಿವರಿಯುತ್ತಿರ್ಪವು.
ಕಾಮವೆಂಬ ಮಾಱಂಬಿನ ಸೋನೆ ಸುರಿಯುತ್ತಿರ್ಪುದು.
ಮತ್ಸರವೆಂಬ ಮಹಾಸರ್ಪಂಗಳು ಕಿಡಿಯನುಗುಳುತ್ತಿರ್ಪವು.
ಆಸೆಯೆಂಬ ಪಾಪಿಯ ಕೂಸು ಹಿಸಿಹಿಸಿದು ತಿನುತ್ತಿರ್ಪುದು.
ತಾಪತ್ರಯವೆಂಬ ಕೆಂಡದಮಳೆ ಅಡಿಯಿಡಬಾರದು
ಅಹಂಕಾರವೆಂಬ ಗಿರಿಗಳು ಅಡ್ಡ ಬಿದ್ದಿಪ್ಪವು.
ಪಂಚಭೂತಗಳೆಂಬ ಭೂತಂಗಳ ಭಯ ದಿಟ್ಟಿಸಬಾರದು.
ಮಾಯೆಯೆಂಬ ರಕ್ಕಸಿ ಹಸಿಯ ತಿನುತಿರ್ಪಳು.
ವಿಷಯವೆಂಬ ಕೂಪ ಬಳಸಬಾರದು.
ಮೋಹವೆಂಬ ಬಳ್ಳಿ ಕಾಲ [೩]ಕುತ್ತಬಾರದು.[೩]
ಲೋಭವೆಂಬ ಮಸೆದಡ್ಡಾಯುಧನೊರೆಯುಚ್ಚಬಾರದು.
ಇಂತಪ್ಪ ಕದಳಿಯ ಹುಗಲಱಿಯದೆ
ದೇವ ದಾನವ ಮಾನವರೆಲ್ಲರೂ
ಮತಿಗೆಟ್ಟು ಮರುಳಾಗಿ ಹೊಱದೆಗೆದೋಡಿದರು.
ಅಂಗಾಲ ಕಣ್ಣವರು, ಮೈಯೆಲ್ಲಾ ಕಣ್ಣವರು ತಲೆಬಾಲಗೆಟ್ಟರು.
ನಾನೀ ಕದಳಿಯ ಹೊಕ್ಕು ಹೊಯಿದಾಡಿ,
[೪]ಮುಳ್ಳುಮಸೆ[೪] ಮುಟ್ಟದೆ, ಕದಳಿವರಿದು ಗೆಲಿದುತ್ತರಿಸಿ,
ಗೊಹೇಶ್ವರನೆಂಬ ಲಿಂಗ[೫] ನಿಜಸಮಾಧಿಯಲ್ಲಿ ನಿಂದು
ಪರವಶನಾಗಿ ನಿರಾಳಕ್ಕೆ ನಿರಾಳವಾಗಿದ್ದೆನಯ್ಯಾ! ॥೧೨॥

ಇಂತು ಪ್ರಭುದೇವರು ನಿಜಪದವನೈದಲು, ಬಸವರಾಜದೇವರು ಸ್ತುತಿಸಿದ ವಚನ:

೧೪೦೭
ಲಿಂಗಗಂಭೀರ ಗಮನಗೆಟ್ಟುದಲ್ಲಾ!
ಜಂಗಮಗಂಭೀರ ಸುಳುಹುಗೆಟ್ಟುದಲ್ಲಾ!
ಪ್ರಸಾದಗಂಭೀರ ರೂಪುಗೆಟ್ಟುದಲ್ಲಾ!
ಆಚಾರಗಂಭೀರ ಅವಯವಗೆಟ್ಟು[೬]ದಲ್ಲಾ![೬]
ಜ್ಞಾನಗಂಭೀರ ನಡೆಗೆಟ್ಟು[೭]ದಲ್ಲಾ![೭]

೧-೧ ಸುರುವುತಿಪ್ಪುದು (ಮೂ) ೨-೨ ಮೋದಿ (ಮೂ) ೩-೩ ಕುಸುತ್ತ ಬಾರದು(ಮೂ) ೪-೪ ಮುಳ್ಳಮಸಿ(ಮೂ) ೫ + ದ (ಮೂ) ೬-೬ ತಲ್ಲಾ (ಮೂ) ೭-೭ ನೀತಿಯಲ್ಲೆಂದು (ಮೂ)

ಕೂಡಲಸಂಗಮದೇವರಲ್ಲಿ ಪ್ರಭುದೇವರು ನಿಜವನೈಲು,
ಸಂಗನಬಸವಣ್ಣನ ಪ್ರಾಣ ಒಡನೆ ಬಳಿಸಂದುದಲ್ಲಾ. ॥೧೩॥

ಚಿಕ್ಕದಣ್ಣಾಯಕರ ವಚನ:

೧೪೦೮

ಎನ್ನ ಅನುಭಾವದ ಅಗಮ್ಯನೆ,
ಎನ್ನ ಅಜೀವಿನ ವಿಶ್ರಾಮವೆ,
ಎನ್ನ ಭಾವದ ಬಯಕೆಯೆ,
ಎನ್ನ ನಿಜದ ನಿಲವೆ,
ಎನ್ನ ಪರಿಣಾಮದ ಮೇರುವೆ,
ಎನ್ನ ಮನದ ಮಹಿಮನೆ,
ನಿಮ್ಮ ಸುಳುಹೆತ್ತಲಡಗಿತ್ತು? ಎಲೆ ಲಿಂಗವೆ,
ನಿನ್ನ ನಾಮವೆತ್ತ ನಿರ್ನಾಮವಾಯಿತ್ತು?
ಎಲೆ ಪರಮಗುರುವೆ,
ಕೂಡಲಚೆನ್ನಸಂಗಯ್ಯನಲ್ಲಿ
ಉರಿಯುಂಡ ಕರ್ಪುರದಂತಾದೆಯಲ್ಲಾ ಪ್ರಭುವೆ. ॥೧೪॥

ಮಡಿವಾಳಮಾಚಿತಂದೆಗಳ ವಚನ:

೧೪೦೯

ಅಷ್ಟತನುವಿನ ನಿಷ್ಠಾಪರವ ಬಿಟ್ಟು,
ಬಟ್ಟಬಯಲಲ್ಲಿ ನಿಂದ ನಿಜವ ನೋಡಾ!
ಹತ್ತೆಂಬ ಪ್ರಾಣವ ಸುತ್ತಿ ಸುಳಿಯಲೀಸದೆ,
ಒತ್ತಿ ಸುಟ್ಟು ಸಯವಾದ ಘನಚೈತನ್ಯವ ನೋಡಾ!
ನಿಷ್ಠೆನಿಬ್ಬರ ತೊಟ್ಟು ಬಿಟ್ಟ ಸಚ್ಚಿದಾನಂದವಾದ ಪರಿಯ ನೋಡಾ!
ಕಲಿದೇವರದೇವಾ,
ಪ್ರಭುದೇವರ ನಿಲವಿಂಗೆ ನಮೋ ನಮೊ ಎನುತಿರ್ದೆನು! ॥೧೫॥

ಸೊಡ್ಡಳ ಬಾಚರಸರ ವಚನ:

೧೪೧೦

ನಿಜತತ್ತ್ವದ ನಿರವಯವು ನಿರ್ವಾಹವಾಯಿತ್ತು.
ನೆನೆವರ ಪರುಷ ಘನವನೊಡಗಲಿಸಿತ್ತು.
ಭಕ್ತರ ಭಾಗ್ಯ ಮುಕ್ತಿಯನೈದಿತ್ತು.
ಬಸವಣ್ಣ ಚೆನ್ನಬಸವಣ್ಣನ ಮಹಾಮನೆಯಲ್ಲಿ

ಮಹಾದಾನಿ ಸೊಡ್ಡಳನ ಶರಣ ಪ್ರಭುದೇವರು
ನಿರವಯವ ಬೆರಸಲೊಡನೆ
ಸತ್ಯಲೋಕದ ಬಾಗಿಲ ಕದ ತೆಱೆಯಿತ್ತು. ॥೧೬॥

ಈ ಹೀಂಗೆಂದು ಸೊಡ್ಡಳಬಾಚರಸರು ತಾವು ಲಿಂಗೈಕ್ಯವಾಗಲು, ಬಸವರಾಜದೇವರು ನಿರೂಪಿಸಿದ ಪ್ರಸ್ತಾವದ ವಚನ:

೧೪೧೧
ಎಮ್ಮವರಿಗೆ ಸಾವಿಲ್ಲ.
ಎಮ್ಮವರು ಸಾವನಱಿಯರು.
ಸಾವೆಂಬುದು ಸಯವಲ್ಲ.
ಲಿಂಗದಲ್ಲಿ ಉದಯವಾದ ನಿಜೈಕ್ಯರಿಗೆ
ಆ ಲಿಂಗದಲ್ಲಿಯಲ್ಲದೆ ಬೇಱೆ ಮತ್ತೊಂದೆಡೆಯಿಲ್ಲ.
ಕೂಡಲಸಂಗಮದೇವರ ಶರಣ ಸೊಡ್ಡಳ ಬಾಚರಸರು
ನಿಜಲಿಂಗದ ಒಡಲೊಳಗೆ ಬಗಿದು ಹೊಕ್ಕಡೆ
ಉಪಮಿಸಬಲ್ಲವರ ಕಾಣೆನು. ॥೧೭॥

ಇಂತು ಸೊಡ್ಡಳಬಾಚರಸರ ಲಿಂಗೈಕ್ಯವ ಬಸವರಾಜದೇವರು ಕೊಂಡಾಡಿ, ಮತ್ತಂ, ಆ ಬಸವರಾಜದೇವರು ಹಳ್ಳಯ್ಯ ಮಧುವಯ್ಯಗಳು ಪರಮ ಹರುಷದೊಳು ಪ್ರವರ್ತಿಸಲು, ಬಿಜ್ಜಳನು ಹಳ್ಳಯ್ಯ ಮಧುವಯ್ಯಗಳ ಚರಿತ್ರ 'ನೀತಿಯಲ್ಲವೆಂದು' ಬಗೆದು ಬಸವೇಶ್ವರನೊಳು ಮಥನಿಸಲು, ಬಹುವಿಧದ ದೃಷ್ಟವ ಕೊಡಲು ನಂಬುಗೆ ಮನಕ್ಕೆ ಸಾಲದೆ, ಅವರಂ ಕರೆಸಿ ಕಣ್ಣಂ ತೆಗೆಯಿಸಲು, ಬಸವರಾಜದೇವರು ಹಳ್ಳಯ್ಯ ಮಧುವಯ್ಯಗಳ ಕಂಗಳಂ ಪಡೆಯಲವರು ಶಿವನೊಳಗೇಕಾರ್ಥವಾಗಲು, ಆ ಬಸವರಾಜದೇವರು ಶಿವಭಕ್ತದ್ರೋಹಿ ಬಿಜ್ಜಳನ ಸಂಹರಿಸಿ ನನ್ನಿಯಂ ಮೆಱೆ ಎಂದು ಜಗದೇವಂಗೆ ಬೆಸನಿತ್ತು, ಲೋಕಪಾಲಕನ ನೊಸಲ ಬರೆಹವ ತೊಡೆಯುಲೊಡನೆ ಕೂಡಲಸಂಗಮದೇವರು ತಮ್ಮ ಕವಳಿಗೆಯ ತೊಡೆದಹರೆಂದು ಶರಣಜನಂಗಳೊಡನೆ ಬಸವರಾಜದೇವರು ನಿರೂಪಿಸುವ ಪ್ರಸ್ತಾವದ ವಚನ:

೧೪೧೨
ಅರಸು ವಿಚಾರವು, ಸಿರಿಯು, ಶೃಂಗಾರವು
ಸ್ಥಿರವಲ್ಲ ಕೇಳಿರೇ, ಮರ್ತ್ಯದೊಳಗೆ.
ಕೆಟ್ಟಿಹುದು ಕಲ್ಯಾಣ, ಹಾಳಹುದು ಕಲ್ಯಾಣ,
ಲೋಕವಱಿಯಲು ಶಿವಾಚಾರದಭಿಮಾನದಲ್ಲಿ.
ಜಗದೇವ ಮೊಲ್ಲೆಯ ಬೊಮ್ಮಣ್ಣಗಳ ಕೈಯಲ್ಲಿ
ಮಡಿದಹನು ಬಿಜ್ಜಳನು.
ಕೂಡಲಸಂಗಮದೇವರು ತಮ್ಮ ಕವಳಿಗೆಯ ತೊಡೆದಿಹರು. ॥೧೮॥

ಮತ್ತಂ,

೧೪೧೩

ಕರ್ತನಟ್ಟಿದರೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ.
ಸತ್ಯಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು.
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದರೆ,
ಕೂಡಲಸಂಗಮದೇವರ ನಿರೂಪಕ್ಕೆ ಮಹಾಪ್ರಸಾದವೆಂದೆನು. ॥೧೯॥

ಆ ಪ್ರಸ್ತಾವದೊಳು ಪದಂಗಳು:

೧೪೧೪

ರಾಗ: ಆಹರಿ

ಶರಣು ಶರಣಯ್ಯಾ ನೀವು ನಮ್ಮನೆಲ್ಲಿಗೆ ಕರೆದಿಹಿರಿ
ಗುರು ಲಿಂಗ ಜಂಗಮದ ಒಕ್ಕುದು ಮಿಕ್ಕುದುಂಟೆ ನಮಗಲ್ಲಿ [1]॥ಪಲ್ಲವಿ॥[1]

[2]ಪನ್ನಗಧರನುದರದೊಳಿಹ ಸ್ವಪ್ನವ
ಚೆನ್ನಬಸವಣ್ಣ ಕಂಡನಲ್ಲಾ
ಇನ್ನೇನ ಮಾಡುವೆನಯ್ಯಾ ನಮ್ಮ
ಶರಣರು ಕರೆದರು ॥೧॥

ಆದಿಯಲಾಡಿದ ಮಾತನು ನೀವು
ಆಗಳೆ ಮಱೆದಿರಿ ಎಲೆ[3] ಶಿವನೆ
ಮೇದಿನಿಯೊಳು ಗುರು ಲಿಂಗ ಜಂಗಮದ
ಭಕ್ತಿಯ ಬೆಳಸೆಂದು ॥೨॥

ಉತ್ಸಹದಿಂದಲಿ ಅರ್ಚನೆಮಾಡಿ
ಬಿಚ್ಚಿ ಬೀಸಾಟಂತಾಯಿತ್ತಯ್ಯಾ
ನಚ್ಚಿದೆವಯ್ಯಾ ನಿಮ್ಮ ಶರಣರ ಸೇವೆಯ
ತಪ್ಪಿಸುವುದು ಗುಣವೆ? ॥೩॥

ಕುಸುರಿಗೆಲಸದಾ ಮಿಸುನಿಯ ತೊಡಿಗೆಯ
ಬೆಸುಗೆ ಬಿಟ್ಟು ಬಿದ್ದು ಹೋದಂತೆ
ಪಶುಪತಿಯೆ[4] ನಿಮ್ಮ ಶೇಷಪ್ರಸಾದವು
ಉಂಟೇ ನಮಗಲ್ಲಿ ॥೪॥

೧–೧ ಪಲ್ಲವ (ಮೂ) ೨ + ಪದ (ಮೂ) ೩ + ಎಲೆ (ಮೂ) ೪ x (ಮೂ)

ಸುಚಿತ್ತದಲ್ಲಿ ಶಿವಲಿಂಗವ ಪೂಜಿಸಿ
ಬೆಚ್ಚು ಬೆರಸಿದಂತಾಯಿತ್ತಯ್ಯಾ
ನಚ್ಚಿದೆವಯ್ಯ ನಿಮ್ಮ ಶರಣರ ಸೇವೆಯ
ತಪ್ಪಿಸುವರೆ ಗುರುವೆ ॥೫॥

ಬಿನ್ನಹ ಕೇಳಿ ಬಾಚಿರಾಜಯ್ಯ
ಮೋಳಿಗೆಮಾರಯ್ಯ ಮಡಿವಾಳತಂದೆ
ಚೆನ್ನಬಸವಣ್ಣನ ಕೈಯೆಡೆಗೊಟ್ಟೆವು
ನಿಮ್ಮ ಶಿಶುವೆಂದು ॥೬॥

ಮುಡಿಯಲಿ ಓಲೆ ಕಿವಿಯಲ್ಲಿ ಮೂಗುತಿ
ಕೊರಳಲಿ ಕಂಕಣನುಡಿಪಟ್ಟಿಕೆ ಕಾಲಲಿ
ಬಳೆ ಹೆಡತಲೆಯಲ್ಲಿ ಪದಕವು ಲೀಲೆಯಿಂ
ದುಡಕೊಟ್ಟರೆಮ್ಮವರು ॥೭॥

ಬಿಡಲಾಜೆನು ಮರ್ತ್ಯಲೋಕದ ರುಚಿಯನು
ಬಿಡಲಾಜೆನು ಗಣತಿಂಥಿಣಿಯ
ಬಿಡಲಾಜೆನು ಗುರುಲಿಂಗಜಂಗಮದ
ಒಕ್ಕುದ ಮಿಕ್ಕುದನು ॥೮॥

ಭಕ್ತರೆಲ್ಲರು ಮುತ್ತೈದೆಯರಾಗಿರಿ ನಿಮ್ಮ
ಚಿತ್ತದ ಕಂದನ ಮಜೆಯದಿರಿ
ಮುಕ್ತಿಯನೀವುದು ಬಿಜ್ಜಳರಾಯಗೆ
ಭಕ್ತರ ಹಸ್ತದಲಿ ॥೯॥

ಹರ ಮುನಿದರೆ ಗುರು ಕಾವನಲ್ಲಾ
ಗುರು ಮುನಿದರೆ ಹರ ಕಾಯನಲ್ಲಾ
ಹರನಿಗಿಂದಲು ಗುರುವಿನಿಂದಲು
ಜಂಗಮವೇ ಅಧಿಕಾ ॥೧೦॥

ಶರಣು ಸಕಲಪುರಾತರ ಪಾದಕೆ
ಶರಣು ಪ್ರಭುವಿನ ಪಾದಕೆ
ಶರಣು ಕೂಡಲಸಂಗನ ಪಾದಕೆ
ಶರಣು ಶರಣು ತಂದೆ ॥೧೧॥

ಪದ ಸಹ ವಚನ: ॥೩೦॥

ಮತ್ತಂ, ಬಸವರಾಜದೇವರು ಅಸಂಖ್ಯಾತ ಮಹಾಗಣಂಗಳೊಡನೆ ತಮ್ಮ ಲಿಂಗೈಕ್ಯಮಂ ಬಿನ್ನಪಂಗೈದು ಕಳುಹಿಕೊಂಬ ಪ್ರಸ್ತಾವದ ವಚನ:

೧೪೧೫

ಆನು, ನಿಮ್ಮ ಬಂಟರ ಬಂಟ ನಾನಯ್ಯಾ.
ಆನು, ನಿಮ್ಮ ಲೆಂಕರ ಲೆಂಕ ನಾನಯ್ಯಾ.
ಆನು, ನಿಮ್ಮ ತೊತ್ತಿರ ಪಡುಗವ ತೆಗೆವ ಪಡಿದೊತ್ತಯ್ಯಾ.
ಕೂಡಲಸಂಗನ ಶರಣರಿಗೆಲ್ಲಾ ಸಂಗನಬಸವನ ಬಿನ್ನಪ.
ಕವಳಿಗೆಗೆ [1]ಸಂದುದು.[1]
ನಿಮ್ಮ ನಿಜಪದದಲ್ಲಿ ಬೆರಸೆಂದು ಕೃಪೆ ಮಾಡಿರಯ್ಯಾ. ॥೩೧॥

ಮತ್ತಂ,

೧೪೧೬

ಆನು ಮಾಡಿದ ತಪ್ಪನೆಣಿಸಿಹೆನೆಂದಡೆ ಗಣನೆಯಿಲ್ಲ.
ನಡೆದು ತಪ್ಪುವೆನು, ನುಡಿದು ತಪ್ಪುವೆನು.
ಮಾಡಿ ತಪ್ಪುವೆ, ನೀಡಿ ತಪ್ಪುವೆ, ಕೂಡಿ ತಪ್ಪುವೆ,
ಅಱಿದು ತಪ್ಪುವೆ, ಮಱೆದು ತಪ್ಪುವೆ.
ಎನ್ನ ತಪ್ಪನೊಪ್ಪುಮಾಡಿಕೊಂಬುದಲ್ಲದೆ ಚಿತ್ತಕ್ಕೆ ತರಲಾಗದು.
ಕೂಡಲಸಂಗಮದೇವಯ್ಯನೆಂಬ
ಗಂಡನೆನ್ನ ಬೆಸರಬೇಕೆಂದು ಕರೆಯಲಟ್ಟಿದನು.
ಶಿವಶರಣರೆಲ್ಲರಿಗೆ ಶರಣೆಂದು ಬೀಳುಕೊಂಬ ತವಕದಲ್ಲಿದ್ದೆ. ॥೩೨॥

ಆ ಪ್ರಸ್ತಾವದ ಪದಂಗಳು:

೧೪೧೭

ರಾಗ: ಆಹರಿ

ಶರಣು ಶರಣು ಕೂಡೆ ಶರಣು ಶರಣೆನುತ್ತಿದ್ದೆನಯ್ಯಾ
ಅಚಲವಪ್ಪ ಲಿಂಗವನೊಲಿಸಿದ ಶರಣರಿಗೆ ಶರಣು [2]॥ಪಲ್ಲವಿ॥[2]

ಹಸ್ತ ತಾಯಿ, ದೃಷ್ಟಿ ತಂದೆ
ಹುಟ್ಟಿದೆ ನಾನು ಅಯೋನಿಯಲ್ಲಿ

೧-೧ ಸಂದುತ್ತು (ಮೂ) ೨-೨ ಪಲ್ಲವ (ಮೂ)

ಕಟ್ಟಿದೆ ಕಂಕಣವ ಗುರು ಸಾಕ್ಷಿ-
ಯಾಗಿ ಶಿವನೆ ಗಂಡನೆಂದು ॥೧॥

ತಂದೆ ತಾಯಿ ಬಂಧು ಬಳಗ
ಶಿವಭಕ್ತರೆನ್ನ ತವರುಮನೆ
ಕೂಡೆ ಕಳುಹಿ ನೀವು
ಕೊಟ್ಟ ಗಂಡನ ಮನೆಗೆ ॥೨॥

ಮದುವೆಯೆಂದು ಎಮ್ಮವರು ಹುಟ್ಟಿಗೆಯ-
ನುಡಿಸಲು ಹುಟ್ಟಿಗೆ ಹಜೆದು
ಅಜೆವೆಯಾಗಿ ಸ್ವತಂತ್ರಶೀಲರು ಕೊಟ್ಟ
ಅಜೆವೆಯ ಮರಳದಿರೆಂದು ॥೩॥

ಹಿಂದಣ ಭವಮಾಲೆ ಹಿಂಗಿತು ಎನಗೆ
ನಿಮ್ಮ ಕಾರುಣ್ಯಪ್ರಸಾದದಿಂದ
ಮರಳಿ ಭವವಿಲ್ಲ ನೀವೆ ಬಲ್ಲಿರಿ
ನಿಮ್ಮ ಕಂದ ನಾನು ॥೪॥

ಮುಚ್ಚಿದ ಬಾಯಿ ಮುಗಿದ ಕರವು
ನುಡಿಯಲಮ್ಮೆನು ಪ್ರತಿಶಬ್ದವನು
ನೊಸಲು ಶರಣರ ಪಾದದ
ಮೇಲಿಂದಗಲದಿಪ್ಪುದಾಗಿ ॥೫॥

ಹಲವು ಪರಿಯಿಂದ ಗಂಡನನೊಲಿಸಿ
ಕೂಡಿದ ಕೂಟದ ಸ್ನೇಹವನು
ಹೇಳಲಿಲ್ಲಾ ಕೇಳಲಿಲ್ಲಾ
ಶಬುದಕಿಂಬಿಲ್ಲವಾಗಿ ॥೬॥

ಶಬುದ ನಿಶ್ಶಬುದವಾಯಿತ್ತಿನ್ನು
ಕೂಡಲಸಂಗಯ್ಯನಲ್ಲಿ ಬೆರಸಿ
ಮನವು ಅಲ್ಲಮಪ್ರಭುವಿನ ಪಾದದಲ್ಲಿ
ಸಯವಾಯಿತ್ತಾಗಿ ॥೭॥

ಪದ ಸಹ ವಚನ: ॥೩೯॥

ಇಂತು ಬಸವರಾಜದೇವರು ಅಸಂಖ್ಯಾತ ಮಹಾಗಣಂಗಳ ಕೈಯಲು ಬೀಳ್ಕೊಂಡು, ತಮ್ಮ ಗೃಹೋಪಕರಣಂಗಳ ಲಿಂಗಜಂಗಮಕ್ಕೆ ಸೂಱೆಗೊಟ್ಟು, ಏಳುನೂಱೆಪ್ಪತ್ತು ಮಹಾಗಣಂಗಳಿಗೆ ನಿಜಪದ ಪ್ರಾಪ್ತಿಯ ನಿರೂಪಿಸಿ ಕಳುಹಿ, ತಮ್ಮ ಸಮಯಾಚಾರದ ಮೂವತ್ತಾಱುಸಾವಿರ ಜಂಗಮಮಂ ಚಿಕ್ಕದಣ್ಣಾಯಕರ ಕೈಯಲ್ಲಿ ಕೊಟ್ಟು, ಸಕಲ ಶರಣರು ಕೂಡಿ ಕಟಕಮಂ ಪೊಱಮಟ್ಟು, ಕಪ್ಪಡಿಯ ಸಂಗಮೇಶ್ವರಂಗೆ ಎಯ್ದಿ ಪೋಗಲು, ಆಗಳೆ ಬಿಜ್ಜಳನೈಶ್ವರ್ಯ ಹಾನಿಯಾಗಿ, ಕಟಕದ ಭಾಗ್ಯವಳಿಯಿತ್ತು. ಧರಣಿ ನಡುಗಿತ್ತು. ಕಾಗೆಗಳಿರುಳಱಿಚಿದವು. ಹಗಲು ನರಿಗಳೂಳಿದವು. ನಕ್ಷತ್ರ ಬಿದ್ದವು. ಕಲ್ಲಮಳೆ ಸುರಿದವು. ಚಂಡವಾಯು ಬೀಸಿ ಕೆಂಧೂಳೆದ್ದು ಹಗಲು ಮುಸುಕಿ ಮಂಜಿನ ಕತ್ತಲೆಯಾಗಿ ಗಗನದೊಳು ಭೀಕರವಾಗಿ, ಬಿಜ್ಜಳನು ಶಿರವಿಲ್ಲದ ಬಿಗಿದ ಹೆಣನ ಕಂಡ.

ಪ್ರತಿಸೂರ್ಯನುದಯಿಸಿದನಿದಱಮೇಲೇನಹುದೊ ಎನುತ್ತ ಜನರುಗಳು ಹೆದಱೆ ಸಂವಾದಿಸುತ್ತಿರೆ, ಇತ್ತಲಾ ಜಗದೇವನು ಮೊಲ್ಲೆಯ ಬ್ರಹ್ಮಯ್ಯನ ಕೂಡಿಕೊಂಡು, ಬಸವರಾಜದೇವರಲ್ಲಿ ಬೆಸನಾಂತುದಕ್ಕೆ ಇದೆ ಕಾಲವೆಂದು ಅತಿಪರಾಕ್ರಮದಿಂ ಭಸ್ಮಾಂಗ ವಿಭೂತಿ ಶರಣಾಂಕಿತ ವೀರಾವತಾರದ ವೀರಭದ್ರರು ಕೈದುವಂ ಪಿಡಿದು ದಳದಳನೆ ಬಂದು, ಐವತ್ತಾಱು ದೇಶಾಧಿಪತಿ ಗಳಿಂದೋಲೈಸಿಕೊಳ್ಳುತ್ತ, ಎಪ್ಪತ್ತೆರಡು ನಿಯೋಗಂಗಳಿಂ ಗದ್ದುಗೆಯಮೇಲಿಹ ಬಿಜ್ಜಳನ ಕಾಣುತ್ತ, ಆಯುಧವನುಚ್ಚಿ ಸಭೆಝಲ್ಲೆನಲು ಬಿಜ್ಜಳನ ಕಾಯದಲ್ಲಿ ಒಂದೆರಡು ಮೂಱು ಪೂರಾಯ ಘಾಯದೊಳಿಱಿದು ಕೆಡಹಿ, ಶಿವಭಕ್ತದ್ರೋಹಿಯ ಕೊಂದೆವಲಾ ಎಂದು ಉಬ್ಬುತ್ತ ಕೊಬ್ಬುತ್ತ ಬೊಬ್ಬಿಡುತ್ತ ವೀರಭಕ್ತರು ಶಿವಲೋಕಕ್ಕೈದಿದರು.

ಇತ್ತ ಬಸವರಾಜದೇವರು ಇನಿತಂ ಕೇಳಿ ಸಂತೋಷಿಸಿ ಕೂಡಲಿಗೆ ಬಂದು, ಆ ಸಮಯದೊಳು ನೀಲಲೋಚನೆಯ ಕರೆದುಕೊಂಡು ಬನ್ನಿ ಎಂದು ಹಡಪದಪ್ಪಣ್ಣಗಳ ಕಳುಹಲು, ಆ ಅಪ್ಪಣ್ಣಗಳು ಕಲ್ಯಾಣಕ್ಕೆ ಬಂದು ನೀಲಲೋಚನೆಯಮ್ಮನ ಮುಂದೆ ನಿಂದು ನಮಸ್ಕರಿಸಿ, ಲಿಂಗೈಕ್ಯವಾಗುವದಕ್ಕೆ ಬಸವರಾಜದೇವರು ಕೂಡಲಿಗೆ ಬರಹೇಳಿದರೆನಲು, ಆ ಅಪ್ಪಣ್ಣಗಳೊಡನೆ ನೀಲಲೋಚನೆಯಮ್ಮನು ನಿರೂಪಿಸಿದ ಪ್ರಸ್ತಾವದ ವಚನ:

೧೪೧೮

ಇಪ್ಪೆಯ ಹೂವನನುಗೊಳಿಸಲು ಇಪ್ಪೆ ಹಿಪ್ಪೆಯಾಯಿತ್ತು.
ಸರ್ಪನ ಶಿರ ಕಂಠದಲ್ಲಿ ಮೂಗುತಿಯ ಸರಗೊಳಿಸಿದೆನಯ್ಯಾ.
ನಾವಲ್ಲಿದ್ದರೇನು? [೧]ಇಲ್ಲಿದ್ದರೇನು?[೧]
ನಮ್ಮ [೨]ನಮ್ಮ[೨] ಸಂಸರ್ಗದಲ್ಲಿ ನಿರುಪಮಾಕಾರಮೂರ್ತಿಗಳಾಗಿ,
ನಿರವಯವನೈದಿ ನಿಜಸುಖಿಗಳಾದೆವು.
ಬಸವನಲ್ಲಿ ಎಮಗೆ ತೆಱಹಿ[೩]ಲ್ಲವಯ್ಯಾ ಅಪ್ಪಣ್ಣಾ.
ಭಾವಶೂನ್ಯಳು ನಾನು ಸಂಗಯ್ಯಾ. ॥೪೦॥

೧-೧ ನಾವಿಲ್ಲಿದ್ದರೇನು (ಮೂ)೨-೨ ನಿಮ್ಮ (ಮೂ) ೩ ಪಿ (ಮೂ)

ಮತ್ತಂ,

೧೪೧೯

ನಾನಾರ ಸಾರುವೆನೆಂದು ಚಿಂತಿಸಲೇತಕ್ಕಯ್ಯಾ?
ನಾನಾರ ಹೊದ್ದುವೆನೆಂದು ಭ್ರಮೆಬಡಲೇತಕ್ಕಯ್ಯಾ?
ನಾನಾರ ಇರವನರಿವೆನೆಂದು ಪ್ರಳಾಪಿಸಲೇತಕಯ್ಯಾ?
ಪರಿಣಾಮಮೂರ್ತಿ ಬಸವನ ರೂಪು ಎನ್ನ ಕರಸ್ಥಲದಲ್ಲಿ
ಬೆಳಗಿದ ಬಳಿಕ, ಸಂಗಯ್ಯನ ಹಂಗು ನಮಗೇತಕ್ಕಯ್ಯಾ ಅಪ್ಪಣ್ಣಾ? ॥೪೧॥

ಆ ಪ್ರಸ್ತಾವದ ಪದಂಗಳು:

೧೪೨೦

ರಾಗ: [೧]ನಾದನಾಮಕ್ರಿ[೧]

ನೋಡು ನೋಡು ನೋಡು ನೋಡು ನೋಡು ಲಿಂಗವೆ
ನೋಡು ಬಸವಯ್ಯನು ಮಾಡಿದಾಟವ [೨]॥ಪಲ್ಲವಿ॥[೨]

[೩]ಅಲ್ಲಿಗೆ[೪]ನ್ನನು ಬರಹೇಳಿದರಂತೆ
ಇಲ್ಲಿ ತಾನಿಲ್ಲವೆ ಸಂಗಯ್ಯನು
ಅಲ್ಲಿ ಇಲ್ಲಿ ಎಂಬ ಉಭಯಸಂದೇಹವು
ಬಲ್ಲ ಮಹಾತ್ಮರಿಗಿದು ಗುಣವೆ ॥೧॥

ಪೊಡವಿಯ ಭಕ್ತಗಣಂಗಳು ಸಹವಾಗಿ
ಮಡಗಿದ ಶ್ರೀಗುರುಕರದಲ್ಲಿ
ದೃಢಚಿತ್ತ ಕಟಿಗೊಂಡು ಕೂಡಿಹೆನೆಂದಡೆ–
ನ್ನೊಡೆಯ ಸಂಗಮನಾಥನೀತನಲ್ಲವೆ? ॥೨॥

ಸಂಗನಬಸವಣ್ಣನೆಂದ ನಿರೂಪಕೆ
ಹಿಂಗದೆ ಕರವೆತ್ತಿ ಮುಗಿ[೫]ಯುತಲಿ[೫]
ಸಂಗಮನಾಥನೆ ಈತನೆ[೬]ಂದು ಎ–
ನ್ನಂಗೈಯ ಲಿಂಗದೊಳಡಗುವೆನು. ॥೩॥

ಪದ ಸಹ ವಚನ: ॥೪೪॥

೧–೧ ನಾದರಾಮಕ್ರಿ (ಮೂ) ೨–೨ ಪಲ್ಲವ (ಮೂ) ೩ + ಪದ (ಮೂ) ೪ + ಎ (ಮೂ) ೫–೫ ವುತ(ಮು) ೬ + ತಾನೆ (ಮೂ)

ಈ ಹೀಂಗೆಂದು ನೀಲಲೋಚನೆಯಮ್ಮನವರು ಹಡಪದಪ್ಪಣ್ಣಗಳ ಮರಳಿ ಕಳುಹಲು, ಅವರು ಬಂದು ಬಸವರಾಜದೇವರೊಡನೆ 'ದೇವಾ, ಅವರು ತಮ್ಮ ಇಷ್ಟಲಿಂಗ ದೊಳೈಕ್ಯವಾದೆಹೆವೆಂದರೆ'ಂದು ಬಿನ್ನೈಸಲು, ಅದಕ್ಕೆ ಬಸವರಾಜದೇವರೊಡಂಬಟ್ಟು ಸಂಗಮೇಶ್ವರನಲ್ಲಿ ಉಪಾವಸ್ತೆಯಂ ಮಾಡುವ ಪ್ರಸ್ತಾವದ ವಚನ:

೧೪೨೧

ನಾನಾ ಭವದುಃಖದಲ್ಲಿ ಹುಟ್ಟಿದ ಪ್ರಾಣಿಯಲ್ಲಿ ತಂದೆ,
ಇನ್ನು ಹುಟ್ಟಲಾಱೆನು, ಹೊಂದಲಾಱೆನು.
ಜನನ ಮರಣವೆಂಬೆರಡಕ್ಕೆ ಹೊಱಗಾದೆ ನಾನಯ್ಯಾ.
ನೀವು ಹೇಳಿದ ಮಣಿಹವ ಮಾಡಿದೆ
ಎನ್ನ ಕೂಡಿಕೊಳ್ಳಾ ಕೂಡಲಸಂಗದೇವಾ. ॥೪೫॥

ಮತ್ತಂ,

೧೪೨೨

ಉರಿಯೊಳಗಣ ಕರ್ಪುರಕ್ಕೆ ಕರಿಯುಂಟೆ ಅಯ್ಯಾ?
ಬಯಲಮರೀಚಿಯ ಜಲಕ್ಕೆ ಕೆಸಱುಂಟೆ?
ವಾಯುವನಪ್ಪಿದ ಪರಿಮಳಕ್ಕೆ ನಿರ್ಮಾಲ್ಯ ಉಂಟೆ?
ನೀವು ನೆಱೆ ಒಲಿದ ಬಳಿಕ ಎನಗೆ ಭವ ಉಂಟೆ?
ಕೂಡಲಸಂಗಮದೇವಾ,
ನಿಮ್ಮ ಚರಣಕಮಲದೊಳಗೆನ್ನನಿಂಬಿಟ್ಟುಕೊಳ್ಳಯ್ಯಾ. ॥೪೬॥

ಮತ್ತಂ, ಬಸವರಾಜದೇವರು ನಿಮ್ಮ ಶರೀರದೊಳು ಆವ ೧ಸ್ಥಾನವನೂ ಒಲ್ಲೆನು.೧ ನಿಮ್ಮ ಹೃದಯಕಮಲದೊಳಿಂಬಿಟ್ಟುಕೊಳ್ಳಿ ಎಂದು ಅತ್ಯಂತ ಅವಸ್ಥೆಯಿಂದ ಬಿನ್ನೈಸುವ ಪ್ರಸ್ತಾವದ ವಚನ:

೧೪೨೩

ಶರಣ ಸನ್ನಿಹಿತನು ಐಕ್ಯವಹಲ್ಲಿ,
ಹರಿಬ್ರಹ್ಮಾದಿಗಳು ಮೊದಲಾದ ತೆತ್ತೀಸಕೋಟಿ ದೇವರ್ಕಳು
ಉಘೇ ಚಾಂಗು ಭಲಾ ಎನುತ್ತಿರಲು,
ಐಕ್ಯ ಬಸವಣ್ಣಂಗೆ ಠಾವಾವುದಯ್ಯಾ, ಎಂದಡೆ,
ಅಂಗದ ಕಳೆಯಲ್ಲಿ, ಬಲನೆ ಬ್ರಹ್ಮನ ಸ್ಥಾನ.
ಎಡನೆ ನಾರಾಯಣನ ಸ್ಥಾನ.

೧-೧ ಸ್ಥಾನವನೊಲ್ಲೆನು (ಮೂ)

ಒಲ್ಲೆನಯ್ಯಾ ಆ ಸ್ಥಾನಂಗಳನು.
ಗರಳದ ಸ್ಥಾನ ಕೊರಳು ದೇಹ ರುಂಡಮಾಲೆಯ ಸ್ಥಾನ,
ಕರ್ಣ ನಾಗೇಂದ್ರನ ಸ್ಥಾನ, ಬಾಯಿ ಅಪ್ಪುವಿನ ಸ್ಥಾನ.
ನಾಸಿಕ ವಾಯುವಿನ ಸ್ಥಾನ, ಕಂಗಳು ಅಗ್ನಿಯ ಸ್ಥಾನ.
ಜಡೆ ಗಂಗಾದೇವಿಯ ಸ್ಥಾನ, ನೊಸಲು ಚಂದ್ರನ ಸ್ಥಾನ,
ಹಿಂದು ಸೂರ್ಯನ ಸ್ಥಾನ.
ಚರಣಂಗಳು ಅಷ್ಟದಿಕ್ಪಾಲಕರ ಸ್ಥಾನ.
ಗುಹ್ಯ ಕಾಮನ ಸ್ಥಾನ,
ಹಸ್ತಂಗಳು ತ್ರಿಶೂಲ ಕಪಾಲ ಖಟ್ವಾಂಗ ಡಮರುಗ ಸ್ಥಾನ,
ಇಂತೀ ಎಲ್ಲಾ ಸ್ಥಾನಂಗಳನೊಲ್ಲೆನಯ್ಯಾ.
ಹೃದಯಕಮಲದ ಅಂತರಾಳದ
ಏಕಪೀಠದ ಸಿಂಹಾಸನವ ತೆಱಹುಕೊಡು
ಕೂಡಲಸಂಗಮದೇವಾ. ॥೪೭॥

ಈ ಹೀಂಗೆಂದು ಬಸವರಾಜದೇವರು ಅತ್ಯಂತ ಅವಸ್ಥೆಯಿಂ ಬಿನ್ನೈಸುತ್ತಿರಲು, ಮನ್ಮನದ ಮಧ್ಯದೊಳು ಚಿದಾತ್ಮಲಿಂಗವು ಹೊಳೆದು ತೋಱಿತ್ತಾಕ್ಷಣದಿ. ಮುಗಿಲೊಳ್ ಮಿಂಚು ಪೊಱಪೊಣ್ಮುವಂತೆ, ದಿನಮಣಿಕೋಟಿಯ ಪ್ರಭಾಪುಂಜ ಒಬ್ಬುಳಿಯಾದ ಮಾಳ್ಕೆಯೊಳ್ ಚಂದ್ರಕೋಟಿ ತೇಜವನೊಳಕೊಳುತ್ತ ಮೂರ್ತಿಯ ಧರಿಸಿ, ಆ ಸಂಗಮೇಶ್ವರನು ಜಂಗಮಸ್ವರೂಪಿನಿಂದ ಬಂದು, ಆ ಬಸವರಾಜದೇವರ ಬಿಗಿಬಿಗಿದಪ್ಪಿಕೊಂಡು, ತಮ್ಮ ಹೃದಯಕಮಲದೊಳಗಡಗಿಸಿಕೊಂಡು, ಆ ಲಿಂಗದೊಳಾಮೂರ್ತಿಯಡಗಿದ ಪ್ರಸ್ತಾವದ ವಚನ:

೧೪೨೪

ಧರೆಯಾಕಾಶದ ನಡುವೆ ಒಂದು ಮಾಮರ ಹುಟ್ಟಿತ್ತು.
ಆ ಮರಕ್ಕೆ ಕೊಂಬೆರಡು, ಎಲೆ ಮೂಱು, ಮೂವತ್ತಾಱು ಪುಷ್ಪ.
ಕಾಯಿ ಒಂದೆ, ಹಣ್ಣು ರಸ ತುಂಬಿದಲ್ಲಿ ಏನನೂ ಕಾಣೆ.
ಎಲೆ ಉದುರಿದಡೆ ಹಣ್ಣು ತೊಟ್ಟು ಬಿಟ್ಟು ಬಿದ್ದಿತ್ತು.
ಆ ಹಣ್ಣ ಪ್ರಭುದೇವರು ಆರೋಗಣೆಯ ಮಾಡಿ
ನಿಜದಲ್ಲಿ ನಿರ್ವಯಲಾದರು.
ಪ್ರಭುವಿನ ಕಾರುಣ್ಯಪ್ರಸಾದವ ನಾನು ಕೊಂಡೆನಾಗಿ,
ಕೂಡಲಸಂಗಮದೇವರು
ಇತ್ತ ಬಾರೆಂದು ತಮ್ಮ ಹೃದಯಕಮಲದಲ್ಲಿ ಇಂಬಿಟ್ಟುಕೊಂಡರು. ॥೪೮॥

ಇಂತು ಬಸವರಾಜದೇವರ ತಮ್ಮೊಳಗೆ ಇಂಬಿಟ್ಟುಕೊಂಡು ಗುರುಮೂರ್ತಿಯಾಕ್ಷಣದಲೆ ಸಾಕಾರವನುಳಿದು ನಿರ್ವಯಲಾಗಲು, ಉಘೇ ಎನುತ್ತೆಲ್ಲೆಡೆಯೊಳು ಶಿವಭಕ್ತರ ಕೀರ್ತನೆಗಳ್

ಮೊರೆಯೆ, ಆ ಬಸವರಾಜದೇವರು ಗಾಳಿಯೊಳು ಸುಳಿಗಾಳಿ ಬೆರೆದಂತೆ, ನಭದೊಳೆಸೆದ ತಟಿಲ್ಲತೆ ನಭದೊಳು ಹೊಳೆದಡಗಿದಂತೆ, ಉದಕದಿಂದಾದ ವಾರಿಶಿಲೆ, ಉದಕದೊಳಡಗಿದಂತೆ, ಕುಸುಮ ಪರಿಮಳದಂತೆ, ಪಾಲೋಳ್ ಪಾಲ್ ಬೆರೆದಂತೆ, ಚಂದ್ರನೊಳ್ ಕಳೆ ಉದಯಿಸಿ ಮರಳಿ ಚಂದ್ರನೊಳ್ ಬೆರೆದಂತೆ ಬಸವರಾಜದೇವರು ಸಂಗಮೇಶ್ವರನೆಂಬ ಗುರುಮೂರ್ತಿಯ ಹೃತ್ಕಮಲದಲ್ಲಿ ವಿಶ್ರಾಂತಿಯನ್ನೈದಿ, ತದ್‌ಗುರುವೆ ತಾನಾಗಿ ಬೆರಸಲು, ಇತ್ತಲು ನೀಲಲೋಚನೆಯಮ್ಮನವರು ಪ್ರಳಾಪಿಸಿದ ವಚನ:

೧೪೨೫

ಆದಿಯನಾದಿಯ ತತ್ತ್ವವ ಭೇದಿಸಿ ಕೊಟ್ಟ ಗುರುವೆ,
ಅಪ್ರಮಾಣದ ಬೆಳಗ ಭೇದಿಸಿ ಕೊಟ್ಟ ಗುರುವೆ,
ಅಕಾರ ಉಕಾರ ಮಕಾರ ಕಳೆಯನಱುಹಿಸಿ ಕೊಟ್ಟ ಗುರುವೆ,
ಇಷ್ಟ ಪ್ರಾಣ ಭಾವವಿದೆಂದು ತೋಱಿದ ಗುರುವೆ,
ನಿಜದಜೀವನಱುಹಿಸಿ ಕೊಟ್ಟ ಗುರುವೆ,
ನಿರ್ಮಳಪ್ರಭೆಯ ತೋಱಿದ ಗುರುವೆ,
ನಿಜವನನುಭವಕ್ಕೆ ತಂದ ಗುರುವೆ,
ನಿಮ್ಮ ಘನವ ಕಾಂಬ ಕಣ್ಣು ಕ್ರಮಗೆಟ್ಟಿತ್ತು;
ಸಂಗಯ್ಯ, ಬಸವಯ್ಯನ ಪ್ರಭೆಯೆಲ್ಲಿ ಅಡಗಿತೊ? ॥೪೯॥

ಮತ್ತಂ,

೧೪೨೬

ಕಾಮಿತಸುಖವ ಕಂಗೊಳಿಸಿದ ಗುರುವೆ,
ಕಲ್ಪಿತವ ನಷ್ಟವ ಮಾಡಿದ ಗುರುವೆ, ಎತ್ತಲಡಗಿದೆಯಯ್ಯಾ?
ಸುಖದುಃಖವನೊಂದು ರೂಪ ಮಾಡಿದ ಗುರುವೆ,
ಎತ್ತಲಡಗಿದೆಯಯ್ಯಾ, ಸಂಗಯ್ಯನ ಗುರು ಬಸವಾ? ॥೫೦॥

ಮತ್ತಂ,

೧೪೨೭

ಮಧ್ಯಕಲ್ಪ ನಾಸ್ತಿಯಾಯಿತ್ತೆ ಬಸವಾ!
ಪ್ರಾಣ ಪ್ರಸಾದದಲ್ಲಿ ಅಡಗಿತ್ತೆ ಬಸವಾ!
ಭಕ್ತಿ ಬಯಲಾಯಿತ್ತೆ ಬಸವಾ!
ಭಾವ ನಿರ್ಭಾವವಾಯಿತ್ತೆ ಬಸವಾ!
ಕಲ್ಪಿತಗುಣ ನಷ್ಟವಾಯಿತ್ತೆ ಬಸವಾ!
ಮನೋಮುಕ್ತಿಯಾಯಿತ್ತೆ ಸಂಗಯ್ಯನ ಗುರು ಬಸವಾ! ॥೫೧॥

ಮತ್ತಂ,

೧೪೨೮

[1]ಏನೇನು[1] ಎನಲಿಲ್ಲ.
ಎನ್ನ ಭಕ್ತಿಯಳಿದ ಭಾವಕ್ಕೆ ಇನ್ನೇನು ಏನೂ ಎನಲಿಲ್ಲ.
ಎನ್ನ ಪ್ರಾಣದ ಹಂಗ ಹಜೆದ ಬಳಿಕ,
ಇನ್ನೇನು ಏನೂ ಎನಲಿಲ್ಲ.
ಎನ್ನೈಕ್ಯದ ಸಮರಸ ಕೈಗೂಡಿದ ಬಳಿಕ ಇನ್ನೇನು ಏನೂ ಎನಲಿಲ್ಲ.
ಎನ್ನಭಿಮಾನದ ಕರ್ತೃ ನಿರಾಳದಲ್ಲಿ ನಿಂದ ಬಳಿಕ
ಸಯದಾನ ಸುಯಿದಾನವಾಯಿತ್ತಯ್ಯಾ ಸಂಗಯ್ಯಾ. ॥೫೨॥

ಮತ್ತಂ,

೧೪೨೯

ಎನಗಿನ್ನೇನು, ಎಮ್ಮಯ್ಯನೈಕ್ಯವನೈದಿದ ಬಳಿಕ?
ಎನಗೆ ಕಾಯವಿಲ್ಲ; ಎನಗೆ ಪ್ರಾಣವಿಲ್ಲ.
ಎನಗೆ ಹೃದಯದ ಹಂಗುಹಜೆದು
ಪರಿಣಾಮ ಪ್ರಸಾದಿಯಾದೆನಯ್ಯಾ ಸಂಗಯ್ಯಾ. ॥೫೩॥

ಈ ಹೀಂಗೆಂದು ನೀಲಲೋಚನೆಯಮ್ಮನವರು ಪ್ರಳಾಪಿಸುತ್ತಿರಲು, ಅದಕ್ಕೆ ಚೆನ್ನಬಸವರಾಜದೇವರ ವಚನ:

೧೪೩೦

ಶ್ರೀಗುರು ತನ್ನ ಸಾಕಾರವ ಬಿಟ್ಟು
ನಿರಾಕಾರವಾದರೆ ಸಂದೇಹಿಸಲಿಲ್ಲ.
ಸಾಕಾರವಿಡಿದು ಉಪದೇಶವ ಕೊಟ್ಟು,
ಎನ್ನ ಕಾಯವ ಸಮರ್ಪಿಸಿಕೊಂಡು ಶುದ್ಧನ ಮಾಡಿದನು,
ಪ್ರಾಣದಲಡಗಿ ಸಿದ್ಧನ ಮಾಡಿದನು.
ಆತ್ಮಪದದಲ್ಲಿ ಬೆರಸಿ ಪ್ರಸಿದ್ಧನ ಮಾಡಿದನು.
ಇಂತು ಅವಿರಳ ಗುರುತತ್ತ್ವ ಸಂಗನಬಸವಣ್ಣ
ನಿನ್ನೊಳಗೆ ಪರಿಪೂರ್ಣ ಕಾಣಾ ಕೂಡಲಚೆನ್ನಸಂಗಮದೇವಾ.।೫೪।

ಮತ್ತಂ,

೧೪೩೧

ಜಂಗಮಮುಖದಲು ಲಿಂಗ ಸರ್ವಾಂಗವಾಯಿತ್ತಾಗಿ
ಆರೋಗಿಸಿ ಕೊಡುವುದು ನೋಡಾ.

೧-೧ ಏನುಯೇನೂ (ಮೂ)

ಜಂಗಮದಾಪ್ಯಾಯನವೆ ಲಿಂಗದಾಪ್ಯಾಯನ ನೋಡಾ.
ಜಂಗಮತೃಪ್ತಿಯೆ ಲಿಂಗತೃಪ್ತಿ ನೋಡಾ.
ಜಂಗಮವಾರೋಗಿಸಿ ಡಱ್ರನೆ ತೇಗಿದರೆ
ಅಂಗೈಯಲೆಱಗುವುದು ನೋಡಾ.
ಜಂಗಮ ಮುಖದಲು ತೃಪ್ತನಾದೆನೆಂದು,
ಬಾರೋ ಬಸವಾ ಎಂದು ಕೈವಿಡಿದು
ತೆಗೆದಪ್ಪಿ ಮುದ್ದಾಡಿ ತರ್ಕೈಸಿಕೊಂಡು,
ನಿನ್ನ ಹೊಱಗಿರಿಸಲಾಱೆನೆಂದು
ತನ್ನ ಹೃದಯ ಕಮಲದಲ್ಲಿ ಇಂಬಿಟ್ಟುಕೊಂಡು
ಕೂಡಲಚೆನ್ನಸಂಗಯ್ಯಂಗೆ ಬಸವ ಪ್ರಾಣಲಿಂಗವಾದ. ॥೫೫॥

ಇದಕ್ಕೆ ನೀಲಮ್ಮನ ವಚನ:

೧೪೩೨

ಅಡವಿಯಲ್ಲಿ ಕಣ್ಣುಗೆಟ್ಟ ಪಶುವಿನಂತೆ
ನಾನು ಪ್ರಳಾಪಿಸುತ್ತಿರ್ದೆನಯ್ಯಾ!
ಕಡುದುಃಖದಿಂದ ಮಱುಗಲು,
ಶರಣ ಚೆನ್ನನಱಿದು ಶಿವ ಶಿವಾ ಎಂಬ ಮಂತ್ರವನಱುಹಿ,
ಅಳಲುವ ಬಳಲಿಕೆಯ ಕಳೆದನಯ್ಯ
ಸಂಗಯ್ಯನಲ್ಲಿ ಚೆನ್ನಬಸವಣ್ಣಂಗೆ ನಮೋ ನಮೋ ಎನುತಿರ್ದೆನು ॥೫೬॥

ಮತ್ತಂ, ನೀಲಲೋಚನೆಯಮ್ಮನ ಐಕ್ಯ:

೧೪೩೩

ಎಲೆ ಅಯ್ಯಾ, ಕರಸ್ಥಲ ಬಯಲಾಯಿತ್ತೆನಗೆ,
ಕರಸ್ಥಲ ಮನಸ್ಥಲವಾಯಿತ್ತು. ಸಂಗಯ್ಯಾ ಬಸವ ಹೋದನತ್ತ,
ನಾನಡಗಿದೆನಯ್ಯಾ ನಿನ್ನತ್ತ! ॥೫೭॥

ಮತ್ತಂ,

೧೪೩೪

ನಿರ್ಮೂಲವಾಯಿತ್ತಾಹಾ! ನಿರಾಲಂಬವಾಯಿತ್ತಾಹಾ!
ನಿರಾಕುಳವಾಯಿತ್ತಾಹಾ!
ಪುಣ್ಯದ ಫಲ ತೋಱಿ ಬಯಲನೆ ಕೂಡಿತ್ತು.
ಆ ಬಯಲು ನಿರ್ವಯಲಾಯಿತ್ತು.
ಆ ನಿರ್ವಯಲನುಂಡು ನಿಜಸುಖಿಯಾದೆನಯ್ಯಾ ನಾನು.
ಸಂಗಯ್ಯನಲ್ಲಿ ನಿಶ್ಶೂನ್ಯವಯ್ಯಾ. ॥೫೮॥

ಇಂತು ನೀಲಲೋಚನೆಯಮ್ಮನು ಸಮುದ್ರದಲ್ಲಿ ಬುದ್ಬುದಂಗಳಡಗಿದಂತೆ, ಆಕಾಶದೊಳಡಗಿದ ಮಿಂಚಿನಂತೆ, ಶರೀರದೊಳಡಗಿದ ಚೈತನ್ಯದಂತೆ, ನಯನದಲ್ಲಡಗಿದ ಪ್ರತಿಬಿಂಬದಂತೆ, ತಮ್ಮ ಇಷ್ಟಲಿಂಗದಲ್ಲಿ ಏಕಾರ್ಥವಾಗಿ ನಿರ್ವಯಲನೈದಲು, ಅತ್ತ ಸೊನ್ನಲಾಪುರದಲ್ಲಿ ಸಿದ್ಧರಾಮಯ್ಯದೇವರು ತಮ್ಮ ಮಹಾಜ್ಞಾನದಿಂದಱಿದು ಸ್ತುತಿಸಿದ ಪ್ರಸ್ತಾವದ ವಚನ:

೧೪೩೫

ತಾಯೆ, ಪರಮಸುಖಾಚಾರಮೂರ್ತಿಯನಡಗಿಸಿ
ನೀನೆಯಾದೆಯವ್ವಾ! ತಾಯೆ,
ಮಹಾಜ್ಞಾನ ಕಲ್ಪಿತದಲ್ಲಿ ನೀನೆಯಡಗಿದೆಯವ್ವಾ!
ತಾಯೆ, ನೀಲಮ್ಮನೆಂಬ ಸುಖವಾಸಿ ಮೂರ್ತಿ
ಕಪಿಲಸಿದ್ಧಮಲ್ಲಿನಾಥಯ್ಯಾ,
ನಮ್ಮ ತಾಯಿ ನೀಲಮ್ಮ ನೀನಾದಳು. ॥೫೯॥

ಆ ಪ್ರಸ್ತಾವದೊಳು ಅಕ್ಕನಾಗಾಯಿಗಳು ಪ್ರಳಾಪಿಸಿದ ವಚನ:

೧೪೩೬

ಅಯ್ಯಾ, ನಾನಥವೆಯಯ್ಯಾ!
ಕೈಯ ಕೋಲ ಕೊಂಬರೆ ಅಯ್ಯಾ?
ಎಳೆಗಱುವಿನ ಎಳೆಗಂದಿಯನೆಳದೊಯ್ವರೆ ಭಕ್ತರು?
ಅಯ್ಯೋ ಅಯ್ಯೋ ಎನಲೊಯ್ವರೆ
ಬಸವಣ್ಣಪ್ರಿಯ ಚೆನ್ನಸಂಗಯ್ಯಾ? ॥೬೦॥

ಮತ್ತಂ,

೧೪೩೭

ಭಕ್ತಿಯ ತವನಿಧಿಯೆ, ಮುಕ್ತಿಯ ಮೂರುತಿಯೆ,
ಲಿಂಗಜಂಗಮದ ಚೈತನ್ಯವೆ,
ನಿಮ್ಮನಗಲಿ ಎಂತು ಸೈರಿಸುವೆನು!
ಎಲೆ ಅಯ್ಯಾ, ಪರಮಗುರುವೆ,
ಆಹಾ! ಎನ್ನ ಅಂತರಂಗದ ಜ್ಯೋತಿಯೆ,
ನಿಮ್ಮ ಒಕ್ಕ ಶೇಷಪ್ರಸಾದವನಿಕ್ಕಿ,
ಎನ್ನ ಪಾವನವ ಮಾಡಿ ಉಳುಹಿದೆಯಯ್ಯಾ!
ಲಿಂಗವೆ, ಎನಗಿನ್ನಾರು ಹೇಳಯ್ಯ ನೀವಲ್ಲದೆ?
ಬಸವಣ್ಣಪ್ರಿಯಚೆನ್ನಸಂಗಯ್ಯಾ
ನೀವಗಲಿದರೆ ಎನ್ನ ಪ್ರಾಣ ನಿಮ್ಮೊಳಗೆ ಅಗಲಬಲ್ಲುದೆ? ॥೬೧॥

ಮತ್ತಂ,

೧೪೩೮

ಬಸವಣ್ಣಾ ನೀವು ಮರ್ತ್ಯಕ್ಕೆ ಬಂದು ನಿಂದರೆ,
ಭಕ್ತಿಯ ಬೆಳವಿಗೆ ದೆಸೆದೆಸೆಗೆಲ್ಲಾ ಪಸರಿಸಿತ್ತಯ್ಯಾ.
ಸ್ವರ್ಗ ಮರ್ತ್ಯ ಪಾತಾಳದೊಳಗೆಲ್ಲಾ
ನಿಮ್ಮ ಭಕ್ತಿಯ ಬೆಳವಿಗೆಯ ಘನವನಾರು ಬಲ್ಲರೊ ಅಣ್ಣಾ?
ಶಶಿಧರನಟ್ಟಿದ ಮಣಿಹ ಪೂರೈಸಿತ್ತೆಂದು ನೀವು ಲಿಂಗೈಕ್ಯವಾದರೆ,
ನಿಮ್ಮೊಡನೆ ಭಕ್ತಿ ಹೋಯಿತ್ತಯ್ಯಾ!
ನಿಮ್ಮೊಡನೆ ಸದಾಚಾರ ಹೋಯಿತ್ತಯ್ಯಾ!
ನಿಮ್ಮೊಡನೆ ಅಸಂಖ್ಯಾತರು ಹೋದರು ಅಣ್ಣಾ!
ಮರ್ತ್ಯಲೋಕದ ಮಹಾಮನೆ ಶೂನ್ಯವಾಯಿತ್ತು ಬಸವಣ್ಣಾ!
ಎನ್ನನೊಯ್ಯದೆ ಹೋದೆಯಲ್ಲಾ,
ಪಂಚಪರುಷಮೂರುತಿ ಬಸವಣ್ಣಾ!
ಬಸವಣ್ಣಪ್ರಿಯ ಚೆನ್ನಸಂಗಯ್ಯಂಗೆ
ಪ್ರಾಣಲಿಂಗವಾಗಿ ಹೋದೆಯಲ್ಲಾ ಸಂಗನಬಸವಣ್ಣಾ! ॥೬೨॥

ಈ ಹೀಂಗೆಂದು ಬಿನ್ನಪಂಗೈಯುತ್ತವೆ, ಬಸವರಾಜದೇವರ ಬೆಂಬಳಿಯಲೆ ನಾಗಾಯಕ್ಕಗಳು ಲಿಂಗೈಕ್ಯವಾದ ಪ್ರಸ್ತಾವದ ವಚನ:

೧೪೩೯

ಆಚಾರವೆಂಬುದು ಅಗೋಚರ ನೋಡಯ್ಯಾ;
ಆರಿಗೆಯೂ ಸಾಧ್ಯವಲ್ಲ.
ಮರ್ತ್ಯಲೋಕದಲ್ಲಿ ಸದಾಚಾರದ ಬೆಳವಿಗೆಯ ಮಾಡಲೆಂದು
ಬಸವಣ್ಣ ಬಂದು ಭಕ್ತಿಸ್ಥಲವನಱುಹಿದನು,
ಗುರು ಲಿಂಗ ಜಂಗಮದಾಸೋಹ
ಪ್ರಸಾದ ಪಾದೋದಕದ ಹಾದಿಯನೆಲ್ಲರಿಗೆ ತೋಱಿದ.
ಶಿವಾಚಾರದ ಬೆಳವಿಗೆಯನಹುದಲ್ಲವೆಂದು ಬಿಜ್ಜಳ ತರ್ಕಿಸಲು,
ಅನಂತಮುಖದಿಂದ ಒಡಂಬಡಿಸಿ ಅಹುದೆನಿಸಿದ.
ಬಂದ ಮಣಿಹ ಪೂರೈಸಿತ್ತೆಂದು ಲಿಂಗದೊಳಗೆ ಹೊಕ್ಕಡೆ
ಹಿಂದೆ ಲೋಕವರಿದು ಬದುಕಬೇಕೆಂದು ಸೆಱಗಕೊಟ್ಟನು.
ನಾನು ಹಿಂದುಳಿದಹಳೆಂದು
ಮುಂದಣ ಗತಿಯ ತೋಱಿ,
ಬಸವಣ್ಣಪ್ರಿಯ ಚೆನ್ನಸಂಗಯ್ಯನಲ್ಲಿ
ತನ್ನ ಪ್ರಸನ್ನದೊಳಗೆ ಇಂಬಿಟ್ಟುಕೊಂಡ
ಎನ್ನ ಹೆತ್ತ ತಂದೆ ಸಂಗನಬಸವಣ್ಣನು. ॥೬೩॥

ಆ ಪ್ರಸ್ತಾವದೊಳು ಚೆನ್ನಬಸವರಾಜದೇವರು ಬಿನ್ನಪಂಗೈದ ಪ್ರಸ್ತಾವದ ವಚನ:

೧೪೪೦

ಲಿಂಗ ಜಂಗಮ, ಜಂಗಮ ಲಿಂಗವೆಂಬುದ ತೋಱಿ
ನಿಜೈಕ್ಯನಾದೆಯಲ್ಲಾ, ನಿಜಗುರು ಬಸವಣ್ಣಾ!
ಪ್ರಸಾದ ಕಾಯ, ಕಾಯ ಪ್ರಸಾದವೆಂಬುದ
ಎನ್ನ ಸರ್ವಾಂಗದಲ್ಲಿ ಪ್ರತಿಷ್ಠಿಸಿ,
ಎನ್ನನಾಗುಮಾಡಿ ಮುಂದುವರಿದಿಯಲ್ಲಾ ಬಸವಣ್ಣಾ!
ಲಿಂಗ ಪ್ರಾಣ, ಪ್ರಾಣ ಲಿಂಗವೆಂಬುದ
ಎನ್ನಂತರಂಗದಲ್ಲಿ ಸ್ಥಾಪ್ಯವ ಮಾಡಿ, ಎನ್ನ ನಿನ್ನಂತೆ ಮಾಡಿ,
ನಿಜಲಿಂಗದೊಳಗೆ ನಿರವಯವಾದೆಯಲ್ಲಾ ಬಸವಣ್ಣಾ!
ಎನ್ನ ಮನವ ಮಹಾತತ್ತ್ವದಲ್ಲಿ ಲಯವ ಮಾಡಿ,
ನಿರ್ವಯಲಾಗಿ ಹೋದೆಯಲ್ಲಾ ನಿಜಲಿಂಗೈಕ್ಯ ಬಸವಣ್ಣಾ!
ನಿನ್ನ ಒಕ್ಕು ಮಿಕ್ಕ ಶೇಷವನಿಕ್ಕಿ ಆಗುಮಾಡಿ
ನಿನ್ನಂತರಂಗದಲ್ಲಿ ಅವ್ವೆ ನಾಗಾಯಿಯ ಇಂಬುಗೊಂಡಡೆ,
ಎನ್ನ ಮನ ನಿಮ್ಮ ಪಾದದಲ್ಲಿ ಕರಗಿ ಕೊರಗಿತ್ತಯ್ಯಾ ಸಂಗನಬಸವಣ್ಣಾ!
ಕೂಡಲಚೆನ್ನಸಂಗಯ್ಯಂಗೆ
ಸುಜ್ಞಾನ ವಾಹನವಾಗಬೇಕೆಂದು
ನಿರವಯವಾದೆಯಲ್ಲಾ ಸಂಗನಬಸವಣ್ಣಾ! ॥೬೪॥

ಆ ಪ್ರಸ್ತಾವದೊಳು ಬಿನ್ನಪಂಗೈದ ಪದಂಗಳು:

೧೪೪೧

ರಾಗ: ಶೋಕವರಾಳಿ

ಶರಣು ಶರಣು ಎನ್ನ ಗುರುವೆ ಶರಣಯ್ಯಾ
ಶರಣು ಉಪಮಾತೀತ ಜ್ಞಾನಗುರುವೆ
ಲಿಂಗ ಜಂಗಮವೆ ಘನವೆಂದು ಪ್ರಸಾದವನು
ಹಿಂಗದಾ ನಿಜಪದವ ತೋಱಿದಾ ಗುರುವೆ [1]॥ಪಲ್ಲವಿ॥[1]

[2]ಸಾಕಾರ ರೂಪನೇ ತಾಳಿ ಬಿಜ್ಜಳಗೆ
ಬೇಕಾದ ದೃಷ್ಟವನು ತೋಱಿದಾ ಗುರುವೆ
ವಿಸ್ತರಿಸಿ ಜಗಕೆ ನೀನಾಗಿ ಎನ್ನುವನು
ತಪ್ಪಿಸಿ ಹೋದೆ ಎಲೆ ಪರಮಗುರುವೆ ॥೧॥

೧-೧ ಪಲ್ಲವ (ಮೂ) ೨ + ಪದ (ಮೂ)

ಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗಿ
ಶರಣೈಕ್ಯಸ್ಥಲದಲ್ಲಿ ನಡೆದ ಗುರುವೆ
ಸೋಹಿ ದಾಸೋಹಿ ನೀನಾಗಿ ಭಕ್ತರಿಗೆ
ಇಹಪರದ ಸುಖವನ್ನು ತೋಜಿದಾ ಗುರುವೆ ॥೨॥

ನಾದ ಬಿಂದು ಕಳಾತೀತ ಮಹಾಘನದ
ಆದಿ ಲಿಂಗ ಅನಾದಿ ಶರಣ ಗುರುವೆ
ಮಿಂಚು ಮಿಂಚನು ಕೂಡಿದಂತೆ ಇದಱ
ಸಂಚವನು ಏನೆನ್ನಬಹುದು ಗುರುವೆ ॥೩॥

ಅಜಿವು ಕುಱುಹನೆ ಅಱಿಸಿ ಬರಲು ಆ
ಕುಱುಹು ಅಜಿವನೊಳಕೊಂಡುದನು ಅಜಿದ ಗುರುವೆ
ಜ್ಞಾತೃ ಜ್ಞಾನ ಜ್ಞೇಯವೆಂಬಾ ತ್ರಿವಿಧದ
ಮಾತುವನು ಹಿಂಗಿದಾ ಜ್ಞಾನಗುರುವೆ ॥೪॥

ಭಾವ ಭಾವವನೆ ಭಾವಿಸಲು ಅನುಭಾವ
ನಿರ್ಭಾವವೇಕಾರ್ಥವೆಂದಜಿದ ಗುರುವೆ
ಕೂಡಲಚೆನ್ನಸಂಗಯ್ಯಾ ನಿಮ್ಮುವನು
ಬಸವಲಿಂಗಾ ಲಿಂಗವೆನುತಿರ್ದನು ॥೫॥

ಪದ ಸಹ ವಚನ: ॥೯॥

ಮತ್ತಂ,

೧೪೪೨

ಕಂಡಂತೆ ಕಂಡಂತೆ ಆಯಿತ್ತು ಭಕ್ತಿ.
ಕಂಡಂತೆ ಕಂಡಂತೆ ಆಯಿತ್ತಯ್ಯಾ!
ಉಪಚಾರಕ್ಕೆ ನಿಂದುದುಪಚಾರಕ್ಕೆ ನಿಂದಿತ್ತಲ್ಲಾ!
ಭೃತ್ಯಾಚಾರ ಸಮಯಭಕ್ತಿ ಸಂಗನಬಸವಣ್ಣನೊಡನೆ ಹೋಯಿತ್ತು,
ಕೂಡಲಚೆನ್ನಸಂಗಯ್ಯಾ ಬಸವಣ್ಣನನೊಯ್ಯಲಾಗಿ. ॥೭೦॥

ಮತ್ತಂ,

೧೪೪೩

ಸ್ಥಲ ಹೋಯಿತ್ತೆನಗೆ, ನಿಃಸ್ಥಲ ಹೋಯಿತ್ತೆನಗೆ,
ಗೋರಿಕಲ್ಲಮಾಡ ಹೋಯಿತ್ತೆನಗೆ,
ಹೂವಿನ ವಿಮಾನ ಹೋಯಿತ್ತೆನಗೆ,

ಬಸವ ಹೋದನೆನಗೆ: ಬಸವನ ಮನೆಯ ಜಂಗಮ ಹೋದರೆನಗೆ,
ಇನ್ನು ಬಸವಾ ಬಸವಾ ಎಂದಡೆ ಕೂಡಲಚೆನ್ನಸಂಗಯ್ಯಾ ನಿಮ್ಮಾಣೆ. ॥೭೧॥

ಮಡಿವಾಳಯ್ಯಗಳ ವಚನ:

೧೪೪೪

ಉಟ್ಟ ಸೀರೆಯ ಹಜೆದು ಹೋದಾತ ನೀನಲ್ಲಾ ಬಸವಣ್ಣಾ!
ಮೆಟ್ಟಿದ ಕೆಱಹ ಕಳೆದು ಹೋದೆಯಲ್ಲಾ ಬಸವಣ್ಣಾ.
ಕಟ್ಟಿದ ಮುಡಿಯ ಬಿಟ್ಟು ಹೋದೆಯಲ್ಲಾ ಬಸವಣ್ಣಾ!
ಸೀಮೆ ಸಂಬಂಧದಪ್ಪಿ ಹೋದೆಯಲ್ಲಾ ಬಸವಣ್ಣಾ!
ಲಿಂಗಕ್ಕೆ ಮಾಡಿದ ಮಾಟವ ಸೋಂಕದೆ ಹೋದೆಯಲ್ಲಾ ಬಸವಣ್ಣಾ!
ಜಂಗಮಕ್ಕೆ ಮಾಡಿದ ಮಾಟವ
ಕೈಯಲ್ಲಿ ಹಿಡಿದುಕೊಂಡು ಹೋದೆಯಲ್ಲಾ ಬಸವಣ್ಣಾ!!
ಬೆಳಗನುಟ್ಟು ಬಯಲಾಗಿ ಹೋದೆಯಲ್ಲಾ ಬಸವಣ್ಣಾ!
ಆ ಬಸವಣ್ಣನ ಹಿಂದುಗೊಂಡು ಹೋಹ
ಪಥವನೆ ತೋಱು ಕಲಿದೇವರದೇವಾ. ॥೭೨॥

ಮತ್ತಂ,

೧೪೪೫

ಬ್ರಹ್ಮನ ಹೆಂಡತಿಯ ಹಿಡಿತಂದು
ಅಡಿಗೆಯ ಮಾಡಿಸಿದಾತ ಬಸವಣ್ಣ.
ಹರಿಯ ಸಾಸಿರದೇಳುನೂಱು ಕುಮಾರಿತಿಯರ ಹಿಡಿತಂದು
ದಹಿಸಿದಾತ ಬಸವಣ್ಣ.
ಲಿಂಗಕ್ಕೆ ಮಾಡುತ್ತ ತನ್ನ ಸೋಂಕದೆ ಹೋದಾತ ಬಸವಣ್ಣ.
ಜಂಗಮಕ್ಕೆ ಮಾಡಿದುದ ಕೈಯಲ್ಲಿ ಹಿಡಿದುಕೊಂಡು ಹೋದಾತ ಬಸವಣ್ಣ.
ಬೆಳಗನುಟ್ಟು ಬಯಲಾಗಿ ಹೋದಾತ ಬಸವಣ್ಣ.
ಬಸವಣ್ಣನ ಹಿಂದನೆ ತೋಱು ಕಂಡಾ ಕಲಿದೇವರದೇವಾ! ॥೭೩॥

ಮತ್ತಂ,

೧೪೪೬

ಆಕಾರ ನಿರಾಕಾರವಾಯಿತ್ತಲ್ಲಾ ಬಸವಣ್ಣಾ!
ಪ್ರಾಣ ನಿಃಪ್ರಾಣವಾಯಿತ್ತಲ್ಲಾ ಬಸವಣ್ಣಾ!
ಲಿಂಗಜಂಗಮದ ಮಾಟ ಕೂಟ ಸಮಾಪ್ತಿಯಾಯಿತ್ತಲ್ಲಾ ಬಸವಣ್ಣಾ!
ನಿಶ್ಶಬ್ದ ವೇದ್ಯವಾದೆಯಲ್ಲಾ ಬಸವಣ್ಣಾ!
ಕಲಿದೇವರ ಹೃದಯಕಮಲವ ಹೊಕ್ಕು,
ದೇವರಿಗೆ ದೇವನಾಗಿ ಹೋದೆಯಲ್ಲಾ ಸಂಗನಬಸವಣ್ಣಾ! ॥೭೪॥

ಮತ್ತಂ,

೧೪೪೭

ಲಿಂಗದ ನಿಧಿಯೆ ಬಸವಾ,
ಜಂಗಮದ ವಾರಿಧಿಯೆ ಬಸವಾ,
ಪ್ರಸಾದದ ತವನಿಧಿಯೆ ಬಸವಾ,
ಅನುಭಾವದ ಮೇರುವೆ ಬಸವಾ,
ಮಹಾಘನವನೊಡಗೂಡಿದಾತನು
ಬಸವಣ್ಣನೋ? ಕಲಿದೇವರದೇವನೋ? ॥೭೫॥

ಮತ್ತಂ,

೧೪೪೮

ಬಿಂದುವ ಹಱಿದೆಯಲ್ಲಾ ಬಸವಣ್ಣಾ!
ನಾದವ ಸಿಂಹಾಸನವ ಮಾಡಿಕೊಂಡೆಯಲ್ಲಾ ಬಸವಣ್ಣಾ!
ಅಷ್ಟಗುಣವ ನಷ್ಟವ ಮಾಡಿದೆಯಲ್ಲಾ ನಿಜಲಿಂಗ ಬಸವಣ್ಣಾ!
ಶುಕ್ಲಶೋಣಿತದಿಂದಾದ ಕಾಯವೆತ್ತ ಹೋಯಿತ್ತಯ್ಯಾ,
ನಿಜಗುರು ಬಸವಣ್ಣಾ!
ಭಕ್ತಿರೂಪುಗೆಟ್ಟು ಮತ್ತೊಂದು ರೂಪಾದೆಯಲ್ಲಾ,
ನಿರೂಪಿ ಬಸವಣ್ಣಾ!
ಶೂನ್ಯಪ್ರಸಾದಿಯಲ್ಲ, ನಿಶ್ಶೂನ್ಯ ಪ್ರಸಾದಿಯಲ್ಲ
ಆವ ಪ್ರಸಾದವನು ಸೋಂಕದ ಪ್ರಸಾದಿ,
ಯೋನಿಜನಲ್ಲ, ಅಯೋನಿಜನು ನಮ್ಮ ಬಸವದೇವನು.
ನಿರಾಕಾರವಾಗಿ ಹೋದನು ನಮ್ಮ ಬಸವರಾಜನು.
ಬೆಳಗನುಟ್ಟು ಬಯಲಾಗಿ ಹೋದನು ನಮ್ಮ ಬಸವಲಿಂಗನು.
ಬಸವಣ್ಣಾ ಬಸವಣ್ಣಾ ಬಸವಣ್ಣಾ ಎನಲಮ್ಮೆನು.
ಎನ್ನ ವಾಙ್ಮನಕ್ಕಗೋಚರನಾಗಿ
ಬಸವಣ್ಣಂಗೆ ಶರಣೆಂಬ ಪಥವ ತೋಱಿಯ್ಯಾ ಕಲಿದೇವಯ್ಯಾ. ॥೭೬॥

ಮತ್ತಂ,

೧೪೪೯

ನೆನೆವೆನಯ್ಯಾ, ಲೋಹ ಪರುಷದ ಸಂಗದಂತಾಯಿತ್ತಾಗಿ,
ಬಸವಣ್ಣಾ ಬಸವಣ್ಣಾ ಬಸವಣ್ಣಾ ಎಂಬ ಶಬ್ದದೊಳಗೆ
ಎನ್ನ ಗಮನ ನಿರ್ಗಮನವಾಯಿತ್ತು.
ಬಸವಣ್ಣಾ ಎಂದೆನ್ನೆನಯ್ಯಾ–ಕಲಿದೇವರದೇವಾ,
ಕಿಡಿಗೊಂಡರಗಿನ ಸಂಗದಂತಾಯಿತ್ತಾಗಿ. ॥೭೭॥

ಇಂತು ಚೆನ್ನಬಸವರಾಜದೇವರು ಮಡಿವಾಳಮಾಚಿತಂದೆಗಳು ಮೊದಲಾದ ಅಸಂಖ್ಯಾತ ಮಹಾಗಣಂಗಳೆಲ್ಲರೂ ಉಳುವೆಯ ಮಹಾಮನೆಯಲ್ಲಿ ನಿರವಯಲನೆಯ್ದುವ ಪ್ರಸ್ತಾವದೊಳು ಮಡಿವಾಳಮಾಚಿತಂದೆಯ ವಚನ:

೧೪೫೦

ನಿರ್ವಾಹವಾಯಿತ್ತಯ್ಯಾ ಬಸವಣ್ಣಂಗೆ ಕಪ್ಪಡಿಯ ಸಂಗಯ್ಯನಲ್ಲಿ.
ಅಕ್ಕನಾಗಾಯಿ ಮಿಂಡಮಲ್ಲಿನಾಥ ಹಡಪದಪ್ಪಣ್ಣ
ಮೊಗವಾಡದ ಕೇಶಿರಾಜ ಕೋಲಶಾಂತಯ್ಯ
ಮೊದಲಾದ ಶಿವಗಣಂಗಳೆಲ್ಲರೂ ಬಸವಣ್ಣನ ಬಯಲಬೆರಸಿದರು.
ಆ ಬಯಲ ಪ್ರಸಾದದಿಂದ ನಿರುಪಮ ಪ್ರಭುದೇವರು
ಕದಳಿಯಲ್ಲಿ ಬಯಲಾದರು.
ಆ ಬಯಲ ಪ್ರಸಾದದಿಂದ ಮೋಳಿಗೆಮಾರಯ್ಯ ಕಕ್ಕಯ್ಯ
ಪಡಿಹಾರಿ ಉತ್ತಣ್ಣ ಕನ್ನದ ಮಾರಣ್ಣ
ಕಲಿಕೇತ ಬೊಮ್ಮಣ್ಣ ನುಲಿಯ ಚಂದಯ್ಯ ಹೆಂಡದ ಮಾರಯ್ಯ
ಶಂಕರದಾಸಿಮಯ್ಯ ಏಕಾಂತರಾಮಯ್ಯ ಮೇದಾರ ಕೇತಯ್ಯ
ಮೊದಲಾದ ಏಳನೂಱೆಪ್ಪತ್ತು ಅಮರಗಣಂಗಳ ದಂಡು
ಕೈಲಾಸಕ್ಕೆ ನಡೆಯಿತ್ತು. ಬಂದ ಮಣಿಹ ಸಂದಿತ್ತು.
ಸಂದ ಪುರಾತನರೆಲ್ಲರೂ ಎನ್ನ ಮನದ ಮೈಲಿಗೆಯ ಕಳೆದ ಕಾರಣ
ಕಲಿದೇವಯ್ಯಾ, ಇವರೆಲ್ಲರ ಒಕ್ಕ ಮಿಕ್ಕ ಪ್ರಸಾದದ ಬಯಲು ಎನಗಾಯಿತ್ತು!॥೭೮॥

ಇಂತು ಮಡಿವಾಳ ಮಾಚಿತಂದೆಗಳು ನಿರ್ವಯಲಾದ ತದನಂತರ ಚೆನ್ನಬಸವರಾಜದೇವರ ಐಕ್ಯ.

೧೪೫೧

ಹನ್ನೆರಡು ಗಾವುದ ವಿಸ್ತೀರ್ಣ ಪಟ್ಟಣಕ್ಕೆ
ಕಲ್ಯಾಣವೆಂಬ ಪ್ರಣತೆ, ಆ ಪ್ರಣತೆಯಲ್ಲಿ ಮಹತ್ತೆಂಬ ಎಣ್ಣೆಯನೆಱೆದು,
ಜ್ಞಾನವೆಂಬ ಜ್ಯೋತಿಯ ಹೊತ್ತಿಸಿ ಒಪ್ಪುತ್ತಿದ್ದಿತ್ತಯ್ಯಾ ಕಲ್ಯಾಣ.
ಅಲ್ಲಿ ಕಾಳಯ್ಯ ಚೌಡಯ್ಯ ಕೋಲಶಾಂತಯ್ಯ
ಮೊಗವಾಡದ ಕೇಶಿರಾಜಯ್ಯ ಖಂಡೆಯದ ಬೊಮ್ಮಣ್ಣ
ಮಿಂಡಮಲ್ಲಿನಾಥ ಹಡಪದಪ್ಪಣ್ಣ ಮಡಿವಾಳಯ್ಯಗಳು
ಅವ್ವೆ ನಾಗಾಯಿಗಳು ಸಹಿತ ಇವರೆಲ್ಲರೂ
ಸಂಗನಬಸವಣ್ಣನ ಬಯಲ ಕೂಡಿ ಹೋದರು.
ಇದು ಕಾರಣ ಕೂಡಲಚೆನ್ನಸಂಗಮದೇವರಲ್ಲಿ
ಇವರೆಲ್ಲರ ಪ್ರಸಾದದ ಬಯಲು ಎನಗಾಯಿತ್ತು! ॥೭೯॥

ಇಂತೀ ಶ್ರೀಮತ್ ಸಕಲಗಣ ಪುರಾತನರೊಳ್ ಪ್ರಭುದೇವರು
ಮಹಾನುಭಾವಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್
ಎಲ್ಲಾ ಗಣಂಗಳ ನಿರ್ವಯಲ ಸಮಾಧಿ
ಏಕವಿಂಶತ್ಯುಪದೇಶಂ ಸಮಾಪ್ತಂ.
ಅಂತು ವಚನ ೧೪೩೦ ಕ್ಕಂ ಸ್ವರವಚನ ೨೧ಕ್ಕಂ ಉಭಯ ೧೪೫೧ಕ್ಕಂ ಮಂಗಳ ಮಹಾ ಶ್ರೀ

❖

ಸಮಾಪ್ತಿ ಗದ್ಯ

ಇದು ಪರಮಗುರು ಪರಮವೀರಶೈವಸಿದ್ಧಾಂತ ತತ್ತ್ವಜ್ಞಾನ. ಇದು ವೀರಶೈವಾಚಾರಪ್ರತಿಷ್ಠಾಪನಾಚಾ[1]ರ್ಯ,[1] ಇದು ದಿವ್ಯವೇದಾಂತಶಿರೋಮಣಿ, ಇದು ಸಮಸ್ತ ಶಾಸ್ತ್ರ ಮುಖ್ಯ ಮುಖದರ್ಪ[2]ಣ. ಇದು ಮಹಾಜ್ಞಾನ ಪ್ರವರ್ಧನ ಪರಮಾನುಭಾವಸಂಬೋಧೆ. ಇದು ಸರ್ವಾಚಾರಸಂಪನ್ನ ಸಮಾರೂಢ ಸಂಗ್ರಹ. ಇದು ಪರಮರಾಜಯೋಗಸಾಧ್ಯಸಂಪಾದನ. ಇದು ಸಚ್ಚಿದಾನಂದನಿತ್ಯಪರಿಪೂರ್ಣ ರಸಾಮೃತಪ್ರಸನ್ನಪ್ರಸಾದ. ಇದು ಅಜ್ಞಾನತಿಮಿರಾಂಜನ ತಂತ್ರವಪ್ಪ ಪ್ರಭುದೇವರ ಶೂನ್ಯಸಂಪಾದನೆಯ ಮಹಾಪ್ರಸಂಗಮಂ, ಬಸವರಾದೇವರು ಚೆನ್ನಬಸವರಾಜದೇವರು ಪ್ರಭುದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳ ವಚನಂಗಳಿಂದಾ[3] ಕಥಾಸಾಂಗತ್ಯವಾಗಿ ಶಿವಗಣ ಪ್ರಸಾದಿ ಮಹಾದೇವಯ್ಯಗಳು ತತ್ ಶಿವಗಣಂಗಳ ಶಿವಾನುಭಾವವನುಭಾವಶ್ರೋತ್ರ ಮುಖಕ್ಕೆ ನಿರ್ಮಲದರ್ಪಣವೆನೆ ಸಮರ್ಪಿಸಿದರು. ಈ ಮಹಾಪ್ರಸಂಗದ ಸದುಹೃದಯವನಱಿತಡೆ ನಿತ್ಯ ನಿರವಯವಪ್ಪನು. ಭವಭಾರಕ್ಕಂಜಿ ಕೇಳಲು ಸದ್ಯೋನ್ಮುಕ್ತನು. [1]ಸತ್[1]ಸಂಗದಿಂದ ಕೇಳಿ [2]ಮನದಲ್ಲಿ[2] ಧರಿಸಲು ನಿರ್ಮಳಾತ್ಮಕನಪ್ಪನು. ಆದರಣೆಯಿಂ ಶ್ರೋತ್ರಮುಖಕ್ಕೆ ಕೇಳಿದಾತನು ರುದ್ರಾಧಿಪತಿಯಪ್ಪನು. ಮನೋರತಿಯಿಂ ಬರೆದೊಡೆ ಪಠಿಸಿದೊಡೆ ಅರ್ಥ ಹೇಳಿದೊಡೆ ಕೇಳಿದೊಡೆ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯದಿಂದ ಚತುರ್ವಿಧಪದಮಂ ಪಡೆವನು[3]. ಇದನು ಶಿವಶರಣರು [4]ಕೇಳುವುದು, ಲಾಲಿಪುದು[4], ಪಾಲಿಪುದು, ಬರೆದೋದುವುದು. ಇಲ್ಲಿ ವಚನಕ್ರಮ ತಪ್ಪಿದಡೆ ನಿಮ್ಮ ಪರಿಜ್ಞಾನದಿಂದ ತಿದ್ದಿಕೊಂಬುದೆಂದು ಎನಲಾಗಿ, ಆ ವಾಕ್ಯವಿಡಿದು ಗುಮ್ಮಳಾಪುರದ ಸಿದ್ಧಲಿಂಗದೇವರು, ಅಲ್ಲಿ ಸಿದ್ಧರಾಮಯ್ಯದೇವರಿಗೆ ದೀಕ್ಷಾಕ್ರಮವಿಲ್ಲದಿರಲು, ಬಸವಾದಿ ಪ್ರಮಥರ ವಚನ ಪ್ರಸಿದ್ಧವಾಗಿ ಸೇರಿಸಿದರು. ಆ ಪರಿಯಲೆ ಅನಿರ್ವಾಚ್ಯ ಪರಂಜ್ಯೋತಿಸ್ವರೂಪ ಷಟ್‌ಸ್ಥಲಸಂಪನ್ನ ಷಡುಲಿಂಗಾಂಗಭರಿತ ಶರಣಜನಬಾಂಧವ ಶರಣಜನಹೃತ್ಕಮಲಕರ್ಣಿಕಾವಾಸ ಅನಾದಿಪರಶಿವ ನೆನಿಸುವ ತೋಂಟದ ಸಿದ್ಧಲಿಂಗೇಶ್ವರನು. ಆ ತೋಂಟದ ಸಿದ್ಧಲಿಂಗೇಶ್ವರನ ಕೃಪಾಕಟಾಕ್ಷಪಾತ್ರರಾದ ಬೋಳಬಸವೇಶ್ವರನು. ಆ ಬೋಳಬಸವೇಶ್ವರನ ಮಹಾಜ್ಞಾನಾನುಭಾವ ಪ್ರಸನ್ನತಿಕೆಯಿಂದ ಗೂಳೂರ ಸಿದ್ಧವೀರಣ್ಣೊಡೆಯದೇವರೆಂಬ ದಿವ್ಯ ಜ್ಞಾನಾನುಭಾವಿಯು ಈ ಶೂನ್ಯಸಂಪಾದನೆಯಂ ರಚಿಸಿ, ವಸುಧೆಯ ಷಟ್ಸ್ಥಲ ಲಿಂಗಾಂಗ ಸಂಬಂಧಿಗಳಾದ ವೀರಮಾಹೇಶ್ವರರುಗಳ *ಶ್ರೀ ಪಾದಕ್ಕೆ ಸಮರ್ಪಿಸಿದೆನು. ಶಿವಗಣಂಗಳಿಗೆ ಶರಣಾರ್ಥಿ.*

೧–೧ ರ್ಯ (ಮು) ೨ + ಣ (ಮು) ೩ ದ (ಮು)

– ಕೃಪಾಕಟಾಕ್ಷ ಪ್ರಸನ್ನ ಪಾತ್ರರಪ್ಪ, ಸ್ವಲೀಲಾನಂದಭಕ್ತಿವತ್ಸಲರಪ್ಪ ಷಟ್‌ಸ್ಥಲಸಾಮ್ರಾಜ್ಯಸಾರ್ವಭೌಮ, ಜಗತ್ ಪಾವನಸದ್ಧರ್ಮಮೂರ್ತಿಯಪ್ಪ ಅಂಗ ಮನ ಇಂದ್ರಿಯಾದಿ ದುಸ್ಸಂಗವಿರಹಿತರಪ್ಪ ಸಮಸ್ತ ಜಗದ್‌ವಿಲಾಸ ವೈಭವವಿರಹಿತರಪ್ಪ ಶ್ರೀಮದ್ ಬೋಧಾಗುರು ನಮಶ್ಶಿವಾಯದೇವರ ದಿವ್ಯಪದಕಮಲಕ್ಕೆ ಈ ಸಂಪಾದನೆಯ ದಿವ್ಯಜ್ಞಾನವಚನಾಮೃತವ→

ವೃತ್ತ:

ಪರಮ ಸುದೇಶಿಕಾಗ್ರಣಿ ಪವಿತ್ರಚರಿತ್ರ ಶಿವಾಕೃತಿರ್ವಪುಃ
ಸ್ಥಿರತರಮಾನಸೇಂದ್ರಿಯವಿವರ್ಜಿತ ತೋಂಟದ ಸಿದ್ಧಲಿಂಗ ಸದ್
ಗುರುವರನಾಥನಾದರದೊಳಿರ್ಪ ಬೋಳಬಸವೇಶ್ವರಾರ್ಯ ಸತ್
ಕರುಣವನಾಂತು ಗೂಳೂರ ಸಿದ್ಧವೀರಯತೀಶನೊಲ್ದು ಪೇಳಿದಂ ॥೧॥

ಧರೆಯೊಳ್ ಪ್ರೌಢನೆನಿಪ್ಪನೊರ್ವ ನವಮೌಕ್ತಿಕಂಗಳಂ ಚಾರು ಬಂ
ಧುರಮಪ್ಪಂತೆ ಸಮಾನದಿಂದವಱ ತತ್ತತ್ಸ್ಥಾನಮಂ ಕಂಡು ಚೆ
ಚ್ಚರದಿಂದಲ್ಲಿಯ ಮಧ್ಯರತ್ನವನು ಹರ್ಷಾನಂದದಿಂ ಕೋದವೋಲ್
ಶರಣರ್ ಮೆಚ್ಚಲು ಸಿದ್ಧವೀರಯತಿ ಪೇಳ್ದಂ ಶೂನ್ಯಸಂಬೋಧೆಯಂ ॥೨॥

ಶ್ರೀಮದ್ದೇಶಿಕನಲ್ಲಮಪ್ರಭುವರಂ ಸ್ವೇಚ್ಛಾವಿಲಾಸಂಗಳಿಂ
ದಾಮೋದಶ್ರೀ ಶರಣರ್ಗೆಯಪ್ಪ ತೆಱದಿಂದಂ ಶೂನ್ಯಪೀಠಾಗ್ರದೊಳ್
ಪ್ರೇಮಂಬೆತ್ತಡರ್ದೇಱಿ ಮಂಡಿಸಿ ಶಿವಜ್ಞಾನಾರ್ಥಮಂ ಕೇಳಿ ಪೇ
ಳ್ದಾ ಮಹಾತ್ಮೆಯು ಸಿದ್ಧವೀರಯತಿ ಪೇಳ್ದಂ ಸರ್ವರಾನಂದಿಸಲ್ ॥೩॥

ಕಂದ:

ಗುರು ತೋಂಟದ ಸಿದ್ಧೇಶನ
ಚರಣಾಂಭೋಜಾತಮಂ ಸ್ಥಿರೀಕೃತಚಿತ್ತೋ
ತ್ಕರ ಸಿದ್ಧವೀರಯೋಗೀ
ಶ್ವರ ಶರಣರ ಕಿವಿಗೆ ವಚನಬೋಧೆಯನಿತ್ತಂ ॥೪॥

ಗೂಳೂರು ಸಿದ್ಧವೀರೇಶ್ವರದೇವರು ಸೇರಿಸಿದ

ಪ್ರಭುದೇವರ ಶೂನ್ಯಸಂಪಾದನೆ

ಸಮಾಪ್ತಂ

ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ

❖❖❖

→ಬರೆದು ಸಮರ್ಪಿಸಿದೆನು. ಗುರುವೇ, ಎನ್ನ ತಪ್ಪನೊಪ್ಪುಗೊಂಡು, ಎನ್ನಂಗ ಮನಂಗಳಲ್ಲಿ ಮೂರ್ತಿಗೊಂಡು, ನಿಮ್ಮ ಚಿದಂಘ್ರಿಯೊಳೆನ್ನನಿಂಬಿಡಯ್ಯಾ. ಶಾಶ್ವತಗುರುವೆ ಶರಣಾರ್ಥಿ.

ಮತ್ತಂ,

ಬಂದೆನನೇಕಭವಂಗಳೊಳ್. ನೊಂದೆನು ನಿಮ್ಮಂಘ್ರಿದ್ವಯವ ಕಾಣದೆ. ಮಿಗೆಯತಿ ಬೆಂದೆನು ಕಾಮಾದಿಗಳಲ್ಲಿ. ಸಂದೆನು ಸಕಲೇಂದ್ರಿಯಗಳಾತುರದಿಂ. ಮಿಗೆ ನೊಂದೆನೆನ್ನವಗುಣವ ನೋಡದೆ, ಕಂದನೆ ಬಾರೆಂದು ಕಂಬನಿಯಂ ತೊಡೆದು, ನಿಮ್ಮಂಘ್ರಿಯೊಳೆನ್ನನಿಂಬಿಡಯ್ಯಾ. ಸದಮಲಗುರುವೆ ಶರಣಾರ್ಥಿ ನಮಶ್ಶಿವಾಯ ಗುರುವೆ, ಬಸವಲಿಂಗನ ಬಿನ್ನಪವನಾಲಿಸಿ ಕೃಪೆಯಿಂ ಸಲಹಿ. ಶರಣಾರ್ಥಿ ಸಮಸ್ತ ಶರಣರ್ಗೆ, ಶರಣಾರ್ಥಿ ಶರಣಾರ್ಥಿ.(ಮು)

ಅನುಬಂಧಗಳು

೧. ವಚನಗಳ ಅಕಾರಾದಿ

೨. ವಚನಕಾರರು–ಅಂಕಿತ–ವಚನಸಂಖ್ಯೆ

೩. ಸ್ವರವಚನಗಳ ಅಕಾರಾದಿ

೪. ಸ್ವರವಚನಕಾರರು–ಅಂಕಿತ–ವಚನಸಂಖ್ಯೆ

೫. ಕಠಿಣ ಪದಕೋಶ

೬. ಪಾರಿಭಾಷಿಕ ಪದಕೋಶ

೧. ವಚನಗಳ ಅಕಾರಾದಿ

❖❖

೨. ವಚನಕಾರರು–ಅಂಕಿತ–ವಚನಸಂಖ್ಯೆ

೧ ಅಕ್ಕನಾಗಮ್ಮ –ಬಸವಣ್ಣಪ್ರಿಯ ಚೆನ್ನಸಂಗಯ್ಯ : ೮

೧೩೦೧, ೧೩೦೨, ೧೩೮೦, ೧೩೮೧, ೧೪೩೬, ೧೪೩೭, ೧೪೩೮, ೧೪೩೯.

೨. ಅಮುಗಿದೇವಯ್ಯ–ಸಿದ್ಧಸೋಮನಾಥ : ೩

೬೨೯, ೬೪೮, ೬೪೯.

೩. ಅಲ್ಲಮಪ್ರಭು–ಗೊಗ್ಗೇಶ್ವರ/ಗೊಹೇಶ್ವರ : ೪೩೨

೧, ೨, ೩, ೪, ೫, ೬, ೭, ೮, ೯, ೧೦, ೧೧, ೧೨,೧೩,೧೪, ೧೫, ೧೬,೧೭, ೧೮, ೧೯, ೨೦, ೨೧, ೨೨, ೨೩, ೨೪, ೨೫, ೨೬, ೨೭, ೨೮, ೨೯, ೩೦, ೩೧, ೩೨, ೩೩, ೩೪, ೩೫, ೩೬, ೩೭, ೩೮, ೩೯, ೪೦, ೪೧, ೪೨, ೪೩, ೪೪, ೪೫, ೪೬, ೪೭, ೪೮, ೪೯, ೫೦, ೫೧, ೫೨, ೫೩, ೫೪, ೫೫, ೫೬, ೫೭, ೫೮, ೫೯, ೬೦, ೬೧, ೬೨, ೬೩, ೬೪, ೬೫, ೬೬, ೬೭, ೬೮, ೬೯, ೭೦, ೭೧, ೭೨, ೭೩, ೭೪, ೭೫, ೭೬, ೭೭, ೭೮, ೮೩, ೮೫, ೮೭, ೮೯, ೯೧, ೯೪, ೯೬, ೯೮, ೧೦೦, ೧೦೨, ೧೦೪, ೧೦೬, ೧೦೮, ೧೧೦, ೧೧೨, ೧೧೪, ೧೧೬, ೧೧೮, ೧೨೦, ೧೨೧, ೨೨೨, ೨೨೩, ೧೨೪, ೧೨೫, ೧೨೬, ೧೨೭, ೧೨೮, ೧೨೯, ೧೩೦,೧೩೧, ೧೩೬, ೧೩೭,೧೩೮, ೧೩೯, ೧೪೦, ೧೪೧, ೧೪೨, ೧೪೩, ೧೬೨, ೧೬೩, ೧೬೫, ೧೬೭, ೧೬೯, ೧೭೧, ೧೭೩, ೧೭೫, ೧೭೯, ೧೮೧, ೧೮೨, ೧೮೩, ೧೮೬, ೧೮೮, ೧೯೦, ೧೯೫, ೧೯೭, ೧೯೯, ೨೦೧, ೨೦೩, ೨೦೫, ೨೦೭, ೨೦೯, ೨೧೧, ೨೧೩, ೨೧೪, ೨೧೬, ೨೧೮, ೨೨೦, ೨೨೨, ೨೨೫, ೨೨೭, ೨೨೯, ೨೩೧, ೨೩೩, ೨೩೫, ೨೩೭, ೨೩೯, ೨೪೧, ೨೪೩, ೨೪೫, ೨೪೭, ೨೪೯, ೨೫೧, ೨೫೩, ೨೫೫, ೨೫೭, ೨೫೯, ೨೯೨, ೨೯೪, ೨೯೭, ೨೯೮. ೩೦೦, ೩೦೧, ೩೦೬, ೩೧೦, ೩೧೨,೩೨೪,೩೪೧, ೩೪೨,೩೫೦, ೩೫೩, ೩೫೬, ೩೫೭, ೩೬೧,೩೬೨, ೩೬೫, ೩೬೭, ೩೬೯, ೩೭೦, ೩೭೨, ೩೭೩, ೩೭೮, ೩೮೪, ೩೮೪, ೩೮೫, ೩೮೬. ೩೮೭, ೩೮೮, ೩೯೨, ೩೯೩, ೩೯೫, ೩೯೭, ೩೯೮, ೩೯೯,೪೦೦, ೪೦೩, ೪೦೫, ೪೧೦, ೪೧೭, ೪೩೨, ೪೪೨, ೪೪೪, ೪೪೬, ೪೪೮. ೪೫೦. ೪೫೨, ೪೫೪, ೪೫೬, ೪೫೮, ೪೬೦, ೪೬೨, ೪೬೪, ೪೬೬, ೪೬೮, ೪೭೦, ೪೭೨, ೪೭೩, ೪೭೭, ೪೮೦, ೪೮೩, ೪೮೫, ೪೯೦,೪೯೨, ೪೯೫, ೪೯೮, ೪೯೯, ೫೦೨, ೫೦೪. ೫೦೬, ೫೦೯, ೫೧೩, ೫೨೨, ೫೨೩, ೫೨೫, ೫೨೭, ೫೨೯, ೫೩೨, ೫೩೪, ೫೩೬, ೫೩೮, ೫೩೯, ೫೪೨, ೫೪೪, ೫೫೧, ೫೫೫, ೫೫೭, ೫೬೩, ೫೬೫, ೫೬೭, ೫೭೦, ೫೭೨, ೫೭೬, ೫೮೨, ೫೮೩, ೫೯೨, ೫೯೬, ೬೦೫. ೬೧೩, ೬೧೪, ೬೧೭, ೬೩೬, ೬೩೭,

೬೪೬, ೬೪೭, ೬೫೧, ೬೬೦, ೬೬೨, ೬೬೩, ೬೭೫, ೬೮೦, ೭೦೨, ೭೦೫, ೭೨೩,೭೩೬, ೭೩೭, ೭೪೯, ೭೫೧, ೭೫೩, ೮೭೭, ೮೭೯, ೮೭೨,೮೭೪, ೮೭೬, ೮೭೯, ೮೮೪, ೮೮೬, ೮೯೦, ೮೯೨, ೮೯೫, ೯೧೪, ೯೧೭, ೯೨೨, ೯೪೬, ೯೫೩, ೯೬೫, ೯೬೬, ೯೭೦, ೯೭೨, ೯೭೪, ೯೭೬, ೯೭೯, ೯೮೧, ೯೮೪, ೯೮೬, ೯೮೯, ೯೯೧, ೯೯೩, ೯೯೬, ೧೦೦೮, ೧೦೦೯, ೧೦೧೩, ೧೦೧೮, ೧೦೨೪, ೧೦೨೬, ೧೦೪೮, ೧೦೫೧, ೧೦೫೯, ೧೦೬೦, ೧೦೬೧, ೧೦೬೨, ೧೦೬೩, ೧೦೬೪, ೧೦೬೫, ೧೦೬೬, ೧೦೬೭, ೧೦೬೮, ೧೦೬೯, ೧೦೭೦, ೧೦೭೧, ೧೦೭೨, ೧೧೨೦, ೧೧೨೧, ೧೧೩೦, ೧೧೩೧, ೧೧೩೩, ೧೧೩೫, ೧೧೩೬, ೧೧೩೮, ೧೧೪೦, ೧೧೪೨, ೧೧೪೪, ೧೧೪೬, ೧೧೪೭, ೧೧೪೮, ೧೧೫೧, ೧೧೫೩, ೧೧೫೫, ೧೧೫೭, ೧೧೬೩, ೧೧೬೪, ೧೧೯೫, ೧೧೯೬, ೧೧೯೭, ೧೧೯೮, ೧೧೯೯, ೧೨೦೦, ೧೨೦೨, ೧೨೦೩, ೧೨೦೬, ೧೨೦೭, ೧೨೧೬, ೧೨೧೭, ೧೨೧೮, ೧೨೧೯, ೧೨೨೦, ೧೨೨೧, ೧೨೨೨, ೧೨೨೩, ೧೨೨೪, ೧೨೨೫, ೧೨೨೬, ೧೨೨೭, ೧೨೩೦, ೧೨೩೨, ೧೨೩೪, ೧೨೪೪, ೧೨೪೬, ೧೨೪೭, ೧೨೪೮, ೧೨೪೯, ೧೨೫೦, ೧೨೫೧, ೧೨೫೨, ೧೨೫೩, ೧೨೬೦, ೧೨೬೧, ೧೨೬೨, ೧೨೬೩, ೧೨೬೪, ೧೨೬೫, ೧೨೮೬, ೧೨೮೭, ೧೩೧೭, ೧೩೧೮, ೧೩೨೦, ೧೩೨೨, ೧೩೨೪, ೧೩೨೬, ೧೩೨೮, ೧೩೨೯, ೧೩೩೦, ೧೩೩೧, ೧೩೩೨, ೧೩೩೩, ೧೩೩೪, ೧೩೩೫, ೧೩೩೬, ೧೩೩೭, ೧೩೮೭, ೧೩೮೮, ೧೩೮೯, ೧೩೯೦, ೧೩೯೧, ೧೩೯೨, ೧೩೯೩, ೧೩೯೪, ೧೩೯೫, ೧೩೯೬, ೧೩೯೭, ೧೩೯೮, ೧೩೯೯, ೧೪೦೨, ೧೪೦೫, ೧೪೦೬,

೪. ಆಯ್ದಕ್ಕಿ ಮಾರಯ್ಯ–ಅಮರೇಶ್ವರಲಿಂಗ / ಅಮಲೇಶ್ವರಲಿಂಗ: ೨೧

೭೪೫, ೭೪೬, ೭೪೭, ೭೪೮, ೭೫೦, ೭೫೨, ೭೫೪, ೭೬೭, ೭೭೧, ೭೭೭, ೭೭೯, ೭೮೨, ೭೮೪, ೭೮೬, ೭೯೦, ೭೯೧, ೭೯೩, ೭೯೪, ೭೯೫, ೭೯೬, ೭೯೭.

೫. ಆಯ್ದಕ್ಕಿ ಮಾರಯ್ಯಗಳ ಸತಿ ಲಕ್ಕಮ್ಮ–ಮಾರಯ್ಯಪ್ರಿಯ ಅಮರೇಶ್ವರಲಿಂಗ ಅಮಲೇಶ್ವರಲಿಂಗ : ೨೪

೭೫೫, ೭೫೬,೭೫೭, ೭೫೮, ೭೫೯, ೭೬೦, ೭೬೧, ೭೬೨, ೭೬೩, ೭೬೪, ೭೬೫, ೭೬೬, ೭೬೮, ೭೬೯, ೭೭೦, ೭೭೨, ೭೭೩, ೭೭೪, ೭೭೫, ೭೭೬, ೭೭೮, ೭೮೦, ೭೮೧, ೭೯೮.

೬. ಉರಿಲಿಂಗಪೆದ್ದಿ–ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ : ೧

೬೨೬

೭. ಏಕಾಂತ ರಾಮಯ್ಯ–ಏಕಾಂತವೀರ ಸೊಡ್ಡಳ : ೨ ('ಏಕಾಂತ ವೀರ ಸೊಡ್ಡಳ' ಎಂಬುದು ಮೂಲತಃ ಸೊಡ್ಡಳ ಬಾಚರಸರ ಅಂಕಿತವಾಗಿದೆ. ಕಾರಣ ಈ ಎರಡು ವಚನಗಳು ಅವನಿಗೇ ಸೇರಬೇಕು)

೧೩೧೧, ೧೩೧೨.

೮. ಕಿನ್ನರಿ ಬ್ರಹ್ಮಯ್ಯ–ಮಹಾಲಿಂಗ ತ್ರಿಪುರಾಂತಕದೇವ : ೩

೩೪೯, ೪೨೪, ೯೫೬.

೯. ಗೋರಕ್ಷ–ಗೋರಕ್ಷಪಾಲಕ ಮಹಾಪ್ರಭು ಸಿದ್ಧಸೋಮನಾಥಲಿಂಗ : ೪

೧೪೦೦, ೧೪೦೧, ೧೪೦೩, ೧೪೦೪.

೧೦. **ಘಟ್ಟಿವಾಳಯ್ಯ–ಚಿಕ್ಕಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ : ೪೨**

೮೯೭, ೮೯೮, ೮೯೯, ೯೦೦, ೯೦೧, ೯೦೨, ೯೦೩, ೯೦೪, ೯೦೫, ೯೦೬, ೯೦೭, ೯೦೮, ೯೦೯, ೯೧೦, ೯೧೧, ೯೧೨, ೯೧೩, ೯೧೪, ೯೧೫, ೯೧೬, ೯೧೮, ೯೧೯, ೯೨೦, ೯೨೧, ೯೨೩, ೯೨೪, ೯೨೫, ೯೨೬, ೯೨೭, ೯೨೮, ೯೨೯, ೯೩೧, ೯೩೨, ೯೩೩, ೯೩೪, ೯೩೫, ೯೩೭, ೯೩೯, ೯೪೧, ೯೪೩, ೯೪೫, ೯೫೦, ೯೫೧.

೧೧. **ಚೆನ್ನಬಸವಣ್ಣ– ಕೂಡಲಚೆನ್ನಸಂಗಮದೇವ : ೧೬೯**

೨೬೦, ೨೬೨, ೨೬೪, ೨೬೬, ೨೬೭, ೨೬೮, ೨೬೯, ೨೭೦, ೨೭೧, ೨೭೨, ೨೭೩, ೨೭೪, ೨೭೫, ೨೭೬, ೨೭೭, ೨೭೮, ೨೭೯, ೨೮೪, ೨೮೬, ೨೮೮, ೨೯೦, ೨೯೩, ೩೧೫, ೩೧೮, ೩೮೧, ೩೮೨, ೪೧೪, ೪೧೬, ೪೩೧, ೪೩೭, ೪೩೮, ೪೭೫, ೪೭೬, ೪೭೮, ೪೭೯, ೪೮೬, ೪೮೭, ೪೮೯, ೪೯೧, ೪೯೩, ೪೯೪, ೪೯೬, ೪೯೭, ೫೦೦, ೫೦೧, ೫೦೩, ೫೦೫, ೫೦೭, ೫೦೮, ೫೧೦, ೫೧೧, ೫೧೨, ೫೧೪, ೫೧೫, ೫೧೬, ೫೧೭, ೫೧೮, ೫೧೯, ೫೨೦, ೫೨೧, ೫೨೪, ೫೨೬, ೫೨೮, ೫೩೦, ೫೩೧, ೫೩೩, ೪೩೫, ೫೩೭, ೫೪೧, ೫೪೩, ೫೪೫, ೫೪೭, ೫೪೯, ೫೫೨, ೫೫೩, ೫೯೮, ೬೦೦, ೬೦೨, ೬೦೯, ೬೧೧, ೬೧೬, ೬೧೮, ೬೧೯, ೬೨೦, ೬೩೨, ೬೩೩, ೬೩೫, ೬೫೨, ೬೫೯, ೬೬೧, ೬೬೪, ೬೬೫, ೬೬೬, ೬೬೭, ೬೮೨, ೬೯೯, ೭೦೪, ೭೧೩, ೭೧೪, ೭೨೬, ೭೨೭, ೭೩೫, ೮೦೮, ೮೯೩, ೮೯೪, ೯೪೭, ೯೪೮, ೧೦೧೦, ೧೦೧೫, ೧೦೪೬, ೧೦೫೫, ೧೦೮೨, ೧೦೯೨, ೧೦೯೬, ೧೦೯೮, ೧೦೯೯, ೧೧೦೧, ೧೧೦೩, ೧೧೧೨, ೧೧೧೩, ೧೧೧೪, ೧೧೧೫, ೧೧೧೬, ೧೧೧೭, ೧೧೧೮, ೧೧೨೨, ೧೧೨೩, ೧೧೨೪, ೧೧೨೫, ೧೧೩೭, ೧೧೬೭, ೧೧೮೨, ೧೧೮೩, ೧೧೮೫, ೧೧೯೦, ೧೧೯೧, ೧೧೯೨, ೧೧೯೩, ೧೧೯೪, ೧೨೦೪, ೧೨೧೦, ೧೨೧೧, ೧೨೧೨, ೧೨೧೧, ೧೨೧೩, ೧೨೧೪, ೧೨೪೧, ೧೨೪೨, ೧೨೪೩, ೧೨೬೬, ೧೨೬೭, ೧೨೬೮, ೧೨೭೮, ೧೨೭೯, ೧೨೮೦, ೧೨೮೨, ೧೨೮೮, ೧೨೮೯, ೧೩೪೧, ೧೩೪೨, ೧೩೪೩, ೧೩೫೧, ೧೩೫೨, ೧೩೫೩, ೧೩೫೪, ೧೩೫೬, ೧೩೫೭, ೧೩೫೮, ೧೩೫೯, ೧೩೬೦, ೧೪೦೮, ೧೪೩೦, ೧೪೩೧, ೧೪೪೦, ೧೪೪೨, ೧೪೪೩, ೧೪೫೧.

೧೨. **ಜೇಡರ ದಾಸಿಮಯ್ಯ–ರಾಮನಾಥ : ೧**

೬೨೪.

೧೩. **ಡೋಹರ ಕಕ್ಕಯ್ಯ–ಅಭಿನವ ಮಲ್ಲಿಕಾರ್ಜುನ : ೪**

೧೩೦೭, ೧೩೦೮, ೧೩೮೪, ೧೩೮೫.

೧೪. **ಢಕ್ಕೆಯ ಬೊಮ್ಮಣ್ಣ–ಕಾಲಾಂತರ ಭೀಮೇಶ್ವರಲಿಂಗ : ೧**

೬೨೮

೧೫. **ತೆಲುಗು ಜೊಮ್ಮಣ್ಣ–ತೆಲುಗೇಶ್ವರಾ : ೧**

೬೩೧.

೧೬. ನೀಲಮ್ಮ-ಸಂಗಯ್ಯ : ೧೦

೧೪೧೮, ೧೪೧೯, ೧೪೨೫, ೧೪೨೬, ೧೪೨೭, ೧೪೨೮, ೧೪೨೯, ೧೪೩೨, ೧೪೩೩, ೧೪೩೪.

೧೭. ನುಲಿಯ ಚಂದಯ್ಯ-ಚಂದೇಶ್ವರಲಿಂಗ : ೨೭

೮೪೯, ೮೫೧, ೮೫೨, ೮೫೪, ೮೫೬, ೮೫೮, ೮೬೦, ೮೬೧, ೮೬೨, ೮೬೪, ೮೬೬, ೮೬೭, ೮೬೮, ೮೬೯, ೮೭೦, ೮೭೧, ೮೭೩, ೮೭೫, ೮೭೭, ೮೭೮, ೮೮೧, ೮೮೨, ೮೮೩, ೮೮೮, ೮೮೯, ೮೯೧, ೮೯೬.

೧೮. ಬಸವಣ್ಣ-ಕೂಡಲಸಂಗಮದೇವ : ೨೫೨

೨೬೧, ೨೬೩, ೨೬೫, ೨೮೦, ೨೮೧, ೨೮೨, ೨೮೩, ೨೮೫, ೨೮೭, ೨೮೯, ೨೯೧, ೩೦೪, ೩೦೮, ೩೧೬, ೩೧೭, ೩೧೯, ೩೨೧, ೩೨೨, ೩೨೩, ೩೨೬, ೩೨೭, ೩೨೮, ೩೨೯, ೩೩೦, ೩೩೧, ೩೩೨, ೩೩೩, ೩೩೪, ೩೩೫, ೩೩೬, ೩೩೭, ೩೩೮, ೩೩೯, ೩೪೦, ೩೪೩, ೩೪೪, ೩೪೫, ೩೪೬, ೩೪೭, ೩೪೮, ೩೫೧, ೩೫೨, ೩೫೪, ೩೫೫, ೩೫೮, ೩೫೯, ೩೬೦, ೩೬೩, ೩೬೪, ೩೬೬, ೩೬೮, ೩೭೧, ೩೭೪, ೩೭೫, ೩೭೬, ೩೭೭, ೩೭೯, ೩೮೯, ೩೯೦, ೩೯೪, ೩೯೬, ೪೦೭, ೪೦೮, ೪೦೯, ೪೧೧, ೪೧೩, ೪೧೮, ೪೨೦, ೪೨೩, ೪೨೫, ೪೩೩, ೪೩೫, ೪೩೬, ೪೩೯, ೪೪೦, ೪೪೧, ೪೪೩, ೪೪೫, ೪೪೭, ೪೪೯, ೪೫೧, ೪೫೩, ೪೫೫, ೪೫೭, ೪೫೯, ೪೬೧, ೪೬೩, ೪೬೫, ೪೬೭, ೪೬೯, ೪೭೧, ೪೭೪, ೪೮೧, ೪೮೨, ೪೮೪, ೫೪೬, ೫೪೮, ೫೫೦, ೫೭೩, ೫೭೪, ೫೭೫, ೫೮೫, ೫೮೮, ೫೮೯, ೫೯೦, ೫೯೪, ೫೯೭, ೬೦೬, ೬೦೭, ೬೩೪, ೬೮೬, ೭೧೦, ೭೧೧, ೭೨೪, ೭೨೫, ೭೩೩, ೭೮೩, ೭೮೫, ೭೮೮, ೭೯೨, ೭೯೯, ೮೦೦, ೮೦೪, ೮೦೫, ೮೦೬, ೮೧೩, ೮೮೫, ೮೮೭, ೯೫೨, ೯೬೩, ೯೬೪, ೯೯೮, ೧೦೦೧, ೧೦೦೩, ೧೦೧೬, ೧೦೫೧, ೧೦೫೨, ೧೦೫೩, ೧೦೫೪, ೧೦೭೬, ೧೦೭೭, ೧೦೭೮, ೧೦೭೯, ೧೦೮೦, ೧೦೮೧, ೧೦೮೪, ೧೦೮೫, ೧೦೮೮, ೧೦೮೯, ೧೦೯೧, ೧೦೯೩, ೧೦೯೪, ೧೦೯೫, ೧೦೯೭, ೧೧೦೦, ೧೧೦೨, ೧೧೦೪, ೧೧೦೯, ೧೧೨೭, ೧೧೨೮, ೧೧೨೯, ೧೧೩೨, ೧೧೩೪, ೧೧೩೯, ೧೧೪೧, ೧೧೪೩, ೧೧೪೫, ೧೧೪೯, ೧೧೫೦, ೧೧೫೨, ೧೧೫೪, ೧೧೫೬, ೧೧೫೮, ೧೧೬೨, ೧೧೬೫, ೧೧೬೬, ೧೧೭೦, ೧೧೭೧, ೧೧೭೩, ೧೧೭೪, ೧೧೭೬, ೧೧೭೭, ೧೧೭೮, ೧೧೮೦, ೧೧೮೧, ೧೧೮೪, ೧೧೮೬, ೧೧೮೭, ೧೧೮೮, ೧೧೮೯, ೧೨೦೧, ೧೨೦೫, ೧೨೦೮, ೧೨೦೯, ೧೨೧೫, ೧೨೨೮, ೧೨೨೯, ೧೨೩೧, ೧೨೩೩, ೧೨೩೫, ೧೨೩೬, ೧೨೩೭, ೧೨೩೯, ೧೨೪೦, ೧೨೪೫, ೧೨೫೪, ೧೨೫೫, ೧೨೫೬, ೧೨೫೭, ೧೨೫೮, ೧೨೫೯, ೧೨೬೯, ೧೨೭೦, ೧೨೭೧, ೧೨೭೨, ೧೨೭೩, ೧೨೭೪, ೧೨೭೫, ೧೨೭೬, ೧೨೭೭, ೧೨೯೭, ೧೨೯೮, ೧೩೧೯, ೧೩೨೧, ೧೩೨೩, ೧೩೨೫, ೧೩೨೭, ೧೩೩೯, ೧೩೪೪, ೧೩೪೫, ೧೩೪೬, ೧೩೪೭, ೧೩೪೮, ೧೩೪೯, ೧೩೫೦, ೧೪೦೭, ೧೪೧೨, ೧೪೧೩, ೧೪೧೫, ೧೪೧೬, ೧೪೨೧, ೧೪೨೨, ೧೪೨೩, ೧೪೨೪.

೧೯. **ಬಹುರೂಪಿ ಚೌಡಯ್ಯ–ರೇಕಣ್ಣಪ್ರಿಯ ನಾಗಿನಾಥ : ೯**

೧೩೦೫, ೧೩೦೬, ೧೩೬೭, ೧೩೬೮, ೧೩೬೯, ೧೩೭೦, ೧೩೭೧, ೧೩೭೨, ೧೩೭೩.

೨೦. **ಮಡಿವಾಳ ಮಾಚಯ್ಯ–ಕಲಿದೇವ/ಕಲಿದೇವರದೇವ : ೮೩**

೩೮೩, ೪೨೨, ೫೫೪, ೫೫೬, ೫೫೮, ೫೫೯, ೫೬೦, ೫೬೧, ೫೬೨, ೫೬೪, ೫೬೬, ೫೬೮, ೫೬೯, ೫೭೧, ೫೭೭, ೫೭೮, ೫೭೯, ೫೮೦, ೫೮೧, ೫೮೪, ೫೮೬, ೫೮೭, ೫೯೧, ೫೯೩, ೫೯೫, ೫೯೯, ೬೦೧, ೬೦೩, ೬೮೧, ೭೧೬, ೭೨೮, ೭೨೯, ೭೩೦, ೭೩೧, ೭೩೨, ೭೩೪, ೭೪೪, ೮೪೮, ೮೫೦, ೮೫೩, ೮೫೫, ೮೫೭, ೮೫೯, ೮೬೩, ೮೬೫, ೮೮೦, ೧೦೧೭, ೧೦೪೭, ೧೦೫೬, ೧೦೫೭, ೧೦೫೮, ೧೦೮೩, ೧೧೦೬, ೧೧೦೭, ೧೧೦೮, ೧೧೧೯, ೧೧೬೮, ೧೧೭೨, ೧೧೭೯, ೧೨೮೩, ೧೨೮೪, ೧೨೮೫, ೧೨೯೦, ೧೨೯೧, ೧೨೯೨, ೧೨೯೩, ೧೨೯೪, ೧೨೯೫, ೧೨೯೬, ೧೩೬೧, ೧೩೬೨, ೧೩೬೩, ೧೩೬೪, ೧೩೬೫, ೧೩೬೬, ೧೪೦೯, ೧೪೪೪, ೧೪೪೫, ೧೪೪೬, ೧೪೪೭, ೧೪೪೮, ೧೪೪೯, ೧೪೫೦.

೨೧. **ಮರುಳು ಶಂಕರದೇವ–ಶುದ್ಧಸಿದ್ಧಪ್ರಸಿದ್ಧಪ್ರಸನ್ನಪ್ರಭುವೆ ಶಾಂತಮಲ್ಲಿಕಾರ್ಜುನ ದೇವಯ್ಯ : ೧೧**

೪೦೧, ೪೦೨, ೪೦೪, ೪೦೬, ೪೧೨, ೪೧೫, ೪೧೨೬, ೪೨೭, ೪೨೮, ೪೨೯, ೪೩೦.

೨೨. **ಮಹಾದೇವಿಯಕ್ಕ–ಚೆನ್ನಮಲ್ಲಿಕಾರ್ಜುನ : ೫೯**

೯೫೭, ೯೫೮, ೯೫೯, ೯೬೦, ೯೬೧, ೯೬೨, ೯೬೭, ೯೬೮, ೯೬೯, ೯೭೧, ೯೭೩, ೯೭೫, ೯೭೭, ೯೭೮, ೯೮೦, ೯೮೨, ೯೮೩, ೯೮೫, ೯೮೭, ೯೮೮, ೯೯೦, ೯೯೨, ೯೯೪, ೯೯೫, ೯೯೭, ೯೯೯, ೧೦೦೦, ೧೦೦೨, ೧೦೦೪, ೧೦೦೫, ೧೦೦೬, ೧೦೦೭, ೧೦೦೭, ೧೦೧೨, ೧೦೧೪, ೧೦೧೯, ೧೦೨೦, ೧೦೨೧, ೧೦೨೨, ೧೦೨೩, ೧೦೨೫, ೧೦೨೭, ೧೦೨೮, ೧೦೨೯, ೧೦೩೦, ೧೦೩೧, ೧೦೩೨, ೧೦೩೪, ೧೦೩೫, ೧೦೩೬, ೧೦೩೭, ೧೦೩೮, ೧೦೩೯, ೧೦೪೦, ೧೦೪೧, ೧೦೪೨, ೧೦೪೩, ೧೦೪೪, ೧೦೪೫.

೨೩. **ಮುಕ್ತಾಯಕ್ಕ–ಅಜಗಣ್ಣ : ೨೩**

೭೯, ೮೦, ೮೧, ೮೨, ೮೪, ೮೬, ೮೮, ೯೦, ೯೨, ೯೩, ೯೫, ೯೭, ೯೯, ೧೦೧, ೧೦೩, ೧೦೫, ೧೦೭, ೧೦೯, ೧೧೧, ೧೧೩, ೧೧೫, ೧೧೭, ೧೧೯.

೨೪. **ಮೆರೆಮಿಂಡದೇವ–ಐಘಟದೂರ ರಾಮೇಶ್ವರ : ೧**

೬೨೫.

೨೫. **ಮೇದರ ಕೇತಯ್ಯ–ಗೌರೇಶ್ವರ : ೨**

೧೩೧೫, ೧೩೧೬.

೨೬. ಮೋಳಿಗೆ ಮಹಾದೇವಿ–ಎನ್ನಯ್ಯಪ್ರಿಯ ಇಮ್ಮಡಿನಿಃಕಳಂಕ ಮಲ್ಲಿಕಾರ್ಜುನ : ೨೨

೮೨೧, ೮೨೨, ೮೨೩, ೮೨೪, ೮೨೫, ೮೨೬, ೮೨೭, ೮೨೮, ೮೨೯, ೮೩೧, ೮೩೨, ೮೩೫, ೮೩೬, ೮೩೭, ೮೩೮, ೮೩೯, ೮೪೦, ೮೪೧, ೮೪೨, ೮೪೩, ೮೪೪, ೮೪೫.

೨೭. ಮೋಳಿಗೆ ಮಾರಯ್ಯ–ನಿಃಕಳಂಕ ಮಲ್ಲಿಕಾರ್ಜುನ : ೨೯

೬೨೧, ೬೨೨, ೬೨೩, ೮೦೧, ೮೦೨, ೮೦೩, ೮೦೭, ೮೦೯, ೮೧೦, ೮೧೧, ೮೧೨, ೮೧೪, ೮೧೬, ೮೧೭, ೮೧೮, ೮೧೯, ೮೨೦, ೮೩೦, ೮೩೩, ೮೩೪, ೮೪೬, ೮೪೭, ೧೦೮೬, ೧೧೬೦, ೧೧೬೧, ೧೩೦೯, ೧೩೧೦, ೧೩೮೨, ೧೩೮೩.

೨೮. ರಾಯಸದ ಮಂಚಣ್ಣ–ಜಾಂಬೇಶ್ವರ : ೧

೬೨೭.

೨೯. ಶಂಕರದಾಸಿಮಯ್ಯ–ನಿಜಗುರುಶಂಕರದೇವ : ೨

೧೩೧೩, ೧೩೧೪.

೩೦. ಶಿವನಾಗಮಯ್ಯ–ನಾಗಪ್ರಿಯ ಚೆನ್ನರಾಮೇಶ್ವರ : ೧

೬೩೦.

೩೧. ಸಿದ್ಧರಾಮ–ಕಪಿಲಸಿದ್ಧ ಮಲ್ಲಿಕಾರ್ಜುನ/ಶ್ರೀ ಮಲ್ಲಿಕಾರ್ಜುನ/ಯೋಗಿನಾಥ : ೧೪೧

೧೩೨, ೧೩೩, ೧೩೪, ೧೩೫, ೧೪೪, ೧೪೫, ೧೪೬, ೧೪೭, ೧೪೮, ೧೪೯, ೧೫೦, ೧೫೧, ೧೫೨, ೧೫೩, ೧೫೪, ೧೫೫, ೧೫೬, ೧೫೭, ೧೫೮, ೧೫೯, ೧೬೦, ೧೬೧, ೧೬೪, ೧೬೬, ೧೬೮, ೧೭೦, ೧೭೨, ೧೭೪, ೧೭೬, ೧೭೭, ೧೭೮, ೧೮೦, ೧೮೪, ೧೮೫, ೧೮೭, ೧೮೯, ೧೯೧, ೧೯೨, ೧೯೩, ೧೯೪, ೧೯೬, ೧೯೮, ೨೦೦, ೨೦೨, ೨೦೪, ೨೦೬, ೨೦೮, ೨೧೦, ೨೧೨, ೨೧೫, ೨೧೭, ೨೧೯, ೨೨೧, ೨೨೩, ೨೨೪, ೨೨೬,೨೨೮, ೨೩೦, ೨೩೨, ೨೩೪, ೨೩೬, ೨೩೮, ೨೪೦, ೨೪೨, ೨೪೪, ೨೪೬, ೨೪೮, ೨೫೦, ೨೫೨, ೨೫೪, ೨೫೬, ೨೫೮, ೨೯೫, ೨೯೬, ೨೯೯, ೩೦೨, ೩೨೫, ೩೮೦, ೪೧೯, ೬೦೪, ೬೦೮, ೬೧೦, ೬೧೨, ೬೩೮, ೮೩೯, ೬೪೦, ೬೪೧, ೬೪೨, ೬೪೩, ೬೪೪, ೬೪೫, ೬೫೦, ೬೫೩, ೬೫೪, ೬೫೫, ೬೫೬, ೬೫೭, ೬೫೮, ೬೬೮, ೬೬೯, ೬೭೦, ೬೭೧, ೬೭೨, ೬೭೩, ೬೭೪, ೬೭೬, ೬೭೮, ೬೭೯, ೫೮೩, ೮೮೪, ೬೮೫, ೬೮೭, ೬೮೮, ೬೮೯, ೬೯೦, ೬೯೧, ೬೯೨, ೬೯೩, ೬೯೪, ೬೯೫, ೬೯೬, ೬೯೭, ೬೯೮, ೭೦೦, ೭೦೧, ೭೦೩, ೭೦೬, ೭೦೭, ೭೦೮, ೭೦೯, ೭೩೮, ೭೩೯, ೭೪೦, ೭೪೧, ೭೪೨, ೭೪೩, ೮೧೫, ೯೪೯, ೧೦೧೧, ೧೦೪೯, ೧೪೩೫.

೩೨. ಸೊಡ್ಡಳ ಬಾಚರಸ–ಮಹಾದಾನಿ ಸೊಡ್ಡಳ : ೧೫

೩೨೦, ೭೧೭, ೭೧೮, ೧೦೮೭, ೧೧೦೫, ೧೧೧೧, ೧೧೨೬, ೧೧೭೫, ೧೨೩೮, ೧೩೦೩, ೧೩೦೪, ೧೩೭೭, ೧೩೭೮, ೧೪೧೦, ೧೪೧೧.

೩೩. **ಹಡಪದಪ್ಪಣ್ಣ–ಬಸವಪ್ರಿಯ ಕೂಡಲಚೆನ್ನಸಂಗಮದೇವ : ೨೦**

೩೦೩, ೩೦೫, ೩೦೭, ೩೦೯, ೩೧೧, ೩೧೩, ೩೧೪, ೪೨೧, ೭೧೯, ೧೦೭೩, ೧೦೭೪, ೧೦೭೫, ೧೦೯೦, ೧೧೧೦, ೧೧೬೯, ೧೨೯೯, ೧೩೦೦,೧೩೭೪, ೧೩೭೫, ೧೩೭೬.

೩೪. **ಸಮಯದ ವಾಕ್ಯ–? : ೬**

೯೩೦, ೯೩೬, ೯೩೮, ೯೪೦, ೯೪೨, ೯೪೪.

❖❖

೩. ಸ್ವರವಚನಗಳ ಅಕಾರಾದಿ

೧. ಆಚಾರದುಂದುಭಿಯ	ಕೂಡಲಚೆನ್ನಸಂಗ	೪೮೮
೨. ಏನ ಹೇಳುವೆನಕ್ಕ ಕನಸುವ	ಕೂಡಲಚೆನ್ನಸಂಗ	೧೩೮೬
೩. ಕರ್ಮಕಾಯನು ಅಲ್ಲ	ಗೊಹೇಶ್ವರ	೪೩೪
೪. ಗುರುಚರಣವೆ ಗತಿ	ಕೂಡಲಸಂಗ	೩೯೧
೫. ಜಯಜಯ ಶ್ರೀ ಮಹಾದೇವ	ಕೂಡಲಸಂಗಮದೇವ	೭೧೨
೬. ತಾನಿದಿರೆಂಬೆರಡರಿಯದೆ	ಗೊಹೇಶ್ವರ	೧೩೩೮
೭. ದೇಹಗುಣಗಳಳಿದು ಲಿಂಗ	ಗೊಹೇಶ್ವರ	೯೫೪
೮. ನಾನಾ ವಿಧ ಬ್ರಹ್ಮಾಂಡದಾಲಯ	ಕೂಡಲಸಂಗ	೭೨೦
೯. ನುಡಿಗಡಣದ ಬೆಳಗು	ಗೊಹೇಶ್ವರ	೫೪೦
೧೦. ನೋಡು ನೋಡು ನೋಡು	ಸಂಗಮನಾಥ	೧೪೨೦
೧೧. ಪರಕೆ ಪರವಾ ಘನಕೆ	ಕೂಡಲಚೆನ್ನಸಂಗ	೭೨೧
೧೨. ಪರಮಮೂರುತಿ ಪರಮಜ್ಞಾನಿ	ಕೂಡಲಚೆನ್ನಸಂಗಯ್ಯ	೧೨೮೧
೧೩. ಬೀಜವಿಲ್ಲದ ಸಸಿಗೆ	ಕೂಡಲಚೆನ್ನಸಂಗ	೬೭೭
೧೪. ಭಾವಿಸಿ ನಡೆದಿಹೆನೆಂದಡೆ	ಕೂಡಲಚೆನ್ನಸಂಗ	೯೫೫
೧೫. ಮಂಗಳವ ಪಾಡುವೆ	ಕೂಡಲಚೆನ್ನಸಂಗ	೭೧೫
೧೬. ಮಂಗಳಂ ಮಂಗಳಂ	ಗೊಹೇಶ್ವರಲಿಂಗ	೧೧೩೯
೧೭. ಮಹಾಘನಲಿಂಗದೊಳಗೆ	ಕೂಡಲಚೆನ್ನಸಂಗಯ್ಯ	೧೩೪೦
೧೮. ಶರಣು ಶರಣಯ್ಯ ನೀವು	ಕೂಡಲಸಂಗ	೧೪೧೪
೧೯. ಶರಣು ಶರಣು ಕೂಡೆ	ಕೂಡಲಸಂಗಯ್ಯ	೧೪೧೭
೨೦. ಶರಣು ಶರಣು ಎನ್ನ ಗುರುವೆ	ಕೂಡಲಚೆನ್ನಸಂಗಯ್ಯ	೧೪೪೧
೨೧. ಸ್ವಾನುಭಾವ ಸಿದ್ಧಿಯಿಂದ ತಾನು	ಕಪಿಲಸಿದ್ಧಮಲ್ಲೇಶ	೭೨೨

❖❖

೪. ಸ್ವರವಚನಕಾರರು–ಅಂಕಿತ–ವಚನಸಂಖ್ಯೆ

೧. ಅಲ್ಲಮಪ್ರಭು: ಗೊಹೇಶ್ವರ : ೫

೪೩೪, ೫೪೦, ೯೫೪, ೧೧೫೯, ೧೩೩೮.

೨. ಚೆನ್ನಬಸವಣ್ಣ: ಕೂಡಲಚೆನ್ನಸಂಗ/ಕೂಡಲಚೆನ್ನಸಂಗಯ್ಯ : ೯

೪೮೮, ೬೭೭, ೭೧೫, ೭೨೧, ೯೫೫, ೧೨೮೧, ೧೩೪೦, ೧೩೮೬, ೧೪೪೧.

೩. ನೀಲಮ್ಮ : ಸಂಗಮನಾಥ : ೧

೧೪೨೦

೪. ಬಸವಣ್ಣ: ಕೂಡಲಸಂಗಮದೇವ/ ಕೂಡಲಸಂಗ : ೫

೩೯೧, ೭೧೨, ೭೨೦, ೧೪೧೪, ೧೪೧೭.

೫. ಸಿದ್ಧರಾಮ: ಕಪಿಲಸಿದ್ಧಮಲ್ಲೇಶ : ೧

೭೨೨.

❖❖

೫. ಕಠಿಣ ಪದಕೋಶ

ಅ

ಅಂಗ–ದೇಹ, ಜೀವಾತ್ಮ ಸ್ವರೂಪ

ಅಂಗವಿಸು–ಇಚ್ಛೈಸು, ಕೂಡು

ಅಂಗಸೋಂಕು–ಶರೀರದ ಸ್ಪರ್ಶ

ಅಂಕುರ–ಮೊಳಕೆ

ಅಂಗೈತಿನ್ನು–ಅಂಗೈಕೆರೆ, ಶುಭಸೂಚನೆಯಾಗು

ಅಂಘ್ರಿ–ಪಾದ

ಅಂಜನ–ಕಣ್ಣಿಗೆ ಹಚ್ಚುವ ಕಾಡಿಗೆ, ಅದೃಶ್ಯ ವಸ್ತು ಕಾಣುವ ಕಪ್ಪುಪುಡಿ

ಅಂಜನಸಿದ್ಧಿ–ಕಾಡಿಗೆ ಹಚ್ಚಿಕೊಂಡು ಹೂಳಿಟ್ಟ ನಿಧಿಯನ್ನು ನೋಡುವ ಸಿದ್ಧಿ

ಅಂಡಜ–ತತ್ತಿಯಿಂದ ಹುಟ್ಟಿದ

ಅಂಧಕ–ಕುರುಡ

ಅಂಬರ–ಆಕಾಶ

ಅಂಬರ–ಬಟ್ಟೆ

ಅಂಬಳಕ–ಅಂಬಲಿ

ಅಂಬು–ಬಾಣ

ಅಂಬುಧಿ–ಸಮುದ್ರ

ಅಱಸು–ಹುಡುಕು

ಅಕ್ಕಱು–ಪ್ರೀತಿ

ಅಕ್ಕೆ–ದುಃಖ, ರೋಧನ

ಅಕ್ಷತೆ–ಅಕ್ಕಿಕಾಳು

ಅಕ್ಷಯ–ಕೊರತೆಯಿಲ್ಲದ, ನಾಶವಾಗದ

ಅಖಿಳ–ಎಲ್ಲ, ಸಮಸ್ತ

ಅಗಡ–ತುಂಟ, ಒರಟ

ಅಗಣಿತ–ಲೆಕ್ಕವಿಲ್ಲದಷ್ಟು

ಅಗಮ್ಯ– ಸುಲಭವಾಗಿ ಸಿಗದ, ಅರಿಯಬಾರದ

ಅಗಲು–ತಾಟು

ಅಗಿ–ತೋಡು

ಅಗಿ–ಜಗಿ, ಕಡಿ, ಅರೆ

ಅಗಿದಗಿದು–ಹಲ್ಲಿನಿಂದ ಜಗಿದು ಜಗಿದು

ಅಗುಳಿಸು–ಕೀಲುಹಾಕು

ಅಗೋಚರ–ಕಾಣದೆ ಇರುವ

ಅಗ್ಗವಣಿ–ಪವಿತ್ರ ಜಲ, ನೀರು

ಅಗ್ಗಳ–ಶ್ರೇಷ್ಠ

ಅಗ್ಘವಣಿ–ನೀರು

ಅಗ್ನಿ–ಬೆಂಕಿ

ಅಘಟಿತ ಘಟಿತ–ಅಸಾಧ್ಯವಾದ

ಅಘೋರನರಕ–ಅತ್ಯಂತ ಭಯಂಕರ ನರಕ

ಅಚಳ–ಸ್ಥಿರ, ಚಲಿಸದ

ಅಚ್ಚುಗ ಪ್ರಾಣ, ಜೀವಾಳ, ರಹಸ್ಯ

ಅಚ್ಚೊತ್ತು–ಮುದ್ರೆಹಾಕು

ಅಜ–ಬ್ರಹ್ಮ

ಅಜಕಲ್ಪಕೋಟಿ–ಜೀವ ಕೋಟಿ

ಅಜಾಂಡ–ಬ್ರಹ್ಮಾಂಡ

ಅಜಾತ–ಹುಟ್ಟಿಲ್ಲದವ

ಅಜಾರಿ–ಶಿವ

ಅಟ್ಟ–ಅಡಿಗೆ ಮಾಡಿದ

ಅಟ್ಟು–ಕಳಿಸು

ಅಟ್ಟಗೋಲು–ಉದ್ದಕೋಲು

ಅಟ್ಟಶನ–ಮಾಡಿದ ಅಡಿಗೆ
ಅಟ್ಟಾಟಿಕೆ–ದೌತ್ಯ
ಅಡರು–ಏರು, ಹತ್ತು
ಅಡಹು–ಆಶ್ರಯ
ಅಡಿ–ತಳ, ಬುಡ, ಕಾಲು, ಹೆಜ್ಜೆ
ಅಡ್ಡ–ಏಳು ಘಟ್ಟಿ ದುಡ್ಡು ಬೆಲೆಯ ನಾಣ್ಯ
ಅಡ್ಡಾಯುಧ–ಒಂದು ಬಗೆಯ ಖಡ್ಗ
ಅಡಿವಜ್ಜೆ–ಹುಟ್ಟು, ಜನನ, ಪದ್ಧತಿ
ಅಡೆ–ಬಂಡೆ, ಬಟ್ಟೆತೊಳೆಯುವ ಕಲ್ಲು
ಅಣಲು–ದವಡೆ
ಅಣು–ಸಣ್ಣದು, ಕಣ
ಅಣುರೇಣು–ಧೂಳೀಕಣ
ಅತಃಪರ–ಬೇರೆ
ಅತಿಗಳೆ–ಮೀರು, ಕಡೆಗಣಿಸು,
ದೂರಮಾಡು
ಅತಿಬಿರಿದು–ಅತ್ಯಂತ ಕಠಿಣ
ಅತೀತ–ಮೀರಿದ
ಅಡರು–ಏರು, ಹತ್ತು
ಅದ್ದು–ಎದ್ದು, ಮುಳುಗಿಸು
ಅದ್ರಿ–ಪರ್ವತ
ಅದ್ವಯ–ಎರಡಿಲ್ಲದ
ಅದ್ವೈತ–ಎರಡಿಲ್ಲದ, ಒಂದಾದ
ಅಧರ–ತುಟಿ
ಅಧವೆ–ಅನಾಥೆ, ವಿಧವೆ, ಗಂಡನಿಲ್ಲದವಳು
ಅನಂಗ–ಕಾಮ
ಅನಲ–ಬೆಂಕಿ
ಅನವರತ–ನಿರಂತರ
ಅನಾಗತ–ಮುಂದಿನ ಭವಿಷ್ಯ
ಅನಾಮಯ–ರೋಗವಿಲ್ಲದ
ಅನಾಯತ–ಲಿಂಗಸಂಬಂಧವಿಲ್ಲದ
ಅನಾಹತ–ಚಿನ್ನಾದ, ಬಾರಿಸದೆ ಹುಟ್ಟಿದ ನಾದ
ಅನಿರ್ವಾಚ್ಯ–ಮಾತಿಗೆ ನಿಲುಕದ, ಹೇಳಲಿಕ್ಕೆ ಬಾರದ
ಅನಿಲ–ಗಾಳಿ
ಅನು–ಸ್ಥಲ, ಸ್ವರೂಪ, ಸ್ಥಿತಿ, ರೀತಿ
ಅನುಕರಿಸು–ಅಂಗೀಕರಿಸು
ಅನುಗೊಳ್ಳು–ಯೋಗ್ಯವಾಗು, ಸಿದ್ಧವಾಗು, ತೊಡಗು
ಅನುಜ್ಞೆ–ಅನುಮತಿ
ಅನುತಾಪ–ಪಶ್ಚಾತ್ತಾಪ
ಅನುವು–ರೀತಿ
ಅನೃತ–ಸುಳ್ಳು
ಅನೌಪಮ್ಯ–ಉಪಮಿಸಲು ಬಾರದ
ಅನ್ನಬರ–ಅಲ್ಲಿಯವರೆಗೆ
ಅನ್ಯ–ಬೇರೆ
ಅನುತಾಪಿಸು–ಸಂಕಟಪಡು, ಪಶ್ಚಾತ್ತಾಪಪಡು
ಅನ್ವಯ–ಕ್ರಮ, ಸಂಬಂಧ, ವಂಶ
ಅಪರಿಮಿತ–ಮಿತಿಯಿಲ್ಲದ
ಅಪ್ಪು–ನೀರು
ಅಪ್ರತರ್ಕ್ಯ–ತರ್ಕಕ್ಕೆ ನಿಲುಕದ
ಅಪ್ರಮೇಯ–ಅಳೆಯಲಾಗದ, ತಿಳಿಯಲಾಗದ
ಅಬ್ಧಿ–ಸಮುದ್ರ
ಅಭಿಗಾರ–ತುಪ್ಪ
ಅಭಿಧಾನ–ಹೆಸರು
ಅಭಿನವ–ಹೊಸದಾದ
ಅಭಿಮುಖ–ಎದುರಾಗಿ
ಅಮಳೋಕ್ಯ–ಗಂಟಲು, ದವಡೆ
ಅಮ್ಮು>ಅಣ್ಮು–ಸಮರ್ಥನಾಗು
ಅಮೂರ್ತ–ಕಣ್ಣಿಗೆ ಕಾಣಿಸದ ವಸ್ತು, ನಿರಾಕಾರ
ಅರಚು–ಕೂಗು
ಅರಳಹುಟ್ಟಿಗೆ–ಹೂವಿನ ಬಟ್ಟೆ
ಅರಳು–ಹೂವು
ಅಱಿಕೆ–ಹುಡುಕುವಿಕೆ
ಅರತ–ಬತ್ತಿದ
ಅರಿ–ಕತ್ತರಿಸು
ಅರಿಕೆ–ಪ್ರಸಿದ್ಧ, ತಿಳವಳಿಕೆ
ಅರಿದತಲೆ–ಕತ್ತರಿಸಿದ ತಲೆ
ಅರಿವು–ಜ್ಞಾನ

ಅರುಹು–ಹೇಳು
ಅರುಹಿಗ–ಬಲ್ಲವ
ಅರ್ಕ–ಸೂರ್ಯ
ಅರ್ತಿ–ಪ್ರೀತಿ
ಅರ್ತಿಗಾರಿಕೆ–ಆಶಾಪೂರ್ವಕ ಮಾಡುವುದು
ಅರ್ಥಿ–ಬೇಡುವವ
ಅಱಿತುಹೋಗು–ಇಲ್ಲವಾಗು,
ಒಣಗಿಹೋಗು
ಅಱಿಲುಗೊಳ್ಳು–ಬತ್ತು, ಒಣಗು
ಅಱಿಸು–ಹುಡುಕು
ಅಱಿಕೆ–ಕೊರತೆ
ಅಲಗು–ಖಡ್ಗ
ಅಲಘುತರ–ವಿಶಿಷ್ಟ, ಶ್ರೇಷ್ಠ
ಅಲಸಿಕೆ–ಆಲಸ್ಯ, ಬೇಸರ
ಅಲುಬು–ನೀರಿನಲ್ಲಿ ಅದ್ದು, ತೊಳೆ, ಅಲುಗಾಡಿಸು
ಅಲೇಖ–ಖಾಲಿ ಕಾಗದ
ಅವಗಡೆ–ಅವಘಡ, ತೊಂದರೆ
ಅವಗ್ರಹಿಸು–ಹಿಡಿ
ಅವಗ್ರಾಹಕ–ಹಿಡಿವವನು
ಅವಧಾನ–ಗಮನಿಸುವಿಕೆ
ಅವಧಾನ–ಸಾವಧಾನ
ಅವಧಾರು–ಕೇಳು, ದೇವರನ್ನು
ಕುರಿತು ಬೇಡುವ ಸಂಬೋಧನೆ
ಅವಧಿ–ಸಮಯ, ಅಂತ್ಯ, ಸೀಮೆ
ಅವಲಂಬನ–ಆಧಾರ
ಅವಸಾನ–ಕೊನೆ, ಇಲ್ಲವಾಗು
ಅವಸ್ಥೆ–ಸ್ಥಿತಿ, ಗಂಡಾಂತರ
ಅವ್ಯಯ–ಕಡಿಮೆಯಾಗದ
ಅವಾರಿ–ಸತತವಾಗಿ ನಡೆಯುವವ
ಅವಿಮುಕ್ತಕ್ಷೇತ್ರ–ಕಾಶಿಯ
ಬಳಿಯಲ್ಲಿರುವ ಒಂದು ಕ್ಷೇತ್ರ,
ಪವಿತ್ರಸ್ಥಾನ, ಪುಣ್ಯಕ್ಷೇತ್ರ
ಅವಿರಳ–ಬಿಟ್ಟೂ ಬಿಡದ, ತೆರಹಿಲ್ಲದ
ಅವ್ವೆ–ತಾಯಿ, ಚಿಚ್ಛಕ್ತಿ
ಅಶನ–ಅನ್ನ
ಅಶ್ವ–ಕುದುರೆ
ಅಷ್ಟದಳ–ಎಂಟುದಳ
ಅಷ್ಟಾಶೀತಿ–ಎಂಬತ್ತೆಂಟು
ಅಷ್ಟಾಷಷ್ಟಿತೀರ್ಥ–ಅರವತ್ತೆಂಟು ತೀರ್ಥ
ಅಸಂಖ್ಯಾತರು–ಪುರಾತನರು, ಶರಣರು
ಅಸಿತಾಳಪತ್ರ–ಹರಿತವಾದ ಖಡ್ಗ
ಅಸುರ–ರಾಕ್ಷಸ
ಅಸ್ತಮಾನ–ಸಂಜೆ
ಅಸ್ಥಿ–ಎಲುಬು
ಅಳಿ–ಭ್ರಮರ
ಅಳಿಸಂಕುಳ–ದುಂಬಿಗಳ ಸಮೂಹ
ಅಹ–ಅಪ್ಪ, ಆಗುವ
ಅಹಗೆ–ಹಾಗೆ
ಅಳವು–ಅಳತೆ, ಹವಣು
ಅಳವಡು–ಸಂಬಂಧವಾಗು, ಸ್ಥಿರವಾಗು
ಅಳಿ–ನಾಶವಾಗು
ಅಳುಪು–ಆಸೆಪಡು

ಆ

ಆಂದೋಳ–ಉಯ್ಯಾಲೆ, ತೂಗಾಡುವುದು, ಪಲ್ಲಕ್ಕಿ
ಆಗುಮಾಡು–ರೂಪಿಸು, ಪೂರ್ಣಮಾಡು
ಆಗುಚೇಗೆ–ಲಾಭ ಹಾನಿ
ಆಣತಿ–ಆಜ್ಞೆ, ಆದೇಶ
ಆಪೋಷಣೆಮಾಡು–ಕುಡಿ
ಆಪ್ಯಾಯನ–ಹಿತಕರವಾದ, ಹಸಿವು, ತೃಪ್ತಿ, ಸುಖ, ಆಸೆ
ಆಮಿಷ–ಆಸೆ
ಆರಡಿಗೊಳ್ಳು–ಆಯಾಸಪಡು, ಬಳಲು
ಆರತ–ಒಣಗಿದ, ಬಾಯಾರಿದ
ಆರಯ್–ವಿಚಾರಮಾಡು
ಆರವೆ–ಮನೆ
ಆರು–ಅರಿಷಡ್ವರ್ಗ
ಆರೂಢ–ಜ್ಞಾನಿ, ಜೀವನ್ಮುಕ್ತ, ಸಿದ್ಧಿಪುರುಷ
ಆರೋಗಣೆ–ಊಟ

ಆರೋಗಿಸು–ಊಟಮಾಡು
ಆರ್ಣವ–ಸಮುದ್ರ
ಆಲವಟ್ಟ–ಬೀಸಣಿಗೆ
ಆವಾಗಳು–ಯಾವಾಗಲೂ
ಆಸನವಟ್ಟಿಗೆ–ಕೂಡುವ ವೇದಿಕೆ
ಆಳವಾಡಿ–ಹೋಗಲಾಡಿಸಿ
ಆಳಿಗೊಳಿಸು–ಹೀಯಾಳಿಸು, ಧಿಕ್ಕರಿಸು
ಆಳ್ದ–ಒಡೆಯ

ಇ–ಈ

ಇಂಗಿತ–ಅಭಿಪ್ರಾಯ, ಉದ್ದೇಶ
ಇಂದು–ಚಂದ್ರ
ಇಂದುಕಾಂತ–ಚಂದ್ರನ ಬೆಳಕು
ಇಂದ್ರಚಾಪ–ಕಾಮನಬಿಲ್ಲು
ಇಂಬಿಡು–ಬಚ್ಚಿಡು
ಇಂಬು–ಅವಕಾಶ, ಸ್ಥಳ
ಇಂಬುಗೊಳ್ಳು–ಸೇರಿಸಿಕೋ, ಅವಕಾಶಮಾಡು
ಇಕ್ಕೆ–ವಾಸಸ್ಥಾನ
ಇಕ್ಕೆಲ–ಎರಡು ಬದಿ
ಇಕ್ಷು–ಕಬ್ಬು
ಇಕ್ಷುದಂಡ–ಕಬ್ಬಿನ ಗಣಿಕೆ
ಇಡು–ಹೊಡೆ
ಇತ್ತರ–ಎರಡು ಬದಿ
ಇನ–ಸೂರ್ಯ
ಇನಿದು–ಇಂಪು, ಸಿಹಿ
ಇನಿಸು–ಸ್ವಲ್ಪ
ಇಮ್ಮಡಿಸು–ಎರಡುಪಟ್ಟಾಗು
ಇಮ್ಮನ–ಎರಡುಮನಸ್ಸು
ಇರುಳು–ರಾತ್ರಿ
ಈಯು–ಕೊಡು
ಈರೇಳುಭುವನ–ಹದಿನಾಲ್ಕು ಲೋಕ
ಈವರು–ಕೊಡುವವರು

ಉ–ಊ

ಉಂಡೆ–ಲಾಡು, ಚಂಡು
ಉಗಿ–ಕಳೆ
ಉಗ್ಘಡಿಸು–ಮತ್ತೆ ಮತ್ತೆ ಘೋಷಿಸು
ಉಡುಗು–ಅಡಗು, ಕುಗ್ಗು
ಉತ್ತಮಾಂಗ–ತಲೆ
ಉದಕ–ನೀರು
ಉದಮದ–ಏರುಜವ್ವನ, ಅತಿಯಾದ ಸೊಕ್ಕು
ಉದರ–ಹೊಟ್ಟೆ
ಉದರವ ಬಗಿದು–ಹೊಟ್ಟೆಯನ್ನುಸೀಳಿ
ಉದಾಸೀನ–ನಿರ್ಲಕ್ಷ, ಸೋಮಾರಿತನ, ಆಲಸ್ಯ
ಉದ್ದಂಡಿಸು–ತಿರಸ್ಕರಿಸು, ಗರ್ವಿಸು
ಉಪಚರ್ಯ–ಉಪಚಾರ,ಸೇವೆ
ಉಪಹತಿ–ನಾಶ, ಕೇಡು
ಉಪಾದಿ–ಹೊದಿಗೆ, ಅನಿವಾರ್ಯವಾದ ವಸ್ತು
ಉಪಾಧಿಕ–ಮೋಸಗಾರ, ಸಂಸಾರ ಭಾರವುಳ್ಳವನು
ಉಪಾವಸ್ತೆ–ಧ್ಯಾನ, ಪೂಜೆ, ಉಪದೇಶ
ಪ್ರಾರ್ಥಿಸು, ಬೇಡಿಕೊಳ್ಳು
ಉಪ್ಪರಿಗೆ–ಮೇಲ್ಮನೆ, ಮಹಡಿಮನೆ
ಉಭಯ–ಎರಡು
ಉಮ್ಮಳ–ದುಃಖ
ಉಮ್ಮಳಿಸು–ಕಳವಳಿಸು, ದುಃಖಪಡು
ಉರ–ಹೊಟ್ಟೆ
ಉರಗ–ಹಾವು, ಸರ್ಪ
ಉರವಣಿಸು–ಸಂಭ್ರಮಿಸು
ಉರುತರ–ಶ್ರೇಷ್ಠ
ಉರುಹು–ಸುಡು
ಉರುಳುಗಳ್ಳರು–ಕಪಟ ಭಕ್ತರು
ಉಱುಗು–ಬಾಗು
ಉಲುಹು–ಸದ್ದು, ಧ್ವನಿ
ಉಲಿ–ಸದ್ದುಮಾಡು, ಹೇಳು,
ಉಷ್ಣತೃಷ್ಣೆ–ನೀರಡಿಕೆ, ಬಾಯಾರಿಕೆ

ಉಳ್ಳನ್ನಬರ–ಇರುವವರೆಗೆ

ಊಡು–ಉಣಿಸು

ಊರ್ಧ್ವ–ಮೇಲಕ್ಕೆ

ಊಳಿಡು–ಕೂಗು

ಎ–ಏ–ಐ

ಎಂಟು–ಅಷ್ಟಮದ

ಎಕ್ಕೆವಿಂಡು–ಶಿಷ್ಯರಗುಂಪು

ಎಗ್ಗ–ಧಡ್ಡ, ಮೂಢ

ಎಡರು–ಎಡಹು, ಹತ್ತು, ಏರು

ಎಡೆ–ಸ್ಥಳ

ಎಡೆಗೊಳ್ಳು–ಆಶ್ರಯಿಸು, ಅವಕಾಶ ಹೊಂದು

ಎಣೆ–ಸಮಾನ, ಸಾಟಿ

ಎತ್ತಾನಕೊಬ್ಬರು–ಯಾರೋ ಒಬ್ಬರು

ಎಯ್ದಾಗಿ–ಹೆಚ್ಚಾಗಿ

ಎಯ್ದು–ತಲುಪು, ಸೇರು

ಎರಕ–ಪ್ರೀತಿ

ಎಲವದ ಕಾಯಿ–ಬಳಾರಗದ ಕಾಯಿ

ಎಲ್ಲೆ–ಸೀಮೆ, ಗಡಿ

ಎವೆಹಳಚದೆ–ರೆಪ್ಪೆಬಡಿಯದೆ

ಎಸಕ–ಉದ್ಯೋಗ, ರೀತಿ

ಎಸೆ–ಶೋಭಿಸು

ಎಳಕು–ಚಿಗುರು, ಎಳೆಯರು

ಎಳತಟ–ಎಳೆದಾಡು

ಎಳೆಗಂದಿ–ಎಳೆಗರು

ಎಳ್ಳನಿತು–ಸ್ವಲ್ಪ, ಒಂದಿಷ್ಟು

ಏಕವಿಂಶತ್–ಇಪ್ಪತ್ತೊಂದು

ಏಕಾರ್ಥವಾಗು–ಒಂದಾಗು, ಬೆರೆ, ಐಕ್ಯವಾಗು

ಏರಂಡ–ಹರಳುಗಿಡ

ಏರಿ–ಕೆರೆಯ ಒಡ್ಡು, ದಂಡೆ

ಐತರು–ಬರು

ಐದಾನೆ–ಇದ್ದಾನೆ

ಐದು–ಪಂಚೇಂದ್ರಿಯ

ಐವಣ್ಣ–ಐದು ಬಣ್ಣ

ಐವಾಗಿಲ–ಐದು ಬಾಗಿಲ

ಒ–ಓ

ಒಂದು–ಸೇರ, ಹೊಂದು

ಒಕತನ–ಸಂಸಾರ, ಬಾಳುವೆ

ಒಕ್ಕಲಿಕ್ಕು–ತುಳಿ, ನಾಶಮಾಡು

ಒಕ್ಕುಮಿಕ್ಕ–ಉಂಡು ಉಳಿದ ಶೇಷ

ಒಚ್ಚ–ಒಂದು ಸಲ

ಒಚ್ಚತವಾಗು–ಮೀಸಲಾಗು

ಒಚ್ಚತವೋಗು–ಒಂದಾಗು,ಆನಂದಪಡು

ಒಚ್ಚಿ–ಒಮ್ಮೆ

ಒಡಂಬಡಿಸು–ಒಪ್ಪಿಸು

ಒಡತಣ–ಜೊತೆಗಿನ

ಒಡನೆ–ಬೇಗನೆ

ಒಡಬಂದಿ–ಸೆರಮನೆಯಲ್ಲಿದ್ದ ಜೊತೆಗಾರ

ಒಡಬಂದಿಯಾಗು–ನೆಲೆಗೊಳ್ಳು

ಒಡಲು–ಹೊಟ್ಟೆ, ದೇಹ

ಒಡಲುಪಾದಿ–ಹಸಿವೆ, ಹೊಟ್ಟೆಯ ಚಿಂತೆ

ಒಡ್ಡ್ಯಾಣ–ನಡುಪಟ್ಟಿ

ಒತ್ತೆಗೊಳ್ಳು–ವಿಟನಿಂದ ಹಣ ಮುಂಗಡ ಪಡೆ

ಒರಸಾಗಿರು–ಘರ್ಷಣೆಗೊಂಡಿರು, ಒರಟಾಗಿರು

ಒಪ್ಪಗೆಡು–ಬಣ್ಣಗುಂದು, ಅಸ್ತವ್ಯಸ್ತವಾಗು

ಒಪ್ಪಚ್ಚಿ–ಒಂದು ಬಾರಿ

ಒಪ್ಪಿಡಿ>ಒರ್ಪಿಡಿ–ಒಂದು ಹಿಡಿ

ಒಬ್ಬುಳಿಯಾಗಿ–ಒಟ್ಟಾಗಿ

ಒಮ್ಮನ–ಒಂದು ಮನಸ್ಸು

ಒಯ್ಯನೆ–ಬೇಗನೆ, ಒಮ್ಮೆಲೆ

ಒರಸು–ನಾಶಮಾಡು

ಒರೆ–ಹೇಳು
ಒರೆ–ತಿಕ್ಕು, ಒರೆಗೆಹಚ್ಚಿನೋಡು
ಒರೆದುನೋಡು–ಪರೀಕ್ಷಿಸಿ ನೋಡು
ಒಲವರ–ಪ್ರೀತಿ
ಒಸರು–ಸೋರು
ಒಳಲೊಟ್ಟೆ–ಮೋಸಗಾರಿಕೆ, ಪೊಳ್ಳುತನ
ಓಗರ–ಅನ್ನ
ಓಜಗಟ್ಟಿಗೆ–ಗುರುವಿನ ಬೆತ್ತ
ಓವರಿ–ಒಳಮನೆ, ಕೋಣೆ
ಓಸರಿಸು–ಹಿಂಜರಿ, ಪಕ್ಕಕ್ಕೆ ಸರಿಸು

ಕ

ಕಂಗಳಾಲಿ–ಕಣ್ಣಿನ ರೆಪ್ಪೆ
ಕಂಗೆ–ಕಣ್ಣಿಗೆ
ಕಂಜಕರ್ಣಿಕೆ–ಕಮಲದ ದೇಟು
ಕಂಠಪಾಶ–ಕೊರಳ ಹಗ್ಗ
ಕಂಥೆ–ಹರಕುಬಟ್ಟೆ
ಕಂದೆರವೆ–ಕಣ್ಣು ತೆರೆಯುವಿಕೆ
ಕಂದೆಱೆ–ಕಣ್ಣುತೆರೆ
ಕಂಪು–ಸುವಾಸನೆ
ಕಂಬನಿ–ಕಣ್ಣೀರು
ಕಕ್ಕುಲತೆ–ಪ್ರೀತಿ, ಆಶೆ
ಕಕ್ಷಪಾಳ–ಬಗಲಚೀಲ, ಜೋಳಿಗೆ
ಕಜ್ಜ–ಕಾರ್ಯ
ಕಟಕ–ರಾಜ್ಯ, ಸೈನ್ಯ
ಕಟ್ಟೋಗರ–ಕಟ್ಟಿದ ಬುತ್ತಿ
ಕಡಲು–ಸಮುದ್ರ
ಕಡವರ–ಬಂಗಾರ
ಹೊಡಗೆಡಹು–ಕೆಳಗೆ ಕೆಡಹು
ಕಡವಸ–ಋಷಿಗಳು ಕೂಡುವ ಚರ್ಮದ ಹಾಸಿಗೆ
ಕಡಿಹ–ತುಂಡುಮಾಡುವದು
ಕಡೆಯಾಣಿ–ಶುದ್ಧ ಬಂಗಾರ
ಕಣ್ಣುಗೆಡು–ದಿಕ್ಕುತಪ್ಪು
ಕದಳಿ–ಬಾಳೆ, ದೇಹ
ಕನಕ–ಬಂಗಾರ
ಕನಲು–ನೊಂದುಕೊಳ್ಳು
ಕನ್ನಡ–ಭ್ರಾಂತಿ, ಭ್ರಮೆ
ಕಪಿ–ಮಂಗ
ಕಪಿತ್ಥ–ಬೇಲದ ಹಣ್ಣು
ಕಪೋತ–ಕಂದುಬಣ್ಣ
ಕಪ್ಪಡ–ಅರಿವೆ
ಕಪ್ಪರ–ಭಿಕ್ಷಾಪಾತ್ರೆ
ಕಬ್ಬಿಲ–ಮೀನುಗಾರ, ಬೆಸ್ತ, ಬೇಡ
ಕಬ್ಬಿಸಿಲು–ಕಡುಬಿಸಿಲು
ಕರ–ಕೈ
ಕರಂಡಗೆ–ಪಾತ್ರೆ
ಕರಕಮಲ–ಕೈ ಕಮಲ
ಕರಚರಣ–ಕೈಕಾಲು
ಕರಡಿಗೆ–ಲಿಂಗವನ್ನು ಇಡುವ ಸಣ್ಣ ಪೆಟ್ಟಿಗೆ
ಕರಣ–ಇಂದ್ರಿಯ
ಕರಣಿಕ–ಕಾರಕೂನ, ಲೆಕ್ಕಿಗ
ಕರತಳಾಮಳಕ–ಅಂಗೈನೆಲ್ಲಿಕಾಯಿ ಕರುವಿಡು–ಎರಕಹೊಯ್ಯು
ಕರಸ್ಥಲ–ಅಂಗೈ
ಕರಿ–ಆನೆ
ಕರಿಗೊಳ್ಳು–ಗಟ್ಟಿಗೊಳ್ಳು
ಕರುವಾಡ–ಮೇಲುಮನೆ
ಕರೋಟಿಮಾಲೆ–ತಲೆಬುರುಡೆಯಹಾರ
ಕರ್ಣ–ಕಿವಿ
ಕರ್ಣಿಕೆ–ಕಮಲದ ಬೀಜಕೋಶ, ಕಿವಿಯಾಭರಣ
ಕರ್ತ–ಒಡೆಯ
ಕರ್ಪರ–ಭಿಕ್ಷಾಪಾತ್ರೆ
ಕಲಿತನ–ಶೂರತನ
ಕಲ್ಮಷ–ಹೊಲಸು, ದ್ವೇಷ
ಕಲ್ಲೋಲ–ಮಾಲೆ

ಕವಳಿಗೆ–ಬ್ರಹ್ಮಕಪಾಲ, ಶಿವನ ಕೈಯ ಭಿಕ್ಷಾಪಾತ್ರೆ
ಕವಿಲೆ–ಕಂದುಬಣ್ಣದ ಆಕಳು
ಕಳ–ಬಿದಿರಿನ ಗಳ
ಕಳಂಕು–ದೋಷ
ಕಳಾಕುಳ–ತೀಕ್ಷ್ಣವಾದ ವಿಷ, ಜಂಜಡ
ಕಳಾಸ–ಬೆಸುಗೆ
ಕಳು–ಕಳವುಮಾಡು
ಕಳೆ–ಬೆಳಕು, ಪ್ರಕಾಶ
ಕಳೆಗಳು–ಇಂದ್ರಿಯಗಳು
ಕಾಕಪಿಕ–ಕಾಗೆ ಕೋಗಿಲೆ
ಕಾಣಿ–ಕಡಿಮೆ ಬೆಲೆಯ ನಾಣ್ಯ
ಕಾನನ–ಅಡವಿ
ಕಾಬ–ಕಾಣುವ
ಕಾಬುದು–ಕಾಣುವುದು
ಕಾಮಹರ–ಶಿವ
ಕಾಮಿತಸುಖ–ಬಯಸಿದ ಸುಖ
ಕಾಮ್ಯ–ಬಯಕೆ
ಕಾಯ–ದೇಹ
ಕಾಲ–ಯಮ
ಕಾಲಕುತ್ತು–ಕಾಲುಕಚ್ಚು, ಕಾಲಿಗೆ ಒತ್ತು
ಕಾಲುವಳ್ಳ–ಸಣ್ಣ ಹಳ್ಳ, ನೀರ ಝರಿ
ಕಾಷ್ಠ–ಕಟ್ಟಿಗೆ
ಕಾಳಿಕೆ–ಕತ್ತಲೆ
ಕಾಳುತನ–ದುಷ್ಟತನ, ಕೆಟ್ಟತನ
ಕಾಳುದೇಹ–ಅಶುದ್ಧ ಶರೀರ
ಕಾಳೋರಗ–ಕಾಳಿಂಗ ಸರ್ಪ
ಕಿಂಕಿಲ–ಸೇವಾವೃತ್ತಿ, ದೈನ್ಯ, ಕಿಂಕರ, ದಾಸ
ಕಿಂಕುರ್ವಾಣ–ದೈನ್ಯಭಾವ, ಕಿಂಕರಭಾವ
ಕಿಗ್ಗಡಲು–ಕಿರಿಯ ಸಮುದ್ರ
ಕಿಗ್ಗಯ್–ಕಿರಿಯಕೈ, ಬೊಗಸೆ
ಕಿಲ್ಬಿಷ–ವಿಷ, ಹೊಲಸು
ಕೀಲು–ರಹಸ್ಯ
ಕೀಳಿಲು–ಕರು, ಸಣ್ಣದು
ಕುಂತಳ–ತಲೆಗೂದಲು
ಕುಂದಣ–ಬಂಗಾರ
ಕುಂಭ–ಗಡಿಗೆ
ಕುಂಭಜ–ದ್ರೋಣ, ಅಗಸ್ತ್ಯ
ಕುಂಭಿನಿ–ಭೂಮಿ
ಕುಕ್ಕುಟ–ಕೋಳಿ
ಕುಕ್ಷಿ–ಹೊಟ್ಟೆ
ಕುಟಿಲ–ಮೋಸಗಾರಿಕೆ
ಕುಣಿ–ತಗ್ಗು
ಕುದ್ದಾಲ–ಗುದ್ದಲಿ
ಕುರುಹು–ಗುರುತು
ಕುಱುಬ–ಹೆಡ್ಡ, ಧಡ್ಡ
ಕುಱುಹು–ಚಿಹ್ನೆ, ಗುರುತು
ಕುಲಿಶ–ಕೊಡಲಿ
ಕುಶಬ್ದ–ಕೆಟ್ಟನುಡಿ
ಕುಸುಮ–ಹೂವು
ಕುಳ–ಕುಲ, ಬೇರು
ಕುಳ–ಕಾಯಕ, ಕೆಲಸ
ಕುಳಸ್ಥಳ–ಮೂವತ್ತಾರು ಸ್ಥಲಗಳು
ಕುಳಿ–ತಗ್ಗು
ಕೂಟ–ಬೆರಕೆ
ಕೂಪ–ನೀರಿನ ಮಡು
ಕೂಪ>ಕೂರ್ಪ–ಪ್ರೀತಿಸುವ
ಕೂರಸಿ–ಹರಿತವಾದ ಖಡ್ಗ
ಕೂರ್ತ–ಪ್ರೀತಿಸಿದ
ಕೂರ್ಮ–ಆಮೆ
ಕೃಪೆಯಾಂತು–ಕೃಪೆಮಾಡಿ
ಕೃಷಿ–ಒಕ್ಕಲುತನ
ಕೆಂಡ–ಬೆಂಕಿ
ಕೆತ್ತು–ಹಾರು
ಕೆಮ್ಮನೆ–ಸುಮ್ಮನೆ

ಕೆಯ್–ಹೊಲ
ಕೆಳದಿ–ಗೆಳತಿ
ಕೆಳೆ–ಸ್ನೇಹ
ಕೆಳೆಯ–ಸ್ನೇಹಿತ
ಕೇಶ–ಕೂದಲು
ಕೇಸರಿ–ಸಿಂಹ
ಕೈಕೊಳ್ಳು–ತೆಗೆದುಕೊ
ಕೈದು–ಆಯುಧ
ಕೈಧಾರೆ–ಕೈಯಮೇಲೆ ಎರೆಯುವ ನೀರು
(ಮದುವೆಯ ಒಂದು
ಸಂಪ್ರದಾಯ)
ಕೈಸಾರು–ಕೈವಶವಾಗು, ದೊರಕು
ಕೊಂತ–ಒಂದು ಬಗೆಯ
ಆಯುಧ, ತ್ರಿಶೂಲ
ಕೊಂಡೆಯರು–ಚಾಡಿಕೋರರು
ಕೊಂಬು–ಕಹಳೆ, ಒಂದು ವಿಧದ ವಾದ್ಯ
ಕೊಂಬು–ಟೊಂಗೆ, ಮರದ ಶಾಖೆ, ತುದಿ
ಕೊಯ್ಯು–ರಚಿಸು.
ಕೊಱಕೂಳು–ಅಲ್ಪಾಹಾರ,
ಹೊಟ್ಟೆಗೆ ಸಾಲದಷ್ಟು ಅನ್ನ
ಕೋ–ತೆಗೆದುಕೋ
ಕೋಡಗ–ಮಂಗ, ಕಪಿ
ಕೋಹಂ–ಪ್ರಣವ
ಕೌತುಕ–ಆಶ್ಚರ್ಯ, ಕುತೂಹಲ, ಆತುರ
ಕಱೆಗೊಳ್ಳು–ಸಮರಸವಾಗು
ಕಱ್–ಕೆರೆಯದಂಡೆ, ಒಡ್ಡು
ಕಱ್–ಹಾಲು ಹಿಂಡು
ಕ್ಷೀಣ–ಬಲಹೀನ
ಕ್ಷೀರಸ್ಥಾನ–ಎದೆ
ಕ್ಷುತ್ತು–ಹಸಿವು

ಖ
ಖಂಡಭಂಡ–ರಾಶಿರಾಶಿಯಾದ ಸರಕು ಸಾಮಗ್ರಿ
ಖಂಡೆಯ–ಕಿರುಗತ್ತಿ, ಖಡ್ಗ
ಖಗಮೃಗ–ಪಕ್ಷಿಪ್ರಾಣಿ
ಖಗಾಧಿಪ–ಪಕ್ಷಿಗಳ ಒಡೆಯ, ಗರುಡ
ಖರ್ಪರ–ಭಿಕ್ಷಾಪಾತ್ರೆ
ಖೇಚರ–ಗಗನದಲ್ಲಿ ಸಂಚರಿಸುವದು, ಪಕ್ಷಿ

ಗ–ಘ
ಗಂಡೆ–ಗಾಯ
ಗಗನ–ಆಕಾಶ
ಗಡಣ–ಗುಂಪು, ಸಮೂಹ
ಗಡಣಿಸು–ಕೂಡಿಸು, ಗುಂಪುಮಾಡು
ಗಡಾ–ಸಂತೋಷ, ಮೆಚ್ಚುಗೆ, ಅಚ್ಚರಿ ಇತ್ಯಾದಿ ಸೂಚಿಸುವ
ಉದ್ಗಾರದ ಮಾತು
ಗಣತಿಂಥಿಣಿ–ಗಣ ಸಮೂಹ,
ಗಣನೆ–ಲೆಕ್ಕ
ಗಮನ–ನಡಿಗೆ
ಗಮನಗೆಡು–ನಡೆತಪ್ಪು
ಗಮಿತಮುಖ–ಮರೆಯಾದಮುಖ
ಗರಡಿ–ವ್ಯಾಯಾಮಶಾಲೆ
ಗರಳ–ವಿಷ
ಗರುವ–ಶ್ರೇಷ್ಠ, ಶಕ್ತಿಯುಳ್ಳವ, ಧೀರ
ಗಸಣೆ–ಗೋಜು, ಗೊಡವೆ
ಗಹ್ವರ–ಗವಿ
ಗಳಗರ್ಜನೆ–ದೊಡ್ಡ ಕಂಠದ ಧ್ವನಿ
ಗಾರುಡ–ಮಂತ್ರವಿದ್ಯೆ
ಗಾರುಮಾತು–ಸುಳ್ಳು ಹೇಳಿಕೆ
ಗಾವಳಿ–ಗದ್ದಲ
ಗಿಟಿಗಿಟಿಜಂತ್ರ–ಶಿಥಿಲವಾದ ಶರೀರ, ಎಲುವಿನ ಹಂದರ
ಗುಡಿ–ಧ್ವಜ
ಗುಡುಗೂರು–ಬೆನ್ನುಬಾಗು, ಕುಗ್ಗು
ಗುಡ್ಡುಗಳು–ಶಿಷ್ಯರು

ಗುತ್ತು-ಚುಚ್ಚು
ಗುಪಿತ-ಗುಪ್ತ
ಗುರುಕರಜಾತ-ಗುರುವಿನ ಅನುಗ್ರಹಕ್ಕೆ
ಪಾತ್ರನಾದವನು
ಗೂಡಾಗು-ಆಧಾರವಾಗು
ಗುರೂಪಾವಸ್ತೆ-ಗುರುವಿನ
ಉಪದೇಶ, ಗುರುಸ್ತುತಿ
ಗೆಜ್ಜಲು-ಗೊರಲೆ
ಗೆರಸಿ-ಕೆರಸಿ, ಪುಟ್ಟಿ
ಗೆಲ್ಲಗೂಳಿತನ-ಗೆಲ್ಲಬೇಕೆಂಬ ಹಠ
ಗೊಂದಣ-ಗುಂಪು, ಸಮೂಹ
ಗೊಂದಣಗೊಳ್ಳು-ಗೊಂದಲವಾಗು,
ಗದ್ದಲವಾಗು
ಗೊತ್ತು-ಗುರಿ, ನಿಶ್ಚಿತಸ್ಥಾನ, ನಿಯಮ
ಗೋಕುಲ-ದನಗಳ ಹಿಂಡು
ಗೋಚರಿಸು-ಕಾಣಿಸು
ಗೋಪತಿಯಣ್ಣ-ಬಸವ
ಗೋರಿಕಲ್ಲಮಾಡು-ಸಮಾಧಿಮಾಡು
ಗೋರೋಜನ-ಹಳದಿಬಣ್ಣದ ಒಂದು ಸುಗಂಧ
ದ್ರವ್ಯ
ಗೋವು-ಆಕಳು
ಗೋಸಾಸಿರ-ಸಾವಿರಗೋವುಗಳು,
ಸಾವಿರ ಕಿರಣಗಳು
ಗ್ರಹ-ಭೂತ
ಘಟ-ಗಡಿಗೆ, ದೇಹ, ಕೊಡ
ಘಟ್ಟಿಸು-ಹೊಡೆ
ಘನ-ದೊಡ್ಡದು, ಪರಬ್ರಹ್ಮ
ಘರಟ್ಟ-ಬೀಸುವ ಕಲ್ಲು
ಘಾತ-ಉದ್ದಳತೆ, ಆಳ
ಘಾತಗಳೆ-ಅಂಬಿಗರು
ಉಪಯೋಗಿಸುವಗಳ, ಕೋಲು
ಘಾಯಖಂಡಿ-ಘಾಯದ ತೂತು
ಘಾಸಿಮಾಡು-ಕೆಡಿಸು
ಘಾಸಿಯಾಗು-ತೊಂದರೆಗೀಡಾಗು
ಘೃತ-ತುಪ್ಪ
ಘೂಳಿಡು-ಕೂಗು, ಒದರು

ಚ-ಛ

ಚಂದನ-ಗಂಧದ ಗಿಡ
ಚಕ್ಷು-ಕಣ್ಣು
ಚತುರ್ದಶ-ಹದಿನಾಲ್ಕು
ಚತುರ್ಭುಜ-ನಾಲ್ಕು ಭುಜ
ಚತುರ್ಮುಖ-ನಾಲ್ಕು ಮುಖ ಉಳ್ಳವ
ಚರ್ಮ್ಮಾವುಗೆ-ಪಾದರಕ್ಷೆ, ಚಪ್ಪಲಿ
ಚರ-ಜಂಗಮ, ಸೇವಕ
ಚರಣ-ಪಾದ
ಚರಣಾಂಭೋಜ-ಪಾದಕಮಲ
ಚರರು-ಪರಿಚಾರಕರು
ಚರಸೇವೆ-ಜಂಗಮ ಸೇವೆ
ಚರಿಸಾಡು-ಅಡ್ಡಾಡು
ಚಾಪ-ಬಿಲ್ಲು (ಕಾಮನ ಬಿಲ್ಲು)
ಚಿಕ್ಕದಣ್ಣಾಯಕರು-ಚೆನ್ನಬಸವಣ್ಣ
ಚಿತ್ತರಟ್ಟೆಕಾಯಿ-ಒಳಗೆ ಹುರುಳಿಲ್ಲದ
ಒಂದು ಬಗೆಯ ಕಾಯಿ
ಚಿತ್ತವಿಚ್ಛಂದವಾಗು-ಮನಸ್ಸು ವಿಚಲಿತವಾಗು
ಚಿದಂಬರ-ಜ್ಞಾನವೆಂಬ ವಸ್ತ್ರ
ಚಿದಹಂತೆ-ನಾಮ ಜ್ಞಾನಸ್ವರೂಪನೆಂಬಭಾವ
ಚಿರುಪಾಲು>ಚಿನಿಪಾಲು-ಚೆನ್ನಾಗಿ ಕಾಸಿದ ಹಾಲು
ಚಿಲುಪಾಲಘಟ್ಟಿ-ಕಾಯ್ದ ಹಾಲಿನ ಗಡಿಗೆ
ಚುಳುಕು-ಅಂಗೈ ಮಧ್ಯಭಾಗ
ಚೂತಪಲ್ಲವ-ಮಾವಿನ ಚಿಗುರು
ಚೆಕ್ಕನೆ-ಬೇಗನೆ
ಚೆಚ್ಚರ-ವೇಗ, ಬೇಗ, ಜಾಗ್ರತೆ
ಚೋದ್ಯ-ಅಚ್ಚರಿ, ಆಶ್ಚರ್ಯ
ಚೋರ-ಕಳ್ಳ
ಚೋಹ-ವೇಷ, ರೂಪ

ಚೌದಂತ–ಐರಾವತ, ಇಂದ್ರನ ಆನೆ
ಛತ್ತೀಸ–ಮೂವತ್ತಾರು
ಛಪ್ಪನ್ನ–ಐವತ್ತಾರು
ಛೇದಿಸು–ಕತ್ತರಿಸು
ಛೇದ್ಯ–ಕತ್ತರಿಸುವವ

ಜ–ಝ

ಜಂಗುಳಿ–ಜನರ ಗುಂಪು
ಜಂಘೆ–ಕಿರುತೊಡೆ
ಜಂಜಡ–ತೊಂದರೆ
ಜಗನ್ಮಯ–ಲೋಕವ್ಯಾಪಿ
ಜಜ್ಜರಂಬೋಗು–ಹೌಹಾರು
ಜಟಾಮಕುಟ–ತಲೆ ಕಿರೀಟ
ಜಠರ–ಹೊಟ್ಟೆ
ಜತ್ತಿಗೆ–ಎತ್ತಿನ ಕೊರಳಿಗೆ ಕಟ್ಟುವ ಪಟ್ಟಿ, ಜೋಡಿ
ಜರಾಮರಣ–ಮುಪ್ಪು, ಸಾವು
ಜಲ–ನೀರು
ಜಲಗರ–ಬಂಗಾರದ ಕಣ ಕೂಡಿದ
ಉಸುಕು
ಜಲಧಿ–ಸಮುದ್ರ
ಜಲಬಿಂದು–ನೀರ ಹನಿ
ಜಲ್ಲೆ–ದೊಡ್ಡ ಬುಟ್ಟಿ
ಜವನಿಕೆ–ಪರದೆ
ಜವಳಿಪಂಕ್ತಿ–ಎರಡು ಸಾಲು
ಜಾಗರ–ಎಚ್ಚರ
ಜಾತ–ಹುಟ್ಟಿದ
ಜಾಳಿಗೆ–ಚೀಲ, ಹಮ್ಮಿಣಿ
ಜೀಮೂತ–ಮೇಘ
ಜಿಹ್ವೆ–ನಾಲಗೆ
ಚೀನಾಂಬರ–ಶ್ರೇಷ್ಠಬಟ್ಟೆ
ಜುಗ–ಯುಗ
ಜೂಬು–ಜಂಪು, ಮರವೆ, ಜುಮ್ಮು
ಜೂಳಿ–ಕಮಂಡಲ ನಳಿಕೆ, ಬಾಯಿ
ಜಜೌ–ತಿರಸ್ಕರಿಸು
ಝುಂಝೂಮಾರುತ–ಸುಂಟರಗಾಳಿ, ಬಿರುಗಾಳಿ
ಝುಲ್ಲರಿ–ಜಾಲರಿ
ತಟಿಲ್ಲತೆ–ಮಿಂಚಿನ ಗೊಂಚಲು

ಟ–ಠ–ಡ

ಟೊಪ್ಪರ–ಟೊಪ್ಪಿಗೆ, ಕುಲಾಯಿ
ಠಕ್ಕುಠವಾಳ–ಕಪಟ, ಮೋಸ
ಠಾವು–ಸ್ಥಳ
ಠೊಪ್ಪರ–ಟೊಪ್ಪಿಗೆ
ಡಂಬಕ–ಡಂಭಾಚಾರಿ
ಡಂಬುಡಳಹು–ಹುರುಳಿಲ್ಲದ
ಡಿಂಬ–ದೇಹ

ತ

ತಂಡುಲ–ಅಕ್ಕಿ
ತಕ್ಕೈಸು–ಆಲಿಂಗಿಸು
ತಕ್ರ–ಮಜ್ಜಿಗೆ
ತಟಾಕ–ಕೆರೆ, ಕೊಳ
ತಟ್ಟೆ–ತಾಟು
ತಡಹು–ಎಡವು
ತತ್ತರದಟೆ–ಕತ್ತರಿಸು
ತತ್ತುಗೊತ್ತು–ಒಂದೇ ಸ್ಥಾನ
ತಥ್ಯಮಿಥ್ಯ–ಸತ್ಯ ಸುಳ್ಳು
ತದುಗತನಾಗು–ಮಗ್ನನಾಗು, ಲೀನನಾಗು
ತದುಗತವಾಗು–ಅದರಂತೆ ಆಗು
ತದ್ಗತ–ಮಗ್ನ, ಲೀನ, ಐಕ್ಯ
ತದ್ಗತವಾಗು–ಒಂದಾಗು, ಬೆರೆ
ತನು–ದೇಹ
ತಮ–ಕತ್ತಲೆ
ತಮಂಧ–ಕತ್ತಲು
ತರಗೆಲೆ–ಒಣಗಿದ ಎಲೆ
ತರಹರ–ತಾಳ್ಮೆ, ಸಹನೆ

ತರಹರವಾಗು–ಐಕ್ಯವಾಗು, ಲೀನವಾಗು
ತರಳತನ–ಹುಡುಗುತನ
ತರಿ–ಕತ್ತರಿಸು
ತರು–ವೃಕ್ಷ, ಗಿಡ
ತಕ್ಕೈಸು–ಮುದ್ದಾಡು, ಅಪ್ಪಿಕೊ
ತಲೆದಡಹು–ತಲೆಯ ಮೇಲೆ ಕೈಯಾಡಿಸು, ಪ್ರೀತಿತೋರು
ತಲೆಬಾಲಗೆಡು–ದಿಕ್ಕುಗೆಡು
ತಲೆಯನರಿ–ತಲೆಯನ್ನು ಕತ್ತರಿಸು
ತಲೆವಾರನಿಕ್ಕು–ಬಾಗು, ತಲೆಯನ್ನು ಬಂಧಿಸು
ತವರಾಜ–ಒಂದು ಬಗೆಯ ಸಕ್ಕರೆ
ತವಕ–ಕುತೂಹಲ
ತಾವರೆ–ಕಮಲ
ತಳವೆಳಗಾಗು–ಚಿಂತೆಗೊಳಗಾಗು, ಬೆರಗಾಗು
ತಳಿ–ಚಿಮುಕಿಸು
ತಳುವಳದಿರು–ಏಕವಾಗಿರು, ಬೆರೆತಿರು
ತಳುವು–ತಡಮಾಡು,ವ್ಯಾಕುಲ
ತಳುವೆಳಗಾಗು–ನಿಬ್ಬೆರಗಾಗು
ತಲ್ಲೀಯವಾಗು–ಮಗ್ನವಾಗಿರುವಿಕೆ
ತಳ್ಳು–ನೂಕು
ತಹೆನು–ತರುವೆನು
ತ್ರಜ–ತಿರ್ಯಕ್‌ಜಾತಿ
ತಾಗು ನಿರೋಧ–ಅಡ್ಡಿ, ಆತಂಕ
ತಾತ್ಪರ್ಯ–ಅರ್ಥ, ಉದ್ದೇಶ, ಆಕಾಶ
ತಾರಕಿ–ನಕ್ಷತ್ರ, ಜ್ಯೋತಿ
ತಾರೇಶ–ಚಂದ್ರ
ತಾರ್ಕಣೆ–ಹೊಂದಾಣಿಕೆ
ತಾರ್ಕಣೆ–ಪ್ರತ್ಯಕ್ಷ, ಇದಿರು
ತಾಳೋಷ್ಠ್ಯ–ಗಂಟಲು, ತುಟಿ
ತಿಂಥಿಣಿ–ಸಮೂಹ
ತಿಂಬ–ತುರಿಸುವ

ತಿಮಿರ–ಕತ್ತಲೆ, ಅಜ್ಞಾನ
ತಿಲ–ಎಳ್ಳು
ತಿಳುಹು–ತಿಳಿಸು
ತೀವು–ತುಂಬು
ತುಂಬಿ–ಭ್ರಮರ, ತುಂಬಿಕೊಂಡು
ತುಡುಕು–ತಾಕು, ತಿವಿ, ಹಿಡಿ
ತುರ–ವೇಗ
ತುರಗ–ಕುದುರೆ
ತುಷ–ಹೊಟ್ಟು, ತವುಡು
ತೂರ್ಯ–ಎತ್ತರದ ದನಿ, ನಾಲ್ಕನೆಯವಸ್ಥೆ
ತೃಣ–ಹುಲ್ಲುಕಡ್ಡಿ
ತೃಷೆ–ನೀರಡಿಕೆ
ತೆತ್ತಿಗ–ಸೇವಕ, ಹೊಣೆಗಾರ, ಮಧ್ಯಸ್ಥ, ಸಂಬಂಧಿ
ತೆತ್ತೀಸಕೋಟಿ–೩೩ ಕೋಟಿ
ತೆರಹು–ಅವಕಾಶ, ಕೊರತೆ
ತೆಱಹುಗುಡು–ಅವಕಾಶ ಮಾಡು
ತೆಱಹುಮರಹು–ತೆಗೆಯುವುದು, ಮುಚ್ಚುವುದು
ತೇಂಕಾಡು–ತೇಲಾಡು
ತೇಜ–ಮಹಾಪ್ರಕಾಶ, ಬೆಳಕು, ಅಗ್ನಿ
ತೇಜಿ–ಕುದುರೆ
ತೈಲ–ಎಣ್ಣೆ
ತೊಟ್ಟು–ತುಂಬು
ತೊಡಕು–ತೊಂದರೆ
ತೊಡೆ–ದೂರಮಾಡು, ಅಳುಕಿಸು
ತೊತ್ತು–ಸೇವಕ, ಸೇವಕಿ
ತೊತ್ತಳದುಳಿ–ಹಾಳಾಗುವಂತೆ ತುಳಿ, ನಾಶಮಾಡು
ತೊತ್ತಿರು–ಆಳುಗಳು
ತೊನೆ–ಜೋತಾಡು
ತೊರೆ–ಬಿಡು
ತೊಱೆ–ಹೊಳೆ, ನದಿ
ತೊಲಗು–ಹೋಗು
ತೋಟಿ–ಜಗಳ
ತೋಯ–ನೀರು

ತೋರಿಹ–ದೊಡ್ಡದಾದ
ತೋಹು–ತೋಯ, ನೀರು
ತ್ರಾಹಿ–ರಕ್ಷಿಸು, ಕಾಪಾಡು
ತ್ರಿಜಗ–ಮೂರುಲೋಕ
ತ್ರಿಭುವನ–ಮೂರುಲೋಕ
ತ್ವಕ್ಕು–ತ್ವಚೆ, ಚರ್ಮ
ಥಳಿಸು–ಕುಟ್ಟು, ಹೊಡೆ

ದ

ದಂದುಗ–ತೊಂದರೆ, ಕಷ್ಟ
ದಂದುಗದೊಡಲು–ಕೋಟಲೆಯ ದೇಹ
ದಂದುಗದೋಗರ–ಪೀಡಿಸಿ ತಂದ ಅನ್ನ
ದಗ್ಧ–ಸುಟ್ಟ
ದಗ್ಧಪಟ–ಸುಟ್ಟ ಅರಿವೆ
ದಗ್ಧವಾಗು–ಸುಡು
ದಡಿಕಾರ–ದೊಣ್ಣೆ ಹಿಡಿದುಕೊಂಡವ, ದ್ವಾರಪಾಲಕ
ದಧಿ–ಮೊಸರು
ದನುಜರು–ರಾಕ್ಷಸರು
ದರಹಸಿತವದನ–ಮುಗುಳುನಗೆಮುಖ
ದರ್ದುರ–ಕಪ್ಪೆ
ದರ್ಪಣ–ಕನ್ನಡಿ
ದರ್ವಿ–ಸಟ್ಟುಗ, ಸೌಟು
ದಶಭುಜ–ಹತ್ತು ಭುಜ
ದಶಮುಖ–ಹತ್ತು ಮುಖ, ರಾವಣ
ದಶವಾಯು–ಹತ್ತುವಾಯು
ದಶಾಂಗ–ಹತ್ತು ಅಂಗ
ದಸರಿದೊಡಕು–ಬಿಚ್ಚಲು ಕಷ್ಟವಾದ ಗಂಟು
ದಳ–ದೇಟು
ದಳದುಳ–ಸೂರೆ ಮಾಡು, ಸುಲಿಗೆಮಾಡು
ದಾಡೆ–ಹಲ್ಲು
ದಾಯಗಾರಿಕೆ–ಉಳಿಸಿಕೊಳ್ಳುವ ಆಸೆ
ದಾವ–ಕಾಡು
ದಾವಾನಲ–ಕಿಚ್ಚು, ಕಾಡ್ಗಿಚ್ಚು
ದಾಸೋಹಂ–ನಾನು ದಾಸ
ದಿಕ್ಕನೆ–ಒಮ್ಮೆಲೆ, ದಿಗ್ಗನೆ
ದಿಗಂಬರ–ಬತ್ತಲೆ, ದಿಕ್ಕೆಂಬ ಬಟ್ಟೆ
ದಿಟ–ನಿಜ, ಸತ್ಯ
ದಿಟ್ಟಿಸು–ನೋಡು
ದಿನಕರ–ಸೂರ್ಯ
ದಿನಮಣಿ–ಸೂರ್ಯ
ದಿಬ್ಯ–ದಿವ್ಯ, ಸಾಕ್ಷಿ
ದಿಮ್ಮನೆ–ಥಟ್ಟನೆ
ದಿವ್ಯಾಂಬರ–ಬೆಲೆಬಾಳುವ ಬಟ್ಟೆ
ದೀಪ್ತಿ–ಬೆಳಕು, ಪ್ರಕಾಶ
ದೀಹ–ಬಲಿಪಶು, ಕಾಡುಮೃಗಗಳನ್ನು
ಆಕರ್ಷಿಸಲು ಕಟ್ಟಿದ ಮೃಗ
ದೃಕ್ಕು–ದೃಷ್ಟಿ, ಕಣ್ಣು
ದೃಷ್ಟ–ಕಾಣುವುದು
ದೃಷ್ಟಿಯಾನವು–ಕಣ್ಣಿಗೆ ನಿಲುಕವು
ದೇಗುಲ–ದೇವಸ್ಥಾನ, ಗುಡಿ
ದೇವತರು–ಕಲ್ಪವೃಕ್ಷ
ದೇವಾಂಗ–ಬಟ್ಟೆ
ದೇಹಾರ–ದೇವರಿಗೆ ಅರ್ಪಿಸುವ ನೈವೇದ್ಯ, ಪೂಜೆ, ದೇವಾಗಾರ,
ದೇವಾಲಯ
ದೇಹೋಹಂ–ನಾನೇ ದೇಹ
ದ್ವಂದ್ವ–ಎರಡು
ದ್ವಾತ್ರಿಂಶತ್–ಮೂವತ್ತೆರಡು
ದ್ವಾದಶ–ಹನ್ನೆರಡು
ದ್ವಾರವಟ್ಟ–ಬಾಗಿಲು, ಮಹಾದ್ವಾರ, ಗೋಪುರ
ದ್ವಿಜ–ಪಕ್ಷಿ
ದ್ವಿವಿಧ–ಎರಡು ವಿಧ
ಧನು–ಬಿಲ್ಲು
ಧರೆ–ಭೂಮಿ
ಧವಳ–ಬಿಳಿ
ಧವಳಾರ–ಬಿಳಿಯ ಸುಣ್ಣದ ಮನೆ
ಧವಳಾಲಯ–ಬಿಳಿಯಮನೆ
ಧಾತುಗೆಡು–ಶಕ್ತಿಗುಂದು

ಧಾವತಿ–ಕಷ್ಟ, ನೋವು

ಧೃತಿ–ಧೈರ್ಯ

ನ

ನಂಜು–ವಿಷ

ನಂದು–ಆರು

ನಗೆವೆಣ್ಣು–ಓರೆಗಿತ್ತಿ

ನಟ್ಟೈಸಿ–ನೀಟಾಗಿ

ನನೆ–ಮೊಗ್ಗೆ

ನನೆದ ಹೊಜಿಸು–ತೊಯ್ದ ಪಾರಿವಾಳ

ನನ್ನಿ–ಸತ್ಯ

ನಭ–ಆಕಾಶ

ನಯನ–ಕಣ್ಣು

ನಯವಾಗು–ಹೊಂದಿಕೆಯಾಗು

ನವ–ಒಂಬತ್ತು

ನವಖಂಡ–ಒಂಬತ್ತು ಖಂಡ

ನವನೀತ–ಬೆಣ್ಣೆ

ನವಮಾಸ–ಒಂಬತ್ತು ತಿಂಗಳು

ನವಮೌಕ್ತಿಕ–ಹೊಸ ಮುತ್ತು

ನಷ್ಟಮೂಲ–ಒಣಗಿದ ಬೇರು

ನಾಭಿ–ಹೊಕ್ಕಳು

ನಾಮಡಿಂಗರಿಗ–ನಾಮಸ್ಮರಣೆಯ ಸೇವಕ

ನಾಯಕನರಕ–ಘೋರ ನರಕ, ಕಷ್ಟ

ನಾಸಿಕ–ಮೂಗು

ನಾಸ್ತಿ–ಇಲ್ಲದಿರುವಿಕೆ

ನಾಹಂ–ನಾನು ಎಂಬ ಭಾವನೆಯಿಂದ ಇರುವುದು

ನಿಃಪತಿಯಾಗು–ತನ್ಮಯವಾಗು, ಐಕ್ಯವಾಗು

ನಿಕರ–ಸಮೂಹ, ಗುಂಪು

ನಿಕುರುಂಬ–ಸಮೂಹ

ನಿಕ್ಷೇಪಿಸು–ಹೂಳಿಡು, ಅಡಗಿಸು

ನಿಚ್ಚ–ಯಾವಾಗಲೂ

ನಿಜ–ಆತ್ಮಸ್ವರೂಪ, ಸತ್ಯ

ನಿಜನಿವಾಸ–ತನ್ನಮನೆ, ಸ್ವಸ್ವರೂಪದಲ್ಲಿ ನಿಂದಿರುವುದು

ನಿಜವರ್ತನೆ–ನಿಜಾಚರಣೆ

ನಿಜವನ್ನೈದು–ಗುರಿಸೇರು

ನಿಧಾನ–ಗುಪ್ತನಿಧಿ, ನೆಲದಲ್ಲಿ ಹೂಳಿಟ್ಟ ಸಂಪತ್ತು

ನಿಧಿನಿಧಾನ–ಹೂತಿಟ್ಟ ಸಂಪತ್ತು

ನಿಮಿರ್–ನೆಟ್ಟಗಾಗು, ಹರಡು, ಚಾಚು

ನಿರಂಗ–ಅಂಗವಿಲ್ಲದ

ನಿರಘ–ಪಾಪರಹಿತ

ನಿರವಯ–ಬಯಲು, ಐಕ್ಯ

ನಿರಸೂಯ–ಅಸೂಯೆ ಇಲ್ಲದ

ನಿರಾಕುಳ–ದೃಢ, ಕಳವಳವಿಲ್ಲದ

ನಿರಾಮಯ–ರೋಗವಿಲ್ಲದ

ನಿರಾಲಂಬ–ಅವಲಂಬನ ರಹಿತ, ಸ್ವತಂತ್ರ

ನಿರಾಳ–ನಿರ್ಮಲ, ಪರಿಶುದ್ಧ, ನಿಶ್ಚಿಂತ, ಬ್ರಹ್ಮ, ಬಯಲು

ನಿಱಿಗೆ–ಕ್ರಮ

ನಿರುತ–ಸತ್ಯ, ಆಸಕ್ತ

ನಿರೂಪ–ಪತ್ರ, ಓಲೆ, ಆಜ್ಞೆ

ನಿರೂಪಿಸು–ಹೇಳು

ನಿರ್ಜರಾಮೃತ–ಮುಪ್ಪು ಬರದಂತೆ ಕಾಯುವ ಅಮೃತ

ನಿರ್ದೇಶ–ಸೂಕ್ಷ್ಮಭೇದ

ನಿರ್ಭಾವ–ಭಾವವಿಲ್ಲದ

ನಿರ್ಮಿತಗಳು–ಹುಟ್ಟಿದ ವಸ್ತುಗಳು

ನಿರ್ಮೂಲವಾಗು–ಬುಡಸಹಿತ ಇಲ್ಲವಾಗು, ನಾಶವಾಗು

ನಿರ್ವಾಣ–ವೈರಾಗ್ಯ, ಮೋಕ್ಷ

ನಿರ್ವಾಹವಾಗು–ಐಕ್ಯವಾಗು, ಪೂರ್ಣತೆಹೊಂದು

ನಿರ್ವಿಕಲ್ಪ–ಅಭಿನ್ನ

ನಿಱಿಗೆ–ಮಡಿಕೆ, ರೀತಿ

ನಿಲುಕಡೆ–ಆಶ್ರಯಸ್ಥಾನ,ಅವಸಾನಭೂಮಿ

ನಿಃಕಲ–ಅಖಂಡ, ಖಂಡವಿಲ್ಲದ, ಪರಬ್ರಹ್ಮ

ನಿಃಪತಿ–ಮುಕ್ತಾಯ, ಮೋಕ್ಷ

ನಿವಾಸ–ಮನೆ, ಸ್ಥಳ

ನಿವಾಳಿ–ನೆದರು ತೆಗೆಯುವುದು, ಆರತಿ

ನಿವಾಳಿಸು–ದೃಷ್ಟಿತೆಗೆ

ನಿವೃತ್ತಿ–ಬಿಡುಗಡೆ
ನಿಶ್ಶಂಕ–ಶಂಕೆಯಿಲ್ಲದ, ಸಂಶಯ ರಹಿತ
ನಿಹಿತ–ವಿರಹಿತ,ಯೋಗ್ಯ ಇಟ್ಟ
ನೀಕರಿಸು–ನಿರಾಕರಿಸು, ಬಿಡು
ನೀರಾಂಜನ–ಆರತಿ ಎತ್ತುವುದು
ನೀಸು–ನೀಗಿಸು
ನುತಿಸು–ಸ್ತುತಿಸು
ನುಲಿ–ಹುಲ್ಲಿನ ಹಗ್ಗ
ನುಸುಳುಗಂಡಿ–ಗುಪ್ತದ್ವಾರ, ಸಣ್ಣಕಿಂಡಿ
ನೆಗಹು–ಮೇಲಕ್ಕೆತ್ತು
ನೆನಹು–ಧ್ಯಾನ
ನೆಮ್ಮು–ನಂಬು
ನೆಮ್ಮುಗೆ–ನಂಬುಗೆ, ಸಮಾಧಾನ
ನೆರವಿ–ಗುಂಪು
ನೆಱೆ–ತುಂಬು, ಚೆನ್ನಾಗಿ
ನೆರೆ–ಕೂಡು, ಭೋಗಿಸು
ನೆಲೆ–ಸ್ಥಾನ, ಆಳ
ನೆಲೆವನೆ–ನಿಜಮನೆ, ಆವಾಸಸ್ಥಾನ
ನೇಣು–ಹಗ್ಗ
ನೇತ್ರ–ಕಣ್ಣು
ನೇಹ–ಪ್ರೀತಿ
ನೈದಿಲೆ–ಕಪ್ಪು ಕಮಲ
ನೊಸಲ ಕಣ್ಣು–ಹಣೆಗಣ್ಣು
ನೊಸಲಬರಹ–ಹಣೆಬರಹ
ನೊಸಲು–ಹಣೆ
ನೋಂಪಿ–ವ್ರತ
ನನ್ನಿ–ಸತ್ಯ

ಪ–ಫ
ಪಂಕ–ಕೆಸರು
ಪಂಗುಳ–ಹೆಳವ
ಪಂಚಮುಖ–ಐದುಮುಖ
ಪಂಚವಕ್ತ್ರ–ಐದು ಮುಖ
ಪಂಚಾಶತ್‌ಕೋಟಿ–ಐನೂರು ಕೋಟಿ
ಪಚ್ಚೆ–ಹಸಿರು ರತ್ನ, ಮರಕತಮಣಿ
ಪಟ–ಚಿತ್ರ, ಅರಿವೆ
ಪಟ್ಟಾವಳಿ–ರೇಷ್ಮೆ ಬಟ್ಟೆ
ಪಡಿದೊತ್ತು–ಆಳಿನ ಆಳು
ಪಡುಗ–ಉಗುಳುವ ಪಾತ್ರೆ
ತಣಿಯಲೆರೆ–ತೃಪ್ತಿಯಾಗುವವರೆಗೆ ನೀಡು
ಪಥ–ಹಾದಿ, ದಾರಿ
ಪ್ರದಕ್ಷಿಣ–ಸುತ್ತುವರಿಯುವುದು
ಪದತಳ–ಪಾದದ ಕೆಳಭಾಗ
ಪದನುತಿ–ಪಾದಸೇವೆ
ಪದುಮ–ಪದ್ಮ, ಕಮಲ
ಪನ್ನಗ–ಸರ್ಪ, ಹಾವು
ಪನ್ನಗಧರ–ಶಿವ
ಪನ್ನಿರ್ಖಂಡುಗ–ಹನ್ನೆರಡು ಖಂಡುಗ
ಪರಮಕಾಷ್ಠೆ–ಪರಮೋತ್ಕರ್ಷ
ಪರಶು–ಕೊಡಲಿ
ಪರಾಮರಿಸು–ವಿಚಾರಿಸು
ಪರಿ–ರೀತಿ
ಪರಿಣಾಮ–ಆನಂದ
ಪರಿಪ್ರಮಾಣ–ಸುತ್ತಳತೆ
ಪರಿಭವ–ಸಂಸಾರ, ಹುಟ್ಟುಸಾವಿನ ಚಕ್ರ
ಪರಿಮಳದಿಂಡೆ–ಹೂವಿನಮಾಲೆ
ಪರಿಮಿತ–ಏಕಾಂತಗೃಹ
ಪರಿಯಾಣ–ಹರಿವಾಣ, ತಾಟು
ಪರಿಯಾಯ–ಸ್ವಭಾವ, ಭೇದ, ಕ್ರಮ
ಪರಿಜ್ಞಾನಿ–ಪೂರ್ಣಜ್ಞಾನಿ
ಪರುಷ–ಮುಟ್ಟಿದ್ದನ್ನು ಚಿನ್ನವಾಗಿಸುವ ಲೋಹ
ಪರುಷವೇಧಿ–ತನ್ನನ್ನು ಸೋಕಿದ ಇತರ ಲೋಹಗಳನ್ನು ಚಿನ್ನವಾಗಿ
ಪರಿವರ್ತಿಸುವ ಸಿದ್ಧಿಯ ಸಾಧನೆ
ಪರ್ಬು–ಹುಬ್ಬು
ಪಲ್ಲಟ–ತಿರುವು ಮುರುವು
ಪಲ್ಲವಿಸು–ಚಿಗುರು, ಹಬ್ಬು
ಪವಣು–ಹವಣು, ರೀತಿ
ಪವನ–ಗಾಳಿ

ಪವಳ–ಹವಳ
ಪಸರ–ಅಂಗಡಿ
ಪಸರ–ಸಾಮಗ್ರಿ, ಸಮೂಹ
ಪಸರಿಸು–ಹಬ್ಬು, ಹರಡು
ಪಳಹರ–ಹಣ್ಣಿನದಂಡೆ
ಪಾಕ–ಅನ್ನ, ಅಡುಗೆ
ಪಾಕಗೂಳ್–ಪಾಕವಾದ ಬೆಲ್ಲ
ಪಾದಕ್ರಾಂತನಾಗು–ಪಾದದ ಮೇಲೆ ಬೀಳು
ಪಾಯಿಸು–ದಾಟಿಸು
ಪಾವಕ–ಬೆಂಕಿ
ಪಾಷಾಣ–ಕಲ್ಲು
ಪಾಳೆಯ–ಶಿಬಿರ, ಸೈನ್ಯ
ಪಿಂಡಿಗೆ–(ಪೀಠಿಕೆ)ಲಿಂಗದ
ಆಧಾರಪೀಠ, ಗದ್ದುಗೆ
ಪಿಕ–ಕೋಗಿಲೆ
ಪಿಡಿ–ಹಿಡಿ
ಪಿಪಾಸೆ–ನೀರಡಿಕೆ, ಬಾಯಾರಿಕೆ
ಪಿಶಿತ–ಮಾಂಸ
ಪೀಠ–ಆಧಾರ, ಗದ್ದುಗೆ
ಪೀತ–ಹಳದಿ
ಪುಟವಿಕ್ಕು–ಕರಗಿಸಿ ಶುದ್ಧಮಾಡು
ಪುಣ್ಯಾಂಗನೆ–ಹೆಂಡತಿ, ಕುಲಸ್ತ್ರೀ
ಪುತ್ಥಳಿ–ಗೊಂಬೆ
ಪುನರಪಿ–ಮರಳಿ
ಪುನರ್ಜಾತ–ಮರುಹುಟ್ಟು ಪಡೆದವ
ಪುರುಷ–ಗಂಡ
ಪುರುಷಮೃಗ–ಮನುಷ್ಯನಂತೆ
ಮುಖವುಳ್ಳ ನಾಲ್ಕುಕಾಲಿನ ಪ್ರಾಣಿ
ಪುರ್ಬು–ಹುಬ್ಬು
ಪುಷ್ಯರಾಗ–ಹೂವಿನ ಬಣ್ಣ
ಪುಳಿಂದ–ಬೇಡ
ಪೂರ್ಣೇಂದು–ಪೂರ್ಣಚಂದ್ರ
ಪೆರ್ಬುಲಿ–ಹೆಬ್ಬುಲಿ
ಪೆರ್ಮೆ–ಹಿರಿಮೆ, ಆಧಿಕ್ಯ
ಪೈಸರ–ತಪ್ಪುವುದು, ಜಾರುವುದು,
ನುಣುಚಿಕೊಳ್ಳುವುದು
ಪೊಂಗವಾಟ–ಹೊನ್ನಿನ ಕವಾಟ
ಪೊಂಜಗುಲಿ–ಹೊನ್ನಿನ ಜಗುಲಿ
ಪೊಱವಾಱ–ಜಂಘೆ, ನಿತಂಬ
ಪ್ರಕ್ಷಾಲಿಸು–ತೊಳೆ
ಪ್ರಜ–ಜನತೆ, ಮನುಷ್ಯ
ಪ್ರಜ್ವಲಿಸು–ಪ್ರಕಾಶಿಸು
ಪ್ರಣತೆ–ಪಣತೆ, ಹಣತೆ
ಪ್ರಣವ–ಓಂಕಾರ
ಪ್ರತಾಪ–ಸಾಹಸ
ಪ್ರತಾಪ–ಪ್ರಭಾವ, ಪ್ರಕಾಶ
ಪ್ರತಿ–ಎರಡು
ಪ್ರತಿಷ್ಠೆ–ಸ್ಥಾಪನೆ, ಸ್ಥಾವರಲಿಂಗ
ಪ್ರಭಾಪುಂಜ–ಬೆಳಕಿನ ರಾಶಿ
ಪ್ರಮಾಣ–ಅಳತೆ
ಪ್ರಲಾಪ–ದುಃಖ
ಪ್ರಪರ–ಪ್ರಪದ, ಮುಂಗಾಲು
ಪ್ರಸಂಗ–ಸಂಭಾಷಣೆ, ಮಾತು
ಪ್ರಸಂಗಿಸು–ಮಾತನಾಡು
ಪ್ರಸಾದಗ್ರಾಹಿ–ಪ್ರಸಾದ ಸ್ವೀಕರಿಸಿದವ
ಪ್ರಸ್ತಾವ–ಸಂಧರ್ಬ
ಪ್ರಳಾಪಿಸು–ದುಃಖಿಸು
ಪ್ರಾಪ್ತ–ಸಿಕ್ಕ, ಯೋಗ್ಯ
ಫಣಿ–ಹಾವು, ಹಣೆ
ಫಣಿಸೂತ್ರ–ಸರ್ಪಬಂಧ
ಫಣೀಂದ್ರ–ಆದಿಶೇಷ
ಫಳ–ಹಣ್ಣು
ಫೌಜು–ಸೇನೆ

ಬ–ಭ

ಬಂಟ–ಸೇವಕ, ವೀರ, ಯೋಧ
ಬಂದಿ–ಸೆರೆಯಾಳು

ಬಂದಿಕಾರರು–ಸೆರೆಯಾಳುಗಳು
ಬಗರಿಗೆ–ನೀರಿಗಾಗಿ ತೋಡಿದ ಕುಳಿ, ಒರತಿ, ಸಣ್ಣಬಾವಿ
ಬಗಿ–ಹರಿ, ಸವರು, ಸೀಳು, ತೋಡು
ಬಗೆ–ರೀತಿ
ಬಟ್ಟೆ–ದಾರಿ, ಹಾದಿ
ಬಡಗವಾಗಿಲ–ಉತ್ತರದ್ವಾರ
ಬಡವರು–ತಿಳಿಯದವರು, ಅಜ್ಞಾನಿಗಳು
ಬಡಿಹ–ಹೊಡೆತ, ಪೆಟ್ಟು
ಬಣಗು–ಅಲ್ಪ, ಕ್ಷುದ್ರ
ಬಣ್ಣಗೆಯಮಾತು–ಬಣ್ಣದ ಮಾತು
ಬತ್ತೀಸ್–ಮೂವತ್ತೆರಡು
ಬಪ್ಪ–ಬರುವ
ಬಯಕೆ–ಇಚ್ಛೆ
ಬಯ್ಚಿಡು–ಬಚ್ಚಿಡು
ಬಯಲನುಡುಗು–ಬಯಲನ್ನು ಗುಡಿಸು
ಬಱುದೊರೆ–ಬತ್ತಿದಹೊಳ
ಬರಗು–ಒಂದು ಬಗೆಯ ಧಾನ್ಯ
ಬರಾಗ–ಬರುವಾಗ
ಬಲ್ಲಹ–ವಲ್ಲಭ) ಪತಿ ಒಡೆಯ
ಬಲ್ಲಿತ್ತು–ಬಲಿಷ್ಠವಾದುದು
ಬವರಿಗೊಡು–ವೇಗವಾಗಿ ಸುತ್ತು
ಬಸುಱು–ಹೊಟ್ಟೆ
ಬಹ–ಬರುವ
ಬಹಿಷ್ಕರಿಸು–ಹೊರಬರು, ಬಿಡು
ಬಳಿದಪ್ಪು–ದಾರಿತಪ್ಪು
ಬಳಸಿಬರು–ಸುತ್ತುವರಿದು ಬರು
ಬಳಸುದೋರಣ–ಸುತ್ತು ಕಟ್ಟಿದ ಮಾಲೆ
ಬಳ್ಳವಾಲು–ಒಂದು ಸೇರು ಹಾಲು
ಬಹಡೆ–ಬಂದರೆ
ಬಾಗಿಲವಾಡ–ಮಹಾದ್ವಾರ
ಬಾಗಿಲಗಾಹಿ–ದ್ವಾರಪಾಲಕ
ಬಾಣಸ–ಅಡುಗೆ
ಬಾದಳ–ತೂತು, ರಂಧ್ರ
ಬಾಯಿನದುಂಡೆ–ಬಾಗಿನದುಂಡೆ, ಕಾಣಿಕೆ
ಬಾವನ್ನ–ಐವತ್ತೆರಡು
ಬಾಸುಳ–ಬಾರು, ಗೆರೆ
ಬಾಹತ್ತರ–ಎಪ್ಪತ್ತೆರಡು
ಬಾಳಬಾಯಧಾರೆ–ಖಡ್ಗದ ಹರಿತವಾದ ಅಂಚು
ಬಿಂಬಿ–ಪ್ರತಿರೂಪ
ಬಿಜಯಮಾಡು–ಬಾ, ಬರು
ಬಿಜಯಂಗೈಯಿ–ಬರು
ಬಿಡುಬೀಸು–ಹಾರಿಬಿಡು, ಉದ್ದವಾದುದು
ಬಿತ್ತು–ಬೀಜ
ಬಿನ್ನಪ–ಬಿನ್ನಹ, ವಿನಂತಿ, ಬೇಡಿಕೆ
ಬಿನ್ನಾಣ–ಜಾಣ್ಮೆ, ಚಾತುರ್ಯ
ಬಿಮ್ಮು–ಗಾಂಭೀರ್ಯ, ಹೆಮ್ಮೆ, ಸೊಕ್ಕು
ಬಿಯ್ಯಗ–ಬೀಗ, ಕೀಲಿ
ಬಿಸಾಕು–ಒಗೆ, ಚೆಲ್ಲು
ಬಿಸಾಟು–ಒಗೆ
ಬೀಸರವಾಗು--ಇಲ್ಲವಾಗು, ಅಳಿದುಹೋಗು
ಬೀಸರವೋಗು–ಭಂಗವಾಗು, ಮುರಿ, ವ್ಯರ್ಥವಾಗು
ಬೀಳು–ಸಾಯು
ಬೀಳುಡಿಗೆ–ಉಟ್ಟು ಬಿಟ್ಟ ವಸ್ತ್ರ, ಬಿಸಾಕಿದ ಬಟ್ಟೆ
ಬುದ್ಬುದ–ಗುಳ್ಳೆ, ತೆರೆ
ಬೂರ–ಎಲವದಮರ
ಬೆಂತರ–ಭೂತ
ಬೆಂಬಳಿ–ಹಿಂಬದಿ, ಜೊತೆ, ಬೆನ್ನ ಹಿಂದೆ
ಬೆಚ್ಚಂತೆ–ಬೆರಸಿದಂತೆ, ಬೆಸೆದಂತೆ
ಬೆಡಗು–ರಹಸ್ಯ
ಬೆದಕು–ಕೆದರು, ಹುಡುಕು
ಬೆನ್ನಬಳಿಯವಳು–ಬೆನ್ನ ಹಿಂದೆ ಹುಟ್ಟಿದವಳು, ತಂಗಿ
ಬೆಬ್ಬಳಿಸು–ಗಾಬರಿಗೊಳ್ಳು, ಗಲಿಬಿಲಿಗೊಳ್ಳು
ಬೆರಸು–ಕೂಡು, ಸೇರು
ಬೆಸಗೊಳ್ಳು–ಕೇಳು
ಬೆಸನ–ಅಪ್ಪಣೆ
ಬೆಸಸು–ಹೇಳು

ಬೆಳವಿಗೆ–ಬಳ್ಳಿ, ಹೆಚ್ಚಳ
ಬೆಳಸು–ಬೆಳೆ, ಫಸಲು, ಕಾಳು, ಹಬ್ಬಿಸು
ಬೆಳುಗಾರ–ಬೆಸುಗೆಗಾಗಿ ಬಳಸುವ
ವಸ್ತು, ಬಳಗಾರ
ಬೆಳ್ಳ–ದಡ್ಡ, ಬೆಪ್ಪ, ಮೂಢ
ಬೆಳ್ಳಿಗ–ಬಿಳಿಯಬಣ್ಣದ ಆಕಳು
ಬೇಟ–ಆಕರ್ಷಣೆ, ಸೆಳೆತ
ಬೇತಾಳ–ಭೂತ,
ಬೇಯು–ಸುಡು
ಬೇಹ–ಬೇಕಾಗುವ
ಬೇಹು–ಗೂಢಚರ್ಯೆ
ಬೇಳು–ಮರುಳು
ಬೇಳುವೆ–ಬಲಿ, ಆಹುತಿ
ಬೊಬ್ಬೆ–ಬೊಗಳೆ
ಬೊಮ್ಮ–ಬ್ರಹ್ಮ
ಬೋನ–ಅನ್ನ
ಬೊಳಬೊಳ–ಬಳಬಳ
ಬೋಳೈಸು–ಸಂತೈಸು, ಸಮಾಧಾನ ಮಾಡು
ಬಱುಮಾತು–ಖಾಲಿ ಮಾತು, ಒಣಮಾತು
ಬಱುಸೂರೆಹೋಗು–ವ್ಯರ್ಥವಾಗಿ
ಹೋಗು, ಲೂಟಿಯಾಗು
ಭಂಗ–ನಾಶ
ಭಂಡ–ವಸ್ತು, ಸಾಮಗ್ರಿ
ಭಯಾರ್ಣವ–ಗಂಭೀರ ಸಮುದ್ರ
ಭರ–ಅವಸರ
ಭರಿತಬೋನ–ದೇವರ ಪ್ರಸಾದವೆಂದು
ಸೇವಿಸುವ ಅನ್ನ
ಭವನ–ಮನೆ
ಭವರಾಟಳ–ಹುಟ್ಟು ಸಾವಿನ ಚಕ್ರ
ಭವಸಿಂಧು–ಭವಸಾಗರ, ವಿಭೂತಿ
ಭಸ್ಮ–ಬೂದಿ
ಭಾಂಡ–ಗಡಿಗೆ, ಪಾತ್ರೆ
ಭಾಜನ–ಊಟ
ಭಾಜನ–ಪ್ರಸಾದದ ಬಟ್ಟಲು, ತಾಟು
ಭಾನು–ಸೂರ್ಯ
ಭಾವಜ–ಕಾಮ
ಭಾವಜಹರ–ಕಾಮಹರ, ಶಿವ
ಭಾಷೆ–ಪ್ರತಿಜ್ಞೆ, ಮಾತು
ಭಾಷೆಪ್ರಸಾದ–ಪ್ರಸಾದವಾಕ್ಯ,
ಗುರುಉಪದೇಶ
ಭಾಷೆಹೀನ–ವಚನಭ್ರಷ್ಟ
ಭಾಷೆಬೀಸರವೋಗು–ವಚನಭಂಗವಾಗು
ಭಾಸುರ–ಸೂರ್ಯ
ಭಿತ್ತಿ–ಗೋಡೆ
ಭೀತಾತುರ–ಭಯಗೊಂಡವ
ಭುಗಿಲಗೆ–ಒಮ್ಮೆಲೆ
ಭುಜಂಗ–ಕಾಳಸರ್ಪ
ಭುವಿ–ಭೂಮಿ
ಭೂವಿನುತ–ಲೋಕವಂದಿತ
ಭೃಂಗ–ತುಂಬಿ, ಭ್ರಮರ
ಭೃತ್ಯ–ಸೇವಕ
ಭ್ರಮರ–ದುಂಬಿ
ಭ್ರಾಂತಮರ್ಕಟ–ಹುಚ್ಚು ಮಂಗ
ಮಂಜಿನ ಮೋಹರ–ಮಂಜಿನ ಮುಸುಕು, ಮಂಜಿನ
ಗುಂಪು
ಮಂಡಿಸು–ಕುಳಿತುಕೊಳ್ಳು
ಮಂಡೆ–ತಲೆ
ಮಂದಮತಿ–ತಿಳಿಗೇಡಿ
ಮಕುಟ–ತಲೆ, ಕಿರೀಟ
ಮಚ್ಚರ–ಮತ್ಸರ, ಹೊಟ್ಟೆಕಿಚ್ಚು
ಮಚ್ಚು–ಮೆಚ್ಚುಗೆ, ಸಲುಗೆ
ಮಜ್ಜನ–ಅಭಿಷೇಕ, ಸ್ನಾನ
ಮಜ್ಜನಸಾಲೆ–ಸ್ನಾನದ ಮನೆ, ಲಿಂಗಪೂಜೆಗೆ ಬಳಸುವ ಪಾತ್ರೆ
ಮಠ–ಮನೆ
ಮಡಕೆ–ಗಡಿಗೆ, ಮಣ್ಣಿನ ಪಾತ್ರೆ
ಮಡಗು–ಇಡು, ಮುಚ್ಚಿದು

ಮಡಿ–ಸಾಯು
ಮಣಿಹ–ಕರ್ತವ್ಯ, ಕಾರ್ಯ
ಮತಿ–ಬುದ್ಧಿ
ನುತಿ–ಸ್ತುತಿ
ಮತ್ತಮಧುಕರ–ಮದವೇರಿದ ದುಂಬಿ
ಮತಿಗೆಟ್ಟ–ಬುದ್ಧಿಶೂನ್ಯ
ಮತ್ತೆ–ಬಳಿಕ
ಮಥನಿಸು–ಚರ್ಚಿಸು, ಕಡೆ
ಮದಕರಿ–ಮದವೇರಿದ ಆನೆ
ಮದವಳಿಗೆ–ವಧು
ಮದಾಳಿ–ಸೊಕ್ಕೇರಿದ ದುಂಬಿ
ಮದುವಳಿಗ–ವರ
ಮಧ್ಯಕಲ್ಪ–ಕಟ್ಟು, ಕಟ್ಟಳೆ, ನಿಯಮ
ಮನದಾರ್ತ–ಮನದ ಬಯಕೆ
ಮನಭುಂಜಕರು–ಮನಸ್ಸನ್ನು ತಿನ್ನುವವ, ಮನಸ್ಸಿಗೆ ನೋವುಂಟು ಮಾಡುವವ
ಮನಸಿಜ–ಕಾಮ
ಮನೋಮುದ–ಮನಕ್ಕೆ ಸಂತೋಷ ಕೊಡುವ
ಮನೋವಾಕ್ಕಾಯ–ಮನ ಮಾತು ದೇಹ
ಮುಯ್ಯಾನು–ಎದುರಾಗು
ಮರೀಚಿ–ಬಿಸಿಲುಕುದುರೆ
ಮರುಗ–ಸುಗಂಧದ ಗಿಡ
ಮರುಜವಣಿ–ಸಂಜೀವಿನಿ
ಮರುತ–ಗಾಳಿ
ಮರುದೊತ್ತು–ಆಳಿನ ಆಳು
ಮರುಳ–ಹುಚ್ಚ
ಮರ್ತ್ಯ–ಭೂಲೋಕ
ಮಲಭಾಂಡ–ಹೊಲಸಿನ ಪಾತ್ರೆ
ಮಲಯಜ–ಶ್ರೀಗಂಧ
ಮಲೆತು–ಸೊಕ್ಕಿ, ಮದವೇರಿ
ಮಸಕ–ಮಂಜು, ಮುಸುಕು
ಮಸುಳಿಸು–ಮಸುಕಾಗು, ಮಂದಾಗು
ಮಸ್ತಕ–ತಲೆ
ಮಹ–ಮಹತ್ತು, ಜ್ಯೋತಿ, ಪರಮಾತ್ಮ
ಮಹಾಂತರು–ದೊಡ್ಡವರು.
ಮಹೀತಳ–ಭೂಲೋಕ
ಮಾಕರಿಸು–ಗುಟ್ಟುರಟ್ಟುಮಾಡು, ತಿರಸ್ಕರಿಸು, ಅವಮಾನಪಡಿಸು.
ಮಾಕ್ಷಿ–ಒಂದು ಬಗೆಯ ಧಾನ್ಯ
ಮಾಟ–ಕಾರ್ಯ
ಮಾಟಕೂಟ–ಕ್ರಿಯಾಯೋಗ
ಮಾಣ–ಬಿಡಲಾರ
ಮಾಣಿಸು–ಕಳೆ, ಇಲ್ಲವಾಗಿಸು
ಮಾಣು–ಬಿಡು
ಮಾತೆಪಿತ–ತಾಯಿ ತಂದೆ
ಮತ್ತಗಜ–ಮದವೇರಿದ ಆನೆ
ಮಾದು–ಇಲ್ಲವಾಗಿ, ಬಿಟ್ಟು
ಮಾನ–ನಾಲ್ಕು ಸೇರಿನ ಅಳತೆ
ಮಾಯಿಕ–ಮೋಸದ, ತೋರಿಕೆಯ, ಭ್ರಾಂತಿಯ
ಮಾರಾರಿ–ಶಿವ, ಕಾಮವೈರಿ
ಮಾರಿ–ವಿನಾಶ ದೇವತೆ
ಮಾಱುಗೋಲು–ಪ್ರತಿಬಾಣ, ಮಾತಿಗೆ ಮಾತು
ಮಾರ್ಗಕ್ರೀ–ಷಟ್‌ಸ್ಥಲ ಮಾರ್ಗದಂತೆ ನಡೆವ ಕ್ರಿಯೆ
ಮಾರ್ತಾಂಡ–ಸೂರ್ಯ
ಮಾಱಂಕ–ವೀರ, ಪ್ರತಿಸ್ಪರ್ಧಿ
ಮಾಱಂಬು–ಕಾಮನ ಬಾಣ
ಮಾಱುಹೋಗು–ಶರಣಾಗು
ಮಾಷ–ಉದ್ದು
ಮಿಗೆ–ಹೆಚ್ಚಾಗು
ಮಿಗೆವರಿ–ಅತಿಕ್ರಮಿಸು
ಮಿಡಿ–ಬಾರಕೋಲು, ಹಿಮ್ಮಡ
ಮಿತ್ತು–ಮೃತ್ಯು
ಮಿಥ್ಯ–ಸುಳ್ಳು
ಮಿಸುನಿ–ಶುದ್ಧಬಂಗಾರ
ಮೀನಜ–ಮೀನಿನಹೊಟ್ಟೆಯಲ್ಲಿ ಹುಟ್ಟಿದವ

ಮೀಯು–ಸ್ನಾನಮಾಡು
ಮುಂಚು–ಮುಂದು, ಮುಂದುವರಿ
ಮುಂದುಜಾವ–ಮುಂಜಾವು
ಮುಕುರ–ಕನ್ನಡಿ
ಮುಕ್ತಕೇಶ–ಕೆದರಿದ ಕೂದಲು
ಮುಖವಿಷರುಹ–ಮುಖಕಮಲ
ಮುಗುದ–ಮುಗ್ಧ
ಮುಡಿ–ತಲೆ
ಮುಡುಹು–ಹೆಗಲು, ಭುಜಾಗ್ರ
ಮುದ–ಸಂತೋಷ
ಮುನಿ–ಸಿಟ್ಟಾಗು
ಮುಯ್ಯಾನು–ಎದುರಾಗು,
ಅಭಿಮುಖವಾಗು
ಮುಯ್ಯೂರು–ಮೂರು ಊರು
ಮುರಿ–ಹೊರಳು
ಮುರುಚು–ನುಣುಚಿಕೊಳ್ಳು, ತಪ್ಪಿಸಿಕೊಳ್ಳು
ಮುಸುಕಿಡು–ಮರೆಮಾಡು
ಮುಳಿ–ಸಿಟ್ಟಾಗು
ಮುಳಿಸು–ಸಿಟ್ಟು
ಮುಳ್ಳುಮಸೆ>ಮುಳ್ಮಸೆ–ಮುಳ್ಳಿನ ಹಾಸಿಗೆ
ಮೂಗ–ಮೂಕ
ಮೂರ್ತ–ಕಣ್ಣಿಗೆ ಕಾಣಿಸುವ
ವಸ್ತು, ಸಾಕಾರ
ಮೂರ್ತಿಗೊಳ್ಳು–ಕುಳಿತುಕೊಳ್ಳು
ಮೂಱು–ಮೂರು ಮಾಯೆ, ತ್ರಿಮಲ
ಮೂಱು–ಹೆಣ್ಣು ಹೊನ್ನು ಮಣ್ಣು
ಮೂಲ–ಬೇರು
ಮೃಡ–ಶಿವ
ಮೃತ್ತಿಕಾಪಂಜರ–ಹುತ್ತ, ಮಣ್ಣಿನಮನೆ
ಯೋಗವಟ್ಟಿಗೆ–(ಯೋಗಪಟ್ಟಿಕೆ), ಯೋಗಮಾಡುವಾಗ ಮುಸುಕು ಹಾಕುವ ಬಟ್ಟೆ
ಯೋಜನವರೆ–ಯೋಜನದ ವಿಸ್ತರ, ಅಗಲು

ಮೃತ್ತಿಕೆ–ಮಣ್ಣು
ಮೆಟ್ಟು–ತುಳಿ
ಮೇಘ–ಮೋಡ
ಮೇಘವಹ್ನಿ–ಸಿಡಿಲು
ಮೇದಿನಿ–ಭೂಮಿ
ಮೇರುವೆ–ಉನ್ನತ ಶಿಖರ
ಮೇಲುಪ್ಪರಿಗೆ–ಮಹಡಿ ಮನೆ
ಮೇಲೋಗರ–ಅನ್ನದ ಜೊತೆ ಬಡಿಸುವ ವ್ಯಂಜಕ ಪದಾರ್ಥಗಳು
ಮೊಗೆ–ನೀರು ಎಳೆ, ತುಂಬು
ಮೊನೆ–ತುದಿ, ಅಲಗು
ಮೊರೆ–ಸದ್ದುಮಾಡು, ಒದರು, ಗರ್ಜಿಸು
ಮೊಳಗು–ಧ್ವನಿಮಾಡು, ಒದರು
ಮೊಳೆ–ಅಂಕುರ
ಮೊಳೆದೋರು–ಹುಟ್ಟು
ಮೋಳಿಗೆ–ಕಟ್ಟಿಗೆ
ಮೋಹರ–ಸೈನ್ಯ ಗುಂಪು
ಮೌಕ್ತಿಕ–ಮುತ್ತು
ಮಱುದೊತ್ತು–ಆಳಿನ ಆಳು

ಯ–ರ

ಯುಗಜುಗ–ಯುಗ, ಕಾಲಾವಧಿ
ಕಕ್ಷಪಾಳ–ಬಗಲುಚೀಲ, ಜೋಳಿಗೆ
ರಜ–ಧೂಳು,ಕಸ
ರಜತಗಿರಿ–ಬೆಳ್ಳಿ ಪರ್ವತ
ರತುನ–ರತ್ನ
ರತ್ನದೀಪ್ತಿ–ರತ್ನದ ಬೆಳಕು
ರವಿ–ಸೂರ್ಯ
ರವಿಕಾಂತ–ಸೂರ್ಯನ ಬೆಳಕು
ರಪಣ–ಲಪನ, ಮುಖ, ಮಾರ್ಗ, ಒಂದು ಆಯುಧ
ರಸವಾರಿ–ಸಿಹಿನೀರು, ಅಮೃತ
ರಾಜಶಾಲಿ–ಭತ್ತ, ನೆಲ್ಲು
ರಸ–ಸಿದ್ಧರಸ,ಪಾದರಸ

ರಾಟಾಳ–ಚರಕ
ರೂಹು–ರೂಪು
ರೇಣು–ಧೂಳು
ರೋಮ–ಕೂದಲು
ರೋಮಜ–ಕೂದಲದಿಂದ ಹುಟ್ಟಿದ ಜೀವಿ
ರೋಷ–ಸಿಟ್ಟು
ಱಚ್ಚೆ–ಮುಚ್ಚುಮರೆಯಿಲ್ಲದ ಸ್ಥಿತಿ ಬಹಿರಂಗ
ಲಂಬಿಸು–ದೀರ್ಘಮಾಡು, ಉದ್ದಮಾಡು
ಲಜ್ಜೆ–ನಾಚಿಕೆ
ಲಯ–ಅಳಿದುಹೋಗು, ಇಲ್ಲವಾಗು
ಲಲಾಟ–ಹಣೆ
ಲವಿತ್ರ–ಕುಡುಗೋಲ
ಲಾಂಛನ–ಚಿಹ್ನ
ಲಾಕುಳ–ಯೋಗದಂಡ
ಲಿಖಿತ–ಬರಹ
ಲೀಯ–ಮುಳುಗು, ಒಂದಾಗು
ಲೆಂಕ–ನಿಷ್ಠಾವಂತ ಸೇವಕ, ವೇಳೆವಾಳಿ
ಲೇವಳ–ಸರ, ಡಾಬು
ಲೋಭ–ಆಸೆ
ಲೋಲುಪ್ತ–ಮುಳುಗಿದ
ಲೋವೆ–ಮಂಟಪದ ಇಳಿಜಾರು
ಲೋಳೆ–ಜೊಲ್ಲು
ವಂಕ(ವಕ್ರ)–ಬಾಗಿದ
ವಚನ–ಮಾತು
ವಚಿಸು–ಹೇಳು, ಮಾತನಾಡು
ವಪುಃ–ದೇಹ
ವರ–ಶ್ರೇಷ್ಠ
ವರುಣ–ನೀರಿನದೇವತೆ,
ಅಷ್ಟದಿಕ್ಪಾಲಕರಲ್ಲಿ ಒಬ್ಬ
ವರುಣ–ಗಾಳಿ
ವರ್ತನೆ–ನಡತೆ
ವರ್ಧನಗೈಯು–ವಿಸ್ತರಿಸು
ವಡಬಾಗ್ನಿ–ಸಮುದ್ರದೊಳಗಿನ ಬೆಂಕಿ
ವಹ್ನಿ–ಬೆಂಕಿ

ವಾಕು–ಮಾತು
ವಾಙ್ಮನ–ಮಾತು, ಮನಸ್ಸು
ವಾಙ್ಮನೋದಿತ–ಮಾತು ಮನಗಳಿಗೆ ಮೀರಿದ
ವಾಚಾತೀತ–ಮಾತಿಗೆ ನಿಲುಕದ
ವಾಚಾಳಿ–ಮಾತುಗಾರ
ವಾಣಿ–ಸರಸ್ವತಿ, ಮಾತು
ವಾಮಭಾಗ–ಎಡಭಾಗ
ವಾಯ–ಮೋಸ, ನೆಪ
ವಾಯು–ಗಾಳಿ
ವಾಯುಭಿಕ್ಷ–ಗಾಳಿ ಆಹಾರ
ವಾರಿ–ನೀರು
ವಾರಿಕಲ್ಲು–ಆಲಿಕಲ್ಲು
ವಾರಿಧಿ–ಸಮುದ್ರ
ವಾರುವ–ಕುದುರೆ
ವಾಸುಗಿ–ಸರ್ಪ, ಎಂಟು ಬಗೆಯ
ಹಾವುಗಳಲ್ಲಿ ಒಂದು
ವಿಂಶತ್–ಇಪ್ಪತ್ತು
ವಜ್ರಧಾರೆ–ವಜ್ರಾಯುಧದ ಅಲಗು
ವರ್ಮ–ಮರ್ಮ, ಗುಟ್ಟು
ವರ್ಷ–ಮಳೆ
ವಿಕಸಿತವಾಗು–ಅರಳು
ವಿಕಳಾವಸ್ಥೆ–ಕೊರಗುವಿಕೆ, ಖಿನ್ನತೆ,
ಹಂಬಲಿಕೆ, ವಿರಹಾವಸ್ಥೆ
ವಿಕೃತ–ವಿಕಾರ ರೂಪತಳೆದ
ವಿಗಡ–ಸಾಹಸ, ಧೈರ್ಯ, ದೊಡ್ಡ, ಘನ ಕೆಟ್ಟ (ವಿಕಟ)
ವಿಗಡಚರಿತ್ರ–ಧೈರ್ಯಶಾಲಿ
ವಿಘಾತಿ–ನೋವು
ವಿಚ್ಛಂದ–ಚಂಚಲ, ಸಮತೆ ತಪ್ಪುವುದು
ವಿನುತ–ಹೊಗಳಲ್ಪಟ್ಟ
ವಿಪಿನ–ಕಾಡು
ವಿಭವ–ಗೌರವ, ಹಿರಿಮೆ, ದೊಡ್ಡಸ್ತಿಕೆ
ವಿಮಲ–ಶುಭ್ರ
ವಿರಿಂಚಿ–ಬ್ರಹ್ಮ
ವಿವರ್ಜಿತ–ತ್ಯಜಿಸಿದ

ವಿಷರುಹ>ಬಿಸರುಹ–ಕಮಲ
ವಿಸಂಚ–ವಿಚಲಿತ, ಖಿನ್ನಭಾವ
ವಿಸರ–ಸಮೂಹ
ವಿಹಂಗ–ಪಕ್ಷಿ
ವೀಚಿ–ತೆರೆ, ಸಣ್ಣ ಅಲೆ
ವೃಕ್ಷ–ಗಿಡ
ವೃಶ್ಚಿಕ–ಚೇಳು
ವೆಗ್ಗಳವಾಗು–ಹೆಚ್ಚಾಗು
ವೇದಿಸು–ತಿಳಿ,ಅರಿವಾಗು
ವೇದ್ಯವಾಗು–ತಿಳಿದುಬರು
ವೇಧೆ–ಕಷ್ಟ, ಬಾಧೆ
ವ್ಯವಧಾನ–ತಾಳ್ಮೆಯಿಂದ, ಸಾವಕಾಶ
ವ್ಯಾಕುಳ–ಚಿಂತೆ
ವ್ಯಾವರ್ಣನೆ–ವಿಸ್ತಾರವಾದ ವರ್ಣನೆ
ವ್ಯೋಮ–ಆಕಾಶ
ವ್ರಜ–ಸಮೂಹ

ಶ–ಷ
ಶಂಕೆ–ಸಂಶಯ
ಶಕ್ರ–ಇಂದ್ರ
ಶತಕೋಟಿ–ನೂರುಕೋಟಿ
ಶತೇಕಸ್ಥಲ–ನೂರೊಂದುಸ್ಥಲ
ಶಬುದ–ಶಬ್ದ
ಶಬುದಮುಗುದ–ಶಬ್ದಮುಗ್ಧ, ಮೌನ
ಶಯನ–ಹಾಸಿಗೆ
ಶರಧಿ–ಸಮುದ್ರ
ಶರಸಂಧಾನ–ಬಾಣ ಹೂಡುವುದು
ಶರೀರಪೋಷಣ–ಹೊಟ್ಟೆ ಹೊರೆಯುವದು
ಶವ–ಹೆಣ
ಶಶಾಂಕ–ಮೊಲದ ಗುರುತು ಉಳ್ಳವ, ಚಂದ್ರ
ಶಶಿ–ಚಂದ್ರ
ಶಶಿಗಲ್–ಚಂದ್ರಕಾಂತ ಶಿಲೆ
ಶಶಿಧರ–ಚಂದ್ರಧರ, ಶಿವ
ಶಾಕಪಾಕ–ಸಸ್ಯಾಹಾರ
ಶಾರ್ದೂಲ–ಹುಲಿ
ಶಿಖಿ–ಬೆಂಕಿ
ಶಿರ–ತಲೆ
ಶಿರೋಮಾಲೆ–ತಲೆಗಳಮಾಲೆ
ಶಿರೋರತ್ನ–ತಲೆಮಣಿ, ಶ್ರೇಷ್ಠ
ಶಿಲೆ–ಕಲ್ಲು
ಶಿವನಿರೂಪ–ಶಿವನ ಆಜ್ಞೆ
ಶುಕ್ಲ–ವೀರ್ಯ
ಶೂನ್ಯವಿಷ್ಟರ–ಶೂನ್ಯಸಿಂಹಾಸನ
ಶೂಲ–ಭರ್ಚಿ, ಮೊನಚಾದ ಆಯುಧ
ಶೇಷ–ಉಳಿದದ್ದು
ಶೇಷಭುಕ್ತಾ–ಉಳಿದುದನ್ನು ಉಣ್ಣುವವ
ಶೈತ್ಯ–ತಂಪು
ಶೋಣಿತ–ಸ್ತ್ರೀಯ ಗರ್ಭಾಣು
ಶೌಚ–ಶುದ್ಧಿ
ಶ್ರವ–ಶ್ರಮ, ವ್ಯಾಯಾಮ
ಶ್ರುತ–ಕೇಳಿರುವುದು
ಶ್ರೋತ್ರ–ಕಿವಿ
ಶ್ವಾನ–ನಾಯಿ
ಶ್ವಾನಯೋನಿ–ನಾಯಿಗರ್ಭ
ಶ್ವೇತ–ಬಿಳಿ
ಷಣ್ಮುಖ–ಆರು ಮುಖವುಳ್ಳವ,
ಕುಮಾರಸ್ವಾಮಿ
ಷೋಡಶ–ಹದಿನಾರು

ಸ
ಸಂಕಲೆ–ಬೇಡಿ
ಸಂಗ–ಸಹವಾಸ, ಒಡನಾಟ
ಸಂಗತ್ಯ–ಪ್ರಸಂಗ, ವಿಷಯ
ಸಂಚ–ಹಿಡಿತ, ವಶ, ಕೂಡಿಸುವುದು
ಸಂಚಲ–ಚಲನೆ
ಸಂಚದೋವರಿ–ಗರ್ಭಗೃಹ, ಒಳಗಿನಕೋಣೆ
ಸಂಚು–ರಹಸ್ಯ, ರೀತಿ

ಸಂತೆಯ ನೆರವಿ–ಸಂತೆ ಬಜಾರ
ಸಂದಡಗು–ಭೇದವಿಲ್ಲವಾಗು
ಸಂದಣಿ–ಗುಂಪು
ಸಕೀಲ–ರಹಸ್ಯ
ಸಂದಣಿಗೊಳ್ಳು–ಗುಂಪುಗೂಡು, ಒಟ್ಟಾಗಿ ಸೇರು
ಸಂದಿತ್ತು–ಸಲ್ಲಿತ್ತು, ಮುಟ್ಟಿತ್ತು
ಸಂದಿಸು–ದೊರಕು, ಸಿಗು, ಭೆಟ್ಟಿಯಾಗು
ಸಂದು–ತೀರು
ಸಂದು–ಭೇದ
ಸಂದು–ಮೂಲೆ, ದೇಹದ ಸಂಧಿಭಾಗ
ಸಂದು–ಪಾತ್ರನಾಗು
ಸಂಧಾನ–ಸಂಯೋಗ
ಸಂಪಗೆಯರಳು–ಸಂಪಗೆ ಹೂ
ಸಂಪುಟ–ಕೂಡಿದ, ಸಂಯೋಗ, ಕರಡಿಗೆ
ಸಂಘಟ್ಟ–ತಾಗುವಿಕೆ, ಢಿಕ್ಕಿ
ಸಂಯೋಗ–ಕೂಡುವುದು
ಸಂಪಾದಿಸು–ದೋರಕಿಸು, ಹುಡುಕು
ಸಂವರಣೆ–ಸಮೂಹ, ಸಂಗತ
ಸಂವಿತ್ತು–ಜ್ಞಾನ
ಸಂಹರಿಸು–ಕೊಲ್ಲು
ಸಚರಾಚರ–ಚಲಿಸುವ ಚಲಿಸದೇ
ಇರುವ ಎಲ್ಲ ವಸ್ತುಗಳು
ಸಜ್ಜನೆ–ಪತಿವ್ರತೆ, ಕುಲಸ್ತ್ರೀ
ಸಟ್ಟುಗ–ನೀರು ಕಡೆಯುವ ಹುಟ್ಟು
ಸಟೆ–ಸುಳ್ಳು
ಸತುಪಥ>ಸತ್ಪಥ–ಒಳ್ಳೆಯದಾರಿ
ಸದಮದಗಜ–ಮದವೇರಿದ ಆನೆ
ಸನ್ನಹಿತ–ಸಮೀಪ
ಸನುಮತ–ಒಪ್ಪಿಗೆ
ಸನ್ನಿಹಿತ–ಹತ್ತಿರದಲ್ಲಿರುವ
ಸನ್ನೆ–ಸಂಜ್ಞೆ
ಸನ್ನೆಗಟ್ಟಿಗೆ–ಮೀಟುವ ಕಟ್ಟಿಗೆ
ಸಪ್ತಕರ್ಣಿಕೆ–ಏಳುಕರ್ಣಿಕೆ

ಸಬಳ–ಕೋಲು, ಆಯುಧ
ಸಮದರುಶನ–ಏಕೋಭಾವದನೋಟ
ಸಮಧಾತುವಾಗು–ಏಕವಾಗು
ಸಮನಿಸು–ಒದಗು, ಕೂಡಿಬರು ಉಂಟಾಗು ಪ್ರಾಪ್ತವಾಗು, ದೊರೆ
ಸಮಯ–ಸಂಪ್ರದಾಯ
ಸಮರಸ–ಏಕವಾಗು, ಒಂದಾಗು, ಬೆರೆತುಹೋಗು
ಸಮವೇದಿ–ಸಮಾನ
ಸಮಸ್ತ–ಎಲ್ಲ
ಸಮಿತೆ–ಕಟ್ಟಿಗೆ
ಸಮ್ಮಾರ್ಜನ–ಸಾರಿಸು
ಸಯ>ಸ್ವಯ–ತಾನು, ತನ್ನ
ಸಯದಾನ–ಗುರುಲಿಂಗಜಂಗಮರಿಗೆ ಅರ್ಪಿಸುವ ನೈವೇದ್ಯ
ಸಯವಪ್ಪ–ಅನುರೂಪನಾದ
ಸಯವಲ್ಲ–ಅಧೀನವಲ್ಲ, ವಶವಲ್ಲ
ಸಯವಾಗು–ಲೀನವಾಗು, ಐಕ್ಯವಾಗು
ಸಯಿದಾನ–ನೈವೇದ್ಯ, ಅಡುಗೆ
ಸರ>ಶರ–ಬಾಣ
ಸರಬು–ನೀಟಾದ ಕಟ್ಟಿಗೆ
ಸರವರ–ಸರೋವರ
ಸರ>ಸ್ವರ–ಧ್ವನಿ
ಸರಿಹುದುಗು–ಸಾಮರಸ್ಯ
ಸರಿ–ಅಂಟು ಪದಾರ್ಥ
ಸರ್ಪ–ಹಾವು
ಸರ್ಪದಷ್ಟ–ಹಾವು ಕಚ್ಚಿದ
ಸರ್ಪಭೂಷಣ–ಶಿವ
ಸಲುಗೆಯ ಬಂಟ–ಪ್ರೀತಿಯ, ಆತ್ಮೀಯ ಸೇವಕ
ಸಲಹು–ಕಾಪಾಡು, ರಕ್ಷಿಸು
ಸಲಿಲ–ನೀರು
ಸಲುಗೆ–ಪ್ರೀತಿ
ಸವ, ಸ್ರವ–ಶ್ರಮ, ಅಭ್ಯಾಸ, ಸಾಧನೆ
ಸವಿ–ಸೇವಿಸು, ಕುಡಿ
ಸವೆ–ಸವೆಸು, ದುಡಿಸು, ಮುಳುಗು

ಸಸಿ–ಮೊಳಕೆ
ಸಸಿನ–ಸರಿ, ಒಳ್ಳೆಯದು
ಸಹಜ–ನಿಜ
ಸಹಸ್ರ–ಸಾವಿರ
ಸಾಂಗತ್ಯ–ಸಂಗತಿ
ಸಾಂಪ್ರದಾಯ–ಕಟ್ಟಳೆ, ರೂಢಿ
ಸಾದೃಶ್ಯ–ಅನುರೂಪ
ಸಾರ್–ಸಿಗು, ದೊರೆ,
ಸಾರಾಯ–ಸಾರವತ್ತಾದ, ನಿಜತತ್ವ
ಸ್ಥಾಪ್ಯ–ಪ್ರತಿಷ್ಠೆ
ಸ್ವಾಯತ–ತನ್ನೊಳಗೆ ಸಂಬಂಧವಾದ
ಸಾವಯವ–ಸಾಕಾರ,
ಅವಯವಸಹಿತ
ಸಾವಧಾನ–ಎಚ್ಚರ
ಸಾರಾಯವಾಗು–ಸೇರಿಕೊಳ್ಳು
ಸಾರು–ಹತ್ತಿರಬರು
ಸಾರ್ದು–ಹತ್ತಿರ ಹೋಗಿ
ಸಾಹಿತ್ಯ–ಕೂಡುವಿಕೆ, ಸಂಬಂಧ
ಸಿಖಿ–ಬೆಂಕಿ
ಸಿತ–ಬೆಳ್ಳಿ, ಬಿಳಿದು
ಸಿತಾಳ–ತಂಪುನೀರು
ಸಿನೆ–ಸಂಪೂರ್ಣ
ಸಿನೆಬಂಜೆ–ಸಂಪೂರ್ಣ ಬರಡು
ಸುಕಪಿಕ–ಗಿಳಿ, ಕೋಗಿಲೆ
ಸುಕೃತ–ಪುಣ್ಯ, ಒಳ್ಳೆಯ ಕಾರ್ಯ
ಸುಪ್ರಭಾತ–ಮುಂಜಾವು
ಸುಯಿದಾನ–ನೈವೇದ್ಯ
ಸುಯಿಧಾನಿ–ರಕ್ಷಕ, ಎಚ್ಚರಿಕೆಯಿಂದಿರುವವನು
ಸುಯ್ಯು–ಉಸಿರುಬಿಡು
ಸುರರು–ದೇವತೆಗಳು
ಸುರಾಳ ನಿರಾಳ–ಸಗುಣಾಕಾರ ನಿರ್ಗುಣಾಕಾರ;
ಸಾಕಾರ, ನಿರಾಕಾರ

ಸುಲಿಪಲ್ಲು–ಶುಭ್ರವಾದ ಉಜ್ಜಿದಹಲ್ಲು
ಸಿಂಬೆ–ಸಾಮಾನ್ಯ ಜಾರೆ
ಸಿಂಧು–ಸಮುದ್ರ
ಸುಸರ–ಸುಲಭ, ಹಗುರ
ಸೂಡು–ಧರಿಸು
ಸೂತಕ–ಮೈಲಿಗೆ
ಸೂಸಕ–ಬೈತಲೆಗೆ ಧರಿಸುವ ಒಂದು ಬಗೆಯ ಆಭರಣ, ಅಲಂಕಾರ
ಸೃಣಿ–ಅಂಕುಶ,
ಸೆಜ್ಜೆ–ಇಷ್ಟಲಿಂಗ ಇಡುವ ಕರಡಿಗೆ, ಶಯ್ಯೆ, ಹಾಸುಗೆ
ಸೆರಗುಸೋಂಕು–ತಟ್ಟು ಮುಟ್ಟು
ಸೇರು–ಸಹಿಸು, ಇಷ್ಟವಾಗು
ಸೈತಿಡು–ಓರಣವಾಗಿರಿಸು
ಸೈದಾನ–ಅಡುಗೆಯ ಸಾಮಾನು
ಸೈರಿಸು–ತಾಳು
ಸೈವೆರಗಾಗು–ಅತಿ ಆಶ್ಚರ್ಯಪಡು
ಸೊಡರು–ದೀಪ
ಸೊಣಗ–ನಾಯಿ
ಸೊನೆ–ರಸ, ಮಳೆ
ಸೊನ್ನಲಿಗೆ–ಸೊಲ್ಲಾಪುರ
ಸೊಮ್ಮು–ಸೊತ್ತು, ಸಂಪತ್ತು, ಆಸ್ತಿ
ಸೊಲ್ಲು–ಧ್ವನಿ
ಸೋಂಕು–ತಾಗು, ಮುಟ್ಟು
ಸೋನೆ–ಮಳೆ
ಸೋಪಾನ–ಮೆಟ್ಟಿಲು
ಸೋಮ–ಚಂದ್ರ
ಸೋಮಧರ–ಚಂದ್ರಧರ, ಶಿವ
ಸೋಹಿ–ತಾನೇ ಬ್ರಹ್ಮವೆಂಬ ಭಾವವುಳ್ಳವ
ಸೋಹಂ–ತಾನೇಪರಮಾತ್ಮನೆಂಬ ಭಾವ
ಸ್ಥಾಣು–ಗಾಣದ ಕೊರಡು
ಸ್ಥಾನನಿಧಿ–ಸ್ಥಿರ ಸಂಪತ್ತು.
ಸ್ವಯವಚನ–ತನ್ನ ಮಾತು

ಸ್ವರ್ಣದ ದಂಡ–ಬಂಗಾರದ ಕಟ್ಟಿಗೆ ತುಂಡು
ಸ್ವಾದು–ರುಚಿ
ಸ್ವಾದಿಸು–ರುಚಿನೋಡು

ಹ

ಹಂಗು–ದಾಕ್ಷಿಣ್ಯ, ಋಣ
ಹಂದೆ–ಹೇಡಿ
ಹಗರಣ–ತೋರಿಕೆ ಪೂಜೆ, ನಟನೆ
ಹಗರಣಿಗರು–ಕಪಟ ವೇಷಧಾರಿಗಳು
ಹಗೆ–ಧಾನ್ಯ ಸಂಗ್ರಸುವ ಕುಣಿ; ತಗ್ಗು
ಹಗೆ–ವೈರಿ
ಹಜ್ಜೆ–ಹೆಜ್ಜೆ
ಹಜ್ಜೆ–ಹೆಜ್ಜೆ
ಹಡಪಿಗ–ಕ್ಷೌರಿಕ
ಹಡೆ–ಪಡೆ
ಹಣ–ನಾಲ್ಕಾಣೆ ಎಂಟು ಪೈಸೆ
ಬೆಲೆಯನಾಣ್ಯ
ಹಣೆಯಹೊಣೆ–ಹಣೆಬರಹ
ಹತ್ತೆಸಾರು–ಹತ್ತಿರಬರು
ಹದನು–ಒಳ್ಳೆಯದು, ಸರಿಯಾದುದು
ಹಮ್ಮದಂಬೋಗು–ಹೌಹಾರು,
ಮೂರ್ಛೆಹೋಗು
ಹಮ್ಮು–ಯೋಜಿಸು, ಯೋಜನೆ
ಹಮ್ಮುಬಿಮ್ಮು–ಹೆಮ್ಮೆ, ಅಹಂಕಾರ, ಗರ್ವ
ಹರ–ಶಿವ
ಹರಣ–ಪ್ರಾಣ
ಹರವರಿ–ತೋರಿಕೆ, ಪ್ರಕಟಣೆ
ಹರಿ(ಹರೆ)–ಚದುರಿಹೋಗು, ಓಡು
ಹರಿ–ಕತ್ತರಿಸು, ಛೇದಿಸು
ಹರಿಣ–ಜಿಂಕೆ
ಹರಿನುಡಿ–ಒಂದೆ ಸವನೆ ಆಡುವ
ಮಾತು, ಮುಂದುವರಿದ
ಮಾತು, ವಾಕ್‌ಪ್ರವಾಹ
ಹರಿವಿರಂಚಿ–ವಿಷ್ಣು ಬ್ರಹ್ಮ
ಹರಿವು–ಕಾರಣ, ಉದ್ದೇಶ, ಗುರಿ, ಪರಿಹಾರದ ದಾರಿ
ಹರುಷಾಶ್ರು–ಆನಂದದ ಕಣ್ಣೀರು
ಹಜೆಗೋಲು–ಹಡಗು, ತೆಪ್ಪ
ಹಜೆವು–ಬಗೆಹರಿವರೀತಿ
ಹಜೆಹಂಚಾಗು–ಚೂರುಚೂರಾಗು
ಹಜೆ–ಹಲಗೆ ವಾದ್ಯ
ಹಲುಬಾಟ–ಒಡಂಬಡಿಕೆ, ಕೂಗಾಟ
ಹಲ್ಲಣ–ಕುದುರೆಗೆ ಹಾಕುವ ಜೀನು
ಹವಣು–ಬೆಲೆ, ರೀತಿ, ಅಳತೆ, ಪ್ರಮಾಣ
ಹಸಗೆಡಿಸು–ಹಾಳುಮಾಡು
ಹಸು–ಆಕಳು, ಹಸಿವು
ಹಸೆ–ಶುಭಕಾರ್ಯಗಳಿಗೆ ಹಾಕುವ ಪೀಠ
ಹಸ್ತ–ಕೈ
ಹಸ್ತಮಜ್ಜನ–ಕೈತೊಳೆಯುವುದು
ಹಸ್ತಮಸ್ತಕ–ಕೈ ತಲೆ
ಹಸ್ತಿ–ಆನೆ
ಹಳಚು–ತಾಗು, ಎದುರಾಗು, ಹೊಡೆ
ಹಾಗ–ನಾಣ್ಯದ ನಾಲ್ಕನೆಯ ಒಂದು ಭಾಗ, ಕಡಿಮೆಬೆಲೆನಾಣ್ಯ
ಹಾಯ್ಕು–ಹಾಕು
ಹಾರಕ–ಒಂದು ಬಗೆಯ ಧಾನ್ಯ
ಹಾರಿಕೊಂಡಿರು–ಕಾಯ್ದುಕೊಂಡಿರು
ಹಾರು–ನಿರೀಕ್ಷಿಸು
ಹಾಸು–ಹಾಸಿಗೆ
ಹಾಹೆ–ಸಣ್ಣಗೊಂಬೆ
ಹಾಳೂರವಂಕ–ಹಾಳೂರ ಅಗುಸೆ ಬಾಗಿಲು
ಹಿಂಗು–ಬಿಡು, ತೀರು
ಹಿಂಚುಮುಂಚು–ಹಿಂದೆಮುಂದೆ
ಹಿತವ–ಹಿತೈಷಿ
ಹಿರಿಯ ದಣ್ಣಾಯಕರು–ಬಸವಣ್ಣ
ಹಿಸಿ–ಹರಿ, ಹಿಸುಕು
ಹಿಳಿ–ಹಿಂಡು

ಹುಗದು–ಹೋಗದು
ಹುಟ್ಟಿಗೆ–ಬಟ್ಟೆ, ಮದುವೆ ಸೀರೆ
ಹುಡಿಗುಟ್ಟು–ನಾಶಮಾಡು,
ಇಲ್ಲವಾಗಿಸು, ಪುಡಿಮಾಡು
ಹುರುಳು–ಸತ್ವ, ಸತ್ವದಿಂದಕೂಡಿದ
ಹುಲ್ಲೆ–ಜಿಂಕೆ
ಹುಸಿಹುಂಡ–ಸುಳ್ಳು ಹೇಳುವವ, ದುಷ್ಟ
ಹುಳ್ಳಿ–ಸಣ್ಣ ಕಟ್ಟಿಗೆ ತುಂಡು, ಪುರುಲೆ
ಹೂಣಿಹೊಕ್ಕು–ಪ್ರತಿಜ್ಞೆ ಮಾಡಿ
ಹೂಸು–ಹಚ್ಚು, ಲೇಪಿಸು
ಹೃತ್‌ಕಮಲ–ಹೃದಯ ಕಮಲ
ಹೆಚ್ಚುಗೆ–ಆಧಿಕ್ಯ
ಹೆಡಗೆ–ಬುಟ್ಟಿ
ಹೆಡತಲೆ–ತಲೆಯ ಹಿಂಭಾಗ
ಹೆಮ್ಮನೆ–ಹಿರಿಯ ಮನೆ, ಮಹಾಮನೆ
ಹೆರೆಹಿಂಗು–ತಿರಸ್ಕರಿಸಿ ಬಿಡು
ಹೆಱಸಾರು–ಹತ್ತಿರಬರು
ಹೆಱಹಿಂಗು–ತೃಪ್ತಿಪಡು, ಹಿಂದಿಡು
ಹೆಳವ–ಕಾಲಿಲ್ಲದವ
ಹೇತು–ಕಾರಣ
ಹೇಮಗಿರಿ–ಬಂಗಾರದ ಪರ್ವತ
ಹೇಮರಸ–ಬಂಗಾರದರಸ
ಹೇರು–ಕೊಡು, ಹೊರಿಸು
ಹೊಂಗು–ಉಬ್ಬು, ಹೊರಹೊಮ್ಮು
ಹೊಂಭಿತ್ತಿ–ಬಂಗಾರದಗೋಡೆ
ಹೊಕ್ಕರಣೆ–ನೀರಿನ ಹೊಂಡ
ಹೊಕ್ಕು, ಬಲತ್ಕಾರದಿಂದ ಪ್ರವೇಶಿಸಿ
ಹೊಡಕೆಯ ಹುಲ್ಲು–ಒಂದು ಜಾತಿಯ ಹುಲ್ಲು,
ಆನೆಹುಲ್ಲು
ಹೊಡಕೆಯಕಣ್ಣಿ–ಹುಲ್ಲಿನ ಹಗ್ಗ
ಹೊಡೆಗಿಚ್ಚು–ದಳ್ಳುರಿ,ದೊಡ್ಡಕಿಚ್ಚು
ಹೊಡೆಗೆಡೆ–ಹೊರಬೀಳು, ಡಬ್ಬಹಾಕು
ಹೊಣೆ–ಸಾಕ್ಷಿ
ಹೊತ್ತದದೀಪ–ಚಿಜ್ಯೋತಿ
ಹೊದಕುಳಿಗೊಳು–ನೋವು, ದುಃಖಪಡು
ಹೊದ್ದಿಗೆ–ಹೊಂದಿಕೆ, ಒಟ್ಟಾಗುವಿಕೆ
ಹೊದ್ದು–ಹೊಂದು, ಸೇರು, ಧರಿಸು
ಹೊನಲು–ಮಡು
ಹೊನ್ನು–ಬಂಗಾರ
ಹೊಯ್ ಕೈ–ಸರಿಸಮಾನ, ಹೊಡೆದಾಟ
ಹೊಯ್–ಹೊಡೆ
ಹೊರೆ–ಭಾರ, ತಪ್ಪು, ಮೋಸ, ರಕ್ಷಿಸು
ಹೊಲಬು–ದಾರಿ, ರೀತಿ, ದಿಕ್ಕು
ಹೊಲಬುಗೆಡು–ದಾರಿತಪ್ಪು, ದಿಕ್ಕುಗೆಡು
ಹೊಲಿಗೆ–ಬೆಸುಗೆ, ಸಂಬಂಧ
ಹೊಲೆನೀರು–ಮೈಲಿಗೆ ನೀರು
ಹೊಲ್ಲ–ಅಯೋಗ್ಯ
ಹೊಲ್ಲೆಹ–ತಪ್ಪು
ಹೊಳ್ಳಾಗು–ಜೊಳ್ಳಾಗು, ವ್ಯರ್ಥವಾಗು
ಹೋಕು–ಅಳಿವು
ಹೋಮ–ಯಜ್ಞ
ಹೋರು–ಹೊಡೆದಾಡು
ಹೋಹ–ಹೋಗುವ

❖❖

೬. ಪಾರಿಭಾಷಿಕ ಪದಕೋಶ

೧. ಅಂಗತ್ರಯ:

–ತ್ಯಾಗಾಂಗ, ಭೋಗಾಂಗ, ಯೋಗಾಂಗ–ಇವು ಮೂರು ಅಂಗಗಳು.

೨. ಅಂತಃಕರಣಚತುಷ್ಟಯ :

–ಮನ, ಬುದ್ಧಿ, ಚಿತ್ತ, ಅಹಂಕಾರ–ಇವು ನಾಲ್ಕು ಅಂತಃಕರಚತುಷ್ಟಯ.

೩. ಅಕ್ಷರ ಪಂಚಕ : (ಪಂಚಾಕ್ಷರ)

–ನಮಃ ಶಿವಾಯ–ಎಂಬ ಐದು ಅಕ್ಷರಗಳು. ಇವುಗಳಿಗೆ ಪಂಚಾಕ್ಷರಿ ಮಂತ್ರ ಎಂದು ಕರೆಯಲಾಗುತ್ತದೆ.

೪. ಅರಿಷಡ್ವರ್ಗ :

–ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ–ಇವು ಆರು ವೈರಿಗಳು.

೫. ಅವಸ್ಥಾತ್ರಯ :

–ಜಾಗ್ರ, ಸ್ವಪ್ನ, ಸುಷುಪ್ತಿ–ಎಂಬ ಮೂರು ಅವಸ್ಥೆಗಳು.

೬. ಅಷ್ಟತನು :

–ಸ್ಥೂಲ, ಸೂಕ್ಷ್ಮ, ಕಾರಣ, ನಿರ್ಮಲ, ಆನಂದ, ಚಿನ್ಮಯ, ಚಿದ್ರೂಪ, ಶುದ್ಧ ಎಂಬ ಎಂಟು ತನುಗಳು.

೭. ಅಷ್ಟತನುಮೂರ್ತಿ :

–(೧)ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಚಂದ್ರ, ಸೂರ್ಯ, ಆತ್ಮ.

–(೨)ಭವ, ಶರ್ವ, ಈಶಾನ, ಪಶುಪತಿ, ಭೀಮ, ಉಗ್ರ, ಮಹಾದೇವ, ರುದ್ರ.

೮. ಅಷ್ಟದಳ :

–ಇಂದ್ರದಳ (ಪೂರ್ವ), ಅಗ್ನಿದಳ (ಆಗ್ನೇಯ), ಯಮದಳ (ದಕ್ಷಿಣ), ನೈರುತ್ಯದಳ (ನೈರುತ್ಯ), ವರುಣದಳ (ಪಶ್ಚಿಮ), ವಾಯುವ್ಯದಳ (ವಾಯುವ್ಯ), ಕುಬೇರದಳ (ಉತ್ತರ), ಈಶಾನ್ಯದಳ (ಈಶಾನ್ಯ)–ಎಂಬ ಎಂಟು ದಳ ಕಮಲ.

೯. ಅಷ್ಟ ದಿಕ್ಪಾಲಕರು:

–ಇಂದ್ರ, ಅಗ್ನಿ, ಯಮ. ನಿರುತಿ, ವರುಣ, ವಾಯು, ಕುಬೇರ, ಈಶ ಇವರು ಎಂಟು ಜನ ದಿಕ್ಪಾಲಕರು.

೧೦. ಅಷ್ಟ ದಿಕ್ಕುಗಳು:

–ಪೂರ್ವ, ಆಗ್ನೇಯ, ದಕ್ಷಿಣ, ನೈರುತ್ಯ, ಪಶ್ಚಿಮ, ವಾಯುವ್ಯ, ಉತ್ತರ, ಈಶಾನ್ಯ–ಇವು ಎಂಟು ದಿಕ್ಕುಗಳು.

೧೧. **ಅಷ್ಟದಿಗುದಂತಿ :**

–ಐರಾವತ, ಪುಂಡರೀಕ, ವಾಮನ, ಕುಮುದ, ಅಂಜನ, ಪುಷ್ಪದಂತ, ಸಾರ್ವಭೌಮ, ಸುಪ್ರತೀಕ–ಇವು ಎಂಟು ದಿಗ್ಗಜಗಳು.

೧೨. **ಅಷ್ಟಭೋಗ :**

–ಸ್ತ್ರೀ, ಸ್ನಾನ, ಭೋಜನ, ವಸ್ತ್ರ, ಗಂಧ, ಪುಷ್ಪ, ತಾಂಬೂಲ, ಶಯ್ಯೆ–ಇವು ಎಂಟು ವಿಧದ ಭೋಗಗಳು.

೧೩. **ಅಷ್ಟಮದ :**

–ಅಂತರಂಗ–ಸಂಸ್ಥಿತ, ತೃಣೀಕೃತ, ವರ್ತಿನಿ, ಕ್ರೋಧಿನಿ, ಮೋಹಿನಿ, ಅತಿಚಾರಿಣಿ, ಗಂಧಚಾರಿಣಿ, ವಾಸಿನಿ.

–ಬಹಿರಂಗ–ಕುಲ, ಛಲ, ಧನ, ರೂಪ, ಯೌವನ, ವಿದ್ಯೆ, ರಾಜ್ಯ, ತಪ.

ಇವು ಎಂಟು ಮದಗಳು.

೧೪. **ಅಷ್ಟಮಹಾಸಿದ್ಧಿ:**

–ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ. ಪ್ರಾಕಾಮ್ಯ, ಈಶಿತ್ವ, ವಶಿತ್ವ–ಇವು ಎಂಟು ಮಹಾಸಿದ್ಧಿಗಳು.

೧೫. **ಅಷ್ಟವಿಧಾರ್ಚನೆ :** .

–ಜಲ, ಗಂಧ, ಅಕ್ಷತೆ, ಪತ್ರಪುಷ್ಪ, ಧೂಪ, ದೀಪ, ನೈವೇದ್ಯ, ತಾಂಬೂಲ ಎಂಬ ಎಂಟು ವಸ್ತುಗಳಿಂದ ಪೂಜಿಸುವುದು.

೧೬. **ಅಷ್ಟಾಂಗಯೋಗ :**

–ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಎಂಬ ಎಂಟು ಯೋಗದ ಅಂಗಗಳು.

೧೭. **ಅಷ್ಟಾದಶ ಜಾತಿ** (ಹದಿನೆಂಟು ಜಾತಿ):

(i) ಬ್ರಾಹ್ಮಣ, ಕ್ಷತ್ರೀಯ, ವೈಶ್ಯ, ಲಿಂಗವಂತ, ಬಣಜಿಗ, ಗಂಗಡಿಕಾರ ಒಕ್ಕಲಿಗ, ಮಡಿವಾಳ, ಕೆಲಸಿಗ, ಕುರುಬ, ಕುಂಬಾರ, ಕಟುಕ, ಬಡಗಿ, ಅಕ್ಕಸಾಲೆ, ತೊರೆಯ, ಉಪ್ಪಾರ, ಬೆಸ್ತ, ಹೊಲೆಯ, ಮಾದಿಗ(ಚಿಕದೇವರಾಯ ಯಶೋಭೂಷಣ).

(ii) ಬ್ರಾಹ್ಮಣ, ಕ್ಷತ್ರೀಯ, ಬಣಜಿಗ, ಒಕ್ಕಲಿಗ, ಗೊಲ್ಲ, ಕುಂಬಾರ, ಪಂಚಾಳ, ಉಪ್ಪಾರ, ನಾಯಿದ, ಡೊಂಬ, ಅಸಗ, ಜಾಡ, ಕಬ್ಬಲಿಗ, ಹೊಲೆಯ, ಈಡಿಗ, ಸಮ್ಮಗಾರ, ಮಚ್ಚಿಗ,ಮಾದಿಗ(ವಚಶಾ–I).

(iii) ಬ್ರಹ್ಮ, ಕ್ಷತ್ರೀಯ, ವೈಶ್ಯ, ಶೂದ್ರ, ವ್ಯಾವಹಾರಿಕ, ಗೋರಕ್ಷಕ, ಶಿಲ್ಪಕ, ಪಂಚಾಳ, ಕುಂಭಕಾರ, ತೆಂತುವಾಯ, ಕ್ಷೌರಿಕ, ರಜಕ, ವಸ್ತ್ರಭೇದಕ, ಚರ್ಮಕಾರ, ತಿಲಘಾತ, ಲುಬ್ಧಕ, ಚಂಡಾಲ, ಮಾತಂಗ(ಶಬ್ದರತ್ನಾಕರ)–ಇವು ಹದಿನೆಂಟು ಜಾತಿ ಅಥವಾ ವರ್ಣಗಳು.

೧೮. **ಅಷ್ಟಾದಶ ವಿದ್ಯೆ :**

–ನಾಲ್ಕು ವೇದಗಳು (ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ), ಆರು ವೇದಾಂಗಗಳು(ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜೋತಿಷ್ಯ, ಕಲ್ಪ), ಧರ್ಮಶಾಸ್ತ್ರ, ಪುರಾಣ, ಮೀಮಾಂಸಾ, ನ್ಯಾಯ, ಆಯುರ್ವೇದ, ಧನುರ್ವೇದ, ಗಾಂಧರ್ವವೇದ, ಅರ್ಥಶಾಸ್ತ್ರ–ಇವು ೧೮ ವಿದ್ಯೆಗಳು.

೧೯. **ಅಷ್ಟಾವಧಾನ :**

–(ಅ)ನಾಲ್ಕು ವೇದಗಳ ಋಕ್ಕುಗಳ ಪಠಣ, ಪುರಾಣ ಶ್ಲೋಕ ವಾಚನ, ಸ್ತೋತ್ರ ಪಾಠ, ಪಂಚಾಂಗ ಶ್ರವಣ, ಸಂಗೀತ.

–(ಆ) ಈ ಎಂಟು ವಿಷಯಗಳಿಗೆ ಏಕಕಾಲದಲ್ಲಿ ಗಮನ ಕೊಡುವುದು: ಚದುರಂಗ, ಕವಿತ್ವ, ಲೇಖನ, ಪಠಣ, ಗಣಿತ, ಸಂಗೀತ, ಯುಕ್ತಿಕಥನ, ವ್ಯಸ್ತಾಕ್ಷರಿ–ಇವುಗಳನ್ನು ಬಲ್ಲವನು ಅಷ್ಟಾವಧಾನಿ.

೨೦. ಅಷ್ಟಾವರಣ:

–ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ–ಇವು ಎಂಟು ಆವರಣಗಳು.

೨೧. ಆಕಾಶತ್ರಯ :

–ದಿಟಾಕಾಶ, ಘಟಾಕಾಶ, ಮಹದಾಕಾಶ. ಅಥವಾ ಆಕಾಶ, ಚಿತ್ತಾಕಾಶ, ಚಿದಾಕಾಶ–ಇವು ಮೂರು ಆಕಾಶಗಳು.

೨೨. ಇಪ್ಪತ್ತೊಂದುದೀಕ್ಷೆ:

– ವೇದಾದೀಕ್ಷೆಯಲ್ಲಿ–ಆಜ್ಞಾ, ಉಪಮಾ, ಸ್ವಸ್ತಿಕಾರೋಹಣ, ಕಲಶಾಭಿಷೇಕ; ವಿಭೂತಿಪಟ್ಟ, ಲಿಂಗಾಯತ, ಲಿಂಗಾಸ್ವಾಯತ.

ಮಂತ್ರ ದೀಕ್ಷೆಯಲ್ಲಿ–ಸಮಯ, ನಿಸ್ಸಂಸಾರ, ನಿರ್ವಾಣ, ತತ್ವ, ಆಧ್ಯಾತ್ಮ, ಅನುಗ್ರಹ, ಸತ್ಯಸಿದ್ಧ.

ಕ್ರಿಯಾದೀಕ್ಷೆಯಲ್ಲಿ–ಏಕಾಗ್ರಚಿತ್ತ, ದೃಢವ್ರತ, ಪಂಚೇಂದ್ರಿಯಾರ್ಪಿತ, ಅಹಿಂಸೆ, ಮನೋಲಯ, ಅಂಗನಿಜ, ಸದ್ಯೋನ್ಮುಕ್ತಿ.

೨೩. ಈರೇಳು ಭುವನ :

–ಅತಳ, ವಿತಳ, ಸುತಳ, ಮಹೀತಳ, ತಳಾತಳ, ರಸಾತಳ, ಪಾತಾಳ–ಇವು ಏಳು ಅಧೋಲೋಕ.

–ಭೂಲೋಕ, ಭುವರ್ಲೋಕ, ಸ್ವರ್ಲೋಕ, ಮಹರ್ಲೋಕ, ಜನರ್ಲೋಕ, ತಪರ್ಲೋಕ, ಸತ್ಯಲೋಕ–ಇವು ಏಳು ಊರ್ಧ್ವಲೋಕ. ಒಟ್ಟು ೧೪ ಲೋಕಗಳು.

೨೪. ಈಷಣತ್ರಯ :

–ದಾರೇಷಣ, ಪುತ್ರೇಷಣ, ವಿತ್ತೇಷಣ–ಇವು ಮೂರು ಈಷಣಗಳು

೨೫. ಏಕಾದಶ ಪ್ರಸಾದ :

–ಗುರುಪ್ರಸಾದ, ಲಿಂಗಪ್ರಸಾದ, ಜಂಗಮಪ್ರಸಾದ, ಪ್ರಸಾದಿಯಪ್ರಸಾದ, ಆಪ್ಯಾಯನಪ್ರಸಾದ, ಸಮಯಪ್ರಸಾದ, ಪಂಚೇಂದ್ರಿಯ ವಿರಹಿತಪ್ರಸಾದ, ಅಂತಃಕರಣಚತುಷ್ಟಯವಿರಹಿತಪ್ರಸಾದ, ಸದ್ಭಾವಪ್ರಸಾದ, ಸಮತಾ ಪ್ರಸಾದ, ಜ್ಞಾನ ಪ್ರಸಾದ–ಇವು ೧೧ ಪ್ರಸಾದ ಪ್ರಕಾರಗಳು.

೨೬. ಐವತ್ತೆರಡಕ್ಷರ:

–ಅ ಆ ಇ ಈ ಉ ಊ ಋ ೠ ಲೃ ಲೄ ಏ ಐ ಓ ಔ ಅಂ ಅಃ, ಕ ಖಗ ಘ ಙ, ಚಛಜಝಞ, ಟಠಡಢಣ, ತಥದಧನ, ಪಫಬಭಮ, ಯರಲವಶಷಸ ಹ ಕ್ಷ–ಇವು ಐವತ್ತೆರಡು ಅಕ್ಷರಗಳು. ಇವು ಆರು ಚಕ್ರಗಳಿಗೆ ಸಂಬಂಧಿಸಿವೆ ಎಂದು ಹೇಳಲಾಗುತ್ತದೆ. ಆಧಾರ ಚಕ್ರದಲ್ಲಿ–೪, ಸ್ವಾದಿಷ್ಠಾನ ಚಕ್ರದಲ್ಲಿ–೬, ಮಣಿಪೂರಕಚಕ್ರದಲ್ಲಿ ೧೦, ಅನಾಹತ ಚಕ್ರದಲ್ಲಿ–೧೨, ವಿಶುದ್ಧಿಚಕ್ರದಲ್ಲಿ–೧೬ ಮತ್ತು ಆಜ್ಞಾಚಕ್ರದಲ್ಲಿ–೨ ಇವೆಯೆಂದು ತಿಳಿಯಲಾಗುತ್ತದೆ.

೨೭. ಓಂಕಾರ : (ಅಕ್ಷರತ್ರಯ)

–ಅ. ಉ, ಮ–ಈ ಮೂರು ಅಕ್ಷರ ಸೇರಿದ್ದು.

೨೮. ಗುಣತ್ರಯ : (ತ್ರಿಗುಣ)

–ಸತ್ವ, ರಜ, ತಮ–ಇವು ಮೂರು ಗುಣಗಳು.

೨೯. ಚತುರ್ಮುಖಲಿಂಗ:

–ಮನ, ಬುದ್ಧಿ, ಚಿತ್ತ, ಅಹಂಕಾರ ಇವುಗಳಲ್ಲಿ ಪ್ರತಿಷ್ಠಿಸಿದ ಲಿಂಗ.

೩೦. **ಚತುರ್ಯುಗ :** (ನಾಲ್ಕುಯುಗ)

–ಕೃತಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗ–ಇವು ನಾಲ್ಕು ಯುಗಗಳು

೩೧. **ಚತುರ್ವಿಧ ಅರ್ಪಿತ:**

–ಶುದ್ಧ–ಸಿದ್ಧ–ಪ್ರಸಿದ್ಧ–ಸಮಯ ಪ್ರಸಾದಗಳನ್ನು ಗುರು–ಲಿಂಗ–ಜಂಗಮ–ಮಹಾಲಿಂಗಗಳಿಗೆ ಅರ್ಪಿಸುವುದು.

೩೨. **ಚತುರ್ವಿಧ ಪ್ರಸಾದ:**

–೧. ಅಚ್ಚಪ್ರಸಾದ, ನಿಚ್ಚಪ್ರಸಾದ, ಸಿದ್ಧಪ್ರಸಾದ, ಸಮಯ ಪ್ರಸಾದ–ಇವು ನಾಲ್ಕು ಪ್ರಸಾದಗಳು ಪ್ರಸಾದ.

–೨. ಗುರುಪ್ರಸಾದ, ನಿತ್ಯಪ್ರಸಾದ, ಜ್ಞಾನಪ್ರಸಾದ, ಸಿದ್ಧಪ್ರಸಾದ–ಇವು ನಾಲ್ಕು ಪ್ರಸಾದಗಳು.

೩೩. **ಚತುರ್ವಿಧ ಪದ :** (ಪದನಾಲ್ಕು)

–ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ–ಇವು ನಾಲ್ಕು ಪದವಿಗಳು. ಇವುಗಳಿಗೆ ಮೋಕ್ಷಗಳು ಎಂದೂ ಕರೆಯಲಾಗುತ್ತದೆ.

೩೪. **ಚತುರ್ವಿಧ ಪುರುಷಾರ್ಥ :**

–ಧರ್ಮ, ಅರ್ಥ, ಕಾಮ, ಮೋಕ್ಷ–ಇವು ನಾಲ್ಕು ಪುರುಷಾರ್ಥಗಳು.

೩೫. **ಚತುರ್ವಿಧಫಲ:**

–೧.ಅಣಿಮಾ, ಮಹಿಮಾ, ಗರಿಮಾ, ಲಘಿಮಾ–ಎಂಬ ಸಿದ್ಧಿಗಳು.

–೨.ಧರ್ಮ, ಅರ್ಥ, ಕಾಮ, ಮೋಕ್ಷ–ಎಂಬ ಪುರುಷಾರ್ಥಗಳು.

೩೬. **ಚತುರ್ವಿಧ ಶಬ್ದ(ವಾಣಿ ನಾಲ್ಕು):**

–ಪರೆ, ಪಶ್ಯಂತಿ, ಮಧ್ಯಮೆ, ವೈಖರಿ ಎಂಬ ನಾಲ್ಕು ಶಬ್ದಗಳು

೩೭. **ಚತುರ್ವಿಧ ಸ್ವಾಯತ:**

–ಲಿಂಗಸ್ವಾಯತ, ಜಂಗಮಸ್ವಾಯತ, ಪ್ರಸಾದಸ್ವಾಯತ, ಅನುಭಾವಸ್ವಾಯತ–ಇವು ನಾಲ್ಕು ಸ್ವಾಯತಗಳು

೩೮. **ಚತುರ್ವಿಧ ಸ್ಥಲ :**

– (೧) ಮನಸ್ಥಲ, ತನುಸ್ಥಲ, ಕರಸ್ಥಲ, ಪ್ರಾಣಸ್ಥಲ

– (೨) ಗುರುಸ್ಥಲ, ಲಿಂಗಸ್ಥಲ, ಜಂಗಮಸ್ಥಲ, ಪ್ರಸಾದಸ್ಥಲ

– (೩) ಬ್ರಹ್ಮರಂಧ್ರ, ಭ್ರೂಮಧ್ಯ, ನಾಸಿಕಾಗ್ರ, ಚೌಕಮಧ್ಯ

೩೯. **ತತ್ವತ್ರಯ:**

– (೧)ಶಿವತತ್ವ, ವಿದ್ಯಾತತ್ವ, ಪ್ರಕೃತಿತತ್ವ–ಇವು ಮೂರು ತತ್ವಗಳು.

– (೨)ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ–ಇವು ಮೂರು ತತ್ವಗಳು.

– (೩)ಸಕಲ, ಸಕಲನಿಷ್ಕಲ, ನಿಷ್ಕಲ–ಇವು ಮೂರು ತತ್ವಗಳು.

೪೦. **ತತ್ವಮಸಿ :**

–ತತ್, ತ್ವಂ, ಅಸಿ–ಇವು ಮೂರು ಪದಗಳು

೪೧. **ತನುತ್ರಯ :**

–ಸ್ಥೂಲ, ಸೂಕ್ಷ್ಮ, ಕಾರಣ–ಇವು ಮೂರು ತನುಗಳು.

೪೨. **ತಾಪತ್ರಯ:**

–ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ–ಇವು ಮೂರು ತಾಪಗಳು.

೪೩. **ತ್ರಿಕರಣ :**

–ಕಾಯ, ವಚನ, ಮನಸ್ಸು (ದೇಹ, ಮಾತು, ಮನಸ್ಸು); ಮನ, ವಚನ, ಕಾಯ. ಇವು ಮೂರು ಕರಣಗಳು.

೪೪. **ತ್ರಿಗುಣ** (ಗುಣತ್ರಯ):

–ಸತ್ವ, ರಜ, ತಮ–ಇವು ಮೂರು ಗುಣಗಳು.

೪೫. **ತ್ರಿನಾಳ :**

–ಅಧೋನಾಳ, ಮಧ್ಯನಾಳ, ಊರ್ಧ್ವನಾಳ–ಇವು ಮೂರು ನಾಳಗಳು.

೪೬. **ತ್ರಿಪುಟಿ :**

–ಜ್ಞಾತೃ, ಜ್ಞಾನ, ಜ್ಞೇಯ–ಇವು ಮೂರು ತ್ರಿಪುಟಿಗಳು.

೪೭. **ತ್ರಿಪುರ :**

–(೧) ದೇಹವನ್ನು ಪುರಕ್ಕೆ ಹೋಲಿಸಿ ಅದರೊಳಗಿನ ಆತ್ಮವನ್ನು ಪುರುಷ ಎಂದು ಕರೆದಿದ್ದಾರೆ. ಈತನಿಗಿರುವ ಸ್ಥೂಲ, ಸೂಕ್ಷ್ಮ, ಕಾರಣ–ಎಂಬ ಮೂರು ಶರೀರಗಳನ್ನು ಮೂರು ಪುರಗಳೆಂದು ಕರೆಯುತ್ತಾರೆ.

–(೨) ಚಿನ್ನ–ಬೆಳ್ಳಿ–ಕಬ್ಬಿಣದ ಮೂರು ಪುರಗಳು.(ಸುವರ್ಣಪುರ, ರಜತಪುರ, ಅಯಸ್‌ಪುರ)–ಇವು ತಾರಕಾಸುರನ ಮಕ್ಕಳಾದ ತಾರಕಾಕ್ಷ, ಕಮಲಾಕ್ಷ, ವಿದ್ಯುನ್ಮಾಲಿಯ ಊರುಗಳು.

೪೮. **ತ್ರಿಭುವನ** (ತ್ರಿಜಗ ತ್ರೈಜಗ ಮೂರುಲೋಕ):

–ಸ್ವರ್ಗ, ಮರ್ತ್ಯ, ಪಾತಾಳ–ಇವು ಮೂರು ಲೋಕಗಳು

೪೯. **ತ್ರಿವಿಧ ಜಲ :**

–ಕರುಣಜಲ, ವಿನಯಜಲ, ಸಮತೆಜಲ. (ಕರುಣಜಲ ಗುರುಪಾದೋದಕ, ವಿನಯಜಲ ಲಿಂಗಪಾದೋದಕ, ಸಮತೆಜಲ ಚರಪಾದೋದಕ).

೫೦. **ತ್ರಿವಿಧದೀಕ್ಷೆ**(ದೀಕ್ಷಾತ್ರಯ):

–ವೇಧಾದೀಕ್ಷೆ, ಮಂತ್ರದೀಕ್ಷೆ, ಕ್ರಿಯಾದೀಕ್ಷೆ–ಇವು ಮೂರು ದೀಕ್ಷೆಗಳು.

೫೧. **(ಅ) ತ್ರಿವಿಧಪ್ರಸಾದ :**

–(೧)ಗುರುಪ್ರಸಾದ, ಲಿಂಗಪ್ರಸಾದ, ಜಂಗಮಪ್ರಸಾದ

–(೨)ಶುದ್ಧಪ್ರಸಾದ, ಸಿದ್ಧಪ್ರಸಾದ, ಪ್ರಸಿದ್ಧಪ್ರಸಾದ

–(೩) ಆದಿಪ್ರಸಾದ, ಸೇವ್ಯಪ್ರಸಾದ, ಅಂತ್ಯಪ್ರಸಾದ

(ಆ) ತ್ರಿವಿಧಪ್ರಸಾದಿ:

–ಅಚ್ಚಪ್ರಸಾದಿ, ನಿಚ್ಚಪ್ರಸಾದಿ, ಸಮಯ ಪ್ರಸಾದಿ–ಇವರು ಮೂರು ವಿಧ ಪ್ರಸಾದಿಗಳು

೫೨. **ತ್ರಿವಿಧ ಭಕ್ತಿ:**

–ಗುರುಭಕ್ತಿ–ಲಿಂಗಭಕ್ತಿ–ಜಂಗಮಭಕ್ತಿ–ಇವು ಮೂರು ಭಕ್ತಿಗಳು.

೫೩. **ತ್ರಿವಿಧಲಿಂಗ :**

–(೧) ಆಚಾರಲಿಂಗ, ಶಿವಲಿಂಗ, ಜಂಗಮಲಿಂಗ

–(೨) ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ

೫೪. **ತ್ರಿವಿಧಸ್ಥಲ :**

–ಲಿಂಗಸ್ಥಲ, ಜಂಗಮಸ್ಥಲ, ಪ್ರಸಾದಸ್ಥಲ

೫೫. **ತ್ರಿವಿಧ ಸ್ವಾಯತ :**

–ಲಿಂಗಸ್ವಾಯತ, ಜಂಗಮಸ್ವಾಯತ, ಪ್ರಸಾದಸ್ವಾಯತ

೫೬. **ತ್ರಿವಿಧಾಮೃತ :**

–ಹಾಲು, ತುಪ್ಪ, ಸಕ್ಕರೆ; ಭಾವಾಮೃತ, ಜ್ಞಾನಾಮೃತ, ಪರಮಾರ್ಥಾಮೃತ.

೫೭. **ತ್ರಿವಿಧಾರ್ಪಿತ** (ತ್ರಿವಿಧ ದಾಸೋಹ):

–ತನು, ಮನ, ಧನ. ಗುರುವಿಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನ ಅರ್ಪಿಸುವುದು. ಇವು ತ್ರಿವಿಧ ದಾಸೋಹವೆನಿಸುತ್ತವೆ.

–ಕಾಯಾರ್ಪಿತ, ಕರಣಾರ್ಪಿತ, ಭಾವಾರ್ಪಿತ–ಇವು ಮೂರು ಅರ್ಪಿತಗಳು

೫೮. **ತ್ರಿವಿಧಾವಲೋಕನ :**

–ಲಿಂಗಾವಲೋಕನ, ಜಂಗಮಾವಲೋಕನ, ಪ್ರಸಾದಾವಲೋಕನ.

೫೯. **ತ್ರಿಸಂಧ್ಯಾಕಾಲ :**

–ಬೆಳಗು, ಮಧ್ಯಾಹ್ನ, ಸಂಜೆ

–ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲ –ಇವು ದಿನದ ಮೂರು ಸಂಧಿ ಕಾಲಗಳು.

೬೦. **ತ್ರೈಮಂಡಲ :**

–ಚಂದ್ರಮಂಡಲ, ಸೂರ್ಯಮಂಡಲ, ತಾರಾಮಂಡಲ–ಇವು ಮೂರು ಮಂಡಲಗಳು

೬೧. **ದಶದಿಕ್ಕು :**

–ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಆಗ್ನೇಯ, ನೈಋತ್ಯ, ವಾಯುವ್ಯ, ಈಶಾನ್ಯ, ಊರ್ಧ್ವದಿಶಾ(ಮೇಲೆ), ಅಧೋದಿಶಾ(ಕೆಳಗೆ)–ಇವು ಹತ್ತು ದಿಕ್ಕುಗಳು.

೬೨. **ದಶನಾಳ** (ದಶನಾಡಿ):

–ಶಂಖಿನೀ, ಲಕುಹಾ, ಅಲಂಬೂ, ಪಯಸ್ವಿನೀ, ಪೂಷಾ, ಹಸ್ತಜಿಹ್ವಾ, ಗಾಂಧಾರಿ, ಇಡಾ, ಪಿಂಗಳ, ಸುಷುಮ್ನ–ಇವು ಹತ್ತು ನಾಡಿಗಳು.

೬೩. **ದಶವಾಯು :**

–ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕೃಕರ, ದೇವದತ್ತ, ಧನಂಜಯ–ಇವು ಹತ್ತು ವಾಯುಗಳು.

೬೪. **ದಶವಿಧ ಪಾದೋದಕ :**

–ಪಾದೋದಕ, ಲಿಂಗೋದಕ, ಮಜ್ಜನೋದಕ, ಸ್ಪರ್ಶನೋದಕ, ಅವಧಾರೋದಕ, ಆಪ್ಯಾಯನೋದಕ, ಹಸ್ತೋದಕ, ಪರಿಣಾಮೋದಕ, ನಿರ್ನಾಮೋದಕ, ಸತ್ಯೋದಕ–ಇವು ಹತ್ತು ಪಾದೋದಕ ಪ್ರಕಾರಗಳು.

೬೫. **ದಶೇಂದ್ರಿಯ :**

–ಶ್ರೋತ್ರ, ನೇತ್ರ, ತ್ವಕ್ಕು, ಘ್ರಾಣ, ಜಿಹ್ವೆ–ಇವು ಐದು ಜ್ಞಾನೇಂದ್ರಿಯಗಳು

–ವಾಕ್, ಪಾಣಿ, ಪಾದ, ಗುದ, ಗುಹ್ಯ–ಇವು ಐದು ಕರ್ಮೇಂದ್ರಿಯಗಳು.

೬೬. **ದ್ವಾದಶಪ್ರಣವ:**

ಅ ಉ ಮ ಬಸವ ಓಂ ನಮಃ ಶಿವಾಯ–ಇವು ಹನ್ನೆರಡು ಪ್ರಣವಗಳು

೬೭. **ದ್ವಾದಶಾದಿತ್ಯರು :**

–ಧಾತ, ಅರ್ಯಮ, ಮಿತ್ರ, ವರುಣ, ಇಂದ್ರ, ವಿವಸ್ವಾನ್, ಪರ್ಜನ್ಯ, ಪೂಷ, ಅಂಶುಮಾನ್, ಗಭಸ್ತಿಮಾನ್, ತ್ವಷ್ಟ್ರ, ವಿಷ್ಣು–ಇವರು ೧೨ ಜನ ಆದಿತ್ಯರು.

೬೮. **ನವಖಂಡ :**

–ಇಳಾವೃತ, ಭದ್ರಾಶ್ವ, ಕೇತುಮಾಲ, ರಮ್ಯಕ, ಹಿರಣ್ಯಕ, ಕುರು, ಹರಿ, ಕಿಂಪುರುಷ, ಭಾರತ–ಇವು ಒಂಬತ್ತು ಖಂಡಗಳು.

೬೯. **ನವಚಕ್ರ :**

–ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆ, ಬ್ರಹ್ಮಚಕ್ರ, ಶಿಖಾಚಕ್ರ, ಪಶ್ಚಿಮಚಕ್ರ–ಇವು ಒಂಬತ್ತು ಚಕ್ರಗಳು.

೭೦. **ನವದ್ವಾರ :**

–ಕಣ್ಣುಗಳು–೨, ಕಿವಿಗಳು–೨, ಮೂಗಿನ ಹೊಳ್ಳೆಗಳು–೨, ಮತ್ತು ಬಾಯಿ, ಮೂತ್ರದ್ವಾರ, ಗುದದ್ವಾರ–ಇವು ಒಂಬತ್ತು ದೇಹದ ದ್ವಾರಗಳು.

೭೧. **ನವನಾಳ :**

–ಶಂಖಿನೀ, ಲಕುಹಾ, ಅಲಂಬೂ, ಪರಶ್ವಿನೀ, ಪೂಷಾ, ಹಸ್ತಿಜಿಹ್ವಾ, ಗಾಂಧಾರೀ, ಇಡಾ, ಪಿಂಗಳ–ಇವು ಒಂಬತ್ತು ನಾಳಗಳು.

೭೨. **ನವಬ್ರಹ್ಮರು :**

–ಮರೀಚಿ, ಭೃಗು, ಆಂಗೀರಸ, ಪುಲಸ್ತ್ಯ, ಪುಲಹ, ಕ್ರತು, ದಕ್ಷ, ಅತ್ರಿ, ವಸಿಷ್ಠ–ಇವರು ಒಂಬತ್ತು ಜನ ಬ್ರಹ್ಮರು.

೭೩. **ನವರಸ :**

–ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಬೀಭತ್ಸ, ಅದ್ಭುತ, ಶಾಂತ–ಇವು ಒಂಬತ್ತು ಕಾವ್ಯದ ರಸಗಳು.

೭೪. **ನಾಡಿತ್ರಯ :**

–ಇಡಾ, ಪಿಂಗಳ, ಸುಷುಮ್ನ–ಇವು ಮೂರು ನಾಡಿಗಳು.

೭೫. **ನಾಳತ್ರಯ :**

–ಅಧೋನಾಳ, ಮಧ್ಯನಾಳ, ಊರ್ಧ್ವನಾಳ–ಇವು ಮೂರು ನಾಳಗಳು

೭೬.**ಪಂಚ ಕಲೆಗಳು :**

–ನಿವೃತ್ತಿ ಕಲೆ, ಪ್ರತಿಜ್ಞಾಕಲೆ, ವಿದ್ಯಾಕಲೆ, ಶಾಂತಿಕಲೆ, ಶಾಂತ್ಯಾತೀತ ಕಲೆ–ಇವು ಐದು ಕಲೆಗಳು.

೭೭. **ಪಂಚಗವ್ಯ :**

–ನಂದಿ, ಭದ್ರೆ, ಸುರಭಿ, ಸುಶೀಲೆ, ಸುಮನೆ–ಎಂಬ ಐದು ಗೋವುಗಳು. ಇವುಗಳಿಗೆ ಸಂಬಂಧವಾದುವು ಐದು ಗವ್ಯಗಳು : ಗೋಕ್ಷೀರ, ಗೋದಧಿ, ಗೋಘೃತ, ಗೋಮೂತ್ರ, ಗೋಮಯ.

೭೮. **ಪಂಚತತ್ವ :**

–(೧) ಪೃಥ್ವಿ, ಆಪ್, ತೇಜ, ವಾಯು, ಆಕಾಶ–ಎಂಬ ಐದು ತತ್ವಗಳು

–(೨) ಶಿವ, ಶಕ್ತಿ, ಈಶ್ವರ, ಸದಾಶಿವ, ವಿದ್ಯೆ–ಎಂಬ ಐದು ತತ್ವಗಳು.

೭೯. **ಪಂಚತನ್ಮಾತ್ರೆ** (ಪಂಚವಿಷಯಗಳು):

–ಶಬ್ದ, ಸ್ಪರ್ಶ, ರೂಪ, ರಸ, ಗಂಧ–ಈ ಐದು ವಿಷಯಗಳಿಗೆ ಪಂಚತನ್ಮಾತ್ರೆಗಳೆಂದೂ ಕರೆಯಲಾಗುತ್ತದೆ.

೮೦. **ಪಂಚನಷ್ಟ:**

–ತನು, ಮನ, ನೆನಹು, ಭಾವ, ಜ್ಞಾನ–ಇವು ಐದು ನಷ್ಟಗಳು.

೮೧. **ಪಂಚಬ್ರಹ್ಮ :**

–ಸದಾಶಿವ, ಶಿವ, ರುದ್ರ, ವಿಷ್ಣು, ಬ್ರಹ್ಮ–ಎಂಬ ಪರಮಾತ್ಮನ ಐದು ಸ್ವರೂಪಗಳು.

೮೨. **ಪಂಚಭೂತಗಳು** (ಪಂಚಮಹಾಭೂತಗಳು):

–ಪೃಥ್ವಿ, ಆಪ್, ತೇಜ, ವಾಯು, ಆಕಾಶ–ಇವು ಐದು ಭೂತಗಳು.

೮೩. **ಪಂಚಭೌತಿಕತನು :** (ಪಂಚಭೂತಕಾಯ)

–ಪೃಥ್ವಿ, ಆಪ್, ತೇಜ, ವಾಯು, ಆಕಾಶವೆಂಬ ಪಂಚಭೂತಗಳಿಂದಾದ ದೇಹ.

೮೪. **ಪಂಚ ಮಹಾಪಾತಕಗಳು :**

–(೧) ಬ್ರಹ್ಮಹತ್ಯೆ, ಸುರಾಪಾನ, ಸ್ವರ್ಣಸ್ತೇಯ, ಗುರುಭಾರ್ಯಾಗಮನ ಮತ್ತು ಇವುಗಳನ್ನು ಮಾಡುವವರ ಸಂಸರ್ಗ.

–(೨) ಅಂಗದ ಮೇಲೆ ಲಿಂಗಧರಿಸಿ ಅದನ್ನು ಗೌರವಿಸದಿರುವುದು, ಭವಿಪಾಕಕ್ಕೆ ಎಳಸುವುದು, ಪ್ರತಿಮೆಗಳಿಗೆ ನಮಸ್ಕರಿಸುವುದು, ಪ್ರಸಾದಿ ಸ್ಥಲವನರಿಯದಿರುವುಬು, ಸುಳುಹಡಗಿ ಲಿಂಗಲೀಯ ಮಾಡುವುದು.

–(೩) ಗುರುದ್ರೋಹ, ಲಿಂಗದ್ರೋಹ, ಜಂಗಮದ್ರೋಹ, ಪ್ರಸಾದದ್ರೋಹ, ಆಚಾರದ್ರೋಹ.

–(೪) ಭಕ್ತರ ಕಂಡು ಉದಾಸೀನ ಮಾಡುವುದು, ಭಕ್ತರ ಸಮಯೋಚಿತ ವನರಿಯದಿರುವುದು, ಭಕ್ತರ ಸಕಲರತಿಗೆ ಸಲ್ಲದಿರುವುದು, ಭಕ್ತರೊಡನೆ ಮಾರುತ್ತರ ಕೊಡುವುದು, ಭಕ್ತರಿಗೆ ಮಾಡಿದೆನೆಂದು ಮನದಲ್ಲಿ ಹೊಳೆಯುವುದು.

೮೫. **ಪಂಚಮಹಾವಾದ್ಯಗಳು:**

–ಶ್ರುತಿ, ನಾಗಸ್ವರ, ತಾಳ, ಸಮ್ಮೇಳ, ಚಂದ್ರವಾದ್ಯ ಇವು ಐದು ವಾದ್ಯಗಳು

೮೬. **ಪಂಚಮಹಾಯಜ್ಞ:**

–(೧) ದೇವಯಜ್ಞ, ಪಿತೃಯಜ್ಞ, ಮನುಷ್ಯಯಜ್ಞ, ಭೂತಯಜ್ಞ, ಬ್ರಹ್ಮಯಜ್ಞ–ಇವು ಐದು ಯಜ್ಞಗಳು.

–(೨) ಸಂಧ್ಯಾವಂದನ, ಪಿತೃತರ್ಪಣ, ಹೋಮ, ವೈಶ್ವದೇವ, ಅತಿಥಿ ಸತ್ಕಾರ–ಇವು ಪಂಚಮಹಾಯಜ್ಞ ಎಂದು ಕರೆಯಿಸಿಕೊಳ್ಳುತ್ತವೆ.

೮೭. **ಪಂಚಲಿಂಗ:**

–ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ–ಇವು ಐದು ಲಿಂಗಗಳು.

೮೮. **ಪಂಚವಕ್ತ್ರ** (ಪಂಚಮುಖಲಿಂಗ):

–ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ–ಇವು ಪರಮಾತ್ಮನ ಐದು ಮುಖಗಳು.

೬೯. ಪಂಚಜ್ಞಾನ:

–ಜ್ಯೋತಿ, ಶ್ರುತಿ, ಅವಧಿ, ಕೇವಲ, ಮಹಾವ್ರತ–ಇವು ಐದು ಜ್ಞಾನಗಳು.

೯೦. ಪಂಚವರ್ಣ :

–ಶ್ವೇತ, ಪೀತ, ಹರಿತ, ಮಾಂಜಿಷ್ಟ, ಕೃಷ್ಣ–ಇವು ಐದು ಬಣ್ಣಗಳು.

೯೧. ಪಂಚವಿಂಶತಿ ತತ್ವಗಳು :

–೪ ಅಂತಃಕರಣ ಚತುಷ್ಟಯ–ಮನ, ಬುದ್ಧಿ, ಚಿತ್ತ ಅಹಂಕಾರ ಮತ್ತು ಆತ್ಮ ಸೇರಿ ಐದು ತತ್ವಗಳು.

–೫ ಪ್ರಾಣವಾಯುಗಳು–ಸಮಾನ, ವ್ಯಾನ, ಉದಾನ, ಅಪಾನ, ಪ್ರಾಣವಾಯು.

–೫ ಜ್ಞಾನೇಂದ್ರಿಯಗಳು–ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವೆ, ಘ್ರಾಣ.

–೫ ವಿಷಯಗಳು–ಶಬ್ದ, ಸ್ಪರ್ಶ, ರೂಪ, ರಸ, ಗಂಧ.

–೫ ಕರ್ಮೇಂದ್ರಿಯಗಳು–ವಾಕ್, ಪಾಣಿ, ಪಾದ. ಪಾಯು, ಗುಹ್ಯ ಇವು ಒಟ್ಟಾಗಿ ೨೫ ತತ್ವಗಳೆನಿಸುತ್ತವೆ. ಕೆಲವರು ೫ ಪ್ರಾಣವಾಯುಗಳ ಬದಲು ಪೃಥ್ವಿ, ಆಪ್, ತೇಜ, ವಾಯು, ಆಕಾಶ ಎಂಬ ಪಂಚಭೂತಗಳನ್ನು ಸೇರಿಸಿ ೨೫ ತತ್ವಗಳೆಂದು ಹೇಳುತ್ತಾರೆ.

೯೨. ಪಂಚಶುದ್ಧಿ :

–ಆತ್ಮಶುದ್ಧಿ, ಸ್ಥಾನಶುದ್ಧಿ, ದ್ರವ್ಯಶುದ್ಧಿ, ಮಂತ್ರಶುದ್ಧಿ, ಲಿಂಗಶುದ್ಧಿ–ಇವು ಐದು ಶುದ್ಧಿಗಳು.

೯೩. ಪಂಚ ಸಂಜ್ಞೆ:

–ಪರ, ಗೂಢ, ಶರೀರಸ್ಥ, ಲಿಂಗಕ್ಷೇತ್ರ, ಅನಾದಿವತ್–ಇವು ಐದು ಸಂಜ್ಞೆಗಳು.

೯೪. ಪಂಚಸಾದಾಖ್ಯ :

–ಕರ್ಮಸಾದಾಖ್ಯ, ಕರ್ತೃಸಾದಾಖ್ಯ, ಮೂರ್ತಿಸಾದಾಖ್ಯ, ಅಮೂರ್ತಿಸಾದಾಖ್ಯ, ಶಿವಸಾದಾಖ್ಯ–ಇವು ಐದು ಸಾದಾಖ್ಯಗಳು.

೯೫. ಪಂಚಸೂತಕ :

–ಜಾತಿಸೂತಕ, ಜನನಸೂತಕ, ಪ್ರೇತಸೂತಕ, ರಜಸ್ಸೂತಕ, ಉಚ್ಚಿಷ್ಟ (ಎಂಜಲು) ಸೂತಕ–ಇವು ಐದು ಸೂತಕಗಳು.

–ಕುಲ, ಛಲ, ತನು, ಮನ, ನೆನಹು, ಭಾವಸೂತಕ–ಇವು ಆರು ಸೂತಕಗಳೆಂದೂ ಹೇಳಲಾಗುತ್ತದೆ.

೯೬. ಪಂಚಾಚಾರ:

– ಸದಾಚಾರ, ಲಿಂಗಾಚಾರ, ಭೃತ್ಯಾಚಾರ, ಶಿವಾಚಾರ–ಇವು ಐದು ಆಚಾರಗಳು.

೯೭. ಪಂಚಾಮೃತ :

–ಹಾಲು, ಮೊಸರು, ತುಪ್ಪ, ಜೇನು, ಸಕ್ಕರೆಗಳ ಮಿಶ್ರಣ.

೯೮. ಪಂಚಾರತಿ :

–ದೀಪ, ಕಮಲ, ವಸ್ತ್ರ, ಆಮ್ರಫಲ, ಪೂಗೀಫಲ–ಇವುಗಳ ಸಮಾಗಮ.

೯೯. ಪಂಚೇಂದ್ರಿಯ :

–ನೇತ್ರ, ತ್ವಕ್, ಶ್ರೋತ್ರ, ಜಿಹ್ವೆ, ಘ್ರಾಣ, (ಕಣ್ಣು, ತ್ವಚೆ, ಕಿವಿ, ನಾಲಿಗೆ, ಮೂಗು) ಇವು ಐದು ಜ್ಞಾನೇಂದ್ರಿಯಗಳು.

–ವಾಕ್, ಪಾಣಿ, ಪಾದ, ಗುದ, ಗುಹ್ಯ–ಇವು ಐದು ಕರ್ಮೇಂದ್ರಿಯಗಳು.

೧೦೦. ಪ್ರಣಮ ಪಂಚಾಕ್ಷರಿ :

–ಓಂ ನಮಃ ಶಿವಾಯ–ಈ ಆರು ಷಡಕ್ಷರಿ ಮಂತ್ರ ಎನಿಸುತ್ತವೆ.

೧೦೧. ಪಂಚಶಕ್ತಿಯರು:

–ಪರಾಶಕ್ತಿ, ಆದಿಶಕ್ತಿ; ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ–ಈ ಐದು ಶಕ್ತಿಯರು.

೧೦೨. ಪಂಚಸ್ಥಲ:

–ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ–ಇವು ಐದು ಸ್ಥಲಗಳು ಇವುಗಳನ್ನು ಪಂಚಜ್ಞಾನಗಳ ಹಿನ್ನೆಲೆಯಲ್ಲಿ ಹೇಳಲಾಗುತ್ತದೆ.

೧೦೩. ಪಂಚಾಚಾರಸ್ಥಲ:

–ಗುರು, ಲಿಂಗ ಜಂಗಮ, ಪಾದೋದಕ, ಪ್ರಸಾದಸ್ಥಲ–ಇವು ಐದು ಸ್ಥಲಗಳು

೧೦೪. ಮಲತ್ರಯ (ತ್ರಿವಿಧಮಲ):

–ಆಣವಮಲ, ಮಾಯಾಮಲ, ಕಾರ್ಮಿಕಮಲ–ಇವು ಮೂರು ಮಲಗಳು.

೧೦೫.ಮೂವತ್ತಾರು ತತ್ವ:

–(೧)ಆತ್ಮತತ್ವ ಇಪ್ಪತ್ತೈದು–ಪಂಚಮಹಾಭೂತ, ಪಂಚಜ್ಞಾನೇಂದ್ರಿಯ, ಪಂಚವಿಷಯ, ಪಂಚಕರ್ಮೇಂದ್ರಿಯ, ಆಕಾಶ ಪಂಚಕಗಳು(ಮನ, ಬುದ್ಧಿ, ಚಿತ್ತ, ಅಹಂ, ಕಾರ, ಆತ್ಮ)

–ವಿದ್ಯಾತತ್ವ ಹತ್ತು–ಪಂಚಸಾದಾಖ್ಯ, ಪಂಚಕಲೆ

–ಶಿವತತ್ವ ಒಂದು–ಪರಶಿವ

–(೨) ಶಿವ, ಶಕ್ತಿ, ಸದಾಶಿವ, ಈಶ್ವರ, ವಿದ್ಯೆ, ಕಾಲ, ನಿಯತಿ, ಕಲೆ, ಅವಿದ್ಯೆ,
ರಾಗ, ಪುರುಷ, ಪ್ರಕೃತಿ, ಮನ, ಬುದ್ಧಿ, ಚಿತ್ತ, ಅಹಂಕಾರ, ಶ್ರೋತ್ರ, ನೇತ್ರ,
ಜಿಹ್ವೆ, ಘ್ರಾಣ, ತ್ವಕ್ಕು, ವಾಕ್, ಪಾಣಿ, ಪಾದ, ಗುದ, ಗುಹ್ಯ, ಶಬ್ದ, ಸ್ಪರ್ಶ, ರೂಪ, ರಸ,
ಗಂಧ, ಆಕಾಶ, ವಾಯು, ತೇಜ, ಜಲ, ಭೂಮಿ–ಇವು ಆಗಮೋಕ್ತ ಮೂವತ್ತಾರು ತತ್ವಗಳು.

೧೦೬. ಷಟ್ಕರ್ಮ :

–ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ–ಇವು ಆರು ಕರ್ಮಗಳು.

೧೦೭. ಷಟ್‌ಸಮಯ:

–ಶೈವ, ವೈಷ್ಣವ, ಚಾರ್ವಾಕ, ಬೌದ್ಧ, ಜೈನ, ನೈಯಾಯಿಕ–ಇವು ಐದು ಸಮಯಗಳು.

೧೦೮.ಷಡ್‌ಭ್ರಮೆ:

–ಜಾತಿ, ವರ್ಣ, ಆಶ್ರಮ, ಕುಲ, ಗೋತ್ರ, ನಾಮ–ಇವು ಆರು ಭ್ರಮೆಗಳು.

೧೦೯. ಷಟ್‌ಸ್ಥಲ(ಷಡುಸ್ಥಲ):

–ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗ, ಶರಣ, ಐಕ್ಯ–ಇವು ಎಂಟು ಸ್ಥಲಗಳು.

೧೧೦. ಷಡಂಗ:

–ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಆತ್ಮ–ಇವು ಆರು ಅಂಗಗಳು.

೧೧೧. ಷಡಧ್ವ :

–ವರ್ಣಾಧ್ವ, ಪದಾಧ್ವ, ಮಂತ್ರಾಧ್ವ, ಭುವನಾಧ್ವ, ಕಲಾಧ್ವ, ತತ್ತ್ವಾಧ್ವ–ಇವು ಆರು ಮಾರ್ಗಗಳು.

೧೧೨. **ಷಡ್ವ್ರತ** (ಆರುವ್ರತ):

–(೧) ಗೌರವ ಬುದ್ಧಿ, ಲಿಂಗಲೀಯ, ಜಂಗಮಾನುಭಾವ, ಏಕಾದಶ ಪ್ರಸಾದ ಪರಿಜ್ಞಾನ, ದಶವಿಧ ಪಾದೋದಕ ನಿರ್ಣಯ, ಭಕ್ತಿ ನಿರ್ವಾಹ–ಇವು ಆರು ವ್ರತಗಳು.

–(೨) ಗುರುವ್ರತ, ಲಿಂಗವ್ರತ, ಜಂಗಮವ್ರತ, ಪ್ರಸಾದವ್ರತ, ಪಾದೋದಕವ್ರತ, ಭಾಕ್ತಿಕವ್ರತ–ಇವು ಆರು ವ್ರತಗಳು.

೧೧೩.**ಷಡ್ವಿಧಲಿಂಗ(ಷಟ್‌ಲಿಂಗ):**

–ಆಚಾರಲಿಂಗ, ಗುರಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ, ಇವು ಆರು ಲಿಂಗಗಳು.

೧೧೪. **ಷಡ್ವಿಧಪದಾರ್ಥ:**

–ಗಂಧ, ರಸ, ರೂಪು, ಸ್ಪರ್ಶ, ಶಬ್ದ, ತೃಪ್ತಿ–ಇವು ಆರು ಪದಾರ್ಥಗಳು. ಇವನ್ನು ಷಡ್ವಿಧಲಿಂಗಗಳಿಗೆ ಅರ್ಪಿಸುವುದು.

೧೧೫. **ಷಡ್ವಿಭಕ್ತಿ:**

– ಶ್ರದ್ಧಾ, ನಿಷ್ಠಾ, ಅವಧಾನ, ಅನುಭಾವ, ಆನಂದ, ಸಮರಸ–ಇವು ಆರು ಭಕ್ತಿಗಳು.

೧೧೬. **ಷಡುಚಕ್ರ** (ಷಡಾಧಾರಚಕ್ರ):

–ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆ–ಇವು ಆರು ಚಕ್ರಗಳು.

೧೧೭. **ಷಡುದರ್ಶನ** (ಆರು ದರ್ಶನ):

–ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸೆ ಮತ್ತು ವೇದಾಂತ ಇವು ಆರು ದರ್ಶನ ಅಥವಾ ಶಾಸ್ತ್ರಗಳು ಎಂದು ಕರೆಯಿಸಿಕೊಳ್ಳುತ್ತವೆ.

೧೧೮. **ಷಡುವರ್ಣ :**

–ಶ್ವೇತ, ಪೀತ, ಹರಿತ, ಕಪೋತ, ಮಾಂಜಿಷ್ಟ, ಕೃಷ್ಣ–ಇವು ಆರು ಬಣ್ಣಗಳು.

೧೧೯. **ಷಡುಶಕ್ತಿ :**

–ಚಿಚ್ಛಕ್ತಿ, ಪರಾಶಕ್ತಿ, ಆದಿಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ–ಇವು ಆರು ಶಕ್ತಿಗಳು.

೧೨೦. **ಷಡುರುಚಿ:**

–ಮಧುರು, ಆಮ್ಲ, ಲವಣ, ಕಟು, ತಿಕ್ತ, ಕಷಾಯ–ಇವು ಆರು ರುಚಿಗಳು

೧೨೧. **ಷಡು ಸಮ್ಮಾರ್ಜನೆ :**

–ಗೋಮಯ, ಗೋರೋಜನ, ಗೋಮೂತ್ರ, ಗೋದಧಿ, ಗೋಕ್ಷೀರ, ಗೋಘೃತ ಈ ಆರು ವಸ್ತುಗಳಿಂದ ಶುದ್ಧಿಗೊಳಿಸುವುದು ಅಥವಾ ತೊಳೆಯುವುದು.

೧೨೨. **ಷಡೂರ್ಮಿ:**

–ಕ್ಷುತ್, ಪಿಪಾಸೆ, ಶೋಕ, ಮೋಹ, ಜನನ, ಮರಣ–ಇವು ಆರು ಊರ್ಮಿಗಳು.

೧೨೩. **ಷೋಡಶ ಕಳೆ :**

–ಪಂಚ ಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ, ಚಿತ್ತ, ಮನ, ಅಹಂಕಾರ, ವಿದ್ಯೆ, ವಾಕ್ಕು ಮತ್ತು ಶಕ್ತಿಗಳು ಕೂಡಿ ಹದಿನಾರು ಬಗೆಯ ಕಳೆಗಳು.

೧೨೪. **ಷೋಡಶೋಪಚಾರ :**

–ಪಾದ್ಯ, ಅರ್ಘ್ಯ, ಆಚಮನ, ಪತ್ರಪುಷ್ಪ, ಗಂಧ, ಅಕ್ಷತೆ, ಯಜ್ಞೋಪವೀತ, ಛತ್ರ, ಚಾಮರ, ವ್ಯಜನ, ಗೀತ, ವಾದ್ಯ, ನೃತ್ಯ, ಪ್ರದಕ್ಷಿಣ, ನಮಸ್ಕಾರ, ಸ್ತೋತ್ರ–ಇವು ೧೬ ಉಪಚಾರಗಳು.

೧೨೫. ಷಟ್‌ಲಿಂಗ:

–ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮಹಾಲಿಂಗ ಇವು ಆರು ಲಿಂಗಗಳು.

೧೨೬. ಸಕೀಲಗಳು

– (೧) ತೊಂಬತ್ತಾರು ಸಕೀಲಗಳು :

೬ ಆಕೃತಿಗಳು–ತಾರಕ, ದಂಡಕ, ಕುಂಡಲ, ಅರ್ಧಚಂದ್ರ, ದರ್ಪಣ, ಜ್ಯೋತಿ.

೬ ಪ್ರಣವಗಳು–ನಕಾರ, ಮಕಾರ, ಶಿಕಾರ, ವಕಾರ, ಯಕಾರ, ಓಂಕಾರ.

೬ ಚಕ್ರಗಳು–ಆಧಾರ, ಸ್ವಾಧಿಷ್ಠಾನ, ಮಣಿಪೂಕ, ಅನಾಹತ, ಪಿಶುದ್ಧಿ, ಆಜ್ಞಾ.

೬ ಸ್ಥಲಗಳು–ಭಕ್ತ, ಮಹೇಶ, ಪ್ರಸಾದಿ, ಪ್ರಾನಲಿಂಗಿ, ಶರಣ, ಐಕ್ಯ.

೬ ಹಸ್ತಗಳು–ಸುಚಿತ್ತ, ಸುಬುದ್ಧಿ, ನಿರಹಂಕಾರ, ಸುಮನ, ಸುಜ್ಞಾನ, ಸದ್ಭಾವ.

೬ ಲಿಂಗಗಳು–ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ.

೬ ಮುಖಗಳು–ಘ್ರಾಣ, ಜಿಹ್ವೆ, ನೇತ್ರ, ತ್ವಕ್ಕು, ಶ್ರೋತ್ರ, ಹೃದಯ.

೬ ಶಕ್ತಿಗಳು–ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿ ಆದಿಶಕ್ತಿ, ಚಿತ್‌ಶಕ್ತಿ, ನಿರಾಲಂಬ ಶಕ್ತಿ.

೬ ಭಕ್ತಿಗಳು–ಶ್ರದ್ಧಾಭಕ್ತಿ, ನಿಷ್ಠಾಭಕ್ತಿ, ಅನಧಾನಭಕ್ತಿ, ಅನುಭಾವಭಕ್ತಿ, ಆನಂದಭಕ್ತಿ, ಸಮರಸಭಕ್ತಿ.

೬ ಪದಾರ್ಥಗಳು–ಗಂಧ, ರಸ, ರೂಪ, ಸ್ಪರ್ಶ, ಶಬ್ದ, ತೃಪ್ತಿ.

೬ ಪ್ರಸಾದಗಳು–ಸುಗಂಧ, ಸುರಸ, ಸುರೂಪ, ಸುಸ್ಪರ್ಶನ, ಸುಶಬ್ದ, ಸುತೃಪ್ತಿ.

೬ ಕಲೆಗಳು-ನಿವೃತ್ತಿ, ಪ್ರತಿಷ್ಠಾ, ವಿದ್ಯಾ, ಶಾಂತಿ, ಶಾಂತ್ಯಾತೀತ, ಶಾಂತ್ಯಾತೀತೋತ್ತರ.

೬ ಸಾದಾಖ್ಯಗಳು–ಕರ್ಮ, ಕರ್ತೃ, ಮೂರ್ತಿ, ಅಮೂರ್ತಿ, ಶಿವ.

೬ ಲಕ್ಷಣಗಳು–ಸತ್, ಚಿತ್, ಆನಂದ, ನಿತ್ಯ, ಪರಿಪೂರ್ಣ, ಅಖಂಡ.

೬ ಸಂಜ್ಞೆಗಳು–ಪರ, ಗೂಢ, ಶರೀರಸ್ಥ, ಲಿಂಗಕ್ಷೇತ್ರ, ಅನಾದಿಮಹತ್, ಅಪ್ರಮಾಣ.

೬ ವೇದಗಳು–ಋಕ್, ಯಜುಸ್, ಸಾಮ, ಅಥರ್ವ, ಅಜಪ, ಗಾಯತ್ರಿ.

–(೨) ಇನ್ನೂರಾ ಹದಿನಾರು ಸಕೀಲಗಳು

(i) ಭಕ್ತನು ಭಕ್ತಾದಿ ಐಕ್ಯಾಂತ ೬ ಸ್ಥಲಗಳಲ್ಲಿ ಒಂದೊಂದರಲ್ಲಿ ಆರರಂತೆ ೩೬ ವಿಧನಾಗುವನು. ಈ ಶರಣನು ಆರು ಲಿಂಗಗಳಿಗೆ ೬ ಮುಖ, ೬ಹಸ್ತ, ೬ ಶಕ್ತಿ, ೬ ಭಕ್ತಿಯಿಂದ ೬ ವಿಧವಾದ ಅರ್ಪಣ ಮಾಡುವನು. ಈ ಸಂದರ್ಭದಲ್ಲಿ ೩೬x೬=೨೧೬ ಸಕೀಲಗಳನ್ನು ಆಚರಿಸುವನು.

(ii) ಇನ್ನೊಂದು ವಿಧ: ೨೪ ಸಕೀಲಗಳು ಒಂದೊಂದು ಒಂಬತ್ತಾಗಿ ಒಡೆದು ಒಟ್ಟು ೨೧೬ (೨೪ x ೯= ೨೧೬)ಸಕೀಲಗಳಾಗಿ ನಿಲ್ಲುತ್ತವೆ. ಅವುಗಳ ವಿವರ ಹೀಗಿದೆ:

೧. ಸ್ಥಲ: ಭಕ್ತ–ಮಹೇಶ–ಪ್ರಸಾದಿ–ಪ್ರಾಣಲಿಂಗಿ–ಶರಣ ಐಕ್ಯನಿಷ್ಕಲ–ನಿರಂಜನ–ನಿಶ್ಶೂನ್ಯ.

೨. ಆಕೃತಿ–ತಾರಕ–ದಂಡಕ–ಕುಂಡಲ–ಅರ್ಧಚಂದ್ರ–ದರ್ಪಣ–ಜ್ಯೋತಿ-–ನಿಷ್ಕಲ–ನಿರಂಜನ–ನಿಶ್ಶೂನ್ಯ

೩. ಪ್ರಣವ: ನಕಾರ–ಮಕಾರ–ಶಿಕಾರ–ವಕಾರ–ಯಕಾರ–ಓಂಕಾರ–ಬಕಾರ–ಕ್ಷಕಾರ–ಹಕಾರ.

೪. ನಾದ: ಭ್ರಮದ–ವೀಣಾ–ಘಂಟೆ–ಭೇರಿ–ಮೇಘ–ಪ್ರಣವ–ದಿವ್ಯ–ಸಿಂಹ–ಮಹಾನಾದ

೫. ಚಕ್ರ: ಆಧಾರ–ಸ್ವಾಧಿಷ್ಠಾನ–ಮಣಿಪೂರಕ–ಅನಾಹತ–ವಿಶುದ್ಧಿ–ಆಜ್ಞಾ–ಬ್ರಹ್ಮರಂಧ್ರ–ಶಿಖಾ–ಪಶ್ಚಿಮ.

೬. ವರ್ಣ: ಪೀತ–ಶ್ವೇತ–ಹರಿತ–ಮಾಂಜಿಷ್ಠ–ನೀಲ–ಎಳೆಮಿಂಚು–ಜ್ಯೋತಿ–ಮಹಾಜ್ಯೋತ್ಷಿ–ಅಗ–ತಜ್ಯೋತಿ

೭. ಅಂಗ: ಪೃಥ್ವಿ–ಅಪ್–ತೇಜ–ವಾಯು–ಆಕಾಶ–ಆತ್ಮ–ತ್ಯಾಗಂಗ–ಭೋಗಾಂಗ–ಯೋಗಾಂಗ.

೮. ಆತ್ಮ: ಜೀವಾತ್ಮ–ಅಂತರಾತ್ಮ–ಪರಮಾತ್ಮ–ನಿರ್ಮಲಾತ್ಮ–ಶುದ್ಧಾತ್ಮ–ಜ್ಞಾನಾತ್ಮ–ಮಹಾತ್ಮ–ದಿವ್ಯಾತ್ಮ–ಚಿನ್ಮಯಾತ್ಮ

೯. ತನು: ಸ್ಥೂಲ–ಸೂಕ್ಷ್ಮ–ಕಾರಣ–ಮಹಾಕಾರಣ–ಆನಂದ–ಶುದ್ಧ–ನಿರ್ಮಲ–ಚಿದ್ರೂಪ–ಚಿನ್ಮಯ

೧೦. ಹಸ್ತ–ಸುಚಿತ್ತ–ಸುಬುದ್ಧಿ–ನಿರಂಹಕಾರ–ಸುಮನ–ಸುಜ್ಞಾನ–ಸದ್ಭಾವ–ನಿಃಕಲ–ನಿರಾಳ–ನಿರ್ಮಾಯ

೧೧. ಲಿಂಗ–ಇಷ್ಟ–ಪ್ರಾಣ–ಭಾವ–ಆಚಾರ–ಗುರು–ಶಿವ–ಜಂಗಮ–ಪ್ರಸಾದ–ಮಹಾಲಿಂಗ

೧೨. ಮುಖ–ಘ್ರಾಣ–ಜಿಹ್ವೆ–ನೇತ್ರ–ತ್ವಕ್–ಶ್ರೋತ್ರ–ಹೃದಯ–ಬ್ರಹ್ಮರಂಧ್ರ–ಉನ್ಮನಿ–ಪಶ್ಚಿಮ.

೧೩. ಶಕ್ತಿ: ಕ್ರಿಯಾ–ಜ್ಞಾನ–ಇಚ್ಛಾ–ಆದಿ–ಪರಾ–ಚಿಚ್ಛಕ್ತಿ–ಆನಂದಮಯ–ನಿಭ್ರಾಂತ–ನಿರಾಮಯಶಕ್ತಿ.

೧೪. ಭಕ್ತಿ: ಶ್ರದ್ಧಾ–ನಿಷ್ಠಾ–ಅವಧಾನ–ಅನುಭವ–ಆನಂದ–ಸಮರಸ–ಪರಿಪೂರ್ಣ–ನಿರಂಜನ–ನಿಶ್ಶೂನ್ಯಭಕ್ತಿ.

೧೫. ಪದಾರ್ಥ: ಗಂಧ–ರಸ–ರೂಪು–ಸ್ಪರ್ಶ–ಶಬ್ದ–ತೃಪ್ತಿ–ಆನಂದ–ಪೂರ್ಣ–ವಿರಳ.

೧೬. ಪ್ರಸಾದ: ಸುಗಂಧ–ಸುರಸ–ಸುರೂಪ–ಸುಸ್ಪರ್ಶ–ಸುಶಬ್ದ–ಸುತೃಪ್ತಿ–ಪರಮಾನಂದ, ಪರಿಪೂರ್ಣ, ಅವಿರಳ.

೧೭. ಪೂಜಾರಿ: ಬ್ರಹ್ಮಾ–ವಿಷ್ಣು–ರುದ್ರ–ಈಶ್ವರ–ಸದಾಶಿವ–ಮಹೇಶ್ವರ–ಪರಶಿವ–ನಿಃಕಲ ನಿರಂಜನ–ನಿಶ್ಶೂನ್ಯ.

೧೮. ದೇವತೆ: ಬ್ರಹ್ಮಾ–ವಿಷ್ಣು–ರುದ್ರ–ಈಶ್ವರ–ಸದಾಶಿವ–ಮಹೇಶ್ವರ–ಪರಶಿವ–ಸರ್ವೇಶ್ವರ–ಮಹಾದೇವ.

೧೯. ಕಲೆ: ನಿವೃತ್ತಿ–ಪ್ರತಿಷ್ಠಾ–ವಿದ್ಯಾ–ಶಾಂತಿ–ಶಾಂತ್ಯತೀತ–ಶಾಂತ್ಯತೀತೋತ್ತರ–ಆನಂದ–ನಿರ್ಮಲ–ನಿರ್ವಾಚ್ಯ.

೨೦. ಸಾದಾಖ್ಯ: ಕರ್ಮ–ಕರ್ತೃ–ಮೂರ್ತ–ಅಮೂರ್ತ–ಶಿವ–ಮಹಾ–ಅಗಮ್ಯ–ಅವಿರಳ, ನಿರ್ಮುಕ್ತ.

೨೧. ಲಕ್ಷಣ: ಸತ್–ಚಿತ್–ಆನಂದ–ನಿತ್ಯ–ಪರಿಪೂರ್ಣ–ಅಖಂಡ–ಅನಾಮಯ–ಅಗಮ್ಯ–ನಿರ್ವಾಚ್ಯ

೨೨. ಸಂಜ್ಞೆ: ಪರ–ಗೂಢ–ಶರೀರಸ್ಥ–ಲಿಂಗಕ್ಷೇತ್ರ–ಅನಾದಿವಸ್ತು–ಮಹಾ–ಅಪ್ರಮಾಣ–ನಿರ್ನಾಮ–ಅವಿರಳ

೨೩. ದಿಕ್ಕು: ಪೂರ್ವ–ಪಶ್ಚಿಮ–ದಕ್ಷಿಣ–ಉತ್ತರ–ಊರ್ಧ್ವ–ಪಾತಾಳ–ಹೃದಯ–ಹೃತ್ಕಮಲ–ಲಿಂಗಕ್ಷೇತ್ರ.

೨೪. ವೇದಗಳು: ಋಗ್–ಯಜುರ್–ಸಾಮ–ಅಥರ್ವಣ–ಅಜಪೆ–ಶಿವಗಾಯತ್ರಿ–ಧನುಃ–ಗಾಂಧರ್ವ–ಸಾವಿತ್ರಿ.

೧೨೭. ಸಪ್ತಧಾತು :

–ರಸ, ರುಧಿರ, ಮಾಂಸ, ಮೇಧಸ್ಸು, ಅಸ್ಥಿ, ಮಜ್ಜ, ಶುಕ್ಲ–ಇವು ಏಳು ಧಾತುಗಳು.

೧೨೮. ಸಪ್ತ ಮಾತೃಕೆಯರು :

–ಬ್ರಹ್ಮೀ, ಮಾಹೇಶ್ವರಿ, ಕೌಮಾರೀ, ವೈಷ್ಣವೀ, ವಾರಾಹೀ, ಇಂದ್ರಾಣೀ ಮತ್ತು ಚಾಮುಂಡಾ ಎಂಬ ಏಳು ತಾಯಂದಿರು.

೧೨೯. ಸಪ್ತವರ್ಣ:

–ಪೀತ, ಶ್ವೇತ, ಹರಿತ, ಮಾಂಜಿಷ್ಟ ಕಪೋತ, ಮಾಣಿಕ್ಯ, ಜ್ಯೋತಿ–ಇವು ಏಳು ಬಣ್ಣಗಳು.

೧೩೦. ಸಪ್ತವಿಧ ದೀಕ್ಷೆ :

–ಆಜ್ಞಾದೀಕ್ಷೆ, ಉಪಮಾದೀಕ್ಷೆ, ಸ್ವಸ್ತಿಕಾರೋಹಣ, ಕಳಶಾಭಿಷೇಕ, ವಿಭೂತಿಪಟ್ಟ, ಲಿಂಗಾಯತ, ಲಿಂಗಸ್ವಾಯತ–ಇವು ಏಳು ಪ್ರಕಾರದ ದೀಕ್ಷೆಗಳು.

೧೩೧. ಸಪ್ತವ್ಯಸನ :


–(೧) ತನುವ್ಯಸನ, ಮನವ್ಯಸನ, ಧನವ್ಯಸನ, ರಾಜ್ಯವ್ಯಸನ, ವಿಶ್ವವ್ಯಸನ, ಉತ್ಸಾಹವ್ಯಸನ, ಸೇವಕವ್ಯಸನ.

–(೨) ಸ್ತ್ರೀ, ದ್ಯೂತ, ಬೇಟೆ, ಕುಡಿತ, ವಾಕ್ಪಾರುಷ್ಯ, ದಂಡ ಪಾರುಷ್ಯ, ಮತ್ತು ಅರ್ಥದೂಷಣ ಎಂಬ ಏಳು ವ್ಯಸನಗಳು.

೧೩೨. ಸಪ್ತ ಸಾಗರ :

–ಲವಣ, ಇಕ್ಷು, ಸುರಾ, ಸರ್ಪಿಸ್(ತುಪ್ಪ), ದಧಿ(ಮೊಸರು), ಕ್ಷೀರ, ಜಲ ಎಂಬ ಆರು ಸಾಗರಗಳು.

❖❖



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ
ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ: 97390 67359